ಜಯಂತಿ

ಜನೇವರಿ
೧೯೫೪

ಸಂಪುಟ ೧೬
ಸಂಚಿಕೆ ೮
ಬೆಲೆ ೮ ಆಣೆ

ಈ ಸಂಚಿಕೆಯಲ್ಲಿ :

ಶಿಕ್ಷಣದ ರೀತಿ-ನೀತಿಗಳಲ್ಲಿ ಬದಲಾವಣೆ (ಸಂಪಾದಕೀಯ) ಸಂಪಾದಕರು ೨೮೧
ಪುಸ್ತಕ ವಿಮರ್ಶೆ (ಮಹಾದೇವಬಾಯಿಯವರ ದಿನಚರಿ ಮತ್ತು 'ಜೀವನರಂಗ') ಶ್ರೀ ಮಿರ್ಜಿ ಅಣ್ಣಾರಾಯರು ಮತ್ತು ಶ್ರೀ. ಎಸ್. ಎಸ್. ಗದಗಕರ ೨೮೩
ನನಗೂ ರಜೆ ದೊರೆತರೆ (ಒಂದು ಜೀವನಚಿತ್ರ) ಶ್ರೀಮತಿ ಶರಣ್ಯಜನಿ ಮಸಿಹಿ ಎಂ. ಎ. ೨೮೫
ಇಜಿಪ್ತದ ಕ್ರಾಂತಿಪುರುಷ (ವ್ಯಕ್ತಿಪರಿಚಯ) ಶ್ರೀ. ವೆಂ. ಮು. ಜೋಶಿ, ಧಾರವಾಡ ೨೮೯
ಅಂತರ (ನವ್ಯಕವನ) ಶ್ರೀ ಶಾಂತಿನಾಥ ದೇಸಾಯಿ ಎಂ. ಎ. ಮುಂಬಯಿ ೨೯೨
ಸಾಲಗಾರ (ಏಕ ದೃಶ್ಯನಾಟಕ) ಶ್ರೀ. ರಾಮಚಂದ್ರ ರೇವಡಕರ್, ಮುಂಬಯಿ ೨೯೩
ಭರತ-ಬಾಹುಬಲಿಯರ ಕಥೆಗಳು (ಉತ್ತರಾರ್ಧ) ಶ್ರೀ. ಕ. ವೆಂಕಟರಾಯಾಚಾರ್ಯ 'ವಿದ್ವಾನ್' ಮುರತ್ತೂಲ್ಲು ೩೦೦
ಜೀವನದ ತಿಳಿನೀರು ಬತ್ತಿಬಯಲಾಗಿಹುದು (ಕವನ) ಶ್ರೀ. ರಾ. ಸ. ನೈಲಾಯ, ಉಡುಪಿ ೩೦೨
ಮೂರು ಭಾವರೂಪಕಗಳು (ಕಿರುಗತೆಗಳು) ಶ್ರೀ. ಮಾ. ವೆಂ. ನಾಗೇಶ, ಗುಲಬರ್ಗಾ ೩೦೪
ಆ ಗಾಯ ಇನ್ನೂ ಮಾಯ್ದಿಲ್ಲ (ಸಣ್ಣ ಕತೆ) ಶ್ರೀ. ಎಲ್. ಎನ್. ಹಳ್ಳಿಪ್ಪನವರ ಎಂ. ಎಸ್‌ಸಿ. (ಅಗ್ರಿ) ಧಾರವಾಡ ೩೦೫
ಕ್ಷಯರೋಗ ವಿಚಾರ (ಸ್ವಾನುಭವ ಕಥನ) ಶ್ರೀ ಟಿ. ವಿ. ಹರದೇಶಿ, ಮುಂಬಯಿ ೩೦೯
ಹಿಂದಿನ ಕಾಲದ ಹಳ್ಳಿಗಳು (ವಿವೇಚನಾತ್ಮಕ ಪ್ರಬಂಧ) ಶ್ರೀ ಬಿ. ಪಿ. ಎಸ್. ರಾವ್, ಬೆಳಗಾಂವಿ ೩೧೩
ಸಾ. ವಿಮರ್ಶೆಯ ಶಿಕ್ಷಣರಂಗ ಶ್ರೀ. ಜಿ. ಗ. ಶ್ರೀರಂಗಪರ್ವ, ಅರಸೀಕೆರೆ ೩೧೬
ಸಾದರ ಸ್ವೀಕಾರ .... ಕನ್ನಡ ೩ನೆಯ ಪುಟದಲ್ಲಿ

JAYANTI

[illegible]

[illegible]

[illegible]

[illegible]

[illegible]

೧ [illegible]

೨ [illegible]

೩ [illegible]

೪ [illegible]

[illegible]

೬ [illegible]

೭ [illegible]

[illegible]

ಪ್ರತಿಭಾ ಗ್ರಂಥಮಾಲೆ, ಧಾರವಾಡ

[illegible]

[illegible]

[illegible]

೧	[illegible]	[illegible]
೨	[illegible]	[illegible]
೩	[illegible]	[illegible]
೪	[illegible]	[illegible]
೫	[illegible]	[illegible]

[illegible]

[illegible]

೧	[illegible]	[illegible]
೨	[illegible]	[illegible]
೩	[illegible]	[illegible]
೪	[illegible]	[illegible]
೫	[illegible]	[illegible]
೬	[illegible]	[illegible]

Prtatibha Granth Mala
Dharwar.

[illegible]

[illegible]

[illegible]

ಸಂಪಾದಕೀಯ

[illegible]

ಅಂತಹ ಭೋಗ-ವಿಲಾಸಗಳನ್ನು ಸಂಪಾದಿಸಬೇಕೆಂದು ಪ್ರತಿಯೊಬ್ಬನೂ ಪರಿತಪಿಸುತ್ತಲಿದ್ದಾನೆ. ಸುಶಿಕ್ಷಿತನಾಗರಿಕನಿಗೂ ಇದೇ ಚಿಂತೆ; ಅಶಿಕ್ಷಿತ ಗಾವಿಲನಿಗೂ ಇದೇ ಚಿಂತೆ. ಹೀಗಿರುವಾಗ, ಶಿಕ್ಷಣದ ರೀತಿ-ನೀತಿಗಳಲ್ಲಿ ಮಾಡಬೇಕಾದ ಬದಲಾವಣೆಗಳು ಎಂತಹವಿರಬೇಕು ?

ನಮ್ಮಲ್ಲಿ ಶಿಕ್ಷಣವು ಸುಪರಿಣಾಮಕಾರಿಯಾಗಬೇಕಾದಲ್ಲಿ, ಕೇವಲ ಶಾಲೆಯ ಶಿಕ್ಷಣಕ್ರಮದಲ್ಲಿ ಬದಲಾವಣೆ ಮಾಡಿದಷ್ಟಕ್ಕೆ ಏನೂ ಆಗದು. ದೇಶದಲ್ಲಿಯ ವ್ಯಕ್ತಿ-ವ್ಯಕ್ತಿಗಳ ಮನಸ್ಸು-ಹೃದಯಗಳನ್ನು ಸರಿದಾರಿಗೆ ಹಚ್ಚುವಂತಹ ಸಾಮಾಜಿಕ ಶಿಕ್ಷಣವು ನಮ್ಮಲ್ಲಿ ಇಂದು ಪ್ರಸಾರಗೊಳ್ಳಬೇಕಾಗಿದೆ. ಜನತೆಯ ತಪ್ಪುತಿಳುವಳಿಕೆಗಳನ್ನೆಲ್ಲ ತೊಳೆದುಹಾಕುವಂತಹ ಸಾಂಸ್ಕೃತಿಕಶಿಕ್ಷಣವಿಂದು ರಭಸದಿಂದ ಮುಂದುವರಿದು ಬರಬೇಕಾಗಿದೆ. ಅಧಿಕಾರಬಲದಿಂದ ಶಿಕ್ಷಣಕ್ರಮದಲ್ಲಿ ಬದಲಾವಣೆಯನ್ನು ಮಾಡಿಯೂ ಬಿಡಬಹುದು; ಆದರೆ ಅದರಲ್ಲಿ ಜನತೆಯು ಶ್ರದ್ಧೆ ತೋರಿಸದೆ ಹೋದರೆ, ಅದರಿಂದ ಯಾವ ಪ್ರಯೋಜನ ದೊರೆತೀತು ?

ಇದಕ್ಕೆ ದೂರದ ಉದಾಹರಣೆ ಬೇಕಿಲ್ಲ. ಮಹಾತ್ಮಾಜಿಯವರ ಮೂಲಶಿಕ್ಷಣಕ್ರಮವನ್ನೇ ತೆಗೆದುಕೊಳ್ಳೋಣ! ಶ್ರದ್ಧೆಯಿಂದ ಈ ಶಿಕ್ಷಣಕ್ರಮವನ್ನು ಪ್ರಚಾರದಲ್ಲಿ ತಂದರೆ, ಅದರ ಸತ್ಪರಿಣಾಮವು ಸ್ವಲ್ಪ ಕಾಲದಲ್ಲಿಯೆ ಕಂಡುಬರಬಹುದು. ಆದರೇನು ? ಈ ಶಿಕ್ಷಣಕ್ರಮದಲ್ಲಿ ವಿದ್ಯಾರ್ಥಿಗಳ ಪಾಲಕರ ಶ್ರದ್ಧೆಯಿಲ್ಲ; ಕಲಿಸುವ ಶಿಕ್ಷಕರ ಶ್ರದ್ಧೆಯಿಲ್ಲ; ಆಡಳಿತದ ಅಧಿಕಾರಿವರ್ಗದ ಶ್ರದ್ಧೆಯಿಲ್ಲ.

ವಿದ್ಯಾರ್ಥಿಗಳ ಪಾಲಕರಿಗೆ, ತಮ್ಮ ಹುಡುಗರು ಯಾವುದನ್ನು ಕಲಿಯಬೇಕೆಂದು ಎನಿಸುತ್ತಿದೆಯೋ, ಅದನ್ನು ಈ ಮೂಲಶಿಕ್ಷಣಕ್ರಮವು ಕಲಿಸುತ್ತಲಿಲ್ಲವೆಂದು ಅತೃಪ್ತಿ. ಅವರ ಅತೃಪ್ತಿಯ ಪರಿಣಾಮವು ಹುಡುಗರ ಶಿಕ್ಷಣಪ್ರಗತಿಯ ಮೇಲೆ ಆಗದೆ ಹೋಗದು. ಪ್ರಾಥಮಿಕ ಶಾಲೆಗಳ ಶಿಕ್ಷಕರ ಆಯ್ಕೆಯ ವಿಚಿತ್ರಕ್ರಮದ ಮೂಲಕ, ಶಿಕ್ಷಣಕ್ರಮಕ್ಕಿಂತ ಸಂಬಳದ ಕಡೆಗೆ ದೃಷ್ಟಿಯಿರುವ ಶಿಕ್ಷಕರ ಸಂಖ್ಯೆಯು ಹೆಚ್ಚಾಗುತ್ತಿರುವುದರಿಂದ, ಎಷ್ಟೊಂದು ಒಳ್ಳೆಯದಾಗಿ ಇದ್ದರೂ, ಮೂಲ ಶಿಕ್ಷಣಕ್ರಮವು ನಿರುಪಯೋಗಿಯಾಗಿ ಪರಿಗಣಿತವಾಗುತ್ತಲಿದೆ ಇಂದು. ಹಿಂದಿನ ಕಾಲದ ಸಾಂಪ್ರದಾಯಿಕ ಶಾಲೆಯಲ್ಲಿ ಕಲಿತ ಹುಡುಗನೊಂದಿಗೆ ತುಲನೆ ಮಾಡಿನೋಡಿದರೆ, ಇಂದಿನ ಮೂಲಶಿಕ್ಷಣ ಶಾಲೆಯಲ್ಲಿ ಕಲಿಯುವ ವಿದ್ಯಾರ್ಥಿ, ಲೆಕ್ಕ, ವಾಚನ ಶುದ್ಧಲೇಖನ, ಸುಲೇಖನಗಳಲ್ಲಿ ತೀರ ಹಿಂದುಳಿದವನಾಗಿ ಕಾಣುತ್ತಿರುವುದು ದುರ್ದೈವದ ಸಂಗತಿಯಾಗಿದೆ.

ಶಿಕ್ಷಣವು ಸಂಕುಚಿತ ಸ್ವಾರ್ಥಸಾಧನೆಯ ಸಲಕರಣೆಯಾಗಬಾರದೆಂಬ ವಿಚಾರವು ಮೊದಲು ನಮ್ಮ ನಾಡಿನ ಜನತೆಯಲ್ಲಿ ಮೂಡಿನಿಲ್ಲಬೇಕಾಗಿದೆ. ಶಿಕ್ಷಣವು ವ್ಯಕ್ತಿಗೆ ಜೀವನಮಾರ್ಗವನ್ನು ತೋರಿಸಬೇಕು. ಸಮಾಜಧರ್ಮವನ್ನು ಬೋಧಿಸಬೇಕು. ಮಾನವ ಬಂಧುತ್ವವನ್ನು ಕಲಿಸಬೇಕು. ಶಿಕ್ಷಿತ ವ್ಯಕ್ತಿಯನ್ನು ಸುಖ-ಸಮಾಧಾನಗಳ ದಾರಿಯಲ್ಲಿ ನಡೆಯಿಸಬೇಕು. ಈ ಬಗೆಯ ಶಿಕ್ಷಣಕ್ರಮವು ನಮ್ಮಲ್ಲಿ ಮೂಡಿ ಬರಬೇಕಾದರೆ, ನಮ್ಮ ಜನತೆಯಲ್ಲಿಯ ಭೋಗಲಾಲಸೆಯು ಕೀಳುಗುರಿಯು ಮಾಯವಾಗಬೇಕು. ತ್ಯಾಗಶೀಲತೆಯು ತಲೆದೋರಬೇಕು. ಜನತೆಯ ಸುಖ-ಸಮಾಧಾನಕ್ಕಾಗಿ ವ್ಯಕ್ತಿಗಳು ತ್ಯಾಗಶೀಲರಾಗಿ ನಡೆಯುವುದೆಂದರೆ: ಅದೇ ಸುಶಿಕ್ಷಣದ ಮುಖ್ಯ ಲಕ್ಷಣ. ಆದುದರಿಂದಲೇ ಸುಶಿಕ್ಷಣಬೇಕೆನ್ನುವ ನಮ್ಮ ನಾಡಿನ ಸಿರಿವಂತರು ಇಂದು ಸುವಿಚಾರಿಗಳಾಗಬೇಕು. ತನ್ನ ಸಂಪತ್ತು ತಮ್ಮ ಸುಖ-ವಿಲಾಸಗಳಿಗಾಗಿ ಮಾತ್ರ ಇರದೆ, ಸಮಾಜದ ಸುಖ-ಸಮಾಧಾನಕ್ಕಾಗಿಯೂ ಇದೆ—ಎಂಬುದನ್ನು ತಿಳಿದುಕೊಳ್ಳಬೇಕು. ನಿತ್ಯಜೀವನದಲ್ಲಿ ವಿಶೇಷವ್ಯತ್ಯಾಸಗಳೇನೂ ಕಾಣದಂತೆ, ನಿರಾಡಂಬರದ ಜೀವನವನ್ನವರು ಆರಿಸಬೇಕು. ತಮ್ಮ ಸಿರಿತನವು ಜನಮನವನ್ನು ಕೆರಳಿಸದಂತೆಯೂ ಜನತೆಯ ಸುಖ-ಸ್ವಾಸ್ಥ್ಯಗಳಿಗಾಗಿಯೆ ಅದು ಉಪಯೋಗವಾಗುವಂತೆಯೂ ವಿಶ್ವಾಸದಿಂದ ನಡೆದುಕೊಳ್ಳಬೇಕು.

ದೊಡ್ಡ ದೊಡ್ಡ ಅಧಿಕಾರಿಗಳಾಗಿ ಇರುವ ಜನರು ಕೂಡ ತಮ್ಮ ಅಧಿಕಾರಸ್ಥಾನಗಳ ವೈಭವವನ್ನು ಮೆರೆಯಿಸದೆ ಇರಬೇಕು. ಇಂತಹ ಮೆರವಣಿಗೆಗಳು, ಜನಸಾಮಾನ್ಯರಲ್ಲಿ ಅಧಿಕಾರಪ್ರಲೋಭನವನ್ನು ಹುಟ್ಟಿಸಿ, ಅಸಂತುಷ್ಟಿ-ಅತೃಪ್ತಿಗಳನ್ನು ಬೆಳೆಯಿಸುವುವು. ಅಧಿಕಾರಸ್ಥಾನಗಳು ವೈಭವದ ಮೆರವಣಿಗೆಗಲ್ಲದೆ ತ್ಯಾಗಪೂರ್ಣವಾದ ಜನಸೇವೆಗಾಗಿ ಇವೆಯೆಂಬುದನ್ನು, ಜನಸಾಮಾನ್ಯರಿಗೆ ಪ್ರತ್ಯಕ್ಷಾಚರಣೆಯಿಂದ ಮನವರಿಕೆಮಾಡಿಕೊಡುತ್ತಿರಬೇಕು.

ಸಿರಿವಂತಿಕೆ-ಅಧಿಕಾರಿಗಳ ಮೋಹವೇ ನಮ್ಮ ಸಾಂಸ್ಕೃತಿಕ ಜೀವನವನ್ನು ಕಲಕು-ಮಲಕು ಗೊಳಿಸಿಬಿಟ್ಟಿರುವುದು. ಇದೊಂದು ಮೋಹ ಇಲ್ಲವಾದರೆ ಸಾಕು; ನಮ್ಮ ಶಿಕ್ಷಣಕ್ರಮದಲ್ಲಿ ಯಾವ ಬದಲಾವಣೆಯೂ ಬೇಕಾಗಿಲ್ಲ. ಇದು ನಷ್ಟವಾದರೆ, ದೇಶದಲ್ಲಿ ಆರ್ಥಿಕಸ್ವಾಸ್ಥ್ಯ ತಲೆದೋರುವುದು ಆರ್ಥಿಕಸ್ವಾಸ್ಥ್ಯ ಜನತೆಯ ಮಾನಸಿಕ ಸಮತೆಯನ್ನು ಕಾಯುವುದು. ಮಾನಸಿಕ ಸಮತೆ ಸುಶಿಕ್ಷಣ ಸುಸಂಸ್ಕೃತಿಗಳಿಗೆ ಅವಕಾಶ ಕಲ್ಪಿಸಿಕೊಡುವುದು. ಹೆಗ್ಗುಣಗಳನ್ನು ಒಳಗೇ ಇರಿಸಿ, ಹೋರುಗಳನ್ನು ಮುಚ್ಚಲು ಅಪೇಕ್ಷಿಸಿ ಹೆಣಗುವುದು, ಹುಚ್ಚುತನವೆನಿಸಿತೇ ಹೊರತು, ಮೆಚ್ಚಿಕೆಯ ಮಾತಾಗಿ ನಿಲ್ಲಲಾರದು.

ಒಳ್ಳೆಯದಕ್ಕಾಗಿ ಬದಲಾವಣೆಗಳನ್ನು ಅಪೇಕ್ಷಿಸುವ ವ್ಯಕ್ತಿ-ಶಕ್ತಿಗಳು, ಮೊದಲು ತಾವು ಒಳ್ಳೆಯವರಾಗಿರಬೇಕು—ಹದಿನಾರಾಣೆಯ ಚೊಕ್ಕಚಿನ್ನವಾಗಿರಬೇಕು. ತನ್ನ ಸುಖಸಂಪತ್ತಿಗಾಗಿ ಜನರೆಲ್ಲ ಒಳ್ಳೆಯವರಾಗಿ ದುಡಿಯುತ್ತಿರಬೇಕೆಂದು ಬಯಸುವ ಸ್ವಾರ್ಥವ್ಯಕ್ತಿಗಳಿಂದ, ಯಾವ ಒಳ್ಳೆಯ ಕಾರ್ಯಗಳೂ ಆಗವು. ಒಳ್ಳೆಯ ಬದಲಾವಣೆಗಳೂ ಆಗವು. ಶಿಕ್ಷಣಕ್ರಮದಲ್ಲಿ ಬದಲಾವಣೆ ಬಯಸಿ ಕೂಗಾಟ ನಡೆಯಿಸಿರುವ ನಮ್ಮ ಹಿರಿಯರು, ತಮ್ಮ ಮನಸ್ಸನ್ನು ಮೊದಲು ಹಿಂಡಿ ಹಿಳಿದು ನೋಡಿಕೊಳ್ಳಬೇಕು; ಅಲ್ಲಿ ಅವಿಚಾರ ಅವಿವೇಕಗಳೇನಾದರೂ ಇದ್ದರೆ ತೆಗೆದುಹಾಕಬೇಕು.

—ಸಂಪಾದಕರು

ಪುಸ್ತಕ ವಿಮರ್ಶೆ

ಮಹಾದೇವಭಾಯಿಯವರ ದಿನಚರಿ

(ಮೊದಲನೆಯ ಭಾಗ)

ಡೇಮಿ ೧/೮ ಆಕಾರದ ೧೪+೫೦೫ ಪುಟಗಳು. ಬೆಲೆ ೮-೦-೦. ಮೂಲ ಗುಜರಾಥಿಯಲ್ಲಿ ಶ್ರೀ. ನರಹರಿ ದ್ವಾ. ಪರೀಖ ಅವರು ಸಂಪಾದಿಸಿದುದನ್ನು ಕನ್ನಡದಲ್ಲಿ ಅನುವಾದಿಸಿದವರು ಶ್ರೀ. ವಡವಿ ರಾಮಚಂದ್ರರಾಯರು.

ಕನ್ನಡದಲ್ಲಿ ದಿನಚರಿ ಸಾಹಿತ್ಯವು ಕಡಿಮೆ. ಸಾರ್ವಜನಿಕರಿಗೆ ಉಪಯೋಗ ಬೀಳುವಂಥ ವಿಶಾಲ ಜೀವನವನ್ನು ನಡೆಯಿಸಿ, ಅದಕ್ಕೆ ತಕ್ಕ 'ದಿನಚರಿ' ಬರೆಯವನ್ನಿಟ್ಟುಕೊಂಡು ಬಾಳಿದ ವ್ಯಕ್ತಿಗಳು ಕನ್ನಡ ನಾಡಿನಲ್ಲಿ ಅಪರೂಪ. ಆದ್ದರಿಂದ ಈ ತರದ ಸಾಹಿತ್ಯ ಹುಟ್ಟಲಿಲ್ಲ. ಆದರೂ ಶ್ರೀ. ಆಲೂರು ವೆಂಕಟರಾಯರಂಥವರು ತಮ್ಮ ಜೀವನ ಸ್ಮೃತಿಗಳನ್ನು ಸಂಗ್ರಹಿಸಿ ಕನ್ನಡಿಗರಿಗೆ ಇತ್ತಿದ್ದಾರೆ. ಶ್ರೀ. ಜಿ. ಪಿ. ರಾಜರತ್ನಂರು ತಮ್ಮ 'ಹತ್ತುವರ್ಷ'ಗಳನ್ನು ಚಿತ್ರಿಸಿದ್ದಾರೆ. ಇವೆಲ್ಲ ದಿನಚರಿ ಸಾಹಿತ್ಯಗಳೆನಿಸದಿದ್ದರೂ, ಸ್ಥೂಲವಾಗಿ ಅವರವರ ಕಾರ್ಯ ಹಾಗೂ ವಿಚಾರಗಳನ್ನು ಸೂಚಿಸುವ ಗ್ರಂಥಗಳಾಗಿವೆ. ಈಗ ಶ್ರೀ. ವಡವಿ ರಾಮಚಂದ್ರರಾಯರು ಮೂಲ ಗುಜರಾಥಿಯಿಂದ ಕನ್ನಡಿಸಿ ನಮಗೆ ಕೊಟ್ಟ ದಿನಚರಿಯು, ಮಹಾದೇವ ಭಾಯಿಯವರದು. ಅದು ನಿಜವಾಗಿಯೂ 'ದಿನಚರಿ' ಎಂಬ ಹೆಸರಿಗೆ ಅನುರೂಪವಾಗಿ ಇದ್ದುದು. ಇದರಲ್ಲಿ ದಿನಾಂಕ ೧೦-೩-೧೯೩೨ ರಿಂದ ೪-೯-೧೯೩೨ರ ವರೆಗಿನ ಸುಮಾರು ಆರುತಿಂಗಳ ದಿನಚರಿಯನ್ನು ಐದುನೂರು ಪುಟಗಳಲ್ಲಿ ವಿವರಿಸಲಾಗಿದೆ—ಎಂದ ಮೇಲೆ, ಇದರ ವೈಶಾಲ್ಯದ ಕಲ್ಪನೆಯು ಸಹಜವಾಗಿ ಎಲ್ಲರಿಗೂ ಬರುವಂತಿದೆ.

ದಿವಂಗತ ಮಹಾದೇವಭಾಯಿಯವರ ಜೀವನವು ವಿಶಾಲವಾದುದು; ಅಲ್ಲದೆ ಅವರು ಇಂದಿನ ಯುಗಪುರುಷರಾದ ಮಹಾತ್ಮಾ ಗಾಂಧೀಜಿಯವರ ಸಹವಾಸದಲ್ಲಿದ್ದು, ಈ ದಿನಚರಿಯನ್ನು ಬರೆದರು. ಆಗ ಆ ಸಹವಾಸದ ಪರಿಮಿತಿಯಲ್ಲಿ ದಿ. ಸರದಾರ ಪಟೇಲರು ಸೇರಿದ್ದಾರೆ. ಈ ಮೂವರ ಜೀವನರಂಗ ಒಂದಾಗಿದ್ದು, ಒಂದೇ ರಂಗಸ್ಥಳದಲ್ಲಿ ಮೆರೆದ ಮೂರು ಪಾತ್ರಗಳ ಚಿತ್ರಣವು ಈ ದಿನಚರಿಯಲ್ಲಿ ಮೂಡಿನಿಂತಿದೆ. ಜೀವನದೃಷ್ಟಿ ಈ ಮಹಾನಾಯಕರಲ್ಲಿ ಭಾರತೀಯವೆಂಬುದಾಗಿದ್ದರೂ, ಅವರ ಭಾರತೀಯ ಸಂಸ್ಕೃತಿಯ ಮೂರು ಮುಖಗಳು. ಅವುಗಳ ಚಿತ್ರವು ವಿಶ್ವ ಸಂಸ್ಕೃತಿಗೊಂದು ಕನ್ನಡಿ. ಅಂಥ ಕನ್ನಡಿಯು ಈ ದಿನಚರಿಯಾಗಿದೆ.

ಮಹಾತ್ಮಾಜಿಯವರ ಜೀವನವು ಬಹುವಿಶಾಲವಾದುದು. ಅವರು ಭಾರತದ ಸ್ವಾತಂತ್ರ್ಯದ ನಿರ್ಮಾಪಕರಿದ್ದಷ್ಟೇ ಸಮಾಜ-ಶಿಕ್ಷಣ, ಧರ್ಮ ಮೊದಲಾದ ಎಲ್ಲ ವಿಷಯಗಳಲ್ಲೂ ಇಂದಿನ ನವ-ಭಾರತದ ಮೂಲಪುರುಷರಾಗಿದ್ದಾರೆ. ಆದರಂತೆ ಸರದಾರರು ಚತುರ ರಾಜಕಾರಣಿಗಳು. ಒಳ್ಳೆಯ, ಸಂಘಟಕರೆಂದು, ತಾವು ಹಾಕಿಕೊಂಡ ರಾಜಕೀಯ ತಂತ್ರವನ್ನು ಯಶಸ್ವಿಯಾಗುವಂತೆ ನೋಡಿಕೊಳ್ಳುವ ಗಟ್ಟಿಗರೆಂದು, ಅವರ ಹೆಸರನ್ನು ಪರದೇಶಗಳಲ್ಲೂ ಕೂಡ ಜನ ಬಲ್ಲುದು. ಇನ್ನು ಮಹಾದೇವಭಾಯಿಯವರಂತೂ ನಿಷ್ಠಾವಂತ ವ್ಯಕ್ತಿಗಳು, ನುರಿತ ಸಾಹಿತಿಗಳು. ಈ ಮೂವರು ಮಹಾ ವ್ಯಕ್ತಿಗಳ ಮಹತ್ತ್ವದ ಜೀವನಕಾಲವು ಇದರಲ್ಲಿ ಸಂಗ್ರಹಿಸಲ್ಪಟ್ಟಿದೆ. ಆದರಿಂದ ಈ ದಿನಚರಿಗೊಂದು ವಿಶ್ವಸಾಹಿತ್ಯದಲ್ಲಿ ವಿಶಿಷ್ಟಸ್ಥಾನವಿದೆ.

ಇಂಥ ಹಿರಿಯ ಕೃತಿಯನ್ನು ಶ್ರೀ. ವಡವಿಯವರು ಸುಂದರವಾಗಿಯೂ ಸರಳವಾಗಿಯೂ ಕನ್ನಡಿಸಿ ಕೊಟ್ಟಿದ್ದಾರೆ. ಅದನ್ನು, ಹುದಲಿಯ ಗ್ರಾಮಸೇವಾಸಮಿತಿಯ ಪ್ರತಿನಿಧಿಗಳಾಗಿ ಶ್ರೀಮಾನ್ ಪುಂಡಲೀಕಜಿ ಕಾತಗಡೆಯವರು ಪ್ರಕಟಿಸಿ, ಕನ್ನಡಿಗರಿಗೆ ಮಹೋಪಕಾರ ಮಾಡಿದ್ದಾರೆ. ಗಾಂಧೀಸಾಹಿತ್ಯವು ಈಗಾಗಲೇ ಕನ್ನಡಕ್ಕೆ ವಿವಿಧಮುಖವಾಗಿ ಬಂದಿದ್ದು ಬರುತ್ತಲಿದೆ. ಅಂಥದರಲ್ಲಿ ಮುನ್ನುಡಿಯಲ್ಲಿ ಶ್ರೀ ದಿವಾಕರರು ಹೇಳಿದಂತೆ 'ಶ್ರೀಹನುಮಂತನು ರಾಮನ ಬಗ್ಗೆ ಏನಾದರೂ ಬರೆದುದು, ಇಲ್ಲವೆ ಉದ್ಧವನು ಶ್ರೀ ಕೃಷ್ಣನ ಬಗ್ಗೆ ಬರೆದುದು ಉಪಲಬ್ಧವಾದರೆ, ಅದು ಎಷ್ಟು ಮಹತ್ತ್ವದ್ದೆಂದು ತಿಳಿಯಲಾಗುವುದೋ, ಅಷ್ಟೇ ಮಹಾದೇವ ಭಾಯಿಯವರು ಗಾಂಧೀಜಿಯವರ ಬಗ್ಗೆ ಬರೆದುದಕ್ಕೆ ಮಹತ್ತ್ವವಿದೆ.' ಇಂಥ ಮಹತ್ತ್ವಪೂರ್ಣ ಕೃತಿಯನ್ನು ಗಾಂಧೀಭಕ್ತರೂ, ಅವರ ಜೀವನಪಥದಲ್ಲಿ ಪೂರ್ಣ ಶ್ರದ್ಧೆಯುಳ್ಳವರೂ ಆದ ಶ್ರೀ. ವಡವಿಯವರು ಕನ್ನಡಿಸಿದ್ದು ಒಂದು ಅಪೂರ್ವ ಯೋಗವೇ ಆಗಿದೆ. ಅವರಿಗೆ ಅದರಲ್ಲಿ ಆನಂದವಿದೆ, ನಿಷ್ಠೆಯಿದೆ. ಅದಕ್ಕಾಗಿ ಅವರ ಈ ಅನುವಾದವು ಸಾರ್ಥಕವಾಗಿದೆ. ಇದನ್ನು ಓದಿ ಕನ್ನಡಿಗರು ತಮ್ಮ ಜೀವನವನ್ನು ತಿದ್ದಿಕೊಂಡರೆ, ಅನುವಾದಕರ ಪ್ರಕಾಶಕರ ಶ್ರಮವು ಸಫಲವಾಗುವುದು. ಈ ಗ್ರಂಥದ ಅನುವಾದಕರೂ ಪ್ರಕಾಶಕರೂ, ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

—ಮಿರ್ಜಿ ಅಣ್ಣಾರಾಯರು

ಜಯಂತಿಗೆ ಚಂದಾದಾರರಾಗಿರಿ!

ಜೀವನರಂಗ

(ಕಥಾ ಸಂಕಲನ)

ಲೇಖಕರು, ಶ್ರೀ. ಬಿ. ಆರ್. ವಾಡಪ್ಪಿಯವರು. ಪ್ರಕಾಶಕರು ದ. ಬಾ. ಕುಲಕರ್ಣಿ, ಮನೋಹರಗ್ರಂಥಭಾಂಡಾರ, ಧಾರವಾಡ ಪು. ೯೦ ಪುಟಗಳು. ಬೆಲೆ ೧-೮-೦.

ಶ್ರೀ. ಬಿ. ಆರ್. ವಾಡಪ್ಪಿಯವರು ಕನ್ನಡ ಸಾಹಿತ್ಯ ಲೋಕಕ್ಕೆ ಹೊಸಬರಲ್ಲವೆಂಬುದು ಅವರು ಈಗಾಗಲೇ ನೀಡಿದ ಕಲಾಕೃತಿಗಳಿಂದ ಸ್ಪಷ್ಟವಾಗಿದೆ. ಅವರ 'ಯಾರು ಹೊಣೆ ?' ಎಂಬ ಕಥಾ ಸಂಕಲನವು ಎರಡು ವರುಷಗಳ ಹಿಂದೆಯೇ ಹೊರಟು, ರಸಿಕರ ಮನಸ್ಸನ್ನು ಹಿಡಿದಿದೆ. ತೀರ ಮೊನ್ನೆ ಮೊನ್ನೆ ಪ್ರಕಟವಾದ 'ಗಾಳಿಗುದುರೆ' ಯಂತೂ ಹೆಚ್ಚಾಗಿ ಸುಶಿಕ್ಷಿತರ ಮೆಚ್ಚುಗೆಗೆ ಪಾತ್ರವಾಗಿದೆ– ಎಂಬ ಮಾತು, ಹಲವಾರು ಪತ್ರಿಕೆಗಳ ವಿಮರ್ಶೆಗಳಿಂದಲೇ ವಿದಿತವಾಗುವುದಷ್ಟೆ! ಪ್ರಸ್ತುತ 'ಜೀವನರಂಗ'ವು ಅವರ ಮತ್ತೊಂದು ಕಥಾ ಸಂಕಲನ.

ಈ ಸಂಕಲನದಲ್ಲಿಯ ಪ್ರಪ್ರಥಮ ಕತೆ, ಚಪರಾಸಿ ಕಾಶೀಮನದು. ಅವನೊಬ್ಬ ವೃದ್ಧ ಮಹಮ್ಮದೀಯ. ತಾನು ಉಪವಾಸ ವನವಾಸ ಸೋಸಿ ಮಗನಿಗೆ ಕಲಿಸಿ, ಉಚ್ಚ ಶಿಕ್ಷಣವನ್ನೂ ಕೊಡಿಸಿ, ಕಂಡಲ್ಲಿ ತನ್ನ ದೈವ ತೆಗೆದುಕೊಳ್ಳಲಿ ಎಂದು ವಿಶಾಲವಿಶ್ವದಲ್ಲಿ ಬಿಟ್ಟುಬಿಡುವನು. ಆದರೆ ದುರ್ದೈವದಿಂದ ಆ ಹುಸೇನಿ ಮಾಮಲೇದಾರನಾದರೂ, ಮುಂದೆ ತಂದೆಯನ್ನೇ ಮರೆಯುವಷ್ಟು ಅಹಂಕಾರಿಯಾಗಬೇಕೆ? ಅಂತೂ ಕಾಶೀಮನಿಗೆ ಪಶ್ಚಿಮವಯಸ್ಸಿನಲ್ಲಿ ಪೇಚು ಬಂದಿತು. ಕೊನೆಗೆ ದೈವವೇ ಅನುಕೂಲಿಸಿದಂತೆ, ಹುಸೇನಿಯೇ ಏನೋ ತಿಳಿದು ತಂದೆಯನ್ನು ಕಾಣುವನು. ಆಮೇಲೆ ಇನ್ನೆಲ್ಲಿಯ ಹಟ, ಯಾರ ಮೇಲೆ ?

ಸುಸಂಸ್ಕೃತನಿದ್ದರೂ (?) ಸುರೇಶನು ತನ್ನ ಕುಡಿಯುವ ಚಟದ ಮೂಲಕ ಹೆಂಡತಿಯನ್ನೂ ಮಗುವನ್ನೂ ಹೇಗೆ ಕೆಲ ಕಾಲ ದುಃಖಕ್ಕೀಡು ಮಾಡಿದನೆಂಬುದು 'ಆಶಾ ಕಿರಣ'ದ ವಸ್ತು. ಭರಮು-ಮಲ್ಲಿಯರು ಹಳ್ಳಿಯ ತರುಣ-ತರುಣಿಯರು. ರಸಿಕರು. ಅನ್ಯೋನ್ಯ ಪ್ರೇಮಿಗಳು. ಆದರೆ ಶಿವಪೂಜೆಯಲ್ಲಿ ಕರಡಿಬಿಟ್ಟಂತೆ ಸಿದ್ದನಗೌಡನು ಮಲ್ಲಿಯ ಮೇಲಿನ ಕಣ್ಣಿನಿಂದ ಭರಮುನನ್ನು ಕಳವಿನ ಆರೋಪದ ಮೇರೆಗೆ ಸೆರೆಮನೆಗೆ ಅಟ್ಟಿಬಿಡುವನು. ಆದರೆ ನೈಜಪ್ರೇಮಕ್ಕೆ ಎಷ್ಟು ಆತಂಕ ಬಂದರೇನು? ಕೊನೆಗೆ ಯಶಸ್ಸು ಕಟ್ಟಿಟ್ಟದ್ದು! ಮುಂದೆ ಮಲ್ಲಿ-ಭರಮರು ಹೇಗೆ ಸಾರವತ್ತಾದ ಜೀವನದ ಅಸ್ತಿವಾರ ಹಾಕಿದರೆಂಬುದೇ 'ಮಲ್ಲಿ' ಎಂಬ ಕತೆಯಲ್ಲಿ ಅಡಕವಾಗಿದೆ. ನಾಲ್ಕನೆಯ ಕತೆ 'ಭಟ್ಟರ ಹುಚ್ಚ'. ಗಣಪತಿ ಎಂಬ ಪರದೇಶಿ ಹುಡುಗ, ಮಲತಾಯಿಯ ಅಲಕ್ಷ್ಯಕ್ಕೆ ತುತ್ತಾಗಿ ಹೇಗೆ ಊರುಬಿಟ್ಟು ಹೋಗಿ ಮುಂದೆ ತನ್ನ ಗತಿ ಕಂಡು, ಹುಚ್ಚ ತಾಯಿಯನ್ನು ಸಂತೈಸಿದನೆಂಬುದನ್ನು ಈ ಕತೆಯಲ್ಲಿ ನಾವು ಕಾಣುವೆವು. ತಿಮ್ಮಿ ಅನಾಥ ಹೆಂಗುಸು. ತನ್ನ ಮುದ್ದು ಮಗು ಉಗ್ರಕಾಯಿಲೆಯ ಮಡಿಲಲ್ಲಿ ಸಿಕ್ಕಾಗ, ಅವಳು ಹೇಗೆ ಅವನನ್ನು ಪಾರುಮಾಡಿದಳೆಂಬ ಸಂಗತಿ ಐದನೆಯ ಕತೆಯಲ್ಲಿದೆ. 'ಪ್ರಥಮ ಪಾಠ'ದಲ್ಲಿಯ ಸಂಪ್ರದಾಯನಿಷ್ಠ ಬಳವಂತರಾಯರು, ಏನೋ ತಪ್ಪಿ ಒಮ್ಮೆ ಸಮಾಜಸುಧಾರಣೆಯನ್ನು ಪುರಸ್ಕರಿಸಿದ್ದಕ್ಕೆ, ಅವರ ಸುಶಿಕ್ಷಿತ ಮಗಳೇ ಅದನ್ನು ನಿಜವೆಂದು ನಂಬಿ, ತನ್ನ ಗೆಳೆಯ ರಾಜನೀಕಾಂತನೊಡನೆ ಸಮಾಜ ಸೇವೆಗೆ ಬದ್ಧಳಾಗುವಳು. ಕೊನೆಯ ಕತೆ 'ಅವಳ ವೇತನ'-ರಘು-ರಮಾ ಅಲ್ಲಿಯ ಆದರ್ಶ ಗಂಡಹೆಂಡಿರು. ಮನೆಯಲ್ಲಿ ಒಬ್ಬ ಅನಾಥ ಮುದುಕಿಗೆ ಅಡಿಗೆ ಮಾಡಿಕೊಂಡಿರಲು ಆಶ್ರಯ ಕೊಡುವರು. ಆದರೆ ಆಕೆಯ ಮಗ ಪರದೇಶಕ್ಕೆ ಹೋದವನು, ಅಲ್ಲಿಯ ಹೆಣ್ಣನ್ನು ಗಂಟುಹಾಕಿಕೊಂಡಿದ್ದರೂ, ತನ್ನ ಕಣ್ಣಿಗೆ ಬಿದ್ದ ವ್ಯಥೆಯನ್ನು ಮಾಡುವನಲ್ಲಾ– ಎಂಬ ಚಿಂತೆಗೊಳಗಾಗಿ ಕಾಣೆಯಾಗಿ ಬಿಡುವಳು! ಇದೇ ಅಲ್ಲಿಯ ಕಥಾನಕದ ತಿರುಳು.

ಸಣ್ಣಕತೆಯ ಮಾನದಂಡದಿಂದ ಇಲ್ಲಿಯ ಏಳೂ ಕತೆಗಳನ್ನು ಅಳೆಯುವಾಗ—ಅವಳ ವೇತನ, ಚಪರಾಸಿ, ಮಲ್ಲಿ–ಒಳ್ಳೆಯ ಕತೆಗಳೆನಿಸಿಕೊಳ್ಳುವುವು. ಕುತೂಹಲ ಕೆರಳಿಸುವ ಸಂವಿಧಾನ, ವಾತಾವರಣ ನಿರ್ಮಿತಿಯ ಕೌಶಲದ ದೃಷ್ಟಿಯಿಂದ ನೋಡಿದಾಗಂತೂ, ಮೊದಲಿನ ಎರಡು ಕತೆಗಳನ್ನು ಯಾರೂ ಮೆಚ್ಚುವರು. 'ಮಲ್ಲಿ' ಎಂಬ ಮೂರನೆಯ ಕತೆ, ಇಂದಿನ ಇಪ್ಪತ್ತನೆಯ ಶತಮಾನದ ಹಿಂದೀ ಚಿತ್ರಪಟದ ವಸ್ತುವನ್ನು ನೆನಪಿಗೆ ತರುವುದು. 'ಆಶಾಕಿರಣ'ದ ಪಾತ್ರರಚನೆಗೆ ಹೆಸರಿಡುವಂತಿರದಿದ್ದರೂ, ಅದರ ಮುಕ್ತಾಯದಲ್ಲಿ ಕೊಂಚ ಪ್ರಚಾರದ ಝಳುಕು ಹೊಡೆಯುವುದು. 'ಭಟ್ಟರ ಹುಚ್ಚ' ಪಾತ್ರಪ್ರಧಾನವಾದ ಕತೆ. ಅಲ್ಲಿಯ ಹಿತಮಿತ ಸಂವಾದ ಓದುಗನನ್ನು ಕೊನೆಯವರೆಗೆ ಸೆಳೆದೊಯ್ಯುವ ಶಕ್ತಿಯನ್ನು ಮೈಗೂಡಿಸಿಕೊಂಡಿದೆ. 'ಮಾತಿನ ಮಂಟಪ' ಜಾನಪದ ಕಿರುಗತೆಯ ಆಧಾರದ ಮೇಲೆ ನಿರ್ಮಿತವಾದದ್ದು; ಹೀಗಿದ್ದರೂ ಅದು ಲೇಖಕರ ವರ್ಣನಾಶಕ್ತಿಯ ಮೂಲಕ ಓದಿಸಿಕೊಳ್ಳುವುದಷ್ಟೆ! ಸಣ್ಣಕತೆಗೆ ಅವಶ್ಯಕವಾದ ಬೆಳವಣಿಗೆ ರಭಸ ಅಲ್ಪಕಡಿಮೆ. ಇನ್ನುಳಿದ 'ಪ್ರಥಮ ಪಾಠ' ಎಂಬ ಕತೆಯ ಪಾತ್ರಗಳಲ್ಲಿ ಸಮಾಜಸುಧಾರಣೆಯ ಉತ್ಕಟ ಆಕಾಂಕ್ಷೆ ಮೈಗೂಡಿ ಹೋಗಿರುವುದರಿಂದ, ಅಲ್ಲಿಯ ಸನ್ನಿವೇಶದಲ್ಲಿ ಸಜೀವತೆ ಇದೆ— ಅದು ಕಲಾತ್ಮಕವಾದ ಸಣ್ಣಕತೆಯಾಗದಿದ್ದರೂ!

ಜೀವನರಂಗದ ಈ ಏಳೂ ಕತೆಗಳಲ್ಲಿ ವೈವಿಧ್ಯವಿರುವುದು ಸಂತೋಷದ ಸಂಗತಿ. ಇಲ್ಲಿಯ ಎಲ್ಲ ಕತೆಗಳೂ ಒಂದಲ್ಲೊಂದು ದೃಷ್ಟಿಯಿಂದ ಓದುಗನ ಮನಸ್ಸನ್ನು ಹಿಡಿಯುವುದುಂಟು. ಅಂತಹ ಕುತೂಹಲಕಾರಿ ಸನ್ನಿವೇಶ, ಪಾತ್ರ ಪರಿಪೋಷಣೆಗಳಿವೆ. ಶ್ರೀ ವಾಡಪ್ಪಿಯವರದು ನಿರಾಡಂಬರವಾದ ಶೈಲಿ. ಅದಕ್ಕೆ ಕನ್ನಡದ ದೇಸಿಯ ನುಣ್ಪಿದೆ. ಹಲವೆಡೆಯಂತೂ ವರ್ಣನೆಗಳು ತೀರ ಸಹಜವಾಗಿ ಬಂದಿರುವುವು. ಗ್ರಂಥದ ಅಚ್ಚುಕಟ್ಟು ಮುದ್ದಾಗಿವೆ ಎಂದು ಹೇಳಿದರೆ, ಪ್ರಸ್ತುತ ವಿಮರ್ಶೆ ಪೂರ್ಣವೆನಿಸೀತು. ಶ್ರೀ ವಾಡಪ್ಪಿಯವರು ಇತೋಪ್ಯತಿಶಯವಾಗಿ ಕಲಾಕೃತಿಗಳನ್ನು ನೀಡಿ, ಸರಸತಿಯ ಅಪಾರ ಕಣಜ ತುಂಬಲೆಂದು ಹಾರ್ದಿಕ ಹಾರಯಿಕೆ.

—ಎಸ್. ಎಸ್. ಗದಗಕರ ಧಾರವಾಡ

ನನಗೂ ರಜೆ ದೊರೆತರೆ!

(ಒಂದು ಜೀವನ ಚಿತ್ರ)

ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ. ಬೆಳಗಾಂವಿ

●

ಮಾನವರು ಮಾನವತೆಯುಳಿಸಿಕೊಂಡೇ ಬಾಳಬೇಕೆಂದು ಹಟದಿಂದ ಹೊರಟರೆ, ಲೋಕವು ಚೆಲುವಿನೆಲೆಯಾಗಿ ನಿಲ್ಲುವುದು. ಕ್ಷಣಿಕ ಸುಖದ ಸ್ವಾರ್ಥಕ್ಕಾಗಿ ಪಶುತನದಿಂದ ಬಾಳಲು ತೊಡಗಿದರೆ, ಮಾನವಲೋಕ ದಾನವಲೋಕವಾಗಿ ಪರಿಣಮಿಸುವುದು!

●

ಖತೀಜಾಳಿಗೆ ತನ್ನ ತಾಯಿ-ತಂದೆಗಳನ್ನು ನೋಡಿದ ನೆನಪೇ ಇರಲಿಲ್ಲ. ನೆನಪಿದ್ದಾಗಿನಿಂದಲೂ ಸೋದರಮಾವ-ಅತ್ತೆ ಇವರೇ ಅವಳಿಗೆ ಪರಿಚಿತರು. ದೂರದಲ್ಲೊಬ್ಬ ಅಕ್ಕ ಅವಳಿಗಿದ್ದಳೇನೋ ನಿಜ; ಆದರೆ ಖತೀಜಾ ಅವಳನ್ನೊಂದು ಬಾರಿ ಮಾತ್ರ ಕಂಡಿದ್ದಳು. ಅತ್ತೆ-ಮಾವಂದಿರಿಗೆ ಖತೀಜಾಳನ್ನು ಕಂಡರೆ ತುಂಬ ಬೇಸರು—ಹುಟ್ಟುತ್ತಲೇ ತಂದೆ-ತಾಯಿಗಳನ್ನು ನೀಗಿಕೊಂಡ ಮಗು ಎಂದು; ಅವಳ ಅಕ್ಕನನ್ನು ಕರೆಯಿಸುವ ಗೋಜಿಗೆ ಅವರೆಂದೂ ಹೋಗಿರಲಿಲ್ಲ. ಖತೀಜಾಳನ್ನು ಆದಷ್ಟು ಬೇಗ ಮದುವೆಮಾಡಿಕೊಟ್ಟು, ಅವಳಿಂದ ತಪ್ಪಿಸಿಕೊಳ್ಳುವ ವಿಚಾರದಲ್ಲಿ ಅವರಿದ್ದರು.

ಹದಿನಾರರ ಹೊಸ್ತಿಲಲ್ಲಿ ಕಾಲಿಕ್ಕುತ್ತಿದ್ದಳು ಖತೀಜಾ: ಶಾಲೆಯ ಮೆಟ್ಟಿಲಿಂದ ಇಳಿದು ಬಿಟ್ಟು ಬಹಳ ದಿನಗಳಾಗಿದ್ದುವು; ಕಲಿತಿದ್ದ ಒಂದೆರಡು ಅಕ್ಷರಗಳ ನೆನಪೂ ಅವಳಿಗೀಗ ಸರಿಯಾಗಿದ್ದಿರಲಿಲ್ಲ. ಕಲಿಯುವ ಆಸೆ ಇನ್ನೂ ಹುಟ್ಟು-ಹುಟ್ಟುತ್ತಿರುವಾಗಲೇ ಅವಳ ಅತ್ತೆ-ಮಾವ, "ಇವಳೇನು ಮಹಾ ಕಲಿತು ಮಾಡುವಳು?" ಎಂದು ಶಾಲೆಯನ್ನು ಬಿಡಿಸಿ, ಬೀಡಿ ಕಟ್ಟುವ ಕಾರಖಾನೆಗೆ ಅವಳನ್ನು ಕಳಿಸಿಕೊಟ್ಟರು. ಬೆಳಗ್ಗೆ ಒಂಬತ್ತು ಗಂಟೆಗೆ ಹೋದ ಖತೀಜಾ, ಹನ್ನೆರಡು ಗಂಟೆಯ ಗಿರಣಿಯ ಕೂಗು ಕೇಳಿ ಮನೆಗೆ ಬರುತ್ತಿದ್ದಳು; ರಾತ್ರಿಯ ತಳದಲ್ಲಿ ಉಳಿದಿದ್ದ ಅಷ್ಟಿಷ್ಟು ಅನ್ನವನ್ನು ಉಂಡು, ಪಾತ್ರೆಗಳನ್ನು ತೊಳೆದು ಮತ್ತೆ ಕಾರಖಾನೆಗೆ ಹೋದರೆ, ರಾತ್ರಿಯೇ ಮನೆಗೆ ಬರುವುದು. ಮೊದ-ಮೊದಲು ಕಾರಖಾನೆಯಲ್ಲಿಯ ತಂಬಾಕಿನ ವಾಸನೆ ಅವಳಿಗೆ ಹಿಡಿಸದೆ ಹೋದರೂ, ಬರುಬರುತ್ತ ಅದೂ ಅವಳಿಗೆ ರೂಢಿಯಾಯ್ತು! ಇದೀಗ ಖತೀಜಾಳ ಕೈ, ಬೀಡಿ ಕಟ್ಟುವುದರಲ್ಲಿ ಎಲ್ಲರಿಗಿಂತ ಚುರುಕು. ಮಾತನಾಡುತ್ತಿರುವಂತೆಯೇ ಅವಳ ಬೆರಳುಗಳು ಕೆಲಸದಲ್ಲಿ ತೊಡಗಿರುತ್ತವೆ. ದಿನದ ದುಡಿಮೆಯ ಕೊನೆಗೆ ಹನ್ನೆರಡಾಣೆಗೆ ಕಡಿಮೆಯಿಲ್ಲದಷ್ಟು ಹಣ ಅವಳ ಪಾಲಿಗೆ ಬರುತ್ತದೆ. ಅದನ್ನು, ನೇರವಾಗಿ ತಂದು ಅವಳು ಅತ್ತೆಯ ಕೈಯಲ್ಲಿ ಇಡಬೇಕು. ಅದರಲ್ಲಿ ಒಂದಾಣೆ ಕಡಿಮೆಯಾದರೂ, ಅತ್ತೆ ಅವಳ ಹಣೆಯ ಬರಹವನ್ನೇ ತೊಡೆದುಬಿಡುತ್ತಾಳೆ.

ಖತೀಜಾಳಿಗೆ ಈ ಯಾಂತ್ರಿಕ ಜೀವನದಲ್ಲಿ ಅರುಚಿಯುಂಟಾಗ ತೊಡಗಿತ್ತು. ಕಾರಖಾನೆಯಲ್ಲಿ ನಿತ್ಯ ನಡೆಯುವ ಹೆಂಗಳೆಯರ ಮಾತು ಕೇಳಿ ಕೇಳಿ ಅವಳಿಗೆ ತಲೆಹಿಡಿದಿತ್ತು. ತೀರ ಚಿಕ್ಕಂದಿನಲ್ಲಿಯೇ ಖತೀಜಾಳ ಪರಿಚಯ ಅವರಿಗಿದ್ದುದರಿಂದ, ಯಾವ ಮಾತನ್ನು ಅವಳೆದುರಾಡಲೂ ಅವರು ಹಿಂಜರಿಯುತ್ತಿರಲಿಲ್ಲ. ಅಲ್ಲಿ ಬರುವ ಹೆಣ್ಣು-ಮಕ್ಕಳಲ್ಲಿ ಅನಾಥೆಯ ಪರಿಸ್ಥಿತಿಯಲ್ಲಿದ್ದವರೇ ಹೆಚ್ಚು ಜನ. ನಿತ್ಯ ಅವರ ಹರಟೆ, ಅತ್ತಿಗೆ-ನಾದಿನಿಯರ ವರ್ಣನೆಯನ್ನೋ ಗಂಡನ ದುಷ್ಟ ಚಟಗಳನ್ನೋ ಕುರಿತು ನಡೆದೇ ಇರುತ್ತಿತ್ತು. ಕಾರಖಾನೆಯನ್ನು ಬಿಟ್ಟು ಊಟಕ್ಕೆ ಹೊರಬಂದಾಗ, ಸುಂದರವಾದ ಚಿತ್ರಗಳನ್ನು—ಸ್ವಚ್ಛಂದವಾಗಿ ಅಡ್ಡಾಡುವ ಹುಡುಗಿಯರನ್ನು,—ಓಡಾಡುವ ಮೋಟರುಗಳನ್ನು ಕಂಡು, ಹೊರಗಿನ ಜಗತ್ತು ಕಾರಖಾನೆಯ ಜಗತ್ತಿನಿಂದ ತೀರ ಭಿನ್ನವಿದೆ—ಸುಂದರವಿದೆ, ಎಂಬ ಗಾಳಿಗೋಪುರವನ್ನು ಅವಳು ಕಟ್ಟಿದ್ದಳು. ಆದರೆ ಮನೆಗೆ ಬರುತ್ತಲೇ ಅತ್ತೆಯ ಕೋಪ, ಮಾವನ ಒದರಾಟ ಅವಳ ಪಾಲಿಗೆ ಕಟ್ಟಿದ ಗಂಟು. ಖತೀಜಾಳ ವಿಷಯವನ್ನು ಬಿಟ್ಟರೆ, ಅತ್ತೆ ಮಾವ ಜಗಳಾಡುತ್ತಿದ್ದ ವಿಷಯಗಳು ಇನ್ನೂ ಎಷ್ಟೋ ಇದ್ದುವು. ಅವನ್ನೆಲ್ಲ ಮೆಲ್ಲಗೆ ಕೇಳುತ್ತಿದ್ದ ಅವಳ ಎಳೆಯ ಮನಸ್ಸಿಗೆ, ಜಗತ್ತಿರುವುದೇ ಹೀಗೇನೋ,—ಎಂದೂ ಒಮ್ಮೊಮ್ಮೆ ಎನಿಸಿತ್ತು. 'ದೊಡ್ಡವರಾದಮೇಲೆ ಎಲ್ಲರೂ ಜಗಳಾಡಲೇಬೇಕು; ದೊಡ್ಡವಳಾದರೆ, ನಾನೂ ಹೀಗೇ ಜಗಳಾಡಬೇಕಾಗುವುದು,' ಎಂದು ಖತೀಜಾ ಒಂದೊಂದು ಸಲ ಹೇಳಿಕೊಳ್ಳುತ್ತಿದ್ದಳು. ಆದರೂ ಸುಂದರವಾದ ಜಗತ್ತನ್ನು ಪೂರ್ತಿಯಾಗಿ ನೋಡಬೇಕೆಂದು ಅವಳಿಗೆ ಬಹಳ ದಿನಗಳಿಂದ ಆಸೆ! ಆದರೆ ನೋಡುವುದು ಹೇಗೆ? ರಜೆ ದೊರೆಯುವುದು ಹೇಗೆ?—ದೊರೆತರೂ ಅತ್ತೆಗೆ ತಿಳಿಯದಂತೆ ನೋಡಿಕೊಳ್ಳುವುದು ಹೇಗೆ? ಅದೊಂದು ದಿನ ಖತೀಜಾ, ಮಧ್ಯಾಹ್ನದ ಊಟಕ್ಕೂ ಮನೆಗೆ ಬಾರದೆ ದುಡಿದಳು; ಮೂರನೆಯ ದಿನವೂ ಹಾಗೇ ಮಾಡಿದಳು. ಅವಳು ನಿತ್ಯ ಹೀಗೇ ಮಾಡಲೆಂದು ಅತ್ತೆಗೆ ಮನಸ್ಸಿದ್ದರೂ, 'ಎರಡೊಪ್ಪತ್ತಿನ ಕೂಳನ್ನು ಒಪ್ಪೊತ್ತಿಗೇ ತಿನ್ನುತ್ತಾಳೆ,' ಎಂದು, ಕಣ್ಣುಬಿರಿಯುವಂತೆ ಅವಳೆಡೆ ನೋಡಿದಳು; ಏನೆಂದರೂ

ಖತೀಜಾಳ ಲಕ್ಷ್ಯ ಅಲ್ಲಿರಲಿಲ್ಲ. ಮರುದಿನ ಸುಂದರವಾದ ಜಗತ್ತನ್ನ ನೋಡಬೇಕೆಂಬ ಅವಳ ಆಶೆಯಲ್ಲಿ ಮಗ್ನವಾಗಿತ್ತು.

ಮರುದಿನದ ದುಡಿಮೆಯ ಹಣವನ್ನು ಖತೀಜಾ, ಮೊದಲಿನೆರಡು ದಿನಗಳಲ್ಲಿಯೇ ಉಳಿತಾಯ ಮಾಡಿದ್ದಳು. ಅದಕ್ಕಾಗಿ ತಾನು ರಜೆ ತೆಗೆದುಕೊಂಡ ವಿಚಾರವನ್ನು ಅತ್ತೆಗೆ ಹೇಳಲೂ ಬೇಕಾಗಲಿಲ್ಲ. ಮರುದಿನ ಬೆಳಗಾಗುವುದನ್ನೇ ಅವಳ ಆಶಾಪೂರ್ಣ ನಯನಗಳು ಎದುರು ನೋಡುತ್ತಿತ್ತು. ಹೊಳೆಯುವ ಸೂರ್ಯಕಿರಣಗಳೊಡನೆ ಅವಳ ಕಣ್ಣುಗಳೂ ಹೊಳೆ-ಹೊಳೆದವು; ಹಬ್ಬುವ ಪ್ರಕಾಶದೊಡನೆ ಅವಳ ಆಶೆಯೂ ಪಲ್ಲವಿಸಿತು. ನಿತ್ಯ ಕಾರಖಾನೆಗೆ ಹೋಗುವ ವೇಳೆಗೆ ಖತೀಜಾ ಮನೆಯಿಂದ ಹೊರ-ಹೊರಟಳು. ಅತ್ತೆಗೆ ಕಾಣದಂತೆ ಕಾರಖಾನೆಯ ದಾರಿಯಿಂದಲೇ ಸರಿದು ಪಕ್ಕದ ಬೀದಿಗೆ ಬಂದಳು; ಎತ್ತರವಾದ ಕಟ್ಟಡಗಳು—ಟಾಂಗಾ ಮೋಟರುಗಳಲ್ಲಿ ಕುಳಿತು ಆಫೀಸಿಗೆ ಹೋಗುವ ಜನ—ಥಳಥಳಿಸುವ ಸೀರೆಯುಟ್ಟು ಓಡಾಡುವ ಮಹಿಳೆಯರು! ಖತೀಜಾ, ಆ ಮಹಿಳೆಯರ ದೈವವೇ ದೈವವೆಂದು ಮನದಲ್ಲಿ ಕೊಂಡಾಡಿದಳು. ಆದರೆ ಸದ್ಯ ಎಲ್ಲಿ ನಿಲ್ಲುವುದು?

ನಿಂತು ಮಾಡುವುದೇನು? ಬಿಸಿಲಲ್ಲಿ ಬೀದಿ ಬೀದಿ ಅಡ್ಡಾಡಿದರೆ ಜಗತ್ತನ್ನು ನೋಡಿದಂತಾಯಿತೇ?—ಹೀಗೇ ಯೋಚಿಸುತ್ತ ಖತೀಜಾ ಒಂದು ಮಹಲಿನ ಕಿಟಕಿಯ ಬಳಿ ಸರಿದು ನಿಂತಳು; ಒಳಗೇನೋ ತುರುಸಿನ ಸಂಭಾಷಣೆ ನಡೆದಿತ್ತು. ಗಂಡಸಿನ ಧ್ವನಿ—ಮತ್ತೆ ಹೆಂಗುಸಿನ ಧ್ವನಿ; ಅವಳ ಧ್ವನಿಯಲ್ಲಿ ದೈನ್ಯ, ಕೋಪ ಎಲ್ಲವೂ ಬೆರೆತಿದ್ದುವು. ಖತೀಜಾ ಇಣುಕಿ ನೋಡಿದಳು; ಮೆತ್ತನೆಯ ಗಾದಿ ಹಾಕಿದ ಕುರ್ಚಿಯಲ್ಲಿ, ರೇಶಿಮೆ ಸೀರೆಯನ್ನುಟ್ಟ ಸುಂದರ ಯುವತಿಯೊಬ್ಬಳು ಕುಳಿತಿದ್ದಳು; ಅವಳ ಎದುರುಗಡೆ, ಹೊಸ ಬಗೆಯ ಉಡಿಗೆ-ತೊಡಿಗೆಗಳನ್ನು ಧರಿಸಿದ ಯುವಕ ನಿಂತುಕೊಂಡಿದ್ದನು. ಖತೀಜಾ ಯೋಚಿಸಿದಳು. "ಅತ್ತೆ-ಮಾವನಂತೆ ಇವರೂ ಜಗಳಾಡಬೇಕೇ? ಇವರಿಗೂ ದುಡ್ಡಿನ ಕೊರತೆಯೇ?" ಮತ್ತೆ ಅವರ ಮಾತಿಗೆ ಕಿವಿಗೊಟ್ಟಳು.

ಯುವತಿ, ಅವನು ಭುಜದ ಮೇಲಿಟ್ಟ ಕೈಯನ್ನು ದೂರ ಚೆಲ್ಲಿ ಅರ್ಭಟಿಸಿದಳು: "ಹಾಗಾದರೆ ನನ್ನನ್ನು ಇಲ್ಲಿ ಎಳೆದು ತಂದುದೇಕೆ?"

"ಎಳೆದು ತಂದವನು ನಾನಲ್ಲ ಶಶೀ, ಅದು ನಿಸರ್ಗ ಕಲಿಸಿರುವ ಆಕರ್ಷಣೆ!" ಯುವಕನು ಸಮಾಧಾನದಿಂದಲೇ ಉತ್ತರಿಸಿದನು.

"ನಿಸರ್ಗದ ಆಕರ್ಷಣೆಗೆ ಸಮಾಜದ ಬೆಂಬಲ ಬೇಡವೇ?" ಶಶಿ ಕೇಳಿದಳು.

"ಇದ್ದರೆ ಒಳಿತು, ಇರಲೇಬೇಕೆಂಬ ನಿರ್ಬಂಧವಿಲ್ಲ; ನಿಸರ್ಗದ ನಿಯಮಕ್ಕೆ ಕೃತ್ರಿಮ ಬಂಧನವೇಕೆ? ಮೇಲೆ ತೂರಿದ ಹಣ್ಣು ಪೃಥ್ವಿಯೆಡೆಗೆ ಆಕರ್ಷಿತವಾಗುವುದು ನಿಸರ್ಗದ ನಿಯಮ. ಅದಕ್ಕೆ ಯಾರ ಬೆಂಬಲ ಬೇಕಾಗಿದೆ?" ಯುವಕನು ಆಢ್ಯತೆಯಿಂದ ಹೇಳಿದನು.

"ಪ್ರಭಾ, ನೀನೂ ನಾನೂ ಕೃತ್ರಿಮ ಸಮಾಜದಲ್ಲಿ ಜೀವಿಸುವ ಪ್ರಾಣಿಗಳೆಂಬುದನ್ನು ಮರೆತಿನ್ನೀಯಾ?" ಶಶಿ ಕೂಗಿದಳು.

"ಕೃತ್ರಿಮ ಸಮಾಜ, ಅದರ ಬೆಂಬಲದಿಂದ ದೊರೆತ ಆಕರ್ಷಣೆ ನನಗೆ ಬೇಸರವಾಗಿದೆ ಶಶೀ! ನನ್ನನ್ನು ಎಳೆಯಲೇ ಬೇಕೆಂದು ಮಾಡಿದ ಸಮಾಜದ ಆಟವನ್ನು ನಾನು ಅರಿತಿದ್ದೇನೆ; ಪತ್ನಿಗಾಗಿ ಸಮಾಜ ನಿರ್ಬಂಧಿಸಿದ ಕರ್ತವ್ಯವನ್ನು ನಾನು ಈಗಾಗಲೇ ಮಾಡುತ್ತಿದ್ದೇನೆ. ಆದರೆ ನಿರ್ಬಂಧರಹಿತ ಈ ಜೀವನ, ಈ ಆಕರ್ಷಣೆ, ಈ ಸುಖಭೋಗ—ಇವುಗಳ ಸೌಂದರ್ಯ ನನಗೆ ಹೇಗೆ ದೊರೆಯುವುದು ಶಶೀ... ನೀನಿಲ್ಲದೆ ಹೋದರೆ?" ಪ್ರಭಾಕರ ತನ್ನ ಅಸಹಾಯತೆಯನ್ನು ಮುಂದು ಮಾಡಿದನು.

ಶಶಿಯ ಕಣ್ಣಿನಲ್ಲಿ ನೀರುದುರಿತು, "ನಿನ್ನ ಸ್ವಾರ್ಥಕ್ಕಾಗಿ ತಂದ ಪಶುವೇ ನಾನು?" ಅವಳು ಉನ್ಮತ್ತಳಂತೆ ಹೊರಹೊರಟಳು.

ಖತೀಜಾ ಅಲ್ಲಿ ನಿಲ್ಲಲಾರದೆ ಮುಂದೆ ಹೆಜ್ಜೆ ಇಟ್ಟಳು!

ಅಕ್ಕಪಕ್ಕದ ಮನೆಗಳನ್ನು ನೋಡುತ್ತ, ಅಂಗಡಿಗಳಲ್ಲಿ ಮೋಸ ಮಾಡಿ ಕಡಿಮೆ ಮಾಲು ಕೊಟ್ಟರೆಂಬ ಗಿರಾಕಿಗಳ ತಂಟೆಗಳನ್ನು ಕೇಳುತ್ತ, ಎರಡು ಬೀದಿಗಳನ್ನು ದಾಟಿಬಂದಳು ಖತೀಜಾ. ಬೀದಿಯ ಕೊನೆ ಒಂದು ಗುಡಿಸಲು. ನಡುಹರೆಯದ ಹೆಣ್ಣುಮಗಳೊಬ್ಬಳು ಉಡಿಯಲ್ಲೊಂದು ಮಗುವನ್ನು ಕಟ್ಟಿಕೊಂಡು ಹೆಗ್ಗ ಹೊಸೆಯುತ್ತಿ.



ದ್ದಳು. ಬೆನ್ನಿನಮೇಲೊಂದು ಮಗು ಬಿದ್ದುಕೊಂಡಿತ್ತು. ಅವಳು ತನ್ನಷ್ಟಕ್ಕೆ ತಾನೇ ಹೇಳಿಕೊಂಡಂತೆ ಏನನ್ನೋ ವಟಗುಟ್ಟುತ್ತಿದ್ದಳು: 'ಇವನನ್ನು ಕಟ್ಟಿಕೊಂಡು ಸುಖವನ್ನುಣ್ಣುತ್ತಿದ್ದೇನೆ. ದುಡಿದು ಉಂಬುದಂತೂ ಉಳಿಯಿತು; ನಾನು ದುಡಿದದ್ದನ್ನೇ ಒಯ್ದು, ಕುಡಿದು ಬಂದು, ಬೊಗಳುತ್ತ ಮೂಲೆಯಲ್ಲಿ ಬೀಳುತ್ತಾನೆ...... ಮೇಲೆ ವರ್ಷಕ್ಕೊಂದು ಮಗು!....ಇವನಿಂದ ಬಿಡುಗಡೆ ಹೊಂದಿದರಾದರೂ ....'

ಖತೀಜಾ ಯೋಚಿಸಿದಳು, "ಇವಳೂ ಮದುವೆಯಾದವನೊಡನಿಲ್ಲವೇ ?" ಆ ಹೆಣ್ಣುಮಗಳು ಹಾಗೇ ವಟಗುಟ್ಟುತ್ತಿದ್ದಳು: "ಮದುವೆಯಾದರೆ ಇದು ಬಿಡದ ಕರ್ಮ! ದೇವರು ಕೊಟ್ಟ ಮಕ್ಕಳಿಗಾದರೂ ಕೂಳು ಬೇಡವೇ? ತಂದೆ-ತಾಯಿಗಳಿಲ್ಲದ ಪರದೇಶಿ ಮಕ್ಕಳಂತೆ ಅವು ಬಾಳಬೇಕೆ?.... ...ಇದು ಮದುವೆಯ ಸುಖ!........ ಅದಕ್ಕೇ ಕಮಲಮ್ಮ ಮದುವೇ ಬಿಟ್ಟಿದ್ದು!"

'ತಂದೆ-ತಾಯಿಗಳಿದ್ದ ಮಕ್ಕಳೂ ಹೀಗೆ ಬದುಕುತ್ತಿವೆಯಲ್ಲ!'– ಎಂದು ಖತೀಜಾ ಸಮಾಧಾನದ ಉಸುರೆಳೆದಳು. ಆದರೆ ಒಂದು ಮಾತು ಮಾತ್ರ ಅವಳ ಕುತೂಹಲವನ್ನು ಕೆರಳಿಸಿತು. ಖತೀಜಾ ಮೆಲ್ಲಗೆ ಹೋಗಿ ಅವಳನ್ನು ಕೇಳಿದಳು: "ಅಮ್ಮಾ ಇದು ನಿನ್ನ ಮಗುವೇ ?" ಏನನ್ನಾದರೂ ಮಾತನಾಡಿಸಬೇಕೆಂದು ಖತೀಜಾ ಆ ಪ್ರಶ್ನೆಯನ್ನು ಕೇಳಿದಳು. ಅವಳಿಗೆ ಕಮಲಮ್ಮ ಮದುವೆ ಬಿಟ್ಟ ವಿಚಾರವನ್ನು ಕುರಿತು ಕೇಳುವುದು ಮುಖ್ಯವಾಗಿತ್ತು.

"ಹೌದು, ಯಾಕೆ, ನಿನಗೆ ಬೇಕಾಗಿದೆಯೆ ?" ಆ ತಾಯಿ ಕೊಂಚ ಸಿಡುಕಿನಿಂದಲೇ ಕೇಳಿದಳು.

"ಹಾಗಲ್ಲ ತಾಯಿ, ನಿನಗೆ ಎಷ್ಟು ಜನ ಮಕ್ಕಳೆಂದು ವಿಚಾರಿಸಿದೆ, ಅಷ್ಟೇ!"

"ಎಷ್ಟು ಜನರಂತೆ! ಮುತ್ತಿಕೊಂಡಿರುವ ಇವೆಲ್ಲ ಮಕ್ಕಳೇ!"

"ಪುಣ್ಯವಂತೆಯಮ್ಮಾ ನೀನು!"

"ಹೌದು ಪುಣ್ಯ ಅಳುತ್ತಿದೆ ನೋಡು!"

"ಯಾಕೆ ತಾಯೀ, ಹಾಗಾದರೆ ನಿನಗಿಂತ ಆ ಕಮಲಮ್ಮ ಪುಣ್ಯವಂತೆಯೇ ?"

"ಅದರಲ್ಲೇನು ಸಂಶಯ? ಈ ಊರಲ್ಲಿ ಅವಳ ಹೆಸರನ್ನರಿಯದ ಒಂದು ಪಿಳ್ಳೆಯೂ ಇಲ್ಲ.—ಯಾವ ಮಕ್ಕಳ ಜಂಜಡವೂ ಇಲ್ಲದೆ ಸುಖವಾಗಿದ್ದಾಳೆ; ಅದೋ ನೋಡು, ಅವಳು ಕಟ್ಟಿಸಿದ ಮಹಡಿಯ ಮನೆ. ಹೋಗಿ ನೋಡು, ನಿನ್ನ ಕಣ್ಣುಗಳಾದರೂ ಸಾರ್ಥಕತೆಯನ್ನು ಪಡೆಯಲಿ!"

ಖತೀಜಾ ಕುತೂಹಲದಿಂದ ಮುಂದೆ ಸಾಗಿದಳು.

ಕಮಲಮ್ಮನ ಮನೆಯೆದುರು ನಿಂತಳು! ಎತ್ತರವಾದ ಮಹಡಿಯ ಮೂರಂತಸ್ತಿನ ಮನೆ. ಹೊಳೆಹೊಳೆಯುವ ಬಣ್ಣದ ಗೋಡೆಗಳು; ಬಾಗಿಲು-ಬಾಗಿಲಿಗೂ ಎದ್ದೇಳುವ ರೇಶಿಮೆಯ ತೆರೆಗಳು. ತೆರೆಗಳನ್ನು ಓರೆಮಾಡಿ, ತಿಂಡಿ ತಟ್ಟೆ ಸಹಿತ ಆಡ್ಡಾಡುವ ಬಾಲಕರು! ಖತೀಜಾ, ಮೋಟರೊಂದು ವೇಗವಾಗಿ ಬಂದಿದ್ದರಿಂದ ಪಕ್ಕಕ್ಕೆ ಸರಿದಳು. ಮೋಟರಿನ ಸಪ್ಪಳ ಕೇಳಿ ಒಬ್ಬ ಹೆಣ್ಣುಮಗಳು—ವೇಷ-ಭೂಷಣಗಳಿಂದ ನೋಡಿದರೆ ಅವಳೇ ಮನೆಯೊಡತಿಯಂತೆ ಕಾಣುತ್ತಿದ್ದಳು—ಬಾಗಿಲಿಗೆ ಬಂದಳು. ಆಳು ಬಂದು ಮೋಟರಿನ ಬಾಗಿಲನ್ನು ತೆರೆದನು. ದೊಡ್ಡ ಮನುಷ್ಯರೊಬ್ಬರು ತಮ್ಮ ದೇಹವನ್ನು ತಾವೇ ಎತ್ತಲಾರದೆ ಹೊರಬಂದರು. ಆ ಹೆಣ್ಣುಮಗಳು—ಕಮಲಮ್ಮ ಅವರನ್ನು ಸ್ವಾಗತಿಸಿ ಕರೆದೊಯ್ದಳು. ತೆವಿಗೊಟ್ಟರೂ ಮುಂದೇನಾಯಿತೆಂಬುದನ್ನು ತಿಳಿಯಲು ಖತೀಜಾ ಪೂರ್ಣ ಸಮರ್ಥಳಾಗಲಿಲ್ಲ. ಒಂದು ತಾಸಿನ ವರೆಗೆ ಹಿಂದೆ ನೋಡಿದ ದೃಶ್ಯಗಳನ್ನೇ ಮೆಲುಕುಹಾಕುತ್ತ ಅವಳು ಅಲ್ಲಿಯೇ ನಿಂತಿದ್ದಳು. ಅಷ್ಟರಲ್ಲಿ ಮತ್ತೆ ಬಾಗಿಲು ತೆರೆದ ಸದ್ದಾಯಿತು.

ದೊಡ್ಡ ಮನುಷ್ಯರು ಹೊರಬಂದರು. ಮೋಟರಿನಲ್ಲಿ ಕೂಡುತ್ತಿರುವಾಗಲೇ ಹೇಳಿದರು.

"ಇಂದು ಸಂಜೆ ಬರುವಾಗ ಎಲ್ಲ ಹಣವನ್ನೂ ತರುತ್ತೇನೆ, ಮುಂದಿನ ವ್ಯವಸ್ಥೆಯೆಲ್ಲವನ್ನೂ ಮಾಡುತ್ತೇನೆ. ಯೋಚಿಸಬೇಡ!"

ಕಮಲಮ್ಮ ಮುಗುಳ್ನಗೆ ನಕ್ಕಳು! ಮೋಟರು ಮುಂದೆ ಸರಿಯಿತು!

ಖತೀಜಾಳಿಗೆ ಇದೆಲ್ಲ ಸುಲಭವಾಗಿ ಅರ್ಥವಾಯಿತು! ಸುಂದರ ಜಗತ್ತನ್ನು ಇನ್ನೂ ನೋಡಿ, ಅದರ ಸೌಂದರ್ಯವನ್ನು ಪರೀಕ್ಷಿಸಬೇಕೆಂಬ ಇರಾದೆ ಉಳಿಗುಳಿದಿರಲಿಲ್ಲ. ಅಲ್ಲದೆ ವಿಚಾರಕ್ಕೆಡೆಗೊಡದಂತೆ

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

(ಸಂ.: ಶ್ರೀ. ಪಿ. ವೆಂಕೋಬಾಚಾರ್ಯ ಬಿ. ಎ. ಬಿ. ಟಿ.)

ಬೆಲೆ ಬಾಳುವ ಪುಸ್ತಕಗಳು ಕಡಿಮೆ ಬೆಲೆಗೆ

(೧೧-೮-೦) (೮-೦-೦)

೧	ಪೂರ್ಣಿಮಾ (ಸಂಸಾರ ಸುಖದ ಚಿತ್ರಗಳು)	೨-೪-೦
೨	ಮನೋರಾಜ್ಯ (ಮೂರಂಕದ ನಾಟಕ)	೨-೪-೦
೩	ಮೋಪಾಸಾನ ಓಲೆಗಳು (ಜೀವನ ಚರಿತ್ರೆ)	೨-೦-೦
೪	ರುಕ್ಮಿಣಿ, (ಕಾದಂಬರಿ)	೨-೦-೦
೫	ಮುಡಿಯದ ಹೂ (ಮೋಪಾಸಾನ ಕತೆಗಳು)	೧-೮-೦
೬	ಕಲ್ಪನಾ ವಿಲಾಸ (ಸಣ್ಣ ಕತೆಗಳು)	೧-೮-೦
		೧೧-೮-೦

ಈ ಮೇಲಿನ ಪುಸ್ತಕಗಳು ಕೇವಲ ೮-೮-೦ ಗೆ

ಅಂಚೆ ವೆಚ್ಚ ಸಹಿತ

ಒಳ್ಳೇ ಸುಸಂಧಿ. ಇಂದೇ ಬರೆಯಿರಿ.

೬೦೬೦ ಗೌಳೀಗಲ್ಲಿ — ಪಿ. ವಿ. ಆಚಾರ್ಯ & ಕಂ.

ಹುಬ್ಬಳ್ಳಿ — ಸಂಚಾಲಕರು, ಆನಂದ ಗ್ರಂಥಮಾಲಾ.

ಹಸಿವೆ ಅವಳನ್ನು ಆವರಿಸಿತ್ತು. ಹಿಂದಿನ ದಿನದ ದುಡಿಮೆಯಿಂದ ಉಳಿದ ಒಂದಾಣೆಯನ್ನು ಕೊಟ್ಟು ಕಡಲೆ-ಪುರಿಯನ್ನು ತಿನ್ನುತ್ತ ಅಲ್ಲಿಯೇ ಕೊಂಚ ಹೊತ್ತು ವಿರಮಿಸಿದಳು. ನೋಡು-ನೋಡುತ್ತಿರೆ ವಂತೆ ಮತ್ತೊಬ್ಬ ದೊಡ್ಡ ಮನುಷ್ಯರು ನಡೆದುಕೊಂಡೇ ಕಮಲಮ್ಮನ ಮನೆಗೆ ಬಂದರು. ಕಮಲಮ್ಮ ಅವರನ್ನೂ ಸ್ವಾಗತಿಸಿ ಕರೆದೊಯ್ದಳು. ಅಲ್ಪ ವೇಳೆಯಲ್ಲಿ ನೋಡಿದ ಆ ಜೀವನವೂ ಖತೀಜಾಳಿಗೆ ಹಿಡಿಸದಾಯ್ತು. ನೋಡು-ನೋಡುವಷ್ಟರಲ್ಲಿಯೇ ಕಮಲಮ್ಮನ ಮನೆಯಾಳು ಬಂದು ಖತೀಜಾಳನ್ನು ಎಬ್ಬಿಸಿದನು. "ಇಲ್ಲಿ ಯಾರು ಕುಳ್ಳಿರಲು ಹೇಳಿದರೇ ನಿನಗೆ? ಯಜಮಾನಿಯ ಮುಂದೆ ನಿನ್ನನ್ನು ಕರೆದೊಯ್ಯಲಾ?"

"ಬೇಡ, ಇದೋ, ಹೋದೆ! ನಮ್ಮ ಅತ್ತೆ ಬಯ್ಯುತ್ತಾರೆ!" ಖತೀಜಾ ಉತ್ತರಿಸಿದಳು.

"ಅತ್ತೆ ಏನು ಬಯ್ಯುತ್ತಾಳೆ ಅತ್ತೆ! ನಡೆ ನೀನೂ ಮಹಡಿಯ ಮನೆ ಕಟ್ಟಿಸುವಿಯಂತೆ! ಬೇಕಾದಷ್ಟು ದುಡ್ಡು!" ಆಳು ಹೇಳಿದನು.

"ಬೇಡ, ಬೇಡ," ಅನ್ನುತ್ತ ಖತೀಜಾ ಅಲ್ಲಿಂದ ಹೊರಟೇ ಬಿಟ್ಟಳು! ಯಾವುದೋ ಅಜ್ಞಾತಭೀತಿ ಅವಳನ್ನಾವರಿಸಿತ್ತು. ಯೋಚಿಸುತ್ತ ಮುಖ ಕೆಳಗೆ ಮಾಡಿಕೊಂಡು ಅವಳು ದಾರಿ ತುಳಿಯುತ್ತಿದ್ದಳು. ಹಾಯ್ದು ಬರುವಾಗ ಬೀದಿಯ ಪಕ್ಕದಲ್ಲಿ ಒಂದು ಮಹಡಿಯ ಮನೆಯೆದುರು, ಒಬ್ಬ ಹೆಣ್ಣುಮಗಳು ಕೂಗಾಡುತ್ತಿದ್ದಳು. ಅವಳ ತಲೆಕೂದಲು ಕೆದರಿತ್ತು; ಒದರುತ್ತ ಅಡ್ಡಾಡುತ್ತಿದ್ದಳು. "ಅವಳು ಹುಚ್ಚಿಯಿರಬಹುದೇನೋ!" ಖತೀಜಾ ಅಂದುಕೊಂಡಳು. ಇನ್ನೊಂದು ಮನೆಗೆ ಸರಿದು ಕಾಳು ಹಸನು ಮಾಡುತ್ತ ಕುಳಿತಿದ್ದ ಮುದುಕಿಯನ್ನು ಕೇಳಿದಳು: "ಅಮ್ಮಾ ಇವಳು ಹುಚ್ಚಿಯೇ?"

"ನೀನು ಯಾವ ಊರವಳು?" ಮುದುಕಿ ಕೇಳಿದಳು, "ಅದೊಂದು ದೊಡ್ಡ ಕಥೆಯೇ!"

"ಅವಳ ಹುಚ್ಚಿಗೂ ಕಥೆಯಿದೆಯೇ?" ಕುತೂಹಲದಿಂದ ಖತೀಜಾ ಪ್ರಶ್ನಿಸಿದಳು.

"ಹೌದು, ಅವಳು ಮೊದಲು ಚೆನ್ನಾಗಿದ್ದಳು. ಅವಳಿಗೊಬ್ಬ ಮಗನೂ ಇದ್ದಾನೆ. ಆದರೆ ಇತ್ತೀಚೆ ಅವಳ ಗಂಡ ಕಮಲಮ್ಮನನ್ನು ಸೇರಿ ಆಸ್ತಿ-ಪಾಸ್ತಿಯನ್ನೆಲ್ಲ ಹಾಳುಮಾಡಿಕೊಂಡದ್ದರಿಂದ, ಅವಳಿಗೀಗತಿಯಾಗಿದೆ; ಮೊನ್ನೆ ಬಾವಿ ಹಾರಲು ಹೊರಟಿದ್ದಳು; ನಾವೇ ಹಿಡಿದು ತಂದೆವು."

"ಯಾಕೆ? ಅವಳ ಗಂಡ ಕೇಳುವುದೇ ಇಲ್ಲವೇ?" ಖತೀಜಾ ಉದ್ವಿಗ್ನಳಾಗಿ ಕೇಳಿದಳು.

"ಇಲ್ಲ ತಾಯಿ, ಅವನು ಯಾವಾಗಲು ಇರುವುದು ಆ ಕಮಲಮ್ಮನ ಮನೆಯಲ್ಲಿಯೇ, ಮನೆಯವರನ್ನು ಒಂದು ವಿಚಾರವಾಗಿಯೂ ಅವನು ಮಾತನಾಡಿಸುವುದಿಲ್ಲ."

ಖತೀಜಾಳಿಗೆ ಅರ್ಥವಾಯಿತು; ಜಗತ್ತಿನಲ್ಲಿ ನಡೆದಿರುವ ಸರಪಳಿಯಂತಹ-ಘಟನೆಗಳಿಗೆ ಆಶ್ಚರ್ಯಪಟ್ಟಳು; ಆ ಹೆಣ್ಣುಮಗಳ ಪರಿಸ್ಥಿತಿಯನ್ನು ನೆನೆದು ನೊಂದುಕೊಂಡಳು.

'ಕಮಲಮ್ಮನ ವೈಭವ ಇವಳ ಕಣ್ಣೀರಿನ ಮೇಲೆ ನಿಂತುದೇ?' ಯೋಚಿಸಿದಳು. "ಅನ್ಯಾಯವಾಗಿ ಸುಲಿದ ಅವಳ ವೈಭವವೂ ಒಂದಿಲ್ಲೊಂದು ದಿನ ಇದೇ ಗತಿಗೆ ಬಂದೀತು!" ಎಂದು ದೈವೀ ಪ್ರತೀಕಾರದ ಆಶೆಯೂ ಅವಳಲ್ಲಿ ಮೂಡಿಹೋಯಿತು.

ಕಾರಖಾನೆಯ ನಿತ್ಯದ ಜಂಜಡದಿಂದ, ಹೆಂಗಳೆಯರ ಸಂಕುಚಿತ ಜೀವನ ದೃಷ್ಟಿಯಿಂದ ಪಾರಾಗಿ, ಜಗತ್ತಿನ ಸೌಂದರ್ಯವನ್ನು ಕಾಣಬೇಕೆಂದು ಆಶಿಸಿದ್ದ ಖತೀಜಾಳಿಗೆ ಕಂಡುದೇನು? ತಲೆಭಾರವಾಗಿ ಖತೀಜಾ ಮನೆಗೆ ಮರಳಿದಳು. ಅತ್ತೆಯ ಕೈಯಲ್ಲಿ ಹಿಂದಿನ ದಿನದ ಉಳಿದ ಹಣವನ್ನು ಅಂದಿನ ಲೆಕ್ಕವೆಂದು ಒಪ್ಪಿಸಿದಳು; ಆದರೆ ಅವಳ ಅಂದಿನ ಅನುಭವ ಯಾವ ಲೆಕ್ಕಕ್ಕಾದರೂ ನಿಲುಕುತ್ತಿತ್ತೇ?

ಅಂದಿನಿಂದ 'ನನಗೂ ರಜೆ ದೊರೆತರೆ....' ಎಂಬ ಪಲ್ಲವಿ ಖತೀಜಾಳ ಬಾಯಿಂದ ಹೊರಬಲೇ ಇಲ್ಲ! *

---

* ಮೂಲ ಕಲ್ಪನೆ Robert Browning ಕವಿಯ 'Pippa passes' ಎಂಬುದರಿಂದ.

ಕುಟಜಾರಿಷ್ಟ
ಆಮಾಂಶ-ಸಂಗ್ರಹಣಿಗಳಿಗೆ
●
ಕಾಸಶ್ವಾಸಾರಿ
ದಮ್ಮು-ಕೆಮ್ಮುಗಳಿಗೆ
ಎಲ್ಲ ಬಗೆಯ ಆಯುರ್ವೇದ ಔಷಧಿಗಳಿಗಾಗಿ
ಬರೆಯಿರಿ:
卐
ದಿ ನೂತನ
ಆಯುರ್ವೇದ ಕಾರ್ಯಾಲಯ ಲಿ.
ವಿಜಾಪುರ

ಇಜಿಪ್ತದ ಕ್ರಾಂತಿಪುರುಷ

ಮಹಮ್ಮದ ನಜೀಬ್

ಶ್ರೀ. ವೆಂ. ಮು. ಜೋಶಿ, ಧಾರವಾಡ

卐

ಇಂದಿನ ಲೋಕದ ಆಕರ್ಷಕ ರಾಜಕೀಯ ವ್ಯಕ್ತಿಗಳಲ್ಲಿ ಈಜಿಪ್ತದ ಮುಹಮ್ಮದ್ ನಜೀಬನೂ ಒಬ್ಬನಾಗಿದ್ದಾನೆ. ಸುರಾಜ್ಯಕ್ಕಾಗಿ ಪ್ರಜಾಪ್ರಭುತ್ವವೆ ಬೇಕೆಂದಲ್ಲ. ಪ್ರಜಾಕಲ್ಯಾಣದ ಉತ್ಕಟ ಭಾವನೆಯನ್ನಿರಿಸಿಕೊಂಡ ಸರ್ವಾಧಿಕಾರಿಯಿಂದಲೂ ಸುರಾಜ್ಯವು ಶಕ್ಯವಿದೆ.

卐

೧೯೫೨ರ ಮೊದಲಿನ ಇಜಿಪ್ತ

ಇಜಿಪ್ತದ ಅರಸು ಫರೂಕನು ಸರ್ವಾಧಿಕಾರಿಯಾಗಿದ್ದ. ಫರೂಕನು ಸ್ವಯಂ ಸಿಂಹನೆಂದೆನಿಸಿಕೊಂಡಿದ್ದ. ಇಡಿ ಇಜಿಪ್ತದಲ್ಲಿಯ ವಿಲಾಸಪ್ರಿಯತೆ ಫರೂಕನ ಅರಮನೆಯಲ್ಲಿ ನೆಲಸಿತ್ತು. ಸರಕಾರದ ಬೊಕ್ಕಸವು ಪ್ರಜೆಗಳ ಹಿತಕ್ಕಾಗಿ ಎಂದು ಫರೂಕನು ಎಣಿಸಲಿಲ್ಲ. ಜಗತ್ತಿನಲ್ಲಿ ಕೆಲವರು ಸುಖ ಪಡುವುದಕ್ಕೆಂದೇ ಜನ್ಮವನ್ನು ತಾಳುತ್ತಾರೆ. ಹೀಗೆ ಕೆಲವರು. ಮತ್ತೆ ಕೆಲವರು ಪ್ರತಿಫಲವಿಲ್ಲದೆ ಕೇವಲ ದುಡಿಯುವುದಕ್ಕೆ ದುಃಖ ಬಡುವುದಕ್ಕೆ ಹುಟ್ಟಿರುತ್ತಾರೆ. ಸುಖಪಡೆಯುವುದಕ್ಕಾಗಿ ಹುಟ್ಟಿದವರಲ್ಲಿ ತಾನೇ ಅಗ್ರಗಣ್ಯನೆಂದು ತಿಳಿದುಕೊಂಡಿದ್ದನು ಫರೂಕ.

ದೇಶದಲ್ಲಿ ಅವ್ಯವಸ್ಥೆ ತಾಂಡವವಾಡುತ್ತಿತ್ತು, ಸರಕಾರ ಲಂಚ-ರುಷುವತ್ತುಗಳ ತವರ್ಮನೆಯಾಗಿತ್ತು. ಅರಬ-ಇಸ್ರಾಯೆಲ್ ಬಡಿದಾಟದಲ್ಲಿ ಇಜಿಪ್ತದ ಸೇನೆ ಸೋಲನ್ನನುಭವಿಸುತ್ತಿತ್ತು. ಆದರೂ ಮದಾಂಧನಾದ ಫರೂಕನು, ಕಣ್ತೆರೆದು ಅರಮನೆಯ ಹೊರಗೆ ನೋಡಲಿಲ್ಲ. ವಿಲಾಸ, ಸುಖಮಯ ಜೀವನ. ಕುಡಿತ. ಕುಣಿತ— ಇವುಗಳಲ್ಲಿಯೆ ಮಗ್ನನಾದ ಫರೂಕನಿಗೆ, ದೇಶಹಿತದ ಕಡೆಗೆ ಗಮನ ಕೊಡುವುದಕ್ಕೆ ವೇಳೆಯೆ ಇರಲಿಲ್ಲ. ೨,೦೦,೦೮,೦೦೦ ಇಜಿಪ್ಶಿಯನ್ ಜನತೆಗೆ ಒಡೆಯನಾದ ಫರೂಕನು, ಜನಹಿತದ ಕಡೆಗೆ ಲಕ್ಷ್ಯವನ್ನು ಪೂರಯಿಸಲಿಲ್ಲ. ಸರಕಾರದ ಬೊಕ್ಕಸದ ಹಣ ಹೊಳೆಯಾಗಿ ಹರಿಯ ತೊಡಗಿತ್ತು. ಜನಸೇವೆಗಾಗಿ ಅಲ್ಲ ಫರೂಕನಿಗಾಗಿ, ದುಂದುಗಾರಿಕೆ ಅಳತೆಮೀರತೊಡಗಿತ್ತು. ದುಂದುಗಾರಿಕೆಯಲ್ಲಿ ಫರೂಕನನ್ನು ಮೀರಿಸುವವರು ಯಾರೂ ಇರಲಿಲ್ಲವೆಂದೇ ಹೇಳಬಹುದು. ಅವನ ದುಂದುಗಾರಿಕೆಯನ್ನು ಅಳೆಯುವುದಕ್ಕೆ ಅವನ ಸ್ನಾನಗ್ರಹದ ಉದಾಹರಣೆಯೊಂದೇ ಸಾಕು.

ಬಂಗಾರದ ಕವಚವನ್ನು ತೊಡಿಸಿದ ನೂರಾರು ನಗ್ನ ಸ್ತ್ರೀ ಪ್ರತಿಮೆಗಳು. ಕಾಲಲ್ಲಿ ತೊಡುವುದಕ್ಕೆ ಬೇರೆ ಬೇರೆ ಬಗೆಯ ೧೨೦೦ ಜೋಡುಗಳು. ಫರೂಕನ ಪ್ರವಾಸವಾಹನ (Touring car) ಇಂದು ಪ್ರದರ್ಶನ ಗ್ರಹದಲ್ಲಿಡುವಂತಹ ವಸ್ತುವಾಗಿದೆ. ಕಾರಿನಲ್ಲಿ ಎಲ್ಲ ವ್ಯವಸ್ಥೆಯಿದೆ. ಸ್ನಾನಗ್ರಹ, ಸೋಫಾ. ಮೇಲಾಗಿ ಕಾರಿನ ಹೊರ-ಕವಚ ಬಂಗಾರದ್ದು. ಜೂಜಾಟವು ಫರೂಕನ ಪ್ರಿಯವಾದ ಆಟವಾಗಿತ್ತು. ಅಪ್ಸರಾಭೂಮಿ ಎನಿಸಿದ ಪ್ಯಾರಿಸ್ ನಗರದಲ್ಲಿ ಒಂದು ಸಲ ಫರೂಕನು, ಜೂಜಿನಲ್ಲಿ ೧೫೦,೨೦೦ ರೂಪಾಯಿಗಳನ್ನು ಕಳೆದುಕೊಂಡನಂತೆ. ದುಂದುಗಾರತನದ ದುರ್ಗುಣವೊಂದೇ ಫರೂಕನನ್ನು ವ್ಯಾಪಿಸಿರಲಿಲ್ಲ. ತಲೆತಿರುಕತನವೂ ಅವನಲ್ಲಿ ವ್ಯಾಪಿಸಿತ್ತು. ತನ್ನ ಗಡ್ಡವನ್ನು ಸರಿಯಾದ ರೀತಿಯಲ್ಲಿ ಕ್ಷೌರಮಾಡಿದ ನಾಪಿತನ ವಿಷಯದಲ್ಲಿ ಒಂದು ಸಲ ಸಂತೋಷಗೊಂಡು, ಫರೂಕ ದೊರೆಯು, ನಾಪಿತನಿಗೆ ತಿಂಗಳಿಗೆ ೩,೦೦೦ ರೂಪಾಯಿಗಳ ವೇತನವನ್ನು ಸ್ಥಿರಗೊಳಿಸಿದನಂತೆ. ಮುಂದೆ ಆರು ತಿಂಗಳುಗಳ ವರೆಗೆ ಆ ನಾಪಿತ ೩,೦೦೦ ರೂಪಾಯಿಗಳ ಮಾಸಿಕ ವೇತನವನ್ನು ಪಡೆದನಂತೆ. ಆದರೆ, ಒಂದು ಸಲ ಅವನ ಮೊಂಡುಗತ್ತಿ ಫರೂಕನ ಗಡ್ಡಕ್ಕೆ ಕೊಂಚ ತೊಂದರೆಯನ್ನು ಕೊಟ್ಟಿತಂತೆ ತೀರಿತು. ಫರೂಕ ಕುಪಿತನಾದ. ನಾಪಿತನನ್ನು ಕೆಲಸದಿಂದ ದೂರ ಮಾಡಿದನಂತೆ; ಆ ನಾಪಿತನ ಆಸ್ತಿಯನ್ನು ಜಪ್ತಮಾಡಿ, ಅದನ್ನು ಮತ್ತೊಬ್ಬ ನಾಪಿತನಿಗೆ ಕೊಡಿಸಿದನಂತೆ. ತಲೆ ತಿರುಕತನಕ್ಕೆ ಮತ್ತೆ ಬೇರೆ ಉದಾಹರಣೆಬೇಕೆ? ವಿಷಯ ಲಂಪಟತನವೂ ಕಡಿಮೆ ಇರಲಿಲ್ಲ: ಯಾವಾಗಲೂ ಅರ್ಧ ನಗ್ನ ಇಟಾಲಿಯನ್ ತರುಣಿಯರ ತಂಡದಲ್ಲಿ ಫರೂಕ ಲೋಲಾಡುತ್ತಿದ್ದ. ಅವನ ಮೊದಲ ಹೆಂಡತಿಯಾದ 'ನಾರ್ಝ್ ಝುಲ್‌ಫಿಕರ್' ಇದನ್ನು ವಿರೋಧಿಸಿದಳು. ತನ್ನ ಸುಖದ ದಾರಿಯಲ್ಲಿ ಬಂದ ನಾರ್ಝಳಿಗೆ ದಾಂಪತ್ಯ ವಿಚ್ಛೇದನಕೊಟ್ಟು ಬಿಟ್ಟ. ಮುಂದೆ ಫರೂಕ ಒಂದು ಸಲ ಪೇಟೆಯಲ್ಲಿ ಅಲೆಯುವಾಗ, ಒಬ್ಬಳು ಸುಂದರ ತರುಣಿ ದೃಷ್ಟಿಗೆ ಬಿದ್ದಳು. ಆ ಸುಂದರ ತರುಣಿಯ ಲಗ್ನ ನಿಶ್ಚಯವಾಗಿತ್ತು. ಒಬ್ಬ ಸುಶಿಕ್ಷಿತ ಇಜಿಪ್ಶಿಯನ್ನನಿಗೆ ಮಾಲೆ ಹಾಕುವವಳಿದ್ದಳು. ಫರೂಕನ ಕಾರಸ್ಥಾನದಿಂದ ಆ ತರುಣಿ ಫರೂಕನ ಹೆಂಡತಿಯಾಗಬೇಕಾಯಿತು. ಆ ತರುಣಿ ಮತ್ತಾರೂ ಅಲ್ಲ—'ನರಿಮನ್ ಸಾದಿಕ್'

ಫರೂಕನ ಉನ್ಮತ್ತತನ, ತಲೆತಿರುಕತನ, ದುಂದುಗಾರಿಕೆ ಇವೆಲ್ಲವೂ ಸರಕಾರದ ಶಿಸ್ತನ್ನು ಸಡಿಲಿಸಿದುವು. ಮೇಲಿನ ವರ್ಗದ ಅಧಿಕಾರಿಗಳಿಂದ ಕೆಳವರ್ಗದ ನೌಕರರವರೆಗೂ ಎಲ್ಲರೂ ಮೋಸಗಾರರಾದರು. ಲಂಚ ರುಸುವತ್ತುಗಳ ಭೀಕರ ಭೂತ ಇಜಿಪ್ತ ಸರಕಾರವನ್ನು ವ್ಯಾಪಿಸಿತು. ರಾಜಾ ಕಾಲಸ್ಯ ಕಾರಣಂ!

ಅಳತೆಗೆಟ್ಟ ಅವ್ಯವಸ್ಥೆ ಇಜಿಪ್ತ ನಾಗರಿಕರಲ್ಲಿ ಅಸಂತುಷ್ಟಿಯ ಹೊಗೆಯನ್ನು ಹರಡತೊಡಗಿತು. ಆದರೆ ಫರೂಕನ ಎದುರು ನಿಲ್ಲಲು ಯಾರೂ ಸಮರ್ಥರಾಗಿರಲಿಲ್ಲ.

೨೩-೭-೧೯೫೨ರ ಮಧ್ಯರಾತ್ರಿ ಕಳೆದು ಹೋಗಿತ್ತು. ಇಜಿಪ್ತ ದೇಶದ ರಾಜಧಾನಿ ಕಾಯರೋ ಶಾಂತವಾಗಿತ್ತು. ನಗರದ ಬೀದಿ ಬೀದಿಗಳು ನಿರ್ಜನವಾಗಿದ್ದುವು. ಕಾಯರೋದ ಗಡಿಯಾರಗಳು ರಾತ್ರಿಯ ಒಂದುವರೆಯ ಗಂಟೆಯನ್ನು ಬಾರಿಸಿದುವು. ಆ ಗಂಟೆಯ ಜತೆಯಲ್ಲಿ ರಾಯಫಲ್ ಗುಂಡುಗಳ ಕರ್ಣ ಕಠೋರ ಸಪ್ಪಳ, ನಿದ್ರೆಯಲ್ಲಿದ್ದ ಕಾಯರೋ ನಗರವನ್ನು ಎಚ್ಚರಿಸಿತು. ನಾಗರಿಕರು ಗಾಬರಿಗೊಂಡರು. ಅರ್ಧನಗ್ನ ಸ್ತ್ರೀಯರ ತಂಡದಲ್ಲಿದ್ದ ಫರೂಕ ಸಿಡಿದೆದ್ದು ಗರ್ಜಿಸಿದ:

—"ಏನು ಗದ್ದಲ? ಎಂಥದು?—ಎಲ್ಲಿಯದು?" ಎಲ್ಲರೂ ಕೇಳುವುದೂ ಅದೇ ಪ್ರಶ್ನೆ–ಅದೇ ಮಾತು. ಅದೇ ಉತ್ತರ. ಫರೂಕನ ಸಿಂಹಗರ್ಜನೆ ನಡೆದೇ ಇತ್ತು.

ಆದರೆ ಕೆಲಸ ಕೈಮೀರಿ ಹೋಗಿತ್ತು.

ಜನರಲ್ 'ಮುಹಮ್ಮದ್ ನಜೀಬನ' ನ ನೇತೃತ್ವದಲ್ಲಿ ಸಂಘಟಿತವಾದ "ಅಲ್ ದೋಬ್ಬಾತ್ ಎಲ್ ಅಹರರ್" ಸೈನಿಕರು ಇಜಿಪ್ತ ಸೈನ್ಯದ ಹಿರಿಯಧಿಕಾರಿಗಳನ್ನು ಸೆರೆಹಿಡಿದರು. ಸೈನಿಕ ಕೇಂದ್ರಗಳು ನಜೀಬನ ವಶವಾದುವು. ನಜೀಬನ ಸೈನಿಕರು ಅರಮನೆಯ ಸುತ್ತಲು ಕಾವಲಿಗೆ ನಿಂತರು. ಅರಮನೆಯಲ್ಲಿದ್ದ ಸಿಂಹ, ಕುರಿಮರಿಯಾಗಿ ರೂಪುಗೊಂಡಿತು. ಕೇವಲ ಕೆಲನಿಮಿಷದಲ್ಲಿ ಏನೋ ಘಟಿಸಿಹೋಯಿತು. ನಗರದ ಪ್ರಮುಖ ಬೀದಿಗಳಲ್ಲಿ ನಜೀಬನ ಸಶಸ್ತ್ರ ಸೈನಿಕರು ಗಸ್ತು ತಿರುಗ ತೊಡಗಿದರು. ಅಲ್ಲಲ್ಲಿ ಟ್ಯಾಂಕ್ ಸೈನಿಕ ವಾಹನಗಳು ಕಾಣತೊಡಗಿದ್ದುವು. ಎಲ್ಲದರ ಮೇಲೆ "ಅಲ್ ದೋಬ್ಬಾತ್ ಎಲ್ ಅಹರರ್" ಧ್ವಜ ಹಾರಾಡುತ್ತಿತ್ತು. ಪ್ರತಿಕಾರ ಶಕ್ತಿಯನ್ನು ತೋರಿಸುವ ಸಮರ್ಥವಾದ ಇಜಿಪ್ತ ನಾಗರಿಕರ ಅಸಂತುಷ್ಟತೆ ಕೇಂದ್ರೀಕೃತವಾಗಿ ನಜೀಬನಲ್ಲಿ ವ್ಯಕ್ತಗೊಂಡಿತ್ತು. ನಜೀಬ ಉದ್ವೇಗಗೊಂಡ ಜನತೆಯನ್ನು ಉದ್ದೇಶಿಸಿ ಮಾತನಾಡಿದ; "ದೇಶದ ಹಿತವೇ ತನ್ನ ಅಹರರ್ ಸಂಘದ ಗುರಿ" ಎಂದು ಸಾರಿದ.

ಇಜಿಪ್ತ ಜನತೆ ಹರ್ಷಗೊಂಡು ಜಯಜಯಕಾರವನ್ನು ಮಾಡಿತು

"ನಜೀಬರಿಗೆ ಜಯವಾಗಲಿ!"

ಜನಗರ್ಜನೆ ಸಾಗರವನ್ನು ಅಲುಗಾಡಿಸುತ್ತಿತ್ತು.

೨೩-೭-೧೯೫೨ ಇಜಿಪ್ತದ ಇತಿಹಾಸದಲ್ಲಿ ಚಿರಸ್ಮರಣೀಯವಾಗಿ ಉಳಿದ ದಿನವು ಅದರ ಜತೆಯಲ್ಲಿ ಅಜರಾಮರವಾಗಿ ಉಳಿಯುವ ವ್ಯಕ್ತಿ ಮುಹಮ್ಮದ ನಜೀಬ್—ಇಜಿಪ್ತದ ಕ್ರಾಂತಿಪುರುಷ.

೧೯೫೨ರ ಮೊದಲು ನಜೀಬನು ದೇಶದ ಎಲ್ಲ ರಾಜಕೀಯ ಪಕ್ಷಗಳಿಂದ ಅಲಿಪ್ತನಾಗಿದ್ದನು. ಅದು ಪ್ರತಿ ಸೈನಿಕರಲ್ಲಿರಬೇಕಾದ ದೊಡ್ಡ ಗುಣ. ರಾಜಕೀಯ ಪಕ್ಷಗಳಿಂದ ನಜೀಬ ಅಲಿಪ್ತನಾಗಿ ಉಳಿದರೂ ರಾಜಕಾರಣದಿಂದ ಅಲಿಪ್ತನಾಗಿ ಉಳಿದಿರಲಿಲ್ಲ. ಜಗತ್ತಿನ ಎಲ್ಲ ರಾಷ್ಟ್ರಗಳೂ ನಜೀಬನತ್ತ ನೋಡುವಂತಾದದ್ದು, ಇಜಿಪ್ತದ ಇತ್ತೀಚಿನ ಕ್ರಾಂತಿಯಿಂದ. ಇಜಿಪ್ತದ ನಾಗರಿಕರಿಗೆ ಮಾತ್ರ ನಜೀಬನು ಮೊದಲಿನಿಂದಲೂ ಚಿರಪರಿಚಿತ ವ್ಯಕ್ತಿಯಾಗಿದ್ದನು. ಜನಪ್ರಿಯತೆಯನ್ನು ಗಳಿಸಿಕೊಂಡ ವ್ಯಕ್ತಿಯಾಗಿದ್ದನು.

ನಜೀಬನ ತಂದೆ ಸುಡಾನದಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟನಾಗಿದ್ದನು. ತಂದೆಯ ಮನಸ್ಸಿನಲ್ಲಿ ತನ್ನ ಮಗನು ಕಲಿತು ಸುಪ್ರಸಿದ್ಧ ವಕೀಲನಾಗಬೇಕೆಂದಿತ್ತು. ಅದಕ್ಕಾಗಿ ತನ್ನ ಮಗನನ್ನು ಖಾರ್ಟೂಮ್‌ನಲ್ಲಿದ್ದ ಗಾರ್ಡನ್ ಕಾಲೇಜಿಗೆ ಸೇರಿಸಿದನು. ಕಾಲೇಜಿನವಾತಾವರಣ ನಜೀಬನಿಗೆ ಹಿಡಿಸಲಿಲ್ಲ. ಸೈನಿಕ ಸಮವಸ್ತ್ರದಲ್ಲಿದ್ದ ತನ್ನ ಅಜ್ಜನ ಭಾವಚಿತ್ರವನ್ನು ನೋಡಿದ ನಜೀಬ, ತಾನೂ ಸೈನಿಕನಾಗಬೇಕೆಂದು ಎಣಿಸಿದನು. ನಜೀಬನ ಅಜ್ಜನೂ ಸೈನಿಕನಾಗಿದ್ದ. ತನ್ನ ಅಜ್ಜನಂತೆ ತಾನೂ ಸೈನಿಕನಾಗಬೇಕೆಂಬ ಇಚ್ಛೆ ಪ್ರಬಲವಾದಾಗ, ನಜೀಬನು ಕಾಯರೋಕ್ಕೆ ಓಡಿ ಬಂದು, ರಾಯಲ್ ಅಕೆಡಮಿಯಲ್ಲಿ ಸೇರಿಸಿಕೊಳ್ಳಲು ಅರ್ಜಿಯನ್ನು ಬರೆದು ಹಾಕಿದನು. ಆಗಿನ ಕಾಯದೆಯ ಪ್ರಕಾರ ಸೈನ್ಯಖಾತೆಯನ್ನು ಸೇರುವುದಕ್ಕೆ ಕನಿಷ್ಠ ೭ ಇಂಚು ಎತ್ತರ ಳತೆ ಬೇಕಿತ್ತು. ಶಿಕ್ಷಣ ಮತ್ತು ಶಾರೀರಿಕ ಸೌಷ್ಠವ ಈ ಎರಡೂ ವಿಷಯಗಳಲ್ಲಿ ನಜೀಬನು ಅರ್ಹನೆನಿಸಿಕೊಂಡರೂ, ಎತ್ತರಳತೆಯಲ್ಲಿ ನಜೀಬನು ಅರ್ಹತೆಯನ್ನು ಪಡೆಯಲಿಲ್ಲ. ಆಗ ನಜೀಬನ ಎತ್ತರಳತೆ ಕನಿಷ್ಠ ೬ ಇಂಚು ಮಾತ್ರ ಇತ್ತು.

ಒಂದು ಇಂಚಿನ ಎತ್ತರಳತೆಯನ್ನು ಸಂಪಾದಿಸುವುದಕ್ಕಾಗಿ ನಜೀಬರಿಗೆ ಒಂದು ವರ್ಷಕಾಲ ಹಿಡಿಯಿತು. ಸೈನ್ಯಖಾತೆಗೆ ಬೇಕಾದ ಎತ್ತರಳತೆಯನ್ನು ಪಡೆದದ್ದೇ ತಡ ನಜೀಬನು ರಾಯಲ್ ಮಿಲಿಟರೀ ಅಕೆಡಮಿಯಲ್ಲಿ ಪ್ರವೇಶವನ್ನು ಪಡೆದುಕೊಂಡನು. ಸೈನಿಕ ವಿದ್ಯಾರ್ಥಿಯಾದ ನಜೀಬನು, ಸೈನಿಕ ತರಬೇತಿಯಲ್ಲಿ ಅಸಾಮಾನ್ಯನೆನಿಸಿಕೊಂಡನು. ೩ ವರುಷದ ಶಿಕ್ಷಣಕ್ರಮವನ್ನು ಕೇವಲ ೯ ತಿಂಗಳುಗಳಲ್ಲಿಯೇ ಮುಗಿಸಿದನು. ಸೈನಿಕ ಶಿಕ್ಷಣ ಕೇಂದ್ರದಿಂದ ಹೊರಬಿದ್ದ ನಜೀಬನು, ೧೯೨೧ರಲ್ಲಿ ಲೆಫ್ಟಿನೆಂಟ್ ಹುದ್ದೆಗೇರಿದನು.

ಆಗ ಇಜಿಪ್ತ ಸರಹದ್ದಿನಲ್ಲಿ ಸರಕುಗಳ ಕಳ್ಳ ಸಾಗಾಟವು ಬಳ್ಳೇ ರಭಸದಿಂದ ನಡೆದಿತ್ತು. ಈ ಕಳ್ಳ ಸಾಗಾಟಗಾರರ ಗುಂಪನ್ನು ಬಗ್ಗು ಬಡಿಯುವುದಕ್ಕಾಗಿ ನಜೀಬನಿಗೆ ಹೋಗಬೇಕಾಯಿತು. ಇದು ತರಬೇತಿಯನ್ನು ಹೊಂದಿದ ನಂತರ, ಬಡಿದಾಟದಲ್ಲಿ ಭಾಗವಹಿಸುವುದರ ಮೊದಲನೆಯ ಪ್ರಸಂಗವಾಗಿತ್ತು ನಜೀಬನಿಗೆ. ಅದರಲ್ಲಿ ಯಶಸ್ಸನ್ನು ಪಡೆದರೂ, ನಜೀಬನಿಗೆ ಮೇಲಿನ ಹುದ್ದೆಗಳು ಮಾತ್ರ ಶೀಘ್ರವಾಗಿ ಸಿಗಲಿಲ್ಲ. ಮೇಲಧಿಕಾರಿಗಳ ಕಾಲಕ್ಕೆ ಸರಿಯಾಗಿ ಕುಣಿಯುವ ಹುಚ್ಚುಹವ್ಯಾಸ ನಜೀಬನಲ್ಲಿ ಇರಲಿಲ್ಲ. ಬಿಡುವಿನ ಸಮಯದಲ್ಲಿ ನಜೀಬನು ಕಾನೂನು, ರಾಜಕಾರಣ ಆರ್ಥಿಕಸಮಸ್ಯೆ ಇವುಗಳನ್ನು

ಒಮ್ಮನೆಸ್ಸಿನಿಂದ ಅಭ್ಯಸಿಸ ತೊಡಗಿದನು. ಜರ್ಮನ್, ಫ್ರೆಂಚ್, ಇಟಾಲಿಯನ್ ಮತ್ತು ಇಂಗ್ಲಿಷ್ ಭಾಷೆಗಳನ್ನೂ ಅಭ್ಯಸಿಸಿದನು. ತನ್ನ ಮನೆಮಾತಿನಷ್ಟೇ ಸುಲಭವಾಗಿ ಈ ನಾಲ್ಕೂ ಭಾಷೆಗಳಲ್ಲಿ ನಜೀಬ ಮಾತನಾಡಬಲ್ಲ. ಇತ್ತಿತ್ತಲಾಗಿ ನಜೀಬನು ಹೀಬ್ರ್ಯೂ ಭಾಷೆಯನ್ನು ಕಲಿಯುತ್ತಿದ್ದಾನೆ.

ನಜೀಬನು ಸುಪ್ರಸಿದ್ಧ ಸೈನಿಕನಾಗಿ ಬೆಳಕಿಗೆ ಬಂದದ್ದು ಅರಬ್ ಇಸ್ರಾಯಲ್ ಹೋರಾಟದಲ್ಲಿ. ಈ ಯುದ್ಧದಲ್ಲಿ ಭಾಗವಹಿಸುವುದು ನಜೀಬನಿಗೆ ಬೇಕಾಗಿರಲಿಲ್ಲ. ಯಾವುದೇ ರಾಜಕಾರಣ ನಜೀಬನನ್ನು ಉದಾಸೀನನನ್ನಾಗಿ ಮಾಡಿರಲಿಲ್ಲ, ಆದರೆ, ಇಜಿಪ್ತ ಸೇನೆಯಲ್ಲಿ ಸಡಿಲಾದ ಶಿಸ್ತು, ಬೆಳೆದ ಅತೃಪ್ತಿ, ಅಸಂತೋಷ, ಅವ್ಯವಸ್ಥೆ ಇವುಗಳನ್ನು ಕಂಡು ನಜೀಬನು ಕೊರಗುತ್ತಲಿದ್ದ, ಅಪ್ಪಣೆಯನ್ನು ಶಿರಸಾ ಮನ್ನಿಸುವುದೇ ಸೈನಿಕನ ಪ್ರಥಮ ಕರ್ತವ್ಯ. ನಜೀಬನು ತನ್ನ ಕರ್ತವ್ಯಕ್ಕೆ ಎರಡು ಬಗೆಯಲಿಲ್ಲ. ಇತರ ಅರಬ ಸೈನ್ಯಾಧಿಕಾರಿಗಳಂತೆ ತಾನೂ ತನ್ನ ಸೈನಿಕರೊಂದಿಗೆ ಯುದ್ಧಾಗ್ನಿಯಲ್ಲಿ ಧುಮುಕಿದ. ಈ ಹೋರಾಟದಲ್ಲಿ ನಜೀಬ ಮೂರು ಸಲ ಗಾಯಗೊಂಡನು. ಒಂದು ಗಾಯವಂತೂ ಪ್ರಾಣಾಂತಿಕವಾಗಿತ್ತು. ಸತ್ತು ಸತ್ತು ಉಳಿದನು ನಜೀಬ. ಈ ಹೋರಾಟದಲ್ಲಿ ಹೆಚ್ಚಿನ ಶೌರ್ಯ ತೋರಿಸಿದ್ದಕ್ಕೆ ನಜೀಬನಿಗೆ ೧ನೆಯ ಫೌದ್ ಚಕ್ರದ ಗೌರವ ದೊರೆಯಿತು. ಮುಂದೆ ಕೆಲದಿನಗಳಲ್ಲಿಯೇ ಪಾಲಿಸ್ತಾನದಲ್ಲಿ ಹೋರಾಡುತ್ತಿದ್ದ ಇಜಿಪ್ಶಿಯನ್ ಸೈನ್ಯದ ಉಪ ಮುಖ್ಯ ಸೇನಾಪತಿಯಾಗಿ ನಿಯಮಿಸಲ್ಪಟ್ಟನು ಈ ಯುದ್ಧದ ಮುಕ್ತಾಯದ ನಂತರ ದೇಶದ ಹಿರಿಯ ವ್ಯಕ್ತಿಯಾಗಿ ಗಣಿಸಲ್ಪಟ್ಟನು.

ನಜೀಬ ದೇಶದ ಹಿತಚಿಂತಕನಾದನು. ಇಜಿಪ್ತ ಸರಕಾರದಲ್ಲಿ ಬೆಳೆದ ಅವ್ಯವಸ್ಥೆ, ಅಸಂತೋಷತನ, ಲಂಚಗುಳಿತನ ಇವುಗಳನ್ನೆಲ್ಲ ಎತ್ತಿ ತೋರಿಸಿ, ಬಹಿರಂಗವಾಗಿ ಟೀಕಿಸತೊಡಗಿದನು. ಈ ವಿಷಯದಲ್ಲಿ ನಜೀಬನು ಇಜಿಪ್ತದ ಅರಸು ಫರೂಕನನ್ನು ಟೀಕಿಸುವುದಕ್ಕೂ ಹಿಂದುಮುಂದು ನೋಡಲಿಲ್ಲ. ಅದರ ಪರಿಣಾಮವಾಗಿ ಫರೂಕನು ಕುಪಿತನಾಗಿ ನಜೀಬನನ್ನು ಮೇಲಿನ ಹುದ್ದೆಯಿಂದ ಕೆಳತರಗತಿಗೆ ತಂದು ನಿಲ್ಲಿಸಿದನು. ಆದರೆ ಸೈನಿಕರಿಂದಲೂ, ನಾಗರಿಕರಿಂದಲೂ ಈ ವಿಷಯದಲ್ಲಿ ಪ್ರತೀಕಾರಶಕ್ತಿ ಹೆಚ್ಚಾದುದರಿಂದ, ಫರೂಕ ತನ್ನ ತಲೆಯನ್ನು ತಗ್ಗಿಸಬೇಕಾಯಿತು. ಫರೂಕನು ಮತ್ತೆ ನಜೀಬನನ್ನು ಡಾಯರೆಕ್ಟರ್ ಜನರಲ್ ಆಫ್ ದಿ ರಾಯಲ್ ಫ್ರಂಟಿಯರ್ ಕೋರ್ ಜಾಗೆಗೆ ನೇಮಕ ಮಾಡಿದನು. ನಜೀಬ ಈ ಸ್ಥಳಕ್ಕೆ ಬಂದಾಗ, ಮೇಜರ ಜನರಲ್ ಹುದ್ದೆಗೇರಿದನು. ಮುಂದೆ ಸ್ವಲ್ಪ ಅವಧಿಯಲ್ಲಿಯೇ ಇನ್ಸ್‌ಪೆಕ್ಟರ ಜನರಲ್ ಆಫ್ ಇನ್‌ಫಂಟ್ರಿ ಪದವಿಗೇರಿದನು.

ದೇಶದಲ್ಲಿಯ ಅವ್ಯವಸ್ಥೆ-ಲಂಚಗುಳಿತನಗಳನ್ನು ಹೋಗಲಾಡಿಸುವದಕ್ಕೆ ಯಾವ ಪ್ರಯತ್ನಗಳೂ ನಡೆಯದ್ದನ್ನು ಕಂಡು ನಜೀಬ ಬೇಸರಗೊಂಡನು. ಈ ಬೇಸರದಲ್ಲಿಯೇ ಹೊಸ ವಿಚಾರ ಹೊಳೆಯಿತು. ನಜೀಬ ಗುಪ್ತಸಂಘವನ್ನು ರಚಿಸಿದನು. ಅದೇ "ಅಲ್ ದೋಬ್ಬಾತ್ ಎಲ್ ಅಹರರ್" (ಸ್ವತಂತ್ರ ಸೈನಿಕರು.) ಇತರ ತರುಣ ಸೈನಿಕರನ್ನು ಜೊತೆಗೂಡಿಸಿ ಸಂಘವನ್ನು ಪ್ರಬಲಗೊಳಿಸಿದನು. ಈ ಸಂಘದ ಸಹಾಯದಿಂದಲೇ ನಜೀಬನು ಇಜಿಪ್ತದ ಇತಿಹಾಸವನ್ನೂ ಬದಲು ಮಾಡಿದನು. ಕ್ರಾಂತಿಯ ನಂತರ, ನಜೀಬ "ಅಲ್ ದೋಬ್ಬಾತ್ ಎಲ್ ಅಹರರ್" ಇಜಿಪ್ತದ ಸಲುವಾಗಿ ಸುವ್ಯವಸ್ಥಿತ ಸರಕಾರ ರಚಿಸುವುದಾಗಿ ವಚನವಿತ್ತನು. ತಾನು ಯೋಚಿಸಿದ ಕಾರ್ಯಗಳನ್ನು ಕೃತಿಯಲ್ಲಿಳಿಸುವುದಕ್ಕೆ ಪ್ರಾರಂಭಿಸಿದನು. ದೇಶಾದ್ಯಂತ ಲೋಕಪ್ರಿಯತೆಯನ್ನು ಗಳಿಸಿದ "ಅಲಿ ಮೆಹರ್" ಅವರನ್ನು ಇಜಿಪ್ತದ ಮುಖ್ಯ ಮಂತ್ರಿಯನ್ನಾಗಿ ನಿಯಮಿಸಿದನು; ಆದರೆ ಅಲಿ ಮೆಹರರು ನಜೀಬ ಆಶಿಸಿದ ಬದಲಾವಣೆಗಳನ್ನು ಶೀಘ್ರವಾಗಿ ಕೃತಿಯಲ್ಲಿ ತರಲು ಅಸಮರ್ಥರಾದರು. ಸಪ್ಟಂಬರ್ ೭-೧೯೫೨ರ ದಿನ ನಜೀಬ, ಸ್ವಯಂ ಇಜಿಪ್ತದ ಮುಖ್ಯಮಂತ್ರಿಯೆಂದು ಘೋಷಿಸಿ, ಅಧಿಕಾರವನ್ನು ವಹಿಸಿದನು.

ಹೊಸದಾಗಿ ಬಂದ ಅಧಿಕಾರ, ಯಶಸ್ಸು ಇವು ನಜೀಬನಲ್ಲಿ ಯಾವ ಬದಲಾವಣೆಯನ್ನೂ ಮಾಡಲಿಲ್ಲ. ಮೊದಲಿನ ಸಾದಾತರದ ಜೀವನವನ್ನೇ ಈಗಲೂ ನಡೆಸುತ್ತಾನೆ. ತನ್ನ ಮೊದಲಿನ ಸಣ್ಣ ಮನೆಯಲ್ಲಿಯೇ ವಾಸಿಸುತ್ತಾನೆ. ನಜೀಬನ ಸಂಸಾರ ದೊಡ್ಡದಲ್ಲ, ಹೆಂಡತಿ, ೩ ಮಕ್ಕಳು ಇಷ್ಟೇ. ಈ ಮೊದಲು ಕಂತಿನಿಂದ ತೆಗೆದುಕೊಂಡ ಕಾರನ್ನೇ ಈಗಲೂ ಉಪಯೋಗಿಸುತ್ತಾನೆ. ನಜೀಬನು ನಿಜವಾದ ಮುಸಲ್ಮಾನನಾಗಿದ್ದಾನೆ. ದಿನವೂ ಪ್ರಾರ್ಥನೆಯನ್ನು ಸಲ್ಲಿಸುತ್ತಾನೆ. ಊಟದ ಮೊದಲು ಪವಿತ್ರ ಕುರಾನಿನಲ್ಲಿಯ ಸುರಾಗಳನ್ನು ಓದುತ್ತಾನೆ. ಎಂಟು ಗಂಟೆಗೆ ತಪ್ಪದೇ ಕಚೇರಿಗೆ ಹೋಗುತ್ತಾನೆ. ಅಧಿಕಾರ ವಹಿಸಿದ ಕೆಲವು ದಿನಗಳಲ್ಲಿಯೇ ಭೂಸುಧಾರಣೆ ಕಾಯಿದೆಯನ್ನು ಜಾರಿಯಲ್ಲಿ ತಂದನು. ಸುಯೇಜ್ ಕಾಲುವೆಯಿಂದ ಕಾಲುಕೀಳಲು ಬ್ರಿಟಿಶರನ್ನು ಕೇಳಿಕೊಂಡನು.

ಒಂದು ಮಾತು ಮಾತ್ರ ಮರೆಯದ ವಿಷಯ. ಜಗತ್ತಿನ ಎಲ್ಲ ರಾಷ್ಟ್ರಗಳೂ ಪ್ರಜಾಪ್ರಭುತ್ವದ ಕಡೆಗೆ ತಮ್ಮ ಒಲವನ್ನು ತೋರಿಸುತ್ತಿರುವಾಗ, ನಜೀಬನು ಇಜಿಪ್ತದ ಸರ್ವಾಧಿಕಾರಿಯಾಗಿದ್ದಾನೆ. ಇದೇ ಮರೆಯದ ಮಾತು. ದೇಶದಲ್ಲಿ ಚುನಾವಣೆಗಳು ಅನಿಯಮಿತ ಅವಧಿಯ ವರೆಗೆ ಸ್ಥಗಿತಗೊಳಿಸಲಾಗಿದೆ. ಇಜಿಪ್ತದಲ್ಲಿ ಮುದ್ರಣ ಸ್ವಾತಂತ್ರ್ಯದ ಮೇಲೆ ಗದೆ ಹೇರಲಾಗಿದೆ. ಬೇರೆ ರಾಜಕೀಯ ಪಕ್ಷಗಳು ತಲೆ ಎತ್ತದ ವ್ಯವಸ್ಥೆಯನ್ನೂ ಮಾಡಲಾಗಿದೆ. ಎತಪಕ್ಷಗಳು ತಲೆಹಿಡಿದು ನಿಲ್ಲುವಂತಿಲ್ಲ.

ಪ್ರಜಾಪ್ರಭುತ್ವದ ಯುಗದಲ್ಲಿ ಇದು ಸಹಿಸದ ಮಾತು. ಆದರೂ ನಜೀಬ ಬೀಳುತ್ತಿರುವ ಮನೆಯನ್ನು ಎತ್ತಿ ಹಿಡಿದ ಹಿರಿಯ ವ್ಯಕ್ತಿ ಎಂಬುದನ್ನು ಲೋಕವು ಒಪ್ಪಲೇ ಬೇಕಾಗಿದೆ.

ಅಂತರ

(ನವ್ಯಕವನ)

ಶ್ರೀ. ಶಾಂತಿನಾಥ ದೇಸಾಯಿ, ಎಂ. ಎ. ಮುಂಬಯಿ

ಸಾಕು ! ಸಾಕು ! ಸಾಕು !
ಈ ಒದ್ದಾಟ, ಗುದ್ದಾಟ, ಮುದ್ದಾಟ ಸಾಕು.
ಆಫ್ರಿಕೆಯ ಕಾನನವು ಕರೆಯುತಿದೆ—
ಸಹರಾದ ಮರುಭೂಮಿ, ಮೆಕ್ಸಿಕೋ ಪರ್ವತವು,
ಐಸ್‌ಲ್ಯಾಂಡ ನಡುಗಡ್ಡೆ ಕರೆಯುತಿವೆ....
ಕೈಯೊಂದು ಬಾಯೊಂದು ಕರೆಯುತಿದೆ....
ಬರಿದೆ, ಬರಿದೆ, ಬರಿದೆ ಹಗಲೆಲ್ಲ—
ಹಗಲಲ್ಲಿ ನೋವು; ಮನವೆಲ್ಲ ಬರಿದು.
ಮನಬಂದಂತೆ ನಾ ತಿರುಗಲೆಂತು ?
ಬಂದೆ.. ಕೊನೆಗೆಲ್ಲಿ ?....ಮನೆಗೆ ಬಂದೆ.
ಕೂತಿಹುದು ನನ್ನ ವಿಧಿ, ಕೈಹಿಡಿದ ಸಾಧ್ವಿ.
ಹೋದೆ, ಕೈಹಿಡಿದು ನೋಡಿ.
ಬೇಕು ! ಬೇಕು ! ಬೇಕು !

ಈ ಮಾಂಸ, ಈ ತೋಳು, ಈ ಗೋಳು, ಈ ಕಣ್ಣು
ಗೋವಿನಂತಿಹುದೆನ್ನ ಹೆಣ್ಣು....
'ಹೇ, ನಿನ್ನ ಪ್ರೇಮದಮೃತವ ಕುಡಿದು,
ನಾನಮರನಾದೆ, ನಾ ಧನ್ಯನಾದೆ. ನೀ ಗಂಗೆ....'
ಹಾಡಿದೆ, ಅರಣ್ಯದಲಿ ಹಾಡಿದೆ. ಮಂಗನೊಲು ಆಡಿದೆ....
ಕತ್ತಲಲಿ ಕೈಯು—
ಕೈಚಾಚಿ ಕರೆಯುತಿದೆ ಕತ್ತಲೆಯ ಕೈಯು.
ಸೆಳೆಯುತಿದೆ—ನಾನವಳ ಸೆಳೆದಂತೆ : 'ಬಾರಲ್ಲ ಹತ್ತಿರಕೆ'
ಸಾವು ! ಸಾವು ! ಸಾವು !
ಒಲ್ಲೆ ಸಾವಿನಾ ಬಾವಿಯಲಿ ಬೀಳಲೊಲ್ಲೆ ...'ನಲ್ಲೆ' !
'ಮುಗಿಲು ಚುಕ್ಕೆಗಳಾಚೆ, ದಿಕ್ಕುದಿಕ್ಕುಗಳಾಚೆ
ಏನಿಹುದೊ ಏನೊ,—ಕತ್ತಲೆಯ ಗರ್ಭದಲಿ !'
ಬರಿದು ! ಬರಿದು ! ಬರಿದು !

'ಎಲೆ ನಕ್ಷತ್ರ !' (ನನ್ನದು ಮೂಲಾ)
'ನಸು ಬೆಳಕಿನ ಚಂದಿಯೇ, ಅಡಗು, ಅಡಗು !
ಈ ಒಣಬೆಡಗಿನ ಹೊರಮುಸುಕು
ಯಾಕೆ ? ಯಾಕೆ ? ಯಾಕೆ ?'

'ಏನದು ? ಯಾಕೆ ?' ಕೇಳಿದಳು ನನ್ನಾಕೆ.
'ಏನಿಲ್ಲ; ಅಹಾ ! ನಿನ್ನ ಕಣ್ಣೆಂದರೆ ನಕ್ಷತ್ರ
ನಿನ್ನ ತುಟಿಯಲ್ಲಿದೆ ಸುರಲೋಕ
ಸುಮ್ಮನಿರು ಬಿಗಿದಪ್ಪು—ಬಿಗಿ....'
ಎಷ್ಟು ದಿನ ಈ ಸೋಗು, ಈ ಕೊರಗು ?
ಹೃದಯದಲಿ ಬೀಳುತಿವೆ ಬಿರುಕು—
ನೀರು ! ನೀರು ! ನೀರು !

'ಎಲೆ ನೀರೆ, ಏನೆಂದಿ ? ಹೊಸ ಸೀರೆ ಬೇಕೆ ?
ಮರುಳೇ, ಇಂದ್ರಧನುಷ್ಯದ ಸೀರೆಯ ಹೆಣೆವೆ.
ನೀನೇ ನನ್ನಯ ಮುಕ್ತಿಯು, ಹೆಣ್ಣೇ !'
ಅಗೊ, ದೂರದಲಿ ಕಾಣುತಿದೆ ನನ್ನ ಹೆಣ
ಕಣ್ಮುಚ್ಚಿ, ಬಾಯ್ತೆರೆದು ನಿಶ್ಚಿಂತೆಯಾಗಿ—
ಕೂಸಿನೊಲು ಮಲಗಿಹುದು, ಓಂ ಶಾಂತಿಃ !
ಶಾಂತಿಃ ಶಾಂತಿಃ ಶಾಂತಿಃ

ಅದು ನನ್ನ ಮುಕ್ತಿ, ಮುಕ್ತಾಯ, ನಿರ್ವಾಣ !
'ಚಿನ್ನೆ, ಬಾರೆನ್ನ ಜೇನೇ, ಹೆದರದಿರು—
ನಿನಗಿಹುದು ಸಾಕಷ್ಟು ಹೊನ್ನು....'
ನನಗಿಹುದು ಭೂಮಾತೆ-ಮಣ್ಣು—
ತಂಪು ! ತಂಪು ! ತಂಪು !
'ಸಖಿ ಸಂಬುದ ಸ್ವಚ್ಛನೊತ್ತು
ಗಾಳಿಯು ಆಡಲಿ ತಂಪು !'

ಸಾಲಗಾರ

(ಏಕದೃಶ್ಯ ನಾಟಕ)

ಶ್ರೀ. ರಾಮಚಂದ್ರ ಕೇದಬಾಳ, ಮುಂಬಯಿ.

ಪಾತ್ರಗಳು

ಶಾಮರಾಯ— ಸಾಲಗಾರ; **ರಾಧಾ**— ಅವನ ಹೆಂಡತಿ.

ಗುಂಡೆವ್ವ— ಅವನ ತಾಯಿ; **ಜಗಣ್ಣ**— ಅವನ ತಮ್ಮ.

ಉದ್ದಂಡರಾಯ-- ಆಪ್ತಸ್ನೇಹಿತ—ಸಾಹುಕಾರ.

ಸೂಚನೆ:— ಕೆಲವು **ಪಾತ್ರಗಳು** ನಿರೂಪಿತವಾದರೂ ರಂಗಭೂಮಿಯ ಮೇಲೆ ಬರುವುದಿಲ್ಲ ಉದಾ:— ಉಲ್ಕಾ— ಅವನ ಮಗಳು, ರಂಗ—ಅವನ ಮಗ, ಕಾಮಾಕ್ಷಿ— ಉದ್ದಂಡರಾಯರ ಮಗಳು. ಇತ್ಯಾದಿ

(ಶಾಮರಾಯರ ಮನೆಯ ಒಂದು ಕೋಣೆ. ಎದುರಿಗೆ ಒಂದು ದೊಡ್ಡ ಫೋಟೊ. ಕೆಳಗೆ ದಪ್ಪಕ್ಷರಗಳಿಂದ “ ದಿ ಆನಂದರಾವ್ ” ಎಂದು ಬರೆಯಲಾಗಿದೆ ಶಾಮರಾಯನು ಉದ್ವಿಗ್ನಮನಸ್ಕನಾಗಿ ಆರಾಮಾಸನದ ಮೇಲೆ ಕುಳಿತಿದ್ದಾನೆ, ಒಳಗಿನಿಂದ ಮಕ್ಕಳು ಸರಸ್ವತಿಯ ಪೂಜೆ ಮಾಡಿ ಹುರುಪಿನಿಂದ ಹಾಡುವ ಧ್ವನಿ. ಅದನ್ನು **ಸಹಿಸಲಾರದವನಂತೆ ಮುಖಮುದುರಿಸಿಕೊಂಡು** ...)

ಶಾಮರಾಯ— ರಾಧಾ, ರಾಧಾ,(ಹಾಡುನಿಲ್ಲುತ್ತದೆ. ಆದರೂ ರಾಧಾ ಬರುವುದಿಲ್ಲ) ಏ ರಾಧಾ ! (ಕೂಗುತ್ತಾನೆ)

ರಾಧಾ— (ಬರುತ್ತ) ಬಂದೆ, ಯಾಕ, ಇವತ್ತ ಮೈಯಾಗ ನೆಟ್ಟಗಿಲ್ಲೇನು ?

ಶಾಮರಾಯ— ನನಗೇನಾಗೇದ ? ನೆಟ್ಟಗೇ ಅದ. ಆದರ, ಈ ಹುಡುಗರು ಹಗಲುರಾತ್ರಿ ಹೀಂಗ ಹಾಡತಿದ್ದರ ನನಗ ತಲೀ ಏಳತ್ತದ.

ರಾಧಾ— ಮಕ್ಕಳು ಆಡೂದು ಹಾಡೂದು ಬಿಟ್ಟು ನಮಗ ಮಾಡೂ ಅಂದ್ರ ಸಾಧ್ಯದನs ? ಎರಡು ಮಕ್ಕಳ ತಾಯಿ ಆದರೂ ಯಜಮಾನತಿ—ಅಂತ ಹೇಳಿಕೊಳ್ಳಲಿಕ್ಕ ನಾಲಿಗಿ ಇಲ್ಲ ನನಗ.

ಶಾಮರಾಯ— ಏನ ಸುಳ್ಳು ಹೇಳತೀಯೇ ? ಜಪಾನದಾಗ ಸುಳ್ಳು ಹೇಳಾವ್ರು ಮೂರು ಥರಾ ಇದ್ದಾರಂತ; White liers, Black liers, Superlative liers. ಉಳಿದ ಯಾವ ಡಿಗ್ರೀ ಇರದಿದ್ದರೂ, ಇಂದಿನ ಸುಮುಹೂರ್ತದೊಳಗ, Superlative ದ್ದೇ ಡಿಗ್ರೀ ಕೊಡಬೇಕಂತೀನ್ನೋಡು ನಿನಗ.

ರಾಧಾ— ಆ ಡಿಗ್ರೀ ನಿಮಗೇ ಇರ್ಲಿ. ನಾಳೆ ಬಡತೀ ಆದ್ರೂ ಸಿಕ್ಕೀತು.

ಶಾಮ— ಈ ಡಿಗ್ರೀಗೆ ಬಡತೀ ಸಿಗೂದಿಲ್ಲಾ....ಬಡಿಗಿ ಬರತಾವ, ತಿಳೀತೇನು ?

ರಾಧಾ— ಬಡಿಗ ಬಂದ್ರೂ ಅಷ್ಟೇ; ಕುಂಬಾರ........

ಶಾಮ— ಹಾಂ, (ನೆನಪಾಗಿ) ಕುಂಬಾರ ಚೆನ್ನಪ್ಪಗ ಒಂದು ಗಡಿಗೀ ಹೇಳಿದ್ದೆ. ತಂದು ಕೊಟ್ಟನೇನು ?

ರಾಧಾ— ಕೊಡದೇನು ಮಾಡ್ಯಾನು ? ಅವಗೇನು ರೊಕ್ಕ ಹೆಚ್ಚಾಗ್ಯಾವs ನಮಗತೆ ? ಆ ಗಡಿಗೀ ತಂದು ನಿಮ್ಮ ಖೋಲ್ಯಾಗ ಇಡತೀನಿ. ಬಂದವರು ಹೋದಾವರಿಗೆ ರ........

ಶಾಮ— ಯಾಕ ? ಅವ್ವ ಬ್ಯಾಡ ಅಂದಳೇನು ?

ರಾಧಾ— ಅಂದ್ಹಾಂಗ ಮುಖ್ಯ ಮಾತೇ ಮರೆತಿದ್ದೆ. ಅತ್ತಾಗ್ಯ ಅವರಿಗೆ ೧೦೧ ಡಿಗ್ರೀ ಜ್ವರಾ !

ಶಾಮ— (ವಿಕಟವಾಗಿ) ಹಾ ! ಇದೊಂದು ಡಿಗ್ರೀ ಕಡಿಮಿ ಆಗಿತ್ತು ನೋಡು ನಮಗ. ಇದೊಂದು ಚೂರು ಲೆಕ್ಕಾ ಮುಗಿಸಿ ಹೋಗತೀನಿ. (ರಾಧೆ ಹೊರಡಲೆಳಸುವಷ್ಟರಲ್ಲಿ) ರಾಧಾ !

ರಾಧಾ—(ನಸುಗೋಪದಿಂದ) ಒಮ್ಮೆ ಹೇಳಿ ಬಿಡ್ರಿ; ನಾ ನಿಮ್ಮ ಮುಂದ ಕೂತು ಬಿಟ್ರ, ಮನೀ ಕೆಲಸ ಹ್ಯಾಂಗ ಸಾಗಬೇಕು ?

ಶಾಮ— ಆ ತುಂಟ ಹುಡುಗರು ಮತ್ತ ಹಾಡು ಸುರುವು ಮಾಡಿದ್ಹಾಂಗ ಕಾಣತ್ತದ. ನನಗ ಇಲ್ಲೆ ಬರೆಯೋದದ. ಮತ್ತೇ- ನಂದಿ....ಸಾಲದ ಲೆಕ್ಕ ! ಯಾರ್‍ಯಾರದು ಎಷ್ಟೆಷ್ಟು.... ಹಚ್ಚಿಡಲಿಕ್ಕೆ ಬ್ಯಾಡ ? ಹುಟ್ಟಿದ ಮನಿಶಾ ಸಾಯಲಿಕ್ಕೇಬೇಕು. ಒಂದು ವ್ಯಾಳ್ಯಾ ಇರೂದರೊಳಗ ಮುಟ್ಟಲಿಲ್ಲಾ ಅನ್ನು; ನಮ್ಮ ಮನೀ ಸಂಪ್ರದಾಯದ

ಪ್ರಕಾರ, ಮಗನ ಪಾಲಿಗೆ ಇಟ್ಟುಹೋಗಲಿಕ್ಕೆ ಬರತ್ತದ. ನಮ್ಮಪ್ಪನ ಸಾಲಾ ನಾ ತೀರಿಸಿದ್ದರ, ಮಗಾ ನನ್ನ ಸಾಲಾ ತೀರಿಸ್ತಾನು! ಆದರ, ಸಾಲಗಾರರು ನಾ ಇಲ್ಲಾ ಅಂತ ಸಿಕ್ಹಾಂಗ ಬೇಡಿ ರಂಗನ ಜೀವಾ ಹಿಂಡಬಾರದನೂ—ಅಂಬೂ ಹಿತಚಿಂತಕ ಬುದ್ಧಿಯಿಂದ, ಹೀಂಗ ಬರಿದಿಡೂದು. ತಿಳೀತ?

ರಾಧಾ— ಸಾಕು ಬಿಡ್ರಿ. ಹಬ್ಬದ ದಿನಾ, ಏನಾರೇ ಮಾತಾಡ ಬ್ಯಾಡ್ರಿ?

ಶಾಮು— ಯಾಕ? ಇದ್ದ ಮಾತು ಆಡಿದೇ ಅಂತ ವಾಗತ್ಯ ಅನಿಸ್ತೇನು? ನಮ್ಮ ಅಪ್ಪ ಹೀಂಗ ಬರದಿಟ್ಟು ಹೋಗಿದ್ರಾ ಅಂದರ, ಈ ಸಾವುಕಾರರ ಉಪದ್ರ್ಯಾ ತಾಳೂ' ಪ್ರಸಂಗ ನನಗೆಲ್ಲೆ ಬರತಿತ್ತು? ಈಗ ಖರೇ ಸಾಲ ಎಷ್ಟು ಅಂತ ಹೇಳ್ಳಿಕ್ಕೆ (ತಂದೆಯ ಫೋಟೋದ ಕಡೆಗೆ ಬೆರಳು ಮಾಡಿ) ಈ ಫೋಟೋಕ್ಕೆ ಪ್ರಾಣಪ್ರತಿಷ್ಠಾಪನೆ ಮಾಡಿದರೇ ಸೈ!

ರಾಧಾ— ನನಗ ತಿಳಿಯೂದಿಲ್ಲೇನು? ನಾ ಎಲ್ಲೆ ವಸ್ತ್ರಾ ಒಡವೀ ಬೇಡತೀನೋ ಅಂತ, ಈ ನಾಟಕಾ ಹೂಡೀರಿ!

ಶಾಮು— ನಿನ್ನ ಬಾಯ್ ಹರಕೀಲೆ ನಾಟಕಾನs ಖರೇ ಆಗಲೇ! ನಾನೂ ಉದ್ದಂಡರಾಯರ ಹಾಂಗ........

ರಾಧಾ— ಬ್ಯಾಡ್ರೀ ಬ್ಯಾಡ. (ಅಂಗಲಾಚಿ) ಅವರ್ಹಾಂಗ ಹೊಟ್ಟೀ ಬಿಟ್ಟರ, ನ್ಯಾಲ ಕೂತ ನೊಸಾ ಝಾಡಿಸಲಿಕ್ಕೆ ಘಳಿಗ್ಗೆ ಒಮ್ಮೆ ನಾ ಓಡ್ಯಾಡಬೇಕಾದೀತು!

ಶಾಮು— ಹಾಂಗ ಯಾವಾಗ ಆಗಿಲ್ಲಾ ಅಂದಮ್ಯಾಲೆ, ನಾ ಸಾಲಗಾರ ಖರೇ ಅನ್ನು.

ರಾಧಾ— ಇದ್ದೀರಿ ಆತs? ನಿಮ್ಮ ಸಾಲಾ ತೊಗೊಂಡು ನನಗೇನು ಮಾಡೂದದ? ನಿಮಗ ಸಾಲಗಾರ ಅಂದರ, ನನಗ ಸಾಲಗಾರ್ತಿ ಅಂತ ಬ್ಯಾರೆ ಯಾರೂ ಅನ್ನೂದಿಲ್ಲ? ಸಾಲಾ, ಗಂಡಸರ ಜನ್ಮಸಿದ್ಧ ಹಕ್ಕು!

ಶಾಮು— ವಾಹವ್ವಾ Splended idea. ಈಗ ಲೋಕಮಾನ್ಯ ಟಿಳಕರು ಜೀವಂತ ಇದ್ದರ, ನಿನ್ನ ಈ ವಿಚಾರಸರಣಿಗೆ ಧನ್ಯವಾದ ಕೊಟ್ಟು, ತಮ್ಮ ಮಾತು ತಪ್ಪು ಅಂತ ಒಪ್ಪಿ "ಅನ್ಯಥಾ ಶರಣಂ ನಾಸ್ತಿ" ಅಂತ ನಿನಗs ಶರಣು ಬರತಿದ್ರು....ಇದು ನಿಶ್ಚಿತಾ!

ರಾಧಾ— ನೀವು ಈಗೇನು ಅಂತೀರಿ, ನಿಶ್ಚಿತ ಹೇಳಬಿಡ್ರಿ! ಡಾಕ್ಟರನ್ನ ಕರಕೊಂಡು ಬರಾವ್ರೊ, ಅಥವಾ ಅತ್ತ್ಯಾ ಅವರ ಗೋಳಾಟಾ ಮರತು ಹೀಂಗs ಕೂಡಾವ್ರೊ?

ಶಾಮು— (ಎದ್ದು, ಲಗುಬಗೆಯಿಂದ) ಈಗ ಒಂದ್ ಘಳಿಗ್ಯಾಗs ಬಂದ್ ಬಿಡತೀನಿ. (ಯೋಚಿಸಿ) ಆದರ ಈ ಲೆಕ್ಕಾ....?

ರಾಧಾ— ಒಳ್ಳೇ ನಿಮ್ದೂ ಲೆಕ್ಕಾಚಾರ! ನಿಮಗ ಅಂಜಿ ಹುಡುಗರು ಹಾಡೂದನ್ನ ಸಹಿತ ಬಿಟ್ಟೊ!

ಶಾಮು— (ಸಂತಸದಿಂದ) ರಾಧಾ, ನೀ ಕಲೀಬಿಡ್ರೊ ನಿನ ಮಕ್ಕಳು ಕಲೀಲಿ ಅಂಬೂದು ನೋಡಿ ನನಗ, ಸಾಲಪರಿಹಾರ ಆದಷ್ಟು ಸಂತೋಷ ಆಗೇದ ನೋಡು!

ರಾಧಾ—(ಕೆರಳಿ)ಏನದು ಮಾತುಮಾತಿಗೆ ಸಾಲಾ....ಸಾಲಾ! ಇರಲಿಕ್ಕರೆ ಎಷ್ಟದ? ಪಟ್ಟಣಶೆಟ್ಟೀದು ಒಂದು ಸಾವಿರ; ಉದ್ದಂಡ ರಾಯರದೊಂದು ಸಾವಿರ; ಚಿಲ್ಲರು ಅಂಗಡೀ ಬಾಕೀ ಎಲ್ಲಾ ಕೂಡಿ ಅದೊಂದು ಸಾವಿರಕ್ಕ ಬಂದೀತು!

ಶಾಮು—ನಿಮ್ಮ ಅಪ್ಪನ್ಹಾಂಗ ನಾನೂ ಲಕ್ಷಾಪತಿ ಇದ್ದರ, ನೀ ಹೀಂಗ ಅನಬೇಕಿತ್ತು.

ರಾಧಾ— ಲಕ್ಷಾಪತಿ ಅಲ್ಲಿದ್ದೂ ಭಿಕ್ಷಾಪತಿ ಅಂತ ಅಲ್ಲs? (ಯೋಚಿಸಿ) ಆದರೂ ನಮ್ಮ ಅಪ್ಪ ಟೊಪ್ಪಿಗೀ ಬಿದ್ದಾ.

ಶಾಮು— (ಕೆರಳಿ) ಆs? ಏನಂದಿ?

ರಾಧಾ— (ಮಾತು ಹೊರಳಿಸಿ, ಕ್ರಾಪಿನಲ್ಲಿ ಕೈಯಾಡಿಸಿ ನಗುತ್ತ) ಅಲ್ಲಾ, ಹಬ್ಬದ ದಿನಾ; ಇವತ್ತಾದರೂ ಟೊಪಿಗೀ ಹಾಕ್ಕೋ ಬಾರದs?

ಶಾಮು— ನಿಮ್ಮ ಅಪ್ಪ ಒಳಿತಾಗೇ ಹಾಕೇ ಕಳಿಸ್ಯಾನ. ನ ಯಾಕ ಹಾಕ್ಕೋಬೇಕು?

ರಾಧಾ—(ಕ್ರಾಪ್ ಬಿಟ್ಟು ದೂರ ಸರಿದು, ತುಳಿಸಿಕೊಂಡ ಹಾವಿನಂತೆ) ನನಗ ನೀವು ಸಾವಿರ ಬೈಯಿರಿ; ಅಪ್ಪನ ಹೆಸರು ತಗದ ನೆಟ್ಟಗಲ್ಲದು! ಬೆಳದ್ನಿಂತ ಮಗಳು ಉಲ್ಕಾನ್ನ ಮರೀಬ್ಯಾಡ್ರಿ....ನಾ ನಿಮ್ದೂ ಪಾಳೀ ಅದ!

ಶಾಮು— ಹೌದು ನೋಡು. ಉಲ್ಕಾನ ಲಗ್ನದ್ದೂ ಒಂದ ವಿಚಾರ. ಹಂಗರ ನಾ ಈಗ ಸದ್ಯ ನಾಯಕ ಡಾಕ್ಟರ ಕಡೆಗೆ ಹೋ ಬರ್ತೀನಿ. ಅವರಿಗೆ ಅವ್ವನ ಪ್ರಕೃತಿ ನೋಡಲಿಕ್ಕೆ ಹೇಳಿದ್ಹಾಂಗೂ ಆತು; ಮತ್ತು ಅವರ ಮಗಾ ನವರತ್ನ ಬಂದಾನಂತ....ನಮ್ಮ ಉಲ್ಕಾನ್ನಷ್ಟು ನೋಡತಾರೇನು ಕೇಳಿದ್ಹಾಂಗೂ ಆತು. ಒಂದ ಕಲ್ಲು—ಎರಡು ಹಕ್ಕಿ. ಹ್ಯಾಂಗದ ನನ್ನ ಉಪಾಯ?

ರಾಧಾ— ಆ ಕಲ್ಲಿಗೆ ಹಕ್ಕಿ ಸಿಗದೇ ಬಿಲ್ಲು ಬಂದರ....?

ಶಾಮು— ಅದಕ್ಯಾಕ ಅಂಜತಿ? ನಾಳೆ ಬೀಗರ ಆಗಾವ್ರು ಅವರ ಗೂಡಾ ಹಣದ ವ್ಯವಹಾರ ಉದ್ದರೀ ಇರಬಾರದು; ಇಷ್ಟೂ ತಿಳಿಯೂದಿಲ್ಲೇನು ನನಗ? ಅವರ ಬಿಲ್ಲು ತೀರಿಸಿ ಬಿಡತೀನಿ. ಈ ಎಷ್ಟು ಆಗಿರಬೇಕು?

ರಾಧಾ— ಕನಿಷ್ಟ ಮುನ್ನೂರಂತೂ ಆಗೇದ. ಲೆಕ್ಕಾ ಯಾರ ಇಟ್ಟಾರ?

ಶಾಮು— ಮುನ್ನೂರು ರೂಪಾಯಿ?.... ನೂರು ರೂಪಾಯಿ ತನಕಾ ಹ್ಯಾಂಗರೇ ತಂದೇನು? ಆದರ ಮುನ್ನೂರು ಎಲ್ಲಿಂದ ತರಲಿ?

ರಾಧಾ—ಹ್ಯಾಂಗರೆ ಮಾಡ್ರಿ. ತರಲಿಕ್ಕೇ ಬೇಕು. ನಮ್ಮ ಮನಿ ಮರ್ಯಾದಿ....

ಶಾಮು— ನನಗೆಲ್ಲಾ ಗೊತ್ತದ. ಆದರ, ನನಗ ಏನು ಮಾಡಂತೀದಿ? ವಾರದ ಹುಡುಗರನ್ನ ಬಿಡಿಸೂಹಾಂಗಿಲ್ಲ; ದಿನಪತ್ರಿಕೆ, ವಾರ ಪತ್ರಿಕೆ ಇವನ್ನೂ ತಪ್ಪಿಸೂ ಹಾಂಗಿಲ್ಲ!

ರಾಧಾ— ನಾಳೆ ಲಗ್ನಪತ್ರಿಕಾನೂ ಒಂದು ಬರೂದದ—ಆದರ ಜೋಡಿ!

ಶಾಮು— ಎಲ್ಲಾ ಆಗಿ ಕಡೀಕ ಒಂದು ಬರೂದು ಅದ—ಮೃತ್ಯುಪತ್ರ!

ರಾಧಾ— (ಕುರ್ಚಿಯ ಮೇಲೆ ಕುಳಿತು, ಮೋರಿಗೆ ಮುಸುಕು ಹಾಕಿ ದುಃಖಿಸುತ್ತ) ಮುಖ್ಯ ನಂದೇ ತಪ್ಪು.

ಶಾಮು— (ಎದ್ದು ಬಂದು ಮೈದಡವಿ ಸಂತಯಿಸುತ್ತ) ಏಳು ರಾಧಾ, ಹಬ್ಬದ ದಿನಾ ಕಣ್ಣೀರು ತಗೀತಾರೇನು ಯಾರಾರೆ? ಹುಚ್ಚೀ, ಸಿಟ್ಟಿನ ಭರದಾಗ ಏನಾರೆ ಒಂದ ಅಂದರ.... ಅದನ್ನ ಕೈ ಹಿಡದಾಕಿ ನೀ ಸಹಿಸದೇ.... (ನೆನಪಾಗಿ) ಹಾಂ ಆ ಹುಡುಗುರಿಗೆ ಇನ್ನೊಂದು ಹಾಡಂತ ಹೇಳು. ಕೇಳಿರ ಹೋಗತೀನಿ. (ಇನ್ನೂ ಆಕೆ ಏಳದಿರಲು) ಅಥವಾ, ನಾನೇ ಅನ್ನಲೇನು ಆ ಬೇಂದ್ರೆಯವರ ಹಾಡು— (ದನಿ ತೆಗೆದು)

—ನನ್ನ ಕೈಯ ಹಿಡಿದಾಕೇ ಅಳು ನುಂಗೀ ನಗು ಒಮ್ಮೆ
ನಾನೂನೂ ನಕ್ಕೇನು;
ಇಲದಿರಕ ನಿನ್ನ ನಗೆಯು; ಹುಚ್ಚು ಹಳ್ಳದ ಕಳ್ಳ
ಹುದುಲಾಗ ಸಿಕ್ಕೇನು. ||

(ನಗುತ್ತ ರಾಧೆ ಕಣ್ಣೊರಸಿಕೊಳ್ಳುವಳು.

ರಾಧಾ— (ಅಚ್ಚರಿಯಿಂದ) ನೀವು ಡಾಕ್ಟರನ್ನ ಕರಕೊಂಡ ಬರಲಿಕ್ಕೆ ಹೋಗಾವ್ರೋ ಇಲ್ಲೊ?

ಶಾಮು— ಹೊರಟೆ ಹೊರಟೆ! ನನ್ನ ಪಾದರಕ್ಷೆಯ ಪುಣ್ಯದಾಣೆಗೂ ಹೊರಟೆ. ನಗು, ನೀನ್ನೊಮ್ಮೆ ನಗು. (ನಗುವಳು. ಶಾಮರಾಯನು ತೆರಳುವನು)

(ರಾಧೆಯು ಶಾಮರಾಯನ ಹೀನಿಯಲ್ಲಿ ಆರಾಮಾಸನದ ಮೇಲೆ ಬಂದು ಕೂಡುವಳು. ಅವನ ಮಾತು ಸ್ಮರಿಸುತ್ತ)

ರಾಧಾ— ರಾಧೆ, ನೀ ಕಲೀದಿದ್ರೂ ನಿನ್ನ ಮಕ್ಕಳು ಕಲೀಲಿ ಅಂಬೂದನ್ನ ನೋಡಿ........ (ಅಷ್ಟರಲ್ಲಿ ಒಳಗೆ ಸರಸ್ವತಿಯ ಸ್ತೋತ್ರ ಮತ್ತೆ ಪ್ರಾರಂಭವಾಗುವುದು. ಕೇಳುತ್ತಲೆ ನಿದ್ದೆ ಹೋಗುವಳು)

ಗುಂಡವ್ವ—(ಪ್ರವೇಶಿಸಿ) ಶಾಮಣ್ಣಾ, ಶಾಮಣ್ಣಾ....(ಇಲ್ಲದ್ದು ನೋಡಿ) ರಾಧಾ, ಏ ರಾಧಾ....

ರಾಧಾ— (ಎದ್ದು) ಅತ್ತ್ಯಾ ಅವರ, ಮೈಯಾಗ ಜ್ವರಾ.... ಹೊರಗ ಯಾಕ ಬಂದ್ರೀ? ಇದೇ ಈಗ ಅವ್ರು ಡಾಕ್ಟರನ್ನ ಕರೀಲಿಕ್ಕೆ ಹೋಗ್ಯಾರ.

ಗುಂಡವ್ವ— ಚಾದರು ಹೊತುಕೊಂಡೀನಲ್ಲ. ನಪರತ್ನ ಊರಿಂದ ಬಂದಾನಂತ........

ರಾಧಾ—ಇವರು, ಆದೂ ಆತು ಮತ್ತೇ ಡಾಕ್ಟರ್ನ ಕರದ್ಹಾಂಗೂ ಆತು ಅಂತ ಹೋಗ್ಯಾರ. ನಿಮಗ ರಗ್ಗು ಕೊಡಲೇನು ಹೊತ್ತುಗೋಳಿಕ್ಕೆ?

ಗುಂಡವ್ವ— ಬ್ಯಾಡ ತಾಯೀ, ಮೈಯಾಗ ಝಳಾ ತುಂಬಿದ್ಹಾಂಗ ಆಗೇದ ಹೋದಲೇ!

ರಾಧಾ— ಮೈಯಾಗ ತ್ರಾಣ ಇಲ್ಲಾ, ಇಲ್ಲೆ ಕುಚರಿ ಕೂಡ್ರಿ. (ಎಂದು ಕೈ ಹಿಡಿದು ಆರಾಮಾಸನದ ಮೇಲೆ ಕೂಡ್ರಿಸುವಳು. ತಾನು ಕೆಳಗೆ ಹತ್ತಿರ ಕೂಡುತ್ತ) ಇದೇ ಈಗ ಒಂದು ಸಣ್ಣ ಜಂಪು ಹತ್ತಿತ್ತು. ಅಷ್ಟ್ಯಾಗ ಎಂಥಾ ದೊಡ್ಡ ಕನಸು ಬಿದ್ದಿತ್ರೀ ಅತ್ತ್ಯಾ........!

ಗುಂಡವ್ವ— ಕನಸೆಲ್ಲೀದು? ಹಳವಂಡ! ಮಗಳ ಲಗ್ನದ ಕಾಲಾಗ ಮಾತಾಡಿ ಮುಲಗೀದಿ! ಅದೇ........

ರಾಧಾ— ಭವಿಷ್ಯ ಹೇಳಿದ್ಹಾಂಗ ಆತಲ್ರೀ?

ಗುಂಡವ್ವ— ನನಗ ಗೊತ್ತಿಲ್ಲೇನು? ನಿಮ್ಮ ಅವ್ವ ಸತ್ತಮ್ಯಾಲ, ತಮ್ಮ ತಂದು ಒಪ್ಪಿಸಿದಾಗ, ನೀ ಇನ್ನೂ ಮೂರು ವರ್ಷದಾಕಿ.

ರಾಧಾ— ಅದಕ್ಕೇ ನನಗ ಅತ್ತೀಮನಿ ತವರಮನಿ ಫರಕು ಅನಿಸೂದೇ ಇಲ್ಲ ನೋಡ್ರಿ! ಆದರ, ಇವರು ಮಾತ್ರ ತಿರುತಿರುಗಿ ಅಂತಾರ ಅತ್ತ್ಯಾ ಅವರ, "ನಿಮ್ಮಪ್ಪಾ ಸಾವಕಾರಾ, ನಾ ಸಾಲಗಾರಾ" ಅಂತ.

ಗುಂಡವ್ವ— ನಮ್ಮ ಮಾವಂದಿರು ಎಷ್ಟು ಹೊಲಾ, ಮನಿ, ಭಂಗಾರಾ ಮಾಡಿದ್ರೂ ಅಂದಿ! ಎಲ್ಲಾ ಇವರ ದುರ್ವ್ಯಸನದ ಕಾಲಾಗ ಹಾಳಾಗಿ ಹೋತು. ಅದೇ ಚಿಂತಿಲೇ ಕೊರಗಿ ಕೊರಗಿ ನಮ್ಮೆಲ್ಲಾರ ಕೈಬಿಟ್ರು—ನಡುನೀರಾಗ. ಹೊರಗಿನಾವ್ರು ಯಾರು ಬಂದ್ರೂ (ಫೋಟೋ ತೋರಿಸಿ) ಆ ಫೋಟೋನೋಡಿ ಕೇಳತಾರ—ಎಂಥಾ ದೊಡ್ಡ ಆಳು, ಗಟ್ಟಿ ಮನಿಶಾರು; ಸಾವು ಹ್ಯಾಂಗ ಬಂತೋ ಅಂತ.

ರಾಧಾ— ನಾ ನೋಡಿಲ್ಲೇನು ಅತ್ತ್ಯಾ ಅವರ? ಅವರ ನೇಮಾ-ನಿತ್ಯಾ ಎಷ್ಟು? ಪೂಜಾ-ಪುನಸ್ಕಾರ ಅಂದ್ರ ಇವರಿಗೆ ತಲಿಶೂಲಿ!

ಗುಂಡವ್ವ—ಶಾಮಣ್ಣಗ ದೇವರು ಬ್ಯಾಡಂತೀಯೇನು ರಾಧಾ? ಅಂವಗ ವ್ಯಾಳ್ಯಾ ಎಲ್ಲೆ ಸಿಗತದ? ಪ್ರಪಂಚ ಕೊಳ್ಳಿಗೆ ಬಿದ್ದಾಗಿನ ತುಟ್ಟಿ ಆನಿಯಂಥಾ ಹುಡುಗ ಆಡಿನ್ಹಾಂಗ ಆಗ್ಯಾನ.

ರಾಧಾ— (ತನ್ನ ಒಡವೆ ತೋರಿಸಿ) ಹಂಗರ ಇವನ್ನ ಮಾರಿ, ಒಮ್ಮೆ ಪರ್ಲು ಹರಕೊಂಡು ಬಿಡಬೇಕು. ನನಗ ಈ ವಸ್ತ್ರಾ-ಒಡವಿ ಇವರಕಿಂತಾ ಹೆಚ್ಚೇನು?

ಗುಂಡವ್ವ— (ಆನಂದದಿಂದ ಲಟಿಗೆ ಮುರಿಯುತ್ತ) ಏನು ಭಂಗಾರದಂಥಾಕಿದ್ದೀಯೆ ತಾಯಿ!

ರಾಧಾ— ಅವರಿಗೆ ಹೇಳತೀರಾ ಹಂಗರ?

ಗುಂಡವ್ವ— ಬ್ಯಾಡ ತಾಯೀ, ಅವನ ಮನಸಿದ್ದರ, ಅವನ್ನ ಮಾರಿ ಹಳೇ ಮಾತಾಗತ್ತಿತ್ತು. ಒಮ್ಮೆ ಹೋದವಮ್ಯಾಲೆ, ಮತ್ತ

ಮಾಡಸೂದಾಗೂದಿಲ್ಲ. ದುಡಿದು ಎಲ್ಲಾ ತೀರಿಸತೀನಿ ಅಂತಾನ. ಅಷ್ಟು ಪ್ರಸಂಗನ್ನೇ ಬಂದು ಮಾಡಿದರೂ ಇದರಿಂದ ಎಷ್ಟು ಬರತsದ? ಭಾಳ ಅದ್ರ ಒಂದು ಸಾವಿರ!

ರಾಧಾ—ಸಾವಿರವಂತೂ ಕೊಟ್ಟು ಬಿಡಬೇಕು. ಉಳಿದಿದ್ದು....

ಗುಂಡಣ್ಣ— ಅವನ ಸಾಲಾ ಮೂರು ಸಾವಿರ ಮಿಾರೇದವ್ವಾ. ಇವರು ಅದೇನೋ ಕುದುರೆಯ ಜೂಜೂ ಅಂತ ಆಡಿ, ಅಷ್ಟು ಮಾಡಿಟ್ಟು ಹೋಗ್ಯಾರ. ಹುಡುಗ ಒದ್ದ್ಯಾಡತsದ. ಮ್ಯಾಲೆ ತುಂಗೀದೊಂದು ಲಗ್ನದ ಖರ್ಚು ಹೋದ ವರ್ಷ ಬಿತ್ತು. ಜಗಣ್ಣನ ಸಾಲೀ ಖರ್ಚು ಹಿಡಿಯಬೇಕು.

ಜಗಣ್ಣ— (ಪ್ರವೇಶಿಸಿ ಪುಸ್ತಕ ಸಾವರಿಸುತ್ತ) ಈ ಹೊರಗಿನ ಖೋಲ್ಯಾಗ ಯಾಕs ಅವ್ವಾ? ನನಗ ಅಭ್ಯಾಸ ಮಾಡೂದದ. ಹೆಂಗಸರು ಇದ್ದ ಮನೀ ಅಂದ್ರ, ಲಕ್ಷ್ಮೀಮನಿ ಅಂತ ಹೇಳತಾರ. ನಮ್ಮ ಮನೀ ನೋಡ್ರಿ, ತಿಪ್ಪಿ ಆಗೇದ ತಿಪ್ಪಿ!

ಗುಂಡಣ್ಣ— ಹೀಂಗ ಯಾಕ ಮಾತಾಡತೀಯೋ ಜಗೂ? ಮುಂಜಾನೆ ರಾಧಾ ಉಡುಗಿ ಸ್ವಚ್ಛಮಾಡಿಲ್ಲೇನು? ನೀನೇ ಎಲ್ಲಾ ಕೆತ್ತಿ ಹಾಕ್ಕೋತs ಕೂಡತೀಯಪ್ಪಾ! ಅದಕ್ಕ ಯಾರೇನು ಮಾಡೂದು?

ಜಗಣ್ಣ— ನಾ ಏನಾರೆ ಮಾಡೋಲ್ಯಾಕ. ನನ್ನ ಗೊಡವಿ ಏನು ನಿಮಗ? ಹೆಂಗಸರ ಕೆಲಸ ಏನು ಇಲ್ಲೆ....ಈ ಖೋಲ್ಯಾಗ? ಒಳಗ ಹೋಗ್ರಿ!

ಗುಂಡಣ್ಣ— ನಡೀಯವ್ವಾ, ಹಿತ್ತಲದಾಗs ಕೂಡೋಣು! ಇವರ ಕಾಟಾ ಯಾರು ತಾಳಬೇಕು!

ರಾಧಾ— ಮೈಯಾಗ ಜ್ವರಾ ಅವ ಅತ್ಯಾ! ಒಳಗs ನಡೀರಿ; ಹಿತ್ತಲದಾಗ ಥಂಡೀ! (ಇಬ್ಬರೂ ಹೋಗುವರು)

ಜಗಣ್ಣ— (ಕಿಸೆಯೊಳಗಿನ ಫೋಟೋ ತೆಗೆದು, ಹಾಡುತ್ತ) "ಕ್ಯೋಂ ನ ಕರೂ ಪ್ಯಾರ ತುಝೆ, ಕ್ಯೋಂ ನ ಕರೂ ಪ್ಯಾರ" (ಅದನ್ನೇ ಮತ್ತೆ ಮತ್ತೆ ಫೋಟೋ ನೋಡುತ್ತ ಗುಣುಗುಣಿಸುತ್ತಾನೆ) I am the monarech of all I survey. ಇನ್ನ ನಾ ನನ್ನ ಮನಸ್ಸಿಗೆ ಬಂದ್ಹಾಂಗ ಮಾಡಬಹುದು. (ಫೋಟೋ ನೋಡುತ್ತ ಮತ್ತೆ ಹಾಡುವನು) ಕಾಮಾಕ್ಷಿ, ನೀ ಅಂದರ, ಪ್ರತ್ಯಕ್ಷ ರತಿ ಇದ್ಹಾಂಗ. (ದಿಟ್ಟಿಸಿ ನೋಡಿ, ಕಲ್ಪ-ವಿಕಲ್ಪ ಮಾಡುತ್ತ) ಯಾಕs? ಹೀಂಗ್ಯಾಕ ನೋಡತೀ ಅದು? ನನ್ನ ಮ್ಯಾಲ ಸಿಟ್ಟs? ನಾ ಏನು ಅಂಥಾ ತಪ್ಪು ಮಾಡಿದ್ದು? ನಿಂದೇ ತಪ್ಪು ನೂರು ಅವ ಕೇಳು! ಈ ಪುಸ್ತಕ ಚೆಲ್ಲಾಪಿಲ್ಲಿ ಆಗಿ ಬಿದ್ದಾವ. ಕನ್ನಡಿ ಡಬ್ಬು ಆಗೇದ. ಮನೀ ಉಳ್ಳೇದ; ಟಾಕು ಮುರೀಬೇಕಂತsದ. ಫೋಟೋದ ಮ್ಯಾಲ ಒಂದು ಬಟ್ಟುದರಾ ಹೊಲಸು ಕೂತsದ. ಇವನ್ನೆಲ್ಲಾ ಗಂಡಸಾದ ನಾನು ಮಾಡಬೇಕs?

(ಉದ್ದಂಡರಾಯರ ಪ್ರವೇಶ)

ಉ. ರಾ— ರಾಯರಿಲ್ಲೇನು ಜಗಣ್ಣಾ?

ಜ.— (ಗಾಬರಿಯಾಗಿ, ಫೋಟೋ ಪುಸ್ತಕದಲ್ಲಿ ಅಡಗಿಸಿಟ್ಟು) ಬ....ಬ....ಬರ್ರಿ. ಶಾಮಣ್ಣ ಡಾಕ್ಟರ ಕಡೆಗೆ ಹೋಗ್ಯಾನ; ಕೂಡ್ರಿ!

ಉ.— (ಕೂಡುತ್ತ) ಮತ್ತೇನಪ್ಪಾ, ನಿನ್ನ ಅಭ್ಯಾಸ ಹ್ಯಾಂಗ ನಡದsದ? ಈ ಸಾರೇದ ಕನ್ನಡ ಸಿಲೆಕ್ಷನ್ ಭಾಳ ಕಠಿಣ ಅದ ಅಂತ....?

ಜ— (ಅದೇ ಪುಸ್ತಕದಲ್ಲಿ ಫೋಟೋ ಇಟ್ಟದ್ದು ನೆನೆದು, ಇನ್ನೂ ಗಾಬರಿಯಾಗಿ) ಹಾಂಗೇನಿಲ್ರಿ! ಅಭ್ಯಾಸ ಬ್ಯಾಡಾದಾವ್ರ ನೆವಾತಗದದ್ದು!

ಉ— ನಿಮ್ಮ ಶಾಮಣ್ಣ ಸಹಿತ ಅಂದಾ....ಅದಕ್ಕಂತೀನಿ. ಎಲ್ಲೆ ನೋಡೂಣರೆ ತಾ ಆ ಪುಸ್ತಕಾ!

ಜ— (ದೂರದಿಂದಲೇ ತೋರಿಸಿ) ಇದೇ ಆ ಪುಸ್ತಕ. ಶಾಮಣ್ಣ ಒಳಗ ಏನೋ ಮಹತ್ತ್ವದ ಕಾಗದಾ ಇಟ್ಟಾನ; ಹಿಡೀಬ್ಯಾಡ ಅಂತ ಹೇಳ್ಯಾನ. ನಾಳೆ ತೋರಿಸತೀನಿ

ಉ— (ಉಪಾಯ ಹೂಡಿ) ಇರಲಿಬಿಡು. ನನಗ ನೀರಡಿಕಿ ಆಗೇದ. ಸ್ವಲ್ಪ ನೀರು ತರತೀಯಾ?

ಜ— ಓ! ಅದಕ್ಕೇನು? (ನೀರು ತರಲು ಹೋಗುವನು.) (ಉದ್ದಂಡರಾಯರು ಎದ್ದು ಆ ಪುಸ್ತಕ ತೆಗೆದುನೋಡಿ, ಇದ್ದ ಹಾಗೆಯೆ ಇಟ್ಟು, ಮರಳಿ ತಮ್ಮ ಆಸನದ ಮೇಲೆ ಕೂಡುವರು.)

ಉ— ಈ ಹುಡುಗರ ನೆಲೀನs ತಿಳಿಯೂದಿಲ್ಲಾ. ನಮ ಕಾಮಾಕ್ಷೀ ಫೋಟೋ ಈ ಹುಡುಗನ ಹತೀಲೆ ಹ್ಯಾಂಗ ಬಂತು ಸಾಲಗಾರರ ಶಿಕಾರೀ ಆಡಿ ಶ್ರೀಮಂತ ಆದ ನಾನು, ಈ ಭಿಕಾರಿ ನನ್ನ ಮಗಳನ್ನ ಕೊಡಲ್ಯಾ? (ಯೋಚಿಸಿ) ಒಂದು ರೀತಿಯಿಂ ಇದೂ ನೆಟ್ಟಗs. ನಾನಾಗೇ ಕೇಳಿದರ ಸಾವಿರೆರಡು ಸಾವಿರ ಅದರೂ ವರದಕ್ಷಿಣೀ ತೆತ್ತಬೇಕಾಗಿತ್ತು. ತಾವೇ ಕೂಡಿ ಬಿಟ್ಟರೆ, ಬರೇ ಅಕ್ಕಿ ಕಾಳ ಮ್ಯಾಲೇ ಬಗೀಹರಿದು ಹೋಗತsದ!

ಜ— (ಪ್ರವೇಶಿಸಿ) ತಡಾ ಆತು ರಾಯರ (ನೀರು ಕೊಡುವನು)

ಉ— ಛೇ, ಹಾಂಗೇನಿಲ್ಲ. You are quite in time

ಜ— ಒಳಗ ಅತಿಗೀ ಅವ್ವಾ ಹರಟೀ ಹಚ್ಯಾರ. ಮನ್ಯಾಗ ಇದ್ದಾವ್ರ, ಇಪ್ಪತ್ನಾಕು ತಾಸೂ ಏನ ಮಾತಾಡೂದಿರತsದೋ! ತಂಬಿಗೀಮ್ಯಾಲೆ ಜೋರ್ ಹನಿ ಕೂತಿದ್ದು; ಸ್ವಲ್ಪ ಬೂದಿ ಹಚ್ಚಿ ತೊಳಕೊಂಡ ತಂದೆ. ಅದಕ್ಕ........

ಉ— ಏನೂ ತಪ್ಪಿಲ್ಲ. ನಾನೂ ಫೋಟೋ ನೋಡಿಕೋತ ಕೂತಿದ್ದೆ.

ಜ— ಆs! ಫೋಟೋ (ಗಾಬರಿಯಿಂದ ಪುಸ್ತಕದ ಕಡೆ ಧಾವಿಸುವನು).

ಉ— ಹೌದು. (ಮಾತು ಹೊರಳಿಸಿ) ಎದುರಿಗೆ ಹಾಕಿ ಬಿಟ್ಟಿದ್ದೀರಲ್ಲ—"ದಿ. ಆನಂದರಾವ್" ಅಂತ ಕೆಳಗ ಒಳ್ಳೇ ಛಂದಾಗಿ ಬರದೀದ್ಯೊ!

ಜ— (ಗೆಲುವಿನ ಧ್ವನಿಯಲ್ಲಿ) ಅಪ್ಪನ ಫೋಟೋ ಅಂದ್ರ್ಯಾ?

ಉ— ಹೌದಪ್ಪಾ! ನಾವೂ ಅವರೂ ಜೀವದ ಗೆಳೆಯರು. ಅವರಂಥಾ ದೊಡ್ಡ ಮನಿಶಾರು ಯಾರೂ ಇರಲಿಕ್ಕಿಲ್ಲ.

ಜ— ಹೌದ್ರಿ! ಅಪ್ಪ ಇದ್ದರ ಮನೀ ಅನ್ನೂ ಹಾಂಗ ಕಾಣಸ್ತಿತ್ತು. ಈಗೇನು....ಹೇಳೂ ಅರಸ ಇಲ್ಲ; ಕೇಳೂ ಪ್ರಧಾನಿ ಇಲ್ಲ.

ಉ—ಯಾಕ? ಶಾಮಣ್ಣ ಮನೀ ಕಡೆ ಲಕ್ಷ್ಯ ಕೊಡೂದಿಲ್ಲೇನು?

ಜ— ಅಂವ ಮನ್ಯಾಗ ಇದ್ದಾಗಲ್ಲಾ ಲಕ್ಷ್ಯ ಕೊಡೂದು? ಅವ್ವಗ ಔಷಧ ತರುವವ ನಾನೇ; ಸಾಮಾನು ತರೂದೂ ನಾನೇ; ಅಭ್ಯಾಸ ಹ್ಯಾಂಗ ಆಗಬೇಕು ನೋಡ್ರಿ. ನನ್ನ ಖರ್ಚಿಗೆ ಅಂತ ಒಂದು ದುಡ್ಡಿಲ್ಲ. ಮೈಮ್ಯಾಲೆ ಛಲೋ ಅರಿವಿ ಇಲ್ಲ ಇದೇ ಪ್ಯಾಂಟು, ಇದೇ ಅಂಗಿ, ಮತ್ತ ಒಂದು ಉಲನ್ ಕೋಟು ಅದs ಅತು. ಅದನ್ನೂ ಅಪ್ಪ ಹೊಲಿಸಿದ್ದೂ-ಅಂತ ಜ್ವಾಕಿಲೆ ಒಳಗ ಇಟ್ಟೇನಿ.

ಉ— ಕಾಲ ಕಠಿಣದ ಏನಪಾ. ಸಂಸಾರ ಸಾಗೂದು ಕಠಿಣ ಅದ ಅನ್ನು. ಆದರೂ ಶಾಮಣ್ಣ ನಿನಗ ಸ್ವಲ್ಪಾದರೂ ಅನುಕೂಲ ಮಾಡಿಕೊಡಬೇಕು. (ಗೌಪ್ಯವಾಗಿ ಹೇಳುವಂತೆ) ಒಳಗಿಂದೊಳಗ ರೊಕ್ಕಾ ಮಾಡ್ಯಾನೇಳು ನಿಮ್ಮಣ್ಣ!

ಜ— ಅದೇನೋ, ದೇವರಿಗೇ ಗೊತ್ತು!

ಉ— ನನಗ ಗೊತ್ತದ ಕೇಳು! ಹೊಲದ ಉತ್ಪನ್ನ ಒಂದು ಸಾವಿರ ಬಂದ್ಯದ. ಅದರಾಗ ಕನಿಷ್ಟ ಒಂದು ನೂರು ರೂಪಾಯರೇ ನಿನ್ನ ಅರಿವಿಗೆಂತ ಖರ್ಚು ಮಾಡಬೇಕು. ಮುಂದಿನ ವರ್ಷ ಕಾಲೇಜಿನ ಕಟ್ಟೀ ಏನಾಂವಾ....!

ಜ— ಹೊರಗಿನಾವ್ರು, ನಿಮಗ ತಿಳೀತದ್ರಿಪಾ ಈ ಮಾತು! ಅಣ್ಣಗ ತಿಳೀಬಾರದಂದ್ರ!

ಉ— ಖರೇ ಅಂದ್ರ, ನಾ ಹೊರಗಿನಾವ ಅಲ್ಲ ಜಗಣ್ಣಾ! ನಮಗ ನಿಮಗ ಬಾದರಾಯಣ ಕಾಲದ ಸಂಬಂಧ ಅದ. ಆದರ ನಿಮ್ಮಣ್ಣ ಶಾಲಗಾರ. ಅವನ ಸಂಬಂಧಿಕ ಅಂತ ಹೇಳಿಕೊಳ್ಳಿಕೆ ನನಗ ಒಲ್ಲೆ ಅನಿಸತ್ಯದ. ನಿಮ್ಮ ತಂದಿಗೆ ಸಾವಿರಗಟ್ಲೆ ಕೊಟ್ಟಾಂವ, ನಿನಗ ನೂರು ಕೊಡ್ಲಾರೆನೇನು ನಾ? ಈಗಿನ ಕಾಲಕ್ಕ ಮನೀ ಖರ್ಚ ಬೆಳದ್ಯದ. ಸಧ್ಯ ಹತ್ತೀಲೆ ೨೫ ರೂ. ಅವ; ತೊಗೋ ಏನಪಾ. ನಿಮ್ಮಣ್ಣಾದರ, ಒಂದು ದುಡ್ಡೂ ಕೊಡುವ ಮನಸು ಆಗೂದಿಲ್ಲ.

ಜ— ಛೇ, ಬ್ಯಾಡ್ರಿ! ಯಾತಕ್ಕ ಸುಮ್ಮನs?

ಉ— (ಬಲುಮೆಯಿಂದ) ತೊಗೊಳ್ಳೋ, ಇರ್ಲಿ! ಮನ್ಯಾಗ ನಮ್ಮ ಕಾಮಾಕ್ಷಿಗೆ ಕೊಡೂದಿಲ್ಲs? ಹಾಂಗs ನಿನಗೂ ಕೊಡತೀನಿ ಇಬ್ಬರೂ ಕಲಿಯುವವರು ಅಲ್ಲ? (ಹೋಗುವನು)

ಜ— ಅಂತೂ ನಂದೇ ನಶಿಬ ಛಲೋ ಅದ! ಬ್ಯಾಡ ಬ್ಯಾಡ ಅಂದ್ರೂ ಲಕ್ಷ್ಮೀ ನನಗ ಒಲೀತಾಳ. ಅಣ್ಣ ಅದರ ಸಲುವಾಗಿ ತಪಶ್ಚರ್ಯ ಮಾಡಿದರೂ ಅಂವಗ ದರ್ಶನ ಇಲ್ಲ. ಇನ್ನ ವರದಕ್ಷಿಣೀ ಮಾತ್ರ ತನ್ನ ಸಾಲದಾಗ ಮುರೀದ್ಹಾಂಗ ಯೋಜನಾ ಹಾಕಬೇಕು. ಉದ್ದಂಡರಾಯರು ಕಾಮಾಕ್ಷಿನ್ನ ಕೊಡಲಿಕ್ಕೆ ಒಪ್ಪ್ಯಾರು ಅಂತ ಅನಸ್ಲಿಕ್ಕೆ ಹತ್ತೇದ. (ಪುಸ್ತಕದಲ್ಲಿ ಬಚ್ಚಿಟ್ಟ ಫೋಟೋ ತೆಗೆದು) "ಕ್ಯೊಂ ನ ಕರೂ ಪ್ಯಾರ ತುಝೇ....'' (ಅಷ್ಟರಲ್ಲಿ ಶಾಮರಾಯನು ಉ. ರಾ. ರೊಡನೆ ಬರುವನು. ಜಗಣ್ಣ ಗಾಬರಿಯಾಗಿ ಹಾಡು ಅಷ್ಟಕ್ಕೆಯೆ ನಿಲ್ಲಿಸಿ ಒಳಗೆ ಹೊರಡುವನು.)

ಶಾಮ— ಜಗೂ, ನಿಲ್ಲು! (ಕಿಸೆಯಲ್ಲಿಯ ಬಾಟ್ಲಿ ಚೀಟಿ ತೆಗೆದು) ಈ ಔಷಧ ತೆಗೆದುಕೊ. ಮೂರು ಹೊತ್ತು ಆಗಬೇಕು. ಈ ಚೀಟಿ ಮೂರು ತಾಸಿಗೊಂದರಂತೆ ಕೊಡಬೇಕು. ಬಿಸೀನೀರು ಕುಡೀಲಿಕ್ಕೆ ಹೇಳು.

ಜ— ಹೂಂ (ಹೊರಡುವನು.)

ಶಾಮ— (ಟೊಪ್ಪಿಗೆ ತೆಗೆದು, ಕೋಟು ತೆಗೆಯುತ್ತ) ಹಾ! ಜಗೂ, ರಾಧಾಗ ಕಾಫೀ ಮಾಡ್ಲಿಕ್ಕೆ ಹೇಳು. ಉದ್ದಂಡರಾಯರು ಬಂದಾರ.

ಜ— ಆಗಲಿ (ಹೋಗುವನು).

ಶಾಮ— (ತಿರುಗಿ) ನೀವು ನಿಂತೇ ಬಿಟ್ಟೀರಲ್ರೀ? ಕೂಡ್ರಿಪಾ, ಕೂಡ್ರಿ. ಮನೀ ನಿಮ್ಮದೇ ಅದ. ಈಗಿನ ಹುಡುಗರೊಳಗ ಅಭ್ಯಾಸದೊಳಗ ಶ್ರದ್ಧಾ ಇಲ್ಲ ನೋಡ್ರಿ. ಬರೇ ಸಿನೇಮಾದ ಹಾಡು ಅಂದು-ಕೋತs ತಿರಗ್ಯಾಡತಾನ ನಮ್ಮ ಜಗೂ.

ಉ— ಅಭ್ಯಾಸ ಮಾಡೆರೆ ಏನ ಮಾಡೂದದ ಬಿಡ್ರಿ. ನಿಮ್ಮ ತಂದೆ (ಫೋಟೋ ತೋರಿಸಿ) ಆನಂದರಾಯರು ಎಂತಹ ಆಳು? ಈ ಸಾಹಿತ್ಯದ ಹುಚ್ಚಿನಿಂದ ಸೊರಗಿ ಕಡ್ಡಿ ಆಗಿ, ತಮ್ಮ ಆಯುಷ್ಯನೇ ಛಿಂದಿಸಿಕೊಂಡರು.

ಶಾಮ— ಇಲಿ ಆಗಿ ನೂರು ವರ್ಷ ಬಾಳೂದಕ್ಕಿಂತ, ಹುಲೀ ಆಗಿ ಒಂದೇ ದಿನಾ ಇರಬೇಕ್ರೀ! ಇದಕ್ಕ ನೀವೇನು ಅಂತೀರಿ?

ಉ— ಮಾತಾಡ್ಲಿಕ್ಕೇನು ಬಂದ್ಯದಪ್ಪಾ? ಹುಲಿಯ ಪ್ರಾಣಕ್ಕ ಬ್ಯಾಟಿಗಾರರು ಬಹಳ.

ಶಾಮ— ಮತ್ತ ಇಲಿಗೇನು ಬಲೀ ಇರೂದಿಲ್ಲೇನ್ರಿ?

ಉ— (ಉಪಾಯಗಾಣದೆ) ಆದೇನೋ ಅಪ್ಪಾ! (ಬದಲಿಸಿ) ನಾ ಬಂದ ಕೆಲಸದ್ದಷ್ಟು ವಿಚಾರಮಾಡೂಣ?

ಶಾಮ— ಆಗಲಿ. ಯಾವ ವಿಚಾರ?

ಉ— ಮೊನ್ನೆ ಇನ್ಶ್ಯೂರನ್ಸ್ ಎಜಂಟ್ ಬಂದು ಐದು ಸಾವಿರ ವಿಮಾದ್ದೊಂದು ನನ್ನ ಪಾಲಿಗೆ ಹಾಕಿ ಹೋಗ್ಯಾನ. ಈ ಸಾರೆ ೧೧೫ ರೂಪಾಯಿ ಪ್ರೀಮಿಯಮ್ ಕೊಡಬೇಕಾಗೇದ. ಅಷ್ಟು ನೀ ಕೊಡೂದಾದ್ರ........

ಶಾಮ— ಈಗೆಲ್ಲೀದು ಕೊಡಲಿ ಉದ್ದಂಡರಾಯರs? ನಿಮಗ ನನ್ನ ಪರಿಸ್ಥಿತಿ ಗೊತ್ತಿಲ್ಲೇನು?

ಉ— ಉಲ್ಯಾನ ಲಗ್ನಾ ಮಾಡಾಂವ ಇದ್ದೀಯಂತ ಕೇಳಿದೆ!

ಶಾಮು— ಹೌದ್ರೀ. ವರದಕ್ಷಿಣೀ ಎತ್ಲಾಗ ಕೊಡಲಿ? ಲಗ್ನದ ಖರ್ಚು ಹ್ಯಾಂಗ ತೂಗಸಲಿ—ಅಂತ ಚಿಂತೀನs ಬಿದ್ದೇದ ನನಗ.

ಉ— ಲಗ್ನಕ್ಕಂತ ಸಾಲಾ ತಗಿಸೇ ತಗಸತೀದಿ. ಅದರೊಳಗೇ ನನಗೂ ಕೊಟ್ಟುಬಿಡು. ನಾ ವ್ಯಾಳ್ಯಾಕ್ಕ ಆದಾಂವ; ತಿರುಗಿ ನನ್ನ ವ್ಯಾಳ್ಯಾಕ್ಕ ಆಗದಿದ್ದರ........

ಶಾಮು— ಅಂಥಾ ಕೃತಘ್ನ ಅಲ್ಲ ನಾ ಉದ್ದಂಡರಾಯರ! ಇದ್ದ ಮಾತು ಹೇಳೂದಂದ್ರ, ನನ್ನ ಸಾಲ ನಿಮ್ಮ ಒಬ್ಬರಲ್ಲೇ ಇಲ್ಲಾ. ಎಲ್ಲಾರೂ ವ್ಯಾಳ್ಯಾಕ್ಕ ಆದಾವ್ರೇ. ತಿರುಗಿ ಅವರ ವ್ಯಾಳ್ಯಾಕ್ಕ ನಾ ಆಗಬೇಕು ಅಂತ ನನಗೂ ಆಶಾ ಅದ. ಆದರ ಏನುಮಾಡಲಿ?

ಉ— ಹಂಗರ ನನಗೇನು ಮಾಡಂದೀ?

ಶಾಮು— ಇಷ್ಟೇ ಕೊಟ್ಟೇರಿ; ಇನ್ನೊಂದಿಷ್ಟು ನೀವೇ ಕೊಟ್ಟು ಪುಣ್ಯಾ ಕಟಗೊಳ್ರಿ ಅಂತೀನಿ!

ಉ— (ಸಿಟ್ಟಿನಿಂದ) ಅಂದ್ರ! ನಾ ಸಾಲಾ ವಸೂಲ್ ಮಾಡಲಿಕ್ಕೆ ಬಂದೀನೋ, ಏನು ಸಾಲದ ಮ್ಯಾಲ ಇನ್ನಷ್ಟುದಕ್ಷಿಣೀ ಕೊಟ್ಟು ಕೃಷ್ಣಾರ್ಪಣ ಅನ್ಲಿಕ್ಕೆ ಬಂದೀನೋ!

ಶಾಮು— ನೀವು ನಮ್ಮ ತೀರ್ಥರೂಪರ ಸ್ನೇಹಿತರೂ ಅಂತ ಸಲ್ಗಿಯಿಂದ ಕೇಳತೀನಿ.

ಉ— ಅವರ್ಹಾಂಗ ನೀ ಇದ್ದರ, ನಿನ್ನ ಪಾದಾ ತೊಳೆದು, ಆ ನೀರು ತೀರ್ಥ ಅಂತ ತೊಗೋತಿದ್ದೆ, ಆದರ ನೀ ಎಂಥಾ ಪಕ್ಕಾ ಮನಿಶಾ ಇದ್ದೀ ನನಗ ಗೊತ್ತಿಲ್ಲೇನು?

ಶಾಮು—ತೊಗೊಂಡ ಸಾಲದಕ್ಕಿಂತ ಹೆಚ್ಚಿನ ಹಣಕ್ಕ ಕಾಗದಾ ಬರೆದುಕೊಡಲಿಕ್ಕೆ ಕೇಳಿದಿರಿ; ಸ್ಪಷ್ಟ ಇಲ್ಲಾ ಅಂದೆ. ಇದೇ ನಿಮ್ಮ ಮಾತಿನ ಮ್ಯಾಲಿಂದ, ನೀವು ತೀರ್ಥರೂಪರಿಗೆ ಎಲ್ಲೆ ನೂರು ಕೊಟ್ಟು ಸಾವಿರಕ್ಕ ಕಾಗದಾ ಬರಿಸಿಕೊಂಡೀರೋ ಅಂತ ಸಂಶಯ ಅದ ನನಗ.

ಉ— ಆ ಮಾತಿಗೆ ಸಾಕ್ಷಿಗಂತ ಅವರ್ನ ಕರೀಲಿಕ್ಕೆ ಬ್ಯಾರೇ ಬರೂದಿಲ್ಲ? ಏನೇ ಇರ್ಲಿ; ಈಗ ನನ್ನ ರೊಕ್ಕಾ ಕೊಟ್ಟು ಮಾತಾಡು!

ಶಾಮು— ರೊಕ್ಕಾನೇ ಕೊಟ್ಟ ಮ್ಯಾಲೆ ಮಾತಾಡೂದು ಯಾಕ ಮತ್ತ? ರೊಕ್ಕ ಇಲ್ಲಂತs ಇಷ್ಟು ಹೇಳಿಕೊಳ್ಳೂದು.

ಉ— ಇಲ್ಲ ಅಂದ್ರs? ತೊಗೊಳ್ಳೂ ಮುಂದ ಹ್ಯಾಂಗಿತ್ತು?

ಶಾಮು— (ಜಗಣ್ಣ ತಂದ ಕಾಫಿ ಮುಂದೆ ಚಾಚಿ) ಈ ಕಾಫಿ ತೊಗೊಳ್ರಿ. ಆ ಮ್ಯಾಲೆ ಮಾತಾಡೋಣ!

ಉ— (ದೂರಿಸಿ) ಉಹೂಂ, ನನಗೇನೂ ಬ್ಯಾಡ. ನಾನು ಈ ಮನ್ಯಾಗ ನಿಂತು ನೀರು ಕುಡಿಯೂದಿಲ್ಲಾ! ವಚನಭ್ರಷ್ಟನ ಮನೀ ಅಂತ ಡಂಗುರಾ ಹೊಡೀತೀನಿ ಡಂಗುರಾ!

ಶಾಮು— ಡಂಗುರಾ ಅರೆ ಹೊಡೀರಿ. ಬೇಕಾದರ ನಿಮ್ಮ ಡೊಳ್ಳಿನಂಥಾ ಹೊಟ್ಟೀ ಅರೆ ಹೊಡಕೊಳ್ರಿ!

ಉ— ಹೂಂ! ನೀನೇ ತಿನಿಸಿ ಬೆಳಸಿದ್ಹಾಂಗ ಕಾಣಸ್ತದ ನೋಡು ಈ ಹೊಟ್ಟೀನs?

ಶಾಮು— ನಾ ಅಲ್ಲಿದ್ರೂ ನನ್ನಂಥಾ ನಾಕು ಮಂದೀ ತುತ್ತಿಗೀ ಕೊಯ್ದು ಪುಣ್ಯಾ ಆದೆಕ್ಕದ.

ಶಾ— ಏ ಜಗಣ್ಣಾ. ನೋಡಿದ್ಯಾ ನಿಮ್ಮಣ್ಣನ ನಡತೀ? ನೀನೂ ಅಣ್ಣನ ಹಾಂಗ ಉಂಡಮನೀ ಗಳಾ ಎಣಿಸಾವ ಆಗಬ್ಯಾಡಪ್ಪಾ! ನಡೀ. ನೀ ಇಲ್ಲೆ ಇರೂದೇ ನೆಟ್ಟಗಲ್ಲ!

ಶಾಮು— ಒಳಗ ಹೋಗು ಜಗನ್ನಾಥ!

ಜ— ಈಗ ಹದಿನೆಂಟು ವರ್ಷಕ್ಕ ಬಿದ್ದೀನಿ ಶಾಮಣ್ಣಾ ನನ್ನ ಮನಸಿಗೆ ಬಂದ್ಹಾಂಗ ನಾ ಮಾಡಾಂವ.

ಶಾಮು— (ಆಶ್ಚರ್ಯದಿಂದ) ಈ plot ಯಾವಾಗೋ ರೂಪುಗೊಂಡ್ಹಾಂಗ ಕಾಣಸ್ತದ.

ಜ— ನಾವೇನು Gunpowder plot ಮಾಡಿಲ್ಲ. ಉದ್ದಂಡರಾಯರು ನನ್ನ ಹಿತಕ್ಕೇ ಹೇಳತಾರ; ಇಷ್ಟೂ ತಿಳಿಯೂದಿಲ್ಲೇನು ನನಗ?

ಉ— ಖರೇ ಮಾತಾಡಿದಿ ಜಗಣ್ಣಾ. ದುಡ್ಡಿಲ್ಲದ ಜಗತ್ತಿನಾಗ ಸುಖಾ ಇಲ್ಲ.

ಜ— ಬೆಳಿಯೂ ಸಸಿಗೆ ನೀರು ಸಿಗದಿದ್ದರ ಬೆಳೀಬೇಕ್ಹ್ಯಾಂಗ್ರಿ?

ಶಾ— ಅದು ನಿನ್ನ ಭ್ರಮಾ ಅದ. ಇದು ನಿನ್ನ ಮನೆ. ಮಳೆಯ ನೀರು ಬಿಟ್ಟು ಮಂಜಿನ ನೀರಿಗೆ ಕೈ ಒಡ್ಡತೀ ಅಂಬೂದು, ಇಂದಿಲ್ಲ ನಾಳೆ ನಿನಗ ತಿಳಿದೀತು. ನಿನ್ನ ಜೀವನಶೀಲಾ ಒಮ್ಮೆ ವಿಕೃತ ಹೊಂದಿದರ, ಸರಿಪಡಿಸುವುದಂತೂ ದೂರನೇ ಅದ; ಅಪ್ಪಾವಕ್ರ ಮೂರ್ತೀ ನೋಡಲಿಕ್ಕೂ ಅಸಹ್ಯ ಆದೀತು.

ಜ— ಮಾತೇ ಒಂದು ದೊಡ್ಡ ಸಂಪತ್ತು ನಿನಗ. ಉದ್ದಂಡರಾಯರಲ್ಲೆ ಹೋದರ ನನ್ನ ಖರ್ಚಿಗೆ ಬೇಕಾದಷ್ಟು ಸಿಕ್ಕೀತು.

ಉ— ಹೌದು ನಡೀ ಜಗಣ್ಣಾ. ಇದೇ ಈಗ ತಿಳೀತಲ್ಲಾ ಇವನ ಸಜ್ಜನತಾ! ನನ್ನ ರೊಕ್ಕಾ ತೊಗೊಂಡು, ಮತ್ತ ಸುಳ್ಳಿನ ಆರೋಪ ಹೊರಸ್ತಾನ. ನಾ ಸ್ವಲ್ಪೇ ನೀರಾಗ ಮುಳಗಾಂವಲ್ಲ ಶಾಮಣ್ಣಾ! ನಿನ್ನ ಕೋರ್ಟಿನ ಕಟ್ಟೀ ಏರಿಸೇ ವಸೂಲ ಮಾಡೇನು....ತಿಳೀತs? ನಡೀ ಜಗಣ್ಣಾ, ನೀ ನಮ್ಮ ಕಾಮಾಕ್ಷೀಗುಡಾ ಅಭ್ಯಾಸ ಮಾಡೀಯಂತ.

ಶಾ— (ತಿರಸ್ಕಾರದಿಂದ) ಯಾವ ಅಭ್ಯಾಸ?

ಉ— ನಾಲಿಗೀ ಬಿಗಿ ಹಿಡಿದು ಮಾತಾಡು! ಕಾಮಾಕ್ಷಿ ಹಾದಿಹೋಕನ ಮಗಳಲ್ಲ!

ಶಾ— (ಅಷ್ಟೇ ಎತ್ತರದ ದನಿಯಲ್ಲಿ) ಜಗೂನೂ ಹಾದಿಹೋಕನ ಮಗನಲ್ಲ!

ಉ— ಅಂತೇ....ಬೇಕಾದರ ಅವರಿಬ್ಬರದೂ ಲಗ್ನಾನೂ ಮಾಡೇನು. ಆದರ ನಿನಗ ಆಮಂತ್ರಣ ಇಲ್ಲ.

ಜ— (ಆನಂದಿತನಾಗಿ) ಶಾಮಣ್ಣಾ. ಅವ್ವಗ ಜ್ವರಾ ಕಡಿಮಿ ಆದ. ಅತ್ತಿಗಿ ನಿಶ್ಚಿಂತ ಇದ್ದಾರ. ಉಲ್ಲಾ, ರಂಗ ಆರಾಮ ಇದ್ದಾರ. ಇಕಾ ನಾ ಹೊರಟೆ— ಉದ್ದಂಡರಾಯರ ಮನೆಗೆ, ಕಾವಾಕ್ಷೀ ಕೈ ಹಿಡಿಯಲಿಕ್ಕೆ!

ಶಾ— (ನಿರುಪಾಯನಾಗಿ) ಹೋಗಪ್ಪಾ ಹೋಗು! ನೀವೆಲ್ಲಾ ಸುಖವಾಗಿರ್ರಿ! (ಹೋಗುವರು) ಆಯ್ಯೋ ನನ್ನ ಸಂಕಟ ಯಾರಿಗೂ ತಿಳಿಯಬಾರದೆ? ಅವ್ವನಿಗೆ ಜ್ವರ. ಈ ವಿಷಯ ಹೇಳುವ ಹಾಗಿಲ್ಲ. ರಾಧೆ ಕೇವಲ ಮುಗ್ಧೆ. ಹೇಳಿದರೂ ತಿಳಿಯುವ ಹಾಗಿಲ್ಲ. ಉಲ್ಲಾ, ರಂಗ ಅಂತೂ ಮಕ್ಕಳು. ಯಾರ ಮುಂದೆ ನನ್ನ ದುಃಖ ತೋಡಿ ಕೊಳ್ಳಲಿ. (ಒಳಗಿನಿಂದ ಗುಂಡವ್ವನು ಕೂಗಿಕೊಳ್ಳುವಳು—" ಹೋಗಲಿ ಬಿಡು ಶಾಮಣ್ಣಾ, ಎಷ್ಟು ದಿನಾ ನಡೀತದ ಈ ನಾಟಕ.... ಜಗೂ ಹೋದ್ಯಾಂತ....")

ಶಾ— ಅವ್ವಗ ಖರೇನ್ಹ ಬಡಿದಾಟ ಕೇಳಿಸಿತೋ ಏನು ಪಡಬಡಿಸತಾಳೊ? (ಕೆಲಹೊತ್ತು ಸ್ತಬ್ಧ) ನಮ್ಮ ಮನೀ ಮಾನಾ ಹೋಗೊಂಡಾ. ಈ ವಿಚಾರ ತಲ್ಯಾಗ ಗಾಳೀ ಹಾಂಗ ತುಂಬೇದ! ಹುಲೀ ಹಿಡೀತದೊ ಏನೋ! (ತಲೆ ಹಿಡಿದುಕೊಂಡು) ಆಯ್ಯೋ! ಈ ಅಸಹ್ಯವೇದನೆ ತಡೀಲಾರೆ. ಒಂದೇ ಉಪಾಯ. (ಒಂದು ಕಪ್ಪು ಒಂದು ಟೇಬಲ್ ಮೇಲೆ ಇಟ್ಟು, ಒಂದು ಸೀಸೆಯಿಂದ ದ್ರವ ಪದಾರ್ಥ ಸುರುವಿ) ದುಃಖದ ಮಡುವಿನಿಂದ ಸುಖದ ಸ್ವರ್ಗಕ್ಕೇರಿಸುವ ದಿವ್ಯೌಷಧಿ, ವಿಷವೇ! ಇನ್ನು ನೀನೇ ನನಗ ಗತಿ. (ಕುಡಿಯಲು ಹೋಗುವನು. ರಾಧಾ ಓಡಿಬಂದು ಕೈಹಿಡಿಯುವಳು)

ರಾಧಾ— ಏನಿದು ಹುಚ್ಚಾಟ? ತಮ್ಮನ ಗೂಡಾ ಬಡಿದಾ ಡಿದರ, ವಿಷಾ ಕೊಗೊತಾರ್ಹ ಯಾರಾರೆ? ನನಗಷ್ಟು ಮೊದಲು ಕೊಡ್ರಿ. ಮಕ್ಕಳಿಗಷ್ಟು ಹಾಕ್ರಿ. ಅತ್ತ್ಯಾವ್ರು ಈ ಅನಾಹುತ ನೋಡೇ ಪ್ರಾಣಾ ಬಿಡತಾರ. ಆ ವ್ಯಾಲೆ "ಹಿಂದಿಲ್ಲಾ ಸ್ವಾಮಿ ಮುಂದಿಲ್ಲಾ" ಅಂತ ನೀವೂ ತೊಗೊಳ್ರಿ (ಉಶ್ ಎಂದು ಉಸುರುಗರೆ ಯುತ್ತ ಆರಾಮಾಸನದ ಮೇಲೆ ಬಿದ್ದುಕೊಳ್ಳುವನು. ರಾಧಾ ಸೆರಗಿನಿಂದ ಹಣೆಯ ಬೆವರೊರಸುವಳು.) ಇಂದ ಹಿಂಗ್ಯಾಕ ಮಾಡತೀರಿ? ನಾ ಏನು ತಪ್ಪು ಮಾಡಿದೆ? (ಭುಜವನ್ನಪ್ಪಿ ಅಳುವಳು.)

ಶಾಮು— ನೀ ಏನು ತಪ್ಪು ಮಾಡೀದಿ? ನಾನೂ ಅದನ್ನೇ ಕೇಳತೀನಿ? ರಾಧಾ, ಈ ಕುರುಡು ಕಾಂಚಾಣದ ಸಲುವಾಗಿ, ಇಂದ ಪ್ರಾಣಾ ಕೊಡಲಿಕ್ಕೆ ಸಿದ್ಧ ಆಗಿದ್ದೆನಲ್ಲ!

ರಾಧಾ— ಅಲ್ಲ, ದುಷ್ಟ ತಮ್ಮನ ಕಾಲಾಗ!

ಶಾಮು— ಅರ್ಥಾತ್ ದುಡ್ಡಿಲ್ಲಂತ್ಹ ಅವ ಉದ್ದಂಡರಾಯರ ಕಡೇ ಹೋದ್ನಲ್ಲ?

ರಾಧಾ— ಏನೇ ಇರ್ಲಿ, ನೀವು ಸುಮ್ಮನ್ಹ ಕೂಡ್ರಿ. ಏನಾರೆ ಹಚಿಕೊಂಡು, ತ್ರಾಸ ಮಾಡಿಕೋ ಬ್ಯಾಡ್ರಿ!

ಶಾಮು— ಕಣ್ಣಿಗೆ ಕತ್ತಲೆ ಬಂದ್ಹಾಂಗ ಆಗತ್ಹದ. (ಕಣ್ಣು ಮುಚ್ಚಿ ಕೂಡ್ರುವನು. ಅಷ್ಟರಲ್ಲಿ ಜಗಣ್ಣನು ಕೈಯಲ್ಲಿ "ಸಂಯುಕ್ತ ಕರ್ನಾಟಕ" ಹಿಡಿದುಕೊಂಡು ಬರುವನು.)

ಜಗಣ್ಣ— ಅಣ್ಣಾ! ಅಣ್ಣಾ!!

ಶಾಮು— (ಏಳಲೆಳಸಿ) ಯಾಕ ಜಗೂ?

ರಾಧಾ— ಇನ್ನೊಂದೆರಡು ಮಿನೀಟು ಹಿಂಗೇ ಕೂಡ್ರಿ.

ಜಗಣ್ಣ— ಇವತ್ತಿನ "ಸಂಯುಕ್ತ ಕರ್ನಾಟಕ" ಓದಿದ್ಯಾ ಅಣ್ಣಾ?

ರಾಧಾ— ಮೈಯಾಗ ನೆಟ್ಟಗಿಲ್ಲಾ; ಪತ್ರಿಕಾ ಏನು ಓದತಾರದು?

ಜಗಣ್ಣ— ಎಂತಹ ಸಂತೋಷದ ಸುದ್ದಿ! ನಿಮ್ಮ ಮಾವ ಹಾವಿನ ತಳಕು ನೋಡಿದ ನಿಮಿತ್ತ, ಅನಿಶ್ಚಿತ ಅವಧಿಯವರೆಗೆ ದೇಶ ಪರ್ಯಟನ ಕೈಕೊಂಡು, ತನ್ನ ಎಲ್ಲಾ ಆಸ್ತೀ ನಿನ್ನ ಹೆಸರ್ಲೆ ಮಾಡಿದ ನಂತ. ನಾಳೆ ನಾಡದು ಅಕ್ಕ ಬರಬಹುದು. ಹಂಗರ್ಹ ದೊಡ್ಡ ಆಸ್ತೀನ್ಹ ಹೊಡೆದೇಳು!

ರಾಧಾ— ಅಪ್ಪ ದೇಶಾಂತರ ಹೋದನ್ಹ?

ಶಾಮು— ಮಾಮಾ ಹೊರಟು ಹೋದನ್ಹ?

ಗುಂಡವ್ವ— (ಪ್ರವೇಶಿಸಿ) ಎಲ್ಲಿ ಹೋದ್ನಪ್ಪಾ ನನ್ನ ತಮ್ಮಾ?

ಜಗಣ್ಣ— (ಆನಂದದಿಂದ) "ಜೀವೋ ಜೀವೇನ ಜೀವತಿ" ಜಗತ್ತಿನ ನೇಮ ಅದ, ಲಕ್ಷ್ಮಿ ನಿನಗ ಒಲಿದು ಬಂದ್ಲು. ನಾನೂ ಹಾರಿ ಬಂದೆ!

ಗುಂಡವ್ವ—ಥೂ ನಿರ್ದಯಾ, ಹೊರಟು ಹೋಗು ಇಲ್ಲಿಂದ!

ಶಾಮು— ಇರಲಿ ಬಿಡು ಅವ್ವಾ. ಜಗೂ ಎಷ್ಟಾದರೂ ಸಣ್ಣಾವ ಅಲ್ಲ್ಹ? ಲಕ್ಷ್ಮಿ ಬಂದಂತೆ ತಮ್ಮ ಬಂದಂತೆ, ಮಾವನೂ ಮರಳಿ ಬರುವಂತಾಗಲೆಂದು ಆ ಚಿಚ್ಛಕ್ತಿಯಲ್ಲಿ ಪ್ರಾರ್ಥಿಸೋಣ!

(ಎಲ್ಲರನ್ನೂ ಮರೆಮಾಡ ತೆರೆ)

ಕಲ್ಯಾಣದ ಕನ್ನಡ ಸಂಘವು ಪ್ರಕೃತ ನಾಟಕಪ್ಪದ ಕಾಲಕ್ಕೆ ರಂಗಭೂಮಿಯ ಮೇಲೆ ತಂದರು. —ಲೇ.

೫೫ ವರ್ಷಗಳಿಂದ ಅನುಭವಪಟ್ಟ

ಕರ್ಣಿ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.

ವಿಳಾಸ:—

ಗಣೇಶ ರಾಮಚಂದ್ರ ಕರ್ಣಿ ಮತ್ತು ಕಂಪನಿ

ಗಿರಗಾಂವ, ಮುಂಬಯಿ. ೪

ಭರತ-ಬಾಹುಬಲಿಯರ ಕತೆಗಳು

(ಉತ್ತರಾರ್ಧ)

ಶ್ರೀ. ಕೆ. ವೆಂಕಟರಾಯಾಚಾರ್ಯ 'ವಿದ್ವಾನ್' ಸುರತ್ಕಲ್ಲು

●

ಕಳೆದ ಸಂಚಿಕೆಯಲ್ಲಿ ಪಂಪ ಮತ್ತು ರತ್ನಾಕರರು ತಮ್ಮ ಕೃತಿಗಳಲ್ಲಿ ಭರತ-ಬಾಹುಬಲಿಗಳನ್ನು ರೂಪಿಸಿದ ಬಗೆಯನ್ನು ಅರುಹಲಾಗಿದೆ. ಇನ್ನೊಬ್ಬ ಕವಿ ಚಂದ್ರನೆಂಬವನು, ಇವರಿಬ್ಬರನ್ನೂ ಹೇಗೆ ರೂಪಿಸಿದ್ದಾನೆಂಬುದನ್ನು ಇಲ್ಲಿ ಕಾಣಬಹುದು.

—●—

ಪಂಪನು 'ಬಲವಂತನಾದ ಬಾಹುಬಲಿಯು ವಿರಕ್ತನಾದನೆಂದು' ವಿಶೇಷಿಸಿ, ಕೊನೆಗೇನೋ ಪುನಃಕಷಾಯವಳಿಯದವನಾಗಿದ್ದವನಲ್ಲಿಗೆ ಭರತನೇ ಸಾಗಿಬಂದು ಮಾತಾಡಿದನೆಂಬಲ್ಲಿ ಮತ್ತು ಮಾತಿನ ಹಾಗೂ ಕೃತಿಯ ಕಾಳಗದಲ್ಲಿ ಸೋತ ಭರತನನ್ನು ಕಂಡು ಬಾಹುಬಲಿಯು ಆ ಸಹಜಸಂದರ್ಭದಿಂದಲೇ ವಿರಕ್ತನಾದನೆಂಬಲ್ಲಿಯೂ ವಿಶೇಷವಾಗಿ ಭರತ-ಬಾಹುಬಲಿಯರು ಮೇಲ್ಕೀಳ್ಮೆಗಳಿಲ್ಲದೆ ಸಮಾನಸ್ಕಂಧರೆಂದು ಕಾಣವುದಾಗಿದೆ. ಆದರೆ, ಬಾಹುಬಲಿಯು 'ಚಕ್ರರತ್ನವು ಆತನನ್ನು ಹೊಂದುವಷ್ಟು ತಕ್ಕವನಲ್ಲ' ಎಂಬುದು ಮಾತ್ರ ಬಾಹುಬಲಿಯ ಕೀಳ್ಮೆಯನ್ನೇ ಸಾಧಿಸುತ್ತಾ, ಅತಏವ ಭರತನೇ ಚಕ್ರರತ್ನದ ಪ್ರಾಪ್ತಿಗೆ ಯೋಗ್ಯನೆಂದು ಉದಾತ್ತೀಕರಿಸಿದುದರಲ್ಲಿ ಚೆನ್ನಿಲ್ಲದೇ ಇಲ್ಲ! ಈ ರತ್ನಾಕರ ಗ್ರಂಥದ ಬಗ್ಗೆ ಹೇಳುವ "ಇದರಲ್ಲಿ ಜೈನ ಸಮಯಕ್ಕೊಳಪಡದ ನಾಲ್ಕೈದು ಸಂಗತಿಗಳಿದ್ದುದರಿಂದ, ಇದು ಆಗಣ ಜೈನಗುರುಗಳಿಂದ ಮಾನ್ಯವಾಗಿಲ್ಲವೆಂಬ" ಮಾತು "**ಇದೊಂದು ಸಂದರ್ಭಸೂಚಕ**"ವಾಗಿರಬಹುದೆಂದು ತಾನೇ ನಮಗೆ ತೋರುವುದು. ಪಂಪನು ತನ್ನ 'ಜಿನಾಗಮ ಧರ್ಮವನ್ನು ಬೆಳಗಿಸಿದ' ಪುರಾಣರತ್ನದಲ್ಲಿಯೂ ಇಂತಹ ಅದಾವೊಂದು ಜೈನಪೌರಾಣಿಕಾಖ್ಯಾನದ ಅಸಂಗತಿಯನ್ನೇ ಬಳಸಿಲ್ಲ! ಈ ರತ್ನಾಕರವರ್ಣಿ 'ಭರತೇಶನನ್ನು ಉದಾತ್ತೀಕರಿಸುವಲ್ಲಿ ನೆಟ್ಟ ಮನಸ್ಸಿನಿಂದ' ಇಂತಹ ಅನೌಚಿತ್ಯವನ್ನು ತಂದೊಡ್ಡಿದನೆಂಬಲ್ಲಿ ಸಂದೇಹವಿರಲಾರದು. ಇದು ಕಾವ್ಯರಸಿಕರಿಗೇನೋ ಸಮಯೋಚಿತವಾಗಿ ಕಂಡುಬಂದರೂ, ಇಂತಹ **ಪುರಾಣಕಥಾನಕಕ್ಕೊಂದು** ಕಳಂಕವೆನ್ನದೆ ಗತ್ಯಂತರವಿಲ್ಲೆಂದೇ ವಾಚಕರಿಗೂ ತೋರದಿರದು! ಅಂತೂ ಭರತೇಶವೈಭವವು ಸಾಂಗತ್ಯದಲ್ಲಿ ರಚಿಸಿದ ಮಹಾಕಾವ್ಯವೊಂದೆಂದು ಮಾತ್ರ ಹದಿನಾರಾಣೆ ಸತ್ಯವು!

ಚಂದ್ರಕವಿಯ ಕೃತಿಯಲ್ಲಿ— ಭರತನ ಹಾಗೂ ನಾಭಿರಾಜನ ಮೊದಲ ಹುಟ್ಟುಗಳ ಕತೆಯೊಂದಿಗೆ ಬಾಹುಬಲಿಯ ಹೋರಾಟದ ವರೆಗಿನ ಕತೆಯಿದೆ. ಆಯಿಲ್ಲಾ ಜನ್ಮಾಂತರಕಥಗಳು ಪೌರಾಣಿಕಗಳಾಗಿರುವುದರಿಂದ ಇಲ್ಲಿ ಅಳವಡಿಸಿಲ್ಲ!

ನಾಭಿರಾಜ-ಮರುದೇವಿಯರಿಗೆ '**ಆದಿತೀರ್ಥಂಕರ**'ನಾದ ವೃಷಭನು ಹುಟ್ಟಿದನು. ಇವನಿಗೆ **ಯಶಸ್ವತಿ** ಮತ್ತು ಸುನಂದೆಯರೊಡನೆ ಮದುವೆಯಾಗಿತ್ತು. ಆಗ 'ಮಾಣವರಾಜರ ಸತಿಯರು ಆರತಿಯೆತ್ತಿ ಹರಸಿದರು' ಒಮ್ಮೆ ಯಶಸ್ವತಿಯು ನಾಲ್ನೀರು ಮಿಂದು ಏಳ್ನೆಲೆಗೇರಿ ಪವಡಿಸಿ, **ಹದಿನಾರು ಸ್ವಪ್ನಂಗಳನ್ನು ಕಂಡಳು**: ದೇವಗಜ, ವೃಷಭ, ಬಿಳಿಯ ಸಿಂಗ, ಗಜಾಭಿಷಿಕ್ತೆಯಾದ ಲಕ್ಷ್ಮಿ, ಷಟ್ಪದಂಗ ಮಂದಾರ, ಪೂರ್ಣಚಂದ್ರ, ಉದಯಾರ್ಕ, ಜಾಳೆಮೀನ್ಗಳು, ಕುಂಭದ್ವಯ, ಸರೋವರ, ಜಲಧಿ ಸಿಂಹಾಸನ, ದೇವೇಂದ್ರ, ನಾಗಲೋಕ, ರತ್ನರಾಶಿ, ನವಿಲುಗಳನ್ನೂ ಕಂಡಳು. 'ಕಡೆಯೊಳು **ತನ್ನಯ ವದನ ಪೊಗುವ ವೃಷಭ**'ನನ್ನೂ ಕಂಡಳು. ಆಗ 'ಮಂಗಲಗೀತವಾದ್ಯದ ದನಿಗೇಳೆಯೆಚ್ಚತ್ತಳು'. ಆಮೇಲೆ ಇಂದ್ರನ ಆಜ್ಞೆಯಂತೆ ದೇವಸತಿಯರು ಬಂದು ಆಕೆಯನ್ನು ಸೇವಿಸುತ್ತಾ, ಅಲ್ಲಿಯ ಗರ್ಭಶೋಧವನ್ನು ನೆರವೇರಿಸಿದರು.

ಒಮ್ಮೆ ನಾಭಿರಾಜನು ಆಕೆಯೊಂದಿಗೆ **ವನಕ್ರೀಡೆ**ಯಾಡಿದನು. ಮತ್ತೆ ದೇವೇಂದ್ರನು ಬಂದು '**ಗರ್ಭಾವತಾರಕಲ್ಯಾಣ**'ವನ್ನು ಮಾಡಿದನು. ಬಳಿಕ ಆರುತಿಂಗಳಲ್ಲಿ ಸುಕುಮಾರನು ಜನಿಸಿದನು. **ಭರತನೆಂದು ಹೆಸರಿಕ್ಕಿದರು**.

ಹೀಗೆ ಇವರಿಗೆ ಈ **ಭರತನೇ ಮೊದಲಾದ ನೂರುಮಂದಿ** ಗಂಡುಮಕ್ಕಳೂ, ಬ್ರಾಹ್ಮಿಯೆಂಬ ಹೆಣ್ಣೂ ಹುಟ್ಟಿದರು. ಇನ್ನೊಬ್ಬಳು ರಾಣಿಯಾದ ಸುನಂದೆಯಲ್ಲಿ, ಬಾಹುಬಲಿ ಮತ್ತು ಸೌಂದರಿಯರು ಹುಟ್ಟಿದರು. ವೃಷಭನಾಥನು ಅವರಿಗೆ ವಿದ್ಯಾಭ್ಯಾಸಮಾಡಿಸಿದನು. 'ಮತಿಃ ಶ್ರುತಾವಧಿಃ' ಯೆಂಬಂತೆ ವಿದ್ಯಾಪೂರ್ಣರಾದರು. 'ಭರತನು ನೂರೆಂಟು ಲಕ್ಷಣಪೂರ್ಣನಾಗಿ' ಶೋಭಿಸುತ್ತಿದ್ದನು.

ವೃಷಭನ ಇಕ್ಕೆಲದಲ್ಲಿ ಭರತಾದಿ ಪುತ್ರರಿರಲು ಆ ಸಭೆ ರಂಜಿಸಿತು. ಆಗ ನೆರೆದ ನೃತ್ಯದಿಂದಾಗಿ ವೃಷಭನು ವಿರಕ್ತನಾಗಿ 'ಪರಿನಿಷ್ಕ್ರಮಣ ಕಲ್ಯಾಣ'ವೂ ಆಯಿತು. ಅಯೋಧ್ಯೆಯಲ್ಲಿ ಭರತನು ರಾಜನೂ, ಬಾಹುಬಲಿಯು ಯುವರಾಜನೂ ಆದರು. ವೃಷಭನು ದೀಕ್ಷಾಬದ್ಧನಾಗಿ, "ದೀಕ್ಷೆಯಿಲ್ಲದೆ ದ್ರವ್ಯಲಿಂಗಿಗಳಾಗಿದ್ದ ಕ್ಷಿತಿಪರ ನಟ್ಟನಡುವೆ-ನಕ್ಷತ್ರಮಧ್ಯದ ಚಂದ್ರನಂತಾ-ಮುಮುಕ್ಷುವೊಪ್ಪಿದ ನೇನೆಂಬೆ." ಆತನ 'ಸಮವಸರಣ ಕಲ್ಯಾಣವೂ' ನೆರವೇರಿತು.

ಅಯೋಧ್ಯೆಗೆ ಮೂರು ಮಂದಿ ಬಂದು ಒಸಗೆಯಿತ್ತರು:

ಪುರುಜಿನಪತಿಗಾದ ಕೈವಲ್ಯ ಮಹಿಮೆಯ |
ವರಚಕ್ರರತ್ನದುದ್ಭವವ ||
ಕರ ಚೆಲ್ವಿನಂತಃಪುರದ ಮಹಾದೇವಿ |
ವರ ಕುಮಾರನ ಪೆತ್ತಳೆಂದು ||

ಈ ಮೂರು ವಿಷಯಗಳಲ್ಲಿ ಮೊದಲ ಧರ್ಮವೇ ಮೇಲೆಂದು ಕೇವಲಿಪೂಜೆಗೈದಿದನು. ಅಲ್ಲಿಯೇ ಭರತಾನುಜರ ತಪದಾರಂಭವಾಯಿತು. (ಸಂಧಿ ೮-೧೪೯):

ಕುರುರಾಜ ಸೋಮಪ್ರಭ ದಾನಶ್ರೇಯಾಂಸ |
ಭರತಾನುಜಾನಂತವೀರ್ಯ ||
ಪುರುಜಿನಪನೊಳು ದೀಕ್ಷೆಯನಾಂತು ಗಣಧರ |
ಪರಮೇಷ್ಠಿಗಳಾದರಾಗ ||
ಪರಮ ವೈರಾಗ್ಯದಿಂ ಬ್ರಾಹ್ಮಿ-ಸೌಂದರಿಯರು |
ಪುರುಜಿನಪನ ಸನ್ನಿಧಿಯೊಳು ||
ವರದೀಕ್ಷೆಯಾಂತು............... |
ಪರಮಪದವಿಯೆಯ್ದಿದರು ||

ಭರತನು ಅಲ್ಲಿಂದ ಆಯುಧಾಗಾರಕ್ಕೈದಿ, ಚಕ್ರವನ್ನು ಪೂಜಿಸಿದನು, ಒಂಬತ್ತು ದಿನದ ಪೂಜೆಯಾಯ್ತು. ಮತ್ತೆ ಪುತ್ರಜನನೋತ್ಸವವನ್ನು ಮಾಡಿಸಿದನು. ಅನಂತರ ಶರತ್ಕಾಲದಲ್ಲಿ ಪ್ರಸ್ಥಾನ ಭೇರಿಯನ್ನು ಹೊಯ್ಸಿ, ದಿಗ್ವಿಜಯಿಯಾಗಿ, ಸಾಕೇತಕ್ಕೆ ಮರಳಿ ಬಂದನು. ಆಗಲಾ ದ್ವಾರದಲ್ಲಿ ಚಕ್ರ ಕೀಲಿಸಿ ನಿಂತಿತು.

'ನಿನ್ನ ತಮ್ಮಂದಿರು ನಿನಗೆ ಬಾಗಲಿಲ್ಲೆಂದು' ಪುರೋಹಿತನು ಕಾರಣವನ್ನು ಹೇಳಿದನು. ಚಕ್ರೇಶನು ಸಿಡಿಮಿಡಿಯಾದನು. "ಉಗುರಿಂದ ಪೋಪುದಕೆ ಕೊಡಲಿಯೂಳಿಗವೇಕೆ? ದೂತರನ್ನು ಕಳುಹೆಂ"ದು ಪುರೋಹಿತನು ಬಿನ್ನವಿಸಿದನು. ಅಂತೆ ದೂತಪ್ರೇಷಣೆಯಾಯ್ತು. ಆದರಿಂದ ವಿರಕ್ತರಾದ ಭರತಾನುಜರು, ಪುರುಪರಮೇಶನ ಪೂಜೆಗೈದಿ, ಅಲ್ಲೇ ದೀಕ್ಷೆವಡೆದರು.

ಭರತನು ಈ ಸುದ್ದಿ ಕೇಳಿ, ತನ್ನೊಳಗೆ ಸಂತೈಸಿ ಕೊಂಡನು. ಇನ್ನುಳಿದ ಬಾಹುಬಲಿಯತ್ತ ಇನ್ನೊಬ್ಬ ಸಂಧಿವಿಗ್ರಹನಿಪುಣನಾದ ಮಂತ್ರಿಯನ್ನು ಕಳುಹಿದನು. (ಈಯೆಡೆಯ ಬಾಹುಬಲಿಯ ಆಸ್ಥಾನ ವರ್ಣನೆಯು ಓದತಕ್ಕುದಾಗಿ-ಗ್ರಂಥವಿಸ್ತಾರಭೀತಿಯಿಂದ ನೀಗಿದ್ದು-ಮೂಲದಲ್ಲೇ ನೋಡಬೇಕೆಂದು ವಾಚಕರನ್ನು ವಿನಂತಿಸುತ್ತೇನೆ.)

ಬಾಹುಬಲಿಯು ತನ್ನ ಅಣ್ಣನಾದ ಭರತನ ದಿಗ್ವಿಜಯವನ್ನು ಕೇಳಿ, ಅಲ್ಲಾದ ಹಲವಾರು ಅವಾಂತರಗಳನ್ನು ಪ್ರಶ್ನಿಸಿದನು; ಹಾಗೂ ತಾನೇ ವಿವರಿಸಿದನು. ಇದೀಗಣ ಸಂದರ್ಭಕ್ಕೆ ಉತ್ತರವಾಗಿ ನುಡಿದುದು:

ಹಿರಿಯಣ್ಣಗೆರಗಬಹುದು ನೆತ್ತಿಯೊಳು ತಂದು |
ಕರಗಸವಿಟ್ಟೆರಗಿಸುವ |
ಭರತಾಜಿಯ ಭಯಕೆರಗುವೆನೇ ನಾ |
ಪುರುಜಿನಪನ ಸುತನಲ್ತೆ ? ||
ಬಲೆಯನೊಡ್ಡಲು ಕೀಳ್ಮೃಗ ಸಿಕ್ಕುವಂದದಿ |
ಬಲುದೊಡ್ಡ ಸಿಂಹ ಸಿಕ್ಕುವುದೇ ? ||

ಇತ್ಯಾದಿ ಕೋಪಾಟೋಪದಿಂದ ಉತ್ತರಿಸಿ, ಆ ಮಂತ್ರಿಯನ್ನು ತೆರಳಿಸಿದನು.

ಇನ್ನು, ಇದೇ ರಾತ್ರಿ ಬಾಹುಬಲಿಯು ಕೆಳೆಯರೊಡಗೂಡಿ ಚಂದ್ರಿಕಾವಿಹಾರಕ್ಕೆಂದು ಪೊರಮಟ್ಟನು. ಅಲ್ಲಲ್ಲಿ—

ನಂದನಗೆ ಸಾಮ್ರಾಜ್ಯಪದವಾಗಲಿ ತನ |
ಗಿದಿರಾದವರಿಗಾ ಅಪಜಯವು ||
ಒದವಿ ಬರಲಿ....... ||

ಇತ್ಯಾದಿ ಪೌರರು ಹಾಡುವುದನ್ನು ಕೇಳಿದನು. ಚಂದ್ರಾಸ್ತವಾಯಿತು, ಕೋಳಿ ಕೂಗಿತು. ಆಗ ಅಲ್ಲಿಂದ ತೆರಳಿ ಪವಡಿಸಿದನು. ಸೂರ್ಯೋದಯಕ್ಕೆಚ್ಚತ್ತು, ನಿತ್ಯವಿಧಿಗಳನ್ನು ನಿರ್ವಹಿಸಿ, ತಾಯಿಯಾದ ಸುನಂದೆಯೊಡನೆ 'ಭರತಾಜಿ ಕರೆಕಳುಹಿದಂತೆ ಹೋಗಿಬರುವೆ' ನೆಂದು ಕೇಳಿಕೊಂಡನು.

ಇತ್ತ 'ಬಾಹುಬಲಿಯು ಮಣಿಯ'ನೆಂದೂ. 'ಇದಕ್ಕೆ ಕದನವೆಂದೂ' ಹಿಂತೆರಳಿದ ಮಹತ್ತರನು ನುಡಿದನು. ಮನುಜೇಶನಾದರೂ ಅತಿಕೋಪದಿಂದ ಯುದ್ಧಕ್ಕಾಗಿ ಸಾಗಿದನು. ಈಯಿರ್ವರು ಕದನ-ಶಾಲಿಗಳೂ ಮದಕರಿಗಳನ್ನೇರಿ ಬಂದರು. ಆಗ 'ಇವರಿಬ್ಬರ ಕದನ ಸಲ್ಲ'ದೆಂದು ಉಭಯಪಕ್ಷದ ಮಂತ್ರಿಗಳೂ ಯೋಚಿಸಿ, ಮೊದಲಾಗಿ ಭರತನಲ್ಲಿ ವಿನಂತಿಸಿದರು: ನಿಮ್ಮಿಬ್ಬರಲ್ಲಿ ಧರ್ಮಯುದ್ಧವೇ ಲೇಸು ಹೊರತು, ಈ ಚತುರಂಗದ ಕ್ಷಯಕಾರಕವೇಕೆಂದು ಆಗ 'ಹಿರಿಯರು ಪೇಳಿದ ಮಾತು ಮೀರಲು ಧರೆಯೆಲ್ಲ ಹಳಿವುದೆಂದು' ಭರತನು ಅದಕ್ಕೊಪ್ಪಿದನು; ಅತ್ತ ಬಾಹುಬಲಿಯೂ ಸಮ್ಮತಿಸಿದನು.

ಅಂತೆ, 'ನಿಷಧಾದ್ರಿ-ನೀಲಾದ್ರಿಗಳಂತೆ' ಇಬ್ಬರು ಮೊದಲಲ್ಲಿ ದೃಷ್ಟಿಯುದ್ಧಕ್ಕೆ ತೊಡಗಿದರು. ಭರತನು 'ತನ್ನನುಜಗೆ ಜಯವಿತ್ತು' ತಾನು ಸೋತನು, ಜಲಯುದ್ಧದಲ್ಲೂ ಭರತನು ಗೆದ್ದಿಲ್ಲ, ಮತ್ತಿನ ಮಲ್ಲಗಾಳೆಗದಲ್ಲಿ ಕೆಲಹೊತ್ತು 'ಸರಿಗಾಳೆಗ'ವಾಯ್ತು. ಆಗ ಬಾಹುಬಲಿಯು ಮಲ್ಲನೊಳಪೊಕ್ಕು, ಭರತನ ಮಲ್ಲಡಿವಿಡಿದು ಬೀಸಲು, 'ಹೇಮಾದ್ರಿಯನ್ನು ಮರಕತಶೈಲ ಪೊತ್ತಂತೆ' ಕಾಣಿಸಿತು. ಆ ಅಣ್ಣನನ್ನು ಆಗಸದಲ್ಲೇ ಎತ್ತಿಕೊಂಡಿದ್ದನು, ಮತ್ತೆ 'ಹಿರಿದು ಭಂಗವ ಮಾಡಬಾರದೆಂದೊಯ್ಯನೆ ಧರೆಗಿಳುಹಿದನು'.

ಆಗ ಭರತನು ಉರಿದೆದ್ದು, ಬಾಹುಬಲಿಯನ್ನು ಕೊಲ್ಲಲು ಚಕ್ರರತ್ನವನ್ನು ಬೀಸಿದನು. ಅದು ಆ ಬಾಹುಬಲಿಯನ್ನು ಛೇದಿಸದೆ, ಮಸುಳಿ, ಕಂದಿ, ಕುಂದಿ, ಆತನ ಬಲದಲ್ಲಿ ನಿಂತಿತು.

ಇದರಿಂದ ಬಾಹುಬಲಿಗೆ ಹೀಗೆನ್ನಿಸಿತು: ಈ ರಾಜ್ಯಕ್ಕಾಗಿ ಹೋರಾಡುವುದೇ? ಒಂದೊಂದು ಇಂದ್ರಿಯಕ್ಕೇನೇ ಹಲವು ಜೀವಿಗಳು ಸೋತವೆಂದರೆ, ಐದು ಇಂದ್ರಿಯಗಳುಳ್ಳ ಮಾನವನಿಗೇನು? ಮಾತ್ರವಲ್ಲ,

ಕೆಡುವೊಡಲನು ನೆಚ್ಚಿ ಇಂದ್ರಿಯಸುಖವೆಂಬ |
ಮಡೆಗೂಳನುಣ್ಬುದರಿಂದ ||
ಕೆಡದ ಕೈವಲ್ಯಸುಖವನುಂಡು ಮೂಲೋಕ |
ದೊಡೆಯನಹೇನೆಂದು ಬಗೆದ ||(೧೪—೮೪)

ಅಂತೆ, ಅಣ್ಣನೊಡನೆ ಬಿನ್ನವಿಸಿದನು: ಅಣ್ಣಾಜೀ! ಈ ರಾಜ್ಯಲಕ್ಷ್ಮಿ ನಿನ್ನಲ್ಲೇ ನೆಲಸಲಿ. ಇನ್ನಾದರೂ ಮುಳಿಸ ಬಿಡು. ನಿನ್ನಲ್ಲಿ ಎಸಗಿದ ನನ್ನೀ ತಪ್ಪನ್ನು ತಪದಿಂದ ತೀರ್ಚುವೆನೆಂದು. ಆಗಲಾ ಮಾತು ಕೇಳಿದ ಭರತನು ತನ್ನಾ ಕೃತ್ಯಕ್ಕೆ ತಾನೇ ನಾಚಿದನು! ತಪಕ್ಕೈದಬೇಡೆಂದನು'!

ಆಗ ಬಾಹುಬಲಿಯಾದರೋ:

ಡಂಭಕತನದ ಸಿರಿಯನೊಲ್ಲೆ ನಾನು ದಿ-|
ಗಂಬರನಾತನ ಪೊರ್ದಿ ||
ಶಂಬರಾರಿಯ ಗೆದ್ದು........ ||,

ಮುಕ್ತಿಯ ಸಿರಿಗಾಣ್ಮನಹೆ' ನೆಂದು ನಡೆದೇ ಬಿಟ್ಟನು! ಆದರಿಂದಾದ ಸುನಂದಾದೇವಿಯ ಅಳಲನ್ನು ಹೇಳತೀರದು!

ಇತ್ತ ಭರತನು ರಾಜ್ಯವನ್ನು ಹೊಕ್ಕನು. ಅತ್ತ ಬಾಹುಬಲಿ ಕೈವಲ್ಯಯುವರಾಜನಾದೇನೆಂದು' ಕೈಲಾಸಕ್ಕೈದಿದನು. ಅಲ್ಲಿ ಒಂದು ವರುಷ ಪ್ರತಿಮಾಯೋಗದಿಂದ ತಪವೆಸಗಿದರೂ, 'ಕೇವಲಬೋಧ' ಬಂದಿರಲಿಲ್ಲ. ಇದರ ಕಾರಣವೇನಿರಬಹುದೆಂದು ಭರತನು ಆದಿಜಿನನಿಂದ ಅರಿತು, ಕೈಲಾಸಕ್ಕೈದಿ 'ನಿನ್ನದೇ ಈ ನೆಲವು, ನನ್ನದಲ್ಲೆಂದು' ಮೊದಲಾಗಿ ಬಿನ್ನವಿಸಿದನು. ಅದರಿಂದಾಗಿ ಬಾಹುಬಲಿಯ ಮಾನಕಷಾಯ ಅಳಿದು, ಕೇವಲಬೋಧವಾಯ್ತು; ದೋರ್ಬಲಿಯು ಸಿದ್ಧಸಿಂಹಾಸನಸ್ಥನಾದನು.

ಮತ್ತೆ ಭರತನು ಸಾಮ್ರಾಜ್ಯಾಧಿಪರನಾದು ಒಡ್ಡೋಲಗದಲ್ಲಿದ್ದನು. ತೊಂಬತ್ತಾರು ಸಾವಿರ ಹೆಂಡಿರಿದ್ದರೂ, ತನ್ನ ಧನ-ಧಾನ್ಯವೆಲ್ಲಾ ಜಿನಪೂಜೆಯಲ್ಲೇ ವಿನಿಯೋಗಿಸಿದನು.

ಒಂದು ರಾತ್ರಿ **ಹದಿನಾರು** ದುಃಸ್ವಪ್ನಗಳನ್ನು ಕಂಡು, ಆದಿಜಿನನಿಂದ ಅವುಗಳ ಫಲವೇನೆಂದೂ ಅರಿತನು:

(**ಸ್ವಪ್ನ ದೃಶ್ಯ**) ೧ ಇಪ್ಪತ್ತುಮೂರು ಕೇಸರಿಗಳು: (**ಫಲ**) ಇನ್ನು ಮುಂದೆ ಇಪ್ಪತ್ತುಮೂರು ತೀರ್ಥಂಕರರಾಗುವರು.

೨ ಹರಿ-ಹರಿಣಕ್ರೀಡೆ: ಪಾಷಂಡಿ ಜನ್ಮಾಂತ್ಯ.

೩ ಗಜಭಾರಾನಸವಾಹ್ಯ: ಮುನಿಗಳು ಹೀನ ಗುಣಿಗಳು.
೪ ಹಿಂಡುಗಟ್ಟಿದ ವೃಷಭ: ಮುನಿಗಳ ತಂಡಗಳ ಇರುವಿಕೆ.
೫ ಮುಗಿಲು ಮುಸುಕಿದ ನೇಸರು: ಮುನಿಗಳ ಜ್ಞಾನಹೀನತೆ
೬ ಫಲಾದಿ ಹೀನವೃಕ್ಷ: ಜನರು ವೃಷಾವಾದಿಗಳು.
೭ ಅಜಕುಲ ತರಗೆಲೆ ತಿಂಬುದು: ಚಾತುರ್ವರ್ಣವೂ-ಧರ್ಮತ್ಯಾಗದು
೮ ಗಜಾರೋಹ: ಉತ್ತಮನೃಪರು ಅಸತ್ಯದಲ್ಲಿರುವುದು.
೯ ಕಾಕಾವೃತ ಘೂಕ: ಅಜ್ಞಸೇವೆಯ ಹೆಚ್ಚಳ.
೧೦ ನೀರಲ್ಲಿ ಮುದುಕ್ಕಳ ತಂಡ: ಜನರ ಹೀನಾವಸ್ಥೆ.
೧೧ ನಡುಕೆರೆ ಬತ್ತಿದೆ, ಸುತ್ತಲೂ ನೀರಿಲ್ಲ: ನಡು-ಕೊನೆಗಳ್ಲಿ-ಧರ್ಮ ಹೀನತೆ.
೧೨ ಧೂಳಿಧೂಸರಿತ ರತ್ನಾವಳಿ: ಭೂಪರ ದೀಕ್ಷಾಹೀನತೆ
೧೩ ರತ್ನಾದಿ ಭೂಷಣಹೀನತೆ: ಅಸನ್ಮಾರ್ಗ ಸೇವೆ.
೧೪ ವೃಷಭನ ಕೂಗು: ತರುಣರ ದೀಕ್ಷಾಬದ್ಧತೆ.
೧೫ ಪರಿವೇಷ್ಟಿತ ಚಂದ್ರ: ಮುನಿಮನದಲ್ಲಿ ಅವಧಿಯ ಅಪ್ರಾಪ್ತತೆ.
೧೬ ಪುಡಿದ ತರಗೆಲೆ: ಧಾನ್ಯಗಳ ನೀರಸತೆ.

ಈ ದುಃಸ್ವಪ್ನಗಳ ಫಲಗಳಾದರೋ ನಿನಗೆ ತಟ್ಟವೆಂದು ಧರ್ಮೋಪದೇಶವನ್ನು ಹೊಂದಿದರೂ, ಹಿಂತಿರುಗಿ ದುಃಸ್ವಪ್ನ ಶಾಂತಿಯನಾಚರಿಸಿದನು. ತನ್ನ ಆಯುಷ್ಯದ ಕೊನೆಯ ಹದಿನಾಲ್ಕು ದಿನಗಳಲ್ಲಿ ನಿಷ್ಕ್ರಮಣದಲ್ಲಿ ಪೂರ್ವಾಭಿಮುಖನಾಗಿ ಯೋಗನಿರೋಧೋದ್ಯುಕ್ತನಾಗಿದನು, ಪ್ರಸ್ತುತ್ಪೂರ್ಣಾಮಿಯಂದು. ಆ ಕೊನೆಗೆ ಕ್ರಮದಂತೆ ಚರಮಸ್ಥಾನವೆಂದರೆ ಮುಕ್ತಿಯನ್ನು ಹೊಂದಿದನು. ಮಾಘ ಕೃಷ್ಣ ಚತುರ್ದಶಿಯಂದು ಅಭಿಜನ್ಮುಹೂರ್ತಕ್ಕೆ ಪುರುವೂ-ಬಾಹುಬಲಿಯೂ-ಮುಕ್ತರಾದರು. ಆಗ ಭರತನು ಪುರುದೇವನ ವಿಯೋಗದಿಂದ ದುಃಖಿಸಲು ಗಣಧರರು ಸಮಾಧಾನಿಸಿದರು: ನಾವೆಲ್ಲಾ ಚರಮಾಂಗರು, ನಾಳಿನ ದಿನದ ಬಾಳುವೆಯಾಗಿ ಪುರುವು ಸಂದನು; ನಾವೂ ಪರಮಪದವನ್ನು ಐದುವೆನೆಂದು! ದೇವಕರ್ಕಳು ಪರಿನಿರ್ವಾಣ ಕಲ್ಯಾಣೋತ್ಸವದ ಮುಕ್ತಿ, ಗಾರ್ಹಪತ್ಯಾಹವನೀಯಾಗ್ನಿಯಲ್ಲಿ ಅಹಿಭುಗಳ ನಿರ್ವಾಣಕ್ರಿಯೆ ಮಾಡಿ, ಆ ಭಸ್ಮವನ್ನು 'ಪಣೆ ಕಂಠ ಭುಜಯುಗ ಹೃದಯ'ವೆಂಬ ಪಂಚಸ್ಥಾನಗಳಲ್ಲಿ ಧರಿಸಿಕೊಂಡರು.

ಈ ತೆರದಲ್ಲಿ ಮುಕ್ತಿಗೆ ಸಂದ ಗುರುವಿನನ್ನು ಹಿಂಬಾಲಿಸಿ ಇಂದಿನ ಸುಮಾರು ಮುನ್ನೂರು ವರುಷಗಳ ಹಿಂದಿನಲ್ಲಿ-ಗಜಮಸ್ತಕಾಭಿಷೇಕದ ನೆನಹಿಗೆ **ಕಾರಕಳದ ಚದುರ ಚಂದ್ರಮನು ಕೃತಿಸಿದುದರ ಸಂಗ್ರಹವಾಯ್ತು!**

ನಮ್ಮ ಮಾತು: ಜನಸೇನಮಾನಸ ಬಂದ ಮೊದಲಾದ ಜೈನ ಪುರಾಣಕರ್ತರು ತೋರಿದ **ಸನ್ಮಾರ್ಗದಲ್ಲಿಯೇ ಈ ಕೃತಿ** ಸಾಗಿದೆ **ಯೆಂದು** ತಾನೇ ಧಾರಾಳ ಹೇಳುವುದು! ಅಲ್ಲಲ್ಲಿ ಕವಿಸಮಯಗಳನ್ನು ಸಾರಿದಿಂದಿರು. ಈ ಪೌರಾಣಿಕ ಕಥೆಗೆ ಒಪ್ಪುವಂತೆಯೂ

ಆಸ್ಥಾನ, ಚಂದ್ರಿಕಾವಿಹಾರಾದಿ ವರ್ಣನೆಗಳಿವೆ. ಈ ಕವಿ ಇದೊಂದೇ ಕಾವ್ಯವನ್ನು ರಚಿಸಿದನೆಂಬ ಸಂಗತಿಯಿಂದ, ಕಾವ್ಯಾಂಗಗಳಾದ ಕೆಲವೊಂದು ವರ್ಣನೆಗಳನ್ನು ಕೈಗೊಂಡಿದ್ದಾನೆನ್ನಬಹುದು. ಚಂದ್ರಿಕಾವಿಹಾರಾವಸರದಲ್ಲಿ— ಆ ಪೌರರಲ್ಲಿ—ಬಾಹುಬಲಿಯೇ ಗೆಲ್ಲುವನೆಂಬ ಮಾತೇ ಕೇಳಿ ಬಂದುದರಿಂದ, ಆ ಸಂದರ್ಭೋಚಿತವಾಗಿಯೂ ಇದಿಯೆಂದು ಹೇಳಬಹುದು. ಪಂಪ ಮಹಾಕವಿಯ ಆದಿಪುರಾಣದಲ್ಲೂ ಇಂತಹ ಹಲವಾರು ವರ್ಣನೆಗಳಿವೆಯೆಂದು ವಾಚಕರಿಗೆ ತಿಳಿಯದುದಲ್ಲ !

ಇನ್ನು, ಈ ಕಾವ್ಯಾದಿಯಲ್ಲಿ ಬರುವ ' ಪೂರ್ವಜನ್ಮದ ಕಥೆಗಳು ' ಇಂತಹ ಪೌರಾಣಿಕ ಕಥೆಗಳಲ್ಲಿ—ವಿಶೇಷತಃ ಜೈನರಲ್ಲಿ—ಬಳಕೆಯಿರುವವುಗಳಿಸ್ಸಿ! ಯಶಸ್ವತಿಯು ಕಂಡ **ಹದಿನಾರು ಸುಸ್ವಪ್ನ**ಗಳೂ, ಭರತನು ಕೊನೆಗೆ ಕಂಡ **ಹದಿನಾರು ದುಃಸ್ವಪ್ನ**ಗಳೂ, ಈ ಕಾವ್ಯದ ಪೌರಾಣಿಕಾಂಶವನ್ನು ಮೇಲ್ಮೆಗೊಳ್ಳುವೆಯೆಂದು ಹೇಳಬಷ್ಟಿ ಇಲ್ಲ !

ಈ ಬಾಹುಬಲಿಗೆ ಅಣ್ಣನೊಡನೆ ಮಾಡಿದ ಕಾಳಗದ ಒಳಿಕಲೇ ಸುಜ್ಞಾನ ವೈರಾಗ್ಯಗಳು ಉದಯಿಸಿದುವು, ಹರಿಶ್ಚಂದ್ರ ಮಹಾರಾಜನಂತೆ, ಈತನ **ಜೀವನದ ಪೂರ್ವಭಾಗಕ್ಕಿಂತ ಉತ್ತರ ಭಾಗವೇ ಮಹತ್ವಿಕೆ**ಯದ್ದೆಂದೂ ಇಲ್ಲಿ ತೋರುವುದು !

ಒಟ್ಟಾರೆ, ಪಂಪನಂತೆ ಕವಿಚಂದ್ರಮನೂ ಭರತ-ಬಾಹುಬಲಿಯರ ಕತೆಯನ್ನು ಜೈನಪುರಾಣದಿಂದಾಯ್ದು, ತನ್ನ ಸ್ವಂತ ಧಾಟಿಯಲ್ಲಿ ಕಾವ್ಯವಾಗಿ ರಚಿಸಿದನು. **ಇವರಿಬ್ಬರ ಗ್ರಂಥಗಳಲ್ಲೂ-ರತ್ನಾಕರವರ್ಣಿಯ ಭರತೇಶ ವೈಭವದಲ್ಲಿರುವಂತಹ-ಸ್ವಕಪೋಲಕಲ್ಪಿತಗಳಾದ ಅಥವಾ ಜಿನಸಮಯವಿರುದ್ಧಗಳಾದ ಕಥಾಂಶಗಳೇನೂ ಇಲ್ಲ !** ಪಂಪನ **ಆದಿಪುರಾಣವು** ಈ ಕ್ರಿಸ್ತಾಬ್ದ ಇಪ್ಪತ್ತನೆಯ ಶತಕದ ಮೊದಲೊಮ್ಮೆ ಅಚ್ಚಾಗಿದ್ದರೂ, ವಾಚಕರಿಗಲ್ಲರಿಗೆ ದೊರೆಯುವುದಿಲ್ಲೆಂದು ಮನಗಂಡು, ಶ್ರೀಮಾನ್ ಕುಂದಣಗಾರರು ಮತ್ತು ಶ್ರೀಮಾನ್ ಚೌಗುಲೆಯವರು **ಇದೀಗ ಮುದ್ರಿಸಿ ಪ್ರಕಟಿಸಿದ್ದಾರೆಂದು** ಹೇಳಲು ಹೆಮ್ಮೆ ಪಡುತ್ತೇವೆ. ಅಂತೆ ಈ ಕಾರಕಳದ ಚಮರಚಂದ್ರಮನ ಕೃತಿಯು ಮುದ್ರಿತವಾಗಿ ಸಹೃದಯ ವಾಚಕರ ಕೈಸೇರಲೆಂದು ಶ್ರೀ ಗೋಮಟೇಶನನ್ನು ಪ್ರಾರ್ಥಿಸುತ್ತೇವೆ.

ಜಲಮಲ್ಲ ದೃಷ್ಟಿ ಯುದ್ಧದೊಳು ಭರತನ ಗೆ-|
ಲ್ದಲಘು ವಿಕ್ರಮದಿಂದ ಬಾಹು-|
ಬಲಿಯಂಬಸ್ಪರ್ಧನಾಮದ ಸ್ವಾಮಿಯ-|
ಚೆಲುವಡಿಗಳಿಗೆರಗುವೆನು || (ಚಂದ್ರಮ ಕವಿ)

ಜೀವನದ ತಿಳಿನೀರು ಬತ್ತಿ ಬರಿದಾಗಿಹುದು....

ಶ್ರೀ. ರಾ. ಸು. ವೈಲಾಯ, ಉಡುಪಿ.

೧

ಕಾರ್ಮೋಡ ಕವಿದಿಹುದು; ಬಿರುಗಾಳಿ ಬೀಸಿಹುದು
ವೃಷ್ಟಿ ಧಾರೆಯು ಕಟ್ಟಿ ಸುರಿಯುತಿಹುದು;
ಆದರೇನೆನಗಿಲ್ಲ ಈ ನೀರ ಭಾಗ್ಯವಿದ
ಮತ್ತಾರೊ ಹೊಂದಿಹರು—ಹೊಂದುತಿಹರು !

೨

ಕಣ್ಮುಂದೆ ರಾಜಿಸಿವೆ : ರಮ್ಯ ಹೂ ಚಿಗುರುಗಳು
ಹಸುರುಟ್ಟು ಹಸನಾದ ಮರಗಿಡಗಳು.
ಉತ್ಸಾಹವೆಲರಿನಲಿ—ಕಣಕಣದಿ ಉನ್ಮಾದ
ಹೊಮ್ಮುತಿರಲೆನ್ನ ಕುಡಿ ಕೊನರದಯ್ಯೋ !

೩

ಕಳ್ತಲೆಯನೋಸರಿಸಿ ಅರುಣ ಮೊಗದೋರುತಿಹ-
ನೆಲದಾಯಿ ಹೂ ಚಿಗುರ ಚೆಲ್ಲುತಿಹಳು !
ಉಷೆಯೆದ್ದು ನೀರ್ಪನಿಯ ಸಿಂಚಿಸುತ್ತುದಯಗಿರಿ—
ಶಿಖರದಲಿ ರಮಣನಿಗೆ ಕೈ ಬೀಸುತಿಹಳು.

೪

ಕಲಕಲ ನಿನಾದದಲಿ ವೈತರಣಿ ಸಾಗಿಹಳು
ಚಿಲಿಪಿಲಿಯುಲಿಯುತಲಿ ಪಕ್ಷಿವೃಂದ—
ತಂದ್ರಿಯಲಿ ಪ್ರೈಮರೆದ ಜಗಕೆ ಜಗ ಪ್ಯೆ ಕೊಸರಿ
ವಿಶ್ವ ಚೇತನದೊಸರ ಸ್ಫುರಿಸುವಂದ.

೫

ತಿಮಿರ ರಾತಿಯ ತರಿದು ಅಮರಶಾಂತಿಯ ಸೊಗದು
ಸುಮನ ಸೌರಭ್ಯವನು ಹೊತ್ತು ಬೀಸಿ
ವಿಮಲ ಕಾಸಾರದಲಿ ಚೆಲುವು ದೇವತೆಯೊಂದು
ತನುವಡೆದು ನಿಂತಿಹಳು ಮುದವ ಸೂಸಿ !

೬

ಈ ಸೃಷ್ಟಿಯಿನಿತು ಹರ್ಷೋದಧಿಯೊಳಾಳ್ದಿರಲು
ಎನ್ನ ಕೊರಡಿನ ಬರಡು ಕಳೆಯದೇಕೊ ?
ಜೀವನದ ತಿಳಿನೀರು ಬತ್ತಿ ಬರಿದಾಗಿಹುದು—
ಅನವರತ ಈ ಜೀವ ಕೊರಗ ಬೇಕೊ ??

ಮೂರು ಭಾವರೂಪಕಗಳು

ಪ್ರೊ. ಹಾ. ನಂ. ನಾಗೇಶ, ಗುಲ್ಬರ್ಗಾ

—●—

೧

ಕಿರಣ

ಜಗತ್ತಿನ ಪರಿಕ್ರಮವನ್ನೇ ಬದಲಿಸುವೆನೆಂದು ಮಿಂಚೊಂದು ಮಿಂಚಿತು.

ಅದರ ತೀಕ್ಷ್ಣ ಬೆಳಕಿಗೆ ಚರಾಚರ ಜೀವಕೋಟಿಗಳೆಲ್ಲ ಬೆಳಗಿದುವು. ಎಲ್ಲೆಲ್ಲಿಯೂ ಎಲ್ಲವುಗಳಲ್ಲಿಯೂ ಹೊಸ ಹೊಳಪು ಹೊಸ ಜೀವನ ಕಂಡುಬಂದಿತು. ಮಿಂಚಿನ 'ಅಹಂ'ಭಾವಕ್ಕೆ ಮೇರೆಯಿದ್ದಿಲ್ಲ. ಕೃತಕೃತ್ಯನಾದೆನೆಂದು ಕಿಲಕ್ಕನೆ ನಕ್ಕಿತು.

ಆದರೆ ಮರುಕ್ಷಣ ಅದರ ಅಸ್ತಿತ್ವ ಇಲ್ಲದಾಯಿತು. ಆಗಲೇ ಜೀವಕೋಟಿಯಲ್ಲಿ ತಿರುಗೊಮ್ಮೆ ಹಿಂದಿನ ಇರವು ಕಂಡು ಬಂದಿತು. ಆ ಹೊಳಪಿಲ್ಲ; ಆ ಹೊಸತಿಲ್ಲ. ತಿರುಗಿ ಅವು ಇನ್ನಷ್ಟು ಅಂಧಕಾರದಲ್ಲಿ ಲೀನವಾಗಿ ಹೋದುವು.

ಬೇರೊಂದು ಮಿಂಚು ತಾನೂ ಮೊದಲಿಗನನ್ನೆ ಅನುಸರಿಸಿ ಹೊಳೆಯಿತು. ತದನಂತರ ಮತ್ತೆನವೆಷ್ಟೋ ಹಾಗೆಯೇ ಹೊಳೆದುವು. ಆದರೆ ಅವುಗಳ ಪ್ರತಿಭೆ ಚಿರಸ್ಥಾಯಿಯಾಗಿ ನಿಲ್ಲಲಾರದಾಯಿತು. ಕ್ಷಣದ ನಶೆಯ ಮರುಕ್ಷಣ ಅವು ಜೀವಕೋಟಿಯನ್ನು ಅಪೂರ್ವ ತಿಮಿರರಾಶಿಯತ್ತ ನೂಕಿ ಮಾಯವಾಗುತ್ತಿದ್ದುವು........

ಜ್ಞಾನಕಿರಣವೊಂದು ನೋಡುವೆನೆಂದು ಕೊಂಚ ಹೊಳೆಯಿತು. ತನ್ನತ್ತ ನೂರಾರು ಪಕಳೆಗಳನ್ನು ಪುಳಕಿಸಿ ಕರೆಯಿತು. ಚಿರಸ್ಥಾಯಿಯಾದ ಬೆಳಕೊಂದು ಜಗವಗಲಕ್ಕೂ ಹರಡಿತು ಜಗದಲ್ಲಿ ಹೊಸ ಪರಿಕ್ರಮವೊಂದು ಮೊದಲಾಯಿತು. ಜಗದ ಜೀವಕೋಟಿ ಆ ಕಿರಣವನ್ನು ಅನನ್ಯವಾಗಿ ಗೌರವಿಸಿತು.

—

೨

ದೈವಗುಣ

ದಯಾನಿಧಿಯಾದ ದೇವನ ಎದುರಿಗೆ ಅಪರಾಧಿಗಳ ಸಾಲೊಂದು ಬಂದು ನಿಂತಿತು.

ಅವರ ವಿಚಾರಣೆಗೆ ಮೊದಲಾಯಿತು.

ಒಬ್ಬಾತ ತನ್ನ ಅಪರಾಧಗಳನ್ನೆಲ್ಲ ತೋಡಿಕೊಂಡ. ಕೊಲೆಗಡಿಕನಾದರೂ ಆತನಿಗೆ ಕ್ಷಮಾದಾನ ದೊರೆಯಿತು. ಮತ್ತೊಬ್ಬ ಕಪಟ ತಾನು ಮಾಡಿದ ಅಪರಾಧಗಳನ್ನೆಲ್ಲ ಹೇಳಬೇಕಾಯಿತು. ಕ್ಷಮಾಭಿಕ್ಷೆ ಆತನಿಗೂ ದೊರೆಯಿತು. ಬೇರೊಬ್ಬ ಚರಿತ್ರಹೀನನ ವೃತ್ತಾಂತವನ್ನು ಕೇಳಿದ ದಯಾಸಾಗರನು ಅವನನ್ನು ಕ್ಷಮಿಸಿಬಿಟ್ಟ. ದುರ್ಗುಣಿಯಿಂದ ದುರ್ಗುಣಿಗೂ ಕ್ಷಮಾದಾನ ದೊರೆಯಲು ತಡವಾಗಲಿಲ್ಲ.

ಸಚ್ಚರಿತನೊಬ್ಬ ಅಲ್ಲಿ ಬಂದಿದ್ದ. ಅವನ ಅಪರಾಧವಾವುದೆಂದು ವಿಚಾರಿಸಲಾಯಿತು. 'ಇತರರನ್ನು ಆತ ಇನ್ನೂ ಮನವಾರೆ ಕ್ಷಮಿಸ ಅಷ್ಟೆ—ಎಂಬುದಿಷ್ಟೆ!' ಎಂದು ತಿಳಿದು ಬಂತು.

ದಯಾಮಯ 'ಅನ್ಯರನ್ನು ಕ್ಷಮಿಸದ ಎಂತಹ ಸಚ್ಚಾರಿತ್ರ್ಯವಂತನೂ ನನ್ನಲ್ಲಿ ತಪ್ಪುಗಾರನು.' ಎಂದು ಆತನನ್ನು ಹಾಗೇ ಇರಗೊಡ ಹೇಳಿದನು.

ಕೆಲಕಾಲ ಕಳೆದಾಗ, ಅವನನ್ನು, ಅವನ ಕರ್ತವ್ಯಜ್ಞಾನಕೊಟ್ಟು ಕ್ಷಮಿಸಿ ಬಿಡಲಾಯಿತು.

—

೩

ಮಾನವಕೃತ ಮಾನವ

ತಾಯಿ ತನ್ನ ಬಸಿರಿನಲ್ಲಿ ಅವಳಿ-ಜವಳಿ ಮಕ್ಕಳನ್ನು ಹೆತ್ತಳು. 'ತನ್ನ ವೈಭವಶಾಲೀ ವಂಶಪಾರಂಪರ್ಯಕ್ಕೆ ಉತ್ತರಾಧಿಕಾರಿಗಳಾದರು. ತಾನಿನ್ನು ಸುಖನಿದ್ರೆಗೈಯಬಹುದು' ಎಂದು ಹಿಗ್ಗಿ ಆಕೆ ತನ್ನೆಳೆಯ ಕಂದಮ್ಮಗಳಿಗೆ "ಹೊಂದಿಕೊಂಡು ಬಾಳಿರಿ" ಎಂದು ಕಣ್ಮುಚ್ಚಿದಳು.

ಕಣ್ಮುಚ್ಚುವ ಮೊದಲು ಆಕೆ ಹಿರಿಯಾತನೊಡನೆ "ಮಗೂ, ನಾನಿನ್ನು ಹೊಂಟೆ ನಿನ್ನ ತಮ್ಮನನ್ನು ಜೋಕೆಯಿಂದ ನೋಡಿಕೊಂಡಿರು. ಹರಯಕ್ಕೆ ಬಂದಾಗ ಸರಿಯರ್ಧ ಸಂಪತ್ತಿನ ಸ್ವಾಮ್ಯ ಅವನಿಗಿರಲಿ, ತಿಳಿಯಿತೆ?........ಎಲ್ಲಿ, ಕೊಡು ವಚನ...." ಎಂದು ಕೈ ನೀಡಿದಳಂತೆ. ಹಿರಿಯಾತ "ಅಮ್ಮ, ನಿಶ್ಚಿಂತೆಯಿಂದಿರು." ಎಂದು ಮಾರ್ನುಡಿದು ವಚನವಿತ್ತ.

ಹರಯಕ್ಕೆ ಬಂದಾಗ ತಮ್ಮ ಮಹಾನ್ ಸಂಪತ್ತನ್ನು ಕಂಡು ಅವರ ಆಕ್ಷಿದೆ ಅಂಜಿತು. ಮತ್ತು ಕೆಲವು ದಿನಗಳು ಕಳೆದಾಗ, ಮೆಲ್ಲಮೆಲ್ಲನೆ ಸುಖ ವಿಲಾಸಗಳೇನೆಂಬುದರ ಕಡೆಗೆ ಅವರ ದಿಟ್ಟಿಹರಿಯಿತು ಇನ್ನೂ ಕೆಲವು ದಿನಗಳು ಕಳೆಯಲು, ಅವರೆದುರಿಗೆ ಆ ಮಹಾನ್ ಸಂಪತ್ತು ಮಹತ್ತಾಗಿ ಕಾಣಿಸಲಿಲ್ಲ.

(೩೧೫ ನೆಯ ಪುಟ ನೋಡಿ)

ಆ ಗಾಯ ಇನ್ನೂ ಮಾದಿಲ್ಲ!

(ಅನುವಾದಿತ ಕಥೆ)

ಟಿ. ಎಸ್. ಎಲ್. ಹಳ್ಳಿಪ್ಪನವರ ಎಮ್. ಎಸ್. ಸಿ. (ಅಗ್ರಿ)
ಒಕ್ಕಲತನದ ಕಾಲೇಜು, ಧಾರವಾಡ

●

ಯುದ್ಧವೊಂದು ನಡೆದರೆ, ದುಃಖಿತರ ಹಿಂಡು ದೇಶದಲ್ಲೆಲ್ಲ ತುಂಬುವುದು. ಇದೇ ದುಃಖಿತರ ದುಃಖ ದ್ವೇಷ-ಈರ್ಷೆಗಳಿಗಾಗಿ, ಪರಿಣಮಿಸಿ, ರಾಷ್ಟ್ರ-ರಾಷ್ಟ್ರಗಳ ನಡುವೆ ಶಾಶ್ವತವಾದ ವೈರಭಾವವನ್ನು ನೆಲೆಗೊಳಿಸುವುದು.

●

ಆ ಊರಲ್ಲಿ ಬಹುತರ ಎಲ್ಲ ಸ್ತ್ರೀಯರೂ ಕರಿಯ ಅಂಗಿಗಳನ್ನೇ ತೊಟ್ಟಿದ್ದಾರೆ. ನೋಡುವವರನ್ನು ವೃದ್ಧರನ್ನಾಗಿ ಮಾಡಿ ಬಿಡುವಷ್ಟು ಅವರ ಮುಖದಲ್ಲಿ ದೈನ್ಯತೆ ತುಂಬಿದೆ.

ಡಿಸೆಂಬರ ೧೩ನೆಯ ತಾರೀಖಿನ ದಿನ. ಆ ಊರಿನ ಐದು ನೂರು ಜನ ಸ್ತ್ರೀಯರು, ಊರಿಗೆ ಹೊಂದಿಕೊಂಡಿರುವ ದಿನ್ನೆಯ ಕಡೆಗೆ ಗಂಭೀರವಾಗಿ ನಡೆದು ಹೋಗುತ್ತಿದ್ದಾರೆ. ತಮ್ಮೊಡನೆ ತಂದ ಪುಷ್ಪಗುಚ್ಛಗಳನ್ನು ದಿನ್ನೆಯ ಮೇಲಿನ ಗೋರಿಗಳ ಮೇಲೆ ಇರಿಸುತ್ತಿದ್ದಾರೆ. ನಡುಗುವ ಕೈಗಳಿಂದ ಒಂದೊಂದೇ ಮೇಣಬತ್ತಿಯನ್ನು ಹಚ್ಚುತ್ತಿದ್ದಾರೆ. ಬಳಿಕ ಆ ಸ್ತ್ರೀಯರೆಲ್ಲರೂ ಮೊಣಕಾಲೂರಿ ಕುಳಿತು, ಗದ್ಗದ ಕಂಠದಿಂದ ಆಕಾಶದಲ್ಲಿರುವ ದೇವನೆಡೆಗೆ ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ. ಹಚ್ಚಿಟ್ಟ ಮೇಣಬತ್ತಿಯ ಪ್ರಕಾಶದಲ್ಲಿ, ಅಲ್ಲಿರುವ ಅಸಂಖ್ಯ ಬಿಳಿಯ ಕ್ರಾಸುಗಳ ಮೇಲೆ ಕೊರೆದಿರುವ "೧೩ನೆಯ ಡಿಸೆಂಬರ್ ೧೯೪೩" ಎಂಬ ಶಬ್ದಗಳು ಎದ್ದು ಕಾಣುತ್ತವೆ.

ಹತ್ತು ವರುಷಗಳಾದುವು ಆ ಭೀಕರ ಘಟನೆಗೆ: ಗ್ರೀಸ್ ದೇಶದಲ್ಲಿಯ ಒಂದು ಶಾಂತವಾದ ರಮ್ಯವಾದ ಗುಡ್ಡದ ಓರೆಯನ್ನು ತಲೆದಿಂಬನ್ನಾಗಿಸಿ ಮಲಗಿದ್ದ ಕಾಲಾವರೀಟ್ ಊರಿಗೆ ಎಚ್ಚರಿಕೆಯಾಯಿತು. ಶಾಂತ ವಾತಾವರಣದಲ್ಲಿ, ಊರಲ್ಲಿಯ ಚರ್ಚಿನ ಗಂಟೆಯ ನಿನಾದವು ಕೇಳಬರುತ್ತಿತ್ತು. ಊರಲ್ಲಿಯ ಸ್ತ್ರೀ-ಪುರುಷರೆಲ್ಲರೂ ಚರ್ಚಿನಲ್ಲಿ ಕಲೆತರು. ಕೆಲವು ಸ್ತ್ರೀಯರು ತಮ್ಮ ಚಿಕ್ಕ ಮಕ್ಕಳನ್ನು ಮನೆಗಳಲ್ಲಿಯೇ ಮಲಗಲು ಬಿಟ್ಟು ಬಂದಿದ್ದರು. ಜರ್ಮನ್ ಅಧಿಕಾರಿಯೊಬ್ಬ ದರ್ಪದಿಂದ ನುಡಿದ: "ಅವರನ್ನೂ ಕರೆದುಕೊಂಡು ಬನ್ನಿರಿ! ಹೂ! ಬೇಗ.... .."

ಎಲ್ಲ ಸ್ತ್ರೀಯರು, ಹದಿಮೂರು ವರುಷಗಳ ಕೆಳಗಿನ ಮಕ್ಕಳು, ಅಲ್ಲದೆ ಹಣ್ಣಾದ ಮುದುಕರು—ಇವರನ್ನು ಬಿಟ್ಟು, ಅಲ್ಲಿ ಕಲೆತ ಪುರುಷರೆಲ್ಲರನ್ನೂ ಒಂದು ಸಾಲಿಯಲ್ಲಿ ಸೇರಿಸಿ, ಊರಿಗೆ ಸಮೀಪದಲ್ಲಿರುವ ಆ ದಿನ್ನೆಗೆ ಸಾಗಿಸಲಾಗಿತು. ಬಳಿಕ ಚರ್ಚಿನಲ್ಲಿ ಸ್ತ್ರೀಯರನ್ನೂ ಮಕ್ಕಳ, ಮುದುಕರನ್ನೂ ಸೇರಿಸಿ, ಬಾಗಿಲನ್ನು ಭದ್ರಗೊಳಿಸಲಾಯಿತು. ಅವರೆಲ್ಲ ಆ ಸೆರೆಮನೆಯಲ್ಲಿ ವ್ಯಾಕುಲ-ಆತುರತೆಯಿಂದ ನಾಲ್ಕಾರು ತಾಸುಗಳ ವರೆಗೆ ದಾರಿಕಾಯ್ದರು. ಹಗಲು ಮೂರುವರೆ ಗಂಟೆಯ ಸಮಯವಾಗಿರಬಹುದು. ಆಗ ಚರ್ಚಿನ ಕಿಟಕಿಯಿಂದ, ಆ ದಿನ್ನೆಯ ಮೇಲೆ ಮಿಂಚು ಹೊಡೆದಂತೆ ಪ್ರಕಾಶ ಬಿದ್ದುದನ್ನು ಅವರು ಕಂಡರು. ಕೂಡಲೆ ಮಶಿನ್‌ಗನ್ನುಗಳ ಭೀಷಣವಾದ ಸಪ್ಪಳವು ಅವರ ಕಿವಿಗಳಿಗೆ ಅಪ್ಪಳಿಸತೊಡಗಿತು.

ಇದೆಲ್ಲ ಹೀಗೇಕೆ ಎಂಬುದರ ಅರಿವು ಕ್ಷಣಾರ್ಧದಲ್ಲಿಯೆ ಅವರಿಗೆ ಉಂಟಾಯಿತು. ಸುಮಾರು ಹನ್ನೆರಡುನೂರುಜನ ಪುರುಷರು ಹಾಗೂ ಬೆಳೆದ ಹುಡುಗರು, ಕ್ಷಣದಲ್ಲಿಯೆ ದಿನ್ನೆಯ ಓರೆಯ ಹಸಿರು ಬಯಲಲ್ಲಿ, ಗುಂಪುಗುಂಪಾಗಿ ಕುಸಿದು ಬಿದ್ದರು. ಅನೇಕ ಜನರ ಜೀವವು ಪೂರ್ತಿಯಾಗಿ ಹೋಗಿರಲಿಲ್ಲ. ರಕ್ತ-ನೆಣಗಳ ಹಸಿಯಲ್ಲಿ ಬಿದ್ದ ಆ ಮಾನವ ರಾಶಿಯಲ್ಲಿ, ಯಾರ ಜೀವವುಳಿದಿದೆಯೆಂಬುದನ್ನು ನೋಡತೊಡಗಿದರು; ಸಂಶಯ ಬಂದವರನ್ನು ಆ ಜರ್ಮನ್ ಸೈನಿಕರು ಬೂಟುಗಾಲಿನಿಂದ ಒದ್ದೊದ್ದು ಮನವರಿಕೆ ಮಾಡಿಕೊಳ್ಳುತ್ತಿದ್ದರು. ಅಪ್ಪಿತಪ್ಪಿ ಯಾರಾದರೂ ಜೀವದಿಂದಿದ್ದುದು ತಿಳಿದರೆ, ಅವರನ್ನು ಎಚ್ಚರಿಕೆಯಿಂದ ಗುಂಡಿಕ್ಕಿ ಕೊಂದು ಹಾಕಿದರು.

ಇಂಥದರಲ್ಲಿಯೂ ಐದು ಜನರು ಬದುಕಿ ಉಳಿದರು. ಕೆಲವು ವೇಳೆ ಹೀಗೆಯೇ ಕಳೆಯಿತು. ಕಣ್ಣಿನಲ್ಲಿಯೆ ಜೀವ ಹಿಡಿದುಕೊಂಡು, ಚರ್ಚಿನೊಳಗಿಂದಲೆ ಹೊರಗಿನದನ್ನು ನೋಡುವ ಆ ಬಡ ಜೀವಿಗಳಿಗೆ, ಅವರ ಹಳ್ಳಿಯು ಪ್ರಕಾಶದಿಂದ ತುಂಬಿದ್ದಾಗಿ ಕಾಣಲಾರಂಭಿಸಿತು.

ಈಗ ಮಾತ್ರ ಅವರ ಸಹನೆ ಮೀರಿತು. ಅವರೆಲ್ಲರೂ ಚರ್ಚಿನ ಬಾಗಿಲನ್ನು ಬಡಿಯತೊಡಗಿದರು. ಆದರೆ ಆ ಭದ್ರವಾದ ಬಾಗಿಲು ಜರ್ಮನ್ ಸೈನಿಕರ ನಿಷ್ಠುರತೆಯಿಂದ ಅಚಲವಾಗಿ ನಿಂತಿತ್ತು.

ಸ್ತ್ರೀಯರ ಆ ಕರುಣಾಜನಕವಾದ ಕೂಗನ್ನೂ ಮಕ್ಕಳ ಆಕ್ರೋಶವನ್ನೂ ಕೇಳಿ, ಬಾಗಿಲಲ್ಲಿ ಪಹರೆ ಮಾಡುವ ಒಬ್ಬ ಜರ್ಮನ್ ಸೈನಿಕನಲ್ಲಿ, ಹೇಗೋ ಕರುಣೆಯ ಛಾಯೆಯೊಂದು ಮೂಡಿತು. ಅಂತೆಯೆ ಅವನು ಚರ್ಚಿನ ಬಾಗಿಲನ್ನು ತೆರೆದ.

ಬಾಗಿಲನ್ನು ತೆರೆಯುತ್ತಲೇ ಭಯಭೀತರೂ ವ್ಯಾಕುಲಚಿತ್ತರೂ ಆದ ಆ ಸ್ತ್ರೀಯರೂ ಮುದುಕರೂ ಗುಂಪುಗುಂಪಾಗಿ ಹೊರಬಿದ್ದರು. ಉನ್ಮತ್ತರಾದ ಇಬ್ಬರು ಮೂವರು ಜರ್ಮನ್ ಸೈನಿಕರು, ಕೈಯಲ್ಲಿ ಮಶೀನ್‌ಗನ್ನುಗಳನ್ನು ಹಿಡಿದುಕೊಂಡು ಚರ್ಚಿನ ಪಾವಟಿಗೆಗಳ ಮೇಲೆ ಕುಣಿಯುತ್ತಿದ್ದರು; ಅಶ್ಲೀಲವಾದ ಹಾಡುಗಳನ್ನು ಹಾಡುತ್ತ ಹೆಂಗಸರೆಡೆಗೆ ದುರದುರನೆ ನೋಡುತ್ತಿದ್ದರು.

ಆದರೆ ಆ ಸ್ತ್ರೀಯರಿಗೆ ಇದೆಲ್ಲದರ ಕಡೆಗೆ ಲಕ್ಷ್ಯವೇ ಇರಲಿಲ್ಲ. ಊರಲ್ಲಿಯ ಪ್ರತಿಯೊಂದು ಮನೆಗೂ ಕೊಳ್ಳಿ ಹಚ್ಚಲಾಗಿತ್ತು. ಅಲ್ಲಿಗೆ ಹೋಗುವುದರಲ್ಲಿ ಏನೂ ಅರ್ಥವಿರಲಿಲ್ಲ. ಆಗ ಆ ಸ್ತ್ರೀಯರಲ್ಲಿ ಒಬ್ಬರಿಗೂ ಮಕ್ಕಳ ಪರಿವೆ ಇರಲಿಲ್ಲ. ಅವರೆಲ್ಲರೂ ಭ್ರಮಿಷ್ಟರಂತೆ ಆ ದಿನ್ನೆಯ ಕಡೆಗೆ ಓಡಿದರು. ಅಷ್ಟರಲ್ಲಿಯೇ ಮುದುಕಿಯೊಬ್ಬಳು "ಅಯ್ಯೋ, ಈ ಕಡೆಗೆ ಬನ್ನಿರಿ! ಈ ಕಡೆಗೆ!!" ಎಂಬು ಕೂಗಿದಳು.

ಆಗ ಅವರೆಲ್ಲರೂ ರಕ್ತದ ಹೊನಲಿನಲ್ಲಿ ಕಾಲುಗಳನ್ನು ಮುಳುಗಿಸಿಕೊಂಡು, ದಿನ್ನೆಯ ವರೆಗೆ ನಡೆದುಕೊಂಡೇ ಹೋದರು; ಆ ಪ್ರೇತಗಳ ಸಮೂಹವನ್ನು ನೋಡಿ ಒಬ್ಬರ ಬಾಯಿಂದಲೂ ಮಾತುಗಳು ಹೊರಡಲಿಲ್ಲ. ಪ್ರತಿಯೊಬ್ಬರ ಕಣ್ಣುಗಳೂ ತಮ್ಮ ತಮ್ಮ ತಂದೆ ಮಗ, ಪತಿ—ಇವರನ್ನು ಹುಡುಕಲು ತೊಡಗಿದುವು. ಅವರೆಲ್ಲರಿಗೂ ಕಣ್ಣೀರು ಅಟ್ಟಿಸಿ ಹೋಗಿದ್ದಿತು. ರಾತ್ರಿ ಕಳೆದು ಬೆಳಗಿನ ಮೊದಲ ಪ್ರಹರ ಮೂಡಿತು. ಪೂರ್ವದಿಶೆಯಲ್ಲಿ, ಬೆಳಗುವ ಹೊಂಬಣ್ಣದ ಪ್ರಕಾಶವು ಕಾಣಲಾರಂಭಿಸಿತು. ಆಗ ಪ್ರತಿಯೊಬ್ಬರೂ ತಮ್ಮತಮ್ಮವರಸಲುವಾಗಿ ಕೈಯಿಂದಲೇ ಭೂಮಿಯನ್ನು ಕೆದರಿ, ಒಂದೊಂದು ತಗ್ಗನ್ನು ತೆಗೆದರು. ಮುಂಜಾನೆಯ ವರೆಗೆಂದರೆ, ಆ ದಿನ್ನೆಯ ಮೇಲೆ ಹನ್ನೆರಡುನೂರು ಗೋರಿಗಳು ತಯಾರಾದುವು. ಕಲ್ಲಿನಂತೆ ಮನಸ್ಸು ಗಟ್ಟಿಮಾಡಿ, ಅವರೆಲ್ಲರೂ ಶವಗಳಿಗೆ ಮಣ್ಣನ್ನು ಕೊಟ್ಟು, ತಿರುಗಿ ಬಂದರು. ಆಗ ಊರನ್ನು ತಿಂದು ತೇಗಿ ಶಾಂತವಾಗಲು ಬಂದಿರುವ ಬೆಂಕಿ, ಅವರನ್ನು ಸ್ವಾಗತಿಸಿತು. ಚರ್ಚೊಂದನ್ನು ಬಿಟ್ಟು ಊರಲ್ಲಿಯ ಎಲ್ಲ ಕಟ್ಟಡಗಳೂ ಸುಟ್ಟು ಭಸ್ಮವಾಗಿದ್ದುವು. ಇಷ್ಟೆಲ್ಲ ಅನಾಹುತಕ್ಕೆ ಕಾರಣರಾದ ಜರ್ಮನರಲ್ಲಿ, ಒಬ್ಬ ಸೈನಿಕನೂ ಆ ಮೇಲೆ ಆ ಊರಲ್ಲಿರಲಿಲ್ಲ. ಆ ಭಯಾನಕ ಶಾಂತತೆಯೇ ಇನ್ನೂ ಆ ಕಾಲಾವರೀಟ್ ಊರಲ್ಲಿ ನೆಲೆನಿಂತಿದೆ. ಊರಿಗೆ ಅಂಟಿದ ಹೊಗೆಯು ಇನ್ನೂ ಹೋಗಿಲ್ಲ. ಈಗ ಎಲ್ಲಾದರೊಂದು ಲಗ್ನವಾಗುತ್ತದೆ; ಸಮಾರಂಭಗಳು ಜರುಗುತ್ತವೆ; ಆದರೆ ಅವುಗಳಲ್ಲಿ ಭಾಗವಹಿಸಲು ಬರುವ ಸ್ತ್ರೀಯರ ಉಡುಪುಗಳು, ಮೈಲಿಗೆ ಛಾಯೆಯ ಕರಿಯ ಬಣ್ಣದುವೇ ಆಗಿರುತ್ತವೆ.

ಯಾರೊಬ್ಬ ಜರ್ಮನ್ ಪುರುಷನನ್ನು ಇಲ್ಲವೆ ಸ್ತ್ರೀಯನ್ನು ಕಂಡರೂ, ಕಾಲಾವರೀಟಿನಲ್ಲಿಯ ಜನರು ವಿಹ್ವಲರಾಗುತ್ತಾರೆ. 'ಜರ್ಮನ್' ಎಂಬ ಶಬ್ದವು ಕೂಡ ಅವರಿಗೆ ಭೀತಿಪ್ರದವಾಗಿದೆ.

ಐದಾರು ತಿಂಗಳ ಹಿಂದಿನ ಮಾತು: ಗ್ರೀಸ್ ದೇಶದಲ್ಲಿಯ ಪೆಲೊ ಪೊನೋಟಿಯನ್ ಭಾಗಕ್ಕೆ ಹೊಂದಿಕೊಂಡಿರುವ ನಿಸರ್ಗರಮ್ಯ ದರಿಗಳಲ್ಲಿ ಅಲೆದಾಡುತ್ತ, ಕಾಲಾವರೀಟಿನ ಶಾಂತ ವಾತಾವರಣದಲ್ಲಿ ಹಳೆಯ ಮೋಟಾರೊಂದು ಬಂದು ನಿಂತಿತು. ಪಕ್ಕದ ಮನೆಯಲ್ಲಿಯ ಹಣ್ಣಾದ ಮುದುಕಿಯೊಬ್ಬಳು, ಆ ಮೋಟಾರಿನ ಕಡೆಗೆ ನೋಡಲಾರಂಭಿಸಿದಳು. ಮೋಟಾರಿನಿಂದಿಳಿಯುತ್ತಿದ್ದ ಪತಿ-ಪತ್ನಿಯರನ್ನು ಕಂಡು "ಅವರೇ ಘಾತುಕರು, ಅವರದೆ ಜಾತಿಯವ!" ಎಂದು ಕೈಗಳನ್ನು ಮೇಲಕ್ಕೆತ್ತಿ ಸಂತಾಪದಿಂದ "ಇವನಿಗೆ ಈ ಊರಲ್ಲಿ ಕಾಲಿಡಲು ಕೊಡಬೇಡಿರಿ. ಜರ್ಮನ್ನನಿವನು!" ಎಂದು ಕೂಗಿಕೊಳ್ಳಹತ್ತಿದಳು.

ಮಕ್ಕಳ ಸದೃಢತೆಗಾಗಿ

"ಬಗನ ಬಾಲಾಮೃತ"

ಹಲ್ಲು ಬರುವಾಗ

"ಎಸ್ಪನ್ ಗ್ರಾಇಫ್" ಹೀಲರ್

ಜಂತು ಆದರೆ

"ನರ್ವ್ ಆಯಿಲ್"

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ಔಷಧಗಳು.

The National Pharmacies &
Pharmaceuticals Ltd, Dharwar.

ಆದರೆ ಆ ಊರಿನ ಮೇಯರನಾದ ಪನೋಜಾರ್ಜ್‌ಕೊಪ್ರೊಲಿಸ್ ಎಂಬವನು ಹೆಚ್ಚು ತಿಳುವಳಿಕೆಯ ಮನುಷ್ಯನಾಗಿದ್ದ. ಅವನು ಆ ದಂಪತಿಗಳಿಗೆ ಸ್ವಾಗತ ನೀಡಿದ. ತಮ್ಮ ದೇಶಬಾಂಧವರ ಪಾಶವೀ ಅತ್ಯಾಚಾರದಿಂದಾದ ಹಾನಿಯನ್ನು ಕೆಲಮಟ್ಟಿಗಾದರೂ ತುಂಬಿಕೊಡಬೇಕೆಂದು ಆ ಪತಿ-ಪತ್ನಿಯರ ಇಚ್ಛೆಯಿತ್ತು. ಎಂತಲೇ ಆ ದಂಪತಿಗಳು ಊರವರೆಲ್ಲರ ಸಭೆಯೊಂದನ್ನು ಕೂಡಿಸಿದರು. ಮನಸ್ಸಿಗೆ ಬೇಡವೆನಿಸಿದರೂ, ಕರಿಯ ಬಟ್ಟೆಗಳನ್ನು ಉಟ್ಟುಕೊಂಡ ಎಷ್ಟೋ ಸ್ತ್ರೀಯರು ಆ ಸಭೆಗೆ ಬಂದಿದ್ದರು. ಅವರು ಸಭೆಯಲ್ಲಿ ಏನೊಂದೂ ಗೊಂದಲ ಮಾಡಲಿಲ್ಲ. ಒಂದು ಶಬ್ದವನ್ನೂ ಉಚ್ಚರಿಸಲಿಲ್ಲ. ಆ ಪತಿ-ಪತ್ನಿಯರ ದೃಷ್ಟಿ ಆ ಸ್ತ್ರೀಯರ ದೃಷ್ಟಿಯೊಡನೆ ಒಂದಾಗುತ್ತಿದ್ದಾಗಲೆಲ್ಲ, ಆ ಸ್ತ್ರೀಯರ ಕಣ್ಣುಗಳಿಂದ ತಮ್ಮ ಮೇಲೆ ಅಗ್ನಿವರ್ಷವೇ ಆಗುತ್ತಿದ್ದಂತೆ ಆ ದಂಪತಿಗಳಿಗೆ ಭಾಸವಾಗುತ್ತಿತ್ತು.

ಆ ಕಣ್ಣುಗಳಲ್ಲಿಯ ಬೆಂಕಿಯಲ್ಲಿ, ಕಳೆದ ಮಹಾಯುದ್ಧದಲ್ಲಿ ಜರುಗಿದ ಭೀಷಣ ಘಟನೆಯೊಂದು ಉರಿಯುತ್ತಿತ್ತು.

× × × ×

ಮಹಾಯುದ್ಧವು ಭರದಿಂದ ಸಾಗಿತ್ತು. ಗ್ರೀಸ್ ದೇಶದಲ್ಲಿ ಜರ್ಮನರ ರಾಜ್ಯ ನಡೆದಿತ್ತು. ಅವರ ಅತ್ಯಾಚಾರಕ್ಕೆ ತಲೆಬೇಸರುಗೊಂಡ ಕೆಲವು ದೇಶಭಕ್ತರು, ಭೂಮಿಗತರಾಗಿ ಚಳವಳಿಯನ್ನಾರಂಭಿಸಿದರು. ಗ್ರೀಸ್‌ದೇಶದ ಶಾಂತ ಮತ್ತು ರಮಣೀಯವಾದ ಗುಡ್ಡಗಳ ಓವರಿಗಳಿಂದಾದ ತೊಟ್ಟಿಲಿನಲ್ಲಿ ವಿರಾಮ ಹೊಂದುತ್ತಿದ್ದ ಕಾಲಾವರೀಟ್ ಗ್ರಾಮದ ಮೇಲೆ, ಒಂದು ರಾತ್ರಿ ಆಕಸ್ಮಿಕವಾಗಿ ಭೂಮಿಗತ ಸೈನಿಕರು ಮುತ್ತಿಗೆ ಹಾಕಿ, ಅಲ್ಲಿದ್ದ ಎಂಬತ್ತು ಜನ ಜರ್ಮನ್ ಸೈನಿಕರನ್ನು ಕೈದು ಮಾಡಿ, ಸಮೀಪದ ಆ ದಿನ್ನೆಗೆ ಕರೆದುಕೊಂಡೊಯ್ದರು. ಆ ಘರ್ಷಣೆಯಲ್ಲಿ ಗಾಯಗೊಂಡ ಮೂವರು ಜರ್ಮನ್ ಸೈನಿಕರನ್ನು, ಗ್ರೀಸದ ಸ್ವತಂತ್ರ ಸೈನಿಕರು ದಾರಿಯಲ್ಲಿಯೆ ಬಿಟ್ಟುಕೊಟ್ಟರು. ಊರಲ್ಲಿಯ ಪರೋಪಕಾರಿ ಜನರಿಗೆ ಆ ಗಾಯಾಳುಗಳ ಬಗ್ಗೆ ಕರುಣೆ ಹುಟ್ಟಿತು. ಡಾಕ್ಟರರು ಅವರ ಗಾಯಗಳನ್ನು ಕಟ್ಟಿದರು. ಊರವರು ಶತ್ರುತ್ವವನ್ನು ಮರೆತು, ಅವರಿಗೆ ಎಲ್ಲ ಸಹಾಯ ನೀಡಿದರು. ಆದರೆ ಯುದ್ಧಕಾಲದಲ್ಲಿ ಈ ತರದ ಮನುಷ್ಯತ್ವ ಹೇಗೆ ನಡೆದೀತು? ಮತ್ತೆ ಆ ಭೂಮಿಗತ ಸೈನಿಕರು ಮುತ್ತಿಗೆ ಹಾಕಿ, ಗಾಯಗೊಂಡ ಆ ಮೂವರು ಸೈನಿಕರನ್ನೂ ಎಳದರಿಸಿ, ಬಾವಿಯೊಂದರಲ್ಲಿ ಚೆಲ್ಲಿಕೊಟ್ಟು ಹೋದರು.

ಇದರ ಪರಿಣಾಮ ಚೆನ್ನಾಗದೆಂದು ಕಾಲಾವರೀಟಿನವರಿಗೆ ಗಟ್ಟಿಯಾಗಿ ಗೊತ್ತಾಗಿತ್ತು. ಆದರೆ ಅವರು ಯಾವ ಮರಣಕ್ಕೆ ಅಂಜುತ್ತಿದ್ದರೋ, ಆ ಮರಣವು ಮತ್ತೆ ಅವರಿಗೆ ತಪ್ಪಲಿಲ್ಲ. ಜರ್ಮನರಿಗೆ ಅಕಸ್ಮಾತ್ತಾಗಿ ಘಟಿಸಿದ ಈ ಸಂಗತಿಯನ್ನು ತಿಳಿಸಲೋಸುಗ, ಗ್ರೀಸ್‌ಗುಪ್ತ ಸೈನಿಕರಿಂದ ಯುಕ್ತಿಯಿಂದ ಪಾರಾಗಿಹೋದ ಗಾಯಾಳುಗಳು ಇದ್ದೇ ಇದ್ದರು. ಅವರು ತಮ್ಮ ಜರ್ಮನ್ ಅಧಿಕಾರಿಗೆ ಎಲ್ಲವನ್ನೂ ಹೇಳಿದರು. ಜರ್ಮನ್ ಸೈನಿಕರನ್ನು ಊರ ಹೊರಗಿನ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ **ನೀಲಿ** ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ **ಜೀವಿನಿ** ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ

ಅಜೀರ್ಣ ವಿಕಾರಗಳಿಗೆ **ಪಂಚವಟಿ** ರಾಮಬಾಣ

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರಖಾನೆ.

ಆ ದಿನ್ನೆಯ ವರೆಗೆ ದರದರನೆ ಎಳೆಯುತ್ತ ಒಯ್ಯಲಾಗಿತ್ತು; ಅಲ್ಲಿ ಅವರನ್ನು ಬತ್ತಲೆ ಮಾಡಿ ಚಾಟಗಳಿಂದ ಏಟುಗಳನ್ನು ಹಾಕಿ, ಬಳಿಕ ದಿನ್ನೆಯ ಎತ್ತರವಾದ ತುದಿಯ ಮೇಲಿಂದ ಅವರನ್ನು ಕೆಳಗೆ ದೂಡಲಾಗಿತ್ತು. ಇದೆಲ್ಲವನ್ನೂ ಕೇಳಿ ಸ್ವಸ್ಥವಾಗಿ ಕುಳಿತುಕೊಳ್ಳುವ ಸ್ವಭಾವದವರೇ ಜರ್ಮನರು? ಅವರೆಲ್ಲ ಹುಟ್ಟುಸೈನಿಕರು. ಕೂಡಲೆ ನಾಝಿಗಳ ಪಾಶವೀ ಚಕ್ರವು ತಿರುಗಲಾರಂಭಿಸಿತು. ಇದರ ಪರಿಣಾಮವಾಗಿಯೇ ಆ ದಿನ ಆ ಭೀಕರ ಕೊಲೆಯು ಘಟಿಸಿತು. ಅಂದು ಜರ್ಮನ್ ಸೈನ್ಯದ ಅಧಿಕಾರಿಯೊಬ್ಬ, ಕಾಲಾವರೀಟಿನವರೆಲ್ಲರನ್ನೂ ಗಂಟೆಬಾರಿಸಿ ಚರ್ಚಿನಲ್ಲಿ ಕಲೆಯಲು ಹೇಳಬೇಕೆಂದು ಆಜ್ಞಾಪಿಸಿದ. ... ... ಜರ್ಮನರ ಸೇಡಿನ ಬೆಂಕಿಯಲ್ಲಿ ಕಾಲಾವರೀಟ್ ಗ್ರಾಮದ ಎಲ್ಲ ಮನೆಗಳ ಹಾಗೂ ಹನ್ನೆರಡುನೂರು ಪುರುಷರ ಹೋಳಿ ನಡೆದುಬಿಟ್ಟಿತ್ತು. ಇದೆಲ್ಲ ಭೀಕರವಾದ ಸಂಗತಿಯು, ಇಂದಿನ ಸಭೆಯಲ್ಲಿ ನೆರೆದ ಈ ಸ್ತ್ರೀಯರ ಕಣ್ಣುಗಳಲ್ಲಿ ಉರಿಯತೊಡಗಿತ್ತು.

ಅಂದು ಆ ಘಟನೆಯಾದ ಬಳಿಕ, ಮೂರು ನಾಲ್ಕು ತಿಂಗಳವರೆಗೆ ಗ್ರೀಸ್‌ದೇಶದ ಉಳಿದ ಯಾವ ಜನರಿಗೂ ಈ ದುರ್ಘಟನೆಯ ಸುದ್ದಿಯು ಹತ್ತಿರಲಿಲ್ಲ. ಯುದ್ಧದಲ್ಲಿ ಹೋರಾಡಿ ಪುನಃ ಸ್ವತಂತ್ರವಾದ ಬಳಿಕ, ಗ್ರೀಸ್ ಸರಕಾರವು, ಕಾಲಾವರೀಟ್ ಊರಿಗೆ ಸಹಾಯ ನೀಡಲಾರಂಭಿಸಿತು. ಅಮೇರಿಕೆಯ ಮಾರ್ಶಲ್ ಯೋಜನೆಯಿಂದಲೂ ಸಹಾಯ ದೊರೆಯಿತು. ಸಾವಕಾಶವಾಗಿ ಆ ಹಳ್ಳಿಯ ಜೀವನವು

ತಿರುಗಿ ಅರಳಲಾರಂಭಿಸಿತು. ಅಕ್ಕಪಕ್ಕದ ಹಳ್ಳಿಯಲ್ಲಿದ್ದ ಕುಟುಂಬಗಳು, ಕಾಲಾವರೀಟದಲ್ಲಿ ಬಂದು ನೆಲಸಲಾರಂಭಿಸಿದುವು. ಆದರೆ ಕಾಲಾವರೀಟ್ ಗ್ರಾಮದ ಅನಿಷ್ಟವು ಇನ್ನೂ ತೀರಿರಲಿಲ್ಲ. ೧೯೪೮ರಲ್ಲಿ ಗ್ರೀಕಿನಲ್ಲಿ ಕಮ್ಯುನಿಸ್ಟರ ಕೈ ಮೇಲಾಯಿತು. ಈ ಗೊಂದಲದಲ್ಲಿ ಹಾಗೂ ಕ್ರಾಂತಿಯಲ್ಲಿ ಕಾಲಾವರೀಟವು ಮೂರು ನಾಲ್ಕು ತಿಂಗಳುಗಳ ವರೆಗೆ ಪುನಃ ಹುರುಪಳಿಸಿತು.

ಕಳೆದ ವರುಷ ತಾನೇ ಎರ್ಗಾರ್ಡ್ ಶ್ರಿವರ್ ಎಂಬ ಹೆಸರಿನ ಇತಿಹಾಸಕಾರಳೊಬ್ಬಳು ಕಾಲಾವರೀಟಕ್ಕೆ ಭೆಟ್ಟಿಕೊಡುವ ವರೆಗೆ, ಜರ್ಮನರಿಗೆ ತಮ್ಮ ಜನರು ಮಾಡಿದ ಅತ್ಯಾಚಾರದ ಅರಿವೇ ಆಗಿರಲಿಲ್ಲ. ಶ್ರೀಮತಿ ಶ್ರಿವರ್‌ಳು ಎರಡನೆಯ ಮಹಾಯುದ್ಧದ ಇತಿಹಾಸ ಬರೆಯಬೇಕೆಂದಿದ್ದಳು. ಅದಕ್ಕಾಗಿಯೇ ಅವಳು ಕಾಲಾವರೀಟವನ್ನು ಸಂದರ್ಶಿಸಿದಳು. ಅನೇಕರು ಅವಳಿಗೆ 'ನೀನು ಜರ್ಮನಳಿರುವಿ; ಅಲ್ಲಿ ಹೋಗಬೇಡ. ಹೋದರೆ ನೀನು ಗಂಡಾಂತರದಲ್ಲಿ ಸಿಕ್ಕುವೆ.' ಎಂದು ಹೇಳಿದರೂ, ಅವಳು ಕೇಳಲಿಲ್ಲ. ಅಲ್ಲಿಗೆ ಹೋದಳು. "ಅಲ್ಲಿಯ ಸ್ತ್ರೀಯರು ತಮ್ಮ ಗಾಢ ಅತೀವ ದುಃಖವನ್ನು, ಅತ್ಯಂತ ಧೀರತನದಿಂದ ಸಹನೆ ಮಾಡಿಕೊಳ್ಳುತ್ತಿದ್ದಾರೆ. ಅವರ ಮುಖದಲ್ಲಿ ಯಾವ ತರದ ಸೇಡಿನ ಕುರುಹು ನನಗೆ ಕಾಣಬರಲಿಲ್ಲ. ಅವರ ಧೈರ್ಯದಿಂದ ತುಂಬಿದ ಕರುಣಾಜನಕವಾದ ಮುಖಗಳನ್ನು ನೋಡಿ, ನನ್ನ ಶರೀರದಲ್ಲಿಯ ರಕ್ತ ಹೆಪ್ಪುಗಟ್ಟಿದೆ' ಎಂದು ಶ್ರೀಮತಿ ಶ್ರಿವರ್‌ಳ ಉದ್ಗಾರ ತೆಗೆದಳು. ಆ ಭೀಕರ ಕೊಲೆಯಲ್ಲಿ ವಿಧವೆಯಾದ ಸ್ತ್ರೀಯೊಬ್ಬಳೊಡನೆ ಮಾತನಾಡುತ್ತಿರುವಾಗ [illegible] ಆ ಸ್ತ್ರೀಯು ಒಂದು [illegible]" ಕಂಡಕಂತೆ ಶ್ರಿವರ್‌ಳಿಗೆ ಜರ್ಮನಿಗೆ ಹಿಂತಿರುಗುತ್ತಲೇ ಅವಳು ಪ್ರಚಾರಕಾರ್ಯವನ್ನಾರಂಭಿಸಿದಳು. ಈ ಕೊಲೆಯ ಕಲಂಕವನ್ನು ದೂರಕರಿಸುವುದು ಒಂದು ಸ್ತ್ರೀಯಿಂದ ಮಾತ್ರ ಅಸಾಧ್ಯವೆಂದು ಅವಳಿಗೆ ಮನವರಿಕೆಯಾಯಿತು. "ಇದು ಸ್ತ್ರೀಯರ ಕರ್ತವ್ಯವಾಗಿದೆ. ಆ ರಕ್ತಭೂಮಿಯನ್ನು ರಕ್ತದಿಂದ ರಂಜಿಸಿದ [illegible] ಗೆ ಈ ಕೇಸ [illegible] ಹೋಗಕೂಡದು' ಎಂದು ಪ್ರಚಾರವನ್ನು [illegible] ಆರಂಭಮಾಡಿದಳು.

ಆದರೆ ಯಾವ [illegible] ಶ್ರಿವರ್‌ಳು [illegible] ಸಮಾನರೆಂದು ತಿಳಿಯುತ್ತಿದ್ದಳೋ, ಅಂಥವರಿಗೆ, ಹೃದಯ ಪರಿವರ್ತನೆಯಾಗಿ, ತಮ್ಮ ದೇಶಬಾಂಧವರ [illegible] ಕೃತ್ಯದ ಅರಿವಾಗಹತ್ತಿತು. [illegible] ಅವಳ ಈ ಕೆಲಸವನ್ನು ಸಾಂಗಗೊಳಿಸಲು [illegible] ಹಣಗಳಾರಂಭಿಸಿತು.

ಯಾರ [illegible] ಗಳನ್ನು ನೋಡಿ ಕಾಲಾವರೀಟದಲ್ಲಿಯ ಸ್ತ್ರೀ[illegible]ರೋ, ಆ ಜೋಡಿಯೆಂದರೆ, ಅಥೇನ್ಸಿನಲ್ಲಿರುವ [illegible] ವಕೀಲನ [illegible] ಭಾರಿ ಮತ್ತು ಅವನ [illegible] ಹಾಗೂ [illegible] ಕಾಲಾವರೀಟ್ ಊರಿಗೆ [illegible]. ಈಗಲ್ಲಿ ಅನೇಕ [illegible].

ಹಳ್ಳಿ–ಪಟ್ಟಣಗಳಲ್ಲಿ, ಬೀದಿ–ಬೀದಿಗಳಲ್ಲಿ
ಪ್ರಚಾರವಾಗಬೇಕಾಗಿದ್ದರೆ

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ತರಹದ
ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಅ್ಯಂಡ್ ಪೇಂಟಿಂಗ್ ವರ್ಕ್ಸ
ಗಾಂಧಿಚೌಕ, ಧಾರವಾಡ

ಕೆಲವು ದಿನಗಳಲ್ಲಿಯೇ ಗ್ರೀಕರವರ ಆಡಳಿತದಲ್ಲಿ ಕಾಲಾವರೀಟ್ ಊರು ಪುನಃ ಊರ್ಜಿತಾವಸ್ಥೆಯನ್ನು ಹೊಂದಬಹುದು. ಆದರೆ ಎಲ್ಲಿಯ ವರೆಗೆ ಆ ಗ್ರಾಮದ ಪರಿಸರದಲ್ಲಿರುವ [illegible] ನೂರು ಕ್ರಾಸುಗಳನ್ನು ಕಟ್ಟಿ–ಗೋರಿಗಳಿಂದ ಕೂಡಿದ—[illegible] ಇರುವುದೋ, ಅಲ್ಲಿಯ ವರೆಗೂ, ಎರಡನೆಯ ಮಹಾಯುದ್ಧದ ಭೀಷಣತೆ ಹಾಗೂ ಮಾನವತ ಇವೆರಡೂ ಕ್ರಾಸಿನ [illegible] ತಮ್ಮ ತಲೆಯನ್ನೆತ್ತಿ ತೋರಿಸುವವು. ಊರು ಊರ್ಜಿತಾವಸ್ಥೆ ಹೊಂದಬಹುದು; ಆದರೆ ಕರಿಯ ವಸ್ತ್ರಗಳನ್ನು ಧರಿಸುತ್ತಿರುವ ಆ ದುಃಖಿ ವಿಧವೆಯರನ್ನು ಯಾರು ಸಂತಯಿಸಬಲ್ಲರು ?

ಯಾವ ದಿವಸ ಪೂರ್ವ ಜರ್ಮನಿಯ ಮಹಿಳಾ ಪ್ರತಿನಿಧಿಗಳು ಕಾಲಾವರೀಟ್ ಊರಿಗೆ ಬಂದ [illegible] ಅಲ್ಲಿಯ [illegible] ಹೊಸ ಜೀವನದ ಆಶ್ವಾಸನವನ್ನಿತ್ತರೋ, ಆ ದಿವಸ ಕೂಡ [illegible] ಸ್ತ್ರೀಯರ ಮೈಮೇಲೆ ಕರಿಯ ವಸ್ತ್ರಗಳಿದ್ದುವು. [illegible] ಸಭೆ ನಡೆದಿತ್ತು. ಸಾವಕಾಶವಾಗಿ ಕತ್ತಲೆಯು ಆವರಿಸತೊಡಗಿತು. [illegible] ಮತ್ತೊಬ್ಬ ಸ್ತ್ರೀಯು [illegible] ಬೀಳಹತ್ತಿದಳು. ಎಲ್ಲ ಸ್ತ್ರೀಯರೂ [illegible] ರಾಗಿಯೋ ಗ್ರಾಮದ ಹತ್ತಿರವಿರುವ ಆ ದಿನ್ನೆಯ ಕಡೆಗೆ ನಡೆದರು. [illegible] ಸಮಯದಲ್ಲಿ ಆ ದಿನ್ನೆಯ ಮೇಲೆ [illegible] ನೂರು ಮೇಣಬತ್ತಿಗಳು ಮಿನುಗತೊಡಗಿದುವು. ಅವರೆಲ್ಲ [illegible] ಮೇಲೆ ನಿಂತು, ಹತ್ತು ವರುಷಗಳ [illegible] ಆ ಭೀಷಣ ಕೊಲೆಯ ರಾತ್ರಿಯನ್ನು ನೆನೆಯುತ್ತ ತಮ್ಮ ತಮ್ಮ ಪ್ರಿಯರನ್ನು [illegible] ಶ್ರದ್ಧಾಂಜಲಿಯನ್ನೀಯುತ್ತಿದ್ದರು. [illegible] ಆ ಭೀಷಣ [illegible] ವರ್ಷದಿನ. [illegible] ಡಿಸೆಂಬರ್ [illegible] ಆಗಿತ್ತು.

[illegible] ಮಾಡಬೇಕಾದುದು [illegible] ನಾವು ! [illegible] ಎಂದು [illegible]
[illegible]
— [illegible]

ಕ್ಷಯರೋಗ ವಿಚಾರ

(ಸ್ವಾನುಭವ ಕಥನ)

ಶ್ರೀ. ಟಿ. ವಿ. ಪರದೇಶಿ, ಮುಂಬಯಿ

●

ಕ್ಷಯರೋಗಿಗಳ ಆಹಾರ-ವಿಹಾರ ಎಂತಹದಿರಬೇಕು? ಚಿಕಿತ್ಸೆಗಳ ವಿಧಾನಗಳೆಂತಹವು. ಕೃತಕ ವಾತವಕ್ಷ ಚಿಕಿತ್ಸೆಯ ಪವಾಡಗಳೇನು? ರೋಗವು ವಾಸಿಯಾದ ನಂತರ ರೋಗಿಗಳು ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳು ಯಾವುವು? — ಇವೆಲ್ಲ ವಿಷಯಗಳು ಇಲ್ಲಿವೆ.

●

(೧೭) **ಕ್ಷಯರೋಗದ ಚಿಕಿತ್ಸೆ:**— ಕ್ಷಯರೋಗದ ಚಿಕಿತ್ಸೆಯಲ್ಲಿ ಮಹತ್ವದುದಾದ ಸುವರ್ಣದಂತಿರುವ ಮುಖ್ಯ ಮೂರು ತತ್ವಗಳೆಂದರೆ ಸಾಕಷ್ಟು ವಿಶ್ರಾಂತಿ, ಶುದ್ಧಗಾಳಿ, ಒಳ್ಳೇ ಪೌಷ್ಟಿಕ ಆಹಾರ. ಇವನ್ನು ಅಕ್ಷರಶಃ ಪಾಲಿಸುವ ರೋಗಿಯೇ ಈ ರೋಗದ ವೈದ್ಯನಂತೆ ಆಗಿ, ಈ ರೋಗವು ಬೇಗನೆ ಗುಣವಾಗುವುದು. (೧) **ವಿಶ್ರಾಂತಿ:** ದೈಹಿಕ ಮತ್ತು ಮಾನಸಿಕ ಹೀಗೆ ಎರಡು ರೀತಿಯ ವಿಶ್ರಾಂತಿಯು ಅತ್ಯವಶ್ಯವಿದೆ. ವಿಶ್ರಾಂತಿಯಿಂದ ಹೃದಯ ಮತ್ತು ಶ್ವಾಸಕೋಶಗಳು ಅವಷ್ಟು ಕಡಿಮೆ ವೇಗದಿಂದ ಚಲಿಸುವುವು. ಇದರಿಂದ ಕ್ಷಯಾಣುಗಳ ಮತ್ತು ರೋಗ ಸೋಂಕಿದ ದೇಹದ ಪದರುಗಳ ವಿನಾಶದಿಂದ ಉಂಟಾದ ವಿಷಗಳ ಚಲಾವಣೆಯನ್ನು ಕಡಿಮೆ ಮಾಡಿದಂತಾಗುವುದು. ಅಲ್ಲದೆ ಜ್ವರವೂ ಮುಂದೆ ಏರದಂತೆ ಸಹಾಯವಾಗುವುದು (೨) **ಶುದ್ಧಗಾಳಿ:**— ಸಾಕಷ್ಟು ತಂಪು ಮತ್ತು ಒಣ ಹವೆಯು ಹಸಿವೆಯನ್ನು ಹೆಚ್ಚಿಸುವುದು. ಅಲ್ಲದೆ ರೋಗಿಯು ಧೂಳಿಮಿಶ್ರಿತವಾಗಿರದ ಶುದ್ಧಗಾಳಿಯಲ್ಲಿ ಇರುವುದರಿಂದ, ರೋಗಿಯ ಶ್ವಾಸಕೋಶದಲ್ಲಿ ಚೇತನ ತುಂಬಿ, ರಕ್ತವನ್ನು ಶುದ್ಧಮಾಡುತ್ತದೆ; ಹೃದಯಕೋಶದ ಕೆಲಸವನು ತಗ್ಗಿಸುತ್ತದೆ. (೩) **ಆಹಾರ**— ಮುಖ್ಯವಾಗಿ ರೋಗಿಯ ಆಹಾರವು ದಿನಾಲು ಹೆಚ್ಚಾಗಿ ಹೀಗೆ ಇರಬೇಕು: ಅಕ್ಕಿ, ಗೋಧಿ, ಸಕ್ಕರೆ, ಹಣ್ಣುಗಳು, ಇವು ದೇಹಕ್ಕೆ ಬೇಕಾಗುವ ಕಾರ್ಬೋ ಹೈಡ್ರೇಟ್‌ಗಳನ್ನು ಒದಗಿಸುವ ಆಹಾರವಾಗಿವೆ. ಹಾಲು, ಮಜ್ಜಿಗೆ, ಮಾಂಸ, ಮೀನ ಮತ್ತು ಮೊಟ್ಟೆಗಳು (ತತ್ತಿಗಳು) ಸಾರಜನಕಗಳನ್ನು ಒದಗಿಸುವುವು. ಎಣ್ಣೆ, ತುಪ್ಪ, ಬೆಣ್ಣೆ ಇವು ಕೊಬ್ಬಿನ ಅಂಶವನು ಪೂರಯಿಸುತ್ತವೆ. ಒಳ್ಳೆಯ ಹಣ್ಣು-ಹಂಪಲಗಳು, ಹಾಲುಗಳಿಂದ ಒಳ್ಳೆಯ ಧಾತು ಮತ್ತು ಜೀವಾತಗಳು ಒದಗುವುವು. ಸಾಕಷ್ಟು ನೀರು ಕುಡಿಯಬೇಕು. ಹರಿವೆಪಲ್ಲೆ, ಬದನೇಕಾಯಿ, ಕೊಸಂಬಿ, ಹೀರೇಕಾಯಿ, ಪಡವಲಕಾಯಿ, ಹಾಗಲಕಾಯಿ, ಕ್ಯಾಬೇಜು, ಟೊಮೆಟೊ ಇತ್ಯಾದಿ ತರಕಾರಿಗಳನ್ನು ಮತ್ತು ಬಾಳೆ ಹಣ್ಣು, ಪಪ್ಪಾಯಿ, ಮೋಸಂಬಿ, ಚಿಕ್ಕು ಮುಂತಾದ ಹಣ್ಣುಗಳನ್ನು ಉಪಯೋಗಿಸುವುದರಿಂದ, ಮಲಬದ್ಧತೆಯುಂಟಾಗದೆ ಕರುಳಿನ ಕ್ರಿಯೆ ಸರಾಗವಾಗಿ ಸಾಗಲು ತುಂಬಾ ಸಹಾಯವಾಗುತ್ತದೆ. ಅವಶ್ಯಕದಲ್ಲಿ ಕಾಡ್‌ಲಿವ್ಹರ್ ಆಯಿಲ್, ಶಾರ್ಕ್‌ಲಿವ್ಹರ್ ಆಯಿಲ್‌ಗಳನ್ನು, ವೈದ್ಯರು ಹೇಳಿದ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕು. ಇವೆಲ್ಲವೂ ರೋಗಿಯ ಪ್ರಕೃತಿಯನ್ನು ಹೆಚ್ಚಾಗಿ ಸದೃಢವನ್ನಾಗಿ ಮಾಡುವವು.

(೧೮) **ಔಷಧಗಳು:**— ಕ್ಷಯರೋಗದ ಚಿಕಿತ್ಸೆಯಲ್ಲಿ ಮೇಲೆ ತಿಳಿಸಿದ ತತ್ವಗಳಿಗಿಂತ ಔಷಧಗಳು ಅಷ್ಟೊಂದು ಪ್ರಯೋಜನಕಾರಿಯಾಗಿಲ್ಲ. ಇತ್ತೀಚಿಗೆ ತಜ್ಞರು ಕೆಲವು ಔಷಧಿಗಳನ್ನು ಶೋಧಿಸಿದಾರೆ. ಅವು (೧) ಸುಣ್ಣ (Calcium) (೨) ಸ್ವರ್ಣ (Gold) (೩) ಪ್ರೋಮಿನ್ (Promin) (೪) ಸ್ಟ್ರೆಪ್ಟೊಮೈಸಿನ್ Strepto mycin) (೫) ಪಾರಾ-ಎಮ್ಮಿನೋ-ಸಲಿಸಿಲಿಕ್-ಎಸಿಡ್ (Praa-Amino-Salicilic-Acid-P.A.S.) (೬) ಥಾಯೋ-ಸೇಮಿ-ಕಾರ್ಬಸೋನ್ (Thio Semi-Carbasone T.B.I.) (೭) ಐಸೋ-ನಿಕೋಟಿನಿಕ್ ಎಸಿಡ್ ಹೈಡ್ರೈಜೈಡ್ (Iso-Nicotinic-Acid-Hydrazide I.N.H.) ಈ ಔಷಧಗಳು ಕ್ಷಯರೋಗದ ಪ್ರತಿಬಂಧಕ ಔಷಧಗಳೆಂದು ಕರೆಯಲ್ಪಡುತ್ತವೆ. ಇವು ತಮ್ಮ ಅದ್ಭುತ ಹಾಗೂ ಅಪಾಯಕಾರಕ ಗುಣಧರ್ಮಗಳಿಂದ, ಕ್ಷಯರೋಗದ ನಿವಾರಣೆಗಾಗಿ ದುಡಿಯುವ ಪ್ರಾಮಾಣಿಕ ಕಾರ್ಯಕರ್ತರಿಗೆ ಸಮಸ್ಯೆಗಳಾಗಿವೆ. ಈ ಔಷಧಗಳು ತಾತ್ಪೂರ್ತಿಕ ಪರಿಹಾರವನ್ನು ಇತ್ತು, ರೋಗಿಗಳ ಹಾಗೂ ಡಾಕ್ಟರರ ವಿಶ್ವಾಸ ಸಂಪಾದಿಸಿದರೂ ಕಾಲಾಂತರದಲ್ಲಿ ಈ ಔಷಧಗಳಿಂದಲೇ ಕ್ಷಯರೋಗದ ಜಂತುಗಳು ಪ್ರತಿಸೊಮುಮಂತೆಯೂ ಆಗುತ್ತಿರುವುದರಿಂದ, ಕ್ಷಯರೋಗವನು ಬಲಪಡಿಸಿ ಅದನ್ನು ಇನ್ನಷ್ಟು ಹೆಚ್ಚು ಹೆಚ್ಚಾಗಿ ಹಬ್ಬಿಸಲು ಸಹಾಯವಾಗುತ್ತದೆ. ಚಿಕಿತ್ಸೆಯಿಂದ ಇವುಗಳ ಗುಣಧರ್ಮಗಳು ಇತ್ತೀಚಿಗೆ ತಜ್ಞವೈದ್ಯರಿಂದ ಕಂಡುಹಿಡಿಯಲ್ಪಟ್ಟಿವೆ. ಆದರಿಂದ ಇವುಗಳನ್ನು ಕ್ವಚಿತ್ತಾಗಿ ಪ್ರತಿಬಂಧದ ಸಲುವಾಗಿ ನಿರ್ದಿಷ್ಟ ರೋಗಿಗಳಿಗೆ ಕೊಡುವರು. ಮತ್ತು ವೈದ್ಯರು ಇವನ್ನು ಚಿಕಿತ್ಸೆಯ ವೇಳೆಯಲ್ಲಿ ಜಾಗರೂಕತೆಯಿಂದ ನಿರ್ದಿಷ್ಟ ಪ್ರಮಾಣದಲ್ಲಿ ಕೊಡುವರು.

(೧೯) **ಕ್ಷಯರೋಗದಲ್ಲಿ ಕೃತಕ ವಾತವಕ್ಷಚಿಕಿತ್ಸೆ:**— ರೋಗವು ವಾಸಿಯಾಗಲು ದೇಹಕ್ಕೆ ಯಾವ ತರದ ವಿಶ್ರಾಂತಿಯು ಅವಶ್ಯವಿದೆಯೋ ಅದೇ ಪ್ರಕಾರ ರೋಗ ಹಿಡಿದ ಶ್ವಾಸಕೋಶಕ್ಕೆ ಸಾಕಷ್ಟು ವಿಶ್ರಾಂತಿ ಸಿಕ್ಕುವುದೂ ಅವಶ್ಯವಿದೆ. ಅದ್ದರಿಂದ ರೋಗದ ಸೋಂಕು ತಗುಲಿದ ಶ್ವಾಸಕೋಶದ ಭಾಗವನ್ನು, ಅದರಲ್ಲಿರಬಹುದಾದ ಪೊಳ್ಳು (Cavity) ಸಹಿತ ಶಕ್ತಿಪಾತಗೊಳಿಸಿ, ಆ ಭಾಗಕ್ಕೆ ವಿಶ್ರಾಂತಿ ಕೊಡುವುದೇ ಈ ಚಿಕಿತ್ಸೆಯ ಮುಖ್ಯ ಉದ್ದೇಶವಿರುವುದು.

(೨೦) ಶ್ವಾಸಕೋಶವು ಎರಡು 'ಪ್ಲೂರಾ' ಪದರಗಳಿಂದ ಆವರಿಸಲ್ಪಟ್ಟಿದೆ. ಒಂದು ಶ್ವಾಸಕೋಶದ ಹೊರನ್ನು, ಮತ್ತೊಂದು ಎದೆಯ ಭಿತ್ತಿಯ ಒಳನ್ನು—ಹೀಗೆ ಇವೆ. ರೋಗವು ಅಂಟಿಕೊಳ್ಳಲು, ಈ ಎರಡೂ ಪದರಗಳನ್ನು ಯಾವಾಗಲೂ ನಿಕಟ ಸಂಪರ್ಕದಲ್ಲಿರಿಸುತ್ತದೆ. ಎರಡೂ ಪ್ಲೂರಾಗಳ ನಡುವೆ ಗಾಳಿಯನ್ನು ಸೇರಿಸಿದರೆ, ಅಂಟಿಕೊಳ್ಳುವ ಶಕ್ತಿಯು ನಾಶವಾಗುವುದು. ಮತ್ತು ಶ್ವಾಸಕೋಶವು

ಶಕ್ತಿಪಾತ ಹೊಂದುವುದು. ಈ ತರದ ಚಿಕಿತ್ಸೆಯನ್ನು ಪ್ರತಿಯೊಬ್ಬ ರೋಗಿಗೂ ಕೊಡುವುದು ಸಾಧ್ಯವಿಲ್ಲ. ಇದನ್ನು ನುರಿತ ತಜ್ಞರು ಆಯಾ ರೋಗಿಗಳ ಕ್ಷ-ಕಿರಣವನ್ನು ನೋಡಿ, ಚಿಕಿತ್ಸೆಯನ್ನು ಪ್ರಾರಂಭ ಮಾಡುವರು. ಈ ತರದ ಚಿಕಿತ್ಸೆಯ ಸಲುವಾಗಿ ಉಪಯೋಗಿಸುವ ಒಂದು ವಿಶೇಷ ಸಲಕರಣೆಗೆ, ಲಿಲ್ಲಿಂಗ್‌ಸ್ಟನ್–ಪಿಯರ್ಸನ್ ಸಲಕರಣೆ ಯೆನ್ನುವರು. ಇದು ಮುಖ್ಯವಾಗಿ ನೀರಿನಿಂದ ಅರ್ಧತುಂಬಿದ ಎರಡು ಘನಸೆಂಟಿಮಿಟರ್ ಅಳತೆ ಗುರುತಿಸಿದ ಗಾಜಿನ ಸೀಸೆಗಳಿಂದ ಇದ್ದು, ಒಂದು ಸೀಸೆಯಿಂದ ಮತ್ತೊಂದು ಸೀಸೆಗೆ ನೀರು ಹರಿಯುವ ವ್ಯವಸ್ಥೆ ಯಿದೆ. ಅದರ ಜೊತೆಗೆ ನೀರಿನಿಂದೊಡಗೂಡಿದ ಗಾಜಿನ ಮನೋ ಮೀಟರ್ ಕೂಡ ಇದೆ. ಇದರ ಸಹಾಯದಿಂದ ಗಾಳಿಯನ್ನು ಶ್ವಾಸ ಕೋಶದಲ್ಲಿ ಸೇರಿಸುವರು. ಎರಡೂ ಸೀಸೆಗಳಿಗೆ ಘನ ಸೆಂಟೀ ಮೀಟರ್ ಅಳತೆಯ ಗುರುತುಗಳಿವೆ. ಇವುಗಳಿಂದ ಕೂಡಿದ ಈ ಸೀಸೆಗಳು ಶ್ವಾಸಕೋಶದಲ್ಲಿ ಸೇರಿಸಿದ ಗಾಳಿಯ ಪ್ರಮಾಣವನ್ನು ತಿಳಿಸುವುದು, ಮತ್ತು ಮನೋಮೀಟರು ಶ್ವಾಸಕೋಶದಲ್ಲಿ ಗಾಳಿಯನ್ನು ಸೇರಿಸುವಾಗ ಪ್ಲೂರಾ ಒತ್ತಡವನ್ನು ಗುರುತಿಸುವುದು.

(೨೧) ಕೃತಕ ವಾತ ವಕ್ಷಚಿಕಿತ್ಸೆಯನ್ನು ಮೊದಲನೆಯ ಸಾರಿ ನಡೆಸುವಾಗ, ರೋಗಿಯು ಬೆಳಗ್ಗೆ ಏನೂ ತಿನಿಸನ್ನು ತೆಗೆದು ಕೊಂಡಿರಕೂಡದು. ರೋಗ ಸೋಂಕಿದ ಶ್ವಾಸಕೋಶದ ಭಾಗವು ಮೇಲ್ಗಡೆಯಲ್ಲಿರುವಂತೆ, ರೋಗಿಯನ್ನು ಒಂದೇ ಮಗ್ಗುಲಲ್ಲಿ ಮಲಗಲು ಹೇಳುವರು. ಅಲ್ಲಿಯ ಪಕ್ಕೆಲುಬುಗಳು ದೂರ ಸರಿಯುವಂತೆ ಒಂದು ತಲೆಗಿಂಬನ್ನು ಕೆಳಗೆ ಇಡುವರು. ಕೃತಕವಾತ ವಕ್ಷ ಸಲಕರಣದ ಸೂಜಿಯನ್ನು ಎಲ್ಲಿ ಚುಚ್ಚಬೇಕೆಂದು ವೈದ್ಯರೇ ಸ್ಥಳವನ್ನು ಆರಿಸು ವರು. ಮೊದಲು ಒಂದು ಇಂಜಕ್ಷನ್ ಕೊಟ್ಟು, ಅಲ್ಲಿಯ ಜಾಗೆ ಯನ್ನು ನಿರ್ಜೀವಗೊಳಿಸುವರು. ಅನಂತರ ಸಲಕರಣದ ಸೂಜಿ ಯನ್ನು ಚುಚ್ಚಲಾಗುವುದು. ಆಗ ಯಾವುದೇ ತರದ ನೋವು ಆಗುವು ದಿಲ್ಲ. ಒಳಗೆ ಈ ಸೂಜಿಯನ್ನು ಸೇರಿಸಿದಾಗ, ರೋಗಿಯು ಕೆಮ್ಮುವು ದನ್ನು ಇಲ್ಲವೆ ಗಂಟಲು ಕೆರೆಯುವುದನ್ನು ಮಾಡಬಾರದು. ಸಹಜ ವಾಗಿ ಉಸಿರಾಟವನ್ನು ಮುಂದುವರಿಸಬೇಕು. ಸೂಜಿಯು ಎರಡೂ ಪ್ಲೂರಾಗಳ ನಡುವೆ ಮುಟ್ಟಿತೆಂದು ಗೊತ್ತಾದ ಕೂಡಲೆ, ಮನೋ ಮೀಟರದಲ್ಲಿ ಗಾಳಿಯ ಒತ್ತಡವನ್ನು ಗುರುತಿಸಲಾಗುವುದು. ಆ ಮೇಲೆ ವೈದ್ಯರು. ನಿರ್ದಿಷ್ಟ ಪ್ರಮಾಣದಲ್ಲಿ ಗಾಳಿಯನ್ನು ಸೇರಿಸುವರು. ಪುನಃ ಗಾಳಿಯ ಒತ್ತಡವನ್ನು ಗುರುತಿಸಿ, ಸೂಜಿಯನ್ನು ಹೊರಗೆ ತೆಗೆಯುವರು. ಇವೆಲ್ಲ ವಿವರಗಳನ್ನು ಬರೆದಿಡುವರು. ಚುಚ್ಚಿದ ಭಾಗದಲ್ಲಿ ಸ್ವಲ್ಪ ಅಯ್‌ಡಿನ್ ಹಚ್ಚಿದ ಹತ್ತಿಯನ್ನು ಹತ್ತಿಕ್ಕ ಲಾಗುವುದು. ಅನಂತರ ಅಡಿಯಲ್ಲಿರುವ ತಲೆಗಿಂಬನ್ನು ತೆಗೆಯ ಲಾಗುವುದು. ಆಗ ರೋಗಿಯು ರೋಗ ಸೋಂಕಿದ ಶ್ವಾಸಕೋಶ ಭಾಗವನ್ನು ಕೆಳಗೆ ಮಾಡಿ, ಅದೇ ಸ್ಥಾನದಲ್ಲಿ ಕೆಲವು ತಾಸುಗಳವರೆಗೆ ಮಲಗಿರಬೇಕಾಗುತ್ತದೆ. ಆ ಮೇಲೆ ಸಾವಕಾಶವಾಗಿ ಬೆನ್ನ ಮೇಲೆ ಮಲಗಬಹುದು. ಈ ವೇಳೆಯಲ್ಲಿ ಕೆಮ್ಮಬಾರದು. ತಡೆಯಲು ಸಾಧ್ಯವಾಗದಿದ್ದಲ್ಲಿ, ಚುಚ್ಚಿದ ಸ್ಥಳದ ಮೇಲೆ ಅಂಗೈಯಿಂದ ಚೆನ್ನಾಗಿ ಒತ್ತಿಹಿಡಿದು ಅದನ್ನು ಕಡಿಮೆ ಕೆಮ್ಮಬೇಕು. ರೋಗಿಗೆ ಸ್ವಲ್ಪ ಸಮಯದವರೆಗೆ ಬೇಸರು ಮತ್ತು ನೋವು ಆಗಬಹುದು; ಆದರೆ ಇದಕ್ಕೆ ವೈದ್ಯರು ಔಷಧ ಕೊಡುವರು; ಮತ್ತು ಬೇಗನೆ ಇಲ್ಲದಂತಾ ಗುವುದು. ೪–೫ ತಾಸುಗಳನಂತರ ರೋಗಿಯು ಊಟಮಾಡಬಹುದು. ತರುವಾಯ ಮುಂದಿನ ಸಾರೆ ಆಗಾಗ ಗಾಳಿಸೇರಿಸುವಾಗ, ಇಂಜೆಕ್ಷನ್ ಕೊಡುವುದಿಲ್ಲ. ಆ ಭಾಗದಲ್ಲಿ ಸ್ಪಿರಿಟ್ ಹಚ್ಚಿ ಸೂಜಿ ಚುಚ್ಚುವಾಗ್ಗ ನೋವಿನ ಅನುಭವವಾಗುವುದಿಲ್ಲ. ಪ್ರತಿಯೊಂದು ಸಾರೆ ಗಾಳಿಯನ್ನು ಸೇರಿಸುವಾಗ, ಗಾಳಿಯ ಪ್ರಮಾಣವನ್ನು ಕ್ರಮೇಣ ಏರಿಸಿ, ಒಂದು ನಿಶ್ಚಿತ ಪ್ರಮಾಣಕ್ಕೆ ಮುಟ್ಟಿಸುವರು. ಅದೇ ಪ್ರಕಾರ ನಡುವಿನ ಅವಧಿಯನ್ನು ಸಹ ಏರಿಸುವರು. ಆದರೆ ಒಳಗೆ ಸೇರಿಸುವ ಗಾಳಿಯ ಪ್ರಮಾಣ ತಿರುಗಿ ಗಾಳಿ ಕೊಡುವ ಅವಧಿಗಳನ್ನು, ಆಯಾ ರೋಗಿಗಳ ಆವಶ್ಯಕತೆಗಳ ಮೇಲೆ ನಿರ್ಧರಿಸುವರು. ಗಾಳಿಯ ಪರಿಣಾಮವು ಶ್ವಾಸಕೋಶದ ಮೇಲೆ ಯಾವ ತರದಲ್ಲಿ ಆಗಿದೆಯೆಂಬುದನ್ನು ವೈದ್ಯರಿಗೆ ನಿರ್ದಿಷ್ಟ ಸಮಯದಲ್ಲಿ ಕ್ಷ-ಕಿರಣ ಮತ್ತು ಸ್ಕ್ರೀನಿಂಗುಗಳ ಆಧಾರ ದಿಂದ ಸರಿಯಾಗಿ ತಿಳಿಯುತ್ತದೆ. ಶ್ವಾಸಕೋಶವು ಶಕ್ತಿಪಾತ ಹೊಂದುವಂತೆ ಕಂಡರೆ, ಮುಂದೆ ಗಾಳಿಯ ಪ್ರಮಾಣವನ್ನು ಕಡಿಮೆ ಮಾಡುವರು. ಮತ್ತು ನಡುವಿನ ಅವಧಿಯನ್ನು ಹೆಚ್ಚಿಸುವರು.

(೨೨) ಕೃತಕ ವಾತವಕ್ಷ ಚಿಕಿತ್ಸೆಯು ಯಶಸ್ವಿಯಾದೊಡನೆ, ರೋಗಿಯ ಕಫದ ಪ್ರಮಾಣವು ಕಡಿಮೆಯಾಗಿ, ಅದು ಬರುವುದಿಲ್ಲ. ಅನಂತರ ನಿಲ್ಲುವುದು. ಈ ಚಿಕಿತ್ಸೆಯ ಅವಧಿಯು ಬೇರೆ ಬೇರೆ ರೋಗಿಗಳಲ್ಲಿ ಅವರವರ ರೋಗದ ಸ್ಥಿತಿಯನ್ನವಲಂಬಿಸಿರುತ್ತದೆ. ಪ್ರಯೋಜನ ದೊರೆಯುವವರೆಗೆ ಇದನ್ನು ಮುಂದುವರಿಸುವರು. ಒಬ್ಬ ರೋಗಿಯಲ್ಲಿ ಅದನ್ನು ೧ ವರ್ಷದ ತನಕವೆ ನಡೆಸಬಹುದು. ಮತ್ತೊಬ್ಬ ನಲ್ಲಿ ಮೂರು ವರ್ಷಕಾಲ ಮುಂದುವರಿಸುವ ಆವಶ್ಯಕತೆ ಇರಬಹುದು. ಆದರೆ ಸಾಮಾನ್ಯವಾಗಿ ೧½ ವರ್ಷದಿಂದ ೨–೩ ವರ್ಷಗಳವರೆಗೆ ಅದನ್ನು ಮುಂದುವರಿಸಬೇಕಾಗುತ್ತದೆ. ಶ್ವಾಸಕೋಶವು ರೋಗಮುಕ್ತವಾ ದೊಡನೆ, ಈ ಚಿಕಿತ್ಸೆಯನ್ನು ನಿಲ್ಲಿಸುವರು. ಆಮೇಲೆ ಶಕ್ತಿಹೊಂದಿದ ಶ್ವಾಸಕೋಶವು ತಿರುಗಿ ಉಬ್ಬುವುದು. ಆದರೂ ಪೊಳ್ಳು (cavity) ತಿರುಗಿ ಕಾಣಿಸುವುದಿಲ್ಲ. ರೋಗ ಸೋಂಕಿದ ಜಾಗೆಯು ಅಷ್ಟರಲ್ಲೇ ವಾಸಿಯಾಗಿರುತ್ತದೆ.

(೨೩) ಆದರೆ ಕೆಲವೊಮ್ಮೆ ಎಲ್ಲ ರೋಗಿಗಳಲ್ಲಿಯೂ ಈ ಚಿಕಿತ್ಸೆಯು ಯಶಸ್ವಿಯಾಗಿ ನಡೆಯುವ ನಿಶ್ಚಯವಿಲ್ಲ. ಈ ಚಿಕಿತ್ಸೆಯ ಅವಧಿಯಲ್ಲಿ ಕೆಲವು ಕಠಿಣಾವಸ್ಥೆಗಳು ಕಂಡುಬರುವವು. ಒಣ ಇಲ್ಲವೆ ಹಸಿ ಪ್ಲೂರಿಸಿಗಳು ರೋಗಿಗಳಲ್ಲಿದ್ದರೆ, ಪ್ಲೂರಾಗಳು ಒಂದಕ್ಕೊಂದು ಅಂಟಿಕೊಂಡು, ಅವುಗಳ ನಡುವೆ ಸ್ವಲ್ಪ ಗಾಳಿಯನ್ನು ಸೇರಿಸಲು ಸಾಧ್ಯವಾಗದು. ಒಮ್ಮೊಮ್ಮೆ ಗಾಳಿಯು ನಿರಾತಂಕವಾಗಿ ಒಳಗೆ ಹೋದರೂ, ಅದರಿಂದ ಶ್ವಾಸಕೋಶದ ಇತರ ಭಾಗಗಳು ಶಕ್ತಿಪಾತ ಹೊಂದಬಹುದು. ಆದರೆ ಮುಖ್ಯವಾದ ರೋಗಗ್ರಸ್ತಭಾಗವು ಶಕ್ತಿಪಾತ ಹೊಂದದೆ ಇದ್ದು, ಪೊಳ್ಳು ಮುದುಡದೇ ಮುಂಚಿನಂತೆ ತೆರೆದೇ ಇರಬಹುದು. ಇಂತಹ ಪರಿಸ್ಥಿತಿಯಲ್ಲಿ ಈ ಚಿಕಿತ್ಸೆಯನ್ನು ಬಿಟ್ಟು ಬಿಡಬಹುದು. ಇಲ್ಲವೆ ಅಂಟುವಿಕೆಯ ಭಾಗವನ್ನು ಶಸ್ತ್ರಕ್ರಿಯೆಯಿಂದ ತೆಗೆದು, ಕೆಲವು ದಿನಗಳನಂತರ ಪುನಃ ಗಾಳಿಯನ್ನು ಸೇರಿಸುವುದು

ಇಲ್ಲವೆ ಬಿಡಬಹುದು. ಇದು ಆಯಾ ರೋಗಿಗಳ ಪ್ರಕೃತಿಯನ್ನು ಅವಲಂಬಿಸಿರುವುದು.

(೨೪) ಕೆಲವು ರೋಗಿಗಳಲ್ಲಿ ರೋಗದ ಸೋಂಕು, ಶ್ವಾಸಕೋಶದ ಕೆಳಭಾಗದಲ್ಲಿ ಅಥವಾ ಎರಡೂ ಶ್ವಾಸಕೋಶಕ್ಕೆ ಅಂಟಿಕೊಂಡಿರುತ್ತದೆ. ಆವಾಗ ವೈದ್ಯರು ಕೃತಕವಾತವಕ್ಷ ಸಲಕರಣದ ಸೂಜಿಯನ್ನು ಉದರಭಿತ್ತಿಗೆ, ಆರಿಸಿದ ಸ್ಥಳದಲ್ಲಿ ಚುಚ್ಚಿ, ಒಮ್ಮೆಗೇ ಹೆಚ್ಚಿಗೆ ಗಾಳಿಯನ್ನು ಸೇರಿಸುವರು. ಇದರ ವಿವರಗಳನ್ನು ಸಹ ಪ್ರತಿಸಲ ಬರೆದು ಇಡುವರು. ಈ ಚಿಕಿತ್ಸೆಯಿಂದ ಬಲ ಮತ್ತು ಎಡ ಭಾಗಗಳ ಉದರವಿತಾನದ ಎರಡೂ ಗುಮ್ಮಟಗಳು ಮೇಲಕ್ಕೇರುವುವು. ಇದರಿಂದ ಶ್ವಾಸಕೋಶದ ಕೆಳಗಿನ ಭಾಗವು ಶಕ್ತಿಪಾತ ಹೊಂದುವುವು. ಕೆಲವು ರೋಗಿಗಳಲ್ಲಿ ಇದನ್ನು 'ಫ್ರೆನಿಕ್ ಕ್ರಶ್' ಎಂಬ ಚಿಕಿತ್ಸೆಯ ನಂತರ ನಡೆಸುವರು. ಉದರಸಂಬಂಧವಾದ ಕ್ಷಯರೋಗಿಗಳಲ್ಲಿಯೂ ಇದನ್ನು ನಡೆಸುವರು. ಮತ್ತು ಪ್ಲೂರಾಗಳ ನಡುವೆ ಗಾಳಿಯನ್ನು ಸೇರಿಸಲು ಸಾಧ್ಯವಿಲ್ಲದ ಕೆಲವು ಶ್ವಾಸಕೋಶ ಕ್ಷಯರೋಗಿಗಳಲ್ಲಿಯೂ ಇದನ್ನು ನಡೆಸಬಹುದು. ಈ ಚಿಕಿತ್ಸೆಯನ್ನು ಸುಮಾರು ೧ರಿಂದ ೩ ವರ್ಷಗಳವರೆಗೆ ನಡೆಸಬೇಕಾಗುವುದು. ಹೀಗೆ ಗಾಳಿಸೇರಿಸುವುದರಿಂದ, ನೀರು ಆಗುವ ಸಂಭವವಿಲ್ಲ. ಮತ್ತು ಯಾವ ತರದ ಕಠಿಣಾವಸ್ಥೆಗಳೂ ಚಿಕಿತ್ಸೆಯ ಅವಧಿಯಲ್ಲಿ ಕಂಡುಬರುವುದಿಲ್ಲ.

(೨೫) **ಶಸ್ತ್ರಕ್ರಿಯೆ:**— ಕೆಲವೊಮ್ಮೆ ಕೃತಕವಾತವಕ್ಷದಿಂದ ಶ್ವಾಸಕೋಶವನ್ನು ಶಕ್ತಿಪಾತಗೊಳಿಸುವುದು ಅಸಾಧ್ಯವಾಗದಿದ್ದಲ್ಲಿ ಅಂಟುವಿಕೆಯ ಪುಂಜಕ್ಕೆ ಶಸ್ತ್ರಕ್ರಿಯೆ ಮಾಡಬೇಕಾಗುವುದು. ಈ ಶಸ್ತ್ರಚಿಕಿತ್ಸೆಗೆ ಉಪಯೋಗಿಸುವ ಸಲಕರಣೆಗೆ ಥೊರಿಕೊಸ್ಕೋಪ್ (Thoracoscope) ಎನ್ನುವರು. ಇದರಲ್ಲಿ ಅತಿ ಚಿಕ್ಕ ಪ್ರಮಾಣದ ಕನ್ನಡಿಗಳ, ಭೂತಗನ್ನಡಿಗಳ, ಮತ್ತು ವಿದ್ಯುದ್ದೀಪಗಳ ವ್ಯವಸ್ಥೆಯಿರುತ್ತದೆ. ರೋಗದ ಶ್ವಾಸಕೋಶದ ನರಗಳ ತುದಿಯನ್ನು ನಿರ್ಜೀವಗೊಳಿಸಿದ ನಂತರ, ಎರಡೂ ಪಕ್ಕೆಲುಬುಗಳ ನಡುವೆ ಒಂದು ಸಣ್ಣ ನಳಿಗೆಯನ್ನು ಸೇರಿಸುವರು. ಅದರ ಮೂಲಕ ಥೊರಿಕೋಸ್ಕೋಪನ್ನು ಒಳಗೆ ಕಳಿಸಿ, ಅದರ ಮೂಲಕ ವೈದ್ಯರು ರೋಗಿಯ ಎದೆಯಲ್ಲಿಯ ಸ್ಥಿತಿಯನ್ನು ಕಣ್ಣಿನಿಂದ ಪರೀಕ್ಷಿಸುವರು. ಹೀಗೆ ರೋಗ ಅಂಟುವಿಕೆಯ ಆಕಾರ, ಸ್ಥಾನ, ಸ್ವರೂಪ ಮೊದಲಾದುವನ್ನು ನೋಡಿ ಕತ್ತರಿಸಬಹುದೆಂದು ನಿರ್ಧರಿಸಿದಲ್ಲಿ, ವಿದ್ಯುತ್ತಿನ ಕೊಟರಿಯನ್ನು ಮತ್ತೊಂದು ಸ್ಥಳದಲ್ಲಿ ನಳಿಗೆಯ ಮೂಲಕ ಒಳಗೆ ಸೇರಿಸಿ, ಅಂಟುವಿಕೆಯ ಪ್ರದೇಶವನ್ನು ವೈದ್ಯರು ಥೊರಿಕೋಸ್ಕೋಪ್ ಮುಖಾಂತರ ನೋಡುತ್ತಿರುವಾಗಲೇ ಕತ್ತರಿಸುವರು. ಆಗ ರೋಗಿಗೆ ಯಾವ ತರದ ನೋವೂ ಆಗುವುದಿಲ್ಲ. ಅದರ ತರುವಾಯ ವಾತವಕ್ಷ ಚಿಕಿತ್ಸೆಯಿಂದ ಶ್ವಾಸಕೋಶ ಮತ್ತು ಪೊಳ್ಳು ಇವು ಶಕ್ತಿಪಾತಗೊಳ್ಳುವುವು.

(೨೬) ಕೆಲವು ಪ್ರಸಂಗಗಳಲ್ಲಿ ಅಂಟುವಿಕೆಯು ದಪ್ಪವಿದ್ದು, ಎಲ್ಲ ಅಂಟುವಿಕೆಯ ಪುಂಜಗಳನ್ನೂ ಕತ್ತರಿಸಲು ಸಾಧ್ಯವಿರುವುದಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಕತ್ತರಿಸುವ ಪ್ರಯತ್ನ ಮಾಡದೆ, ಶ್ವಾಸಕೋಶವನ್ನು ಶಕ್ತಿಪಾತಗೊಳಿಸಲು ಬೇರೆತರದ ಶಸ್ತ್ರಕ್ರಿಯೆ ನಡೆಸುವರು. ಇದಕ್ಕೆ **ಥೊರಿಕೊಪ್ಲಾಸ್ಟಿ** ಅನ್ನುವರು. ಇದನ್ನು ಹಲವು ಪೊಳ್ಳುಗಳು ಇದ್ದ ದೀರ್ಘಕಾಲೀನ ಕ್ಷಯರೋಗಿಗಳಲ್ಲಿ, ಕೃತಕವಾತವಕ್ಷ ಚಿಕಿತ್ಸೆಯಿಂದ ಶ್ವಾಸಕೋಶವನ್ನು ಶಕ್ತಿಪಾತಗೊಳಿಸಲು ಅಸಾಧ್ಯವೆಂದು ತಿಳಿದಾಗ, ಆಗಾಗ ಶ್ವಾಸಕೋಶದಿಂದ ರಕ್ತಸ್ರಾವವಾಗುತ್ತಿದ್ದು ಬೇರೆ ಯಾವುದೇ ತರದಿಂದ ತಡೆಯಲು ಅಸಾಧ್ಯವಾದಾಗ, ಪೊಳ್ಳುಗಳ ಭಿತ್ತಿ ದಪ್ಪವಾಗಿದ್ದು ಬೇರೆ ರೀತಿಯಲ್ಲಿ ಶಕ್ತಿಪಾತಗೊಳಿಸಲು ಕಷ್ಟವೆಂದು ಕಂಡು ಬಂದಾಗ—ಆದರೆ ರೋಗವು ಸಾಮಾನ್ಯವಾಗಿ ಒಂದೇ ಶ್ವಾಸಕೋಶಕ್ಕೆ ಸಂಬಂಧಿಸಿದಾಗ— ಈ ಶಸ್ತ್ರಚಿಕಿತ್ಸೆಯನ್ನು ನಡೆಸುವರು. ಈ ಶಸ್ತ್ರ ಚಿಕಿತ್ಸೆಗೆ ಬೆನ್ನಿನಲ್ಲಿ ಗಾಯಮಾಡುವರು. ಸಾಮಾನ್ಯವಾಗಿ ಐದರಿಂದ ಎಂಟರವರೆಗೆ ಪಕ್ಕೆಲುಬುಗಳನ್ನು ೨–೩ ಹಂತಗಳಿಂದ ಕತ್ತರಿಸಿ ತೆಗೆಯುವರು. ಎಲುಬುಗಳ ತುಂಡುಗಳನ್ನು ತೆಗೆದನಂತರ, ಒಳಗಿರುವ ಶ್ವಾಸಕೋಶದ ರೋಗಗ್ರಸ್ತ ಭಾಗವನ್ನು ಕೈಯಿಂದ ಒತ್ತಿ, ಶಕ್ತಿಪಾತಗೊಳಿಸುವರು. ಮುಂದೆ ಎಲಬುಗಳು ಹೊಸಸ್ಥಾನದಲ್ಲಿ ಬೆಳೆದು ಶ್ವಾಸಕೋಶವನ್ನು ಶಕ್ತಿಪಾತಗೊಂಡ ಸ್ಥಿತಿಯಲ್ಲಿಟ್ಟುಕೊಳ್ಳುವವು. ಕೆಲವೊಮ್ಮೆ ಒಂದೆರಡು ಎಲುಬಿನ ತುಂಡುಗಳನ್ನು ತೆಗೆದು, ಶ್ವಾಸಕೋಶದ ರೋಗ ತಗುಲಿದ ಭಾಗದಮಟ್ಟಿಗೆ ಒಂದು ವಿಶಿಷ್ಟ ಪದಾರ್ಥ–ಪೆರೆಫಿನ್ ಇಲ್ಲವೆ ಪ್ಲಾಸ್ಟಿಕ್–ಇವುಗಳಲ್ಲಿ ಒಂದನ್ನು ಸೇರಿಸಿ, ಶ್ವಾಸಕೋಶವನ್ನು ಶಕ್ತಿಪಾತಗೊಳಿಸುವರು. ಕೆಲವು ಸಾರೆ ರೋಗಗ್ರಸ್ತವಾದ ಶ್ವಾಸಕೋಶದ ಅಂಶವನ್ನಾಗಲಿ, ಒಂದು ಇಡಿಯ ಶ್ವಾಸಕೋಶವನ್ನಾಗಲಿ ಶಸ್ತ್ರಕ್ರಿಯೆಯಿಂದ ತೆಗೆಯುವರು. ಈ ತರದ ದೊಡ್ಡ ಮತ್ತು ಸೂಕ್ಷ್ಮ ಶಸ್ತ್ರಕ್ರಿಯೆಯನ್ನು ನುರಿತ ತಜ್ಞವೈದ್ಯರು ಬಹಳೇ ಜಾಗರೂಕತೆಯಿಂದಲೂ ಜಾಣತನದಿಂದಲೂ ಮಾಡುವರು.

(೨೭) **ರೋಗವು ಸುಧಾರಿಸಿದ ಲಕ್ಷಣಗಳು:**—ಮೇಲೆ ವಿವರಿಸಿದಂತೆ ಬೇಕಿರುವ ರೀತಿಯಲ್ಲಿ ಶ್ವಾಸಕೋಶದ ಶಕ್ತಿಪಾತವಾದ ನಂತರ, ರೋಗಿಯ ಸ್ಥಿತಿಯು ಸುಧಾರಿಸಿ ರೋಗವು ಇಲ್ಲದಂತಾಗುವುದು. ಆವಾಗ ರೋಗವು ಪೂರ್ಣ ಸುಧಾರಣೆಯಾದ ಲಕ್ಷಣಗಳು ಹೀಗೆ ತೋರುವುವು: ಕಫದಲ್ಲಿ ಕ್ಷಯಾಣುಗಳು ಸಂಪೂರ್ಣಮಾಯವಾಗಿ ಕಫವು ಬರುವುದೇ ಇಲ್ಲ. ದಿನಾಲು ಹಸಿವೆ ಹೆಚ್ಚಿ ಹೆಚ್ಚೆಚ್ಚು ಆಹಾರ ತಿನ್ನುವ ಇಚ್ಛೆಯಾಗಿ ನಾಲಗೆಯ ರುಚಿಯು ಸುಧಾರಿಸುವುದು. ತೂಕವು ಹೆಚ್ಚಿ ಮೊದಲಿನ ಸ್ಥಿತಿಗೆ ಬರುವುದು—ಇಲ್ಲವೆ ಅದಕ್ಕೂ ಹೆಚ್ಚಾಗಬಹುದು. ನಿಶ್ಶಕ್ತಿ ಮತ್ತು ಬಳಲುವಿಕೆಯ ತ್ರಾಸ ಇಲ್ಲದಂತಾಗಿ ಮೊದಲಿನಂತೆ ಶಕ್ತಿ ಬರುವುದು. ಹೆಣ್ಣುಮಕ್ಕಳಲ್ಲಿ ರೋಗದಿಂದ ನಿಂತಿರಬಹುದಾದ ಮುಟ್ಟು ತಿರುಗಿ ಪ್ರಾರಂಭವಾಗಿ, ಮೊದಲಿನಂತೆ ಮುಂದುವರಿಯುವುದು. ರಕ್ತವು ಸುಧಾರಿಸಿ ಸಹಜಮಟ್ಟಕ್ಕೆ ಬರುವುದು. ಮತ್ತು ನಾಡಿಯ ಬಡಿತದ ವೇಗವು ಸಹಜಸ್ಥಿತಿಗೆ ಬರುವುದು. ಇವೆಲ್ಲವುಗಳಿಂದ, ಆರೋಗ್ಯಧಾಮದಲ್ಲಿ ನುರಿತ ತಜ್ಞರಿಂದ ಕ್ಷಯರೋಗಿಗಳ ಸಲುವಾಗಿ ಎಷ್ಟು ರೀತಿಯಿಂದ ಅಮೌಲ್ಯ ಸೇವೆ–ಸಹಾಯ ಸಿಕ್ಕುವುದೆಂಬುದು ಕಂಡುಬರುವುದು.

(೨೮) **ಕ್ಷಯರೋಗಿಗಳಿಗೆ ಸೂಚನೆಗಳು:**— ಕ್ಷಯರೋಗವು ದೀರ್ಘಕಾಲೀನ ರೋಗವಾದುದರಿಂದ, ಒಮ್ಮೆ ರೋಗಮುಕ್ತನಾದವನು ಮುಂದೆ ಅಜಾಗರೂಕತೆಯಿಂದ ವರ್ತಿಸಿದರೆ ಪುನಃ ರೋಗಗ್ರಸ್ತನಾಗಬಹುದು. ಆದುದರಿಂದ ಕ್ಷಯರೋಗದಿಂದ ಒಮ್ಮೆ

ಗುಣ ಹೊಂದಿದರೂ, ತರುವಾಯ ಅನೇಕ ವರ್ಷ ಕಾಲ ಜಾಗ್ರತೆಯಿಂದ ವೈದ್ಯರ ಸಲಹೆಯ ಮೇರೆಗೆ ವರ್ತಿಸಬೇಕು. ರೋಗದ ಸೋಂಕು ಆಗಿದೆ ಎಂದು ತಿಳಿದಕೂಡಲೆ ರೋಗಿಯು ವೈದ್ಯರ ಸಹಾಯದಿಂದ ಯೋಗ್ಯ ಚಿಕಿತ್ಸೆಯನ್ನು ಬೇಗನೆ ಪ್ರಾರಂಭಿಸಬೇಕು. ಅಂದರೆ ರೋಗದಿಂದ ತೀವ್ರ ಮುಕ್ತನಾಗುವನಲ್ಲದೆ ಚಿಕಿತ್ಸೆಯ ಅವಧಿಯೂ ಕಡಿಮೆಯಾಗುವುದು. ವೈದ್ಯರು ಚಿಕಿತ್ಸೆಯ ಎಲ್ಲ ವಿಷಯಗಳನ್ನು ತಿಳಿಸಿದಂತೆ ತಪ್ಪದೇ ನಡೆಯಬೇಕು. ಕೃತಕವಾತವಕ್ಷ ಚಿಕಿತ್ಸೆಯನ್ನು ತಪ್ಪದೇ— ವೈದ್ಯರು ಹೇಳಿದ ವೇಳೆಯಲ್ಲಿ ತಕೊಳ್ಳಬೇಕು. ಆಲಸ್ಯದಿಂದ ಬಿಟ್ಟರೆ ಅಥವಾ ಅವಧಿಯನ್ನು ಹೇಳಿದ್ದಕ್ಕಿಂತ ಮುಂದೂಡಿದರೆ, ಕೆಲವೊಮ್ಮೆ ಗಾಳಿ ಸೇರಿಸಲು ಸಾಧ್ಯವಾಗದೆ, ಚಿಕಿತ್ಸೆಯಿಂದಾಗುವ ಲಾಭವನ್ನು ಕಳೆದುಕೊಂಡು ಅಪಾಯಕ್ಕೆ ಗುರಿಯಾಗಬಹುದು. ರೋಗಿಯು ವೈದ್ಯರ ಸಲಹೆಯಂತೆ ಹೇಳಿದ ಅವಧಿಗೆ ತಪ್ಪದೆ ತನ್ನ ಪ್ರಕೃತಿಯ ಪರೀಕ್ಷೆಗಾಗಿ ಅವರನ್ನು ಕಾಣಬೇಕು. ರೋಗಿಗಳು ರೋಗದ ಸೋಂಕು ಇರಬಹುದಾದ ಯಾವುದೇ ಸ್ಥಳ, ಸಿನೆಮಾಗೃಹ ಇತ್ಯಾದಿ ಜನದಟ್ಟಣೆ ಇರುವ ಸ್ಥಳಗಳಿಗೆ ಹೋಗದಿರುವುದು ಉತ್ತಮ. ರೋಗದಿಂದ ವಿಮುಕ್ತನಾದ ಬಳಿಕ, ತನ್ನ ಮುಂಚಿನ ಉದ್ಯೋಗಕ್ಕೆ ಹೋಗಬೇಕಾದರೆ, ರೋಗಿಯು ತಾನು ಪಡುವ ಶ್ರಮವನ್ನು ಕ್ರಮವಾಗಿ ಹೆಚ್ಚಿಸುತ್ತ ಹೋಗಬೇಕು. ಹೀಗೆ ಮಾಡುವಾಗ ಪ್ರಕೃತಿಯ ಮೇಲೂ ರೋಗದ ಮೇಲೂ ಉಂಟಾಗುವ ಪರಿಣಾಮವನ್ನು ಜಾಗ್ರತೆಯಿಂದ ಕಾಯುತ್ತಿರಬೇಕು. ಹೀಗೆ ಮಾಡುವುದರಿಂದ ಏನೂ ಹೆಚ್ಚುಕಡಿಮೆ ತೋರದಲ್ಲಿ, ತನ್ನ ಉದ್ಯೋಗಕ್ಕೆ ಹೋಗಲು ಸಹಾಯವಾಗುವುದು. ಉದ್ಯೋಗದಲ್ಲಿಯೂ ಕೆಲವು ವರ್ಷಗಳ ವರೆಗೆ ವೈದ್ಯರ ಸಲಹೆಯಂತೆ ವರ್ತಿಸುವುದು ಲೇಸು. ಕ್ಷಯರೋಗಿಗಳ ಸಂಪರ್ಕದಲ್ಲಿದ್ದರೆ, ಆಗಾಗ ವರ್ಷಕ್ಕೊಮ್ಮೆಯಾದರೂ ವೈದ್ಯರಿಂದ ಪ್ರಕೃತಿಯನ್ನು ತಪಾಸಿಸಬೇಕು. ಯಾವ ರೀತಿಯ ಜ್ವರವಾಗಲಿ ಕೆಮ್ಮಾಗಲಿ, ಸ್ವಲ್ಪ ದಿವಸಗಳಲ್ಲಿ ಕಡಿಮೆಯಾಗದಿದ್ದರೆ, ಕಫದಲ್ಲಿ ರಕ್ತವು ಕಂಡುಬಂದರೆ ಅದರ ಕಾರಣವನ್ನು ವೈದ್ಯರಿಂದಲೇ ಕೇಳಿ ಅವರ ಸಲಹೆಯನ್ನು ಕೇಳಿ ಅದರಂತೆ ಯೋಗ್ಯರೀತಿಯಲ್ಲಿ ಚಿಕಿತ್ಸೆಯನ್ನು ತಕ್ಕೊಳ್ಳಬೇಕು.

(೨೯) **ಕ್ಷಯರೋಗಿ ಮತ್ತು ಪ್ರಪಂಚ.**— ರೋಗದಿಂದ ವಿಮುಕ್ತನಾದವನು ಖಂಡಿತವಾಗಿಯೂ ಲಗ್ನವಾಗಬಹುದು. ಆದರೆ ರೋಗದಿಂದ ವಿಮುಕ್ತನಾಗಿ ರೋಗದ ಎಲ್ಲ ಲಕ್ಷಣಗಳೂ ಮಾಯವಾಗಿ ೬ ರಿಂದ ೮ ವರ್ಷಗಳ ತರುವಾಯವೇ ಮದುವೆಯಾಗತಕ್ಕದ್ದು. ಅವರಂತೆಯೇ ಮದುವೆಯಾದವನು ಸಹ ಅಷ್ಟೇ ಅವಧಿಯನಂತರ ತನ್ನ ವೈವಾಹಿಕ ಜೀವನವನ್ನು ಸಾಗಿಸಬಹುದು. ಈ ವಿಷಯವು ಹೆಣ್ಣುಮಕ್ಕಳಿಗೂ ಇದೇ ರೀತಿ ಅನ್ವಯಿಸುತ್ತದೆ. ಇಲ್ಲವಾದರೆ ರೋಗಿಯಿಂದ ಸಾಮಾನ್ಯವಾಗಿ ಮತ್ತೊಬ್ಬರಿಗೆ ರೋಗದ ಸೋಂಕು ತಾಗುವ ಸಂಭವವಿರುವುದು. ಹೀಗೆ ಒಬ್ಬ ರೋಗಿಯಿಂದ ತನ್ನ ಮನೆತನದ ಗಂಡ-ಹೆಂಡಿರು-ಮಕ್ಕಳಲ್ಲಿಯೂ ಹಬ್ಬಬಹುದು. ಆದ್ದರಿಂದ ವೈದ್ಯರ ಸಲಹೆಯ ಪ್ರಕಾರ ತನ್ನ ವೈವಾಹಿಕ ಜೀವನವನ್ನು ಜಾಗ್ರತೆಯಿಂದ ನಡೆಸುವುದು ಲೇಸು.

(೩೦) **ಕ್ಷಯರೋಗದ ಪ್ರತಿಬಂಧಕ ಉಪಾಯ:**— ಕ್ಷಯರೋಗದ ಬಗ್ಗೆ ಸರಿಯಾದ ಪ್ರಚಾರಮಾಡಿ ರೋಗದ ಅಜ್ಞಾನವನ್ನು ನಿವಾರಿಸಬಹುದು. ಭಾರತದಲ್ಲಿ ಸರಕಾರವೂ ಕ್ಷಯರೋಗ ಸಂಘಗಳೂ ಇದರ ಬಗ್ಗೆ ಅನೇಕ ರೀತಿಯಿಂದ ಪ್ರಯತ್ನ ನಡೆಸಿವೆ. ಸಾರ್ವಜನಿಕರ ಆರೋಗ್ಯ, ಜೀವನದ ರೀತಿ, ಆರ್ಥಿಕಸ್ಥಿತಿ, ವಸತಿ ಮೊದಲಾದುವು ಸುಧಾರಿಸುವುದಲ್ಲದೆ, ಕ್ಷಯರೋಗದ ವಿಷಯ ಪ್ರಚಾರವನ್ನು ಮತ್ತು ಅದರ ನಿವಾರಣೆ ಕುರಿತು ಆಗಾಗ ಆಕಾಶವಾಣಿ, ಪತ್ರಿಕೆಗಳು, ಹಸ್ತಪತ್ರಿಕೆಗಳು, ಶಾಲೆ-ಕಾಲೇಜುಗಳು, ಪ್ರದರ್ಶನಗಳು, ಚಲಚ್ಚಿತ್ರಗಳು, ಪ್ರಕಟನೆಗಳು ಮುಂತಾದುವುಗಳ ಮುಖಾಂತರ ಜನರಲ್ಲಿ ಸರಿಯಾದ ತಿಳುವಳಿಕೆಯಾಗುವಂತೆ ಪ್ರಚಾರ ಮಾಡಬೇಕು. ತಂಬಾಕು, ಮದ್ಯ, ಚಹಾ, ಮುಂತಾದುವುಗಳ ಮೇಲೆ ಹಣವನ್ನು ಕೆಟ್ಟ ರೀತಿಯಿಂದ ಹೆಚ್ಚಾಗಿ ವೆಚ್ಚ ಮಾಡದೆ, ಒಳ್ಳೆಯ ಪೌಷ್ಟಿಕ ಆಹಾರ ಪದಾರ್ಥಗಳ ಸಲುವಾಗಿ ಉಪಯೋಗ ಮಾಡಿದರೆ, ತನ್ನ ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಳ್ಳಬಹುದು. ಸಾಕಷ್ಟು ಸೂರ್ಯ ಪ್ರಕಾಶ, ಮತ್ತು ಶುದ್ಧಗಾಳಿ ಸಂಚರಿಸುವ ವಸತಿಗಳಲ್ಲಿರಬೇಕು. ಮೇಲಿನ ಚಟಗಳನ್ನು ಬಿಟ್ಟು ಶುಭ್ರಜೀವನವನ್ನು ಸಾಗಿಸಬೇಕು. ಮನೆಯಲ್ಲಿಯೂ, ಹೊರಗೂ ಸ್ವಚ್ಛವಾಗಿರಬೇಕು. ಆಹಾರ ಸಾಮಗ್ರಿ ಮಾರುವವರು, ಊಟದ ವಸತಿ ಮತ್ತು ಗಿರಣಿಗಳಲ್ಲಿಯ ಕೆಲಸಗಾರರು, ಶಾಲೆ-ಕಾಲೇಜುಗಳಲ್ಲಿಯ ಅಧ್ಯಾಪಕರು, ಆಫೀಸುಗಳಲ್ಲಿರುವವರು ಮುಂತಾದವರು ಕ್ಷಯರೋಗಿಗಳಾಗಿರಕೂಡದು. ಅಲ್ಲಲ್ಲಿ ಕ್ಷಯರೋಗದ ಚಿಕಿತ್ಸಾಲಯಗಳೂ ಮತ್ತು ಆಸ್ಪತ್ರೆಗಳೂ ತಾತ್ಕಾಲಿಕ ಚಿಕಿತ್ಸೆಯ ಸಲುವಾಗಿ ಆವಶ್ಯವಿರುವುವು. ಹಲವು ರೋಗಿಗಳು, ಆರ್ಥಿಕ ಸ್ಥಿತಿಯ ಮೂಲಕ ಯೋಗ್ಯ ಚಿಕಿತ್ಸೆಯನ್ನು ಪಡೆಯಲು ಅಸಮರ್ಥರಾಗುವರು. ಅಂಥವರ ಸಹಾಯದ ಸಲುವಾಗಿ ಧನಸಹಾಯ ಸಂಸ್ಥೆಗಳು ಆವಶ್ಯವಿರುವವು. ಇಂಥ ಸಂಸ್ಥೆಗಳಿಗೆ ಧನಸಹಾಯ ಮಾಡಲು ಆದರ್ಶ ದಯಾಳುಗಳಾದ ಶ್ರೀಮಂತ ಸಜ್ಜನರೂ, ಮಹನೀಯರೂ ಮುಂದೆ ಬಂದು ಸಾರ್ವಜನಿಕ ಹಿತದ ದೃಷ್ಟಿಯಿಂದ ತಮ್ಮ ಹಾರ್ದಿಕ ಭಾವನೆಯಿಂದ ಮುಕ್ತಹಸ್ತದಿಂದ ಸಹಾಯಮಾಡಬೇಕು. ಭಾರತದಲ್ಲಿ ಈಗಲೂ ಅನೇಕ ಶ್ರೀಮಂತರು ಇರುವರು. ಆದರೆ ಅವರು ಬಹುಶಃ ಇಂತಹ ಕೆಲಸಗಳಿಗೆ ಸಹಾಯ ನೀಡದೆ ಬರೆ ವಿಮಾನದಲ್ಲಿ ಕುದುರೆಜೂಜು, ಸಟ್ಟಾ, ಲಾಟರಿ ಮುಂತಾದ ದುಂದುಗಾರಿಕೆಯ ವ್ಯವಹಾರದಲ್ಲಿ ವ್ಯರ್ಥ ಹಣವನ್ನು ವ್ಯಯಮಾಡುತ್ತಿರುವರು. ಅಂಥವರು ತಮ್ಮ ಹಣವನ್ನು ಬುದ್ಧಿಯನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸುವಂತೆ ಮುಂದೆ ಬಂದು, ಸಾರ್ವಜನಿಕ ಹಿತ ಕಾರ್ಯಗಳಿಗೆ ನೆರವಾಗುವರೆಂದು ಹಾರೈಸುವ!

ಇತ್ತೀಚೆಗೆ ಕ್ಷಯರೋಗದ ಪ್ರತಿಬಂಧದ ಸಲುವಾಗಿ ಬಿ. ಸಿ. ಜಿ. ದಾಕು ಚುಚ್ಚುವರು. ಇದರಿಂದ ಯಾವತರದ ನೋವು-ತ್ರಾಸು ಆಗುವುದಿಲ್ಲ. ಇದನ್ನು ಭಾರತ ಸರಕಾರವು ಎಲ್ಲೆಡೆಗಳಲ್ಲಿಯೂ ನಡೆಸಿರುವದು. ಇದು ಶ್ರೇಷ್ಠತರಗತಿಯ ಪ್ರತಿಬಂಧದ ಚುಚ್ಚುಮದ್ದು ಎಂದು ಕಂಡು ಹಿಡಿದಿರುವರು. ಇದರ ಲಾಭವನ್ನು ಸಾರ್ವಜನಿಕರು ಪಡೆಯಬೇಕು.

•◀ ಹಿಂದಿನ ಕಾಲದ ಹಳ್ಳಿಗಳು ▶•

(ವಿವೇಚನಾತ್ಮಕ ಪ್ರಬಂಧ)

ಡಾ. ಬಿ. ಪಿ. ಎಸ್. ರಾವ್, ಬೆಳಗಾಂವಿ.

-o◆o-

ಅಖಿಲ ವೈಶಿಷ್ಟ್ಯವು ಹಳ್ಳಿಯ ಸಮಾಜದಲ್ಲಿ ಇರುತ್ತಿದ್ದಿತಾದರೂ, ವ್ಯಕ್ತಿಗಳ ದೈನಂದಿನ ಜೀವನ ವ್ಯವಹಾರಗಳಲ್ಲಿ ಸಮತೆಯಿರುತ್ತಿದ್ದಿತು. ಜನರಲ್ಲಿ ಜಾಗೃತವಾಗಿದ್ದು ಕಾರ್ಯನಮಾಡುತ್ತಿದ್ದ ದಯೆ-ದಾಕ್ಷಿಣ್ಯ ದಾನಗುಣಗಳು, ಸಮಾಜದಲ್ಲಿಯ ಸಮತೆಯನ್ನು ಕಾಯಲು ಸಮರ್ಥವಾಗಿದ್ದುವು.

—◆—

ಭಾರತವು ಬಹಳ ಹಿಂದಿನ ಕಾಲದಿಂದಲೂ ಹಳ್ಳಿಗಳಿಂದಲೆ ತುಂಬಿದ ರಾಷ್ಟ್ರವಾಗಿದೆ. ಇಂದು ಕೂಡ ಹಳ್ಳಿಗಳ ಸಂಖ್ಯೆಯೆ ಹೆಚ್ಚಾಗಿದೆ, ಒಂದು ರೀತಿಯಿಂದ ನೋಡಿದರೆ, ಭಾರತವು ಯಾವಾಗಲೂ ಹಳ್ಳಿಗಳ ರಾಷ್ಟ್ರವೆಂದೇ ಹೇಳಬಹುದು; ಏಕೆಂದರೆ, ಭರತ ದೇಶದ ಯಾವ ಭಾಗದಲ್ಲಿ ನೋಡಿದರೂ ಬಹುಸಂಖ್ಯಾಕ ಜನರು ಒಕ್ಕಲುತನವನ್ನು ಅವಲಂಬಿಸಿದವರೇ ಆಗಿರುವರು. ಒಕ್ಕಲುತನವೇ ಭಾರತೀಯರ ಪ್ರಮುಖವಾದ ಉದ್ಯೋಗ. ಸಾಗುಮಾಡಲು ಯೋಗ್ಯವಿರುವ ಭೂಮಿಯಿದ್ದಲ್ಲೆಲ್ಲ ಒಕ್ಕಲಿಗರು ವಾಸಿಸಬೇಕಾಗುತ್ತಿದೆ. ಇನ್ನೊಂದು ಸಂಗತಿಯೆಂದರೆ, ಒಕ್ಕಲಿಗನ ಭೂಮಿಗಳು ಅವನಿರುವ ಸ್ಥಳದಿಂದ ಬಹಳ ದೂರವಿರಬಾರದು. ಈ ಅನುಕೂಲತೆ ಮುನ್ನರಿತೇ ಹಿಂದಿನ ಕಾಲದಲ್ಲಿ ಹಲವಾರು ಒಕ್ಕಲುಗಳು ಮನೆ-ಮಾಡಿಕೊಂಡಿದ್ದ ಎಡೆಗಳೆಲ್ಲ ಬರುಬರುತ್ತ ಹಳ್ಳಿಗಳಾಗಿ ಪರಿಣಮಿಸಿ, ಒಂದೊಂದು ಹೆಸರನ್ನು ಹೊಂದಿನಿಂತುವು.

ಯಾರೇ ಇರಲಿ, ಒಂದೆಡೆಯಲ್ಲಿ ಮನೆಕಟ್ಟಿಕೊಂಡು ನಿಲ್ಲಬೇಕೆಂದರೆ, ಮೊದಲನೆಯದಾಗಿ ಅಲ್ಲಿ ನೀರಿನ ಅನುಕೂಲತೆಯು ಇರಬೇಕಾಗುವುದು. ನೀರಿಲ್ಲದೆ ಯಾವ ಪ್ರಾಣಿಯೂ ಬದುಕಲಾರದು. ಅವರಲ್ಲಿಯೂ ಮನುಷ್ಯರಿಗಂತೂ ನೀರೆಂದರೆ ಜೀವದ ಜೀವಾಳವಿದ್ದಂತೆ. ಕುಡಿಯಲು ನೀರು ಬೇಕು. ಜಳಕಕ್ಕೆ ನೀರು ಬೇಕು. ಬೆಳೆಗಳಿಗೆ ನೀರು ಬೇಕು. ಆದುದರಿಂದ ನೀರಿನ ಆಸರೆಯನ್ನು ನೋಡಿಕೊಂಡೇ ಅವರು ತಮ್ಮ ಬೀಡನ್ನು ನಿರ್ಣಯಿಸುತ್ತಿದ್ದರು ಭಾರತದಲ್ಲಿ ಹಳ್ಳಿಗಳು ಮೊದಲು ಹುಟ್ಟಿಕೊಂಡುದು ಹೊಳೆ-ಹಳ್ಳಗಳ ದಂಡೆಗಳಲ್ಲಿ; ಸ್ವಾಭಾವಿಕವಾದ ಕೆರೆ-ಕುಂಟೆಗಳಿರುವ ಪ್ರದೇಶಗಳಲ್ಲಿ. ಪ್ರಜಾಸಂಖ್ಯೆ ಹೆಚ್ಚಿದಂತೆಲ್ಲ ಅಲ್ಲಿಯ ಭೂಮಿ ಸಾಕಾಗದೆ, ಬೇರೆಯ ಸಾಗುಭೂಮಿಯನ್ನು ಹುಡುಕಬೇಕಾಗುತ್ತಿತ್ತು. ಕೆಲವರು ಇಲ್ಲಿಂದ ಅಲ್ಲಿ ಹೋಗಿ, ಹೊಸ ಬೀಡುಗಳನ್ನು ಕಟ್ಟಬೇಕಾಗುತ್ತಿತ್ತು. ಇಂತಹ ಹೊಸ ಬೀಡುಗಳಿಗೆ ಸ್ವಾಭಾವಿಕ ಜಲಾಶಯಗಳ ಅನುಕೂಲತೆಯಿರದಿದ್ದಾಗ, ಮಳೆಗಾಲದ ನೀರನ್ನು ಸಂಗ್ರಹಿಸಿ ಇರಿಸಿಕೊಳ್ಳುವಂತಹ ಏರ್ಪಾಡನ್ನು ಮಾಡಿಕೊಳ್ಳಬೇಕಾಗುತ್ತಿತ್ತು. ಇಂತಹ ಏರ್ಪಾಡುಗಳಿಂದಲೇ ಹಲವು ಕಡೆಗೆ ಕೃತ್ರಿಮವಾದ ಕೆರೆ-ಕುಂಟೆ-ಹೊಂಡ-ಕುಂಡಗಳು ಆಣಿಗೊಂಡುವು. ನಮ್ಮ ಕನ್ನಡ ನಾಡಿನಲ್ಲಿಯ ಹಳ್ಳಿಗಳ ಹೆಸರುಗಳನ್ನು ಪರೀಕ್ಷೆಮಾಡಿ ನೋಡಿರಿ! ಬಹುಸಂಖ್ಯಾಕ ಹಳ್ಳಿಗಳು ಅಲ್ಲಲ್ಲಿಯ ಜಲಾಶಯದ ಸ್ಥಿತಿಯನ್ನು ಸೂಚಿಸುವಂತಹವಾಗಿವೆ.

ಒಕ್ಕಲಿಗರಿಗಾಗಿ ಹಳ್ಳಿಗಳು ಹುಟ್ಟಿದುವೇನೋ ಸರಿಯೇ! ಆದರೆ ಒಕ್ಕಲಿಗರ ಜೀವನಕ್ಕೆ ಬೇರೆ ಹಲವು ಪದಾರ್ಥಗಳ ಆವಶ್ಯಕತೆ ಇರುವುದಲ್ಲವೆ? ಒಕ್ಕಲುತನಕ್ಕೆ ರಂಟೆ-ಕುಂಟೆ-ನೇಗಿಲು-ಚಕ್ಕಡಿಗಳು ಬೇಕು. ಅದಕ್ಕಾಗಿ ಅವುಗಳನ್ನು ಮಾಡಲು ಬಡಿಗರುಬೇಕು. ಹಾಗೆಯೆ ಕುಡ-ಕುಳ-ಕುಡುಗೋಲು-ಕುರ್ಚಿಗೆ-ಕೊಡಲಿ-ಗುದ್ದಲಿ-ಸಲಿಕೆಗಳುಬೇಕು. ಅವುಗಳನ್ನು ಒದಗಿಸಲು ಕಮ್ಮಾರರು ಬೇಕಾದರು. ಅಡಿಗೆಗೆ-ನೀರು ತುಂಬುವುದಕ್ಕೆ-ಗಡಿಗೆ-ಮಡಕೆಗಳು ಬೇಕು; ಅದಕ್ಕಾಗಿ ಕುಂಬಾರರು ಬೇಕಾದರು. ಮೈಯನ್ನು ಮುಚ್ಚುವುದಕ್ಕೆ ಬಟ್ಟೆ-ಬರೆಗಳ ಆವಶ್ಯಕತೆ ಎನಿಸಿತು. ನೇಕಾರರು ಬೇಕಾದರು. ನೇಕಾರಿಕೆಯೊಂದಿಗೆ ಪಿಂಜಾರರು, ಬಣ್ಣಗಾರರು ಬಂದರು. ನಾಗರಿಕತೆ ಬೆಳೆದಂತೆಲ್ಲ ತಾಮ್ರ-ಹಿತ್ತಾಳೆಗಳ ಪಾತ್ರೆಗಳ ಅಗತ್ಯವೆನಿಸಿತು. ಅದಕ್ಕಾಗಿ ಕಂಚುಗಾರರು ಸಿದ್ಧರಾದರು. ಅಲಂಕಾರಕ್ಕಾಗಿ ಬೆಳ್ಳಿ-ಬಂಗಾರ-ಮುತ್ತು-ರತ್ನಗಳ ಒಡವೆಗಳು ಬೇಕಾದುವು. ಅವುಗಳಿಗಾಗಿ ಅಕ್ಕಸಾಲಿಗರು ಬಂದರು. ಒಕ್ಕಲಿಗನೊಬ್ಬನ ಅನುಕೂಲತೆಗಾಗಿ, ಆತನ ದುಡಿಮೆಯ ಫಲವನ್ನು ಅವಲಂಬಿಸಿದ ಹಲವು ಉದ್ಯಮಿಗಳು ಹಳ್ಳಿಗಳಲ್ಲಿ ಕಾಣಿಸಿಕೊಂಡರು. ಒಕ್ಕಲುತನದ ನೆರವಿಗಾಗಿ ಹೆಚ್ಚು ಹೆಚ್ಚು ಜನರ ಆವಶ್ಯಕತೆಯೆನಿಸತೊಡಗಲು, ಅಂತಹ ಜನರ ತಂಡವೂ ಹಳ್ಳಿಗಳಲ್ಲಿ ಬೆಳೆಯಿತು. ಇವರೇ ಕೂಲಿಯಾಳುಗಳೆನಿಸಿಕೊಂಡರು. ಒಕ್ಕಲಿಗನಿಗೆ ಈ ಎಲ್ಲ ಉದ್ಯಮಿಗಳೂ ಬೇಕು; ಕೂಲಿಯಾಳುಗಳೂ

ಬೇಕು. ಅದರಂತೆಯೆ ಈ ಉದ್ಯಮಿಗಳಿಗೂ ಕೂಲಿಯಾಳುಗಳಿಗೂ ಒಕ್ಕಲಿಗನು ಬೇಕು. ಒಕ್ಕಲಿಗನ ಸಮೃದ್ಧ ಜೀವನದಿಂದಲೇ ಇವರೆಲ್ಲ ಬದುಕಬೇಕು. ಇವರೆಲ್ಲರ ಸಹಕಾರ-ಸಹಾನುಭೂತಿಗಳಿಂದಲೇ ಒಕ್ಕಲಿಗನ ಜೀವನವು ಸಮೃದ್ಧವಾಗಬೇಕು. ಇದರಿಂದಲೇ ಭಾರತದ ಹಿಂದಿನ ಕಾಲದ ಹಳ್ಳಿಗಳೆಂದರೆ ಪರಸ್ಪರ ಸಹಕಾರ-ಸಹಾನುಭೂತಿಗಳಿಗೆ ಆಗರವಾಗಿದ್ದುವು. ಒಂದು ಹಳ್ಳಿಯ ಜನವೆಲ್ಲ ತಾವು ಒಂದೆ ಕುಟುಂಬಕ್ಕೆ ಸೇರಿದವರೆಂಬ ಸೌಹಾರ್ದದಿಂದ ನಡೆದುಕೊಳ್ಳುತ್ತಿದ್ದರು. ಎಲ್ಲರಿಗೂ ಕೈತುಂಬ ಕೆಲಸವಿರುತ್ತಿದ್ದಿತು. ಕೆಲಸಕ್ಕೆ ಪ್ರತಿಫಲವಾಗಿ ಸಾಕಷ್ಟು ಹಿಟ್ಟು-ಬಟ್ಟೆ ದೊರೆಯುತ್ತಿದ್ದಿತು. ಸಾಮಾನ್ಯರ ಜೀವನಕ್ಕೆ ಇದಕ್ಕಿಂತ ಇನ್ನೇನು ಹೆಚ್ಚು ಬೇಕು? ಎಂತಲೇ ಹಿಂದಿನ ಕಾಲದ ಹಳ್ಳಿಗರು ತೃಪ್ತರಾಗಿರುತ್ತಿದ್ದರು; ಸಂತುಷ್ಟರಾಗಿರುತ್ತಿದ್ದರು. ದ್ವೇಷ-ದುರಾಶೆ ಮತ್ಸರ-ಈರ್ಷೆಗಳಿಗೆ ಅವಕಾಶವೇ ಇರಲಿಲ್ಲ.

ದೇವರು, ಧರ್ಮ, ಪಾಪ, ಪುಣ್ಯ ಇವುಗಳ ಭಾವನೆಯು ಭಾರತೀಯರಲ್ಲಿ ಅನಾದಿಕಾಲದಿಂದಲೂ ಬೆಳೆದುಬಂದಿದೆ. ಈ ಭಾವನೆಯು ನಮ್ಮ ಹಳ್ಳಿಗರಲ್ಲಿ ಸಂಪೂರ್ಣ ಜಾಗೃತವಾಗಿತ್ತು. ದಯೆ-ದಾನಗುಣಗಳು ದೇವರು-ಧರ್ಮಗಳಿಗೆ ಮೆಚ್ಚಿಕೆಯ ವಿಷಯವೆಂಬುದನ್ನು ನಮ್ಮ ಹಳ್ಳಿಗರು ಚೆನ್ನಾಗಿ ಮನವರಿಕೆ ಮಾಡಿಕೊಂಡಿದ್ದರು. ಅಂದಿನ ಹಳ್ಳಿಗಳಲ್ಲಿ ದೇವಸ್ಥಾನಗಳಿಗೂ ಧರ್ಮಸ್ಥಾನಗಳಿಗೂ ತುಂಬ ಗೌರವವಿರುತ್ತಿದ್ದಿತು. ದೇವಸ್ಥಾನಗಳಲ್ಲಿ ನಡೆಯಬೇಕಾದ ಯಾವ ಸೇವೆ-ಸತ್ಕಾರಗಳಿಗೂ ಲೋಪ ಬಾರದಂತೆ ಹಳ್ಳಿಗರು ಕಣ್ಣಿಟ್ಟು ನೋಡುತ್ತಿದ್ದರು; ಆ ಸೇವೆ-ಸತ್ಕಾರಗಳಿಗೆ ಅವಶ್ಯಕವೆನಿಸುವ ಸಲಕರಣೆ-ಶ್ರಮಗಳನೆಲ್ಲ ಅವರು ಭಕ್ತಿ-ವಿಶ್ವಾಸಗಳಿಂದ ಪೂರಯಿಸಿಕೊಡುತ್ತಿದ್ದರು. ಅಂದು ಹಳ್ಳಿಯ ದೇವಸ್ಥಾನಗಳಲ್ಲಿ ನಿತ್ಯ-ನಿತ್ಯವೂ ನಡೆಯುವ ಪೂಜೆ-ಪುರಸ್ಕಾರಗಳೇನು? ವಾರದ ಉತ್ಸವಗಳೇನು? ಹಬ್ಬದ ವೈಭವಗಳೇನು? ವರ್ಷದ ಕೊನೆಯ ಜಾತ್ರೆಯ ಸಮಾರಂಭವೇನು? ಇವೆಲ್ಲ ಅಂದಿನ ಹಳ್ಳಿಗರ ಹೃದಯವಿಕಾಸಕ್ಕೆ ಕಾರಣವಾಗಿದ್ದುವು; ಜೀವನದಲ್ಲಿ ಉಲ್ಲಾಸ-ಹರ್ಷಗಳನ್ನು ತುಂಬುತ್ತಿದ್ದುವು.

ಧರ್ಮಸ್ಥಾನಗಳಲ್ಲಿರುವ ಧರ್ಮದ ಪ್ರತಿನಿಧಿಗಳು; ಹಳ್ಳಿಗರಿಗೆ ಸದಾಚಾರವನ್ನೂ ಸದ್ಧರ್ಮದ ನಿಯಮಗಳನ್ನೂ ತಿಳಿಯಾದ ಮಾತುಗಳಿಂದ ಉಪದೇಶಿಸುತ್ತಿದ್ದರು. ತಪ್ಪಿನಡೆವವರನ್ನು ನೀತಿಯ ನುಡಿಗಳಿಂದ ತಿದ್ದುತ್ತಿದ್ದರು; ಅವರ ಉಪದೇಶಗಳೆಂತಹವು:

"ಕಳಬೇಡ, ಕೊಲಬೇಡ. ಹುಸಿಯ ನುಡಿಯಲು ಬೇಡ! ತನ್ನ ಹೊಗಳಲು ಬೇಡ; ಅನ್ಯರನು ನಿಂದಿಸಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ! ಇದೇ ನಮ್ಮ ಕೂಡಲ ಸಂಗಯ್ಯನ ಒಲಿಸುವ ಪರಿ ಕಾಣಾ!"

"ಶೀಲವನು ಕೈಕೊಂಡು ನಡೆಸದವ ಹೊಲೆಯ!
ಹೇಳಿದಾ ಸತ್ಕಥೆಯ ಕೇಳದವ ಹೊಲಿಯ!
ಆಳಾಗಿ ದಣಿಗೆರಡ ಬಗೆವಾತ ಹೊಲೆಯ!
ಕೇಳುಮಾತಾಡುವವ ಬಲು ಕೆಟ್ಟ ಹೊಲೆಯ!"

ಇಂತಹ ಉಪದೇಶಗಳನ್ನವರು ಆದರದಿಂದ ಕೇಳುತ್ತಿದ್ದರ
ಬಾಳಿನಲ್ಲಿಯ ತಪ್ಪುಗಳನ್ನು ತಿದ್ದಿಕೊಂಡು, ಮಾನವರಂತೆ ಬಾಳ
ಹೆಣಗುತ್ತಿದ್ದರು.

"ಅನ್ನವನು ನೀಡುವುದು, ನನ್ನಿಯನೆ ನುಡಿಯುವುದು!
ತನ್ನಂತೆ ಪರರ ಬಗೆದೊಡೆ ಕೈಲಾಸ
ಬಿನ್ನಾಣವಕ್ಕು ಸರ್ವಜ್ಞ"
"ಕೊಟ್ಟದ್ದು ತನಗೆ ಬೈಚಿಟ್ಟದ್ದು ಪರರಿಂಗೆ
ಕೊಟ್ಟದ್ದು ಕೆಟ್ಟತೆನಬೇಡ, ಅದು ಮುಂದೆ
ಕಟ್ಟಿದಾ ಬುತ್ತಿ ಸರ್ವಜ್ಞ!"

ಇವೆಲ್ಲವುಗಳು ಹಳ್ಳಿಗರ ಬಾಳನ್ನು ತಿದ್ದಲಿಕ್ಕಾಗಿಯೆ ನಮಂ
ಬಂದ ನೀತಿಸಂದೇಶಗಳು. ಹಿಂದಿನ ಕಾಲದ ಹಳ್ಳಿಗರು ಈ ಸಂದೇ
ಗಳನ್ನು ಮನವರಿಕೆ ಮಾಡಿಕೊಂಡು ನಡೆಯುತ್ತಿದ್ದರು. ಎಂತ
ಅಂದಿನ ಜನರಲ್ಲಿ ಯಾರಿಗೂ ಬರಿಹೊಟ್ಟೆ-ಬರಿಮೈಗಳಿಂದ ಬಳ
ಬೇಕಾಗುತ್ತಿರಲಿಲ್ಲ. ಬಡವರು ಅಂದು ಇರಬಹುದಾದರೂ ಸಿರಿವಂ
ದಾನಗುಣವು, ಬಡತನದ ಬೇಗೆಗೆ ಅವರನ್ನು ಬೀಳಗೊಡುತ್ತಿರಲಿಲ್ಲ

ರಾಜ್ಯವನ್ನು ಯಾವ ರಾಜರೇ ಆಳುತ್ತಿರಲಿ; ರಾಜ್ಯಕ್ಕೆ ಸೇರಿ
ಹಳ್ಳಿಗಳ ವ್ಯವಸ್ಥೆಯಲ್ಲಿ ಅವರು ಕೈಯನ್ನೇ ಹಾಕುತ್ತಿರಲಿಲ್ಲ. ಹಳ್ಳಿ
ಹಿರಿಯ ಗೌಡನೇ ಅದನ್ನು ಆಳುವ ಅರಸು. ಹಳ್ಳಿಯ ದೈವದ ಹಿ
ಯರು ಗೌಡನ ಆಳಿಕೆಗೆ ಸಹಾಯಕರು. ದೈವದವರ ಸಂಪೂಣ
ಸಮ್ಮತಿಯಿಲ್ಲದೆ ಗೌಡನು ಯಾವ ಕೆಲಸವನ್ನೂ ಮಾಡಲಾ
ಹಳ್ಳಿಗರೆಲ್ಲರೂ ಗೌಡನಿಗೆ ಅರಸುಮನ್ನಣೆಯನ್ನು ಸಲ್ಲಿಸುವರು. ಹ
ಗರ ಜಗಳ-ಮನಸ್ತಾಪಗಳನ್ನು ಗೌಡನು ದೈವದವರ ನೆರವಿನಿ
ತೀರಿಸುವನು. ಸುಳ್ಳುಹೇಳುವುದು ಮಹಾಪಾಪವೆಂದು ತಿಳ
ಹಳ್ಳಿಗರು, ಸುಳ್ಳುಸಾಕ್ಷ್ಯ ಹೇಳಲು ಎಂದೂ ಸಿದ್ಧರಾಗುತ್ತಿರಲಿ
ಗೌಡನ ಊಳಿಗದವರಾಗಿ ಓಲೆಕಾರರು ಇರುತ್ತಿದ್ದರು.

ದೇವಸ್ಥಾನದ ಉತ್ಸವಗಳೂ ಸಾರ್ವಜನಿಕ ಹಬ್ಬ-ಜಾತ್ರೆಗ
ಗೌಡನ ಅಧ್ಯಕ್ಷತೆಯಲ್ಲಿಯೆ ನಡೆಯುವುವು. ಯುಗಾದಿ, ಕಾ
ಹುಣ್ಣಿವೆ, ಮಹಾನವಮಿ, ದಸರೆ, ನಾಗರಪಂಚಮಿ, ಸೀಗೆಹುಣ್ಣಿ
ದೀಪಾವಳಿ, ಗೌರಿಹುಣ್ಣಿವೆ, ಮಕರಸಂಕ್ರಮಣ, ಶಿವರಾತ್ರಿ, ಹೋ
ಹುಣ್ಣಿವೆ. ರಂಗಪಂಚಮಿ, ಇವೆಲ್ಲ ಹಳ್ಳಿಗರ ಸಾರ್ವಜನಿಕ ಹಬ್ಬಗ
ಈ ಹಬ್ಬಗಳ ಕಾರ್ಯಕಲಾಪಗಳಲ್ಲಿ ಹಳ್ಳಿಯ ಎಲ್ಲ ಜನರ
ಆತ್ಮೀಯಭಾವದಿಂದ ಭಾಗವಹಿಸುತ್ತಿದ್ದರು. ಆದುದರಿಂದ ಎಲ್ಲ ಹ
ಗಳೂ ನಿಜವಾದ ಹಬ್ಬದ ದಿನಗಳಾಗಿ ಪರಿಣಮಿಸಿ, ಹಳ್ಳಿಗರ ಹೃದಂ
ಗಳನ್ನು ಹೊಂದಿಸಲಿಕ್ಕೆ ಕಾರಣವಾಗುತ್ತಿದ್ದುವು.

ಸುಖದಿಂದ ಬಹುಕಾಲ ಬಾಳಲಿಕ್ಕೆ ದೇಹವು ಗಟ್ಟಿಮುಟ್ಟಾಗಿ
ಬೇಕೆಂಬುದರ ತಿಳಿವಳಿಕೆ ನಮ್ಮ ಹಳ್ಳಿಗರಿಗೆ ಸಂಪೂರ್ಣವಾಗಿ ಇದ್ದಿತ
ಗರಡಿಮನೆಯ ವ್ಯಾಯಾಮಸಾಧನೆಯನ್ನವರು ಎಳೆಯತನದಲ್ಲಿಯೆ
ಪ್ರಾರಂಭಿಸುತ್ತಿದ್ದರು. ಮಲ್ಲಕಂಬವಾಡುತ್ತಿದ್ದರು. ಲೋಡುಗಳ

ರುವುತ್ತಿದ್ದರು ಭಾರವಾದ ಕಲ್ಲುಗುಂಡುಗಳನ್ನು ಎತ್ತುತ್ತಿದ್ದರು. ಉಸುಕು ತುಂಬಿದ ಚೀಲಗಳನ್ನು ನೆಗಹುತ್ತಿದ್ದರು. ಕುಸ್ತಿಯಾಟ ಕಲಿಯುತ್ತಿದ್ದರು. ದಾಂಡು-ಪಟ್ಟಿಗಳನ್ನು ಆಡುತ್ತಿದ್ದರು ಕತ್ತಿಗಳನ್ನು ತಿರುಹುತ್ತಿದ್ದರು. ಕುದುರೆಯ ಸವಾರಿಯನ್ನೂ ಅಭ್ಯಾಸಿಸುತ್ತಿದ್ದರು. ಜೂನೆಯ (ಪೌಷ್ಯ) ತಿಂಗಳಲ್ಲಿಯೂ ಹೋಳಿಹಬ್ಬ-ಯುಗಾದಿಯ ಸುರುದಿನಗಳಲ್ಲಿಯೂ ಗುಂಪುಗೂಡಿ ಬೇಟೆಯಾಡಲು ಹೋಗುತ್ತಿದರು. ಇವೆಲ್ಲ ವ್ಯಾಯಾಮದ ಮೂಲಕವಾಗಿಯೇ, ಅಂದಿನ ಕಾಲದ ಹಳ್ಳಿಗಳಲ್ಲಿ ಮುದುಕರ ಸಂಖ್ಯೆ ಹೆಚ್ಚಾಗಿ ಕಂಡುಬರುತ್ತಿದ್ದಿತು. ಹುಟ್ಟಿದ ಕೂಸುಗಳು ನಿರೋಗಿಯಾಗಿರುತ್ತಿದ್ದುವು.

ಕಲಾಪ್ರೀತಿಯೂ ಅಂದಿನ ಹಳ್ಳಿಗಳಲ್ಲಿ ಕಡಮೆಯಿರಲಿಲ್ಲ. ರಸಮಯವಾದ ಹಳ್ಳಿಯ ಸಾಹಿತ್ಯ ಅವರ ಜೀವನದಲ್ಲಿ ಹಾಸು-ಹೊಕ್ಕಾಗಿ ಹರಡಿಕೊಂಡಿದ್ದಿತು. ತೆರವಿನ ದಿನಗಳು ಬಂದಾಗ, ರಸಿಕರಾದ ತರುಣರು ಹಲಗೆ-ಕರಡಿಗಳ ಮಜಲುಗಳನ್ನು ನಡೆಯಿಸುತ್ತಿದ್ದರು. ಈ ಮಜಲುಗಳೊಂದಿಗೆ ಕಲಗಿ-ತುರಾಯಿ ಲಾವಣಿ ಪದಗಳನ್ನು ಹಾಡಿ-ಹಾಡಿಸಿ ಕೇಳುತ್ತಿದ್ದರು. ಯಕ್ಷಗಾನ ಬಯಲಾಟ, ಆಟ್ಟದಾಟ, ಕೃಷ್ಣಪಾರಿಜಾತ, ರಾಧಾನ ಆಟ ಮೊದಲಾದ ಜಾನಪದ ನಾಟಕಗಳನ್ನಾಡುತ್ತಿದ್ದರು. ಸೂತ್ರದ ಗೊಂಬೆಯಾಟಗಳನ್ನೂ ಚರ್ಮದ ಗೊಂಬೆಯಾಟಗಳನ್ನೂ ಆಡಿಸುತ್ತಿದ್ದರು. ಜೋಗಿ-ಗೊಂದಲಿಗರಿಂದ ಕತೆಗಳನ್ನು ಹೇಳಿಸುತ್ತಿದ್ದರು. ಪುರಾಣ-ಕೀರ್ತನ-ಭಜನಸಪ್ತಾಹಗಳನ್ನು ನಡೆಯಿಸುತ್ತಿದ್ದರು. ಸಾಕ್ಷರರ ಸಂಖ್ಯೆ ಹಳ್ಳಿಗಳಲ್ಲಿ ಸಾಕಷ್ಟು ಕಾಣದಿದ್ದರೂ, ಸಂಸ್ಕಾರಸಂಪನ್ನರ ಸಂಖ್ಯೆ ಸಾಕಷ್ಟು ಕಾಣುತ್ತಿದ್ದಿತು. ಆದುದರಿಂದಲೇ ಸತ್ಯನಂತಿಕೆ, ಪ್ರಾಮಾಣಿಕತನ, ಸಹಕಾರ, ಸಹಾನುಭೂತಿ, ದಾಕ್ಷಿಣ್ಯಗಳು ಜೀವನದ ಸುಖಕ್ಕೆ ಎಷ್ಟೊಂದು ಸಾಧಕವಾಗಿರುವುವೆಂಬುದನ್ನು ನಮ್ಮ ಹಳ್ಳಿಗರೆಲ್ಲ ಒಳ್ಳೆಯ ರೀತಿಯಿಂದ ತಿಳಿದುಕೊಂಡಿದ್ದರು

ಸಿರಿವಂತರ ಅನ್ನ-ಉಡಿಗೆ-ತೊಡಿಗೆಗಳಲ್ಲಿಯೂ ಬಡವರ ಅನ್ನ-ಉಡಿಗೆ-ತೊಡಿಗೆಗಳಲ್ಲಿಯೂ ಹೆಚ್ಚಿನ ಹೆಚ್ಚು-ಕಡಿಮೆಗಳಿರಲಿಲ್ಲ ಹಿಂದಿನ

(೩೧೮ ನೆಯ ಪುಟಕ್ಕೆ ಮುಂದುವರಿದಿದೆ.)

(೩೦೪ ನೆಯ ಪುಟದಿಂದ ಬಂದುದು)

ಕೆಲವೇ ದಿನಗಳಲ್ಲಿ ಹಿರಿಯಾತನು ಧನ-ಸಂಪತ್ತುಗಳು ಕಲ್ಪಿಸುವ ವಿಲಾಸಗಳನ್ನೆಲ್ಲ, ವಿಲಾಸ ತಂದೊಡ್ಡುವ ಆನಂದವನ್ನೆಲ್ಲ ಕಂಡುಕೊಂಡ. ಅವುಗಳು ಅವನನ್ನಾಕರ್ಷಿಸಿದುವು. ಆತ ಸಮಗ್ರ ರಾಶಿಯತ್ತ ದಿಟ್ಟಿಸಿದ ಆದರೆ ಎಲ್ಲ ತನ್ನದಲ್ಲ....ತನ್ನದಾಗಿಸಲು....ಹಾಂ, ಒಂದೇ ಮಾರ್ಗ ತೋರಿತು: ವಂಚನೆ!....ಆತ ಆದರಲ್ಲೇ ಮುಂದರಿಯಲೆಳಸಿದ.

x x x x

ಒಂದು ದಿನ ಹಿರಿಯಾತ ಸಹಜಾತನೊಡನೆ: "ತಮ್ಮ ಈ ವೈಭವ, ಈ ವಿರಾಟ್ ಸಂಪತ್ತುಗಳನ್ನು ಸಂರಕ್ಷಿಸಿಕೊಳ್ಳಲು ಬಹಳೇ ಜಾಗರೂಕತೆ ಬೇಕು. ನಿನಗೆ ಆ ಚಾತುರ್ಯಾವೀಗ ಇಲ್ಲ. ಏನಾದರೂ ನೀನು ಕಿರಿಯವನ....—ಹೆದರಬೇಡ....ನಿನಗೆ ನನ್ನಂತೆ ಎಲ್ಲ ಅನುಕೂಲತೆಗಳೂ ಇರುವುವು....ನಾನೇ ಎಲ್ಲ ಸರಿಹೋಗುವಂತೆ ನಡೆಸುವೆನು." ಎಂದ. ಅಂದಿನಿಂದ ಹಿರಿಯಾತನೇ ಆ ಅಗಣಿತ ಧನಸಂಚಯದ ಆಧಿಪತ್ಯದ ಸೂತ್ರವನ್ನು ಹಿಡಿದುಕೊಂಡ.

x x x x

ಹಿರಿಯಾತನ ಆಡಳಿತದ ಕೆಲದಿನಗಳೊಳಗೆ ಕಿರಿಯಾತನಿಗೆ ಏನೋ ಆಪತ್ತು ಬಂದೊದಗಿತು. ಅಸಹಾಯನಾಗಲು ಒಂದು ದಿನ ಆತ ಹಿರಿಯಾತನಲ್ಲಿ ಬಂದು ನಿವೇದಿಸಿದ: "ಅಣ್ಣ, ಬಂದ ವಿಪತ್ಪರಂಪರೆಯಿಂದ ಕಾಯಿರಿ "

ಅಣ್ಣ ಒಮ್ಮೆಲೇ ಅಲ್ಲಗಳೆಯಲಿಲ್ಲ. ಆದರೆ ಕಿರಿಯಾತನಿಗೆ ಆತನಿಂದ ಸಹಾಯವೇನೂ ದೊರಕಲಿಲ್ಲ. ಮಾತಿನ ಭರವಸೆಯೊಂದಿಗೆ ಆತ ತಮ್ಮನಿಗೆ "ಹೆದರಬೇಡ........ನಿಶ್ಚಿಂತನಾಗಿರು" ಎಂದಷ್ಟೆ ಹೇಳಿ ಕಳುಹಿಬಿಟ್ಟ. ನಿರಾಶನಾಗಿ ಕಿರಿಯಾತ ಹಿಂದಿರುಗಿದ.

ಬಳಲಿ ಕಂಗೆಟ್ಟು ಒಂದು ದಿನ ಕಿರಿಯಾತ ಅಣ್ಣನಲ್ಲಿಗೆ ಧಾವಿಸಿ ಬಂದು ಸಹಾಯಯಾಚನೆ ಮಾಡಿದ. ಅಣ್ಣ "ಮಗೂ, ಈ ಜೀವನವು ಸುಗಮವಾದುದೇನಲ್ಲ ವೈಭವ ಸಂಪತ್ತುಗಳು ಕೆಲಕಾಲದಲ್ಲೆ ಕರಗಿ ಹೋಗುವುವು. ನಾವು ದುಡಿಯಬೇಕು ದುಡಿದು ಉಣ್ಣಬೇಕು. ಅದೇ ಪ್ರಾಮಾಣಿಕ ದಾರಿ. ಹೋಗು....ದುಡಿ. ಹೊಟ್ಟೆ ತುಂಬಿಕೊ! ಎಂದು ಉಪದೇಶಿಸಿದ, ಆತ—ಕಾಯಕಷ್ಟದ ಗೋಜಿಗೆ ಹೋಗದ ಆ ವಿಪುಲ ಧನಸಂಚಯದ ಅಧಿಪತಿ.

"ಅಣ್ಣ, ನಾವು ಸರಿಹಕ್ಕುದಾರರಷ್ಟೆ! ನನ್ನದನ್ನು ನನಗೆ ಕೊಟ್ಟುಬಿಡಬಾರದೆ?" ಎಂದು ಅಣ್ಣನ ಮನೋರಂಗವನ್ನು ತಿಳಿಯದ ತಮ್ಮ ತನ್ನಣ್ಣನೊಡನೆ ಕೇಳಿದ.

"ಹಕ್ಕೆ! ಬಲಶಾಲಿಯೇ ಹಕ್ಕುದಾರನು ಬಲ್ಲೆಯೇನು?" ಎಂದು ಬಲಪ್ರಯೋಗ ಮಾಡಿ ಗಹಗಹಿಸಿದ, ಆ ಮಹಾಬಲಿ ಅಣ್ಣ.

ಬೇರೊಂದು ದಿನ, ಹಸಿದು ಬಾಯಾರಿ ತನ್ನಣ್ಣನಲ್ಲಿಗೆ ಬಿಕ್ಕೆಯೆತ್ತಲು ಬಂದ ಕಿರಿಯಾತ. ಅಣ್ಣ ತನ್ನ ವೈಭವ ಹೆರವರಿಗೆ ಬಿಕ್ಕೆ ಕೊಡುವಷ್ಟಿಲ್ಲವೆಂದು ಬಾಯಾರಿದ ತನ್ನ ತಮ್ಮನಿಗೆ ನೀರ ಹನಿಯನ್ನೂ ಕೊಡದೆ ಬಾಗಿಲಿನಾಚೆಗೆ ಕಳುಹಿಬಿಟ್ಟ.

ಕಿರಿಯಾತ ಕೈಯಲ್ಲಿ ಬರಿಯ ಭಿಕ್ಷಾಪಾತ್ರೆಯನ್ನು ಹಿಡಿದು ಹೊರಗೆ ಬಂದ. ಬೇರೇನೂ ತೋಚದೆ ಅಸಹಾಯನಾಗಿ ಸ್ವರ್ಗದತ್ತ ಕೈನೀಡಿ "ನೀನೆ ಕಾಯೆ ತಾಯಿ!" ಎಂದು ಗದ್ಗದಿತನಾದ. ಸ್ವರ್ಗದಲ್ಲಿ ಕುಳಿತ ತಾಯಿಯು ಕರುಳೂ ಅತ್ತಿತು. ಆದರೆ ಭೂಮಿಗೆ ತಕ್ಕುದಾದ ಯಾವ ಒಡವೆಯೂ ಅವಳಲ್ಲಿ ಕೊಡಲಿರಲಿಲ್ಲ. ತನ್ನ ಅಸಹಾಯಕತೆಯನ್ನು ಕಂಡಾಕೆ ಮನದಾಳದಿಂದ ಅತ್ತಳು. ಅವಳ ಕಣ್ಣೀರ ಧಾರೆಯೇ ಇಳಿದು ಭಿಕ್ಷಾಪಾತ್ರಕ್ಕೆ ಸುರಿಯಿತು "ಹುಂ....ಇದು ಸ್ವರ್ಗ ಕರುಣಿಸಿದ ವರಪ್ರಸಾದ" ಎಂದು ಅದನ್ನೇ ಕುಡಿದು, ತನ್ನ ತೃಷಾಧಿಕ್ಯದಲ್ಲೂ ಕ್ಷಣಿಕ ಸಮಾಧಾನವನ್ನು ಕಂಡುಕೊಂಡನಾತ.

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ 'ಬೀದಿಯ ಹಾಡುಗಾರರು' ಕತೆಯನ್ನು ಕುರಿತು ವಿಮರ್ಶೆಗಳು ೧೩ ಜನರಿಂದಲೂ, 'ಸೇಡಿನ ಸಮಾಧಿ' ಕತೆಯನ್ನು ಕುರಿತ ವಿಮರ್ಶೆಗಳು ೫ ಜನರಿಂದಲೂ ಬಂದಿವೆ. ಇಬ್ಬರು ಎರಡೂ ಕತೆಗಳನ್ನು ವಿಮರ್ಶಿಸಿ ಕಳುಹಿದುದರಿಂದ. ಈ ಸಲದ ಮೇಲಾಟದಲ್ಲಿ ೧೬ ಜನರು ಭಾಗವಹಿಸಿದಂತಾಯಿತು. ಸಮಾಧಾನ ಪಡಬಹುದಾದ ಸಂಗತಿಯಿದು.

'ಬೀದಿಯ ಹಾಡುಗಾರರು' ವಿಮರ್ಶಿಸಿದವರು :

೧ ಶ್ರೀ. ಎಸ್. ಆರ್. ಬೆಳ್ಳಟ್ಟಿ, ಕೆ. ಇ. ಬೋರ್ಡ್ ಆರ್ಟ್ಸ್ ಕಾಲೇಜ್, ಧಾರವಾಡ. ೨ ಶ್ರೀ. 'ಜಯಂತ' ಸುರತ್ಕಲ್ಲು. ೩ ಶ್ರೀ. ವಿ. ಎ. ಗಾಡಗೀಳ, ಎಂಜಿನಿಯರಿಂಗ್ ಕಾಲೇಜ್, ಪುಣೆ. ೪ ಶ್ರೀ. ಅಶೋಕ ಎಸ್. ಉಪ್ಪಿನ, ಧಾರವಾಡ. ೫ ಶ್ರೀ. ಸಗರ ಕೃಷ್ಣಾಚಾರ್ಯರು ಮುಖ್ಯಾಧ್ಯಾಪಕ, ಮಾಧ್ಯಮಿಕ ಶಾಲೆ, ರಂಗಂಪೇಟೆ. ೬ ಶ್ರೀ. ಬಡಾ ಶೇಷ ರಾಘವೇಂದ್ರ, ಸುರಪುರ. ೭ ಶ್ರೀ. ಎಫ್. ಡಿ. ಪೂಜಾರ, ಶಿರಹಟ್ಟಿ. ೮ ಶ್ರೀ. ಎಮ್. ಎಸ್. ಜೋಶಿ, ಲಕ್ಷ್ಮೇಶ್ವರ. ೯ ಶ್ರೀ. ಬಿ. ಗಿ. ಶ್ರೀರಂಗ ಶರ್ಮ, ಅರಸಿಕೆರೆ. ೧೦ ಶ್ರೀ ವಿ. ಬಿ. ಹೊಸಮನೆ, ಪೇಜಾವರಮಠ, ಉಡುಪಿ. ೧೧ ಶ್ರೀ ಮ. ಗ. ಯಾಜಿ, ಇಡಗುಂಜಿ. ೧೨ ಶ್ರೀ ಜಿ. ಎಸ್. ಮಠಕರ ಎಂ.ಎ.,ಬಿ.ಟಿ. ಧುಳೆ. ೧೩ ಶ್ರೀ ಎಮ್. ರಾಜಾರಾಮು, ಮದ್ರಾಸ್.

'ಸೇಡಿನ ಸಮಾಧಿ' ವಿಮರ್ಶಿಸಿದವರು :

೧ ಶ್ರೀ ದೇವಪುರ ಕೆ. ಎಸ್. ಹುಬ್ಬಳ್ಳಿ. ೨ ಶ್ರೀ ಕೆ. ಎಸ್. ಶರ್ಮಾ 'ವಿದ್ವಾನ್' ಕಾಸರಗೋಡು. ೩ ಶ್ರೀ ಬಡಾಶೇಷ ರಾಘವೇಂದ್ರ, ಸುರಪುರ. ೪ ಶ್ರೀ. ಎಂ. ಎಸ್. ಆಚಾರ್ಯ, ಕುಲಾಯಿ (ದ. ಕ.) ೫ ಶ್ರೀ. ಜಿ. ಎಸ್. ಮಠಕರ ಎಂ. ಎ., ಬಿ. ಟಿ. ಧುಳೆ.

ಎಲ್ಲ ವಿಮರ್ಶಾಲೇಖನಗಳನ್ನೂ ಜಯಂತಿಯ ಸಂಪಾದಕ ಮಂಡಲಿಯವರೇ ನೋಡಿ, ತಮ್ಮ ಅಭಿಪ್ರಾಯಗಳೊಂದಿಗೆ ಹೀಗೆಂದು ನಿರ್ಣಯ ಕೊಟ್ಟಿದ್ದಾರೆ:

" ಈ ಸಲ ವಿಮರ್ಶಕರ ಸಂಖ್ಯೆ ಸಮಾಧಾನಕಾರಕವಿದೆ. 'ಬೀದಿಯ ಹಾಡುಕಾರರು' ಕತೆಯನ್ನು ಕುರಿತು ಬರೆದ ಶ್ರೀ. ಬೆ. ಗಿ ಶ್ರೀರಂಗಶರ್ಮರ ವಿಮರ್ಶೆ ಸ್ವಲ್ಪ ದೀರ್ಘವಾಗಿದೆಯಾದರೂ, ಅತ್ಯುತ್ತಮವಾಗಿದೆ. ಇದೊಂದು ಮಾದರಿಯ ವಿಮರ್ಶೆಯೆನಿಸಿಕೊಳ್ಳಬಲ್ಲದಾದುದರಿಂದ, ಇದನ್ನೇ—ದೀರ್ಘವಾದರೂ ಅಡ್ಡಿ ಇಲ್ಲ— ಈ ಸಲ ಪ್ರಕಟಿಸಬಹುದು.

ಶ್ರೀ. ವಿ. ಎ. ಗಾಡಗೀಳ ಮತ್ತು ಶ್ರೀ. ವಿ. ಬಿ. ಹೊಸಮನೆಯವರ ವಿಮರ್ಶೆಗಳೂ ಉತ್ತಮ ತರಗತಿಯವಾಗಿವೆ. ಶ್ರೀ. ಕೆ. ಎಸ್. ಶರ್ಮಾ ಅವರ 'ಸೇಡಿನ ಸಮಾಧಿ'ಯ ವಿಮರ್ಶೆಯೂ ಚೆನ್ನಾಗಿದೆ.

ಶ್ರೀ. ಸಗರ ಕೃಷ್ಣಾಚಾರ್ಯ, ಶ್ರೀ. ಎಫ್. ಡಿ. ಪೂಜಾರ, ಶ್ರೀ. ಎಮ್. ಎಸ್. ಆಚಾರ್ಯ ಇವರ ವಿಮರ್ಶೆಗಳು ಒಳ್ಳೆಯವಾಗಿವೆ. ಮಿಕ್ಕುವೆಲ್ಲ ಸಾಮಾನ್ಯವಾಗಿವೆ.

'ಬೀದಿಯ ಹಾಡುಕಾರರು' ಕತೆಯು ಕಲೆಯ ಪ್ರಯೋಜನವಾದವನ್ನು ಪುರಸ್ಕರಿಸುವುದೆಂದು ಇಬ್ಬರು ಮೂವರು ಸಹೃದಯರು ಆಕ್ಷೇಪಿಸಿಯೂ ಬರೆದಿದ್ದಾರೆ. ಶ್ರೀ. ಬೇ. ಗಿ. ಶ್ರೀರಂಗಶರ್ಮರ ವಿಮರ್ಶೆಯನ್ನು ಓದಿ ನೋಡಿದರೆ, ಅವರ ಆಕ್ಷೇಪಣೆಗೆ ಸಮಾಧಾನವು ಸಿಕ್ಕಬಹುದೆಂದು ನಮ್ಮ ನಂಬುಗೆ.

ಕಳೆದ ಮೂರು ತಿಂಗಳಲ್ಲಿ ಕನ್ನಡದಲ್ಲಿ ಹೊಸ ಹೊಸ ಕಾದಂಬರಿಗಳು ತುಂಬ ಹೊರಟಿವೆ. ಮುಂದಿನ ಸಂಚಿಕೆಯ ಮೇಲಾಟಕ್ಕಾಗಿ **ಇತ್ತೀಚೆಗಿನ ಕಾದಂಬರಿಯೊಂದನ್ನು ವಿಮರ್ಶಿಸಿ ಬರೆದ ಲೇಖನವನ್ನು** ಕಳುಹಬೇಕು. ವಿಮರ್ಶೆ ಜಯಂತಿಯ ಮೂರು ಪುಟಗಳಿಗಿಂತ, ಹೆಚ್ಚಾಗಕೂಡದು.

—ಸಂಪಾದಕರು

ಬೀದಿಯ ಹಾಡುಗಾರರು

(ಕತೆಯ ವಿಮರ್ಶೆ)

ಶ್ರೀ. ಬೆ. ಗಿ. ಶ್ರೀರಂಗ ಶರ್ಮ, ಅರಸಿಕೆರೆ.

ಕನ್ನಡ ಸಾಹಿತ್ಯದ ಕಥಾವಿಭಾಗದ ಬೆಳೆವಣಿಗೆಗೆ ಶ್ರಮಿಸಿದವರಲ್ಲಿ, ಅಪೂರ್ವ ಕಾಣಿಕೆಯೊಪ್ಪಿಸಿದ ಹಿರಿಯರಲ್ಲಿ ಶ್ರೀ. ಆನಂದಕಂದರೂ ಒಬ್ಬರು. 'ಬೀದಿಯ ಹಾಡುಗಾರರು' ಅವರು ಬರೆದ ಕಥೆ. ಹೀಗೆಂದ ಮಾತ್ರಕ್ಕೆ ಅದು ವಿಮರ್ಶಾತೀತವಲ್ಲ. ಕೃತಿಗಿಂತ ಕೃತಿಕಾರನನ್ನೆ ಒರೆಗಲ್ಲಿಗೆ ಹಚ್ಚುವ ಈ ದಿನಗಳಲ್ಲಿ, ತಮ್ಮ ಕೃತಿಯನ್ನು ತಾವೇ ವಿಮರ್ಶೆಗೆ ಗುರಿಮಾಡಿಕೊಳ್ಳುವುದು ಕೇವಲ ಸಾಹಸಪ್ರಿಯತೆಯಿಂದಲ್ಲ. ತಿಳಿದವರ, ಕ್ರಿಯಾಶಾಲಿಯ ವಿನಯ ಶ್ರೀ

ಥೆಗೆ ಬರೆದವರ ಸ್ಥಾನಮಹತ್ತ್ವದಿಂದ ಸಫಲತೆಯುಂಟಾಗಲಾರದು. ಅದು ತನಗೆ ತಾನೇ ಸ್ವಯಂಸರ್ವಪೂರ್ಣವಾಗಬೇಕು. ಬರೆದವರು ಯಾರಾದರೇನು? ಶ್ರೀಮಂತರ ಮನೆಯ ಬಚ್ಚಲು ನೀರು ಹೊಳೆಯಾಗಿ ಕಂಠಮಾತ್ರಕ್ಕೆ ತೀರ್ಥವೆಂದು ಪ್ರಾಶನಮಾಡಸಲ್ಲ. ಕೆಸರಿನಲ್ಲಿ ಹುಟ್ಟಿತೆಂದು ಕಮಲವನ್ನು ನಿರ್ಲಕ್ಷ್ಯಿಸಲೂ ಸಲ್ಲ.

ಥೆಯ ವೈಶಿಷ್ಟ್ಯ:—

ಬೀದಿಯ ಹಾಡುಗಾರರು' ಕಥೆಯ ವಸ್ತು, ತೋರಿಕೆಗೆ ಕಲಾವಿದರ ದಾರುಣಜೀವನವನ್ನು ಚಿತ್ರಿಸುವುದೇ ಉದ್ದಿಶ್ಯವಾಗುಳ್ಳ ಸಾಮಾನ್ಯ ವಸ್ತುವಾಗಿಯೆ ತೋರುತ್ತದೆ. ಒಮ್ಮೆ ಓದಿದರೆ ಮತ್ತೊಮ್ಮೆ ಓದಲು ಕೆಣಕುತ್ತದೆ. ವಿಚಾರೀ ಬುದ್ಧಿಯನ್ನು ಕೆರಳಿಸುತ್ತದೆ. ಆಗ ಕಥೆಯನ್ನು ವಿವೇಚಿಸುವ ರೀತಿಯೇ ಬದಲಾಯಿಸುವುದು. ಆದರಂತೆ ವಸ್ತು ವರ್ತಮಾನಕಾಲದ ಯಾವುದೋ ದುಃಖದ ದೃಶ್ಯವೆನ್ನುವುದಕ್ಕಿಂತ, ಕಲೆಯ ಬಗ್ಗೆ ಎದ್ದಿರುವ ಹಲವು ಅನುಮಾನ, ಪರಿಹಾರ, ಅಭಿಪ್ರಾಯಗಳಂತೆ ಇದೂ ಒಂದು ನಿರ್ಧಾರಯುಕ್ತ ಉತ್ತರ ಆಹ್ವಾನಿಸುವ ಪ್ರಶ್ನೆಯೇ ಆಗಿದೆಯೆಂದು ತಿಳಿಯಬಹುದು. ಪ್ರಶ್ನೆಗೊಂದು ಕಥೆಯೂ ಇದಿರಾಗಿರುವುದರಿಂದಲೇ ಕಥೆಗೆ ನಾವೀನ್ಯ ಪ್ರಾಪ್ತವಾಗಿರುವುದು. ಆದಕ್ಕೆ ಸರಿಯಾಗಿ ಕಥೆ ಚಿಕ್ಕದು ಸೂಚ್ಯವಾದುದು ಸೂಚಕವೆಂದರೂ ಸೈ. ಕಥೆಯ ಜೀವಾಳವನ್ನು ಗ್ರಾಹಕರೇ ಹಿಂಡಿ ತೆಗೆಯಬೇಕಾಗುತ್ತದೆ. ಬರುವ ಪಾತ್ರಗಳು ಜೀವಂತ ವ್ಯಕ್ತಿಗಳಿಗಿಂತ ಹೆಚ್ಚಾಗಿ, ಹಲವು ಅಭಿಪ್ರಾಯಗಳೇ, ಬಣ್ಣಗಳೇ, ಭಾವಗಳೇ ಮೈತಾಳಿದಂತೆ ಭಾಸವಾಗುತ್ತದೆ. ಕಥೆ ಹೃದಯಕ್ಕಿಂತ ಬುದ್ಧಿಗೆ ಸಂಬಂಧಿಸಿದುದು. ವಸ್ತು, ನಿರೂಪಣೆ, ತಂತ್ರ, ಶೈಲಿ ಎಲ್ಲವೂ ಇದನ್ನೇ ಸಮರ್ಥಿಸುತ್ತವೆ. ಕಥೆಯಲ್ಲಿ ಘಟನೆಯಿದ್ದರೂ, ಅದೇ ಪ್ರಧಾನವಾದುದಲ್ಲ. ವಿಚಾರಪ್ರಧಾನವಾದುದು. ಕಥೆಗಾರರು ಕಲೆಯ ಬಗ್ಗೆ ಎದ್ದಿರುವ ಚರ್ಚೆಯನ್ನೆಲ್ಲಾ ಮೂರ್ತೀಕರಿಸಿ, ವಾಚಕನಿಗೆ ನೇರವಾಗಿ ಸಮಸ್ಯೆಯನ್ನು ಒಡ್ಡಿದ್ದಾರೆ.

ಕಥೆಯ ಸಾರಾಂಶ:

ಆನಂದ—'ನಾನು' ಸಂಗೀತಾದಿ ಲಲಿತಕಲೆಗಳ ವಿಷಯದಲ್ಲಿ ರೂಢಮೂಲವಾದ ಅಭಿಪ್ರಾಯ ವ್ಯಕ್ತಪಡಿಸುವಾಗ, ಚಿಕ್ಕಪ್ಪ ನಡುವೆಯೇ ಬಾಯಿ ಹಾಕಿ 'ಕಲೆ ಜೀವನ ಪ್ರಯೋಜನಕ್ಕೆ' ಎಂಬ ಕಾರ್ಯಕಾರಣ—ಪ್ರಯೋಜನವಾದಿಗಳ ಭೌತಿಕವಾದವನ್ನೆ ಎತ್ತಿ ಹಿಡಿಯುತ್ತಾನೆ. ಅದನ್ನು ಪುಷ್ಟೀಕರಿಸುವುದಕ್ಕೋ ಎಂಬಂತೆ, ಅದೇ ಸಮಯದಲ್ಲೇ ಬೀದಿಯ ಹಾಡುಗಾರರಿಬ್ಬರು—ತಂದೆ ಮತ್ತು ಮಗಳು—ಹಾಡುತ್ತಾ ಬರುತ್ತಾರೆ.

ಹಾಡುಗಾರನ ಹೆಂಡತಿ ರೋಗಪೀಡಿತೆ. ಮಕ್ಕಳು ಕ್ಷುಧಾಪೀಡಿತರು. ಅವರಲ್ಲಿ ಹಣವಿಲ್ಲ. ದೇವರು ಅವರಿಗೆ ಹಾಡುವ ಪ್ರವೃತ್ತಿ ಕೋಮಲಕಂಠ ಕೊಟ್ಟಿದ್ದಾನೆ. ಅದರ ವಿನಿಮಯದಿಂದಲೇ ಅವರು ತಮ್ಮ ಬೇಕುಗಳನ್ನು ಪಡೆಯುತ್ತಾರೆ. ಚಿಕ್ಕಪ್ಪ ಸಂಗೀತ ಕೇಳುತ್ತಾನೆ. ಅಕ್ಕಿ ಕೊಡುತ್ತಾನೆ. ವೈದ್ಯಕೀಯ ಉಪಚಾರ ಸಲ್ಲಿಸಲು ಮುಂದಾಗುತ್ತಾನೆ. ಹೆಂಡತಿ ಸತ್ತನಂತರ, ಅಂತ್ಯಕ್ರಿಯೆಗೆ ಹಣ ಕೊಡುತ್ತಾನೆ. ಆನಂದ 'ನಾನು' ಮೌನವಾಗಿ ಉಳಿಯುತ್ತೇವೆ.

ಕಥೆಯ ಸಾರಾಂಶದಿಂದಲೂ 'ಲಲಿತಕಲೆಗಳು ಕೇವಲ ನಾಣ್ಯದ ಕೆಲಸವನ್ನೇ ಮಾಡುತ್ತವೆ, ಕಥೆಗಾರರ ಅಭಿಪ್ರಾಯವೂ ಅದೇ ಹೌದು' ಎನ್ನಿಸುತ್ತದೆ. ಹಾಗೆ ಮಂಡಿಸುವುದೇ ಅವರ ಉದ್ದಿಶ್ಯವಾಗಿದ್ದರೆ, ಸಯುಕ್ತಿಕವಾದ ಕಾರಣದೊಡನೆ ಒಂದು ಪ್ರಬಂಧವನ್ನೇ ಬರೆಯುತ್ತಿದ್ದರು. ಕಥೆ ಯಾವೊಂದು ಅಭಿಪ್ರಾಯವನ್ನೂ ಸ್ಪಷ್ಟವಾಗಿ ಹೇಳುವುದಿಲ್ಲ. 'ಅವರವರ ದರುಶನಕ್ಕೆ' ಅನುಗುಣವಾಗಿ ಕಥೆ ಕಥೆಯಾಗಿಯೆ ಉಳಿದಿದೆ. ಅಭಿಪ್ರಾಯ ತಾಳುವುದೂ ನಮ್ಮ ಕೆಲಸವಾಗಿಯೆ ಉಳಿಯುತ್ತದೆ.

ಕಥೆಯ ಉದ್ದಿಶ್ಯ ಜೀವನಚಿತ್ರಣವಲ್ಲ:—

ಕಥೆ ಕಥೆಯಾಗಿ ಕಾಣುವುದು ಬಹುಪಾಲು ಉತ್ತರಾರ್ಧದ ಹಾಡುಗಾರರ ಚಿತ್ರಣದಿಂದ—ಎಂದು ತಕ್ಷಣ ಯಾರಾದರೂ ಹೇಳಿಯಾರು. ರಸಶ್ರೇಷ್ಠವಾದ ಕರುಣಾರಸ ಅಲ್ಲಿ ಒಸರುತ್ತದೆಯಾಗಿ, ಅದರ ಪ್ರಭಾವದಿಂದ ಬೀದಿಯ ಹಾಡುಗಾರರ ದುಃಖೀಜೀವನವನ್ನೇ ಚಿತ್ರಿಸುವುದು ಕಥೆಗಾರರ ಉದ್ದಿಶ್ಯವೆನ್ನುವಷ್ಟು ಪರಿಣಾಮಕಾರಿಯಾಗಿ ನಿರೂಪಿಸಲ್ಪಟ್ಟಿದೆ. ಆದರೆ ವಸ್ತುಸ್ಥಿತಿಯೇ ಬೇರೆ. 'ಹೌದು' ಎಂದು ಒಪ್ಪಿಕೊಂಡರೆ, ಕಥೆ ತೀರಾ ಸಾಮಾನ್ಯವಾದುದು ಎನ್ನಿಸುವುದು. ಬೀದಿಯ ಕಲಾವಿದರ ಬಾಳುವೆಯನ್ನು ಚಿತ್ರಿಸುವುದಕ್ಕೆ ಪೀಠಿಕೆಯಾಗಿ—ವಿಷಯ ಪ್ರಾರಂಭಕ್ಕಾಗಿ—ಪೂರ್ವಾರ್ಧದಲ್ಲಿ ಕಲೆಯ ಬಗ್ಗೆ ಚರ್ಚೆ ನಡೆದಿದೆ ಎಂದರೆ, ಅದು ತೀರಾ ಹಳೆಯ ತಂತ್ರ. ಅಲ್ಲದೆ ಕ್ರಿಯಾಶಾಲಿಯಾದ ಬರೆಹಗಾರ ಕಲಾವಿದರ ಬಗ್ಗೆ ಒಂದು ಅಭಿಪ್ರಾಯ ಖಚಿತಗೊಳಿಸಿ, ಅನಂತರ ಅವರ ಪ್ರವೇಶ ಮಾಡಿಸುವ ನೀರಸವಾತಾವರಣ ಕಲ್ಪಿಸಲಾರ. ಹಾಗೂ ಒಪ್ಪಿಕೊಂಡರೆ, ಚರ್ಚೆಗೆ ಆನಂದ ಚಿಕ್ಕಪ್ಪ ಸಾಕಾಗಿತ್ತು. 'ನನ್ನ' ಸಾಕ್ಷಿಯೇಕೆ? ಚಿಕ್ಕಮ್ಮ ಕೊನೆಗೇಕೆ ಬರಬೇಕಾಗಿತ್ತು? ಇಷ್ಟು ಚಿಕ್ಕಕಥೆಗೆ ಅಷ್ಟೊಂದು ಪಾತ್ರಗಳ ಅಗತ್ಯವೇನು? ಕಲೆಯ ಬಗ್ಗೆ ಕಲಾವಿದರ ಬಗ್ಗೆ ಯಾರೂ ಚರ್ಚೆ ಮಾಡದೆ, ಚಿಕ್ಕಮ್ಮನನ್ನೂ ನಿರ್ಮಿಸದೆ, ಕಥೆಯನ್ನು ಇನ್ನೂ ಚಿಕ್ಕದಾಗಿ, ಅಥವಾ ಹಾಡುಗಾರರ ಬಗ್ಗೆಯೂ ಇನ್ನೂ ವಿಸ್ತೃತವಾಗಿ ಬರೆದು ಅನುಕಂಪ ಹುಟ್ಟಿಸಬಹುದಿತ್ತಲ್ಲ? ವಾಸ್ತವಿಕತೆಗನುಸಾರವಾದ ಮನೆಮಾತಿನ ಶೈಲಿ ಕಥೆಯ ಆದಿಯಲ್ಲಿಲ್ಲ. ಸಿದ್ಧಾಂತಗಳನ್ನು ಮಂಡಿಸುವಾಗಿನ ಧಾಟಿಯಲ್ಲಿ ಗ್ರಾಂಥಿಕವಾಗಿದೆ. ಕಲೆಯ ಬಗ್ಗೆ ಮಾತಾಡುತ್ತಿರುವಾಗಲೇ ಚಿಕ್ಕಪ್ಪನ ಅಭಿಪ್ರಾಯವನ್ನು ಪುಷ್ಟೀಕರಿಸಲು ಬೀದಿಯ ಕಲಾವಿದರು ಪ್ರತ್ಯಕ್ಷವಾಗುವುದು—ಪವಾಡದಂತೆ ಅಸಹಜವಾಗಿ ಕಾಣುತ್ತದೆ. ಹಾಡುಗಾರರು ಕಥೆಯಲ್ಲಿ ಆಗಂತುಕರು. ಮಧ್ಯೆ ಬರುತ್ತಾರೆ, ಮಧ್ಯೆಯೇ ಮರೆಯಾಗುತ್ತಾರೆ. ನಮ್ಮೆದೆಯಲ್ಲಿ ಅವರ ಬಗ್ಗೆ ಅಪಾರ ದುಃಖ ವ್ಯಕ್ತಪಡಿಸಲು ಕಥೆಗಾರರು ಸಮರ್ಥರಾಗಿದ್ದರೂ, ಕೊನೆಯಲ್ಲಿ ಉಳಿಯುವವರು 'ನಾನು' ಆನಂದ, ಚಿಕ್ಕಪ್ಪ, ಚಿಕ್ಕಮ್ಮ

ಕಲೆಯ ವಿಷಯಕ ಚರ್ಚೆಯಿಂದ ಆರಂಭವಾದ ಕಥೆ, ಅದೇ ವಿಷಯವಾಗಿ ಆಡುವ ಮಾತಿನಿಂದ ಮುಗಿತಾಯಗೊಂಡಿರುವುದು ಕೇವಲ ಕಥೆಯಐಕ್ಯತೆಯ ದೃಷ್ಟಿಯಿಂದಲ್ಲ. ಚಿಕ್ಕಪ್ಪನಂತಹ ಆದರ್ಶವಾದಿಯನ್ನು ತೋರಿಸಿ, 'ಕಲಾವಿದರಿಗೆ ಹೀಗೆ ನೆರವಾಗಿ!' ಎಂದು ಸೂಚಿಸುವುದೂ ಅವರ ಗುರಿಯಲ್ಲ ಏಕೆಂದರೆ ಕಥೆ ನೇರವಾಗಿ ಪ್ರಭುಸಮ್ಮಿತಿಯಿಂದ ನೀತಿ ಹೇಳುತ್ತಿಲ್ಲ; ಕಲೆಯಾಗಿಯೂ ಉಳಿದಿದೆ.

ಹಾಡುಗಾರರು ಚಿಕ್ಕಪ್ಪನಿಗೆ ಅಪರಿಚಿತರು. ಅವರು ಅನಿರೀಕ್ಷಿತವಾಗಿ ಬರುತ್ತಾರೆ. ತನ್ನ ಅಭಿಪ್ರಾಯ ಸಮರ್ಥನೆಗೆಂದೇ ಬಂದರೆಂದೂ ಅವನಿಗೆ ನಂಬಿಕೆಯಿಲ್ಲ. ಹರಿಕಥೆಯಲ್ಲಿನ ಉಪಾಖ್ಯಾನದಂತೆ ಸಂಧರ್ಭಪೋಷಕವಾಗಿ ಹೇಳಲ್ಪಟ್ಟು ಹಾಡುಗಾರರ ಚರಿತ್ರೆ ಬೇರೆಯಾಗಿಯೆ ಉಳಿಯುತ್ತದೆ. ಕಥೆಯ ಪೂರ್ವಾರ್ಧ-ಉತ್ತರಾರ್ಧಗಳನ್ನು ಸೇರಿಸುವ ಸಂಬಂಧ-Link-ಎಂದರೆ, ಸಂಗೀತ ಕಲೆ-ಎಂಬ ಉಭಯ ಸಾಮಾನ್ಯ ಮಾತು. ಅದೊಂದು ಕಥೆಗಾರರ ಉದ್ದಿಶ್ಯಕ್ಕೆ ಬಳಸಿಕೊಂಡ ಕಾಕತಾಳೀಯ ಘಟನೆ. ಎಲ್ಲಕ್ಕಿಂತ ಮುಖ್ಯವಾಗಿ ಕಥೆಯ ಶೀರ್ಷಿಕೆಯ ಅಡಿಯಲ್ಲಿ ಚಿಕ್ಕಪ್ಪನ ಮಾತನ್ನು ಉದಹರಿಸಿ. ಸಂಪಾದಕರು 'ಈ ಅಭಿಪ್ರಾಯ ಸರಿಯೆ?' ಎಂದು ಪ್ರಶ್ನೆ ಕೇಳುವುದರ ಮೂಲಕ, ಕಥೆಯ ಗುರಿಯ ಕಡೆಗೆ ಬೆರಳು ತೋರುತ್ತಾರೆ. ಆದ್ದರಿಂದ ಕಥೆಯ ಉದ್ದಿಶ್ಯ—ಪ್ರಧಾನ ಉದ್ದಿಶ್ಯ-ಕಲಾವಿದರ ಪಾಡನ್ನು ನಿರೂಪಿಸುವುದಲ್ಲ.

ಕಥೆ ರೂಪಕ ಹೇಗೆ?

ಆನಂದ 'ಕಲೆ ಆನಂದಸಿದ್ಧಿಗೆ' ಎಂಬುವರ ಪ್ರತೀಕ. ಚಿಕ್ಕಪ್ಪ ಕಾರ್ಯ ಕಾರಣ ಪ್ರಯೋಜನವಾದಿಗಳ ಪ್ರತೀಕ. 'ನಾನು' ಕಲೆಯಲ್ಲಿ ಎರಡನ್ನೂ ಅನುಮೋದಿಸುವ, ಇನ್ನೂ ಹಲವನ್ನು ಕಂಡಿರುವವರ, ಕಾಣುತ್ತಿರುವವರ, ಕಾಣುವವರ ಪ್ರತೀಕವಾದ ಸರ್ವಕಾಲಿಕ ಸರ್ವನಾಮ! ಇನ್ನು ಹಾಡುಗಾರರಂತೂ ಕಲಾವಿದರೆಲ್ಲರ ಪ್ರತಿನಿಧಿ. ಚಿಕ್ಕಮ್ಮ ಕಲೆಯ ಬಗ್ಗೆ ವಿವಿಧ ಅಭಿಪ್ರಾಯದ ವಾದವೇಳಲು ಕಾರಣವನ್ನೂ, ಮೂಲವನ್ನೂ ಅರಿತ ಪ್ರಜ್ಞೆಯ ಪ್ರತೀಕ. ಹಾಡುಗಾರನ ಹೆಂಡತಿ ಕಲೆಯ ಪ್ರತೀಕ. ಯಾವುದೇ ಕಥೆಯ ಪಾತ್ರಗಳನ್ನು ಇದೇ ರೀತಿ ವಿಂಗಡಿಸಬಹುದಾದರೂ, ಈ ಕಥೆಯಲ್ಲಿ ಈ ರೀತಿಯೆ ಪ್ರಧಾನವಾದುದರಿಂದ, ಇದು ಅಲಂಕಾರೋಕ್ತಿಯಲ್ಲ. 'ಕಲೆಯ ಬಗ್ಗೆ ಸ್ವಸ್ವ ಅಭಿಪ್ರಾಯವಿದ್ದರೂ—ಇನ್ನೇನೋ ಮಹದರ್ಥ ಬೇರೆಯೇ ಇದೆಯೆಂದು ಅನ್ವಯಿಸುವುದು ಅತಿಬುದ್ಧಿವಂತಿಕೆಯಲ್ಲವೆ?' ಎಂಬ ಪ್ರಶ್ನೆ ವಿಮರ್ಶಕನಿಗೆ ಹಾಕುವಂತಹದಲ್ಲ.

ಕಥೆಯ ಗುರಿಯೇನು?

ಮೇಲ್ಕಂಡ ಕಾರಣಗಳಿಂದ ಕಥೆ ಕಲೆಯ ಬಗ್ಗೆ ಕನ್ನಡನಾಡಿನಲ್ಲಿ ಎದ್ದಿರುವ ವಿಚಾರಸಂಕೀರ್ಣವಾಗಿದೆ. ಕಥೆಗಾರರು ಸ್ಪಷ್ಟವಾಗಿ ತಮ್ಮ ಅಭಿಪ್ರಾಯ ಹೇಳಿಲ್ಲ. ಆನಂದ 'ಕಲೆ ಆನಂದಸಿದ್ಧಿಗೆ' ಎಂದರೆ, "ಅಲ್ಲ, ಜೀವನ ಪ್ರಯೋಜನಕ್ಕೆ" ಎಂದು ನಿರ್ಧಾರಿತವಾಗಿ ಚಿಕ್ಕಪ್ಪ ನುಡಿಯುತ್ತಾನೆ. ಹಾಡುಗಾರರ ಮೂಲಕ ಸ್ಥಾಪಿಸುತ್ತಾನೆ. ಚಿಕ್ಕಪ್ಪ ಕೇವಲ ವಾದಕ್ಕಾಗಿ ಹೇಳಿದ ಮಾತಲ್ಲ ಅದು. ಅವನಿಗೆ ಅನುಭವದ ಬೆಂಬಲವಿದೆ. ಅವನು ಪ್ರಯೋವೃದ್ಧ, ಜ್ಞಾನವೃದ್ಧನೂ ಹೌದೆಂದು ಅವನು ಓದುವ 'ವಾಗ್ಭಟ' ಹೇಳುತ್ತದೆ. ಅಲ್ಲದೆ ಕಥೆಗಾರರು ಒಂದು ಚಮತ್ಕಾರ ಮಾಡಿ, ಅವನ ಮಾತನ್ನೇ ಎಲ್ಲರೂ ಒಪ್ಪಿಬಿಡುವಂತೆ ಮಾಡಿದ್ದಾರೆ. 'ಕಲೆಯ ಗುರಿ ಆನಂದ' ಎಂಬುದು ಹಳೆಯ ಸಿದ್ಧಾಂತ. (ಹೌದೆಂದು ಸಂದರ್ಭಕ್ಕಾಗಿ ಒಪ್ಪಿಕೊಳ್ಳೋಣ) ಅದನ್ನು ಪ್ರತಿಪಾದಿಸುವವನು ಆಧುನಿಕನಾದ ಆನಂದ. ಆಧುನಿಕವೆನ್ನಬಹುದಾದ ನೂತನವೆನ್ನಬಹುದಾದ 'ಜೀವನಕ್ಕಾಗಿ ಕಲೆ' ಎಂಬುದನ್ನು ಎತ್ತಿ ಹಿಡಿಯುವವನು ಹಳೆಯವನಾದ ಚಿಕ್ಕಪ್ಪ! ಹಳಬರ ಮಾತಿಗೆ ಬೆಲೆಕೊಡುವುದೂ ನಂಬಿಕೆಯಿಡುವುದೂ ಲೋಕಧರ್ಮ. ಆನಂದನೆ 'ಕಲೆ ಜೀವನಕ್ಕೆ' ಎಂದಿದ್ದರೆ, ಅದು ಆತನ ವಯೋಧರ್ಮ, ಉದ್ವೇಗ, ಹಾಗೂ ಪ್ರಚಲಿತ ತತ್ತ್ವಸಾಹಿತ್ಯಗಳ ಪ್ರಭಾವ—ಎಂದು ಲಕ್ಷ್ಯಕೊಡದಿರಲು ಸಾಧ್ಯ. ಆದರೆ ಚಿಕ್ಕಪ್ಪನ ಮಾತನ್ನು ಅಲ್ಲಗಳೆಯುವಂತಿಲ್ಲ. ಹಾಗಿದ್ದರೆ, ಕಲೆಯ ಗುರಿ ಜೀವನ ಪ್ರಯೋಜನವೆ? ಈ

(೩೧೫ ನೆಯ ಪುಟದಿಂದ ಬಂದುದು.)

ಹಳ್ಳಿಗಳಲ್ಲಿ. ಹಳ್ಳಿಯಲ್ಲಿ ಹುಟ್ಟಿದ್ದ ಅನ್ನ-ಅರಿವೆಗಳನ್ನೆ ಇಬ್ಬರೂ ಉಪಯೋಗಿಸುವರು. ಸಿರಿವಂತಿಕೆಯನ್ನು ಮೆರೆಯಿಸಿ, ಬಡವರನ್ನು ಬೆರಗುಗೊಳಿಸಬೇಕೆನ್ನುವ ಬಯಕೆ ಅಂದಿನ ಹಳ್ಳಿಗರಲ್ಲಿರಲಿಲ್ಲ. ಎಲ್ಲರೂ ಸ್ವಾವಲಂಬಿಗಳು. ದುಡಿದು ಪಡೆದುದನ್ನೇ ಉಣ್ಣಬೇಕೆನ್ನುವವರು. ಸ್ವದೇಶಿ-ಪರದೇಶಿ ಎಂಬ ಕಲ್ಪನೆ ಇಲ್ಲದಿದ್ದರೂ, ಪರದೇಶದ ಒಡವೆಗಳ ಕಡೆಗೆ ಎಂದೂ ಮನಸ್ಸನ್ನು ಹಾಕುತ್ತಿರಲಿಲ್ಲ. ಆದುದರಿಂದಲೇ ಪರದೇಶದಿಂದ ಭಾರತಕ್ಕೆ ಬಂದ ಪ್ರವಾಸಿಗಳು, ಇಲ್ಲಿಯ ಹಳ್ಳಿಗರ ಸದ್ಗುಣಗಳನ್ನು ಹಲವು ರೀತಿಯಿಂದ ಹೊಗಳಿ ಹಾಡಿದ್ದಾರೆ. ಕ್ರಿ. ಶ. ೧೮ನೆಯ ಶತಮಾನದಲ್ಲಿ, ಮದ್ರಾಸಿನಲ್ಲಿ ಗವರ್ನರ್ ಆಗಿದ್ದ ಸರ್ ಚಾರ್ಲಸ್ ಮೆಟಕಾಫನು, ನಮ್ಮ ಹಳ್ಳಿಗರನ್ನು ಕಂಡು ಹೀಗೆ ಬರೆದಿದ್ದಾನೆ:

"ಇಲ್ಲಿಯ ಹಳ್ಳಿಗರು, ತಮಗೆ ಬೇಕಾದುದನ್ನೆಲ್ಲ ತಮ್ಮಲ್ಲಿಯೇ ಸಿದ್ಧಪಡಿಸಿಕೊಳ್ಳುತ್ತಾರೆ. ಹೊರಗಿನವರ ನೆರವನ್ನು ಯಾರೂ ಬಯಸುವುದಿಲ್ಲ. ಎಲ್ಲ ಚಿಕ್ಕ ದೊಡ್ಡ ಹಳ್ಳಿಗಳೂ ತಮ್ಮಷ್ಟಕ್ಕೆ ತಾವು ಸ್ವತಂತ್ರವಾಗಿದ್ದಂತೆ ಇವೆ. ಈ ದೇಶದಲ್ಲಿ ರಾಜರ ಮೇಲೆ ರಾಜರು ಎಷ್ಟೋ ಜನರಾಗಿ ಹೋದರು. ಕ್ರಾಂತಿಯ ಮೇಲೆ ಕ್ರಾಂತಿಗಳಾಗಿ ಹೋದುವು. ಆದರೂ ಹಳ್ಳಿಗರ ಐಕ್ಯಜೀವನ ಅವಿಚ್ಛಿನ್ನವಾಗಿಯೆ ಸಾಗಿರುವುದು. ಅಪಾಯಕಾಲದಲ್ಲಿ ರಕ್ಷಿಸಿಕೊಳ್ಳುವುದಕ್ಕೆ ಪ್ರತಿಹಳ್ಳಿಗೂ ಕೋಟೆಗಳು ಇವೆ. ಗಂಡಾಂತರ ಸಂದರ್ಭಗಳಲ್ಲಿ ಎಲ್ಲರೂ ಶಸ್ತ್ರಹಸ್ತರಾಗಿ ಕೋಟೆಯನ್ನೇರಿ ಕಾದುವರು. ಅದನ್ನು ಸಂರಕ್ಷಿಸುವರು. ಗ್ರಾಮಜೀವನದ ಈ ಮಾದರಿಯೇ ಭಾರತೀಯರನ್ನು ಇಂದಿನವರೆಗೂ ಸುರಕ್ಷಿತವಾಗಿ ಇರಿಸಿದೆ."

ಆ ಸಾಹೇಬನ ಮಾತನ್ನು ಸತ್ಯವನ್ನಾಗಿಸಿ ತೋರಿಸುವಂತಹ ಹಳ್ಳಿ, ಈ ಕಾಲದಲ್ಲಿ ಒಂದಾದರೂ ಉಳಿದಿದೆಯೇ ಭಾರತದಲ್ಲಿ?

ಗುರುವಿನ-ಮುರುವಿನಿಂದ ವಾಚಕ ವಿಚಾರಕ್ಕೊಳಗಾಗುತ್ತಾನೆ. ಆನಂದನ ಮೌನಕ್ಕೆ ತುಂಬಾ ಅರ್ಥವಿದೆ. ಚಿಕ್ಕಪ್ಪನ ಅಭಿಪ್ರಾಯಕ್ಕೆ ಅವನದು ಮೂಕಸಮ್ಮತಿಯಲ್ಲ. ಅವನ ಹೃದಯ ಕಲೆಯನ್ನು ಜೀವನ-ಪ್ರಯೋಜನಕ್ಕೆ ಅಂಕಿತಗೊಳಿಸಲು ಒಡಂಬಡುವುದಿಲ್ಲ. ಬುದ್ಧಿ ಒಪ್ಪುತ್ತದೆ. ಹಾಗಾದರೆ, ಎರಡೂ ವಾದವನ್ನೂ ಕೇಳಿ-ಸಮರ್ಥನೆಯ ವಾಸ್ತವಿಕತೆಯನ್ನೂ ಕಣ್ಣಾರೆ ಕಂಡ 'ನಾನಾ' ದರೂ ತೀರ್ಮಾನ ಹೇಳಬಾರದಿತ್ತೇ? 'ನನ್ನ' ಮೌನದ ವ್ಯಾಖ್ಯೆಯೇನು?

ಕಥೆಗಾರರು ನಿರ್ದಿಷ್ಟವಾದ ಮಾತುಗಳಲ್ಲಿ ಕೌಶಲದಿಂದ ಸಮಸ್ಯೆಯೊಡ್ಡಿದ್ದಾರೆ. ಅದರ ಪರಿಹಾರಕ್ಕೆ ಕಥೆಯನ್ನೆ ಹಿಂಡಬೇಕು.

ಕಲೆಗೊಂದು ಗುರಿಯುಂಟೆ ?

ಸಂಗೀತಾದಿ ಕಲೆಗಳು ಎಂದೂ ತಮ್ಮ ಗುರಿ ಆನಂದ-ಜೀವನ ಪ್ರಯೋಜನ-ಎಂದು ಸಾರಿಕೊಂಡು ಉಳಿದು ಬಂದಿಲ್ಲ. ಚಿಕ್ಕಪ್ಪ ಕಲೆಯ ಬಗ್ಗೆ ಸಂಶೋಧನೆ ಮಾಡಿಲ್ಲ. ಅವನದೆಲ್ಲಾ ಅನುಭವ-ವೇದಾಂತ. ಆನಂದನದು ಕೇವಲ ವ್ಯಾಸಂಗದಿಂದುಂಟಾದ ಕಲ್ಪನೆ; ಆದರೆ ಕಲೆಯಿಂದ ಆನಂದವೂ ಆಗಿದೆ. ಜೀವನಪ್ರಯೋಜನವೂ ಸಾಧಿಸಿದೆ. ಒಂದುಕಾಲದಲ್ಲಿ, ಆದರಿಂದಾದ ಉಪಯೋಗದ ಪರಿಣಾಮವಾಗಿ, ಕಲೆ ದೇವತೆಯಾಗಿತ್ತು. ಆಮೇಲೆ ಭೋಗದ ಹೆಣ್ಣಾಯಿತು ಈಗ ಸೇವೆಯ ತೊತ್ತಾಗಿದೆ. ವ್ಯವಹಾರದ ನಾಣ್ಯವಾಗಿದೆ. ಚಿಕ್ಕಪ್ಪ ಇಂದಿನ ಸ್ಥಿತಿಗೆ ಬಲಿಯಾದವರು. 'ಕಲಾವಿದರು ಕುಡಿಯುವ ಅಂಬಲಿ, ಕಲೆಯ ವಿನಿಮಯದ್ದು' ಎಂದು ಕಠೋರಸತ್ಯವನ್ನು ಕಂಡಿದ್ದಾರೆ. ಅವರು 'ಜೀವನ-ಅನಂತರ ಕಲೆ' ಎಂಬ ವ್ಯವಹಾರದಲ್ಲಿ ನುರಿತವರು. ಆನಂದ ಯುವಕಸಹಜ ಉತ್ಸಾಹಿ. ಕಲೆಯನ್ನು ಮೆಚ್ಚುವ ಭರದಲ್ಲಿ ಕಲಾವಿದರನ್ನು ಮರೆತವನು. ಈಗ 'ಕಲೆ ವ್ಯಾಪಾರೀಮಾತಾಗಿದೆ.' ಎಂಬ ಕಲ್ಪನೆಯೇ ಅವನಿಗೆ ಅಸಹ್ಯಕರ. ಅವನು, ಕಲೆಯ ವ್ಯವಹಾರದಲ್ಲಿ ದ್ವೇಷವಿದೆ, ಸ್ಪರ್ಧೆಯಿದೆ, ಸ್ವಾರ್ಥವಿದೆ, ಕೀರ್ತಿದುರಾಕಾಂಕ್ಷೆಯಿದೆ ಎಂಬುದವನ್ನೇ ಅರಿಯದವನು. ಈಗ ಪ್ರತಿಯೊಂದು ನಡಾವಳಿಯೂ ಕೊನೆಗೆ ಸರ್ವಸಂಗ ಪರಿತ್ಯಾಗದ ಸಂನ್ಯಾಸ ಧರ್ಮವೂ-ಉದರನಿಮಿತ್ತ ಎಂಬ ಅಚ್ಚರಿಯನ್ನು ಕಾಣುವಷ್ಟು ಅನುಭವದಲ್ಲಿ ಸಂಚರಿಸಿಲ್ಲ. ಆದರೂ ಆನಂದ ವಿಚಾರಪರ. ಕಲೆ ಸುಸಂಸ್ಕೃತಿಯ ಲಕ್ಷಣವೆಂದು ನಂಬಿದವನು. ಸುಸಂಸ್ಕೃತಿಯೇ ಕಲಾಮಯತೆಯ ಚಿಹ್ನೆ ಎಂದು ತಿಳಿದವನು. ಈ ಕಲ್ಪನೆ-ನೋಡ ಸಿಕ್ಕದಿದ್ದರೂ-ಕೇವಲ ಕಲ್ಪನೆಯಾಗದೆ ಎಂದೋ ಎಲ್ಲಿಯೋ ಅದು ವಾಸ್ತವಿಕವಾಗಿದ್ದುದೂ ಉಂಟು.

ಆದ್ದರಿಂದ ಕಲೆಯ ಗುರಿಯು ಬೇರೆಯೇ ಇರಬೇಕು ಎನ್ನಿಸುತ್ತದೆ. ಕಥೆಗಾರರು ಅದನ್ನು ಅರಿಯಲು ಕೆಲವು ಗುಪ್ತ ನಿರ್ದೇಶನಗಳನ್ನು ಕೊಟ್ಟಿದ್ದಾರೆ. ಹಾಡುಗಾರರೇನೋ ಜೀವನನಿರ್ವಾಹಕ್ಕಾಗಿ ಹಾಡಿದರು ಸರಿಯೆ ಚಿಕ್ಕಪ್ಪ ಅದನ್ನು ಏಕೆ ಕೇಳಬೇಕು? ಅವರಿಗೆ ಸಂಗೀತವೆಂದರೆ ಏಕೆ ಪ್ರಾಣ? ಸಂಗೀತ-ಹೇಗೇ ಇರಲಿ-ಅವರ ಕಿವಿ ನಿಮಿರುವುದೇಕೆ? ಹೊರಗಿನಿಂದ ಹಾರ್ಮೋನಿಯಂ ಸ್ವರ ಕೇಳಿದೊಡನೆಯೆ, ಅತ್ಯಂತ ಸವಿಯಾದ 'ವಾಹಭೋಜನ'ವನ್ನೂ ನಿಲ್ಲಿಸಿ, ಥಟ್ಟನೆ ಹೊರಗೆ ಓಡಬೇಕೇಕೆ? "ನನ್ನ ಮಾತನ್ನು ಸಾಧ್ಯಶ್ಯಪಡಿಸುತ್ತೇನೆ ಬಾ!" ಎಂದು ಆನಂದನನ್ನೂ ಕರೆದುಕೊಂಡೇ ಸಾವಧಾನವಾಗಿಯೇ ಹೋಗಬಹುದಿತ್ತಲ್ಲ! ಯಾವುದೋ ಮೋಡಿಯಿಂದ ವಿವಶರಾದಂತೆ ವರ್ತಿಸಿದುದರ ಅರ್ಥವೇನು? ಚಿಕ್ಕಪ್ಪನ ಹೊಟ್ಟೆ-ಬಟ್ಟೆಗೆ ನೆರವಾಗುವ ಬೇರೆಯೇ ಚಮತ್ಕಾರ ಇರಬೇಕು. ಯಾವ ಪ್ರಯೋಜನಕ್ಕೆ ಅವರು ಸಂಗೀತ ಕೇಳಿದರು? ಅವರಿಗಾದ ಪ್ರಯೋಜನವನ್ನು ವ್ಯವಹಾರ ದೃಷ್ಟಿಯಿಂದ ಹೇಳುವುದಾದರೆ-ಖರ್ಚು. ಕಥೆಯಲ್ಲೇ ಅದರ ಲೆಕ್ಕವಿದೆ. ಸಂಗೀತಕ್ಕೆ ಹೀಗೆ ಮರುಳಾದ ಈ ಮುದುಕ—ಸಂಗೀತವು, ಜೀವನ ಪ್ರಯೋಜನಕ್ಕೆ—ಎಂದರೆ, ನಂಬುವುದು ಹೇಗೆ? ನಾದೋಪಾಸಕರಾದ ಹಲವು ವ್ಯಕ್ತಿಗಳನ್ನು ನಾವು ಬಲ್ಲೆವು. ಅವರೆಲ್ಲಾ ಹೊಟ್ಟೆಗೆ ಅದನ್ನು ವಿನಿಯೋಗಿಸಲಿಲ್ಲ.

ಚಿಕ್ಕಪ್ಪ ಗೆದೆಯುತ್ತಾನೆ. ಆದರೆ ಹಾಡುಗಾರರು ಹೊಟ್ಟೆ ತುಂಬಿದಾಗಲೂ ಹಾಡಬಹುದು. "ಅಭ್ಯಾಸಕ್ಕಾಗಿ, ತಮ್ಮ ಬಂಡವಾಳ ಹೆಚ್ಚಿಸಿಕೊಳ್ಳಲೂ ಹಾಡಿಕೊಳ್ಳುತ್ತಾರೆ." ಎಂದರೆ, ತೀರಾ ಅದು ಮೊಂಡವಾದವಾಗುತ್ತದೆ. ಹಾಡುವಾಗಲೂ ಗಿರಿಧರನನ್ನೇ ಕುರಿತು ಹಾಡುತ್ತಾರೆಂಬುದೇ ವೈಶಿಷ್ಟ್ಯ. ಸಂಗೀತದ ಗುರಿ ಈಶೋಪಾಸನೆಯೂ ಹೌದು. ಅವರು ಆನಂದಕ್ಕಾಗಿಯೂ ಹಾಡಬಹುದು ಅಥವಾ ಹಾಡು-ಹಾಡುತ್ತಾ ಆನಂದ ತುಂದಿಲರಾಗಬಹುದು. ಹಾಡುವುದು ಅವರ ಪ್ರವೃತ್ತಿ. ಆಲಿಸುವುದು ಇತರರ ಪ್ರವೃತ್ತಿ. ಸಂಗೀತ ಹಾಡುತ್ತ ಕೇಳುತ್ತ ಅನ್ನ-ನೀರು ಮರೆತವರುಂಟು. ಪುಂಗಿಯನಾದಕ್ಕೆ ತಲೆದೂಗುವ ನಾಗರಾಜ, ತನ್ನ ವಿಷಬುದ್ಧಿಯನ್ನೆ ಬಿಟ್ಟುದುಂಟು. ಮತ್ತಗಜ ಮೌನವಾದುದುಂಟು. ರಚ್ಚೆಯ ಕೂಸು ಶಾಂತವಾದುದುಂಟು. ಆದರೆ ಸಂಗೀತದ ಗುರಿ, ನಾಗರವಿಷಾಪಹಾರ, ಮದಗಜದ ಮೌನ, ಮಕ್ಕಳ ಶಾಂತತೆಗೆ-ಎಂದರೆ ಸರಿಯೆ? ಪ್ರಯೋಜನವನ್ನೆ ಗುರಿ ಎನ್ನಲಾದೀತೆ? ಎನ್ನುವುದಾದರೆ ನಿರ್ದಿಷ್ಟ ಗುರಿಗೆ ಅಂಟಿಕೊಂಡಿರುವುದು ಹಾಸ್ಯಾಸ್ಪದವಲ್ಲವೆ?

ಕಲೆಯನ್ನು ಮೆಚ್ಚಿದವರು ಪಾರಿತೋಷಿಕ-ಬೆಲೆಯಲ್ಲ-ಕೊಟ್ಟಿರಬೇಕು. ಯಾವಾಗ ಪಾರಿತೋಷಿಕ ಗಿಟ್ಟಿಸುವುದೇ ಗುರಿಯಾಯಿತೋ, ಕೇವಲ ಉಪಯೋಗದ ಬಗ್ಗೆಯೇ ಎಲ್ಲವನ್ನೂ ವಿವೇಚಿಸುವ ವ್ಯವಹಾರ ಬುದ್ಧಿಯುಂಟಾಯಿತೋ, ಕಲೆಗೆ ಜೀವನಪ್ರಯೋಜನದ ಗುರಿಯೇ ನಿರ್ಧರಿಸಲ್ಪಟ್ಟಿರಬೇಕು. ಅದಕ್ಕೆ ಸರಿಯಾಗಿ ಸರ್ವಭಕ್ಷಕನಂತೆ ತುತ್ತಿನ ಚೀಲ ಎಲ್ಲ ಪ್ರವೃತ್ತಿಯನ್ನೂ ತನ್ನ ಸೇವೆಗೆ ಬಗ್ಗಿಸಿಕೊಂಡಿದೆ. ಸಂಬಳಕ್ಕೆ ಒಪ್ಪಿಕೊಂಡು ವೇದಾಂತದ ಮೇಲೆ ಭಾಷಣ ಮಾಡುವವರೆಷ್ಟು ಮಂದಿಯಿಲ್ಲ? ಅಂತಹರಿಗೆ ವೇದಾಂತವೆಂದರೆ-ಸಂಬಳವಲ್ಲದೆ ಬೇರೆಯೇನು? ಹೀಗೆಯೇ ಪ್ರಯೋಜನ ಪರಿಣಾಮದಿಂದ ಎಲ್ಲವನ್ನೂ ನಿರ್ಧರಿಸಲು ಬರುವುದೆ? ಲೋಕದ ಬಹುಜನ ಬುದ್ಧಿಪೂರ್ವಕವಾಗಿ ಅಧರ್ಮಾಚರಣೆಯಲ್ಲಿ ನಿರತರಾಗಿದ್ದಾರೆ. ಆದ್ದರಿಂದ ಜೀವನದ ಧರ್ಮವೇ ಅದೆಂದು ಗ್ರಹಿಸಬೇಕೆ?

ಇದರಿಂದ ಒಂದು ಮಾತು ಸ್ಪಷ್ಟ: ಕಲೆ ತಿಳಿಯಾದ ನೀರಿದ್ದಂತೆ, ಆದರಿಂದ ಹಲವು ಪ್ರಯೋಜನರಿದ್ದರೂ, ತನ್ನ ಇರುವಿಕೆ ಪ್ರಯೋ-

ಜನಕ್ಕೆ ಎನ್ನುತ್ತದೆಯೆ ಎಂಬುದನ್ನು, ನೀರಿನ ಭಾಷೆ ಭಾವ ಬಲ್ಲವರು ಹೇಳಬೇಕು. ಅದರಂತೆ ಕಲೆ. ನೀರನ್ನು ಯಾವ ಬಣ್ಣದ ಸೀಸೆಯಲ್ಲಿರಿಸಲಿ; ಅದಕ್ಕೂ ಅದೇ ಬಣ್ಣ ಬರುತ್ತದೆ. ಅಂತೆಯೇ ಕಲೆ. ಕಲೆಯ ಧರ್ಮ ಕಾಲಧರ್ಮವನ್ನನುಸರಿಸುತ್ತದೆ. ಆನಂದನ ಮೌನಕ್ಕೆ ಬಹುಮಟ್ಟಿಗೆ ಇದೇ ಕಾರಣ. ಚಿಕ್ಕಮ್ಮ ಸೂಚ್ಯವಾಗಿ ಇದನ್ನೇ ಎತ್ತಿ ಹಿಡಿಯುತ್ತಾಳೆ. ಕಲೆ ಜೀವನಪ್ರಯೋಜನದ ಮಿತಿಯಲ್ಲೇ ಇರಲು ಬಡತನದ ಪರಿಸ್ಥಿತಿಯೇ ಕಾರಣ–ಎಂದು ಹೇಳುತ್ತಾಳೆ. ಆನಂದನ ಎದುರಿಗೆ ಎರಡು ಚಿತ್ರವಿವೆ. ಜೀವನವನ್ನು ಮರೆತ ತನ್ನ ಭಾವುಕತೆ, ಅಥವಾ ಪರಮಾರ್ಥತೆ; ಆತ್ಮವನ್ನು ಮರೆತ ಚಿಕ್ಕಪ್ಪನ ಭೌತಿಕತೆ. ಆನಂದ ಹಾಲನ್ನು ಹೀರಿ ಹಸುವನ್ನು ಮರೆತನು. ಚಿಕ್ಕಪ್ಪ ಹಾಲಿಗಾಗಿ ಹಸು ಎಂದವನು. 'ನಾನು' ಇವೆರಡೂ ಅಲ್ಲದೆ, ಹಸು ಇನ್ನೂ ಬೇರೆ ಏನೋ-ಎತ್ತಾಗಿ, ಹೋರಿಯಾಗಿ ತಾಯಾಗಿ, ಗೊಬ್ಬರವಾಗಿ, ದೇವರಾಗಿ ಇನ್ನೂ ಏನೋ–ಆಗುತ್ತದೆಂದು ನಂಬಿದವನು

ಕಥಾ ನಿರೂಪಣೆ:—

ದುರ್ಭರ ಜೀವನ ಎಲ್ಲ ವಿಷಯಗಳನ್ನೂ ವಿಚಿತ್ರವಾಗಿ ನೋಡುವುದನ್ನು ಕಲಿಸುತ್ತದೆಂಬುದಕ್ಕೆ ಕಥೆಯೆ ಪ್ರಮಾಣ

ಹೀಗೆ ವಿಚಾರಪ್ರಚೋದಿತವಾದ ಕಥೆಯಲ್ಲಿ ಅಸಹಜತೆ ಒಂದು ಕುಂದಾಗಿಲ್ಲ. ಸಹಜತೆಯೂ ಇದೆ. ಆನಂದ—ಕಲೆ ಆನಂದಕ್ಕೆ ಎಂಬುದು ಅನನುಭವಿಯ ವ್ಯಾಸಂಗಪ್ರಿಯನ ಸಹಜಚಿತ್ರಣ. ಹಾಗೆಯ ಚಿಕ್ಕಪ್ಪ ಜೀವನದ ಕಟು ಅನುಭವದಿಂದ ಕಲೆಯಲ್ಲಿ ಅತಿ ಮಹತ್ತ್ವ ಆರೋಪಿಸದಿರುವುದೂ ಸಹಜವಾಗಿದೆ. ಮುಖ್ಯವಾಗಿ ಹಾಡುಗಾರನ ಚಿತ್ರಣ. ಅದೊಂದು ಪರಿಪೂರ್ಣ ವಾಸ್ತವಿಕ ಚಿತ್ರ, ಪ್ರತಿಬಿಂಬ. ಅವನಿಗೂ ಒಂದೆರಡು ನಿತ್ಯವಾದ ಸಂಗತಿಗೊತ್ತಿದೆ. ಅದೆಂದರೆ: ದೇವರನ್ನು ಕುರಿತು ಹಾಡುವುದು. ಜನತೆ ಚೆನ್ನಾಗಿ ಹಾಡಿದರೆ ಹಣಕೊಡುತ್ತಾರೆಂಬುದು. ಎಲ್ಲಾ ಬಡವರಂತೆ-ದೇವರು ತನಗೆ ಮಾಡಿದ ಅನ್ಯಾಯವನ್ನು ಬಲ್ಲ. ಆದರೂ ಅವನನ್ನು ತೆಗಳಲಾರ. ತನ್ನದೇ ಏನೋ ತಪ್ಪಿರಬೇಕು ಎಂಬ ಸಮಾಧಾನದಲ್ಲಿ ಸಹಿಸುತ್ತಾನೆ "ನಾ ಏನು ಸಿಟ್ಟು ಮಾಡೋದೈತಿ ತಂದೆ? ನಮ್ಮ ಮ್ಯಾಲೆ ದೈವಾನೆ ಸಿಟ್ಟುಮಾಡಿ ಬಿಟ್ಟೈತಿ" ಎನ್ನುವ ಮಾತಿನಲ್ಲಿ, ಆ ನಿಶ್ಚಯತೆಯೂ ಇದೆ. ಜನರನ್ನು ದೂರಬಾರದೆಂಬುವ ಎಚ್ಚರಿಕೆಯೂ ಇದೆ. ಅವನಿಗೆ ಜೀವನ ನರಕ ಎಂಬ ಪ್ರಜ್ಞೆಯೂ ಇದೆ. ಅವನು ಜಗತ್ತಿನ ತಾರತಮ್ಯವನ್ನು ಪ್ರತಿಕ್ಷಣ ಕಂಡಿದ್ದಾನೆ. ತಾನು ದೇಹಿ ಎನ್ನಬೇಕು. ಇತರರು ಕಾಸು ಎಸೆಯ ಬೇಕು. ಈ ದೈನ್ಯತೆಯು ನರಕ ಎಂದು ಬಲ್ಲವನು. ಹೊಟ್ಟೆಗಾಗಿ ಸಂಗೀತ ಹಾಡುವುದಷ್ಟೇ ಏನು? ಇನ್ನೂ ಏನೇನು ಮಾಡಲೂ ಅವನು ಸಿದ್ಧನಾಗಬೇಕಾಗುತ್ತದೆ. ಆದ್ದರಿಂದ ಪರದಲ್ಲಿ ಅವನಿಗೆ ನರಕವೇ ಎಂಬ ನಿರ್ಧಾರ. "ಇರೂ ತನಕಾ ಈ ಲೋಕದ ನರಕದಾಗಿರಬೇಕು. ಸತ್ತ ಮ್ಯಾಗ ಆ ಲೋಕದ ನರಕದಾಗಿರಬೇಕು" ಎನ್ನುತ್ತಾನೆ. ಅವನ ಬಡವರ ದುರ್ಭರ ಜೀವನದ ಆಳತೆಗೋಲಾದ ಈ ಮಾತು, ಕೋಟಿ ಜನರ ಸಾಮಾನ್ಯ ಉದ್ಗಾರವೆಂಬುದು ಎಲ್ಲರಿಗೂ ಗೊತ್ತು. ಆ ನುಡಿ ತೀರ ವಾಸ್ತವಿಕ.

ಅವನ ಮಗಳ ಚಿತ್ರಣ ತುಂಬ ಕಲಾತ್ಮಕವಾದುದು. ಅವಳ ಕಂಠವೇನೋ ಕೋಮಲ. ಹಸಿದ ಹೊಟ್ಟೆಯಿಂದ ಅವಳು ಹಾಡುವ ಭೀಕರ ಪರಿಸ್ಥಿತಿಗೆ ಅವಳು ಬಲಿಯಾಗಿದ್ದಾಳೆ. ಅವಳು ಕಥೆಯ ರಂಗದಲ್ಲಿ ಕಂಬನಿ ಮಿಡಿಯುತ್ತಲೇ ಪ್ರವೇಶಿಸುತ್ತಾಳೆ. ಆ ಎಳೆಯ ಜೀವ ವಿಪರೀತ ಯಾತನೆಯನ್ನನುಭವಿಸುತ್ತದೆ. ಮಾತೂ ಹೊರಡುವಂತಿಲ್ಲ. ಆದರೆ ಹಾಡಬೇಕು. ಹೊಟ್ಟೆಗೆಂದೊಂದೇ ಅಲ್ಲ. ತಂದೆಯ ಕೆಂಗಣ್ಣಿನ ಸನ್ನೆಯಿಂದಾಗಿ. ಈ ಹಿಸುಕಿದ ಹಣ್ಣೂ ಸವಿಯೇ! ಅದು ಕಂಠದ ತ್ರಾಣ. ಮಿಕ್ಕ ವೇಳೆ ಪೂರ್ಣವಾಗಿ ಮೂಕಿ! ಹಾಡುಗಾರನ ನಿಸ್ಸಹಾಯಕ ಬಾಳುವೆಯ ಸಾಕಾರವಾದ ವ್ಯಾಖ್ಯೆ ಅವಳು.

ಚಿಕ್ಕಮ್ಮನ ಪಾತ್ರ ಒಂದೇ ಮಾತು ಆಡಲು ಬಂದಿದೆ. ಅವಳು ಗಂಡನ ಮಾತನ್ನು ನಿರಾಕರಿಸುವುದಿಲ್ಲ. ಆನಂದನಂತೆ ಸುಮ್ಮನಿರುವುದಿಲ್ಲ. ಗಂಡನ ಮಾತಿನ ಒಂದು ಅಕ್ಷರವನ್ನೂ ಬದಲಾಯಿಸದೆ, ತನ್ನದೊಂದೇ ಪದ ಸೇರಿಸುತ್ತಾಳೆ, ಬಡತನ! ಅಷ್ಟರಿಂದ ಚಿಕ್ಕಪ್ಪನ ನಿಲುವು ಅರ್ಥವಾಗುತ್ತದೆ.

ಆನಂದ ಮೊದಲು-ಆದೇನು ನೀವೂ ಹೀಗೆನ್ನುತ್ತೀರಿ?-ಎಂದಾಗ ವಯಸ್ಕರೆಲ್ಲಾ ತನ್ನ ಅಭಿಪ್ರಾಯಕ್ಕೆ ತಲೆದೂಗುತ್ತಾರೆ ಎಂದುಕೊಂಡಿರುತ್ತಾನೆ. ಆದರೆ ಚಿಕ್ಕಪ್ಪ ಕಲೆಯ ಬಗ್ಗೆ ಇದ್ದ ಪಿತ್ತವನ್ನು ಇಳಿಸಲು ಒಂದು ಉಪಮೆಯನ್ನು ಕೊಡುತ್ತಾನೆ. 'ಡೊಂಬರಲಾಗದಂತೆ ಕಲೆಯೂ ಹೊಟ್ಟೆಗಾಗಿ ಮಾಡುವ ಕಸರತ್ತು' ಎಂದ ಅವನ ಮಾತು, ಆನಂದನಿಗೆ ಉಸಿರುಕಟ್ಟಿಸುವ ಹೊಡೆತ. ಅಲ್ಲದೆ ವಾಗ್ಪಟ ಓದುತ್ತಿದ್ದ ಈ ಮುದುಕ, ತಾನಾಗಿ ವಾದಕ್ಕೆ ಬಾಯಿ ಹಾಕಿದಾಗಲೇ—ಓಹೋ ವಿರೋಧ ಎದ್ದಿತು. ಯಾವುದೋ ಉದಾಹರಣ ಸಹಿತ ಆನಂದನ ಬಾಯಿ ಮುಚ್ಚಿಸಬಹುದು–ಎನ್ನಿಸುವಂತೆ ಚಿಕ್ಕಪ್ಪನ ಪ್ರವೇಶ ನಿರೂಪಿಸಲ್ಪಟ್ಟಿದೆ.

ಆನಂದಕಂದರ ಶೈಲಿ ಕತೆಗಾರಿಕೆ ಬಗ್ಗೆ ನನ್ನಂತಹನು ಹೇಳಬೇಕಾದುದೇನಿದೆ? ಕಥಾಲೋಕದಲ್ಲಿ ಅವರದು ಭದ್ರವಾದ ಸ್ಥಾನ. ಈ ಕಥೆಯೊಡನೆ—ಕಲೆಯ ಬಗ್ಗೆ ವೃಥಾ ಗೊಂದಲವೆಬ್ಬಿಸಿ—ತಿಕ್ಕಾಟದಲ್ಲೇ ಜೀವ ಸವೆಯಿಸುತ್ತಿರುವವರಿಗೆ ಮಾರ್ಗದರ್ಶನ ನೀಡಿದ್ದಾರೆ. ಅದಕ್ಕಾಗಿ ಕನ್ನಡಜನ ಧನ್ಯತೆಯನ್ನರ್ಪಿಸಬೇಕು.

"ನೂತನ ಗಣೇಶ"ನಗಳ
ತಿದ್ದಿದ ಹೊಸ ಆವೃತ್ತಿಗಳು.] ಎಲ್ಲಕಡೆಗೂ ದೊರೆಯುವುವು [೧ ರಿಂದ ೭ ತರಗತಿಗಳ ವರೆಗೆ
ಎಲ್ಲ ಜಿಲ್ಲಾ ಸ್ಕೂ. ಬೋ. ಹಾಗು ಮ್ಯುನಸಿಪಲ್ ಸ್ಕೂ. ಬೋ. ಗಳೂ ಮನ್ನಣೆಯನ್ನಿತ್ತಿರುವವು.
ಎಂತಲೇ ನಿಮ್ಮ ಪ್ರತಿಗಳನ್ನು ಇಂದೇ ಸಂಗ್ರಹಿಸಿರಿ. ವ್ಯಾಪಾರಿಗಳಿಗೆ ಧಾರಾಳ ಕಮಿಶನ್.
ಆಕಳವಾಡಿ ಬುಕ್‌ಡಿಪೋ, ಧಾರವಾಡ

ಸಾದರ ಸ್ವೀಕಾರ

(೭೭) **ಸುಗುಣಾ**—(ಸ್ವತಂತ್ರ ಸಾಮಾಜಿಕ ಕಾದಂಬರಿ.) ಬರೆದವರು ಶ್ರೀ. ಡಿ. ಆರ್. ವೆಂಕೋಬರಾವ್, ನಂಜನಗೂಡು. ಪ್ರಕಾಶಕರು ಉಷಾಸಾಹಿತ್ಯಮಾಲೆ, ಮೈಸೂರು. ಕ್ರೌ. ೮. ೧೫೬ ಪುಟಗಳು. ಬೆಲೆ ೧–೦–೦.

(೭೮) **ಗುರುದಕ್ಷಿಣೆ**— (ಬಾನುಲಿಗಾಗಿ ಬರೆದ ಮೂರು ಪೌರಾಣಿಕ ರೂಪಕಗಳ ಸಂಕಲನ). ಲೇಖಕರು ಶ್ರೀ. ರಂಗರಾವ್ ಸ್ವಾಮಿರಾವ್ ದೇಶಪಾಂಡೆ, ಅಲದಕಟ್ಟಿ. ಪ್ರಕಾಶಕು: ಶರತ್ ಪ್ರಕಾಶನ ಮಂದಿರ, ಧಾರವಾಡ. ಕ್ರೌ. ೮. ೬೩ ಪುಟಗಳು. ಬೆಲೆ. ೦–೧೨–೦.

(೭೯) **ಕರ್ನಾಟಕ ವೈಭವ**—(ವಾರಪತ್ರಿಕೆಯ ದೀಪಾವಳಿ ಸಂಚಿಕೆ)ಸಂಪಾದಕರು ಶ್ರೀ. ಸ. ಹ. ನಾಯಕ ಬಿ.ಎ., ಎಲ್ಎಲ್. ಬಿ. 'ಕರ್ನಾಟಕ ವೈಭವ' ಕಾರ್ಯಾಲಯ, ವಿಜಾಪೂರ. ಡಿ. ೧/೮ ದ ೪೮ ಪುಟಗಳು. ಬೆಲೆ ೦–೬–೦.

ಸಂಚಿಕೆ ಚಿಕ್ಕದಾಗಿದ್ದರೂ ವಾಚಕರಿಗೆ ದೀವಳಿಗೆಯ ಸವಿಯನ್ನು ಮನಸ್ಸಿಗೂ ಒದಗಿಸಿಕೊಡುವಂತಹದಾಗಿದೆ. ಅಭಿನಂದನೆ.

(೮೦) **ಹನುಮಾನ ಶಾಸ್ತ್ರೀಜ**—(ಹಿಂದಿಯಲ್ಲಿ ಬರೆದ ಪರಿಚಯಾತ್ಮಕ ಕಿರುಹೊತ್ತಿಗೆ). ಪ್ರಕಾಶಕರು: ಪಶ್ಚಿಮ ಬಂಗಾಲದ ಭಾರತೀಯ ಜನಸಂಘ. ೩೧೧. ಬಂಕರಾಲಸ್ಟ್ರೀಟ್, ಕಲಕತ್ತಾ. ಕ್ರೌ. ೮. ೧೬ ಪುಟಗಳು. ಬೆಲೆ ?

(೮೧) In Defence of Prohibition (ಪ್ರಚಾರಾತ್ಮಕ ಕಿರುಹೊತ್ತಿಗೆ). ಲೇಖಕರು ಮತ್ತು ಪ್ರಕಾಶಕರು ಶ್ರೀ. ಸಾರಾಭಾಯಿ ಪ್ರತಾಪರಾಯ. ಮಾಥುಲಿ ಮುಂಬಯಿ ೬. ಕ್ರೌ. ೮. ೪೦ ಪುಟಗಳು

(೮೨) **'ಪರಖ' ಕೀ ಪರಖ**—(ಹಿಂದೀ ಕೃತಿಯೊಂದರ ವಿಮರ್ಶಾ ಸಂಕಲನ) ವಿವಿಧ ಲೇಖಕರ ವಿಮರ್ಶೆಗಳನ್ನು ಶ್ರೀಮಾನ್ ಮನುಲಾಲ ದುಬೇ ಎಂ. ಎ. 'ಸಾಹಿತ್ಯರತ್ನಂ' ಅವರು ಸಂಪಾದಿಸಿ ಸಂಕಲನಗೊಳಿಸಿದ್ದಾರೆ. ಪ್ರಕಾಶಕರು ಶ್ರೀಮಾನ್ ಜಿ. ಡಿ. ಮೈಸಾಳೆ, 'ಸಾಹಿತ್ಯಸೇವಾಸದನ' ಬೋರಗಾಂವ; ಜಿಲ್ಲಾ ಬೆಳಗಾಂವ. ಕ್ರೌ. ೮. ೩೨ ಪುಟಗಳು. ಬೆಲೆ ೦–೬–೦

(೮೩) **ಜಲಪಾತ** — (ಕವನ ಸಂಕಲನ) ಬರೆದವರು 'ಕಾವ್ಯಾನಂದ' (ಶ್ರೀಮಾನ್ ಪುರಾಣಿಕ ಸಿದ್ಧಯ್ಯನವರು.). ಪ್ರಕಾಶಕರು ಸಂಧ್ಯಾ ಸಾಹಿತ್ಯಮಾಲೆ, ಹೈದರಾಬಾದ್ (ದಕ್ಷಿಣ) ಕ್ರೌ. ೮ ೧೧೨ ಪುಟಗಳು. ಬೆಲೆ ೨–೦–೦

(೮೪) **ನವಜೀವನ**— (ಹೊಸ ಮಾಸಪತ್ರಿಕೆ.) ಸಂಪಾದಕರು ಶ್ರೀ. ದೀನಾನಾಥ ಸಾಂಡ್ರಾ ಬಿ. ಎ. ಹುಬ್ಬಳ್ಳಿ. ಪ್ರಕಾಶಕರು: ನವಜೀವನ ಪ್ರಕಾಶನ ಹುಬ್ಬಳ್ಳಿ. ಕ್ರೌ. ೧/೮ ದ ೪೦ ಪುಟಗಳು. ಬಿಡಿ. ಸಂಚಿಕೆಯ ಬೆಲೆ ೦-೪-೦.

(೮೫) **ವಿಕಾಸ**—(ಮಾಸಪತ್ರಿಕೆಯ ದೀಪೋತ್ಸವ ವಿಶೇಷ ಸಂಚಿಕೆ) ಸಂಪಾದಕರು ಮತ್ತು ಪ್ರಕಾಶಕರು: ಶ್ರೀ. ಎಸ್. ಕೆ. ದೇಶಪಾಂಡೆ, ಹುಬ್ಬಳ್ಳಿ. ಡಿ. ೧/೮ ದ ೪೮ ಪುಟಗಳು. ಬೆಲೆ ೦–೪–೦.

ಮೇಲೋಲೆಯ ಚಿತ್ರ ಆಕರ್ಷಕವಾಗಿದೆ. ಲೇಖನಗಳೂ ಚುಟುಕು–ಚುಟುಕಾಗಿದ್ದು ಸಾಮಾನ್ಯವಾಚಕರಿಗೂ ರುಚಿಸುವಂತಹವಾಗಿವೆ.

(೮೬) **ಕನ್ನಡಿಗ**–(ವಾರಪತ್ರಿಕೆಯ ದೀಪಾವಳಿ **ವಿಶೇಷಾಂಕ**) ಸಂಪಾದಕರು ಶ್ರೀಮಾನ್ ಮೋದಿ ಹುಚ್ಚೀಶ್ವರರು. ಪ್ರಕಾಶಕರು 'ವಿಶ್ವಭಾರತಿ' ಪ್ರಕಟನಾಲಯ, ಹುಬ್ಬಳ್ಳಿ. ಕ್ರೌ. ೧/೮ ದ ೩೨ ಪುಟಗಳು. ಬೆಲೆ ೦–೪–೦

ಕಥಾಸ್ಪರ್ಧೆಯಲ್ಲಿ ಮೆಚ್ಚುಪಡೆದ ಕತೆಗಳೂ ಸ್ಪರ್ಧೆಯ ವರದಿಯೂ ಈ ಸಂಚಿಕೆಯಲ್ಲಿ ಪ್ರಕಟವಾಗಿವೆ.

(೮೭) **ಅಭಿನವಾಭಿಧಾನಂ**—(ಪದ್ಯಮಯ ನಿಘಂಟು). ಕ್ರಿ. ಶ ೧೪ನೆಯ ಶತಮಾನದ ಮಂಗರಾಜನೆಂಬ ಕವಿಯು ವಿರಚಿಸಿದ ಈ ಕೃತಿಯನ್ನು, ಮದ್ರಾಸ್ ವಿಶ್ವವಿದ್ಯಾನಿಲಯವು ಇದೀಗ ಪ್ರಕಟಿಸಿದೆ. ಮುಖ್ಯ ಸಂಪಾದಕರು ಶ್ರೀ. ಎಂ. ಮರಿಯಪ್ಪ ಭಟ್ಟರು ಎಂ. ಎ., ಎಲ್. ಟಿ. ಮದ್ರಾಸ್. ರೋಯಲ್ ೮. ೧೬+೧೫೪+೧೫೬ ಪುಟಗಳು. ಬೆಲೆ ೯–೦–೦.

———

ಶರತ್‌ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು!
ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

'ಆನಂದಕಂದ'ರ ಕಥೆ, ಕಾದಂಬರಿ, ಕವನಸಂಕಲನ, ನಾಟಕಸಂಕಲನ, ಸಾಹಿತ್ಯ ಸಂಸ್ಕೃತಿಯ ಗ್ರಂಥಗಳು ಎಲ್ಲವೂ ನಮ್ಮಲ್ಲಿ ದೊರೆಯುವವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮೀಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು.

ನಮ್ಮ ಮಂದಿರ ಪ್ರಕಟಿಸಿದ 'ಆನಂದಕಂದ'ರ ಸಾಮಾಜಿಕ ಕಾದಂಬರಿ:

ಮಗಳ ಮದುವೆ

೧೯೩೦ನೆಯ ಸತ್ಯಾಗ್ರಹ ಚಳವಳಿಯ ಹಿನ್ನೆಲೆಯಲ್ಲಿ ಉತ್ತರಕರ್ನಾಟಕದ ಸಾಮಾಜಿಕ ಜೀವನವನ್ನು ವಿವಿಧ ಮುಖದಲ್ಲಿ ಚಿತ್ರಿಸಿ ತೋರಿಸಿದ ರಮ್ಯ ಕಥಾನಕ. ಓದಲು ಕೈಯ್ಯಲ್ಲಿ ತೆಗೆದುಕೊಂಡರೆ, ಮುಗಿಸುವವರೆಗೂ ಪುಸ್ತಕವನ್ನು ಕೆಳಗೆ ಇರಿಸಲಿಕ್ಕಾಗದಂತಹ ಆಕರ್ಷಕವಾದ ಕಲೆಗಾರಿಕೆ. ಓದಿದ ರಸಿಕರಿಂದ ಧನ್ಯವಾದಗಳ ಸುರಿಮಳೆ!

ಕ್ರಾ. ೮. ೩೫೦ ಪುಟಗಳು ಸಾದಾ ಪ್ರತಿಗೆ ೪-೦-೦; ಸುಂದರ ಪ್ರತಿಗೆ ೪-೧೨-೦

ಬೆಳವಡಿ ಮಲ್ಲಮ್ಮ

(ಏಕಾಂಕನಾಟಕ ಸಂಕಲನ)

ಕ್ರಾ. ೮. ೧೧೬ ಪುಟ. ಬೆಲೆ ೧-೮-೦

ಕಾರಹುಣ್ಣಿವೆ

(ಕವನಸಂಕಲನ)

ಕ್ರಾ. ೮. ೧೨೮ ಪುಟ. ಬೆಲೆ ಸಾದಾ ೨-೦-೦ ಸುಂದರ ೨-೮-೦

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಬೇರೆ ಗ್ರಂಥಗಳು

ಕಾದಂಬರಿ	ಕವನ ಸಂಕಲನ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	ವಿರಹಿಣಿ	ಬಡತನದ ಬಾಳು	ಕರ್ನಾಟಕ ಜನಜೀವನ
ಸುದರ್ಶನ	ಒಡನಾಡಿ	ನಮ್ಮ ಬದುಕು	ಜೀವನ ಚರಿತ್ರ
ಅಶಾಂತಿಪರ್ವ		ಸಂಸಾರ ಚಿತ್ರ	ಶ್ರೀ ಬಸವಣ್ಣನವರು
ಮಗಳ ಮದುವೆ		ಮಾತನಾಡುವ ಕಲ್ಲು	

ಅಲ್ಲದೆ ಶ್ರೀ ಹುದ್ದಾರರ 'ಚಿತ್ರಕಲಾಪ್ರವೇಶ'ವೂ ಚಾಡಿಯ ಚಾಣಕ್ಯನ 'ಜಾತೀಯ ಸಮಸ್ಯೆ' 'ಕರ್ನಾಟಕ ಏಕೀಕರಣ' ಈ ಕಿರಿಹೊತ್ತಿಗೆಗಳೂ ದೊರೆಯುವವು.

ಶರತ್‌ಪ್ರಕಾಶನ ಮಂದಿರಕ್ಕೆ ೫ ರೂ. ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ ಸವಲತ್ತುಗಳು. ಬೇಗನೆ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ:

ಎಸ್. ಡಿ. ಧರಮಟ್ಟಿ, ಶರತ್‌ಪ್ರಕಾಶನ ಮಂದಿರ, ಧಾರವಾಡ

Printed by N. A. Hoskeri at the Vijaya Press, Dharwar, and published for the Proprietors Jayanti publications, by S. D. Dharmatti at the Jayanti Office, Dharwar

ಫೆಬ್ರುವರಿ

೧೯೫೪

ಸಂಪು

ಸಂಚಿ

ಬೆಲೆ

ಈ ಸಂಚಿಕೆಯಲ್ಲಿ :

ಮರೆತು ಹೋದ ಮಹಾತ್ಮರ ಕನಸು (ಸಂಪಾದಕೀಯ) ಸಂಪಾದಕರು ೩೨೧

[illegible] (ಸಾಂದರ್ಭಿಕ ಟಿಪ್ಪಣಿಗಳು) 'ಕಾಲಭೈರವ' ೩೨೩

ಹುಲಿಯ ಸೋಗು (ಲಲಿತಪ್ರಬಂಧ) ಶ್ರೀ. ಗೋವರ್ಧನಾಚಾರ್ಯ ಗಲಗಲಿ ಎಂ. ಎ., ಬಿ. ಟಿ. ೩೨೫

ಭಕ್ತಿಭಾವದ ಬೆಳಕು (ವಿ. ಪ್ರ. ಪ್ರಬಂಧ) ಶ್ರೀ. ಪ್ರೈ ಸಂಗನಬಸವ ಶಿವಯೋಗಿಗಳು, ಬಂಥನಾಳ ೩೨೯

ಬಾರೆ ಕಾವ್ಯಭಾಮಿನಿ! (ಕವನ) ಶ್ರೀ. ಎಚ್. ಜಿ. ಉಪಾಧ್ಯಾಯ ಎಂ. ಎ. ೩೩೦

ಪೂಜಾರಿಯ ಕತೆ (ಸಣ್ಣ ಕತೆ) ಶ್ರೀ. ಕೆ. ಅಶ್ವತ್ಥನಾರಾಯಣರಾವ್ ಬನಾರಸ ೩೩೩

ನಾಟಕಾಭಿನಯ (ವಿಮರ್ಶಾತ್ಮಕ ಪ್ರಬಂಧ) ಶ್ರೀ. ಕೆ. ಎಸ್. ಶರ್ಮಾ 'ವಿದ್ವಾನ್' ಕಾಸರಗೋಡು ೩೩೮

ಪುರುಷಾರ್ಥಿ ಮಾರ್ಕೋನಿ (ಜೀವನಪರಿಚಯ) ಶ್ರೀ. 'ಅಮಲಕ' ಮಣಿಪಾಲ ೩೪೧

ಆಸೆಯ ಮಹಲು (ಒಂದು ಜೀವನ ದೃಶ್ಯ) ಕುಮಾರಿ ಚಂದ್ರಿಕಾ ಕೊಪ್ಪರ, ಹಳಿಯಾಳ ೩೪೪

ಹಾಗೆಂದರೆ! (ಕಿರುಗತೆ) ಶ್ರೀ. ದೇವೇಂದ್ರ ಕುಮಾರ ಹಕಾರಿ ಬಿ. ಎ. ೩೪೮

ಕೊನೆಯ ನೆನಹು (ಸಣ್ಣ ಕತೆ) ಶ್ರೀ. ವೆಂ. ಮು. ಜೋಶಿ, ಧಾರವಾಡ ೩೪೯

ಬೆಳಸಿಯ ಹೊಲದ ಬೆಡಗು (ಜೀವನಚಿತ್ರ) ಶ್ರೀ. ಬಿ. ಸಿ. ಎಸ್. ರಾವ್, ಬೆಳಗಾಂವಿ ೩೫೩

ಪುಸ್ತಕ ವಿಮರ್ಶೆ (ಕನ್ನಡ ಸಾಹಿತ್ಯಚರಿತ್ರೆ), ಶ್ರೀ. ಮಿರ್ಜಿ.ಅಣ್ಣಾರಾಯರು, ಉಗಾರ ೩೫೫

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ ಶ್ರೀ. 'ಅನಾರ್' ಅರಸೀಕೆರೆ ೩೫೮

ಸಾದರ ಸ್ವೀಕಾರ .... ಕವ್ಹರ್ ೩ನೆಯ ಪುಟದಲ್ಲಿ

JAYANTI

ಸಣ್ಣ ಕತೆಗಳ ಮೇಲಾಟ

ಆಕರ್ಷಕವಾದ ಮೂರು ಬಹುಮಾನಗಳು

೨೦ ರೂ. ೧೫ ರೂ. ೧೦ ರೂ.

೧೯೫೪ನೆಯ ಫೆಬ್ರುವರಿ ೧೫ನೆಯ ದಿನಾಂಕದೊಳಗೆ ತಲ್ಪುವಂತೆ ಕತೆಗಳನ್ನು ಕಳುಹಬೇಕು.

ಮೇಲಾಟದ ನಿಯಮಗಳು :

೧ ಕತೆಯು ಸ್ವತಂತ್ರವಾಗಿದ್ದು ಕರ್ನಾಟಕದ **ಸಾಮಾಜಿಕ ಹಿನ್ನೆಲೆಯಿಂದ ಕೂಡಿದುದಾಗಿರಬೇಕು.**

೨ ಕತೆಯು ಮುದ್ರಿತ ಪುಟಕ್ಕಿಂತ ಹೆಚ್ಚಿನದಾಗಬಾರದು; ಅಂದರೆ ಪೂಲ್ಸ್‌ಕ್ಯಾಪ್ ಅರ್ಧ ಹಾಳೆ ಒಂದೇ ಮಗ್ಗಿಲು ಬರೆದಿರಬೇಕು.

೩ ವಯಸ್ಸಿನ ನಿರ್ಬಂಧವಿಲ್ಲ. ಹಿರಿಯರು ಕಿರಿಯರು ಎಲ್ಲರೂ **ಮೇಲಾಟದಲ್ಲಿ ಭಾಗವಹಿಸಬಹುದು.**

೪ ಒಬ್ಬರೇ ಲೇಖಕರು ೩ ಕತೆಗಳನ್ನು ಮೇಲಾಟಕ್ಕೆ ಕಳುಹಬಹುದು. ಆದರೆ, ಒಬ್ಬರೇ ಎಲ್ಲ ಬಹುಮಾನಗಳನ್ನು ಪಡೆಯಲಾರರು.

೫ ಮೇಲಾಟಕ್ಕಾಗಿ ಕತೆಗಳನ್ನು ಕಳುಹುವವರು ತಮ್ಮ **ಪ್ರತಿಯೊಂದು ಕತೆಗೆ ೪ ಆಣೆಯಂತೆ ಪ್ರವೇಶ ಧನವನ್ನು ಕಳುಹಬೇಕು.** (ಅಂಚೆಯ ಟಿಕೀಟು. ನಗದು ಹಣ, ಪೋಸ್ಟಲ್ ಆರ್ಡರ್ ರೂಪದಲ್ಲಿ ಕಳುಹಬಹುದು.) **ಪ್ರವೇಶಧನವಿಲ್ಲದೆ ಬಂದ ಕತೆಗಳನ್ನು** ಮೇಲಾಟದಲ್ಲಿ ಸೇರಿಸಿಕೊಳ್ಳುವುದಿಲ್ಲ.

೬ ಕತೆಯನ್ನು ಕಳುಹಬಹುದಾದ ಕೊನೆಯ ದಿನವೆಂದರೆ ೧೯೫೪ನೆಯ ಫೆಬ್ರುವರಿ ಹದಿನೈದನೆಯ ತಾರೀಖು. ಮೇಲಾಟದಲ್ಲಿ ಮೇಲಿನ ಕ್ರಮಾಂಕ ಪಡೆದ ಕತೆಗಳನ್ನೆಲ್ಲ ಏಪ್ರಿಲ್ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

೭ ಬಹುಮಾನಕ್ಕೆ ತಕ್ಕ ಕತೆಗಳು ಬಾರದಿದ್ದಲ್ಲಿ, ಬಹುಮಾನ ಕೊಡದೆ ಇರುವುದಕ್ಕೂ ಬಂದುದರಲ್ಲಿ ಒಳ್ಳೆಯವೆಂದು ತೋರಿದ ಕತೆಗಳಿಗೆ ತಕ್ಕ ಮನ್ನಣೆ ಸಲ್ಲಿಸಲಿಕ್ಕೂ ಜಯಂತಿಯ ಸಂಪಾದಕ ಮಂಡಲಿ ತನ್ನ ಕಡೆಗೆ ಕೊನೆಯ ಅಧಿಕಾರವನ್ನಿರಿಸಿಕೊಂಡಿದೆ.

ಕನ್ನಡ ಕತೆಗಾರರೆಲ್ಲ ಉತ್ಸಾಹದಿಂದ ಭಾಗವಹಿಸಬೇಕು.

ಸಂಪಾದಕರು 'ಜಯಂತಿ' ಧಾರವಾಡ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ ನೀಲ ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲಕರಿಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ ಜೀವಿನಿ ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ

ಅಜೀರ್ಣ ವಿಕಾರಗಳಿಗೆ ಪಂಚವಟಿ ರಾಮಬಾಣ

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರಖಾನೆ.

ಮಕ್ಕಳ ಸದೃಢತೆಗಾಗಿ

"ಬಗಸ ಬಾಲಾಮೃತ"

ಹಲ್ಲು ಬರುವಾಗ

"ಎಕ್ಸೆಸ್ ಗ್ರಾಇಫ್ ಟೀಲರ್"

ಜಂತು ಆದರೆ



"ವರ್ಮ ಆಯಿಲ್"

ಉಪಯೋಗಿಸಿರಿ. ಇವು ಪ್ರತ್ಯೊಬ್ಬ ಕುಟುಂಬಕ್ಕೂ ಉಪಯೋಗವಾಗತಕ್ಕ ಔಷಧಗಳು.

The National Pharmacies & Pharmaceuticals Ltd., Dharwar.

ಜಯಂತಿ

ಸಂಪುಟ ೧೩ ಸಂಚಿಕೆ ೯

ಕುಟುಂಬದಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕರು:
ಮತ್ತು
ಪ್ರಕಾಶಕರು:
ಶ್ರೀ. ಡಿ. ಶರತ್‌ಕುಮಾರ

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

●

ಮರೆತುಬಿಟ್ಟ ಮಹಾತ್ಮರ ಕನಸು

ಮಹಾತ್ಮರ ಜೀವನದ ಕೊನೆಯೊಂದಿಗೆ, ಭಾರತದಲ್ಲಿ ಅವರು ಬೋಧಿಸಿದ್ದ ತತ್ತ್ವಜ್ಞಾನದ ಸಂದೇಶವೂ ಜನತೆಯ ಮನಸ್ಸಿನಿಂದ ಮರೆಯಾದುದು ದುರ್ದೈವದ ಸಂಗತಿಯಾಗಿದೆ. ಮಹಾತ್ಮರ ದೃಷ್ಟಿಯಲ್ಲಿ ಸ್ವಾತಂತ್ರ್ಯಸಾಧನೆಯು ಅಷ್ಟೊಂದು ಮಹತ್ತ್ವದ್ದಾಗಿರಲಿಲ್ಲ ನಿಜವಾದ ಮನುಷ್ಯತ್ವಸಾಧನೆಯು ಅವರ ತತ್ತ್ವಜ್ಞಾನದ ಆದರ್ಶವಾಗಿದ್ದಿತು. ವ್ಯಕ್ತಿ-ವ್ಯಕ್ತಿಗಳ ಮನುಷ್ಯತ್ವ ಸಾಧನೆಯೇ ಸಮಾಜದ ಸುಖ-ಸಮಾಧಾನ ಜೀವನದ ಮಾರ್ಗ—ಎಂಬುದು ಅವರ ಉಪದೇಶದ ಸಾರವಾಗಿದ್ದಿತು. ಮನುಷ್ಯತ್ವವಿಲ್ಲದಲ್ಲಿ ರಾಜಕೀಯ ಸ್ವಾತಂತ್ರ್ಯ ನಿರುಪಯೋಗಿಯಾಗಿ ನಿಲ್ಲುವುದೆಂಬುದನ್ನು ಅವರು ಆಗಾಗ ಹೇಳುತ್ತಿದ್ದರು. ಭಾರತೀಯರಲ್ಲಿ ಇಲ್ಲದ ಮನುಷ್ಯತ್ವವನ್ನು ತುಂಬಬೇಕೆಂಬ ಅಪೇಕ್ಷೆಯಿಂದಲೇ, ಬಾಳಿನುದ್ದಕ್ಕೂ ಹಲವು ವಿಧದ ತಪಸ್ಸನ್ನು ತಾವೂ ಆಚರಿಸಿದರು; ಜನತೆಗೂ ಆಚರಿಸುವಂತೆ ಹೇಳಿದರು.

ಪರದಾಸ್ಯದಿಂದ ಕಂಗೆಟ್ಟ ಜನತೆ, ಅನನ್ಯಗತಿಕ ಪರಿಸ್ಥಿತಿಗೆ ಸಿಕ್ಕುದಾಗಿ, ಕೆಲಕಾಲ ಮಹಾತ್ಮರ ಮಾರ್ಗದಲ್ಲಿ ನಡೆಯಲು ತೊಡಗಿತು. ತಿಳಿಯದೆ ಬಾಯಲ್ಲಿ ಹಾಕಿಕೊಂಡರೂ, ಜೇನುತುಪ್ಪವು ತನ್ನ ಸಿಹಿತನವನ್ನು ಅನುಭವಕ್ಕೆ ತಂದುಕೊಡದೆ ಬಿಡದು ಹಾಗೆಯೆ ಮಹಾತ್ಮರ ತತ್ತ್ವಜ್ಞಾನವು ಬೇಕಾಗಿಯೋ—ಬೇಡವಾಗಿಯೋ - ಸ್ವೀಕರಿಸಿದ ಜನರಿಗೆಲ್ಲ ತನ್ನ ಮಧುರ ರುಚಿಯನ್ನು ತೋರಿಸದಿರಲಿಲ್ಲ. 'ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್!' ಧರ್ಮದ ಲೇಶವೂ ಮಹಾಭಯವನ್ನು ದಾಟಿಸುವುದು— ಈ ದೈವವಾಣಿಯ ಸತ್ಯತೆಯ ಅನುಭವ ನಮ್ಮ ಜನತೆಗೆ ಬಾರದೆ ಹೋಗಲಿಲ್ಲ

ಮಹಾತ್ಮರ ತತ್ತ್ವಜ್ಞಾನದ ಗುರಿಯು ತ್ರಿಕಾಲಾಬಾಧಿತ ಸುಖ-ಶಾಂತಿಗಳಿಗಾಗಿ ಇದ್ದುದು ಆದರೆ ಭಾರತೀಯರ ಗುರಿಯು ತಾತ್ಕಾಲಿಕವಾದ ರಾಜಕೀಯ ಸ್ವಾತಂತ್ರ್ಯಸಾಧನೆ ಮಾತ್ರ ಆಗಿದ್ದಿತು ಅದು ಸಾಧಿಸುವ ವರೆಗೆ ನಾವೆಲ್ಲ ಮಹಾತ್ಮರ ತತ್ತ್ವಜ್ಞಾನದ ಮಾರ್ಗದಿಂದ ಹೊರಟೆವು. ನಮ್ಮ ರಾಜಸ ವೃತ್ತಿಯ ಬಯಕೆಗೆ ತಕ್ಕ ತಪಃಫಲವಾಗಿ, ಅಲ್ಪಕಾಲದಲ್ಲಿಯೆ ನಮಗೆ ರಾಜಕೀಯ ಸ್ವಾತಂತ್ರ್ಯ ಸಿಕ್ಕಿತು ಬಯಸಿದುದು ಸಿಕ್ಕಿತೆಂದಮೇಲೆ, ಮುಂದೆ ಮಹಾತ್ಮರ ದಾರಿಯ ಗೊಡವೆಯೇಕೆ ನಮಗೆ? ರಾಜಕೀಯ ಸ್ವಾತಂತ್ರ್ಯದ ಆ ಭಾಸಾತ್ಮಕ ಸುಖದ ಬಲೆಗೆ ಸಿಲುಕಿ ನಾವೆಲ್ಲ ನಿಂತಲ್ಲಿಯೆ ನಿಂತುಬಿಟ್ಟಿದ್ದೇವೆ. ಇಷ್ಟೇ ನಿಮ್ಮ ಜೀವನದ ಆದರ್ಶವಲ್ಲವೆಂದು, ಮಹಾತ್ಮರು ನಮ್ಮನ್ನು ಮುಂದಕ್ಕೆ ಕರೆದೊಯ್ಯಲು ತುಂಬ ಹೆಣಗಿದರಾದರೂ ನಾವು ಅವರ ಹೆಣಗಾಟವನ್ನು ಉಪೇಕ್ಷಿಸಿದೆವು: ಶಾಶ್ವತ ಸುಖಜೀವನದ ಉಪದೇಶವನ್ನು ದುರ್ಲಕ್ಷ್ಯಿಸಿದೆವು.

ಸಮುದ್ರಮಥನ ಮಾಡಲು ಹೊರಟು, ದೊರೆತ ಸುರೆಯಿಂದಲೇ ಸಂತುಷ್ಟರಾಗಿ, ಅಮೃತಸಿದ್ಧಿಯನ್ನು ಕಳೆದುಕೊಂಡ ದೈತ್ಯಕುಲದಂತಾಗಿದೆ ನಮ್ಮ ಬಾಳು. ರಾಜಕೀಯ ಸ್ವಾತಂತ್ರ್ಯ ಸಿಕ್ಕಿತು. ಅದರ ಉತ್ಸಾಹದಲ್ಲಿ ಕೆಲವು ದಿನಗಳನ್ನು ಕಳೆದೆವು. ರಾಜಕೀಯ ಸ್ವಾತಂತ್ರ್ಯದೊಂದಿಗೆ ಸ್ವಾರ್ಥ, ಮೋಹ, ಲೋಭ, ಈರ್ಷೆ, ದ್ವೇಷ, ಅಸೂಯೆ, ಅಸತ್ಯ, ಹಿಂಸೆ—ಇವೆಲ್ಲ ವಿಷಬೀಜಗಳೂ ನಮ್ಮ ಜನರ ಹೃದಯದಲ್ಲಿ ಬಿದ್ದು ಬೆಳೆಯತೊಡಗಿದುದು ಉತ್ಸಾಹದ ಮಬ್ಬಿನಲ್ಲಿದ್ದ ನಮಗೆ ಅಂದು ಗೊತ್ತಾಗಲಿಲ್ಲ. ಆದರೆ ಅವೆಲ್ಲ ವಿಷಬೀಜಗಳು ಇಂದು ವ್ಯಕ್ತಿವ್ಯಕ್ತಿಗಳ ಹೃದಯದಲ್ಲಿಯೂ ಮೊಳೆದು ಬೆಳೆದು ಮರಗಳಾಗಿ ವಿಷಫಲಗಳನ್ನ ಕೊಡುತ್ತಲಿವೆ. ಬೇಡವೆಂದರೂ ಬಿಡದೆ ಸಮಾಜದ ಬಾಯಲ್ಲಿ ಬಂದು ಬಿದ್ದು, ವಿಷದ ಪರಿಣಾಮವನ್ನು ಅನುಭವಿಸಲು ಹಚ್ಚುತ್ತಿವೆ. ಈಗ ನಾವೆಲ್ಲರೂ ಗಾಬರಿಗೊಂಡು ಹೋಗಿದ್ದೇವಾದರೂ,

ಆಗುತ್ತಿರುವ ವಿಷದ ಸಂಚಾರವನ್ನು ರಾಜಕೀಯದಿಂದಲೆ ಕಳೆದು- ಕೊಳ್ಳಬೇಕೆಂದು ಧಡಪಡಿಸುತ್ತಿದ್ದೇವೆ ಹೊರತು, ಮಹಾತ್ಮರ ಜೀವನ ತತ್ತ್ವದ ಸಂದೇಶಗಳನ್ನು ಮನದೆದುರು ತಂದುಕೊಳ್ಳಲು ಬಯಸು- ತ್ತಿಲ್ಲ. ರಾಜಕೀಯ ಅಧಿಕಾರಸೂತ್ರಗಳು ಕೈಯಲ್ಲಿರುವವರು, ನಮ್ಮ ಲೌಕಿಕದೃಷ್ಟಿಗೆ, ಆದರ್ಶಸುಖವನ್ನು ಅನುಭವಿಸುತ್ತಿರುವ ರೆಂದು ಎನಿಸುತ್ತಿದೆ. ಆದುದರಿಂದಲೇ ಆ ಸೂತ್ರಗಳನ್ನು ತನ್ನ ಕಡೆಗೆ ಸೆಳೆದುಕೊಳ್ಳಬೇಕೆಂಬ ಹೋರಾಟ, ಎಲ್ಲೆಲ್ಲಿಯೂ ಇಂದು ಕಣ್ಣಿಗೆ ಬೀಳುತ್ತಲಿದೆ. ಈ ಹೋರಾಟದ ದುಷ್ಫಲವಾಗಿ ಸ್ವಾರ್ಥ, ದ್ವೇಷ, ಅಸೂಯೆ, ದುರಾಶೆಗಳ ವಿಷವು ವ್ಯಕ್ತಿಯ ಮನ ಮನಗಳಲ್ಲಿಯೂ ಬೆಳೆಯುತ್ತಲಿದೆ. ಪ್ರತಿಯೊಂದು ವ್ಯಕ್ತಿಗೂ ಸುಖ-ಸಮಾಧಾನ ಗಳಿಂದ ಬದುಕಬೇಕೆಂದು ಆಶೆ; ಆದರೆ ಅಸಂತೋಷ—ಅಸಮಾ- ಧಾನ—ಅತೃಪ್ತಿಗಳನ್ನೇ ಹೆಚ್ಚಿಸುವಂತಹದು ವ್ಯಕ್ತಿಯ ಕೃತಿ.

ವ್ಯಕ್ತಿ ವ್ಯಕ್ತಿಗಳ ಆಶೆ ಆಕಾಂಕ್ಷೆಗಳು ಸರ್ವಜನ ಹಿತ ಬುದ್ಧಿಯ ಆದರ್ಶದಿಂದ ಸಮಾಂತರವಾಗಿ ನಡೆಯದೆ, ಸ್ವಾರ್ಥ ಸಾಧನೆಯ ಗುರಿಯಿಂದ ಸಿಕ್ಕ ದಾರಿಯಲ್ಲಿ ಹೊರಟರೆ ಅವುಗಳಲ್ಲಿ ಪರಸ್ಪರ ಘರ್ಷಣೆಗಳುಂಟಾಗಿ ದ್ವೇಷ-ಮತ್ಸರದ ಕಿಡಿಗಳು ಏಳಲೇ ಬೇಕು. ಹೀಗಾಗಿದೆಯೆಂದು ಭಾರತದಲ್ಲಿಯ ಸಾಮಾಜಿಕ ಸಂಸ್ಥಿತಿ ರಾಜಕೀಯ ಅಧಿಕಾರದಾಶೆಯ ಧುರೀಣಬ್ರುವರು, ಬೇರೆ ಬೇರೆ ಪಕ್ಷೋಪಗಣಗಳನ್ನು ಕಟ್ಟುತ್ತಿದ್ದಾರೆ. ಅವರಿಗಾಗಿ ಬೇಕು—ಬೇಕಾದಂತಹ ಅಸತ್ಯ ವಿಧಾನಗಳನ್ನೂ ಬಳಸಿ, ವಿರೋಧಿಪಕ್ಷಗಳ ವಿಚಾರ- ದಲ್ಲಿ ಅಪಪ್ರಚಾರಗಳನ್ನು ನಡೆಯಿಸುತ್ತಿದ್ದಾರೆ. ಎಲ್ಲ ರಾಜಕೀಯ ಧುರೀಣರೂ ಇದೇ ಕೆಲಸವನ್ನು ನಡೆಯಿಸಿ, ಯಾವ ಪಕ್ಷದ ಮೇಲೆಯೂ ಜನತೆಯ ವಿಶ್ವಾಸ-ಶ್ರದ್ಧೆಗಳು ಉಳಿಯದಂತೆ ಮಾಡಿ ಬಿಟ್ಟಿದ್ದಾರೆ. ವಿಶ್ವಾಸ-ಶ್ರದ್ಧೆಗಳೇ ಇಲ್ಲದಿರುವಾಗ ಪ್ರೀತಿ ಪ್ರೇಮ ಗಳು ಬೆಳೆದು ಉಳಿಯುವ ಬಗೆ ಹೇಗೆ? ಪ್ರೀತಿ-ಪ್ರೇಮಗಳು ಇಲ್ಲದೆಡೆ ಯಲ್ಲಿ ತ್ಯಾಗ-ಸೇವಾಬುದ್ಧಿಗಳಿಗೆ ಅವಕಾಶ ಸಿಕ್ಕಬೇಕು ಹೇಗೆ? ತ್ಯಾಗ-ಸೇವಾಬುದ್ಧಿಗಳಿಗೆ ಅಭಾವವಿರುವುದರಿಂದಲೆ, ವ್ಯಕ್ತಿ-ವ್ಯಕ್ತಿ ಗಳಲ್ಲಿಯೂ ಭೋಗಪ್ರವೃತ್ತಿ ಬೆಳೆಯುತ್ತಲಿದೆ. ಭೋಗಸಿದ್ಧಿಗೆ ಸಾಧನವೆಂದರೆ ಇಂದಿನ ಜಗತ್ತಿನಲ್ಲಿ ಹಣವು ಒಂದೇ ಒಂದು. ಆದುದ ರಿಂದಲೇ ಜನರೆಲ್ಲರ ಗುರಿಯಿಂದು ಹಣವನ್ನು ಗಳಿಸುವುದೊಂದೇ ಆಗಿದೆ. ಎಂತಲೇ ಎಂತೆಂತಹ ಸಮಾಜಕಲ್ಯಾಣಕಾರಿ ಶಾಸನ ಗಳನ್ನು ಸರಕಾರವು ಮಾಡಿದರೂ, ಸ್ವಾರ್ಥಿಗಳಾದ ಆಡಳಿತಗಾರರ ಮೂಲಕ, ಅವುಗಳ ಸದುಪಯೋಗವು ಜನತೆಗೆ ಆಗದೆ ಇದೆ. ಭೂಮಿ- ತಾಯಿ ಸಾಲುವಷ್ಟು ಅನ್ನ ಬೆಳೆದು ಕೊಟ್ಟರೂ, ಹಣದ ಹುಚ್ಚಿನ ವ್ಯಾಪಾರಿಗಳ ಮೂಲಕ, ಜನತೆಯ ಹೊಟ್ಟೆಯಲ್ಲದು ಬೀಳದಾಗಿದೆ. ಪೇಟೆಯಿಂದು ತುಂಬಿ ತುಳುಕುತ್ತಲಿದೆಯಾದರೂ, ಕೊಳ್ಳಲಿಕ್ಕಾಗದ ಬಹುಜನರ ಹೊಟ್ಟೆ ಬರಿಯದಾಗಿಯೇ ಇದೆ.

ಶಾಂತಿ-ಸಮಾಧಾನಗಳ ಜೀವನಕ್ಕಾಗಿಯೆ ನಮಗೆ ರಾಜಕೀಯ ಸ್ವಾತಂತ್ರ್ಯ ಬೇಕಾಗಿದ್ದಿತಲ್ಲದೆ, ಕೇವಲ ನಮ್ಮದೊಂದು ಸರಕಾರ ವನ್ನು ಕಟ್ಟಿಕೊಂಡು, ಹೇಗಾದರೂ ನಾವೇ ಆಳಬೇಕೆಂಬುದಕ್ಕಾಗಿ ಅಲ್ಲ. ಅಂತಹ ಸರಕಾರದ ಆಳಿಕೆ ಎಂದೂ ಬಹುಕಾಲ ಬಾಳದು. ಅನ್ಯಾಯ-ಅತೃಪ್ತಿ-ಅಸಮಾಧಾನಗಳಿಗೆ ತಡೆಯೊಡ್ಡುವಂತಹ ಆಳಿ- ಕೆಯೇ ಬಹುಕಾಲ ಬಾಳಬಲ್ಲದು. ಅಂತಹ ಆಳಿಕೆಯನ್ನೇ ಮಹಾತ್ಮರು ' ರಾಮರಾಜ್ಯ ' ಎಂಬ ಹೆಸರಿನಿಂದ ಕರೆಯುತ್ತಿದ್ದರು. ಅದನ್ನೇ ನಮ್ಮ ರಾಜಕೀಯ ಧುರೀಣರೆಲ್ಲರು ಆದರ್ಶವನ್ನಾಗಿ ಇರಿಸಿದ್ದರು. ಇಂದಿನ ನಮ್ಮ ರಾಜಕೀಯ ಧುರೀಣರೆದುರು ' ರಾಮರಾಜ್ಯ 'ದ ಆ ಆದರ್ಶ ಉಳಿದಿದೆಯೆ ? ಅವಶ್ಯವೆಂದು ಕಂಡಾಗ, ಮಹಾತ್ಮರ ಹೆಸರನ್ನು ಬಾಯಿಂದ ನುಡಿಯುತ್ತಿದ್ದಾರೆ ಹೊರತು, ಅವರ ತತ್ತ್ವ ಜ್ಞಾನವನ್ನೂ ಆದರ್ಶಬೋಧೆಯನ್ನೂ ಸ್ವಾರ್ಥಮಯವಾದ ರಾಜ- ಕಾರಣದ ಬುಟ್ಟಿಯಲ್ಲಿ ಹಾಕಿ ಬಿಗಿದು ಕಟ್ಟಿ ಒಗೆದಿದ್ದಾರೆ.

ಮಹಾತ್ಮರ ನಿಕಟವರ್ತಿಗಳಾಗಿದ್ದ ಒಬ್ಬಿಬ್ಬರು ಧುರೀಣರಿಗೆ ಮಹಾತ್ಮರ ಮಾರ್ಗ- ಆದರ್ಶಸಾಧನೆಗಳ ವಿಚಾರದಲ್ಲಿ ವಿಶ್ವಾಸವಿರ ಬಹುದಾದರೂ, ಅವುಗಳನ್ನು ಕಾರ್ಯರೂಪದಲ್ಲಿ ತಂದೇ ತೀರಬೇಕೆಂಬ ಉತ್ಕಟವಾದ ಹಟವಿಲ್ಲ; ಸಾಮರ್ಥ್ಯವೂ ಇಲ್ಲ. ಮಿಕ್ಕವರಿಗೆ ಮಹಾ- ತ್ಮರ ಹೆಸರಿನ ನೆಪವೊಂದು ರಾಜಕೀಯ ಸ್ವಾರ್ಥಸಾಧನೆಯಾಗಿ ಪರಿ- ಣಮಿಸಿದೆ ಹೊರತು, ಅವರ ತತ್ತ್ವದ ಅರ್ಥವೇ ಆಗಿಲ್ಲ. ಆದುದ ರಿಂದಲೇ ಇಂದಿನ ಸರಕಾರದ ಆಡಳಿತಕ್ರಮದಲ್ಲಿ ಶುದ್ಧವಾದ ಮಹಾ- ತ್ಮರ ತತ್ತ್ವಕ್ಕೆ ಆಸ್ಪದವಿಲ್ಲದಂತಾಗಿದೆ; ಕೇವಲ ರಾಜಕೀಯದ ಯಾಂತ್ರಿಕ ನಿಷ್ಠುರತೆಗೂ ಆಸ್ಪದವಿಲ್ಲದಂತಾಗಿದೆ. ಇದರಿಂದ ಆಡಳಿತ- ಯಂತ್ರ ಶಿಥಿಲಗೊಂಡು, ರಾಷ್ಟ್ರದ ಭವ್ಯತೆಯು ಬೇರಿಗೇ ಬಿಸ್ನೀರು ಎರೆಯುವುದರಲ್ಲಿದೆ.

ಡಾ. ಭಗೀರಥರಾವ್ ದೇಶಪಾಂಡೆಯವರ ಉದಾರ ಸಹಾಯ

ಜಯಂತಿ ಪಡುತ್ತಿರುವ ಆರ್ಥಿಕಸಂಕಟದ ಧ್ವನಿಯನ್ನು ಕೇಳಿ ಕರಗಿದ ಹೃದಯದವರಾಗಿ, ರಾಯಚೂರಿನ ಡಾ. ಭಗೀರಥರಾವ ದೇಶಪಾಂಡೆಯವರು, ಜಯಂತಿಗೆ ೨೫೦ ರೂ. ಸಹಾಯಧನವನ್ನು ಸಲ್ಲಿಸಿದ್ದಾರೆ. ಇದಕ್ಕಾಗಿ ಅವರಿಗೆ ನಮ್ಮ ಕೃತಜ್ಞತೆಯ ವಂದನೆಗಳು. ಜಯಂತಿಯ ಸಾಹಿತ್ಯಿಕ ಕಾರ್ಯವೂ ಆದರ್ಶವೂ ಡಾ. ದೇಶಪಾಂಡೆ ಯವರಿಗೆ ತುಂಬ ಮೆಚ್ಚಿಕೆಯವಾಗಿ ಕಂಡುದು ನಮಗೆ ತುಂಬ ಸಮಾ- ಧಾನವನ್ನುಂಟುಮಾಡಿದೆ.

ಹೀಗೆಯೆ ಉದಾರಕನ್ನಡಿಗರು ಜಯಂತಿಯ ಕಡೆಗೆ ಸಹಾನು- ಭೂತಿಯ ದೃಷ್ಟಿಯನ್ನು ಹರಿಸಿದರೆ, ಅದರ ತಲೆಯ ಮೇಲಿರುವ ಸಾಲದ ಹೊರೆಯು ಅಲ್ಪಕಾಲದಲ್ಲಿಯೇ ಕರಗಿ ಹೋಗಬಹುದು, ಸಿರಿವಂತ ಕನ್ನಡಿಗರ ಮನದೆದುರು ಡಾ. ಭಗೀರಥರಾಯರ ಔದಾ- ರ್ಯದ ನೆನಹು ಸುಳಿಯುತ್ತಿರಲಿ! ಜಯಂತಿಯ ಯೋಗಕ್ಷೇಮದ ಹೊಣೆಯು ತಮ್ಮದೆ ಇದೆಯೆಂಬ ಕರ್ತವ್ಯಬುದ್ಧಿ ಅವರಲ್ಲಿ ತಲೆ- ದೋರಲಿ!

—ಸಂಪಾದಕರು

ನಾಡನಡೆ

卐

ವಿಜಯೀ ಕ. ಸಾಹಿತ್ಯ ಸಮ್ಮೇಳನ

ಕಳೆದ ಡಿಸೆಂಬರ ಕೊನೆಯ ವಾರದಲ್ಲಿ, ಉ. ಕ. ಜಿಲ್ಲೆಯ ಕುಮಟೆಯಲ್ಲಿ ಸೇರಿದ ಕನ್ನಡ ಸಾಹಿತ್ಯ ಸಮ್ಮೇಳನವೂ, ಅದರ ಜೊತೆಯಲ್ಲಿಯೆ ಸೇರಿದ ಬೇರೆ ಬೇರೆ ಸಮ್ಮೇಳನ-ಗೋಷ್ಠಿಗಳೂ ಯಶಸ್ವಿಯಾಗಿ ನೆರವೇರಿದುದು ಸಂತೋಷದ ಮತ್ತು ಮಹತ್ತ್ವದ ವಿಷಯವಾಗಿದೆ. ಸೌಕರ್ಯದ ದೃಷ್ಟಿಯಿಂದ ಕುಮಟೆಯ ವರೆಗಿನ ಪ್ರವಾಸವು ಅಷ್ಟೊಂದು ಅನುಕೂಲವಾದುದಲ್ಲವಾದರೂ, ನಾಡಿನ ಮೂಲೆ-ಮೂಲೆಗಳಿಂದಲೂ ಜನರು ಸಾಕಷ್ಟು ಬಂದುದು, ಕುಮಟೆಯ ಸಮ್ಮೇಳನದ್ದೊಂದು ವೈಶಿಷ್ಟ್ಯ. ಹಿರಿಯ ಸಾಹಿತ್ಯಿಕರ ಸಂಖ್ಯೆ ಕಡಿಮೆಯಾಗಿದ್ದಿತಾದರೂ, ತರುಣಸಾಹಿತ್ಯಿಕರು ಬಹುಸಂಖ್ಯಾಕರಾಗಿ ಸೇರಿದುದು ಇನ್ನೂ ಒಂದು ವೈಶಿಷ್ಟ್ಯ.

ಸಮ್ಮೇಳನದಲ್ಲಿ ಪುರಸ್ಕೃತವಾದ ಗೊತ್ತುವಳಿಗಳಲ್ಲಿ ಯಾವುದೂ ಅಷ್ಟೊಂದು ಮಹತ್ತ್ವದುದಾಗಿ ಕಾಣುತ್ತಿಲ್ಲ. ಏಕೆಂದರೆ ರಚನಾತ್ಮಕ ಕಾರ್ಯವನ್ನು ಗುರಿಯಾಗಿರಿಸಿಕೊಂಡು, ಏನಾದರೂ ಹೊಸ ಕ್ರಿಯಾಶಾಲಿಯಾದ ಯೋಜನೆಯನ್ನು ಹಾಕಿದುದು ಯಾವ ಗೊತ್ತುವಳಿಯಲ್ಲಿಯೂ ಕಾಣುತ್ತಿಲ್ಲ. ಕುಮಟೆಯ ಸಾಹಿತ್ಯ ಸಮ್ಮೇಳನವು-ವಿಶೇಷ ಕಾರ್ಯಯೋಜನೆಗಿಂತ ಪ್ರಾದೇಶಿಕ ಜನಜಾಗೃತಿಯನ್ನು ಮಾಡಲು ಕೂಡಿದ್ದಿತೆಂದು ಹೇಳಬಹುದು. ಈ ಮುಖ್ಯ ಗುರಿಯನ್ನದು ಚೆನ್ನಾಗಿ ಸಾಧಿಸಿರುವುದೆಂಬುದು, ಈ ಸಲದ ಸಮ್ಮೇಳನ ಯಾತ್ರಿಕರು ಆಡುತ್ತಿರುವ ಸಮಾಧಾನದ ಮಾತುಗಳಿಂದ ಸ್ಪಷ್ಟವಾಗಿ ಗೊತ್ತಾಗುತ್ತಿದೆ.

ಕುಮಟೆಯ ಈ ಸಮ್ಮೇಳನವು, ಉತ್ತರಕನ್ನಡ ಜಿಲ್ಲೆಯ ಜನರ ಹೃದಯದಲ್ಲಿ, ಕನ್ನಡನುಡಿ ತಮ್ಮದೆಂಬ ಭಾವನೆಯನ್ನು ಭದ್ರಗೊಳಿಸಿತು. ನಾಗರಿಕರ ಪುರಸ್ಕಾರ-ಪ್ರೋತ್ಸಾಹಗಳಿಲ್ಲದೆ. ಉತ್ತರಕನ್ನಡದ ಕಾಡಿನ ಮೂಲೆಗಳಲ್ಲಿ ಅಲ್ಲಲ್ಲಿ ಹುದುಗಿಕೊಂಡು ಹೇಗೊ ಹೇಗೋ ಜೀವಹಿಡಿದು ನಿಂತಿದ್ದ ಕನ್ನಡ ಜಾನಪದ ಕಲೆಗಳನು ಕನ್ನಡ ನಾಗರಿಕವೃಂದ ಕುಮಟೆಯಲ್ಲಿ ಕಣ್ಣಾರೆಕಂಡು. ಅವುಗಳಲ್ಲಿಯ ಸೊಗಸನ್ನುಂಡು, ಅವುಗಳ ಸಂರಕ್ಷಣೆಯ ಆಗತ್ಯವನ್ನರಿತು, ಪ್ರೋತ್ಸಾಹಕ ನುಡಿಗಳನ್ನಾಡಿತು. ಇದರಿಂದ ಆ ಕಲಾವಿದರಿಗೂ ತಮ್ಮ ರಸಿಕತೆಯ ಬಗೆಗೆ ನಂಬುಗೆ ಹುಟ್ಟಿತು. ನಾಡಿನ ಬಹುಜನ ರಸಿಕರಿಂದ ಮನ್ನಣೆ ದೊರೆಯದೆ ಇದ್ದರೆ, ತಮ್ಮ ಕಲೆಯ ಹುರುಳು-ತಿರುಳುಗಳ ಬಗೆಗೆ ಆ ಕಲಾವಿದರಲ್ಲಿ ಆದರ-ಆತ್ಮೀಯತೆಗಳು ಬೆಳೆಯಬೇಕು ಹೇಗೆ ? ಈ ಸಲದ ಸಾಹಿತ್ಯಸಮ್ಮೇಳನವು, ಅವರಲ್ಲಿ ಆ ಬಗೆಯ ಆದರ-ಆತ್ಮೀಯತೆಗಳು ಬೆಳೆಯುವಂತೆ ಮಾಡಿತು.

ಎಲ್ಲ ಸಮ್ಮೇಳನ-ಗೋಷ್ಠಿಗಳ ಅಧ್ಯಕ್ಷರ ಆಯ್ಕೆಯೂ ಈ ಸಲ ತೀರ ಸಮಂಜಸ ರೀತಿಯಿಂದ ನಡೆದಿದೆಯೆಂಬುದಕ್ಕೆ, ಆ ಆ ಅಧ್ಯಕ್ಷರ ಅಭ್ಯಾಸ ಪೂರ್ಣ ಭಾಷಣಗಳೂ, ಕಾರ್ಯನಿರ್ವಹಣವೂ ಪ್ರತ್ಯಕ್ಷ ಸಾಕ್ಷಿಯಾಗಿದ್ದಿತು. ಕುಮಟೆಯ ಕಾರ್ಯಕರ್ತರ ಕರ್ತವ್ಯದಕ್ಷತೆ, ಸಮ್ಮೇಳನವನ್ನು ಬರಿ ಜನಜಾತ್ರೆಯನ್ನಾಗಿಸದೆ, ಸಾಂಸ್ಕೃತಿಕ ಸಮಾರಂಭವಾಗಿ ನಡೆಯುವಂತೆ ಮಾಡಿತು. ಅದಕ್ಕಾಗಿ ಕುಮಟೆಯ ಸಮ್ಮೇಳನ ಕಾರ್ಯಕರ್ತರಿಗೆಲ್ಲ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.

ಶ್ರೀಮಾನ್ ರಂಗಾಚಾರ್ಯರು ರಾಜಧಾನಿಗೆ

ಸಾಂಸ್ಕೃತಿಕ ಕಾರ್ಯಕ್ಷೇತ್ರವು ಯಾವ ಬಗೆಯ
ಅದರಲ್ಲಿ ದಕ್ಷತೆಯಿಂದ ಕಾರ್ಯಮಾಡಬಲ್ಲ ಶಕ್ತಿ, ಸತ್ತ್ವಗಳು ಶ್ರೀ ಆದ್ಯರಂಗಾಚಾರ್ಯರಲ್ಲಿವೆ. ಆದರೆ ಅದೆಂತಹ ಯೋಗಾಯೋಗವೊ ಅವರ ಶಕ್ತಿ-ಸತ್ತ್ವಗಳಿಗೆ ತಕ್ಕುದಾದ ಕಾರ್ಯಕ್ಷೇತ್ರ ಇದುವರೆಗೂ ಸಿಕ್ಕಿರಲಿಲ್ಲ. ಬೇಡವಾಗಿರುವ ಕೆಲಸವನ್ನು ಮಾಡಲೇಬೇಕಾಗಿ ಬಂದ ಅತೃಪ್ತಿ, ಕೆಲವು ಕಾಲ ಇದ್ದ ಕೆಲಸವನ್ನೂ ಬಿಟ್ಟುಕೊಡಲು ಹಚ್ಚಿತು. ಹೃದಯವಿಹೀನವಾದ ಕಾಯದೆ-ಕಟ್ಟಳೆಗಳು ಅವರಂತಹ ಸಮರ್ಥರಾದ ಕೆಲಸಗಾರರನ್ನು ಕಳೆದುಕೊಳ್ಳುತ್ತಿದ್ದೇವೆಂಬುದನ್ನೂ ಯೋಚಿಸಲು ಅಸಮರ್ಥವಾದುವು. ಅದಕ್ಕಾಗಿಯೆ ಶ್ರೀ. ರಂಗಾಚಾರ್ಯರು ಇತ್ತೀಚಿನ ಕೆಲವು ವರ್ಷಗಳನ್ನು ಆರ್ಥಿಕ ಆಪತ್ತಿಯಲ್ಲಿಯೆ ಕಳೆಯಬೇಕಾಯಿತು. ಈಗ ಕೇಂದ್ರಸರಕಾರ ಅವರ ಯೋಗ್ಯತೆಯನ್ನರಿತುಕೊಂಡು, ದಿಲ್ಲಿಗೆ ಬರಮಾಡಿಕೊಂಡಿದೆ. ತನ್ನ ಪ್ರಕಟನಾವಿಭಾಗದಲ್ಲಿಯೇ ನಾಟಕ-ಸಂಗೀತ ಸಂಘಟನಾ ವಿಭಾಗವೊಂದನ್ನು ಏರ್ಪಡಿಸಿ, ಅದರ ಸಂಚಾಲಕತ್ತ್ವದ ಅಧಿಕಾರವನ್ನು ಶ್ರೀಮಾನ್ ರಂಗಾಚಾರ್ಯರಿಗೆ ಒಪ್ಪಿಸಿಕೊಟ್ಟಿದೆ. ಉಭಯತರಿಗೂ ಅನುಕೂಲ. ಶ್ರೀ. ರಂಗಾಚಾರ್ಯರ ಉಪಜೀವನದ ತೊಡಕನ್ನು ಸರಕಾರ ಬಿಡಿಸಿತು. ಸರಕಾರಕ್ಕೆ ಅತ್ಯವಶ್ಯವಾಗಿರುವ ಕಾರ್ಯಶಕ್ತಿಯು ಶ್ರೀ. ರಂಗಾಚಾರ್ಯರಿಂದ ಸಿಕ್ಕಿತು.

ಕೇಂದ್ರಸರಕಾರದಲ್ಲಿ ಬೇರೆ ಪ್ರಾಂತೀಯರ ಮಾನದಿಂದ ಕನ್ನಡಿಗರ ಸಂಖ್ಯೆ ತೀರ ಕಡಿಮೆಯಾಗಿದೆ. ಅದರಲ್ಲಿಯೂ ಹೊಣೆಗಾರ ಸ್ಥಳದಲ್ಲಿರುವ ಕನ್ನಡಿಗರ ಸಂಖ್ಯೆಯನ್ನಂತೂ ಕೈಬೆರಳಿನಿಂದ ಎಣಿಸಬಹುದಾಗಿದೆ. ಕೇಂದ್ರದಲ್ಲಿರುವ ಬೇರೆ ಪ್ರಾಂತೀಯರು, ಕೇಂದ್ರದಿಂದ ದೊರೆಯಬಹುದಾದ ಅನುಕೂಲತೆಗಳನ್ನು ತಂತಮ್ಮ ಪ್ರಾಂತಕ್ಕೆ ಕೂಡಲೆ ಒದಗಿಸಿಕೊಳ್ಳುವರು. ಆದರೆ ದಿಲ್ಲಿಯಲ್ಲಿರುವ ಕನ್ನಡಿಗರಲ್ಲಿ ತಮ್ಮ ಹಕ್ಕು-ಬಾಧ್ಯತೆಗಳಿಗಾಗಿ ಹೋರಾಡಬೇಕೆಂಬ ಹಟವುಳ್ಳವರು ಯಾರೂ ಇಲ್ಲವೇನೋ ಎನಿಸುವಂತಿದೆ. ಇನ್ನುಮೇಲೆ ಅಲ್ಲಿಯೇ ಇರುವ ಆದ್ಯ ರಂಗಾಚಾರ್ಯರು, ಅಲ್ಲಿಯ ಕನ್ನಡಿಗರ ಮೇಲೆ ಪ್ರಭಾವ ಬೀರಿ, ಹಕ್ಕು-ಬಾಧ್ಯತೆಗಳ ಎಚ್ಚರಿಕೆ ಅವರಲ್ಲಿ ಮೂಡುವಂತಾಗಿಸುವರೆಂದು ನಾವು ನಂಬಿನಡೆಯಬಹುದಾಗಿದೆ.

'ನೃತ್ಯಭಾರತಿ'ಗೆ ಸುಸ್ವಾಗತ

ಧಾರವಾಡ ಜಿಲ್ಲೆಯಲ್ಲಿ, ಹಾಂಸಭಾವಿಯಲ್ಲಿರುವ ನೃತ್ಯಕಲಾ ಗುರುಕುಲದ ಮುಖಪತ್ರಿಕೆಯಾಗಿ, ತಾ. ೨೬-೧-೧೯೫೪ರಂದು 'ನೃತ್ಯ ಭಾರತಿ' ಎಂಬ ಹೆಸರಿನ ತ್ರೈಮಾಸಿಕವು ಪ್ರಕಟವಾಗಲು ತೊಡಗಿದೆ. ನಾಟ್ಯಾಚಾರ್ಯ ಕುಲಕರ್ಣಿ ಶ್ರೀನಿವಾಸರು ಇದಕ್ಕೆ ಮುಖ್ಯ ಸಂಪಾದಕರಾಗಿರುವರು. ಮೊದಲನೆಯ ಸಂಚಿಕೆಯಲ್ಲಿ ಬೇರೆ ಬೇರೆ ಕಲಾತಜ್ಞರು ಬರೆದ ಅಭ್ಯಾಸಪೂರ್ಣ ಲೇಖನಗಳು ಇವೆ

ವಾಸ್ತವವು ಸುಂದರವಾಗಿ ಕಾಣುವಂತೆ ಅಲಂಕರಿಸುವ ಕ್ರಮವೇ ಕಲೆಯೆನಿಸಿಕೊಳ್ಳುವುದು. ಕಲೆಯ ಅಭಿವೃದ್ಧಿ ವ್ಯಕ್ತಿಯ ಮತ್ತು ನಾಡಿನ ಸಂಸ್ಕೃತಿಯ ಲಕ್ಷಣವಾಗಿರುವದು. ಕಲೆಯು ಅಭಿಜಾತಾವಸ್ಥೆಯನ್ನು ತಲ್ಪುತ್ತ ಹೋದಂತೆಲ್ಲ ಅಲಂಕಾರದ ಕುಸುರಗಳು ಸೂಕ್ಷ್ಮವಾಗುತ್ತ ಹೋಗಿ, ಜನಸಾಮಾನ್ಯರ ತಿಳಿವಿನ ವ್ಯಾಪ್ತಿ ದೂರವಾಗುತ್ತ ಹೋಗುವುದು. ಪ್ರಬುದ್ಧ ಸಂಗೀತ, ಪ್ರಬುದ್ಧ ಚಿತ್ರಶಿಲ್ಪಗಳು, ಪ್ರಬುದ್ಧ ಸಾಹಿತ್ಯ ಇವು ಜನತೆಗೆ ಅತ್ಯಂತ ಅವಶ್ಯವಾದವುಗಳಾದರೂ, ಸಾಮಾನ್ಯ ಜನರು ಅವು ತಮಗೆ ತಿಳಿಯದ ವಿಷಯಗಳು ಎಂದು ದೂರದಲ್ಲಿಯೇ ಇದ್ದುಬಿಡುವರು. ಇದು ನಾಡಿನ ಸಾಂಸ್ಕೃತಿಕ ಅಭ್ಯುದಯದೃಷ್ಟಿಯಿಂದ ಶುಭಕಾರಿಯಾದುದೇನೂ ಅಲ್ಲ. ಆದುದರಿಂದ ಸಾಮಾನ್ಯರಿಗಾಗಿ ಕಲೆಯ ಮಟ್ಟವನ್ನು ಕೆಳಗಿಳಿಸದೆ, ಕಲೆಯ ಸೂಕ್ಷ್ಮತೆಗಳ ಪರಿಚಯವನ್ನು ಅವರಿಗೆ ಮಾಡಿಕೊಟ್ಟು, ಒಳ್ಳೆಯ ಕಲೋಪಾಸನೆಯ ಅಭಿರುಚಿಯನ್ನೇ ಅವರಲ್ಲಿ ಹುಟ್ಟಿಸಬೇಕಾಗಿದೆ. ಇದೊಂದು ಹೃದಯಸಂಸ್ಕಾರದ ಶಿಕ್ಷಣದ ಕಾರ್ಯ. ಜನತೆಯನ್ನು ಸಾಕ್ಷರರನ್ನಾಗಿಸುವುದಕ್ಕಾಗಿ ಸರಕಾರವೂ ಸಮಾಜವೂ ಧನವನ್ನು ವ್ಯಯಿಸುವಂತೆ, ಕಲಾಭಿರುಚಿಯನ್ನು ಬೆಳೆಯಿಸುವ ಈ ಹೃದಯಶಿಕ್ಷಣ ಸಾಧನಗಳಿಗೂ ಧನವನ್ನು ವ್ಯಯಿಸುವ ಆವಶ್ಯಕತೆ ಇದೆ. ಈಗ 'ನೃತ್ಯಭಾರತಿ'ಯಂತಹ ಪತ್ರಿಕೆಯು, ಕಲಾಭಿರುಚಿಯ ಪ್ರಸಾರ-ಪ್ರಸಾರಕ್ಕಾಗಿಯೇ ಮುಂದೆ ಬಂದಿದೆ. ನಮ್ಮ ಸರಕಾರಗಳೂ ಸಾಮಾಜಿಕರೂ ಇಂತಹ ಪತ್ರಿಕೆಗಳ ಯೋಗಕ್ಷೇಮವನ್ನು ನೋಡಲು ಸಿದ್ಧರಾದರೆ, ಸಂಪಾದಕರಿಗೆ ಕೇವಲ ತಮ್ಮ ಸಾಹಿತ್ಯನಿರ್ಮಿತಿಯ ಕಾರ್ಯದಲ್ಲಿಯೇ ಸಂಪೂರ್ಣ ಮನಸ್ಸು ತೊಡಗಿಸಲು ಅನುಕೂಲವಾಗುವುದು. ಆರ್ಥಿಕ ಅನುಕೂಲತೆ ಇಲ್ಲದೆ ಹೋದರೆ, ಸಂಪಾದಕರ ಆದರ್ಶಸಿದ್ಧಿಯಾಗುವುದು ಸಾಧ್ಯವೇ ಇಲ್ಲ. ಹೊರಡಿಸಿದ ತಪ್ಪಿಗೆ ಹೇಗಾದರೂ ಕುಂಟುತ್ತ ಕೂರುತ್ತ ಪತ್ರಿಕೆಯನ್ನು ಸಾಗಿಸಬೇಕಾಗಿ ಬಂದು, ವ್ಯರ್ಥ ಶ್ರಮಕ್ಕೆ ಮಾತ್ರ ಗುರಿಯಾಗಬಹುದು.

ಶ್ರೀ. ಕುಲಕರ್ಣಿ ಶ್ರೀನಿವಾಸರು ನೃತ್ಯ-ನಾಟ್ಯಶಾಸ್ತ್ರಗಳನ್ನು ಶಾಸ್ತ್ರೀಯವಾಗಿ ಅರಿತವರಾಗಿದ್ದಾರೆ; ಪ್ರಯೋಗಸಿದ್ಧರೂ ಆಗಿದ್ದಾರೆ. ಅವರು ಪ್ರಾರಂಭಿಸಿದ ಈ ಪತ್ರಿಕೆಯಿಂದ ನಾವು ಒಳ್ಳೆಯ ಪ್ರಯೋಜನವನ್ನು ನಿರೀಕ್ಷಿಸಬಹುದಾಗಿದೆ.

ವಾಗ್ ಲಹರಿ

ಕನ್ನಡದಲ್ಲಿಯೇ ವಿಶಿಷ್ಟವೆನಿಸಿದ ಸಾಹಿತ್ಯಿಕ ಪ್ರಕಾರ!

(ಹನ್ನೊಂದು ನಾಟ್ಯಘಟಗಳ ಸಂಕಲನ)

ಪ್ರೊ. ವ್ಹಿ. ಕೆ. ಗೋಕಾಕ್ ಬಿ. ಎ. ಆಕ್ಸನ ಇವರ ಮುನ್ನುಡಿಯೊಡನೆ

ಲೇಖಕರು: ಎನ್. ಎಸ್. ಗದಗಕರ

ಬೆಲೆ ೦—೧೨—೦

ಮುಖ್ಯ ವ್ಯಾಪಾರಿಗಾರರು:

ಮನೋಹರ ಗ್ರಂಥ ಭಾಂಡಾರ ಧಾರವಾಡ

ಕರುಣಾರಸ, ವಾತ್ಸಲ್ಯರಸಗಳಿಂದ

ಲಕ್ಷಾಂತರ ಜನರ ಹೃದಯಗಳನ್ನು ಮಿಡಿದ

ದಿ. ಸಾನೇ ಗುರೂಜಿಯವರ ಅಮರ ಕಾದಂಬರಿ

ಮೂನ್ನೂರು ಪುಟ! ಅಂಚೇವೆಚ್ಚ ಸೇರಿ ಎರಡೇ ರೂಪಾಯಿ

"ಶ್ಯಾಮನ ತಾಯಿ" ತನ್ನ ಅಮೃತವಾಣಿಯಿಂದ ಚಿತ್ರಾಂಕಿತ ಒಂದೊಂದು ವಾಕ್ಯವೂ ನೇಡವಾಕ್ಯದಂತಿದೆ.

ಕೃಷ್ಣನ ಪುಟ್ಟಬಾಯಿಯಲ್ಲಿ ಇಡೀ ವಿಶ್ವವನ್ನೇ ಯಶೋದೆ ಕಂಡಂತೆ 'ಶ್ಯಾಮನ ತಾಯಿ'ಯ ಸಣ್ಣ ಸಣ್ಣ ಮಾತುಗಳಲ್ಲಿಯೂ ಧರ್ಮ ಮತ್ತು ಸಂಸ್ಕೃತಿಯ ದಿವ್ಯ ದರ್ಶನವಾಗುತ್ತದೆ.

ಬಡವರಿಗೆ ಹಿತವಾದ, ಧನಿಕರಿಗೆ ಸಮತಾವಾದ, ಅತ್ತೆ-ಸೊಸೆಯರಿಗೆ ಹಿತವಾದ, ಸಹೋದರರಿಗೆ ಬುದ್ಧಿವಾದ, ತರುಣರಿಗೆ ಧ್ಯೇಯವಾದ ಇವೆ ಮೊದಲಾದ ಉಪದೇಶಾಮೃತವನ್ನು "ಶ್ಯಾಮನ ತಾಯಿ" ನೀಡಿದ್ದಾಳೆ

ಸುಂದರ ಮುದ್ರಣ! **ದ್ವಿವರ್ಣರಕ್ಷಾಕವಚ!**

ಎರಡು ರೂಪಾಯಿ ಕಳಿಸಿ ತರಿಸಿಕೊಳ್ಳಿರಿ!

ಸಮಾಜ ಪುಸ್ತಕಾಲಯ, ಧಾರವಾಡ

ಹುಲಿಯ ಸೋಗು

(ಲಲಿತ ಪ್ರಬಂಧ)

ಪ್ರೊ. ಗೋವರ್ಧನಾಚಾರ್ಯ ಗಲಗಲಿ, ಎಂ. ಎ., ಬಿ. ಟಿ. ಧಾರವಾಡ.

ಪ್ರತಿಯೊಂದು ವ್ಯಕ್ತಿಯೂ ಮಿಕ್ಕವರಿಗಿಂತ ತಾನು ವಿಶಿಷ್ಟನಾಗಿದ್ದೇನೆಂದು ತೋರಿಸಿಕೊಳ್ಳಲು, ಸೋಗುಹಾಕಿದ ಹುಲಿಯಂತೆ ನಡೆದುಕೊಳ್ಳುತ್ತಾನೆ. ಸೋಗಿನ ಬಣ್ಣ ಬಯಲಾದಾಗ ಬಾಯಿಬಾಯಿ ಬಿಡುತ್ತಾನೆ. ನಿಜವಾದ ಹುಲಿಗಿಂತ ಸೋಗಿನ ಹುಲಿಗಳೇ ಜನರ ಮನಸ್ಸನ್ನು ಹೆಚ್ಚು ಸೆಳೆದುಕೊಳ್ಳುವವು.

ಶಾಲೆಯಿಂದ ಮನೆಗೆ ಬಂದ ಕೂಡಲೆ, ನನ್ನ ನಾಲ್ಕು ವರುಷದ ಮುದ್ದುಮಗು—ಸುರೇಶ, ಎಲ್ಲಿಯೋ ತಪ್ಪಿಸಿಕೊಂಡಿದ್ದಾನೆ. ಎಂದು ತಿಳಿಯಿತು. ಮಧ್ಯಾಹ್ನ ಎರಡು ಗಂಟೆಗೆ ಹೊರಗೆ ಹೋದವನು, ಆರು ಹೊಡೆದರೂ ಇನ್ನೂ ತಿರುಗಿ ಬಂದಿರಲಿಲ್ಲ. ನೆರೆಹೊರೆಯ ಎಲ್ಲ ಕೇರಿಗಳನ್ನೂ ಹುಡುಕಲಾಗಿತ್ತು. ಸುಳುವೆ ಸಿಕ್ಕಿರಲಿಲ್ಲ. ಕೋಟನ್ನು ಕೂಡ ಕಳೆಯದೆ, ಹಾಗೆಯೇ ಹೊರಟೆ. ಸಮೀಪದ ಪೋಲೀಸ ಠಾಣೆಯಲ್ಲಿ ವರದಿ ಕೊಟ್ಟೆ. ಸ್ವತಃ ಸಂಶೋಧನೆಗಾಗಿ, ನಗರದ ಮುಖ್ಯ ಬೀದಿಗುಂಟ ನಡೆದೆ. ಮೊಹರಮ್ ಹಬ್ಬ ಇದ್ದುದರಿಂದ, ಸೋಗಿನ ಬೆನ್ನು ಹತ್ತಿ ಹೋಗಿರಬೇಕು-ಎಂದು ನನ್ನ ತರ್ಕ. ಅನೇಕ ವಿಚಾರಗಳು ಮನದಲ್ಲಿ ಬರತೊಡಗಿದುವು. ಇತ್ತಿತ್ತಲಾಗಿ ಇರಾಣೀ ಜನರ ಹಾವಳಿ ಬೇರೆ ಕೇಳಬರುತ್ತಿತ್ತು. ನನ್ನ ಮಗು ಬಹಳ ಮುದ್ದು. ಇದನ್ನು ನಾನು ಬಣ ಅಭಿಮಾನದಿಂದ ಹೇಳುತ್ತಿದ್ದೇನೆಂದಲ್ಲ; ಬೇಕಿದ್ದರೆ, ಓಣಿಯಲ್ಲಿಯ ಎಲ್ಲರ ಅಭಿಪ್ರಾಯವನ್ನೂ ಕೇಳಿರಿ.

ನಾನು ಪ್ರಯತ್ನವಾದಿ. ಆದರೆ, ಈಗ ದೇವರ ನೆನಪಾಯಿತು. ಹುಡುಕಿ ಕೊಡುವುದರಲ್ಲಿ ಹನುಮಂತದೇವರೇ ಮಿಗಿಲು. ಆದುದರಿಂದ, ಅವನಿಗೇ ಜೋಡು ಟೆಂಗಿನಕಾಯಿ ಒಡೆಸುವುದಾಗಿ ಬೇಡಿಕೊಂಡೆ. ಆದರೆ ಇದು ' ಅಲಾಬ ' ದೇವರಿಗೆ ಮೀಸಲಿಟ್ಟ ಸಮಯ. ಅವರು ಸಿಟ್ಟಾದರೆ ಗತಿ? ಅವರಿಗೂ—ಗೌಪ್ಯವಾಗಿ—ಸಕ್ಕರೆ ನೀಡುವುದಾಗಿ ಅಭಿವಚನ ಕೊಟ್ಟೆ. ನನ್ನ ಮೊರೆ ಇರ್ವರಿಗೂ ಕೇಳಿಸಿತೋ ಏನೋ! ನನ್ನ ಮುದ್ದು ಸುರೇಶ ದೃಷ್ಟಿಗೆ ಬಿದ್ದ. ಮೈ ತುಂಬ ಹಳದಿ ಬಣ್ಣ ಬಡಿದುಕೊಂಡು, ಕೆಂಪು ಪಟ್ಟೆಗಳನ್ನು ಎಳೆದು, ಒಂದು ಕೈಯಲ್ಲಿ ಢಾಲು ಮತ್ತೊಂದರಲ್ಲಿ ಸಾರಂಗದ ಕೋಡು ಹಿಡಿದುಕೊಂಡು. ಹಲಿಗೆಯ ಸಪ್ಪಳಕ್ಕೆ ಹೆಜ್ಜೆಹಾಕುತ್ತ, ಒಂದು ಸೋಗಿನ ಹುಲಿ ನಡೆದಿತ್ತು. ಅದರ ಸುತ್ತಲೂ ಜನಸ್ತೋಮವೇ ನೆರೆದಿತ್ತು. ಆ ಹುಲಿಯ ತೀರ ಸಮೀಪಕ್ಕೆ ಹರಕು ಬಟ್ಟೆಯ ಅನೇಕ ಹುಡುಗರು ನಡೆದಿದ್ದರು. ಅವರಲ್ಲಿ ನಮ್ಮ ಸುರೇಶನೂ ಇದ್ದ. ಇದ್ದನಿಷ್ಟೇ ಅಲ್ಲ; ಆ ಹುಲಿಯಂತೆ ಕುಣಿಯುತ್ತ, ಹಾವ ಭಾವ ಮಾಡುತ್ತ ನಡೆದಿದ್ದ. ನನ್ನ ಮನದಲ್ಲಿ ಒಂದೇ ಕಾಲಕ್ಕೆ ಸಿಟ್ಟು-ನಾಚಿಕೆ ಎರಡೂ ಹುಟ್ಟಿದುವು. ' ಕಳೆದು ಹೋದ ಬಾಲಕ ದೊರೆತನಲ್ಲ ' ಎಂಬ ಆನಂದ ಮರೆತೇ ಹೋಯಿತು. ನಾನು ಇವನಿಗೆ ಸ್ವಚ್ಛ-ಸುಂದರ ಉಡುಪು ಕೊಡಿಸಿದುದೂ, ಕಾನ್‌ವೆಂಟ್ ಸ್ಕೂಲಿಗೆ ಕಳಿಸಿಕೊಡುತ್ತಿರುವುದೂ ಎಲ್ಲ ವ್ಯರ್ಥವಾಯಿತಲ್ಲ! ಈ ಹೇಸಿ ಹುಡುಗರ ಸಂಗಡ ಅಲೆದಾಡಲಿಕ್ಕೆ ಇವನ ಮನಸ್ಸು ಹೇಗಾಯಿತು? ನನ್ನ ಪಿತ್ತ ತಲೆಗೇರಿತು. ಒಂದೇಟು ಅಲ್ಲೇ ಕೊಡಬೇಕೆಂದು ಮಾಡಿದೆ. ಆದರೆ ಸರಿಯಲ್ಲ ಎಂದುಕೊಂಡು, ಗದ್ದಲದಲ್ಲಿಯೇ ನುಗ್ಗಿ ಆತನ ಕೈ ಹಿಡಿದು ಎಳೆದೆ.

" ಅಪ್ಪಾ, ನೋಡು! ಆ ಹುಲಿ ಹ್ಯಾಂಗ ಕುಣೀತದ? " ಎಂದ.

" ನಿನಗ ಮನೀ ಮಾರು ಇದರ ಖಬರು ಅದ ಏನೋ ಕತ್ತೆ! ಇನ್ನೂ ಎಲ್ಲೀವರೆಗೆ ಪಿರಿ ಪಿರಿ ತಿರಿಗಿಕೋತ ಹೋಗಬೇಕಂತ ಮಾಡಿದೀ? ನಡೀ ಮನೀಗೆ! " ಎಂದು ಗದ್ದರಿಸಿದೆ. ಬಾರಿಸುವುದೂ, ಕುಣಿಯುವುದೂ ಒಳ್ಳೇ ರಂಗಿಗೆ ಬಂದಿತ್ತು. ಒಂದೆರಡು ಮಿನಿಟು ನಿಂತು ನೋಡಬೇಕು ಎಂಬ ಮೋಹ, ನನ್ನನ್ನೂ ಬಿಡಲಿಲ್ಲ. ಕೈ-ಕಾಲುಗಳಲ್ಲಿ ವಿದ್ಯುತ್ ಸಂಚಾರವಾಗತೊಡಗಿತು. ಕರಡಿ, ರಣಹಲಿಗೆ, ಇವು ನಮ್ಮಲ್ಲಿಯ ರಣವಾದ್ಯಗಳು. ಅವನ್ನು ಕೇಳುತ್ತಲೇ ' ಯಾರನ್ನು ಚುಚ್ಚಲಿ, ಯಾರನ್ನು ಇರಿಯಲಿ! ' ಎಂದು ಎನಿಸುತ್ತದೆ. ಸಭ್ಯರು ಅದನ್ನು ಕೇಳದಿರುವುದೇ ಲೇಸು.

ಮನೆಗೆ ಬಂದವನೇ ಸುರೇಶನಿಗೆ ಒಂದೆರಡೇಟು ಚೆನ್ನಾಗಿ ಹಾಕಿದೆ. ಇನ್ನೂ ಹೆಚ್ಚಿಗೆ ಹೊಡೆಯುತ್ತಿದ್ದೆ; ಆದರೆ ಅವಳು ನಡುವೆ ಬಂದು ಬಿಡಿಸಿಕೊಂಡಳು.

" ಕೂಸು ತಿರುಗಿ ಸಿಕ್ಕಿತೂ ಅಂತ ಆನಂದ ಪಡೂದು ಬಿಟ್ಟು, ಹೀಂಗ ಕಟುಕರ ಹಾಂಗ ಹೊಡೀಬೇಕ? "

"ನಿಮಗೇನು ತಿಳೀತದ ಹೆಂಗಸರಿಗೆ? ನಿಮ್ಮ ಅಚ್ಚ್ಯಾನೇ ಅವರನ್ನ ಅಡ್ಡ ಹಾದೀ ಹಿಡಿಸತಾದ."

"ಅಲ್ಲ, ನೋಡಬೇಕು, ಕೇಳಬೇಕು, ಅಂತ ಅವರು ಹಾತೊರೆಯದೇ, ನಾವು ಹಾತೊರೆಯತೇವೇನು?"

"ಸಾಕು. ಬಾಯಿ ಮುಚ್ಚು." ಎಂದವನೇ, ಮತ್ತೆ ಒಂದೆರಡೇಟು ಬಿಗಿದೆ. "ಶತ್ತ್ಯಾಗಿ ತಿಳಿಯೂದಿಲ್ಲ? ಆ ಹೇಸಿ ಹುಡುಗರ ಸಂಗಡ ಹೋಗೋದೇನು! ಆ ಹುಲಿಯ ಸಾಂಗ ಕುಣಿಯೋದೇನು! ನಡೀ ನಮ್ಮ ಮನೀ ಬಿಟ್ಟು!" ಎಂದು ದರ ದರ ಬಾಗಿಲವರೆಗೆ ಎಳೆದೆ.

"ಬಿಡಿರಿ ಅವನ್ನ. ಹೆಚ್ಚಿಗೆ ಒಂದೇಟು ಹೊಡೆದಿರಿ ಅಂದರ ನನ್ನ ಆಣೆ ಆಗೇದ" ಎಂದು ಅಂದವಳೇ, ನನ್ನಿಂದ ಅವನನ್ನು ಬಿಡಿಸಿ, ತೊಡೆಯ ಮೇಲೆ ಹಾಕಿಕೊಂಡು, ಸೆರಗು ಹೊಚ್ಚಿ, ಅವನೊಂದಿಗೆ ತಾನೂ ಅಳಲು ಸುರುವು ಮಾಡಿದಳು ನನ್ನಾಕೆ:

"ನೋಡ್ರಿ, ಬಾರು ಮೂಡ್ಯಾವ. ನೀವು ಮನುಷ್ಯರಲ್ಲ, ಕಟುಕರು. ಹೋಗಿ, ಟೆಂಗಿನಕಾಯಿ ಕೊಂಡುಕೊಂಡು ಬರ್ರಿ. ನಾ ದೇವರಿಗೆ ಬೇಡಿಕೊಂಡೀನಿ."

"ನಾಳೆ ನೋಡಿದರಾಯ್ತೇಳು," ಎಂದವನೇ "ಅಬಲಾನಾಂ ರೋದನಂ ಬಲಂ" ಈ ಜೋಡು ಬಜಂತ್ರಿಯ ಎದುರಿಗೆ ನನ್ನ ಮಾನಸಶಾಸ್ತ್ರ ವ್ಯರ್ಥ—ಅಂತ ಕೋಣೆಯೊಳಗೆ ಹೋದೆ.

ಆ ದಿನ ರಾತ್ರಿ ಊಟ ಆದಮೇಲೆ, ಹಾಸಿಗೆಯಲ್ಲಿ ಒರಗಿದಾಗ, ನನ್ನ ಮನದಲ್ಲಿ ವಿಚಾರಗಳ ಗೊಂದಲವೇ ಸುರುವಾಯಿತು. ಬಾಲಕರ ಸರಿಯಾದ ಸರ್ವಾಂಗ ಬೆಳವಣಿಗೆಗೆ, ಓದುಬರೆಹಕ್ಕಿಂತ environment ಪರಿಸರವೇ ಮುಖ್ಯವೆಂದೂ, "The First 4 or 5 years are the must formetive period in the Childi life" ಎಂದು ಈಗಿನ ಶಿಕ್ಷಣಶಾಸ್ತ್ರವು ಹೇಳುವುದೂ, "ಜೊತೆಯಂತೆ ಮತಿ" "ಮೂರು ವರುಷದ ಬುದ್ಧಿ ನೂರು ವರುಷದ ವರೆಗೆ" ಎಂಬ ನಮ್ಮ ನಾಣ್ಣುಡಿಗಳೂ, ಎಷ್ಟು ಒಂದಕ್ಕೊಂದು ಸಂವಾದಿಯಾಗಿವೆ? ಹೀಗೆ ಸೆರೆ ಕುಡಿದು ಕುಣಿಯುವ ಕೀಳು ಮನುಷ್ಯರನ್ನು ಇವನು ಅನುಕರಿಸುತ್ತ ಹೋದರೆ, ಸಂಸ್ಕಾರಕ್ಕೆ ಪಕ್ಕಾದ ಎಳೆಯ ವಯಸ್ಸಿನಲ್ಲಿ "in this impressioneble age" ಇದೇ ದೃಶ್ಯವೇ ಇವನ ಮನದಲ್ಲಿ ಅಚ್ಚಳಿಯದಂತೆ ಮೂಡಬಹುದು. ಮುಂದೆ ಎಂಥ ಶಿಕ್ಷಣವೂ ಈ ಚಿತ್ರವನ್ನು ಅಳಿಸಲು ಸಮರ್ಥವಾಗಲಿಕ್ಕಿಲ್ಲ. ಇವರೇ ಇವನ ಆದರ್ಶರಾಗಿ ಬಿಡಬಹುದು. ಆಗ ನಾನು ಇವನಿಗಾಗಿ ಮನದಲ್ಲಿ ಮುಂದಿಗೆ ಹಾಕಿದ ಭವ್ಯ ಭವಿಷ್ಯತ್ತಿನ ಗತಿ ಏನು? 'ಎಲ್ಲ ಪರೀಕ್ಷೆಯಲ್ಲಿಯೂ ಉಚ್ಚಶ್ರೇಣಿಯಲ್ಲಿ ಉತ್ತೀರ್ಣನಾಗುತ್ತ, ಐ. ಎ. ಎಸ್. ಪಾಸಾಗಿ, ಪರದೇಶದಲ್ಲಿ ರಾಯಭಾರಿಯಾಗಬೇಕು' ಎಂದು ಲೆಕ್ಕ ಹಾಕಿದ್ದೆ. ಅಂತೆಯೇ ಹಾಲಿನಲ್ಲಿ ಕಡಿತ ಹಾಕಿ, ನಾಲ್ಕು ರೂಪಾಯಿ ಕಾನ್‌ವೆಂಟ್ ಸ್ಕೂಲಿಗೆ ಫೀ ಕೊಡುತ್ತಿದ್ದೆ. ಆ ನನ್ನ ಆಶೆಯನ್ನೆಲ್ಲ ಇವನು ಮಣ್ಣುಗೂಡಿಸಿದನಲ್ಲ?

ಇದಕ್ಕೆ ಪ್ರತಿಯಾಗಿ 'ಬಣ್ಣ ಬಣ್ಣಗಳ ಬೆಡಗೂ, ಉಚ್ಚಧ್ವನಿ, ಅಭಿನಯ ಇವು ಬಾಲಕರ ಕುತೂಹಲವನ್ನು ಕೆರಳಿಸುವುದು ಸ್ವಾಭಾವಿಕ. ಈ ಕೀಳ್ತರದ ಆದರ್ಶವನ್ನು ಅವನೇನು ಕೊನೆಯ ವರೆ ಇಟ್ಟುಕೊಳ್ಳಲಾರ,' ಎಂದೂ ಮತ್ತೊಂದು ಮನವು ಉತ್ತ ಕೊಟ್ಟಿತು. ಮೇಲಾಗಿ, ಹುಲಿಯಾಗಿ ಕುಣಿಯುವುದರಲ್ಲಿಯೂ ತಪ್ಪೆ ನಿದೆ? ಹಾಗೆ ನೋಡಿದರೆ, ನಾವೆಲ್ಲರೂ ಒಂದಿಲ್ಲೊಂದು ರೀತಿಯಿಂ ಹುಲಿಯಾಗಬೇಕೆಂದು ಬಯಸುತ್ತಿರುವವರೇ! ನಮ್ಮ ಹೆಡ್ ಮಾಸ್ತ ರರು, ಬಣ್ಣ ಬಡಿದುಕೊಂಡಿರಲಿಕ್ಕಿಲ್ಲ; ಹೆದರಿಕೆ ಹುಟ್ಟುವಂತೆ ಕೈ ಕಾಲು ಸೆಟೆಸುತ್ತಿರಲಿಕ್ಕಿಲ್ಲ; ಆದರೆ ನಮ್ಮ ಜೊತೆಗೆ ಅವರ ವ್ಯವಹಾ ವೆಲ್ಲ "ನಾನು ಹುಲಿ, ನೀವು ಇಲಿ" ಎಂಬ ಭಾವನೆಯನ್ನೇ ಹುಟ್ಟಿಸ ತ್ತಿರುವಂತೆ ಇರುತ್ತದೆ. ನಾನು ವರ್ಗದಲ್ಲಿ ಇದ್ದಾಗ, ಯಾರೂ ಪಿಟ ಎಂದು ಮಾತು ಆಡಕೂಡದೆಂದು ನನ್ನ ಬಯಕೆ. ಯಾರಾದರು ಸ್ವಲ್ಪ ಶಿಸ್ತುಬಿಟ್ಟು ವರ್ತಿಸಿದರೆ, ನನಗೆ ಸಿಟ್ಟು ಬರುತ್ತದೆ. ಇದಕ್ಕೆ ಕಾರಣವೇನು? ಸ್ಥಾನ-ಮಾನಗಳು ನನಗೆ ಸ್ವಾಭಾವಿಕವಾಗಿ ಒದಗಿ ಕೊಟ್ಟ ಹುಲಿತನಕ್ಕೆ ಅದೊಂದು ಆಹ್ವಾನವೆಂದೇ ನಾನು ಭಾವಿಸು ತ್ತೇನೆ. ಹಿಂದಿನ ಕಾಲದಲ್ಲಿ ಶಿಕ್ಷಕರೆಂದರೆ, ಬಾಲಕರು ನಿಜವಾ ಹುಲಿಗಿಂತ ಹೆಚ್ಚು ಹೆದರುತ್ತಿದ್ದರು. ಇವರ ಬಗ್ಗೆ ಸ್ವಾರಸ್ಯವು ವಾದ ಕಥೆಗಳನ್ನು ಕೇಳುತ್ತೇವೆ: ನಮ್ಮ ತಂದೆಯ ಗೆಳೆಯ ಭೀಮ ನನ್ನು ಶಾಲೆಗೆ ಹಿಡಿದುಕೊಂಡು ಬರುವುದಕ್ಕಾಗಿ, ನಾಲ್ಕೈದು ಹುಡು ಗರನ್ನು ಶಿಕ್ಷಕರು ಬಿಟ್ಟರಂತೆ. ಕೊನೆಗೊಮ್ಮೆ ಭೀಮ ಸಿಕ್ಕ. ಮುಂ ಅಪರಾಧಿ. ಹಿಂದೆ ಪೊಲೀಸರು—ಹೀಗೆ ಓಡಹತ್ತಿದರು. ಇಬ್ಬರು ನದಿಯ ದಂಡೆಗೆ ಬಂದರು. ಆಗ ಮಳೆಗಾಲ. ಹೊಳೆ ತುಂಬಿ ಹರಿಯು ತ್ತಿತ್ತು. 'ಇನ್ನೇನು ಕೈದಿ ಸಿಕ್ಕ' ಎಂದು ಬೆನ್ನಟ್ಟಿದವರು ಬಗೆದರು ಆದರೆ ಭೀಮ, ವ್ಯಾಘ್ರಸ್ವರೂಪೀ ಮಾಸ್ತರರ ಕೈಯಲ್ಲಿ ಸಿಗುವುದಕ್ಕಿಂ ಹೊಳೆಗೆ ಹಾರಿಕೊಂಡು ಸಾಯುವುದೇ ಮಿಗಿಲೆಂದು ನದಿಯಲ್ಲಿ ಜಿಗಿದ ಈಸಿ ಆಚೆಯ ದಂಡೆಗೆ ಹೋಗಿ ಕುಳಿತ. ಎಲ್ಲರೂ ಆಶ್ಚರ್ಯ ಪಟ್ಟರು 'ಅಂಜಿಕೆಯು ಶೌರ್ಯದ ತಾಯಿ' ಎಂಬುದಕ್ಕೆ ಇದು ನಿದರ್ಶನ.

ಎಲ್ಲ ಖಾತೆಗಳಲ್ಲಿಯೂ ಅತ್ಯಂತ ಸಭ್ಯಖಾತೆಯೆಂದು ಪ್ರಸಿದ್ಧ ವಾದ ಶಿಕ್ಷಣ ಪ್ರಪಂಚದಲ್ಲಿಯೇ ಹೀಗಿರುವಾಗ, ಪೋಲೀಸ, ರೆವ್ಹಿನ್ಯೂ ಸೈನ್ಯಖಾತೆಗಳಲ್ಲಿ ಯಾವ ಪರಿ ಇರಲಿಕ್ಕಿಲ್ಲ? ಆಡಳಿತಯಂತ್ರ ಸಣ್ಣ-ದೊಡ್ಡ ಗಾಲಿಗಳೆಲ್ಲ ಶಾರ್ದೂಲವಿಕ್ರೀಡಿತ ವೃತ್ತದ ತಾಳ ಲಯಕ್ಕೇ ಉರುಳುತ್ತವೆ—ಎಂದು ನನ್ನ ದೃಢವಾದ ನಂಬಿಗೆ.

ದ್ವೈತಾದ್ವೈತ-ವಿಶಿಷ್ಟಾದ್ವೈತಿಗಳು ಏನೇ ಅನ್ನಲಿ; ಜೀವಾತ್ಮ ಪರಮಾತ್ಮರ ಸಂಬಂಧವು ನನಗೀಗ ಹೊಸ ರೂಪದಿಂದ ಗೋಚರ ವಾಗುತ್ತದೆ. "ಎಲೈ ಆಕಾಶದಲ್ಲಿಯ ತಂದೆಯೇ" (Oh, Fathe in Heaven!) ಎಂದು ಪಿತಾ-ಪುತ್ರರ ಸಂಬಂಧವನ್ನು ಕ್ರೈಸ್ತರ ಕಲ್ಪಿಸಬಹುದು, ಸೇವ್ಯ—ಸೇವಕಭಾವವನ್ನು ಭಕ್ತಿಪಂಥದವ ಕಾಣಬಹುದು, "ಶರಣ ಸತಿ, ಲಿಂಗ ಪತಿ" ಎಂಬ ಭೂಮಿಕೆಯ ಮೇಲೆ ಇನ್ನಿತರರು ಆರಾಧಿಸಬಹುದು. ಆದರೆ, ನನಗೆ ಮಾತ್ರ ಬೇ ಭಾವವೇ ವ್ಯಕ್ತವಾಗುತ್ತದೆ. ಅದು ಯಾವುದೆಂದರೆ: "ದೇವ ಹುಲಿ

ಭಕ್ತ ಇಲಿ" ಎಂಬುದು. ಇದಕ್ಕೆ ಆಧಾರವಿಲ್ಲದೆ ಇಲ್ಲ. ಭಕ್ತಿಯಲ್ಲಿ ಭಯದ ಅಂಶವು ಅಧಿಕವಾಗಿದೆ—ಎಂಬುದಕ್ಕೆ "ಭರತ ಭಯ-ಭಕ್ತಿಯಲಿ ಕೈಮುಗಿದು ssss" ಎಂಬ ಕವಿವಾಣಿಯೇ ಸಾಕ್ಷಿ. (ಈ ಅವಗ್ರಹ ಚಿಹ್ನಗಳು ಪ್ಲುತ, ಭಯಕಂಪನಗಳನ್ನು ತೋರಿಸುತ್ತವೆ. ಇಷ್ಟೇ ಅಲ್ಲದೆ, ಸುಂದರವಾದ ಭಕ್ತಿವೃಕ್ಷಕ್ಕೆ ಅಂಕಡೊಂಕಾದ ಭಯದ ಬೇರುಗಳು ಅವೆ ಎಂಬುದನ್ನೂ ಸೂಚಿಸುತ್ತವೆ) ಇಲ್ಲದಿದ್ದರೆ, ಒಡಹುಟ್ಟಿದವನಿಗೆ, ಒಡನಾಡಿದವನಿಗೆ ಇಷ್ಟು ಹೆದರುವ ಕಾರಣವೇನಿತ್ತು? ಭರತನು ತ್ರಿಕಾಲಜ್ಞಾನಿ, ಅವನಿಗೆ ಗೊತ್ತು: ಶ್ರೀರಾಮಚಂದ್ರನು ಕೇವಲ ಅಣ್ಣನಲ್ಲ, ಪರಮಾತ್ಮನು ಅರ್ಥಾತ್ ಹುಲಿ!'—ಎಂದು. ಅಂತೆಯೇ ಅವನು ಇಷ್ಟು ನಡುಗ ಹತ್ತಿರಬೇಕು. ಇನ್ನು 'ಕವಿಗಳು ಕೇವಲ ಕಲ್ಪನಾಲೋಲುಪರು, ಅತಿಶಯೋಕ್ತಿಪ್ರಿಯರು. ಕಡ್ಡಿಯಾದುದನ್ನು ಗುಡ್ಡದಷ್ಟು ಬೆಳಸಿ ಹೇಳುತ್ತಾರೆ.' ಎಂದು ಪಂಡಿತರೂ, ಪಾಮರರೂ ಕೂಡಿಯೇ ಮೂಗುಮುರಿಯಬಹುದು. ಹಾಗಾಗಭಾರದೆಂದೇ ಪರಮಾತ್ಮನು ಹುಲಿಯ ರೂಪವನ್ನು ತಾಳಬೇಕಾಯಿತು. 'ಇದೆಲ್ಲಿಯ ಹನ್ನೆರಡನೆಯ ಅವತಾರ ತಂದಿರಿ?' ಎಂದು ಯಾರೂ ಗಾಬರಿಯಾಗುವ ಕಾರಣವಿಲ್ಲ. ನರಸಿಂಹಾವತಾರವೇ ಅದು. ವಾಚಾಳಿಗಳೆಂದು ಪ್ರಸಿದ್ಧರಾದ ನಮ್ಮ ದಾಕ್ಷಿಣಾತ್ಯರ ಭಾಷೆಯಲ್ಲಿ ಒಂದು ಸಾಮಾನ್ಯಭಾವವನ್ನು ವ್ಯಕ್ತ ಮಾಡಲು ಶಬ್ದಗಳೇ ಇಲ್ಲ. 'ಅಣ್ಣನು ತಮ್ಮನು, ನಾವೊಂದು ಅಲ್ಲ? ನನ್ನ ಒಡಹುಟ್ಟಿದವ ಎಂದು ಹೇಳಲಿಕ್ಕೆ 'ಭಾಯಿ' ಎಂಬ ಶಬ್ದದಂತೆ ಯಾವ ಶಬ್ದವಿದೆ? ಅದರಂತೆ, ನಿನ್ನೆ ಅಂದರೂ ಅಷ್ಟೇ. ನಾಳೆ ಅಂದರೂ ಅಷ್ಟೇ, ಇವತ್ತೊಂದು ಅಲ್ಲ—ಎಂಬುದಕ್ಕೆ 'ಕಲ್' ಎಂಬಂತೆ ಒಂದೇ ಶಬ್ದ ಎಲ್ಲಿ ಅದೆ? ಹಾಗೆಯೇ ಮಿತಭಾಷಿಗಳಾದ ಔತ್ತರೇಯರ ನುಡಿಯಲ್ಲಿ 'ಬಾಬರ್' ಎಂದರೆ ಹುಲಿಯೆಂತಲೂ ಅರ್ಥ. ಸಿಂಹನೆಂತಲೂ ಅರ್ಥ. ಮೇಲಾಗಿ "ಸಿಂಹಃಕಂಠೀರವೊ ವ್ಯಾಘ್ರಃ ಶಾರ್ದೂಲಃ ಕೇಸರೀತಿ ಷ್ಣ" ಎಂದು ಅಶ್ರುತಕೋಶದಲ್ಲಿ ಹೇಳಲಾಗಿದೆ.

'ಬಾಬರ್' ಎಂಬಾಕ್ಷಣಕ್ಕೆ ನೆನಪಾಯಿತು. ಹಿಂದುಸ್ತಾನದಲ್ಲಿ ಈ 'ಅಲಾ' ಹಬ್ಬವನ್ನು ಮೊದಲು ಸುರುವು ಮಾಡಿದವನು ಬಾಬರನಂತೆ. ಮಧ್ಯ ಏಶಿಯಾದಲ್ಲಿ ಇರುವವರೆಗೆ ಅತ್ಯಂತ ಶ್ರದ್ಧಾಳುವಾದ ಅವನು, ಪ್ರತಿವರುಷ ತಪ್ಪದೆ ಮಕ್ಕಾಯಾತ್ರೆ ಮಾಡುತ್ತಿದ್ದನು. ಇಲ್ಲಿ ರಾಜ್ಯಸ್ಥಾಪನೆ ಮಾಡಿದನಂತರ, ಅವನಿಗೆ ಅದು ಅಶಕ್ಯವಾಯಿತು. ಆದ್ದರಿಂದ ಹುತಾತ್ಮರಾದ ಹಸನ-ಹುಸೇನರ ಸಮಾಧಿಗಳ ಪ್ರತಿಕೃತಿ ಮಾಡಿ, ಅವಕ್ಕೆ ನಡಕೊಳ್ಳ ಹತ್ತಿದನು. ಈ ಸಮಾರಂಭದ ಅಂಗವಾದ, ಹುಲಿಯಾಗಿ ಕುಣಿಯುವುದನ್ನೂ ಬಹುಶಃ ಅವನೇ ಪ್ರಚಾರದಲ್ಲಿ ತಂದಿರಬೇಕು. ಇಷ್ಟು ಪ್ರೀತಿಯಿಂದ ಇವನು ಧಾರಣ ಮಾಡಿದ 'ಬಾಬರ್' ಎಂಬ ಬಿರುದೇ ಇದಕ್ಕೆ ಸಾಕ್ಷಿ. ಇಷ್ಟೇ ಅಲ್ಲ, ಸ್ವತಃ ಬಾದಶಹನೇ ಹುಲಿಯಾಗಿ ಕುಣಿದಿರಬೇಕು. ಆಗ ಅವನನ್ನು ಅನುಸರಿಸಿ, ದರಬಾರದಲ್ಲಿಯ ಅಮೀರ್-ಉಮರಾವ್, ಸರದಾರ್-ಜಹಾಗೀರದಾರ್, ರಾಜಾ-ಮಹಾರಾಜಾ ಮೊದಲಾದವರೆಲ್ಲ, ಬಣ್ಣ ಬಡಿದುಕೊಂಡು, ಹಲಿಗೆಯ ಗತ್ತಿಗೆ ಹೆಜ್ಜೆ ಹಾಕುತ್ತ ಅವನನ್ನು ಹಿಂಬಾಲಿಸಿ ನಡೆದ ದೃಶ್ಯ ಎಷ್ಟೊಂದು ಅದ್ಭುತರಮ್ಯವಾಗಿರಬೇಕು! ಇದು ಅಸಂಭವನೀಯ ಎಂದೆನ್ನಲಿಕ್ಕಾಗದು. ಯಾಕೆಂದರೆ ಒಂದು ಪದ್ಧತಿಯನ್ನು ಪ್ರಚಾರದಲ್ಲಿ ತರುವ ಶ್ರೇಯಸ್ಸು ಯಾವಾಗಲೂ ಮೇಲಿನ ವರ್ಗಕ್ಕೇ ಸೇರಿದ್ದು. "ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋಜನಃ". ಅದನ್ನು ಬಿಟ್ಟು ಅವರು ಹೊಸ ಪದ್ಧತಿಯನ್ನು ಸ್ವೀಕರಿಸಿದರೂ, ಹಳೆಯದಕ್ಕೇ ಅಂಟಿಕೊಂಡು ಉಳಿಯುವುದು ಕೆಳಗಿನ ವರ್ಗದವರ ಹಣೆಯಬರೆಹ. ಬಣ್ಣ-ಬಣ್ಣದ ಜರದ ರುಮಾಲು, ಕಿವಿಯಲ್ಲಿ ಚೌಕುಳಿ-ಬಾವಲಿ, ಕೈಯಲ್ಲಿ ಕಡಗ ಮೊದಲಾದುವನ್ನು ಮೇಲಿನ ವರ್ಗದವರು ಬಿಟ್ಟು ಹಳೆಯ ಮಾತಾಯಿತು; ಆದರೆ ಕೆಳಗಿನ ವರ್ಗದಲ್ಲಿ ನಾವು ಇವನ್ನು ಇನ್ನೂ ಕಾಣುತ್ತೇವೆ.

ಹೀಗೆ ದಿಲ್ಲಿಯ ವಿಶಾಲವಾದ ಬೀದಿಗಳಲ್ಲಿ ಹುಲಿಯಾಗಿ ವೀರಾವೇಶದಿಂದ ಕುಣಿಯುತ್ತ, ಕೊನೆಗೆ ಡೋಲಿಗಳೆದುರು ಭಕ್ತಿಭಾವದಿಂದ ಮಣಿಯುತ್ತ ನಿಂತ ಬಾಬರನ ಆಶಯವಿಷ್ಟೇ ಇರಬೇಕು: "ದೇವರೇ, ನಾನು ಪಾಣಿಪತ್ ಯುದ್ಧವನ್ನು ಗೆದ್ದರೂ, ಸಾಮ್ರಾಜ್ಯವನ್ನು ಸ್ಥಾಪಿಸಿದರೂ, ನಿನ್ನೆದುರು ಕಃಪದಾರ್ಥ. ಎಲ್ಲರೆದುರು ಹುಲಿ; ಅಲ್ಲಾನೆದುರು ಇಲಿ!"

ಸುಧಾರಣೆ, ಸಂಸ್ಕೃತಿ, ಪ್ರಜಾಪ್ರಭುತ್ವ ಮೊದಲಾದುವು ಬಂದಂದಿನಿಂದ, ಎಲ್ಲರೂ "ಸಭ್ಯಗೃಹಸ್ಥ"ರಾಗಿದ್ದಾರೆ.

ಮೊದಲು ಹೀಗಿರಲಿಲ್ಲ, ವ್ಯಾಘ್ರಚರ್ಮ ಧರಿಸಿ ಬಣ್ಣ ಬಡಿದುಕೊಂಡು, ಶಸ್ತ್ರಧಾರಿಯಾಗಿ ಯಾವನು ಹೆಚ್ಚು ಅಕರಾಳ ವಿಕರಾಳ ಕಾಣಿಸುತ್ತಿದ್ದನೋ, ಅವನಿಗೇ ಸಮಾಜದಲ್ಲಿ ಹೆಚ್ಚು ಆದರ. ಬಣ್ಣಗಳಿಗೆ ಮೊದಲಿದ್ದ ಗೌರವ ಈಗ ಹೋಗಿದೆ. ಅದಷ್ಟು ಸೌಮ್ಯ ಬಣ್ಣಗಳು ಫ್ಯಾಶನ್ನಿನಲ್ಲಿ ಬಂದಿವೆ. ಆದರೆ ಹುಲಿಚರ್ಮವನ್ನು ಬಿಟ್ಟು ಉಣ್ಣೆಯ ಅರ್ಥಾತ್ ಕುರಿಕೂದಲಿನ ಬಟ್ಟೆಗಳನ್ನು ಧರಿಸಿದರೂ, ಒಳಗಿನ ಹೃದಯವು ಮಾತ್ರ ಮಾಯವಾಗಿಲ್ಲ. ಹಾಗಿರದಿದ್ದರೆ. ದೇವರು ದಯೆಪಾಲಿಸಿದ ಆಸ್ತಿಯ ಮೇಲೆ ಸುಖದಿಂದ ಉಂಡುಟ್ಟು, ನಮ್ಮಲ್ಲಿಯ ಸ್ಥಿತಿವಂತರು ಏಕೆ ಜೀವಿಸಬಾರದು? ಮ್ಯುನಸಿಪಾಲಿಟಿ, ಲೋಕಲ್ ಬೋರ್ಡ್, ಶಾಸನಸಭೆಗಳಿಗಾಗಿ ಇಷ್ಟು ತುರುಸಿನ ಇಲೆಕ್ಶನ್ ಎಲ್ಲಿಯಾಗುತ್ತಿದ್ದುವು? "ನಾನು ಸಾಮಾನ್ಯನಲ್ಲ, ನಾನೂ ಒಬ್ಬ ಹುಲಿ" ಎಂದು ಎಲ್ಲರಿಗೂ ತೋರಿಸಿಕೊಡಲಿಕ್ಕಾಗಿಯೇ ಅಲ್ಲವೇ ಈ ಎಲ್ಲ ಧಡಪಡಿಕೆ?

ಸ್ಥಿತಿವಂತರ ಮಾತೇ ಬೇರೆ. ಕಾಲಕ್ಷೇಪ ಮಾಡಲಿಕ್ಕೆ ಅವರಿಗೆ ಏನಾದರೊಂದು ಸಾಧನ ಬೇಕಲ್ಲ? ಮೊದಲಿನ ಕಾಲದ ಜೂಜು, ಬೇಟೆ, ಸುರೆ, ವೇಶ್ಯಾವಾಟಗಳಿಲ್ಲ. ಸಭ್ಯತೆಯ ಆಕ್ರಮಣದ ಎದುರು ಮಾಯವಾಗಹತ್ತಿವೆ. ಆದರೆ ಕೇವಲ ಹೊಟ್ಟೆಯ ಪಾಡಿಗಾಗಿ ಮನ ಮುಟ್ಟಿ ಮೈಮುರಿದು ದುಡಿಯಬೇಕಾದ ಮಧ್ಯಮವರ್ಗದ ನಮ್ಮಂಥ ಸಭ್ಯಗೃಹಸ್ಥರ ಪಾಡು "ಹುಲಿಯ ಬಣ್ಣಕ್ಕೆ ಮೈ ಸುಟ್ಟುಕೊಂಡ ನರಿಯಂತೆ" ಆಗಿಲ್ಲವೇ? ಒಮ್ಮೆಲೇ ನನ್ನ ಲಗ್ನಕಾಲದ ಚಿತ್ರ ನೆನಪಾಯಿತು. ಸಿಂಗಾರಾಗಿ, ಕುದುರೆಯ ಮೇಲೆ ಕುಳಿತು,

ವಾದ್ಯವೈಭವದೊಂದಿಗೆ ಸಡಗರದಿಂದ, ರಾಜಮಾರ್ಗದಲ್ಲಿ ನಾನು ನಡೆದ ಚಿತ್ರ ಕಣ್ಣೆದುರು ಕಟ್ಟಿತು. ನಗು ಬಂತು; ನಾಚಿಕೆಯೂ ಆಯಿತು. ಈ ರೀತಿ ಮೆರೆಯಬೇಕಾದರೆ, ನಾನೇನಂಥ ಮಹತ್ಕಾರ್ಯ ಮಾಡಿದ್ದು—ಯಾವ ದಿಗ್ವಿಜಯ ಸಂಪಾದಿಸಿದ್ದು? ವಯಸ್ಸಿಗೆ ಬರುತ್ತಲೇ, ಸಕಲಪ್ರಾಣಿಗಳಂತೆ ನಾನೂ ಒಬ್ಬ ಸಹಚಾರಿಣಿಯನ್ನು, ಜೀವನಸಂಗಾತಿಯನ್ನು ಕಂಡುಕೊಂಡೆ. ಇದೇನು ನೆಲ್ಸನ್ನನು ಟ್ರ್ಯಾಫಲ್ಗಾರ ಯುದ್ಧವನ್ನು ಗೆದ್ದಂತೆಯೇ? ಅಭಿಮನ್ಯುವು ಚಕ್ರವ್ಯೂಹವನ್ನು ಭೇದಿಸಿದಂತೆಯೇ? ಇಂಥ ಸಾಮಾನ್ಯ ಪ್ರಸಂಗಕ್ಕೆ ಇಷ್ಟೇಕೆ ಅಟ್ಟಹಾಸ? ? 'ಹಾಗಲ್ಲ ಮದುಮಕ್ಕಳು ಉಚಿತವಾದ ವೈಭವದೊಂದಿಗೆ ಮೆರವಣಿಗೆಯಲ್ಲಿ ದೇವರಿಗೆ ಹೋಗಿ ಬರಬೇಕು—ಎಂದು ಧರ್ಮಶಾಸ್ತ್ರದಲ್ಲಿ ಹೇಳಿದೆ' ಎಂದು ಉತ್ತರ ಕೊಡಬಹುದು. ಅವರ ಧರ್ಮಶಾಸ್ತ್ರದಲ್ಲಿಯೂ ಹೀಗೆಯೇ ಹೇಳಲಾಗಿದೆ: "ವರ್ಷಕ್ಕೊಮ್ಮೆ, ಹುಲಿಯಾಗಿ, ಹಲಿಗೆಯ ಸಪ್ಪಳಕ್ಕೆ ಕುಣಿಯುತ್ತ 'ಅಲಾಬ' ದೇವರಿಗೆ ನಮಸ್ಕಾರ ಮಾಡಿಬರಬೇಕು" ಎಂದು. ತತ್ತ್ವತಃ ಎರಡೂ ವಿಧಿಗಳ ಬುಡದಲ್ಲಿ ಒಂದೇ ತರದ ಬಯಕೆ ಅವಿತುಕೊಂಡಿದೆ. ನಿತ್ಯ ನೀರಸಜೀವನಕ್ಕೆ ಬೇಸತ್ತ ಮಾನವ ತುಸು ಶೂರನೂ, ಸುಂದರನೂ, ಪ್ರೇಕ್ಷಣೀಯನೂ ಎಂದು ಮೆರೆಯಲು ಹಾತೊರೆಯುತ್ತಾನೆ. ಶರೀರದ ಊನತೆಯನ್ನು ಬೆಲೆಬಾಳುವ ಬಟ್ಟೆಗಳು ಮುಚ್ಚಿದರೂ ಒಂದೇ, ಬಣ್ಣಬಣ್ಣಗಳ ಪಟ್ಟೆಗಳು ಮರೆಮಾಡಿದರೂ ಒಂದೇ! ಅದು ಅಭಿರುಚಿಯ ಪ್ರಶ್ನೆ. ಎರಡನೆಯದಾಗಿ, ಈ ಬಯಕೆ ಸರ್ವಸಾಮಾನ್ಯವಿರುವುದರಿಂದ, ಇದೇ ಧರ್ಮ, ಇದೇ ನೀತಿ, ಇದೇ ರೀತಿ ಎಂದು ಸಮಾಜವು ಅದಕ್ಕೆ ತನ್ನ ಮುದ್ರೆಯನ್ನು ಒತ್ತುತ್ತದೆ. ಅದೊಂದು ರೂಢಿಯಾಗಿ ಪರಿಣಮಿಸುತ್ತದೆ. ಅನಂತರ ಈ ರೂಢಿಯನ್ನು ಅದರ ಜನಕಶಾಸ್ತ್ರವೂ ಕಿತ್ತೊಗೆಯಲು ಸಮರ್ಥವಾಗುವುದಿಲ್ಲ. "ಶಾಸ್ತ್ರಾತ್ ರೂಢಿರ್ಬಲೀಯಸೀ!" ಲಗ್ನಸಮಾರಂಭಗಳಲ್ಲಿಯ ಪಕ್ವಾನ್ನದ ಊಟ, ಜರತಾರಿಯ ಉಡಿಗೆ, ಉರುಟಣೆ, ಅಳಿಯನ ಸೆಡವು, ಭೂಮದ ಭಾಂಡಿಯ ಕಳವು ಬೀಗರ (ವಿಶೇಷತಃ ಗಂಡಿನವರ) ರಂಬಾಟ, ಬೀಗಿತ್ತಿಯ ಚೀರಾಟ ಇವು ಯಾವುವೂ ಶಾಸ್ತ್ರದಲ್ಲಿ ಹೇಳಿದುವಲ್ಲ; ಆದರೆ ರೂಢಿಯಾಗಿ ಬಂದಿರುವುದರಿಂದ, ಇವುಗಳಲ್ಲಿ ಯಾವ ಅಂಶವೂ ಕಡಿಮೆಯಾಗುವಂತೆ ಇಲ್ಲ. ಸಾಲ ಮಾಡಿ ಒಳ್ಳೆಯ ಕಾರ್ಯವನ್ನೂ ಮಾಡಕೂಡದೆಂದು ಧರ್ಮಶಾಸ್ತ್ರದಲ್ಲಿ ಕಟ್ಟಪ್ಪಣೆ ಇದೆ. ಆದರೆ ಸುಶಿಕ್ಷಿತರೆಂದು ಹೆಸ್ಮೆಪಡುವ ಮಧ್ಯಮವರ್ಗದಲ್ಲಿ ಎಷ್ಟು ಲಗ್ನಗಳು ಸಾಲವಿಲ್ಲದೆ ನೆರವೇರಿಸಲ್ಪಡುತ್ತವೆ? ಎರಡು ಮೂರು ದಿನದ ಆಡಂಬರಕ್ಕಾಗಿ ಎಷ್ಟು ಕುಟುಂಬಗಳು ಆರ್ಥಿಕ ದುಃಸ್ಥಿತಿಗೆ ಇಳಿದಿಲ್ಲ? ನಾವು ಕೀಳೆಂದು ತಾತ್ಸಾರ ಗೈಯುವವರು, ಈ ಅಂಶದಲ್ಲಿ ನಮಗಿಂತ ಮೇಲೆಂದು ಬಗೆಯಬಹುದು. ಹುಲಿಯಾಗುವ ಖರ್ಚು, ಬಹಳವಾದರೆ ಎರಡು ಮೂರು ದಿನದ ದುಡಿಮೆಯಷ್ಟು ಆಗಬಹುದು. "ಆರ್ಭಾಟ ಮಾಡಿದ!" 'ಲಗ್ನ ಒಗಸ್ಯಾಡಿ ಬಿಟ್ಟ!' 'ಮಾಡಿದರ ಹೀಂಗ ಮಾಡಬೇಕು!' ಎಂದು ಮೊದಲಾಗಿ ನೆರೆಹೊರೆಯವರು ಸುರಿಸುವ ಮಾತಿನ ಮಲ್ಲಿಗೆಗಾಗಿ, ತನ್ನನ್ನೂ ತನ್ನ ಮಕ್ಕಳು-ಮೊಮ್ಮಕ್ಕಳನ್ನೂ ಸಾಲದ ಕೂಪದಲ್ಲಿ ನೂಕುವ 'ಸಭ್ಯ' ಗೃಹಸ್ಥನಿಗಿಂತ, ರಣೋತ್ಸಾಹವನ್ನು ತುಂಬುವ ಹಲಿಗೆಯ ಸಪ್ಪಳಕ್ಕೆ, ಸುಮ್ಮನಿರದ ಕೈಕಾಲುಗಳನ್ನು ಕಲಾತ್ಮಕವಾಗಿ ವಿನ್ಯಾಸಗೈಯುತ್ತ, ರಸಿಕ ಪ್ರೇಕ್ಷಕರು ತೂರುವ ಮಂಡಕ್ಕಿಗಳ ಮಳೆಯಲ್ಲಿ ನಡೆಯುವ ಅಶಿಕ್ಷಿತ ಅಡ್ನಾಡಿಯೇ ಹೆಚ್ಚು ವಿವೇಕಿ ಎಂದು ಏಕೆನ್ನಬಾರದು?

ಮಗ್ಗಲು ಬದಲಾಯಿಸಿದೆ. ಅಂದೇ ಪಗಾರ ಆಗಿದ್ದುದರಿಂದ, ಎಲ್ಲರ ಉದ್ದರಿ ತೀರಿಸಿ ಇನ್ನೂ ಎರಡು ರೂಪಾಯಿ ಟೊಂಕದಲ್ಲಿ ಉಳಿದಿದ್ದುವು. 'ಝಣ್' ಎಂದು ಕಾಟಿನ ಕೆಳಗೆ ಬಿದ್ದುವು. ಹುಡುಕಿದೆ. ಸಿಕ್ಕವು. ಕೈಯಲ್ಲಿ ತೆಗೆದುಕೊಂಡೆ. ಅವುಗಳ ಮೇಲೂ ಹುಲಿಯ ಚಿತ್ರವೇ! ಈವೊತ್ತು ಹೀಗೇಕೆ ಆಗಹತ್ತಿದೆ? ಎಲ್ಲೆಡೆಗೂ ನನಗೆ ಹುಲಿಯೇ ಕಾಣಹತ್ತಿದೆಯಲ್ಲ? ಕೇವಲ ವ್ಯಕ್ತಿಯಷ್ಟೇ ಅಲ್ಲ, ರಾಷ್ಟ್ರವೂ ಕೂಡ ಹುಲಿ-ಸಿಂಹಗಳ ಆದರ್ಶವನ್ನೇ ತನ್ನೆದುರು ಇಟ್ಟುಕೊಂಡಿದೆ. "ಸರ್ವಂ ಹುಲಿಮಯಂ ಜಗತ್!"

ಹೀಗೆ ಅಸಂಬದ್ಧ ವಿಚಾರ ಮಾಡುತ್ತ ಹೋದರೆ ನಿದ್ದೆ ಬರಲಿಕ್ಕಿಲ್ಲ. ನಾಳೆ ಮಂಗಳವಾರ. ಮುಂಜಾನೆ ಶಾಲೆ ಇದೆ. ಬೇಗ ಏಳಬೇಕು—ಎಂದು ಗಟ್ಟಿಯಾಗಿ ಕಣ್ಣು ಮುಚ್ಚಿದೆ:

> Tiger, tiger, burning bright
> In the forest of the night
> What mortal hand or eye
> Hath formed thy fearful symetry?

ಎಂಬ ಕವಿತೆಯ ಸಾಲುಗಳು ಕಿವಿಯಲ್ಲಿ ಗುಂಯ್‌ಗುಡ ಹತ್ತಿದುವು. ಮುಂದೆ ಯಾವಾಗ ನಿದ್ದೆ ಹತ್ತಿತೋ ನೆನಪಿಲ್ಲ.

ಮರುದಿನ ಎದ್ದಾಗ ಏಳೂವರೆ ಆಗಿತ್ತು. ಕೋಣೆಯಿಂದ ಹೊರಗೆ ಬಂದು ನೋಡುತ್ತೇನೆ: ಸುರ್‍ಯಾ, ನಿನ್ನೆ ಇಷ್ಟು ಪೆಟ್ಟು ತಿಂದರೂ ಗೋಡೆಯ ಮರೆಗೆ ನಿಂತು ಹುಲಿಯ ಕುಣಿತ ನಡೆಸಿದ್ದ. ಇನ್ನು ಏಟು ಬೀಳುತ್ತವೆ ಎಂದು ಬಿಡಿಸಲು, ಅವಳೂ ಅಡಿಗೆ ಮನೆಯಿಂದ ಬಂದಳು. ಆದರೆ ನಾನೂ ಅವನೊಂದಿಗೆ ಕೈ ಕೈ ಹಿಡಿದು ಕುಣಿಯುವುದನ್ನು ನೋಡಿ ಮುಗುಳು ನಗೆ ನಕ್ಕು "ತಾವು ಮುದುಕರಾಗಿ ಹುಲಿಯ ಹಾಂಗ ಕುಣಿತಾರ; ಮತ್ತ ಆ ಹುಡಗನ್ನ ದನ ಬಡಿದ ಹಾಂಗ ಬಡೀತಾರ." ಎಂದು ಅಂದಳು.

"ಇದು ಹುಲಿಯ ಕುಣಿತ ಅಲ್ಲ. ನಾಳೆ ಅವ Embassador ಆಗಿ, ಪರದೇಶದೊಳಗ ನೃತ್ಯಶಾಲೆಯಲ್ಲಿ ಮಡ್ಮನ್ನ ಸಂಗಡ ಕುಣಿಯುವ ಕುಣಿತ. ಅದರದೇ ಈಗ ಅವನಿಗೆ ಪ್ರ್ಯಾಕ್ಟೀಸ್ ಮಾಡಿಸಲಿಕ್ಕೆ ಹತ್ತೇನಿ" ಎಂದು ಹೇಳಿದೆ.

ಭಕ್ತಿಭಾವದ ಬೆಳಕು

ಶ್ರೀ. ವಿ. ಸಂಗನಬಸವ ಶಿವಯೋಗಿಗಳು, ಬಂಥನಾಳ

ಭಕ್ತಿಭಾವ ಪರಲೋಕಸಾಧನೆಗಷ್ಟೇ ಅವಶ್ಯಕವೇನಲ್ಲ; ಇಹಲೋಕದ ಸುಖ-ಸಮಾಧಾನಗಳ ಸಾಧನೆಗೂ ಅವಶ್ಯಕವಾಗಿರುವುದು. ಮನುಷ್ಯನ ಮನೋರೋಗಗಳಿಗೆಲ್ಲ ಭಕ್ತಿಭಾವವೊಂದು ಸಿದ್ಧಕಲ್ಪವಾಗಿರುವುದು.

ದೇವರ ಭಜನೆ, ಪ್ರಾರ್ಥನೆ, ಪೂಜೆ, ನಾಮಸ್ಮರಣೆ, ವ್ರತ, ಉಪವಾಸ, ಜಪ-ತಪ, ಅನುಷ್ಠಾನಾದಿಗಳಿಗೆಯೆ ಲೋಕದಲ್ಲಿ ಸಾಮಾನ್ಯವಾಗಿ ನಿಜವಾದ ಭಕ್ತಿಯೆನ್ನುವ ರೂಢಿಯುಂಟಾಗಿದೆ. ಆದರೆ 'ಭಕ್ತಿ' ಹಾಗೂ 'ಭಕ್ತಿಭಾವ' ಈ ಎರಡು ವಿಷಯಗಳು ಪರಸ್ಪರ ಭಿನ್ನವಾಗಿವೆ. ಭಕ್ತಿಭಾವವು ಒಂದು ವಿಶಿಷ್ಟತರದ ಮಾನಸಿಕ ಸ್ಥಿತಿಯಾಗಿದ್ದು, ಆ ಭಾವನೆಯನ್ನು ಮನಸ್ಸಿನಲ್ಲಿ ನಿರ್ಮಾಣ ಮಾಡುವುದಕ್ಕಾಗಿ ಯಾವ ಕ್ರಿಯೆಯನ್ನು ಮಾಡಬೇಕಾಗಿರುವುದೋ ಅದಕ್ಕೆ ಭಕ್ತಿ ಎಂಬುದಾಗಿ ಹೇಳುತ್ತಾರೆ

ಭಕ್ತಿಯ ಸ್ವರೂಪವು ಪ್ರತ್ಯೇಕ ಧರ್ಮದಲ್ಲಿ ಮತ್ತು ಮತ-ಸಂಥಗಳಲ್ಲಿ ಬೇರೆಬೇರೆಯಾಗಿರುತ್ತಿದ್ದು, ಭಕ್ತಿಭಾವವು ಮಾತ್ರ ಯಾವ ಧರ್ಮ-ಮತ-ಸಂಥಗಳನ್ನವಲಂಬಿಸಿರದೆ, ಮುಖ್ಯವಾಗಿ ಮನುಷ್ಯನ ಜ್ಞಾನವನ್ನವಲಂಬಿಸಿರುತ್ತದೆ. ಬಾಹ್ಯತಃ ಭಕ್ತಿಯ ಆಚರಣೆಯನ್ನು ಮಾಡುತ್ತಿರುವವನ ಮನಸ್ಸಿನಲ್ಲಿ, ನಿಜವಾದ ಭಾವವಿರುವುದೆಂಬುದರ ನಿಯಮವಿಲ್ಲ. ಇಂಥ ಭಕ್ತಿಭಾವಶೂನ್ಯವಾದ ಆಚರಣೆಯ ಸಂಬಂಧವಾಗಿಯೇ "ಬಂಡಿ ತುಂಬಿದ ಪತ್ರಿಯ ತಂದು ಕಂಡ ಕಂಡಲ್ಲಿ ಮಜ್ಜನಕೆರೆವಿರಿ! ತಾಪತ್ರಯವ ಕಳೆದು ಪೂಜಿಸಿ! ತಾಪತ್ರಯವ ಲಿಂಗನೊಲ್ಲ" ಎಂಬ ಉದ್ಗಾರವನ್ನು ಭಕ್ತಿಭಾಂಡಾರಿ ಬಸವಣ್ಣನವರು ತೆಗೆದಿದ್ದಾರೆ. ಮನುಷ್ಯನು ಭಕ್ತಿ ಮಾಡುತ್ತಾನೆಯೊ ಇಲ್ಲವೊ ಎಂಬುದಕ್ಕಿಂತ, ಅವನ ಮನಸ್ಸಿನಲ್ಲಿ ಭಕ್ತಿಭಾವವಿದೆಯೊ ಇಲ್ಲವೊ ಎಂಬುದೇ ಮಹತ್ತ್ವದ ಪ್ರಶ್ನೆಯಾಗಿದೆ.

ವ್ಯವಹಾರದೊಳಗೆ ಭಕ್ತಿ ಹಾಗೂ ಭಕ್ತಿಭಾವಗಳಲ್ಲಿರುವ ಭೇದದ ಕಡೆಗೆ ದುರ್ಲಕ್ಷ್ಯಿಸಿ, ಒಟ್ಟಿನಲ್ಲಿ ಭಕ್ತಿ ಎಂಬ ಶಬ್ದವನ್ನೇ ವಿಶೇಷವಾಗಿ ಉಪಯೋಗಿಸುವ ರೂಢಿಯಾಗಿರುವುದು. ಆದರೆ ಭಕ್ತಿಭಾವವು ನಿಜವಾಗಿ ಸಾಧ್ಯವಾಗಿದ್ದು, ಭಕ್ತಿಯ ಬಾಹ್ಯಾಚರಣೆಯು ಕೇವಲ ಒಂದು ಸಾಧನೆಯಾಗಿರುವುದು. ಇದನ್ನು ಯಾವಾಗಲೂ ಲಕ್ಷ್ಯದಲ್ಲಿಟ್ಟಿರಬೇಕು. ಸಾಧ್ಯ ಹಾಗೂ ಸಾಧನೆಗಳಲ್ಲಿಯ ಈ ಭೇದವನ್ನು ಲಕ್ಷ್ಯಿಸದಿರುವುದರಿಂದಲೇ, ಸಾಧ್ಯಕ್ಕಿಂತ ಸಾಧನೆಗೆಯೇ ಸಾಮಾನ್ಯತಃ ಅಧಿಕವಾದ ಮಹತ್ತ್ವವು ಬಂದಿರುವುದು. ಇದರಿಂದ ಸಾಧನವಿಷಯದಲ್ಲಿ ಮತಭೇದ ಉತ್ಪನ್ನವಾಗಿ, ಅನೇಕ ಸಲ ಅದು ವಿಕೋಪಕ್ಕೆ ಹೋಗಿದ್ದುದು ಸಹ ಕಂಡುಬರುತ್ತದೆ.

ಭಿನ್ನಭಿನ್ನವಾದ ಧರ್ಮ ಹಾಗೂ ಧಾರ್ಮಿಕ ಪಂಥಗಳ ಅನುಯಾಯಿಗಳಲ್ಲಿ ಹಿಂದೆ ಆಗಿರುವ ಈಗ ಆಗುತ್ತಿರುವ ಕಲಹ, ಕೊಲೆ, ಸುಲಿಗೆ, ಯುದ್ಧ ಮೊದಲಾದ ಅತ್ಯಾಚಾರಗಳ ಮೂಲದಲ್ಲಿ, ಈ ಆಚಾರ-ವಿಷಯಕವಾದ ಮತಭೇದವೇ ಮುಖ್ಯಕಾರಣವಾಗಿರುವುದು. ಭಕ್ತಿ ಹಾಗೂ ಭಕ್ತಿಭಾವಗಳಲ್ಲಿರುವ ಅಂತರವು ಲಕ್ಷ್ಯದಲ್ಲಿದ್ದರೆ, ನಿಜವಾಗಿ ಇಂತಹ ಕಲಹಗಳಾಗುವ ಸಂಭವವೇ ಅತಿ ಕಡಿಮೆಯಾಗುವುದು.

ಪ್ರಸ್ತುತ ಲೇಖನದಲ್ಲಿ ಭಕ್ತಿಯ ಬಾಹ್ಯಾಚರಣೆಯ ಸಂಬಂಧವಾಗಿ ವಿಚಾರಮಾಡದೆ, ಕೇವಲ ಭಕ್ತಿಭಾವದ ವಿಷಯವಾಗಿ ವಿಚಾರಮಾಡುವುದಿದೆ. ಪರಮಾರ್ಥದಲ್ಲಿಯೇ ಆಗಲಿ ಪ್ರಪಂಚದಲ್ಲಿಯೇ ಆಗಲಿ, ನಿಜವಾದ ಭಕ್ತಿಭಾವಕ್ಕೆಯೆ ಮಹತ್ತ್ವವಿದ್ದು ಭಕ್ತಿಭಾವದ ವಿನಾ ಕೇವಲ ಭಕ್ತಿಯ ಬಾಹ್ಯಾಚರಣೆಗೆ ವಿಶೇಷವಾದ ಬೆಲೆಯೇ ಇರುವುದಿಲ್ಲ.

ಭಕ್ತಿಭಾವವೆಂದರೇನು?

ಎಲ್ಲ ವಿಶ್ವದ ಕಾರಭಾರವನ್ನು ನಿಯಂತ್ರಣ ಮಾಡುವ ಸರ್ವ-ಸಾಮರ್ಥ್ಯ ಸಂಪನ್ನ ಸರ್ವಜ್ಞತ್ವಾದಿಗುಣಗಳಿಂದ ಕೂಡಿದ ಒಂದು ಶಕ್ತಿಯು ವಿಶ್ವಕ್ಕೆ ಆಧಾರವಾಗಿರುತ್ತದೆ. "ಈಶಾವಾಸ್ಯಮಿದಂ ಸರ್ವಂ" ಎಂಬ ಈಶಾವಾಸ್ಯೋಪನಿಷತ್ತಿನ ೧ನೆಯ ಮಂತ್ರದಂತೆ, ಜಗತ್ತಿನಲ್ಲಿಯ ಸರ್ವ ಸ್ಥಾವರ ಜಂಗಮ ಪದಾರ್ಥಗಳೆಲ್ಲವೂ, ಆ ಶಕ್ತಿಯು ತನ್ನ ಅತರ್ಕ್ಯ ಲೀಲೆಯಿಂದ ಧಾರಣೆಮಾಡುವ ಬೇರೆ ಬೇರೆ ರೂಪಗಳಾಗಿರುತ್ತವೆ. ಆದರ ಪ್ರೇರಣೆಯಿಂದಲೇ ವಿಶ್ವದೊಳಗಿನ ಎಲ್ಲ ಕಾರ್ಯಭಾರವು ನಡೆದಿರುತ್ತದೆ. ಸೂರ್ಯ, ಚಂದ್ರ, ತಾರೆಗಳು ಆಕಾಶದಲ್ಲಿ ಭ್ರಮಣ ಮಾಡುತ್ತಿರುತ್ತವೆ. ಪೃಥ್ವಿಯು ನಿಯಮದಂತೆ ಸೂರ್ಯನ ಸುತ್ತಲೂ ಸತತವಾಗಿ ತಿರುಗುತ್ತಿರುವುದು. ಮನುಷ್ಯ-ಪಶು-ಪಕ್ಷಿ-ಕ್ರಿಮಿ-ಕೀಟಕಾದಿ ಪ್ರಾಣಿಗಳು, ತಮ್ಮ ತಮ್ಮ ವ್ಯವಹಾರ ಮಾಡುತ್ತಿರುವುವು ಪ್ರಕಾಶ ಉಷ್ಣತೆ, ವಿದ್ಯುತ್, ಗುರುತ್ವಾಕರ್ಷಣಾದಿ ಭೌತಿಕಶಕ್ತಿಗಳು ಸಹ

ತಮ್ಮ ಕಾರ್ಯಾದಿಗಳನ್ನು ನಡೆಸುತ್ತಿರುವುವು. ಒಂದು ಹುಲ್ಲು ಕಡ್ಡಿಯು ಕೂಡ ಆ ಅತರ್ಕ್ಯಶಕ್ತಿಯ ಪ್ರೇರಣೆಯ ಹೊರತು ಚಲಿಸುತ್ತಿರುವುದಿಲ್ಲವೆಂಬ ತಿಳಿವಳಿಕೆಯು ಮನುಷ್ಯನ ಬುದ್ಧಿಯಲ್ಲಿ ಸ್ಥಿರವಾಗಿದ್ದರೆ, ಆಗ ಅವನ ಮನಸ್ಸಿನಲ್ಲಿ ಯಾವ ಭಾವನೆ ನಿರ್ಮಾಣವಾಗುವುದೋ ಅದಕ್ಕೆಯೇ ದೇವರು, ಈಶ್ವರ, ಶಿವಲಿಂಗ, ವಾಸುದೇವ, ಪರಬ್ರಹ್ಮವೆಂದು ಕರೆಯುತ್ತಾರೆ. ಈ ಭಕ್ತಿಭಾವಕ್ಕೆಯೇ ಈಶ್ವರ-ನಿಷ್ಠೆಯೆನ್ನುವರು.

ಕಾಮ, ಕ್ರೋಧ, ಲೋಭ, ಭಯ ಇತ್ಯಾದಿ ಭಾವನೆಗಳು ನೈಸರ್ಗಿಕವಾಗಿರುವಂತೆ, ಭಕ್ತಿಭಾವನೆಯು ನೈಸರ್ಗಿಕವಾಗಿರುವುದಿಲ್ಲ. ಸಣ್ಣ ಮಕ್ಕಳಲ್ಲಿ, ಅಸಂಸ್ಕೃತ ಜನದಲ್ಲಿ ಈ ಭಾವನೆಯು ಕಾಣುತ್ತಿರುವುದಿಲ್ಲ. ಮನುಷ್ಯನು ಹೇಗೆ ಹೇಗೆ ಜ್ಞಾನವಂತನಾಗುತ್ತ ಹೋಗುತ್ತಾನೆಯೊ ಹಾಗೆ ಹಾಗೆ, ಈ ಭಾವನೆಯು ಅವನ ಮನಸ್ಸಿನಲ್ಲಿ ಬೆಳೆಯುತ್ತ ಹೋಗುವುದು. ಜ್ಞಾನಶೂನ್ಯವಾದ ಭಕ್ತಿಯನ್ನಾಚರಿಸುವವನಲ್ಲಿ ಈ ಭಾವನೆಯು ಕಿಂಚಿನ್ಮಾತ್ರವಾಗಿ ತೋರಬಹುದು ಆದರೆ ಜ್ಞಾನವಂತನಲ್ಲಿ ಮಾತ್ರ ಜ್ಞಾನದ ಸಮಕಾಲದಲ್ಲಿಯೇ ಈ ಭಾವವು ತನ್ನಿಂದತಾನೇ ಉದಯವಾಗುವುದು. ಜ್ಞಾನಿ, ಪುರುಷನಿಗೆ ಭಕ್ತಿಯ ಬಾಹ್ಯಾಡಂಬರವನ್ನು ಬೆಳೆಸುವ ಆವಶ್ಯಕತೆಯು ತಿಲಮಾತ್ರವೂ ಇರುವುದಿಲ್ಲ.

ಭಕ್ತಿಭಾವದ ಪರಿಣಾಮ :

ಭಕ್ತಿಭಾವದ ಸುಪರಿಣಾಮವು ವ್ಯವಹಾರದಲ್ಲಿ ಅನೇಕ ಪ್ರಕಾರವಾಗಿ ತೋರುತ್ತಿದೆ. ಭಕ್ತಿಭಾವವು ದೈವೀಭಾವವಿರುವುದರಿಂದ, ಯಾರ ಮನಸ್ಸಿನಲ್ಲಿ ಇದು ಇರುವುದೋ ಅವರಲ್ಲಿ ಆಸುರೀ ಭಾವನೆಗಳು ಪ್ರವೇಶವಾಗಲು ಶಕ್ಯವಾಗುವುದಿಲ್ಲ. ಅನೇಕ ಯಂತ್ರಗಳಲ್ಲಿ ಬೇರೆ ಬೇರೆ ಚಕ್ರಗಳ ಗತಿಯನ್ನು ಸಮತೋಲ ಸ್ಥಿತಿಯಲ್ಲಿಡುವುದಕ್ಕಾಗಿ ಒಂದು ಸಮತೋಲಕ ಚಕ್ರ (ಬ್ಯಾಲನ್ಸ್ ವ್ಹೀಲ್) ಇರುವುದು. ಇದರಿಂದ ಎರಡನೆಯ ಚಕ್ರಗಳ ಗತಿಯು ಒಮ್ಮೆಲೆ ಹೆಚ್ಚು ಆಗುವುದಿಲ್ಲ; ಹಾಗೆಯೆ ಕಡಮೆಯೂ ಆಗುವುದಿಲ್ಲ ಹೀಗೆ ಸರ್ವಚಕ್ರಗಳ ಗತಿಯು ಯೋಗ್ಯವಾಗಿ ಸಮತೋಲವಾಗಿರುವಂತೆ, ಈ ಮನುಷ್ಯಶರೀರದಲ್ಲಿರುವ ಮನೋಮಯಯಂತ್ರವನ್ನು ಸಮ-ತೋಲವಾಗಿಡುವ ಬಹು ಮಹತ್ತ್ವವಾದ ಕಾರ್ಯವನ್ನು ಭಕ್ತಿಭಾವವು ಮಾಡುತ್ತದೆ. ಮನಸ್ಸಿನಲ್ಲಿ ಉತ್ಕಟವಾದ ಭಕ್ತಿಭಾವ, ವಿದ್ದದ್ದಾದರೆ, ಅನಿಷ್ಟ ಭಾವನೆಗಳು ಅಲ್ಲಿ ನಿಲ್ಲಲು ಸಾಧ್ಯವೇ ಇಲ್ಲ. ಇದು ವ್ಯವಹಾರದಲ್ಲಿ ನಮ್ಮೆಲ್ಲರ ಅನುಭವದ ವಿಷಯವಾಗಿರುವುದು. ಅಹಂಕಾರ, ಭೀತಿ, ದುಃಖ, ಕ್ರೋಧ, ದ್ವೇಷ, ಲೋಭ ಮತ್ಸರ ಇತ್ಯಾದಿ ಅನಿಷ್ಟ ಭಾವನೆಗಳು, ಭಕ್ತಿಭಾವಯುಕ್ತ ಪುರುಷನಲ್ಲಿ ಎಂದಿಗೂ ಕಾಣುವುದಿಲ್ಲ. ಹಾಗೂ ಆತನ ಮನಸ್ಸಿನ ಶಾಂತಿಯು ಕೂಡ ಭಂಗವಾಗುವುದಿಲ್ಲ.

ಯಾವ ಮನುಷ್ಯನ ಪರಿಸ್ಥಿತಿಯೇ ಆಗಲಿ, ಆಯುಷ್ಯದ ತುಂಬ ಒಂದೇ ರೀತಿಯಾಗಿರಲು ಸಾಧ್ಯವಿಲ್ಲ. ಪ್ರತಿಯೊಬ್ಬನ ಸ್ಥಿತಿಯೂ ಕಾಲಮಾನಕ್ಕನುಸರಿಸಿ ಬದಲಾವಣೆಯಾಗುತ್ತಿರುತ್ತದೆ.

ಉರ್ಜಿತ ಕಾಲವು ಬಂದಾಗ, ಮನಸ್ಸಿನಂತೆ ಎಲ್ಲವೂ ಸಾಧಿಸುತ್ತ ಹೋಗುತ್ತದೆ. ಆ ಕಾಲದಲ್ಲಿ ಮಣ್ಣು ಹಿಡಿದರೂ ಹೊನ್ನಾಗುತ್ತದೆ ಅದೇ ಅವನತಿಕಾಲವು ಪ್ರಾರಂಭವಾದರೆ, ಸಂಕಟಗಳು ಅಥ ಆತಂಕಗಳು ಕೈಕೊಳಕೊಂಡು ಬೆನ್ನುಹತ್ತುತ್ತವೆ. ಆ ಕಾಲದಲ್ಲ ಹೊನ್ನು ಹಿಡಿದರೂ ಮಣ್ಣಾಗಿ ತೋರುವುದು. ಈ ಎರಡೂ ಸ್ಥಿ ಗಳಲ್ಲಿ ಸಾಮಾನ್ಯಮನುಷ್ಯನ ಇರುವಿಕೆಯು ತೀರ ಭಿನ್ನವಾಗಿರುತ್ತದೆ.

ಸಾಮಾನ್ಯ ಮನುಷ್ಯನು ತನ್ನ ಏಳಿಗೆಯ ಕಾಲದಲ್ಲಿ, ಎಲ್ಲವ ತನ್ನ ಪ್ರಯತ್ನ ಹಾಗೂ ಸಾಹಸದಿಂದಲೇ ಸಾಧಿಸುತ್ತಿರುವುದೆಂ ಅಹಂಕಾರದ ಮಾತುಗಳನ್ನೇ ಆಡುತ್ತಿರುತ್ತಾನೆ. ತನ್ನ ಯಶಸ್ಸಿನಲ್ಲ ಪರಿಸ್ಥಿತಿಯ ಹಾಗು ಪರರಿಂದ ದೊರೆತ ಸಹಕಾರದ ಭಾಗವು ಕೆ ಪಟ್ಟಿಗಾದರೂ ಇದೆ-ಎಂಬ ಎಚ್ಚರಿಕೆಯು ಕಿಂಚಿನ್ಮಾತ್ರವಾದರು ಆತನಿಗಿರುವುದಿಲ್ಲ, ಈ ಅಹಂಕಾರದ ಭಾವನೆಯನ್ನು ಸಕಾಲದಲ್ಲ ತಡೆಯುವುದಾಗದಿದ್ದರೆ, ಮನುಷ್ಯನ ಸಮತೋಲಸ್ಥಿತಿಯು ನಷ್ಟ ನಾಗಲಿಕ್ಕೆ ಬಹಳ ವೇಳೆ ಹಿಡಿಯುವುದಿಲ್ಲ. ಉನ್ನತಿಯ ಪರಿಸ್ಥಿ ಯಲ್ಲಿ ಅಹಂಕಾರದಿಂದ ಮದೋನ್ಮತ್ತರಾಗದ ಮನುಷ್ಯರು ವಿರ ವಾಗಿರುತ್ತಾರೆ. ಆದ್ದರಿಂದಲೇ ಉನ್ನತಿಯ ನಂತರ ಅವನತಿಗೆ ಹೋ ಉದಾಹರಣೆಗಳು ಪ್ರಪಂಚದ ಇತಿಹಾಸದಲ್ಲಿ ಹೇರಳವಾಗಿ ದೊ ಯುತ್ತವೆ.

ತಾರಕಾಸುರ, ರಾವಣ, ಕಂಸ, ಕೌರವಾದಿಗಳ ಪುರಾಣ ಕಾಲದ ಉದಾಹರಣೆಗಳು; ಆಧುನಿಕ ಕಾಲದ ನೇಪೊಲಿಯನ್, ಕೈಸರ್, ಹಿಟ್ಲರ್, ಮುಸೊಲಿನಿ ಮೊದಲಾದವರ ಉದಾಹರಣೆಗಳು ಅಹಂಕಾರ ದಿಂದ ಮೈಮರೆತು ಅಧೋಗತಿಗೆ ಹೋದ ಪುರುಷರುಗಳವಾಗಿರುತ್ತವೆ.

ಯಾವಾತನ ಮನಸ್ಸಿನಲ್ಲಿ ನಿಜವಾದ ಭಕ್ತಿಭಾವವು ಜಾಗೃತ ವಾಗಿರುವುದೋ, ಅವನಿಗೆ ಸರ್ವದರ ಕರ್ತೃ-ಕಾರಣ ಪರಮಾತ್ಮನೇ ಇದ್ದಾನೆಂಬ ವಿಷಯವು ಸದಾ ಮನದಲ್ಲಿ ಸ್ಥಿರವಾಗಿದ್ದು, ದೇವರ ಕೃಪೆಯಿಂದಲೇ ನನಗೆ ಉನ್ನತ ಸ್ಥಿತಿಯು ಲಭಿಸಿರುವುದೆಂದು ನಿಶ್ಚ ಯಿಸಿ, ದೇವರಿಗೆ ಧನ್ಯವಾದಗಳನ್ನರ್ಪಿಸುತ್ತಾನೆ ಧನ, ಕೀರ್ತಿ, ಮಾನ, ಮರ್ಯಾದೆಗಳು ದೊರೆತಾಗ, ತನ್ನ ಕರ್ತೃತ್ವಕ್ಕಿಂತಲೂ ದೇವರ ಕೃಪೆಯೇ ವಿಶೇಷಕಾರಣವಾಗಿರುವುದೆಂಬ ಎನಿಸಿಕೆಯು ಸದಾ ಆತನ ಮನಸ್ಸಿನಲ್ಲಿರುವುದರಿಂದ, ಆತನು ಗರ್ವ-ಅಹಂಕಾರಾ ದಿಗಳಿಂದ ಉನ್ಮತ್ತನಾಗದೆ, ನಮ್ರ-ವಿನಯ-ಸೌಜನ್ಯ-ಔದಾರ್ಯ ಸಹಾನುಭೂತಿ ಮೊದಲಾದ ಉಚ್ಚಗುಣಗಳಿಂದ ಕೂಡಿದವನಾಗಿರುತ್ತಾನೆ.

ಕರ್ಮ ಮಾಡುವುದು. ನಮ್ಮ ಕೈಯಲ್ಲಿದೆ; ಆದರೆ ಅದರ ಫಲ ದೊರೆಯುವುದು. ದೇವರ ಕೈಯಲ್ಲಿದೆ. (ಗೀತಾ ೨-೪೭) ಎಂಬ ಭಾವನೆಯು ಜಾಗೃತವಾಗಿದ್ದುದಾದರೆ ಫಲಾಸಕ್ತಿ, ಅಹಂ ಕಾರ, ಪರಪೀಡಕವೃತ್ತಿ ಮೊದಲಾದ ಅನಿಷ್ಟಭಾವನೆಗಳು ತಲೆ

ಯೆತ್ತುವುದಿಲ್ಲ. **ಪರರಿಂದ ದೊರೆತ** ಸಹಾಯದ ಬಗೆಗೆ ಕೃತಜ್ಞನಾಗುವನು. **ಅವನ ವರ್ತನೆಯು ಸೌಜನ್ಯಯುಕ್ತವಾಗಿರುವುದರಿಂದ, ಇತರ**ರಿಂದಲೂ **ಶಕ್ಯವಾದ ಮಟ್ಟಿಗೆ** ಸಹಕಾರವು ದೊರೆಯಹತ್ತುವುದು. ಆತನ **ಕಾರ್ಯದಲ್ಲಿ ಇತರರಿಂದ** ಅಡ್ಡ–ಆತಂಕಗಳು ಸಹಸಾ ಒದಗುತ್ತಿರುವುದಿಲ್ಲ. **ಈ ಕಾರಣಗಳಿಂದ** ಅವನ ಉನ್ನತಿಯು ಉತ್ತರೋತ್ತರ ಅಭಿವೃದ್ಧಿಯಾಗುತ್ತ ನಡೆಯುವುದು.

ಉನ್ನತಿಯ ಕಾಲದಲ್ಲಿ ಉನ್ಮತ್ತನಾಗದಂತೆಯೂ ಆಪತ್ತಿನ ಕಾಲದಲ್ಲಿ ಅಂಜುಗುಳಿಯಾಗದಂತೆಯೂ ಮಾಡಿ, ಧೈರ್ಯ ಸ್ಥೈರ್ಯ-ಶಾಂತ್ಯಾದಿಗಳನ್ನು ಕೊಟ್ಟು, ಮಾನವನ ಉತ್ಸಾಹವನ್ನು ಹೆಚ್ಚಿಸುವಲ್ಲಿ ಭಕ್ತಿಭಾವದಂಥ ರಾಮಬಾಣ ಔಷಧವು ಮತ್ತೊಂದಿಲ್ಲವೆಂದು ನಿಶ್ಚಯದಿಂದ **ಹೇಳಬಹುದು.**

ಭಕ್ತಿಭಾವಶೂನ್ಯನಾದ ಮನುಷ್ಯನು, ತನ್ನ ಉರ್ಜಿತಾವಸ್ಥೆಯಲ್ಲಿ **ಅಹಂಕಾರದಿಂದ ವರ್ತಿಸುತ್ತಿರುವ**ದರಿಂದ, ಅವನು ಒಮ್ಮೆಲ್ಲೊಮ್ಮೆ ನಿಶ್ಚಯವಾಗಿ ಕೆಳಗೆ ಬೀಳಲೇ ಬೇಕು. ಆ ಕಾಲದಲ್ಲಿ ಜನರ ಸಹಾನುಭೂತಿಯೂ ದೊರೆಯದ್ದರಿಂದ, ಸಹಕಾರ ಸಿಗದ್ದರಿಂದ, ಆತನ **ಸ್ಥಿತಿಯು** ಅತ್ಯಂತ ಹೀನ–ದೀನತೆಯಿಂದ, ಕೂಡಿದ್ದಾಗಿರುವುದು.

ಭಕ್ತಿಭಾವದಿಂದ ಕೂಡಿದ ಪುರುಷನು ಆಪತ್ತಿಗೆ ಅಂಜುವುದಿಲ್ಲ. ಸಂಕಟಗಳಿಗೆ ಬಗ್ಗುವುದಿಲ್ಲ. ಅತ್ಯಂತ ನಿರಾಶಾಜನಕ ಸ್ಥಿತಿಯಲ್ಲಿ ಕೂಡ ಧೈರ್ಯದಿಂದ ಉತ್ಸಾಹದಿಂದ ದೃಢನಿಶ್ಚಯದಿಂದ ಪ್ರಯತ್ನ ಮಾಡುತ್ತಿರುವುದರಿಂದ, ಬಡ್ಡ ಚೆಂಡು ಪುಟಿಯುವಂತೆ, ಅವನತಿ ಬಂದಿದೆಯನ್ನುವಷ್ಟರಲ್ಲಿಯೆ ಪುನಃ ಉನ್ನತಿಯ ಮಾರ್ಗದಲ್ಲಿರುವವನಾಗುತ್ತಾನೆ. ಯಾವ ಅನಿಷ್ಟ ಘಟನೆಯೊದಗಿದರೂ, ಅದರಿಂದೆ ದೇವನ ಏನಾದರೊಂದು ಉದ್ದೇಶವಿರಬಹುದೆಂದು ತಿಳಿದು ಸಮಾಧಾನಿಯಾಗಿರುತ್ತಾನೆ. ಆ ಘಟನೆಯನ್ನು ಬದಲಿಸಲು ಬರುತ್ತಿದ್ದರೆ, ಈಶ್ವರೇಚ್ಛೆಯೆಂದು ಬಂದುದನ್ನು ಶಾಂತರೀತಿಯಿಂದ ಸಹನೆ ಮಾಡಿಕೊಳ್ಳುವನು. ಇದರಿಂದ ಅವನ ಮನಸ್ಸು ಸಂಪತ್ತು ಹಾಗು ವಿಪತ್ತು ಈ ಎರಡು ಕಾಲಗಳಲ್ಲಿಯೂ ಸ್ಥಿರವಾಗಿದ್ದು, ಸಂಕಟಗಳ ತೀವ್ರತೆಯನ್ನು ಸಹಿಸುವ ಶಕ್ತಿಯುಳ್ಳದ್ದಾಗುವುದು.

ಭಕ್ತಿಭಾವಶೂನ್ಯನಾದವನ ಸ್ಥಿತಿಯು ಉರ್ಜಿತಕಾಲದಲ್ಲಿ ಉನ್ಮತ್ತತನದ್ದಾಗಿದ್ದರೆ. ಆಪತ್ತಿನ ಸ್ಥಿತಿಯಲ್ಲಿ ಅಧೀರವೃತ್ತಿಯುಳ್ಳದ್ದಾಗಿರುವುದು. **ಆಪ್ತಹಾನಿ,** ಧನಹಾನಿ, ಮಾನಹಾನಿ, ಆರೋಗ್ಯಹಾನಿ ಮೊದಲಾದ **ಸಂಕಟಗಳ ಚಕ್ರದಲ್ಲಿ** ಸಿಕ್ಕನೆಂದರೆ, ಮೊದಲಿನ ಸೊಕ್ಕು ಸೊಕ್ಕುಗಳು ಮಾಯವಾಗಿ, ಬಹು ಅಂಜುಬುರುಕ ಹಾಗೂ ಹೇಡಿಯಾಗಿ, ಬಂದ ಸಂಕಟಗಳಿಗೆ ಎದೆಗೊಟ್ಟು ನಿಲ್ಲುವ ಧೈರ್ಯವಿಲ್ಲದವನಾಗುವನು. **ಈ ಕಾರಣದಿಂದಲೇ** ಯೋಗ್ಯ ದಿಶೆಯಲ್ಲಿ ಪ್ರಯತ್ನ ಮಾಡುವುದಾಗದೆ, ಸಿಕ್ಕ ಕಡೆಗೆ ಓಡಾಡುತ್ತಾನೆ. ಇಲ್ಲವೆ ಪ್ರಯತ್ನವನ್ನೇ ಮಾಡದೆ, ಹತಾಶನಾಗಿ ಸ್ವಸ್ಥ ಕೂಡ್ರುತ್ತಾನೆ ಹೀಗಾಗಿ ಅವನ ಕೆಟ್ಟ ಪರಿಸ್ಥಿತಿಯು ಸುಧಾರಿಸುವ ಬದಲು ಮತ್ತಷ್ಟು ಕೆಡುವುದಕ್ಕೆಯೇ **ಕಾರಣವಾಗುತ್ತದೆ.**

ಅಂಧ ಪರಂಪರೆಯ ಭಕ್ತಿಭಾವವು :

ನಿಜವಾದ ಭಕ್ತಿಭಾವ ಮತ್ತು ವ್ಯವಹಾರದಲ್ಲಿ ಕಾಣುವ ಬಹುಜನರ ಅಂಧಪರಂಪರೆಯ ಭಕ್ತಿಭಾವ ಇವುಗಳಲ್ಲಿ ಮಹದಂತರವಿದೆ. ಅಭ್ಯಾಸವನ್ನು ಮಾಡದೆ, ಕೇವಲ ದೇವರ ಗುಡಿಗೆ ನಿತ್ಯ ಹೋಗಿ ನಮಸ್ಕಾರ ಮಾಡಿ ಬಂದು ಪರೀಕ್ಷೆಯಲ್ಲಿ ಉತ್ತೀರ್ಣನಾಗಬೇಕೆಂಬ ವಿದ್ಯಾರ್ಥಿಯು; ಧನಪ್ರಾಪ್ತಿಗಾಗಿ ಯಾವ ಪರಿಶ್ರಮವನ್ನೂ ಮಾಡದೆ ಕೇವಲ ವರದಶಂಕರ—ಸತ್ಯನಾರಾಯಣರ ಪೂಜೆಯನ್ನು ಮಾಡಿ ಶ್ರೀಮಂತನಾಗಬೇಕೆಂಬ ಅರ್ಥಾರ್ಥಿಯು; ನಿಸರ್ಗನಿಯಮಕ್ಕನುಸರಿಸಿ ನಡೆಯದೆ ಮತ್ತು ಯೋಗ್ಯವಾದ ಔಷಧೋಪಚಾರ ಮಾಡಿಕೊಳ್ಳದೆ ಕೇವಲ ದೇವರ ತೀರ್ಥ, ಪ್ರಸಾದದಿಂದಲೇ ಆರೋಗ್ಯವಂತನಾಗಬೇಕೆಂಬ ಆರೋಗ್ಯಾರ್ಥಿಯು; ವೈರಿಗಳ ನಿಗ್ರಹಾರ್ಥವಾಗಿ ಸಾಮ-ದಾನ-ಭೇದ-ದಂಡಗಳ ಯೋಜನೆ ಮಾಡದೆ, ಕೇವಲ ರುದ್ರಾಭಿಷೇಕಾದಿ ಷೋಡಶ ಉಪಚಾರಗಳಿಂದಲೇ ವೈರಿಗಳನ್ನು ಗೆಲ್ಲಬೇಕೆಂಬ ರಾಜಕಾರಣಿಯು; ಈಶ್ವರೀನಿಯಮಗಳನ್ನು ಕುರಿತು ಸತತವಾಗಿ ಸಂಶೋಧನೆಗಳನ್ನು ನಡೆಸದೆ, ಕೇವಲ ಜಪಾನುಷ್ಠಾನಗಳಿಂದಲೇ ಜ್ಞಾನಪ್ರಾಪ್ತಿ ಮಾಡಿಕೊಳ್ಳಬೇಕೆಂಬ ತಪಸ್ವಿಯು—ಇವರೆಲ್ಲರ ಭಕ್ತಿಭಾವವು ನಿಜವಾದದ್ದಿರದೆ ಅಜ್ಞಾನಮೂಲಕವಾಗಿದ್ದು ಕೇವಲ ಅಂಧಾನುಕರಣವುಳ್ಳದ್ದಾಗಿರುತ್ತದೆ.

ಷೋಡಶೋಪಚಾರದ ಪೂಜಾಸಾಹಿತ್ಯ, ದೀಪದ ಪ್ರಕಾಶ, ಧೂಪದ ಸುಗಂಧ, ವಾದ್ಯಗಳ ಮಂಜುಳಸ್ವರ, ಅನೇಕ ವಿಧದ ನೈವೇದ್ಯಗಳು, ಪುಸ್ತಕಗಳ ಅರ್ಥಶೂನ್ಯವಾದ ಪಾಠ, ಭಾವವಿಲ್ಲದ ಅಖಂಡ ನಾಮಸ್ಮರಣೆ —ಇತ್ಯಾದಿಗಳಿಂದ ದೇವರು ಪ್ರಸನ್ನನಾಗಿ. ಭಕ್ತರ ಇಚ್ಛಾನುಸಾರವಾಗಿ ನಡೆಯುತ್ತಾ ನಿಸರ್ಗವಿರುದ್ಧವಾದ ಕಾರ್ಯಗಳನ್ನು ಸಹ ಮಾಡುತ್ತಾನೆಂದು ನಂಬುವುದು ಸಾಂಪ್ರದಾಯಿಕವಾದ ಭಕ್ತಿಭಾವವಾಗಿದೆ. ನಿಸರ್ಗವೆಂದರೆ ಈಶ್ವರೀನಿಯಮವೇ ಆಗಿದೆ. ಈಶ್ವರ ಭಕ್ತಿ ಮಾಡುವುದರಿಂದ ಭಕ್ತನ ಹಿತಕ್ಕಾಗಿ ಆ ನಿಯಮದ ವಿರುದ್ಧವಾದ ಸಂಗತಿಗಳನ್ನುಂಟು ಮಾಡುವನೆಂದು ತಿಳಿಯುವುದು ಶುದ್ಧ ಅಜ್ಞಾನದ ಲಕ್ಷಣವಾಗಿದೆ. ನಿಜವಾದ ಭಕ್ತಿಭಾವದಿಂದ ಕೂಡಿದ ಜ್ಞಾನಿ ಮನುಷ್ಯನು, ಇಂಥ ಹುಚ್ಚುತನದ ಅಪೇಕ್ಷೆಯನ್ನೆಂದಿಗೂ ಮಾಡುವುದಿಲ್ಲ, ಅವನು ತನ್ನ ವರ್ತನೆಯನ್ನು ಯಾವಾಗಲೂ ನಿಸರ್ಗನಿಯಮಕ್ಕನುಸರಿಸಿಯೆ ನಡೆಯಿಸಿಕೊಂಡು ಹೋಗುತ್ತಾನೆ.

ಸಾಂಪ್ರದಾಯಿಕ ಭಕ್ತಿಭಾವವು ಎಷ್ಟೇ ಉತ್ಕಟವಾಗಿದ್ದರೂ ಅದು ಕೃತ್ರಿಮವಿದ್ದು, ಕ್ಷಣಕಾಲ ಅಮಲನ್ನುಂಟುಮಾಡುವ ಮಾದಕ ಪದಾರ್ಥದಂತಿರುತ್ತದೆ. ಪ್ರಯುಕ್ತ ಅದು ವಸ್ತುತಃ ಅಪಾಯಕಾರಕವೇ ಇರುವುದು. ಕೇವಲ ಭಜನೆ-ಪೂಜಾದಿಗಳಿಂದಲೇ ತನ್ನ ಮನಸ್ಸಿನಂತೆ ಎಲ್ಲ ಕಾರ್ಯಗಳನ್ನೂ ದೇವರು ಮಾಡಿಕೊಡುವನೆಂಬ ಭಾವನೆಯು ಯಾವಾತನ ಮನಸ್ಸಿನಲ್ಲಿರುವುದೋ, ಅವನು ವ್ಯವಹಾರ

(೩೩೩ ನೆಯ ಪುಟ ನೋಡಿರಿ)

ತಮ್ಮ ಕಾರ್ಯಾದಿಗಳನ್ನು ಮಾಡುತ್ತಿರುವುವು. ಒಂದು ಹುಲ್ಲು ಕಡ್ಡಿಯು ಕೂಡ ಆ ಅತರ್ಕ್ಯಶಕ್ತಿಯ ಪ್ರೇರಣೆಯ ಹೊರತು ಚಲಿಸುತ್ತಿರುವುದಿಲ್ಲವೆಂಬ ತಿಳಿವಳಿಕೆಯು ಮನುಷ್ಯನ ಬುದ್ಧಿಯಲ್ಲಿ ಸ್ಥಿರವಾಗಿದ್ದರೆ, ಆಗ ಅವನ ಮನಸ್ಸಿನಲ್ಲಿ ಯಾವ ಭಾವನೆ ನಿರ್ಮಾಣವಾಗುವುದೋ ಅದಕ್ಕೆಯೇ ದೇವರು, ಈಶ್ವರ, ಶಿವಲಿಂಗ. ವಾಸುದೇವ, ಪರಬ್ರಹ್ಮವೆಂದು ಕರೆಯುತ್ತಾರೆ. ಈ ಭಕ್ತಿಭಾವಕ್ಕೆಯೇ ಈಶ್ವರ-ನಿಷ್ಠೆಯೆನ್ನುವರು.

ಕಾಮ, ಕ್ರೋಧ, ಲೋಭ, ಭಯ ಇತ್ಯಾದಿ ಭಾವನೆಗಳು ನೈಸರ್ಗಿಕವಾಗಿರುವಂತೆ,ಭಕ್ತಿಭಾವನೆಯು ನೈಸರ್ಗಿಕವಾಗಿರುವುದಿಲ್ಲ. ಸಣ್ಣ ಮಕ್ಕಳಲ್ಲಿ, ಅಸಂಸ್ಕೃತ ಜನದಲ್ಲಿ ಈ ಭಾವನೆಯು ಕಾಣುತ್ತಿರುವುದಿಲ್ಲ. ಮನುಷ್ಯನು ಹೇಗೆ ಹೇಗೆ ಜ್ಞಾನವಂತನಾಗುತ್ತ ಹೋಗುತ್ತಾನೆಯೊ ಹಾಗೆ ಹಾಗೆ, ಈ ಭಾವನೆಯು ಅವನ ಮನಸ್ಸಿನಲ್ಲಿ ಬೆಳೆಯುತ್ತ ಹೋಗುವುದು. ಜ್ಞಾನಶೂನ್ಯವಾದ ಭಕ್ತಿಯನ್ನಾಚರಿಸುವವನಲ್ಲಿ ಈ ಭಾವನೆಯು ಕಿಂಚಿನ್ಮಾತ್ರವಾಗಿ ತೋರಬಹುದು ಆದರೆ ಜ್ಞಾನವಂತನಲ್ಲಿ ಮಾತ್ರ ಜ್ಞಾನದ ಸಮಕಾಲದಲ್ಲಿಯೇ ಈ ಭಾವವು ತನ್ನಿಂದತಾನೇ ಉದಯವಾಗುವುದು. ಜ್ಞಾನಿ, ಪುರುಷನಿಗೆ ಭಕ್ತಿಯ ಬಾಹ್ಯಾಡಂಬರವನ್ನು ಬೆಳೆಸುವ ಆವಶ್ಯಕತೆಯು ತಿಲಮಾತ್ರವೂ ಇರುವುದಿಲ್ಲ.

ಭಕ್ತಿಭಾವದ ಪರಿಣಾಮ:

ಭಕ್ತಿಭಾವದ ಸುಪರಿಣಾಮವು ವ್ಯವಹಾರದಲ್ಲಿ ಅನೇಕ ಪ್ರಕಾರವಾಗಿ ತೋರುತ್ತಿದೆ. ಭಕ್ತಿಭಾವವು ದೈವೀಭಾವವಿರುವುದರಿಂದ, ಯಾರ ಮನಸ್ಸಿನಲ್ಲಿ ಇದು ಇರುವುದೋ ಅವರಲ್ಲಿ ಆಸುರೀ ಭಾವನೆಗಳು ಪ್ರವೇಶವಾಗಲು ಶಕ್ಯವಾಗುವುದಿಲ್ಲ. ಅನೇಕ ಯಂತ್ರಗಳಲ್ಲಿ ಬೇರೆ ಬೇರೆ ಚಕ್ರಗಳ ಗತಿಯನ್ನು ಸಮತೋಲ ಸ್ಥಿತಿಯಲ್ಲಿಡುವುದಕ್ಕಾಗಿ ಒಂದು ಸಮತೋಲಕ ಚಕ್ರ (ಬ್ಯಾಲನ್ಸ್ ವ್ಹೀಲ್) ಇರುವುದು. ಇದರಿಂದ ಎರಡನೆಯ ಚಕ್ರಗಳ ಗತಿಯು ಒಮ್ಮೆಲೆ ಹೆಚ್ಚು ಆಗುವುದಿಲ್ಲ; ಹಾಗೆಯೆ ಕಡಮೆಯೂ ಆಗುವುದಿಲ್ಲ ಹೀಗೆ ಸರ್ವಚಕ್ರಗಳ ಗತಿಯು ಯೋಗ್ಯವಾಗಿ ಸಮತೋಲವಾಗಿರುವಂತೆ, ಈ ಮನುಷ್ಯಶರೀರದಲ್ಲಿರುವ ಮನೋಮಯಯಂತ್ರವನ್ನು ಸಮತೋಲವಾಗಿಡುವ ಬಹು ಮಹತ್ತ್ವವಾದ ಕಾರ್ಯವನ್ನು ಭಕ್ತಿಭಾವವು ಮಾಡುತ್ತದೆ. ಮನಸ್ಸಿನಲ್ಲಿ ಉತ್ಕಟವಾದ ಭಕ್ತಿಭಾವ, ವಿದ್ದದ್ದಾದರೆ, ಅನಿಷ್ಟ ಭಾವನೆಗಳು ಅಲ್ಲಿ ನಿಲ್ಲಲು ಸಾಧ್ಯವೇ ಇಲ್ಲ. ಇದು ವ್ಯವಹಾರದಲ್ಲಿ ನಮ್ಮೆಲ್ಲರ ಅನುಭವದ ವಿಷಯವಾಗಿರುವುದು. ಅಹಂಕಾರ, ಭೀತಿ, ದುಃಖ, ಕ್ರೋಧ, ದ್ವೇಷ, ಲೋಭ ಮತ್ಸರ ಇತ್ಯಾದಿ ಅನಿಷ್ಟ ಭಾವನೆಗಳು, ಭಕ್ತಿಭಾವಯುಕ್ತ ಪುರುಷನಲ್ಲಿ ಎಂದಿಗೂ ಕಾಣುವುದಿಲ್ಲ. ಹಾಗೂ ಆತನ ಮನಸ್ಸಿನ ಶಾಂತಿಯು ಕೂಡ ಭಂಗವಾಗುವುದಿಲ್ಲ.

ಯಾವ ಮನುಷ್ಯನ ಪರಿಸ್ಥಿತಿಯೇ ಆಗಲಿ, ಆಯುಷ್ಯದ ತುಂಬ ಒಂದೇ ರೀತಿಯಾಗಿರಲು ಸಾಧ್ಯವಿಲ್ಲ. ಪ್ರತಿಯೊಬ್ಬನ ಸ್ಥಿತಿಯೂ ಕಾಲಮಾನಕ್ಕನುಸರಿಸಿ ಬದಲಾವಣೆಯಾಗುತ್ತಿರುತ್ತದೆ.

ಊರ್ಜಿತ ಕಾಲವು ಬಂದಾಗ, ಮನಸ್ಸಿನಂತೆ ಎಲ್ಲವೂ ಸಾಧಿಸುತ್ತ ಹೋಗುತ್ತದೆ. ಆ ಕಾಲದಲ್ಲಿ ಮಣ್ಣು ಹಿಡಿದರೂ ಹೊನ್ನಾಗುತ್ತದೆ ಅದೇ ಅವನತಿಕಾಲವು ಪ್ರಾರಂಭವಾದರೆ, ಸಂಕಟಗಳು ಅಡ್ಡಿ ಆತಂಕಗಳು ಕೈತೊಳಕೊಂಡು ಬೆನ್ನುಹತ್ತುತ್ತವೆ. ಆ ಕಾಲದಲ್ಲಿ ಹೊನ್ನು ಹಿಡಿದರೂ ಮಣ್ಣಾಗಿ ತೋರುವುದು. ಈ ಎರಡೂ ಸ್ಥಿತಿಗಳಲ್ಲಿ ಸಾಮಾನ್ಯಮನುಷ್ಯನ ಇರುವಿಕೆಯು ತೀರ ಭಿನ್ನವಾಗಿರುತ್ತದೆ.

ಸಾಮಾನ್ಯ ಮನುಷ್ಯನು ತನ್ನ ಏಳಿಗೆಯ ಕಾಲದಲ್ಲಿ, ಎಲ್ಲವೂ ತನ್ನ ಪ್ರಯತ್ನ ಹಾಗೂ ಸಾಹಸದಿಂದಲೇ ಸಾಧಿಸುತ್ತಿರುವುದೆಂಬ ಅಹಂಕಾರದ ಮಾತುಗಳನ್ನೇ ಆಡುತ್ತಿರುತ್ತಾನೆ. ತನ್ನ ಯಶಸ್ಸಿನಲ್ಲಿ ಪರಿಸ್ಥಿತಿಯ ಹಾಗು ಪರರಿಂದ ದೊರೆತ ಸಹಕಾರದ ಭಾಗವು ಕೇವಲ ಮಟ್ಟಿಗಾದರೂ ಇದೆ–ಎಂಬ ಎಚ್ಚರಿಕೆಯು ಕಿಂಚಿನ್ಮಾತ್ರವಾದರೂ ಆತನಿಗಿರುವುದಿಲ್ಲ, ಈ ಅಹಂಕಾರದ ಭಾವನೆಯನ್ನು ಸಕಾಲದಲ್ಲಿ ತಡೆಯುವುದಾಗದಿದ್ದರೆ, ಮನುಷ್ಯನ ಸಮತೋಲಸ್ಥಿತಿಯು ನಷ್ಟವಾಗಲಿಕ್ಕೆ ಬಹಳ ವೇಳೆ ಹಿಡಿಯುವುದಿಲ್ಲ. ಉನ್ನತಿಯ ಪರಿಸ್ಥಿತಿಯಲ್ಲಿ ಅಹಂಕಾರದಿಂದ ಮದೋನ್ಮತ್ತರಾಗದ ಮನುಷ್ಯರು ವಿರಳವಾಗಿರುತ್ತಾರೆ. ಆದ್ದರಿಂದಲೇ ಉನ್ನತಿಯ ನಂತರ ಅವನತಿಗೆ ಹೋದ ಉದಾಹರಣೆಗಳು ಪ್ರಪಂಚದ ಇತಿಹಾಸದಲ್ಲಿ ಹೇರಳವಾಗಿ ದೊರೆಯುತ್ತವೆ.

ತಾರಕಾಸುರ, ರಾವಣ, ಕಂಸ, ಕೌರವಾದಿಗಳ ಪುರಾಣ ಕಾಲದ ಉದಾಹರಣೆಗಳು;ಆಧುನಿಕ ಕಾಲದ ನೇಪೋಲಿಯನ್ ಕೈಸರ್ ಹಿಟ್ಲರ್, ಮುಸೋಲಿನಿ ಮೊದಲಾದವರ ಉದಾಹರಣೆಗಳು ಅಹಂಕಾರದಿಂದ ಮೈಮರೆತು ಅಧೋಗತಿಗೆ ಹೋದ ಪುರುಷರುಗಳವಾಗಿರುತ್ತವೆ.

ಯಾವಾತನ ಮನಸ್ಸಿನಲ್ಲಿ ನಿಜವಾದ ಭಕ್ತಿಭಾವವು ಜಾಗೃತವಾಗಿರುವುದೋ, ಅವನಿಗೆ ಸರ್ವದರ ಕರ್ತೃ-ಕಾರಣ ಪರಮಾತ್ಮನೇ ಇದ್ದಾನೆಂಬ ವಿಷಯವು ಸದಾ ಮನದಲ್ಲಿ ಸ್ಥಿರವಾಗಿದ್ದು, ದೇವರ ಕೃಪೆಯಿಂದಲೇ ನನಗೆ ಉನ್ನತ ಸ್ಥಿತಿಯು ಲಭಿಸಿರುವುದೆಂದು ನಿಶ್ಚಯಿಸಿ, ದೇವರಿಗೆ ಧನ್ಯವಾದಗಳನ್ನರ್ಪಿಸುತ್ತಾನೆ. ಧನ, ಕೀರ್ತಿ, ಮಾನ, ಮರ್ಯಾದೆಗಳು ದೊರೆತಾಗ, ತನ್ನ ಕರ್ತೃತ್ವಕ್ಕಿಂತಲೂ ದೇವರ ಕೃಪೆಯೇ ವಿಶೇಷಕಾರಣವಾಗಿರುವುದೆಂಬ ಎನಿಸಿಕೆಯು ಸದಾ ಆತನ ಮನಸ್ಸಿನಲ್ಲಿರುವುದರಿಂದ, ಆತನು ಗರ್ವ–ಅಹಂಕಾರಾದಿಗಳಿಂದ ಉನ್ಮತ್ತನಾಗದೆ, ನಯ–ವಿನಯ-ಸೌಜನ್ಯ–ಔದಾರ್ಯ ಸಹಾನುಭೂತಿ ಮೊದಲಾದ ಉಚ್ಚಗುಣಗಳಿಂದ ಕೂಡಿದವನಾಗಿರುತ್ತಾನೆ.

ಕರ್ಮ ಮಾಡುವುದು. ನಮ್ಮ ಕೈಯಲ್ಲಿದೆ; ಆದರೆ ಅದರ ಫಲ ದೊರೆಯುವುದು. ದೇವರ ಕೈಯಲ್ಲಿದೆ. (ಗೀತಾ ೨-೪೭) ಎಂಬ ಭಾವನೆಯು ಜಾಗೃತವಾಗಿದ್ದುದಾದರೆ ಫಲಾಸಕ್ತಿ, ಅಹಂಕಾರ, ಪರಪೀಡಕಪ್ರವೃತ್ತಿ ಮೊದಲಾದ ಅನಿಷ್ಟಭಾವನೆಗಳು ತಲೆ-

ಯೆತ್ತುವುದಿಲ್ಲ. ಪರರಿಂದ ದೊರೆತ ಸಹಾಯದ ಬಗೆಗೆ ಕೃತಜ್ಞನಾಗುವನು. ಅವನ ವರ್ತನೆಯು ಸೌಜನ್ಯಯುಕ್ತವಾಗಿರುವುದರಿಂದ, ಇತರರಿಂದಲೂ ಶಕ್ಯವಾದ ಮಟ್ಟಿಗೆ ಸಹಕಾರವು ದೊರೆಯಹತ್ತುವುದು. ಆತನ ಕಾರ್ಯದಲ್ಲಿ ಇತರರಿಂದ ಅಡ್ಡ-ಆತಂಕಗಳು ಸಹಸಾ ಒದಗುತ್ತಿರುವುದಿಲ್ಲ. ಈ ಕಾರಣಗಳಿಂದ ಅವನ ಉನ್ನತಿಯು ಉತ್ತರೋತ್ತರ ಅಭಿವೃದ್ಧಿಯಾಗುತ್ತ ನಡೆಯುವುದು.

ಉನ್ನತಿಯ ಕಾಲದಲ್ಲಿ ಉನ್ಮತ್ತನಾಗದಂತೆಯೂ ಆಪತ್ತಿನ ಕಾಲದಲ್ಲಿ ಅಂಜುಗುಳಿಯಾಗದಂತೆಯೂ ಮಾಡಿ, ಧೈರ್ಯ ಸ್ಥೈರ್ಯ-ಶಾಂತ್ಯಾದಿಗಳನ್ನು ಕೊಟ್ಟು, ಮಾನವನ ಉತ್ಸಾಹವನ್ನು ಹೆಚ್ಚಿಸುವಲ್ಲಿ ಭಕ್ತಿಭಾವದಂಥ ರಾಮಬಾಣ ಔಷಧವು ಮತ್ತೊಂದಿಲ್ಲವೆಂದು ನಿಶ್ಚಯದಿಂದ ಹೇಳಬಹುದು.

ಭಕ್ತಿಭಾವಶೂನ್ಯನಾದ ಮನುಷ್ಯನು. ತನ್ನ ಉರ್ಜಿತಾವಸ್ಥೆಯಲ್ಲಿ ಅಹಂಕಾರದಿಂದ ವರ್ತಿಸುತ್ತಿರುವದರಿಂದ, ಅವನು ಒಮ್ಮೆಲ್ಲೊಮ್ಮೆ ನಿಶ್ಚಯವಾಗಿ ಕೆಳಗೆ ಬೀಳಲೇ ಬೇಕು. ಆ ಕಾಲದಲ್ಲಿ ಜನರ ಸಹಾನುಭೂತಿಯೂ ದೊರೆಯದ್ದರಿಂದ, ಸಹಕಾರ ಸಿಗದ್ದರಿಂದ, ಆತನ ಸ್ಥಿತಿಯು ಅತ್ಯಂತ ಹೀನ-ದೀನತೆಯಿಂದ, ಕೂಡಿದ್ದಾಗಿರುವುದು.

ಭಕ್ತಿಭಾವದಿಂದ ಕೂಡಿದ ಪುರುಷನು ಆಪತ್ತಿಗೆ ಅಂಜುವುದಿಲ್ಲ. ಸಂಕಟಗಳಿಗೆ ಬಗ್ಗುವುದಿಲ್ಲ. ಅತ್ಯಂತ ನಿರಾಶಾಜನಕ ಸ್ಥಿತಿಯಲ್ಲಿ ಕೂಡ ಧೈರ್ಯದಿಂದ ಉತ್ಸಾಹದಿಂದ ದೃಢನಿಶ್ಚಯದಿಂದ ಪ್ರಯತ್ನ ಮಾಡುತ್ತಿರುವುದರಿಂದ, ಬಿದ್ದ ಚೆಂಡು ಪುಟಿಯುವಂತೆ. ಅವನತಿ ಬಂದಿದೆಯನ್ನುವಷ್ಟರಲ್ಲಿಯೆ ಪುನಃ ಉನ್ನತಿಯ ಮಾರ್ಗದಲ್ಲಿರುವವನಾಗುತ್ತಾನೆ. ಯಾವ ಅನಿಷ್ಟ ಘಟನೆಯೊದಗಿದರೂ, ಅದರಿಂದ ದೇವನ ಏನಾದರೊಂದು ಉದ್ದೇಶವಿರಬಹುದೆಂದು ತಿಳಿದು ಸಮಾಧಾನಿಯಾಗಿರುತ್ತಾನೆ. ಆ ಘಟನೆಯನ್ನು ಬದಲಿಸಲು ಬರುವಂತಿದ್ದರೆ, ಈಶ್ವರೇಚ್ಛೆಯೆಂದು ಬಂದುದನ್ನು ಶಾಂತರೀತಿಯಿಂದ ಸಹನೆ ಮಾಡಿಕೊಳ್ಳುವನು. ಇದರಿಂದ ಅವನ ಮನಸ್ಸು ಸಂಪತ್ತು ಹಾಗು ವಿಪತ್ತು ಈ ಎರಡು ಕಾಲಗಳಲ್ಲಿಯೂ ಸ್ಥಿರವಾಗಿದ್ದು, ಸಂಕಟಗಳ ತೀವ್ರತೆಯನ್ನು ಸಹಿಸುವ ಶಕ್ತಿಯುಳ್ಳದ್ದಾಗುವುದು.

ಭಕ್ತಿಭಾವಶೂನ್ಯನಾದವನ ಸ್ಥಿತಿಯು ಉರ್ಜಿತಕಾಲದಲ್ಲಿ ಉನ್ಮತ್ತತನದ್ದಾಗಿದ್ದರೆ. ಆಪತ್ತಿನ ಸ್ಥಿತಿಯಲ್ಲಿ ಅಧೀರವೃತ್ತಿಯುಳ್ಳದ್ದಾಗಿರುವುದು. ಆಪ್ತಹಾನಿ, ಧನಹಾನಿ, ಮಾನಹಾನಿ, ಆರೋಗ್ಯ ಹಾನಿ ಮೊದಲಾದ ಸಂಕಟಗಳ ಚಕ್ರದಲ್ಲಿ ಸಿಕ್ಕನೆಂದರೆ. ಮೊದಲಿನ ಸೊಕ್ಕು ಸೊಕ್ಕುಗಳು ಮಾಯವಾಗಿ, ಬಹು ಅಂಜುಬುರುಕ ಹಾಗೂ ಹೇಡಿಯಾಗಿ, ಬಂದ ಸಂಕಟಗಳಿಗೆ ಎದೆಗೊಟ್ಟು ನಿಲ್ಲುವ ಧೈರ್ಯವಿಲ್ಲದವನಾಗುವನು. ಈ ಕಾರಣದಿಂದಲೇ ಯೋಗ್ಯ ದಿಶೆಯಲ್ಲಿ ಪ್ರಯತ್ನ ಮಾಡುವುದಾಗದೆ, ಸಿಕ್ಕ ಕಡೆಗೆ ಓಡಾಡುತ್ತಾನೆ. ಇಲ್ಲವೆ ಪ್ರಯತ್ನವನ್ನೇ ಮಾಡದೆ, ಹತಾಶನಾಗಿ ಸ್ವಸ್ಥ ಕೂಡ್ರುತ್ತಾನೆ ಹೀಗಾಗಿ ಅವನ ಕೆಟ್ಟ ಪರಿಸ್ಥಿತಿಯು ಸುಧಾರಿಸುವ ಬದಲು ಮತ್ತಿಷ್ಟು ಕೆಡುವುದಕ್ಕೆಯೇ ಕಾರಣವಾಗುತ್ತದೆ.

ಅಂಧ ಪರಂಪರೆಯ ಭಕ್ತಿಭಾವವು :

ನಿಜವಾದ ಭಕ್ತಿಭಾವ ಮತ್ತು ವ್ಯವಹಾರದಲ್ಲಿ ಕಾಣುವ ಬಹುಜನರ ಅಂಧಪರಂಪರೆಯ ಭಕ್ತಿಭಾವ ಇವುಗಳಲ್ಲಿ ಮಹದಂತರವಿದೆ. ಅಭ್ಯಾಸವನ್ನು ಮಾಡದೆ, ಕೇವಲ ದೇವರ ಗುಡಿಗೆ ನಿತ್ಯ ಹೋಗಿ ನಮಸ್ಕಾರ ಮಾಡಿ ಬಂದು ಪರೀಕ್ಷೆಯಲ್ಲಿ ಉತ್ತೀರ್ಣನಾಗಬೇಕೆಂಬ ವಿದ್ಯಾರ್ಥಿಯು; ಧನಪ್ರಾಪ್ತಿಗಾಗಿ ಯಾವ ಪರಿಶ್ರಮವನ್ನೂ ಮಾಡದೆ ಕೇವಲ ಮಂದಶಂಕರ—ಸತ್ಯನಾರಾಯಣರ ಪೂಜೆಯನ್ನು ಮಾಡಿ ಶ್ರೀಮಂತನಾಗಬೇಕೆಂಬ ಅರ್ಥಾರ್ಥಿಯು; ನಿಸರ್ಗನಿಯಮಕ್ಕನುಸರಿಸಿ ನಡೆಯದೆ ಮತ್ತು ಯೋಗ್ಯವಾದ ಔಷಧೋಪಚಾರ ಮಾಡಿಕೊಳ್ಳದೆ ಕೇವಲ ದೇವರ ತೀರ್ಥ, ಪ್ರಸಾದದಿಂದಲೇ ಆರೋಗ್ಯವಂತನಾಗಬೇಕೆಂಬ ಆರೋಗ್ಯಾರ್ಥಿಯು; ವೈರಿಗಳ ನಿಗ್ರಹಾರ್ಥವಾಗಿ ಸಾಮ-ದಾನ-ಭೇದ-ದಂಡಗಳ ಯೋಜನೆ ಮಾಡದೆ, ಕೇವಲ ರುದ್ರಾಭಿಷೇಕಾದಿ ಷೋಡಶ ಉಪಚಾರಗಳಿಂದಲೇ ವೈರಿಗಳನ್ನು ಗೆಲ್ಲಬೇಕೆಂಬ ರಾಜಕಾರಣಿಯು; ಈಶ್ವರೀನಿಯಮಗಳನ್ನು ಕುರಿತು ಸತತವಾಗಿ ಸಂಶೋಧನೆಗಳನ್ನು ನಡೆಸದೆ, ಕೇವಲ ಜಪಾನುಷ್ಠಾನಗಳಿಂದಲೇ ಜ್ಞಾನಪ್ರಾಪ್ತಿ ಮಾಡಿಕೊಳ್ಳಬೇಕೆಂಬ ತಪಸ್ವಿಯು—ಇವರೆಲ್ಲರ ಭಕ್ತಿಭಾವವು ನಿಜವಾದದ್ದಿರದೆ ಅಜ್ಞಾನಮೂಲಕವಾಗಿದ್ದು ಕೇವಲ ಅಂಧಾನುಕರಣವುಳ್ಳದ್ದಾಗಿರುತ್ತದೆ.

ಮೇಲ್ತರದ ಪೂಜಾಸಾಹಿತ್ಯ, ದೀಪದ ಪ್ರಕಾಶ, ಧೂಪದ ಸುಗಂಧ, ವಾದ್ಯಗಳ ಮಂಜುಳಸ್ವರ, ಅನೇಕ ವಿಧದ ನೈವೇದ್ಯಗಳು, ಪುಸ್ತಕಗಳ ಅರ್ಥಶೂನ್ಯವಾದ ಪಾಠ, ಭಾವವಿಲ್ಲದ ಅಖಂಡ ನಾಮಸ್ಮರಣೆ—ಇತ್ಯಾದಿಗಳಿಂದ ದೇವರು ಪ್ರಸನ್ನನಾಗಿ. ಭಕ್ತರ ಇಚ್ಛಾನುಸಾರವಾಗಿ ನಡೆಯುತ್ತಾ ನಿಸರ್ಗವಿರುದ್ಧವಾದ ಕಾರ್ಯಗಳನ್ನು ಸಹ ಮಾಡುತ್ತಾನೆಂದು ನಂಬುವುದು ಸಾಂಪ್ರದಾಯಿಕವಾದ ಭಕ್ತಿಭಾವವಾಗಿದೆ. ನಿಸರ್ಗವೆಂದರೆ ಈಶ್ವರೀನಿಯಮವೇ ಆಗಿದೆ. ಈಶ್ವರ ಭಕ್ತಿ ಮಾಡುವುದರಿಂದ ಭಕ್ತನ ಹಿತಕ್ಕಾಗಿ ಆ ನಿಯಮದ ವಿರುದ್ಧವಾದ ಸಂಗತಿಗಳನ್ನುಂಟು ಮಾಡುವನೆಂದು ತಿಳಿಯುವುದು ಶುದ್ಧ ಅಜ್ಞಾನದ ಲಕ್ಷಣವಾಗಿದೆ. ನಿಜವಾದ ಭಕ್ತಿಭಾವದಿಂದ ಕೂಡಿದ ಜ್ಞಾನಿ ಮನುಷ್ಯನು, ಇಂಥ ಹುಚ್ಚುತನದ ಅಪೇಕ್ಷೆಯನ್ನೆಂದಿಗೂ ಮಾಡುವುದಿಲ್ಲ, ಅವನು ತನ್ನ ವರ್ತನೆಯನ್ನು ಯಾವಾಗಲೂ ನಿಸರ್ಗನಿಯಮಕ್ಕನುಸರಿಸಿಯೆ ನಡೆಯಿಸಿಕೊಂಡು ಹೋಗುತ್ತಾನೆ.

ಸಾಂಪ್ರದಾಯಿಕ ಭಕ್ತಿಭಾವವು ಎಷ್ಟೇ ಉತ್ಕಟವಾಗಿದ್ದರೂ ಅದು ಕೃತ್ರಿಮವಿದ್ದು, ಕ್ಷಣಕಾಲ ಅಮಲನ್ನುಂಟುಮಾಡುವ ಮಾದಕ ಪದಾರ್ಥದಂತಿರುತ್ತದೆ. ಪ್ರಯುಕ್ತ ಅದು ವಸ್ತುತಃ ಅಪಾಯ-ಕಾರಕವೇ ಇರುವುದು. ಕೇವಲ ಭಜನೆ-ಪೂಜಾದಿಗಳಿಂದಲೇ ತನ್ನ ಮನಸ್ಸಿನಂತೆ ಎಲ್ಲ ಕಾರ್ಯಗಳನ್ನೂ ದೇವರು ಮಾಡಿಕೊಡುವನೆಂಬ ಭಾವನೆಯು ಯಾವಾತನ ಮನಸ್ಸಿನಲ್ಲಿರುವುದೋ, ಅವನು ವ್ಯವಹಾರ

(೩೩೩ ನೆಯ ಪುಟ ನೋಡಿರಿ)

— ಬಾರೆ ಕಾವ್ಯಭಾಮಿನಿ! —

ಶ್ರೀ. ಎಚ್. ಜಿ. ಉಪಾಧ್ಯಾಯ ಎಂ. ಎ. ಹೈದರಾಬಾದ್

(ಪಲ್ಲವಿ)

ಬಾರೆ ಕಾವ್ಯಭಾಮಿನಿ!
ಹೃದಯರಾಜ್ಯ ಸ್ವಾಮಿನಿ!
ಬಾರೆ ಮಧುರಮೋಹಿನಿ —
ಭುವನಾಮೃತವಾಹಿನಿ!

೧

ಬಾಳ ಕಣಿವೆ ಹೋರಿ ಬಂದೆ
ಜಗದ ಕುಟಿಲಗತಿಗೆ ನೊಂದೆ
ದಾರಿಗಾಣದಿರಲು ಮುಂದೆ
ಬೀರಿ ಕೃಪಾಕಿರಣವೊಂದೆ
ಬಾರೆ ತಮೋಹಾರಿಣಿ.—
ಕಾರ್ಯಪಥದ ದರ್ಶಿನಿ!

೨

ವಿಧಿಯು ಕ್ರೂರ ನಿಶಿತಶೂಲ
ತಿವಿದರೇನು ಎನಿತು ಕಾಲ,
ಜೀವವಿದೋ ಅಮರ ಅಚಲ
ನಿನ್ನಾಸರೆ ಇರಲು ಅತುಲ!
ಬಾರೆ ಭವನಿವಾರಿಣೆ—
ತಾಪಕುಲ ನಿವಾರಿಣೆ!

೩

ಬಾರೆ ಸಖಿಯೆ ಬೇಕು ಸಂಗ
ಹಾತೊರೆದಿದೆ ಅಂತರಂಗ;
ಹೃದಯವಿದೋ ರಸದ ರಂಗ
ಅಸ್ಫುಟಭಾವ ಸ್ವಮತರಂಗ
ನಲಿಸಲು ಬಾರೆ ಕಾಮಿನಿ—
ಕವಿಜನ ಸಂಮೋಹಿನಿ!

೪

ಬಾರೆ ಎನ್ನ ಒಲವಿನರಸಿ,
ಹಾವಭಾವ ಮೋಹನರಸಿ,
ಭಾವ ಸ್ಫೂರ್ತಿಯುಕ್ತಿ ನಿಲಿಸಿ,
ಎನಗೆ ರಸದ ಸುಧೆಯ ಸುರಿಸಿ
ಬಾರೆ ಬಾನರಾಣಿ—
ಹರ್ಷರಸದ ಯೋಗಿನಿ!

೫

ಛಂದಸ್ಸಿನ ದಾಸ್ಯವೇಕೆ?
ಅಲಂಕಾರ ಹಾರವೇಕೆ?
ಸಂತಪಾತದಾಕ್ರೋಶವೇಕೆ?
ಮುಗ್ಧ ಶಿಶುವರ ಸತ್ಯ ಸಾಕೆ!
ಬಾರೆ ಸಹಜ ಸುಂದರಿ—
ಮಧುರಭಾವ ಬಂಧುರೆ!

೬

ಯುಗಯುಗಾಂತವಾದರೇನು,
ಹೊಸತು ಮಂತ್ರವಾಕ್ಯವೇನು,
ವಿಜ್ಞಾನವು ಬೆಳೆದರೇನು,
ಸ್ವಾರ್ಥಶಕ್ತಿ ಮುಳಿದರೇನು!
ನಿನ್ನ ಧರ್ಮ ಶಾಶ್ವತ—
ಅದಕೆ ಸದಾ ಸ್ವಾಗತ!

೭

ಸಿಡಿಯಲಿಹವು ಅಣುಗುಂಡು —
ಪ್ರಳಯರಕ್ತವರ್ಷ ದಂಡು—
ಸೃಷ್ಟಿವಿಯದೋ ಕೆಟ್ಟಸುಂಡು
ಉರಿಯಲಿಹವು ಬಾಳಬೆಂಡು.
ಬಾರೆ ಜಗತ್ರಾಣಿಯೆ —
ನೀಡು ಅಭಯದಾಯಿನಿ!

೮

ಆತುರದ ಮೊರೆ ಕೇಳಿ ಬಾರೆ
ಹೃತ್ಪರದೆಯ ಸೀಳಿ ಬಾರೆ,
ತೃಪ್ತಿರಸದ ಬೇಗ ತಾರೆ
ಸ್ವಪ್ನಲೋಕದಮೃತಧಾರೆ!
ಬಾರೆ ಸೌಖ್ಯಮೋಹಿನಿ—
ಸಕಲ ಭದ್ರಕಾರಿಣಿ!

೯

ಬಂದ ಬದಿಗೆ ತಂಪ ಹರಿಸು,
ಬಂದ ಎದೆಗೆ ಜೇನು ಹರಿಸು,
ನೊಂದ ಜನಕೆ ಮುದವನುಣಿಸು,
ಕವಿಬಾಳಿಗೆ ಸಿರಿಯನುಣಿಸು!
ಬಾರೆ ಭುವನಮೋಹಿನೀ —
ಶಾಂತಿಸೌಖ್ಯದಾಯಿನೀ!

ಪೂಜಾರಿಯ ಕತೆ

(ಒಂದು ಸಣ್ಣ ಕತೆ)

ಶ್ರೀ. ಅಶ್ವತ್ಥ, ಬನಾರಸ

◆

ದೈವದ ಸಾನ್ನಿಧ್ಯದಲ್ಲಿಯೂ ಮನುಷ್ಯನು ತನ್ನ ಸ್ವಾರ್ಥಲೀಲೆಯನ್ನು ನಡೆಯಿಸಿರುವನು. ನಮ್ಮ ಹಳೆಯ ದೇವಾಲಯಗಳೆಲ್ಲ, ಲಿಂಗಪ್ಪನಂತಹ ಪೂಜಾರಿಗಳ ಅದೆಷ್ಟು ಸ್ವಾರ್ಥಸಾಧಕ ಭೂತಗಳಿಗೆ ಆವಾಸಗಳಾಗಿರುವುವೇನೊ !

ನಾಲ್ಕು ದಿನ ವಿಶ್ರಾಂತಿಗೆಂದೇ ಅಕ್ಕನ ಹಳ್ಳಿಗೆ ಹೋಗಿದ್ದೆ. ಅವನೆ ಪಟ್ಟಣದಲ್ಲಿ ಕೀಲುಕೊಟ್ಟ ಯಂತ್ರದಂತೆ ನಿರಂತರವಾಗಿ ನಡೆಯುವ ನಿರ್ಭಾಗ್ಯನಿಗೆ, ಕೆಲಸವಿಲ್ಲದ ಹಳ್ಳಿಯಲ್ಲಿ ಕಾಲ ಬೇಗನೇ ಕಾಲು ಬೇಡಿ ಕೈ ಬೇಡಿ, ತಲೆಯ ಮೇಲಿನ ಕಲ್ಲಿನಂತಾಗಿ ಬಿಡುತ್ತದೆ. ಅವರ ಮೇಲೆ ಕರುಳಿನ ಸಂಬಂಧದ ಮನೆಯಲ್ಲಿ ಉಳಿದುಕೊಂಡರಂತೂ ಕಾಯದ ಅಸಲಿಗೆ ಆಹಾರದ ಭಾರ ಬಡ್ಡಿಯಾಗಿ, ಕರುಳಿಗೇ ಪೀಕಲಾಟ ಬರುತ್ತದೆ. ಮೇಲಾಗಿ ಅಕ್ಕನ ಮನೆಗೆ ತಮ್ಮ ಹೋದರೂ, ಮಾವನ ಮನೆಗೆ ಅಳಿಯ ಹೋದರೂ ಒಂದೇ ತೂಕ—ಉಪಚಾರದಲ್ಲಿ. ಹುಂ. ಈ ದುರ್ಭಿಕ್ಷ, ಪ್ರೋಕ್ಯೂರ್‌ಮೆಂಟ್, ಕಂಟ್ರೋಲುಗಳ ಕಾಲದಲ್ಲೂ ಕಲ್ಲಿನ ನೀವು ಅಕ್ಕನ ಅಕ್ಕಿ ಉಪ್ಪಿಟ್ಟಿನ ಬೆಟ್ಟವನ್ನಾಗಲೀ, ಸುಟ್ಟಿನ ಉಂಡೆಯ (ಕಾಯಿ ತುರಿ ತುಂಬಿ) ಗುಡ್ಡೆಯನ್ನಾಗಲೀ, ಮನೆಯ ಗದ್ದೆಯ ರಾಗಿರೊಟ್ಟಿಯನ್ನಾಗಲೀ, ಇವೆಲ್ಲಕ್ಕೂ ಪ್ರತಿವ್ರತದ ಗಣಪತಿ ಮುಂತೆ, ತಲೆಗಾತ್ರದ ತುಪ್ಪವನ್ನಾಗಲೀ, ಕೊಳಗತುಂಬು ಬೆಲ್ಲದ ಪಾಕವನ್ನಾಗಲೀ ಕಂಡಿಲ್ಲ, ಅನುಭವಿಸಿಲ್ಲ. ವಾರ ಹಳ್ಳಿಯಲ್ಲಿದ್ದು ಬಂದರೆ—ಹುಂ, ಬಂದರೆ—ವರ್ಷ ಊರಿನಲ್ಲಿ ಊಟ ತಿಂಡಿಯ ಹಂಬಲು ಇಲ್ಲದೆ ಕುದುರೆಯಂತೆ ಕೆಲಸಮಾಡಿಕೊಂಡಿರಬಹುದು ಆದರೆ ಊರಿಗೆ ತಿರುಗಿ ಬರುವ ಉಪಾಯ ಮಾತ್ರ ನಿಮಗೆ ತಿಳಿದಿರಬೇಕು, ಅಷ್ಟೆ. ಅದೇನು ಕಸರತ್ತು ಮಾಡುತ್ತೀರೋ, ಕದ್ದು ಓಡಿ ಬರುತ್ತೀರೋ ನಿಮಗೇ ಗೊತ್ತು. ಇದೆಲ್ಲ ಬರಿಯ ಭ್ರಮೆ ಈ ಕಾಲದಲ್ಲಿ ಅನ್ನುತ್ತೀರ? ಹಾಗಾದರೆ ಹಳ್ಳಿಯಲ್ಲಿ ನಿಮಗೆ ಅಕ್ಕ ಇಲ್ಲ ಎಂದೇ ನನ್ನ ತೀರ್ಮಾನ.

ನಾನು ಕಸರತ್ತನ್ನೂ ಮಾಡಲಿಲ್ಲ, ಕದ್ದು ಓಡಿ ಬರಲೂ ಇಲ್ಲ. ಸುಮ್ಮನೆ ಆಕಳಿಕೆಯಿಂದ ಬಾಯಿ ಕಳೆದುಕೊಂಡಿದ್ದೆ—ತಿನ್ನುವ ಹೊತ್ತು ಮಾತ್ರ ಬಿಟ್ಟು. ನಿಂತಲ್ಲಿಯೇ ತೂಕಡಿಸಿದೆ. ಕಾಲು ಮಡಿಸಿಕೊಂಡಾಗ ಕುಕ್ಕರಿಸಿ ಚಾಚಿಕೊಂಡೆ, ನಿದ್ದೆ ಹೋದೆ—ಬಂದರೆ. ಈ ಅತ್ಯಾಚಾರವನ್ನು ಹೊಟ್ಟೆ ಎಷ್ಟು ಕಾಲ ಸಹಿಸೀತು? ಎರಡು ದಿನ ಹಳ್ಳಿಯ ಹವದ ಯಕ್ಷಿಣಿಗೆ ಬೆರಗಾಗಿದ್ದು, ಮೂರನೆಯ ದಿನ ದಂಗೆ ಏಳುವ ' ಅಲ್ಟಿಮೇಟಂ ' ಕೊಟ್ಟೇಬಿಟ್ಟಿತು. ನಾನು ಸಂಧಿಪ್ರಕರಣವನ್ನು ಹೂಡಬೇಕೆಂದು ನಿರ್ಧರಿಸಿ, ಆ ಮಧ್ಯಾಹ್ನವೇ ಮೂರು ಗಂಟೆಯ ಹುಳಿಯವಲಕ್ಕಿ ಕಾಫಿಗಳನ್ನು ತುಂಬುತ್ತ, ಭಾವನೊಡನೆ ವಿಷಯವನ್ನು ಪ್ರಸ್ತಾಪಿಸಿದೆ: " ನಾಳೆ ಆಳುಗಳ ಜತೆ ನಾನೂ ಉಳೋದಕ್ಕೆ ಹೋಗುತ್ತೀನಿ " ಸೀರಿಕೆ.

" ಏನೂ! ನೀನೂ ಉಳುತ್ತೀಯ? ಚೆನ್ನಾಯ್ತು ಬಿಡು. ನೀನು ಉತ್ತು ಬಿತ್ತಿ ನಾವು ಬಾಳಿದ ಹಾಗೇ ಆಯ್ತು " ಭಾವ ಗಹಗಹಿಸಿದ.

" ಅಷ್ಟು ಇಷ್ಟು ಸಹಾಯ.... " ನನ್ನ ಹುಮ್ಮಸ್ಸು ಅರ್ಧ ಇಳಿಯಿತು.

" ಏನೂ ಬೇಡ ಮಹಾರಾಯ. ಶಕ್ತಿ ಕೂಡಿಸಿಕೊ, ಸ್ವಲ್ಪ. ನಾಳೆ ಪಟ್ಟಣದಲ್ಲಿ ಇದೆಯಲ್ಲ ಗಾಣ!" ಭಾವ ಎಚ್ಚರಿಸಿದ.

" ಸಾಕು ಕಣೋ ಮಗು. ಶಾನುಭೋಗರ ಮೈದ ಉಳುತಾನೆ ಅಂದರೆ, ಹಳ್ಳಿಯೆಲ್ಲ ಏನಂದೀತು ಬಿಡು, ನಾಚಿಕೆಗೇಡು!" ಅಕ್ಕ ಅಡಿಗೆಯ ಮನೆಯಿಂದಲೇ ಮಾತುಗೂಡಿಸಿದಳು.

" ಅಯ್ಯೋ, ನನ್ನ ಪಾಡು ಕಡುಬುಗಿಡುಗಿದ ಗಣೇಶನ ಹಾಗಾಗಿದೆ. ಈ ಹಳ್ಳಿಯಲ್ಲಿ ಹಾವೂ ಸಿಕ್ಕೋ ಹಾಗಿಲ್ಲ ಸುತ್ತೋಣ ಅಂದರೆ! ತಿಂದದ್ದನ್ನು ಕರಗಿಸಿಕೊಳ್ಳಲೇ ಬೇಕಲ್ಲ! "

" ಸಾಕು ಬಿಡೋ ಬಹಳ ಆಯ್ತು. ಈ ಪಟ್ಟಣದ ಬೇಳ್ವೆ ಬಿಡು! " ಅಕ್ಕನ ಚೆಲ್ಲಾಟ—ನನ್ನ ಪ್ರಾಣಸಂಕಟದಲ್ಲಿ.

" ಇಲ್ಲ ಅಕ್ಕ, ಬಹಳ ಅವ್ಯವಸ್ಥೆ ಆಗಿದೆ " ನಾನು ದೈನ್ಯತೆಯಿಂದ ಹೇಳಿದೆ.

" ಇಷ್ಟರ ಮೇಲೆ ತಿಂದದ್ದು ಕರಗಲೇ ಬೇಕಾಗಿದ್ದರೆ...."—ನೋಡಿ. ಹೇಗಿದೆ! " ಹಾಗೇ ಇಲ್ಲೇ ಸುತ್ತಾಡಿಕೊಂಡು ಬಂದರಾಯ್ತು " ಅಕ್ಕ ಕಣ್ಣೋರೆಸಲು ನೋಡಿದಳು.

" ಇಲ್ಲೇನಿದೆ ಸುತ್ತಾಡಿ ನೋಡಿಕೊಂಡು ಬರೋದಕ್ಕೆ? ಬರಿ ಹೊಲ ಗದ್ದೆ. ತೋಟ, ಕೆರೆ, ಕಾಲುವೆ, ಭಾವಿ...."

"ಓಹೋ, ಇವು ಸಾಲವೇನು? ಹಾಗಾದರೆ ಸಂಗದ ಹಳ್ಳಿಗೆ ಹೋಗಿ ಬರೋಣ " ಭಾವನ ಸೂಚನೆ.

" ಅದೆಲ್ಲಿದೆ? " ನನ್ನ ಕಷ್ಟದಲ್ಲಿ ದಾರಿ ಕಂಡಿತು. ಕುತೂಹಲ ಕೆರಳಿತು.

" ಮೂರು ಮೈಲಿ, ದಕ್ಷಿಣಕ್ಕೆ. ಹಳ್ಳದಾಚೆ.

" ಅಲ್ಲೇನು ವಿಶೇಷ? "

" ಏನಿದೆ. ಅದೊಂದು ಹಾಳೂರು. ಸಂಗಮೇಶ್ವರನ ದೇವಸ್ಥಾನವಿದೆ. ಪಾಳೆಯ ಗಾರರ ಕಾಲದ್ದು. "

" ಬಹಳ ಪ್ರಸಿದ್ಧಿ ಕಣಪ್ಪ. ವರ್ಷಕ್ಕೊಂದು ಜಾತ್ರೆ ಆಗುತ್ತೆ. ಹರಸಿಕೊಂಡೋರಿಗೆಲ್ಲ ಮಗುವಾಗತ್ತಂತೆ — ಗಂಡು! " ಅಕ್ಕ ವಿವರಿಸಿದಳು.

"ಅಯ್ಯೋ, ಅದೊಂದು ಭ್ರಾಂತಿ" ಭಾವ ನಸುನಕ್ಕ.

"ಏನಿಲ್ಲ. ಮಹಾ ಸತ್ಯವಂತ ದೇವರು ಅಂತಾರೆ!" ಅಕ್ಕ ಸಾಧಿಸಿದಳು.

ನನಗೆ ಯಾವ ಪ್ರೋತ್ಸಾಹವೂ ಬೇಕಾಗಿರಲಿಲ್ಲ. ಅಷ್ಟು ಕಾಲಾಡಿದರೆ ಸಾಕಾಗಿತ್ತು. ಮೇಲಾಗಿ ಹಳೆಯ ಊರು-ದೇವಸ್ಥಾನಗಳೆಂದರೆ ಆಕರ್ಷಣೀಯವಲ್ಲವೆ?

"ಹಾಗಾದರೆ ಈಗ ಹೊರಡೋಣವೆ?" ನಾನು ಭಾವನನ್ನು ಆತುರದಿಂದ ಕೇಳಿದೆ.

"ಇವತ್ತು ನಾಳೆ ಬೇಡ! ಈ ಅಮಲ್ದಾರರು ಜಮಾಬಂದಿ ಮುಗಿಸಿಕೊಂಡು ಹೋಗಲಿ."

"ನಾನೇ ಹೋಗಿ ಬರುತ್ತೀನಿ" ನಾನು ತಡೆವಂತಿರಲಿಲ್ಲ.

"ಬೇಡ. ಕಾಣದ ದಾರಿ! ಸ್ಥಳ. ಯಾಕೆ ಒಬ್ಬನೇ ಹೋಗಬೇಕು?"

"ಹೌದಪ್ಪ, ಆ ಹಾಳೂರಿನಲ್ಲಿ ನೀನೇ ಅನ್ನೋರು ಇದ್ದಾರೋ ಇಲ್ಲವೊ!" ಅಕ್ಕ ಆತಂಕ ಸೂಚಿಸಿದಳು.

"ಯಾರಿದ್ದು ಬಿಟ್ಟು ಏನಾಗಬೇಕಾಗಿದೆ, ಬೆಳಕು ಹೊತ್ತಿನಲ್ಲಿ ಹೋಗಿಬರೋದಕ್ಕೆ? ಈಗಿನ್ನೂ ಮೂರೂವರೆ. ಆರೇಳು ಗಂಟೆ ಹೊತ್ತಿಗೆ ಬಂದುಬಿಡುತ್ತೀನಿ. ಇನ್ನೇನಾದರೂ ಗುರುತಿದೆಯೇ, ಭಾವ, ನೇರವಾಗಿ ಹೋಗೋದಕ್ಕೆ?"

"ಇನ್ನೇನು, ಗುಡಿಯ ಗೋಪುರವೇ ಕಾಣುತ್ತೆ, ಹಳ್ಳದಾಚೆಯ ತಿಟ್ಟು ಹತ್ತಿದರೆ. ಅದಲ್ಲ ದೊಡ್ಡ ಮಾತು........"

"ಹಾಗಾದರೆ ಸರಿ!"

"ಅಷ್ಟು 'ಹೋಗೇ ಬರುತ್ತೀನಿ' ಅಂದರೆ ತಾಳು. ನಾನು ಹೋಗಿ, ಯಾವುದಾದರೂ ಆಳು ಕಳಿಸುತ್ತೀನಿ. ಹೇಗಾದರೂ ಅವಸಿದ್ದರೆ ವಾಸಿ!"

"ಅಷ್ಟಾದರೂ ಮಾಡಿ" ಅಕ್ಕ ಅನುಮತಿಯನ್ನು ಸೂಚಿಸಿದಳು.

ಭಾವ ಕೋಟು ಹಾಕಿ ಪೇಟ ಸುತ್ತಿ ಹೊರಗೆ ಹೋದ. ಅಕ್ಕ ಪಾತ್ರೆ-ಬಟ್ಟೆಗಳನ್ನು ತೆಗೆದುಕೊಂಡು ಕೆರೆಗೆ ಹೊರಟಳು. ನಾನೂ ಕನ್ನಡಿಯ ಮುಂದೆ ನಿಂತೆ. ನನ್ನ ಸಿದ್ಧತೆಯಾಗಿ, ಗಂಟೆ ನಾಲ್ಕು ಬಡಿದರೂ, ಆಳು-ಕಾಳು ಯಾರೂ ಬರಲಿಲ್ಲ ನಾನು ಮನೆಯ ಹೆಣ್ಣಾಳಿಗೆ "ನಾನು ಮೆಲ್ಲಗೆ ಹೋಗುತ್ತಿರುತ್ತೀನಿ. ಆಳು ಹಿಂದಿನಿಂದ ಬರಲಿ!" ಎಂದು ಹೇಳಿ, ಗುಡಿಗಾಗಿ ಹೊರಟು ಬಿಟ್ಟೆ.

೨

ಹೊಟ್ಟೆ ಹೊತ್ತುಕೊಂಡು, ಹೊಲಗಳನ್ನು ಹಾಯ್ದು ಹಳ್ಳಕ್ಕೆ ಬರುವ ಹೊತ್ತಿಗೆ ನಾಲ್ಕೂವರೆ ಗಂಟೆಗೆ ಹತ್ತಿರವಾಗಿತ್ತು. ಹಳ್ಳವೇನು ದೊಡ್ಡದಲ್ಲ. ದೊಡ್ಡ ಕೊರಕಲು. ಹಲ್ಲೆಗಳಂತಿದ್ದ ಕಲ್ಲುಗಳ ಕೆಳಗಿನಿಂದ, ಜೊಂಡುಗಳ ಮಧ್ಯದಲ್ಲಿ ಅಲ್ಲಲ್ಲಿ ನೀರು ಕಂಡು, ಮರೆಸಿಕೊಂಡು ಹರಿದಿತ್ತು. ಹಳ್ಳ ಬಹಳ ದೂರದಲ್ಲಿ ಸುತ್ತಿ ದಕ್ಷಿಣಕ್ಕೆ ತಿರುಗಿತ್ತು ಈ ದಡದ ಮೇಲೇ ಅಷ್ಟು ದೂರ ಸುತ್ತಿಕೊಂಡು ಹೋಗಲು ಇಷ್ಟಪಡದೆ, ಕಲ್ಲಿನಿಂದ ಕಲ್ಲಿಗೆ ನೆಗೆದು ಇದಿರು ದಡವನ್ನು ಸೇರಿ, ಭಾವ ಸೂಚಿಸಿದ್ದಂತೆ ಹಳ್ಳದ ಸುತ್ತಿನ ಮಧ್ಯದ ತಿಟ್ಟನ್ನು ಹತ್ತಿದೆ. ಈ ದಾರಿ ಸುಲಭವಾಗಿರಲಿಲ್ಲ. ಸಣ್ಣ ಸಣ್ಣ ಮರಗಳು, ಮುಳ್ಳುಪೊದೆಗಳು ತುಂಬಿಕೊಂಡಿದ್ದ ಸರಕಾರಿ ಕಾಡಿನಲ್ಲಿ, 'ಹರ್ಕ್ಯುಲ್ಸ್' ಜೋಡನ್ನು ನಡೆಸುತ್ತ ನಡೆದೆ, ನಡೆದೆ. ನಿರ್ಜನವಾದ ಪ್ರದೇಶ. ದನಕರುಗಳೂ ಇತ್ತ ಕಡೆ ಇರಲಿಲ್ಲ. ಇವುಗಳ ಕತ್ತಿನ ಗಂಟೆಯ ಶಬ್ದ, ಒಬ್ಬ ಗೊಪಾಲಕನ ಕೊಳಲು, ಎಲ್ಲೋ ಹಳ್ಳದಾಚೆ ಕ್ಷೀಣವಾಗಿ ಕೇಳಿಸುತ್ತಿದ್ದುವು. ನಾನು ಹಿಂದೆ ಮುಂದೆ ಅತ್ತ ಇತ್ತ ನೋಡಿಕೊಂಡು ಸಾಗುತ್ತಿದ್ದೆ. ನಮ್ಮ ಹಳ್ಳಿ ಮರೆಯಾಗಿತ್ತು. ಸಂಗದ ಹಳ್ಳಿಯ ಗುಡಿಗೋಪುರಕ್ಕಾಗಿ ಕತ್ತನ್ನು ಎಷ್ಟು ಹೊರಳಿಸಿದರೂ ಪ್ರಯೋಜನವಾಗಲಿಲ್ಲ. ಸರಿಯಾದ ದಿಕ್ಕಿನಲ್ಲಿ ಹೋಗುತ್ತಿದ್ದೆನೆಯೇ ಎಂಬ ಅನುಮಾನವೂ ಬಂದಿತು. ಆದರೂ ತಿಟ್ಟಿನ ತುದಿಗೆ ಇನ್ನೂ ಬಂದಿರಲಿಲ್ಲವಾಗಿ, ಅಲ್ಲಿಂದ ಕಂಡೀತೆಂದು ನಿಂತು ನಿಂತು ಹತ್ತಿ ಹತ್ತಿ ಮುಂದುವರಿದೆ. ಒಂದು ಕಡೆ ಮುಳ್ಳುಪೊದೆಯೊಂದು ಪಂಚೆಯನ್ನು ತಡೆಯಿತು. ನಿಂತು ಬಿಡಿಸಿಕೊಂಡು ಒಂದು ಹೆಜ್ಜೆ ಇಟ್ಟೆ. ನಡೆಯುತ್ತಿದ್ದಂತೆ ದಾರಿ ಬೆಳೆಯುತ್ತಿದ್ದಂತೆ ಕಂಡಿತು. ಭಾವನ ಮೂರು ಮೈಲಿ ನೂರೆನ್ನಿಸಿತು. ಹಿಂದಿರುಗಿ ಬಿಡಲೆ? ಎಂದು ಪ್ರಶ್ನೆ. ಆದರೆ ಹೀನಾಯ ತಡೆಯಿತು. ಇಷ್ಟಕ್ಕೂ ಇನ್ನೂ ಸೂರ್ಯ ಮುಳುಗುವುದಕ್ಕೆ ಹೊತ್ತಿದ್ದಿತು. ಹೀಗಿದ್ದು ಮುಂದೆ ಸಾಗುವುದೆಂದೇ ನಿರ್ಧರಿಸಿದೆ. ನಡೆದೆ, ಹತ್ತಿದೆ.

ಅಂತೂ ತಿಟ್ಟಿನ ನೆತ್ತಿಗೆ ಬಂದೇ ಬಂದೆ. ಗುಡಿ ಎಲ್ಲಿ? ಅತ್ತ ಇತ್ತ ಸುತ್ತಲೂ ಕಣ್ಣು ಹೊರಳಿಸಿದೆ. ಅಗೋ ಅಲ್ಲಿ, ಕೆಳಗೆ, ಹಳ್ಳದ ಇನ್ನೊಂದು ತಿರುವಿನ ಆಚೆಯ ದಡದಲ್ಲಿ! ಗೋಪುರವಲ್ಲವೆ? ಹುಂ ಹೌದು. ಆ ಮರಗಳ ಗುಂಪಿನಲ್ಲಿ, ಅದೇ. ಗೋಪುರ ಸೂರ್ಯನ ಬೆಳಕಿನಲ್ಲಿ ಹೊಳೆಯುಲಿಲ್ಲ. ಅದರ ಲೋಹ ಕಿಲುಬುಗಟ್ಟಿ ಹೋಗಿರಬೇಕು ಕಟ್ಟಡವೂ ಪೂರ್ತಿಯಾಗಿ ಕಾಣುತ್ತಿರಲಿಲ್ಲ. ಇದೇ ನೇರದಲ್ಲಿ ತಿಟ್ಟನ್ನಿಳಿದೆ. ಈ ಭಾಗ ಹೆಚ್ಚು ಕಡಿದಾಗಿತ್ತು. ಕಾಡು ದಟ್ಟವಾಗಿತ್ತು. ಗಿಡಗಳನ್ನು ಬಿಡಿಸಿಕೊಂಡು, ಒಂದೊಂದು ಕಡೆ ಕೈ ಊರಿಕೊಂಡು ಹಳ್ಳದ ದಡಕ್ಕೆ ಇಳಿದೆ. ಹಳ್ಳವನ್ನು ಹಾಯುವ ದಾರಿ ಸುಲಭವಾಗಿ ಸಿಕ್ಕಲಿಲ್ಲ. ಅತ್ತಿತ್ತ ಓಡಾಡಿ ಬಂಡೆಯ ಕೊರಕಲುಗಳ ಮಧ್ಯೆ ಪಾತ್ರಕ್ಕೆ ಇಳಿದೆ. ಹಳ್ಳ ಅದೇ ರೀತಿ, ಆದರೆ ಆ ಭಾಗಕ್ಕಿಂತಲೂ ಅಗಲವಾಗಿದ್ದಿತು. ಇಲ್ಲೂ, ಮೇಲೆ ಹಾರುವ ಹಕ್ಕಿಗಳನ್ನು ಬಿಟ್ಟರೆ ಪ್ರಾಣಿಗಳ ಸುಳಿವೇ ಇರಲಿಲ್ಲ. ಒಂದೊಂದು ಹಕ್ಕಿಯ ಕೂಗು ಹಳ್ಳದಲ್ಲಿ ಹೊಳಲುಗೊಟ್ಟು, ನಿರ್ಜನತೆಯ ಸೂಚನೆಯನ್ನು ಹೆಚ್ಚಿಸುತ್ತಿತ್ತು.

ಸಂಗದ ಹಳ್ಳಿ ದಡಕ್ಕೆ ಬಹಳ ದೂರವಾಗಿರಲಿಲ್ಲ. ಅದೊಂದು ಪಾಳು ಅಗ್ರಹಾರ. ಹುಲ್ಲು ಬೆಳೆದ ಒಂದೇ ಬೀದಿಯ ಎರಡು ಪಕ್ಕಗಳಲ್ಲೂ ಎತ್ತರವಾದ ಜಗುಲಿಯ ಮಾಳಿಗೆ ಮನೆಗಳು ಅಲ್ಲಲ್ಲಿ ಕುಸಿದು ಬಿದ್ದಿದ್ದುವು. ಒಂದೇ ಒಂದು ಬಡಕಲ ನಾಯಿ ನನ್ನನ್ನು ಕಂಡು 'ಗುರ್' ಎಂದು, ಹಾಗೇ ಮೂಲೆಯಲ್ಲಿ ಮುದುರಿಕೊಂಡಿತು. ಈ

ವೇದಿಗೆ ಇದಿರಾಗಿ ಸ್ವಲ್ಪ ಎತ್ತರದಲ್ಲಿ ಸಂಗಮೇಶ್ವರನ ಗುಡಿ. ಹಾಳುಕ್ಕರ ಗುಡಿಗಳಂತೆ ಎತ್ತರವಾದ ಸುತ್ತುಗೋಡೆ, ಹೆಬ್ಬಾಗಿಲಿನ ಮೇಲೆ ಗೋಪುರ. ಸುತ್ತಿನ ಮೈದಾನದಲ್ಲೆಲ್ಲೂ ಮೂರು ಮೂರು ಕಲ್ಲಿನ ಗುಡ್ಡೆಗಳು ಸಹಸ್ರಾರು. ಸಂತಾನಾಪೇಕ್ಷಿಗಳ ಸೇವೆ ಇರಬೇಕು. ಕಲ್ಲಿನ ಚೋಳು ಗರುಡಗಂಬವನ್ನು ಬಳಸಿಕೊಂಡು ನಾನು ತೆರೆದ ದ್ವಾರದಲ್ಲಿ ಕಾಲಿಟ್ಟಾಗ, ಹತ್ತೆಂಟು ಬಾವಲಿಗಳು ಪಟಪಟನೆ ಬಡಿದುಕೊಂಡು ಅತ್ತಿತ್ತ ಹಾರಾಡಿದುವು. ಒಳಗಿನ ಕಲ್ಲುಹಾಸಿದ ಪ್ರಾಕಾರ ವಿಸ್ತಾರವಾಗಿತ್ತು. ಒಳಗಿನ ಗುಡಿ ಸಣ್ಣದೆಂದೇ ಹೇಳಬೇಕು. ಸಿಂಹ-ಕಂಬದ ಪಡಶಾಲೆ, ಕುಳ್ಳುಬಾಗಿಲಿನ ಗರ್ಭಗುಡಿಯ ಮೇಲೆ ಮಸಿಗಟ್ಟಿದ ಶಿಖರ. ಪ್ರಾಕಾರದಲ್ಲಿ ಬಲಗಡೆ ವಿಶಾಲವಾದ ಅಶ್ವತ್ಥಕಟ್ಟೆಯ ಮೇಲೆ, ಅರಳಿ-ಬೇವುಗಳ ಜೋಡಿ ಹೆಮ್ಮರ ಬಿಗಿದುಕೊಂಡು ನಿಂತಿತ್ತು. ಹತ್ತಾರು ನಾಗರ ಕಲ್ಲುಗಳು. ಇವೂ ಸಂತಾನಾಪೇಕ್ಷಿಗಳಲ್ಲಿ ಶ್ರೀಮಂತರು ಪ್ರತಿಷ್ಠೆಮಾಡಿಸಿದುವೇನೋ! ಈ ಕಟ್ಟೆಯ ಪ್ರದಕ್ಷಿಣೆ ಮಾಡಿದಾಗ ನಾಗರಕಲ್ಲುಗಳ ಮಧ್ಯೆ ಒಂದು ಕಲ್ಲುಗೂಡು ಕಾಣಿಸಿತು. ಅದರೊಳಗೆ ಒಂದು ಸಣ್ಣ ಲಿಂಗ. ಅದನ್ನು ಅಪ್ಪಿ ಮಾರ್ಕಾಂಡೇಯನಂತೆ ಒಂದು ವಿಗ್ರಹ. ಇನ್ನೂ ಹತ್ತಿರ ಬಗ್ಗಿನೋಡಿದಾಗ, ಶಿಲ್ಪಿ ಅದನ್ನು ಹೆಣ್ಣುವಿಗ್ರಹದ ಹಾಗೆ ಕಡೆದಿದ್ದಂತೆ ಕಂಡಿತು. ಇದು ಮಾರ್ಕಂಡೇಯನಲ್ಲದಿದ್ದರೆ ಇನ್ನು ಯಾವ ಕತೆಗೆ ಅನ್ವಯಿಸುತ್ತದೆಯೋ?-ಎಂದು ಯೋಚಿಸುತ್ತ ಗುಡಿಯ ಪ್ರದಕ್ಷಿಣೆಗೆ ಹೊರಟೆ. ಹಾಗೆ ನಡೆದು ಬರುತ್ತಿದ್ದಾಗ, ಗರ್ಭಗುಡಿಯ ಹಿಂದೆ ತೀರ್ಥದ ಕೊಳದ ಬಳಿ ಒಂದು ಚಪ್ಪಡಿಯ ಮೇಲೆ ಹೆಜ್ಜೆಯಿಟ್ಟಾಗ, ಅದು ಕೊಂಚ ಅಲುಗಿದಂತಾಯಿತು. ಹಾಗೇ ಪೊಳ್ಳು ಶಬ್ದವೂ ಕೇಳಿತೆನ್ನಿಸಿತು. ಒಂದೆರಡು ಬಾರಿ ಮತ್ತೆ ಹೆಜ್ಜೆಬಡಿದೆ. ಈಗೇನೂ ಕೇಳಿಬರಲಿಲ್ಲ. ಎಲ್ಲೋ ನನ್ನ ಭ್ರಾಂತಿಯಿರಬೇಕೆನ್ನಿಸಿತು. ಮುಂದೆ ನಡೆದಾಗ, ಇದ್ದಕ್ಕಿದ್ದಂತೆಯೇ ನನ್ನ ಮನಸ್ಸು ರೋಮನ್ನರ ಐಸಿಸ್ ಗುಡಿಯ ಕತೆಯನ್ನು ಕರೆಯಿತು. ಅಲ್ಲಿ ಪೂಜಾರಿಗಳು ಗುಡಿಯ ಹಿಂದೆ ಸುರಂಗ ಮಾಡಿಕೊಂಡು ಬಂದು, ಗರ್ಭಗುಡಿಯಿಂದ ಭವಿಷ್ಯ ಹೇಳಿ, ಜನರನ್ನು ಮರುಳುಗೊಳಿಸುತ್ತಿದ್ದರೆಂದು ನಾನು ಓದಿದ್ದ ವಿವರವೆಲ್ಲ ನೆನಸಿನ ರಂಗದ ಮೇಲೆ ಹಾಯ್ದು ಹೋಯಿತು. 'ಎಲ್ಲೆಲ್ಲಿ ಏನೇನು ನಡೆಯುತ್ತಿದ್ದುವೋ ನಡೆಯುತ್ತಿವೆಯೋ ಕಂಡವರು ಯಾರು? ಮರುಳು ಜನರು ಇರುವವರೆಗೂ ಮೋಸಗಾರರಿಗೇನು ಕಡಿಮೆ?' ಎಂದುಕೊಳ್ಳುತ್ತ, ಗರ್ಭಗುಡಿಯ ಹಾಕಿದ ಬಾಗಿಲಿನ ಕಿಂಡಿಯಲ್ಲಿ ಇಣಿಕಿ ನೋಡಿದೆ. ಮೊದಲು ಒಳಗೆ ಆಳವಾದ ಕತ್ತಲೆಯಲ್ಲದೆ ಬೇರೆ ಕಾಣಲಿಲ್ಲ. ಹಾಗೇ ದಿಟ್ಟಿಸಿದಾಗ ಅಸ್ಪಷ್ಟವಾಗಿ ದೊಡ್ಡ ಲಿಂಗವೊಂದು ಕಾಣಿಸಿತು. ಸರಿ, ದೇವರ ದರ್ಶನವಾಯಿತೆಂದುಕೊಂಡು ಹಿಂದಿರುಗಿದೆ. ಆವರೆ ಬಹಳ ಆಯಾಸವಾಗಿತ್ತು. ಮೈ ಬೆವರಿತ್ತು. ಕಾಲು ನೋಯುತ್ತಿತ್ತು. ಐದೇ ಐದು ನಿಮಿಷ ಸುಧಾರಿಸಿಕೊಂಡು ಹೋಗುವುದೆಂದು ಅಶ್ವತ್ಥ ಕಟ್ಟೆಯ ಮೇಲೆ, ಲಿಂಗದ ಗೂಡನ್ನು ಒರಗಿಕೊಂಡು ಕುಳಿತೆ. ಹೊಂಬೆಳಕಿನ ಮಧ್ಯೆ ತೂರಿ ಬಂದು ತೀಡುತ್ತಿದ್ದ ಮೃದುಸ್ವರದ ತಂಗಾಳಿಗೆ ಮೈಯೊಡ್ಡಿ 'ಅಹಾ!' ಎಂದೆ.

೩

ಇನ್ನೇನು ಏಳಬೇಕೆನ್ನುವಲ್ಲಿ, ಹೆಬ್ಬಾಗಿಲಿನ ಕಡೆಯಿಂದ ಹೆಜ್ಜೆಯ ಸಪ್ಪಳ ಕೇಳಿಸಿತು! ನನ್ನಂತೆಯೇ ಯಾರೋ ಬಂದರು; ಜತೆಗೆ ಸಿಕ್ಕಿದರು—ಎಂದುಕೊಂಡೆ. ಆದರೆ ಬಂದವನು ಪೂಜಾರಿ! ಈ ಹಾಳೂರಿನಲ್ಲಿ ಯಾರೂ ಇಲ್ಲವೆಂದೇ ತೀರ್ಮಾನಿಸಿಕೊಂಡಿದ್ದ ನನಗೆ ಅತ್ಯಾಶ್ಚರ್ಯವಾಯಿತು. ಅವನು ಮಧ್ಯವಯಸ್ಕ. ದೃಢಕಾಯ. ಲಕ್ಷಣವಾಗಿದ್ದ. ರೇಷ್ಮೆಯ ಮಗುಟ ಉಟ್ಟು ಎಡ ಹೆಗಲ ಮೇಲೆ ಪಾಣಿಪಂಚೆಯನ್ನು ಎಸೆದುಕೊಂಡಿದ್ದ. ಕಮಾಸುಕ್ಷೌರದ ಮುಂದಲೆ. ದಪ್ಪಗಂಟಿನ ಕೂದಲಿನ ಹಿಂದಲೆ. ಹಣೆ, ಎದೆ, ಕೈಗಳ ಮೇಲೆ ವಿಭೂತಿ ಪಟ್ಟೆಗಳು. ಬಿಳಿಯ ಹರಳಿನ ಹತ್ತುಕಡಕು, ಚಿನ್ನದ ಕಪ್ಪ, ಉಂಗುರ. ಒಟ್ಟಿನಲ್ಲಿ ಮಾದರಿ ಪೂಜಾರಿ. ಎಡದ ಅಂಗೈಯಲ್ಲಿ ಪೂಜಾಸಾಮಗ್ರಿಯ ತಟ್ಟೆಯೂ ಇದ್ದಿತು.

"ಓಹೋ, ತಾವೆಲ್ಲಿಂದ ಬಂದಿದ್ದು?" ಆತನೇ ಮೊದಲು ಮಾಡಿದ.

ನಾನು ಹೇಳಿದೆ:

"ತಾವು ಈ ಊರಿನಲ್ಲೇ ಇದೀರ?" ಅನುಮಾನಿಸುತ್ತ ಕೇಳಿದೆ.

"ಹೌದು. ಹೋಗ್ತಾ ಎಡಗಡೆ—ಎತ್ತರವಾದ ಮನೆಯೇ ನಂದು"

ಆ ಮನೆ ಬಹಳ ಪಾಳಾಗಿದ್ದಂತೆ ನನ್ನ ನೆನಪಿತ್ತು. ಆದರೆ ಒಂದೆರಡು ಕೋಣೆಗಳೇನಾದರೂ ಸರಿಯಾಗಿರಬಹುದೆಂದುಕೊಂಡೆ

"ಹೀಗೆ ಅಂತ ಗೊತ್ತಿದ್ದರೆ, ಹಣ್ಣುಕಾಯಿ ತರಬಹುದಾಗಿತ್ತು!"

"ಅದಕ್ಕೇನು, ಬನ್ನಿ. ನಾನೇ ತಂದಿದೀನಲ್ಲ. ಪ್ರಸಾದ ಕೊಡ್ತೀನಿ."

ಅವನು ಮುಂದುವರಿದ. ನಾನು ಜತೆಯಲ್ಲಿ ಹೋದೆ. ಗರ್ಭಗುಡಿಯ ಮುಂದೆ ತೂಗಾಡುತ್ತಿದ್ದ ಗಂಟೆಯನ್ನು ಆಡಿಸಿದ. ಗಂಟೆ ಆ ನಿಶ್ಶಬ್ದವನ್ನು ಭೇದಿಸಿ ಹೊಳಲುಗೊಟ್ಟಿತು. ಕಣಕಣದಿಂದ ಬಾಗಿಲ ಬೀಗವನ್ನು ತೆಗೆದು, ಕಿರ್ರೆನ್ನುವ ಕದಗಳನ್ನು ದಬ್ಬಿದಾಗ, ಗರ್ಭಗುಡಿ ನಾನು ತಿಳಿದಷ್ಟು ಸಣ್ಣದಲ್ಲವೆಂದು ಕಂಡಿತು. ಪೂಜಾರಿ ಚಮತ್ಕಾರವಾಗಿ ಬೇಗನೇ ಪೂಜೆ ಮುಗಿಸಿ, ಎಡಗೈ ಗಂಟೆಯನ್ನು ಬಾರಿಸುತ್ತ, ಕರ್ಪೂರದ ಮಂಗಳಾರತಿ ಎತ್ತಿ ಹೊರಗೆ ಬಂದ. ನಾನು ಮಂಗಳಾರತಿಯನ್ನು ಕಣ್ಣಿಗೊತ್ತಿಕೊಳ್ಳಲು ಕೈ ನೀಡಿದೆ. ಆದರೆ ಅವನು ನಿಲ್ಲದೆ "ಕಾಳಿಲಿಂಗಕ್ಕೂ ಆಗಿಬಿಡಲಿ!" ಎಂದು ಅಶ್ವತ್ಥ ಕಟ್ಟೆಗೆ ನಡೆದ. ನಾನೂ ಹಿಂಬಾಲಿಸುತ್ತ "ಕಾಳಿಲಿಂಗ ಅನ್ನೋ ಹೆಸರೇಕೆ? ಏನಾದರೂ ವಿಶೇಷ ವಿಚಾರವಿದೆಯೆ?" ಎಂದು ಕೇಳಿದೆ.

"ಹುಂ, ಕಾಳಿ ಅಂತ ಒಬ್ಬಳು ಬಸವಿ ಇದ್ದಳು."

"ಅವಳು ಪ್ರತಿಷ್ಠೆ ಮಾಡಿಸಿದಳೋ?"

"ಇಲ್ಲ, ಇಲ್ಲಿ ಅವಳ ವಿಗ್ರಹವೂ ಇದೆ, ಕಾಣುತ್ತೇ?" ಅವನು ಗೂಡಿನ ಮುಂದೆ ಮಂಗಳಾರತಿಯನ್ನು ಎತ್ತುತ್ತ, ಹಾಗೇ ಹತ್ತಿರ ಹಿಡಿದ.

"ಹುಂ, ನಾನಾಗಲೇ ನೋಡಿ, ಏನಿರಬಹುದು ಅಂತ ಯೋಚಿಸುತ್ತಿದ್ದೆ."

"ಅವಳು ಪಟೇಲರ ಹಿರಿಮಗಳು. ಇವಳನ್ನು ಹೆತ್ತೋಳೇ ತಾಯಿ ತೀರಿಕೊಂಡಳು. ಪಟೇಲರು ಎರಡನೇ ಮದುವೆ ಮಾಡಿಕೊಂಡರು. ಮುಂದೆ ಬಹಳ ವರ್ಷ ಮಕ್ಕಳಾಗಲಿಲ್ಲ. ಗಂಡೊಂದು ಹುಟ್ಟಲಿ—ಅಂತ ತುಂಬ ಪರದಾಡಿದರು ಸಂಗಪ್ಪನಿಗೆ ಹಾಕಿಕೊಂಡ ಹರಕೆ, ಸಲ್ಲಿಸಿದ ಸೇವೆ ಒಂದೊಂದಲ್ಲ. ಇಗೋ, ಈ ನಾಗರಕಲ್ಲು ನಡೆಸಿದೋರೂ ಅವರೇ. ಆದರೂ ಎಲ್ಲಾರಿಗೂ ಕರುಣೆ ತೋರಿಸೋ ಸಂಗಪ್ಪ ಯಾಕೋ ಕಠಿಣವಾಗೇ ಇದ್ದ. ಕಡೆಗೆ ಪೂಜಾರಪ್ಪನ ಸಲಹೆ ಮೇಲೆ ಮಗಳನ್ನು ಬಸವಿ ಬಿಟ್ಟರು. ಎಷ್ಟೋ ವರ್ಷದ ಮೇಲೆ ಅಂತೂ ಸಂಗಪ್ಪ ಕಣ್ಣು ಬಿಟ್ಟ. ಪಟೇಲರಿಗೆ ಗಂಡೂ ಆಯ್ತು."

"ಒಳ್ಳೇ ವ್ಯಾಪಾರ!"

"ಹಾಗಲ್ಲ ಸ್ವಾಮಿ, ಅದೆಲ್ಲ ದೇವರ ಮಾಯೆ. ಅವಳು ಅವನಿಗೇ ಮೀಸಲಾಗಿದ್ದೋಳು. ಬೇರೆ ಹೇಗಾದೀತು?"

"ಸರಿ, ಆ ಮೇಲೆ ?"

"ಎಂಟು ವಯಸ್ಸಿನಲ್ಲೇ ಕಾಳಿ ದೇವಸ್ಥಾನಕ್ಕೆ ಸೇರಿದಳು. ದೊಡ್ಡ ದೇವದಾಸಿ, ಅವಳನ್ನು ಸಂಗೀತ-ನಾಟ್ಯಗಳಲ್ಲಿ ತಯಾರು ಮಾಡಿದಳು. ಸ್ವಲ್ಪ ಕಾಲದಲ್ಲೇ ಕಾಳಿ ಕಲಾಪ್ರವೀಣೆಯಾದಳು. ಅವಳಿಂದ ನಿತ್ಯವೂ ಮಂಗಳಾರತಿಯ ಕಾಲದಲ್ಲಿ ಸಂಗೀತ–ನಾಟ್ಯಗಳ ಸೇವೆ ನಡೆಯುತ್ತಿತ್ತು. ಆ ಸಂದರ್ಭಗಳಲ್ಲಿ ಅವಳು ಹಿಂದಿನ ದೇವದಾಸಿಯರಂತೆ ಶಾಸ್ತ್ರಮಾಡಿ ಬಿಡದೆ, ಶಾಸ್ತ್ರೋಕ್ತವಾಗಿ ಮನಃಪೂರ್ವಕ ಎಷ್ಟೋ ಹೊತ್ತು ಹಾಡುತ್ತ ಕುಣಿಯುತ್ತಿದ್ದಳು. ಅದನ್ನು ನೋಡೋದು ಪೂಜಾರಿಗಳಿಗೂ ಇತರರಿಗೂ ಒಂದು ಹಬ್ಬ. ಅದಕ್ಕಾಗಿಯೇ ಊರಿನ ಜನ ಆಗಾಗ ನೆರೆಯುತ್ತಿದ್ದರು. ಇನ್ನು ವಿಶೇಷ ಉತ್ಸವಗಳ ದಿನಗಳಲ್ಲಂತೂ, ಕಾಳಿಯ ಉತ್ಸಾಹವನ್ನು ಹೇಳಲೇ ಬೇಕಾಗಿಲ್ಲ, ನೆರೆಯೂರುಗಳಲ್ಲೆಲ್ಲ ಅವಳ ಹೆಸರು ಪ್ರಸಿದ್ಧಿಗೆ ಬಂದಿತ್ತು..........."

"ಬಹಳ ಶ್ರದ್ಧಾವಂತಳು, ಅನ್ನಿ" ನನಗೆ ಹೊರಡುವ ಯೋಚನೆ; ಆದರೆ ವಿಷಯವನ್ನು ಕೇಳುವ ಕುತೂಹಲ ಬಿಡುವಂತಿರಲಿಲ್ಲ. ಅದಕ್ಕೇ ಆತುರಪಡಿಸಿದೆ.

"ಹುಂ ಮುಂದೆ ಅವಳಿಗೆ ಪ್ರಾಯ ಬರುವ ಹೊತ್ತಿಗೆ ಪೂಜಾರಪ್ಪ ಸತ್ತು ಹೋದ ಅವನ ಮಗ ನಲವತ್ತು ವರ್ಷದ ಲಿಂಗಪ್ಪ, ಆ ಮುಖ್ಯಸ್ಥಾನಕ್ಕೆ ಬಂದ. ಲಿಂಗಪ್ಪನಿಗೂ ಕಾಳಿಯೇನು ಹೊಸಬಳಲ್ಲ. ಅವಳು ದೇವಸ್ಥಾನಕ್ಕೆ ಸೇರುವಾಗಲೇ ಅವನು ತಂದೆಗೆ ಸಹಾಯಕನಾಗಿ ಪೂಜಾರಿಯ ಕೆಲಸ ಮಾಡುತ್ತಿದ್ದ. ಹುಡುಗಿಯಾಗಿದ್ದಾಗಿನಿಂದಲೂ ಅವಳ ರೂಪು, ಕಲೆ, ನಡೆ ನುಡಿಗಳನ್ನು ಬಹುವಾಗಿ ಮೆಚ್ಚಿಕೊಂಡಿದ್ದ. ವರ್ಷಗಳು ಕಳೆದಂತೆಲ್ಲ ಈ ಆಕರ್ಷಣೆ ಹೆಚ್ಚುತ್ತಿತ್ತು......."

"ಸರಿ, ಸರಿ, ಅದೇ ಕತೆ. ಆ ಬಡ ಹುಡುಗಿಯ ಮೇಲೆ ಕಣ್ಣಿಟ್ಟಿದ್ದ ತಾನೇ!"

"ನಿಜ. ಕಾಲಕ್ಕಾಗಿ ಕಾಯುತ್ತಿದ್ದ. ಅದೇನು ತಪ್ಪು ಅ ನೋಡಿ. ನಡೆದು ಬಂದಿದ್ದ ಪೂರ್ವಾಚಾರ. ಅವಳಿಗಾದರೂ ಏ ದುಃಖ? ಎಳೆಯ ವಯಸ್ಸಿನಿಂದಲೂ ತಾನು ದೇವರಿಗೆ ಮೀಸಲಾ ಹೆಣ್ಣೆಂದು ಭಾವನೆ ಇದ್ದು, ಹೆಮ್ಮೆ-ಸಂತೋಷಗಳಿಂದಲೇ ಇದ್ದ ಕೆನ್ನ ಬೇಕು."

"ಹುಂ, ಆಗಲಿ ಹುಡುಗಿ ಅವನ ಬಗ್ಗೆ ಹೇಗಿದ್ದಳು?" ಅವ ಅಜ್ಞಾನಕ್ಕಾಗಿ ವ್ಯಥೆಯಾಯಿತು.

"ಅದು ಊಹಿಸಿಕೊಳ್ಳೋ ವಿಷಯ. ಇತರರಲ್ಲಿ ಹೇಗೋ ಹಾ ಅವನಲ್ಲೂ ನಸುನಗೆ-ಸಲಿಗೆಗಳಿಂದಲೇ ನಡೆದುಕೊಳ್ಳುತ್ತಿದ್ದಳು, ಗಾಂ ರ್ಯದ ಎಲ್ಲೆ ಮೀರದೆ. ಅವನಾದರೂ ಅವಳು ಎಂದಾದರೂ ತನ್ನದೆ ವಸ್ತುವೆಂದು ಅಡ್ಡದಾರಿಯಲ್ಲಿ ಮುಂದುವರಿಯಲೂ ಇಲ್ಲ..........."

"ಮುಂದೇನಾಯ್ತು ಹೇಳಿ" ತಾನು ಎಲ್ಲವನ್ನೂ ತಿಳಿದಂತೆಯೆ ಇವನು ಹೇಳುತ್ತಿದ್ದುದನ್ನು ಕೇಳಿ, ನನಗೆ ನಗು ಬಂದಿತು. ತಡೆದ ಕೊಂಡು, ಹೇಳುವುದನ್ನೆಲ್ಲ ಹೇಳಲಿ, ಕೇಳಿ ನಿಜವನ್ನು ಗ್ರಹಿಸೋಣ ಎಂದುಕೊಂಡು, ಕತೆಯನ್ನು ಮುಂದುವರಿಸುವಂತೆ ಪ್ರೋತ್ಸಾಹಿಸಿದೆ

"ಹರೆಯ ಬಂದ ಬಸವಿಗೆ ಇಲ್ಲಿಯ ಪದ್ಧತಿಯಂತೆ ದೇವರೊಡ ಕೂಡಿಕೆ ಶಾಸ್ತ್ರ ಆಯಿತು. ಲಿಂಗಪ್ಪನ ಮೇಲ್ವಿಚಾರಣೆಯಲ್ಲಿ, ಉತ್ಸವ ನಿಜವಾದ ಮದುವೆಯಂತೇ ಬಹಳ ವಿಜೃಂಭಣೆಯಿಂದ ನ ಯಿತು. ಆರತಿ ಅಕ್ಷತೆ, ಊಟ ಉಡುಗೊರೆ ಯಾವುದರಲ್ಲೂ ಕಡಿಮೆ ಯಾಗಲಿಲ್ಲ. ಕೂಡಿಕೆ ಗಿರಿಜಾಕಲ್ಯಾಣವೇ ಆಯ್ತು. ಉತ್ಸ ಮೂರ್ತಿಯೊಡನೆ ಹಸೆಯ ಮೇಲೆ ಕುಳಿತಾಗ, ಉಯ್ಯಾಲೆ ತೂ ಕೊಂಡಾಗ, ದಿವ್ಯಾಲಂಕೃತಳಾಗಿ, ಲಜ್ಜೆ-ಗಾಂಭೀರ್ಯಗಳಿಂದ ಕುಲವಧ ವಿನಂತೆಯೇ ನಡೆದುಕೊಂಡ ಕಾಳಿಯನ್ನು ಕಂಡು ಗೌಡರು 'ಅಹಾ ಇವಳನ್ನು ನನ್ನ ಮಗನಿಗೆ ತಂದುಕೋಬೇಕು ಅಂತಿದ್ದೆ. ಅವನಿಗ ನಮಗೂ ಆ ಭಾಗ್ಯ ಇಲ್ಲದೆ ಹೋಯ್ತು' ಅಂದರು. ಅವರ ಹೆಂಡ 'ಅವಳು ಪುಣ್ಯವಂತೆ, ಮನುಷ್ಯನ ಕೈ ಬಿಟ್ಟು ದೇವರ ಕೈಯನ್ನೆ ಹಿಡಿದಳು' ಎಂದರು. ಕಾಳಿಯಾದರೋ, ತನಗೆ ನಿಜವಾಗಿಯೂ ದೇ ರೊಡನೆ ಮದುವೆಯಾದಂತೆಯೇ ಹರ್ಷವಾಗಿದ್ದಳು."

"ಪಾಪ, ಮುಗ್ಧೆ !"

"ಎಲ್ಲ ತಿಳಿದುಕೊಂಡ ರೀತಿ ಇದೆ ಅನ್ನಿ."

"ಅದೇನೋ ದೇವರಿಗೇ ಗೊತ್ತು. ಸೂಳೆಯ ಬಾಳಿನಲ್ಲೇ ಸುಖ ಪಡೋದಾದರೆ......."

"ಛಿ! ಛಿ! ಇದೇನು ಸ್ವಾಮಿ! ದೈವವಧು ಅಂದರೆ ದೈವವಧು, ಸೂಳೆಯೇ! ಚೆನ್ನಾಯ್ತು !"

"ಹುಂ, ಹಾಗೇ ಆಗಲಿ. ಆ ಮೇಲೇ"

"ಮದುವೆಯ ಆಚಾರವೆಲ್ಲ ಮುಗಿದ ಮೇಲೆ ಲಿಂಗಪ್ಪ 'ರಾತ್ರಿ ಸಂಗಪ್ಪನಿಗೆ ಒಪ್ಪಿಗೆ ಆಗಬೇಕು' ಅಂದ. ಅಂದರೆ ನಮ್ಮಲ್ಲಿ ಗರ್ಭಾ-ಧಾನದ ಹೆಣ್ಣಿನಂತೆ ಬಸವಿ ಗರ್ಭಗುಡಿಯಲ್ಲಿ ಒಂದು ರಾತ್ರಿ ಒಬ್ಬಳೇ ಕಳೆಯೋದು ಪದ್ಧತಿಯಾಗಿತ್ತು. ಈ ಮೈಲಿಗೆಗೆ ಮಾರನೆಯ ದಿನ ಶುದ್ಧಿಕ್ರಮ."

"ಒಳ್ಳೇ ಮೈಲಿಗೆ, ಶುದ್ಧಿ! ವಿಚಿತ್ರವಾಡಿಕೆಗಳು! ಹುಂ"

"ಆ ರಾತ್ರಿ ಒಪ್ಪಿಗೆಯ ಮುಂದಿನ ಮಂತ್ರ-ಶಾಸ್ತ್ರಗಳೆಲ್ಲ ಮುಗಿದ ಮೇಲೆ, ಕಾಳಿ ಪೂಜಾರಿಗೆ 'ಗುರುಗಳೆ, ಇವತ್ತೂ ನನ್ನದೇವರ ಮುಂದೆ ನಾಟ್ಯ ಮಾಡಬಹುದೆ?' ಎಂದು ಬೇಡಿಕೊಂಡಳು. ಪೂಜಾರಿ ಕೊಂಚ ಅನುಮಾನಿಸಿ ಒಪ್ಪಿದ. ಆ ದಿನ ಕಾಳಿ ಕುಣಿದ ಕುಣಿತ, ಹಾಡಿದ ಹಾಡು ಇವನ್ನು ಕಂಡು ಕೇಳಿ ಆನಂದಿಸಿದ ಜನರು, ಎಷ್ಟೋ ವರ್ಷಗಳ ಮೇಲೂ ನೆನೆಸಿಕೊಂಡು ಕೊಂಡಾಡುತ್ತಿದ್ದರು. ಅವಳು ಮೈಮರೆತು ಎಷ್ಟೋ ಹೊತ್ತು ಸೇವೆ ಸಲ್ಲಿಸಿದಳು. ಪೂಜಾರಿ ಪ್ರತಿಮೆಯಂತೆ ನಿಂತು ಅವಳನ್ನು ಕಣ್ಣಿನಿಂದಲೇ ನುಂಗುತ್ತಿದ್ದ. ಕಡೆಗೆ ಅವಳು ಗರ್ಭಗುಡಿಯನ್ನು ಹೊಕ್ಕಮೇಲೆ, ಅವನು ಉರಿಯುವ ನಂದಾದೀಪಕ್ಕೆ ಎಣ್ಣೆಹಾಕಿ, ಬತ್ತಿ ನೆಟ್ಟಗೆ ಮಾಡಿ, ಬಾಗಿಲನ್ನೆಳೆದುಕೊಂಡು ಬೀಗಹಾಕಿಕೊಂಡು, ಎಲ್ಲ ಜನರೊಡನೆ ಗುಡಿಯಿಂದ ಹೊರಟುಹೋದ. ಮುದಿ ಕಾವಲುಗಾರ ಹೆಬ್ಬಾಗಿಲನ್ನು ಮುಚ್ಚಿದ. ಹುಣ್ಣಿಮೆಯ ಚಂದ್ರ ನೆತ್ತಿಗೆ ಬಂದಾಗ ಹಳ್ಳಿಯೆಲ್ಲ ಮಲಗಿತ್ತು. ಎಲ್ಲೆಲ್ಲೂ ನಿಶ್ಶಬ್ದ, ಶಾಂತಿ."

ಪೂಜಾರಿ ಕತೆಯನ್ನು ಸ್ವಲ್ಪ ನಿಲ್ಲಿಸಿ ಮುಂದುವರಿಸಿದ: "ಹೆಬ್ಬಾಗಿಲು ಸದ್ದಿಲ್ಲದೆ ತೆರೆಯಿತು. ಪೂಜಾರಿ ಹೆಜ್ಜೆ ಇಡುತ್ತ ಪ್ರವೇಶಿಸಿದ. ಹೆಬ್ಬಾಗಿಲು ಮುಚ್ಚಿಕೊಂಡಿತು. ಅವನು ಹಾಗೇ ನಡೆಯುತ್ತ ಗುಡಿಯ ಹಿಂಭಾಗಕ್ಕೆ, ತೀರ್ಥದ ಕೊಳದ ಬಳಿಗೆ ಹೋದ. ಅಲ್ಲಿ ಏನಿದೆ ಗೊತ್ತಿದೆಯೆ? ಬನ್ನಿ ತೋರಿಸ್ತೀನಿ." ಪೂಜಾರಿ ಅತ್ತ ಕಡೆಗೆ ನಡೆದ. ನಾನು ಮೂಕನಂತೆ ಹಿಂಬಾಲಿಸಿದೆ. ಅಲ್ಲಿ ನಾನು ಹಿಂದೆಯೇ ತುಳಿದಿದ್ದ ಚಪ್ಪಡಿಯನ್ನು ಅವನು ಕಷ್ಟದಿಂದ ಕಿತ್ತು ಎತ್ತಿದ. ಕತ್ತಲೆಯ ನೆಲಮಾಳಿಗೆಯೊಂದು ಬಾಯಿ ತೆರೆಯಿತು.

"ನೋಡಿದಿರಾ, ಈ ಮಾಳಿಗೆಗೇ ಅವನು ಸದ್ದಿಲ್ಲದೆ ಇಳಿದದ್ದು. ಒಳಗೆ ಈಗ ಏನೂ ಇಲ್ಲ. ಆಗ ಭೋಗವಸ್ತುಗಳಿಂದ ತುಂಬಿತ್ತು. ಆ ಪಕ್ಕದಲ್ಲಿ ದೊಡ್ಡ ಸುಪ್ಪತ್ತಿಗೆ......."

"ಊಹೂಂ!"

"ಈಗ ಗೊತ್ತಾಯ್ತೊ? ಸ್ವಲ್ಪ ಹೊತ್ತಿನಲ್ಲೇ ಪೂಜಾರಿ ಕೌಪೀನಧಾರಿಯಾಗಿ, ಮೃಗಚರ್ಮವನ್ನು ಹೊದ್ದು, ಮೈಗೆಲ್ಲ ಬೂದಿ ಬಳಿಸು ಜಟೆ ಕಟ್ಟಿ, ಶಿವನ ರೂಪ ತಾಳಿದ. ಅನಂತರ ಸಂಗಮೇಶ್ವರ ಲಿಂಗದ ಹಿಂದೆಯೇ ಇದ್ದ ರಂಧ್ರದ ಹಗುರವಾದ ಕಲ್ಲನ್ನು ಮೆಲ್ಲಗೆ ಳಿಸಿ, ಕೈಗಳಲ್ಲಿ ಕಪಾಲ-ತ್ರಿಶೂಲಗಳನ್ನು ಹಿಡಿದು, ರಂಧ್ರಕ್ಕಿದ್ದ ಮೆಟ್ಟಲುಗಳನ್ನು ಹತ್ತಿ, ಶಿವನೇ ಉದ್ಭವವಾದ ಹಾಗೆ ಗರ್ಭಗುಡಿಯನ್ನು ಪ್ರವೇಶಿಸಿದ."

"ನೀಚ!"

"ನಂದಾದೀಪ ಹಾಗೇ ಉರಿಯುತ್ತಿತ್ತು. ಕಾಳಿ ಬಾಗಿಲಿನ ಬಳಿಯೇ ಕುಳಿತು ಕಣ್ಣುಮುಚ್ಚಿ ಧ್ಯಾನಾಸಕ್ತಳಾಗಿದ್ದಳು. ಪೂಜಾರಿ ಅರಳಿದ ಮುಖದಿಂದ ನಸುನಗೆಯನ್ನು ಸೂಸುತ್ತ 'ಪ್ರಿಯೆ! ಕಾಳಿ!' ಎಂದು ಮೃದುವಾಗಿ ಕರೆದ. ಅವಳ ಕಣ್ಣುಗಳು ತೆರೆದುವು; ಮುಖದಲ್ಲಿ ವಿಚಿತ್ರವಾದ ಕಳೆ ಹೊಳೆಯಿತು. ಪೂಜಾರಿ ಅತ್ಯಾನಂದದಿಂದ ಅವಳೆಡೆಗೆ ಒಂದೆರಡು ಹೆಜ್ಜೆಯಿಟ್ಟ. ಅವಳು 'ನನ್ನದೇವನೇ' ಎನ್ನುತ್ತ. ಗಾಢಾಲಿಂಗನಕ್ಕಾಗಿ ಕೈನೀಡುತ್ತ ದಿಗ್ಗನೆದ್ದಳು. ಪೂಜಾರಿ ಹಿಗ್ಗಿದ. ಒಂದು ಹೆಜ್ಜೆ ಮುಂದಿಟ್ಟಳು ಅವಳು! ಇವನೆಡೆಗೆ ಬರುತ್ತಿದ್ದಳು! ಅವಳು ಕಾಳಿಯಲ್ಲ, ಮಹಾಕಾಳಿ! ಘೋರ ರೂಪಿಣಿ! ದಿಗಂಬರೆ! ಕೆದರಿದ ಕೇಶ ಹಾರಾಡುತ್ತಿತ್ತು, ಕಣ್ಣು ಕೆಂಡ ಕಾರುತ್ತಿತ್ತು, ಕೆನ್ನಾಲಗೆ ರಕ್ತ ಸುರಿಸುತ್ತಿತ್ತು, ರುಂಡಮಾಲೆ ತೂಗಾಡುತ್ತಿತ್ತು. ಬಂದಳು! ಬಂದಳು! ಬೆಂಕಿ! ಕೈಚಾಚಿ!

"ಪೂಜಾರಿಗೆ ಒಂದೇ ನೋಟ ಸಾಕಾಯ್ತು. ಗಡಗಡನೆ ನಡುಗಿದ, ಹಿಂದೆ ಸರಿದ. ಕಪಾಲ—ತ್ರಿಶೂಲಗಳು ತಾವಾಗಿ ಬಿದ್ದುಹೋದುವು; ಕಣ್ಣುಕತ್ತಲಿಟ್ಟಿತು. ಕಾಲು ಕುಸಿಯಿತು ಮುಂದೇನಾಯಿತೋ !

(೩೪೦ ನೆಯ ಪುಟ ನೋಡಿರಿ)

(೩೩೧ ನೆಯ ಪುಟದಿಂದ ಬಂದುದು)

ದೊಳಗಿನ ತನ್ನ ಪಾಲಿನ ಕರ್ತವ್ಯದ ಕಡೆಗೆ ದುರ್ಲಕ್ಷ್ಯಿಸುತ್ತಾನೆ. ಕರ್ತವ್ಯದ ಕಾಣಿಕೆ ದುರ್ಲಕ್ಷ್ಯಿಸುವುದರಿಂದ, ವ್ಯವಹಾರದಲ್ಲಿ ಆತನಿಗೆ ಅಪಯಶಸ್ಸು ಪ್ರಾಪ್ತವಾಗುವುದು. ಈ ಕಾರಣದಿಂದ ಅತ್ತ ಪರಮಾರ್ಥವೂ ಸಿದ್ಧಿಸುವುದಿಲ್ಲ. ಇತ್ತ ಪ್ರಪಂಚವೂ ಸಿದ್ಧಿಸುವುದಿಲ್ಲ. ಹೀಗಾಗಿ ಸರ್ವ ಕಡೆಯಿಂದಲೂ ದಿನದಿನಕ್ಕೆ ಅವನತಿಯಾಗುತ್ತ ನಡೆದು, ಕಡೆಗೆ ದುಃಖದಲ್ಲಿಯೇ ಅವನ ಜೀವನವು ಮುಕ್ತಾಯವಾಗುವುದು.

"ಎತ್ತೆತ್ತ ನೋಡಿದತ್ತ ನೀನೇ ದೇವ! "ಎಂಬ ಬಸವಣ್ಣನವರ ವಚನದಂತೆ, ಭಕ್ತಿಭಾವಯುಕ್ತ ಪುರುಷನು, ಈ ಜಗತ್ತಿನಲ್ಲಿಯ ಮನುಷ್ಯಾದಿ ಎಲ್ಲ ಪ್ರಾಣಿಗಳು ದೇವರ ಸ್ವರೂಪವೆಂದು, ತಿಳಿದು ತಾನು ಯಾವ ಕರ್ಮಗಳನ್ನು ಮಾಡಿದರೂ ಈಶ್ವರಸೇವೆಯನ್ನೇ ಮಾಡುವೆನೆಂದು ಧೃಢವಾಗಿ ನಂಬಿರುತ್ತಾನೆ. ಒಕ್ಕಲತನ, ಉದ್ಯೋಗ, ವ್ಯಾಪಾರ ರಾಜಕಾರಣ, ಸಮಾಜ ಸೇವೆ, ಜ್ಞಾನಾರ್ಜನ, ಪರಸೇವೆ. ಸ್ವಕೀಯ ಸಂಸಾರದೊಳಗಿನ ಯಾವ ಕಾರ್ಯವನ್ನೇ ಮಾಡುತ್ತಿದ್ದರೂ, ಈಶ್ವರಾರ್ಪಣಭಾವದಿಂದಲೇ ಮಾಡುತ್ತಿರುತ್ತಾನೆ. ಅವನ ಕಾರ್ಯದಲ್ಲಿ ಅಪ್ರಮಾಣಿಕತನ, ಆಲಸ್ಯತನ, ಅಜಾಗರೂಕತೆಗಳಿಲ್ಲದಿರುವುದರಿಂದ, ಆತನು ಕೈಕೊಂಡ ಯಾವ ಕಾರ್ಯವಾದರೂ ಸಹಜವಾಗಿ ಸಮಾಧಾನಕಾರಕವಾಗಿ ಪೂರಯಿಸುತ್ತದೆ. ಅವನಲ್ಲಿರುವ ಕೌಶಲ್ಯವು ದಿನದಿನಕ್ಕೆ ಬೆಳೆಯುತ್ತ ಹೋಗುವುದಲ್ಲದೆ, ಅವನ ವಿಷಯದಲ್ಲಿ ಜನರಲ್ಲಿ ಆದರವು ಹೆಚ್ಚುತ್ತ ಹೋಗಿ, ಜೀವನವು ಪುಣ್ಯಮಯವಾಗುತ್ತದೆ. ಐಹಿಕ ಜೀವನದಲ್ಲಿ ಉತ್ಕರ್ಷ ಹೊಂದುವಂತೆ ಪಾರಮಾರ್ಥದಲ್ಲಿಯೂ ಪವಿತ್ರಾತ್ಮನಾಗುತ್ತಾನೆ, ಇದುವೇ ಭಕ್ತಿಭಾವದ ಬೆಳಕು. ಇದನ್ನೇ ಭಗವದ್ಗೀತೆಯು ಆಡಿ ತೋರಿಸಿತು. ಭಗವಾನ್ ಬಸವನು ಮಾಡಿ ತೋರಿಸಿದನು.

ನಾಟಕಾಭಿನಯ

ಡಾ. ಕೆ. ಎಸ್. ಕಮ್ತಾ, ವಾಣೀಮಂದಿರ, ಕಾಸರಗೋಡು

ನಾಟಕಗಳನ್ನು ಅಭಿನಯಿಸಬೇಕೆಂಬ ಹಂಬಲ ಎಲ್ಲೆಲ್ಲಿಯೂ ತೋರುವುದು; ಆದರೆ ನಾಟಕಾಭಿನಯದ ಸಂಪೂರ್ಣ ಸೌಂದರ್ಯವನ್ನು ಪ್ರದರ್ಶಿಸುವಂತಹ ನಟವರ್ಗ, ದಿಗ್ದರ್ಶಕ, ರಂಗಪರಿಸರ ಇವುಗಳ ಅಭಾವವನ್ನೇ ಎಲ್ಲಾ ಕಡೆಗೂ ನೋಡುತ್ತೇವೆ. ಇದು ಒಳ್ಳೆಯ ಲಕ್ಷಣವೆ?

ಜನಮನೋರಂಜನೆಯೊಡನೆ, ಮಾನವಜೀವನದ ಪುನರ್ನಿರ್ಮಾಣಕಾರ್ಯದಲ್ಲಿ ಬದ್ಧಕಂಕಣನಾಗಿರುವ ವೀರನ ಕೈಯ ಖಡ್ಗದಂತೆ ಕಳೆಯೇರಿದ ಸಾಹಿತ್ಯರಾಶಿಯಲ್ಲಿ, ನಾಟಕವೆಂಬುದು ದೃಶ್ಯ–ಶ್ರವ್ಯಾತ್ಮಕವಾಗಿ ರೂಪುಗೊಂಡು, ಸಮಾಜದ ಅಂತಃಕರಣವನ್ನು ಬೆಳಗುವ ಒಂದು ಉತ್ತಮಕಲೆಯೆಂದರೆ ಈ ಮಾತು ಅತಿಶಯ ಕಥನವಾಗಲಾರದು. ಜೀವನಪ್ರತಿಬಿಂಬಕವಾದ ಸಾಹಿತ್ಯವು ಸಮಾಜದ ಹಿತಕ್ಕಾಗಿಯೆ ವಿಕಾಸಲಾಗಿದ್ದ, ಸಮಾಜಾಂತರ್ಗತವಾದ ವಿವಿಧ ಜೀವನಗಳನ್ನು ತಪ್ಪು–ಒಪ್ಪುಗಳ ದೃಷ್ಟಿಕೋನದಲ್ಲಿ ಅಳೆದು ಪುಟಗೊಳಿಸಿ, ಸಮಾಜಕ್ಕೆ–ಸಮಾಜದ ಸುಖಕ್ಕೆ–ಕಾರಣವಾಗುತ್ತಿದೆ. ಕಾವ್ಯಗಳು, ಆಖ್ಯಾನ–ಆಖ್ಯಾಯಿಕೆಗಳು, ಕಾದಂಬರಿಗಳು ಒಂದು ವಿಧದಲ್ಲಿ ಸಮಾಜದ ಭವ್ಯಭಾವಿಯನ್ನು ಹೊಸೆದರೆ, ನಾಟಕಗಳು ತಮ್ಮದೇ ಆದ ಒಂದು ವೈಶಿಷ್ಟ್ಯದಿಂದ ಜನತೆಯ ಕಣ್ಮನಗಳನ್ನು ತಣಿಸಿ ಹೃದಯವನ್ನು ಬೆಳಗುವುವು ಎಂಬುದಿದು ನಿಶ್ಚಪ್ರಚವು.

ಶ್ರವ್ಯಾನುಕೂಲವುಳ್ಳ 'ನಾಟಕ'ವು ದೃಶ್ಯಾನುಕೂಲ್ಯವನ್ನು ಪಡೆದ ಬಗೆಯಲ್ಲಿ, ಅದರ ವಿಶಿಷ್ಟಗತಿಯಲ್ಲಿ ಇರಬಹುದಾದ ಕೆಲವೊಂದು ವಿಚಾರಗಳನ್ನಿಲ್ಲಿ ತಿಳಿಯುವುದು ಅತ್ಯಗತ್ಯವಿದೆ.

'ರೂಪಕ'ವೆಂಬ ಪದವು ನಾಟಕವೇ ಮೊದಲಾದ ಹತ್ತು ವಿಧಗಳಾದ ದೃಶ್ಯಾನುಕೂಲ ವಸ್ತುಗಳ ಒಂದು ಪಂಗಡದ ನಾಮ. ಜೀವನ ನಿರೂಪಣ ಮೂಲವಾಗಿಯುಳ್ಳ ಈ ವಸ್ತುಗಳೆಲ್ಲವೂ ನಟನಮೂಲವೆಂಬುದನ್ನು ನಾವು ತಿಳಿದುಕೊಂಡರೆ, ನಾಟಕದ ವೈಯಕ್ತಿಕ ಶಬ್ದ-ಸ್ವರೂಪದ ಅರ್ಥ ನಿರ್ಣಯವು ಅನವಶ್ಯವೆಂಬುದನ್ನು ಮನಗಾಣಬೇಕಾಗಿದೆ. ಅಂತೂ ನಟನ–ಭಾವಾನುವ್ಯಂಜಕ ನಟನೆಯಿಂದ, ಕವಿ-ಹೃದ್ಗತ ವಸ್ತುವಿನ್ಯಾಸ ಕೌಶಲದಿಂದ, ಉದಾತ್ತ ವಸ್ತುಗ್ರಹಣದಿಂದ 'ನಾಟಕ'ವು ಕಾವ್ಯರಾಶಿಯಲ್ಲಿ ಅನ್ಯಾದೃಶವಾದ ಒಂದು ಸ್ಥಾನವನ್ನು ಪಡೆಯ ಬಲ್ಲುದು ಎಂದಾದರೆ, ನಾಟಕವು ನಟನನ್ನು, ಕವಿಯನ್ನು, ವಸ್ತುವನ್ನು ಭಾವುಕಹೃದಯವನ್ನು ಅಪೇಕ್ಷಿಸಿದೆ ಎಂಬ ಮಾತು ಸ್ಪಷ್ಟವಾಗುವುದು. ನಾಟಕದ ಪೂರ್ಣತೆಗೂ ಇವರೇ ಕಾರಣರು. ಹೀಗೆ ವೈವಿಧ್ಯ ಪೂರ್ಣ ಗತಿಯಿಂದ ನಾಟಕವು ಸಾಗುವುದರಿಂದಲೇ ಕವಿಸಾರ್ವಭೌಮರು ಜನತೆಯ ಸಾರ್ವಮುಖೀನ ಸಂಸ್ಕೃತಿಯನ್ನಾಶಿ ಜನತೆಯ ಕಲ್ಯಾಣವನ್ನು ಬಯಸಿ, ಕಾವ್ಯಕೋಟಿಯಲ್ಲಿ 'ನಾಟಕ' ಒಂದು ಹೊಸ ತೆರೆಯನ್ನು ತೆರೆದರು. ಸಮಾಜವು ಅದರಿಂದ ಅನಂ ಲಾಭವನ್ನು ಪಡೆಯಿತು. ಬಹು ಸುಲಭದಲ್ಲಿ ತಮ್ಮ ಜೀವಿತವನ ಜೀವನಾಂತರದೊಡನೆ ಹೋಲಿಸಿ, ತಮ್ಮ ವಿರಳತೆಗಳನ್ನು ಕಂ ಕೊಂಡಿತು; ಸಹಾನುಭಾವಗುಣವನ್ನು ಜೀವನಾಂತರದಲ್ಲಿ ಪ್ರಕಾ ಸಲು ಅನುವನ್ನು ಕಲ್ಪಡಿಸಿಕೊಂಡಿತೆಂದು ಧಾರಾಳವಾಗಿ ಹೇ ಬಹುದು.

ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಇತಿವೃತ್ತವನ್ನು ಇತಿವೃತ್ತಭಾಗವನ್ನು ಆಧರಿಸಿ ಕವಿಯು ತನ್ನ ಕಲ್ಪನೆಯ ಕುಂ ದಿಂದ ಅದನ್ನರಳಿಸಿ, ಕಥೆಯ ಸುಂದರ ಪೂರ್ಣತೆಗಾಗಿ, ರಸಾನುಗು ಸನ್ನಿವೇಶಗಳಿಂದ ದೃಶ್ಯಗಳಿಂದ ತನ್ನ ಚಾತುರ್ಯವನ್ನು ಸಾಮಾಜಿ ಸಹೃದಯರ ಕುತೂಹಲಾಕರ್ಷಣೆಗಾಗಿ ಓರಣವಾಗಿ ಸಮೆಯಿಸ ಒಂದು ಕಾಲದಲ್ಲಿ ಶಾಸ್ತ್ರೀಯವಾದ ತಳಹದಿಯಲ್ಲೇ ರೂಪಿತವಾ ಶಾಸ್ತ್ರೀಯವಾದ ಹಿಡಿತಗಳಿಂದಲೇ ಕಳೆಯೇರಿದ ನಾಟಕವು, ಇಂ ಕೆಲವೊಂದು ಬಗೆಯ ನಿಯಮಗಳಿಂದ ದೂರವಾದರೂ, ಸಹೃದಯಾ ನಂದದ ಲಾಭದೊಡನೆ ಸಮಾಜವಿಕಾಸವನ್ನು ಬಯಸುವ ಉದ್ದೆ ವನ್ನು ಳಿದಿಲ್ಲ.

ಇಂತಹ ಉದಾತ್ತ ತತ್ತ್ವಗಳಿಂದ ಬೆಳಗಿ ಬಂದ ನಾಟಕ ಪ ಪರೆಯಲ್ಲಿ, ಪ್ರಕೃತಪರಿಸ್ಥಿತಿಯಲ್ಲಿ ನಾವು ಗುಣಗಳನ್ನು ಕಾಣ ಕಣ್ಣುಗಳಿಂದಲೆ, ಕೆಲವು ಕೊರತೆಗಳನ್ನು ಅವಿರತವಾಗಿ ಕಾಣಬೇ ಗಿದೆ. ಹಲವು ವರುಷಗಳಿಂದೀಚೆ–ಮೊನ್ನೆ ಮೊನ್ನೆಯ ವರೆಗೂ–ರಾ ಶ್ರಯದಿಂದ ಇಲ್ಲವೆ ಸ್ವಾಶ್ರಯದಿಂದ ಬೆಳೆದು ಬಂದ ಹಲವಾರು ಕಂ ಗಳು ಕನ್ನಡಿಗರಿಗೆಂದು ಮಾತ್ರವಲ್ಲ; ಉಳಿದ ಭಾಷಾ ಕೇಂದ್ರಗಳಿ ತಿಳಿದಿರದ ಹೊಸ ವಾರ್ತೆಯೇನೂ ಅಲ್ಲ. ರಸಿಕ ಕಲಾವಿದರ ಮೇ ದಿಂದ ಕಥಾವಸ್ತುವಿನ ಸ್ಥಿತಿಗತಿ–ಘಟನೆ. ಇವುಗಳ ಸಾಕ್ಷಾತ್ಕಾರಕ್ಕಾ ಅನುಗೊಳಿಸಿದ ಸುಸಜ್ಜಿತರಂಗಗಳ ವ್ಯವಸ್ಥೆಯಿಂದ, ಉತ್ತಮ ಹಾ ಆದರ್ಶ ದಿಗ್ದರ್ಶನದ ಪ್ರತ್ಯವೇಕ್ಷಣದಿಂದ, ಅವೇ ನಾಟಕ ಕಂಪನಿಗ

ಗಿದ ಸಾಮಾಜಿಕ ಸೇವೆ—ರಸಿಕರಂಜನೆಗಳ ಕಾರ್ಯವು ಸಾಮಾ ವಲ್ಲ. ಇವು ಕೇವಲ ಜೀವಿಕಾರ್ಥವಾಗಿ ಸಾಗಿದುವುಗಳೆಂದು ಹೇಳು ವರು, ಖಂಡಿತವಾಗಿ ಅವುಗಳ ಕಲಾಸೇವೆಯನ್ನು ಮರೆಯಲಾರ ದೂ ಹೇಳಲೇಬೇಕಾಗಿದೆ. ಸಾಮಾಜಿಕ-ಹಾಗೂ-ಕಾಲಸಂಬಂಧ ಪರಿ ತಿಯಿಂದ ಕೆಲವೊಂದು ಕಂಪನಿಗಳು ಮೂಲೆ ಪಾಲಾದುವು. ವೊಂದು ಮಾತ್ರ ಇಂದು ತಮ್ಮ ಜೀವನದ ಮುಖ್ಯ ಧ್ಯೇಯವನ್ನಿ ರಿಸಿ ಕಲಾ ಸೇವೆಯನ್ನೆ ಸಗುತ್ತಿವೆಯೆಂದು ಮಾತ್ರ ಹೇಳಬಹುದು. ಶಕಾಲಾಯುತ್ತವಾಗಿ ಜೀವನ ಗತಿಯೂ ಸಾಗಬೇಕಷ್ಟೆ! ಅಂತೂ ವರಾಡುವ "ಚಲಚಿತ್ರ ನಿಮಿತ್ತವಾಗಿ ನಾಟಕ ಕಲೆಗೆ ಧಕ್ಕೆಬಂದಿದೆ" ಂಬ ಮಾತನ್ನು ಒಪ್ಪುವುದು ಕಷ್ಟ ಸಾಧ್ಯ. ನಾಟಕ ಕಲೆಯ ಧಕ್ಕೆಗೆ ಥಾರ್ಥವಾದ ಕಾರಣವು ಪರಿಸ್ಥಿತಿಯನ್ನು ಹೊಂದಿಕೊಂಡಿದ್ದಂತೆ ಂದಿನ ಕಲಾವಿದರ ನ್ಯೂನತೆಯನ್ನೂ ನಾವೆಣಿಸಬೇಕಾಗಿದೆ. ನಾಟಕದ ರ್ವರಂಗರೂಪವಾಗಿರುವ ಅಭ್ಯಾಸ, ದಿಗ್ದರ್ಶನ, ನಟನ ಇವುಗಳ ೋಗ್ಯಸಮಾವೇಶವೇ ನಾಟಕದ ಬೆಳಕೆಂಬುದನ್ನು ನಾವು ಮರೆಯ ರೆದು.

ಇಂದು ಕೆಲವೆಡೆ ಪ್ರದರ್ಶಿಸುವ ನಾಟಕಗಳು ದಿಗ್ದರ್ಶನದ ಾದರಿಗಳು ಇವುಗಳನ್ನು ಕಂಡರೆ, ನಾವಿದರ ಯಥಾರ್ಥವನ್ನು ತಿಳಿದು ೊಳ್ಳಬಹುದು. ನಾಟಕವೆಂದರೇನು? ಅದರ ಯೋಗ್ಯತೆಯೇನು? ಭಾವಗಳಿಂದ ಸನ್ನಿವೇಶಗಳಿಂದ ರೂಪುಗೊಳ್ಳುವ ಕಾವ್ಯಹೃದಯ ೇನು? ಎಂಬುವನ್ನು ಪ್ರತಿಯೊಬ್ಬ ಕಲಾವಿದನೂ ಅರಿತಿರುವುದು ತಿ ಮುಖ್ಯವಾಗಿದೆ. ನಾಟಕವಸ್ತುವಿನ ಪೂರ್ಣಪರಿಸ್ಥಿತಿಯು ಲಾವಿದನ ಹೃದಯದಲ್ಲಿ ನೆಲೆನಿಲ್ಲಬೇಕು. ತನ್ನ ಪಾಲಿಗೆ ಬಂದ ್ಯದ ಪೂರ್ಣಪರಿಚಯದ ಹಿನ್ನೆಲೆಯಲ್ಲೇ ಯೋಗ್ಯ ನಟನು ನಾಟ-ಕಾಂತರ್ಗತವಾದ, ಕಥಾಪೋಷಕವಾದ ಎಲ್ಲ ಪಾತ್ರಗಳ ಪೂರ್ಣ-ಪರಿಚಯವನ್ನು ಪಡೆದಿರಬೇಕು. ಈ ವಿಚಾರದಲ್ಲಿ ನಮ್ಮ ದೈನಂದಿನ ಜೀವನದ ಅನುಭವಗಳು, ಸ್ವಾಭಾವಿಕವಾದ ಕೋಪ-ತಾಪಗಳು, ಪ್ರೀತ್ಯನುನಯಗಳು ಇವುಗಳನ್ನು ನೋಡಿಕೊಂಡರೆ ವ್ಯಕ್ತವಾಗುವುದು. ನಾಟ್ಯಾಚಾರ್ಯ ಭರತಮುನಿಗಳ ನಿಯಮ ದಂತೆ, ನಟನಲ್ಲಿರತಕ್ಕ ಯೋಗ್ಯತೆ, ಸದ್ಗುಣ, ದೈಹಿಕ ಲಕ್ಷಣ ಗಳನ್ನು ಇಂದು ನಾವು ವಿಶೇಷವಾಗಿ ಗಮನಿಸುವ ಅಗತ್ಯವಿಲ್ಲವಾ ದರೂ, ಪಾತ್ರವಿತರಣದ ಪೂರ್ವದಲ್ಲೇ ನಟನ ಜೀವನದ—ಸ್ವಭಾವ ಗತಿಯ ಕೆಲವೊಂದು ಬಗೆಯ ಮುಖ್ಯ ಪರಿಚಯವನ್ನಾದರೂ ದಿಗ್ದ-ರ್ಶಕನು ಪ್ರತ್ಯವೇಕ್ಷಿಸುವುದು ಅತ್ಯಗತ್ಯವಿದೆ. ಅದರ ಬದಲು ಬಂದ ವರಿಗೆ—ಸಿಕ್ಕಿದವರಿಗೆ ಬಾಯಿಪಾಠ ಮಾಡುವ ಧೈರ್ಯದ ಮೇಲೆ, ಅಥವಾ ಇನ್ನಿತರ ಅಭ್ಯಾಸಾಶ್ರಯವಾದ ವಿಚಾರವಿಶ್ವಾಸದ ಮೇಲೆ ಪಾತ್ರಗಳನ್ನೀಯುವುದೆಂದರೆ. ಅದು ದಿಗ್ದರ್ಶಕನು ತಾನೇ ಮೊದಲು ಕಲೆಯ ಕೊಲೆಗೆ ಉದ್ಯುಕ್ತನಾಗುವುವೆಂಬುದನ್ನು ಹೇಳದೆ ನಿರ್ವಾಹ ವಿಲ್ಲ. ಇಂತಹ ದಿಗ್ದರ್ಶಕನು ತಾನು ತನ್ನ ದೈಹಿಕವಾದ ಕ್ಷೀಣತೆಗೆ ಎಡೆಯನ್ನು ತಂದುಕೊಳ್ಳುವನಲ್ಲದೆ, ತಾನೇ ಹೆಚ್ಚಾಗಿ ಶಿಕ್ಷಾಕಾಲದಲ್ಲಿ ಂತಶೋಷಣೆ ಮಾಡಿ ಕಷ್ಟಪಡುವನು. ಇದರಿಂದ ನಾಟಕವೂ ಕಳೆ ಯೇರದು; ನಟನಿಗೂ ನಾಟಕಾಶ್ರಯವಾದ ನಟನದ ಸ್ವಾರಸ್ಯವೂ ತಿಳಿಯದು. ಶಿಕ್ಷಿತ ನಟನಿಗೆ-ಅಂದರೆ ಕಾವ್ಯಾಸ್ವಾದನದ ಬಗೆಯನ್ನಾದರೂ ಅರಿತ ಲೋಕಾನುಭವವುಳ್ಳ ನಟನಿಗೆ—ಯೋಗ್ಯ ದಿಗ್ದರ್ಶಕನು ಕೊಡಬೇಕಾದ ಮುಖ್ಯ ದಿಗ್ದರ್ಶನವೆಂದರೆ, ಅದನ್ನು ದಿಗ್ದರ್ಶನ ಪದವೇ ಸಾರುವುದು. ಎಂದರೆ ಮೊದಲಾಗಿ ನಟರಿಗೆ ನಾಟಕೀಯ ವಸ್ತುವಿನ ಪೂರ್ಣ ಇತಿಹಾಸವನ್ನು ವಸ್ತುವಿನ ಪೂರ್ಣತೆಗಾಗಿ ಕವಿ ಯನುಗೊಳಿಸಿದ ನಾಟಕೀಯ ತಂತ್ರಾನುಪಾತ್ರ ಘಟನೆಗಳನ್ನು ಬೋಧಿಸಬೇಕು. ಆ ಬಳಿಕ ವೈಯಕ್ತಿಕ ಪಾತ್ರದ ಸ್ಥಿತಿಗತಿಗಳು ಕವಿಹೃದಯವು ಆ ಪಾತ್ರಕ್ಕಿತ್ತ ಸ್ಥಾನಮಾನಗಳು ಇವನ್ನು ಬೋಧಿಸುವುದರೊಡನೆ, ಸ್ವಾಭಾವಿಕವಾಗಿ ನಟನಲ್ಲಿರತಕ್ಕ ಚತುರತೆಯನ್ನು ಪ್ರೋತ್ಸಾಹಿಸಬೇಕು. ಶಿಕ್ಷಾಕಾಲದಲ್ಲಿ ಪ್ರೋತ್ಸಾಹನವು ಮುಖ್ಯವಾಗಿದೆ. ಹೀಗೆ ನಟನು ಸ್ವಪಾತ್ರೇತಿವೃತ್ತವನ್ನು ಅರಿತ ಬಳಿಕ, ತಾನು ಅಭಿನಯಿಸಲಾರಂಭಿಸಿದಾಗ ದಿಗ್ದರ್ಶಕನು, ಅವನು ಸಾಗುವ ದಾರಿಯನ್ನು ಕಾಯಬೇಕು. ತಪ್ಪಿದಲ್ಲಿ—ಇಕ್ಕಟ್ಟಿನಲ್ಲಿ ಸಿಲುಕಿದಲ್ಲಿ, ಮನೋಧರ್ಮವನ್ನು ಪಡೆಯಲು ಅಸಮರ್ಥನಾದಲ್ಲಿ, ಅವನಿಗೆ ತಾನು ದೀಪವಿನ್ಯಾಸವನ್ನು ಮಾಡಬೇಕು. ಪಥದರ್ಶನ, ದೀಪವಿನ್ಯಾಸ ಇವು ದಿಗ್ದರ್ಶಕನ ಪಾಲಿಗಿರುವ ಪ್ರಧಾನ ಕರ್ತವ್ಯಗಳು. ಈ ಬಗೆಯಿಂದ ನಾಟಕದ ಅಭ್ಯಾಸವು ಸಾಗಿದರೆ, ನಟನ ಹೃದಯವು ಪುಷ್ಕಲವಾಗುವುದು. ತನ್ಮಯನಾಗಿ ಅಭಿನಯಿಸಿ ಕೃತಾರ್ಥನಾಗುವನು ಅವನು. ಆದರೆ ಅದೇಕೋ, ಹೆಚ್ಚಿನೆಡೆಗಳಲ್ಲೂ ಈ ಬಗೆಯ ಅಭ್ಯಾಸಗಳು ಕಾಣಿಸುವುದೇ ಇಲ್ಲ. ಆದುದರಿಂದಲೆ ನಾಟಕಾವಲೋಕನಕಾಲದಲ್ಲಿ ಸಾಮಾಜಿಕರು ನಿರುತ್ಸಾಹಿಗಳಾಗಿ, ನಟನಲ್ಲಿ ಸ್ವಾಭಾವಿಕವಾಗಿ ಎಣಿಸುವುದಕ್ಕಿಂತಲೂ ಹೆಚ್ಚಾದ ಕುಂದನ್ನು ಕಾಣುತ್ತಿರುವರು. ಇಂತಹ ಕುಂದುಗಳನ್ನು ಹೋಗಲಾಡಿಸಲು ಸಮರ್ಥನಾದ ದಿಗ್ದರ್ಶಕನು ಹೇಗಿರಬೇಕೆಂಬುದನ್ನು ನಾವರಿಯಬೇಕಾಗಿದೆ. ದಿಗ್ದರ್ಶಕನ ಕೆಲವು ಮುಖ್ಯ ಯೋಗ್ಯತೆಗಳನ್ನು ನಾವು ಮೊದಲರಿತಂತೆ, ಉತ್ತಮ ದಿಗ್ದರ್ಶಕನು ಕಲಾವಿದನಾಗಿರಬೇಕೆಂಬುದನ್ನು ತಿಳಿಯಲು ಮರೆಯಬಾರದು. ದಿಗ್ದರ್ಶಕನು ನಾಟ್ಯಶಾಸ್ತ್ರದ ಪರಿಚಯವುಳ್ಳವನಿರಬೇಕು. ವಿವಿಧ ಪರಿಸ್ಥಿತಿಗಳಲ್ಲಿ ಜೀವನವು ಹೊಂದಬಹುದಾದ ರೂಪಾಂತರಗಳನ್ನು ಸ್ವಾನುಭವದಿಂದ ಕಂಡವನಿರಬೇಕು. ಇಲ್ಲವೆ ತಿಳಿದವನಿರಬೇಕು. ನಾಟಕೀಯವಾದ ಎಲ್ಲಾ ತಂತ್ರಗಳನ್ನು ಅಭ್ಯಾಸಿಸಿದವನಿರಬೇಕಲ್ಲದೆ, ಉತ್ತಮ ನಾಟಕಗಳನ್ನು ಓದಿ ತಿಳಿದವನಿರಬೇಕು. ರಸ-ಭಾವಗಳ ಪರಚಿತಿಯಿರುವಂತೆಯೆ, ತತ್ತತ್ ರಸಭಾವಗಳನ್ನು ರೂಪಿಸುವ ಸಹೃದಯತೆಯೂ ಅವನಲ್ಲಿರಬೇಕು. ಮುಖ್ಯವಾಗಿ ಸಹನೆಯ ತಳಹದಿಯಲ್ಲಿ ಅವನ ವರ್ತನೆಯು ಮಿಾಸಲಿರಬೇಕು. ಇವೇ ಮೊದಲಾದ ಕೆಲವು ಅವಶ್ಯಂಭಾವ್ಯವಾದ ಗುಣಗಳು, ದಿಗ್ದರ್ಶಕನಲ್ಲಿ ಅಗತ್ಯವಿರಬೇಕು. ಹೀಗಿದ್ದವನು ವಿಶೇಷ ಕಂಠಶೋಷಣೆ ಮಾಡದೆ, ಕೆಲವೊಂದು ಬಗೆಯ ಕುಂದುಗಳಿಂದ ಸೇರಿದ ನಟನಲ್ಲೂ ಪೂರ್ಣತೆಯನ್ನು ತರಲು ಶಕ್ತನಾಗುವನು.

ನಟ ಮತ್ತು ದಿಗ್ದರ್ಶಕನ ಕರ್ತವ್ಯದ ಒಂದು ಸಾಮಾನ್ಯ ನಿರೂಪಣೆಯನ್ನು ಕಂಡ ಬಳಿಕ, ಈ ಉಭಯಾಶ್ರಯವಾಗಿರುವ ವಸ್ತುವಿನ ವಿಚಾರವನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ. ಮೊದಲೇ ನಿರೂಪಿಸಿದಂತೆ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಯಾವುದೇ ಮೂಲವಾದ ನಾಟಕವನ್ನು ಏಕಾಂಕವನ್ನು ಆರಿಸುವಾಗ, ಉತ್ತಮವಸ್ತುವಾಗಿರುವ, ಗತಿಯಲ್ಲಿ ಕುತೂಹಲವನ್ನು ಕೆರಳಿಸುವ ಸುಭಾಷಾ ಸಂಪತ್ತಿನಿಂದ ತುಂಬಿರುವ ಭಾಗವನ್ನಾರಿಸುವ ಹೊಣೆ ಬಹು ಮುಖ್ಯವಾಗಿದೆ. ಇಂದೀಗ ಹೆಚ್ಚಾಗಿ ಅಲ್ಲಲ್ಲಿ ಸಾಮಾಜಿಕ ಜೀವನ ನಿರೂಪಣೆಯ ನಾಟಕಗಳೇ ಆವಶ್ಯಕತೆಯ ದೃಷ್ಟಿಯಲ್ಲಿ ಬೆಳಕನ್ನು ಕಾಣುವುವಾದರೂ, ಉದಾತ್ತ ತತ್ತ್ವಪ್ರತಿಪಾದಕ ಕವಿ ಕೌಶಲ ಪ್ರಭೂತಗಳಾದ ಪೌರಾಣಿಕ-ಐತಿಹಾಸಿಕ ನಾಟಕಗಳ ಕಡೆಗೂ ಗಮನವನ್ನಿರಿಸುವುದು ಮರೆಯಲಾಗದ ವಿಚಾರವಾಗಿದೆ. ಯಾಕೆಂದರೆ ಜನತೆಯಲ್ಲಿ ಭಕ್ತಿ, ವಿಶ್ವಾಸ, ಗತೇತಿಹಾಸಸ್ಮರಣೆ, ಧರ್ಮಾಧರ್ಮಗಳ ಯಥಾರ್ಥ ಪರಿಚಯ ಇವು ಇಂದಿನ ಪರಿಸ್ಥಿತಿಯೊಡನೆ ಅನುಭವಕ್ಕೆ ನಿಲುಕಬೇಕಾಗಿವೆ. ಉದಾತ್ತವಿಚಾರಗಳುಳ್ಳ ಯಾವುವೇ ವಿಧಗಳಾದ ನಾಟಕಗಳಿಗೂ ಜನತೆಯಿಂದ ಸರ್ವಾತ್ಮನಾ ಸ್ವಾಗತವು ಸಿಗಬೇಕಾಗಿದೆ.

ಮತ್ತೊಂದು ವಿಚಾರವು: ಇಂದು ಹಿಂದಿನಂತಲ್ಲ ನಾಟಕದಲ್ಲಿ ಸಂಗೀತದ ಸ್ಥಾನ. ಸಂಗೀತಗಳಿಲ್ಲದ ಗದ್ಯಾತ್ಮಕ ನಾಟಕಗಳಲ್ಲೂ ಇಂದು ಸಂಗೀತಕ್ಕೆ ಎಡೆಯನ್ನು ಕಲ್ಪಿಸುತ್ತಾರೆ. ಕಲ್ಪಿಸಿದ ಇದೇ ಭಾಗದಲ್ಲಿ ಹೆಚ್ಚಾದೆಡೆಗಳಲ್ಲಿ ಸಂಗೀತವು ಚಲಚ್ಚಿತ್ರದ ಮಾದರಿಯನ್ನನುಸರಿಸಿ, ಕೆಲವೆಡೆ ಹಾಸ್ಯಾಸ್ಪದವಾಗುವುದೂ ಇದೆ. ಸ್ವಭಾವತಃ ಹಾಡಲಶಕ್ತನಾದ ನಟನೂ ಇಂದು ಹಾಡಬಲ್ಲನು. ಎಂದರೆ ಅವನ ಬದಲಾಗಿ ಇನ್ನೊಬ್ಬ ಗಾಯಕನು ಒಳಗಿನಿಂದ ಹಾಡುವನು. ಅವನು ಹಾಡುತ್ತಿರುವಾಗ ನಟನು ತಾನೂ. ಹಾಡುವಂತೆ ಅಧರೋಷ್ಠಗಳ ಸ್ಪಂದನವನ್ನು ಮಾಡುತ್ತ, ಕೆಲವೊಮ್ಮೆ ತಪ್ಪಿಬಿದ್ದು ನಗೆಗೀಡಾಗುವುದು ಆಶ್ಚರ್ಯದ ಮಾತಲ್ಲ. ಆದುದರಿಂದ ಇದು ನ್ಯಾಯವೇ? ಹಾಡುವವನು ಹಾಡಿದರೆ ಸಾಲದೇ? ಹಾಡದೆ ಇದ್ದರೆ ನಾಟಕಕ್ಕೆ ಯಾವ ಕುಂದು ಬರಬಹುದು? ಮೇಲೆ ಹೇಳಿದ ಬಗೆಯ ಈ ಸಂಪ್ರದಾಯವು ಕೃತ್ರಿಮದಲ್ಲೂ ಒಂದು ಅಸಹಜವಾದ ಕೃತ್ರಿಮವೆನಿಸಲಾರದೇ? ಮುಂದೊಂದು ದಿನ, ಮಾತು ಬಾರದವನು ಮಾತನಾಡುವ ಪ್ರಸಕ್ತಿಯೂ ಈ ಸಂಪ್ರದಾಯದಲ್ಲಿ ಬರುವುದರಲ್ಲಾಶ್ಚರ್ಯವೇನಿದೆ? ನಾಟಕಗಳಲ್ಲಿ, ಸರ್ವಾತ್ಮನಾ ಚಲಚ್ಚಿತ್ರದ ಅನುಕರಣೆಯು ಸಲ್ಲದು. ಅದರ ಗತಿಗೂ ನಾಟಕದ ಗತಿಗೂ ಅಜಗಜಾಂತರವೆಂಬುದು ಕಲಾವಿದರಿಗೂ ಕಲೋಪಾಸಕರಿಗೂ ಅರಿಯದ ವಿಚಾರವಲ್ಲವಷ್ಟೆ!

ಈ ಮಧ್ಯದಲ್ಲೇ ನಾಟಕಪ್ರದರ್ಶನಾವಸರದಲ್ಲಿ ನಟನ ಮಾತುಗಳು ಸ್ಪಷ್ಟವಾಗಿ ದೂರ ಕೇಳಿಸುವಂತೆ ಧ್ವನಿವರ್ಧಕಯಂತ್ರದ ಏರ್ಪಾಡೂ ಇದೆ. ಇದು ಅಸಹಜತೆಯ ಪರಾಕಾಷ್ಠೆಯಾದರೂ ಇದೊಂದು ರೂಢಿಯಾಗಿಬಿಟ್ಟಿದೆ. ಇದನ್ನು ತೆಗಳುವ ಉದ್ದೇಶವಿಲ್ಲವಾದರೂ ಕೆಲವೊಮ್ಮೆ ಈ ಯಂತ್ರರಾಕ್ಷಸನು ಈ ಕಲೆಯ ಕೊಲೆಗೂ ಕಾರಣನಾಗುವನೆಂಬುದನ್ನು ಹೇಳದೆ ನಿರ್ವಾಹವಿಲ್ಲ. ನಟನ ಸ್ವಾಭಾವಿಕವಾದ ಮಾತಿನ ಏರಿಳಿತಗಳು ಭಾವಾನುವ್ಯಂಜಕ ಧ್ವನಿ ಇವುಗಳ ವ್ಯತ್ಯಸ್ತವಾಗುವುದಿರಲಿ, ಈ ಶಬ್ದಜಾಲವನ್ನೇ ವಿರಸವಾಗಿಸಿ, ಕರ್ಕಶವಾಗಿಸಿ ಸಾಗಿಸುವ ಕಾರ್ಯಭಾರವು ಈ ಯಂತ್ರಾಯತ್ತವಾಗಿಯೂ ಬರುವುದೆಂಬುದು ಅನುಭವವೇದ್ಯವಾಗಿದೆ. ಅನುಭವದ ಮಾತಾಗಿದೆ ಇದು.

[೩೩೩ ನೆಯ ಪುಟದಿಂದ ಬಂದುದು]

“ ಬೆಳಗ್ಗೆ ಗರ್ಭಗುಡಿಯ ಬೀಗ ಒಡೆದಾಗ, ಕಾಳಿ ಆ ಗೂಡಿನ ಮೂರ್ತಿಯಂತೆ ಸಂಗಪ್ಪನನ್ನು ಅಪ್ಪಿ ನಿಶ್ಚೇಷ್ಟವಾಗಿದ್ದಳು. ತಲೆಯೊಡೆದ ಪೂಜಾರಿಯ ಹೆಣ ನೆಲಮಾಳಿಗೆಯಲ್ಲಿ ಬಿದ್ದಿತ್ತು. ಅದರ ಕತ್ತಿನ ಸುತ್ತ ಮೂರು ಬೆರಳಿನ ಗುರುತು ಕಾಣುತ್ತಿತ್ತು. ”

ಕತೆ ನಿಂತಿತು. ನಾನು ಕೂಡಲೇ ಚೇತರಿಸಿಕೊಳ್ಳಲಿಲ್ಲ.

“ ಇದೆಲ್ಲ ಕಟ್ಟುಕತೆ ” ಕಡೆಗೆ ನಸುನಗುತ್ತ ಹೇಳಿದೆ.

“ ಕಟ್ಟುಕತೆ! ಸತ್ಯ ಸ್ವಾಮಿ, ನಾನು ಇಲ್ಲಿ ನಿಂತಿರೋ ಹಾಗೆ! ”

“ ಬಿಡಿ, ಬಿಡಿ. ಯಾರಿಗೆ ಹೇಳ್ತೀರಿ? ಬರಿ ಊಹಾಪೋಹ. ಇಬ್ಬರೂ ಸತ್ತಮೇಲೆ, ನಿಮಗೆ ಹೇಗೆ ಗೊತ್ತಾಯ್ತು ಇದೆಲ್ಲ? ಹೇಳಿ.”

“ ಯಾಕೆ ಸ್ವಾಮಿ? ಆ ಲಿಂಗಪ್ಪ ನಾನೇ.... ಹ್ಹ! ಹ್ಹ! ಹಾ! ”

“ ಆ ! ”

ಅವನು ಅದೃಶ್ಯನಾಗಿದ್ದ. ನಗುವಿನ ಕೇಕೆ ಮಾತ್ರ ಕೇಳಿ ಬರುತ್ತಿತ್ತು.

೪

“ ಯಾಕೋ ಕೂಗಿಕೊಂಡೆ ? ಬೆಳುದಿಂಗಳಲ್ಲಿ ಭಾವನ ಮುಖ ನಗುತ್ತಿತ್ತು. ಒಬ್ಬ ಆಳೂ ನನ್ನ ಕಡೆ ನೋಡುತ್ತಿದ್ದ.

ನನಗೆ ಮಾತಿನ ಚೈತನ್ಯ ಇನ್ನೂ ಬಂದಿರಲಿಲ್ಲ. ಬೆವತ ಮೈ ಸ್ವಾಧೀನಕ್ಕೂ ಬಂದಿರಲಿಲ್ಲ.

“ ಏನು, ದುಃಸ್ವಪ್ನ ಕಂಡೆಯಾ ? ”

ನಾನು ಸುಮ್ಮನೆ ಕಣ್ಣುಬಿಟ್ಟೆ.

“ ಹೇಗಾದರೂ ಆಗಲಿ ಬಿಡು, ಒಳ್ಳೇ ಜಾಗ, ಹೊತ್ತು—ಮಲಗೋದಕ್ಕೆ, ಮಹಾರಾಯ, ಸಧ್ಯ ಬೇಗೇಳು. ನಿಮ್ಮಕ್ಕನಿಗೆ ಜೀವದಲ್ಲಿ ಜೀವವಿಲ್ಲ. ನೀನು ಅವಳಿಗೆ ಹೇಳದೆ ಬಂದು ಬಿಟ್ಟೆಯಂತೆ. ತಮ್ಮ ಏನಾದನೋ ಅಂತ ನಮ್ಮನ್ನು ಅಟ್ಟಿದ್ದಾಳೆ. ಒಳ್ಳೇದೇ ಆಯ್ತು. ಇಲ್ಲದೇ ಇದ್ದರೆ, ಬೆಳಗಿನ ವರೆಗೂ ಇಲ್ಲೇ ಮಲಗಿರ್ತಾ ಇದ್ದೆಯೋ ಏನೋ, ಭೂಪ !

ಮೈ ಸ್ವಲ್ಪ ಚೇತರಿಸಿಕೊಂಡಿತು, ಮೇಲೆದ್ದೆ. ಮನಸ್ಸಿನಲ್ಲಿ ಇನ್ನೂ ಗೊಂದಲವಿತ್ತು, ಸುಮ್ಮನೆ ನಡೆದೆ.

ಪುರುಷಾರ್ಥಿ ಮಾರ್ಕೋನಿ

(ಜೀವನ ಪರಿಚಯ)*

ಲೇ. " ಅನುಲಕ " ಪಣಿಪಾಲ

●

ಇಂದು ರೇಡಿಯೋ ಎಂಬುದು, ಜನಸಾಮಾನ್ಯರಿಗೂ ಪರಿಚಯದ ಹಳೆಯ ಮಾತಾಗಿದೆ. ಆದರೆ, ಇದನ್ನು ಕಂಡುಹಿಡಿದ ವಿಜ್ಞಾನಿ ಮಾರ್ಕೋನಿ, ಇದರ ಸಂಶೋಧನಕ್ಕಾಗಿ ಎಷ್ಟೊಂದು ತೊಂದರೆಗಳನ್ನು ಅನುಭವಿಸಿದ ಗೊತ್ತೆ? ಆತನ ತಪಸ್ಸಿದ್ಧಿಯು ಇಂದು ಲೋಕಕ್ಕೆಲ್ಲ ಪ್ರಯೋಜನಕಾರಿಯಾಗಿದೆ.

●

ಫೆಬ್ರುವರಿ ಸನ್ ೧೮೯೬ರಲ್ಲಿ ಒಂದು ದಿನ, ಒಬ್ಬ ತರುಣ ಇಟಾಲಿಯನನು, ಎಮ್ಡನಿನ ಬಂದರಿನಲ್ಲಿ ಇಳಿದನು. ಸಾಮಾನಿನ ಹೆಸರಿನಲ್ಲಿ ಅವನ ಬಳಿ ಕೆಲವು ಪೆಟ್ಟಿಗೆಗಳಿದ್ದುವು. ಅವುಗಳಲ್ಲಿ ಬಟ್ಟೆ-ಬರೆ ಅಲ್ಪ ಸ್ವಲ್ಪ ಮಾತ್ರವಿತ್ತು; ಆದರೆ ಕಬ್ಬಿಣ ಮತ್ತು ಮರದ ಆ ವಿಚಿತ್ರವಾದ ಉಪಕರಣಗಳು ಮತ್ತು ಬೇರೆ ಬೇರೆ ಆಕಾರದ ವಿವಿಧ ಲೋಹದ ಸರಿಗೆಗಳು ತುಂಬಿದ್ದುವು. ಮೇಲ್ವಿಚಾರಣೆಯ ಸಮಯ, ವಿಚಾರಣಾಧಿಕಾರಿಯು, ಪ್ರತಿಯೊಂದು ಉಪಕರಣವನ್ನೂ ತಿರುಗಿಸಿ ತಿರುಗಿಸಿ ನೋಡಿದನು; ಬಾರಿಸಿ ನೋಡಿದನು; ಆದರೆ ಈ ವಿಚಿತ್ರ ಉಪಕರಣಗಳು ಯಾವ ಉಪಯೋಗಕ್ಕೆಂಬುದು ಅವನಿಗೆ ತಿಳಿಯಲಿಲ್ಲ. ಅವನೊಮ್ಮೆ ಆಶ್ಚರ್ಯದೊಂದಿಗೆ ಆ ತರುಣ ಯಾತ್ರಿಯತ್ತ ನೋಡಿ, ಮತ್ತೊಮ್ಮೆ ಅವನ ಪೆಟ್ಟಿಗೆಗಳತ್ತ ನೋಡಿ ತನ್ನ ಸರ್ವಜ್ಞತ್ವವನ್ನು ಪ್ರಕಟಿಸುತ್ತ ಗಂಭೀರಸ್ವರದಲ್ಲಿ ಹೇಳಿದನು: "ಹಾಂ.....ಹಾಗಾದರೆ ತಾವು ವಿಜ್ಞಾನದ ವಿದ್ಯಾರ್ಥಿಗಳು; ಸರಿ, ತಾವು ಹೋಗಬಹುದು!"

ತನ್ನ ಹರಕುಮುರುಕು ಇಂಗ್ಲೀಷಿನಲ್ಲಿ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತ ಈ ತರುಣನು ಸಸ್ಮಿತ ನುಡಿದನು: "ಧನ್ಯವಾದ!" ಬಳಿಕ ತನ್ನ ಸಾಮಾನುಗಳನ್ನು ಕೂಲಿಯ ತಲೆಯ ಮೇಲೆ ಹೇರಿ ನಡೆದನು. ನಿರೀಕ್ಷಣಾಧಿಕಾರಿಯು, ಹೋಗುತ್ತಿರುವ ತರುಣನತ್ತ, ಪ್ರಾಯಃ "ಹುಚ್ಚನಲ್ಲವಲ್ಲ ಇವನು!" ಎನ್ನುವ ಭಾವದಿಂದ ಆಶ್ಚರ್ಯಚಕಿತನಾಗಿ ನೋಡುತ್ತಿದ್ದನು; ಆದರೆ ಆ ನಿರೀಕ್ಷಣಾಧಿಕಾರಿಗೆ, ಈ ಹುಚ್ಚನಂತೆ ತೋರುವ ತರುಣನೇ ಈ ಕಾಲದ ವಿಜ್ಞಾನದ ಪ್ರಪಿತಾಮಹನೆನ್ನಿಸಿಕೊಳ್ಳುವ, ಆಕಾಶವಾಣಿಯ ಆವಿಷ್ಕರ್ತನಾದ ಮಾರ್ಕೋನಿಯೆಂಬುದು ಪಾಪ ಏನು ಗೊತ್ತು?

ಮಾರ್ಕೋನಿಯು ಇಂಗ್ಲಾಂಡಿನ ಭೂಸ್ಪರ್ಶಕ್ಕಿಂತ ಬಹಳ ಮೊದಲೇ, ರೇಡಿಯೋತರಂಗಗಳ ರಹಸ್ಯಮಯ ಶಕ್ತಿಯನ್ನು ಸಂಶೋಧಿಸಿದ್ದನು. ತನ್ನ ಮಾತೃಭೂಮಿಯಾದ ಇಟಲೀ ಸರಕಾರದ ಮುಂದೆ ಅವನು ತನ್ನ ಪ್ರಯೋಗದ ಮಹತ್ತ್ವವನ್ನರುಹಿದನು, ಆದರ ಚಮತ್ಕಾರವನ್ನು ತೋರಿಸಿದನು; ಆದರೆ ಅಧಿಕಾರಿವರ್ಗವು ಅದನ್ನು ಕೇವಲ ಹುಡುಗಾಟವೆಂದು ತಳ್ಳಿಹಾಕಿತು. ೨೨ ವರ್ಷ ವಯಸ್ಸಿನ ತರುಣ ವೈಜ್ಞಾನಿಕನಿಗೆ, ಅಧಿಕಾರಿವರ್ಗದ ಈ ಅವಹೇಳನವು ಬಹಳ ನಿರಾಶೆಯನ್ನುಂಟುಮಾಡಿತು. ಅವನು ಹತಾಶನಾಗಿ, ತನ್ನ ತಾಯ ಬಳಿ ಹೋಗಿ ಹೇಳಿದನು: "ಅಮ್ಮಾ! ನನ್ನ ಪ್ರಯೋಗಗಳನ್ನು ಇಲ್ಲಿ ಯಾರೂ ತಿಳಿಯುವುದಿಲ್ಲ! ನಾನೇನು ಮಾಡಲಿ?" ತಾಯಿ ತನ್ನ ಮಗನನ್ನು ಬೆನ್ನುತಟ್ಟಿ ಉತ್ತೇಜನ ಕೊಟ್ಟಳು:—"ಮಗನೆ! ಇಷ್ಟರಿಂದಲೇ ನಿರಾಶನಾದೆಯ?.......ಈಗಾಗಲೇ ಇದು ನಿನ್ನ ಜೀವನದ ಮೊದಲನೆಯ ಘಟ್ಟ! ಇಂತಹ ಎಷ್ಟು ಘಟ್ಟಗಳನ್ನು ದಾಟಬೇಕೋ ಯಾರು ಬಲ್ಲರು? ಪರಮಾತ್ಮನ ಮೇಲೆ ಪೂರ್ಣ ವಿಶ್ವಾಸವಿಟ್ಟು, ನೀನು ಇಂಗ್ಲಾಂಡಿಗೆ ಹೋಗು. ಅಲ್ಲಿ ನಿನಗೆ ಎಲ್ಲ ತರದ ಸಹಾಯ ದೊರಕುವುದೆಂದು ನನಗೆ ವಿಶ್ವಾಸವಿದೆ. ನನ್ನ ಹಾರ್ದಿಕ ಆಶೀರ್ವಾದ ತೆಗೆದುಕೊ! ನೀನು ನಿಜವಾಗಿಯೂ ಸಫಲ ಕಾರ್ಯನಾಗುವೆ." ಸರಿ! ಮತ್ತೆ ಧರ್ಮ ಸರಾಯಣೆ ಮಾತೆಯ ಆಶೀರ್ವಾದದ ಆಶ್ರಯ ಹಾಗೂ ಸ್ವಲ್ಪ ಹಣದೊಂದಿಗೆ, ಮಾರ್ಕೋನಿ ಇಂಗ್ಲಾಂಡಿಗೆ ಬಂದನು.

ಸಾಮಾನ್ಯತಃ ಎಷ್ಟೋ ತಿಂಗಳ ನಿರಾಶಾಜನಕ ಅಸಫಲತೆಗಳ ನಂತರ ಒಂದು ರಾತ್ರಿ, ಪ್ರಯೋಗಶಾಲೆಯ ಒಂದು ಸ್ವಿಚ್ಚನ್ನು ಒತ್ತುತ್ತಲೇ ಸಣ್ಣ ಒಂದು ಕಿಡಿಯೊಂದಿಗೆ ಮೂವತ್ತು ಅಡಿದೂರದ ಒಂದು ಕೋಣೆಯಲ್ಲಿಟ್ಟ ಗಂಟೆಯು ಬಾರಿಸಲ್ಪಟ್ಟಾಗಲೇ—೧೮೯೭ರಲ್ಲಿಯೇ—ಮಾರ್ಕೋನಿಯ ಪ್ರಯೋಗವು ಸಿದ್ಧವಾಗಿತ್ತು. ಆದರೆ ಈ ಸಿದ್ಧಿಯನ್ನು ಪೂರ್ಣತೆಗೆ ಒಯ್ಯಲು ಮತ್ತು ಪ್ರಮಾಣಿಸಲು ಸಾಕಷ್ಟು ಸಮಯ ಮತ್ತು ಹಣದ ಆವಶ್ಯಕತೆಯಿತ್ತು. ಮಾರ್ಕೋನಿಗೆ ತಂತಿಯಿರದೆಯೆ ಶಬ್ದಗಳನ್ನು ಹರಿಸಬಹುದೆಂಬ ಪ್ರೇರಣೆಯು,

* ಹಿಂದಿಯಲ್ಲಿ ಪ್ರಕಟವಾದ ಲೇಖನವೊಂದರ ಆಧಾರದಿಂದ ಬರೆದುದು.
ಲೇ.

ತನ್ನ ಶೋಧನೆಗಳನ್ನು ಅಪೂರ್ಣವಾಗಿ ಬಿಟ್ಟೇ ಗತಿಸಿದ—ಜರ್ಮನಿಯ ವೈಜ್ಞಾನಿಕ—ಹೆನ್ರಿ ಹರ್ಟ್ಜ್‌ನ ಮೂಲಕ ದೊರಕಿತ್ತು. ಕೂಡಲೆ ತರುಣ ಮಾರ್ಕೋನಿಯು ತನ್ನ ಈ 'ಅಪರಿಚಿತ' ಗುರುವಿನ ಕಾರ್ಯಗಳನ್ನು ಪೂರ್ಣಮಾಡುವ ಸಂಕಲ್ಪವನ್ನು ಮಾಡಿದ್ದನು

ಮಾರ್ಕೋನಿಯ ತಾಯಿಯು ಕೊಟ್ಟಿದ್ದ ಆಶ್ವಾಸನೆಯು ಶಬ್ದಶಃ ಸತ್ಯವಾಯಿತು. ಬ್ರಿಟನ್ನಿನ ಸರಕಾರ ಮತ್ತು ಕೆಲವು ಧನಿಕ ನಾಗರಿಕರು, ಅವನ ಪ್ರತಿಭೆಯನ್ನು ಚೆನ್ನಾಗಿ ಅರಿತರು: ಅವನಿಗೆ ಯಂತ್ರಸಂಬಂಧದ ಪ್ರಯೋಗಗಳಿಗೆ ಅನುಕೂಲವಾಗುವಂತೆ, ಒಂದು ವ್ಯಾಪಾರಿಕ ಸಂಸ್ಥೆಯನ್ನು ತೆರೆದರು. ಇಪ್ಪತ್ತುಮೂರು ವರುಷದ ಪ್ರಾಯದಲ್ಲಿ ಮಾರ್ಕೋನಿಗೆ, ತನ್ನ ಪ್ರಯೋಗಗಳಿಗೆ ನಗದಿ ಎರಡು ಲಕ್ಷರೂಪಾಯಿ, ಮತ್ತು "ವಾಯರ್‌ಲೆಸ್ ಟೆಲೀಗ್ರಾಫೀ ಕಾರ್ಪೊರೇಶನ್"ನ ೫೦ ಪ್ರತಿಶತದ ಪಾಲುಗಾರಿಕೆ ದೊರೆಯಿತು. ಸಾಕಷ್ಟು ಪ್ರೋತ್ಸಾಹ ಹೊಂದಿ, ಮಾರ್ಕೋನಿ ತನ್ನ ಪ್ರಯೋಗಗಳಲ್ಲಿ ಸಂಪೂರ್ಣ ಮಗ್ನನಾದನು.

ಸನ್ ೧೮೯೭ರಲ್ಲಿ ಅವನು 'ಶ್ವೇತದ್ವೀಪ' (White Island)ದಲ್ಲಿ ಮೊದಲಿನ ನಿಸ್ತಂತುವಿನ ಸ್ಟೇಶನನ್ನು ಮಾಡಿದನು ಮತ್ತು ೧೪ ಮೈಲು ದೂರದಲ್ಲಿರುವ ಒಂದು ಹಡಗಿನೊಂದಿಗೆ ಸಂಪರ್ಕ ಇಟ್ಟುಕೊಂಡನು. ಅದಕ್ಕೆ ಮುಂದಿನ ವರ್ಷ ನಡೆದ ಹಡಗುಗಳ ಸ್ಪರ್ಧೆಯಲ್ಲಿ, ಮಾರ್ಕೋನಿಯ ಯಂತ್ರದ ವ್ಯಾವಹಾರಿಕ ಉಪಯೋಗವು ಸಿದ್ಧವಾಯಿತು. ಓಟದಲ್ಲಿ ಭಾಗವಹಿಸುವ ಹಡಗುಗಳ ಹಿಂದೆ ಒಂದು ಸಣ್ಣ ಹಡಗಿನಲ್ಲಿ ರೇಡಿಯೋ ಇಡಲ್ಪಟ್ಟಿತು. ಇದರ ಮುಖಾಂತರ ಮಾರ್ಕೋನಿಯು, ಹಡಗುಗಳ ಗತಿ-ವಿಧಿಗಳ ಕುರಿತು ನೂರಕ್ಕಿಂತ ಹೆಚ್ಚು ಸಂದೇಶಗಳನ್ನು ಡಬ್ಲಿನಿನಲ್ಲಿದ್ದ "ಡೈಲಿ ಎಕ್ಸ್‌ಪ್ರೆಸ್" ಸಮಾಚಾರಪತ್ರಕ್ಕೆ ಕಳುಹಿದನು. ಈ ಪತ್ರಿಕೆಯು ಆಭಾರ ಪ್ರದರ್ಶನಕ್ಕಾಗಿ ಮಾರ್ಕೋನಿಯ ಸಂಶೋಧನೆ ಮತ್ತು ಅದರ ಪ್ರಯೋಜನದ ಕುರಿತು ಬಹಳ ಪ್ರಶಂಸಿಸುತ್ತ—"ಭವಿಷ್ಯದಲ್ಲಿ ದೂರದ ಸ್ಥಾನಗಳಿಗೆ ಸಮಾಚಾರ ತಲುಪಿಸಲು ಮಾರ್ಕೋನಿಯ ಈ ಆವಿಷ್ಕಾರವು (ಸಂಶೋಧನೆ) ಬಹಳ ಉಪಯುಕ್ತವೆಂದು ಪ್ರಮಾಣಿತವಾಗುವುದು" ಎಂದು ಬರೆಯಿತು.

ಇಂಗ್ಲೆಂಡಿನ ಮಹಾರಾಣಿ ವಿಕ್ಟೋರಿಯಾ. ಆಗ "ವಾಯ್‌ಟ್ ದ್ವೀಪ" ದಲ್ಲಿದ್ದ ತಮ್ಮ 'ಗ್ರೀಷ್ಮನಿವಾಸ'ದಲ್ಲಿದ್ದರು. ಅನಂತರ ಸಮ್ರಾಟ್ ಸಪ್ತಮರೆಂದು ಘೋಷಿತರಾದ ಅವರ ಜ್ಯೇಷ್ಠಪುತ್ರರು—'ಓಸ್ಬೋರ್ನ್' ಎನ್ನುವ ರಾಜ್ಯಕ್ಕೆ ಸಂಬಂಧಪಟ್ಟ ಹಡಗದಲ್ಲಿದ್ದು, ಕಾಲುನೋವಿಗೆ ಚಿಕಿತ್ಸೆಯನ್ನು ಪಡೆಯುತ್ತಿದ್ದರು. ಮಾರ್ಕೋನಿಯ ಯಂತ್ರದ ಮಾಧ್ಯಮದಿಂದ ದಿನದಲ್ಲಿ ಹಲವು ಸಲ ಯುವರಾಜರ ಸ್ವಾಸ್ಥ್ಯಸಂಬಂಧದ ಸಮಾಚಾರಗಳನ್ನು ತಿಳಿಯುವಂತಾಗುತ್ತಿದ್ದರೆ ಒಳ್ಳೆಯದಾದೀತೆಂದು ಮಹಾರಾಣಿಯವರ ಇಚ್ಛೆಯಾಗಿತ್ತು. ಮಾರ್ಕೋನಿ ಸಹ ಮಹಾರಾಣಿಯವರ ಇಚ್ಛಾನುಸಾರ ಕಾರ್ಯನೆಸಗಲು ಒಪ್ಪಿದನು.

ಒಂದು ದಿನ, ಮಾರ್ಕೋನಿಯು ರಾಜೋದ್ಯಾನದಲ್ಲಿ ಕಾರ್ಯವೆಸಗುತ್ತಿದ್ದಾಗ, ಮಹಾರಾಣಿಯು ಅಲ್ಲಿಂದಾಗಿ ಹೋದವರು, ಅವನ ಅಭಿವಾದನವನ್ನು ಸ್ವೀಕರಿಸದೆಯೇ ಮುಂದರಿದರು. ಭಾವುಕ ಪ್ರಕೃತಿಯ ಮಾರ್ಕೋನಿಯು, ಆಗಲೆ ಅರಮನೆ ಬಿಡುವ ನಿಶ್ಚಯಮಾಡಿದನು. ಮಹಾರಾಣಿಯವರಿಗೆ ಈ ಸಮಾಚಾರವನ್ನು ತಲುಪಿಸಿದಾಗ, ಅವರು ಆಜ್ಞಾಪಿಸಿದರು: "ಒಡನೆ ಯಾರಾದರೊಬ್ಬ ಬೇರೆ ವಿದ್ಯುತ್ಕಾರ್ಯಕರ್ತನನ್ನು ನೇಮಿಸಿರಿ." ಆಗ ಸಭಾಸದರು: "ಇದು ಅಸಂಭವ ಮಹಾರಾಣಿಯವರೆ! ಯಾಕೆಂದರೆ, ಇಂಗ್ಲೆಂಡ್ ಇದುತನಕ ಯಾವ ಮಾರ್ಕೋನಿಯನ್ನೂ ನಿರ್ಮಿಸಿಲ್ಲ." ಎಂದು ಉತ್ತರ ಕೊಟ್ಟರು. ಈ ಉತ್ತರದಿಂದ ಮಹಾರಾಣಿಯವರ ಕ್ರೋಧವು ಒಡನೆ ಶಾಂತವಾಯಿತು. ಇತ್ತ ಬಹಳ ಸಮಾಧಾನ ಮಾಡಿದ ಬಳಿಕ, ಮಾರ್ಕೋನಿಯೂ ವಾಯ್‌ಟ್ ದ್ವೀಪ ಮತ್ತು 'ಒಸ್ಬೋರ್ನ್' ಹಡಗಿನ ಮಧ್ಯೆ ರೇಡಿಯೋ ಹಾಕುವ—ಅಪೂರ್ಣ,—ಕೆಲಸವನ್ನು ಪೂರ್ಣಗೊಳಿಸಿದನು.

ಸನ್ ೧೮೯೯ರಲ್ಲಿ, ಅವನ ಯಂತ್ರದ ಸಹಾಯದಿಂದ, ಮೊದಲ ಬಾರಿ ಸಾವಿರಾರು ಜನರ ಜೀವ ಉಳಿದಾಗ, ಅವನ ಯಶಸ್ಸು ಮತ್ತಷ್ಟು ಹಬ್ಬಿತು. ಇಂಗ್ಲೀಷ್ ಚಾನಲ್ ದಾಟುವ ಸಮಯದಲ್ಲಿ ಒಂದು ಹಡಗು, ಬಂಡೆಗೆ ಢಿಕ್ಕಿ ಹೊಡೆದು ಒಡೆದು ಹೋಯಿತು. ಅದರ ಅಪಾಯದ ಸೂಚನೆಯನ್ನು ರೇಡಿಯೋದಿಂದ ಸಜ್ಜಿತವಾದ ಮತ್ತೊಂದು ಇಂಗ್ಲಿಷ್ ಹಡಗದ ಕೆಪ್ಟನನು ಕೇಳಿದನು. ಒಡನೆಯೆ ಅವನು ನಿಸ್ತಂತುವಿನ ಸಹಾಯದಿಂದ ಈ ದುರ್ಘಟನೆಯ ಸಮಾಚಾರವನ್ನು ತಟಕ್ಕೆ ತಲುಪಿಸಿದನು. ಇದರಿಂದಾಗಿ ಮುಳುಗುವ ಹಡಗಿನ ಎಲ್ಲಾ ಯಾತ್ರಿಕರ ಪ್ರಾಣರಕ್ಷಣೆಯು ಯೋಗ್ಯ ಸಮಯದಲ್ಲಿಯೆ ಆಯಿತು.

ಇದರ ನಂತರ ಇಂಗ್ಲೆಂಡ್ ಮತ್ತು ಯುರೋಪಿನ ಹಲವು ಬಂದರಗಳಲ್ಲಿ ನಿಸ್ತಂತುವಿನ ಸ್ಟೇಶನುಗಳು ರಚಿಸಲ್ಪಟ್ಟುವು. ಇಂಗ್ಲೆಂಡ್ ಮತ್ತು ಇಟಲಿಯ ಹಲವು ಹಡಗುಗಳು ರೇಡಿಯೋ ಯಂತ್ರಗಳಿಂದ

ಹಳ್ಳಿ—ಪಟ್ಟಣಗಳಲ್ಲಿ, ಬೀದಿ—ಬೀದಿಗಳಲ್ಲಿ
ಪ್ರಚಾರವಾಗಬೇಕಾಗಿದ್ದರೆ

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ
ಪ್ರಚಾರ ಮಾಡುವೆವು.
ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

ಸಜ್ಜಿತವಾದುವು. ಆದರೆ ಮನಸ್ಸೇ ಮಾರ್ಕೋನಿಗೆ ಇಷ್ಟರಿಂದಲೇ ತೃಪ್ತಿಯಾಗಲಿಲ್ಲ. ಅವನು ಯುರೋಪ್ ಮತ್ತು ಅಮೇರಿಕಾವನ್ನು ನಿಸ್ತಂತುವಿನಿಂದ ಸಂಬಂಧಿಸಲು ಬಯಸಿದನು. ಇದು ಸಂಭವನೀಯವೆಂಬುದು ಅವನ ದೃಢವಿಶ್ವಾಸವಾಗಿತ್ತು.

ಒಂದು ವರ್ಷದ ಅನವರತ ಪರಿಶ್ರಮದನಂತರ, ಅವನು ಯುರೋಪಿನ ಮೊದಲ ನಿಸ್ತಂತುನಿಲ್ದಾಣ (ಸ್ಟೇಶನ್)ವನ್ನು "ಪೋಲ್ಡೂ" ಎನ್ನುವ ಬಂದರಿನಲ್ಲಿ ಮಾಡಿದನು. ಆದರೆ ಒಂದು ಭಯಂಕರ ತುಫಾನಿನಿಂದಾಗಿ ಸ್ಟೇಶನು ನಷ್ಟವಾಯಿತು. ಮಾರ್ಕೋನಿಯ ಸಾಧನೆಯು ಅಪೂರ್ಣ ಉಳಿಯಿತು. ಆದರೆ ಅವನು ಸ್ವಲ್ಪವೂ ಹತೋತ್ಸಾಹಿಯಾಗಲಿಲ್ಲ, ಬದಲಾಗಿ, ಮೊದಲು ಸ್ಟೇಶನಿದ್ದಲ್ಲಿ ಪುನಃ ಒಂದು ಸ್ಟೇಶನನ್ನು ನಿರ್ಮಿಸಿದನು; ಮತ್ತು ಅಂತಹದೇ ಒಂದು ಸ್ಟೇಶನನ್ನು ನಿರ್ಮಿಸಲು ಅಮೇರಿಕಾದ "ನ್ಯೂಫೌಂಡ್‌ಲೇಂಡಿ"ಗೆ ಪ್ರಯಾಣ ಬೆಳೆಸಿದನು.

ಅನೇಕ ತೊಂದರೆಗಳನ್ನು ದಾಟಿದ ತರುವಾಯ "ಸಮುದ್ರದಾಚೆ ಸಮಾಚಾರ ಕಳುಹುವ ವಿದ್ಯುದ್ಯಂತ್ರ"ದ ಖ್ಯಾತಿಯು, ಮಹತ್ತ್ವಪೂರ್ಣ ದಿನ ೧೨ನೆಯ ದಶಂಬರ್ ೧೯೦೧ ರಂದು, ವಿದ್ಯುತ್ತಿನಂತೆ ವಿಶ್ವದಲ್ಲಿ ಹರಡಿತು. ಅನಂತರ ಮಾರ್ಕೋನಿಯು ನ್ಯೂಫೌಂಡ್‌ಲೇಂಡಿನಲ್ಲಿ ಒಂದು ಸ್ಥಾಯೀ ಸ್ಟೇಶನನ್ನು ಮಾಡುವ ವಿಚಾರ ಮಾಡಿದನು. ಆದರೆ ಯೋಗ್ಯ ಸಮಯದಲ್ಲಿ ಅಮೇರಿಕಾದ "ಎಂಗ್ಲೋ ಅಮೇರಿಕನ್ ಕಂಪೆನಿ"ಯು ತನ್ನ ವಿಶೇಷಾಧಿಕಾರಗಳನ್ನು ಉಪಯೋಗಿಸುತ್ತ, ಅವನಿಗೆ ತನ್ನೆಲ್ಲಾ ಪ್ರಯತ್ನಗಳನ್ನು ನಿಲ್ಲಿಸಲು ಆಜ್ಞಾಪಿಸಿತು. ಫಲತಃ ಅವನಿಗೆ ತನ್ನ ಪ್ರಯೋಗಗಳನ್ನು ಅರ್ಧದಲ್ಲಿಯೇ ಬಿಟ್ಟು ಕೆನಡಾಕ್ಕೆ ಹೋಗಬೇಕಾಯಿತು. ಕೆನಡಾದ ಅರ್ಥಮಂತ್ರಿ ವಿಲಿಯಮ್ಸ್ ಸ್ಟೀವೆನ್ಸ್ ಫೀಲ್ಡಿಂಗ್‌ನು "ನೊವಾಸ್ಕೋಶಿಯಾ"ದಲ್ಲಿ ಒಂದು ನಿಸ್ತಂತು ನಿಲ್ದಾಣವನ್ನೆಸಗಲು ಅವನಿಗೆ ಎರಡು ಲಕ್ಷ ರೂಪಾಯಿಯ ಸಹಾಯಮಾಡಿದನು.

ಸ್ವಲ್ಪ ಸಮಯದನಂತರ, ಮಾರ್ಕೋನಿಗೆ ತನ್ನ ಕೆನಡಾದಲ್ಲಿರುವ ಸ್ಟೇಶನಿನ ಸಫಲತೆಯ ಸಮಾಚಾರ ದೊರೆಯಿತು. "ಪೋಲ್ಡೂ"ವಿನಿಂದ ನಿಸ್ತಂತುವಿನ ಮೂಲಕ ಕಳುಹಲ್ಪಟ್ಟ ಸಮಾಚಾರವು, ಕೆನಡಾದ "ಗ್ಲೆಸ್‌ಬೇ" ಸ್ಟೇಶನಿನಲ್ಲಿ ಸರಿಯಾದ ರೂಪದಲ್ಲಿ ತಲುಪತೊಡಗಿತು. ಹೀಗೆ ಪುರುಷಾರ್ಥ ಮತ್ತು ಪರಿಶ್ರಮದಲ್ಲಿ ವಿಶ್ವಾಸವಿಟ್ಟಿರುವ ಮಾರ್ಕೋನಿಯ ಜೀವನದ ಒಂದು ದೊಡ್ಡ ಮಹತ್ತ್ವಾಕಾಂಕ್ಷೆ ಪೂರ್ಣವಾಯಿತು.

ಹಿಂದಿರುಗಿದಾಗ ಮಾರ್ಕೋನಿಗೆ ಯುರೋಪಿನ ಪ್ರತಿಯೊಂದು ದೇಶದಿಂದಲೂ, ಇಟಲಿಯ ಪ್ರತಿಯೊಂದು ನಗರದಿಂದಲೂ ಅಭೂತಪೂರ್ವ ಸ್ವಾಗತ ದೊರೆಯಿತು. ಹಲವು ವೈಜ್ಞಾನಿಕಸಂಸ್ಥೆಗಳು ಆತನಿಗೆ "ನಿಸ್ತಂತು(ಈಗಿನ 'ರೇಡಿಯೋ')ವಿನ ಜನಕ"ನೆಂಬ ಉಪಾಧಿಯನ್ನಿತ್ತುವು. ಇದೇ ವರ್ಷ ಅವನು 'ಬೀಟ್ರಿಸ್ ಓ ಬ್ರಾಇನ್' ಎನ್ನುವ ಒಬ್ಬ ಆಂಗ್ಲ ತರುಣಿಯೊಂದಿಗೆ ವಿವಾಹ ಮಾಡಿಕೊಂಡನು.

ಪತ್ನಿಯನ್ನು ಕರೆದುಕೊಂಡು ಮಾರ್ಕೋನಿಯು ಕೆನಡಾಕ್ಕೆ ಹೋದಾಗ, ಅವನ ಮೊದಲಿನ ಕಂಪೆನಿಯು ಆರ್ಥಿಕ ಕಠಿಣತೆಯಲ್ಲಿತ್ತು. ಶೋಧನೆಯ ಕೆಲಸದಲ್ಲಿ ಅವನ ಎಲ್ಲ ಸಂಪತ್ತು ಖರ್ಚಾಗಿದ್ದಿತು. ಬ್ಯಾಂಕುಗಳು ಅವನಿಗೆ ಸಾಲಕೊಡಲು ಸಂಪೂರ್ಣ ನಿರಾಕರಿಸಿದ್ದುವು.

ಕಠಿಣತೆಗಳ ಅಂತ್ಯ ಇಲ್ಲಿಗೇ ತೀರಲಿಲ್ಲ. ಇದೇ ಸಮಯದಲ್ಲಿ ಅವನ ನವಜಾತ ಪುತ್ರನು ತೀರಿಕೊಂಡನು. ವಿದೇಶೀ ಕಂಪೆನಿಗಳು ಅವನ ಸಂಶೋಧನದ ಆಧಾರದಲ್ಲಿ, ಪ್ರಕಟಿತ ರೂಪದಲ್ಲಿ ಯಂತ್ರವನ್ನು ರಚಿಸಲು ತೊಡಗಿದುವು. ಅವನು ಈ ವಿಪತ್ತುಗಳಿಂದ ಪೂರ್ಣ ಚೇತರಿಸುವ ಮೊದಲೇ, ಕೆನಡಾದಲ್ಲಿಯ ಅವನ ನಿಸ್ತಂತುನಿಲ್ದಾಣವು ಅಗ್ನಿಗಾಹುತಿಯಾಯಿತು. ಈ ವಿಪತ್ಪರಂಪರೆಗಳು ಅವನನ್ನು ಗೆಲ್ಲಲಾರದಾದುವು. ಅವನು ಪುನಃ ಕಟಿಬದ್ಧನಾಗಿ, ವಿರೋಧಿಗಳನ್ನು ಎದುರಿಸಲು ಹೊಸ ಉತ್ಸಾಹದಿಂದ ಮುಂದರಿದನು.

ಒಂದು ವರ್ಷದೊಳಗೆ ಅವನು, ಕೆನಡಾದ ಸ್ಟೇಶನನ್ನು ಪುನಃ ರಚಿಸಿದನು; ತನ್ನ ಯಂತ್ರಗಳ ಸ್ಪಷ್ಟ ಅನುಕರಣೆ ಮಾಡಿದ ವಿದೇಶೀ ಕಂಪೆನಿಗಳ ಮೇಲೆ ಲಕ್ಷಾಂತರ ಡಾಲರ್ ಅಪಹರಿಸಿದ ಅಪರಾಧದ ಮೇಲೆ ಮೊಕದ್ದಮೆ ಹೂಡಿದನು. ನ್ಯಾಯಾಲಯದಲ್ಲಿ ಇವನಿಗೇ ವಿಜಯ ಸಿಕ್ಕಿತು. ಇವನ ಎಲ್ಲಾ ಆವಿಷ್ಕಾರಗಳ ಒಡೆತನವು ಸುರಕ್ಷಿತವೆಂದು ನಿರ್ಣಯ ದೊರೆಯಿತು. ಇದೇ ಸಮಯದಲ್ಲಿ ಅವನಿಗೆ ಸನ್ ೧೯೦೯ರಲ್ಲಿ ಭೌತಿಕ ವಿಜ್ಞಾನದ 'ನೋಬೆಲ್-ಪಾರಿತೋಷಕ' ಸಹ ಸಿಕ್ಕಿತು.

ಸನ್ ೧೯೨೪ರಲ್ಲಿ ಅವನು, ಮನುಷ್ಯನ ಸ್ವರವನ್ನು ವಿದ್ಯುತ್ತರಂಗಗಳ ಮೂಲಕ ಇಂಗ್ಲೆಂಡಿನಿಂದ ಆಸ್ಟ್ರೇಲಿಯಾದ ತನಕ ಕಳುಹಿದನು. ೧೯೩೦ರಲ್ಲಿ ಲಂಡನಿನಲ್ಲಿ ಒಂದು ವಿದ್ಯುತ್ತಿನ ಗುಂಡಿಯನ್ನೊತ್ತಿ ಸಿಡ್ನಿಯಲ್ಲಿ ಆಗುವ ಪ್ರದರ್ಶನವನ್ನು ವಿದ್ಯುತ್ಪ್ರಕಾಶದಿಂದ ಪ್ರಕಾಶಿಸಿದನು. ಇಂದು ವಿಜ್ಞಾನವು ಈ ವಿಷಯಗಳನ್ನು ಸ್ವಾಭಾವಿಕವೆಂದು ಒಪ್ಪುತ್ತದೆ; ಆದರೆ ಆ ದಿನಗಳಲ್ಲಿ ಇದೇ ಕಾರ್ಯವು ಚಮತ್ಕಾರಗಳ ಶ್ರೇಣಿಯಲ್ಲಿ ಎಣಿಕೆಯಾಗುತ್ತಿತ್ತು.

ಆದರೆ ಇಷ್ಟೆಲ್ಲ ವೈಜ್ಞಾನಿಕ ಚಮತ್ಕಾರ ತೋರಿಸುವ ವ್ಯಕ್ತಿ, ತನ್ನ ಮೋಟಾರಿನ ಸಾಧಾರಣ ದುರಸ್ತಿ ಸಹ ಮಾಡಲಾರದವನಾಗಿದ್ದನು ಇದನ್ನು ಕೇಳಿದರೆ ಪ್ರಾಯಃ ಆಶ್ಚರ್ಯವಾಗಬಹುದು. ಒಮ್ಮೆ ಅವನು ತನ್ನ ಎರಡು ಮಕ್ಕಳೊಂದಿಗೆ ಮೋಟರಿನಲ್ಲಿ ಹೋಗುತ್ತಿದ್ದಾಗ, ಗಾಡಿಯ ಒಂದು ಚಕ್ರವು "ಪಂಕ್ಚರ್" ಆಯಿತು. ಸಾವಿರಾರು ಮೈಲು ನಿಸ್ತಂತುವಿನಿಂದ ಸುದ್ದಿ ಕಳುಹಬಲ್ಲ ತಮ್ಮ ತಂದೆಯು, ತನ್ನ ಮೋಟರಿನ ಒಂದು ಸಾಮಾನ್ಯ ಪಂಕ್ಚರನ್ನು ಸಹ ಸರಿಮಾಡಲಾರನೆಂಬುದನ್ನು ತಿಳಿದಾಗ, ಆ ಇಬ್ಬರು ಮಕ್ಕಳ ಆಶ್ಚರ್ಯಕ್ಕೆ ಮಿತಿಯಿರಲಿಲ್ಲ!

ಆಶೆಯ ಮಹಲು

(ಒಂದು ಜೀವನದೃಶ್ಯ)

ಕು. ಚಂದ್ರಿಕಾ ಅನಂತರಾವ್ ಕೊಪ್ಪರ, ಹಳಿಯಾಳ

●

ಪಾತ್ರಗಳು :		ವಯಸ್ಸು
ಸರಸಕ್ಕ :	ತಾಯಿ	೫೦
ದಯಾ :	ಕೆಲಸದವಳು	೫೫
ಮನು :	ಮಗ	೩೪
ರತ್ನಾ :	ಮಗಳು	೧೪

(ಶಿಥಿಲವಾದ ಮನೆಯ ಪಡಸಾಲೆಯು ಕತ್ತಲು. ಒಂದು ಹಳೆಯ ಮನೆಯ ಎದುರು ಒಬ್ಬನು ಬಂದು ನಿಲ್ಲುತ್ತಾನೆ. ಮುಖದಲ್ಲಿ ದಣಿವು–ನಿರಾಶೆ ಮೂಡಿವೆ. ಬಾಗಿಲು ಹಾಕಿದೆ. ಅತ್ತಿತ್ತ ನೋಡುವಷ್ಟರಲ್ಲಿ ಒಳಗಿನಿಂದ ಚಿಲಕ ತೆಗೆದ ಶಬ್ದವಾಗುವುದನ್ನು ಕೇಳಿ, ಲಗುಬಗೆಯಿಂದ ಹಿಂದಿರುಗಲು ಯತ್ನಿಸುತ್ತಾನೆ. ಅಷ್ಟರಲ್ಲಿ ಒಬ್ಬ ಸ್ತ್ರೀ ಆತನನ್ನು ನೋಡುತ್ತಾಳೆ. ಮನಸ್ಸಿಲ್ಲದ ಮನಸ್ಸಿನಿಂದ ಹಿಂತಿರುಗುತ್ತಾನೆ. ... ...)

ದಯಾ :— ಇದೇನು, ನೀನೇ ಅಲ್ಲವೇ? ಎಂಥ ಯೋಗಾಯೋಗ! ಮನು, ಎಲ್ಲಿಗೆ ಬಂದಿದ್ದೀಯೆಂದು ಗೊತ್ತಿದೆಯೇ?

ಮನು :— ಗೊತ್ತಿದೆ ದಯಾ! ಆದರೆ, ವರ್ಷದ ಮೊದಲು ಒಮ್ಮೆ ಹೋದ ಮನೆಗೆ ಪುನಃ ಹೇಗೆ ಬಂದೆನೆಂದು ನನಗೇ ತಿಳಿಯದು. ಯಾವುದೋ ಶಕ್ತಿ, ಇನ್ನೆಲ್ಲಿಯೂ ಹೋಗದಂತೆ ಇಲ್ಲಿಗೆ ಕರೆತಂದಿತು. ಆದರೆ ಬಾಗಿಲು ತೆರೆಯುವ ಸಪ್ಪಳವನ್ನು ಕೇಳಿ ಎಚ್ಚರಗೊಂಡೆ. ತಾಯಿ ಎದುರು ನಿಂತಿದ್ದರೆ ಏನು ಮಾತಾಡಬೇಕಾಗಿತ್ತು? ದಯವಿಟ್ಟು ನನ್ನನ್ನು ಹೋಗಗೊಡು. ಮನೆಯಲ್ಲಿ ಯಾರಿಗೂ ಇದರ ಸುದ್ದಿಯನ್ನು ಹೇಳಬೇಡ!

ದಯಾ :— ಎಂಥ ಮಾತಾಡುತ್ತಿ ಮನು? ...ಸ್ವಲ್ಪವಾದರೂ ವಿಚಾರ ಬೇಡವೇ? ಛೀ, ಇಂದೋ ನಾಳೆಯೋ ಬೀಳಲು ಸಿದ್ಧವಾಗಿರುವ ಈ ಮನೆಯಂತೆಯೇ ನಿನ್ನ ತಾಯಿಯ ಶರೀರವಾಗಿದೆ. ಈ ಪೇರಲಗಿಡವನ್ನು ನೋಡು; ಚಿಕ್ಕಂದಿನಲ್ಲಿ ಎಷ್ಟು ಸಾರೆ ಇದನ್ನು ಹತ್ತಿ ಹಣ್ಣು ಕಿತ್ತಿರುವಿಯೋ ಏನೋ! ಇಲ್ಲಿರುವ ಗಿಳಿಯನ್ನು ನೋಡು. ಕ್ಷಣಕ್ಷಣಕ್ಕೆ 'ಮನು ಬಂದ' ಎನ್ನುವುದೊಂದೇ ಕೆಲಸ ಇದಕ್ಕೆ. ನಿನ್ನ ಕುರ್ಚಿ ನೋಡು. ನೀನೆಂದಾದರೂ ಬಂದೇ ಬರುವೆಯೆಂದು ರತ್ನಾ, ಸುಂದರವಾದ ಹೂಬಳ್ಳಿ ಬಿಡಿಸಿದ ದಿಂಬನ್ನಿಟ್ಟಿದ್ದಾಳೆ. ನೀನೆಷ್ಟು ತಿರಸ್ಕರಿಸಿದರೂ ಇದು ನಿನ್ನ ಮನೆ ಮನು! ನಿನ್ನ ರೂಮಿಗೆ ಹೋಗಿ ನೋಡು. ನೀನೀಗಲೇ ಅಲ್ಲಿಂದ ಹೊರಗೆ ಹೋದಂತೆನಿಸುತ್ತದೆ. ಇಷ್ಟಾದರೂ ತಿರುಗಿ ಹೋಗುತ್ತೇನೆನ್ನುತ್ತೀಯಲ್ಲ. ಎಂಥ ಹುಚ್ಚು ನಿನ್ನದು! ಛೀ!

ಮನು :— ಇಲ್ಲ ದಯಾ, ಯಾವ ಬಾಯಿಂದ ಇದು ನನ್ನ ಮನೆ ಅಂತ ಹೇಳಲಿ? ಆ ಅಧಿಕಾರವನ್ನು ವರ್ಷದ ಹಿಂದೆಯೇ ಕಳೆದುಕೊಂಡೆ. ಅಯ್ಯೋ, ಆಗ ನನಗೆಂಥ ಮಂಕು ಕವಿದಿತ್ತೋ! ಏನಿಲ್ಲವಾದರೂ! ಆದರೆ ಈಗ ಎಷ್ಟು ಪಶ್ಚಾತ್ತಾಪಪಟ್ಟರೂ ಲಾಭವೇನು?....ಬೇಡ ದಯಾ, ಖಂಡಿತ ಹೇಳುತ್ತೇನೆ. ಇನ್ನು ನನ್ನಿಂದ ಅವಳ ದುಃಖ ಹೆಚ್ಚುವುದೇ ವಿನಾ ಕಡಿಮೆಯಾಗುವುದಿಲ್ಲ. ಇದು ದಿನಗಳಿಂದ ಹೊರಗೆ ತೋರಿದರೆಯೇ ಸಾಲದೇ? ಪಾಪ, ಇರುವಷ್ಟು ಕಾಲವಾದರೂ ನೆಮ್ಮದಿಯಿಂದಿರಲಿ! ದಯಾ, ನೀನು ಚಿಕ್ಕಂದಿನಿಂದ ನನ್ನನ್ನೆತ್ತಿ ಆಡಿಸಿದವಳು. ತಾಯಿಗೆ ನನ್ನಲ್ಲಿಲ್ಲದ ಸದ್ಗುಣಗಳು ಕಂಡರೆ, ನಿನಗೆ ಮಾತ್ರ ನನ್ನಲ್ಲಿದ್ದ ದುರ್ಗುಣಗಳ ಪರಿಚಯವಿದೆ ಅಲ್ಲವೇ?

ದಯಾ :— ನಿಜ ಮನು. ಚಿಕ್ಕಂದಿನಿಂದ ನನ್ನ ಮಾತು ನಿನಗೆ ರುಚಿಸಲಿಲ್ಲ. ನಾನು ಹೇಳಿದ ದಾರಿ ಸರಿಕಾಣಲಿಲ್ಲ. ನಾನು ಎದುರಿಗಿಟ್ಟ ಆದರ್ಶವನ್ನು ನೀನು ಒಪ್ಪಲಿಲ್ಲ. ನಿನ್ನ ದಾರಿಯೇ ಬೇರೆಯಾಯಿತು. ಮುನ್ನಷ್ಟು ನಾಲ್ಕು ಜನ ಪೋಲಿಗಳ ಬೆನ್ನುಹತ್ತಿತು. ಆದ್ದರಿಂದಲೇ ಈಗಲೂ ನಿನ್ನ ಮಾತನ್ನು ನಂಬಲು ನನಗೆ ಸಾಧ್ಯವಿಲ್ಲ.

ಮೂವರು ತಮ್ಮಂದಿರು-ತಂಗಿ-ತಾಯಿಯರನ್ನು ಬಿಟ್ಟು, ಮನೆಯಲ್ಲಿಯ ಹಣವನ್ನೆತ್ತಿಕೊಂಡು ಹೋಗಲು ನಿನಗೆ ಮನಸ್ಸಾದರೂ ಹೇಗೆ ಬಂದಿತು ಮನು? ಪಶು ಕೂಡ ಇಂಥ ಸಮಯದಲ್ಲಿ ಯೋಚಿಸಿ ಮುನ್ನಡೆಯಬಹುದು. ಎಂಥ ಕ್ರೂರನು ನೀನು! ಮನೆ ಬಿಟ್ಟು ಹೋಗಿ ಒಂದು ವರ್ಷ ಕಳೆದರೂ, ಒಂದು ದಿನವಾದರೂ ನಮ್ಮೆಲ್ಲರ ಸ್ಥಿತಿ-ಗತಿ ವಿಚಾರಿಸಿದ್ದೀಯಾ? ನಮ್ಮ ಗೊಡವೆ ಹೋಗಲಿ, ತಾಯಿಯ ಮನಸ್ಸು ಏನೆನ್ನಬಹುದೆಂದೂ ನಿನಗನಿಸಲಿಲ್ಲವೇ? ಆದರೆ ನಮಗೆಲ್ಲ ನೀನು ಸುಖಿಯಾಗಿರಬಹುದೆಂಬ ಯೋಚನೆಯೇ ಸುಖವನ್ನುಂಟು ಮಾಡುತ್ತಿತ್ತು. ಈಗ ಅದೂ ಕನಸಾಯಿತು. ಈ ಹರಿದ.... ಕೊಳೆಯಾದ....ಬಟ್ಟೆಗಳು, ಸೊರಗಿದ ಮೈ, ಬಾಡಿದ ಮುಖ ಕಂಡು, ಇಷ್ಟು ದಿನ ಹೇಗೆ ಕಳೆದೆಯೆಂದು ತಿಳಿಯಿತು. ಆ ಹಣವನ್ನೇನು ಮಾಡಿದೆಯೋ ಬಲ್ಲವರಾರು? ಅಬ್ಬ, ಎಂಥ ಮೋಸ!

ಮನು:— ಅದಕ್ಕಾಗಿಯೇ ನಾನಿನ್ನು ಹೋಗುತ್ತೇನೆಂದೆ. ಇನ್ನು ನನಗೆ ಒಳಗೆ ಬರಲು ಅಧಿಕಾರವಿಲ್ಲ. ಒಂದು ವೇಳೆ ಅವಳು ಕರೆದರೂ ನಾನು ಬರುವುದು ಧರ್ಮವಲ್ಲ.

ದಯಾ:— ಇದೆಲ್ಲ ವ್ಯವಹಾರದ ಮಾತು ಮನು! ಆದರೆ ವಾತ್ಸಲ್ಯದ ರೀತಿಯೇ ಬೇರೆ. ಅವಳು ನಿನ್ನ ಸಲುವಾಗಿ ಮಾತಾಡಿದಾಗ ನನ್ನಷ್ಟು ಕೋಪಗೊಂಡವರಾರೂ ಇಲ್ಲ; ಆದರೆ ಸ್ವಲ್ಪ ಹೊತ್ತಿನಲ್ಲಿಯೇ ನನ್ನ ಯೋಚನೆ ಬದಲಾಗುತ್ತಿತ್ತು. ಸ್ತ್ರೀಯ ಹೃದಯದಲ್ಲಿ ಹೀಗೆ ವಾತ್ಸಲ್ಯವನ್ನಿಟ್ಟೇ ದೇವರು ಅವಳ ಘಾತ ಮಾಡಿದ. ಅವಳಿಗೆ ಅಬಲೆಯೆನ್ನುವುದು ಅವಳಲ್ಲಿ ಶಕ್ತಿ ಇಲ್ಲವೆಂದಲ್ಲ; ಆದರೆ ಆ ಶಕ್ತಿಯನ್ನು ಪ್ರಕಟಿಸುವ ಸಾಹಸ, ಕಠೋರತೆ ಅವಳಲ್ಲಿ ಇಲ್ಲದ್ದರಿಂದ! ನಾನೇನು ಹೇಳಲಿ ಮನು! ನನ್ನ ಮನಸ್ಸು ನಿನ್ನನ್ನು ದ್ವೇಷಿಸುವಷ್ಟು ಯಾರನ್ನೂ ದ್ವೇಷಿಸಿಲ್ಲ. ಆ ಮಾತು ಹೋಗಲಿ. ಆದರೆ ನೀನೆಂಥ ಕಪಟಿಯಿದ್ದರೂ, ಅವಳ ಹೃದಯ ನಿನ್ನನ್ನು ಬಯಸುತ್ತದೆ. ಅವಳಿಗೆ ನಿನ್ನ ಧನದ ಆಶೆಯಿಲ್ಲ ಮೋಸದ ಪರಿವೆಯಿಲ್ಲ. ಅವಿಚಾರದ ದುಃಖವಿಲ್ಲ. ನೀನಿಲ್ಲಿಂದ ಹೋದಾಗಿನಿಂದ ಭ್ರಾಂತಿಷ್ಟಳಂತೆ ಕಂಡ ಕಂಡವರನ್ನೆಲ್ಲ ನಿನ್ನ ಬಗ್ಗೆ ಕೇಳುತ್ತಿದ್ದಾಳೆ. ಎಂದಾದರೂ ನೀನು ಬಂದೇ ಬರುವೆಯೆಂದು ಅವಳೊಬ್ಬಳಿಗೇ ಖಾತ್ರಿಯಿತ್ತು.

ಮನು:— ಇರಬಹುದು. ಆದರೆ ಇನ್ನು ಅವಳ ಪ್ರೀತಿಗೆ ನಾನು ಪಾತ್ರನಲ್ಲ. ಅವಳ ಕ್ಷಮೆ ಬೇಡುವ ಯೋಗ್ಯತೆ ಕೂಡ ನನ್ನಲ್ಲಿಲ್ಲ. ಯಾವ ಮುಖದಿಂದ ಅವಳೆದುರು ನಿಲ್ಲಲಿ? ಅವಳ ಮನಸ್ಸು ನನಗೆ ಗೊತ್ತಿದೆ. ಅವಳೆಂದೂ ನನ್ನ ಮೇಲೆ ಕೋಪಗೊಳ್ಳಲಿಕ್ಕಿಲ್ಲ; ವ್ಯಂಗ್ಯಮಾತುಗಳಿಂದ ಮನ ನೋಯಿಸಲಿಕ್ಕಿಲ್ಲ. ನನ್ನನ್ನು ಕಂಡೊಡನೆ ನಿತ್ಯದಂತೆ ಅವಳ ಮುಖ ಅರಳಬಹುದು. ಕಣ್ಣುಗಳು ಎಂದಿನಂತೆಯೇ ದಯೆಯ ಅಮೃತವನ್ನು ಹೊರಸೂಸಬಹುದು. ಕೈಗಳು ಎಂದಿನಂತೆ ಮೃದುತನಲು ಮುಂದಾಗಬಹುದು. ಆದರೆ ದಯಾ, ಹೇಗೆ ಹೋಗಿ ಇವುಗಳನ್ನೆದುರಿಸಲಿ? ನಾನೂ ಮನುಷ್ಯ. ಎಂಥ ದುರಾಚಾರಿ, ಕ್ರೂರನನ್ನೂ ಎದುರಿಸಬಲ್ಲೆ. ಆದರೆ ಅದೇಕೋ ಸದ್ಗುಣಿಗಳನ್ನು ಕಂಡರೆ ಅಂಜಿಕೆಯೆನಿಸುತ್ತದೆ. ಯಾರಾದರೂ ಪ್ರೀತಿಯಿಂದ ಮಾತಾಡಿದರೆ, ಶಕ್ತಿಯೇ ಕಡಿಮೆಯಾದಂತೆನಿಸುತ್ತದೆ. ಮೋಸಗಾರನನ್ನು ಕಂಡು ಉತ್ಸಾಹವೆನಿಸಿದರೆ, ಪ್ರಾಮಾಣಿಕರನ್ನು ಕಂಡು ಚೇತನೆಯೇ ಕುಂದಿದಂತೆನಿಸುತ್ತದೆ. ಸ್ವಾರ್ಥಿಗಳನ್ನು ಮೋಸಗೊಳಿಸಲು ಯುಕ್ತಿಸುವ ಮನಸ್ಸು, ಅಜ್ಞಾನಿಗಳನ್ನು ಕಂಡು ಅವರಿಗಿಂತ ದೀನವಾಗುತ್ತದೆ. ದಯಾ, ಅವಳ ಒಂದು ಒಳ್ಳೆಯ ಮಾತಿನಿಂದ ಸಾವಿರ ಪೆಟ್ಟುಗಳಿಗಿಂತ ಹೆಚ್ಚು ನೋವಾಗಬಹುದು; ಹೇಗೆ ಬರಲಿ?



ದಯಾ:— ದುಃಖಿಸಬೇಡ ಮನು! ಇದರಿಂದಲೇ ಅವಳಿಗೆ ಆನಂದವಾಗುವುದು. ನನ್ನ ಮಾತು ಬಿಟ್ಟುಬಿಡು. ನಿನ್ನನ್ನು ಪೋಷಿಸಿದ ಅಧಿಕಾರದಿಂದ ಒಂದು ಮಾತು ಬೇಡಿಕೊಳ್ಳುತ್ತೇನೆ. ಇನ್ನೆಂದೂ ಹೀಗೆ ನಮ್ಮನ್ನಗಲಬೇಡ! ನಿನಗೂ ಸಾರಾಸಾರ ಜ್ಞಾನವಿದೆ. ಒಬ್ಬರ ಸುಖ-ದುಃಖಗಳನ್ನರಿತುಕೊಳ್ಳುವಷ್ಟು ವಿಚಾರವಿದೆ. ಅವಳು ಬಲು ದುರ್ದೈವಿ ಮನು! ಹದಿನೈದು ದಿನಗಳಲ್ಲಿಯೇ ಮೂವರು ಮಕ್ಕಳನ್ನು ಕಳೆದುಕೊಂಡು, ನಿನ್ನ ದಾರಿ ಕಾಯುತ್ತ ಕುಳಿತಿದ್ದಾಳೆ. ಅಬ್ಬಾ, ಎಂಥ ಮನಸ್ಸು ಅವಳದು! ಯಾವ ಅನ್ಯಾಯ ಮಾಡಿದರೂ, ನಂಬಿದವನ್ನು ನಿರಾಕರಿಸಬೇಕು.

ಮನು:— ಎಂಥ ಮಾತು? ಮೂವರೂ ಇಲ್ಲವಾದರೆ? ಅಯ್ಯೋ, ಎಂಥ ಅನರ್ಥ! ನನ್ನನ್ನು ಕಂಡು ಎಷ್ಟು ದುಃಖಿಸುವಳೋ! ಮನೆಯೊಳಗೆ ಕಾಲಿಡುತ್ತಲೇ ಮೂವರ ವಸ್ತುಗಳನ್ನೂ ಕಂಡು ದುಃಖ ತಡೆಯದಾಗಬಹುದು.

ದಯಾ:—ಆದರೆ, ಇನ್ನೇನು ಮಾಡಲು ಸಾಧ್ಯವಿದೆ! ಇನ್ನು ನೀನೇ ಈ ಮನೆಯ ಯಜಮಾನ. ನಮ್ಮೆಲ್ಲರ ಆಸರ. ಅವಳ

ಊರುಗೋಲು. ಈ ಮನೆಯು ಏರೀತ ನಿನ್ನ ಮೇಲೆಯೇ ಅವಲಂಬಿಸಿದೆ. ಮನೆಯ ವಸ್ತುಗಳೆಲ್ಲ ನಿನ್ನ ಬರವಿಕೆಗಾಗಿ ಎದುರು ನೋಡುತ್ತಿವೆ. ನಿನಗಾಗಿ ಮರುಗುವ ತಾಯಿ ಇದ್ದಾಳೆ. ಕಂಡಕಂಡವರನ್ನೆಲ್ಲ ಕೇಳಿ ನಿನ್ನ ಗೊತ್ತುಹಚ್ಚಲು ಯತ್ನಿಸುತ್ತಿದ್ದ ತಂಗಿ ಇದ್ದಾಳೆ ಇನ್ನೇನು ಬೇಕು ನಿನಗೆ? ನಾನು ಹೇಳುತ್ತೇನೆ ಮನು, ಆಯುಷ್ಯದಲ್ಲಿ ನೀನು ಬೇಕಾದಷ್ಟು ಗಳಿಸಬಹುದು; ಆದರೆ ಈ ಮನೆಯಲ್ಲಿ ಇರುವ ಅಪೂರ್ವ ಧನ ಎಲ್ಲಿಯೂ ದೊರೆಯಲಾರದು. ನಡೆ ಒಳಗೆ, ಅವಳು ಎಚ್ಚತ್ತಿರಬಹುದು. ನಾನೆಲ್ಲ ತಿಳಿಸಿ ಹೇಳುತ್ತೇನೆ. ಅಂಜಬೇಡ……ಆಗಲಿ. ನಾನೇ ಮುಂದಾಗುತ್ತೇನೆ. ನಿಧಾನವಾಗಿ ಬಾ!

(ಇಬ್ಬರೂ ಹೊರಡುವರು.)

× × × ×

(ಭಾನುವಾರ ಮಧ್ಯಾಹ್ನ ನಾಲ್ಕುಗಂಟೆಯ ಸಮಯ. ಸರಸಕ್ಕ ತರಕಾರಿ ಹೆಚ್ಚುತ್ತ ಕುಳಿತಿರುವಳು. ರತ್ನಾ ಪೇಪರೊಂದನ್ನು ಓದುತ್ತಿರುವಳು. ಅಷ್ಟರಲ್ಲಿ ದಯಾ ಬರುವಳು.)

ದಯಾ—ಇದೇನು ತಾಯಿ, ಇನ್ನೂ ಇಲ್ಲೇಕೆ ಕುಳಿತಿದ್ದೀರಿ? ಕೊಂಚ ಮಲಗಿದರಾಗದೇ? ಇಂದು ಔಷಧವನ್ನು ಕುಡಿದಿಲ್ಲ…ಅಂತ ಕಾಣುತ್ತದೆ.

ಸರಸಕ್ಕ—(ನಗುತ್ತ) ಎಂಥ ಹುಚ್ಚಿಯೇ ನೀನು! ಇನ್ನೇಕೆ ಔಷಧ ಪಥ್ಯ, ವಿಶ್ರಾಂತಿ; ನಿನ್ನೆಯೇ ಕಾಹಿಲೆ ಓಡಿಹೋಯಿತು. ಇನ್ನೆರಡು ದಿನಗಳಲ್ಲಿ ಹೇಗೆ ಸುಧಾರಿಸುತ್ತೇನೆ—ಅಂತ ನೋಡು!

ದಯಾ—ಇನ್ನೊಮ್ಮೆ ಹೇಳುತ್ತೇನೆ. ಚಿಕ್ಕ ಮಗು ತಾಯಿ ಹೇಳಿದಂತೆ ಕೇಳುವ ಬೊಂಬೆಯಂತಿರುತ್ತದೆ. ಆದರೆ ಬೆಳೆದಂತೆ ಅದಕ್ಕೂ ಸ್ವತಂತ್ರ-ಇಚ್ಛೆ, ಅಸ್ತಿತ್ವವುಂಟಾಗುತ್ತದೆ ಆಗಲೇ ಅವಳಿಂದ ಮಗು ಬೇರೆಯಾದಂತೆ. ಯಾರ ಮೇಲೂ ಅಷ್ಟು ನಂಬಿಗೆಯನ್ನಿಡಬಾರದು ತಾಯಿ! ಗಿಡವನ್ನೇ ಬಗ್ಗಿಸಲು ಸಾಧ್ಯವಿಲ್ಲ; ಇನ್ನು ಮರವನ್ನು ಬಗ್ಗಿಸಲು ಸಾಧ್ಯವಿದೆಯೇ?

ಸರಸಕ್ಕ—ಎಂಥ ಮಾತಾಡುತ್ತೀಯೇ? ಇನ್ನೂ ಮಗುವಿನ ಮೇಲೆ ಅಪನಂಬಿಕೆಯೇ? ಛೇ, ಬಹಳ ಸಂಶಯವೃತ್ತಿ ನಿನ್ನದು. ಹಿಂದಿನ ಅವನ ಗುಣಗಳನ್ನು ನೋಡಿ ನೀನು ಹೀಗೆನ್ನಬಹುದು. ಆದರೆ ಮನುಷ್ಯನಾದ ಮೇಲೆ ತಪ್ಪು ಮಾಡುವುದು ಸಹಜ. ಚಿಕ್ಕ ಮಗು ನಡೆಯುವಾಗ ಬೀಳುತ್ತದೆಂದು ನಡೆಯಗೊಡದಿದ್ದರೆ ಮುಂದಾಗುವುದೇ? ಮಬ್ಬು ಸಹಾನುಭೂತಿ ಬೇಕು. ನನಗಿಂತ ನಿನಗೆ ಅವನ ಮೇಲೆ ಪ್ರೀತಿ ಹೆಚ್ಚು. ಮೂವರೂ ನಮ್ಮನ್ನು ಬಿಟ್ಟು ಹೊರಟುಹೋದರೆಂದು ದುಃಖಿಸುವ ಬದಲು, ಅವರೇ ಬಂದರೆಂದು ಸಂತೋಷಪಡೋಣ. ಆಗದೇ?

ದಯಾ—ಆದರಲಿ. ಡಾಕ್ಟರರಂತೂ ನಿಮಗೆ ಹೆಚ್ಚುಹೊತ್ತು ಕುಳಿತಿರಬಾರದೆಂದಿದ್ದಾರೆ. ಮುಂಜಾನೆ ನಮಗೆಲ್ಲ ಹೇಳದೆ ಅದೇಕೆ ಶಾವಿಗೆ ಮಾಡಿದಿರಿ? ಇನ್ನು ಸಂಜೆಗೆ ಪುನಃ ಜ್ವರ ಬರುತ್ತದೆ.. ನೋಡಿ ಬೇಕಾದರೆ!

ಸರಸಕ್ಕ—ನಿನಗೇನೂ ತಿಳಿಯದು. ಅಲ್ಲದೇ, ನನ್ನ ಜ್ಞಾಪಕವೂ ಬುದ್ಧಿಯಿದೆ. ಯಾರಿಗೋಸ್ಕರ ಕೆಲಸ ಮಾಡುತ್ತೇನೆಂದು ತಿಳಿದರೆ ಖಂಡಿತ ತೊಂದರೆಕೊಡಲು ಬರುವುದಿಲ್ಲ. ನೋಡು, ಬೇಕಾದರೆ. ಚಿಕ್ಕಂದಿನಿಂದ ಅವನಿಗೆ ಶಾವಿಗೆಯ ಪಾಯಸವೆಂದರೆ ಪ್ರಾಣ. ಮೂರು ವರ್ಷದವನಿದ್ದಾಗ ಒಂದು ದಿನ, ಶಾವಿಗೆಪಾಯಸ ಮಾಡದಿದ್ದುದಕ್ಕೆ, ಕೋಪದಿಂದ ಹಸಿ ಶಾವಿಗೆಯಲ್ಲಿ ಹಾಲುಸಕ್ಕರೆ ಬೆರಸಿ ತಿಂದಿದ್ದ. ನೆನಪಿದೆಯೇ? ಮಗು ಎಷ್ಟು ಕಷ್ಟಪಟ್ಟು ಬಂದಿದೆಯೋ ಕಾಣೆ. ನಾಲ್ಕು ದಿನವಾದರೂ ಎಲ್ಲ ಮರೆತು ಸುಖದಿಂದಿರಲಿ! ಎಂಥ ವಿಚಿತ್ರ ಘಟನೆ ದಯಾ! ನಿನ್ನೆ ಅದೇಕೋ ವಿಪರೀತ ಸಂಕಟವಾಯಿತು ಇನ್ನೆಂದೂ ಮನು ಬರಲಾರನೆಂದುಕೊಂಡೆ. ಅಷ್ಟರಲ್ಲಿ ನೀನು ಅಲ್ಲಿಗೆ ಬಂದೆ. ನನಗಾಗ ಯಾರೂ ಬರುವುದು ಬೇಡವಾಗಿತ್ತು. ಕೋಪದಿಂದ ಏನೋ ಅನ್ನಬೇಕೆನ್ನುವಷ್ಟರಲ್ಲಿ, ಮನು ನಿನ್ನ ಹಿಂದೆ ಬಂದಿರುವುದನ್ನು ಕಂಡು ಎಚ್ಚರದಪ್ಪಿದಂತಾಯಿತು. ಅಯ್ಯೊ, ಇಲ್ಲಿಂದ ಹೋಗುವಾಗ ಎಷ್ಟು ಚೆನ್ನಾಗಿದ್ದ! ಈಗ ನೋಡಿದರೆ ಕೇವಲ ಅಸ್ಥಿಚರ್ಮಗಳ ಮೂರ್ತಿಯಂತೆ ಕಾಣುತ್ತಾನೆ. ಎಷ್ಟು ಕಷ್ಟಪಟ್ಟಿರುವನೋ ಏನೊ! ಈಗ ಅವನನ್ನು ಉಪಚರಿಸುವುದನ್ನು ಬಿಟ್ಟು, ವ್ಯರ್ಥ ಹಿಂದಿನ ಮಾತುಗಳನ್ನೇ ಧ್ಯಾನಿಸಿದರೆ ಲಾಭವೇನು? ಅದಿರಲಿ; ಶಾಖ ಆಯಿತೋ ಇಲ್ಲವೋ ನೋಡು, ತಿಂಡಿಯನ್ನಾದರೂ ಮಾಡೋಣ. ನಡೆ. ನಾನೂ ಬರುತ್ತೇನೆ.

(ಸರಸಕ್ಕ, ದಯಾ ಹೊರಡುವರು. ಮನು ಬರುವನು.)

ಮನು—ಎಂಬ್ರಾಯಡರಿಗಾಗಿ ರೇಶಿಮೆದಾರ ತಂದಿದ್ದೇನೆ ರತ್ನ! ಬೇಗದೆಯೋ ನೋಡು! ಆ ಕಿಟಕಿಯಲ್ಲೇನು ನೋಡುತ್ತಿದ್ದೀಯೇ?

ರತ್ನ—ಛೀ, ಮಾತಾಡದೆ ಮೆಲ್ಲಗೆ ಇಲ್ಲಿ ಬಾ. ಅಲ್ಲಿ ನೋಡು. ಎಷ್ಟೋ ದಿನಗಳಿಂದ ಆ ಗುಬ್ಬಿ ಅಲ್ಲಿ ವಾಸವಾಗಿದೆ. ನಿತ್ಯ ಮುಂಜಾನೆ ಎದ್ದೊಡನೆ, ಮೊದಲು ಅದರ ಗೂಡನ್ನು ನೋಡುತ್ತೇನೆ. ಪ್ರತಿದಿನ ಸಂಜೆಯಾಗುತ್ತಲೇ ಅದರ ಕೂಗು ಕೇಳಿ ಗೂಡಿನಲ್ಲಿಯ ಮರಿಗಳು ಸಂತೋಷದಿಂದ ಉತ್ತರ ಕೊಡುತ್ತಿದ್ದುವು. ಆದರೆ ಇಂದು ಮಾತ್ರ ಗೂಡು ಬರಿದಾಗಿದೆ. ಮರಿಗಳೆಲ್ಲ ಇದು ಬಂಧನವೆಂದರಿತು ಸ್ವತಂತ್ರವಾಗಿರಲು ಹೊರಟುಬಿಟ್ಟುವು. ಯಾಕೆಂದರೆ ಈಗ ಅವುಗಳಿಗೆ ಹಾಗೆ ಜೀವಿಸುವ ಶಕ್ತಿ ಬಂದಿದೆ. ಆದರೆ ಈ ಗುಬ್ಬಿ ಮಾತ್ರ ಆಹಾರ ಹುಡುಕುವುದನ್ನು ಬಿಟ್ಟು ಕೂಗುತ್ತಿದೆ. ಅಲ್ಲವೇ?

ಮನು—ನಿನಗೇನನ್ನಬೇಕಾಗಿದೆ ರತ್ನ? ಒಮ್ಮೆ ಸ್ಪಷ್ಟವಾಗಿ ಹೇಳಬಿಡು.

ರತ್ನ—ತಿಳಿದವರಿಗೆ ಸ್ಪಷ್ಟವಾಗಿ ಹೇಳುವುದೇನಿದೆ ಅಣ್ಣಾ? ಅದಿರಲಿ, ಈ ವರ್ಷ ನೀನು ಸ್ವಲ್ಪ ಸಹಾಯಮಾಡಿದರೆ ಮಾತ್ರ ಪರೀಕ್ಷೆಯಲ್ಲಿ ಪಾಸಾಗುತ್ತೇನೆ ಈ ಸಲ ಅಭ್ಯಾಸವೇ ಆಗಿಲ್ಲ.

ಮನು—ನಿಜ, ಅಭ್ಯಾಸಕ್ಕೆ ವೇಳೆಯಾದರೂ ಬೇಕಲ್ಲ! ಇನ್ನೇನೂ ಯೋಚಿಸಬೇಡ. ಮನೆಯ ಭಾರವೆಲ್ಲ ನನ್ನ ಮೇಲಿದೆ. ಹಾಯಾಗಿ

ನನು ಸ್ಕೂಲಿಗೆ ಹೋಗಬಹುದು, ನಿನ್ನೆಯಿಂದ ತಾಯಿ ಎಷ್ಟು ಸುಧಾರಿಸಿದ್ದಾಳೆ ನೋಡು. ಅಲ್ಲವೇ?

ರತ್ನ— ನಿನ್ನೆ ರಾತ್ರಿಯೇ ಅವಳು ಮಲಗಿದ್ದಾಳೆ. ನಿತ್ಯ ರಾತ್ರಿಯೆಲ್ಲ ಏನಾದರೂ ಮಾತಾಡುತ್ತ ಕೂಗುತ್ತಿದ್ದಳು. ಅಯ್ಯೋ ಮರೆತೇಬಿಟ್ಟಿದ್ದೆ. ನಿನ್ನೆ ಸಾಯಂಕಾಲ ಈ ಟಾನಿಕ್ ತಂದಿದ್ದೇನೆ. ಒಂದು ತಿಂಗಳಲ್ಲಿಯೇ ನಿನ್ನ ಪ್ರಕೃತಿ ಸುಧಾರಿಸಬಹುದು. ನಿನಗೂ ಅಲ್ಲಿ ಬಹಳ ಕಷ್ಟವಾಗಿರಬಹುದು. ಅಲ್ಲವೇ?

ಮನು—ಅಯ್ಯೋ, ಅದನ್ನೇನು ಕೇಳುತ್ತಿ! ಜ್ಞಾಪಿಸಿದರೇ ಮೈ ನಡುಗುತ್ತದೆ. ಒಯ್ದ ಹಣವನ್ನೆಲ್ಲ ಗೆಳೆಯರು ಕಸಿದುಕೊಂಡು ನನ್ನನ್ನಟ್ಟಿಬಿಟ್ಟರು. ಇಲ್ಲಿಗೆ ಬಂದಾಗ ಊಟಮಾಡಿ ಎರಡುದಿನವಾಗಿತ್ತು. ರತ್ನ, ಇಲ್ಲಿಯ ಊಟ-ಉಪಚಾರಗಳಿಂದಲೇ ಆರೋಗ್ಯ ಸುಧಾರಿಸುವಾಗ, ಇದರ ಅವಶ್ಯಕತೆಯೇನಿದೆ? ಅದಿರಲಿ, ನಿನ್ನ ಕೊರಳಲ್ಲಿಯ ಸರ ಕಾಣುವುದಿಲ್ಲವಲ್ಲ!

ರತ್ನ— ಅವೆಲ್ಲ ಇಲ್ಲದಾಗಿನಿಂದಲೇ ತಾಯಿ ಕೊಂಚವಾದರೂ ನೆಮ್ಮದಿಯಿಂದಿದ್ದಾಳೆ. ಮೂವರೂ ಇಲ್ಲವಾದ ಮೇಲೆ, ಹುಚ್ಚಳಂತಾ ಇದ್ದಳು. ಒಂದು ದಿನ ಇದ್ದಕ್ಕಿದ್ದಂತೆ ಮನೆಯಲ್ಲಿಯ ಎಲ್ಲ ಆಭರಣ, ಅಲ್ಲದೆ ಬ್ಯಾಂಕಿನಲ್ಲಿದ್ದ ಐದು ಸಾವಿರ ರೂಪಾಯಿ—ಅನಾಥಾಶ್ರಮಕ್ಕೆ ಕೊಟ್ಟುಬಿಟ್ಟಳು. ಅಂದಿನಿಂದ ಕೊಂಚ ಸಮಾಧಾನದಿಂದಿದ್ದಾಳೆ. ಈಗ ಎಂಬತ್ತು ರೂಪಾಯಿ ಮನೆಬಾಡಿಗೆಯಿಂದ ಉಪಜೀವನ ಸಾಗಿಸುತ್ತಿದ್ದೇವೆ. ಹೋಗಲಿ ಅಣ್ಣ, ನೀನು ಬಂದೆಯಲ್ಲ. ಇನ್ನೇನು ಬೇಕು? ಎಷ್ಟಿದ್ದರೂ ಆಶೆ ಕಡಿಮೆಯಾಗುತ್ತದೆಯೇ? ತೃಪ್ತಿಯೊಂದಿದ್ದರೆ ಸಾಕು. ಅಲ್ಲವೇ?

ಮನು— ಎಂಥ ಮಾತಾಡುತ್ತೀಯೇ? ಹತ್ತುಸಾವಿರದ ಆಭರಣ, ಮೇಲೆ ಐದು ಸಾವಿರ! ಎಲ್ಲವನ್ನೂ ಕೊಟ್ಟುಬಿಟ್ಟಳೇ? ಅಬ್ಬಾ!

ರತ್ನ— ಅದಕ್ಕೇಕೆ ಅಷ್ಟು ಚಿಂತಿಸುತ್ತಿ? ಮನೆಯಲ್ಲಿದ್ದರೇ ಚಿಂತಿಸಬೇಕಾಗಿತ್ತು. ಗಳಿಸುವ ಸಾಮರ್ಥ್ಯವಿದ್ದವರು ಸತ್ಕಾರ್ಯಕ್ಕೆ ವಿನಿಯೋಗವಾದಾಗ ಸಂತೋಷಪಡಬೇಕು. ತಾಳು. ಈ ಬಾಟ್ಲಿ ಇಲ್ಲಿಯೇ ಇರಲಿ. ಹಾಲು ತರುತ್ತೇನೆ.

(ಒಳಗೆ ಹೋಗುವಳು. ಮನು ಕ್ಷಣಕಾಲ ಏನನ್ನೋ ಚಿಂತಿಸಿ ಕುರುಕ್ಷಣವೇ ಅಗುಬಗೆಯಿಂದ ಉಡುಪುಧರಿಸಿ ಹೊರಟುಬಿಡುವನು. ರತ್ನ ಬಂದು ಅತ್ತಿತ್ತ ನೋಡುವಳು.)

ರತ್ನ— ಇದೇನು? ಮನು ಕಾಣುವದಿಲ್ಲವಲ್ಲ! ದಯಾ, ನಿನಗೆ ಗೊತ್ತಿದೆಯೇ?

(ದಯಾ ಮತ್ತು ಸರಸಕ್ಕ ಬರುತ್ತಾರೆ.)

ದಯಾ— ಛೆ, ನನಗೇನು ಗೊತ್ತು? ಇದೇನು ಅವನ ಉಡುಪೊಂದೂ ಕಾಣುವುದಿಲ್ಲವಲ್ಲ! ಇಷ್ಟರಲ್ಲಿ ಎಲ್ಲಿಗೆ ಹೋಗಿರಬಹುದು?

ಸರಸಕ್ಕ— ಮತ್ತಿಲ್ಲಿ ಹೋಗುತ್ತಾನೆ. ತನ್ನ ಪೇರಲಗಿಡದ ಕೆಳಗೆ ಕುಳಿತಿರಬಹುದು. ಈಗ ತಾನೇ ಒಳಗೆಲ್ಲ ನೋಡಿ ಬಂದಿದ್ದೇನೆ.

ರತ್ನ— ಇಲ್ಲಿಯ ಬೂಟುಗಳು ಕೂಡ ಇಲ್ಲವಾಗಿವೆ. ಎಂಥ ಆಶ್ಚರ್ಯ!

ದಯಾ— (ಮೆಲುದನಿಯಲ್ಲಿ) ಅವನಿಗೆ ಮನೆಯ ಸ್ಥಿತಿಯನ್ನೇನಾದರೂ ಹೇಳಿದೆಯಾ ರತ್ನಾ?

ರತ್ನ— ಹೇಳಿದೆ ಅವನೆದುರಿಗೇತಕ್ಕೆ ಮುಚ್ಚುಮರೆ? ಆದರೆ ಅದನ್ನು ಕೇಳಿದೊಡನೆಯೇ ಅವನ ಮುಖಭಾವ ಬದಲಾಯಿತು. ಬೆದರಿದಂತೆ ಏನೇನನ್ನೋ ಮಾತಾಡಿದ.

ದಯಾ—ನಿಜವೇ? ಓ, ಈಗ ತಿಳಿಯಿತು!

ಸರಸಕ್ಕ— ಏನು ದಯಾ, ಏನು ತಿಳಿಯಿತು?

ದಯಾ— ಏನೂ ಇಲ್ಲ ಅಮ್ಮಾ, ಯಾರಾದರೂ ಕರೆದಿರಬಹುದು. ಹೊರಗೆ ಹೋಗಿದ್ದಾನೆ, ಈಗ ಬರಬಹುದೆಂದು ತಿಳಿಯುತ್ತೇ ಅದಿರಲಿ. ಗಾಳಿ ಬೀಸುತ್ತಿದೆ. ಒಳಗೆ ಹೋಗಿ ಬೆಚ್ಚಗೆ ಮಲಗಿಕೊಳ್ಳಿ. ಮನು ಬೆನ್ನಮೇಲೆ ಬರುತ್ತೇನೆ.

ಸರಸಕ್ಕ— ಅದೇಕೋ ನಿಮ್ಮ ಮಾತೇ ತಿಳಿಯದಾಗಿದೆ. ಇನ್ನೂ ಏನೇನು ನೋಡುವುದಿದೆಯೋ ನನ್ನ ದೈವದಲ್ಲಿ? ದೇವರು ಮಾಡಿದಂತಾಗಲಿ!

(ನಿಟ್ಟುಸಿರಿಟ್ಟು ನಿಧಾನವಾಗಿ ಒಳಗೆ ಹೋಗುತ್ತಾಳೆ.)

ರತ— ಮನು ಎಲ್ಲಿಗೆ ಹೋಗಿರಬಹುದು ದಯಾ? ನಿಜವಾಗಿ ಹೇಳು ಅದೇಕೋ ಭಯವಾಗುತ್ತಿದೆ ನನಗೆ!

ದಯಾ— ಹುಚ್ಚಿ ನೀನು! ಅದರಲ್ಲೆಂಥ ಭಯ? ಎಲ್ಲಿಂದ ಬಂದಿದ್ದನೋ ಅಲ್ಲಿಗೇ ಹೊರಟುಬಿಟ್ಟ. ನಿಜಸಂಗತಿಯನ್ನು ಹೇಳುತ್ತೇನೆ. ಅವನು ನಮಗಾಗಿ ಬಂದಿರಲಿಲ್ಲ ಆದರೆ ಅರ್ಧ ಮುಗಿಸಿದ ಕಾರ್ಯವನ್ನು ಪೂರ್ಣಗೊಳಿಸಲು ಬಂದಿದ್ದ. ಅದು ಕೈಗೂಡದೆಂದು ತಿಳಿದೊಡನೆ ಹೊರಟುಬಿಟ್ಟ. ಅವನ ದೃಷ್ಟಿಯಿಂದ ಇನ್ನೇನೂ ಇಲ್ಲಿ ಉಳಿದಿಲ್ಲ. ಅಳುತ್ತೀಯೇಕೆ ರತ್ನ. ಮೊದಲೇ ನಾನು ಈ ಮಾತು ಹೇಳಿದ್ದೆ. ಆದರೆ ಅಮ್ಮ ನಂಬಲಿಲ್ಲ ಅವನು ಬಂದ ಉದ್ದೇಶ ಒಳ್ಳೆಯದಾಗಿದ್ದರೆ; ಅವರಿಗಿಂತ ನನಗೆ ಹೆಚ್ಚು ಆನಂದವಾಗುತ್ತಿತ್ತು. ಆದರೆ ಅಂಥ ಸೌಭಾಗ್ಯ ನಮಗೆಲ್ಲಿದೆ? ಆ ಬಾಟ್ಲಿಯನ್ನು ಹೊರಗೆ ಎಸೆದುಬಿಡು. ನಡೆ. ಒಳಗೆ ಹೋಗೋಣ!

(ಇಬ್ಬರೂ ನಿಧಾನವಾಗಿ ಹೊರಡುವರು.)

ಪುಣೆಯಲ್ಲಿ ನಮ್ಮ ಏಜಂಟರು:

ಶ್ರೀ. ಎಸ್. ಬಿ. ಮುಕರ

೪೩ ರವಿವಾರಪೇಠ ಪುಣೆ ೨

ಉರುಗೋಲು! ಈ ಮನೆಯ ಏಕೈಕ ನಿನ್ನ ಮೇಲೆಯೇ ಅವಲಂಬಿಸಿದೆ. ಮನೆಯ ವಸ್ತುಗಳೆಲ್ಲ ನಿನ್ನ ಬರವಿಕೆಗಾಗಿ ಎದುರು ನೋಡುತ್ತಿವೆ. ನಿನಗಾಗಿ ಮರುಗುವ ತಾಯಿ ಇದ್ದಾಳೆ. ಕಂಡಕಂಡವರನ್ನೆಲ್ಲ ಕೇಳಿ ನಿನ್ನ ಗೊತ್ತುಪತ್ತು ಯತ್ನಿಸುತ್ತಿದ್ದ ತಂಗಿ ಇದ್ದಾಳೆ. ಇನ್ನೇನು ಬೇಕು ನಿನಗೆ? ನಾನು ಹೇಳುತ್ತೇನೆ ಮನು, ಆಯುಷ್ಯದಲ್ಲಿ ನೀನು ಬೇಕಾದಷ್ಟು ಗಳಿಸಬಹುದು; ಆದರೆ ಈ ಮನೆಯಲ್ಲಿರುವ ಅಪೂರ್ವ ಧನ ಎಲ್ಲಿಯೂ ದೊರೆಯಲಾರದು. ನಡೆ ಒಳಗೆ, ಅವಳು ಎಚ್ಚತ್ತಿರಬಹುದು. ನಾನೆಲ್ಲ ತಿಳಿಸಿ ಹೇಳುತ್ತೇನೆ. ಅಂಜಬೇಡ......ಆಗಲಿ. ನಾನೇ ಮುಂದಾಗುತ್ತೇನೆ. ನಿಧಾನವಾಗಿ ಬಾ!

(ಇಬ್ಬರೂ ಹೊರಡುವರು.)

× × × ×

(ಭಾನುವಾರ ಮಧ್ಯಾಹ್ನ ನಾಲ್ಕು ಗಂಟೆಯ ಸಮಯ. ಸರಸಕ್ಕ ತರಕಾರಿ ಹೆಚ್ಚುತ್ತ ಕುಳಿತಿರುವಳು. ರತ್ನಾ ಪೇಪರೊಂದನ್ನು ಓದುತ್ತಿರುವಳು. ಅಷ್ಟರಲ್ಲಿ ದಯಾ ಬರುವಳು.)

ದಯಾ—ಇದೇನು ತಾಯಿ, ಇನ್ನೂ ಇಲ್ಲೇಕೆ ಕುಳಿತಿದ್ದೀರಿ? ಕೊಂಚ ಮಲಗಿದರಾಗದೇ? ಇಂದು ಔಷಧವನ್ನು ಕುಡಿದಿಲ್ಲ ...ಅಂತ ಕಾಣುತ್ತದೆ.

ಸರಸಕ್ಕ—(ನಗುತ್ತ) ಎಂಥ ಹುಚ್ಚಿಯೇ ನೀನು! ಇನ್ನೇಕೆ ಔಷಧ, ಪಥ್ಯ, ವಿಶ್ರಾಂತಿ; ನಿನ್ನೆಯೇ ಕಾಹಿಲೆ ಓಡಿಹೋಯಿತು. ಇನ್ನೆಟು ದಿನಗಳಲ್ಲಿ ಹೇಗೆ ಸುಧಾರಿಸುತ್ತೇನೆ—ಅಂತ ನೋಡು!

ದಯಾ—ಇನ್ನೊಮ್ಮೆ ಹೇಳುತ್ತೇನೆ. ಚಿಕ್ಕ ಮಗು ತಾಯಿ ಹೇಳಿದಂತೆ ಕೇಳುವ ಬೊಂಬೆಯಂತಿರುತ್ತದೆ. ಆದರೆ ಬೆಳೆದಂತೆ ಅದಕ್ಕೂ ಸ್ವತಂತ್ರ-ಇಚ್ಛೆ, ಅಸ್ತಿತ್ವವುಂಟಾಗುತ್ತದೆ. ಆಗಲೇ ಅವಳಿಂದ ಮಗು ಬೇರೆಯಾದಂತೆ. ಯಾರ ಮೇಲೂ ಅಷ್ಟು ನಂಬಿಗೆಯನ್ನಿಡಬಾರದು ತಾಯಿ! ಗಿಡವನ್ನೇ ಬಗ್ಗಿಸಲು ಸಾಧ್ಯವಿಲ್ಲ; ಇನ್ನು ಮರವನ್ನು ಬಗ್ಗಿಸಲು ಸಾಧ್ಯವಿದೆಯೇ?

ಸರಸಕ್ಕ— ಎಂಥ ಮಾತಾಡುತ್ತೀಯೇ? ಇನ್ನೂ ಮಗುವಿನ ಮೇಲೆ ಅಪನಂಬಿಕೆಯೇ? ಛೀ, ಬಹಳ ಸಂಕುಚಿತವೃತ್ತಿ ನಿನ್ನದು. ಹಿಂದಿನ ಅವನ ಗುಣಗಳನ್ನು ನೋಡಿ ನೀನು ಹೀಗೆನ್ನಬಹುದು. ಆದರೆ ಮನುಷ್ಯನಾದ ಮೇಲೆ ತಪ್ಪು ಮಾಡುವುದು ಸಹಜ. ಚಿಕ್ಕ ಮಗು ನಡೆಯುವಾಗ ಬೀಳುತ್ತದೆಂದು ನಡೆಯಗೊಡದಿದ್ದರೆ ಮುಂದಾಗುವುದೇ? ಮುಖ್ಯ ಸಹಾನುಭೂತಿ ಬೇಕು. ನನಗಿಂತ ನಿನಗೆ ಅವನ ಮೇಲೆ ಪ್ರೀತಿ ಹೆಚ್ಚು. ಮೂವರೂ ನಮ್ಮನ್ನು ಬಿಟ್ಟು ಹೊರಟು ಹೋದರೆಂದು ದುಃಖಪಡುವ ಬದಲು, ಅವರೇ ಬಂದರೆಂದು ಸಂತೋಷಪಡೋಣ; ಆಗದೇ?

ದಯಾ— ಅದಿರಲಿ. ಡಾಕ್ಟರರಂತೂ ನಿಮಗೆ ಹೆಚ್ಚು ಹೊತ್ತು ಕುಳಿತಿರಬಾರದೆಂದಿದ್ದಾರೆ. ಮುಂಜಾನೆ ನಮಗೆಲ್ಲ ಹೇಳದೆ ಅದೇಕೆ ಶಾವಿಗೆ ಮಾಡಿದಿರಿ? ಇನ್ನು ಸಂಜೆಗೆ ಪುನಃ ಜ್ವರ ಬರುತ್ತದೆ... ನೋಡಿ ಬೇಕಾದರೆ!

ಸರಸಕ್ಕ— ನಿನಗೇನೂ ತಿಳಿಯದು. ಅಲ್ಲದೆ, ನನ್ನ ಮನುವಿಗೂ ಬುದ್ಧಿಯಿದೆ. ಯಾರಿಗೋಸ್ಕರ ಕೆಲಸ ಮಾಡುತ್ತೇನೆಂದು ತಿಳಿದರೆ ಖಂಡಿತ ತೊಂದರೆಕೊಡಲು ಬರುವುದಿಲ್ಲ. ನೋಡು: ಬೇಕಾದರೆ ಚಿಕ್ಕಂದಿನಿಂದ ಅವನಿಗೆ ಶಾವಿಗೆಯ ಪಾಯಸವೆಂದರೆ ಪ್ರಾಣ. ಮೂರು ವರ್ಷದವನಿದ್ದಾಗ ಒಂದು ದಿನ, ಶಾವಿಗೆಪಾಯಸ ಮಾಡದಿದ್ದುದಕ್ಕೆ ಕೋಪದಿಂದ ಹಸಿ ಶಾವಿಗೆಯಲ್ಲಿ ಹಾಲುಸಕ್ಕರೆ ಬೆರಸಿ ತಿಂದಿದ್ದ. ನೆನಪಿದೆಯೇ? ಮಗು ಎಷ್ಟು ಕಷ್ಟಪಟ್ಟು ಬಂದಿದೆಯೋ ಕಾಣೆ. ನಾಲ್ಕು ದಿನವಾದರೂ ಎಲ್ಲ ಮರೆತು ಸುಖದಿಂದಿರಲಿ! ಎಂಥ ವಿಚಿತ್ರ ಘಟನೆ ದಯಾ! ನಿನ್ನೆ ಅದೇಕೋ ವಿಪರೀತ ಸಂಕಟವಾಯಿತು. ಇನ್ನೆಂದೂ ಮನು ಬರಲಾರನೆಂದುಕೊಂಡೆ. ಅಷ್ಟರಲ್ಲಿ ನೀನು ಅಲ್ಲಿಗೆ ಬಂದೆ. ನನಗಾಗ ಯಾರೂ ಬರುವುದು ಬೇಡವಾಗಿತ್ತು. ಕೋಪದಿಂದ ಏನೋ ಅನ್ನಬೇಕೆನ್ನುವಷ್ಟರಲ್ಲಿ ಮನು ನಿನ್ನ ಹಿಂದೆ ಬಂದಿರುವುದನ್ನು ಕಂಡು ಎಚ್ಚರದಪ್ಪಿದಂತಾಯಿತು. ಅಯ್ಯೊ, ಇಲ್ಲಿಂದ ಹೋಗುವಾಗ ಎಷ್ಟು ಚೆನ್ನಾಗಿದ್ದ! ಈಗ ನೋಡಿದರೆ ಕೇವಲ ಅಸ್ಥಿಚರ್ಮಗಳ ಮೂರ್ತಿಯಂತೆ ಕಾಣುತ್ತಾನೆ. ಎಷ್ಟು ಕಷ್ಟಪಟ್ಟಿರುವನೋ ಏನೊ! ಈಗ ಅವನನ್ನು ಉಪಚರಿಸುವುದನ್ನು ಬಿಟ್ಟು, ವ್ಯರ್ಥ ಹಿಂದಿನ ಮಾತುಗಳನ್ನೇ ಧ್ಯಾನಿಸಿದರೆ ಲಾಭವೇನು? ಅದಿರಲಿ; ಕಾಫಿ ಆಯಿತೋ ಇಲ್ಲವೋ ನೋಡು, ತಿಂಡಿಯನ್ನಾದರೂ ಮಾಡೋಣ. ನಡೆ. ನಾನೂ ಬರುತ್ತೇನೆ.

(ಸರಸಕ್ಕ, ದಯಾ ಹೊರಡುವರು. ಮನು ಬರುವನು.)

ಮನು— ಎಂಬ್ರಾಯಡರಿಗಾಗಿ ರೇಶಿಮೆದಾರ ತಂದಿದ್ದೇನೆ ರತ್ನ! ಹೇಗಿದೆಯೋ ನೋಡು! ಆ ಕಿಟಕಿಯಲ್ಲೇನು ನೋಡುತ್ತಿದ್ದೀಯೇ?

ರತ್ನ— ಛೇ, ಮಾತಾಡದೆ ಮೆಲ್ಲಗೆ ಇಲ್ಲಿ ಬಾ. ಅಲ್ಲಿ ನೋಡು ಎಷ್ಟೋ ದಿನಗಳಿಂದ ಆ ಗುಬ್ಬಿ ಅಲ್ಲಿ ವಾಸವಾಗಿದೆ. ನಿತ್ಯ ಮುಂಜಾನೆ ಎದ್ದೊಡನೆ, ಮೊದಲು ಅದರ ಗೂಡನ್ನು ನೋಡುತ್ತೇನೆ. ಪ್ರತಿದಿನ ಸಂಜೆಯಾಗುತ್ತಲೇ ಅದರ ಕೂಗು ಕೇಳಿ ಗೂಡಿನಲ್ಲಿಯ ಮರಿಗಳು ಸಂತೋಷದಿಂದ ಉತ್ತರ ಕೊಡುತ್ತಿದ್ದುವು. ಆದರೆ ಇಂದು ಮಾತ್ರ ಗೂಡು ಬರಿದಾಗಿದೆ. ಮರಿಗಳೆಲ್ಲ ಇದು ಬಂಧನವೆಂದರಿತು ಸ್ವತಂತ್ರವಾಗಿರಲು ಹೊರಟುಬಿಟ್ಟುವು. ಯಾಕೆಂದರೆ ಈಗ ಅವುಗಳಿಗೆ ಹಾಗೆ ಜೀವಿಸುವ ಶಕ್ತಿ ಬಂದಿದೆ. ಆದರೆ ಈ ಗುಬ್ಬಿ ಮಾತ್ರ ಆಹಾರ ಹುಡುಕುವುದನ್ನು ಬಿಟ್ಟು ಕೂಗುತ್ತಿದೆ. ಅಲ್ಲವೇ?

ಮನು— ನಿನಗೇನನ್ನ ಬೇಕಾಗಿದೆ ರತ್ನ? ಒಮ್ಮೆ ಸ್ಪಷ್ಟವಾಗಿ ಹೇಳಬಹುದು.

ರತ್ನ— ತಿಳಿದವರಿಗೆ ಸ್ಪಷ್ಟವಾಗಿ ಹೇಳುವುದೇನಿದೆ ಅಣ್ಣಾ? ಅದಿರಲಿ, ಈ ವರ್ಷ ನೀನು ಸ್ವಲ್ಪ ಸಹಾಯಮಾಡಿದರೆ ಮಾತ್ರ ಪರೀಕ್ಷೆಯಲ್ಲಿ ಪಾಸಾಗುತ್ತೇನೆ. ಈ ಸಲ ಅಭ್ಯಾಸವೇ ಆಗಿಲ್ಲ.

ಮನು—ಹಾ, ಅಭ್ಯಾಸಕ್ಕೆ ನೆರವಾದರೂ ಬೇಕಲ್ಲ! ಇನ್ನೇನೂ ಯೋಚಿಸಬೇಡ. ಮನೆಯ ಭಾರವೆಲ್ಲ ನನ್ನ ಮೇಲಿದೆ. ಹಾಯಾಗಿ

ನೀನು ಸ್ಕೂಲಿಗೆ ಹೋಗಬಹುದು, ನಿನ್ನಿಯಿಂದ ತಾಯಿ ಎಷ್ಟು ಸುಧಾರಿಸಿದ್ದಾಳೆ ನೋಡು. ಅಲ್ಲವೇ?

ರತ್ನ— ನಿನ್ನೆ ರಾತ್ರಿಯೇ ಅವಳು ಮಲಗಿದ್ದಾಳೆ. ನಿತ್ಯ ರಾತ್ರಿಯೆಲ್ಲ ಏನಾದರೂ ಮಾತಾಡುತ್ತ ಕುಳಿತುಬಿಡುತ್ತಿದ್ದಳು. ಅಯ್ಯೊ, ಮರೆತೇಬಿಟ್ಟಿದ್ದೆ. ನಿನ್ನೆ ಸಾಯಂಕಾಲ ಈ ಟಾನಿಕ್ ತಂದಿದ್ದೇನೆ. ಒಂದು ತಿಂಗಳಲ್ಲಿಯೇ ನಿನ್ನ ಪ್ರಕೃತಿ ಸುಧಾರಿಸಬಹುದು. ನಿನಗೂ ಅಲ್ಲಿ ಬಹಳ ಕಷ್ಟವಾಗಿರಬಹುದು. ಅಲ್ಲವೇ?

ಮನು—ಅಯ್ಯೊ, ಅದನ್ನೇನು ಕೇಳುತ್ತಿ! ಜ್ಞಾಪಿಸಿದರೇ ಮೈ ನಡುಗುತ್ತದೆ. ಒಯ್ದ ಹಣವನ್ನೆಲ್ಲ ಗೆಳೆಯರು ಕಸಿದುಕೊಂಡು ನನ್ನನ್ನಟ್ಟಿಬಿಟ್ಟರು. ಇಲ್ಲಿಗೆ ಬಂದಾಗ ಊಟಮಾಡಿ ಎರಡುದಿನವಾಗಿತ್ತು. ರತ್ನ, ಇಲ್ಲಿಯ ಊಟ-ಉಪಚಾರಗಳಿಂದಲೇ ಆರೋಗ್ಯ ಸುಧಾರಿಸುವಾಗ, ಇದರ ಅವಶ್ಯಕತೆಯೇನಿದೆ? ಅದಿರಲಿ, ನಿನ್ನ ಕೊರಳಲ್ಲಿಯ ಸರ ಕಾಣುವುದಿಲ್ಲವಲ್ಲ!

ರತ್ನ— ಅವೆಲ್ಲ ಇಲ್ಲದಾಗಿನಿಂದಲೇ ತಾಯಿ ಕೊಂಚವಾದರೂ ನೆಮ್ಮದಿಯಿಂದಿದ್ದಾಳೆ. ಮೂವರೂ ಇಲ್ಲವಾದ ಮೇಲೆ, ಹುಚ್ಚಳಂತಾಗಿದ್ದಳು. ಒಂದು ದಿನ ಇದ್ದಕ್ಕಿದ್ದಂತೆ ಮನೆಯಲ್ಲಿಯ ಎಲ್ಲ ಆಭರಣ, ಅಲ್ಲದೆ ಬ್ಯಾಂಕಿನಲ್ಲಿದ್ದ ಐದು ಸಾವಿರ ರೂಪಾಯಿ—ಅನಾಥಾಶ್ರಮಕ್ಕೆ ಕೊಟ್ಟುಬಿಟ್ಟಳು. ಅಂದಿನಿಂದ ಕೊಂಚ ಸಮಾಧಾನದಿಂದಿದ್ದಾಳೆ. ಈಗ ಎಂಬತ್ತು ರೂಪಾಯಿ ಮನೆಬಾಡಿಗೆಯಿಂದ ಉಪಜೀವನ ಸಾಗಿಸುತ್ತಿದ್ದೇವೆ. ಹೋಗಲಿ ಅಣ್ಣ, ನೀನು ಬಂದೆಯಲ್ಲ. ಇನ್ನೇನು ಬೇಕು? ಎಷ್ಟಿದ್ದರೂ ಆಶೆ ಕಡಿಮೆಯಾಗುತ್ತದೆಯೇ? ತೃಪ್ತಿಯೊಂದಿದ್ದರೆ ಸಾಕು. ಅಲ್ಲವೇ?

ಮನು— ಎಂಥ ಮಾತಾಡುತ್ತೀಯೇ? ಹತ್ತುಸಾವಿರದ ಆಭರಣ, ಮೇಲೆ ಐದು ಸಾವಿರ! ಎಲ್ಲವನ್ನೂ ಕೊಟ್ಟುಬಿಟ್ಟಳೇ? ಅಬ್ಬಾ!

ರತ್ನ— ಅದಕ್ಕೇಕೆ ಅಷ್ಟು ಚಿಂತಿಸುತ್ತಿ? ಮನೆಯಲ್ಲಿದ್ದರೇ ಬಾಧಿಸಬೇಕಾಗಿತ್ತು. ಗಳಿಸುವ ಸಾಮರ್ಥ್ಯವಿದ್ದವರು ಸತ್ಕಾರ್ಯಕ್ಕೆ ವಿನಿಯೋಗವಾದಾಗ ಸಂತೋಷಪಡಬೇಕು. ತಾಳು. ಈ ಬಾಟ್ಲಿ ಇಲ್ಲಿಯೇ ಇರಲಿ. ಹಾಲು ತರುತ್ತೇನೆ.

(ಒಳಗೆ ಹೊರಡುವಳು. ಮನು ಕ್ಷಣಕಾಲ ಏನನ್ನೋ ಚಿಂತಿಸಿ ಮರುಕ್ಷಣವೇ ಅಗುಳಿಗೆಯಿಂದ ಉಡುಪುಧರಿಸಿ ಹೊರಟುಬಿಡುವನು. ರತ್ನ ಬಂದು ಅತ್ತಿತ್ತ ನೋಡುವಳು.)

ರತ್ನ— ಇದೇನು? ಮನು ಕಾಣುವದಿಲ್ಲವಲ್ಲ! ದಯಾ, ನಿನಗೆ ಗೊತ್ತಿದೆಯೇ?

(ದಯಾ ಮತ್ತು ಸರಸಕ್ಕ ಬರುತ್ತಾರೆ.

ದಯಾ— ಛೆ, ನನಗೇನು ಗೊತ್ತು? ಇದೇನು ಅವನ ಉಡುಪೊಂದೂ ಕಾಣುವುದಿಲ್ಲವಲ್ಲ! ಇಷ್ಟರಲ್ಲಿ ಎಲ್ಲಿಗೆ ಹೋಗಿರಬಹುದು?

ಸರಸಕ್ಕ— ಮತ್ತಿಲ್ಲಿ ಹೋಗುತ್ತಾನೆ. ತನ್ನ ಪೇರಲಗಿಡದ ಕೆಳಗೆ ಕುಳಿತಿರಬಹುದು. ಈಗ ತಾನೇ ಒಳಗೆಲ್ಲ ನೋಡಿ ಬಂದಿದ್ದೇನೆ

ರತ್ನ— ಇಲ್ಲಿಯ ಬೂಟುಗಳು ಕೂಡ ಇಲ್ಲವಾಗಿವೆ. ಎಂಥ ಆಶ್ಚರ್ಯ!

ದಯಾ— (ನಿಂತುಬಿದ್ದಿರುವಲ್ಲಿ) ಅವನಿಗೆ ಮನೆಯ ಸ್ಥಿತಿಯನ್ನೇನಾದರೂ ಹೇಳಿದೆಯಾ ರತ್ನಾ?

ರತ್ನ— ಹೇಳಿದೆ ಅವನೆದುರಿಗೇತಕ್ಕೆ ಮುಚ್ಚುಮರೆ? ಆದರೆ ಅದನ್ನು ಕೇಳಿದೊಡನೆಯೇ ಅವನ ಮುಖಭಾವ ಬದಲಾಯಿತು. ಬೆದರಿದಂತೆ ಏನೇನನ್ನೋ ಮಾತಾಡಿದ.

ದಯಾ—ನಿಜವೇ? ಓ, ಈಗ ತಿಳಿಯಿತು!

ಸರಸಕ್ಕ — ಏನು ದಯಾ; ಏನು ತಿಳಿಯಿತು?

ದಯಾ— ಏನೂ ಇಲ್ಲ ಅಮ್ಮಾ, ಯಾರಾದರೂ ಕರೆದಿರಬಹುದು. ಹೊರಗೆ ಹೋಗಿದ್ದಾನೆ, ಈಗ ಬರಬಹುದೆಂದು ತಿಳಿಯಿತು. ಅದಿರಲಿ. ಗಾಳಿ ಬೀಸುತ್ತಿದೆ. ಒಳಗೆ ಹೋಗಿ ಬೆಚ್ಚಗೆ ಮಲಗಿಕೊಳ್ಳಿ. ಮನು ಬಂದಮೇಲೆ ಬರುತ್ತೇನೆ.

ಸರಸಕ್ಕ— ಅದೇಕೋ ನಿಮ್ಮ ಮಾತೇ ತಿಳಿಯದಾಗಿದೆ. ಇನ್ನೂ ಏನೇನು ನೋಡುವುದಿದೆಯೋ ನನ್ನ ದೈವದಲ್ಲಿ? ದೇವರು ಮಾಡಿದಂತಾಗಲಿ!

(ನಿಟ್ಟುಸಿರಿಟ್ಟು ನಿಧಾನವಾಗಿ ಒಳಗೆ ಹೋಗುತ್ತಾಳೆ.)

ರತ್ನ — ಮನು ಎಲ್ಲಿಗೆ ಹೋಗಿರಬಹುದು ದಯಾ? ನಿಜವಾಗಿ ಹೇಳು ಅದೇಕೋ ಭಯವಾಗುತ್ತಿದೆ ನನಗೆ!

ದಯಾ— ಹುಚ್ಚಿ ನೀನು! ಅದರಲ್ಲೇಂಥ ಭಯ? ಎಲ್ಲಿಂದ ಬಂದಿದ್ದನೋ ಅಲ್ಲಿಗೇ ಹೊರಟುಬಿಟ್ಟ. ನಿಜಸಂಗತಿಯನ್ನು ಹೇಳುತ್ತೇನೆ. ಅವನು ನಮಗಾಗಿ ಬಂದಿರಲಿಲ್ಲ ಅವರ ಅರ್ಧ ಮುಗಿಸಿದ ಕಾರ್ಯವನ್ನು ಪೂರ್ಣಗೊಳಿಸಲು ಬಂದಿದ್ದ. ಅದು ಕೈಗೂಡದೆಂದು ತಿಳಿದೊಡನೆ ಹೊರಟುಬಿಟ್ಟ. ಅವನ ದೃಷ್ಟಿಯಿಂದ ಇನ್ನೇನೂ ಇಲ್ಲಿ ಉಳಿದಿಲ್ಲ. ಅಳುತ್ತೀಯೇಕೆ ರತ್ನ. ಮೊದಲೇ ನಾನು ಈ ಮಾತು ಹೇಳಿದ್ದೆ. ಆದರೆ ನೀನು ನಂಬಲಿಲ್ಲ ಅವನು ಬಂದ ಉದ್ದೇಶ ಒಳ್ಳೆಯದಾಗಿದ್ದರೆ; ಅವರಿಗಿಂತ ನನಗೆ ಹೆಚ್ಚು ಆನಂದವಾಗುತ್ತಿತ್ತು. ಆದರೆ ಅಂಥ ಸೌಭಾಗ್ಯ ನಮಗೆಲ್ಲಿದೆ? ಆ ಬಾಟ್ಲಿಯನ್ನು ಹೊರಗೆ ಎಸೆದುಬಿಡು. ನಡೆ. ಒಳಗೆ ಹೋಗೋಣ!

(ಇಬ್ಬರೂ ನಿಧಾನವಾಗಿ ಹೊರಡುವರು.)

ಪುಣೆಯಲ್ಲಿ ನಮ್ಮ ಏಜಂಟರು:

ಶ್ರೀ. ಎಸ್. ಬಿ. ಮುಕಳರ

೪೩ ರವಿವಾರಪೇಠ ಪುಣೆ ೨

"ಹಾಗೆಂದರೆ!"

(ಕಿರುಗತೆ)

ಶ್ರೀ. ದೇವೇಂದ್ರಕುಮಾರ ಹಕಾರಿ ಬಿ. ಎ.
ಉಸ್ಮಾನಿಯಾ ವಿಶ್ವವಿದ್ಯಾನಿಲಯ ಹೈದರಾಬಾದ

ಆದೇ ಆಗ ನೇಸರು ಮೂಡುವುದರಲ್ಲಿದ್ದ. ಮೂಡಲು ನಸು ನೀಲ ನಸುಗೆಂಪು ಬಣ್ಣ ತಾಳಿತ್ತು. ತಂಬೆಲರು ಮಂದಮಂದವಾಗಿ ಬೀಸುತ್ತಿತ್ತು. ಸರೋವರ ಕಮಲಗಳಿಂದ ತುಂಬಿತ್ತು. ಕಮಲಗಳು ಸಾವಧಾನವಾಗಿ ತಮ್ಮ ಪಕಳೆಗಳನ್ನು ತೆರೆದು ನಗುವಂತಿತ್ತು. ಕಮಲದ ಎಲೆಗಳ ಮೇಲೆ ಮಂಜಿನ ಹನಿಗಳು ಮುತ್ತಿನಂತೆ ಶೋಭಿಸುತ್ತಿದ್ದುವು. ಬರುಬರುತ್ತ ಮೆಲ್ಲಮೆಲ್ಲನೆ ನೇಸರಿನ ಕಿರಣಗಳು ಕೊಳದಲ್ಲಿ ಚೆಲ್ಲಿದಂತೆಲ್ಲ. ಮುತ್ತಿನಂತೆ ಕಂಗೊಳಿಸುತ್ತಿದ್ದ ಮಂಜಿನ ಹನಿಗಳು, ಅಂದವಾದ ಬಣ್ಣಬಣ್ಣದ ರತ್ನ, ನೀಲ, ಪಚ್ಚೆಗಳಂತೆ ರಂಜಿತವಾದುವು.

ಇದನ್ನೆಲ್ಲ ನೋಡುತ್ತ ಎರಡು ಹಂಸೆ— ಒಂದು ತಾಯಿ, ಒಂದು ಅದರ ಮರಿ—ಅತ್ತಿಂದಿತ್ತ ಒಳ್ಳೆ ಉಲ್ಲಾಸದಿಂದ ತಿರುಗಾಡುತ್ತಿದ್ದುವು. ಆ ದಂಡೆಯಿಂದ ಈ ದಂಡೆಗೆ, ಈ ದಂಡೆಯಿಂದ ಆ ದಂಡೆಗೆ.

ಸರೋವರದ ನಡುವೆ ಬಂದು ಆ ತಾಯಿ ಹಂಸೆ ಮರಿಯನ್ನು ಪಕ್ಕದಲ್ಲಿ ನಿಲ್ಲಿಸಿಕೊಂಡು, ಮಮತೆಯಿಂದ ತನ್ನ ನೀಳವಾದ ಚುಂಚು ಚಾಚಿ, ಅದರ ಕೊರಳು ಬಾಚಿ ಮುತ್ತಿಟ್ಟಿತು.

ಮರಿಹಂಸೆ ನುಡಿಯಿತು 'ಅಮ್ಮ ನೋಡಿದೆಯೇನೇ ಈ ಮುತ್ತಿನ ಸಾಲು ಅದೆಷ್ಟು ಚೆಲುವಾಗಿದೆ!'

'ಅಹುದು ಮಗು, ಬಹು ಚೆಲುವಾಗಿದೆ.'

'ನೋಡಮ್ಮಾ, ನಾನು ಈಗಲೇ ಅದರ ಒಂದು ಸರ ಮಾಡಿ ನಿನ್ನ ಕೊರಳಿಗೆ ಹಾಕುತ್ತೇನೆ.'

ತಾಯಿ ಮಗುವಿನ ಮುಗ್ಧತೆಗೆ ನಕ್ಕು ಹೇಳಿತು:

'ಅದು ಹಾಗೆ ಬಾರದು ಮಗೂ!'

ಮರಿಹಂಸೆ ಕೇಳಲಿಲ್ಲ.

'ಊಂ. ಹೂಂ! ನೀನು ಸುಮ್ಮನಿರಮ್ಮಾ! ನೋಡುತ್ತಿರು. ಈಗಲೇ ಒಂದು ಸರ ತಯಾರಿಸಿ ತಂದೆ.'

ತಾಯಿ ಹಂಸೆ ಸುಮ್ಮನಾಯಿತು.

ಮರಿ ಸಾವಕಾಶ ಒಂದು ಕಮಲದ ದೇಟಿನ ಹತ್ತಿರ ಹೋಗಿ ಅದನ್ನು ತನ್ನ ಕೊಕ್ಕಿನಿಂದ ಮೆಲ್ಲಗೆ ಕಿತ್ತಿತು. ಬಳಿಕ ಅದನ್ನು ಸೀಳಿ ಒಳಗಿನಿಂದ ಒಂದು ಮೃದುವಾದ ತಂತುವನ್ನು ಹೊರಕ್ಕೆ ತೆಗೆಯಿತು. 'ಇನ್ನೇನು ರತ್ನ ಪೋಣಿಸಲು ಇದು ಬಹು ತಕ್ಕುದು, ಎಂದು ಹಿರಿಹಿರಿ ಹಿಗ್ಗಿತು. ಸಾವಕಾಶ ಈಜುತ್ತ ಬಂದು, ಒಂದು ಕಮಲದೆಲೆಯ ಬಳಿ ನಿಂತು, ಅದರ ಮೇಲಿದ್ದ ಸಾಲುಸಾಲಾಗಿ ಸೂರೆಗೊಂಡು ವಿವಿಧ ವರ್ಣತಾಳಿ ಹೊಳೆಹೊಳೆದು ಮುತ್ತು ರತ್ನಗಳಂತೆ ಶೋಭಿಸುತ್ತಿದ್ದ ಮಂಜುಮಣಿಗಳನ್ನು ತನ್ನ ಚುಂಚುವಿನಿಂದ ಒಂದೊಂದನ್ನೇ ಆಯ್ದುಕೊಳ್ಳಲು ಮುಂಬರೆಯಿತು. ಆದರೆ ಒಂದೂ—ಒಂದು ಮಣಿಯೂ—ಅದಕ್ಕೆ ದೊರೆಯಲೇ ಇಲ್ಲ. ಅದರ ಚುಂಚು ತಾಕಿದರೆ ತೀರಿತು; ಎಲ್ಲ ಮಣಿಗಳೂ ಜಾರಿ ಸರೋವರದಲ್ಲಿ ಉರುಳುವುದನ್ನು ಅದು ಕಂಡಿತು. ಮರಿಹಂಸೆಗೆ ಬಹು ಸಂತಾಪವಾಯಿತು. ಅದರ ಕಣ್ಣು ಹನಿಕಟ್ಟಿತು.

ಮತ್ತೆ ನಿರಾಶೆಯಿಂದ ಮೆಲ್ಲನೆ ಈಜುತ್ತ ತಾಯಿಯ ಬಳಿ ಬಂದು ಅದರ ಮೈ ತುಕ್ಕುತ್ತ ಕೇಳಿತು:

'ಅಮ್ಮಾ, ಏನು ಚೆಲುವು! ಎಂತಹ ಸುಂದರ!! ಇದೆಲ್ಲ ಇಷ್ಟು ಸಮೀಪ ಮತ್ತು ಪ್ರತ್ಯಕ್ಷವಾಗುವಂತೆ ಕಂಡರೂ ನಮಗೇಕೆ ದೊರೆಯಲಿಲ್ಲ?'

'ಏನು ಸುಂದರವೋ! ಎಂತಹ ಚೆಲುವೋ! ಸಾಮಾನ್ಯವಾಗಿ ಸುಂದರವೆಂದು ಕಂಡುಬರುವ ವಸ್ತುಗಳೆಲ್ಲ ಹಾಗೆಯೇ ಮಗು! ಇವಕ್ಕೆ ಸುಂದರ ಎಂದು ಹೇಳಕೂಡದು.!

ಮರಿಗೆ ಅರ್ಥವಾಗಲಿಲ್ಲ ತಾಯಿಯ ಮಾತು.

'ಹಾಗೆಂದರೆ?'

'ಹಾಗೆಂದರೆ—ಇವಕ್ಕೂ ಸುಂದರವಾದುವು ಇವೆ ಎಂದು.'

'ಎಲ್ಲಿ?'

'ಇಲ್ಲಿ' ಎಂದು ತಾಯಿಹಂಸೆ ಮರಿಯನ್ನು ತಬ್ಬಿಕೊಳ್ಳುತ್ತ ತನ್ನ ಎದೆ ತೋರಿಸಿತು.

ಮರಿಹಂಸೆಗೆ ತಾಯಿಯ ಮಾತು ತಿಳಿಯಲಿಲ್ಲ. ಮತ್ತೆ ಅದ ಆದೇ ರೀತಿ ತಾಯಿಯನ್ನು ಅಪ್ಪಿಕೊಂಡಿತು.

ಕುಟಜಾರಿಷ್ಟ
ಆಮಾಂಶ - ಸಂಗ್ರಹಣಿಗಳಿಗೆ
●
ಕಾಸಶ್ವಾಸಾರಿ
ದಮ್ಮು - ಕೆಮ್ಮುಗಳಿಗೆ
ಎಲ್ಲ ಬಗೆಯ ಆಯುರ್ವೇದ ಔಷಧಿಗಳಿಗಾಗಿ
ಬರೆಯಿರಿ:
卐
ದಿ ನೂತನ
ಆಯುರ್ವೇದ ಕಾರ್ಯಾಲಯ ಲಿ.
ವಿಜಾಪುರ

ಜಯ

ಕೊನೆಯ ನೆನಹು

(ಸಣ್ಣ ಕತೆ)

ಶ್ರೀ. ವೆಂ. ಮು. ಜೋಶಿ, ಧಾರವಾಡ.

ಯುದ್ಧವೊಂದು ಮುಗಿದು ಶಾಂತವಾಗಿ ಹೋದರೂ, ಅದು ಎಷ್ಟೊಂದು ಹೃದಯಗಳಲ್ಲಿ ಅಶಾಂತಿಯ ಬೆಂಕಿಯನ್ನು ಹೊತ್ತಿಸಿ ಹೋಗುವುದು ಗೊತ್ತೇ? ಕಳೆದ ಅಣ್ಣನನ್ನು ಹುಡುಕಲೆಂದು ಬಂದ ನಾಗರಾಜನಿಗೆ, ಸಿಂಗಾಪುರದಲ್ಲಿ ಸಿಕ್ಕಿದ್ದೇನು?

ಇಡಿ ನಡುಗಡ್ಡೆಯ ಹೆಸರೇ ಸಿಂಗಾಪುರವೆಂದಿದ್ದರೂ, ಊರು ನೆಲಸಿದುದು ಮಾತ್ರ ನಡುಗಡ್ಡೆಯ ದಕ್ಷಿಣಭಾಗಕ್ಕೆ. ಮಹಾಯುದ್ಧ ಮುಗಿದ ಮೇಲೆ ಮಲಯಾದಲ್ಲಿ ಯುದ್ಧೋತ್ತರ ಪುನರ್‌ರಚನೆಯ ಕಾರ್ಯಕ್ಕಾಗಿ ಹಿಂದುಸ್ತಾನದಿಂದ ೭ನೆಯ ಡಿವ್ಹಿಜನ್ನು ಬಂದಿಳಿದಿದ್ದರೂ, ಅದರ ವಾಸ್ತವ್ಯ ಸಿಂಗಾಪುರದಿಂದ ಹತ್ತು ಮೈಲಿನ ಮೇಲಿದ್ದ 'ನಿಸೂನ್' ಭಾಗದಲ್ಲಿ. 'ನಿಸೂನ್ ಟ್ರಾಂಸಿಟ್ ಕ್ಯಾಂಪ್' ಹಿಂದುಸ್ತಾನದ ಸೈನಿಕರಿಗೆ ಆಶ್ರಯನನ್ನಿತ್ತಂತೆ, ಜಾವಾದಿಂದ ಓಡಿಬಂದ ಡಚ್ಚರಿಗೂ ಆಶ್ರಯ ನೀಡಿತ್ತು. ಟ್ರಾಂಸಿಟ್ ಕ್ಯಾಂಪಿನಲ್ಲಿದ್ದ ಚೆನ್ನಾದ ಬಿಲ್ಡಿಂಗುಗಳು,ಡಚ್ಚರಿಗೂ ಬ್ರಿಟಿಶ್ ಸೈನಿಕರಿಗೂ ಕಾದಿರಿಸಲಾಗಿದ್ದುವು. ಹಿಂದುಸ್ತಾನದ ಸೈನಿಕರಿಗೆ ಮಾತ್ರ ತಂಬುಗಳು. ಆ ತಂಬುಗಳನ್ನಾದರೂ ಅವರೇ ನಿಲ್ಲಿಸಬೇಕಾಗಿತ್ತು. ಸುತ್ತುಮುತ್ತಲಿನ ಗಿಡಗಳನ್ನು ಕಡಿದು ಬಯಲು ನೆಲ ಮಾಡಿ, ಅಲ್ಲಿ ತಂಬುಗಳನ್ನು ನೆಡುವ ಕೆಲಸ ನಡೆದಿತ್ತು.

ಮುಂಜಾನೆಯಿಂದ ಮೂರು ತಾಸಿನ ವರೆಗೆ ರಬ್ಬರ್‌ಗಿಡಗಳನ್ನು ಕಡಿದು ದಣಿದುಹೋದ ಹವಾಲ್ದಾರ್ ನಾಗರಾಜ, ಊಟದ ಸಮಯಕ್ಕೆ ಕ್ಯಾಂಪಿಗೆ ಬಂದು ಸ್ನಾನ ಮಾಡಿ, ಊಟ ಮುಗಿಸಿ,ತನ್ನ ತಂಬುವಿಗೆ ತೆರಳಿ, ಚಾರಪಾಯಿ(ಹೊರಸು) ಯ ಮೇಲೆ ಬಿದ್ದನು. ಬಿದ್ದುದೇ ತಡ, ಕಣ್ಣು ಮುಚ್ಚತೊಡಗಿದುವು. ನಿದ್ರೆ ಆವರಿಸತೊಡಗಿತು. ದುಡಿದು ದಣಿದು ಹೋದ ದೇಹಕ್ಕೆ ಮತ್ತೇನು ಬೇಕಿತ್ತು? ಬೇಕಾದದ್ದು ನಿದ್ರೆಯೇ. ನಾಗರಾಜ ಅರೆನಿದ್ರೆಯಲ್ಲಿಯೇ ಕಣ್ಣುಗಳನ್ನು ಮುಚ್ಚಿದ. ಆದರೆ ಮನೆತನದ ಮಾತು ಕಾಡಿಸತೊಡಗಿತ್ತು. ಒಂದು ಕಡೆ ನಿದ್ರೆ. ಮತ್ತೊಂದು ಕಡೆ ಮನೆತನದ ಮಾತು. "ಯಾವುದೂ ಬೇಡ, ಹಾಳು ಗಲಾಟೆ!" ಎಂದುಕೊಳ್ಳುತ್ತ ನಾಗರಾಜ, ಮತ್ತಾವುದೋ ಬೇರೆ ಸಂಗತಿಯನ್ನು ಸ್ಮರಿಸಿಕೊಳ್ಳಲಾರಂಭಿಸಿದ. ನಾಗರಾಜ ತನ್ನ ದೇಶ ಬಿಟ್ಟು ಪರದೇಶಕ್ಕೆ ಬಂದದ್ದು ಇದೇ ಮೊದಲುಸಲ. ತನ್ನ ದೇಶ ಬಿಡುವ ಮೊದಲು, ತನ್ನ ಮನದಲ್ಲಿ ಎದ್ದ ತುಮುಲವಿಪ್ಲವ ಅವನ ಸ್ಮರಣೆಗೆ ಸಾಧನವಾಯಿತು:

ಮದ್ರಾಸಿನ ವ್ಹೆಪರಿ ಭಾಗದಲ್ಲಿದ್ದ—ವಿಲಿಂಗ್ಡನ್ ಕಾಲೇಜಿನ ಬಳಿಯಲ್ಲಿಯ—ರೆಸ್ಟ್‌ಕ್ಯಾಂಪಿನಲ್ಲಿಯ ಸೈನಿಕರೆಲ್ಲರೂ ತಮ್ಮ ಮುಂಬರುವ ಪ್ರಯಾಣವನ್ನು ನಿರೀಕ್ಷಿಸುತ್ತ ಕಾಲವನ್ನು ಕಳೆಯುತ್ತಿದ್ದರು. ಮಹಾಯುದ್ಧ ಮುಗಿದು ಹೋದುದರಿಂದ, ಯಾವ ಸೈನಿಕನ ಮುಖದ ಮೇಲೂ ಚಿಂತೆಯ ಕಳೆಯು ಕಾಣಿಸುತ್ತಿರಲಿಲ್ಲ. ಅದರ ಬದಲು ಉತ್ಸಾಹ ಅವರನ್ನು ಆವರಿಸಿತ್ತು. ಪರದೇಶದ ಪ್ರಯಾಣವೆಂದರೆ ಒಂದು ಕುತೂಹಲದ ವಿಷಯವೇ. ಯುದ್ಧದ ಸಮಯದಲ್ಲಿ ಆಗಿದ್ದರೆ ಜೀವದ ಭಯ. ಈಗ ಆ ಭಯವೂ ಇಲ್ಲ. ಹೊಸ ದೇಶ, ಹೊಸ ಜನ, ಹೊಸ ಅನುಭವ, ಎಲ್ಲವೂ ಹೊಸದು. ಅದೂ ಕೈಯಿಂದ ಕಾಸು ಖರ್ಚಾಗದೆ. ಸೈನಿಕರಿಗೆ ಉತ್ಸಾಹವೆನಿಸುವುದು ಸ್ವಾಭಾವಿಕವಾಗಿತ್ತು. ಆದರೆ ತಾನು ಮಾತ್ರ ಅಧೀರನಾಗಿದ್ದ. ಪರದೇಶಕ್ಕೆ ಹೋಗಲು ಮನಸ್ಸಿರಲಿಲ್ಲವೆಂತಲ್ಲ. ಸಿಂಗಾಪುರಕ್ಕೆ ಹೋಗಲೇಬೇಕೆಂದು ಸ್ವಸಂತೋಷದಿಂದ ಒಪ್ಪಿಕೊಂಡಿದ್ದ. ಆದರೆ ಈಗಾಗಲೆ ಸಿಂಗಾಪುರವನ್ನು ಮುಟ್ಟಬೇಕಿತ್ತು. ತಡವಾದುದಕ್ಕಾಗಿ ಅವನು ಅಧೀರನಾಗಿದ್ದ. ಅಸಮಾಧಾನಗೊಂಡಿದ್ದ. ಹಾಗಾಗುವುದಕ್ಕೆ ಪ್ರಬಲ ಕಾರಣವೊಂದಿತ್ತು. ನಾಗರಾಜನ ಮನಸ್ಸು ಸಹಜವಾಗಿ, ಮರೆಯಲು ಯತ್ನಿಸಿದ ಮಾತಿನತ್ತಲೇ ಸುಳಿಯತೊಡಗಿತು. ಪರದೇಶವನ್ನು ಬಿಡುವ ಮೊದಲು ಮನದಲ್ಲಿ ಎದ್ದ ವಿಚಾರಗಳ ಪುನಃಸ್ಮರಣೆ, ತನ್ನ ಅಧೀರತೆಯ ಪ್ರಬಲ ಕಾರಣದ ವರೆಗೆ ಎಳೆದೊಯ್ದು ಮರೆಯಲು ಯತ್ನಿಸಿದ ಮನೆತನದ ಮಾತಿನತ್ತ ನಾಗರಾಜನನ್ನು ಕರೆದೊಯ್ದಿತು. ಕುಂಟಕೋಲಿನ ಆಧಾರದಿಂದ ಅತ್ತಿತ್ತ ಸುಳಿದಾಡಿ, ಮತ್ತೆ ಮೊದಲಿನ ಸ್ಥಳಕ್ಕೆ ಬಂದಂತೆ, ನಾಗರಾಜ ವಿಷಯದಿಂದ ವಿಷಯಕ್ಕೆ ಜಿಗಿಯುತ್ತ ತನ್ನ ಮನೆತನದ ಮಾತಿನತ್ತ ಬಂದ. ಆ ಸ್ಮರಣೆ ಪ್ರತ್ಯಕ್ಷವಾಗಿ ನಾಗರಾಜನ ಮನಸ್ಸಿನ ಮುಂದೆ ಬಂದಿತು. ಎಂಥ ದೃಶ್ಯ! ಅಬ್ಬಾ! ಭಯಾನಕವಾದದ್ದು! ನಾಗರಾಜ ಕಣ್ಣನ್ನು ಮುಚ್ಚಿದ. ಆದರೆ ದೃಶ್ಯ ಮಾಯವಾಗಲಿಲ್ಲ. ಮನೆಯಲ್ಲಿ ಹಿಂದೆ ನಡೆದ ಆ ಘಟನೆಯ ಪ್ರತಿ ಸನ್ನಿವೇಶ ಕಣ್ಣೆದುರು ಸುಳಿಯತೊಡಗಿತು.

ಮನೆಯಲ್ಲಿ ತಾನು, ತನ್ನ ಅಣ್ಣ, ತನ್ನ ತಾಯಿ, ತನ್ನ ಅಣ್ಣನ ಹೆಂಡತಿ ನಾಲ್ವರೆ. ಅಣ್ಣ ಆಗಲೇ ಯುದ್ಧದಲ್ಲಿ ಸೇರಿಕೊಂಡಿದ್ದ. ಮನೆತನದ ನೀಗದ ಬಡತನ ಅವನನ್ನು ಸೈನಿಕವೃತ್ತಿಯ ಕೈಹಿಡಿಯಲು ಹಚ್ಚಿತ್ತು. ಮಹಾಯುದ್ಧದ ಜ್ವಾಲೆಯಿಂದ ವ್ಯಾಪಿಸಿದ ಉಗ್ರ ಪರಿಸ್ಥಿತಿ, ನಾಗರಾಜನ ಅಣ್ಣನನ್ನಿವನ್ನು ಗೋಳಿನ ಬಾಯಿಗೆ ತಂದು ನಿಲ್ಲಿಸಿತ್ತು. ಸಾಲಕೊಟ್ಟ ಸಾವುಕಾರರ ತ್ರಾಸಿನಿಂದ ತಪ್ಪಿಸಿಕೊಳ್ಳುವುದಕ್ಕೆ, ಬೀಳುತ್ತಿರುವ ಮನೆಯನ್ನು ಎತ್ತಿ ಹಿಡಿಯುವುದಕ್ಕೆ. ತನ್ನ ತಮ್ಮ ನಾಗರಾಜನ ಶಿಕ್ಷಣವನ್ನು ಮುಂದೆ ನಡೆಸುವುದಕ್ಕೆ, ಹೀಗೆ ಮೂರು ಕಾರಣಗಳಿಗಾಗಿ ನಾಗರಾಜನ ಅಣ್ಣ ಶ್ರೀನಿವಾಸ, ಮನೆಯಿಂದ ಹೊರಬಿದ್ದು ಸೈನ್ಯಖಾತೆಯನ್ನು ಸೇರಿದ್ದ. ಅಂದು ಮನೆಯಲ್ಲಿ ತಾಯಿ ಅತ್ತಿದ್ದಳು. ಆತನ ಹೆಂಡತಿ ಅತ್ತಿದ್ದಳು. ತಾನು ಮಾತ್ರ ಏನೂ ತಿಳಿಯದ್ದರಿಂದ ದಂಗುಬಡಿದು ನಿಂತಿದ್ದ. ಬರುಬರುತ್ತ ಆ ದುಃಖ ಸ್ಥೈರ್ಯಯುಂಡಿತು. ಪ್ರತಿತಿಂಗಳೂ ಶೀನಣ್ಣನ ಕಡೆಯಿಂದ ಕೈತುಂಬ ಕಾಸು ಬರತೊಡಗಿತು. ದಿನ ಹೋದಂತೆ ದುಃಖ ಕಡಿಮೆಯಾಗತೊಡಗಿತು. ತಾನು ಆಗ ಮೆಟ್ರಿಕ್ ಪರೀಕ್ಷೆಗೆ ಕೂಡ್ರುವವನಿದ್ದ. ಅತ್ತಿಗೆಯು ತನ್ನನ್ನು ಸ್ವಂತ ತಮ್ಮನಂತೆ ಪ್ರೀತಿಸುತ್ತಿದ್ದಳು. ಬೆಳಗುಮುಂಜಾನೆ ಅಭ್ಯಾಸಕ್ಕಾಗಿ ಎಬ್ಬಿಸುತ್ತಿದ್ದಳು. ಆಗ ಗಾಢನಿದ್ರೆಯಲ್ಲಿರುವುದರಿಂದ, ಅತ್ತಿಗೆಯ ಅಧಿಕಪ್ರಸಂಗಕ್ಕೆ ಸಿಟ್ಟು ಬರುತ್ತಿತ್ತು. ಆದರೆ ಮುಂದೆ ಪಾಸಾದಾಗ, ಆಕೆಯ ಶಿಸ್ತಿನ ಬಗ್ಗೆ ಆದರವೆನಿಸತೊಡಗಿತು. ಆಗಲೇ ಜಗತ್ತಿನ ಒಂದು ಸತ್ಯವನ್ನು ಕಂಡು ಹಿಡಿದದ್ದು: ಹೊಗಳುವ ಬಳಗದವರಿಂದ ನಷ್ಟಹೊಂದುವ ಭಯವಿರುತ್ತದೆ; ತನ್ನ ಅತ್ತಿಗೆ ತನ್ನನ್ನೆಂದೂ ಹೊಗಳುತ್ತಿರಲಿಲ್ಲ. ಆದರೆ ಅವಳ ಪ್ರೀತಿ ಮಾತ್ರ ಎಲೆಮರೆಯ ಹೂವಿನಂತೆ ಕಂಪನ್ನು ಸೂಸುತ್ತಿತ್ತು.

ಪರೀಕ್ಷೆಯ ಫಲಿತಾಂಶ ಹೊರಬೀಳುವ ದಿನ ಬಂದಿತು. ತಾನು ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದ. ಸೌಥ್ ಈಸ್ಟ್ ಏಸಿಯಾ ಕಮಾಂಡ್ ಹೆಡ್‌ಕ್ವಾರ್ಟರಿನಿಂದ ತಾರೊಂದು ಬಂದಿತ್ತು. ತಾನೇ ನಡುಗುವ ಕೈಗಳಿಂದ ತಾರನ್ನು ಒಡೆದು ಓದಿದ್ದ:

"ಶ್ರೀನಿವಾಸ ಕುಲಕರ್ಣಿ ಈಜ್ ಮಿಸಿಂಗ್, ಬಿಲೀವ್ಡ್ ಟು ಬಿ ಕಿಲ್ಡ್"

ಕನ್ನಡದಲ್ಲಿ ಅದನ್ನು ಅನುವಾದಿಸಿ ಹೇಳುವುದಕ್ಕೆ ತನಗೆ ನಾಲಗೆಯೇ ಏಳಲಿಲ್ಲ. ಅತಿ ಪ್ರಯಾಸದಿಂದ "ಅತ್ತಿಗೆ, ಶೀನಣ್ಣ ಯುದ್ಧದೊಳಗ ಎಲ್ಲಿಯೋ ಕಣ್ಮರೆಯಾಗ್ಯಾನಂತ" ಎಂದು ಹೇಳಿದ. "ಆಂ" ಕಂಗೆಟ್ಟು ತಾಯಿ–ಅತ್ತಿಗೆಯರಿಬ್ಬರೂ ಕೇಳಿದ್ದರು.

"ಶತ್ರುಗಳು ಕೊಂದಿರಬೇಕೆಂದು ಸಂದೇಹವಿದೆಯಂತೆ!"

ಒಂದು ಕರ್ಣಕಠೋರ ಚೀತ್ಕಾರ ಮನೆಯನ್ನು ಭೇದಿಸಿತು. ಆ ಚೀತ್ಕಾರದ ಕೊನೆಯಲ್ಲಿ ಅತ್ತಿಗೆ ಎಚ್ಚರದಪ್ಪಿ ಬಿದ್ದುಬಿಟ್ಟಳು.

ಆಗಿನ ಒಂದೊಂದು ನಿಮಿಷವೂ ಒಂದೊಂದು ಯುಗವಾಗಿತ್ತು. ಮನೆ ಮಸಣವಾಗಿತ್ತು. ಸ್ಮಶಾನಶಾಂತಿ ಮನೆಯಲ್ಲಿ ವ್ಯಾಪಿಸಿತ್ತು. ಸಂಜೆಯವರೆಗೂ ಹೇಗೋ ಕಾಲವನ್ನು ಕಳೆದರೂ, ಅತ್ತಿಗೆ ಮಾತ್ರ ಎಚ್ಚರದಲ್ಲಿರದ್ದರಿಂದ ಬಾಯಿಗೆ ಬಂದದ್ದನ್ನು ಚೀರಾಡುತ್ತಿದ್ದಳು. ಮನದ ಮೇಲಿನ ಹಿಡಿತ ತಪ್ಪಿತ್ತು. ತಾನು? ತನ್ನದು ಗಂಡು ಹೃದ[ಯ] ಶೀನಣ್ಣ ಮತ್ತು ಅತ್ತಿಗೆಯ ಮೇಲೆ ಎಲ್ಲಿಲ್ಲದ ಪ್ರೀತಿ. ಆದರೆ ಹೆಣ್ಣುಗಳಂತೆ ಅಳುವುದು ಅಸಾಧ್ಯವಾಗಿತ್ತು. ಓದುವ ಕೋಣೆಯ[ಲ್ಲಿ] ಊಟವಿಲ್ಲದೆ ಇಡೀ ದಿನವನ್ನು ಕಳೆದಿದ್ದ.

x x x x

ಮನೆತನ ಬಡತನದ್ದಾಗಿದ್ದರೂ ಸನಾತನದ್ದಾಗಿತ್ತು. ಒಂ[ದು] ಜೀವ ಹೋಯಿತೆಂದು ಹಬ್ಬ-ಹುಣ್ಣಿವೆಗಳು ತಡೆಹಿಡಿಯ ಬಹುದ[ಾಗಿತ್ತು]. ಆದರೆ ಅದಕ್ಕೊಂದು ಸಂಕಟ ಉದ್ಭವಿಸಿತ್ತು. ಅದೇ ತನ್ನ ಅತ್ತಿಗೆ[ಯ] ಸಂದೇಹಾಸ್ಪದ ಸೌಭಾಗ್ಯ. ಶೀನಣ್ಣ ಹೋದದ್ದೇ ನಿಜವಾಗಿದ್ದ[ರೆ] ಅವಳದೇನೂ ಅಡೆತಡೆಯಾಗುವಂತಿರಲಿಲ್ಲ. ಆದರೆ ಶೀನಣ್ಣ ಯು[ದ್ಧ]ದಲ್ಲಿ ಜೀವ ಕಳೆದುಕೊಂಡ ಬಗ್ಗೆಯೂ ನಿಶ್ಚಯವಿರಲಿಲ್ಲ. ಶೀನಣ್ಣ[ನ] ಯಾವುದೇ ಸಂಗತಿಯು ಅನಿಶ್ಚಿತವಾದುದರಿಂದ, ಮನೆಯ[ಲ್ಲಿ] ಸಂಕಟವೇ ಉದ್ಭವಿಸಿತ್ತು.

ಆ ಹಬ್ಬದ ದಿನ ಮನೆಯಲ್ಲಿ ನಡೆದ ಮಾತು-ಕತೆಗಳು ಹಟಾತ್ತ[ನೆ] ನಾಗರಾಜನ ಕಣ್ಣೆದುರು ಕಟ್ಟನಿಂತುವು.

ಅಂದು ಹಬ್ಬ. ಮನೆಯಲ್ಲಿ ಎಲ್ಲರೂ ಖಿನ್ನವದನರಾಗಿದ್ದರು. ತಾಯಿಯಂತೂ ತುಂಬಾ ಖಿನ್ನಳಾಗಿದ್ದಳು. ಕಾರಣವೇನೆಂದ[ರೆ] ಮನೆಯಲ್ಲಿ ಪೂಜೆಗಾಗಿ ಆಚಾರ್ಯರು 'ಮಡಿಯಾಗದ ಮನೆಯ[ಲ್ಲಿ] ನಮ್ಮ ಪ್ರವೇಶವಿಲ್ಲ; ಬರುವುದಿಲ್ಲ' ಎಂದು ಖಂಡಿತವಾಗಿ ಹೇಳಿದ್ದರು. ಎಲ್ಲರೂ ಹಾಗೆಯೇ ಹಬ್ಬವನ್ನಾಚರಿಸಿ, ಸಂಜೆ ಪಡಸಾಲೆಯಲ್ಲಿ ಕು[ಳಿ]ತಾಗ. ಅತ್ತಿಗೆ ಕಣ್ಣೀರನ್ನು ಸುರಿಸುತ್ತ ತನ್ನ ತಾಯಿಗೆ ಹೇಳಿದ್ದರು

"ಅತ್ತೇಯವರೇ, ಏನೇನು ಆಗಬೇಕು ಎಲ್ಲಾ ಆಗಿ ಹೋಗಲಿ"

"........" ತಾಯಿ ಏನನ್ನೂ ಮಾತಾಡಲಿಲ್ಲ. ನಾನೇ ನಡು[ವೆ] ಬಾಯಿಹಾಕಿ ಹೇಳಿದ್ದ: "ಅತ್ತಿಗೇ, ಯಾವದಕ್ಕೂ ಅಂಜಬ್ಯಾಡ್ರಿ ಶೀನಣ್ಣ ಹೋಗಿಲ್ಲಾ ಅಂತ ನನಗ ಖಾತ್ರಿ ಅನಸ್ತದ. ಎಲ್ಲಾದರೂ ಶತ್ರುಗಳ ಕೈಗೆ ಸಿಕ್ಕಿರಬೇಕು. ನಾನೂ ನಾಳೆ ಮಿಲ್ಟ್ರಿ ಸೇರಿಬಿಡತೀನಿ ಅಣ್ಣನ ಪತ್ತೆ ಹಚ್ಚುವವರೆಗೆ ನಾನು ಮನೆಗೇ ಬರೂದಿಲ್ಲ!"

ತನ್ನ ಮಾತಿನಿಂದ ತಾಯಿ-ಅತ್ತಿಗೆಗಳಿಬ್ಬರಿಗೂ ಧೈರ್ಯ ಬಂದಂತಾಗಿದ್ದರೂ, ತನ್ನನ್ನು ಮಿಲ್ಟ್ರಿಗೆ ಹೋಗಗೊಡಲು ಅವರು ಸಿದ್ಧರಾಗಿರಲಿಲ್ಲ. ಅವರ ಮನಸ್ಸಿನ ವಿರುದ್ಧವೇ ತಾನು ಮಿಲ್ಟ್ರಿಯನ್ನು ಸೇರಿದ್ದು.

ಮುಂದೆ ಮಿಲ್ಟ್ರಿ ಸೇರಿದನಂತರ, ಅತ್ತಿಗೆಯಿಂದ ತನಗೆ ಬರು[ವ] ಪ್ರತಿ ಪತ್ರದಲ್ಲಿ "ಅವರ ಸುದ್ದಿ ಏನಾದರೂ ತಿಳಿಯಿತೇ?" ಎಂ[ಬ] ಪ್ರಶ್ನಾರ್ಥಕ ಮಾತೇ. ಆ ಮಾತೇ ತನಗೆ ಸಿಂಗಾಪುರಕ್ಕೆ ಹೋಗಲು ಉತ್ಸಾಹ ಕೊಟ್ಟಿತು. ರೋಗಿ ಬಯಸಿದ್ದೂ ಅದೇ, ವೈದ್ಯನ ಮಾತೂ ಅದೇ—ಎನ್ನುವಂತೆ, ಸಿಂಗಾಪುರಕ್ಕೆ ಹೋಗುವ ಪ್ರಸಂಗ ಬಂತು ಯುದ್ಧ ಮುಗಿದದ್ದು ಒಂದು ಒಳ್ಳೆಯದೆ ಆಯಿತು. ಸಿಂಗಾಪುರಕ್ಕೆ ಹೋಗುವುದು ನಿಶ್ಚಯವಾದಾಗ, ತಾನು ಅತ್ತಿಗೆಗೆ ಒಂದ[ು] ಪತ್ರ ಬರೆದುಹಾಕಿದ್ದ. ಈಗ ತಾನು ಅಣ್ಣ ಇದ್ದಲ್ಲಿಗೇ ಹೋಗು[ತ್ತಿ]ದ್ದೇನೆ, ತಪ್ಪದೆ ಅಣ್ಣನನ್ನು ಹುಡುಕಿಕೊಂಡು ಬರುವೆ ನಿಮ್ಮ

ಹಣೆಯ ಕುಂಕುಮ ಭದ್ರವಾಗಿ ಉಳಿಯಲಿ—ಎಂದೆಲ್ಲ ಬರೆದಿದ್ದ ಆದರೆ !

" ಆದರೆ !" ನಾಗರಾಜ ಮಲಗಿದಲ್ಲಿಂದಲೇ ನಿಟ್ಟುಸಿರನ್ನು ಬಿಟ್ಟ. ನಿದ್ದೆ ಎಲ್ಲಿಯೋ ಮಾಯವಾಗಿತ್ತು. ಆದರೆಡೆಯಲ್ಲಿ ತಾನು ಅತ್ತಿಗೆಗೆ ಕೊಟ್ಟ ಮಾತನ್ನು ಪಾಲಿಸುವುದು ಹೇಗೆ ?—ಎಂಬ ಪ್ರಶ್ನೆ ಕಾಡತೊಡಗಿತ್ತು.

ಪ್ರಶ್ನೆ ಬಗೆಹರಿಯದಿದ್ದಾಗ, ಪರೀಕ್ಷೆಗೆ ಕುಳಿತ ವಿದ್ಯಾರ್ಥಿ ತಲೆ ತುರಿಸಿಕೊಂಡಂತೆ, ನಾಗರಾಜ ತಲೆ ತುರಿಸಿಕೊಳ್ಳತೊಡಗಿದ. ಆದರೆ ಅದಕ್ಕೂ ವೇಳೆ ಇರಲಿಲ್ಲ. 'ಫಾಲ್ ಇನ್' ಆಗುವ ಶೀಟಿಯ ಸಪ್ಪಳ ಅವನನ್ನು ಹೊರಸಿನಿಂದ ಮೇಲೆಬ್ಬಿಸಿತು. ಮನಸ್ಸಿಲ್ಲದ ಮನಸಿನಿಂದಲೇ ನಾಗರಾಜ ಪರೇಡ್ ಗ್ರೌಂಡಿಗೆ ಹೊರಟು ನಡೆದ

ಆಫಿಸರ್ ಕಮಾಂಡಿಂಗರು ಆಗಲೇ ಪರೇಡ್ ಗ್ರೌಂಡನಲ್ಲಿ, ಪ್ರತಿ ಪ್ಲಾಟೂನಿಗೆ ಒಬ್ಬೊಬ್ಬ ಹವಾಲ್ದಾರನನ್ನು ಹಿರಿಯ ಸೈನಿಕನನ್ನಾಗಿ ನಿಯಮಿಸಿ, ಸ್ಪೆಶಲ್ ಡ್ಯೂಟಿಗಾಗಿ ಕಳಿಸತೊಡಗಿದ್ದರು. ನಾಗರಾಜನೂ ಹವಾಲ್ದಾರ. ಅವನೂ ಒಂದು ಪ್ಲಾಟೂನಿನ ಹಿರಿಯಧಿಕಾರಿಯಾಗಿ ಡ್ಯೂಟಿಯ ಮೇಲೆ ಹೋಗಬೇಕಾಯಿತು. ಡ್ಯೂಟಿ ಅಷ್ಟೊಂದು ಗಡುಚಾಗಿರಲಿಲ್ಲ. ಯುದ್ಧಸಮಯದಲ್ಲಿ ನಮ್ಮ ಸೈನಿಕರೆಷ್ಟೋ ಜನ ಸತ್ತಿದ್ದರು. ಅವರ ಶವಗಳು ಅಜ್ಞಾತಸ್ಥಳದಲ್ಲಿ ದಿಕ್ಕಿಲ್ಲದೆ ಬಿದ್ದಿದ್ದವು. ಅವುಗಳನ್ನು ಶೋಧಿಸುವ ಕಾರ್ಯವೇ, ಆ ಪ್ಲಾಟೂನ್‌ಗಳಿಗೆ ಒಪ್ಪಿಸಿದ ಕೆಲಸವಾಗಿತ್ತು. ಈ ಕೆಲಸವು ಯುದ್ಧೋತ್ತರ ಪುನರ್‍ರಚನೆಯ ಕೆಲಸದಲ್ಲೊಂದು. ಸತ್ತ ಸೈನಿಕರನ್ನು ಗುರುತಿಸುವುದಂತೂ ತೀರ ಅಶಕ್ಯವಾದ ಮಾತು. ನಮ್ಮ ಸೈನಿಕರೋ ಅಥವಾ ಶತ್ರುಸೈನಿಕರೋ ಎಂಬುದನ್ನು ಗುರುತಿಸುವುದೂ ಕಠಿಣವಾದಾಗ, ಸತ್ತವನ ಮುಖ ಗುರುತಿಸುವುದು ತೀರ ಕಠಿಣವಾದ ಮಾತು. ಆದರೆ ಸೈನಿಕರ ಕೊರಳಲ್ಲಿ ಯಾವಾಗಲೂ ಪರಿಚಯ ಚಕ್ರವು(Identity disc) ಕಟ್ಟಿದ್ದಿರುತ್ತದೆ. ಅದರ ಮೇಲೆ ಆ ಸೈನಿಕನ ನಂಬರು ಕೊರೆದಿರುತ್ತದೆ. ಸಣ್ಣ ಸ್ಥಳದಲ್ಲಿ ಹೆಸರು ವಿಳಾಸ ಬರೆಯಲು ಆಗುವುದಿಲ್ಲವೆಂದು, ಕೇವಲ ನಂಬರು ಮಾತ್ರ ಕೊರೆಯಲಾಗಿರುತ್ತದೆ. ಆ ನಂಬರಿನ ಮೇಲಿಂದ ನಮ್ಮ ಸೈನಿಕರು ಹೌದೋ ಅಲ್ಲವೋ ಎಂಬುದನ್ನು ಮಾತ್ರ ಗುರುತು ಹಿಡಿಯಲು ಸಾಧ್ಯ. ಆ ನಂಬರಿನ ಮೇಲಿಂದ ರಿಕಾರ್ಡುಗಳ ಪರಿಶೀಲನೆಯಾದ ಮೇಲೆ, ಆ ವ್ಯಕ್ತಿಯ ಹೆಸರು ತಿಳಿಯುತ್ತದೆ. ಸೈನಿಕ ಸತ್ತುಹೋಗಿ ದೇಹವು ದಿಕ್ಕಿಲ್ಲದೇ ಬಿದ್ದು ಹೋದಾಗ, ದಿನ ಕಳೆದಂತೆ, ಮಾಂಸವೆಲ್ಲ ನರಿ-ಹದ್ದುಗಳ ಪಾಲಾದರೂ, ಎಲುವಿನ ಹಂದರ ಹಾಗೆಯೇ ಉಳಿಯುತ್ತದೆ. ಅದರ ಜತೆಯಲ್ಲಿ ಉಳಿಯುವುದು ಕೊರಳಲ್ಲಿದ್ದ ಪರಿಚಯ ಚಕ್ರ (Identity disc).

ನಾಗರಾಜನ ಪ್ಲಾಟೂನಿಗೆ ಒಪ್ಪಿಸಿದ ಭಾಗ ಜೋಹರ್ ಬಾರುವಿನ ದಿಶೆಯುತ್ತಲೇ ಇತ್ತು. ಪ್ಲಾಟೂನುಗಳನ್ನು ಮಾರ್ಚ್ ಮಾಡಿಕೊಂಡು ಅಡವಿಯಲ್ಲಿ ನಡೆದ. ಶವಗಳಿಗೇನು ಕೊರತೆ? ೫-೬ ಶವಗಳ ಎಲುವಿನ ಹಂದರಗಳು ಬಿದ್ದಿದ್ದುವು. ಅವುಗಳ ಬದಿಯಲ್ಲಿ ಬಿದ್ದ ಸಾಮಾನುಗಳ ಮೇಲಿಂದ, ಅವು ಶತ್ರುಸೈನಿಕರ ಶವಗಳೆಂದು ಗೊತ್ತಾಗುತ್ತಿತ್ತು. ಅವುಗಳನ್ನು ಹಾಗೆಯೇ ಬಿಟ್ಟು ನಾಗರಾಜನ ಪ್ಲಾಟೂನ್ ಮತ್ತೆ ಮುಂದುವರೆಯಿತು. ಪ್ಲಾಟೂನಿನ ಜನವೆಲ್ಲ ಆ ಶವಗಳ ಹತ್ತಿರ ಸಿಕ್ಕ ಬೆಲೆಯುಳ್ಳ ಸಾಮಾನುಗಳನ್ನು ತಮ್ಮ ಕಿಸೆಯಲ್ಲಿ ತುರುಕಿಕೊಳ್ಳುತ್ತ ನಡೆದಿದ್ದರು. "ಸುಡುವ ಮನೆಯ ಗಳ ಹಿರಿದಷ್ಟೇ ಬಂತು" ಈ ಮಾತಿನ ಸತ್ಯತೆ ಆಗ ಅಲ್ಲಿ ಕಾಣುತ್ತಿತ್ತು. ೫-೬ ಶತ್ರುಗಳ ಶವಗಳನ್ನು ದಾಟಿದ ಮೇಲೆ, ಕೆಲವು ಹಿಂದೀ ಸೈನಿಕರ ಶವಗಳ ಎಲುವಿನ ಹಂದರಗಳೂ ಬಿದ್ದುದು ಗೋಚರವಾಗತೊಡಗಿತು. ಎಲ್ಲ ಸೈನಿಕರು ಅವುಗಳ ಕೊರಳಲ್ಲಿಯ ಆಯಡೆಂಟಿಟಿ ಡಿಸ್ಕ್‌ಗಳನ್ನು ಕತ್ತರಿಸಿಕೊಂಡು, ಆ ಶವಗಳು ಬಿದ್ದ ಸ್ಥಳದಲ್ಲಿ ಗುರುತುಮಾಡಿ, ತಮ್ಮ ಕೈಯಲ್ಲಿದ್ದ ನಕ್ಷೆಯಲ್ಲಿ ಸ್ಥಳನಿರ್ದೇಶನಕ್ಕಾಗಿ ಗುರುತು ಹಾಕತೊಡಗಿದರು. ಎಲ್ಲ ಸೈನಿಕರ ದೃಷ್ಟಿ ಅವುಗಳ ಬದಿಯಲ್ಲಿ ಬಿದ್ದ ಸಾಮಾನುಗಳತ್ತಲೇ ಇತ್ತು. ನಾಗರಾಜನೂ ಇದಕ್ಕೆ ಅಪವಾದವಾಗಿರಲಿಲ್ಲ. ಒಂದು ಎಲುವಿನ ಹಂದರದ ಕೊರಳಲ್ಲಿಯ ಡಿಸ್ಕನ್ನು ಕತ್ತರಿಸುತ್ತಿರುವಾಗ, ಅವನ ದೃಷ್ಟಿ ಅಕಸ್ಮಾತ್ ಆ ಶವದ ಮುಂಗೈಯ ಹತ್ತಿರ ಹೋಯಿತು. ಅಲ್ಲಿದ್ದುದು ಒಂದು ಸುಂದರವಾದ ಕೈಗಡಿಯಾರ. ಅದನ್ನು ಮೆಲ್ಲಗೆ ಬಿಚ್ಚಿ, ಇತರ ಸೈನಿಕರ ದೃಷ್ಟಿಗೆ ಬೀಳದ ಹಾಗೆ ತನ್ನ ಕಿಸೆಯಲ್ಲಿ ಸೇರಿಸಿಕೊಂಡು, ಡಿಸ್ಕಿನ ನಂಬರನ್ನು ಗುರತುಮಾಡಿ, ತನ್ನ ಕೈಯಲ್ಲಿದ್ದ ನಕ್ಷೆಯಲ್ಲಿ ಸ್ಥಳನಿರ್ದೇಶನದ ಗುರುತನ್ನು ಹಾಕಿಕೊಂಡ.

ಸಂಜೆಯ ಆರು ಹೊಡೆದಾಗ, ತಮ್ಮ ಡ್ಯೂಟಿಯನ್ನು ಮುಗಿಸಿಕೊಂಡು ಎಲ್ಲರೂ ಕ್ಯಾಂಪಿಗೆ ಮರಳಿದರು. ತಾವು ತಂದ ಡಿಸ್ಕುಗಳನ್ನು ಆಫಿಸರ್ ಕಮಾಂಡರುಗಳ ಕೈಗಿರಿಸಿ, ರೋಲ್ ಕಾಲ್ ಪರೇಡನ್ನೂ ಊಟವನ್ನೂ ಮುಗಿಸಿ, ಎಲ್ಲರೂ ಹಾಯಾಗಿ ತಿರುಗಾಡಲು ಊರಲ್ಲಿ ನಡೆದರು. ನಾಗರಾಜ ಅಂದು ದೇವರನ್ನು ಅಭಿನಂದಿಸಿದ. ಮಲಾಯಾಕ್ಕೆ ಬಂದಾಗ ಕಿಸೆಯಲ್ಲಿದ್ದ ಪುಡಿಕಾಸು ಮುಗಿದಿತ್ತು. ಸಂಬಳ ಸಿಕ್ಕಲಿಕ್ಕೆ ಇನ್ನೂ ಹೊಸ ತಿಂಗಳು ಬರಬೇಕು. 'ದೇವರೇ, ಹೊಸ ವಾಚನ್ನು ದೊರೆಕಿಸಿಕೊಟ್ಟೆ' ಎಂದುಕೊಳ್ಳುತ್ತ, ಗ್ರೇಟ್‌ವರ್ಲ್ಡ್ ಬಾಗಿಲಿಗೆ ಬಂದು ನಿಂತ. ಚೀನಿ ಅಂಗಡಿಗೇನೂ ಅಲ್ಲಿ ಕೊರತೆ ಇರಲಿಲ್ಲ. ನಾಗರಾಜ ಅಂಗಡಿಯೊಂದರಲ್ಲಿ ಆ ವಾಚನ್ನು ೧೦ ಡಾಲರ್ಸುಗಳಿಗೆ ಮಾರಿದ. ಕಿಸೆಯನ್ನು ತುಂಬಿಕೊಂಡೇ ಗ್ರೇಟವರ್ಲ್ಡ್‌ನಲ್ಲಿ ನಡೆದುಹೋದ.

x x x x

ಮಾರನೆಯ ದಿನ ಸಂಜೆ, ಆ ಚೀನೀ ಅಂಗಡಿಯ ಎದುರಿನಲ್ಲಿ ಗೊಂದಲವೇ ಗೊಂದಲ. ಅಲ್ಲಿಯ ಜನ "ಏನು, ಹಿಂದೀ ಸೈನಿಕರು ಜಗಳಗಂಟರೇ?" ಎಂದು ಗೊಣಗಾಡುತ್ತಿದ್ದರು. ಆದರೆ ಸೈನಿಕರು ಇತರರ ಟೀಕೆಗೆ ಬೆದರುತ್ತಿರಲಿಲ್ಲ. ನಾಗರಾಜನಿಗೂ ಆ ಚೀನಿ ವ್ಯಾಪಾರಸ್ಥನಿಗೂ ವ್ಯಾಜ್ಯ ನಡೆದಿತ್ತು. ಅದಿಬದಿಯಲ್ಲಿ ಅಲೆಯುತ್ತಿದ್ದ ಇತರ ಹಿಂದೀಸೈನಿಕರೆಲ್ಲರೂ ಅಲ್ಲಿ ಕೂಡಿ, ನಾಗರಾಜನಿಗೆ ಬೆಂಬಲ ಕೊಡತೊಡಗಿದರು.

ಮಾರ್ಕೆಟ್ಟಿನಲ್ಲಿ ಗಸ್ತು ತಿರುಗತ್ತಿದ್ದ ಎಮ್. ಪಿ. (ಮಿಲಿಟ್ರಿ ಪೋಲೀಸ್) ಕ್ಯಾಪ್ಟನ್ ಅಂಗಡಿಗೆ ಬಂದು, ನಾಗರಾಜನನ್ನು ಪ್ರಶ್ನಿಸಿದರು:

"ಹವಾಲ್ದಾರ್, ಏನದು ಗದ್ದಲ?"

ಚೀನಿ ವ್ಯಾಪಾರಸ್ಥನಿಗೆ ಕೊಂಚ ಧೈರ್ಯ ಬಂದಿರಬೇಕು. ಅವನೇ ಒದರಿ ಹೇಳಿದ: "ನೋಡಿರಿ ಸಾಹೇಬರೇ, ನಿನ್ನೆ ಈ ಹವಾಲ್ದಾರ ಬಂದು ವಾಚ್ ಮಾರಿದ. ಅದನ್ನು ಈವೊತ್ತು ತಿರುಗಿ ಕೊಡಬೇಕಂತೆ!"

"ಪುಕ್ಕಟೆಯಾಗಿಯೇ ?"

"ಪುಕ್ಕಟೆಯಾಗಿ ಅಲ್ಲ; ಡಾಲರುಗಳನ್ನು ತಿರುಗಿಸುವನಂತೆ!"

ನಾಗರಾಜ ದೀನನಾಗಿ "ಮಹಾರಾಯಾ, ಬೇಕಾದರೆ ಇನ್ನೊಂದೈದು ಡಾಲರು ಹೆಚ್ಚು ತೆಗೆದುಕೊ! ಆದರೆ ಆ ವಾಚ್ ತಿರುಗಿ ಬೇಕು!" ಎಮ್. ಪಿ. ಕ್ಯಾಪ್ಟನ್ ನಾಗರಾಜನತ್ತ ಹೊರಳಿ ಕೇಳಿದ: "ಆ ವಾಚೇಕೆ ಬೇಕು? ಅದನ್ನು ಮಾರಿದೆ ಏಕೆ? ಹಿಂದುಸ್ಥಾನದಿಂದ ಬರುವಾಗ ತಂದಿದ್ದೀಯಾ?"

ನಾಗರಾಜ ದೈನ್ಯಸ್ವರದಲ್ಲಿ ಹಿಂದಿಯಲ್ಲಿಯೇ ಉತ್ತರಿಸಿದ: "ನೀವು ಅಭಯವಚನವನ್ನಿತ್ತರೆ ಮಾತ್ರ ಸತ್ಯವನ್ನು ಹೇಳುತ್ತೇನೆ!"

"ನೀನಾವುದಕ್ಕೂ ಅಂಜಬೇಡ; ನಮ್ಮವರಿಗೆ ನಾವು ಉಪಕಾರ ಮಾಡದಿದ್ದರೆ ಮತ್ತಾರಿಗೆ ಮಾಡಬೇಕು?"

"ನಿನ್ನೆ ಜೋಹರ್‌ಬಾರುವಿನ ದಿಶೆಯಲ್ಲಿಯ ಅಡವಿಗೆ ನನ್ನ ಪ್ಲಾಟೂನು ವಿಶೇಷ ಡ್ಯೂಟಿಯ ಮೇಲೆ ಹೋಗಿತ್ತು. ಶವಗಳ ಕೊರಳಲ್ಲಿದ್ದ Identity disc ಗಳನ್ನು ಆರಿಸಿ ತರುವುದಕ್ಕಾಗಿ."

"ಹೌದು, ಅವರವರ ಸ್ಮಾರಕ ಕಟ್ಟುವುದಕ್ಕಾಗಿ! ಮುಂದೆ?"

"ಮುಂದೆ ಒಂದು ಶವದ ಡಿಸ್ಕ ಕತ್ತರಿಸಲು ಹೋದಾಗ, ಈ ವಾಚ್ ಸಿಕ್ಕಿತ್ತು. ಅದನ್ನು ಮಾರಿದೆ!"

"ಆಮೇಲೆ? ಅದೇಕೆ ನಿನಗೆ ತಿರುಗಿ ಬೇಕಾಯಿತು?"

ನಾಗರಾಜ ದೊಡ್ಡ ಧ್ವನಿ ತೆಗೆದು ಅಳುತ್ತಲೇ ಹೇಳಿದ:

"ಅದು ನನ್ನ ಅಣ್ಣ ಶೀನಣ್ಣನದು!"

ಕ್ಯಾಪ್ಟನ್ ಕುತೂಹಲವುಳ್ಳವನಾಗಿ "ಅದು ನಿನಗೆ ಹೇಗೊತ್ತಾಯಿತು?" ಎಂದು ಕೇಳಿದ.

ನಾಗರಾಜ ಏನೂ ಮಾತಾಡದೆ, ಕೈಯಲ್ಲಿದ್ದ ಡಿಸ್ಕ ನಂಬರನ್ನೂ ರಿಕಾರ್ಡ್ ಶೀಟಿನಲ್ಲಿದ್ದ ನಂಬರನ್ನೂ ಸರಿದೋರಿಸಿ ಕಣ್ಣೊರಸಿಕೊಂಡನು.

ಕ್ಯಾಪ್ಟನನ್ನು ನಾಗರಾಜನ ಬೆನ್ನನ್ನು ಸವರುತ್ತಾ ವಾಚನ್ನು ಹಿಂತಿರುಗಿಸಿದ. ವಾಚನ್ನು ಕೈಯಲ್ಲಿ ತೆಗೆದುಕೊಂಡು ಒಂದೆಯುರಿಗೆ ನಾಗರಾಜ ಕ್ಯಾಂಪನ್ನು ತಲುಪಿ, ಅತ್ತಿಗೆಗೆ ಪತ್ರವನ್ನು ಬರೆಯಲು ಪ್ರಾರಂಭಿಸಿದ. ಆದರೆ ಕೈಯಲ್ಲಿಯ ಪೆನ್ನೇ ಮುಂದೆ ಸರಿಯಲಿಲ್ಲ, ಮುಂದೆ ಇದ್ದ ಬಿಳಿಯ ಕಾಗದವನ್ನು ನೋಡುತ್ತ ಹಾಗೇ ಕುಳಿತುಬಿಟ್ಟ.

"ಅಣ್ಣನ ಜೀವ ಇಲ್ಲ; ಅವನದೊಂದು ನಿರ್ಜೀವ ವಸ್ತು ಮಾತ್ರ ಸಿಕ್ಕಿತು.

ಇದೇ ಕೊನೆಯ ನೆನಹು!"

ಅವನ ಬಾಯಿಂದ ಶಬ್ದಗಳು ಮಾತ್ರ ಹೊರಬಿದ್ದುವು.

ಬೆಂದ ಹೃದಯ

[ಹೊಸ ರೂಪಕಸಂಕಲನ]

ಬರೆದವರು ಶ್ರೀ. 'ಆನಂದಕಂದ'ರು

ಅಚ್ಚಾಗುತ್ತಲಿದೆ. ಒಂದೆರಡು ವಾರಗಳಲ್ಲಿಯೆ ಪ್ರಕಟವಾಗುವುದು.

ಓದಿದರೆ ರಸಭರಿತವಾದ ಕತೆಗಳು! ಆಡಿದರೆ ಮನೋಹರವಾದ ನಾಟಕಗಳು! ಫೆಬ್ರುವರಿ ಮುಗಿಯುವುದರೊಳಗಾಗಿ ಬೇಡಿಕೆ ಕಳುಹುವವರಿಗೆ ಅಂಚೆವೆಚ್ಚವನ್ನು ನಾವೇ ವಹಿಸಿ ಪುಸ್ತಕ ಕಳುಹುವೆವು.

ಶರತ್ ಪ್ರಕಾಶನ ಮಂದಿರ, ಧಾರವಾಡ

ನೃತ್ಯ ಭಾರತಿ

ನೃತ್ಯ, ಸಂಗೀತ, ಇನ್ನಿತರ ಲಲಿತಕಲೆಗಳಿಗೆ ಮೀಸಲಾದ

ಕನ್ನಡದ ಒಂದೇ ಒಂದಾದ ತ್ರೈಮಾಸಿಕ.

ಭಾರತೀಯ ನೃತ್ಯಕಲಾಕೇಂದ್ರದ ಮುಖಪತ್ರ.

ಸಂಪಾದಕರು:

ನಾಟ್ಯಾಚಾರ್ಯ **ಕುಲಕರ್ಣಿ ಶ್ರೀನಿವಾಸ** ಬಿ. ಎ.

ಮೊದಲನೆಯ ಸಂಚಿಕೆ ೨೬-೧-೫೪ ರಂದು ಪ್ರಕಟವಾಗಿದೆ.

ಚಂದಾ: ಅಂಚೆವೆಚ್ಚ ಸೇರಿ ೫-೦-೦

ವಿವರಗಳಿಗೆ:

ನೃತ್ಯಭಾರತೀ ಕಾರ್ಯಾಲಯ

ಗುರುಕುಲ, **ಹಾಂಸಭಾಂವಿ**

(ಜಿಲ್ಲಾ ಧಾರವಾಡ)

★ ಬೆಳಸಿಯ ಹೊಲದ ಬೆಡಗು ★

[ಚಿಕ್ಕವರಿಗಾಗಿ ಒಂದು ಪ್ರಾದೇಶಿಕ ಜೀವನಚಿತ್ರ]

ಡಾ. ಬಿ. ಪಿ. ಎಸ್. ರಾವ್, ಬೆಳಗಾಂವಿ

◆

ಜೋಳದ ಮುಖವನ್ನೇ ಕಾಣದ ಮಲೆನಾಡಿಗರಿಗೆ, ಬೆಳವಲದ ಬೆಳಸಿಯ ಸವಿಯೇನು ಗೊತ್ತು? ಬೆಳಸಿಯ ಕಾಲವೆಂದರೆ, ಬೆಳವಲ ನಾಡಿಗರು ವರ್ಷದುದ್ದಕ್ಕೂ ತಮ್ಮ ಪೋಷಣೆ ಮಾಡಬಲ್ಲ ಜೀವಸತ್ತ್ವಗಳನ್ನು ದೇಹದಲ್ಲಿ ಸಂಗ್ರಹಿಸುವ ಸಿರಿಗಾಲ!

◆

ಮಲ್ಲಿಗೆಗೌಡರು ಅವರ ಹಳ್ಳಿಯಲ್ಲಿ ಎಲ್ಲ ರೀತಿಯಿಂದಲೂ ಹೆಸರಾದವರು. ಸಾಕಷ್ಟು ಭೂಮಿ-ಸೀಮೆಯಿದೆ. ಮಕ್ಕಳು-ಮರಿಗಳಿಂದ ತುಂಬಿದ ಮನೆ. ಸ್ವಂತದ ಬೇಸಾಯವಿದ್ದುದರಿಂದ, ಕಾಳು-ಕಡಿಗಳ ಕೊರತೆ ಎಂದೂ ಅವರಿಗಿರಲಿಲ್ಲ. ಮಲ್ಲಿಗೆ ಗೌಡರ ಬೇಸಾಯ ಬರೀ ಆಳುಗಳ ಮೇಲೆಯೆ ಸಾಗಿದುದಲ್ಲ. ತಾವೂ ಆಳಿಗಿಂತ ಆಳಾಗಿ ಎಲ್ಲರೊಂದಿಗೆ ಹೊಲದಲ್ಲಿ ದುಡಿಯುವರು. ಕೈ ಕೆಸರಾದಾಗಲೇ ಬಾಯಿಗೆ ಮೊಸರು ದೊರೆಯುವುದೆಂಬ ನೀತಿಯನ್ನು, ಮಲ್ಲಿಗೆ ಗೌಡರು ಸಂಪೂರ್ಣವಾಗಿ ನಂಬಿ ನಡೆಯುವವರು. ಎಂತಲೇ ಅವರಿಗೆ ಜೀವನದಲ್ಲಿ ಕೊರತೆಯೆಂಬುದು ಏತರದೂ ಇರಲಿಲ್ಲ. ಸಿರಿವಂತಿಕೆ ಸಾಕಷ್ಟು ಇದ್ದರೂ, ಹೃದಯಗುಣವನ್ನು ಉಳಿಸಿಕೊಂಡವರು. ಧಾರಾಳವಾದ ಮನಸ್ಸು. ಹೆಮ್ಮೆಗೂ ಅವರಿಗೂ ದೂರದ ಸಂಬಂಧ. ಆದುದರಿಂದಲೆ ಮಲ್ಲಿಗೆಗೌಡರನ್ನು ಕಂಡರೆ, ಎಲ್ಲರಿಗೂ ಗೌರವ—ವಿಶ್ವಾಸ.

ತಿನ್ನುಣ್ಣುವ ಸಂದರ್ಭಗಳೇನಾದರೂ ಬಂದಾಗ, ಒಬ್ಬರೇ ತಿಂದು ಗೌಡರಿಗೆ ಎಂದೂ ಗೊತ್ತಿಲ್ಲ. ಬಂಧು-ಬಳಗದೊಂದಿಗೆ ಕೂಡಿ ತಿಂದುಂಡರೆಯೆ ಅವರಿಗೆ ತೃಪ್ತಿ. ಊಟದ ಸಮಯದಲ್ಲಿ ಯಾರು ಮನೆಗೆ ಬಂದರೂ, ಅವರನ್ನು ಬರಿಯ ಹೊಟ್ಟೆಯಿಂದ ಎಂದೂ ಮರಳಿಸರು. ಇಲ್ಲದ ಬಡವನು ಬಂದು ಬೇಡಿದರೆ, ಇಲ್ಲವೆಂದು ಹೇಳಿದ ದಿನವನ್ನು ಯಾರೂ ಕಂಡಿಲ್ಲ, ಕೇಳಿಲ್ಲ. ಮಲ್ಲಿಗೆಗೌಡರಂತಹ ಉದಾರಬುದ್ಧಿಯ ಸಿರಿವಂತರೊಬ್ಬರು ಇದ್ದುದರಿಂದ, ಆ ಊರಲ್ಲಿ ಯಾವನೂ ಉಪವಾಸದಿಂದ ಬಳಲುವ ಸಂದರ್ಭವಿಲ್ಲ. ಆದುದರಿಂದಲೇ ಗೌಡರ ಹೆಸರು ಅವರ ಹಳ್ಳಿಯೊಂದರಲ್ಲಿಯೇ ಅಲ್ಲ; ಸುತ್ತುಮುತ್ತಣ ಹಳ್ಳಿ-ಹಟ್ಟಿಗಳಲ್ಲಿಯೂ ಹೊಗಳಿಹಾಡಿಸಿಕೊಳ್ಳುತ್ತಿತ್ತು. ಉಳ್ಳವರಲ್ಲಿ ಉದಾರತನವೊಂದು ಇದ್ದುಬಿಟ್ಟರೆ, ಬಡತನವೆಂಬುದು ಲೋಕದಲ್ಲಿ ಬದುಕಿದ್ದರೂ, ಅದು ಯಾವ ತೊಂದರೆಯನ್ನೂ ಕೊಡಲಾರದು. ಇಂತಹ ವ್ಯಕ್ತಿಯನ್ನು ಕಣ್ಣಾರೆ ಕಂಡವನಾಗಿಯೇ ಸರ್ವಜ್ಞ ಕವಿಯು ಹೀಗೆ ಹಾಡಿರಬೇಕು:

"ಇಕ್ಕುವವನೂರಿಗೊಂದೊಕ್ಕಲೆಂದೆನಬೇಡ,
ಇಕ್ಕಿ ಮೆರೆಯುವನು–ಇಲ್ಲಿರದೆ ಸ್ವರ್ಗಕ್ಕೆ
ಒಕ್ಕಲಿರಹೋಹ ಸರ್ವಜ್ಞ ||

ಮಲ್ಲಿಗೆಗೌಡರ ಹೊಲದಲ್ಲಿ ಬೆಳಸಿಯ ಕಾಲ ಬಂದರಾಯಿತು; ಒಂದಿಲ್ಲೊಂದು ಹೊಲದಲ್ಲಿ ಬೆಳಸಿಯ ಕಾರ್ಯಕ್ರಮ ಆಗಾಗ ನಡೆದೇ ನಡೆಯುವುದು. ಬರೀ ಮನೆಯ ಜನರಷ್ಟೇ ತಿಂದರೆ ಗೌಡರಿಗೆ ತೃಪ್ತಿಯಿರದು. ಬೇರೆ ಬೇರೆ ಜನರ ಗುಂಪಿಗೆ ಔತಣ ಕೊಡುವರು. ಪ್ರತಿ ವರುಷವೂ ಒಂದು ಸಲ, ಆಯ್ದ ಜನರಿಗಷ್ಟೇ ಔತಣ ಕೊಟ್ಟು ಬೆಳಸಿಯನ್ನು ತಿನ್ನಲು ಕರೆದೊಯ್ಯುವರು. ಈ ವಿಶಿಷ್ಟ ಕಾರ್ಯಕಲಾಪದಲ್ಲಿ ಭಾಗವಹಿಸಿದವರು, ಗೌಡರ ಹೊಲದ ಬೆಳಸಿಯ ಸವಿಯನ್ನು ಎಂದೂ ಮರೆಯಲಾರರು. ಗೌಡರ ಕೆರೆಯ ಹೊಲದ ಬೆಳಸಿಯೆಂದರೆ, ರುಚಿಗೆ ಊರಲ್ಲೆಲ್ಲ ಹೆಸರಾದುದು. ಅದರ ಮೇಲೆ ಇನ್ನಿಷ್ಟು ರುಚಿಯನ್ನು ಹೆಚ್ಚಿಸುವ ಮಸಾಲೆಗಳು ಬೇರೆ: ಒಳ್ಳೆಯ ಹೊಂಬಣ್ಣದ ಹೊಸ ಬೆಲ್ಲ. ಕಾಯನ್ನು ಒಡೆದ ಹಸಿಯ ಕೊಬ್ಬರಿ, ರುಚಿಯಾದ ಹುರಿಗಡಲೆಯ ಚಟ್ಣಿ, ಕರಿದ ಉಪ್ಪುಮೆಣಸಿನಕಾಯಿ, ಸುಟ್ಟು ಬೇಯಿಸಿದ ಹಸಿಯ ಮೆಣಸಿನಕಾಯಿ—ಇವುಗಳೊಂದಿಗೆ ಬೆರಸಿ ತಿಂದರೆ, ಎಂತಹ ರುಚಿಗೇಡಿಯೂ ಗೌಡರ ಹೊಲದ ಬೆಳಸಿಯನ್ನು ಬೊಗಸೆ-ಬೊಗಸೆಯಾಗಿ ತಿನ್ನಬಹುದು. ಬೆಳಸಿಯನ್ನು ತಿಂದು ಮುಗಿಸಿದ ಮೇಲೆ, ಎಲ್ಲರಿಗೂ ಕುಡಿಯುವುದಕ್ಕೆ ತಿಳಿಮಜ್ಜಿಗೆ ಕೊಡುವ ವ್ಯವಸ್ಥೆಯನ್ನೂ ಗೌಡರು ಮಾಡಿರುವರು. ಇದನ್ನೆಲ್ಲ ಬರಿ ಕೇಳುವುದರಿಂದ, ಗೌಡರ ಬೆಳಸಿಯ ಕಾರ್ಯಕ್ರಮದ ಸವಿಯು ಗೊತ್ತಾಗುವ ಬಗೆ ಹೇಗೆ? ಒಂದೆ ಒಂದು ಸಲವಾದರೂ ಆ ಕಾರ್ಯಕ್ರಮದಲ್ಲಿ ಭಾಗವಹಿಸಿದರೆಯೆ ಅದರ ಸ್ವಾರಸ್ಯ ಮನವರಿಕೆಯಾದೀತು.

ಕಾರ್ತಿಕ ಮಾಸದ ದಿನಗಳೆಂದರೆ ಹಿಗ್ಗನ್ನು ಹೊತ್ತು ತರುವಂತಹವು. ಮಳೆಗಾಲ ಮುಗಿದು ಎಳೆಯ ಚಳಿಗಾಳಿ ಸುಳಿಯುತ್ತಿರುವುದು. ಸೂರ್ಯನ ಬಿಸಿಲು ಹಿತವಾದ ಬಿಸುಪಿನಿಂದ ಕೂಡಿರುವುದು. ಮೋಡ

ಗಳಿಲ್ಲದ ನೀಲಾಕಾಶವು ನೋಡಲು ಹಿತವಾಗಿರುವುದು. ಬೆಳುದಿಂಗಳ ರಾತ್ರಿಯಂತೂ ಎಂದೂ ಕಾಣದ ಸೌಂದರ್ಯದಿಂದ ಮನಸನ್ನು ಸೆಳೆಯುವುದು. ಹಳ್ಳಿಯನ್ನು ಬಿಟ್ಟು ಹೊರಬಿದ್ದರೆ, ನೋಡಿದಲ್ಲೆಲ್ಲ ಬೆಳೆಯ ಸಿರಿಯನ್ನು ಹೊತ್ತು ನಿಂತ ಹೊಲಗಳು. ಹೊಲಗಳ ತುಂಬ ಒಕ್ಕಲಿಗರ ಒಕ್ಕಲಿತಿಯರ ಉಲ್ಲಾಸದ ಸೊಲ್ಲು-ಗುಲ್ಲುಗಳು. ಕಾರ್ತಿಕ ಮಾಸದ ಚೆಲುವು, ವರುಷದ ಹನ್ನೆರಡು ಮಾಸಗಳಲ್ಲಿ ಇನ್ನಾವುದರಲ್ಲಿಯೂ ಇರದು.

ಗೌರಿಯ ಹುಣ್ಣಿಮೆ ನಾಳೆಯೆಂದರೆ ಇಂದು, ಮಲ್ಲಿಗೆಗೌಡರು ಕೆರೆಯ ಹೊಲದಲ್ಲಿ ಬೆಳಸಿಯ ವಿಶೇಷ ಕಾರ್ಯಕ್ರಮವನ್ನು ಗೊತ್ತುಪಡಿಸಿದರು. ಹಳ್ಳಿಯಲ್ಲಿಯ ಗಣ್ಯರಾದ ಜನರಿಗೆಲ್ಲ ತಾವೇ ಹೋಗಿ ಔತಣಕೊಟ್ಟು ಬಂದರು. ಮೇಲಿನ ತರಗತಿಯ ವಿದ್ಯಾರ್ಥಿಗಳನ್ನು ಜೊತೆಗೊಂಡು ಬರಬೇಕೆಂದು, ಶಾಲೆಯ ಮುಖ್ಯಾಧ್ಯಾಪಕರಿಗೂ ಮಿಕ್ಕ ಅಧ್ಯಾಪಕರಿಗೂ ತಿಳುಹಿದರು. ಅಂದು ಎಲ್ಲರಿಗೂ ಹಬ್ಬದ ದಿನದಂತಹ ಸಂಭ್ರಮ.

ಕೆರೆಯ ಹೊಲ ಊರುಬಿಟ್ಟು ದೂರವೇನೂ ಇಲ್ಲ ಐದು ಗಂಟೆಗೆ ಸರಿಯಾಗಿ ಜನರು ಗುಂಪುಗುಂಪಾಗಿ ಗೌಡರ ಹೊಲದ ಕಡೆಗೆ ಹೊರಟರು ಅಧ್ಯಾಪಕರು ವಿದ್ಯಾರ್ಥಿಗಳು ಇವರದೊಂದು ತಂಡ ಪ್ರತ್ಯೇಕವಾಗಿದ್ದಿತು. ಮುಖ್ಯಾಧ್ಯಾಪಕರು ವಿದ್ಯಾರ್ಥಿಗಳಿಗೆ ದಾರಿಯಲ್ಲಿ ಹತ್ತಿರ ಬೆಳೆಗಳನ್ನು ಪರಿಚಯ ಮಾಡಿಕೊಡುತ್ತಿದ್ದರು. ಜೋಳದ ಬೆಳೆಯ ಹೊಲಗಳೇ ಹೆಚ್ಚಾಗಿ ಕಾಣುತ್ತಿದ್ದುವು.

ಎತ್ತರವಾಗಿ ಬೆಳೆದ ಜೋಳದ ನಿಲುವು. ಹಸಿರುಹಸಿರಾದ ಗರಿಯೆಲೆಗಳು ಮೆಲುಗಾಳಿಗೆ ಅಲೆದಾಡಿ, ಇಡಿಯ ಹೊಲದ ಬೆಳೆಯು ಹಿಗ್ಗಿನಿಂದ ನಲಿಯುತ್ತಲಿದೆಯೋ ಏನೋ ಎಂಬ ಭಾವನೆಯನ್ನು ಹುಟ್ಟಿಸುತ್ತಿದ್ದುವು. ಬೆಳೆಯ ಮೇಲ್ಗಡೆಯಲ್ಲೆಲ್ಲ ಹಾಲುಗಾಳು, ಹಸಿರುಗಾಳುಗಳಿಂದ ತುಂಬಿದ ಜೋಳದ ತೆನೆಗಳು, ಸಾಲಾಗಿ ತಲೆಯೆತ್ತಿ ನಿಂತಿರುವುವು. ದಟ್ಟವಾಗಿ ಬೆಳೆದ ದಂಟುಗಳು ಮರೆಮಾಡಿದುದರಿಂದ, ಒಳಗೆ ಅಡಗಿಕೊಂಡಿದ್ದ ಅಕ್ಕಡಿಕಾಳಿನ ಬಳ್ಳಿ-ಗಿಡಗಳು ಹೆಚ್ಚಾಗಿ ಹೊರಗೆ ಕಾಣುತ್ತಿರಲಿಲ್ಲ. ಜೋಳದ ಬೆಳೆಯ ಸುತ್ತಲೂ ಪಟ್ಟೆಪಟ್ಟೆಯಾಗಿ ಬಿತ್ತಿದ, ಗುರೆಳ್ಳಿನ ಬೆಳೆಯು, ಹಳದಿಯ ಬಣ್ಣದ ಹೂಗಳ ಹೊರೆಯಿಂದ ಅಂದವಾಗಿ ತೋರುತ್ತಿತ್ತು. ಅಲ್ಲಲ್ಲಿ ಜೋಳದ ದಂಟುಗಳಿಗೆ ಹಬ್ಬಿ ಮೇಲಕ್ಕೆ ಏರಿದ ಅಲಸಂದಿ, ಅವರೆ, ಹೆಸರುಗಳ ಬಳ್ಳಿಗಳು—ತಮಗೂ ಇಲ್ಲಿ ಎಡೆ ಇದೆಯೆಂಬುದನ್ನು ಸೂಚಿಸುವಂತಿದ್ದುವು. ನಡುನಡುವೆ ಹಸಿರೆಲೆ ತುಂಬಿಕೊಂಡ ಹತ್ತಿಯ ಹೊಲಗಳೂ, ಇನ್ನೂ ಸಸಿಗಳಾಗಿಯೇ ಕಾಣುತ್ತಿರುವ ಗೋದಿ-ಕಡಲೆಯ ಹೊಲಗಳೂ ಕಣ್ಣಿಗೆ ಬೀಳುತ್ತಿದ್ದುವು. ಮುಖ್ಯಾಧ್ಯಾಪಕರು ಇವೆಲ್ಲವನ್ನೂ ವಿದ್ಯಾರ್ಥಿಗಳಿಗೆ ತೋರಿಸುತ್ತ, ಪ್ರಕೃತಿಪಾಠವನ್ನು ಪ್ರತ್ಯಕ್ಷ ಪರಿಚಯದೊಂದಿಗೆ ಹೇಳುತ್ತಿದ್ದರು

ಬೆಳಸಿಗಾಗಿ ಗೊತ್ತುಮಾಡಿದ ಸ್ಥಳದಲ್ಲಿ, ಅತಿಥಿಜನಕ್ಕಾಗಿ ದೊಡ್ಡ ದೊಡ್ಡ ಗುಡಾರಗಳನ್ನು ಹಾಸಿ ಇರಿಸಲಾಗಿತ್ತು. ಮಲ್ಲಿಗೆ-ಗೌಡರು ಮೊದಲೇ ಬಂದಿದ್ದು, ಬಂದವರನ್ನೆಲ್ಲ ಆದರ-ಪ್ರೀತಿಗಳಿಂದ ಬರಮಾಡಿಕೊಂಡು, ಅವರವರಿಗೆ ಉಚಿತವೆನಿಸುವಂತಹ ಎಡೆಗ[…] ಕುಳ್ಳಿರಿಸುತ್ತಿದ್ದರು. ಜನರು ಕುಳಿತ ಸ್ಥಳದಿಂದ ಸ್ವಲ್ಪ ದೂರದಲ್ಲಿ[…] ಬೆಳಸಿಯನ್ನು ಸುಡಲಿಕ್ಕೆಂದು ದೊಡ್ಡದಾದ ನೆಲಒ[…]ಯನ್ನು ಮಾಡಿದ್ದರು. ಅದರಲ್ಲಿ ಕಾಡುಕುಳ್ಳುಗಳನ್ನು ತು[…] ಮೊದಲೇ ಹೊತ್ತಿಸಿದುದರಿಂದ, ಹೊಗೆಯಿಲ್ಲದ ಬೆಂಕಿಯ ರಾಶಿ ಧ[…]ಧಗ ಎನ್ನುತ್ತಿತ್ತು. ನಾಲ್ಕು ಜನ ಆಳುಗಳು, ಕೊಯ್ದುತಂದ ಬೆ[…]ಸಿಯ ದಂಟುಗಳಿಂದ ತೆನೆಗಳನ್ನು ಕೊಯಿದು ಬೇರೆ ಮಾಡುತ್ತಿದ್ದ[…] ಬರಬೇಕಾದವರೆಲ್ಲ ಬಂದ ಮೇಲೆ, ಗೌಡರು ಬೆಳಸಿಯ ತೆನೆಗಳ[…] ಒಲೆಯಲ್ಲಿ ಹಾಕಲು ಆಳುಗಳಿಗೆ ಹೇಳಿದರು. ಬೇರೆಬೇರೆಯಾ[…] ಹೊತ್ತಿಸಿದ ನಾಲ್ಕು ಒಲೆಗಳಲ್ಲಿಯ ಬೆಂಕಿಯನ್ನು ಹರಡಿ, ತೆನೆಗಳ[…] ಸುರಿದು, ಬಳಿಕ ಹವೆಗೆ ಪ್ರವೇಶ ದೊರೆಯದಂತೆ ತೆನೆಗಳನ್ನೆಲ್ಲ ಕೆ[…]ದಿಂದ ಮುಚ್ಚಲಾಯಿತು. ತಡವೇ ಇಲ್ಲ; ಐದಾರು ನಿಮಿಷಗಳಲ್ಲಿಯೆ ಬೆಳಸಿಯ ತೆನೆಗಳು ಬೆಂದು ಸಿದ್ಧವಾದುವು ಬಂದವರಿಗೆಲ್ಲ ಚ[…] ಕೊಬ್ಬರಿ, ಚಟ್ನಿ, ಕರಿದ—ಸುಟ್ಟು ಬೇಯಿಸಿದ ಮೆಣಸಿನಕಾಯಿ ಇವನ್ನೆಲ್ಲ ಇಬ್ಬರು ಆಳುಗಳು ಹಂಚಿದರು. ಪ್ರತಿಯೊಂದು ಒಲೆ[…] ಹತ್ತಿರವೂ ಹಾಸಿದ ಕಂಬಳಿಯ ಬಳಿ ಕುಳಿತ ಆಳುಗಳು, ಕೆಚ್ಚಿನಿಂ[…] ತೆನೆಗಳನ್ನು ಹೊರದೆಗೆದು. ಕೈಯಿಂದಲೇ ಅವುಗಳನ್ನು ತಿಕ್ಕಿ, ಬೆಳಸಿ[…] ಕಾಳುಗಳನ್ನು ಬೇರೆಮಾಡಲು ತೊಡಗಿದರು. ಸುಡುಸುಡುವ ತೆ[…]ಗಳನ್ನೇ ಅವರು ಕೈಯಲ್ಲಿ ಹಿಡಿದು ತಿಕ್ಕುವುದನ್ನು ನೋಡಿದಾ[…] ದುಡಿಯುವ ಒಕ್ಕಲಿಗರೆದುರು ಸುಡುವ ಬೆಂಕಿ ಕೂಡ ತಂಪಾಗಿನಿಲ್ಲು[…]ದೇನೋ—ಎನಿಸುವಂತಿತ್ತು.

ಉದುರಿಸಿದ ಕಾಳುಗಳು ಪೂರಯಿಸುವಂತಾದ ಮೇಲೆ, ಎ[…]ರಿಗೂ ಸ್ವಲ್ಪ ಸ್ವಲ್ಪ ಹಂಚಿಯಾಯಿತು. ಗೌಡರ ಸೂಚನೆಯಂ[…] ಎಲ್ಲರೂ ತಿನ್ನಲಿಕ್ಕೆ ಪ್ರಾರಂಭಿಸಿದರು. ಮಲೆನಾಡಿನ ಹಳ್ಳಿಯಿಂ[…] ಬಂದ ಚಿಕ್ಕ ಅಧ್ಯಾಪಕರೊಬ್ಬರು, ಬೆಳಸಿಯ ಕಾಳುಗಳನ್ನು ಹಾಗೆ[…] ಬಾಯಲ್ಲಿ ಹಾಕಿಕೊಂಡರು. ಆಗ ಜೊತೆಯಲ್ಲಿದ್ದ ಇನ್ನೊಬ್ಬ ಅಧ್ಯಾಪಕರು ನಗುನಗುತ್ತಲೇ ಹೇಳಿದರು :

"ಹಾಂ, ಹಾಂ, ಮಾಸ್ತರ್! ಹಾಗೆಯೆ ತಿನ್ನಬೇಡಿ[…] ಚೆನ್ನಾಗಿ ಊದಿ ಹಸನುಮಾಡಿ ತಿನ್ನಿರಿ! ಇವುಗಳಲ್ಲಿ ಒಂದು ಬಗೆ[…] ಚಿಕ್ಕ ಸುಂಕಗಳಿರುವುವು. ಸುಂಕ ಬಾಯಲ್ಲಿ ಸಿಕ್ಕಿಕೊಂಡರೆ, ಅಲ್ಲ[…] ಚುಚ್ಚಿ ಅಳುಕಿಸುವುದು!"

ಮಲೆನಾಡಿನ ಮಾಸ್ತರು ಹೇಳಿದರು :

"ಓ, ಹೀಗೇನು? ನನಗೇನು ಗೊತ್ತು? ಹೇಳಿ ಕೇಳಿ ಒತ್ತ[…]ನಾಡಿನ ಹಕ್ಕಿಗಳು ನಾವು!"

ಬದಿಯಲ್ಲಿ ಕುಳಿತವರೆಲ್ಲ ಗಟ್ಟಿಯಾಗಿ ನಕ್ಕರು. ಅಲ್ಲಲ್ಲಿ ಅನೇ[…] ಮಾತುಕತೆ, ನಗೆಗಳು ಸಾಗಿದ್ದುವು. ಒಳ್ಳೆಯ ಹದದ ಬೆಳಸಿ. [...] ಬಿಸಿಯಾಗಿಯೆ ಇದ್ದುವು. ಬೆಳಸಿಯನ್ನು ಒಬ್ಬೊಬ್ಬರು ಒಂದೊಂ[…] ರೀತಿಯಲ್ಲಿ ಬಣ್ಣಿಸುತ್ತ, ಅದರ ಸೇವನೆಯನ್ನು ನಡೆಸಿದ್ದರು. ಗೌಡ[…]

[೩೫೭ ನೇ ಪುಟ ನೋಡಿರಿ]

ಪುಸ್ತಕ ವಿಮರ್ಶೆ

ಕನ್ನಡ ಸಾಹಿತ್ಯಚರಿತ್ರೆ

ಲೇಖಕರು: ಪ್ರೊ. ರಂ. ಶ್ರೀ. ಮುಗಳಿ ಎಂ. ಎ. ಬಿ. ಟಿ. ಪ್ರಕಾಶಕರು: ಉಷಾ ಸಾಹಿತ್ಯಮಾಲೆ, ಮೈಸೂರು. ಡೇಮಿ ೩ ಆಕಾರದ ೫೬೩ ಪುಟಗಳು. ಕ್ರಯ ೮-೦-೦

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಭಾರತೀಯ ದೃಷ್ಟಿಗೆ ಒಂದು ನವೀನ ತೇಜಸ್ಸುಂಟಾಯಿತು. ಅದರೊಡನೆಯೆ ವಿವಿಧ ಪ್ರಾಂತೀಯ ದೃಷ್ಟಿಗೂ ಹೊಸ ಕಳೆಯು ಲಭಿಸಿತು. ವ್ಯಷ್ಟಿಯಲ್ಲಿ ಸಮಷ್ಟಿಯನ್ನು ಕಾಣುವ ಭಾರತೀಯ ಸುಸಂಸ್ಕೃತ ದೃಷ್ಟಿಯಲ್ಲಿ, ಪ್ರಾಂತಗಳ ಏಳಿಗೆಗೆ ಒಂದು ಮಹತ್ತ್ವದ ಸ್ಥಾನ-ಮಾನ ಒದಗಿರುವುದರಲ್ಲಿ ಯಾವ ಆಶ್ಚರ್ಯ ಪಡುವ ಸಂಗತಿಯೂ ಇಲ್ಲ. ನವೀನ ಘಟನೆಯ ಅಂಗವಾಗಿ ಕನ್ನಡ ನಾಡಿಗೆ ಕರ್ನಾಟಕ ವಿಶ್ವವಿದ್ಯಾಲಯ ದೊರೆಯಿತು. ಪ್ರಾದೇಶಿಕ ಗ್ರಂಥಾಲಯ ಬಂತು. ನಾಳೆ ಕನ್ನಡಿಗರಿಗೆ ಸ್ವತಂತ್ರ ಕರ್ನಾಟಕ ಪ್ರಾಂತ ದೊರೆಯಲಿದೆ. ಇವೆಲ್ಲವುಗಳ ಪರಿಣಾಮವಾಗಿ ಕನ್ನಡ ಭಾಷೆ-ಸಾಹಿತ್ಯಗಳ ಅಭ್ಯಾಸಕ್ಕೆ ನವಚೈತನ್ಯವುಂಟಾಯಿತು. ಕನ್ನಡವು ಶಿಕ್ಷಣದ ಮಾಧ್ಯಮವಾಗುವುದರ ಕಡೆಗೆ ಜನತೆಯ ಲಕ್ಷ್ಯ ಹರಿಯ ತೊಡಗಿತು. ಈಗ ಕನ್ನಡದ ಶಕ್ತಿಸಂಪತ್ತುಗಳನ್ನು ಪರೀಕ್ಷಿಸಿ ಹೆಚ್ಚಿಸಿಕೊಳ್ಳುವ ಹವಣಿಕೆಯೂ ವಿವಿಧ ಮುಖದಲ್ಲಿ ನಡೆಯುತ್ತಲಿದೆ. ಇಂಥ ಪ್ರಯತ್ನಗಳಲ್ಲಿ ಒಂದು ಮುಖವಾಗಿ ಶ್ರೀ. ಮುಗಳಿಯವರ 'ಕನ್ನಡ ಸಾಹಿತ್ಯ ಚರಿತ್ರೆ' ಯು ಕನ್ನಡಿಗರ ಕೈಗೆ ಬಂದಿದೆ, ಸಕಾಲದಲ್ಲಿ ಬಂದಿದೆ, ನವಪ್ರವಾಹದಲ್ಲಿ ಮೊದಲನೆಯ ತೆರೆಯಾಗಿ ಬಂದಿದೆ.

ಕನ್ನಡ ಸಾಹಿತ್ಯದ ಹಿಂದಿನ ಪರಂಪರೆ ಸಂಪತ್ತುಗಳು ಕನ್ನಡಿಗರು ಹೆಮ್ಮೆ ಪಡುವಂತಿವೆ. ಸಂಸ್ಕೃತ-ತಮಿಳುಗಳನ್ನುಳಿದರೆ, ಭಾರತದ ಇನ್ನಾವ ಭಾಷೆಗೂ ಈ ಹಿರಿಮೆ ಇಲ್ಲ. ಇಂಥ ಹಿರಿಯ ಪರಂಪರೆಯನ್ನು ದಿಗ್ದರ್ಶಿಸುತ್ತ, ವಿಮರ್ಶಿಸುತ್ತ, ಕನ್ನಡ ಸಾಹಿತ್ಯದ ಸುಮಾರು ೧೫೦೦ ವರ್ಷಗಳ ಇತಿಹಾಸವನ್ನು 'ವಿಸ್ತಾರಕ್ಕಿಂತ ಸಂಗ್ರಹದ' ನೆಟ್ಟ ದೃಷ್ಟಿಯನ್ನಿಟ್ಟು, ಮುಗಳಿಯವರು ಇಲ್ಲಿ ವಿವರಿಸಿದ್ದಾರೆ. ಇದರಲ್ಲಿ 'ತೀರ ಪ್ರಾರಂಭಕಾಲದಿಂದ ೧೯ನೆಯ ಶತಮಾನದ ಕೊನೆಯ ವರೆಗಿನ ಎಂದರೆ ಹೆಚ್ಚಾಗಿ ಹಳೆಯ ಕನ್ನಡ ಸಾಹಿತ್ಯದ ಚರಿತ್ರೆ ಮಾತ್ರ' ಬಂದಿದೆ. ಈ ಚರಿತ್ರೆಯ ಆರಂಭದಲ್ಲಿ ಸಾಹಿತ್ಯೋದಯ, ಸಾಹಿತ್ಯೋದಯದ ಕಾರಣಗಳು ಮತ್ತು ಕನ್ನಡ ಸಾಹಿತ್ಯೋದಯದಗಳನ್ನು ಸಂಗ್ರಹವಾಗಿ ವಿವರಿಸಿ, ಒಂದು ತಾತ್ತ್ವಿಕ ಭೂಮಿಕೆಯನ್ನು ಲೇಖಕರು ತಮ್ಮ ಕೃತಿಗೆ ಹಾಕಿಕೊಂಡಿದ್ದಾರೆ. 'ಅನುಭವದ ಸುಂದರವಾದ ಅಭಿವ್ಯಕ್ತಿಯೇ ಸಾಹಿತ್ಯ' ಎಂದು ಹೇಳಿ, ಶ್ರುತಿಗಳು ಕೃತಿಗಳಾದ ಬಗೆಗೆ ಸಾಹಿತ್ಯಚರಿತ್ರೆಯಲ್ಲಿ ಮಿಗಿಲಾದ ನೆಲೆಯಿದೆಯೆಂದು ಸಾರಿ, 'ಸಾಹಿತ್ಯನಿರ್ಮಾಣದ ಸ್ಥಾಯಿಗೆ ವಿಕಾಸಗೊಳ್ಳುತ್ತಿರುವ ಜೀವನವೇ ಉದ್ದೀಪಕವಾಗುತ್ತಿದೆ' ಎಂದು ಪ್ರತಿಪಾದಿಸಿ, ಕನ್ನಡ ಸಾಹಿತ್ಯೋದಯದ ಕಡೆಗೆ ಹೊರಳಿದ್ದಾರೆ. ಇದರಲ್ಲಿ 'ಪ್ರಾಚೀನತೆಯಲ್ಲಿಯೇ ಸಾಹಿತ್ಯದ ಶ್ರೇಷ್ಠತೆಯು ಅಳತೆಗೊಳ್ಳಲಿಲ್ಲ' ಎಂಬ ವಿವೇಕವನ್ನು ಇಟ್ಟುಕೊಂಡು, ದೊರೆತಿರುವ ಆಧಾರಗಳಿಂದ 'ಕನ್ನಡ ಭಾಷೆ-ಸಾಹಿತ್ಯಗಳು ಗ್ರಂಥಸ್ಥವಾದ ರೂಪದಲ್ಲಿ ಸಂಸ್ಕೃತದ ಸಾಕಷ್ಟು ಪ್ರಭಾವದಿಂದಲೇ ಹುಟ್ಟಿ ಬೆಳೆದಿವೆ' ಎಂದು ಸಿದ್ಧಾಂತಿಸಿದ್ದಾರೆ. ಅವಕ್ಕೆ ಪೂರ್ವ-ಪೀಠಿಕೆಯಾಗಿ 'ಕನ್ನಡದಲ್ಲಿ ಮೊದಲು ಅಚ್ಚಗನ್ನಡ ಯುಗವಾಗಿಹೋಗಿರಬೇಕೆಂಬ ಊಹೆ ನಮಗೆ ಸಮ್ಮತವಿಲ್ಲ' ಎಂದು ಖಂಡಿತವಾಗಿ ಹೇಳಿದ್ದಾರೆ. ಆದರೆ ವ್ಯಾಕರಣಬದ್ಧವಾದ ಭಾಷೆ, ವಿಪುಲ ಸಾಹಿತ್ಯದ ಪರಿಸರವಿಲ್ಲದೆ ಅಚ್ಚಗನ್ನಡ ಶಾಸನ ಸಾಹಿತ್ಯವೇ ಕನ್ನಡ ಸಾಹಿತ್ಯದ ಆರಂಭದ ಹೆಜ್ಜೆಯಾಯಿತೆಂಬ ಇವರ ಊಹೆ, ಅಭ್ಯಾಸಿಗಳಿಗೆ ಆಹ್ವಾನವನ್ನೀಯುವಂತಿದೆ. ಮುಂದೆ 'ಕವಿರಾಜಮಾರ್ಗ'ದ ಕರ್ತೃತ್ವ. ಅದರಲ್ಲಿ ಮೂಡಿದ ಪ್ರಾಚೀನ ಕನ್ನಡ ಸಾಹಿತ್ಯದ ಹೆಜ್ಜೆಗಳನ್ನು ವಿಸ್ತಾರವಾಗಿ ಲೇಖಕರು ವಿವೇಚಿಸಿದ್ದಾರೆ. ಅಲ್ಲದೆ ಆ ವಿಷಯಕ್ಕೆ ಇತರ ಗ್ರಂಥಗಳಿಂದ ದೊರೆತ ಆಧಾರಗಳನ್ನು ಕೂಡಿಹಾಕಿ ವಿಷಯವನ್ನು ಪ್ರತಿಪಾದಿಸಿದ್ದಾರೆ. 'ಒಂದು ಕಾಲಕ್ಕೆ ಬರೀ ಮಾತಿನ ಭಾಷೆಯಾದ ಕನ್ನಡವು ಸಾಹಿತ್ಯ ಸಿಂಹಾಸನವನ್ನೇರಿ ಕನ್ನಡ ನಾಡಿನ 'ಸಂಸ್ಕೃತ' ಭಾಷೆಯಾಯಿತು' ಎಂಬ ಕೊನೆಯ ನಿರ್ಣಯಕ್ಕೆ ಬಂದಿದ್ದಾರೆ. ಇಲ್ಲಿ ಈ 'ಕನ್ನಡ ಸಾಹಿತ್ಯ ಚರಿತ್ರೆ' ಯಲ್ಲಿ ಒಂದು ಘಟ್ಟ ಮುಗಿಯಿತೆಂದು ಹೇಳಬಹುದು.

ಇನ್ನು ಮುಂದಿನ ಸಾಹಿತ್ಯಚರಿತ್ರೆಯಲ್ಲಿ ವಿವರಣೆಯ ಸೌಕರ್ಯಕ್ಕೋಸ್ಕರ ಮುಗಳಿಯವರು ನಾಲ್ಕು ವಿಭಾಗಗಳನ್ನು ಕಲ್ಪಿಸಿಕೊಂಡಿದ್ದಾರೆ. ಅವುಗಳಿಗೆ ಕ್ರಮವಾಗಿ (೧) **ಪಂಪಪೂರ್ವಯುಗ** (೨) **ಪಂಪಯುಗ** (೩) **ಬಸವಯುಗ** (೪) **ಕುಮಾರವ್ಯಾಸ ಯುಗ** ಎಂದು ಹೆಸರಿಟ್ಟಿದ್ದಾರೆ. ಯುಗವಿಭಾಗ ಪದ್ಧತಿಯು ಕನ್ನಡ ಸಾಹಿತ್ಯ ಚರಿತ್ರೆಗೆ ಹೊಸದಲ್ಲ. ಈ ಮೊದಲು ಹಲವು ಜನ ಲೇಖಕರು—ಈ ಯುಗವಿಭಜನೆಯಲ್ಲಿ ಮೊದಲನೆಯದನ್ನುಳಿದು ಮುಂದಿನ ಮೂರನ್ನು ಜೈನಯುಗ, ವೀರಶೈವಯುಗ, ಬ್ರಾಹ್ಮಣಯುಗ ಎಂದು

ಕರೆದುದೂ ಉಂಟು. 'ಕರ್ನಾಟಕ ಕೈಪೀಡಿ' ಕಾರನು ಕ್ಷಾತ್ರಯುಗ, ಮತಪ್ರಚಾರಕಯುಗ, ಸಾರ್ವಜನಿಕಯುಗ ಮತ್ತು ಆಧುನಿಕಯುಗವೆಂದು ವಿಭಾಗಿಸಿದ್ದಾನೆ. ಅದೇ ಭಾಷೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು ವಿಭಜಿಸುವವರು ಮೂಲಕನ್ನಡಕಾಲ, ಹಳಗನ್ನಡಕಾಲ, ಮಧ್ಯಗನ್ನಡಕಾಲ, ಹೊಸಗನ್ನಡಕಾಲ, ನವಗನ್ನಡಕಾಲ ಎಂದು ಇಟ್ಟುಕೊಂಡು ವಿವರಿಸುತ್ತಾರೆ. ಹೀಗೆ ಹಲವರು ಹಲವು ವಿಧದಲ್ಲಿ ಸಾಹಿತ್ಯವಾಹಿನಿಯನ್ನು ವಿಂಗಡಿಸಿಕೊಂಡು ವಿಮರ್ಶಿಸುತ್ತ ಬಂದಿದ್ದಾರೆ. ಯಾರು ಹೇಗೆ ವಿಂಗಡಿಸಿಕೊಂಡರೂ ಅದು ಪರಿಪೂರ್ಣ ನಿರ್ದುಷ್ಟವಾಗಿರುವುದೆಂದು ಹೇಳುವುದು ಸಾಧ್ಯವಿಲ್ಲ. ಇಷ್ಟೇ ಅಲ್ಲ, ತಮ್ಮ ತಮ್ಮ ವಿಭಾಗಕ್ರಮಕ್ಕೆ ಕೆಲವು ಕಾರಣಗಳನ್ನು ಆಯಾ ಲೇಖಕರು ಕೊಡುತ್ತ ಬಂದಿದ್ದಾರೆ. ಅವರವರ ದೃಷ್ಟಿಯಲ್ಲಿ ಅವು ಸಮರ್ಪಕವಾಗಿಯೇ ಇರುತ್ತವೆ. ಆದರೂ ಅವುಗಳನ್ನೆಲ್ಲ ವಿವರಿಸಿ, ವಿಮರ್ಶಿಸಿ ಮುಗಳಿಯವರು ಒಟ್ಟು ಸಾಹಿತ್ಯಚರಿತ್ರೆಯ ವಿವರಣೆಯ ದೃಷ್ಟಿಯಿಂದ ತಮ್ಮ ಯುಗವಿಭಾಗಕ್ರಮವನ್ನು ಮಂಡಿಸಿದ್ದಾರೆ. ಅದರ ಜೊತೆಗೆ ಇನ್ನುಳಿದವರ ವಿಭಾಗಪದ್ಧತಿಗಳಲ್ಲಿಯ ಕೆಲವು ಅಂಶಗಳನ್ನೂ ಸ್ವೀಕರಿಸಿದ್ದಾರೆ. ಮೇಲಾಗಿ ತಮ್ಮ ಕನ್ನಡ ಸಾಹಿತ್ಯ ಚರಿತ್ರೆಗೆ 'ಮತತತ್ತ್ವಕ್ಕಿಂತ ಕವಿವ್ಯಕ್ತಿ ಹೆಚ್ಚು ಗಣ್ಯನು, ಕವಿ ಕೃತಿ ಹೆಚ್ಚು ಬೆಲೆಯುಳ್ಳದ್ದು. ಒಂದೊಂದು ಕಾಲದಲ್ಲಿ ಅಂಥ ಕವಿವ್ಯಕ್ತಿಗಳೂ ಕೃತಿಗಳೂ ಜನ್ಮತಾಳಿ ಬಹುಮಟ್ಟಿಗೆ ಸಮಾನವಾದ ಒಂದು ಸಾಹಿತ್ಯಿಕ ಬಾಂಧವ್ಯಕ್ಕೆ ಒಳಗಾಗಿರುತ್ತವೆ. ಈ ಬಳಗಕ್ಕೆ ಹಿರಿಯನಾದ ಒಬ್ಬ ಮಹಾಕವಿ ಇಲ್ಲವೆ ಮಹಾಪುರುಷನು ಹಳೆಯದರ ತಿರುಳನ್ನು ತನ್ನಲ್ಲಿ ಅಳವಡಿಸಿಕೊಂಡು. ಹೊಸ ದಾರಿಯನ್ನು ಬೆಳಗಿಸ್ಪಾನೆ, ಆ ಬೆಳಕಿನಲ್ಲಿ ಕೆಲವು ಕವಿಗಳೂ ಭಕ್ತರೂ ನಡೆದಿದ್ದಾರೆ.' ಎಂದು ನಿಶ್ಚಯಿಸಿ, ಈ ಸಾಹಿತ್ಯಚರಿತ್ರೆಯನ್ನು ವಿಶಾಲವಾಗಿ ಪಂಪಯುಗ, ಬಸವಯುಗ, ಕುಮಾರವ್ಯಾಸಯುಗ ಎಂದು ವಿಭಾಗಿಸಿ ವಿವೇಚಿಸಿದ್ದಾರೆ.

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಪಂಪ ಬಸವ, ಕುಮಾರವ್ಯಾಸರಿಗೆ ಅಪೂರ್ವವಾದ ಒಂದು ಸ್ಥಾನವಿದೆ ಎಂಬುದರಲ್ಲಿ ಸಂಶಯವಿಲ್ಲ. ಅದರ ಜೊತೆಗೆ ಇನ್ನೂ ಕೆಲವು ಜನ ಕವಿಗಳು ತಮ್ಮ ಗುಣಗಳಿಂದ ಮಹಾಕವಿತ್ವದ ಶ್ರೇಣಿಯಲ್ಲಿ ಸೇರುತ್ತಾರೆ ಎಂಬುದನ್ನು ಗಮನಿಸಬೇಕು. ಈ ಎರಡೂ ಮಾತುಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಈ ಸಾಹಿತ್ಯಚರಿತ್ರೆಯನ್ನು ವಿಮರ್ಶಿಸಿದರೆ ಆಯಾ ಯುಗದ ಎಲ್ಲ ಕವಿಗಳ ಮೇಲೂ ಆ ಯುಗಪುರುಷರ ಪ್ರಭಾವ ಬಿದ್ದೇ ತೀರಿದೆ ಎಂದು ಹೇಳುವುದು ಲೇಖಕರ ಉದ್ದೇಶವಿದ್ದಂತಿಲ್ಲ. ಪಂಪನ ಪ್ರಭಾವ ದುರ್ಗಸಿಂಹ, ಬ್ರಹ್ಮಶಿವರ ಮೇಲೆಯೂ ಬಸವನ ಪ್ರಭಾವ ರುದ್ರಭಟ್ಟ, ಅಗ್ಗಳರ ಮೇಲೆಯೂ ಕುಮಾರವ್ಯಾಸನ ಪ್ರಭಾವ ರತ್ನಾಕರವರ್ಣಿ, ಷಡಕ್ಷರದೇವರ ಮೇಲೆಯೂ ಮೂಡಿಯೇ ತೋರಿದೆ ಎಂದು ಭಾವಿಸುವುದು ತಪ್ಪಾಗುವುದು. ಆದರೆ ಆ ಕವಿಗಳೆಲ್ಲ ಆಯಾ ಯುಗದ ವಿವೇಚನೆಗೆ ಒಳಪಡುತ್ತಾರೆ. ಅದರಂತೆ ಆ ಯುಗದ ಸಾಹಿತ್ಯ ಸತ್ತ್ವವನ್ನು ಹೀರಿಕೊಂಡು, ತಮ್ಮದೇ ಆದ ಒಂದು ರೀತಿಯಲ್ಲಿ ಬೆಳೆದು ನಿಂತ ವ್ಯಕ್ತಿತ್ವವೂ ಪಂಪ, ಬಸವ ಕುಮಾರವ್ಯಾಸರಿಗಿದೆ ಎಂಬುದನ್ನ ಮರೆಯುವಂತಿಲ್ಲ. ಅದರಿಂದ ಅವರು ಸಾಹಿತ್ಯಚರಿತ್ರೆಯಲ್ಲಿ ಸೀಮಾ ಪುರುಷರಾಗಿ ನಿಂತಿದ್ದಾರೆ. ಇದೇ ತೂಕದ ವ್ಯಕ್ತಿತ್ವ ಕನ್ನಡ ಸಾಹಿತ್ಯದಲ್ಲಿ ಇನ್ನೂ ಕೆಲವರಿಗೆ ಇದೆ. ಇದನ್ನೂ ಲಕ್ಷ್ಯದಲ್ಲಿಟ್ಟುಕೊಂಡ ಲೇಖಕರು 'ಯುಗಗಳಿಗೆ ಮೇಲೆ ಹೇಳಿರುವಂತೆ ವ್ಯಕ್ತಿಪರವಾ ಹೆಸರುಗಳನ್ನು ಕೊಡುವರಾದರೂ ಮಾರ್ಗಯುಗ, ಸಂಕ್ರಮಣಯು ದೇಸಿಯುಗ ಎಂಬ ಪರ್ಯಾಯಪದಗಳನ್ನು ಆಗಾಗ ಬಳ ಆಯಾ ಯುಗಗಳ ಸಾಹಿತ್ಯಿಕ ಸ್ವರೂಪದ ವೈಶಿಷ್ಟ್ಯಗಳನ್ನು ವಿವೇಚ ಸುತ್ತೇವೆ' ಎಂದು ಸಾರಿರಬೇಕು.

ಹೀಗೆ ಮುಗಳಿಯವರು ಕನ್ನಡ ಸಾಹಿತ್ಯಚರಿತ್ರೆಯ ವಿವ ಣೆಗೆ ಸುಲಭವಾಗಲೆಂದು ಒಂದು ಸಮತೂಕದ ವಿಭಾಗಕ್ರಮವನ್ನು ಮುಂದಿನ ವಿವೇಚನೆಗೆ ತಳಹದಿಯಾಗಿಟ್ಟುಕೊಂಡು ಮುಂದರಿ ದ್ದಾರೆ. ಪ್ರತಿಯೊಂದು ಯುಗದ ಸಾಹಿತ್ಯಚರಿತ್ರೆಯನ್ನು ಹೇಳು ವಾಗ, ಆರಂಭದಲ್ಲಿ ಆಯಾ ಯುಗದ ಪ್ರಮುಖ ಗ್ರಂಥಕಾರರ ಪಟ್ಟಿ ತತ್ಕಾಲೀನ ಜೀವನಚಿತ್ರ, ಯುಗದ ಸಾಹಿತ್ಯವೈಶಿಷ್ಟ್ಯಗಳನ್ನು ಕೊಟ್ಟಿದ್ದಾರೆ. ಆ ಮೇಲೆ ಮುಖ್ಯ ಗ್ರಂಥಕಾರರ ಹಾಗು ಗ್ರಂಥಗಳ ಸಂಗ್ರಹವಾದ ವಿಮರ್ಶೆಯನ್ನು ಕೊಡಲು ಯತ್ನಿಸಿದ್ದಾರೆ ಈ ಸೂತ್ರಬದ್ಧವಾದ ವಿವರಣೆ ಸಮರ್ಪಕವಾಗಿ ತಂತ್ರಶುದ್ಧವಾಗಿ ಪಂಪಯುಗದ ವಿಮರ್ಶೆಯಲ್ಲಿ ಬಹು ಸುಂದರವಾಗಿ ಸಾಧಿಸಿದೆ. ಅದಕ್ಕೆ ಕನ್ನಡ ಸಾಹಿತ್ಯದ ಆ ಕಾಲದ ಏಕಮುಖವಾದ ಬೆಳವಣಿಗೆ, ಪರಿಮಿತ ಗ್ರಂಥಸಂಪತ್ತಿ ಇವೂ ಬಹಳಷ್ಟು ಅನುಕೂಲವಾಗಿವೆ ಮುಂದಿನ ಕಾಲದಲ್ಲಿ ಕನ್ನಡಸಾಹಿತ್ಯವು ವಿವಿಧಮುಖವಾಗಿ ಬೆಳೆದು, ಗ್ರಂಥ ಸಂಪತ್ತಿ ಹೆಚ್ಚುತ್ತ ಹೋಗುವುದರಿಂದ ಸಾಹಿತ್ಯದ ವೈಶಿಷ್ಟ್ಯಗಳನ್ನು ಸೂಚಿಸುವುದಕ್ಕೂ ವಿಮರ್ಶೆಗೂ ತೊಂದರೆಯುಂಟಾಗುವುದು ಸ್ವಾಭಾವಿಕವಾಗಿದೆ. ಆದರೂ ಅಭ್ಯಾಸಬಲದಿಂದಲೂ ತಮ್ಮ ಧೀಶಕ್ತಿಯಿಂದಲೂ ಮುಗಳಿಯವರು, ಸ್ವಲ್ಪದರಲ್ಲಿಯಾದರೂ ಹೇಳಬೇಕಾದ ಮುಖ್ಯಮಾತುಗಳಲ್ಲಿ ಒಂದನ್ನೂ ಬಿಡದೆ ಹೇಳಲು ಯತ್ನಿಸಿದ್ದಾರೆ, ಅದರಲ್ಲಿ ಸಫಲತೆಯನ್ನೂ ಪಡೆದಿದ್ದಾರೆ. ಕವಿಗಳ ಕಾಲನಿರ್ಣಯದಲ್ಲಿ, ಗ್ರಂಥಗಳ ಸಾಹಿತ್ಯಗುಣಗಳನ್ನು ತೂಗುವಲ್ಲಿ ತಮಗಿಂತ ಪೂರ್ವದಲ್ಲಿ ನಡೆದ ಸಂಶೋಧನೆ ಹಾಗೂ ವಿಮರ್ಶೆಗಳನ್ನೆಲ್ಲ ಸಾಮಾನ್ಯವಾಗಿ ಕಲೆಹಾಕಿದ್ದಾರೆ. ಅವರವರ ಅಭಿಪ್ರಾಯಗಳನ್ನು ಕಾಣಿಸಿ ಅವುಗಳ ಖಂಡನ, ಮಂಡನಗಳನ್ನಾದರೂ ತಮ್ಮ ದೃಷ್ಟಿಯಿಂದ ಕಾರಣಗಳನ್ನು ಕೊಟ್ಟು ಮಾಡಿದ್ದುಂಟು. ಇಂಥ ಸಂದರ್ಭದಲ್ಲಿ ಕವಿಗಳ ಕಾಲನಿರ್ಣಯ ಮಾಡುವಾಗ, ಕೆಲವು ಕಡೆಗೆ ಅವರ ನಿಲುಮೆ ಎರಡು ಮೂರು ಶತಮಾನಗಳ ನಡುವೆ ಒಮ್ಮೊಮ್ಮೆ ತೂಗಾಡುವುದುಂಟು. ಇದಕ್ಕೆ ಅವರೇ ಮುನ್ನುಡಿಯಲ್ಲಿ ಹೇಳಿದಂತೆ 'ಯಾವುದೇ ಚರಿತ್ರೆಯ ಅಧಿಷ್ಠಾನವು ಅದರ ಸಾಮಗ್ರಿಗಳ ಇರುತ್ತವೆ. ಕನ್ನಡ ಸಾಹಿತ್ಯದ ಮಟ್ಟಿಗೆ ಇಂದು ಸಾಮಗ್ರಿ ಸಮಗ್ರವಾಗಿ ದೊರೆತಿಲ್ಲ; ಇಂದರೆ ಸಾಮಗ್ರಿ ಎಂಬ ಹೆಸರಿಗೆ ತಕ್ಕುದಾಗಿಲ್ಲದುದೇ ಬಹಳಷ್ಟು ಕಾರಣವಾಗಿರಬೇಕು. ಏನಿದ್ದರೂ, ಈ ಸಾಹಿ

ಚರಿತ್ರೆಯ ಪ್ರತಿಯೊಂದು ಪುಟದಲ್ಲಿಯೂ ಲೇಖಕರು ಕಾಣಿಸಿದ ಆಧಾರಸಂಪತ್ತಿಯನ್ನು ನೋಡಿದರೆ, ಮುಗಳಿಯವರ ದೀರ್ಘ ಪ್ರಯತ್ನ, ವಿಸ್ತಾರವಾದ ಅಭ್ಯಾಸ, ನಿಶ್ಚಿತಜ್ಞಾನಗಳನ್ನು ಯಾರೂ ಮೆಚ್ಚಬಹುದಾಗಿದೆ.

ಗ್ರಂಥದ ಕೊನೆಗೆ ಸುಮಾರು ೬೦–೭೦ ಪುಟಗಳ 'ಅಭ್ಯಾಸ-ಸೂಚಿ'ಯನ್ನು ಕೊಟ್ಟಿದ್ದಾರೆ. ಅದರಿಂದ ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ತುಂಬ ಅನುಕೂಲವಾಗುವಂತಿದೆ. ಇಷ್ಟೇ ಅಲ್ಲ, ಆಧುನಿಕ ಕಾಲದಲ್ಲಿ, ಹಿಂದಿನ ಸಾಹಿತ್ಯವನ್ನು ಕುರಿತು ಬರೆದ ವಿಮರ್ಶೆ ವಿವೇಚನೆಗಳನ್ನೆಲ್ಲ ಇಲ್ಲಿ ಸಂಪಾದಿಸಿ ಕೊಟ್ಟಿದ್ದಾರೆ. ಯಾವ ನಿಯತ ಕಾಲಿಕಗಳಲ್ಲಿ ಯಾವ ಲೇಖನ ಎಂದು ಪ್ರಕಟವಾಗಿದೆ ಎಂಬುದನ್ನು ಸೂಚಿಸಿದ್ದಾರೆ. ಇದೊಂದು ಅಭ್ಯಾಸಿಗಳಿಗೆ ಕೈಪಿಡಿಯಂತಿದೆ.

ಒಂದು ಭಾಷೆಯ ಸಾಹಿತ್ಯಚರಿತ್ರೆಯನ್ನು ಬರೆಯುವಂಥ ಕಾರ್ಯವನ್ನು ಯಶಸ್ವಿಯಾಗಿ ಕೊನೆಗಾಣಿಸುವುದು ಒಂದು ಸಂಘಸ್ಥೆಗಾಗಲಿ, ವಿಶ್ವವಿದ್ಯಾಲಯದಂಥ ಸಂಸ್ಥೆಗಾಗಲಿ ಸಾಧ್ಯವಾಗುವುದು. ಇಂಥ ಸಾಹಸವನ್ನು ಶ್ರೀ. ಮುಗಳಿಯವರು ವೈಯಕ್ತಿಕವಾಗಿ ಮಾಡಿ ಪೂರೈಸಿದ್ದಾರೆ. ಅವರ ಯತ್ನ ಬಹುಮಟ್ಟಿಗೆ ಸಫಲವೂ ಆಗಿದೆ. ಇದಕ್ಕೂ ವಿವರವಾದ, ವಿಸ್ತಾರವಾದ ಕನ್ನಡ ಸಾಹಿತ್ಯಚರಿತ್ರೆಯೊಂದು ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಸಿದ್ಧವಾಗುವುದರಲ್ಲಿದೆ ಎಂದು ಕೇಳುತ್ತೇವೆ. ಅನೇಕ ವಿದ್ವಾಂಸರ ಪರಿಶ್ರಮದಿಂದ ರೂಪುಗೊಳ್ಳಲಿರುವ 'ಆ ಬೃಹದ್‌ಗ್ರಂಥ. ಬರುವುದಕ್ಕೆ 'ಕಣ್ಸನ್ನೆ'ಯಾಗಿ ಈ ಗ್ರಂಥವು ತೋರಿದರೆ ನನಗದೇ ತೃಪ್ತಿ!' ಎಂದು ಮುಗಳಿಯವರೇ ಸಮಾಧಾನ ಪಟ್ಟುಕೊಂಡಿದ್ದಾರೆ. ಆದರೆ ಯಾವ ಬೃಹದ್‌ಗ್ರಂಥ ನಾಳೆ ಬಂದರೂ, ಈ ಕನ್ನಡ ಸಾಹಿತ್ಯಚರಿತ್ರೆಗೆ ಇರುವ ವಿಶಿಷ್ಟ ಸ್ಥಾನವು, ಕನ್ನಡ ವಿಮರ್ಶಾಸಾಹಿತ್ಯದಲ್ಲಿ ಯಾವಾಗಲೂ ಇದ್ದೇ ಇರುವುದೆಂಬುದರಲ್ಲಿ ಏನೂ ಸಂಶಯವಿಲ್ಲ. ಇಂಥ ಹಿರಿಯ ಸಾಹಸವನ್ನು ಮಾಡಿ, ಕನ್ನಡ ಅಭ್ಯಾಸಿಗಳಿಗೊಂದು ಒಳ್ಳೆಯ ಗ್ರಂಥವನ್ನು ಒದಗಿಸಿದುದಕ್ಕೆ, ಶ್ರೀ. ಮುಗಳಿಯವರೂ ಅದನ್ನು ಸುಂದರವಾಗಿ ಮುದ್ರಿಸಿ ಪ್ರಕಟಿಸಿದ ಮೈಸೂರಿನ ಉಷಾ ಸಾಹಿತ್ಯಮಾಲೆಯವರೂ ಕನ್ನಡಿಗರೆಲ್ಲರ ಅಭಿನಂದನೆಗೆ ಪಾತ್ರರಾಗಿದ್ದಾರೆ.

— ವಿಂಜೆ ಅಣ್ಣಾರಾಯ

[೩೫೪ ನೆಯ ಪುಟದಿಂದ ಬಂದದ್ದು]

ತೃಪ್ತಿಯ ನೋಟಗಳಿಂದ ಎಲ್ಲರ ಕಡೆಗೂ ನೋಡುತ್ತ, 'ಸಾವಕಾಶವಾಗಿ ಸಾಗಲಿ' ಎಂದು ಬಿನ್ನವಿಸಿಕೊಳ್ಳುತ್ತಿದ್ದರು. ಆಗ ಮುಖ್ಯಾಧ್ಯಾಪಕರು ವಿದ್ಯಾರ್ಥಿಗಳ ಕಡೆಗೆ ನೋಡುತ್ತ ಹೇಳಿದರು:

"ಇದು ನೋಡಿರಿ! ಈಗ ನಾವು ತಿನ್ನುತ್ತಿದ್ದೇವಲ್ಲವೆ? ಈ ಜೋಳದ ಬೆಳಸಿಯೆ ಒಳ್ಳೆಯ ಜಾತಿಯವು. ಎಲ್ಲ ಜೋಳಗಳ ಬೆಳಸಿ ಒಳ್ಳೆಯವಾಗುವುದಿಲ್ಲ. ಬೆಳಸಿಗಾಗಿಯೆಂದೇ ಬೆಳೆಯಿಸುವ ಕೆಲವು ಜಾತಿಯ ಜೋಳಗಳಿರುವುವು. ಅವುಗಳಲ್ಲಿ "ಹುಸಿಪೈರು" "ಸಕ್ಕರೆ ಮುತ್ತು" ಇವು ತುಂಬ ಪ್ರಸಿದ್ಧವಾದುವು. ಬೆಳುವಲದಲ್ಲಿ ಬಿಳಿಜೋಳದ ಬೆಳಸಿಯನ್ನು ತಿನ್ನುವರು. ಅದು ಕೂಡ ತುಂಬ ರುಚಿಯಾಗಿ ಇರುವುದು."

"ಬೆಳಸಿಗೆ ಸೀತನಿ ಎಂತಲೂ ಹೇಳತಾರೇನ್ರಿ ಮಾಸ್ತರ್?"

"ಹೌದು, ಹೌದು! ಉತ್ತರದ ಗಡಿಯ. ಕನ್ನಡಿಗರೆಲ್ಲ ಬೆಳಸಿಗೆ 'ಸೀತನಿ' ಎಂದೇ ಹೇಳುತ್ತಾರೆ. 'ಸೀತನಿ' ಎಂದರೆ ಏನೆಂದು ತಿಳಿದ್ದೀರಿ? ಸೀ+ತೆನೆ ಎಂದರೆ ಸಿಹಿಯಾದ ತೆನೆ—ಎಂಬುದು ಜನಸಾಮಾನ್ಯರ ಬಾಯಲ್ಲಿ 'ಸೀತನಿ' ಎಂದು ಆಗಿಬಿಟ್ಟಿದೆ!"

"ಓಹೋ, ಹೀಂಗೇನ್ರಿ? 'ಸೀತನಿ' 'ಸೀತನಿ' ಎಂಬುವನ್ನು ಕೇಳಿದಾಗ ನನಗೆ ನಗೆ ಬಂದು ಬಿಡುತ್ತಿತ್ತು. ಈಗ ತಿಳಿಯಿತು ಬಿಡಿರಿ! ಸೀತನಿ ಎಂಬದೂ ಹುರುಳುಳ್ಳ ಮಾತೇ ಆಗಿದೆ!"

ಎಂದು ವಿದ್ಯಾರ್ಥಿ ಮತ್ತೆ ಬೆಳಸಿಯನ್ನು ಬಾಯಾಡಿಸತೊಡಗಿದನು.

ಒಲೆಯಲ್ಲಿಯ ತೆನೆಗಳನ್ನೆಲ್ಲ ಹೊರಗೆ ತೆಗೆದು ಉದುರಿಸಿ ಮುಗಿಸಿದರು. ಬಳಿಕ ಆ ಉದುರಿಸಿದ ತೆನೆಗಳನ್ನು ಕಂಬಳಿಯಲ್ಲಿ ಮುಚ್ಚಿ ಮೇಲೆ ಬಡಿಗೆಯೊಂದರಿಂದ ಬಡಿಯಲು ತೊಡಗಿದರು. ಸ್ವಲ್ಪಕಾಲ ಬಡಿದಮೇಲೆ, ಮುಚ್ಚಿದ ಕಂಬಳಿಯನ್ನು ತೆರೆದು, ತೆನೆಯ ಕಂಕಿಗಳನ್ನೂ ಗೊಂಡೆ-ಗುಂಯಿಗಳನ್ನೂ ಬೇರಬೇರಿಸಿ ಹೊರಗೆ ತೆಗೆದರು. ಬರಿಯ ಕಾಳುಗಳೇ ಉಳಿದ ಮೇಲೆ, ಅವುಗಳನ್ನು ಮೆಲುಗಾಳಿಯಲ್ಲಿ ತೂರಿದರು. ಹಸನಾದ ಕಾಳುಗಳನ್ನು ಒಟ್ಟುಗೂಡಿಸಿ, ಎಲ್ಲರಿಗೂ ಹಂಚಿದರು. ಕೈಯಿಂದ ಉದುರಿಸಿದ ಬೆಳಸಿಗಿಂತ, ಬಡಿಗೆಯಿಂದ ಬಡಿದು ಹಸನುಗೊಳಿಸಿದ ಈ ಬೆಳಸಿ, ಎಲ್ಲರಿಗೂ ಸಾಕುಸಾಕು ಎನಿಸುವಷ್ಟು ಬಂದುವು. ಜೊತೆಗಿದ್ದ ಮಸಾಲೆಗಳು ಬೆಳಸಿಯ ರುಚಿಗೆ ವೈವಿಧ್ಯವನ್ನು ತಂದುಕೊಟ್ಟುವು. ಬೆಲ್ಲದೊಂದಿಗಿದ್ದಾಗ ಒಂದು ಬಗೆಯ ರುಚಿಯಾದರೆ, ಕೊಬ್ಬರಿಯೊಂದಿಗೆ ಇನ್ನೊಂದು ಬಗೆಯ ರುಚಿ. ಹುರಿಗಡಲೆಯ ಚಟ್ನಿ, ಕರಿದ ಮೆಣಸಿನಕಾಯಿ–ಸಂಡಿಗೆಗಳಂತೂ ಬೆಳಸಿಗೆ ಒಂದು ಅಪೂರ್ವವಾದ ರುಚಿಯನ್ನು ಒದವಿಸಿದುವು.

ಸೂರ್ಯ ನಿತ್ಯದ ಯಾತ್ರೆಯನ್ನು ಮುಗಿಸಿ, ಪಡುವಣದ ಮನೆಯಲ್ಲಿ ಮಲಗಿಕೊಂಡ. ಅವನು ಹೊತ್ತುಕೊಂಡ ಕೆಂಬಣ್ಣದ ಬಟ್ಟೆಯ ಛಾಯೆಯೇನೋ ಎಂಬತೆ, ಪಶ್ಚಿಮದ ಆಕಾಶವೆಲ್ಲ ಸಂಜೆಗೆಂಪಿನಿಂದ ತುಂಬಿನಿಂತಿತು. ಪೂರ್ವದ ಗಿರಿಯನ್ನೇರಿ ಚತುರ್ದಶಿಯ ಚಂದ್ರ ಮುಖವನ್ನು ತೋರಿಸಲು ತೊಡಗಿದ, ಬೆಳಸಿಯ ಕಾರ್ಯಕ್ರಮದ ಕೊನೆಯಾಗಿ ಮಜ್ಜಿಗೆ ಕುಡಿಯುವುದೂ ಮುಗಿಯಿತು. ಮಲ್ಲಿಗೆಗೌಡರ ಪ್ರೀತಿಯ ಮಾತು, ತಿಂದ ತಿನಿಸಿಗಿಂತ ಸವಿಯಾದುದು. ಬಂದವರೆಲ್ಲ ತೃಪ್ತಿಯಿಂದ ತೇಗಿದರು. ಗೌಡರನ್ನು ಬೀಳ್ಕೊಂಡು ಮರಳಿ ಮನೆಗಳ ದಾರಿಯನ್ನು ಹಿಡಿದರು.

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ, ಇತ್ತೀಚೆಗೆ ಪ್ರಕಟವಾದ ಕಾದಂಬರಿಗಳನ್ನು ವಿಮರ್ಶಿಸಿ ಬರೆದ ಲೇಖನಗಳು, ಕೇವಲ ಐದು ಜನರಿಂದ ಬಂದಿವೆ. , ಇದಕ್ಕೆ ಕಾರಣವು ನಮ್ಮ ತರುಣವಿಮರ್ಶಕರ ಬೇಸರವೋ, ಭೀತಿಯೋ, ಉಪೇಕ್ಷೆಯೋ–ಇದಾವುದೂ ನಮಗೆ ತಿಳಿಯದಾಗಿದೆ. ಇವುಗಳಲ್ಲಿಯ ಯಾವುದೇ ಒಂದು ಕಾರಣವು ನಿಜವಿದ್ದರೂ, ಅದು ನಮ್ಮ ಸಾಹಿತ್ಯಪ್ರಪಂಚಕ್ಕೆ ಶುಭ ಭವಿಷ್ಯಕಾರಿ ಯಾದುದೇನೂ ಅಲ್ಲ. ಇತ್ತೀಚೆಗೆ ನಮ್ಮಲ್ಲಿ ಕಾದಂಬರಿಗಳ ನಿರ್ಮಿತಿಯು ಹೆಚ್ಚುತ್ತಿರುವುದು ಸಮಾಧಾನದ ಸಂಗತಿಯೆ; ಆದರೆ ಆ ನಿರ್ಮಿತಿಯು ಕೇವಲ ವ್ಯಾಪಾರೀದೃಷ್ಟಿಯಿಂದಾಗದೆ, ಒಳ್ಳೆಯ ಸಾಹಿತ್ಯ ಸೃಷ್ಟಿಯ ದೃಷ್ಟಿಯಿಂದಾಗಿದೆಯೋ ಇಲ್ಲವೋ ಎಂಬುದು, ವಿಮರ್ಶಕರ ವಿಚಾರ-ಚರ್ಚೆಗಳಿಂದಲೇ ಸಿದ್ಧವಾಗಬೇಕು. ಇಂತಹ ವಿಚಾರ-ಚರ್ಚೆಗಳಿಂದ ಒಳ್ಳೆಯ ಗ್ರಂಥಗಳ ಮಾರಾಟಕ್ಕೂ ಸಹಾಯವು ದೊರೆತೀತು.

ಸ್ಪರ್ಧೆಗೆ ವಿಮರ್ಶೆಗಳನ್ನು ಕಳುಹಿದವರು :

೧ ಶ್ರೀ. 'ಅನಾರ್' ಅರಸೀಕೆರೆ (ಶ್ರೀ ತ. ರಾ. ಸು. ಅವರ 'ರಕ್ತರಾತ್ರಿ' ಕಾದಂಬರಿ). ೨ ಶ್ರೀ. ಬದಾಪೀಪ ರಾಘವೇಂದ್ರ ಸುರಪುರ (ಶ್ರೀ. ದೇವುಡು ಅವರ 'ಮಲ್ಲಿ' ಕಾದಂಬರಿ). ೩ ಶ್ರೀ. ಕೆ. ಎಸ್. ಶರ್ಮಾ 'ವಿದ್ವಾನ್' ಕಾಸರಗೋಡು (ಶ್ರೀ. 'ನಿರಂಜನ'ರ 'ವಿಮೋಚನೆ' ಕಾದಂಬರಿ). ೪ ಶ್ರೀ. ಎಂ. ಎಸ್. ಆಚಾರ್, ಕುಲಾಯಿ (ದ. ಕ.) ಮತ್ತು ೫ ಶ್ರೀ. 'ಜಯಂತ' ಸುರತ್‌ಕಲ್ಲು (ದ. ಕ) (ಇವರಿಬ್ಬರೂ ವಿಮರ್ಶಿಸಿದುದು ಶ್ರೀ. ನರೇಂದ್ರಬಾಬು ಅವರು ಬರೆದ 'ಓದಿದ ಹುಡುಗಿ' ಕಾದಂಬರಿ).

ಎಲ್ಲ ವಿಮರ್ಶೆಗಳನ್ನೂ ಸಂಪಾದಕಮಂಡಲಿಯವರೇ ನೋಡಿ ನಿರ್ಣಯಕೊಟ್ಟಿದ್ದಾರೆ. ಶ್ರೀ. ಅನಾರ್, ಅರಸೀಕೆರೆ ಅವರು ಬರೆದ 'ರಕ್ತರಾತ್ರಿ' ಕಾದಂಬರಿಯ ವಿಮರ್ಶೆ ಅತ್ಯುತ್ತಮವಾಗಿದೆ. ಶ್ರೀ. ಕೆ. ಎಸ್. ಶರ್ಮಾ ಅವರು ಬರೆದ 'ವಿಮೋಚನೆ' ಕಾದಂಬರಿಯ ವಿಮರ್ಶೆಯು ತುಂಬ ಚೆನ್ನಾಗಿದೆ. ಮಿಕ್ಕವು ಕೂಡ ಒಳ್ಳೆಯ ವಿಮರ್ಶೆಗಳೆನಿಸಿಕೊಳ್ಳಲು ತಕ್ಕುವಾಗಿವೆ.

ಮುಂದಿನ ತಿಂಗಳಿಗಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ, 'ಪೂಜಾರಿಯ ಕತೆ' ಎಂಬ ಕತೆಯನ್ನು ವಿಮರ್ಶೆಗೆ ತೆಗೆದುಕೊಳ್ಳಬೇಕು.

— **ಸಂಪಾದಕರು**

ಶ್ರೀ. ತ. ರಾ. ಸು. ಅವರ "ರಕ್ತರಾತ್ರಿ"

[ಕಾದಂಬರಿಯ ವಿಮರ್ಶೆ]

ಶ್ರೀ. "ಅನಾರ್" ಅರಸೀಕೆರೆ

ಸಂಶೋಧನಾಭಿರುಚಿ ಅವಶ್ಯ :

ಕನ್ನಡ ಕಾದಂಬರೀಕ್ಷೇತ್ರ ವಿಸ್ತಾರವಾಗಿ ಬೆಳೆಯುತ್ತಿರುವ ಈ ಕಾಲದಲ್ಲಿ, ಅಂತಸ್ಸತ್ವವುಳ್ಳ ಪಕ್ವವಾದ ಕೃತಿಗಳು ವಿರಳವಾಗಿಯೇ ಉಳಿದಿವೆಯೆಂದರೆ ಸೋಜಿಗವೆಂದೇ ಹೇಳಬೇಕು. ಕಾದಂಬರಿಕಾರರು ತಮ್ಮತನವನ್ನು ಅರಿಸಿಕೊಳ್ಳುವುದರಲ್ಲಿ ಮತ್ತು ಅದರ ಉತ್ತಮ ಪ್ರಯೋಗಗಳನ್ನು ನಡೆಯಿಸುವಲ್ಲಿ ಅಷ್ಟಾಗಿ ಹುಮ್ಮಸನ್ನು ತೋರಿಸುತ್ತಿಲ್ಲವೆಂಬುದು ಕಂಡುಬರುತ್ತಿದೆ. ಕೆಲವಾರು ದಿನ ಹಲವಾರು ಬಾಯಿಗಳಲ್ಲಿ ನಲಿದು, ಮುಂದೆ ತನ್ನ ಇರವನ್ನೇ ಕಳೆದುಕೊಳ್ಳುವ ಅಗ್ಗದ ಸಿನಿಮಾತಂತ್ರವನ್ನೊಳಗೊಂಡ ಲಾಘವವಾದ ಚಿತ್ರಸಂಗೀತದ ರೀತಿಯಲ್ಲಿಯೇ ನಮ್ಮಲ್ಲಿಯ ಅಧಿಕಾಂಶ ಕಾದಂಬರಿಗಳ ಪಾಡೂ ಆಗಿದೆ. ಇದಕ್ಕೆ ಹಲವಾರು ಕಾರಣಗಳಿಲ್ಲದೆ ಇಲ್ಲ. ಸದ್ಯಕ್ಕೆ ಅದನ್ನು ಅಪ್ರಸ್ತುತ ಮಾಡಿ, ಈ ವಿಮರ್ಶೆಯ ಪ್ರಾರಂಭಕ್ಕೆ ಬರೋಣ.

ಮೊದಲು ಒಂದು ಮಾತನ್ನು ಬರೆಯಬೇಕಾಗಿದೆ. ನಮ್ಮಲ್ಲಿ ಸಾಮಾಜಿಕ ಸಮಸ್ಯೆಗಳನ್ನೆತ್ತಿಕೊಂಡ ಕಾದಂಬರಿಗಳೇ ವಿಶೇಷ. ಐತಿಹಾಸಿಕ ಕಾದಂಬರಿಗಳ ಸ್ವತಂತ್ರರಚನೆಗಳು ಕೇವಲ ಬೆರಳೆಣಿಸುವಷ್ಟು ಎನ್ನಬಹುದು. ಗ್ರಂಥಕಾರರಿಗೆ ಸಂಶೋಧನಶಾಸ್ತ್ರದ ಬಗೆಗೆ ಇರುವ ಉದಾಸೀನವೇ ಕಾರಣವಾಗಿದೆ. ಕಾದಂಬರಿಕಾರರನೇಕರಿಗೆ ಕರ್ನಾಟಕದ ವೈಭವಪೂರ್ಣ ಇತಿಹಾಸದ ಜ್ಞಾನ ಸಂಪೂರ್ಣವಾಗಿ ಇಲ್ಲವೆ ಸ್ವಲ್ಪ ಮಟ್ಟಿಗಾದರೂ ಪರಿಚಯವಾಗಿದೆಯೆಂದು ಧೈರ್ಯದಿಂದ ಹೇಳಲು ಬರುವುದೇ ಎನ್ನುವುದು ಸಂಶಯಕ್ಕೆಡೆ ಕೊಡುವ ಸಂಗತಿಯಾಗಿದೆ. ಹೀಗಾಗಿ ಕಾದಂಬರೀ ಕ್ಷೇತ್ರವನ್ನು ಉಪಯೋಗಿಸಿಕೊಂಡು ಕರ್ನಾಟಕದ ಉಜ್ವಲ ಇತಿಹಾಸದ ಮೇಲೆ ಬೆಳಕು ಚೆಲ್ಲಲು ಕೃಷಿ ಮಾಡಿದವರ ಸಂಖ್ಯೆ ಕೇವಲ ಅತ್ಯಲ್ಪ.

ಗಳಗನಾಥರ "ಮಾಧವ ಕರುಣಾವಿಲಾಸ" "ಕನ್ನಡಿಗರ ಕರ್ಮ ಕಥೆ" "ಕುಮುದಿನಿ"-ಎಂ. ಎಸ್. ಪುಟ್ಟಣ್ಣನವರ "ಮಾಡಿದ್ದುಣ್ಣೊ ಮಹಾರಾಯ" "ಮುಸುಕು ತೆಗೆಯೆ ಮಾಯಾಂಗನೆ"--ಆನಂದಕಂದರ "ರಾಜಯೋಗಿ" "ಅಶಾಂತಿಪರ್ವ"—ಮಾಸ್ತಿಯವರ "ಚೆನ್ನಬಸವ ನಾಯಕ"—ದೇವುಡುರವರ "ಮಯೂರ" "ಅವಳ ಕಥೆ" "ಮಲ್ಲಿ" ಮತ್ತು ವೀರಕೇಸರಿಯವರ "ದೌಲತ್" "ನಗರದ ರಾಣಿ" "ಸ್ವರ್ಣ ಲೇಖೆ" ಇವುಗಳು ಕರ್ನಾಟಕದ ಇತಿಹಾಸವನ್ನೇ ಬಳಸಿ ರಚಿಸಿರುವ ಸ್ವತಂತ್ರ ಕೃತಿಗಳಾಗಿವೆ. ಇವುಗಳಲ್ಲಿ ಎಲ್ಲ ಕೃತಿಗಳೂ ಸರ್ವಾಂಗ ಸುಂದರವೂ, ಸುಪುಷ್ಟವೂ ಆಗಿವೆಯೆಂದು ಹೇಳಲು ಬರುವುದಿಲ್ಲ. ಇವುಗಳ ವಿವರವಾದ ವಿವೇಚನೆ ಈ ಲೇಖನದ ಮಿತಿಗಲ್ಲವಾದ್ದರಿಂದ. ನಾವು ನೇರವಾಗಿ ಶ್ರೀ. ತ. ರಾ. ಸು. ಅವರು ಬರೆದ ಇತ್ತೀಚಿಗಿನ ಹೊಚ್ಚ ಹೊಸ ಕೃತಿಯ ಒಂದು ಭಾಗವಾದ "ರಕ್ತರಾತ್ರಿ" ಯನ್ನು ತೆಗೆದುಕೊಳ್ಳೋಣ. ಇದು ಚಿತ್ರದುರ್ಗದ ಪಾಳೆಯಗಾರರಿಗೆ ಸಂಬಂಧ ಪಟ್ಟ ಕಥಾನಕವನ್ನು ತೆಗೆದುಕೊಂಡು ಬರೆದ ಕಾದಂಬರೀ ತ್ರಯದ ಎರಡನೆಯ ಭಾಗ. ಮೊದಲ ಭಾಗವಾದ "ಕಂಬನಿಯ ಕುಯಿಲಿ" ನಿಂದ ಕಥೆ "ರಕ್ತರಾತ್ರಿ" ಯಲ್ಲಿ ಮುಂದುವರಿಯುತ್ತದೆ.

ಕಥಾ ವಸ್ತು :

"ರಕ್ತರಾತ್ರಿ" ಕಥೆಯ ಸಾರಾಂಶ ಇಷ್ಟು:— (ಪ್ರಕಾಶಕರ ಪುಟದಿಂದ ಆರಿಸಿದೆ)—

— "ಸುಮಾರು ಇನ್ನೂರು ಎಂಬತ್ತು ವರುಷಗಳ ಹಿಂದಿನ ಮಾತು.

ಮದಕರಿನಾಯಕ ಗಂಡು ಸಂತಾನವಿಲ್ಲದೆ ಸತ್ತ ಮೇಲೆ, ರಾಣಿ ಗೌರವ್ವ ನಾಗತಿಯ ತಮ್ಮ ಓಬಣ್ಣ ನಾಯಕ, ದುರ್ಗದ ಗದ್ದುಗೆ ಯನ್ನೇರಿದ; ನ್ಯಾಯುವಾದ ಹಕ್ಕುದಾರರಾದ ಮದಕರಿನಾಯಕನ ಅಣ್ಣನ ಮಕ್ಕಳು ಲಿಂಗಣ್ಣನಾಯಕ, ಚಿಕ್ಕಣ್ಣನಾಯಕರನ್ನು ತುಳಿದು. ಇದರಿಂದ ಕ್ರೋಧಗೊಂಡ ಸೈನಿಕರು, ಓಬಣ್ಣನಾಯಕ ನನ್ನು ಕೊಂದುಹಾಕಿದರು.

ಬಳಿಕ ದಳವಾಯಿ ಮುದ್ದಣ್ಣನ ಬೆಂಬಲದಿಂದ ಚಿಕ್ಕಣ್ಣ ನಾಯಕ ಪಟ್ಟಕ್ಕೆ ಬಂದ; ಹನ್ನೆರಡು ವರ್ಷಗಳ ಆಳ್ವಿಕೆಯ ಬಳಿಕ ಚಿಕ್ಕಣ್ಣನಾಯಕ ಸಂತಾನವಿಲ್ಲದೆ ಮೃತನಾದ.

ದುರ್ಗದ ಸಿಂಹಾಸನ ಮತ್ತೆ ಬರಿಯದಾಯಿತು. ದಳವಾಯಿ ಮುದ್ದಣ್ಣನಿಗೆ ತಾನೇ ನಾಯಕನಾಗಬೇಕೆಂಬ ಹಂಬಲ. ಅದಕ್ಕಾಗಿ ಪಟ್ಟ ಕಟ್ಟುವುದನ್ನು ತಡಮಾಡಿದನು; ಆದರೆ ಮದಕರಿ ನಾಯಕನ ಅಣ್ಣನ ಮಕ್ಕಳಾದ ಲಿಂಗಣ್ಣನಾಯಕನಿಗೇ ಪಟ್ಟಕಟ್ಟಬೇಕೆಂಬ ಒತ್ತಾಯ ಬಂದದ್ದರಿಂದ, ಮುದ್ದಣ್ಣ ಅದಕ್ಕೆ ತಲೆಬಾಗಲೇ ಬೇಕಾ ಯಿತು. ಆದರೆ ಅರಮನೆಯ, ದುರ್ಗದ ಸರ್ವಾಧಿಕಾರ ಮುದ್ದಣ್ಣ ಮತ್ತು ಅವನ ತಮ್ಮಂದಿರಲ್ಲಿಯೇ ಉಳಿಯಿತು. ತಾನು ಅರಮನೆ ಯಲ್ಲಿ ಸೆರೆಯಲ್ಲಿದ್ದೇನೆ ಎಂಬ ಅರಿವು ಲಿಂಗಣ್ಣನಾಯಕನಲ್ಲಿ ಮೂಡುವ ವೇಳೆಗೆ ಸರ್ವನಾಶವಾಗಿತ್ತು. ನಾಯಕನು ಸರ್ವಾಧಿಕಾರ ತೆಗೆದುಕೊಳ್ಳಲು ಯತ್ನಿಸಿದಾಗ, ಅದಕ್ಕೆ ಅವಕಾಶಕೊಡದೆ ಮುದ್ದಣ್ಣನಿಂದ ನಾಯಕನ ಕೊಲೆಯಾಯಿತು. ಲಿಂಗಣ್ಣನಾಯಕನ ಕೊಲೆಯಿಂದ ಮತ್ತಿತಿಮ್ಮಣ್ಣನಾಯಕನ ವಂಶ ಕೊನೆಗಂಡಿತು. ಇದೇ ಈ ಕಾದಂಬರಿಯ ವಸ್ತು—

ಪಾತ್ರ ಪರಿಪೋಷಣೆ :

ರಾಜಭಕ್ತಿ, ನಿಸ್ಸೀಮ ತ್ಯಾಗ, ವೀರರಸ ಮುಂತಾಗಿ ಅನೇಕ ಧೀರೋದಾತ್ತ ಚರ್ಯೆಗಳಿಗೂ, ಕುಟಿಲ ಕಾರಸ್ಥಾನಗಳಿಗೂ ವಿಶೇಷ ವಾಗಿ ಎಡೆಯಿರುವ ಕಥಾವಸ್ತುವಿನ ಮುಂದುವರಿದ ಎರಡನೆಯ ಭಾಗವಾದ "ರಕ್ತರಾತ್ರಿ" ಯಲ್ಲಿ, ಮುದ್ದಣ್ಣನ ಪಾತ್ರವೇ ಪ್ರಧಾನ ವಾಗಿ, ಸಂಪೂರ್ಣವಾಗಿ ವ್ಯಾಪಿಸುತ್ತದೆ. "ಕಂಬನಿಯ ಕುಯಿಲಿ" ನಲ್ಲಿ ಕಂಡ ಮುದ್ದಣ್ಣನಿಗೂ, "ರಕ್ತರಾತ್ರಿ" ಯಲ್ಲಿಯ ಅದೇ ವ್ಯಕ್ತಿಗೂ ಬಹುಮಟ್ಟಿಗೆ ವ್ಯತ್ಯಾಸವಿದೆ. "ಕಂಬನಿಯ ಕುಯಿಲಿ"ನ ಮುದ್ದಣ್ಣ ಜ್ವಾಲಾಮುಖಿ. ಮಾತು ಕಡಿಮೆಯಾದರೂ ಕ್ರಿಯೆ ಯಲ್ಲಿಯೇ ತನ್ನೆಲ್ಲ ಆಕಾಂಕ್ಷೆಗಳನ್ನು ಪ್ರಚೋದಿಸುವವನು. ಆದರೆ "ರಕ್ತರಾತ್ರಿ" ಯಲ್ಲಿ ಅವನ ನಡೆಯಲ್ಲಿ ಕ್ರಿಯೆಯನ್ನೂ ಮೀರಿದ ಮಾತುಗಳೇ ಹೆಚ್ಚು ಎನ್ನಬಹುದು. ನಂಜುನುಡಿಗಳನ್ನು ಸವಣಿಸು ವುದರಲ್ಲೆ ಅವನು ಪರಿಣತನಾಗಿದ್ದಾನೆ. "ಕಂಬನಿಯ ಕುಯಿಲು" ಮತ್ತು "ರಕ್ತರಾತ್ರಿ" ಗಳಲ್ಲಿ ಪೋಷಿಸಲ್ಪಟ್ಟ ಮುದ್ದಣ್ಣ ಪಾತ್ರ ದಲ್ಲಿಯ ಪ್ರಭಾವವು, ಮೊದಲನೆಯದರಲ್ಲಿಯೇ ಹೆಚ್ಚು ಪರಿಣಾಮ ಕಾರಿಯಾಗಿ ಮೂಡಿದೆ. ಕಾದಂಬರಿಯ ಎರಡು ಭಾಗಗಳ ಕಾಲಾಂತರ ದಲ್ಲಿ ಅವನು ಹತ್ತುವರ್ಷಗಳು ಪ್ರಧಾನಿಯಾಗಿದ್ದು ಅನುಭವ ಪಡೆ ದಿರುವುದರಿಂದ, ಈ ವ್ಯಂಗ್ಯಮಾತುಗಾರಿಕೆಯ "ಚಟ" ವು ಅವನಲ್ಲಿ ಅನಿವಾರ್ಯವಾಗಿ ತಲೆ ಹಾಕಿರಬಹುದೆಂಬ ಸಮಾಧಾನವಿರಬಹುದು. ಆದರ ಬೆಳೆವಣಿಗೆ ಕ್ರಮವಾಗಿ ಬೆಳೆಯದೆ, ಓದುಗನ ಊಹೆಗೇ ಬಿಟ್ಟದೆಯಾಗಿ ತೀವ್ರಗತಿಯಲ್ಲಿ ಬದಲಾಗುವ ಪಾತ್ರಪೋಷಣೆಯಿಂದ ತುಸು ಚಕಿತರಾಗಬಹುದು. ಆದರೂ "ಕಂಬನಿಯ ಕುಯಿಲಿ"ಗಿಂತ ಬದಲಾದ 'ರಕ್ತರಾತ್ರಿ' ಯ ಪಾತ್ರ ತನ್ನದೇ ಆದ ರೀತಿಯಲ್ಲಿ ಆಳುತ್ತದೆ.

ಲಿಂಗಣ್ಣನಾಯಕನ ಪಾತ್ರ ಮನೋವಿಶ್ಲೇಷಣಕ್ಕಾಗಿ ಉದ್ಭವಿಸಿಕೊಂಡ ವಿಶಿಷ್ಟತೆಯುಳ್ಳದ್ದು. ಅದು ಚೆನ್ನಾಗಿ ಸಾಧಿಸಿದೆ ಯೆಂದು ಹೇಳಬೇಕು. "ಕಂಬನಿಯ ಕುಯಿಲಿ"ನ ಧೀರೋದಾತ್ತ ತ್ಯಾಗವೀರನ ಮನ 'ರಕ್ತರಾತ್ರಿ' ಯಲ್ಲಿ ವ್ಯವಹರಿಸುವ ಬಗೆಯೆ ಬೇರೆ. ದುರ್ಗದಲ್ಲಿ ಸರಣಿಯಾಗಿ ನಡೆದ ದುರಂತಘಟನೆಗಳಿಂದ ಅವನು ದಿಙ್ಮೂಢನಾಗುತ್ತಾನೆ. ನಾಯಕನ ಸ್ವಾಭಿಮಾನ, ಬುದ್ಧಿ ಶಕ್ತಿ ಎಲ್ಲವೂ ಕಮರಿ ಹೋದಂತಾಗಿ, ಯಾವುದೋ ಒಂದು ಅವಸ್ಥಾ ವಿಶೇಷದ ಪ್ರಭಾವಕ್ಕೆ ಸಿಕ್ಕಿ, ನಿರ್ಲಿಪ್ತನಂತೆ ವರ್ತಿಸುತ್ತಿರುತ್ತಾನೆ. ದಳವಾಯಿ-ಪ್ರಧಾನಿ ಮುದ್ದಣ್ಣ ಮತ್ತು ಅವನ ಬಣದಿಂದ ದುರ್ಗದ ಮೇಲೆ ನಡೆದ ದೌರ್ಜನ್ಯಗಳ ವಿರುದ್ಧ ಅವನ ಮನ ಬಂಡಾಯವೇಳ ಬೇಕಾದರೆ "ನಾಗತಿಯ ನೆರಳಾ"ಗಿ ಅಲೆಯುತ್ತಿರುವ ಗಿರಿಜೆ ಅವನಲ್ಲಿ

ಕ್ರೋಧಾಗ್ನಿ ಕೆರಳುವಂತೆ ಪ್ರಚೋದಿಸಬೇಕು. ಚಣಕಾಲದ ಮಿಂಚೊಂದು ಮಿಂಚಿ ಮಾಯವಾದಂತೆ ಅವನ ಮನೋಧರ್ಮ. ಹೇಗೋ ಎಚ್ಚರಗೊಂಡಂತೆ ಎದ್ದು ಮತ್ತೆ ಮಂಕಾಗುತ್ತದೆ. ತಾನಿರುವುದು ಸ್ವಾತಂತ್ರ್ಯ ಹೀನ ಬೋನಿನಲ್ಲಿ ಎಂಬ ತಿಳಿವುಂಟಾಗುವವರೆಗೂ ಅವನು "ಕೆರಳಿದ ಹುಲಿ" ಯಾಗಲು ಸಾಧ್ಯವಾಗಲಿಲ್ಲ. ಆದರೆ ಕಾಲ ಮಿಂಚಿತ್ತು. ಮುದ್ದಣ್ಣನ ಸಂಚಿಗೆ ಸಿಕ್ಕಿ ಅಸಹನೀಯವಾದ ರೀತಿಯಲ್ಲಿ ಅವನ ವಧೆಯಾಯಿತು. "ರಕ್ತರಾತ್ರಿ"ಯಲ್ಲಿ ಹರಿದ ಪ್ರಾಮಾಣಿಕವಾದ ರಕ್ತ ಲಿಂಗಣ್ಣನಾಯಕನದೇ ಹೌದು. ಸರ್ವ ದೃಷ್ಟಿಕೋನಗಳಿಂದಲೂ ಲಿಂಗಣ್ಣನಾಯಕನು ದುರ್ಗದ ಏಕಮಾತ್ರ "ಅಮರ ಹುತಾತ್ಮ"ನಾಗಿ ನಮ್ಮ ಮನಸ್ಸಿನಲ್ಲಿ ಉಳಿಯುತ್ತಾನೆ.

ಇನ್ನುಳಿದ ಪಾತ್ರಗಳಲ್ಲಿ ಮಲ್ಲಮ್ಮ ನಾಗತಿ, ಹೊರಕೆನಾಯಕ ಇವರುಗಳೇ ಮುಖ್ಯರು. ಅವರ ಪಾತ್ರಗಳೂ ಚೆನ್ನಾಗಿ ಬೆಳೆದು ಬಂದಿವೆ. ಗಿರಿಜೆ, ಪರಶುರಾಮಪ್ಪ (ಹಿಂದಿನ ಪ್ರಧಾನಿ ಭುವನಪ್ಪನ ಮಗ)—, ದಳವಾಯಿ ಭರಮಣ್ಣ, ಮುದ್ದಣ್ಣನ ವಿರೋಧವಾಗಿ ಪ್ರಜೆಗಳನ್ನು ಸಂಘಟಿಸುವವರಾದ್ದರಿಂದ ಮುಂದಿನ ಭಾಗದಲ್ಲಿ ಅವರ ಪಾತ್ರಗಳು ಇನ್ನಷ್ಟು ಬೆಳಗಬಹುದು.

ಪುಟಸಂಯಮ :

ಶ್ರೀ. ತ. ರಾ. ಸು. ಅವರ ಶೈಲಿ ಇಲ್ಲಿ ಧೀರಬಂಧುರವಾಗಿ ಬೆಳಗಿದೆ. ಸ್ಫುಟವಾದ ನಿರೂಪಣೆ, ಚಮತ್ಕಾರವಾಗಿ ಘಟನೆಗಳನ್ನು ಜೋಡಿಸುವಿಕೆ ಇವುಗಳಿಂದ ಓದುಗರನ್ನು ಎಳೆದೊಯ್ಯುತ್ತಾರೆ. ಆದರೆ ಕಾದಂಬರಿ ದೀರ್ಘವಾಗಿ ಎಳೆಯುತ್ತದೆಂದೇ ಹೇಳಬೇಕು. ಅಷ್ಟು ಬೃಹದಾಕಾರವಾಗಿ ಲಂಬಿಸುವ ಆವಶ್ಯಕತೆಯೂ ಕಂಡು ಬರುವುದಿಲ್ಲ. ಇಲ್ಲಿ ಬರೆಹಗಾರರು "ಪುಟಸಂಯಮಿ" ಗಳಾಗುವುದು ಆವಶ್ಯವಾಗಿದೆ. "ಮಯೂರ'' ದಂಥ ಕಾದಂಬರಿ ತನಗಿರುವ ಚಿಕ್ಕವ್ಯಾಪ್ತಿಯಲ್ಲಿ ಎಂಥ ಪರಿಣಾಮವನ್ನು ತಂದಿದೆಯೆಂಬುದನ್ನು ಗಮನಿಸಿದರೆ, ಅಂತಹ ಕಲಾವಂತಿಕೆಯನ್ನೂ ಬಳಸಿಕೊಳ್ಳುವುದರಲ್ಲಿರುವ ಔಚಿತ್ಯವು ಗೊತ್ತಾಗುವುದು.

ಕೆಲವು ಅನುಮಾನಗಳು :

"ರಕ್ತರಾತ್ರಿ" ಕಾದಂಬರಿಯಲ್ಲಿ ಬರುವ ಸಂಭಾಷಣೆಗಳನ್ನು ಸ್ವಲ್ಪ ಗಮನಿಸಬೇಕು. ಲಿಂಗಣ್ಣನಾಯಕ, ಪರಶುರಾಮಪ್ಪನವರಂಥ ಉನ್ನತ ಸಂಸ್ಕಾರವಂತ ಜನರಾಡುವ ಮಾತುಗಳಿಗೂ ಗಿರಿಜವ್ವೆ, ಹೊರಕೆನಾಯಕರಂಥ ಊಳಿಗದವರಾಡುವ ಮಾತುಗಳಿಗೂ ವ್ಯತ್ಯಾಸವೇ ಕಾಣಸಿಗುವುದಿಲ್ಲ. ಎಲ್ಲರೂ ಒಂದೇ ಮಟ್ಟದ, ಪ್ರೌಢ, ಸುಸಂಸ್ಕೃತ ಶೈಲಿಯ ಮಾತುಗಳನ್ನೇ ಬಳಸುತ್ತಾರೆ. ಸರ್ವ ಪಾತ್ರಗಳ ಏಕಮುಖ ಪ್ರವೀಣತೆ ಇಲ್ಲಿನ ಒಂದು ಅಸಹಜ ವಾತಾವರಣ. ಊಳಿಗದವರಾಡುವ ಮಾತುಗಳು 'ದೇಸಿ' ಯಲ್ಲಿ ಹೆಚ್ಚು ಪ್ರಭಾವಶಾಲಿಯಾಗಿ, ಆತ್ಮೀಯವಾಗಿ ಮೂಡಲು ಸಾಧ್ಯವಿದೆ. ಅಂತಹ ಸದವಕಾಶವನ್ನು ಬಿಟ್ಟು ಕೊಡದೆ, ಅದನ್ನು ಉಪಯೋಗಿಸುವುದರಲ್ಲಿ ಲೇಖಕರ ಜಾಣ್ಮೆ ಇನ್ನೂ ವೃದ್ಧಿಯಾಗುತ್ತಿದೆಯೆನ್ನುವುದರಲ್ಲಿ ಸಂದೇಹವಿಲ್ಲ. ಉದಾಹರಣೆಗೆ "ಆಶ್ವಯುಜ ಶುದ್ಧ ಮಹರ್ನವಮಿ ಬರಲೆಂದು ಲೇಸಾಗಿ ಹರಸಿದೆವು ಬಾಲಕರು ಬಂದು'' ಎಂಬ ಪುರಾತನ ಪದ್ಯವನ್ನು ಓದುತ್ತಾ ಓದುತ್ತಾ ಉಂಟಾಗುವ ಸಂವೇದನೆಯಿಂದ ವೈಸರೇಳುವಂಥ ಸುಂದರ ಕಲ್ಪನೆಗಳು ಓದುಗನಲ್ಲಿ ಮೂಡದಿರಲು ಸಾಧ್ಯವೆ? ದೇಸಿಯನ್ನು ಪರಿಣಾಮಕಾರಿಯಾಗಿ ಬಳಸುವುದರಲ್ಲಿ ಕೃತಿಯ ಸೌಂದರ್ಯ ಇಮ್ಮಡಿಯಾಗುವುದೆಂದೇ ನನ್ನ ಪ್ರಾಮಾಣಿಕ ಅಭಿಪ್ರಾಯ. ಆದ್ದರಿಂದ ಆಯಾ ಪಾತ್ರಗಳಿಗೆ ಔಚಿತ್ಯವರಿತು ಮಾತುಗಳನ್ನಾಡಿಸುವುದು ಅಗತ್ಯವೆಂದು ಒತ್ತಿ ಹೇಳುತ್ತೇನೆ.

ಈ ಕಾದಂಬರಿಯಲ್ಲಿ ಅನ್ಯಮತೀಯ ದೂಷಣೆಗಳು ಪರ್ಯಾಯವಾಗಿ ಮತ್ತು ಪ್ರತ್ಯಕ್ಷವಾಗಿ ತಲೆ ಹಾಕಿವೆ. ಆಧುನಿಕ ಜನಜೀವನದಲ್ಲಿ ಸುಧಾರಣೆಯನ್ನು ಬಯಸುತ್ತಿರುವ ಲೇಖಕರು, ಇಂತಹ ಘಟನೆಗಳನ್ನು ಮರೆ ಮಾಡಿ ಬೇರೆ ರೀತಿಯಲ್ಲಿ ಪರಿಣಾಮವಾಗುವಂತಹ ಗದ್ಯಲೇಖನದ ಅಭಿರುಚಿಯನ್ನು ಬೆಳೆಸಬೇಕು. ಸಮಾಜದ ಅಂತರ್ಯದಲ್ಲಿ ಸೌಹಾರ್ದವೇರ್ಪಡಲು ತಕ್ಕಂತಹ ಎಚ್ಚರಿಕೆಗಳನ್ನು ತೆಗೆದುಕೊಳ್ಳುವುದು ಲೇಖಕರ ಆದ್ಯ ಕರ್ತವ್ಯವಾಗಿದೆ.

ಕಾದಂಬರಿಯಲ್ಲಿ ಬರುವ, ಬೇಟೆನಾಯಿಗಳನ್ನು ಬಿಟ್ಟು ಚಿತ್ರಹಿಂಸೆ ಕೊಡುವ ಪ್ರಸಂಗವು ವಿಚಿತ್ರವೆಂದು ಹೇಳಬೇಕು. ಇದು ತೀರ ಇತ್ತೀಚಿನ ಪ್ರಭಾವವೆಂದೂ ಶುದ್ಧ ಭಾರತೀಯವಾದುದಲ್ಲವೆಂದೂ ಹೇಳಬೇಕು. ಭಾರತೀಯ ಐತಿಹಾಸಿಕ ಕಥಾಭಾಗಗಳಲ್ಲಿ ಹೆಚ್ಚಾಗಿ ಬೇಟೆನಾಯಿಗಳ ಪ್ರಭಾವ ಈವರೆಗೆ ಕಂಡು ಬಂದಿರುವುದನ್ನು ನಾನು ಗಮನಿಸಿಲ್ಲ–(ಅದು ನನ್ನ ದೌರ್ಬಲ್ಯವಾದರೆ ಕ್ಷಮಿಸಿ)– ಆದರೂ ಬೇಟೆನಾಯಿಗಳ ಬದಲು ಮದಗಜಗಳನ್ನು ತರುವುದರಲ್ಲಿ ಹೆಚ್ಚು ಔಚಿತ್ಯವಿರುತ್ತಿತ್ತೆಂಬ ಅಂಶವನ್ನು ವಿಪರೀತ ಚರ್ಚೆಗೆ ಗುರಿಮಾಡದೆ, ಸುಹೃದರ ನಿರ್ಣಯಕ್ಕೆ ಬಿಡುತ್ತೇನೆ. ಅಪೂರ್ಣ ಕಾದಂಬರಿಯನ್ನು ವಿಮರ್ಶೆಗೊಳಪಡಿಸಿ ಹೆಚ್ಚು ಬೆಳಸುವುದನ್ನು ಇಲ್ಲಿಗೆ ನಿಲ್ಲಿಸುತ್ತೇನೆ.

ಹಾರೈಕೆ :

ನವೋದಯದ ಲೇಖಕರಾದ ಶ್ರೀ. ತ. ರಾ. ಸು. ಅವರು "ಹಂಸಗೀತೆ'' ''ನೃಪತುಂಗ'' ''ಕಂಬನಿಯ ಕುಯಿಲು'' ಮತ್ತು ''ರಕ್ತರಾತ್ರಿ'' ಯಲ್ಲಿ ಮಾಡಿದ ಸಂಶೋಧನೆಯ ಕೃಷಿಯ ಪ್ರಯೋಗಗಳನ್ನು ನೋಡಿಯಾದರೂ ನಮ್ಮ ತರುಣಲೇಖಕರು, ತಮ್ಮಲ್ಲಿ ಸಂಶೋಧನಾಭಿರುಚಿಯನ್ನು ಬಹುಮಟ್ಟಿಗೆ ಬೆಳಸಿಕೊಂಡು, ತಮ್ಮ ಅಮೂಲ್ಯ ಕೃತಿಗಳನ್ನು ಅರ್ಪಿಸುವುದರ ಮೂಲಕ ಕನ್ನಡ ಸಾಹಿತ್ಯ ದೇವಿಯನ್ನು ಸಿಂಗರಿಸಲೆಂದು ಹಾರಯಿಸುತ್ತೇನೆ. ತನ್ನದೇ ಆದ ವಿಶಿಷ್ಟ ಹಾಗೂ ಉಜ್ವಲಚರಿತ್ರೆಯ ಸ್ಮಾರಕವಾಗಿ ಉಳಿದುಬಂದಿರುವ ಕರ್ನಾಟಕದ ಪ್ರತಿಯೊಂದೂ ಶಿಲೆಯೂ, ಕಲಾಕೃತಿಗಳೂ ಅವರಿಗೆ ಆವಶ್ಯಕವಾದ ಸ್ಫೂರ್ತಿಯನ್ನೀಯಲಿ.

ಸಾದರ ಸ್ವೀಕಾರ

●

೮೮. **ಕನ್ನಡ ಸಾಹಿತ್ಯದ ಚರಿತ್ರೆ** (ಅತಿ ಪ್ರಾಚೀನ ಕಾಲ-ದಿಂದ ೧೯ನೆಯ ಶತಮಾನದ ಕೊನೆಯ ವರೆಗೆ). ಬರೆದವರು ಶ್ರೀ. ಶ್ರೀ. ಮುಗಳಿ, ಎಂ. ಎ., ಬಿ. ಟಿ. ಕನ್ನಡ ಪ್ರಾಧ್ಯಾಪಕರು, ವಿಲ್ಲಿಂಗ್ಡನ್ ಕಾಲೇಜ್, ಸಾಂಗಲಿ. ಪ್ರಕಾಶಕರು ಮೈಸೂರಿನ ಉಷಾ ಸಾಹಿತ್ಯ ಮಾಲೆ. ಡೆ. ಅ. ೪೬೨ ಪುಟಗಳು. ಬೆಲೆ ೮-೦-೦

೮೯. **ಸಾಧನಾ** (ಪತ್ರಸಾಹಿತ್ಯ) ಬರೆದವರು 'ನಿರಂಜನ'. ಬೆಂಗಳೂರಿನ ಪುರೋಗಾಮಿ ಪ್ರಕಾಶನದ ೭ನೆಯ ಪ್ರಕಟನೆ. ಕ್ರಾ. ಅ. ಪುಟಗಳು. ಬೆಲೆ ೧-೮-೦.

೯೦. **ಐದು ನಿಮಿಷ** (ಸಾಂದರ್ಭಿಕ ವಿಚಾರ ಸಂಕಲನ). ಬರೆದವರು 'ನಿರಂಜನ'. ಬೆಂಗಳೂರಿನ ಪುರೋಗಾಮಿ ಪ್ರಕಾಶನದ ...ನೆಯ ಪ್ರಕಟನೆ. ಕ್ರಾ. ಅ. ೧೩೮ ಪುಟಗಳು. ಬೆಲೆ ೧-೦-೦

೯೧. **ಕೊನೆಯ ಗಿರಾಕಿ** (ಕಥಾಸಂಕಲನ) ಬರೆದವರು: 'ನಿರಂಜನ'. ಪ್ರಕಾಶಕರು ಶ್ರೀ. ಡಿ. ವಿ. ಕೆ. ಮೂರ್ತಿ. ಕೃಷ್ಣಮೂರ್ತಿಪುರಂ, ಮೈಸೂರು. ಕ್ರಾ. ಅ. ೧೨೮ ಪುಟಗಳು. ಬೆಲೆ ೧-೦.

೯೨. **ಒಸಗೆ** (ಕವನ ಸಂಕಲನ) ಲೇಖಕರು ಪ್ರೊ. ತಿ. ಶ್ರೀಕಂಠಯ್ಯನವರು. ಪ್ರಕಾಶಕರು ಕಾವ್ಯಾಲಯ, ಜಯಲಕ್ಷ್ಮೀಪುರಂ, ಮೈಸೂರು. ಕ್ರಾ. ಅ. ೫೦ ಪುಟಗಳು. ಬೆಲೆ ಸಾಮಾನ್ಯ ಪ್ರತಿಗೆ ೧-೮-೦; ಉತ್ತಮ ಪ್ರತಿಗೆ ೨-೦-೦.

೯೩. **ಜೀವನರಂಗ** (ಕಥಾ ಸಂಕಲನ) ಬರೆದವರು ಶ್ರೀ. ಆರ್. ವಾಡಪ್ಪಿ ಎಂ. ಎ., ಬಿ. ಟಿ ಧಾರವಾಡ. ಪ್ರಕಾಶಕರು ದ. ಬಾ. ಕುಲಕರ್ಣಿ, ಮನೋಹರ ಗ್ರಂಥ ಭಾಂಡಾರ, ಧಾರವಾಡ. ಕ್ರಾ. ಅ. ೯೦ ಪುಟಗಳು. ಬೆಲೆ ೧-೪-೦.

೯೪. **ಪ್ರತಿಬಿಂಬ** (ಕನ್ನಡ ಪಕ್ಷಪತ್ರಿಕೆ). ಸಂಪಾದಕರು ಮತ್ತು ಪ್ರಕಾಶಕರು: ಶ್ರೀ. ಎಸ್. ಎಸ್. ಪಟ್ಟೇರ. ಪ್ರತಿಬಿಂಬ ಪಬ್ಲಿಕೇಶನ್ಸ್, ಗುತ್ತಿ ಬಿಲ್ಡಿಂಗ್, ಮೇನ್‌ರೋಡ್, ಹೊಸಪೇಟೆ. ...ದ ೨೮ ಪುಟಗಳು. ವಾ. ಚಂ. ೫-೦-೦ ಬಿಡಿ ಸಂಚಿಕೆಗೆ ೩-೦

೯೫. **ಅಪ್-ಟು-ಡೇಟ್ ಅಮ್ಮಯ್ಯ** (ಸಾಮಾಜಿಕ ಪ್ರಹಸನ). ಬರೆದವರು ಶ್ರೀ. ಕೈವಾರ ರಾಜಾರಾವ್. ಪ್ರಕಾಶಕರು ಎಚ್. ಎನ್. ರಾವ್ ಬ್ರದರ್ಸ್, ಬೆಂಗಳೂರು ನಗರ. ಪು. ಅ. ೮೬ ಪುಟಗಳು. ಬೆಲೆ ೧-೦-೦

೯೬. **ಕೋಳಿಸಾಕುವ ವ್ಯವಸಾಯ** (ಪರಿಚಯಾತ್ಮಕ ಹೊತ್ತಿಗೆ). ಮುಂಬಯಿ ಸರಕಾರದ ಪ್ರಸಿದ್ಧಿ ಶಾಖೆಯ ಪ್ರಕಟನೆ. ಅ. ೩೩ ಪುಟಗಳು. ಬೆಲೆ ೦-೧-೦.

೯೮. **ಹಳ್ಳಿಯ ಬಳ್ಳಿ** (ಸ್ವತಂತ್ರ ಸಾಮಾಜಿಕ ಕಾದಂಬರಿ) ಲೇಖಕರು ಶ್ರೀ. ಕೃಷ್ಣಮೂರ್ತಿ ಪುರಾಣಿಕರು. ಧಾರವಾಡದ ಪ್ರತಿಭಾ ಗ್ರಂಥಮಾಲೆಯ ೧೧ನೆಯ ವರ್ಷದ ೨ನೆಯ ಕಿರಣ ಕ್ರಾ. ಅ. ೩೧೬ ಪುಟಗಳು ಬೆಲೆ ೩-೦-೦

೯೯. **ಕಣ್ಣೀರಿನ ಕಡಲು** (ಸ್ವತಂತ್ರ ಸಾಮಾಜಿಕ ಕಾದಂಬರಿ). ಬರೆದವರು ಶ್ರೀ. ಕೊರಟಿ ಶ್ರೀನಿವಾಸರಾವ್. ಪ್ರತಿಭಾ ಗ್ರಂಥಮಾಲೆಯ ೧೧ನೆಯ ವರ್ಷದ ೩ನೆಯ ಕಿರಣ. ಕ್ರಾ. ಅ. ೧೬೮ ಪುಟಗಳು ಬೆಲೆ ೨-೦-೦

೧೦೦ **ಸಂಗ್ರಾಮ** (ಸ್ವತಂತ್ರ ಸಾಮಾಜಿಕ ಕಾದಂಬರಿ) ಬರೆದವರು ಶ್ರೀ. ಅ. ನ. ಕೃಷ್ಣರಾಯರು ಪ್ರತಿಭಾ ಗ್ರಂಥಮಾಲೆಯ ೧೧ನೆಯ ವರ್ಷದ ೪ನೆಯ ಕಿರಣ ಕ್ರಾ. ಅ. ೨೫೮ ಪುಟಗಳು. ಬೆಲೆ ೩-೦-೦.

೧೦೧. **ತೋಳಬಂದಿ** (ಕವನ ಸಂಕಲನ) ಬರೆದವರು 'ಶಿಸು' ಪ್ರಕಾಶಕರು ಶ್ರೀ. ತಿ. ಬ. ಮುನಗೋಳಿ, ವಿದ್ಯಾರ್ಥಿ ಶಿಕ್ಷಕರು ಭಾರತೀ ಸಾಹಿತ್ಯ ಭಾಂಡಾರ, ಯರನಾಳ ಜಿಲ್ಲಾ ವಿಜಾಪುರ. ಕ್ರಾ. ಅ. ೫೬ ಪುಟಗಳು ಬೆಲೆ ೦-೧೨-೦.

೧೦೨. C. P. I Conspires For Civil War (ಪ್ರಚಾರಾತ್ಮಕ ಪುಸ್ತಿಕೆ) ಲೇಖಕರು ಶ್ರೀಮಾನ್ ಸೀತಾರಾಮ ಗೋಯೆಲ್. ಪ್ರಕಾಶಕರು ಸೊಸೈಟಿ ಫಾರ್ ಡಿಫೆನ್ಸ್ ಆಫ್ ಫ್ರೀಡಮ್ ಇಂಡಿಯಾ, ೧೨ ಚೌರಂಗೀ ಸ್ಕ್ವೇರ್, ಕಲಕತ್ತಾ. ಡೆ. ಅ. ೫೬ ಪುಟಗಳು. ಬೆಲೆ ೦-೪-೦.

೧೦೩. **ಹಾಲು ಹಣ್ಣು** (ಕವನ ಸಂಕಲನ). ಲೇಖಕರು ಶ್ರೀ. ಭುಜೇಂದ್ರ ಮಹಿಷವಾಡಿ. ಪ್ರಕಾಶಕರು ಶಾಂತಿ ಸೇವಾ ಸದನ, ದೇವಬಾಗ. ಕ್ರಾ. ಅ. ೧೦೦ ಪುಟಗಳು ಬೆಲೆ ೧-೮-೦.

೧೦೪. **ಕಲ್ಯಾಣ** (ಹಿಂದೀ ಮಾಸಪತ್ರಿಕೆಯ ವಿಶೇಷಾಂಕ) ಬೃಹದ್‌ಗಾತ್ರದ ಈ ಸಂಚಿಕೆಯಲ್ಲಿ ನಾರದಪುರಾಣ ಮತ್ತು ವಿಷ್ಣು ಪುರಾಣಗಳ ಅನುವಾದವು ಪ್ರಕಟವಾಗಿದೆ. ಹಲವಾರು ಸುಂದರ ಚಿತ್ರಗಳಿವೆ.

೧೦೫. **ಸೋಲು** (ಸಾಮಾಜಿಕ ಕಾದಂಬರಿ). ಲೇಖಕರು ಶ್ರೀ. ರಮಾನಂದ ಅವಿನಾಶ್ ಪ್ರಕಾಶಕರು ಚಂದ್ರಸಾಗರ ಪ್ರಕಾಶನ, ಗವರ್ನ್‌ಮೆಂಟ್ ನ್ಯೂ ಬಿಲ್ಡಿಂಗ್, ೧ ಬ್ಲಾಕ್, ೫ ವರ್ಲಿ, ಮುಂಬಯಿ ೧೮. ಕ್ರಾ. ಅ. ೧೦೦ ಪುಟಗಳು. ಬೆಲೆ ೧-೦-೦

೧೦೬. **ನೇಹಪುಷ್ಪ** (ಕವನ ಸಂಕಲನ) ಲೇಖಕಿ ಸೌ. ಪಾರ್ವತಿದೇವಿ ಹೆಗಡೆ. ಪ್ರಕಾಶಕರು ಕನ್ನಡಕೋಟೆ ಪ್ರಕಾಶನ ಕೊಲ್ಹಾಪುರ. ಕ್ರಾ. ಅ. ೪೮ ಪುಟಗಳು. ಬೆಲೆ ೦-೧೨-೦.

೧೦೭. **ಬಾಗಿಲು ತೆರೆದಿತ್ತು** (ಕಥಾ ಸಂಕಲನ) ಲೇಖಕರು ಶ್ರೀ. ವರದರಾಜ ಹುಯಿಲಗೋಳ ಎಂ. ಎ., ಬಿ. ಟಿ. ಧಾರವಾಡ. ಪ್ರಕಾಶಕರು ನೀರವ ಸಾಹಿತ್ಯ ಪ್ರಕಟನೆ, ಸಾಧನಕೇರಿ, ಧಾರವಾಡ. ಕ್ರಾ. ಅ. ೮೧೧೦ ಪುಟಗಳು. ಬೆಲೆ ೧-೪-೦.

ಶರತ್ ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು! ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

'ಆನಂದಕಂದ'ರ ಕಥೆ, ಕಾದಂಬರಿ, ಕವನಸಂಕಲನ, ನಾಟಕಸಂಕಲನ, ಸಾಹಿತ್ಯ ಸಂಸ್ಕೃತಿಯ ಗ್ರಂಥಗಳು, ಎಲ್ಲವೂ ನಮ್ಮಲ್ಲಿ ದೊರೆಯುವವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮೀಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು.

ನಮ್ಮ ಮಂದಿರ ಪ್ರಕಟಿಸಿದ 'ಆನಂದಕಂದ'ರ ಸಾಮಾಜಿಕ ಕಾದಂಬರಿ:

ಮಗಳ ಮದುವೆ

೧೯೩೦ನೆಯ ಸತ್ಯಾಗ್ರಹ ಚಳವಳಿಯ ಹಿನ್ನೆಲೆಯಲ್ಲಿ ಉತ್ತರಕರ್ನಾಟಕದ ಸಾಮಾಜಿಕ ಜೀವನವನ್ನು ವಿವಿಧ ಮುಖದಲ್ಲಿ ಚಿತ್ರಿಸಿ ತೋರಿಸಿದ ರಮ್ಯ ಕಥಾನಕ. ಓದಲು ಕೈಯ್ಯಲ್ಲಿ ತೆಗೆದುಕೊಂಡರೆ, ಮುಗಿಸುವವರೆಗೂ ಪುಸ್ತಕವನ್ನು ಕೆಳಗೆ ಇರಿಸಲಿಕ್ಕಾಗದಂತಹ ಆಕರ್ಷಕವಾದ ಕತೆಗಾರಿಕೆ. ಓದಿದ ರಸಿಕರಿಂದ ಧನ್ಯವಾದಗಳ ಸುರಿಮಳೆ!

ಕ್ರಾ. ೮. ೩೫೦ ಪುಟಗಳು ಸಾದಾ ಪ್ರತಿಗೆ ೪-೦-೦; ಸುಂದರ ಪ್ರತಿಗೆ ೪-೧೨-೦

ಬೆಳವಡಿ ಮಲ್ಲಮ್ಮ

(ಏಕಾಂಗನಾಟಕ ಸಂಕಲನ)

ಕ್ರಾ. ೮ ೧೧೬ ಪುಟ. ಬೆಲೆ ೧-೮-೦

ಕಾರಹುಣ್ಣಿವೆ

(ಕವನಸಂಕಲನ)

ಕ್ರಾ. ೮. ೧೨೮ ಪುಟ. ಬೆಲೆ ಸಾದಾ ೨-೦-೦
ಸುಂದರ ೨-೮-೦

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಬೇರೆ ಗ್ರಂಥಗಳು

ಕಾದಂಬರಿ	ಕವನ ಸಂಕಲನ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	ವಿರಹಿಣಿ	ಬಡತನದ ಬಾಳು	ಕರ್ನಾಟಕ ಜನಜೀವನ
ಸುದರ್ಶನ	ಒಡನಾಡಿ	ನಮ್ಮ ಬದುಕು	ಜೀವನ ಚರಿತ್ರ
ಅಶಾಂತಿಪರ್ವ		ಸಂಸಾರ ಚಿತ್ರ	ಶ್ರೀ ಬಸವಣ್ಣನವರು
ಮಗಳ ಮದುವೆ		ಮಾತನಾಡುವ ಕಲ್ಲು	

ಅಲ್ಲದೆ ಶ್ರೀ ಹುದ್ದಾರರ 'ಚಿತ್ರಕಲಾಪ್ರವೇಶ'ವೂ ಚಾಡಿಯ ಚಾಣಕ್ಯನ 'ಜಾತೀಯ ಸಮಸ್ಯೆ' 'ಕರ್ನಾಟಕ ಏಕೀಕರಣ' ಈ ಕಿರಿಹೊತ್ತಿಗೆಗಳೂ ದೊರೆಯುವವು.

ಶರತ್ ಪ್ರಕಾಶನ ಮಂದಿರಕ್ಕೆ ೫ ರೂ. ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ ಸವಲತ್ತುಗಳು. ಬೇಗನೆ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ:

ಎಸ್. ಡಿ. ಧರಮಟ್ಟಿ, ಶರತ್ ಪ್ರಕಾಶನ ಮಂದಿರ, ಧಾರವಾಡ

Printed by N. A. Hoskeri at the Vijaya Press, Dharwar, and published for the Proprietors, Jayantipublications, by S. D. Dharmatti at the Jayanti Office, Dharwar

ಮಾರ್ಚ್ ೧೯೫೪

ಈ ಸಂಚಿಕೆಯಲ್ಲಿ:

ಹಗಲುಗಳ್ಳರ ಹಿಂಡು (ಸಂಪಾದಕೀಯ) ಸಂಪಾದಕರು ೩೬೧
ಸಾಧನದ (ಪ್ರಾಸಂಗಿಕ ಟಿಪ್ಪಣಿಗಳು) 'ಕಾಲಪ್ರಿಯ' ೩೬೨
ಜಗತ್ತು ಉಳಿಯಿತು (ಅನುವಾದಿತ ಕಥೆ) ಶ್ರೀ. ಎಂ. ಎಸ್. ರಾಮಕೃಷ್ಣ, ವಾಣಿಸಲ ೩೬೫
ಪ್ರೊ. ಬೀರಬಲ್ ಸಹಾನಿಯವರು (ಪರಿಚಯ) ಶ್ರೀ. ವೆಂಕೋಬಾಚಾರ್ಯ
ಉಪಾಧ್ಯಾಯ ಎಂ. ಎಸ್ಸಿ. ೩೬೮
—ಗೆ (ಕವನ) ಶ್ರೀ. ಎಸ್. ಎಸ್. ಬಸವನಾಳ ಎಂ. ಎ. ೩೭೧
ಜಟಿಲ ಸಾಧಿ (ನಾಟ್ಯಛಟಾ) ಶ್ರೀ. ಎನ್. ಎಸ್. ಗದಗಕರ ಬಿ. ಎ. ಧಾರವಾಡ ೩೭೩
—ಗೆ (ಕವನ) ಶ್ರೀ. ಬಿ. ಗಿ. ಶ್ರೀರಂಗಶರ್ಮ, ಅರಸೀಕೆರೆ ೩೭೪
ನೋಡಬಾರೊ ಗೋಳ! (ಕವನ) ಶ್ರೀ. ರಾ. ಸು. ವೈಲಾಯ, ಉಡುಪಿ ೩೭೪
ಲೈಂಗಿಕ ಅವ್ಯವಸ್ಥೆ ಮತ್ತು ಯೋಗಾಸನ (ಸಂಚಯಾತ್ಮಕ) ಶ್ರೀ. ಎಲ್. ವಿ. ಜೋಶಿ
ಬಿ. ಎ., ಬಿ. ಇಡಿ ೩೭೫
ಕಸದ ಬುಟ್ಟಿ (ಸಣ್ಣ ಕತೆ) ಶ್ರೀ. ದೇವಳ ಕೃಷ್ಣರಾಯರು, ಬಿ. ಎ ಬೆಳಗಾಂವಿ ೩೭೮
ಹಳ್ಳಿಗಳಿಗೆ ಹಿಂದಿರುಗಿರಿ (ವಿ. ಪ್ರ. ಪ್ರಬಂಧ) ಶ್ರೀ. ಬಿ. ಸಿ. ಎಸ್. ರಾವ್, ಬೆಳಗಾಂವಿ ೩೮೧
ನೂರು ಭಾವ ರೂಪಕಗಳು (ಕಿರುಗತೆ) ಶ್ರೀ. ಹ. ವೆಂ. ನಾಗೇಶ, ಗುಲಬರ್ಗಾ ೩೮೨
ಇದು ಸಾಧವೆ? (ಸಣ್ಣ ಕತೆ) ಶ್ರೀಮತಿ ಗೀತಾದೇವಿ ಕುಲಕರ್ಣಿ, ಧಾರವಾಡ ೩೮೫
ದೇವರು ದಯಾಘನನೆ (ವಿಚಾರ ಪ್ರಬಂಧ) ಶ್ರೀ. ಕೆ. ಎಸ್. ಭುಜಂಗ ಬಿ ಎ.
ಮುಂಬಯಿ ೩೯೩
ಕನ್ನಡ ಚಲಚ್ಚಿತ್ರ ಜಲದುರ್ಗ (ವಿಮರ್ಶೆ) 'ವಿಹಂಗಮ' ೩೯೫
ಬೀನರ ಜಗಳ (ಕವನ) ಶ್ರೀ. ಬಿ. ಎಸ್. ಕಪಕರೋಳ, ದಾವಣಗೆರೆ ೩೯೬
ಪುಸ್ತಕ ವಿಮರ್ಶೆ 'ಚಿತ್ರ ಕ. ಕಲೆ) ಸಂಪಾದಕರು ೩೯೮
ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ .... ಶ್ರೀ. ಲಕ್ಷ್ಮಣ ಜೋಶಿ, ಕಡಬ್ಬಿಗ ೩೯೯
ಸಾದರ ಸ್ವೀಕಾರ ೪೦೨

ಸಂಪುಟ ೧೬
✠
ಸಂಚಿಕೆ ೧೦
✠
ಬೆಲೆ
೮ ಅಣೆ

JAYANTI

ಅವಧಿಯನ್ನು ಮುಂದುವರಿಸಲಾಗಿದೆ!

ಸಣ್ಣ ಕತೆಗಳ ಮೇಲಾಟ

ಆಕರ್ಷಕವಾದ ಮೂರು ಬಹುಮಾನಗಳು

೨೦ ರೂ.　　　೧೫ ರೂ.　　　೧೦ ರೂ.

೧೯೫೪ನೆಯ ಏಪ್ರಿಲ್ ೩೦ನೆಯ ದಿನಾಂಕ

ದೊಳಗೆ ತಲ್ಪುವಂತೆ ಕತೆಗಳನ್ನು ಕಳುಹಬೇಕು.

ಮೇಲಾಟದ ನಿಯಮಗಳು:

೧ ಕತೆಯು ಸ್ವತಂತ್ರವಾಗಿದ್ದು ಕರ್ನಾಟಕದ ಸಾಮಾಜಿಕ ಹಿನ್ನೆಲೆಯಿಂದ ಕೂಡಿದುದಾಗಿರಬೇಕು.

೨ ಜಯಂತಿಯ ಮುದ್ರಿತ ಪುಟ ೫ಕ್ಕಿಂತ ಹೆಚ್ಚಿಗಾಗಬಾರದು; ಎಂದರೆ ಫೂಲ್ಸ್‌ಕ್ಯಾಪ್ ಅರ್ಧ ಹಾಳೆ ೮ಕ್ಕೆ ಮುಗಿದಿರಬೇಕು.

೩ ವಯಸ್ಸಿನ ನಿರ್ಬಂಧವಿಲ್ಲ ಹಿರಿಯರು ಕಿರಿಯರು ಎಲ್ಲರೂ ಮೇಲಾಟದಲ್ಲಿ ಭಾಗವಹಿಸಬಹುದು.

೪ ಒಬ್ಬರೇ ಲೇಖಕರು ೨-೩ ಕತೆಗಳನ್ನೂ ಮೇಲಾಟಕ್ಕೆ ಕಳುಹಬಹುದು. ಆದರೆ, ಒಬ್ಬರೇ ಎಲ್ಲ ಬಹುಮಾನಗಳನ್ನು ಪಡೆಯಲಾರರು.

೫ ಮೇಲಾಟಕ್ಕಾಗಿ ಕತೆಗಳನ್ನು ಕಳುಹುವವರು ತಮ್ಮ **ಪ್ರತಿಯೊಂದು ಕತೆಗೆ ೮ ಆಣೆಯಂತೆ ಪ್ರವೇಶ ಧನವನ್ನು ಕಳುಹ. ಬೇಕು.** (ಅಂಚೆಯ ಟಿಕೀಟು, ನಗದು ಹಣ, ಪೋಸ್ಟಲ್ ಆರ್ಡರ್ ರೂಪದಲ್ಲಿ ಕಳುಹಬಹುದು.) ಪ್ರವೇಶಧನವಿಲ್ಲದೆ ಬಂದ ಕತೆ. ಗಳನ್ನು ಮೇಲಾಟದಲ್ಲಿ ಸೇರಿಸಿಕೊಳ್ಳುವುದಿಲ್ಲ.

೬ ಕತೆಯನ್ನು ಕಳುಹಬಹುದಾದ ಕೊನೆಯ ದಿನವೆಂದು ೧೯೫೪ನೆಯ ಫೇಬ್ರುವರಿ ಹದಿನೈದನೆಯ ತಾರೀಖು. ಮೇಲಾಟದಲ್ಲಿ ಮೇಲಿನ ಕ್ರಮಾಂಕ ಪಡೆದ ಕತೆಗಳನ್ನೆಲ್ಲ ಏಪ್ರಿಲ್ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

೭ ಬಹುಮಾನಕ್ಕೆ ತಕ್ಕ ಕತೆಗಳು ಬಾರದಿದ್ದಲ್ಲಿ, ಬಹುಮಾನ ಕೊಡದೆ ಇರುವುದಕ್ಕೂ ಬಂದವುಗಳಲ್ಲಿ ಒಳ್ಳೆಯವೆಂದು ತೋರಿದ ಕತೆಗಳಿಗೆ ತಕ್ಕ ಮನ್ನಣೆ ಸಲ್ಲಿಸಲಿಕ್ಕೂ ಜಯಂತಿಯ ಸಂಪಾದಕ ಮಂಡಲಿ ತನ್ನ ಕಡೆಗೆ ಕೊನೆಯ ಅಧಿಕಾರವನ್ನಿರಿಸಿಕೊಂಡಿದೆ.

ಕನ್ನಡ ಕತೆಗಾರರೆಲ್ಲ ಉತ್ಸಾಹದಿಂದ ಭಾಗವಹಿಸಬೇಕು.

ಸಂಪಾದಕರು ‘ಜಯಂತಿ’ ಧಾರವಾಡ

ಜಯಂತಿ

ಸಂಪುಟ ೯ ಸಂಚಿಕೆ ೧೦

ಕುಟುಂಬದಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕರು:
ಮತ್ತು
ಪ್ರಕಾಶಕರು:
ಶ್ರೀ. ಡಿ. ಕರಶ್‌ಕುಮಾರ

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಹಗಲುಗಳ್ಳರ ಹಿಂಡು

ಜನಸಮೂಹವು ನಾಗರಿಕ ಸಮಾಜವೆಂದು ಸಂಘಟನೆಗೊಂಡಾಗ, ಅದರಲ್ಲಿ ಕಳ್ಳ-ಸುಳ್ಳರ ಸಂಖ್ಯೆ ತೀರ ಕಡಿಮೆಯಾಗಿರಬೇಕಾಗುವುದು. ಕಳ್ಳ-ಸುಳ್ಳರ ಸಂಖ್ಯೆಯೆ ಹೆಚ್ಚಿದ ಸಮಾಜವು ಸಮಾಜವೆಂದೇ ಕರೆಯಿಸಿಕೊಳ್ಳಲಾರದು. ಸಮಾಜದ ಎಲ್ಲ ವ್ಯಕ್ತಿಗಳ ಸಾಮಾನ್ಯಸುಖವನ್ನು ಅನುಲಕ್ಷಿಸಿ, ಸಾಮಾಜಿಕ ನಿಯಮ-ನಿರ್ಬಂಧಗಳನ್ನು ನಿರ್ಮಿಸಲಾಗಿರುವುದು. ಪ್ರತಿಯೊಂದು ವ್ಯಕ್ತಿಯೂ ಆ ನಿಯಮ-ನಿರ್ಬಂಧಗಳಿಗೆ ತಲೆಬಾಗಿ ನಡೆದುಕೊಳ್ಳುತ್ತಿದ್ದರೆಯೆ, ಸಮಾಜದಲ್ಲಿ ಒಂದು ಶಿಸ್ತು ಉಳಿಯುವುದು. ಆ ಶಿಸ್ತು ಎಲ್ಲ ವ್ಯಕ್ತಿಗಳ ಸುಖ-ಸಮಾಧಾನಗಳಿಗೆ ಕಾರಣವಾಗುವುದು. ಇದನ್ನು ಬಿಟ್ಟು, ಪ್ರತಿಯೊಂದು ವ್ಯಕ್ತಿಯೂ ಸ್ವಾರ್ಥ-ಸ್ವಂತದ ಸುಖಗಳನ್ನು ಅಪೇಕ್ಷಿಸಿ, ಸಾಮಾಜಿಕ ನಿಯಮ-ನಿರ್ಬಂಧಗಳನ್ನು ದುರ್ಲಕ್ಷ್ಯಿಸಿ ನಡೆಯಲು ತೊಡಗಿದರೆ, ವ್ಯಕ್ತಿ-ವ್ಯಕ್ತಿಗಳಲ್ಲಿ ಘರ್ಷಣ ಪ್ರಾರಂಭವಾಗಿ, ಸಮಾಜವು ಅಸುಖ-ಅಸಮಾಧಾನಗಳಿಗೆ ಆಗರವಾಗಿ ನಿಲ್ಲುವುದು. ಒಬ್ಬರು ಇಬ್ಬರು ಕಳ್ಳರು ಸುಳ್ಳರು ತಲೆದೋರಿದಾಗ, ಬಲಿಷ್ಠವಾದ ಸಮಾಜವು ಶಿಕ್ಷೆ—ದಂಡಗಳಿಂದಲೋ, ಬಹಿಷ್ಕಾರದ ಬೆದರಿಕೆಯಿಂದಲೋ, ಅವರನ್ನು ಹಾದಿಗೆ ತರಬಹುದು. ಆದರೆ ಸಮಾಜದಲ್ಲಿಯ ಬಹುಸಂಖ್ಯಾಕ—ಅದರಲ್ಲಿಯೂ ಗಣ್ಯ ಸ್ಥಾನಗಳನ್ನು ಹಿಡಿದು ಕುಳಿತ—ವ್ಯಕ್ತಿಗಳು ಕಳ್ಳರಾಗಿ ಸುಳ್ಳರಾಗಿ ವರ್ತಿಸಲು ತೊಡಗಿದರೆ, ಅವರನ್ನು ದಂಡನೆಗೆ ಗುರಿಮಾಡುವವರಾರು? ಬಹಿಷ್ಕಾರವನ್ನು ಹಾಕುವವರಾರು? ಇನ್ನೂ ಒಂದು ಮೋಜಿನ ಸಂಗತಿಯೆಂದರೆ, ಹೀಗೆ ದಂಡಿಸುವ ಬಹಿಷ್ಕರಿಸುವ ಅಧಿಕಾರವುಳ್ಳ ವ್ಯಕ್ತಿಗಳೇ ಕಳ್ಳತನದ ಸುಳ್ಳುತನದ ವ್ಯವಹಾರ ನಡೆಯಿಸಿರುವುದು ಇಂದು ಬಹಳ ಕಡೆಗೆ ಕಂಡುಬರುತ್ತಲಿದೆ.

ಈಗ ಭಾರತದಲ್ಲಿ ಪ್ರಜಾಪ್ರಭುತ್ವ ರಾಜ್ಯಪದ್ಧತಿಯಿರುವುದರಿಂದ, ಭಾರತೀಯ ಸಮಾಜವು ತನ್ನೆಲ್ಲ ನೀತಿ-ನಿಯಂತ್ರಣಗಳನ್ನೂ ಸರಕಾರದ ಕಡೆಗೆ ಒಪ್ಪಿಸಿಕೊಟ್ಟಿದೆ. ಎಂತಲೇ ಸಮಾಜದ ಪ್ರತಿಯೊಂದು ವ್ಯಕ್ತಿಯ ಹುಟ್ಟಿನಿಂದ ಸಾಯುವರೆಗಿನ ಎಲ್ಲ ವ್ಯವಹಾರಗಳ ನಿಯಮ-ನಿಯಂತ್ರಗಳ ಭಾರವನ್ನು ಸರಕಾರವೇ ವಹಿಸಿಕೊಳ್ಳಬೇಕಾಗಿರುತ್ತದೆ. ಆಬುದರಿಂದ. ಸರಕಾರದ ವಿಧಾನಮಂಡಲಗಳು ಬಹುಜನರ ಬಹುಸುಖದ ಕಡೆಗೆ ಲಕ್ಷ್ಯವಿಟ್ಟು, ಆಡಳಿತದ ಶಾಸನಗಳನ್ನು ನಿರ್ಮಿಸುತ್ತವೆ. ಆದರೆ ಹೀಗೆ ಬಹುಜನರ ಬಹುಸುಖದ ದೃಷ್ಟಿಯಿಂದ ನಿರ್ಮಿತವಾದ ಶಾಸನಗಳು, ಕೆಲವೊಂದು ಅಲ್ಪಸಂಖ್ಯಾಕರ ಸ್ವಾರ್ಥಸಾಧಕ ವೃತ್ತಿಯ ಮೇಲೆ ಆಘಾತಗಳನ್ನು ಹಾಕುತ್ತವೆ. ಇಂತಹ ಶಾಸನಗಳಿಂದ ಕೆಲವು ಜನರ ಆರ್ಥಿಕಲಾಭದ ಮೇಲೆಯೂ ಗದೆ ಬರಬಹುದು. ನಿಜವಾದ ರಾಷ್ಟ್ರಹಿತದ ಬುದ್ಧಿಯವರು, ಈ ಬಗೆಯ ಶಾಸನಗಳನ್ನು ಪುರಸ್ಕರಿಸಿ ಅದರಂತೆ ನಡೆಯಬೇಕು; ನಡೆಯದೆ ಹೋದರೆ ಆಳುವ ಸರಕಾರಕ್ಕೂ ಸುಖ-ಸಮಾಧಾನವಿರದು; ರಾಷ್ಟ್ರದ ಜನತೆಗೂ ಸುಖ-ಸಮಾಧಾನವಿರದು.

ಇಂದು ದುಡಿಯುವ ರೈತರ ಮತ್ತು ಕೂಲಿಕಾರರ ಯೋಗಕ್ಷೇಮಕ್ಕಾಗಿ ಅಲ್ಲಲ್ಲಿಯ ವಿಧಾನಸಭೆಗಳು ಮಾಡಿರುವ ಕಾನೂನುಗಳಿಂದ, ಜಮೀನುದಾರರ ಮತ್ತು ಕಾರಖಾನೆಗಳ ಮಾಲಕರ ಹೆಚ್ಚಿನ ಹಿತಸಂಬಂಧಗಳಿಗೆ ಏಟುಬೀಳುವುದಾದರೂ, ಪಾಪ! ಅವರು ಸರಕಾರಕ್ಕೆ ಅಥವಾ ಸಮಾಜಕ್ಕೆ ವಿರೋಧಿಗಳಾಗಿ ನಿಲ್ಲುವ ಗೋಜಿಗೆ ಹೋಗಲಾರರು. ಇದ್ದುದರಲ್ಲಿಯೇ ಏನಾದರೂ ಸ್ವಹಿತ ಸಾಧಿಸಿಕೊಳ್ಳುವ ಉದ್ದೇಶದಿಂದ, ಶಾಸನಬದ್ಧ ಮಾರ್ಗದಿಂದಲೆ ಅವರು ತಮ್ಮ ಪ್ರಯತ್ನಗಳನ್ನು ನಡೆಯಿಸಬಹುದು. ಇದಕ್ಕೆ ಕಾರಣವೆಂದರೆ, ಇದುವರೆಗೆ ಅವರು ಬೆಳೆದುಕೊಂಡು ಬಂದ ರಾಜನಿಷ್ಠ ಸಂಸ್ಕೃತಿ. ಯಾವಾಗಲೂ ಆಡಳಿತವನ್ನು ಶ್ರದ್ಧೆಯಿಂದಲೆ ಕಾಣುವ ಸ್ವಭಾವ ಅವರದು. ಇನ್ನೂ ಒಂದುವೇಳೆ, ಅಧಿಕಾರಿಗಳನ್ನು ವಶಪಡಿಸಿಕೊಂಡು ಕಾರಖಾನೆಯ ಮಾಲಕರು, ಏನಾದರೂ ಹೆಚ್ಚಿನ ಸ್ವಲಾಭಗಳನ್ನು ಸಾಧಿಸಬಹುದು; ಆದರೆ

ಜಮೀನುದಾರರು ಏನೂ ಮಾಡಿಕೊಳ್ಳಲಾಗದ ನಿಷ್ಕ್ರಿಯವ್ಯಕ್ತಿಯವರು. ಅಲ್ಲದೆ ಅವರಿಂದು ಸುಳ್ಳುಗಾರರಾದರೂ ಯಾವ ಪ್ರಯೋಜನವೂ ಇಲ್ಲ; ಕಳ್ಳರಾದರೂ ಯಾವ ಪ್ರಯೋಜನವೂ ಇಲ್ಲ. ಸರಕಾರವು ಕೊಡೆಂದಷ್ಟು ಕರವನ್ನು ಅವರು ಕೊಡಲೇಬೇಕು; ಬಿಡೆಂದಷ್ಟು ರೈತರಿಗೆ ಜಮೀನಿನ ಉತ್ಪತ್ತಿಯನ್ನು ಬಿಡಲೇಬೇಕು.

ಕಾರಖಾನೆಯ ಮಾಲಕರು ಕಾಯಿದೆಗಳ ಕಡೆಗೆ ದೃಷ್ಟಿಯಿರಿಸಿ ಕೂಲಿಕಾರರಿಗೆ ಅನ್ಯಾಯವನ್ನೇನೂ ಮಾಡಲಾರರೆಂದರೂ, ವ್ಯಾಪಾರಿ ದೃಷ್ಟಿಯಿಂದ ವ್ಯವಹರಿಸುವಾಗ, ಅಧಿಕಾರಿಗಳ ಕಣ್ಣಿಗೆ ಇಂಗು ಹಚ್ಚಿಯೊ, ಲಂಚ-ರುಸುವತ್ತುಗಳಿಂದಲೊ, ನಾಡಿನ ಜನತೆಯನ್ನು ಸುಲಿಯುವ ಕಳ್ಳತನ ನಡೆಯಿಸಿರುವುದು ಬಹುಜನರ ಅನುಭವದ ಮಾತು. ಸರಕಾರವೂ ಇಂತಹ ಕೆಲವು ಪ್ರಕರಣಗಳನ್ನು, ಅನಿವಾರ್ಯವೆನಿಸಿ ಬಯಲಿಗೆ ಹಾಕಿದೆ.

ಆಡಳಿತದ ಅನೇಕಶಾಖೆಗಳಲ್ಲಿಯ ಹೆಚ್ಚು ಜನ ಅಧಿಕಾರಿಗಳ ಹೊಣೆಗೇಡಿತನದ ಕಾರಭಾರದ ಮೂಲಕವಾಗಿ, ನೌಕರವರ್ಗದ ಮುಕ್ಕಾಲು ಮೂರುವೀಸವಾಲು ಜನರು, ಇಂದು ಒಂದು ಬಗೆಯ ಕಳ್ಳತನ-ಸುಳ್ಳುತನಗಳನ್ನು ಅವಲಂಬಿಸಿಯೇ ಹೊರಟಿದ್ದಾರೆ. ಇವರೆಲ್ಲ ಸಮಾಜದಲ್ಲಿ ಕಳ್ಳರೆಂದು ಸುಳ್ಳರೆಂದು ಪರಿಗಣಿತರಾಗಿಲ್ಲವಾದರೂ, ಇವರು ಮಾಡುವ ಕಾಯಕಗಳನ್ನು ನೋಡಿದರೆ, ಯಾವ ನೀತಿಕಾರನೂ ಇವರನ್ನು ಹಗಲುಗಳ್ಳರ ಮಾಲಿಕೆಗೆ ಸೇರಿಸದಿರಲಾರನು. ಯಾವ ಕಾಯಿದೆ-ಕಾನೂನುಗಳೂ ಇವರನ್ನು ಶಿಕ್ಷಿಸಲಾರವು; ಸಮಾಜವು ಬಹಿಷ್ಕರಿಸಲಾರದು. ಆದರೆ ಈ ಹಗಲುಗಳ್ಳರಿಂದ ನಾಡಿನ ಜನತೆಗೆ ಆಗುತ್ತಿರುವ ಅನ್ಯಾಯ-ಧನನಷ್ಟಗಳು ಅಷ್ಟಿಷ್ಟೆಂದು ಹೇಳಲು ಬರುವಂತಿಲ್ಲ. ಹೀಗಿರುವಾಗ, ಜನತೆಯಲ್ಲಿ ಸುಖ-ಶಾಂತಿಗಳು ನೆಲಸಬೇಕೆಂದರೆ ಹೇಗೆ ನೆಲಸಬೇಕು?

ಇಂದು ಎಲ್ಲರಿಗಿಂತ ಹೆಚ್ಚಿನ ಹಗಲುಗಳ್ಳತನವನ್ನು ನಡೆಯಿಸಿರುವವರೆಂದರೆ ಅನೇಕ ಜನ ವ್ಯಾಪಾರಸ್ಥರು. ಇವರಿಗೆ ಸ್ವಂತದ ಲಾಭದ ಮುಂದೆ ರಾಷ್ಟ್ರನಿಷ್ಠೆಯ ಬೆಲೆಯೂ ಇಲ್ಲ; ಸ್ವಜನಹಿತದ ಬೆಲೆಯೂ ಇಲ್ಲ. ಅಂತಲೇ ಇವರು ಭಾರತಕ್ಕೆ ಬೇಡವಾದ ನೆರೆರಾಷ್ಟ್ರಗಳೊಂದಿಗೂ ಕಳ್ಳವ್ಯಾಪಾರವನ್ನು ನಡೆಯಿಸಿರುವರು. ಹತ್ತಾರು ಬಗೆಯ ಮೋಸದ ಹಂಚಿಕೆಗಳನ್ನು ಹಾಕಿ, ಇಲ್ಲಿಂದ ಕಳಿಸಬಾರದ ಮಾಲುಗಳನ್ನು ಅಲ್ಲಿಗೆ ಕಳಿಸಿ, ಅಲ್ಲಿಂದ ತರಬಾರದಾಗಿದ್ದ ಮಾಲುಗಳನ್ನು ಭಾರತದ ಪೇಟೆಗೆ ಕಳ್ಳತನದಿಂದ ತಂದು, ಲಕ್ಷಲಕ್ಷ-ಕೋಟಿ-ಕೋಟಿಗಟ್ಟಲೆ ಲಾಭವನ್ನು ಹೊಡೆಯುತ್ತಲಿರುವರು. ಇಂತಹ ಹಗಲುಗಳ್ಳರೇ ನಮ್ಮ ನಾಡಿನ ಪೇಟೆಗಳಲ್ಲಿ ತುಂಬಿ, ಸಂಭಾವಿತರಾ ಮೆರೆಯುತ್ತಿರುವರು. ಇಂತಹ ಧೂರ್ತರೇ ಅನೇಕ ಕಡೆಗೆ ವರ್ತಕ ಸಂಸ್ಥೆಗಳಲ್ಲಿ ಅಧಿಕಾರಸ್ಥಾನಗಳನ್ನು ಪಡೆದವರಾಗಿರುವರು. ಇವರು ಸರಕಾರ ಕಣ್ಣಿಗೂ ಸಮಾಜದ ಕಣ್ಣಿಗೂ ಮಂಕುಬೂದಿಯನ್ನು ತೂ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಿರುವರು. ನಿಜವಾದ ಕಳ್ಳರನ್ನು ಹಿಡಿಯುವುದಕ್ಕಿಂತ ನಮ್ಮ ಪೋಲೀಸರು, ಇಂತಹ ಸಂಭಾವಿತ ಹಗಲುಗಳ್ಳರನ್ನು ಕಂಡು ಹಿಡಿಯುವುದಕ್ಕಾಗಿಯೇ ಈಗ ಹೆಚ್ಚಾಗಿ ಶ್ರಮಿಸಬೇಕಾಗಿದೆ. ಪರರಾಷ್ಟ್ರದಿಂದ ಬಂದು ರಾಷ್ಟ್ರದ್ರೋಹದ ಕಾರ್ಯ ಮಾಡುವ ವಿರೋಧಿಗಳನ್ನು ಹಿಡಿಯಬೇಕಾಗಿಲ್ಲ ನಮ್ಮ ಪೋಲೀಸರು; ಸ್ವರಾಷ್ಟ್ರದಲ್ಲಿಯೇ ಇದ್ದು ಸ್ವಾರ್ಥಕ್ಕಾಗಿ ರಾಷ್ಟ್ರದ್ರೋಹದ ಕೆಲಸ ನಡೆಯಿಸಿರುವ ಸ್ವಜನರನ್ನೇ ಹಿಡಿದು ಹಿಡಿದು ಸೆರೆಮನೆಗೆ ಹಾಕಬೇಕಾಗಿದೆ. ಭಾರತೀಯರ ರಾಷ್ಟ್ರನಿಷ್ಠೆಗೆ ಕೊಳಿಯನ್ನೆ ತೊಡೆಯುತ್ತಲಿದ್ದಾ ಈ ಹಗಲುಗಳ್ಳರು!

ಇದೆಲ್ಲವನ್ನೂ ವಿಚಾರಮಾಡಿ ನೋಡಿದಾಗ, ಭಾರತದಲ್ಲಿಂದ ಹಗಲುಗಳ್ಳರ ಹಿಂಡು ಮೂಲೆ-ಮೂಲೆಯಲ್ಲಿಯೂ ಹಬ್ಬಿದೆಯೆಂದ ಹೇಳಬಹುದು. ಸದ್ಯದ ಆರ್ಥಿಕ ಬಿಕ್ಕಟ್ಟಿನ ಕಾಲದಲ್ಲಿ ಅವ ಕಾಯಕವೇ ಎಲ್ಲರಿಗೂ ಆದರ್ಶವೆನಿಸಿದರೆ, ಅದರಲ್ಲಿ ಆಶ್ಚರ್ಯಪಡ ಬೇಕಾದುದೇನೂ ಇಲ್ಲ. ಎಲ್ಲರೂ ಈ ಆದರ್ಶದಿಂದ ಹೊರಟರೆ ಭಾರತರಾಷ್ಟ್ರವು ಉದ್ಧಾರವಾದಂತೆಯೇ ಸರಿ!

ಜಯಂತಿಯು

ಸಣ್ಣಕತೆಗಳ ಮೇಲಾಟದ ಅವಧಿಯನ್ನು ಹೆಚ್ಚಿಸಿತು!

ಕೊಟ್ಟ ಅವಧಿಯಲ್ಲಿ ಬಹುಜನರಿಂದ ಕತೆಗಳು ಮೇಲಾಟಕೆ ಬರಲಿಲ್ಲವಾದುದರಿಂದಲೂ, ಅನೇಕ ಜನರು ಅವಧಿಯನ್ನು ಹೆಚ್ಚಿಸಲು ಕೇಳಿದುದರಿಂದಲೂ, ಮೇಲಾಟಕ್ಕೆ ಕತೆಕಳುಹುವ ಅವಧಿಯನ್ನು ೧೯೫೮ ಏಪ್ರಿಲ್ ೩೦ನೆಯ ತಾರೀಖಿನ ವರೆಗೆ ಮುಂದುವರಿಸಲಾಗಿದೆ. ಕನ್ನಡ ಕತೆಗಾರರು ಇದರ ಪ್ರಯೋಜನವನ್ನು ಪಡೆದುಕೊಳ್ಳಬೇಕು.

—ಸಂಪಾದಕರ

ಬೇಗನೆ ಜಯಂತಿಯ ೧೭ನೆಯ ವರ್ಷವು ಪ್ರಾರಂಭವಾಗುವುದು!

ಹೊಸ ವರ್ಷಕ್ಕಾಗಿ ಚಂದಾದಾರರಾಗಲಪೇಕ್ಷಿಸುವವರು

ಕೂಡಲೆ ಪತ್ರಬರೆಯಿರಿ!

ನಾಡನಡೆ

ಬಳ್ಳಾರಿ ನಗರದಲ್ಲಿ ಆಂಧ್ರರ ಕಿಡಿಗೇಡಿತನ

ಭಾಷೆಯ ವಿಷಯಕವಾದ ಅನೇಕ ಅಗ್ನಿಪರೀಕ್ಷೆಗಳಲ್ಲಿ ಉತ್ತೀರ್ಣಹೊಂದಿ, ಬಳ್ಳಾರಿ ತಾಲ್ಲೂಕು ಕನ್ನಡಿಗರದೆಂದು ನಿರ್ಣಯ ಹೊಂದಿ ನಿಂತಿದ್ದರೂ, ಬಳ್ಳಾರಿನಗರದಲ್ಲಿಯ ಕೆಲವು ಜನ ತೆಲುಗು ಮಾತನಾಡುವ ಕಿಡಿಗೇಡಿಗಳು, ಎಡೆಬಿಡದೆ ಏನೇನೋ ತಮ್ಮ ಹಟಕತನವನ್ನು ನಡೆಯಿಸಿದ್ದಾರೆ. ಹೊರಗಿನ ಆಂಧ್ರ ಮುಂದಾಳು-ಗಳ ಪ್ರೋತ್ಸಾಹವು ಇದಕ್ಕೆ ಮುಖ್ಯಕಾರಣ. ಅವರ ಪ್ರೋತ್ಸಾಹ-ವಿಲ್ಲದೆ ಹೋಗಿದ್ದರೆ ಬಳ್ಳಾರಿಯಲ್ಲಿಯ ಈ ಮುಷ್ಟಿ ತುಂಬ ಆಂಧ್ರ-ರವರು ಇಷ್ಟೊಂದು ಗಟ್ಟಿಮುಟ್ಟಾಗಿ ನಿಂತು ಚಳವಳಿ ನಡೆಯಸು-ವುದು ಸಾಧ್ಯವೇ ಇರಲಿಲ್ಲ.

ಪಾಕಿಸ್ತಾನಿಗಳಿಗೆ ಕಾಶ್ಮೀರದ ಮೇಲೆ ಕಣ್ಣು ಇರುವಂತೆ, ಆಂಧ್ರರಿಗೆ ಬಳ್ಳಾರಿನಗರದ ಮೇಲೆ ಕಣ್ಣು ಇದೆ. ಈ ಅವರ ದುರಾಶೆಯು ತಾವೂ, ಕನ್ನಡಿಗರೂ ಒಕ್ಕೂಟಭಾರತದ ಪ್ರಜೆಗಳೆಂಬ ಭಾವನೆಯನ್ನೇ ಮರೆಯಿಸಿಬಿಟ್ಟಿದೆ. ಪಾಕಿಸ್ತಾನದ ಹಲವು ಜನ ಮುಸಲ್ಮಾನರು ಭಾರತೀಯರನ್ನು ಕಾಣುವಂತಹ ಮತ್ಸರದ ದೃಷ್ಟಿ-ಯಿಂದಲೇ ಆಂಧ್ರರು ಕನ್ನಡಿಗರನ್ನು ಕಾಣುತ್ತಲಿದ್ದಾರೆ. ಎಂತಲೇ ಕರ್ನಾಟಕದ ನಗರವಾದ ಬಳ್ಳಾರಿಯಲ್ಲಿರುವ ಕೆಲವೇ ಜನ ಆಂಧ್ರರೂ ಕನ್ನಡಿಗರನ್ನು ವಿರೋಧಿಸುತ್ತ ತಮ್ಮ ಜೀವನವನ್ನು ನಡೆಯಿಸಿದ್ದಾರೆ. ಭವಿಷ್ಯದಲ್ಲಿ ಇದು ತಮ್ಮ ಅಸ್ತಿತ್ವಕ್ಕೇ ಮುಳ್ಳಾಗಿ ನಿಂತೀತೆಂಬ ಎಚ್ಚ-ರವೂ, ಮತ್ಸರಾಂಧರಾದ ಆಂಧ್ರರಲ್ಲೀಗ ಉಳಿದಂತೆ ಕಾಣುವುದಿಲ್ಲ

ಆಂಧ್ರ ಅಧಿಕಾರಿಗಳ ಪ್ರಭಾವದಲ್ಲಿ ಸಂಘಟಿತವಾಗಿ ಇದು ವರೆಗೂ ಉಳಿದುಕೊಂಡು ಬಂದಿರುವ ಬಳ್ಳಾರಿನಗರ ಸಭೆಯ ಸದಸ್ಯ-ರಲ್ಲಿಯ ಬಹುಜನರು, ಆಂಧ್ರದ ಮೋಹಕ್ಕೆ ಒಳಗಾದವರಿರುವರು. ಇಂದು ಬಳ್ಳಾರಿಯಲ್ಲಿ ಆಂಧ್ರರ ಕೈವಾಡವು ಮಿಕ್ಕ ಕಡೆಗಳಲ್ಲಿ ಎಲ್ಲಿಯೂ ನಡೆಯದೆ ಇದ್ದರೂ, ನಗರ ಸಭೆಯೊಂದರಲ್ಲಿ ಮಾತ್ರ ನಡೆಯುತ್ತಲಿದೆ. ಇದುದರಿಂದಲೇ ಆ ಕ್ಷೇತ್ರದಲ್ಲಿ ಕನ್ನಡಿಗರ ಮನಸ್ಸನ್ನು ಕೆರಳಿಸು-ವಂತಹ ಹಲವು ಬಗೆಯ ಚಟುವಟಿಕೆಗಳನ್ನು ಅವರು ನಡೆಯಿಸಿದ್ದಾರೆ. ಕನ್ನಡಿಗರನ್ನು ವಿರೋಧಿಸುವ ಭರದಲ್ಲಿ, ತಮ್ಮ ಮೇಲೆ ಸದ್ಯ ಆಡಳಿತ ನಡೆಯಿಸುತ್ತಿರುವ ಮೈಸೂರು ಸರಕಾರವನ್ನೂ ಬಾಯಿಗೆ ಬಂದಂತೆ ತೆಗಳುತ್ತಲಿದ್ದಾರೆ. ಇದೆಲ್ಲಕ್ಕೂ ಮೂಲಕಾರಣವೆಂದರೆ ಹೊರಗಿನ ಆಂಧ್ರ ರಾಜಕಾರಣಿಗಳು ಆಡಿಸುತ್ತಿರುವ ಅಂತಃಸೂತ್ರ. ನಿಜವಾಗಿ ನೋಡಿದರೆ, ಭಾರತದ ಪ್ರಜೇಗಳೇ ಆಗಿರುವ ನಮ್ಮ-ನಮ್ಮಲ್ಲಿ, ಆಕ್ರಮಣಭಾವದಿಂದ ನಡೆಯಿಸುವ ಘರ್ಷಣೆಗಳು ಇದು ವರೆಗೂ ಸಾಗುವುವೆಂದರೆ, ಇದೊಂದು ದುರ್ದೈವದ ಸಂಗತಿಯೇ ಆಗಿದೆ. ರಾಷ್ಟ್ರದ ಸುಸಂಘಟನೆಯ ದೃಷ್ಟಿಯಿಂದ ನೋಡಿದರೂ ಈ ವಿಷಯವು ಅಪಕಾರಿಯೇ ಆಗಿದೆ.

ಆಂಧ್ರದ ಹಿರಿಯರಿಗೂ ವಿವೇಕವಿಲ್ಲ !

ಭಾರತ ರಾಷ್ಟ್ರೀಯ ಮಹಾಸಭೆಯೂ ಕೇಂದ್ರ ಸರಕಾರವೂ ಈ ರಾಷ್ಟ್ರವಿಘಾತಕ ಚಟುವಟಿಕೆಗಳ ಕಡೆಗೆ ದುರ್ಲಕ್ಷ್ಯಿಸಿ ನಡೆಯು-ವುದು ಸ್ವಲ್ಪವೂ ಒಳ್ಳೆಯದಲ್ಲ. ಆಂಧ್ರ-ಕನ್ನಡಿಗರ ಈ ಬಡಿದಾಟವು ಮಿಕ್ಕಪ್ರಾಂತೀಯರಿಗೆ ಹೊರಗಿನ ಬಡಿದಾಟವಾಗಿ ತೋರಬಾರದು. ಈ ಬಡಿದಾಟದಿಂದ ಆಂಧ್ರರ ಮತ್ತು ಕನ್ನಡಿಗರ ಶಕ್ತಿ-ಸತ್ತ್ವಗಳು ಕುಂಠಿತವಾದರೆ, ಭಾರತರಾಷ್ಟ್ರದ ಮಹಾಶಕ್ತಿಯೇ ಕುಂಠಿತವಾಗು-ವುದೆಂಬುದರ ಕಡೆಗೆ ಸಂಪೂರ್ಣ ಲಕ್ಷ್ಯವಿಡಬೇಕು

ನಿಜವಾಗಿ ನೋಡಿದರೆ, ಬಳ್ಳಾರಿಯಲ್ಲೀಗ ಆಂಧ್ರದ ಗುಲ್ಲು ಎಬ್ಬಿಸುತ್ತಿರುವ ಯಾವ ವ್ಯಕ್ತಿಯೂ ಗಟ್ಟಿಗಾಳಾಗಿ ಉಳಿಯುವಂತಹ-ದಲ್ಲ. ಆಂಧ್ರಮುಂದಾಳುಗಳ ಪ್ರಚೋದನೆಯಿಲ್ಲದೆ ಹೋಗಿದ್ದರೆ, ಇಷ್ಟರಲ್ಲಿಯೆ ಇವರೆಲ್ಲರೂ ಕನ್ನಡಿಗರೊಂದಿಗೆ ಹದಿನಾರಾಣೆ ಕನ್ನಡಿಗ-ರಾಗಿ, ಕರ್ನಾಟಕದ ರಾಜಕಾರಣದಲ್ಲಿ ಭಾಗವಹಿಸಬಹುದಾಗಿತ್ತು. ಅಲ್ಲದೆ ಬಳ್ಳಾರಿಯಂತಹ ಕನ್ನಡನಗರದಲ್ಲಿದ್ದು, ತಾವು ಈ ಬಗೆಯ ವಿದ್ರೋಹ ನಡೆಸುತ್ತಿರುವುದರ ಬಗೆಗೆ ಒಳಮಿಡುಕು ಅವರಲ್ಲಿ ಇಲ್ಲದೆ ಇಲ್ಲ. ಆದರೆ ಆಂಧ್ರದ ಮುಂದಾಳುಗಳಿಗೆ, ಬರಲಿರುವ ಪ್ರಾಂತ್ಯ-ವಿಭಜನಾ ಆಯೋಗದ ಎದುರು, ಬಳ್ಳಾರಿಯು ಆಂಧ್ರರದೇ ಎಂಬ ಮಾತನ್ನು ಮಂಡಿಸಿ ಸಾಧಿಸಬೇಕಾಗಿದೆ. ಅದಕ್ಕಾಗಿಯೇ ಅವರು ಈ ಚದುರಂಗದಾಟವನ್ನು ನಡೆಯಿಸಿ, ತಮ್ಮ ಕೈಗಾಯಿ-ಗಳನ್ನು ಮುಂದೆ ಸರಿಸುವ ಕೆಲಸ ನಡೆಯಿಸಿದ್ದಾರೆ. ಈ ಆಂಧ್ರ-ಮುಂದಾಳುಗಳಲ್ಲಿ ವಿವೇಕವೇನಾದರೂ ಇದ್ದರೆ, ಈ ಪರಾಕ್ರಮಣ ವೃತ್ತಿಯ ಅನ್ಯಾಯದ ಕಾರ್ಯಕ್ಕೆ ಮುಂದುವರಿಯುತ್ತಿರಲಿಲ್ಲ. ಆದರೆ ಎಂದಿನಿಂದಲೂ ಬಂದ ಬಳ್ಳಾರಿಯ ಚಳವಳಿಯ ಕತೆಯನ್ನು ನೋಡಬಹುದು. ಬಳ್ಳಾರಿಯ ಮಾತು ಬಂದಾಗಲೆಲ್ಲ ಆಂಧ್ರದ ಎಂತೆಂತಹ ಹಿರಿಯರೂ ತಮ್ಮ ವಿವೇಕವಿಚಾರವನ್ನು ಮರೆತು ನಡೆಯುತ್ತಾರೆಂಬುದು ಕಂಡುಬರುವುದು. ಬಳ್ಳಾರಿ ಆಂಧ್ರರಿಗೆಲ್ಲ ಆದೇಕೆ ಇಷ್ಟೊಂದು ಹುಚ್ಚು ಹಿಡಿಸಿದೆಯೋ ತಿಳಿಯದು. ಆದರೆ ಆಂಧ್ರರು ಇಷ್ಟೊಂದು ಮಾತನ್ನು ಲಕ್ಷ್ಯದಲ್ಲಿರಿಸಬೇಕು : ಕನ್ನಡಿಗರು ಅವಿವೇಕಿಗಳಲ್ಲ; ವಿವೇಕಿಗಳಾದರೂ ಕರ್ತೃತ್ವಹೀನರಲ್ಲ. ಅವರಿಗೆ ಇನ್ನೊಬ್ಬರದಾದ ಒಂದು ಅಂಗುಲ ಭೂಮಿ ಬೇಕಾಗಿಲ್ಲವಾದರೂ, ತಮ್ಮದೇ ಆಗಿರುವ ಬಳ್ಳಾರಿಯಂತಹ ಕನ್ನಡ ಸಂಸ್ಕೃತಿಯ ಕೇಂದ್ರ-ವನ್ನು ಎಂದೂ ಕಳೆದುಕೊಳ್ಳರು. ಕನ್ನಡಿಗರಿಗೆ ಚದುರಂಗದಾಟ-ವಾಡಬೇಕಾಗಿಲ್ಲ. ಅವರ ದಾರಿ ಸರಳವಾದುದು. ಬಳ್ಳಾರಿ ನಗರ ತ್ರಿಕಾಲದಲ್ಲಿಯೂ ಕನ್ನಡಿಗರದು! ಅದನ್ನವರು ಎಂದೂ ಬಿಟ್ಟು ಕೊಡಲಾರರು.

ಕೂಡಿಬಾಳುವುದು ಆಟವಾಗಬಾರದು !

ಮೈಸೂರಿನ ಮುಖ್ಯಮಂತ್ರಿ ಮಾನ್ಯ ಕೆ. ಹನುಮಂತಯ್ಯನವರು ಉತ್ತರ ಕರ್ನಾಟಕದ ನಗರಗಳನ್ನು ನೋಡಿಕೊಂಡು ಹೋದಾಗ,

[illegible]

[illegible]

[illegible]

ಜಗತ್ತು ಉಳಿಯಿತು

"....ನಾನು ನಿನಗಿಂತ ಕೊಂಚ ದೊಡ್ಡವನಿದ್ದಾಗ, ಎಷ್ಟೋ ಡ್ರೈವರುಗಳು ನನಗೆ ತಲೆಬಾಗುತ್ತಿದ್ದುದುಂಟು. ಆದರೆ ಇಷ್ಟೆಲ್ಲ ನಿನ್ನ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಿಯೂ ಕೂಡ ಮೋಟಾರು ನಡೆಸುವದಕ್ಕಿಂತ ಹೆಚ್ಚಿನದು ನಿನಗೆ— ನನ್ನ ಮಗನಿಗೆ— ಪ್ರಾಪ್ತಿಯಿಲ್ಲ. ಜೀವಮಾನವೆಲ್ಲ ಅದೇ ಉದ್ಯೋಗ ನಿನಗೆ!"

ಪಶ್ಚಾತ್ತಾಪದ ಮೂರ್ತಿಯೇಬಂತೆ ಜಿಮ್ಮಿ ತಂದೆಯ ಮುಂದೆ ನಿಂತಿದ್ದರೂ, ನಿಜವಾಗಿ ನೋಡಿದಲ್ಲಿ ತಂದೆಯ ಮಾತುಗಳಿಂದ ಅವನಲ್ಲಿ ಉಂಟಾಗಿದ್ದ ಪ್ರತಿಕ್ರಿಯೆ ಬೇರೆಯೇ ಆಗಿತ್ತು.

ಮಾನವರಲ್ಲಿ ಒಬ್ಬೊಬ್ಬರಿಗೆ ಒಂದೊಂದು ಬಗೆಯ ಆಶೆ-ಆಕಾಂಕ್ಷೆಗಳಿರುತ್ತವೆ. ಲಂಡನ್ನಿನ ಬೀದಿಗಳಲ್ಲಿ ಬಸ್ಸು ನಡೆಸಬೇಕೆಂಬ ಆಶೆಯು ಬೇರೆಲ್ಲದಕ್ಕಿಂತ ಹೆಚ್ಚಾಗಿ ಮೊದಲಿನಿಂದಲೂ ಜಿಮ್ಮಿಯ ಮನಸ್ಸನ್ನು ಸೆರೆಹಿಡಿದಿತ್ತು. ಹಾಗಿರಲು ತಂದೆಯ ಮಾತುಗಳಿಂದ ಅವನಿಗೆ ಒಳಗೊಳಗೇ ಆನಂದವಾಯಿತು. ಆದರೆ ಆ ಆನಂದವನ್ನು ವ್ಯಕ್ತಪಡಿಸಲುಂಟೆ! ಜಿಮ್ಮಿ ಅದನ್ನು ಮರೆಸಿಡಲು ಸಾಧ್ಯವಾದಷ್ಟು ಯತ್ನಿಸಿದನು.

x x x x x

ಕೊನೆಗೂ ಆತ ಬಸ್ ಡ್ರೈವರೇ ಆದನು. ಲಂಡನ್ನಿನ ಸ್ಟ್ರಾಂಡಿನಿಂದ ಹೊರಟು ಬಲಕ್ಕೆ ತಿರುಗಿ, ನಗರದ ಅಂಚಿನಲ್ಲಿರುವ ಕಾಡಿನ ತನಕ ಹೋಗಿ ಬರುತ್ತದಲ್ಲ— ಆ ಬಸ್ಸನ್ನು ನಡೆಸುವವನು ಜಿಮ್ಮಿ.

೨

ಜಿಮ್ಮಿಯ ವಿಚಾರ ಹಾಗಿರಲಿ. ಇನ್ನು ಜಿಮ್ಮಿಯ ತಂದೆ ಪ್ರಸ್ತಾಪಿಸಿದ್ದರಲ್ಲ— ಆ ಆಲ್ಫ್ರೆಡ್— ಆಲ್ಫ್ರೆಡ್ ಆರ್ನಾಲ್ಡ್— ಅವನ ಕುರಿತು ಹೇಳುತ್ತೇನೆ. ಆಲ್ಫ್ರೆಡ್ ನಿಜವಾಗಿಯೂ ಒಳ್ಳೆಯ ಉದ್ಯೋಗಶೀಲ ಪ್ರವೃತ್ತಿಯವನು. ಜಿಮ್ಮಿಯ ತಂದೆ ಹೇಳಿದಂತೆ ಅವನು ಜೀವನದಲ್ಲಿ ತುಂಬ ಸಾಧಿಸಿದ್ದಾನೆ. ಆಲ್ಫ್ರೆಡ್‌ನ ವಿಚಾರ ನಾನು ಹೆಚ್ಚು ಹೇಳುವುದಿಲ್ಲ. ಅವನು ಲಂಡನ್ನಿನ ಬೀದಿಯೊಂದರಲ್ಲಿ ನಡೆದು ಬರುತ್ತಿದ್ದಾನೆ. ಅವನ ತಲೆಯಲ್ಲಿ ಮೂಡಿಬರುತ್ತಿದ್ದ ಯೋಚನಾತರಂಗಗಳ ಸಮಾಚಾರ ಕೇಳಿ:

ಆಲ್ಫ್ರೆಡ್ ಬೀದಿಯಲ್ಲಿ ನಡೆಯುತ್ತಿದ್ದಾನೆ. ನೂರಾರು ಮಂದಿ ಅವನನ್ನು ಹಾದು ಹೋಗುತ್ತಿದ್ದಾರೆ. ಯಾರೊಬ್ಬರಿಗೂ ಅವನ ಗೊಡವೆಯೇ ಇಲ್ಲವೋ ಎಂಬಂತೆ ಮುಂದೆ ಸಾಗುತ್ತಿದ್ದಾರೆ. ಇನ್ನೂ ನಲವತ್ತರ ವಯಸ್ಸನ್ನು ಮುಟ್ಟಿರದ ಈ ವಿಜ್ಞಾನಿಯೋ, ಅಮೋಘವಾದ ವಸ್ತುವಿಶೇಷವೊಂದನ್ನು ಕಂಡು ಹಿಡಿದಿದ್ದಾನೆ. ಅದರ ಮಹತ್ತ್ವದ ಅರಿವು ಅವನಿಗೆ ಮಾತ್ರವೇ ಇದೆ. ಅವನ ಸಂಶೋಧನೆಯ ಕುರಿತು ಜನರೇನು ಬಲ್ಲರು? ತನ್ನಲ್ಲಿರುವ ಮಹಾ ಶಕ್ತಿಯನ್ನು ನೆನೆಸಿಕೊಂಡ ಆಲ್ಫ್ರೆಡ್‌ನಿಗೆ, ಜನರು ತನ್ನನ್ನು ಸ್ವಲ್ಪವೂ ಗಮನಿಸದೆ ಹಾದು ಹೋಗುವುದನ್ನು ಕಂಡು ಒಳಗೊಳಗೇ ನಗು ಉಕ್ಕಿ ಬಂತು. ಇರುವೆಗಳ ಸಾಲಿನ ಮೇಲೆ ಬೂಟಿನ ಕಾಲು ಹಾದು ಹೋಗುವ ರೀತಿಯಲ್ಲಿ, ತಾನು ಈ ಜನಗಳ ನಡುವೆ ನಡೆಯುತ್ತಿ[ರು]ವಂತೆ ಅವನಿಗೆ ಭಾಸವಾಯಿತು.

ಆಲ್ಫ್ರೆಡ್ ಕೊಂಚ ಜಂಬಗಾರನೆಂಬುದು ನಿಜ; ಆದ[ರೆ] ಅವನು ತನ್ನ ಸಾಮರ್ಥ್ಯದ ಕುರಿತು ಅಷ್ಟೊಂದು ಹೆಮ್ಮೆಪಟ್ಟುಕೊಂ[ಡು] ತನ್ನೊಳಗೆ ಆಡಿಕೊಂಡಿದ್ದರಲ್ಲಿ ಅತಿಶಯೋಕ್ತಿಯೇನಿರಲಿಲ್ಲ. ಮಾ[ತ್ರ]ವಲ್ಲ; ಅತಿಶಯೋಕ್ತಿಗೆ ಅಲ್ಲಿ ಎಡೆಯೇ ಇರಲಿಲ್ಲ. ತನ್ನ ಹೊ[ಸ] ಸಂಶೋಧನೆಯ ಕುರಿತು ಅವನಿಗೆ ತೀರ ಭರವಸೆಯಿತ್ತು. [...] ಸಂಶೋಧನೆಯ ಸೂತ್ರವನ್ನ ಅವನಿನ್ನೂ ಬರೆದಿಟ್ಟಿರಲಿಲ್ಲವಾದ್ದರ[ಿಂದ] ಅವನ ಚಿತ್ತಭಿತ್ತಿಯಲ್ಲಿ ಅದು ಪರಿಪೂರ್ಣವಾಗಿ ಅಚ್ಚೊತ್ತಿ ನಿಂತಿತ್ತು.

ವಿಜ್ಞಾನ ಮುಂದುವರಿಯುತ್ತಲೇ ಇರುತ್ತದೆ. ಒಬ[...] ರಾಯನ ಕಾಲದ ತುಪಾಕಿಗಳಿಗಿಂತ ೧೯೪೦ ರ ಬಾಂಬುಗಳ[ು] ಭಯಂಕರವಾಗಿರಲಿಲ್ಲವೇ? ನಾಗಾಸಾಕಿ, ಹಿರೋಷಿಮಗಳನ್ನು ಧ್ವಂ[ಸ] ಮಾಡಿದುವುಗಳು ಅವುಗಳಿಗಿಂತಲೂ ಭೀಕರವಾಗಿರಲಿಲ್ಲವೇ? ಆ[...] ರೇನು! ಆಲ್ಫ್ರೆಡ್ ಕಂಡು ಹಿಡಿದ ಸ್ಫೋಟಕ ವಸ್ತು ವಿಶೇಷದೊಡ[ನೆ] ಹೋಲಿಸಿದರೆ, ಆ ಬಾಂಬುಗಳೆಲ್ಲ ಮಕ್ಕಳ ಆಟಿಕೆಗಳೇ ಸರಿ. ಅಂತ[ಹ] ಭಯಂಕರವಾದ ವಸ್ತು ಆಲ್ಫ್ರೆಡ್‌ನದು. ಅದರ ಮೂಲಸೂತ್ರವನ್[ನು] ಅವನು ಬರೆದೇನಾದರೂ ಇಟ್ಟನೋ, ಮಾನವವರ್ಗಕ್ಕೆ ಒಂದ[ು] ನಿರುಪಮವಾದ ಅಸ್ತ್ರ ದೊರೆತಂತೆಯೇ ಸರಿ. ಆಮೇಲೆ ಯಾರಾದರ[ೂ] ಅದನ್ನು ಉಪಯೋಗಿಸಬಹುದು. ಯಾರು ಬೇಕಾದರೂ ಅದನ್[ನು] ಉಪಯೋಗಿಸಿಕೊಳ್ಳಲಿ; ಆಲ್ಫ್ರೆಡ್‌ನಿಗೆ ಅದರ ಗೊಡವೆಯಿಲ್ಲ[...] ಅವನ ಲಕ್ಷ್ಯವೆಲ್ಲ ವೈಜ್ಞಾನಿಕ ಪ್ರಗತಿಯ ಕಡೆಗೆ—ತಾನು ಏನನ್[ನು] ಸಾಧಿಸಬಲ್ಲನೆಂಬುದರ ಕಡೆಗೆ.

ಆಲ್ಫ್ರೆಡ್ ನಡೆಯುತ್ತಲೇ ಇದ್ದಾನೆ. ಅವನ ಮನಸ್ಸಿನಲ್[ಲಿ] ಹೀಗೆ ಯೋಚನೆಗಳು ಅಲೆ-ಅಲೆಯಾಗಿ ಬರುತ್ತಿವೆ. ಅವನು ಮತ್ತೊಮ್[ಮೆ] ಎಣಿಸಿಕೊಂಡ: "ಈ ಜನರಿಗೆ ನನ್ನ ಕಡೆಗೆ ಲಕ್ಷ್ಯವೇ ಇಲ್ಲವಲ್ಲ! ಆದ[ರೆ] ನಾನು ಮನಸ್ಸು ಮಾಡಿದರೆ ಈ ಜನಸಮೂಹವನ್ನೆಲ್ಲ.........!"

ಆಲ್ಫ್ರೆಡ್ ಈ ಮಹಾಸ್ತ್ರದ ಸೂತ್ರವನ್ನು ಪ್ರಕಟಗೊಳಿಸುವ[ು]ದ ತಡ; ಎರಡು ಬಣಗಳವರೂ (ಅವು ಯಾವುವೇ ಇರಲಿ) ಅದನ್[ನು] ಬಳಸಿಕೊಳ್ಳುತ್ತಾರೆ. ಮುಂದೇನು........? ಜಗತ್ತಿನಲ್ಲಿ ಒಂದ[ೇ] ಒಂದು ನಾಡು ಉಳಿಯಲಾರದು. ಮಹಾನಗರಗಳೆಲ್ಲ ಹೇ[ಳ] ಹೆಸರಿಲ್ಲವಾದಾವು. ಎಣಿಸಿಕೊಂಡಂತೆಲ್ಲ ಆಲ್ಫ್ರೆಡ್‌ನಿಗೆ ತನ್ನಲ್ಲಿರು[ವ] ಮಹಾಶಕ್ತಿಯು ಸರಿಸಾಟಿಯಿಲ್ಲದ್ದೆನಿಸಿತು. ಯಾವ ಚಕ್ರಾಧಿಪತಿಗ[ೂ] ಅಂತಹ ಅನುಭವ ಉಂಟಾಗಿರಲಾರದು. ತೈಮೂರ, ಚಂಗಿಸ ಖಾನ್, ಹಿಟ್ಲರ್ — ಹೀಗೆ ತಮ್ಮ ವಿನಾಶಕ ಸಾಮರ್ಥ್ಯದಿ[ಂದ] ಜಗತ್ತನ್ನು ಹಿಡಿತದಲ್ಲಿಟ್ಟುಕೊಳ್ಳಲು ಹವಣಿಸಿದವರು ಹಲವರ[ು]. ಆದರೆ ಅಂಥವರಿಗೆಲ್ಲ ಮರುಮರೀಚಿಕೆಯಾಗಿ ಪರಿಣಮಿಸಿದುದ[ು] ತನಗೆ ಸಿದ್ಧಿಯಾಗಿದೆ. ತನ್ನ ಸಾಧನವೋ ಅವರೆಲ್ಲರ ಕನಸುಗಳಂತೆ[...] ತನ್ನ ಈ ಹೊಸಬಾಂಬು ಯಶಸ್ವಿಯಾಗುವುದರಲ್ಲಿ ಸಂದೇಹವಿಲ[್ಲ] ತನ್ನ ವೈಜ್ಞಾನಿಕ ಪರಿಶ್ರಮವಾದರೂ ಎಂತಹದು!

ಇನ್ನು ಮುಂದೆ ಪ್ರಪಂಚದ ಯಾವ ನಗರವೂ ಸುರಕ್ಷಿತವಲ್ಲ. ಭೂಮಿಯ ಮೇಲೆ ಏನೊಂದನ್ನೂ ಕಟ್ಟಲು ಯಾರಿಗೂ ಧೈರ್ಯ ಬಾರದು. ಎಲ್ಲವೂ ನನ್ನಿಂದಾಗಿ. ಯಾವ ಮಿದುಳಿಗೆ ಇಂತಹ ಒಂದು ಮಹಾಯೋಚನೆ ಹೊಳೆಯಿತು? ರಾಜಕೀಯದಲ್ಲಿ, ಸಾಹಿತ್ಯ ರಂಗದಲ್ಲಿ, ನಾಟಕರಂಗದಲ್ಲಿ ಮಹಾಸಾಧನೆಗಳನ್ನು ನಡೆಸಿದವರಿರಬಹುದು: 'ಆದರೆ ಇಂತಹ ಅದ್ಭುತ ಶಕ್ತಿ ಯಾರಿಗೆ ಸಿದ್ಧಿಯಾಯಿತು? ಜಗತ್ಪ್ರಳಯವನ್ನುಂಟು ಮಾಡುವ ಶಕ್ತಿ!

" ಈ ಬೀದಿಗಳೆಲ್ಲ ಇಲ್ಲವಾದಾವು. ನಗರಗಳು ನೆಲಸಮವಾದಾವು. ನದಿಗಳೆಲ್ಲ ಉಕ್ಕಿ ಹರಿದಾವು. ಅಥವಾ ಬತ್ತಿಯೇ ಹೋದಾವು. ಕಡಲಿನ ಇಳಿತ-ಭರತಗಳು ಹಿಂದುಮುಂದಾದಾವು. ಕೊನೆಗೆ ಚಂದ್ರಗ್ರಹದ ಮೇಲೆ ಕೂಡ ತನ್ನ ಮಹಾಸ್ತ್ರದ ಪರಿಣಾಮ ಉಂಟಾಗದೆ ಇರದು. ಆಲ್ಫ್ರೆಡ್ ಆರ್ನಾಲ್ಡ್! ಗೋಲ-ಗೋಲಗಳ ಮೇಲೆ ತನ್ನ ಪ್ರಭಾವವನ್ನು ಬೀರಬಲ್ಲ. ಆದರೂ ....ಆದರೂ.... ಸದ್ಯ ಯಾರೊಬ್ಬನಿಗಾದರೂ ನನ್ನ ನಿಜ ಸಾಮರ್ಥ್ಯದ ಅರಿವಿದೆಯೇ? ಒಬ್ಬ ನರಜಂತು—ಎಲ್ಲರಂತೆಯೇ—ಅಂತ ತಿಳಿದಿದ್ದಾರೆ. ನನ್ನಲ್ಲಿ ಇರುವ ಈ ರುದ್ರಶಕ್ತಿಯ ಅರಿವು ಈ ಜನರಿಗೆ ಕನಸಿನಲ್ಲಾದರೂ ಇದೆಯೇ? ಮಿಡತೆಗಳು ಪಾಪ! ಗಜರಾಜನ ಕುರಿತು ಅವುಗಳೇನು ಬಲ್ಲವು?

" .... ಸರಿ. ಮನೆ ಸೇರಿದೊಡನೆ, ಈ ದಿನ ನನ್ನ ಮಹಾಸೂತ್ರವನ್ನು ಬರೆದಿಡುತ್ತೇನೆ. ಆದರೆ ನಾನು ಬದುಕಿರುವವರೆಗೆ ಈ ಸಂಶೋಧನೆಯ ರಹಸ್ಯವನ್ನು ಯಾರಿಗೂ ಬಿಟ್ಟುಕೊಡಲಾಗದು. ಹಾಗೆಯೇನಾದರೂ ಬಿಟ್ಟುಕೊಟ್ಟರೆ, ನನ್ನ ಸಂಶೋಧನೆ ನನ್ನಳಿವಿಗೇ ಕಾರಣವಾದಂತಾಗುವುದಿಲ್ಲವೆ? ಅದನ್ನು ಉಪಯೋಗಿಸಿದಾಗ ಸಕಲ ಪ್ರಪಂಚವೂ ಮಾಯವಾಗುವುದೆನ್ನುವಾಗ ನನ್ನ ಉಳಿವೆಲ್ಲಿ? ಆಗ ಏನು ಫಲಿಸಿದಂತಾಯಿತು? ನನ್ನ ಇತರ ಸಂಶೋಧನೆಗಳಿಗಾಗಿ ಬರುವ ಗೌರವವನ್ನು ಹೊಂದುವ ಮಾತೆಲ್ಲಿ ಉಳಿಯಿತು? "

ಹೀಗೆ, ಆಲ್ಫ್ರೆಡ್‌ನ ಯೋಚನಾತರಂಗಗಳಿಗೆ ಕೊನೆಯಿಲ್ಲ.

ಅವನಿಗೆ ಬಹುಕಾಲ ತಾನು ಬಾಳಬೇಕೆಂಬ ಆಸೆ. ಈ ತನಕ ತಾನು ಬೇರೆ ಏನೆಲ್ಲ ಸಾಧಿಸಿರುವುದಿದೆಯೋ, ಅದಕ್ಕೆ ದೊರೆಯುವಷ್ಟು ಮಾನ್ಯತೆ ದೊರೆಯಲಿ. ಅದೇನು ಅಷ್ಟು ಮಹತ್ತ್ವದ್ದಲ್ಲದಿರಬಹುದು. ಆದರೂ ಚಿಂತೆಯಿಲ್ಲ. ಸಮಗ್ರ ಜಗತ್ತು ತನ್ನ ಸಂಶೋಧನೆಯ ಹಿಡಿತದಲ್ಲಿದೆ ಎಂಬ ಅರಿವೊಂದೇ ಸಾಲದೆ? ತಾನು ಸಾಯುವಾಗ ಅಥವಾ ಅದಕ್ಕೆ ಸ್ವಲ್ಪ ಮೊದಲು, ತನ್ನ ಸಂಶೋಧನೆಯನ್ನು ಪ್ರಕಟಿಸುವುದು. ಆಗ ತಾನು ಮರೆಯಾಗುವುದರ ಜತೆಗೆ ಜಗತ್ತೂ ಲಯಹೊಂದುತ್ತದೆ....!

" .... ಹಾ .... ಎಂಥ ಪರಿಸ್ಥಿತಿಯದು! ಕಲ್ಪನಾತೀತವಾದದ್ದು. ಅತಿ ಭೀಕರವಾದ ವಿಚಾರ. ಆಗ ಉಂಟಾಗುವ ಬದಲಾವಣೆಯನ್ನು ಎಣಿಸುವಂತಿಲ್ಲ. ಆದರೆ, ಅದಕ್ಕೆಲ್ಲ ಕಾರಣನಾರು? ಆಲ್ಫ್ರೆಡ್ ಆರ್ನಾಲ್ಡ್!

ದಾರಿ ಸಾಗುತ್ತಲೇ ಇತ್ತು. ಆಲ್ಫ್ರೆಡ್ ಸ್ಟ್ರಾಂಡ್ ದಾಟಬಂದಿದ್ದ. ಅವನ ತಲೆ ತಗ್ಗಿತ್ತು. ವಿನಯದಿಂದಲ್ಲ. ಯೋಚನೆಗಳ ಭಾರದಿಂದ. ಮತ್ತೆ ಮತ್ತೆ ಅದೇ ಯೋಚನೆ " ಚಂದ್ರಲೋಕದ ಪಾಡು....... ಆಲ್ಫ್ರೆಡ್ ಆರ್ನಾಲ್ಡ್.... ಪ್ರಳಯಕಾರಿ. "

ಜಿಮ್ಮಿ ಟ್ಯಾಬಿಟ್‌ನನ್ನು ನೀವು ಮರೆತಿಲ್ಲ ತಾನೆ? ಬಸ್ ಡ್ರೈವರ್ ಜಿಮ್ಮಿ ಟ್ಯಾಬಿಟ್! ಆಲ್ಫ್ರೆಡ್ ಹೀಗೆ ಹೋಗುತ್ತಿದ್ದಾಗ ಜಿಮ್ಮಿ, ತನ್ನ ಬಸ್ ನಡೆಯಿಸಿಕೊಂಡು ಅದೇ ದಾರಿಯಾಗಿ ಬಂದನು.

ಇಬ್ಬರದೂ ಕೊಂಚ ಅಜಾಗ್ರತೆಯೆನ್ನಿ. ಡ್ರೈವರನೇನೋ ತಪ್ಪಿತಸ್ಥನಲ್ಲವೆನಿಸಿಕೊಂಡ. ಆಲ್ಫ್ರೆಡ್‌ನ ಅಜಾಗ್ರತೆಯೆಲ್ಲ ಅವನ ಮಹಾಯೋಚನೆಗಳಿಂದಾಗಿ. ಆದ್ದರಿಂದ ಅದು ಕ್ಷಮ್ಯ. ಇತ್ತ ಜಿಮ್ಮಿ ಏನಾದರೂ ಅಜಾಗ್ರತೆ ತೋರಿಸಿದ್ದರೆ ಅದಕ್ಕೂ ಕಾರಣವಿತ್ತು. ಜಗತ್ತನ್ನೆ ತಾನು ಉಳಿಸುವೆನೆಂದು ಅವನೊಮ್ಮೆ ಕನಸು ಕಂಡಿರಲಿಲ್ಲವೆ? ಸದಾಕಾಲವೂ ಆ ಕನಸಿನದೇ ಯೋಚನೆ ಜಿಮ್ಮಿಯ ತಲೆಯಲ್ಲಿ. ಆ ಕನಸನ್ನು ವಿಧಿಯೇ ಅವನಿಗೆ ಕಳುಹಿಸಿದ್ದಿರಬೇಕು.

ಅದೇನೇ ಇರಲಿ; ಜಿಮ್ಮಿಯ ಕನಸು ನನಸಾಯಿತು. ಜಗತ್ತು ಉಳಿಯಿತು!

ನೃತ್ಯ ಭಾರತಿ

ನೃತ್ಯ, ಸಂಗೀತ, ಇನ್ನಿತರ ಲಲಿತಕಲೆಗಳಿಗೆ ಮೀಸಲಾದ

ಕನ್ನಡದ ಒಂದೇ ಒಂದಾದ ತ್ರೈಮಾಸಿಕ.

ಭಾರತೀಯ ನೃತ್ಯಕಲಾಕೇಂದ್ರದ ಮುಖಪತ್ರ.

ಸಂಪಾದಕರು :

ನಾಟ್ಯಾಚಾರ್ಯ **ಕುಲಕರ್ಣಿ ಶ್ರೀನಿವಾಸ** ಬಿ. ಎ.

ಮೊದಲನೆಯ ಸಂಚಿಕೆ ೨೬-೧-೫೪ ರಂದು ಪ್ರಕಟವಾಗಿದೆ.

ಚಂದಾ: ಅಂಚೆವೆಚ್ಚ ಸೇರಿ ೫-೦-೦

ವಿವರಗಳಿಗೆ :

ನೃತ್ಯಭಾರತೀ ಕಾರ್ಯಾಲಯ

ಗುರುಕುಲ, **ಹಾಂಸಭಾಂವಿ**

(ಜಿಲ್ಹಾ ಧಾರವಾಡ)

★ ಪ್ರೊ. ಬೀರಬಲ್ ಸಹಾನಿಯವರು ★

(೧೮೯೧—೧೯೪೯)

(ವ್ಯಕ್ತಿ ಪರಿಚಯ)

ಶ್ರೀ. ವೆಂಕೋಬಾಚಾರ್ಯ ಉಪಾಧ್ಯಾಯ ಎಂ. ಎಸ್ಸಿ. ಹೈದರಾಬಾದ್

◆

ಸ್ತರವಿವರಣೆಯ ಸಮಸ್ಯೆಗಳ ಸಹಾಯಕ್ಕಾಗಿ ' ಪ್ಲಾಂಟ್ ಫಾಸಿಲ್ 'ಗಳನ್ನು ಉಪಯೋಗ ಮಾಡಿಕೊಂಡಿರುವುದು ಸಹಾನಿಯವರ ಅಮೂಲ್ಯ ಕಾಣಿಕೆಗಳಲ್ಲಿ ಒಂದಾಗಿದೆ.

●

ಬೀರಬಲ್ ಸಹಾನಿಯವರು ಪಶ್ಚಿಮಪಂಜಾಬಿನಲ್ಲಿರುವ ಷಾಹಪೂರು ಜಿಲ್ಲೆಗೆ ಸಂಬಂಧಪಟ್ಟ ಭೇರಾ (Bhera) ಎಂಬ ಊರಿನಲ್ಲಿ ೧೮೯೧ನೆಯ ನವೆಂಬರ್ ೧೪ನೆಯ ದಿನ ಜನ್ಮತಾಳಿದರು. ಇವರ ಊರು ಪಂಜಾಬಿನ ಅನೇಕ ಪ್ರಸಿದ್ಧ ಮನೆತನಗಳ ತವರುಮನೆ ಆಗಿತ್ತು. ಸಹಾನಿ ಮನೆತನದವರು ಭೇರಾದಲ್ಲಿ ಪ್ರಮುಖ ವ್ಯಾಪಾರಸ್ಥ-ರಾಗಿದ್ದರು. ಡೇರಾ ಇಸ್ಮಾಯಿಲ್ ಖಾನಿನಲ್ಲಿ ಅವರ ಅಜ್ಜಂದಿರಾದ ಲಾಲಾಕರಮ್‌ಚಂದ್ ಸಹಾನಿಯವರು ಬ್ಯಾಂಕಿನ ರೂಪದ ಒಂದು ಕೊಡುಕೊಳ್ಳುವ ವ್ಯವಹಾರವನ್ನು ನಡೆಸುತ್ತಿದ್ದರು. ಈ ವ್ಯವಹಾರ ಒಳ್ಳೆಯ ಏಳಿಗೆಯಲ್ಲಿತ್ತು. ಕೇವಲ ಮನೋರಂಜನೆಗಾಗಿ ರಸವಾದ-ದಲ್ಲಿ ಪ್ರಯೋಗಗಳನ್ನು ನಡೆಸುವುದು ಲಾಲಾಕರಮ್‌ಚಂದರ ಒಂದು ಹವ್ಯಾಸವಾಗಿತ್ತು. ಈ ಪ್ರಯೋಗಗಳನ್ನು ಲಾಲಾ ಅವರು ತಮ್ಮ ಒಬ್ಬ ಮುಸಲ್ಮಾನ ಗೆಳೆಯರೊಡನೆ ನಡೆಸುತ್ತಿದ್ದರು. ಬೀರಬಲ್ ಅವರ ತಂದೆ ಲಾಲಾರುಚಿರಾಮ್ ಅವರು ಲಾಹೋರಿನ ಗೌರ್ನ-ಮೆಂಟ್ ಕಾಲೇಜಿನಲ್ಲಿ ರಸಾಯನ ಶಾಸ್ತ್ರದ ಮುಖ್ಯ ಪ್ರಧ್ಯಾಪಕ-ರಾಗಿದ್ದರು. ಇವರ ತಾಯಿಯ ಹೆಸರು ಶ್ರೀಮತಿ ಈಶ್ವರೀದೇವಿ. ಲಾಲಾರುಚಿರಾಮ್ ಅವರು ತಮ್ಮ ಪ್ರಾಂತದ ಸುಶಿಕ್ಷಿತ ಮಂಡಲ-ಗಳಲ್ಲಿ ಗಣ್ಯ ವ್ಯಕ್ತಿಗಳಾಗಿದ್ದರು; ದೊಡ್ಡ ವಿದ್ವಾಂಸರಾಗಿದ್ದರು ಮತ್ತು ಸಮಾಜ ಸುಧಾರಣೆಯ ಕ್ಷೇತ್ರದಲ್ಲಿ ಅಗ್ರಗಣ್ಯರಾಗಿದ್ದರು.

ಬೀರಬಲ್ ಸಹಾನಿಯವರು ತಮ್ಮ ಪ್ರಥಮ ಶಿಕ್ಷಣವನ್ನು ಮನೆಯಲ್ಲಿಯೆ ತಮ್ಮ ತಂದೆಯವರ ನೇತೃತ್ವದಲ್ಲಿ ಪಡೆದರು. ಚಿಕ್ಕಂದಿನಿಂದಲೇ ಅವರ ಒಲವು ನಿಸರ್ಗದ ಕಡೆಗೆ ಹೆಚ್ಚಾಗಿತ್ತು. ಯಾತ್ರೆ ಮತ್ತು ಪ್ರವಾಸವೆಂದರೆ ಇವರಿಗೆ ತುಂಬ ಅಭಿರುಚಿ. ಬೇರೆ ಬೇರೆ ವನಸ್ಪತಿಗಳು, ಎಲೆಗಳು, ಸಿಂಪುಗಳು, ಗಾರೆಗಲ್ಲು ಮತ್ತು ಖನಿಜಪದಾರ್ಥಗಳನ್ನು ಶೋಧಿಸುವ, ಸಂಗ್ರಹಿಸುವ ಮತ್ತು ಅವು-ಗಳ ಸಂಬಂಧವಾಗಿ ಅಭ್ಯಾಸ ಮಾಡುವ ವೃತ್ತಿ ಅವರಲ್ಲಿ ಚಿಕ್ಕಂದಿ-ನಿಂದಲೂ ಇತ್ತು. ಇವರ ತಂದೆಯವರು ಮಗನ ಈ ವೃತ್ತಿಯನ್ನು ತಿಳಿದುಕೊಂಡು ಅದೇ ಶಿಕ್ಷಣದ ಕಡೆಗೆ ಹೆಚ್ಚು ಉತ್ತೇಜನವನ್ನು ಕೊಟ್ಟರು. ಅದರ ಪರಿಣಾಮವಾಗಿ ಇವರು ತಮ್ಮ ಅಭಿರುಚಿಯ ವಿಜ್ಞಾನ ಕ್ಷೇತ್ರದಲ್ಲಿ ಪ್ರವೀಣರೂ, ಸಮ್ಯದ್ ಜ್ಞಾನ ಸಂಪನ್ನರೂ ಆದರು.

ಲಾಲಾರುಚಿರಾಮ್ ಅವರು ಪ್ರೊ. ಸಹಾನಿಯವರನ್ನು ರಜೆಯ ದಿನಗಳಲ್ಲಿ ಹಿಮಾಲಯದ ಕಡೆಗೆ ತಿರುಗಾಡಲು ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿ ಸಿಕ್ಕಿದ ವೇಳೆಯಲ್ಲಿ ಸಹಾನಿಯವರು ತಮ್ಮ ಅಚ್ಚುಮೆಚ್ಚಿನ ಆಟ, ವಿನೋದಗಳಲ್ಲಿ ಎಂದರೆ— ಪುರಾತನ ವಸ್ತು ಸಂಶೋಧನೆ, ವನಸ್ಪತಿ, ಶಂಖ, ಸಿಂಪು ಮುಂತಾದವುಗಳ ಸಂಗ್ರಹಣ-ಕಾರ್ಯ ಮತ್ತು ಅಭ್ಯಾಸ, ಇವುಗಳಲ್ಲಿ ತಲ್ಲೀನರಾಗಿ ಬಿಡುತ್ತಿದ್ದರು. ಚಿಕ್ಕಂದಿನಿಂದಲೂ ಅವರಲ್ಲಿ ಬಂದ ಈ ವೃತ್ತಿ ಕ್ರಮಕ್ರಮವಾಗಿ ಬೆಳೆಯುತ್ತ ಹೋಗಿ ಕೊನೆಯಲ್ಲಿ ಅದು ಇವರ ಸ್ವಭಾವವಾಗಿ ಹೋಯಿತು.

ಲಾಹೋರಿನ ಸೆಂಟ್ರಲ್‌ಮಾಡಲ್‌ಸ್ಕೂಲಿನಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿದ ಅನಂತರ ಪ್ರೊ. ಸಹಾನಿಯವರು ಗೌರ್ನಮೆಂಟ ಕಾಲೇಜನ್ನು ಸೇರಿದರು. ಅಲ್ಲಿ ಅವರು ಭಾರತದ ಸುಪ್ರಸಿದ್ಧ ಸಸ್ಯಶಾಸ್ತ್ರಜ್ಞರಾದ ಪ್ರೊ. ಕಾಶ್ಯಪ ಅವರ ನೇತೃತ್ವದಲ್ಲಿ ಸಸ್ಯಶಾಸ್ತ್ರವನ್ನು ಅಭ್ಯಾಸ ಮಾಡಿದರು. ೧೯೧೧ರಲ್ಲಿ ಪಂಜಾಬ್ ವಿಶ್ವವಿದ್ಯಾನಿಲಯದಿಂದ ಬಿ. ಎಸ್ಸಿ. ಪದವಿಯನ್ನು ತೆಗೆದುಕೊಂಡು, ಅದೇ ವರ್ಷ ಇಂಗ್ಲೆಂಡಿಗೆ ಪ್ರಯಾಣಬೆಳೆಸಿ, ಕೇಂಬ್ರಿಜಿನ ಎಮಾನ್ಯು-ಯಲ್ ಕಾಲೇಜಿನಲ್ಲಿ (Emmanuel college) ಪ್ರವೇಶವನ್ನು ಪಡೆದರು. ಅಲ್ಲಿ ಅವರು ಪ್ರಾಕೃತಿಕ ವಿಜ್ಞಾನದಲ್ಲಿ ಆನರ್ಸ್ ಪದವಿ-ಯನ್ನು ಸಂಪಾದಿಸಿ, ಸರ್. ಎ. ಸಿ. ಸಿವಾರ್ಡ್ (Sir. A, C. Seward) ಅವರ ನೇತೃತ್ವದಲ್ಲಿ ಮೊದಲನೆಯ ಯುದ್ಧ ಮುಗಿಯುವ ವರೆಗೆ ಸಂಶೋಧಕರಾಗಿ ಕೆಲಸ ಮಾಡಿದರು. ಅನೇಕ ಸಂಶೋಧನೆ-ಗಳನ್ನು ನಡೆಸಿ Sudbury Hardyman ಪಾರಿತೋಷಕವನ್ನು

ಪಡೆದರು. ಈ ಅವಧಿಯಲ್ಲಿ ಅವರು ಮ್ಯೂನಿಕ್ (Munich) ನಲ್ಲಿ ಪ್ರೊ. ಕೆ. ಗೋಬೆಲ್ ಅವರ ನೇತೃತ್ವದಲ್ಲಿ ಆರು ತಿಂಗಳ ಶಿಕ್ಷಣವನ್ನು ಕೈಕೊಂಡು ಲಂಡನ್ ವಿಶ್ವವಿದ್ಯಾನಿಲಯದಿಂದ ಬಿ.ಎಸ್.ಸಿ. ಪದವಿಯನ್ನು ಪಡೆದರು. ಆ ಮುಂದೆ ಪ್ರೊ. ಸಿವಾರ್ಡ್ ಅವರ ನೇತೃತ್ವದಲ್ಲಿಯೇ ತಮ್ಮ ಸಂಶೋಧನೆಯನ್ನು ಮುಂದುವರಿಸುತ್ತ ೧೯೧೯ರಲ್ಲಿ ಲಂಡನ್ ವಿಶ್ವವಿದ್ಯಾನಿಲಯದಿಂದ ಡಿ. ಎಸ್‌ಸಿ. ಪದವಿಯನ್ನು ಸಂಪಾದಿಸಿದರು.

೧೯೧೯ರಲ್ಲಿ ಭಾರತಕ್ಕೆ ಮರಳಿ ಬಂದ ಮೇಲೆ ಸಹಾನಿಯವರು ಒಂದು ವರ್ಷದ ವರೆಗೆ ಬನಾರಸ್ ಮತ್ತು ಪಂಜಾಬ್ ವಿಶ್ವವಿದ್ಯಾನಿಲಯಗಳಲ್ಲಿ ಸಸ್ಯಶಾಸ್ತ್ರದ ಮುಖ್ಯಪ್ರಾಧ್ಯಾಪಕರಾಗಿ ಕೆಲಸಮಾಡಿದರು. ೧೯೨೦ರಲ್ಲಿ ಸಹಾನಿಯವರ ವಿವಾಹವು ಪಂಜಾಬಿನ ಶಾಲೆಗಳ ಇನ್ಸ್‌ಪೆಕ್ಟರ್ ಆಗಿದ್ದ ಶ್ರೀ. ಸುಂದರ್‌ದಾಸ ಸೂರಿಯವರ ಸುಪುತ್ರಿ ಸಾವಿತ್ರಿಸೂರಿ ಅವರೊಡನೆ ಜರಗಿತು. ೧೯೨೧ರಲ್ಲಿ ಅವರು ಲಖನೊ ವಿಶ್ವವಿದ್ಯಾನಿಲಯದಲ್ಲಿ ಸಸ್ಯಶಾಸ್ತ್ರದ ಮುಖ್ಯ ಪ್ರಾಧ್ಯಾಪಕರಾಗಿ ನೇಮಿಸಲ್ಪಟ್ಟರು. ೧೯೩೩ರಲ್ಲಿ ಸೈನ್ಸ್ ಫ್ಯಾಕಲ್ಟಿಯ "ಡೀನ" ಎಂದು ಆರಿಸಲ್ಪಟ್ಟರು. ಇವೆರಡೂ ಕಾರ್ಯಗಳನ್ನು ಅವರು ಕೊನೆಯವರೆಗೂ ವಹಿಸಿಕೊಂಡು ಬಂದರು.

ಲಖನೊ ವಿಶ್ವವಿದ್ಯಾನಿಲಯದಲ್ಲಿ ಸಹಾನಿಯವರು ಕೈಕೊಂಡ ಪ್ರಯೋಗಗಳ ಮೂಲಕ, ಅವರ ಕೀರ್ತಿ ಭಾರತದ ಮೂಲೆ ಮೂಲೆಗೂ ಹಬ್ಬಿತು. ಪ್ರಯೋಗ ಶಾಲೆಯಲ್ಲಿ ಅವರು ಹಗಲು ರಾತ್ರಿ ಕೆಲಸ ಮಾಡುತ್ತಿದ್ದರು. ರಾತ್ರಿ ಊಟ ಮುಗಿಸಿಕೊಂಡು ಪ್ರಯೋಗ ಶಾಲೆಗೆ ಬಂದರೆಂದರೆ ಪುನಃ ಬೆಳಗು ಮುಂಜಾನೆ ಮನೆಗೆ ಹೋಗುತ್ತಿದ್ದುದು ನಿತ್ಯದ ರೂಢಿಯಾಗಿತ್ತು. ಇಂಥ ಪ್ರಸಂಗಗಳಲ್ಲಿ ಅವರ ಧರ್ಮಪತ್ನಿಯವರು ಫಾಸಿಲುಗಳನ್ನು ಕತ್ತರಿಸುವಲ್ಲಿ ಮತ್ತು ಉಜ್ಜುವುದರಲ್ಲಿ, ಚಿತ್ರಗಳನ್ನು ಚಿತ್ರಿಸುವಲ್ಲಿ ಮತ್ತು ಫೊಟೊಗ್ರಫಿಯ ಕೆಲಸಗಳಲ್ಲಿ ಅವರಿಗೆ ಸಹಾಯವಾಗುತ್ತಿದ್ದರು.

೧೯೨೦—೧೯೩೮ರ ವರೆಗಿನ ಬೇಸಿಗೆಯ ರಜೆಗಳಲ್ಲಿ ಅವರು ವಿರಾಮ ತೆಗೆದುಕೊಳ್ಳದೆ ಎಲ್ಲ ರಜೆಯ ದಿನಗಳನ್ನು ಜಿಯಲಾಜಿಕಲ್ ಸರ್ವೆ ಆಫ್ ಇಂಡಿಯದ ಫಾಸಿಲ್ ಸಸ್ಯಗಳ ವಿಷಯವನ್ನು ಅಭ್ಯಾಸ ಮಾಡುವುದರಲ್ಲಿ ಕಳೆದರು. ತಾವು ಕೆಲಸ ಮಾಡುತ್ತಿದ್ದಂತೆ ತಮ್ಮ ವಿದ್ಯಾರ್ಥಿಗಳೂ ಸಹೋದ್ಯೋಗಿಗಳೂ ಕೆಲಸ ಮಾಡಬೇಕೆಂದು ಅವರು ಅಪೇಕ್ಷಿಸುತ್ತಿದ್ದರು. ಜೂನಿಯರ್ ವಿದ್ಯಾರ್ಥಿಗಳ ಕಡೆಗೆ ಅವರು ಹೆಚ್ಚು ಲಕ್ಷ್ಯಕೊಡುತ್ತಿದ್ದರು. ಪೋಸ್ಟ್ ಗ್ರ್ಯಾಜುಏಟ್ ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಕೆಲಸ ಮಾಡಬೇಕೆಂದು ಅವರ ಬಲವಾದ ಅಪೇಕ್ಷೆ. ಇಂಥ ವಿದ್ಯಾರ್ಥಿಗಳು ಕೇವಲ ಪುಸ್ತಕದ ಜ್ಞಾನವನ್ನು ಸಂಪಾದಿಸದೆ ಮಹತ್ವದ ಶಾಸ್ತ್ರಶುದ್ಧ ಸಂಶೋಧನೆಗಳನ್ನು ಮತ್ತು ಪ್ರಯೋಗಗಳನ್ನು ಮಾಡಬೇಕೆಂದು ಅವರು ಆಗಾಗ ಹೇಳುತ್ತಿದ್ದರು.

ಅವರು ಪೆಲಿಯೊಬಾಟನಿಸ್ಟ್ (Palaeobotanist) ಆದರೂ ಅವರ ಪ್ರಾಥಮಿಕ ಅಭ್ಯಾಸವು ಸಸ್ಯಗಳ ಜೀವನಕ್ಕೆ ಸಂಬಂಧಪಟ್ಟುದು. ೧೯೧೫—೧೯೪೭ರ ವರೆಗಿನ ದೀರ್ಘಕಾಲದಲ್ಲಿ ಅವರು ಸಸ್ಯಶಾಸ್ತ್ರದ ಮೇಲೆ ಪ್ರಸಿದ್ಧ ಮತ್ತು ಪರಿಣಾಮಕಾರಕ ಲೇಖನಗಳನ್ನು ಪ್ರಕಟಿಸಿದರು. ೧೯೧೯ರಲ್ಲಿ ಕೇಂಬ್ರಿಜನಲ್ಲಿ ಇದ್ದಾಗ, ಅವರು ಭಾರತದ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಲಾಸನ್ (Lawson) ಅವರ "ಸಸ್ಯಶಾಸ್ತ್ರ" ಪುಸ್ತಕದ ಪರಿಷ್ಕೃತ ಆವೃತ್ತಿಯನ್ನು ತಯಾರಿಸಿದರು.

ಭಾರತದಲ್ಲಿನ ಫಾಸಿಲ್ ಸಸ್ಯಗಳ ಅಭ್ಯಾಸ ಮತ್ತು ಬೆಳವಣಿಗೆಗೆ ಪ್ರೊ. ಸಹಾನಿಯವರೇ ಮೂಲಕಾರಣರಾಗಿದ್ದಾರೆ. ಪ್ರೊ. ಸಿವಾರ್ಡ್ ಅವರ ವಿದ್ಯಾರ್ಥಿಯಾಗಿದ್ದು ಕೆಲಸಮಾಡುತ್ತಿದ್ದಾಗ, ಅವರು ಇಂಡಿಯನ್ ಗೊಂಡವಾನಾ ಸಸ್ಯಕ್ಕೆ (Indian Gondwana Plants) ಸಂಬಂಧಿಸಿದ ಅನೇಕ ಸಂಶೋಧನೆಗಳನ್ನು ನಡೆಸಿದರು. ಇವು ೧೯೨೦ರಲ್ಲಿ "Palaeontologia Indica" ದಲ್ಲಿ ಪ್ರಕಟವಾದುವು. ಇದೇ ಪತ್ರಿಕೆಯಲ್ಲಿ ೧೯೨೮—೧೯೩೧ರಲ್ಲಿ ಇಂಡಿಯನ್ ಫಾಸಿಲಿನ ಮೇಲೆ ಸಹಾನಿಯವರು ಮಾಡಿದ ಸಂಶೋಧನೆಗಳು ಪ್ರಕಟವಾದುವು. ೧೯೧೮—೧೯೪೯ರ ವರೆಗಿನ ಅವಧಿಯಲ್ಲಿ ಸಹಾನಿಯವರು ಫಾಸಿಲ್ ಬಾಟನಿ ಸಂಬಂಧಪಟ್ಟ ಅನೇಕ ಲೇಖನಗಳನ್ನು ಪ್ರಕಟಿಸಿದರು. ಫಾಸಿಲ್ ಬಾಟನಿ (Fossil botany) ಯಲ್ಲಿ ಹೆಚ್ಚು ಸಂಶೋಧನೆಗಳು ಆಗುವಂತೆ ೧೯೩೯ರಲ್ಲಿ ತಮ್ಮ ಸಂಪಾದಕತ್ವದಲ್ಲಿ "Palaeo botany in India" ಎಂಬ ಸಂಶೋಧನಾ ಪತ್ರಿಕೆಯನ್ನು ಪ್ರಕಟಿಸಲು ಪ್ರಾರಂಭಿಸಿದರು.

ಬಿಹಾರಿನ ರಾಜಮಹಲ್ ದಿನ್ನಿಗಳು, The deccan Intertrappean Series, ಮತ್ತು ಪಂಜಾಬಿನ ಸಾಲ್ಟ್‌ರೇಂಜ (Salt Range of Punjab)— ಇವುಗಳು ಫಾಸಿಲಕ್ಕೆ ಸಂಬಂಧಪಟ್ಟ ಸಂಶೋಧನ ಕಾರ್ಯದ ಕ್ಷೇತ್ರಗಳಾಗಿದ್ದುವು. ಈ ಭಾಗಗಳಲ್ಲಿ ಹೊಸ ಪ್ರಕಾರದ ವನಸ್ಪತಿ ಪದಾರ್ಥ, ಖನಿಜ ದ್ರವ್ಯ ಇತ್ಯಾದಿಗಳು ಸಾಕಾದಷ್ಟು ಸಿಕ್ಕುತ್ತ ಬಂದಿವೆ. ಪ್ರೊ. ಸಹಾನಿಯವರ ಎಲ್ಲಕ್ಕೂ ಮಹತ್ವದ ಸಂಶೋಧನವೆಂದರೆ "Pentoxyleao fossil" ಎಂಬುದನ್ನು ನಿಪಾನಿಯಾ (Nipania) ಎಂಬ ಸ್ಥಳದಲ್ಲಿ ಕಂಡುಹಿಡಿದುದು. ಇವರು ತಮ್ಮ ಶಿಷ್ಯರೊಂದಿಗೆ ೧೯೪೯ರ ಜನವರಿಯಲ್ಲಿ ನಿಪಾನಿಯಕ್ಕೆ ಹೋಗಿದ್ದರು. ಅದೇ ಅವರ ಕೊನೆಯ ಪ್ರವಾಸ ನಿಪಾನಿಯಾದಲ್ಲಿ ಅವರು ತಮ್ಮ ಸಂಶೋಧನೆಗೆ ಬೇಕಾಗಿದ್ದ ನಾನಾ ವಿಧದ ಪದಾರ್ಥಗಳನ್ನು ಸಂಗ್ರಹಿಸಿದರು.

ಸ್ತರವಿವರಣೆ (Stratigraphy) ಯ ಸಮಸ್ಯೆಗಳ ಸಹಾಯಕ್ಕಾಗಿ "ಪ್ಲ್ಯಾಂಟ ಫಾಸಿಲ್" ಗಳನ್ನು ಉಪಯೋಗ ಮಾಡಿಕೊಂಡಿರುವುದು ಸಹಾನಿಯವರ ಅಮೂಲ್ಯವಾದ ಕಾಣಿಕೆಗಳಲ್ಲಿ ಒಂದಾಗಿದೆ. ಇದರಿಂದ Indian Sedimentary Strata ದ ಕಾಲದ ಬಗ್ಗೆ ಇದರ ಭಿನ್ನಾಭಿಪ್ರಾಯವನ್ನು ಬಗೆಹರಿಯಿಸಬಹುದಲ್ಲದೆ; ಜಿಯಾಲಾಜಿಕಲ್ ಕಾಲಗಣನೆಯನ್ನು ಕೂಡ ಅಳೆಯಬಹುದಾಗಿದೆ.

Deccan Traps ಮತ್ತು The Saline Series of the Salt Range—, ಇವೆರಡು ಪ್ರಕರಣಗಲ್ಲಿ ಅವುಗಳ ಕಾಲಗಣನೆಯ ವಿಷಯವಾಗಿ ಸಹಾನಿಯವರು ಕೈಕೊಂಡ ಪ್ರಯೋಗಗಳ ಫಲಿತಾಂಶಗಳು ಕ್ಷೇತ್ರಸೂಚನೆಯ ಆಧಾರ (Field evidence) ದ ಮೇಲೆ ಭೂರಚನಾ ಶಾಸ್ತ್ರಜ್ಞರಲ್ಲಿ ಆಗಿನವರೆಗೆ ಇದ್ದ ಅಭಿಪ್ರಾಯಗಳನ್ನು ಬುಡಮೇಲು ಮಾಡಿಬಿಟ್ಟವು. ಡೆಕ್ಕನ್ ಪ್ರಾಂತದಲ್ಲಿ Palms, Charophyta, Water ferns, ಬೀಜ, ಹಣ್ಣು—ಇವುಗಳ ಮೇಲೆ ಹೊಸ ಪ್ರಕಾರದ ಸಂಶೋಧನೆಗಳನ್ನು ನಡೆಸಿದರು. ಅನಂತರ Economic Geology ಉದ್ದೇಶಗಳಿಗಾಗಿ ಮೈಕ್ರೊಫಾಸಿಲು (Micro fossils) ಗಳ ಉಪಯೋಗಗಳ ಕಡೆಗೆ ಹೆಚ್ಚು ಗಮನ ಕೊಟ್ಟರು.

ಪ್ರೊ. ಸಹಾನಿಯವರು ೧೯೨೧ ಮತ್ತು ೧೯೨೯ ರಲ್ಲಿ ನಡೆದ ಸೈನ್ಸ್ ಕಾಂಗ್ರೆಸ್ಸಿನ ಸಸ್ಯ ಶಾಸ್ತ್ರ ವಿಭಾಗಕ್ಕೂ, ೧೯೨೬ ರಲ್ಲಿ ಜಿಯಾಲಜಿ ವಿಭಾಗಕ್ಕೂ, ೧೯೪೦ ರಲ್ಲಿ ಮದ್ರಾಸಿನಲ್ಲಿ ನಡೆದ ಸಮ್ಮೇಲನಕೂ ಅಧ್ಯಕ್ಷರಾಗಿದ್ದರು. ಈ ಅವಧಿಯಲ್ಲಿ ಅವರು ಇಂಡಿಯನ್ ಪೆಲಿಯೊಬಾಟ್ನಿಯ ವಿಷಯವಾಗಿ ಅನೇಕ ಭಾಷಣಗಳನ್ನು ಕೊಟ್ಟರು. ವಿಜ್ಞಾನ ವಿಷಯವನ್ನು ಸುಲಭವಾಗಿ ತಿಳಿಯುವಂತೆ ಹೇಳಿಕೊಡುವ ಅವರ ರೀತಿ ಮತ್ತು ಶೈಲಿ ಕೇಳುವವರನ್ನು ಮುಗ್ಧಗೊಳಿಸುತ್ತಿತ್ತು. ವಿಜ್ಞಾನ ವಿಷಯವನ್ನು ಅಷ್ಟು ಚೆನ್ನಾಗಿ ತಿಳಿಸಿಕೊಡುವಲ್ಲಿ ಅವರನ್ನು ಸರಿಗಟ್ಟುವವರು ಬಹಳ ಕಡಿಮೆ ಎಂದು ಹೇಳಬಹುದು. ಪೆಲಿಯೊಬಾಟ್ನಿಯನ್ನು ಅಭ್ಯಸಿಸುವಲ್ಲಿ, ವಿಧ್ಯಾರ್ಥಿಗಳಿಗೆ ಪಾಠ ಹೇಳುವಲ್ಲಿ ಮತ್ತು ಕಾರಭಾರಗಳನ್ನು ನಡೆಸುವಲ್ಲಿ ಅವರು ಮಗ್ನರಾಗಿದ್ದರೂ, ಎರಡನೆಯ ವಿಷಯಗಳನ್ನು ತಿಳಿದುಕೊಳ್ಳುವಲ್ಲಿ ಅಲ್ಪ ಸ್ವಲ್ಪ ವೇಳೆಯನ್ನು ವಿನಿಯೋಗಿಸುತ್ತಿದ್ದರು. ಅಲ್ಲದೆ ಪ್ರಾಚೀನವಸ್ತುಶೋಧನಾ ಶಾಸ್ತ್ರದ ಅಭ್ಯಾಸದಲ್ಲಿ ಹೆಚ್ಚು ಆಸಕ್ತಿವಹಿಸಿ, ೧೯೪೫ ರಲ್ಲಿ "ಪುರಾತನ ಭಾರತದಲ್ಲಿ ನಾಣ್ಯಗಳನ್ನು ಎರಕಹೊಯ್ಯುವ ವಿಧಾನ" ಎಂಬ ವಿಷಯದ ಮೇಲೆ ಲೇಖನವನ್ನು ಪ್ರಕಟಿಸಿ "ನೆಲ್ಸನ್ ರೈಟ್ ಪದಕ" (Nelson Wright Medal) ವನ್ನು ಪಡೆದರು

೧೯೩೬ ರಲ್ಲಿ ಸಹಾನಿಯವರು ರಾಯಲ್ ಸೊಸೈಟಿಯ ಸಭಾಸದರಾಗಿ ಆರಿಸಲ್ಪಟ್ಟರು. ಈ ರೀತಿ ಗೌರವ ಪಡೆದ ಭಾರತೀಯರಲ್ಲಿ ಇವರು ಐದನೆಯವರು, ಅಲ್ಲದೆ ಅವರು ಜಿಯಾಲಾಜಿಕಲ್ ಸೊಸೈಟಿಯ "ಫೆಲೊ" ಆಗಿದ್ದರು; ಅಮೇರಿಕನ್ ಅಕಾಡಮಿ ಆಫ್ ಆರ್ಟ್ಸ್ ಅಂಡ್ ಸೈನ್ಸಿನ ಪರದೇಶಭಾಗದ ಗೌರವಸದಸ್ಯರಾಗಿದ್ದರು. ಸ್ವರ್ಗವಾಸಿಯಾಗುವುದಕ್ಕೆ ಕೆಲವು ದಿನ ಮೊದಲು ೧೯೫೦ರಲ್ಲಿ, ಸ್ಟಾಕ್ ಹೋಮಿನಲ್ಲಿ ನಡೆಯಬೇಕೆಂದು ನಿರ್ಣಯವಾಗಿದ್ದ ಅಂತರರಾಷ್ಟ್ರೀಯ ಬೊಟ್ಯಾನಿಕಲ್ ಕಾಂಗ್ರೆಸ್ಸಿಗೆ ಗೌರವ ಅಧ್ಯಕ್ಷರೆಂದು ಆರಿಸಲ್ಪಟ್ಟಿದ್ದರು. ದೈವ ಇವರನ್ನು ಆ ಸಭೆಗೆ ಮುಂಚೆ ಕಸಿದುಕೊಂಡು ಬಿಟ್ಟಿತು. ಇದಕ್ಕೂ ಮೊದಲು ಅವರು ಕೇಂಬ್ರಿಜ್ (೧೯೩೦) ಮತ್ತು ಆಮ್ಸ್ಟರ್ ಡಮ್ (೧೯೩೫) ಗಳಲ್ಲಿ ನಡೆದ ಕಾಂಗ್ರೆಸ್ಸಿನ ಸಮ್ಮೇಲನದ ವಿಭಾಗಕ್ಕೂ ಉಪಾಧ್ಯಕ್ಷರಾಗಿದ್ದ ಬನಾರಸ್ ಹಿಂದು ವಿಶ್ವವಿದ್ಯಾನಿಲಯದಲ್ಲಿ ಅವರು ಸಸ್ಯಶಾಸ್ತ್ರ ಹಾನರರಿ ಪ್ರೊಫೆಸರ್ ಆಗಿದ್ದರು. ಎರಡು ಸಾರಿ ನ್ಯಾಷನ ಅಕಾಡಮಿ ಆಫ್ ಸೈನ್ಸಿನ ಅಧ್ಯಕ್ಷರೂ, ಇಂಡಿಯನ್ ಬೊಟ್ಯಾನಿಕ ಸೊಸೈಟಿಯ ಸ್ಥಾಪಕರೂ ಅಧ್ಯಕ್ಷರೂ, ಇಂಡಿಯನ್ ಅಕಾಡ ಮತ್ತು ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಆಫ್ ಇ ಯದ ಉಪಾಧ್ಯಕ್ಷರೂ ಆಗಿದ್ದರು. ಪ್ರಾಣಿವನಸ್ಪತಿ ವಿಜ್ಞಾ ಶಾಸ್ತ್ರಗಳಲ್ಲಿ ಸಹಾನಿಯವರು ಅತ್ಯದ್ಭುತ ಸಂಶೋಧನೆಗಳನ್ನು ಮಾ ದ್ದಕ್ಕಾಗಿ, ಬಂಗಾಲದ ರಾಯಲ್ ಏಷಿಯಾಟಿಕ್ ಸೊಸೈಟಿ "ಬಾರ್ಕ್ಲೆ ಪದಕ" ವನ್ನು ಕೊಟ್ಟು ಅವರನ್ನು ಗೌರವಿಸಿತು ಭಾ ತದ ಅನೇಕ ವಿದ್ಯಾಸಂಸ್ಥೆಗಳು ಅವರಿಗೆ 'ಫೆಲೊಷಿಪ್' ಕೊ ಅವರನ್ನು ಗೌರವಿಸಿದುವು. ಪಟ್ನಾ ಮತ್ತು ಅಲಹಾಬಾದಿನ ವಿ ವಿದ್ಯಾನಿಲಯಗಳು ಡಿ. ಎಸ್‌ಸಿ. ಪದವಿಯನ್ನು ಕೊಟ್ಟು ಅವರ ಗೌರವಿಸಿದುವು. ಪ್ರಾಕೃತಿಕ ವಿಜ್ಞಾನದಲ್ಲಿ ಸಂಶೋಧನೆಗಳ ನಡೆಸಿದ್ದಕ್ಕಾಗಿ, ೧೯೪೭ರಲ್ಲಿ ಅವರಿಗೆ "ಸರ್. ಸಿ. ಆರ್. ನ್ಯಾಷನಲ್ ಪ್ರೈಜ್" ಕೊಡಲಾಯಿತು.

ಅವರು ತಮ್ಮ ಸದ್ಗುಣಗಳ ಮೂಲಕ ಎಲ್ಲರಿಗೂ ಬೇಕಾದ ರಾಗಿದ್ದರು. ದೊಡ್ಡ ವಿಜ್ಞಾನಿಯೆಂದು ಪ್ರಖ್ಯಾತಿ ಪಡೆದುದ ಪರಮ ದೇಶಾಭಿಮಾನಿಗಳೆಂದೂ ಪ್ರಖ್ಯಾತರಾಗಿದ್ದರು. ಅ ರಾಷ್ಟ್ರೀಯತ್ವವು ಕೇವಲ ರಾಜಕಾರಣದ ಮಟ್ಟಿಗೆ ಇರದೆ, ಪರಂಪ ನುಗತವಾಗಿ ಬಂದ ಸಂಸ್ಕೃತಿಯಲ್ಲಿ ಆಸಕ್ತಿಯನ್ನು ತೋರಿಸು ಒಡಮೂಡಿತ್ತು. ಅವರು ಜೀವಿಸುತ್ತಿದ್ದ ರೀತಿ ತುಂಬ ಸರಳವಾಗಿ ಇವರ ಸರಳತೆ, ದಯಾಳುತ್ವ ಮತ್ತು ಸೌಮ್ಯ ಗುಣಗಳು ಇ ಸಹವಾಸದಲ್ಲಿರುವವರ ಮೇಲೆ ತಮ್ಮ ಪ್ರಭಾವವನ್ನು ತಪ್ಪದೆ ಬೀ ತ್ತಿದ್ದುವು. ಸಹಾನಿಯವರು ಒಳ್ಳೆಯ ಹಾಸ್ಯಗಾರರಾಗಿದ್ದ ಮತ್ತು ತಮ್ಮ ಜೊತೆಯಲ್ಲಿ ಇರುವವರನ್ನು ತಮ್ಮ ವಿನೋದ ಸಂ ಷಣೆ. ಹಾಸ್ಯಮಯವಾದ ಮಾತುಗಾರಿಕೆಯಿಂದ ಸಂತೋಷಗೊಳ ತ್ತಿದ್ದರು.

ಸಹಾನಿಯವರ ಆಯುಷ್ಯದ ಕೊನೆಯ ೬–೭ ವರ್ಷ ಪೆಲಿಯೊಬಾಟ್ನಿ ಸಂಸ್ಥೆಯನ್ನು ಸ್ಥಾಪಿಸುವುದರಲ್ಲಿ ಕಳೆದುವು. ಸಂಸ್ಥೆಯು ಅವರ ಜೀವನಕಾರ್ಯದ ಪ್ರತೀಕವಾಗಿತ್ತು. ಇ ಅವರ ೩೦ ವರ್ಷ ನಿರಂತರ ಅಭ್ಯಾಸದ ಕೇಂದ್ರೀಕರಣ. ತ ಸಂಸ್ಥೆ ಫಾಸಿಲ್ ಬಾಟ್ನಿಯ ಸಂಶೋಧನೆಯ ಸಲುವಾಗಿ ಒ ಅಂತರರಾಷ್ಟ್ರೀಯ ಸಂಸ್ಥೆ ಆಗಬೇಕೆಂದು ಅವರ ಹಿರಿಯ ಉದ್ದೇ ವಾಗಿತ್ತು. ಈ ಸಂಸ್ಥೆ ೧೯೪೬ರ ಜೂನ್ ತಿಂಗಳಲ್ಲಿ ಅಸ್ತಿತ್ವ ಬಂತು. ಆದರೆ ಅವರ ಬಯಕೆ ಪೂರ್ಣವಾದದ್ದು ೧೯೪೯ರ ಏಪ್ರಿ ೩ನೆಯ ದಿನ—ಪಂಡಿತ ಜವಾಹರ್‌ಲಾಲ್ ನೆಹರೂ ಅವರು ಉದ ಟನೆ ಮಾಡಿದಾಗ ಸಂಸ್ಥೆ ಸ್ಥಾಪನೆಯಾದಂದಿನಿಂದ ಅವರ ಕೆ ಹೆಚ್ಚಾಯಿತು. ಅನೇಕ ತೊಂದರೆಗಳು ಒಂದರ ಮೇಲೊ

ಬಂದೊದಗಿದುವು. ಅವರು ಇದರ ಕಡೆಗೆ ಯಾವುದೂ ಲಕ್ಷ್ಯ ಕೊಡದೆ ತಮ್ಮ ಕೆಲಸವನ್ನು ಹಾಗೆಯೆ ಸಾಗಿಸುತ್ತ ನಡೆದರು. ಕೆಲಸ ಮಾಡುವುದೆಂದರೆ ಅವರಿಗೆ ಬಹಳ ಹುರುಪು. ವೈಗಳ್ಯತನವೆಂಬುದೆ ಅವರಿಗೆ ಗೊತ್ತಿರಲಿಲ್ಲ. ಹೆಚ್ಚು ಕೆಲಸ ಮಾಡುವುದರಲ್ಲಿ ಅವರು ಒಂದು ತರಹದ ಆನಂದವನ್ನು ಅನುಭವಿಸುತ್ತಿದ್ದರು. ಸ್ವಲ್ಪವೂ ವಿರಾಮ ತೆಗೆದುಕೊಳ್ಳದೆ ಪ್ರೊ. ಸಹಾನಿಯವರು ಈ ರೀತಿ ಕೆಲಸ ಮಾಡುತ್ತಿದ್ದುದನ್ನು ನೋಡಿ, ಸರ್. ಸಿ. ವಿ ರಾಮನ್ ಅವರು ಒಂದು ಪ್ರಸಂಗದಲ್ಲಿ ಅವರನ್ನು "ಅವಿಶ್ರಾಂತ ಆತ್ಮ" ಎಂದು ಕರೆದಿದ್ದುದೂ ಉಂಟು.

ಸಂಸ್ಥೆಯ ಕಾರ್ಯಗಳು ಹೆಚ್ಚಿಗೆ ನಡೆದಂತೆಲ್ಲ ಅವರ ಪರಿಣಾಮವು ಅವರ ಪ್ರಕೃತಿಯ ಮೇಲೆ ಆಗದೆ ಇರಲಿಲ್ಲ. ಅವರೂ ಅವರು ತಮ್ಮ ಸ್ವಭಾವಕ್ಕೆ ತಕ್ಕಂತೆ ಕಾರ್ಯಭಾರವನ್ನು ನಡೆಸುತ್ತಲೇ ಇದ್ದರು. ವಿಶ್ವವಿದ್ಯಾಲಯದಲ್ಲಿಯೂ, ಹೊಸ ಸಂಸ್ಥೆಯಲ್ಲಿಯೂ ಹೆಚ್ಚಾಗಿ ಕೆಲಸ ಮಾಡಬೇಕಾಗಿ ಬಂದುದರಿಂದ, ಅವರ ಪ್ರಕೃತಿ ದಿನದಿನಕ್ಕೆ ಕೆಡತೊಡಗಿತು. ಅವರೊಂದಿಗಿದ್ದ ಗೆಳೆಯರು ಮತ್ತು ಸಮೀಪದ ಬಂಧುಗಳು ಅವರನ್ನು ಕೆಲಸ ಮಾಡಬಾರದೆಂದು ಎಷ್ಟು ಬೇಡಿಕೊಂಡರೂ, ಅವರು ಅದಕ್ಕೆ ಒಪ್ಪಲಿಲ್ಲ. ಕೊನೆಗೆ ೧೯೪೯ ರ ೮ನೆಯ ಏಪ್ರಿಲ್ ಶುಕ್ರವಾರ ದಿವಸ ಸಾಯಂಕಾಲ, ಅವರ ಹೃದಯಕ್ರಿಯೆಯಲ್ಲಿ ವಿಕಾರವುಂಟಾಗಿ ೧ನೆಯ ತಾರೀಖಿನ ದಿವಸ ೧೨ ಹೊಡೆದು ೫೦ ಮಿನಿಟಿಗೆ ಸ್ವರ್ಗವಾಸಿಯಾದರು. ಈ ದುಃಖದಾಯಕ ಪ್ರಸಂಗವು ಅವರ ಹೊಸ ಸಂಸ್ಥೆಯ ಉದ್ಘಾಟನೆಯಾದ ಒಂದು ವಾರದ ಮೇಲೆ ಸಂಭವಿಸಿತು. ಇವರ ನಿಧನದಿಂದ ಭಾರತವು ದೊಡ್ಡ ಪ್ರಮುಖ ವ್ಯಕ್ತಿಯನ್ನು ಕಳೆದುಕೊಂಡಿತು; ಶಾಸ್ತ್ರೀಯ ಕ್ಷೇತ್ರವು ಒಬ್ಬ ದೊಡ್ಡ ಉಪಾಸಕನನ್ನು ಕಳೆದುಕೊಂಡಿತು, ಪೆಲಿಯೊ ಬಾಟನಿ ಸಂಸ್ಥೆಗೆ ಅಪಾರವಾದ ಹಾನಿಯಾಯಿತು. ಅವರು ಮೃತರಾದರೂ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವಾಗಿವೆ. ಅವರ ಜೀವನಕಾರ್ಯವು ಮುಂಬರುವ ಪೀಳಿಗೆಗೆ ಅನುಕರಣೀಯವಾಗಿದೆ; ಶಾಸ್ತ್ರೀಯ ಸಂಶೋಧನೆಯ ಕ್ಷೇತ್ರದಲ್ಲಿ ಪ್ರಗತಿ ಪಡೆಯಬೇಕೆನ್ನುವವರಿಗೆ ಜ್ಯೋತಿಯಂತೆ ಮಾರ್ಗದರ್ಶಕವಾಗಿದೆ.

ವಾಗ್ಲಹರಿ

ಕನ್ನಡದಲ್ಲಿಯೇ ವಿಶಿಷ್ಟವೆನಿಸಿದ ಸಾಹಿತ್ಯಿಕ ಪ್ರಕಾರ !

(ಹನ್ನೊಂದು ನಾಟ್ಯಘಟಗಳ ಸಂಕಲನ)

ಪ್ರಿ. **ವ್ಹಿ. ಕೆ. ಗೋಕಾಕ್** ಬಿ. ಎ. ಆಕ್ಸನ್

ಇವರ ಮುನ್ನುಡಿಯೊಡನೆ

ಲೇಖಕರು: ಎನ್. ಎಸ್. ಗದಗಕರ

ಬೆಲೆ ೦–೧೨–೦

ಮುಖ್ಯ ಮಾರಾಟಗಾರರು :

ಮನೋಹರ ಗ್ರಂಥಭಾಂಡಾರ, ಧಾರವಾಡ

—೧.

ಶ್ರೀ. ಎನ್. ಎಸ್. ಬಸುಪಟ್ಟದ ಎಂ. ಎ. ಗುಳೇದಗುಡ್ಡ

ಗುಣವಂತೆ ಮತಿವಂತೆ, ನೀ ತರಲು ಸುಖ-ಶಾಂತಿ
ಇಳೆಯೊಳಗೆ ಈ ಎನ್ನ ಬಾಳಿನಂಗಳದಿ—,
ಜಗದೆದೆಯು ತಂಪಾಗೆ ಬದುಕಿದುವು ಸೊಂಪಾಗೆ,
ನಲಿಯುವುದು ಈ ಮನೆಯು ಬಿಡದೆ ಮಂಗಳದಿ.

೨

ಮನದ ಮಲಿನತೆ ತೊಳೆದು ಕಣ್ಣ ಕಿಲ್ಬಿಷ ಕಳೆದು
ಗುಣವಂತೆ, ನೀ ಬಾಳ ಬೆಳಗಲೆಂದಿರುವೆ—;
ಮನ ಬೆಳಗಿ ಮನೆ ಬೆಳಗಿ ಬಾಳಿನೊಳಹೊರಗೆಲ್ಲ
ಬೆಳಕ ಹರಿಯಿಸಲೆಂದೆ ಇಂದು ನಿಂದಿರುವೆ—.

೩

ಎನ್ನ ಕಣ್-ಮನದಲ್ಲಿ ನಿನ್ನ ಮೂರುತಿ ತುಂಬಿ
ಅಗಲದೊಲು ಎಂದೆಂದು, ನೀನು ನಿಂದಿರುವೆ—;
ಹೃದಯ ಗದ್ದುಗೆ ಹತ್ತಿ ಆಳುತಿಹ ಎನ್ನರಸಿ,
ಎನ್ನ ಬಾಳಿಗೆ ಅತುಲ ಸೊಗವ ತರಲಿರುವೆ.

೪

ಕಾಮುಕದ ಕುರುಹಿರದೆ ಭ್ರಾಮಕದ ಭ್ರಮೆಯಿರದೆ
ಕೈಹಿಡಿದು ನೀ ಜೊತೆಗೆ ಸಾಗಿಬರೆ ನಿತ್ಯ—,
ನಿನ್ನ ಒಲವಿನ ಚೆಲುವು ನಿನ್ನ ಚೆಲುವಿನ ಒಲವು
ಈ ಇಳೆಯ ಬಾಳಿನಲಿ ಎನಗದುವೆ ಸತ್ಯ.

೫

ಬಾಳಿನಾಳಕೆ ಇಳಿದು ಅದರ ಆಳವನಳೆದು
ಆಣಿ-ಮುತ್ತನು ಬಳಿವೆ ನಿನ್ನ ಬಲದಿಂದ—;
ನಿನ್ನ ಚೆಂದುಟಿಮುತ್ತ ನೇಹವಳೆಯಲಿ ಸುತ್ತಿ
ಸಿಂಗರಿಪೆನೀ ಬಾಳ ನಿನ್ನ ಒಲವಿಂದ.

೬

ನಿನ್ನ ನಲ್ಮಾತುಗಳ ಸಕ್ಕರೆಯ ಸಿಹಿ ನೀಡು
ಸವಿಯುತಲಿ ಸಂತಸವ ಪಡೆಯುವೆನು ನಾನು—;
ನಿನ್ನ ಹೃದಯದ ಸೊದೆಯ ಸುರಿಮಳೆಯ ಸುರಿಸಿ ಬಿಡು
ಮುದದಿ ಮಿಂಯುಲಿ ಕೆಳದಿ, ಈ ಹೃದಯ ತಾನು.

೭

ಹೃದಯದುಂಬುವ ದಿವ್ಯ ಪ್ರೇಮಧಾರೆಯ ಹರಿಸು
ಸಂತಯಿಸಿಕೊಳ್ಳುವೆನು ತನುಮನವನಲ್ಲಿ—;
ಪಾವಿತ್ರ್ಯಮಯ ಧವಳ ಪ್ರೇಮಗಂಗೆಯಲೆನ್ನ
ಬಾಳ-ನೌಕೆಯ ತೇಲಿಬಿಡುವೆ ನಾನಲ್ಲಿ—.

◀ ಜಟಕಾ ಸಾಬಿ ▶

(ನಾಟ್ಯಛಟಾ)

ಶ್ರೀ. ಎಸ್. ಎಸ್. ಗದಗಕರ ಬಿ. ಎ. ಧಾರವಾಡ

●

[ಅದೊಂದು ಸಣ್ಣ ರೈಲ್ವೇಸ್ಟೇಷನ್. ಅದರ ಸಮೀಪದ ಮುನ್ನೂರು ಮೈಲು ದೂರವಿರುವ ತಾಲೂಕಿನ ಸ್ಥಳದ ಹೆಸರೇ ಅದಕ್ಕಿದೆ. ಆ ಊರಿಗೆ ಹೋಗಲು ಜಟಕಾ ಗಾಡಿಗಳದ್ದೇ ಹೆಚ್ಚು. ಇಂದು ಬೆಳುದಿಂಗಳ ರಾತ್ರಿ. ವೇಳೆ ಎರಡು ಗಂಟೆಯಾಗಿದ್ದೀತು. ಉಳಿದ ಜಟಕಾ ಗಾಡಿಗಳು ಅಂದು ಯಾಕೋ ನಿಲ್ದಾಣಕ್ಕೆ ಬಂದಿರಲಿಲ್ಲ. ಕಾಸೀಮಸಾಬಿಯೊಬ್ಬನೇ ಬಂದು ಪ್ಯಾಸಿಂಜರ್ ಗಾಡಿ ಎದುರು ಕಾಯುತ್ತ ಕುಳಿತು ಬಹಳೊತ್ತಾಗಿತ್ತು. ಸಂಜೆಗೆ ಒಂದು ರೊಟ್ಟಿ ತಿಂದು, ಊಟದ ಶಾಸ್ತ್ರ ಮುಗಿಸಿ ಬಿಟ್ಟಿದ್ದ. ನಾಲ್ಕು ಸೀಟು ಇರುವ ತನ್ನ ಗಾಡಿಗೆ ಇಬ್ಬರು ಮೂವರು ಹತ್ತಿದರೂ ಸಾಕು. ಧನ್ಯ ಎಂದು ಗಾಳಿಗೋಪುರ ಕಟ್ಟುತ್ತಿರುವ. ಅವನ ಆಸೆ ಕೊನರಿಡುವಂತೆ ಪ್ಯಾಸಿಂಜರ್ ಗಾಡಿಯು ರೂಢಿಯಂತೆ ಅರ್ಧ ತಾಸು ತಡವಾದದ್ದರಿಂದವೇನೊ-ಅತಿ ರಭಸದಿಂದ ಸಡಗರದಿಂದ ಪ್ಲಾಟ್‌ಫಾರ್ಮಿಗೆ ಬಂದು ನಿಂತಿತು. ಯಾಂತ್ರಿಕವಾಗಿ ಎರಡು ನಿಮಿಷ ನಿಂತಂತೆ ಮಾಡುವಷ್ಟರಲ್ಲಿಯೇ ಪುನಃ ಸಿಳ್ಳು ಹಾಕಿ ಸಾಗಿತು. ಗಾಡಿಯಿಂದಿಳಿದ ನಾಲ್ವಾರು ಜನರು ನಡೆಯುತ್ತ ಹೊರಟರೂ, ಮಧ್ಯಮ ತರಗತಿಯ ಗೃಹಸ್ಥನೊಬ್ಬನು ಮಾತ್ರ ತನ್ನ ಸಂಸಾರಸಮೇತವಾಗಿ ಜಟಕಾಸಾಬಿಯ ಬಳಿಗೇ ಬಂದನು.]

[ಕಾಸೀಮಸಾಬಿ ಕುದುರೆ ಹೂಡಿ, ಚಬಕ ಹಿಡಿದುಕೊಂಡು ಗಾಡಿ ನಡಿಸುವಾಗ, ಒಳಗಿದ್ದ ರಾಯರು ಅವನನ್ನುದ್ದೇಶಿಸಿ]

ಏನೋ ಸಾಬಿ! ಗುರುತಿನಾವಿದ್ದು ನಾಡಗೌಡರ ಮನೀಗೆ ಹೋಗಲಿಕ್ಕೆ ಎರಡು ರೂಪಾಯಿ ಬೇಡಿದಿ. ನಮ್ಮವೇನು ಸಾಮಾನು ಸಟ್ಟು ಬಹಳ ಇದ್ದವೆ? ನನ್ಮ ಸೋದರಳಿಯ ಬಾಳೂಂದು ಒಂದು ಟಿಪಾಯ್ ಬ್ಯಾಗು; ಸಂದೂಕ. ಮೊನ್ನೆ ಆರೂಢಸ್ವಾಮಿಯ ಜಾತ್ರಿಗೆ ಹೋದಾಗ ಕೊಂಡ ಹೋಲ್ಡಾಲು! ಎರಡು ರೂಪಾಯಿ ಕೊಡೋ ಯೋಗ್ಯತಾ ಅಲ್ಲಾ ನಮ್ಮದು! ಏನೋ ನೀನೂ ಹಾವೇರೀ ನ್ಯಾಯಾ ಮಾಡಿದ್ದಕ್ಕ ಕಬೂಲು ಆದಿ ಅಂತ, ದೀಡ ರೂಪಾಯಿ ಠರಾವು ಆತು. ಈ ಕೋಡಿ ದಿನಮಾನದಾಗ ಮನುಷ್ಯ ದುಡ್ಡಿಗೆ ದುಡ್ಡಿಗೆ ಲಾಗಾ ಹಾಕತಾನ. ಹೊರಗ ದೌಲತ್‌ವಾನರ್‍ಹಾಂಗ ಕೀವಿ ಹಾಂ ಮತ್ತ! ನನ್ನ ಒದಲೀ ಮತ್ತ ಯಾರರs ಇವತ್ತ ಬಂದಿದ್ದರ, ಹಿಟ್ಟು ಚೆಲ್ಲಿದ್ಹಾಂಗ ಬೆಳದಿಂಗಳು ಆದs ಅಂದು. ಆರಾಮ ನಡದs ಹೋಗತಿದ್ದರು. ಅವರ ಒಬ್ಬರನ್ನ ನೋಡಿ ಮತ್ತೊಬ್ಬರು ಹೀಂಗ ರೊಕ್ಕ ಉಳಿಸೋದು ಕಲಿತರ, ಒಡ್ಡರ ಹೊಟ್ಟಿಗೆ ಕೇದು ಬೀಳೋದs ಖರೆ!

........[ನಾಶೀಪುಡಿ ಏರಿಸುತ್ತಾ] ಏನದು. ಸರಿರಾತ್ರ್ಯಾಗ ದೀಡ ರೂಪಾಯಿ ಕಮ್ಮಿ ಆತು ಅಂತ ದಸಿ ಎಳೀತಿಯಾ? ನಿನ್ನ ಬೀಬೀದು ಮಕ್ಕಳದು ಹೊಟ್ಟಿ ತುಂಬೂದಿಲ್ಲಾ ಅಂದರ, ನಾವೇನು ಮಾಡಲಿಕ್ಕೆ ಆದೀತು? ದುಡಿದು ದುಡಿದು ಸಣ್ಣ ಆಗೋ ನಿನ್ನ ಕುದುರಿ—ಜೀಟಿಯ ಗತಿ ಏನು ಅಂತೀಯಾ ಇಷ್ಟು ರೊಕ್ಕದಾಗ? ಅಲ್ಲಪಾ ಸಾಬೂ, ನಾ ಒಬ್ಬನs ಏನೋ ನಿನಗ ಭಾಡಿಗಿ ಕೊಡೋವಾ? ದಿನಾ ನನ್ನಂಥಾ ಮಂದಿ ಎಷ್ಟೋ ಏನೊ! ನಿನಗೇನು ಕಡಿಮಿ ರೊಕ್ಕಕ್ಕ? ದಿವಸಾ ದಿವಸಾ ಹೊಸಾ ರೊಕ್ಕದ ಮೋತಿ ನೋಡತೀದಿ, ನಮ್ಮ ಹಾಂಗ ಪಹಿಲಾ ತಾರೀಖಿಗೊಮ್ಮೆ ಅಲ್ಲಾ!

........ಸಾಬೂ, ಕುದುರಿಗೆ ಸ್ವಲ್ಪ ಬಾಯಿ ಮಾಡೊ, ಭರಾಭರಾ ಹೆಜ್ಜೀ ಹಾಕಲಿ! ಮೆರವಣಿಗೀ ನಡಿಗಿ ಸಾಕು ಇನ್ನ. ಅಡಿವ್ಯಾಗಿನ ಹಾದಿ, ಸುಡುಗಾಡು ಲಗುಲಗು ಸಾಗೂದಿಲ್ಲ. ಒಳಹಾದೀಲೆ ಸನೀ ಆದರೂ ಹೋಗೋದು ಅಸಾಧ್ಯ. ಸಣ್ಣ ಹುಡುಗರು ತೂಗಡಿಸಲಿಕ್ಕೆ ಹತ್ಯಾರ್ಯವ. ಯಾವಾಗ ಅರಸೀಕೇರ್‍ಯಾಗ ಊಟಾ ಮುಗಿಸಿ ಮಲಗ್ಯಾರ. ನನಗೇನು? ನಡೀತದ ನಿನ್ನ ಕುದುರಿಯ ನಡಿಗಿ. ಬೀಡೀ ಹಚ್ಚತೀಯೇನೊ ಸಾಬು? ತೊಗೊ [ಇಬ್ಬರೂ ಹಚ್ಚುವರು]. ಏನಪಾ, ಊರಾಗ ಮಳಿ ಬೆಳಿ ಹ್ಯಾಂಗ? ಏನಂದಿ? ಈ ವರ್ಷ ಮಳಿ ಹಿತಾ ಮಾಡಲಿಕ್ಕೆ ಬಂದಿಲ್ಲs? ಅದೇನಪಾ ಸೃಷ್ಟಿಕ್ಷೋಭಾ! ಮನಿಸ್ಯಾನ ಕೈಯ್ಯಾಗ ಏನದ, ಶ್ರೀರಾಮರಕ್ಷಿ! [ಉತ್ಸುಕತೆಯಿಂದ] ಯಾಕೋ ಸಾಬೂ, ಹೊಸಾ ಕುದುರೀ ಕೊಂಡಿಲ್ಲೇನು? ಈ ಸಾರೆ ಉರುಸಿಗೆ ಹೋದಾಗ? ಏನು, ಅಷ್ಟು ರೂಪಾಯಿ ಎಲ್ಲಿಂದ ಬರಬೇಕ? ಅದ್ಯಾಕೋ ದಿನಾ ದುಡೀತೀದಿ! ಕುದುರೀ ಛೊಲೊ ಇಡಬಾರದ? ಗಿರಾಕಿ ಹ್ಯಾಂಗ ಹತ್ತಬೇಕು ಹೀಂಗಾದರ ಹಗಲು ಹೊತ್ತಿನ್ಯಾಗ? ಒಳಗ ಕೂತವರಿಗೆ ಮೋಟಾರಿನ್ಯಾಗ ಕೂತ್ಹಾಂಗ ಅನಿಸಬೇಕು. ಅಷ್ಟು ಭರ್ದಾಂಡಿ ಬೇಕು! ಇದೇನೋ, ಒಡ್ಡರ ಬಂಡಿ ನಿಂದು! ನಗತೀಯಲ್ಲೋ ನನ್ನ ಮಾತಿಗೆ! ನಾ ಹೇಳೋದು ಸುಳ್ಳೇನು ಮತ್ತ? ಮಂದಿಯು ಜಟಕಾಕ್ಕ ಈ ನಡಿಗಿ ಇದ್ದರ, ನೀನs ನನ್ನ ಹಾಂಗ ಅಂತಿದ್ದಿ. ಹೆತ್ತವರಿಗೆ ಹೆಗ್ಗಣ ಮುದ್ದು!

........[ಕಿವಿಗೊಡುತ್ತ] ದೊಡ್ಡ ಊರಾಗಿನ ಗದ್ದಲ, ಮೋಟರ ಡ್ರಾಯವ್ಹರರ ಜಂಭಾ, ಪೋಲಿಸರ ಸಾಯಿಡ್ ಕೊಡೋ ಹಾವಳಿ,-- ಎಲ್ಲಾ ನೋಡಿ ಬ್ಯಾಸತ್ತು—ಸಾವಕಾಶ ಬಿಡೋ ಗತ್ತು ಕಲಿತೀಯಾ? ನೀ ಬೇಕಾದ್ದು ಅನ್ನು, ಈ ರದ್ದೀ, ಟಕೀಟನಂಥಾ ಜಟಕಾ ಬದಲು ಮಾಡಲಿಕ್ಕೇ ಬೇಕು. ಸಾಲಾ ಮೂಲಾ ಕೊಡಲಿಕ್ಕೆ ನಿಮ್ಮಲ್ಲೆ ಸಂಘ ಇಲ್ಲೇನು?

[ಎಲಿ ಅಡಿಕಿ ಹಾಕಿಕೊಳ್ಳುತ್ತಾ] ಏನಂದಿ? ಮೊನ್ನೆ ಒಬ್ಬ ಮೋಟಾರ್ ಡ್ರಾಯವ್ಹರಗೂ ನಿನಗೂ, ದೊಡ್ಡೂರಿಗೆ ಹೋದಾಗ ಸಾಯಿಡ್ ಕೊಡೋದಕ್ಕ ಜಗಳ ಹತ್ತಿತ್ತ? ಹಾಂ! 'ಅಜ್ಜ ಮುತ್ತಜ್ಜರ ಕಾಲದ ಜಟಕಾ ಇಟಗೊಂಡು ಎಷ್ಟು ಡೌಲು ಬಡೀತಾನ' ಅಂದನs ಅವಾ ನಿನಗ? ಏ, ತಪ್ಪಪಾ ಅವಂದು. ಯಾರ ಕಾಲದ್ದರs ಇರಲಿ, ನಿಂದು ಜಟಕಾ ಸುಳ್ಳೇನೊ? ಮೋಟರಿನ್ಯಾಗ ಕೂತಷ್ಟಕ್ಕs ಏನು ಸ್ವರ್ಗ ಸಿಗತದೇನು ಮಂದಿಗೆ? ಯಾವಾಗಲೂ ಲಗುಲಗು ಹೋದರ ಏನು ಉಪಯೋಗ ಅಂದ್ಯಾ? ಹೌದು ಸಾಬೂ. ನೀ ಏನs ಅನ್ನು....ವೇಗ ಬೇಕು. ಒಂದು ಪೆಟ್ಟು ಹಾಕೂದಿಲ್ಲs ನಿನ್ನ ಬೇಟೀಗೆ? ಖರೇ ಪ್ರೀತಿ ನೋಡು ನಿಂದು. ಚಬಕದ ಸಪ್ಪಳ

…ಳಿದರ ಅದು ಮೊಂಡತನ ಮಾಡತ್ಯದ? ಹಾಂಗಾದರ, ನಿನಗ …ರಾಕಿ ಸಿಗೋದು ಕಠಿಣ. ಹೊಲಾ, ಹಳ್ಳಾ, ಗಿಡಾ, ಗುಡ್ಡ ಪಕ್ಷಿ …ರಾಮು ನೋಡಿಕೋತ ಹೋಗಬೇಕನ್ನೋವರ್‍ಯ ನಿನ್ನ ಜಟಕಾ …ತ್ತತಾರ? ಹೌದು ಬಿಡಪಾ! ಮುಂದಿನ ಸಾರೆ ನಾವೂ ಹಾಂಗ್ಯ …ಾಡತೇವಿ. ಈವತ್ತಂತೂ ಗೊತ್ತು ಮಾಡಿ ಒಳಗ ಹತ್ತೇವಿ. …ಡೀಲಿ. ಪಾಲಿಗೆ ಬಂದದ್ದು ಪಂಚಾಮೃತ!

ಸಾಬೂ. ಅವತ್ತ ನೀ ಮೋಟರಿನವಗ ಹಾಂಗ ಉತ್ತರಾ ಕೊಟ್ಟಿದ್ದು ನೆಟ್ಟಗ ಮಾಡಿದಿ. ಇಳಿದು ಬಂದು ಜಗಳಕ್ಕ ನಿಂತಾಂವಾ, …ಂದಾಗಡೆ ರಾಜೀ ಆಗಿ ಬೀಡಿ ಕೊಟ್ಟು ಚಹಾ ಕುಡಿಸಿದನ್ಸ? ನೀನೂ …ೇಳಬೇಕಾಗಿತ್ತು ನೋಡು; ಮೋಟರು ಹೋಗದ ಎಷ್ಟೋ ಸ್ಥಳದಾಗ …ಟಕಾನ್ಯ ಗತಿ ಅಂತ. ಹೇಳೇ ಬಿಟ್ಟ್ಯಾ? ಅಡ್ಡಿ ಇಲ್ಲಾ. ನಾಳಿ …ನಾನ ಹೆಚ್ಚು ಆದರ, ಮೋಟರೂ ಕಾಲುಕಸ ಆಗತ್ಯದ ಅಂತ …ಂದ್ಯಾ? ನಿನಗೆಲ್ಲೀ ಉದ್ದರೀನೋ? ಆತು ಸಾಬೂ, ಏರಿ ಬಂತು …ಗು ಲಗು ಹೊಡಿ.

[ನೆನಪು ಮಾಡಿಕೊಳ್ಳುತ್ತ] ಸಾಬೂ, ನೀ ಎಷ್ಟು ಛೆಲೋ ಕಾಣ…ೀದಿ! ಈ ರೀಶನ್ನ ದಿನದಾಗ ಕೊಟ್ಟಿಷ್ಟಕ್ಕ್ಯ ಸುಮ್ಮನಾದಿ. ಸಂಸಾ…ದ ತ್ರಾಸಿನ ಖಬರು ಇದ್ದಾಂವ. ಆದರ ಮೊನ್ನೆ ಆಧ ಒಂದು ಮೋಜು …ೇಳತೀನಿ ಕೇಳು: ನಾ ಏನಪಾ, ನಮ್ಮ ಊರ ಅರಿವಿಯ ವ್ಯಾಪಾ…ಯ ತರ್ಫೆ ನಾಕಾರು ಥಾನು ಬಿನ್ನೀ ಕೋಟಿನ ಅರಿವೀತರಲಿಕ್ಕೆ …ೋಗಿದ್ದೆ ಸಮೀಪದ ದೊಡ್ಡೂರಿಗೆ. ತಿರುಗಿ ಬರೋ ಮುಂದ ಮೋಟರು …ೋರ್ಟಿನ ಹತಿಗೆ ನಿಂತುಬಿಟ್ಟಿತು. ಅರಿವೀ ಇಳಿಸಿಗೊಂಡರೂ …ನಿಗೆ ಒಯ್ಯೋ ಬಗಿ ಹ್ಯಾಂಗ? ಪೇಚು ಬಿತ್ತಪಾ. ಅತ್ತಲಾಗ ಇತ್ತ…ಾಗ ಟಕ ಮಕ ನೋಡೋದರಾಗ, ಕರ್ಮ ಧರ್ಮ ಸಂಯೋಗದಲೆ …ಬ್ಬ ಟಾಂಗೇವಾಲಾ ಕಣ್ಣಿಗೆ ಬಿದ್ದಾ. ನನ್ನ ಕಡೆ ಬಂದ್ಯ ಬಿಟ್ಟಾ. ಯಾಕೋ ಮತ್ತ, ಸಮೀಪದ ವಾಡೇಕ್ಕ ಹೋಗೋದದ.. ಫರ್ಲಾಂಗು ಆದೀತು. ಏನು ತೊಗೋತಿಯೊ?' ಅಂದರ, ಒಂದು ರೂಪಾಯಿ ಕೇಳಬೇಕ್ಯ ಪೆದ್ದಾ? ಹನ್ನೆರಡಾಣೇಕ್ಕ ಬಾರೋ ಅಂದರ ಹಾಂಗ್ಯ ಮಾರಿ ತಿರುವಿಕೊಂಡು ಹೋದಾ ನನಗ ಅಗಾಧ ಅನಿಸಿತು ಅವನ ಧಷ್ಟತನಕ್ಕ. ಆಡಾಡತಾ ನಿಂತಕಾಲಮೇಲೆ ಏನೂ ದುಡಿಯದೆ ಹನ್ನೆರಡು ಆಣೆ ಸಿಗೋದು ಕಳಕೋತಾನಲ್ಲಪಾ ಇವಾ ಅಂತ! ಒಂದು ಸೇರು ಜ್ವಾಳಾ ಅಳಿಸಿಗೋತಿದ್ದಾ ಪ್ಯಾಟ್ಯಾಗ ಆ ರೊಕ್ಕದಲೆ. ಇಂಥಾ ಮೂರ್ಖತನಕ್ಕ ಏನನಬೇಕೋ ಸಾಬಿ? ಮನೆಮುರುಕತನ ಅಲ್ಲ? ಕೈಗೆ ಬಂದ ತುತ್ತು ಮಣ್ಣಾಗ ಚೆಲ್ಲೋದು—ಅದೂ ಕೇವಲ ಮಂಗತನದಲೆ! ಈ ಸುದ್ದಿ ಮನ್ಯಾಗ ಅವನ ಹೆಂಡತಿಗೆ ತಿಳಿದಿದ್ದರ, ಅವನ ಚಮಡಾ ಬೆಳಗತಿದ್ದಳು.

[ಕಡತಂದ ಉನ್ಮಾದದಿಂದ] ಏನಂದಿ ಸಾಬೂ, ಚಕ್ಕಡಿಯ ತರುವಾಯ ನಿನ್ನ ಜಟಕಾದ್ದ್ಯ ನಂಬರು ಹತ್ತುತ್ಯದ? ಹೌದು ಬಿಡಪಾ, ಭಾಳು ಮುಂದಿನ್ನ ಒಯ್ಯುತ್ಯದ ನಿನ್ನ ಕುದುರಿ—ಸಾವಕಾಶ ಆದರೂ ಅಡ್ಡಿ ಇಲ್ಲಾ. ಅತೀ ಮುಂದಿ ಕೂತರ ಎತ್ತಿನಷ್ಟಾಂಗ ಬಳಗಾನೂ ತಗದೀತು! [ನಗುತ್ತ] ನಿನ್ನ ಪಾಲಿಗೆ ನಿನ್ನ ಜಟಕಾ ಕಾಮಧೇನು ಕಲ್ಪವೃಕ್ಷ, ಆತಿಲ್ಲೊ? ಮೋಟರಿನ್ಯಾಗ, ರೇಲ್ವೆ ಗಾಡ್ಯಾಗ ಕೂತರ ನಿನ್ನಂಥಾ ಬಡವರ ಗತಿ ಏನು ಅಂತಿಯಾ? ಖರೇನಪಾ. ಆದರ ತುರಾಯಿ ಹಚಿಗೊಂಡ ನಿನ್ನ ಕುದುರಿ ಸ್ವಲ್ಪು ಒನಪಿಲೆ ನಡೀಲಿ ಸಾಕು! ನೀ ಬದುಕತೀದಿ. ರಾತ್ರೀ ಹೊತ್ತು ಬ್ಯಾಸತ್ತಿದ್ದೀತು. ಹಗಲು ನೋಡೋಣು ನಿನ್ನ ಕುದುರೀನ! ಬಲು ಬೆರ್ಕಿ ಇರಲಿಕ್ಕೇ ಬೇಕು—ಚಬಕದ ಪೆಟ್ಟು ಇಲ್ಲದೆ ಹೆಜ್ಜಿ ಹಾಕತ್ಯದ ಅಂದ ಮ್ಯಾಲೆ. ಸಾಬೂ, ಸಮೀಪದಾಗ ಒಳಗ ಮೆತ್ತಗಿನ ಗಾದೀ ಹಾಕಿಸು. ಅಂದರ ಜನರು ನಾ ಮುಂದ ನೀ ಹಿಂದ ಅಂತ ನುಗ್ಗತಾರ. [ಅಚ್ಚರಿಯಿಂದ] ಸಾಬೂ, ಏನು ನಡಿಗಿಯ ಕುದುರಿ ನಿಂದು! ನಾವು ಇಷ್ಟೊತ್ತನಕಾ ಚ್ಯಾಷ್ಟೀ ಮಾಡಿದ್ದು ಮನಸಿಗೆ ಹತ್ತಿತು ಕಾಣಸ್ತ್ಯದ. ಊರು ಸಮೀಪಕ್ಕ ಬಂದ ಮ್ಯಾಲೆ ನಿನ್ನ ಕುದುರಿಯ ಕರಾಮತ್ತು ಕಂಡಿತು—ಅಟ್ಟಿ ಮ್ಯಾಲೆ ಒಲಿ, ಕೊಟ್ಟ ಮ್ಯಾಲೆ ಅಳಿಯಾ—ಉರದ್ಹಾಂಗ...............

[ರಾಯರು ಹೆಂಡತಿಯ ಕಡೆಗೆ ತಿರುಗಿ ಸಾವಸಾನು ಸಾವರಿಸಿಕೊಂಡು] "ಏ ಸುಮ್ಮನ್ನ ಇಳಿಸಿಗೊಳ್ಯ. ನಾ ಸಾಬಿಗೆ ಭಾಡಿಗೀ ಕೊಡತೇನಿ. ಎದುರಿಗಿಂದ್ಯ ಅಲ್ಲ್ಯ ನಾಡಗೌಡರ ವಾಡೆ?" ಅನ್ನುವಾಗ ಸಾವಧಾನದಿಂದ]

— ತೆರೆ —

"ನೂತನ ಗಣಿತ" ಗಳ ತಿದ್ದಿದ ಹೊಸ ಆವೃತ್ತಿಗಳು

೧ ರಿಂದ ೭ ತರಗತಿಗಳ ವರೆಗೆ

ಎಲ್ಲಕಡೆಗೂ ದೊರೆಯುವುವು

ಎಲ್ಲ ಜಿಲ್ಲಾ ಸ್ಕೂಲ್ ಬೋರ್ಡ್ ಹಾಗೂ ಮ್ಯುನಸಿಪಲ್ ಸ್ಕೂಲ್ ಬೋರ್ಡುಗಳೂ ಮನ್ನಣೆಯನ್ನಿತ್ತಿರುವವು.
ಎಂತಲೇ ನಿಮ್ಮ ಪ್ರತಿಗಳನ್ನು ಇಂದೇ ಸಂಗ್ರಹಿಸಿರಿ. ವ್ಯಾಪಾರಿಗಳಿಗೆ ಧಾರಾಳ ಕಮಿಶನ್.

ಆಕಳವಾಡಿ ಬುಕ್‌ಡಿಪ್ಪೋ, ಧಾರವಾಡ

—ಗೆ.

ಶ್ರೀ. ಟಿ. ಗಿ. ಶ್ರೀರಂಗಶರ್ಮ, ಅರಸೀಕೆರೆ

ನೀನು ಮನೆಯೊಳಗಿಲ್ಲ ನೀನೆನ್ನ ಮನಕೆಲ್ಲ!
ನೆನಪು ಕದಡುವುದೆನ್ನ ನಗೆಯ ಬಗೆಯ!
ನಗುವಿನಲಿ ಗೆಲುವಿಲ್ಲ. "ಏಕೆ?" ಎನ್ನುವರಿಲ್ಲ.
ಹೇಳುವೆನೆ; 'ಗೆಲವು' ತವರಿನಲಿರುವ ಪರಿಯ?

೨

ಬೇಸರದ ಮುಖಹೊತ್ತು ಬಾಗಿಲಿಗೆ ಬರಲೊಡನೆ
ತಿಳಿನಗೆಯ ಬೆಳಕಿನಲಿ ಮಂಕ ಹರಿಸಿ
'ಇನಿಯಳಿಲ್ಲದ ನಿಲಯ ಶೂನ್ಯ' ಎನುವಾ ಎದೆಯ
ನಗಿಸಿ ಸೆಳೆಯುವಳಿಲ್ಲ ಹೃದಯದರಸಿ.

೩

ನ್ನ ಮನಕೆ ಗೆಲವೆರೆದು ಹೊಸ್ತಿಲಲೆ ಕಾದೊಲುಮೆ
—ಹಸಿಯಿಸುವ ಕಣ್ಣಾಟ ಈಚೆಗಿಲ್ಲ.
ಸ್ಪರ್ಶಮಾತ್ರದಿ ನವ್ಯ ಚೇತನಾನಂದದಲಿ
ತೋಳ ಹಾರದಿ ಕೊರಳ ಸಿಂಗರಿಪಳಿಲ್ಲ!

೪

ಪ್ರೀತಿಯಮೃತವ ಬೆರಸಿ ಅಕ್ಕರೆಯೊಳುಣಬಡಿಸಿ
ಸಕ್ಕರೆಯ ಮಾತಿನಲಿ ಮಿಕ್ಕು ತಿನಿಸಿ
ನಲಿವ ಸರಸಿಯನುಳಿದ ಊಟ ನೋಟದ ಸೊಗವು
ಸೊಗಯಿಸದು!—ಜಡತೆರುಜೆ ಜೀವಕಡಸಿ!

೫

ಮಾತಾಡದಿರಲಾನು ಕಾತರವ ತೋರಿಸುವ
ನುಡಿಸೆ ಮರುಮಾತಿಂಗೆ ಹುಸಿಯೆ ಮುನಿದು
ಪ್ರಣಯ.ಬೇಟದಿ ಕಾಡಿ ಮತ್ತೆ ನಗೆ ಸಂಧಾನ!
ರಸಿಕರಾಣಿಯು ದೂರ! ಮನೆಯು ಬರಿದು!

೬

ಹುಣ್ಣಿಮೆಯ ಚಂದ್ರಮನೊ! ಪ್ರಣಯಿಗಳ ಪ್ರಿಯನಂತೆ!
ಯಾರಿಗೊಲಿದಾ ಬಿರುದ ದಕ್ಕಿಸಿದನೊ?
ಇಲ್ಲಿ ಪೀಡಿಪನೆನ್ನ!— ಪ್ರಣಯ ಕಾತರ ಮನನ!
ಇನಿಯಳಿರದಿರಲವಗೆ ಸುಸಂಧಿಯೇನೊ!

೭

ಗ್ರೀಷ್ಮವಾಳಿದ ಮನಕೆ ಮಧುಮಾಸ ತರಬೇಕು—
— ಸಿಂಗಾರ! ನೀ ಬಾರ ಹರ್ಷಕಾರ!
ನಿನ್ನ ಮುಖಚಂದ್ರಮನು ಆನಂದ ತೆರೆಕೆರೆಯ
ಏರಿಳಿಸೆ ಕಾದಿಹೆನು! ನನ್ನೊಲುಮೆತೀರ!

ನೋಡ ಬಾರೊ ಗೋಳ!

ಶ್ರೀ. ರಾ. ಸು. ವೈಲಾಯ, ಉಡುಪಿ.

ಕೋಟಿ ತಾರೆಗಳು ಮಿರುಗುವಂದದಲಿ
ನಗೆಯ ಮುಗುಳನಾಡಿ
ಏಸು ಕಾಲದತ್ಯಮಿತ ಗೆಯ್ಮೆಯಿಂ
ಬಗೆಯ ಸಾಗು ಮಾಡಿ,
ಉಷೆಯೊಳೆದ್ದು ಹೊರವಲಯ ಸುತ್ತಿ ನುತ-
ಕೋಕಿಗಾನದೊಸರ
ಹದುಳದಿಂದ ಮನದಂತರಂಗದಲಿ
ಕೂಡಿನುಡಿಯ ಹಸರ,
ಮೂರುಸಂಜೆಯೊಳು ಬಾನಕೆಂಚಿನಲಿ
ನೂರು ಬಣ್ಣ ಒತ್ತಿ
ನಲಿವ ಕೇಕಿಗಳ ನೂರು ಭಾವಗಳ
ಹದನವರಿತು ಬಿತ್ತಿ,
ಕುಣಿವ ಗತ್ತು—ಘನ—ಗರುವ ಹೊತ್ತು ವರ
ಸಲಿಲ ನೃತ್ಯಲಾಸ—
ಕಮಲದೆರಳುದಳದುಲ್ಲಸಿತ ಹಾಸ
ಮೂಡಿ ಮನ ವಿಕಾಸ!
ಮಂದ ಮಂದತಮ ಗಮನದಿಂದ ತನು
ನಿಲುವ ಭವ್ಯತರವ—
ಕಣ್ಣ ಕಪ್ಪು ಗುಲಗುಂಜಿ ನೋಟದೆಡೆ
ಮಿಸುಪ ನವ್ಯಪರಿಯ,
ಭಾವ ಬೆಡಗು ಬಿನ್ನಾಣ ಬಳುಕಿನಲಿ
ಆರುಸರಿಯು ಮಿಗಿಲು?
ನೋಡಿ ನಿರುಕಿ ಸೈವೆರಗುವಷ್ಟೆಯಾ?
ಮುತ್ತನಿತ್ತು ಬದಲು?
ಇರುಳು ಜಾಗರವು—ತುಂಬ ಕಾತರವು
ನಿನ್ನ ಸುಳಿವು ಇಲ್ಲ!
ಬಯಕೆ ಬಳ್ಳಿ ಬೆಗುಂರಾಂತು ಬಲಿತು ಹೂ—
ಮುಡಿಯ ತಳೆಯಿತಲ್ಲ!
ಕೊಂಬೆರೆಂಬೆಗಳ ತಳಿರು ಕೊನರುಗಳ
ಹಸಿತು ಹೊತು ಅರಳಿ—
ಕರಗಳೆತ್ತಿ ಕೈಮಾಡಿ ಕರೆದರೂ
ದುಂಬಿ ಬಾರದುರುಳಿ—
ಬೀಭ್ಸದಲಿತ ಸುಮ ಸದೃಶವೆನ್ನ
ನಿರ್ಲಕ್ಷದಿಂದ ಬಾಳ
ವ್ಯರ್ಥ ಗೈದೆಯೆನ್ನೆಷ್ಟು ಕಾಲಕೊ!
ನೋಡ ಬಾರೊ ಗೋಳ!!

ಲೈಂಗಿಕ ಅವ್ಯವಸ್ಥೆ ಮತ್ತು ಯೋಗಾಸನ

(ಒಂದು ವಿಚಾರಪ್ರಚೋದಕ ಪ್ರಬಂಧ) *

ಶ್ರೀ. ಎಲ್. ವಿ. ಜೋಶಿ; ಬಿ. ಎ., ಬಿ. ಇಡಿ. ಕೂಡ್ಲಿಗಿ.

ಪೂರ್ವಾರ್ಧ

ಲೈಂಗಿಕ ಜೀವನದ ಅವ್ಯವಸ್ಥೆಯು ಮಾನವನ ಜೀವನವನ್ನೇ ದುಃಖಪೂರ್ಣವಾಗಿಸುವುದು. ಆದುದರಿಂದ ಈ ಬಗೆಯ ಅವ್ಯವಸ್ಥೆಯುಂಟಾಗದಂತೆ, ಮೊದಲಿನಿಂದಲೂ ಎಚ್ಚರು ತೆಗೆದುಕೊಳ್ಳಬೇಕಾದುದು ಪ್ರತಿಯೊಬ್ಬನ ಕರ್ತವ್ಯವಾಗಿದೆ.

◆

ಪುರಾತನ ವಿದ್ಯಾವಿಧಾನದಲ್ಲಿ ವಿದ್ಯಾರ್ಥಿಗಳು ಗುರುಕುಲಾಶ್ರಮಗಳಲ್ಲಿ ವಿದ್ಯಾರ್ಜನೆ ಮಾಡುತ್ತಿದ್ದರು. ಗುರುಗಳ ಆಶ್ರಯದಲ್ಲಿ, ಅವರ ಕೃಪಾಪಾತ್ರರಾಗುವುದೇ ಶಿಷ್ಯವೃಂದದ ಧ್ಯೇಯವಾಗಿತ್ತು. ಗುರುಕೃಪೆಯಾಗದಿದ್ದರೆ ವಿದ್ಯೆ ಸಫಲವಾಗುತ್ತಿರಲಿಲ್ಲವೆಂದೂ, ವಿದ್ಯಾಭ್ಯಾಸವು ಶಿಷ್ಯನಲ್ಲಿ ಅಗಾಧವಾಗಿದ್ದರೂ ಅಪ್ರಯೋಜಕವಾಗುತ್ತಿದ್ದಿತೆಂದೂ, ಗುರುಕೃಪೆಗೆ ಒಳಗಾದವನು ಶತಮೂಢನೇ ಆಗಿದ್ದರೂ ಕ್ಷಿಪ್ರದಲ್ಲಿಯೇ ವಿದ್ಯಾಪಾರಂಗತನಾಗುತ್ತಿದ್ದನೆಂದೂ, ನಮ್ಮ ನಾಡಿನ ಸನಾತನ ಗ್ರಂಥಗಳಲ್ಲಿಯ ಸನ್ನಿವೇಶಗಳು ಸಾರುತ್ತವೆ

ಮಹಾಭಾರತಕ್ಕೆ ನಾಯಕನಾಗಬೇಕಾಗಿದ್ದ ಶೂರ ಕರ್ಣನು ಅತುಲ ವಿದ್ಯಾಸಂಪನ್ನನಾದರೂ, ಗುರುವಿನ ಆಗ್ರಹಕ್ಕೆ ಒಳಗಾಗಿ ತನ್ನ ಸಮಸ್ತ ಪರಿಶ್ರಮವೂ ನಿರುಪಯೋಗಿಯಾದುದನ್ನು ಕಂಡು ಮರುಗಿ ಮರಣಕ್ಕೆ ಈಡಾದುದೊಂದು ಪ್ರಸಿದ್ಧ ವಿಷಯವೆ. ಅದು ದ್ವಾಪರದ ಮಾತೆಂದರೆ, ಈ ಯುಗದಲ್ಲಿ ಶ್ರೀಮಜ್ಜಗದ್ಗುರುಗಳಾದ ಆದಿಶಂಕರರ ಕೃಪೆಗೆ ಪಾತ್ರರಾದ ತ್ರೋಟಕಾಚಾರ್ಯರು, ಒಮ್ಮೆಲೇ ಕವಿಗಳಾದುದೂ ಉಲ್ಲೇಖಿತವಾಗಿದೆ.

ಆ ಗುರುಕುಲದ ಪದ್ಧತಿಯಲ್ಲಿ ಗುರುಗಳ ಆಶ್ರಯದಲ್ಲಿದ್ದು, ಅವರ ಶುಶ್ರೂಷೆ ಮಾಡಿಕೊಂಡು, ಅವರ ಆಶ್ರಮವಾಸಿಗಳಾಗಿದ್ದು, ಅವರ ನಡೆನುಡಿಗಳ ವ್ಯವಹಾರಗಳ ದಿವ್ಯದೃಶ್ಯದಿಂದ ಪರಿಣತರಾಗಿ, ಅವರ ತೀಕ್ಷ್ಣ ಪರಿವೀಕ್ಷಣೆಗೆ ಒಳಪಟ್ಟು, ದುರಭ್ಯಾಸಗಳಿಗೆಡೆಯಿಲ್ಲದ ಸತ್ಸಹವಾಸದ ಉತ್ತಮೋತ್ತಮ ಪರಿಣಾಮದಿಂದಲೂ, ಆಶ್ರಮದ ಶುಭ್ರವಾತಾವರಣದಿಂದಲೂ, ಗುರುಗಳ ತಪಃಫಲದಿಂದಲೂ ಪ್ರಭಾವಿತರಾಗುತ್ತ, ವಿದ್ಯಾರ್ಥಿಗಳು ಪುಟಕ್ಕಿಟ್ಟ ಅಪರಂಜಿಯಂತೆ ಪ್ರಜ್ವಲಿಸುತ್ತ, ಅವರ ಸಂತುಷ್ಟಾಂತರಂಗದಿಂದ ಅನುಗ್ರಹಿಸಿದ ಅಪ್ಪಣೆಯಿಂದ ಮನೆಗೆ ಮರಳಿ, ಸಮಾಜದಲ್ಲಿ ತೇಜೋರಾಶಿಗಳಾಗಿ ಪಾಮರರಿಗೆ ಪಥದರ್ಶಕರಾಗಿ ಬಾಳುತ್ತ ತಮ್ಮ ಮತ್ತು ಪರರ ಹಿತಸಾಧನೆಗೆ ತಮ್ಮ ಗುರುಕೃಪಾಪ್ರಾಪ್ತ ಪೋಷಿತ ವಿದ್ಯಾಫಲದ ಪರಿಣಾಮವನ್ನು ಪ್ರಯೋಗಿಸುತ್ತಿದ್ದರು.

ಹೀಗಾಗಿ ಅಂದಿನ ವಿದ್ಯಾರ್ಥಿಗಳು ತನುಮನಗಳಿಂದ ಪವಿತ್ರರಾಗುತ್ತಿದ್ದರೆಂದರೆ ಅತಿಶಯೋಕ್ತಿಯಾಗಲಾರದು.

ಆದರೆ ಇಂದಿನ ವಿದ್ಯಾವಿಧಾನವನ್ನು ಸ್ವಲ್ಪ ಅವಲೋಕಿಸುವ: ಇಂದಿನ ವಿದ್ಯಾವಿಧಾನದಲ್ಲಿ ಗುರುಗಳ ಸ್ಥಾನವೇನಿದೆ—ಸಮಾಜದ ದೃಷ್ಟಿಯಲ್ಲಿ? ಗುರುಗಳ ಬಗ್ಗೆ ವಿದ್ಯಾರ್ಥಿಗಳ ಸಂಭ್ರಮವೆಷ್ಟಿದೆ? ಗುರುಗಳ ವ್ಯಕ್ತಿತ್ವವೇನಿದೆ? ಇತ್ಯಾದಿ ವಿಷಯಗಳನ್ನು ಆಲೋಚಿಸಿದರೆ, ನನಗೆ ಅತಿಶಯ ದುಃಖವಾಗುತ್ತದೆ.

ಇಂದಿನ ವಿದ್ಯಾವಿಧಾನವು ಕಾಲಕ್ಕೆ ತಕ್ಕಂತೆ ಬದಲಾಯಿಸುತ್ತಿದೆ. ಭಾರತೀಯ ಸಂಸ್ಕೃತಿಯ ತಿರುಳಾದ ವೇದ-ವೇದಾಂತ, ಉಪನಿಷತ್ ಪುರಾಣ ಷಟ್ಶಾಸ್ತ್ರಾಂತರ್ಗತ ನಿಗೂಢ ಬೃಹದ್ವಿದ್ಯಾ ವಿಪುಲಸಂಪತ್ತನ್ನು ನಿರ್ಲಕ್ಷ್ಯಿಸಿ, ಇಂದಿನ ಸುಲಭಗ್ರಾಹ್ಯ—ಆದುದರಿಂದಲೇ-ಮಾನವಮಸ್ತಿಷ್ಕವನ್ನು ಸುತೀಕ್ಷ್ಣವಾಗಿಸುವುದಕ್ಕೆ ಸಾಕಷ್ಟು ಅವಕಾಶಗಳನ್ನು ಒದಗಿಸದ, ವಿದ್ಯಾರ್ಥಿಗಳನ್ನು ಪರೀಕ್ಷಾಫಲಾಪೇಕ್ಷೆಯಿಂದ ಪ್ರೇರಿತವಾಗುವಂತೆ ಮಾಡುವ, ಪರಿಸ್ಥಿತಿಗಳಿಂದ ಪ್ರಭಾವಿತ ವಿದ್ಯಾವಿಧಾನವನ್ನು ಅನುಸರಿಸುತ್ತ, ವಿದ್ಯಾರ್ಥಿಗಳಲ್ಲಿ ಆಲಸಿಕತೆ, ವಿದ್ಯೆಯಲ್ಲಿ ಉಪೇಕ್ಷೆ, ವಿದ್ಯಾದಾತರ ಬಗ್ಗೆ ಅಸಾಧುವಾದ ನಡತೆಯನ್ನು ಪ್ರೇರೇಪಿಸುತ್ತಿದೆ ಇಂದಿನ ವಿದ್ಯಾವಿಧಾನ! ಇದರಿಂದುಂಟಾಗುತ್ತಿರುವ ಅನೇಕ ತೊಡಕುಗಳನ್ನು ಸರಿಪಡಿಸಲು, ವಿದ್ಯಾಖಾತೆಯೂ ವಿದ್ಯಾಮಂತ್ರಿಗಳೂ ಶ್ರದ್ಧಾಯುಕ್ತ ಪ್ರಯತ್ನಗಳನ್ನು ನಡೆಯಿಸುತ್ತಿರುವುದು ವ್ಯಕ್ತವಾಗುತ್ತಿದೆ.

* **ಸ್ವಾಮಿ ಶ್ರೀಕುವಲಯಾನಂದಜಿಯವರು ತಮ್ಮ ‹ಯೋಗಮೀಮಾಂಸಾ› ಎಂಬ ಪತ್ರಿಕೆಯಲ್ಲಿ ಬರೆದ ಲೇಖನವೊಂದರ ಅನುವಾದವಿದು. ಲೇ.**

ಆಧುನಿಕ ವಿದ್ಯಾವಿಧಾನದ ದೋಷಗಳಲ್ಲಿ ಮುಖ್ಯವಾದು-ದೆಂದರೆ, ವಿದ್ಯಾರ್ಥಿವೃಂದದ ವ್ಯಕ್ತಿತ್ವದ ರಚನೆಗೆ ಕೊಡಲಿಯೇಟನ್ನು ಕೊಡುವ ಅಂಶವೆಂದರೆ, ವಿದ್ಯಾರ್ಥಿ ಮತ್ತು ವಿದ್ಯಾದಾನಿಯ ಸಂಬಂಧ. ವಿದ್ಯಾರ್ಥಿಗಳನ್ನು ಎಷ್ಟು ಉತ್ತಮ ತರಗತಿಯವರನ್ನಾಗಿ ತಯಾರು ಮಾಡಲು ಇಚ್ಛೆಯಿದೆಯೋ, ವಿದ್ಯೆಯನ್ನು ಕೊಡುವ ಗುರುಗಳೂ ಅಷ್ಟೇ ಉತ್ತಮ ದರ್ಜೆಯವರಾಗಿರಬೇಕೆಂದು ಇಚ್ಛಿಸಬೇಕು.

ಗುರುಗಳ ವ್ಯಕ್ತಿತ್ವ ಉದಾತ್ತ, ಗಂಭೀರ, ಸರಳ, ಅನುಕರಣೀಯ ಇತ್ಯಾದಿ ಅವರ್ಣನೀಯ ಗುಣಗಳಿಂದ ಪ್ರಪೂರ್ಣವಾಗಿರಬೇಕು. ಗುರುವು ನೀಚನಾದರೆ ವಿದ್ಯಾರ್ಥಿಯು ನೀಚನಾಗುವುದಕ್ಕೆ ಆಸ್ಪದವು ಹೆಚ್ಚಾಗಿರುತ್ತದೆ. ಗುರುವು ಉದಾರಿಯಾಗಿದ್ದರೆ ವಿದ್ಯಾರ್ಥಿಯೂ ಅವರ ಉದಾರಬುದ್ಧಿಯಿಂದ ಪ್ರೇರಿತನಾಗಲು ಅವಕಾಶವಿರುತ್ತದೆ. ವಿದ್ಯಾರ್ಥಿಯು ಉದಾರಿಯಾಗದಿದ್ದರೂ ಸಂಕುಚಿತ ಬುದ್ಧಿಯವನಾ-ಗುವುದು ಕಡಿಮೆಯಾದರೂ ಆದೀತು. ಗುರುವು ನೈಚ್ಯಭಾವದಿಂದ ತೊಳಲುತ್ತಿದ್ದರೆ, ಅವರು ತಮ್ಮ ವಿದ್ಯಾರ್ಥಿಗಳಿಂದಲೂ ಅದನ್ನೆ ಬಯ-ಸುವರು. ವಿದ್ಯಾರ್ಥಿಗಳು ನಾಡಿನ ನಾಳಿನ ನಾಯಕರು. ಅವರು ಈ ಆಧುನಿಕ ಕಾಲದಲ್ಲಿ ನಾನಾ ದೇಶಗಳಿಗೆ ಹೋಗಿ ತಮ್ಮ ನಾಡಿನ ವರ್ಚಸ್ಸನ್ನು ಬೆಳಗಬೇಕಾಗುವುದು. ಅಂಥವರಲ್ಲಿ ಈ ದರಿದ್ರ ನೈಚ್ಯ-ಭಾವ (Inferiority Complex) ವನ್ನು ಗುರುಗಳು ಚುಚ್ಚಿ ಹೊಗಿ-ಸಿದರೆ ಭಾರತದ ಗತಿ ಏನು?

ಇನ್ನೊಂದು ಅಸಂತುಷ್ಟಿಯ ವಿಷಯವೆಂದರೆ: ವಿದ್ಯಾರ್ಥಿಗಳಲ್ಲಿ ಒಂದು ಚೋದ್ಯವಾದ ಮನೋಭಾವನೆ ಮೂಡುತ್ತಿದೆ. ಆದರಿಂದಾಗಿ ವಿದ್ಯಾರ್ಥಿಗಳಲ್ಲಿ ಗುರುಗಳ ಬಗ್ಗೆ, ಅವರು ಪ್ರದಾನಮಾಡುತ್ತಿರುವ ವಿದ್ಯೆ-ಯಲ್ಲಿ ಅಶ್ರದ್ಧೆಯುಂಟಾಗುತ್ತದೆ. ವಿದ್ಯಾರ್ಥಿಗಳು ತಮ್ಮ ಹಣವನ್ನು ವಿದ್ಯಾರ್ಥಿ ಶಾಖೆಗೆ ಒದಗಿಸುತ್ತಿರುವುದರಿಂದ, ಅವರಲ್ಲಿ ತಾವು ಗುರು-ಗಳಿಗೆ ಮತ್ತು ಅವರ ಕುಟುಂಬದವರಿಗೆ ಅನ್ನದಾತರೆಂಬ ಕುತ್ಸಿತ ಬುದ್ಧಿಯುಂಟಾಗುತ್ತದೆ. ಇದು ವ್ಯಕ್ತರೂಪದಲ್ಲಿ ಇಲ್ಲವಾದರೂ, ಅನುಭವಿಕ ಉಪಾಧ್ಯಾಯನ ಎಣಿಸುವಿಕೆಯಾಗಿದೆ. ಇದಕ್ಕೆ ಮೂಲ-ಕಾರಣವೆಂದರೆ, ಸ್ವತಂತ್ರ ರಾಷ್ಟ್ರಕ್ಕೇನೇ ಕುಂದು ತರುವ-ವಿದ್ಯಾರ್ಥಿ-ಗಳಿಂದ ವಿದ್ಯಾಪ್ರದಾನಕ್ಕೆಂದು ವೇತನವನ್ನು ಸ್ವೀಕರಿಸುವುದು. ನನ್ನ ಅಭಿಪ್ರಾಯವೆಂದರೆ, ವಿದ್ಯೆಯು ಯಾವ ಮಟ್ಟದಲ್ಲಿಯೇ ಆಗಲಿ, ಉಚಿತವಾಗಿ ದೊರೆಯಬೇಕೆಂದು. ವಿದ್ಯಾದಾತರ ವೇತನವು ಹೇರಳ-ವಾಗಿರಬೇಕು. ಗುರುಗಳಿಗೆ ತಮ್ಮ ನಿತ್ಯಜೀವನದ ಗಭೀರ ಕರಾಳ ಪರಿಸ್ಥಿತಿಯ ನೆನಹು, ಪಾಠ ಮಾಡುವಾಗ ಬಾರದಂತೆ ಆಗಬೇಕು. ಹಾಗಾದರೆ ಗುರುಶಿಷ್ಯರ ಸಂಬಂಧವು ಸರಳ ಶ್ರದ್ಧಾ ಭಕ್ತಿಯುತ ವಾಗುವುದು.

ಗುರುಗಳಿಗೆ ಸಾಂಸಾರಿಕ ತಾಪತ್ರಯವಿಲ್ಲದಿದ್ದರೆ ಅವರು ವಿದ್ಯಾ ಪ್ರಸಾರದ ಕಾರ್ಯವನ್ನು ಹೆಚ್ಚು ಅಮೋಘವಾಗಿ ಮಾಡುವುದರಲ್ಲಿ ಸಂದೇಹವಿಲ್ಲ. ಹೀಗೆಂದ ಮಾತ್ರಕ್ಕೆ ಇಂದು, ಅವರಲ್ಲಿ ಅಶ್ರದ್ಧೆ ತುಂಬಿದೆ ಯೆಂಬುದು ನನ್ನ ಅಭಿಪ್ರಾಯವಲ್ಲ. ಆದರೆ ಕಾಣದ ಈ ಪರಿಸ್ಥಿತಿಗಳು ಅವರ ಲಕ್ಷ್ಯದ ಮಟ್ಟಕ್ಕೆ ಬಾರದೇ ಇದ್ದರೂ, ಅವರ ಪದ್ಧತಿಯ ಮೇಲೆ—ಅಗೋಚರ ಗ್ರಹದ ಪ್ರಭಾವದಂತೆ,—ಸತತ ಪರಿಣಾಮ-ವನ್ನು ಮಾಡುತ್ತಲೇ ಇರುತ್ತವೆ.

ಇಲ್ಲಿ ನನಗೆ ಒಂದು ಚಿಕ್ಕ ಕಥೆಯ ನೆನಪಾಗುತ್ತದೆ: ಒರ್ವ ರಾಜನು ಮಂತ್ರಿಸಮೇತನಾಗಿ ನದೀತೀರದಲ್ಲಿ ವಿಹರಿಸುತ್ತಿದ್ದ. ಅಲ್ಲಿ ಬಿಸಿಲಿನಲ್ಲಿ ತಮ್ಮ ಅಂಗವಸ್ತ್ರಗಳನ್ನು ಆಕಾಶದಲ್ಲಿ ಹಾರಲುಬಿಟ್ಟು, ಅವುಗಳ ನೆರಳಿನಲ್ಲಿ ತಪೋನಿರತರಾಗಿದ್ದ ಬ್ರಾಹ್ಮಣೋತ್ತಮರನ್ನು ಕಂಡು ಬೆರಗಾಗಿ, ಅವರ ಆ ಪ್ರಭಾವದ ಕಾರಣವೇನೆಂದು ಮಂತ್ರಿವ-ರ್ಯನನ್ನು ಕೇಳಿದ. ಆ ಮಂತ್ರಿಪುಂಗವನು "ಮಹಾರಾಜಾ! ಇದೆಲ್ಲ ತಮ್ಮ ಪ್ರಭಾವವೇ!" ಎಂದನಂತೆ. "ಅದು ಹೇಗೆ?" ಎಂದು ರಾಜನೆನಲು "ನಿಧಾನವಾಗಿ ತಮಗೆ ತಿಳಿಸುವೆ" ಎಂದು ಹೇಳಿ, ರಾಜ-ನನ್ನು ಅರಮನೆಗೆ ಕರೆದುಕೊಂಡು ಬಂದನಂತೆ. ಮರುದಿವಸದಿಂದ ಮಂತ್ರಿಯು ರಾಜಾಜ್ಞೆಯಾಗಿದೆಯೆಂದು ಹೇಳಿ, ಆ ವಿಪ್ರೋತ್ತಮರಿಗೆ ಆಹಾರಾದಿಗಳನ್ನು ಒದಗಿಸಬಾರದೆಂದು ಕಟ್ಟಪ್ಪಣೆ ಮಾಡಿದನಂತೆ. ಆಗ ಆ ಭೂಸುರರಿಗೆ ತಮ್ಮ ಕುಟುಂಬಗಳ ಪೋಷಣೆಯ ಚಿಂತೆಯು ಒದಗಿ, ಅವರ ತಪೋನಿಷ್ಠೆಗೆ ಭಂಗವು ಉಂಟಾಗಿ, ಅವರ ಪ್ರಭಾವವು ಕುಂದಿ, ಅವರ ವಸ್ತ್ರ–ಪಟಗಳು ಆಕಾಶದಲ್ಲಿ ನಿರಾಧಾರವಾಗಿ ನಿಲ್ಲು-ವುದು ನಿಂತುಹೋಯಿತು. ಆಗ ಸಚಿವನಿಂದ ಆಹ್ವಾನಿತನಾಗಿ ರಾಜನು ನದೀತೀರದ ದೃಶ್ಯದಲ್ಲಿ ಉಂಟಾದ ಪರಿವರ್ತನೆಯನ್ನು ಕಂಡು ಆಶ್ಚರ್ಯಾನ್ವಿತನಾಗಿ, ಅದರ ಕಾರಣವನ್ನು ಕೇಳಿದನು. ಮಂತ್ರಿಯು "ಇದೂ ತಮ್ಮ ಪ್ರಭಾವವೇ!" ಎಂದು ತಾನು ಮಾಡಿದು-ದನ್ನು ತಿಳುಹಲು, ರಾಜನು ತಲೆದೂಗಿ, ವಿಪ್ರೋತ್ತಮರಿಗೆ ಪೂರ್ವವತ್ ಆಹಾರಾದಿ ಸಾಂಸಾರಿಕ ತಾಪತ್ರಯಗಳಿರದಂತೆ ಮಾಡಿದನು. ಮತ್ತೆ ವಿಪ್ರರು ಲೋಕ ಕಲ್ಯಾಣ ಕಾರಣವಾದ ತಪೋಧರ್ಮದಲ್ಲಿ ನಿರತರಾ-ದರಂತೆ.

ಅಂದರೆ ಯಾರೇ ಆಗಲಿ, ಅವರವರ ಕಾರ್ಯಗಳಲ್ಲಿ ನಿರತರಾಗ-ಲೋಸುಗ, ಅವರು ಚಿಂತಾರಹಿತರಾಗಿರಲು ಬೇಕೆಂಬುದು ಇದರಿಂದ ನಿಶ್ಚಿತವಾಗುವುದು. ಇಂದಿನ ವಿದ್ಯಾಪ್ರದಾತರ ಸ್ಥಿತಿಯೂ ಈ ಶೋಚನೀಯ ಮಟ್ಟಕ್ಕೆ ಇಳಿದಿದೆ. ಪ್ರಪಂಚದಲ್ಲಿಯ ಯಾವುದೇ ಸ್ವತಂತ್ರ ಪ್ರಗತಿಪರರಾಷ್ಟ್ರದಲ್ಲಿ ನೋಡಿದರೂ, ಗುರುಗಳ ಸ್ಥಾನ-ಮಾನಗಳು ಉನ್ನತವೂ, ಉತ್ತಮವೂ ಆಗಿರುವುದು ಗೋಚರ-ವಾಗುವುದು.

ಇನ್ನು ವಿದ್ಯಾರ್ಥಿಗಳಲ್ಲಿಯ ಅಧೋಗತಿಯನ್ನು ಕಂಡು ಅನಿರ್ವ-ಚನೀಯವಾದ ದುಃಖಾತಿರೇಕದಿಂದ ನನ್ನ ಮನ ಮರುಗುತ್ತದೆ.

ವಿದ್ಯಾಭ್ಯಾಸಿಗಳು ತಮ್ಮ ಹಳ್ಳಿಗಳಿಂದ ಬಂದು ಪಟ್ಟಣಗಳಲ್ಲಿ ನೆಲಸುವರು. ವಿದ್ಯಾರ್ಥಿನಿಲಯಗಳಿರುವ ವಿದ್ಯಾಮಂದಿರಗಳಲ್ಲಿರುವ ವಿದ್ಯಾರ್ಥಿಗಳ ಪರಿಸ್ಥಿತಿ ಸ್ವಲ್ಪ ಉತ್ತಮ. ವಿದ್ಯಾರ್ಥಿನಿಲಯಗಳು ಇಲ್ಲದ ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳು ತಮಗೆ ಸಿಕ್ಕ ಕೋಣೆಗಳಲ್ಲಿ ವಾಸ ಮಾಡುವರು. ಈಗಿನ ಪರಿಸ್ಥಿತಿಗಳಲ್ಲಿ ಉತ್ತಮ ವಾತಾವರಣ-

ದಿರುವ ಸ್ಥಳವು ದುರ್ಲಭ. ಕೆಂಡ ಕೆಂಡ ಸ್ಥಳಗಳಲ್ಲಿದ್ದು ಅಲ್ಲಿಯ ಪರಿಸರದ ಪ್ರಭಾವಕ್ಕೆ ಒಳಪಟ್ಟು, ವಿದ್ಯಾರ್ಥಿಗಳು ತಮ್ಮ ನೈಯಕ್ತಿಕ ಚಾರಿತ್ರ್ಯವನ್ನು ಹಾಳುಮಾಡಿಕೊಳ್ಳುವ ಸಂಭವವು ಹೆಚ್ಚು. ವಿದ್ಯಾನಿಲಯದಲ್ಲಿರುವ ವಿದ್ಯಾರ್ಥಿಗಳಲ್ಲೂ ಕೆಲವು ಪಟ್ಟಣಗಳಲ್ಲಿ. ದ್ದಂತೆ ವಿದ್ಯಾರ್ಥಿನಿಲಯಗಳಲ್ಲಿಯೇ ಉಪಾಧ್ಯಾಯರು ನೆಲಸಿ ಅವರ ಯೋಗಕ್ಷೇಮವನ್ನು ನೋಡಿಕೊಳ್ಳುವುದಾದರೆ ಉತ್ತಮ.

ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿಯೂ, ಸಾಮಾನ್ಯವಾಗಿ ಯುವಕರಲ್ಲಿಯೂ, ತಲೆದೋರುತ್ತಿರುವ ಕೆಲವು ದುರಭ್ಯಾಸಗಳಿಗೆ ಕಾರಣಗಳೆಂದರೆ ಅವರ ಮೇಲಿನ ನಿರೀಕ್ಷಣೆ ಕಡಿಮೆಯಾದುದೇ ಆಗಿದೆ.

ಪಾಠಶಾಲೆಯ ಉನ್ನತ ತರಗತಿಗೆ ಬರುವಷ್ಟಕ್ಕೆ ವಿದ್ಯಾರ್ಥಿಗಳು ವಯಸ್ಸಿಗೆ ಬಂದವರಾಗಿ, ಅವರು ಸಹಜವಾಗಿ ವಿದ್ಯಮಾನವಾದ ಧಾತು ಸೃಷ್ಟಿ ಕಾರ್ಯದಿಂದ ಪ್ರಚೋದಿತರಾಗಿ ವೀರ್ಯಕೋಶ, ವೀರ್ಯಜನಕಾಂಗಗಳು, ವೀರ್ಯದಭಿವೃದ್ಧಿ ಮೊದಲಾದವುಗಳಬಗ್ಗೆ ತಿಳುವಳಿಕೆಯಿಲ್ಲದೆ ತಮ್ಮ ಪವಿತ್ರವಾದ ಅಂಗಭಾಗಗಳನ್ನು ಅಪವಿತ್ರಮಾಡುವ ಸಂಭವವು ಹೆಚ್ಚು.

ಇದಕ್ಕೆ ಕಾರಣವೆಂದರೆ ವಿದ್ಯಾರ್ಥಿಗಳಿಗೆ ಜನನೇಂದ್ರಿಯಗಳ ಸ್ಥಾನಮಾನಗಳನ್ನು ತಿಳಿಸದೆ, ಅವುಗಳ ವಿಷಯ ಗೌಪ್ಯವೆಂತಲೂ, ಪಾಪಮಯವೆಂತಲೂ ಅರ್ಥರಹಿತವಾದ ಸಂಪ್ರದಾಯಕ್ಕೆ ಒಳಪಟ್ಟು ಮಾಡುತ್ತಿರುವ ಅಪಪ್ರಚಾರವೇ.

ಮನುಷ್ಯನಿಗೆ ಅವನ ದೇಹದ ವಿವಿಧ ಅಂಗಾಂಗಗಳ ಬಗ್ಗೆ ಹೇಳುತ್ತ, ಅವುಗಳ ಪ್ರಾಮುಖ್ಯತೆ ಏನು? ಅವುಗಳು ದೇಹದ ಆರೋಗ್ಯಮಯ ನಿಲುವಿಕೆಗೆ ಹೇಗೆ ಅನುಕೂಲವೆಂದು ಹೇಗೆ ತಿಳಿಸುವೆವೋ, ಹಾಗೆಯೇ ಅವನ ಜನನೇಂದ್ರಿಯವೂ, ವೀರ್ಯಜನಕಾಂಗಗಳೂ, ವೀರ್ಯಕೋಶಗಳೂ ಅತ್ಯಾವಶ್ಯಕ—ಅತ್ಯುಪಯೋಗಿಗಳೆಂದು ತಿಳಿಸುವುದೂ ನಮ್ಮ ಕರ್ತವ್ಯ.

ಹೀಗೆ ಜನನೇಂದ್ರಿಯಗಳ ವಿಚಾರವನ್ನು ಸರಿಯಾಗಿ ಗ್ರಾಹ್ಯವಾಗುವ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಬೋಧೆ ಮಾಡದಿದ್ದರೆ, ಅವುಗಳ ಅಸಂಪೂರ್ಣ ಜ್ಞಾನದಿಂದಾಗಲಿ, ಅಥವಾ ತಪ್ಪು ತಿಳಿವಳಿಕೆಯಿಂದಾಗಲಿ, ವಿದ್ಯಾರ್ಥಿಗಳಿಗೆ ಹಾನಿಯುಂಟಾಗುವುದು ನಿಜ. ಆದರೆ ಇಂದಿನ ವರೆಗೂ ಈ ವಿಷಯವನ್ನು ಅಶ್ಲೀಲವೆಂದು ಭಾವಿಸಿರುವ ಪುಣ್ಯಾತ್ಮರ ತಪ್ಪುತಿಳಿವಳಿಕೆಯಿಂದಲೇ ಇಷ್ಟು ಅನರ್ಥವು ವಿದ್ಯಾರ್ಥಿಗಳಲ್ಲಿಯೂ ಯುವಕರಲ್ಲಿಯೂ ನಡೆದು ಬಂದಿರುವುದು.

ಇಂದು ಈ ಜನನೇಂದ್ರಿಯಗಳ ಪ್ರಾಮುಖ್ಯದ ಜ್ಞಾನದ ಪ್ರಸಾರವನ್ನು ಪ್ರಾರಂಭಿಸಿದರೆ, ಮೊದಮೊದಲು ಅದು ವಿದ್ಯಾರ್ಥಿವೃಂದಕ್ಕೆ ಚೋದ್ಯವೆನಿಸುವುದು ಆದರೆ ಅವುಗಳ ಸೂಕ್ಷ್ಮಾತಿಸೂಕ್ಷ್ಮ. ಸಂಪೂರ್ಣ ಜ್ಞಾನವಾದೊಡನೆ, ಅವರಿಗೆ ಅವುಗಳ ಮಹತ್ವವು ತಿಳಿದು, ಅವರಲ್ಲಿ ಅಲ್ಲಿಯ ವರೆಗಿದ್ದ ಅಜ್ಞಾನದ ಬಗ್ಗೆ ದುಃಖವಾಗಿ ಜನನೇಂದ್ರಿಯಗಳ ಸಂಕೀರ್ಣ ಪದ್ಧತಿಗೆ ಚಕ್ಕಿತ ಬೆರಗುಂಟಾಗುವುದು.

ಆದರೆ ಜಗತ್ತು ಹೇಗಿರಬೇಕೆಂಬ ಎದುರೀಜಿಕ ವಿಚಾರವನ್ನು ತೆಗೆದುಕೊಂಡು, ಈ ಅಸ್ತವ್ಯಸ್ತಜಗತ್ತಿನ ಸುಧಾರಣೆಗೆ ಕೈಹಾಕುವ ಮುನ್ನ, ಈಗ ಹಾನಿ ಹೊಂದಿರುವ ಜನಾಂಗಭಾಗವನ್ನು ಹೇಗೆ ಆರೋಗ್ಯಮಾರ್ಗಕ್ಕೆ ತರುವುದೆಂಬುದೇ ಈ ಲೇಖನದ ಮುಖ್ಯೋದ್ದೇಶ.

ಯುವಕರಲ್ಲಿ ದುರಭ್ಯಾಸಗಳು ಮೂಡಿ ಅವರ ಜೀವನವೇ ನಿರ್ಗತಿಕವಾಗುತ್ತಿದೆ. ಆ ದುರಭ್ಯಾಸಗಳೇನು? ಅವುಗಳ ನಿವಾರಣೋಪಾಯವೇನು?

ಸಾಮಾನ್ಯವಾಗಿ ಪಟ್ಟಣವಾಸಿಗಳಾದ ವಿದ್ಯಾರ್ಥಿಗಳಲ್ಲಿ ಮುಷ್ಟಿಮೈಥುನದ ದುರಭ್ಯಾಸವು ಸಾಂಕ್ರಾಮಿಕವಾಗಿ ಗುಪ್ತವಾಗಿ ವ್ಯಾಪಿಸಿಕೊಂಡು, ಅವರ ಜೀವನ ಪ್ರವಾಹದಲ್ಲಿ ಸ್ವೈರೋನ್ಮೈರಾದಂತೆ ಅಪಾಯಕರವಾಗಿ ಬೆಳೆದುಕೊಂಡು, ಅವರ ಜೀವನದ ತಳಹದಿಯನ್ನೆ ಅಭದ್ರವಾಗಿ ಮಾಡುತ್ತದೆ. ಚಿಕ್ಕ ಊರುಗಳಲ್ಲಿಯ ವಿದ್ಯಾರ್ಥಿಗಳಲ್ಲಿ ಮುಷ್ಟಿಮೈಥುನವೂ ವೇಶ್ಯಾಲಂಪಟತನವೂ ಪ್ರಬಲವಾಗಿರುತ್ತದೆ. ಚಿಕ್ಕ ಊರುಗಳಲ್ಲಿಯ ವಿದ್ಯಾರ್ಥಿಗಳಲ್ಲಿ ಮುಷ್ಟಿಮೈಥುನಕ್ಕಿಂತ ವೇಶ್ಯಾಲಂಪಟತ್ವವೇ ಹೆಚ್ಚಾಗಿರುತ್ತದೆ.

ಭಾರತದ ಭಾವೀಜನಾಂಗವಾಗತಕ್ಕವರು ಈ 'ಸಿಲ್ಲಾ' ಮತ್ತು 'ಸಿರಬುಡೆಸ್' ಗಳಿಂದ ತಪ್ಪಿಸಿಕೊಳ್ಳುವುದು ಅತಿ ಕಷ್ಟ. ಇವುಗಳಿಗೆ ದಾಸರಾದ ವಿದ್ಯಾರ್ಥಿಗಳದೇ ಆಗಲಿ, ಯುವಕರದೇ ಆಗಲಿ, ಗೋಳು ಹೇಳತೀರದು. ಈ ದುರಭ್ಯಾಸದಿಂದುಂಟಾದ ಬಲಹೀನತೆಯ ಯೋಚನೆಗೊಳಪಟ್ಟು, ತಮ್ಮ ಭವಿಷ್ಯ ಜೀವನದಲ್ಲಿ ನಿರಾಶಾಮಯರಾಗಿ, ಎತ್ತ ನೋಡಿದರೂ ಕಗ್ಗತ್ತಲೆ-ಅಪಮಾನಗಳನ್ನು ಕಂಡು, ಭರಿಸಲಾರದೆ, ತಮ್ಮ ದೌರ್ಬಲ್ಯಕ್ಕೆ ತಾವೇ ಕಾರಣರಾದುದರಿಂದ, ಸಮಾಜಕ್ಕೆ ಮುಖವನ್ನು ತೋರಿಸಲಾರದೆ ಮುದುಡಿಕೊಂಡು ಮಲಗಿಬಿಡುವರು—ಅವಿವಾಹಿತರಾದ ಈ ದುರಭ್ಯಾಸ ಗ್ರಸ್ತರು ಆದರೆ ವಿವಾಹಿತರಾದವರು ತಮ್ಮ ಸಹವಾಸಿನಿಯ ಎದುರಿನಲ್ಲಿ ತಮ್ಮ ದುರ್ಬಲತೆಯನ್ನು ಒಪ್ಪಿಕೊಳ್ಳುವುದು ಮೃತ್ಯುವಿಗಿಂತ ಕೀಳು. ಇವರ ಗುಟ್ಟು ಸಮಾಜದಿಂದ ಇರಬಹುದು; ಆದರೆ ಪತ್ನಿಯರೆದುರಿಗೆ ರಟ್ಟಾಗುವುದು ಖಚಿತ. ಇಂತಹವರಿಗೆ ತಮ್ಮ ಸತಿಯರನ್ನು ಸೇರುವ ಅಭಿಪ್ರಾಯವು ಮೂಡಿದರೆ ಸಾಕು, ಹೃದಯವು ತಲ್ಲಣಿಸಿ ಹೋಗುವುದು.

"ಜಯಂತಿ"ಗೆ ಚಂದಾದಾರರಾಗಿ
ಮನೆಯ ಜನರ ಸಂಸ್ಕೃತಿಯನ್ನು ಹೆಚ್ಚಿಸಿರಿ!

ಕಸದ ಬುಟ್ಟಿ

(ಸಣ್ಣ ಕತೆ)

ಶ್ರೀ. ದೇವಳಿ ಕೃಷ್ಣರಾಯರು ಬಿ. ಎ. ಬೆಳಗಾಂವಿ

ಹೆಣ್ಣು ಹೆತ್ತ ತಾಯ್ತಂದೆಗಳು ಇಂದು ಪಡುತ್ತಿರುವ ಗೋಳನ್ನು ನೋಡಿದರೆ, ಯಾವ ಹೆಣ್ಣಿನ ತಾಯಿ-ತಂದೆಗಳಿಗೂ ಇಂತಹ ಭಯಾನಕ ಕನಸು ಬೀಳಬಹುದಾಗಿದೆ. ಇದೊಂದು ಮನೋವಿಶ್ಲೇಷಣದ ಮಾದರಿಯ ಕತೆ !

ಸರಲೆ ಎಷ್ಟೋ ಪರೀಕ್ಷೆಗಳಲ್ಲಿ ಪಾಸಾಗಿದ್ದಳು. ಕನ್ನಡ ಮುಲಕೀ ಪರೀಕ್ಷೆ, ಮ್ಯಾಟ್ರಿಕ್ಯ್ಯುಲೇಶನ್, ಹಿಂದೀ ರಾಷ್ಟ್ರಭಾಷೆ.... ಇತ್ಯಾದಿ. ಸಂಗೀತ ತಕ್ಕಮಟ್ಟಿಗೆ ಗೊತ್ತಿತ್ತು. ಹೆಣೆಯುವುದರಲ್ಲಿ ಪಾರಂಗತಳು. ಅಡಿಗೆ ಮುಂತಾದ ಮನೆಗೆಲಸ ಸಾಕಷ್ಟು ಗೊತ್ತಿತ್ತು. ಅವಳಲ್ಲಿ ನಯ-ಸೌಜನ್ಯವಿದೆ. ಬಣ್ಣ ರಕ್ತ ರಂಜಿತವಾಗಿದ್ದರೂ ಕಪ್ಪಿನಲ್ಲಿ ಲೆಕ್ಕವಿಲ್ಲ. ಅವಳೇನು ಕುಳ್ಳಲ್ಲ. ಡೂಗಲ್ಲ. ನಡೆ ನೋಟ ಒಳ್ಳೆಯದಾಗಿದೆ. ಮಾತಿನಲ್ಲಿ ತೊದಲ್ನುಡಿಯಿಲ್ಲ. ಫೋಟೋಗಳಲ್ಲಿಯೂ ಸಲಕ್ಷಣಗಳಾಗಿ ಕಾಣುತ್ತಾಳೆ. ಆಸ್ತಿಕ ಜೀವನ ಅವಳದು.

ಆದರೆ ಒಂದು ಪರೀಕ್ಷೆಯಲ್ಲಿ ಮಾತ್ರ ಅವಳು ಮೂರು ವರ್ಷಗಳಿಂದ ತೇರ್ಗಡೆಯಾಗಿರಲಿಲ್ಲ ಎಷ್ಟೋ ಸಲ—ಅಸಂಖ್ಯ ವೇಳೆ—ಆ ಪರೀಕ್ಷೆಯನ್ನು ಎದುರಿಸಿದ್ದಳು. ಅವಳಲ್ಲಿ ಆ ಪರೀಕ್ಷೆಯಲ್ಲಿ ತೇರ್ಗಡೆಯಾಗುವ ಯೋಗ್ಯತೆಯೇ ಇರಲಿಲ್ಲವೆಂದು ಹೇಳುವುದು ಅತಿ ಧೈರ್ಯದ ಮಾತಾದೀತು! ಅವಳು ಸೋಲುತ್ತಿರುವ ನಿಜವಾದ ಕಾರಣ ಅವಳಲ್ಲ.

ನಡುಮನೆಯಲ್ಲಿ ಸರಲೆಯ ತಾಯಿ ಯಾವುದೋ ಒಂದು ವಿಚಾರ ಮಾಲೆಯಲ್ಲಿ ಮುಳುಗಿ ಪಡಸಾಲೆಯಲ್ಲಿ ದೃಷ್ಟಿಯಿಟ್ಟು, ಗೋಡೆಗೆ ಒರಗಿದ್ದಳು. ಆಗ ಮಧ್ಯಾಹ್ನ ಮೂರುವರೆ ಗಂಟೆ. ಹೊರಗೆ ಊರನ್ನೆ ಭಸ್ಮಮಾಡುತ್ತಿರುವುದೇನೋ ಎಂಬುವ ಬಿಸಿಲಿನ ಉರಿ. ಸರಲೆ ಕೋಣೆಯಲ್ಲಿಯ ಕಸ ಮುಗಿಸಿ, ಪಡಸಾಲೆಯಲ್ಲಿಯ ಕಸವನ್ನು ಉಡುಗಿ, ಬಾಗಿಲ ಬಳಿ ಕೂಡಿಸಿ, ಒಂದು ಬುಟ್ಟಿಯಲ್ಲಿ ತುಂಬುತ್ತಲಿದ್ದಳು. ಸರಲೆಯ ತಾಯಿಯ ದೃಷ್ಟಿ, ಸರಲೆ ಕಸವನ್ನು ಬುಟ್ಟಿಯಲ್ಲಿ ತುಂಬುತ್ತಿರುವುದರಲ್ಲಿ ನೆಟ್ಟಿತ್ತು. ಕೆಲವು ವರ್ಷಗಳಿಂದ ಅನುಭವಿಸಿದ ಕಠೋರ ವಿಷ-ನಿಮಿಷಗಳಿಗೆ ಸೋತು ಬೆಂದು ಹೋದ ಅವಳ ತಲೆಯಲ್ಲಿ ಯಾವದೋ ಒಂದು ತರಂಗ ಕೇಂದ್ರೀಕೃತವಾಗಿ, ಅವಳ ಹುಬ್ಬು ಗಂಟಿಕ್ಕಿ ಸರಲೆಯಕಡೆಗೆ ಮತ್ತಿಷ್ಟು ತೀಕ್ಷ್ಣವಾಗಿ ನೋಡಹತ್ತಿದಳು.... ಕಣ್ಣುಗಳಿಗೆ ಭಾರವೆನಿಸಿ ಅವುಗಳಿಗೆ ವಿಶ್ರಾಂತಿ ಬೇಕೆನಿಸಿತೋ ಏನೋ !!........

x x x x x

ಇಂದು ಅವರ ಮನೆಯಲ್ಲಿ ಯಾವುದೋ ಒಂದು ಮಹತ್ತ್ವದ ಕಾರ್ಯಕ್ರಮವಿದೆ!! ಊರಲ್ಲಿಯ ಎಷ್ಟೋ ಗಂಡುಸರಿಗೂ ಪರಊರನಲ್ಲಿಯ ಎಷ್ಟೋ ಜನರಿಗೂ ಆಮಂತ್ರಣ ಹೋಗಿತ್ತು. ಮಧ್ಯಾಹ್ನದ ಮೂರುವರೆ ಗಂಟೆಯಾಗಿ ಕೆಲವು ನಿಮಿಷಗಳಾಗಿದ್ದುವು. ಸರಿಯಾಗಿ ನಾಲ್ಕು ಗಂಟೆಗೆ ಕಾರ್ಯಕ್ರಮ. ಮನೆಯಲ್ಲಿಯ ಬಲಬದಿಯ ವಿಶಾಲವಾದ ಕೋಣೆಯಲ್ಲಿ ಆ ಕಾರ್ಯಕ್ರಮ. ಅದರ ಬಾಗಿಲನ್ನು ಈಗ ಮುಚ್ಚಲಾಗಿತ್ತು ....ನಾಲ್ಕಕ್ಕೆ ಸುಮಾರು ೧೦-೧೫ ನಿಮಿಷಗಳು ಉಳಿದುವು. ಸರಲೆಯ ತಂದೆ ಗಡಿಬಿಡಿಯಿಂದ ಮುಖದ ಮೇಲಿನ ಬಿಸಿಲಿನ-ಬೆವರನ್ನೊರಸುತ್ತ ಹೊರಗಿನಿಂದ ಬಂದರು. ಮನೆಯ ಎಡಬದಿಯ ಕೋಣೆಯಲ್ಲಿ ಹೋಗಿ ತಾವು ೨ ಚೀಲಗಳಲ್ಲಿ ತಂದ ಪುಡಿಕೆಗಳನ್ನು ಸುರುವಿದರು.

ಜನರು ಬರಲು ಪ್ರಾರಂಭಿಸಿದರು. ಹೆಚ್ಚಾಗಿ ತರುಣರೇ. ೧೦೦ ಕ್ಕೆ ೫೦ ರಷ್ಟು ಲಗ್ನವಾಗದ ತರುಣರೇ. ೪೦ ರಷ್ಟು ವಯಸ್ಕರು. ೧೦ ರಷ್ಟು ಲಗ್ನವಾದ ತರುಣರು ಬಂದಿರಬಹುದೆನ್ನಿ ನೋಡು-ನೋಡುತ್ತಿರುವಷ್ಟರಲ್ಲಿ ಎಡಬದಿಯ ವಿಶಾಲವಾದ ಕೋಣೆಯಲ್ಲಿ ಕಿಕ್ಕಿರಿದು ಜನ ತುಂಬಿದರು. ಸರಲೆಯ ತಂದೆ ಒಳಗೆಂದು ಹೋದವರು ಇನ್ನೂ ಹೊರಗೆ ಬಂದಿರಲಿಲ್ಲ.

ಕೂಡಿದ ಜನರು ಅತ್ತಿತ್ತ ನೋಡುತ್ತ ತಮ್ಮ ತಮ್ಮೊಳಗೆ ಗುಜು ಗುಜು ಪ್ರಾರಂಭಿಸಿದರು.

"ಏತಕ್ಕಾಗಿ ಆಮಂತ್ರಣವಿದೆ?"

"ಆಮಂತ್ರಣದಲ್ಲಿ ಏನೂ ಬರೆದಿಲ್ಲವಲ್ಲ!"

"ತಪ್ಪದೆ ದಯಮಾಡಿ ಬರಬೇಕೆಂದು ಆಗ್ರಹದ ವಿನಂತಿ ಬೇರೆಯಿದೆ!"

"ತಾವೆಲ್ಲ ಆಗಮಿಸಿ ಅನುಗ್ರಹಿಸಿ ಇಂಥ ಸುಸಂಧಿಯನ್ನು ಒದಗಿಸಿಕೊಟ್ಟಲ್ಲಿ ಸುಕೃತಾರ್ಥನಾದೇನು—ಎಂದು ಬೇರೆ ಬರೆದಿದ್ದಾರೆ!"

"ಹೌದು, ನಮ್ಮ ಪತ್ರಗಳಲ್ಲಿಯೂ ಹಾಗೆಯೇ ಇದೆ."

"ಹೌದು, ಹೌದು, ನಮ್ಮ ಪತ್ರಗಳಲ್ಲಿಯೂ ಅದೇ ಪ್ರತಿ.... ಇಗೊಳ್ಳಿ"

"ಹಾಗಾದರೆ ಎಲ್ಲರ ಆಮಂತ್ರಣದಲ್ಲಿಯೂ ಇದೆಯೆನ್ನಿ ಹೆಚ್ಚೇಕೆ!"

"ಆದರೆ ಮನೆಯೇಕೆ ಇಷ್ಟು ಮೌನ?"

"ಯಜಮಾನನೆಲ್ಲಿ?"

"—ರೆಲ್ಲಿ—ಎಂದೆನ್ನಿರಿ"

"ಏನು ಹಾಗೆಂದರೆ?"

"ಯಜಮಾನರೆಲ್ಲಿ—ಎಂದು ಕೇಳಿರಿ"

"ಸಾಕು—ಸುಮ್ಮನಿರ್ರಿ........"

"ಏನು ಮಿಸ್ಟರ್...ನೀವಲ್ಲ....ಅವರು, ಹಿಂದಿನವರು....ಹೌದು ನೀವೇ...., ಇಲ್ಲಿ ಮೊದಲು ಬಂದಿದ್ದಿರೇನು?

"ಬಂದಿದ್ದೆ, ಎರಡು ಸಲ. ಇವರೆಲ್ಲರೂ.......?"

"ಹೌದು, ಹೌದು, ನಾವೆಲ್ಲರೂ ಬಂದಿದ್ದೆವು" ಎಂದು ತುಂಬಿದ ಎಡ ಜೋರಿನಿಂದ ಒದರಿತು.......ಸರಲೆಯ ತಾಯಿ ಅಡಿಗೆಯ ಮನೆಯಿಂದ ಬಂದು ಅಷ್ಟು ಜನರ ಮಧ್ಯದೊಳಗಿಂದ ಕೋಣೆಯಿಂದ ದಾಟಿ ಬಂದಳು. ಯಾರೂ ಅವಳಿಗೆ ನಮಸ್ಕರಿಸಲಿಲ್ಲ. ಅವಳಾದರೂ ಯಾರನ್ನೂ ಮುಖವೆತ್ತಿ ನೋಡಲಿಲ್ಲ.

ಮತ್ತೆ ಗುಜುಗುಜು.

"ಮೂಕಿಯೋ ?"

"ಸೊಕ್ಕು.... ?"

"ಉಶ್‌ಶ್. – ಇಲ್ಲದ ಉಸಾಬರಿ ನಿಮಗೆ......."

"ಈ ಮನೆಯೇಕೆ ಇಷ್ಟು ಧೂಳಿಯಿಂದ ತುಂಬಿದೆ ?"

"ಈ ಕಾಗದಗಳ ಪುಡಿಕೆಯೆಂಥವು ??"

"ಇದೋ ನೋಡಿರಿ !"

"ಎಲಾ ! ಅವುಗಳಲ್ಲಿ ಮಣ್ಣು ತುಂಬಿಟ್ಟಿದೆ !"

"ಇಲ್ಲಿಯೂ ಇವೆ ನೋಡಿರಿ"

"ಅಲ್ಲಿಯೂ ಇವೆ ನೋಡಿರಿ"

"ಎಷ್ಟೋ ದಿನಗಳಿಂದ ಕಸವನ್ನು ಉಡುಗಿದಂತೆ ಕಾಣುವುದಿಲ್ಲ?"

"ತಪ್ಪಿ ಧರ್ಮಶಾಲೆಗೆ ಬಂದಿಲ್ಲವಷ್ಟೇ ನಾವೆಲ್ಲರೂ !"

"ಅದಿರಲಿ, ನಾವು ಇಲ್ಲಿ ಬಂದದ್ದಾದರೂ ಏತಕ್ಕೆ ?"

"ಅದೇ ನಾವು ಕೇಳೋದು......."

........ಅಷ್ಟರಲ್ಲಿ ಪಡಸಾಲೆಯ ಬಲಬದಿಯ ಕೋಣೆಯ ಬಾಗಿಲನ್ನು ತೆರೆದು ಸರಲೆಯ ತಂದೆ ಬಂದು-ಎಲ್ಲರಿಗೂ ವಂದಿಸಿ ಕ್ಷಮೆಯನ್ನು ಕೋರಿ, ಕಾಗದದ ಪುಡಿಕೆಗಳನ್ನು ಪ್ರತಿಯೊಬ್ಬರ ಕೈಯಲ್ಲಿ ಕೊಟ್ಟು, ಕ್ಷಮಿಸಿರಿ, ಸಿಟ್ಟಾಗಬಾರದು. ಕೂಡಿದ ಜನ ಬಹಳವಾಗಿದೆ! ನನಗೆ ಗೊತ್ತಿದೆ. ನಿಮಗೆ ಅನನುಕೂಲತೆ ಅಷ್ಟಿಷ್ಟಾಗಿಲ್ಲ. ಏನು ಮಾಡಲಿ ! ಉಪಾಯವಿಲ್ಲ. ನೀವೆಲ್ಲ ಶಾಂತರೀತಿಯಿಂದ ಎದುರಿನ ಕೋಣೆಯಲ್ಲಿ ನಡೆಯಿರಿ. ಕೋಣೆ ವಿಶಾಲವೇನೋ ಇದೆ. ಆದರೆ ಇಲ್ಲಿಯಂತೆ ಆ ಕೋಣೆಯಲ್ಲಿ ಒಮ್ಮೆಲೆ ಧುಮುಕಲು ಬರುವಂತಿಲ್ಲ. ಒಳಗೆ ಒಬ್ಬೊಬ್ಬರಾಗಿ ಕಾಲಿಟ್ಟಲ್ಲಿ ಸರಿಹೋದೀತು. ಕಾಗದದ ಪುಡಿಕೆಯ ಉಪಯೋಗ ನಿಮಗೆ ತಾನಾಗಿ ತಿಳಿಯುವುದು. ನೀವೆಲ್ಲರೂ ಪೂಜ್ಯರು, ಸದ್ಗೃಹಸ್ಥರು, ಸುಸಂಸ್ಕೃತರು, ಮೇಧಾವಿಗಳು, ಪಂಡಿತರು, ಕಲಾವಂತರು, ಇತ್ಯಾದಿ–ಇತ್ಯಾದಿ ಇದ್ದೀರಿ........ಬರೀ ಮಾತನಾಡುತ್ತ ನಿಂತರೆ ನಿಮ್ಮ ವೇಳೆಯ ದುರುಪಯೋಗ ಮಾಡಿದಂತಾದೀತು....ಕಾರ್ಯಕ್ರಮ ಪ್ರಾರಂಭವಾಗಲಿ" ಎಂದರು........

ಬಲಬದಿಯ ವಿಶಾಲವಾದ ಕೋಣೆಯಲ್ಲಿ ಒಬ್ಬೊಬ್ಬರಾಗಿ ಕಾಲಿಡಹತ್ತಿದರು. ಕೋಣೆಯಲ್ಲಿ ಪ್ರವೇಶ ಮಾಡಿದತಕ್ಷಣ ಬದಿಗೆ ದೊಡ್ಡ ತಗ್ಗು. ಅದರಲ್ಲಿ ಒಂದು ಬುಟ್ಟಿ; ದೊಡ್ಡ ಬುಟ್ಟಿ. ಬುಟ್ಟಿಯ ಸುತ್ತೆಲ್ಲ ತಗ್ಗಿನಲ್ಲಿ ಕಸ ತುಂಬಿತ್ತು. ಬುಟ್ಟಿಗೆ ಅಗಲವಾದ ಮುಚ್ಚಳ. ಮುಚ್ಚಳಕ್ಕೆ ಮುಷ್ಟಿಯಷ್ಟು ತೂತು. ಮುಚ್ಚಳದ ಮೇಲೆ ಒಂದು ಬದಿಗೆ, "ಇಲ್ಲಿ ಕಸವಿದೆ, ಕಸದ ಪುಡಿಕೆಯನ್ನು ಇಲ್ಲಿಯೇ ಒಗೆಯಬೇಕು" ಎಂದು ಬರೆದಿತ್ತು. ಸಭಾಮಂಟಪದಲ್ಲಿ ಮತ್ತು ಪ್ರದರ್ಶನಾಲಯಗಳಲ್ಲಿದ್ದಂತೆ ಸಾಲುಸಾಲಾಗಿ ಜನರು ಸುತ್ತುತಿರುಗಿ ಬರುವಂತೆ ಬಿದಿರು-ಹಗ್ಗದಿಂದ ಕಟ್ಟಲಾಗಿತ್ತು. ಸುತ್ತು ಹಾಕಿ ತಿರುಗಿ ಬಂದವರಿಗೆ ಹೊರಗೆ ಹೋಗಲು ಕೋಣೆಯಲ್ಲಿ ಬಲಬದಿಗೆ ಹಾದಿಯೇ ಬೇರೆಯಿತ್ತು. ಪುನಃ ಪಡಸಾಲೆಯಲ್ಲಿ ಬರುವ ಆವಶ್ಯಕತೆಯಿರಲಿಲ್ಲ. ಪಡಸಾಲೆಯಿಂದ ಕೋಣೆಗೆ ಹೋಗುವ ಬಾಗಿಲು ಮತ್ತು ಕೋಣೆಯಿಂದ ಹೊರಗೆ ಹೋಗುವ ಎರಡನೆಯ ಬಾಗಿಲ ನಡುವೆ ಬುಟ್ಟಿಯಿಟ್ಟ ತಗ್ಗು ಇತ್ತು. ಕೋಣೆಯಲ್ಲಿ ಎಡ-ಬಲದ ಎರಡೂ ಗೋಡೆಗಳ ತುಂಬೆಲ್ಲ ಪಟಗಳಿದ್ದುವು.

ಒಬ್ಬೊಬ್ಬರಾಗಿ ಅಚ್ಚರಿಗೊಂಡು ಒಂದೊಂದೇ ಪಟವನ್ನು ಓದುತ್ತಾ ಓದುತ್ತಾ ದಾಟಿ ಮುಗಿಸಿದವರು, ಮುಖದ ಮೇಲಿನ ಬೆವರು ಒರಸಿಕೊಳ್ಳುತ್ತಾ, ದೀರ್ಘ–ಶ್ವಾಸ ಬಿಡುತ್ತಾ, ಬುಟ್ಟಿಯ ಮುಚ್ಚಳವನ್ನು ತೆರೆದು ನೋಡಿ ಬಾಯ್ಬಿಡುತ್ತ ಕೋಣೆಯಿಂದ ಸರ್ರೆಂದು ಜಾರುತ್ತಲಿದ್ದರು. ಕೆಲವರು ಜೀವ ಹೋದಂತೆ, ಕೆಲವರು ಪಶ್ಚಾತ್ತಾಪದ ಗಾಳಿ ಸೋಂಕಿದವರಂತೆ, ಕೆಲವರು ಅವಮಾನಿತರಾದಂತೆ ಕಾಣುತ್ತಿದ್ದರು.... ಸರಲೆಯ ತಾಯಿ ಎಲ್ಲರನ್ನೂ ತೀಕ್ಷ್ಣವಾಗಿ ನೋಡುತ್ತ ಕೋಣೆಯಲ್ಲಿ ಒಂದು ಬದಿಗೆ ನಿಂತು ಹೊರಟುಹೋದಳು.

ಒಂದು ಗೋಡೆಯ ಮೇಲಿನ ಕೆಲವು ಪಟಗಳಲ್ಲಿ :—

"—ಪ್ರಥಮ ಪರೀಕ್ಷಕ–ಬಿ.ಎ. ಬಿಟಿ, ಟಿಡಿ–ಅವರ ತೀರ್ಮಾನ:- ವಿದ್ಯಾರ್ಥಿನಿ ಬಿ. ಎ. ಆಗಿಲ್ಲ. ಹಿಂದೀ ಪೂರ್ಣ ಕಲಿತಿಲ್ಲ. ಸಂಗೀತದಲ್ಲಿ ಅಷ್ಟೊಂದು ಪ್ರಗತಿಯಿಲ್ಲ–ಅದಕ್ಕೆ ಬೇಡ—"

x x x x x

"ಒರ್ವ ಸರಕಾರೀ ನೌಕರಿಯನ್ನು ಹುಡುಕುವ ಪರೀಕ್ಷಕ— ಅವನ ತೀರ್ಮಾನ : ನಾನು ಮ್ಯಾಟ್ರಿಕ್ ಫೇಲಿದ್ದರೆ ಏನಾಯಿತು?.... ಹುಡುಗಿ ನನ್ನಂತೆ, ಮುಲಕೀ ಪರೀಕ್ಷೆಯಲ್ಲಿ ಮೊದಲನೆ ನಂಬರಿನಲ್ಲಿ ಪಾಸಾಗಿಲ್ಲ...."

x x x x x

"—ಒರ್ವ ಉದ್ಯೋಗಸ್ಥ ಪರೀಕ್ಷಕನ ತೀರ್ಮಾನ:— ನನಗೆ ಎತ್ತರದಲ್ಲಿ ಸರಿಸಮಾನಳಾಗುತ್ತಾಳೆ. ಅದಕ್ಕೆ ಬೇಡ —"

x x x x x

"ಮುಗ್ಧ ಪ್ರಾಣಿ-ಹೇಗೆ ಸಂಸಾರ ಮಾಡಬಲ್ಲಳು ? ಅದಕ್ಕೆ ಬೇಡ—"

x x x x x

"ಶಾಲೆ ಕಲಿತರೂ ಮನೆಯ ಹೊರಗಿನ ವಾತಾವರಣ-ಸಂಸ್ಕಾರವಿಲ್ಲ–ಅದಕ್ಕೆ ಬೇಡ—"

x x x x x

"ನಮಗೆ ಬೇಡ, ಏಕೆಂದರೆ ಅದು ಸಮ್ಮತಿಷ್ಟೆ–ಅದಕ್ಕೆ ಬೇಡ—"

x x x x x

"ಅವಳು ಹಾಡುತ್ತಾಳೆ. ಅದು ನಮಗೆ ಬೇಕಿಲ್ಲ–ಅದಕ್ಕೆ ಬೇಡ—"

x x x x x

"ಅವಳು ಇಂಗ್ರೇಜೀ ಕಲೀದು ಪಾಸಾಗ್ಯಾಳಂತೆ....ಛೀ-ಛೀ. ಕಲಿತ ಹೆಣ್ಣು ಕಟ್ಗೊಂಡು ಯಾರು ಗೋಳ್ಯಾಡಬೇಕs ನಮ್ಮವ್ವ –"

—ಕಿರಾಣೀ ಅಂಗಡಿ ಗುಂಡೂನ ತಾಯಿ ಅಂದದ್ದು.

x x x x x

"ನಮ್ಮ ಹುಡುಗ ಒಲ್ಲೆ ಅಂತಾನೆ—ಅದಕ್ಕೆ ಬೇಡ—"

x x x x x

"ನಡಿಗೆ Stylish ಇಲ್ಲ–ಅದಕ್ಕೆ ಬೇಡ".... ಟೆನಿಸ್ ಚಾಂಪಿಯನ್ನೋರ್ವನ ತೀರ್ಮಾನ"

x x x x x

"ನಡುವು ಇನ್ನಷ್ಟು ಸಣ್ಣದಿರಬೇಕಿತ್ತು........"

x x x

"ಅವಳು ನಗುವಾಗ ಹಲ್ಲು ಕಾಣುತ್ತವೆ–ಅದಕ್ಕೆ ಬೇಡ"

x x x

"ಹುಡುಗಿಯಲ್ಲಿ ಎಲ್ಲ ಸದ್ಗುಣಗಳೂ ಕಾಣುವುದಿಲ್ಲ. ಒಂದು ಇದ್ದರೆ ಒಂದು ಇಲ್ಲ....ಇಂಥ ಅರ್ಧ ಮರ್ಧ ಕನ್ಯೆಯನ್ನು ಕಟ್ಟಿಕೊಂಡು ಮಾಡುವುದೇನು? ...."

x x x

"ಹುಡುಗಿ ಕುಳ್ಳು....ನನಗೆ ಸರಿಯಾಗುವುದಿಲ್ಲ..........."

ಏಳು ಫೂಟು ಎತ್ತರದ ಪರೀಕ್ಷಕನ ತೀರ್ಮಾನ.

.... ಈಚೆಯ ಗೋಡೆಯ ಪಟಗಳಲ್ಲಿ ಕೆಲವು 'ಸುಭಾಷಿತ'ಗಳಿದ್ದವು:—

"ಹೆಣ್ಣು ಹಡೆದರೆ ಜೋಕೆ!!?"

x x x

"ಗಂಡಿಗೊಂದು ಹೆಣ್ಣು ಗೊಂಬೆಯ ಆಟ!"

x x x

"ಮಗಳೇ, ಇಷ್ಟೆಲ್ಲ ಜನ ನಿನ್ನ ಪರೀಕ್ಷೆ ಮಾಡಿದ್ದಾರೆ. ನೋಡು ಅವರ ಮೆರೆದಾಟ, ಕಣ್ಣು ಮುಚ್ಚಿ ಕುಳಿತ ಬೆಕ್ಕಿನ ಜಾತಿ ಅದು........"

x x x

"ಮಹನೀಯರೇ, ತಾಯಿಯ ಹೊಟ್ಟೆಯಿಂದ ಜನಿಸಿ ಬಂದ ನಿಮಗೆ ಹೆಣ್ಣು ಸಂತಾನವಾದಲ್ಲಿ, ಕೂಡಲೇ ಮುಂದಿನ ಅಧೋಗತಿಯನ್ನು ತಪ್ಪಿಸಲು ಜಗತ್ತಿನಿಂದ ಅದನ್ನು ಹದ್ದುಪಾರು ಮಾಡಿಬಿಡಿರಿ—ತಿಳಿಯಿತೋ!?"........

........ಬಾಗಿಲ ಬದಿಯಲ್ಲಿದ್ದ ಕಡೆಯ ಪಟವೊಂದರ ಮೇಲೆ...

"ನನ್ನ ಮನೆಯಲ್ಲಿ ಮಗಳಿಲ್ಲ.... ಅದೇ ನೋಡಿ, ಕಸದ ಬುಟ್ಟಿಯ ಮುಚ್ಚಳ ತೆರೆಯಿರಿ.... ಅಲ್ಲಿ ಸಜೀವ ಕಸವಿದೆ!!!"

ಜನರೆಲ್ಲರೂ ಹೊರಟು ಹೋಗಿದ್ದರು.... ಸರಲೆಯ ತಂದೆ ಪಡಸಾಲೆಯಿಂದ ಹೊಕ್ಕು ಮುಚ್ಚಳ ತೆರೆದರು. ಸರಲೆಯ ತಾಯಿ, ಜನರು ಹೊರಟು ಹೋದ ಬಾಗಿಲಿನಿಂದ ಹೊಕ್ಕು ನೋಡಿದಳು.

ಬುಟ್ಟಿಯಲ್ಲಿ ನೋಡಿದ ಕೂಡಲೇ ಸರಲೆಯ ತಾಯಿ ಚೀರಿದಳು. ಬುಟ್ಟಿಯಲ್ಲಿ ಸರಲೆ ನಿಶ್ಚೇಷ್ಟಿತಳಾಗಿ ಬಿದ್ದಿದ್ದಳು. ಮೈಸುತ್ತ ಕಸ ತುಂಬಿತ್ತು. ಮುಖದ ಸುತ್ತುಮುತ್ತ ಕಾಗದದ ಪುಡಿಕೆಗಳೂ ರಾಶಿಯಾಗಿ ಬಿದ್ದಿದ್ದವು. ಕಸಕ್ಕಿಂತಲೂ ಕೀಳು ಎಂದು ಅವು ಕಿರುಚುತ್ತಿದ್ದುವು!!........

x x x x x

ಸರಲೆಯ ತಾಯಿ ಕಣ್ಣು ತೆರೆದಳು. ಸರಲೆ ಪಡಸಾಲೆಯಲ್ಲಿರಲಿಲ್ಲ....ಅವಳು ಕೋಣೆಯಲ್ಲಿ ಹಾಸಿಗೆ, ಲೋಡು, ತಕ್ಕೆ ಮುಂತಾದುವುಗಳನ್ನು ಸರಿಯಾಗಿ ಇಟ್ಟು ತನ್ನ ಕರ್ತವ್ಯದಲ್ಲಿ ನಿರತಳಾಗಿದ್ದಳು. ತಾಯಿ ಧಾವಿಸುತ್ತಾ ಕೋಣೆಗೆ ಬಂದಳು. ಸರಲೆಯಲ್ಲಿ ಯಾವ ವಿಕಾರವೂ ಇರಲಿಲ್ಲ. ೪|| ಗಂಟೆಗೆ ಸರಲೆಯ ಪರೀಕ್ಷೆ. ತಂದೆ ಅದಕ್ಕಾಗಿಯೇ ಹೊರಗೆ ಹೋಗಿರುವರು. ಆದರೆ ಸರಲೆಯ ತಾಯಿಗೆ ತಾನು ಕಂಡದ್ದು ಕನಸಲ್ಲ; ಕಂಡದ್ದು ಸತ್ಯ—ಎಂದೆನಿಸುತ್ತಿದೆ. ಸರಲೆಯ ಪರೀಕ್ಷೆ!.... ಆ ಕೋಣೆ!.... ಆ ಕಸದ ಬುಟ್ಟಿ!.... ತಾಯಿಯ ತಲೆಯಲ್ಲಿ ಬಿಟ್ಟೂಬಿಡದೆ ಅದೇ ವಿಚಾರತರಂಗ ಉಕ್ಕೇರಿ ತುಂಬುತ್ತಲಿತ್ತು.

ಬೆಂದ ಹೃದಯ

[ಹೊಸ ರೂಪಕಸಂಕಲನ]

ಬರೆದವರು ಶ್ರೀ. 'ಆನಂದಕಂದ'ರು

ಅಚ್ಚಾಗುತ್ತಲಿದೆ. ಒಂದೆರಡು ವಾರಗಳಲ್ಲಿಯೆ ಪ್ರಕಟವಾಗುವುದು.

ಓದಿದರೆ ರಸಭರಿತವಾದ ಕತೆಗಳು! ಆಡಿದರೆ ಮನೋಹರವಾದ ನಾಟಕಗಳು! ಮಾರ್ಚ್ ಮುಗಿಯುವುದರೊಳಗಾಗಿ ಬೇಡಿಕೆ ಕಳುಹುವವರಿಗೆ ಅಂಚೆವೆಚ್ಚವನ್ನು ನಾವೇ ವಹಿಸಿ ಪುಸ್ತಕ ಕಳುಹುವೆವು.

ಶರತ್ ಪ್ರಕಾಶನ ಮಂದಿರ, ಧಾರವಾಡ

ಹಳ್ಳಿಗಳಿಗೆ ಹಿಂದಿರುಗಿರಿ!

ಶ್ರೀ. ಬಿ. ಪಿ. ಎಸ್. ರಾವ್, ಬೆಳಗಾಂವಿ.

ಹಳ್ಳಿಯ ಸಂಸ್ಕೃತಿಯ ಪ್ರಭಾವದಿಂದಲೇ ಭಾರತವು ಜಗತ್ತಿನಲ್ಲಿ ಬಹುಕಾಲ ಬಾಳಿ ಬೆಳಗಿತು. ಈಗ ಕೂಡ ಹಳ್ಳಿಗಳ ಬಲದಿಂದಲೆ ಭಾರತವು ಬದುಕಬೇಕಾಗಿದೆ. ಹಳ್ಳಿಯ ಅವನತಿಯೆಂದರೆ, ಭಾರತದ ತಾಯಿಬೇರಿಗೆ ಹುಳುಹಿಡಿದಂತೆಯೆ ಸರಿ!

'ಹಳ್ಳಿಗಳಿಗೆ ಹಿಂದಿರುಗಿರಿ!' 'ಹಳ್ಳಿಗಳಿಗೆ ಹಿಂದಿರುಗಿರಿ!!' ಇದು ಯಾರು ಯಾರಿಗೆ ಹೇಳುವ ಮಾತು ಗೊತ್ತಿದೆಯೆ? ಭಾರತ ರಾಷ್ಟ್ರದ ಅಭ್ಯುದಯವನ್ನು ಕುರಿತು ವಿಚಾರಮಾಡುವ ನಮ್ಮ ಮುಂದಾಳುಗಳೆಲ್ಲರೂ ಈ ಮಾತನ್ನು ಹೇಳುತ್ತಿದ್ದಾರೆ; ಹಣವನ್ನು ಗಳಿಸಿ ಸುಖವಿಲಾಸಗಳಿಂದ ಬದುಕಬೇಕೆಂದು ಪಟ್ಟಣವನ್ನು ಸೇರಿದ ಸುಶಿಕ್ಷಿತರಿಗೆ—ಈ ಮಾತಿನಿಂದ ಎಚ್ಚರಿಕೆ ಕೊಡುತ್ತಿದ್ದಾರೆ.

ಕಲಿತವರಿಗೆಲ್ಲ ನೌಕರಿ-ಚಾಕರಿಗಳ ಆಶೆ. ಬಂಡವಾಳವಿರುವ ಸಿರಿವಂತರಿಗೆಲ್ಲ ಪಟ್ಟಣದ ವ್ಯಾಪಾರದಿಂದ ಬಂಡವಾಳವನ್ನು ಹೆಚ್ಚಿಸಿಕೊಳ್ಳುವ ಆಶೆ. ತಿನ್ನುಣ್ಣುವುದಕ್ಕೆ ಇರುವವರಿಗೆಲ್ಲ ಪಟ್ಟಣದ ವಿಲಾಸಜೀವನದ ಆಶೆ. ಆದುದರಿಂದಲೆ ಭಾರತದ ಹಳ್ಳಿಗಳಲ್ಲಿ ಈಗ ಕಲಿತ ಜಾಣರು ಉಳಿಯುವುದಿಲ್ಲ. ಬಂಡವಾಳವಿರುವ ಸಿರಿವಂತರು ಉಳಿದಿಲ್ಲ. ತಿನ್ನುಣ್ಣುವುದಕ್ಕೆ ಚೆನ್ನಾಗಿ ಇರುವವರು ನಿಲ್ಲುವುದಿಲ್ಲ. ಇದರಿಂದ ಹಳ್ಳಿಗಳು ನಿರ್ಜೀವವಾದಂತಾಗಿವೆ; ನಿಃಸತ್ತ್ವವಾದಂತಾಗಿವೆ.

ಭಾರತದಲ್ಲಿ ಹಳ್ಳಿಗಳಲ್ಲಿ ವಾಸಿಸುವ ಜನರೇ ಬಹು ಸಂಖ್ಯಾಕರಾಗಿರುವರು. ಭಾರತದ ಜನಸಂಖ್ಯೆಯಲ್ಲಿ ಪಟ್ಟಣಗಳಲ್ಲಿ ವಾಸಿಸುವವರ ಪ್ರಮಾಣವು ನೂರಕ್ಕೆ ಹತ್ತರಷ್ಟು ಕೂಡ ಇಲ್ಲ. ಹೀಗಿರುವಾಗ ಭಾರತರಾಷ್ಟ್ರದ ಸರ್ವತೋಮುಖವಾದ ಅಭ್ಯುದಯವಾಗಬೇಕೆಂದರೆ ಹಳ್ಳಿಗಳ ಅಭ್ಯುದಯವೂ ಆಗಬೇಕಲ್ಲವೆ? ಹಳ್ಳಿಗಳು ಇದ್ದ ಹಾಗೆಯೆ ಇದ್ದು ಬಿಟ್ಟರೆ, ಭಾರತರಾಷ್ಟ್ರಕ್ಕೆ ಸಾಮರ್ಥ್ಯವೆಲ್ಲಿಂದ ದೊರೆಯಬೇಕು? ಸುಖ-ಸಮಾಧಾನಗಳೆಲ್ಲಿಂದ ಸಿಕ್ಕಬೇಕು?

ಯಾವುದೇ ಹಳ್ಳಿಗೆ ಹೋಗಿ ಇಂದು ನೀವು ನೋಡಿರಿ. ಅದು ತನ್ನ ಹಿಂದಿನ ಕಾಲದ ಸಾಂಸ್ಕೃತಿಕ ವೈಭವವನ್ನೂ ಸುಖ-ಸಮಾಧಾನಗಳನ್ನೂ ಕಳೆದುಕೊಂಡು ಬಿಟ್ಟಿರುತ್ತದೆ. ಹಳೆಯ ಕಾಲದ ದೇವ-ಧರ್ಮಗಳ ಭಕ್ತಿ-ವಿಶ್ವಾಸಗಳು ಇಂದಲ್ಲಿ ಮುದುಡಿಕೊಂಡಿವೆ; ಪಾಪ-ಪುಣ್ಯಗಳ ವಿಷಯದಲ್ಲಿರುವ ನಂಬುಗೆ ನಷ್ಟವಾಗಿವೆ. ದಯೆ, ದಾಕ್ಷಿಣ್ಯ, ಪರಸ್ಪರ ಪ್ರೀತಿ, ಬಂಧುಭಾವ ಮೊದಲಾದ ಸದ್ಗುಣಗಳು ಮರೆಯಾಗಿ, ಸ್ವಾರ್ಥ, ಮತ್ಸರ, ದ್ವೇಷ, ಕಲಹಗಳು ತಲೆಯೆತ್ತಿ ನಿಂತುಕೊಂಡಿವೆ. ಜೀವನದ ವಿಷಯದಲ್ಲಿ ಹಳ್ಳಿಗರಿಂದು ಸಂಪೂರ್ಣ ಅಜ್ಞಾನಿಗಳಾಗಿರುವರು. ಅವರಿಗೆ ಹೇಗೆ ದುಡಿಯಬೇಕೆಂಬುದು ಗೊತ್ತಿಲ್ಲ; ಹೇಗೆ ತಿನ್ನಬೇಕೆಂಬುದು ಗೊತ್ತಿಲ್ಲ. ಹೇಗೆ ನಡೆದುಕೊಂಡರೆ ಒಳ್ಳೆಯದಾದೀತೆಂಬುದರ ತಿಳಿವಳಿಕೆಯಿಲ್ಲ. ಆರೋಗ್ಯದ ಕಲ್ಪನೆಯಿಲ್ಲ; ರೋಗ ಬಂದರೆ ಹೇಗೆ ನೀಗಬೇಕೆಂಬುದರ ಅರಿವು ಇಲ್ಲ. ನಿರುದ್ಯೋಗದ ಮೂಲಕ ಬಡತನದಿಂದ ಬಳಲುವವರೇ ಬಹುಜನರು. ತಿನ್ನುಣ್ಣಲಿಕ್ಕೆ ಇದೆಯೆಂದೆನಿಸಿಕೊಳ್ಳುವವರು, ವ್ಯಸನಾಧೀನರಾಗಿ ಮನುಷ್ಯತ್ವವನ್ನೇ ಮರೆತಿರುವರು. ಎಂತಲೇ ಜಗಳಾಟ-ಹೊಡೆದಾಟಗಳಿಗೆ ಮಿತಿಯೆ ಇಲ್ಲ. ಸಾಮಾಜಿಕ ಕರ್ತವ್ಯದ ಹೊಣೆಯನ್ನು ಅರಿತವರು ಇಂದಿನ ಹಳ್ಳಿಗಳಲ್ಲಿ ಕಣ್ಣಿಗೆ ಕಾಣುವುದು ಅಪೂರ್ವ. ಆದುದರಿಂದಲೆ ಕಳವು-ಕೊಲೆ-ಸುಲಿಗೆಗಳು ಇಂದು ಹಳ್ಳಿಗಳಲ್ಲಿ ಹೆಚ್ಚುತ್ತ ನಡೆದಿವೆ. ಭಾರತದ ಹಳ್ಳಿಗಳು, ಹಿಂದಿನ ಕಾಲದಲ್ಲಿ ಸುಖ-ಶಾಂತಿಗಳ ಆಗರವೆನಿಸಿಕೊಂಡರೆ, ಇಂದಿನ ಕಾಲದಲ್ಲಿ ದುಃಖ-ಅಶಾಂತಿಗಳ ಬೀಡುಗಳಾಗಿವೆ

ಹಳ್ಳಿಗರ ದುಡಿಮೆಯ ಶಕ್ತಿಯೆ ನಮ್ಮ ದೇಶದ ಬೆನ್ನೆಲುವಾಗಿದೆ. ಪಟ್ಟಣಿಗರ ವಿಲಾಸ-ಭೋಗಜೀವನವೆಲ್ಲ ಹಳ್ಳಿಗರ ದುಡಿಮೆಯನ್ನೆ ಅವಲಂಬಿಸಿಕೊಂಡು ನಿಂತಿದೆ. ಹಳ್ಳಿಯ ಒಕ್ಕಲಿಗರ ದುಡಿಮೆಯ ನೆರವಿಲ್ಲದೆ ನಮ್ಮ ಸರಕಾರವೂ ಬಲಶಾಲಿಯಾಗಿ ಬಾಳಲಾರದು. ನಾಡಿನಲ್ಲಿ ಸಂಸ್ಕೃತಿಯನ್ನು ಹರಡುವ ಶಾಲೆ-ಕಾಲೇಜುಗಳು ಬಾಳುತ್ತಿರುವುದೂ ಹಳ್ಳಿಗರ ಶ್ರಮದ ಫಲದಿಂದೆ. ಆದರೆ ಇಂತಹ ಫಲವನ್ನೊದಗಿಸುವ ಹಳ್ಳಿಗರು ಇಂದು ಅಜ್ಞಾನ, ಬಡತನ, ಅನಾರೋಗ್ಯಗಳೆಂಬ ಹುಳುಗಳ ಬಾಯಿಗೆ ಸಿಕ್ಕಿಕೊಂಡಿದ್ದಾರೆ. ದಿನದಿನಕ್ಕೂ ಅವರ ಶಕ್ತಿ-ಸತ್ತ್ವಗಳು ಕಡಿಮೆಯಾಗುತ್ತಲಿವೆ. ಇಂತಹ ಕಾಲದಲ್ಲಿ ಹಳ್ಳಿಗಳ ಕಡೆಗೆ ದುರ್ಲಕ್ಷ್ಯ ಮಾಡಿದರೆ, ಭಾರತೀಯರ ಭವಿಷ್ಯವು ಯಾವ ಬಗೆಯದಾದೀತು?

ಕಲಿತವರೆಲ್ಲ ಪಟ್ಟಣದ ದಾರಿಯನ್ನು ಹಿಡಿಯಲು ತೊಡಗಿದುದರಿಂದ, ಹಳ್ಳಿಗಳಲ್ಲಿ ಸನ್ಮಾರ್ಗವನ್ನು ತೋರಿಸಿ ಸುವಿಚಾರಗಳನ್ನು

ತಿಳಿಹುವ ಸಮಾಜಸೇವಕರೇ ಇಲ್ಲದಂತಾಗಿದೆ. ಸುಶಿಕ್ಷಿತರಿಂದ ಆಗುತ್ತಿರುವ ಸ್ವಜನದ್ರೋಹವಿದು! ವೈಯಕ್ತಿಕ ಸುಖದ ಲೋಭದ ಮೂಲಕ, ತನ್ನ ಹಳ್ಳಿಗರ ಸುಖ–ದುಃಖಗಳ ವಿಚಾರವಿಲ್ಲದೆ ಪಟ್ಟಣವನ್ನು ಸೇರುವ ಸುಶಿಕ್ಷಿತರ ಸುಶಿಕ್ಷಣದಿಂದ, ದೇಶಕ್ಕೆ ಯಾವ ಪ್ರಯೋಜನವಿದೆ? ಸಾವಿರಾರು ಜನರನ್ನು ಕಗ್ಗತ್ತಲೆಯಲ್ಲಿ ಕುಳ್ಳಿರಿಸಿ, ಒಬ್ಬನ ಮನೆಯನ್ನು ಮಾತ್ರ ಮಿಂಚಿನ ದೀಪದಿಂದ ಬೆಳಗಿಸಿಕೊಳ್ಳುವುದು ಸುಶಿಕ್ಷಣದ ಲಕ್ಷಣವೇನೂ ಅಲ್ಲ. ಇನ್ನೊಬ್ಬನ ಸುಖಕ್ಕಾಗಿ ತನ್ನದೆಲ್ಲವನ್ನೂ ತ್ಯಾಗಮಾಡಿ, ಅದರಲ್ಲಿ ಆನಂದವನ್ನು ಕಾಣುವುದು ಭಾರತೀಯರ ಪರಂಪರೆಯ ಸಂಸ್ಕೃತಿ. ಆದರೆ ಈಗ ವಿಪರೀತಕಾಲ. ತನ್ನೊಬ್ಬನ ಸುಖಕ್ಕಾಗಿ ಮಿಕ್ಕವರೆಲ್ಲರ ಜೀವನವನ್ನು ಹುಡಿಗೂಡಿಸುವುದು ಇಂದಿನ ಕಾಲದ ನಾಗರಿಕತೆಯಾಗಿದೆ. ಇದು ಮಾನವನೀತಿಯಲ್ಲ; ದಾನವನೀತಿ! ಇಂದು ಹಳ್ಳಿಗಳನ್ನು ಉದ್ಧರಿಸಬೇಕಾದ ಆಗತ್ಯವನ್ನು ಮನವರಿಕೆ ಮಾಡಿಕೊಂಡು, ನಮ್ಮ ಸುಶಿಕ್ಷಿತ ತರುಣರು ಹಳ್ಳಿಗಳಿಗೆ ಹಿಂದಿರುಗಬೇಕು! ಅಲ್ಲಿಯ ಜನರಿಗೆ ಜೀವನದ ಗುರಿಯನ್ನೂ ಜೀವಿಸುವ ಪರಿಯನ್ನೂ ತಿಳುಹಬೇಕು.

ಬಂಡವಾಳದ ಅಭಾವದಿಂದ ಹಳ್ಳಿಗಳಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಿದೆ. ಮೊದಲು ಕೈತುಂಬ ಮೈತುಂಬ ಕೆಲಸವಿದ್ದವರೂ ಇಂದು ಕೆಲಸಗೇಡಿಗಳಾಗಿ ಕುಳಿತಿದ್ದಾರೆ. ನಮ್ಮ ಜನರಲ್ಲಿ ನಿಜವಾದ ದೇಶಪ್ರೇಮವಿದ್ದರೆ ಇಂತಹ ಪರಿಸ್ಥಿತಿಯು ಎಂದೂ ಬರುತ್ತಿರಲಿಲ್ಲ. ಒಂದೆರಡು ಉದಾಹರಣೆಗಳನ್ನು ಕೊಟ್ಟು ಹೇಳಬೇಕೆಂದರೆ: ಹಿಂದಿನ ಕಾಲದಲ್ಲಿ ಹಳ್ಳಿಗಳಲ್ಲಿಷ್ಟೇ ಅಲ್ಲ; ನಗರದ ಜನರೂ ಹಳ್ಳಿಯ ಕುಂಬಾರನು ಮಾಡಿದ ಗಡಿಗೆ-ಮಡಕೆಗಳನ್ನು ಬಳಸುತ್ತಿದ್ದರು. ಮನೆಯ ಕಾಳು-ಕಡಿಗಳನ್ನೂ ಬೇರೆ ಬೇರೆ ಪದಾರ್ಥಗಳನ್ನೂ ಗಡಿಗೆ-ಮಡಕೆಗಳಲ್ಲಿಯೇ ಸಂಗ್ರಹಿಸಿ ಇಡುತ್ತಿದ್ದರು. ಇದಕ್ಕಾಗಿ ಮನೆ-ಮನೆಗಳಲ್ಲಿಯೂ ಅಡಕಲು-ಮಡಕೆಗಳು ಸಾಲುಸಾಲಾಗಿ ಇರುತ್ತಿದ್ದುವು. ಇಂದು ಅವುಗಳ ಸ್ಥಳದಲ್ಲಿ ಟಿನ್ನಿನ ಡಬ್ಬಿಗಳು ಬಂದು ಕುಳಿತಿವೆ. ಈ ನಾಗರಿಕತೆಯ ಹೊಸತನಕ್ಕಾಗಿ ಹಳ್ಳಿಯ ಕುಂಬಾರನ ಉದ್ಯಮವು ಮಣ್ಣುಗೂಡಿ ಹೋಯಿತು.

ನೂಲು-ನೇಗೆಗಳು ನಮ್ಮ ಹಳ್ಳಿಗಳಲ್ಲಿಯ ಪ್ರಮುಖವಾದ ಕೈಗಾರಿಕೆ ಈ ಕೈಗಾರಿಕೆಯಿಂದ ಹೊಟ್ಟೆ ತುಂಬಿಕೊಳ್ಳುವವರೆಷ್ಟು ಜನರು! ಬಡಿಗರು, ಕಂಬಾರರು, ಪಿಂಜಾರರು, ನೂಲುವವರು, ಬಣ್ಣಗಾರರು, ನೇಕಾರರು, ಜವುಳಿ ವ್ಯಾಪಾರಸ್ಥರು—ಇತ್ಯಾದಿ. ಗಿರಣಿಗಳ ನಯವಾದ ಬಟ್ಟೆಗಳ ಬೆನ್ನುಹತ್ತಿದ ನಮ್ಮ ನಾಗರಿಕತೆ, ಹಳ್ಳಿಯ ಇಷ್ಟೆಲ್ಲ ಜನರನ್ನೂ ನಿರುದ್ಯೋಗಿಗಳನ್ನಾಗಿಸಿತು. ಹಳ್ಳಿಯ ಬಂಡವಾಳಿಗರೂ ಸ್ವಾರ್ಥದ ಮೋಹಕ್ಕೆ ಬಿದ್ದು ಬೀಸುವ ಯಂತ್ರ, ಕುಟ್ಟುವ ಯಂತ್ರ, ಹತ್ತಿ ಅರೆಯುವ ಗಿರಣಿ, ನೂಲುವ ನೇಯುವ ಗಿರಣಿ—ಇವುಗಳ ಬೆನ್ನುಹತ್ತಿಯೆ ಹೊರಟರಲ್ಲದೆ, ತಮ್ಮೂರಿನ ಜನರ ಗತಿಯು ಏನಾದೀತೆಂಬುದರ ವಿಚಾರವನ್ನವರು ಮಾಡಲಿಲ್ಲ. ಈ ತಪ್ಪನ್ನವರು ತಿದ್ದಿಕೊಳ್ಳಲೇಬೇಕು. ವೈಯಕ್ತಿಕ ಲಾಭವು ಕಡಿಮೆಯಾದರೂ ದೇಶದ ಜನರ ಸುಖಜೀವನದ ಕಡೆಗೆ ದೃಷ್ಟಿಯನ್ನು ಕೊಟ್ಟು, ಹಳ್ಳಿಯ ಕೈಗಾರಿಕೆಗಳಿಗಾಗಿ ತಮ್ಮ ಬಂಡವಾಳವನ್ನು ದುಡಿಸಬೇಕು. ಬಹುಜನರ ಸುಖ-ಸಮಾಧಾನಗಳೇ ನಾಡಿನ ಸಂಪತ್ತೆಂಬುದನ್ನು ಅರಿತುಕೊಳ್ಳಬೇಕು. ಪಟ್ಟಣವನ್ನು ಸೇರಿದ ಬಂಡವಾಳಗಾರರೇ, ಹಳ್ಳಿಗಳಿಗೆ ಹಿಂದಿರುಗಿರಿ. ಹಳ್ಳಿಗಳ ಸಂಪತ್ತನ್ನು ಬೆಳೆಯಿಸಿ, ಭಾರತದ ಸತ್ತ್ವವನ್ನು ಹೆಚ್ಚಿಸಿರಿ!

ಹಳ್ಳಿಗಳಲ್ಲಿ ಸ್ವಂತದ ಭೂಮಿ ಸಾಕಷ್ಟು ಇರುವ ಒಕ್ಕಲಿಗರು ತೀರ ಕಡಿಮೆ. ಕೆಲವು ಜನರು ಇದ್ದರೂ ಅವರಿಗೆ, ತಮ್ಮ ವ್ಯವಸಾಯವನ್ನು ಲಾಭಕಾರಿಯನ್ನಾಗಿ ಮಾಡಿಕೊಳ್ಳುವ ಶಾಸ್ತ್ರೀಯ ಜ್ಞಾನವಿಲ್ಲ. ಹೆಚ್ಚಿಗೆ ಭೂಮಿಯಿರುವ ಜಮೀನುದಾರರು, ನಾಗರಿಕರಾಗಿ ಮೆರೆಯಬೇಕೆಂದು ಪಟ್ಟಣಗಳಿಗೆ ಹೊರಟುಹೋಗಿದ್ದಾರೆ. ತಮ್ಮ ಭೂಮಿ ಹೆಚ್ಚಾಗಿ ಬೆಳೆದರೆ, ದೇಶದ ಸಂಪತ್ತು ಹೆಚ್ಚುವುದೆಂಬುದರ ಕಲ್ಪನೆ ಅವರಲ್ಲಿ ಮೂಡಿಯೇ ಇಲ್ಲ. ಎಂತಲೇ ಹಳ್ಳಿಗಳಲ್ಲಿ ಬೇಕಾದಷ್ಟು ಭೂಮಿಯಿದ್ದರೂ, ಯೋಗ್ಯಕೃಷಿಯು ಇರದುದರಿಂದ ಸರಿಯಾದ ಪ್ರಮಾಣದಲ್ಲಿ ಬೆಳಸು ಬೆಳೆಯುವುದಿಲ್ಲ. ಇದೊಂದು ನಮ್ಮ ರಾಷ್ಟ್ರಕ್ಕೆ ತುಂಬ ಹಾನಿಯನ್ನು ಒದಗಿಸುವಂತಹದಾಗಿದೆ. ಹಳ್ಳಿಗಳಲ್ಲಿ ಹೊಲ–ತೋಟಗಳಿರುವವರೆಲ್ಲ ಅಲ್ಲಿಯೇ ಮನೆಮಾಡಿ ನಿಲ್ಲಬೇಕು. ಹೊಸಕಾಲದ ಉಪಕರಣಗಳನ್ನು ತರಿಸಿ, ಸ್ವಂತದ ಕೃಷಿಯನ್ನು ಪ್ರಾರಂಭಿಸಬೇಕು. ಸಾಕಷ್ಟು ನೀರು, ಒಳ್ಳೆಯ ಗೊಬ್ಬರ–ಇವುಗಳ ಪೂರಯಿಕೆಯಾಗುವಂತೆ ಜಾಗೃತಿವಹಿಸಬೇಕು. ಕರಿಕೆ, ನಟ್ಟು ಹತ್ತಿ ಬೀಳುಬಿದ್ದ ಭೂಮಿಗಳನ್ನೆಲ್ಲ ಸಾಗುಮಾಡಬೇಕು. ದೇಶದಲ್ಲಿ ಆಹಾರದ ಕೊರತೆಯಾಗದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಹೊಟ್ಟೆಗೆ ಮೊಸರು ಬೇಕಾದರೆ ಕೈಯನ್ನು ಕೆಸರು ಮಾಡಿಕೊಳ್ಳಲೇ ಬೇಕು ಪಟ್ಟಣಗಳಲ್ಲಿ ಕುಳಿತು ಹರಟೆ ಹೊಡೆಯುವ ಹೊಲದೊಡೆಯರೆ! ಹಳ್ಳಿಗೆ ಹಿಂದಿರುಗಿರಿ! ನಿಮ್ಮ ಬೇಸಾಯದಿಂದ ಭಾರತದ ಉಗ್ರಾಣವನ್ನು ತುಂಬಿರಿ!

ಹಳ್ಳಿಗರಲ್ಲಿ ಮರೆತುಹೋದ ಮಾನವತೆಯನ್ನು ಮತ್ತೆ ಮೂಡಿಸಬೇಕಾಗಿದೆ. ತನ್ನ ಊರು, ತನ್ನ ಜನ, ತನ್ನ ರಾಷ್ಟ್ರಗಳ ವಿಷಯವಾಗಿ ತಾನು ಮಾಡಬೇಕಾದ ಕರ್ತವ್ಯಗಳಾವುವೆಂಬುದನ್ನು ಪ್ರತಿಯೊಬ್ಬ ಹಳ್ಳಿಗನಲ್ಲಿಯೂ ಹುಟ್ಟಿಸಬೇಕಾಗಿದೆ. ಅದಕ್ಕಾಗಿ ಹಳ್ಳಿಗರನ್ನೆಲ್ಲ ಸಾಕ್ಷರರನ್ನಾಗಿ ಮಾಡಬೇಕಾಗಿದೆ. ಸುಸಂಸ್ಕೃತರನ್ನಾಗಿಸಬೇಕಾಗಿದೆ. ರಸಿಕರಾದ ಕಲಾಪ್ರಿಯರನ್ನಾಗಿ ಅಣಿಗೊಳಿಸಬೇಕಾಗಿದೆ. ಜೀವನದ ಗುರಿಯೇನೆಂಬುದನ್ನು ತಿಳುಹಿಕೊಡಬೇಕಾಗಿದೆ. ಆದುದರಿಂದ ಸಾಮಾಜಿಕ ಕಾರ್ಯವನ್ನು ಮಾಡಬೇಕೆನ್ನುವ ಸುಶಿಕ್ಷಿತ ಸ್ವಯಂಸೇವಕರು, ಪಟ್ಟಣಗಳನ್ನು ಬಿಟ್ಟು ಹಳ್ಳಿಗಳಿಗೆ ಹಿಂತಿರುಗಬೇಕು. ಹಳ್ಳಿಗರ ಜೀವನದಲ್ಲಿ ತಮ್ಮ ಕಾರ್ಯದಿಂದ ಶಕ್ತಿ-ಸತ್ತ್ವಗಳನ್ನು ತುಂಬಬೇಕು. ಹಳ್ಳಿಯು ಬೆಳಕನ್ನು ಕಂಡಾಗಲೇ ಭಾರತವು ಬೆಳಕನ್ನು ಕಾಣುವುದು!

ಮೂರು ಭಾವರೂಪಕಗಳು

●

ಶ್ರೀ. ಹ. ವೆಂ. ನಾಗೇಶ, ಗುಲಬರ್ಗಾ.

◆

೧

ವೈಣಿಕ

‘ಟೇಂ............ಟೇಂ............ಟೇಂ............

ನಾದಬ್ರಹ್ಮನ ಸೇವೆಗೆ ಮೊದಲಾಯಿತು....‘ಟೇಂ....’

ವೈಣಿಕ ಕಾಲು ಚಾಚಿ ಕುಳಿತು ತನ್ನ ವೀಣೆಯನ್ನು ಎಡ-ತೊಡೆಗೆ ಆನಿಸಿ ಕೈಯಾಡಿಸುತ್ತಿದ್ದ. ವೈಣಿಕನ ಬೆರಳುಗಳು ಮಂದ-ಗತಿಯಿಂದ ಆಡುತ್ತಿದ್ದುವು. ವೀಣೆ ತಗ್ಗುಸ್ವರದಲ್ಲಿ ಧ್ವನಿಸುತ್ತಿತ್ತು. ದುಃಖದ ಹಾಡು

ವೈಣಿಕ ತನ್ನ ದುಃಖವನ್ನು ಬೆರಳುಗಳೆಡೆಯಿಂದ ತುಂಬಿ ತುಂಬಿ ವೀಣೆಯನ್ನು ಮತ್ತೂ ಮತ್ತೂ ಮಂದವಾಗಿ ಧ್ವನಿಸುವಂತೆ ಮಾಡು-ತ್ತಿದ್ದ. ‘ಪ್ರಕೃತಿ ಮಾಯೆ; ಲೋಕವು ಮಾಯೆ; ಸುಖವೂ ಮಾಯೆ; ಮಡದಿ ಮಾಯೆ....ಎಲ್ಲವೂ ಮಾಯೆ....ತಾನು ಹಾಡುವುದೊಂದು ಸತ್ಯ.... ತನ್ನ ‘ವೀಣೆಯೊಂದು ಸತ್ಯ’.... ಹೀಗೆ ಸಾಗಿತ್ತು ವೈಣಿಕನ ನಾದಸರಣಿ !

‘ಕಣಿಲ್....ಕಣೀಲ್’ ಬಳೆಗಳು ಕುಣಿಯುತ್ತಿದ್ದುವು....... ‘ಝೈಲ್....ಝೈಲ್’ ಕಾಲ್ಗೆಜ್ಜೆ ಮೆಲುದನಿ ಗೂಡಿಸಿತ್ತು. ಸುಗಂಧಿತ ಗಾಳಿ ಸುಳಿಸುಳಿದು ನುಸುಳಿ ಬರುತ್ತಿತ್ತು.... ಬಣ್ಣದ ಮೈಮುಚ್ಚು ರಂಗೊಳಿಸಿತ್ತು....ವೈಣಿಕನ ಮಡದಿ ಮಂದಹಾಸದಿಂದ ಬಂದು ವೀಣೆಗಾತು ಕುಳಿತುಕೊಂಡಳು !

ವೀಣೆ ತಿರುಗಿ ಅವರೋಹಣದಿಂದ ಆರೋಹಣದತ್ತ ಸಾಗಿತ್ತು. ....ವೈಣಿಕನ ನಾದಸರಣಿ ಎಂದೋ ತಪ್ಪಿತ್ತು.... ವೀಣೆ ಜಿಗಿದು ಜಿಗಿದು ಮೇಲ್ದನಿಯಿಂದ ಹೇಳುತ್ತಿತ್ತು :— ‘ಮಾಯೆಯಲ್ಲ....ಲೋಕ ಮಾಯೆಯಲ್ಲ........ಬದುಕು ಮಾಯೆಯಲ್ಲ........ಪ್ರಕೃತಿ ! ಶಾಂತಿ ಸಾರಥೀ.... ಮಡದಿಯೊಂದು ಸತ್ಯ....ವೈಣಿಕನೊಂದು ಸತ್ಯ....’

ಆರೋಹಣದ ಶಿಖರವೂ ಬಂದಿತು. ವೀಣೆಯ ಸ್ವರವೂ ನಿಂತಿತು.... ವೈಣಿಕ ವೀಣೆಗೆ ಆತಿರಲಿಲ್ಲ....ಆಗ, ಅಲ್ಲಿ ಆಕೆ ಇದ್ದಳು!

೨

ಸೈತಾನ

ಸುತ್ತಲಿನ ಚೇತೋಹಾರಿ ದೃಶ್ಯಗಳಲ್ಲೇ ದೃಷ್ಟಿಯಿಟ್ಟು ತಲ್ಲೀನ-ನಾಗಿ ಆ ದೊಡ್ಡ ಬಂಡೆಯ ಮೇಲೆ ಒಬ್ಬ ಒರಗಿದ್ದ. ಮುಗ್ಧ ಮನಸ್ಸು; ತಿಳಿಮನಸ್ಸು.... ನಿರ್ವಿಕಾರ ಮನಸ್ಸು.... ಆತ ಬಹಳ ಹೊತ್ತು ಅಲ್ಲೇ ಆಸೀನನಾಗಿದ್ದ.

ಒಮ್ಮಿಂದೊಮ್ಮೆಗೇ ಮೇಲಿನದೊಂದು ಹನಿರಕ್ತ ಮೈಮೇಲೆ ಸಿಡಿಯಿತು. ರಕ್ತ !.... ರಕ್ತ !.... ಅದರ ಬೆನ್ನ ಹಿಂದೆಯೇ ಬರತಕ್ಕ ಆ ಭೀಕರಚಿತ್ರ ಅವನಿಗೆ ಕಾಣಹತ್ತಿತು. ಆತನ ಅಂಗಾಂಗವೆಲ್ಲ ಕಂಪಿಸಿತು. ಧೈರ್ಯದಲ್ಲಿ ಧೈರ್ಯ ತಂದುಕೊಂಡು ಆತ ಒರಗಿಯೇ ಇದ್ದ.

ಹನಿಯು ಬಿದ್ದು ಮುಗಿದಿತ್ತೇನೋ—ಆಗ ತೊಟ್ಟು ತೊಟ್ಟಾಗಿ ರಕ್ತದ ಧಾರೆ ಬೀಳುತ್ತಲೇ ಇತ್ತು. ಆಮೇಲೆ ಕ್ಷಣದ ಸಂದೂ ಇಲ್ಲದೆ, ಒಂದೇ ಸಮನೆ ರಕ್ತಧಾರೆ ಸುರಿಯಹತ್ತಿತು. ರಕ್ತವೇ ರಕ್ತ. ....ರಕ್ತದ ಪ್ರವಾಹ ತುದಿಮೊದಲಿಲ್ಲದೇ ಹರಿದು ಹೋಗುತ್ತಿತ್ತು. ಅಲ್ಲೊಂದು ರಕ್ತದ ಮಡುವು....ಇಲ್ಲೊಂದು ಸಣ್ಣ ಹಳ್ಳ....

ಬರುಬರುತ್ತ ಅವನಿಗೆ ಆ ಚಿತ್ರ ಮೊದಲಿನಷ್ಟು ಭೀಕರವೆನಿಸ-ಲಿಲ್ಲ. ರಕ್ತಧಾರೆಯನ್ನು ಎವೆಯಿಕ್ಕದೆ ನೋಡುತ್ತ ಕುಳಿತಿದ್ದಂತೆ, ಆತನ ಕಾಲುಗಳು ತಾವಾಗಿಯೇ ಮುಂದುನೀಡಿ, ಸಂಪ್ರವಾಹಕ್ಕೆ ಒಡ್ಡಿಕೊಂಡುವು....ಎಷ್ಟೋ ಹಿತಕರವಾಗಿ ಕಂಡಿತು—ಆ ಕೆನ್ನೀರಿನಲ್ಲಿ ನಡೆದ ಪಾದಸ್ನಾನ.

....ಇನ್ನು ಸ್ವಲ್ಪ ಹೊತ್ತು ಕಳೆದಾಗ....

ಅವನಿಗೆ ಆಗ ಮನಸ್ಸು ದಣಿದಂತೆ ಕಂಡಿತು; ವಿಶ್ರಾಂತಿಯನ್ನು ಬಯಸಿತು. ಆತ ನಿಧಾನವಾಗಿ ಬಂಡೆಯಿಂದಿಳಿದು ಕೆನ್ನೀರ ಮಡುವಿ-ನಲ್ಲಿ ಮುಳುಗುಹಾಕಿ ಸ್ನಾನಕ್ಕೆ ಮೊದಲಾದ....ತಣ್ಣೀರ ಮಡುವಿ-ಗಿಂತಲೂ ಹಿತಕರವಾಗಿ ಕಂಡಿತು ಕೆನ್ನೀರ ಮಡುವು !

....ಸ್ನಾನ ಮುಗಿದಿತ್ತು. ಎಲ್ಲಿಲ್ಲದ ಬಾಯಾರಿಕೆಯ ಅನುಭವ-ವಾಗಿತ್ತು ಆತನಿಗೆ. ತೃಷಾಪರಿಹಾರಕ್ಕಾಗಿ ಆತ ಸುತ್ತುಮುತ್ತಲಿನ ಹೊಳೆ-ಹಳ್ಳಗಳನ್ನು ಹುಡುಕಾಡುತ್ತ ಸಾಗಿದ....ಒಂದೂ ಗೋಚರಕ್ಕೆ

ಬರಲಿಲ್ಲ....ಆದರೆ ಅದೇ ಕೆನ್ನೀರ ದೊಡ್ಡ ಮಡುವೊಂದಿದೆ. ಇನ್ನೂ ಎಷ್ಟೋ ಚಿಕ್ಕ ಪುಟ್ಟ ಕೆನ್ನೀರ ಕೊಳಗಳು....ಈಗ ಆತನಿಗೆ ಬೇರಾವ ಕೊಳಗಳ ಆವಶ್ಯಕತೆ ಅಷ್ಟೇನೂ ಕಂಡುಬರಲಿಲ್ಲ. ಹತ್ತಿರವೇ ಯಥೇಚ್ಛ ರಕ್ತಸರೋವರಗಳು. ಆತ ನೇರವಾಗಿ ಸಾಗಿ, ಒಂದು ರಕ್ತ ಸರೋವರಕ್ಕಿಳಿದು, ಬೊಗಸೆ ತುಂಬ ನೀರನ್ನೆತ್ತಿ ಕುಡಿಯುತ್ತಿದ್ದ.

....ಆತ ಕುಡಿಯುತ್ತಲೇ ಇದ್ದ. ಆ ರಕ್ತಪಾನವು ಅವನಲ್ಲಿ ಪೈಶಾಚ್ಯ ಗುಣವನ್ನು ತಂದು ಸುರಿಸುತ್ತಿತ್ತು. ಆ ರಕ್ತವನ್ನೆತ್ತಿ ಕುಡಿ ಕುಡಿಯುತ್ತಿದ್ದಂತೇ ಆತ ಪ್ರತಿಕ್ಷಣ ಮತ್ತಷ್ಟು ಮತ್ತನಾಗುತ್ತ ಸಾಗುತ್ತಿದ್ದ... ಮೈಮೇಲಿನ ಮಾನವತೆಯ ಲಕ್ಷಣಗಳೆಲ್ಲ ಮಾಸುತ್ತ ಹೋಗಿದ್ದುವು....

ಉನ್ಮತ್ತ! ಹೀಗೇ ರಕ್ತದಾಹದಿಂದ ತುಂಬಿದವನಾಗಿ, ಆ ಅಸಂಖ್ಯ ಸರೋವರಗಳ ಉಗಮವೆಲ್ಲಿದೆಯೆಂಬ ಅನ್ವೇಷಣೆಯಲ್ಲಿ ಮುಂಬರಿಯುತ್ತಿದ್ದ.... ರಕ್ತಪ್ರಿಯನಾದ 'ಸೈತಾನ'ನಾಗಿ ಸಾಗುತ್ತಿದ್ದ!....

೩

ಸೌಂದರ್ಯೋಪಾಸಕರು!

ಮುಚ್ಚಂಜೆ! ಇನ್ನೂ ಸೂರ್ಯ ಪೂರ್ಣ ಮರೆಯಾಗಿರಲಿಲ್ಲ. ತಾನೇತಾನಾಗಿ ಹೊಂಬಣ್ಣ ಪಶ್ಚಿಮ ದಿಕ್ತಟವನ್ನೆಲ್ಲ ಆವರಿಸಿತ್ತು. ಎದುರಿಗೇ ವಿಶಾಲ ಸಮುದ್ರ. ಇತ್ತಕಡೆಗೆ ನಿಸರ್ಗದ ಸೊಬಗು.

ನುಣ್ಣಗಾದ ಮರಳರಾಶಿಯ ಮೇಲೆ ಬೆರಳಾಡಿಸುತ್ತ ಇಬ್ಬರು ಕುಳಿತಿದ್ದರು.

ಸಮುದ್ರ ಭೋರ್ಗರೆಯುತ್ತಿತ್ತು. ವೀಚಿಮಾಲೆ ಬೆಳ್ನೊರೆಗೂಡಿ ಎದ್ದು ಎದ್ದು, ನೀಲ ಜಲರಾಶಿಯಲ್ಲಿ ಲೀನವಾಗುತ್ತಿತ್ತು. ತುಂತುರು ಸಿಡಿಸಿಡಿದು ಸೈಕತರಾಶಿಯನ್ನು ತಣಿಸುತಿತ್ತು. ದಿಕ್ತಟದಲ್ಲಿ ಸಂಜೆ ವೆಣ್ಣು ಬಣ್ಣದೋಕುಳಿಯಾಡುತ್ತಿದ್ದಳು. ನಿಸರ್ಗದೇವತೆ ಭೂಮ್ಯಾಕಾಶಪರ್ಯಂತ ತನ್ನ ಸೊಬಗನ್ನು ಸೂರೆಮಾಡಿ ಮಾಯೆಯಾಟವನ್ನು ಆಡುತ್ತಿದ್ದಳು.....ಎಷ್ಟೋ ಹೊತ್ತು ಆ ಸೌಂದರ್ಯೋಪಾಸಕರು ಕುಳಿತೇ ಇದ್ದರು.

ಒಬ್ಬ ಅನ್ಯಮನಸ್ಕನಾಗಿ ಕುಳಿತಿದ್ದ. ತಲೆತುಂಬ ಯೋಚನೆಗಳು. ಆವನ ಮನಃಪಟಲದ ಬಂಡೆಗಳಿಗೆ ಭಾವನಾತರಂಗಗಳ ತಾಕಲಾಟಗಳು. ನಿಮಿಷಗಳು ಕಳೆದಾಗ ಆತ ಒಂದು ನಿಟ್ಟುಸಿರಿಟ್ಟ........ "ಅಯ್ಯೋ, ಸೌಂದರ್ಯ—ಸೌಂದರ್ಯವೆಂದು ನಿರೀಕ್ಷಿಸಿ ಕುಳಿತಿದ್ದೆನಲ್ಲಾ! ಎಲ್ಲಿಯ ಸೌಂದರ್ಯ? ಎಲ್ಲಿದೆ ಸೌಂದರ್ಯ? ಬರಿದೆ ಒಂದು ಕನಸೆ?....ಇಲ್ಲ ಕಂಡೇನೇ? ....ಹಾಯ್, ಅದನ್ನು ಕಾಣದಾದೆನಲ್ಲಾ!"

........ಎಂದಿಲ್ಲದ ರಭಸದಿಂದ ಸಮುದ್ರ ಭೋರ್ಗರೆದು ಪ್ರಕೃತಿ ದೇವತೆಯ ಅಣತಿಯನ್ನು ಬಿತ್ತರಿಸುತ್ತ ಗಹಗಹಿಸಿತು: "ಅಯ್ಯೋ ಹುಚ್ಚೆ! ಇದ್ದುದನ್ನು ಅಲ್ಲಗಳೆದು, ಇಲ್ಲದುದನ್ನು ಬಯಸುವುದೇ? ಗಗನದಲ್ಲಿಯ ಹೂವನ್ನು ಕುರಿತು ಹಂಬಲಿಸುವೆಯೇಕೆ? ಕಣ್ಣು ತೆರೆ ತೆರೆದು ನಿಟ್ಟಿಸಿ ನೋಡು........"

ಮತ್ತೊಬ್ಬ ತಲ್ಲೀನನಾಗಿ ಒರಗಿದ್ದ. ಮನದ ತುಂಬೆಲ್ಲ ಮಧುರ ಮಧುರ ಭಾವನೆಗಳು. ಏನೋ, ತನ್ನಷ್ಟಕ್ಕೆ ಆತ ಅಂದುಕೊಳ್ಳುತ್ತಿದ್ದ "ಸೌಂದರ್ಯ! ಆಹಹ ಎಂದಿಲ್ಲದ ಸೌಂದರ್ಯ; ಎಲ್ಲೆಲ್ಲೂ ಸೌಂದರ್ಯ; ಇನ್ನಿಲ್ಲದ ಸೌಂದರ್ಯ! ಅಬ್ಬಾ! ನಿಸರ್ಗದ ಈ ನಿಚ್ಚ ಹಾಸವೆಷ್ಟು ಚೆಲುವೊ.!"

........ನಿಸರ್ಗ ಮುಗುಳ್ನಗೆಯೊಂದೊಮ್ಮೆ ವೈಭವದಿಂದ ಮೆರೆದ ಅಂದಿತು: "ಧನ್ಯ, ಧನ್ಯ!"

ಬೆಂದ ಹೃದಯ

(ಸುಂದರರೂಪಕಗಳ ಸಂಕಲನ)

ಬರೆದವರು: 'ಆನಂದಕಂದ'. ಬೇಗನೆ ಬೆಳಕಿಗೆ ಬರುವುದು. ಬೇಕಾದವರು ಕೂಡಲೆ ಪತ್ರವ್ಯವಹಾರ ಮಾಡಬೇಕು.

— ನಮ್ಮಲ್ಲಿ ದೊರೆಯುವ ಬೇರೆ ಪುಸ್ತಕಗಳು —

ಲೇ: ಶ್ರೀ. ವಿ. ಸಿ. ಹಿತ್ತಲಮನಿ ಬಿ. ಎಸ್‌ಸಿ.

ನೀಲಲೋಚನೆ (ಕಥಾಸಂಕಲನ)	೧–೮–೦
ಚೆಂದುಟಿಯ ಮುತ್ತು ,,	೧–೮–೦
ಶರಾವತಿಯಿಂದ ಸಾಬರಮತಿ (ಪ್ರವಾಸ)	೧–೮–೦

ಸಂಪಾದಕ: ಶ್ರೀ. ಪ. ಸು. ಭಟ್ಟ

ಸೌಭಾಗ್ಯ (ಪತ್ರಸಂಕಲನ)	೧–೮–೦

ಲೇ: ಶ್ರೀ. ನಾ. ಮ. ಕೊರವಾರ

ಅರಸೆಯ ತಾರೆ (ಸಾಮಾಜಿಕ ನಾಟಕ)	೧–೮–೦

ಲೇ: ಶ್ರೀ. ಬಿ. ಆರ್. ವಾಡಪ್ಪಿ

ಗಾಳಿಗುದುರಿ (ಲಲಿತಪ್ರಬಂಧ ಸಂಕಲನ)	೧–೪–೦
ಜೀವನರಂಗ (ಕಥಾಸಂಕಲನ)	೧–೪–೦

ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ ಕೊಡಲಾಗುವುದು.

ಶರತ್ ಪ್ರಕಾಶನ ಮಂದಿರ, ಧಾರವಾಡ

ಇದು ಪಾಪವೇ

(ಸಣ್ಣ ಕತೆ)

ಶ್ರೀಮತಿ ಗೀತಾದೇವಿ ಕುಲಕರ್ಣಿ, ಧಾರವಾಡ

●

ಆದರ್ಶವಿಲ್ಲದ ದಾಂಪತ್ಯ ಜೀವನದಲ್ಲಿ ಕಂಡುಬರುವ ಸಾಮಾಜಿಕ ಚಿತ್ರವಿದು! ದಾಂಪತ್ಯದಲ್ಲಿ ನಿಜವಾದ ಪ್ರೇಮದ ಬೆಲೆಯನ್ನು ಗಂಡ-ಹೆಂಡರಿಬ್ಬರೂ ತಿಳಿದಿರಬೇಕು.

●

ಕುಸುಮಾ ಸತ್ತ ಸುದ್ದಿ ಬಂದಾಗಿನಿಂದ ಅಣ್ಣ ಮಾಧವ ಹುಚ್ಚ ನಂತಾಗಿದ್ದ. ತಂಗಿ ಸುಧಾ ಮಧ್ಯಾನ್ಹದಿಂದ ಏನನ್ನೂ ತಿಂದಿರಲಿಲ್ಲ. ಎಷ್ಟು ಅತ್ತರೂ ಹೊಟ್ಟೆಯೊಳಗಿನ ಸಂಕಟ ಹೆಚ್ಚಾಗುತ್ತಿತ್ತೇ ವಿನಾ ಕಡಿಮೆಯಾಗುತ್ತಿರಲಿಲ್ಲ. ರಾಧಾ ಗಂಡನನ್ನೊಮ್ಮೆ ನಾದಿನಿ ಸುಧಾ ಳನ್ನೊಮ್ಮೆ ಸಮಾಧಾನ ಪಡಿಸುತ್ತ, ತೊತ್ತು ಸಿಕ್ಕಾಗ ತಾನೂ ಅಳುತ್ತಿದ್ದಳು. ಇಷ್ಟು ಬೇಗ ಕುಸುಮಾ ತಮ್ಮಿಂದ ದೂರವಾದಾಳು ಎಂದು ಅವರಾರೂ ನೆನೆಸಿರಲಿಲ್ಲ. ಹಾಳೆ ಏನಾದರೂ ತಂಗಿ ಸತ್ತಿದ್ದರೆ ಆ ಮಾತು ಬೇರೆ. ಆದರೆ?

ಸಂಜೆಯ ಅಂಚೆಯ ಹೊತ್ತು. ಅಂಚೆಯಾಳು ಬಂದು ಕೆಲವು ಓಲೆಗಳನ್ನು ಮಾಧವನ ಕೈಗೆ ಕೊಟ್ಟು ಹೋದ. ಸುಧೆಯ ಹೆಸರಿಗೆ ಬಂದಿದ್ದ ಪತ್ರವನ್ನು ಕಂಡು ಮಾಧವ ಬೆಚ್ಚಿದ. ಅದರಲ್ಲಿ ಬರೆದ ಅಕ್ಷರ ಕುಸುಮೆಯದು. ತುಂಬಾ ಭಾರವಾಗಿತ್ತು. ಮಾಧವ ಅಲ್ಲಿಂದಲೇ 'ಸುಧಾ' ಎಂದು ಕರೆದ. ಸುಧಾ ಕೋಣೆಗೆ ಬಂದು ಮೂಲೆಯಲ್ಲಿ ಮುದುಡಿಕೊಂಡು ಬಿದ್ದಿದ್ದಳು. ಅಣ್ಣನ ಕರೆ ಕೇಳಿಸಿತು. ಆದರೂ ಏಳುವ ಗೋಜಿಗೆ ಹೋಗಲಿಲ್ಲ. ಮಾಧವನೇ ಅವಳ ಕಡೆಗೆ ಬಂದು "ಸುಧಾ ನಿನ್ನ ಅಕ್ಕ ಬಂದಿದ್ದಾಳೆ ನೋಡು" ಎಂದ. ಸುಧಾ ನಿರಾಶೆಯ ಧ್ವನಿಯಿಂದ "ಅಣ್ಣಾ, ಎಲ್ಲಿದ್ದಾಳೆ ನನ್ನ ಅಕ್ಕ?" ಎಂದಳು. ಮಾಧವ ಕುಸುಮೆಯಿಂದ ಬಂದ ಓಲೆಯನ್ನು ಸುಧೆಯ ಕೈಗಿತ್ತನು. ಅವಳು ತನ್ನ ಕಣ್ಣುಗಳನ್ನು ಅಗಲವಾಗಿ ತೆರೆದು, ಅಕ್ಕನನ್ನು ತಬ್ಬಿಕೊಳ್ಳುವಂತೆ ಆ ಓಲೆಯನ್ನು ಎದೆಗೆ ಒತ್ತಿಕೊಂಡಳು. ಮಾಧವನು ಚಿಕ್ಕ ಮಗುವಿನಂತೆ ಅತ್ತುಬಿಟ್ಟ. ಸುಧಾ ಅವಸರದಿಂದ ಒಳಗಿನ ಕಾಗದವನ್ನು ತೆರೆದಳು. ಅಲ್ಲಲ್ಲಿ ಕಣ್ಣೀರಿನಿಂದ ಕಾಗದದ ಅಕ್ಷರಗಳು ಮಾಸಿಹೋಗಿದ್ದವು. ಅಣ್ಣ-ತಂಗಿಯರಿಬ್ಬರೂ ಅಳುತ್ತ ಓದತೊಡಗಿದರು:

"ಅಕ್ಕರೆಯ ತಂಗಿ,

ಇದೇ ಕೊನೆಯ ಬಾರಿ ನಾನು ನಿನ್ನನ್ನು ತಂಗಿ ಎಂದು ಕರೆಯುವುದು. ಪರಮಾತ್ಮನ ಇಚ್ಛೆಯಂತೆ ನಾನು ಈ ನಿರ್ಣಯಕ್ಕೆ ಬಂದಿದ್ದೇನೆ. ಸುಧಾ, ನನ್ನ ಮನಸ್ಸಿನ ಸಮಾಧಾನಕ್ಕಾಗಿ ಈ ಎಲ್ಲ ವಿಷಯಗಳನ್ನು ಬರೆಯುತ್ತಿದ್ದೇನೆ. ನಿನಗೆ ಎಲ್ಲವನ್ನೂ ತಿಳಿಸಿ, ನಾನು ಶಾಂತಿಯಿಂದಲೇ ಕಣ್ಮುಚ್ಚುತ್ತೇನೆ. ನೀನೊಬ್ಬಳು ನನ್ನನ್ನು ಸರಿಯಾಗಿ ಅರ್ಥಮಾಡಿಕೊಂಡರೆ ಸಾಕು. ಜಗತ್ತು ಏನು ಬೇಕಾದರೂ ಅಂದುಕೊಳ್ಳಲಿ.

ತಂಗೀ, ನಿನಗೆ ಗೊತ್ತು: ನನಗೆ ಚಿಕ್ಕಂದಿನಿಂದಲೂ ಟಾಗೋರ್ ಗಾಂಧೀಜಿ ಅವರ ಆದರ್ಶದಲ್ಲಿ ಒಲವು ಎಂದು. ನಾನು ಮೊದಲಿನಿಂದಲೂ ಖಾದಿಯನ್ನೇ ಉಟ್ಟುಕೊಳ್ಳುತ್ತಿದ್ದೆ. ನನ್ನ ಪತಿ ಮೊದಲ ಸಾರಿ ನನ್ನನ್ನು ನೋಡಲು ಬಂದಾಗ ನಾನು ತಂದೆಯವರೊಡನೆ ತುಂಬಾ ಅತ್ತು ಕರೆದು ಕೇಳಿಕೊಂಡಿದ್ದೆ, ಈ ಮದುವೆ ಬೇಡವೆಂದು. ಆದರೆ ತಂದೆಯವರು ಕೇಳಲಿಲ್ಲ. ಪಾಪ, ಅವರದಾದರೂ ಏನು ತಪ್ಪು? ಸಮಾಜದ ರೀತಿಯೇ ಹಾಗಿದೆ. ದೊಡ್ಡ ಹುದ್ದೆಯಲ್ಲಿರುವ ಅಳಿಯ ಸಿಕ್ಕಿರುವಾಗ, ಮೂರ್ಖ ಮಾತುಗಳನ್ನಾಡುವ ಮಗಳ ಮಾತುಗಳನ್ನು ಕೇಳಬೇಕೆ? ಸುಧಾ ಆಗಿನ್ನೂ ನೀನು ಹನ್ನೆರಡು ವರುಷದವಳು. ನೀನೂ ತುಂಬಾ ಉಲ್ಲಾಸದಲ್ಲಿದ್ದೆ. ನನ್ನ ಹತ್ತಿರ ಬಂದಾಗ ಮಾತ್ರ ನಿನ್ನ ಉತ್ಸಾಹ ಕಡಿಮೆಯಾಗುತ್ತಿತ್ತು. ಆಗ ನನ್ನೊಡನೆ ಕೇಳುತ್ತಿದ್ದಿ: "ಅಕ್ಕಾ, ನಿನಗೆ ಶ್ರೀಮಂತ ಗಂಡ ಸಿಕ್ಕಿರುವಾಗ ಹುಚ್ಚಿಯಂತೆ ನೀನು ಅಳುತ್ತೀಯಲ್ಲವೆ?" ಎಂದು. ವಿಧಿಲಿಖಿತದಂತೆ ನನ್ನ ಮದುವೆ ಅವರೊಡನೆ ಆಗಿಹೋಯಿತು. ನಾನು ಪತಿಯನ್ನು ಅನುಸರಿಸಿ ಹೋಗಿದ್ದೆ. ಮದುವೆಯಾದ ಮೂರನೆಯ ದಿನವೇ ಖಾದಿ ಸೀರೆಯನ್ನು ಉಡುವದನ್ನು ಬಿಡಬೇಕೆಂದು ಆಜ್ಞಾಪನೆಯಾಯಿತು. ನೊಂದುಹೋಯಿತು ನನ್ನ ಹೃದಯ. ಮರುಮಾತನ್ನಾಡದೆ ಖಾದಿಯನ್ನು ಬಿಟ್ಟು, ಅವರು ತಂದಂತಹ ನಾನಾ ನಮೂನೆಯ ಸಿಲ್ಕ್ ಸೀರೆಗಳನ್ನು ಉಟ್ಟುಕೊಳ್ಳತೊಡಗಿದೆ. ಅವರೂ ಗೆಲುವಾಗಿಯೇ ಇದ್ದರು. ನನಗೆ ಅಷ್ಟೇ ಬೇಕಾಗಿತ್ತು. ಅವರು ಡ್ಯೂಟಿಯ ಮೇಲೆ ಹೋದಾಗ ನನ್ನ ಜೊತೆಯಲ್ಲಿ ಒಬ್ಬ ದಾಯಿ. ಅಡಿಗೆಯವಳು, ಹೊರಗಿನ ಕೆಲಸಕ್ಕೆ ಒಬ್ಬಿಬ್ಬ ಸಿಪಾಯಿಗಳು ಇರುತ್ತಿದ್ದರು. ನಮ್ಮ ಬಂಗ್ಲೆಯ ಹತ್ತಿರದಲ್ಲಿ ನಾಲ್ಕೈದು ಬಡವರ ಗುಡಿಸಲು ಇದ್ದುವು. ನಾನು ಮನೆಯಲ್ಲಿ ಬೇಸರು ಬಂದಾಗ ಹಾಗೆ ತಿರುಗಾಡುತ್ತ ಆ ಗುಡಿಸಲಿನ ಹತ್ತಿರಕ್ಕೆ ಹೋಗುತ್ತಿದ್ದೆ. ಇದು ದಾಯಿ ಗಂಗವ್ವನಿಗೆ ಸರಿ ಬರುತ್ತಿರಲಿಲ್ಲ. "ಬಾಯಿಸಾಹೇಬ್, ನೀವು ಅಲ್ಲಿ ಹೋಗಬಾರದು, ಅವರೆಲ್ಲ ಜಂಗ್ಲಿ ಜನರು" ಎಂದು ಹೇಳುತ್ತಿದ್ದಳು. ಅಲ್ಲಿಯೇ ತಡೆದು ನಿಲ್ಲಿಸುತ್ತಿದ್ದಳು.

ಒಂದು ದಿನ ನಾನು ಹೂದೋಟದಲ್ಲಿ ಅತ್ತಿತ್ತ ತಿರುಗುತ್ತಿದ್ದೆ. ಕಂಪೌಂಡಿನ ಹೊರಗೆ ಎರಡು ಅಥವಾ ಮೂರು ವರ್ಷದ ಮಗು ತನ್ನ ಪುಟ್ಟ ಪುಟ್ಟ ಕೈಗಳನ್ನು ಒಳಗೆ ಚಾಚಿ "ಅಮ್ಮಾ ನಂಗೆ ಹುವ್ವಾ ಕೊಡಿ! ಎಂದು ಮುದ್ದಾಗಿ ಕೇಳಿತು. ನನ್ನ ಹೃದಯ ತುಂಬಿ ಬಂದಿತ್ತು. ತುಂಬ ಹೂಗಳನ್ನು ಕತ್ತರಿಸಿಕೊಂಡು ಆ ಮಗುವಿನ ಬಳಿಗೆ ಹೋದೆ. ಅವನನ್ನು ಎತ್ತಿಕೊಂಡು, ಅದರ ಪುಟ್ಟ ಕೈಗಳಲ್ಲಿ ಹೂಗಳನ್ನು ಕೊಟ್ಟೆ. ಆಗ ಅವನ ಆನಂದ ಹೇಳತೀರದು. ನನ್ನ ಜೀವಕ್ಕೂ ತೃಪ್ತಿಯಾಯಿತು.

ಇನ್ನೂ ಏನು ನಿಮಿಷ ಕಳೆದಿರಲಿಲ್ಲ. ಹಿಂದಿನಿಂದ ನನ್ನವರ ಕರ್ಕಶ ಧ್ವನಿ ಕೇಳಿಸಿತು. ಅಲ್ಲಿಯೇ ಬೆಚ್ಚಿಬಿದ್ದೆ. ಹಿಂತಿರುಗಿ ನೋಡಿದೆ. "ಅವರು" ನಿಂತಿದ್ದರು. ಅವರ ಹಿಂದೆ ದಾಯಿ ಗಂಗಮ್ಮ ನಿಂತಿದ್ದಳು. ನನ್ನ ಕೈಯ ದ್ವಸ ಮಗು ಹೆದರಿಕೊಂಡು ಓಡಿ ಹೋಯಿತು. ನಾನು ಒಳಗೆ ಬಂದೆ. ಅವರೂ ನನ್ನೊಡನೆ ಹಾಲಿನಲ್ಲಿ ಬಂದು ಕುಳಿತರು "ಕುಸುಮ್, ನಿನ್ನ ರೀತಿ ಇದು ಸರಿಯಲ್ಲ. ನಮ್ಮ ಅಂತಸ್ತೇನು? ನಮ್ಮ ಇರುವಿಕೆಯೇನು? ನೀನು ಹೀಗೆ ಕೊಳಕು ಜನರ ಜೊತೆಯಲ್ಲಿ ಬೆರೆಯುವುದು ನನ್ನ ಮನಸ್ಸಿಗೆ ಏನೂ ಸರಿಬರುವುದಿಲ್ಲ! ನಿನಗೆ ಬೇಜಾರು ಬಂದರೆ ದಾಯಿಯ ಜೊತೆಯಲ್ಲಿ ತಿರುಗಾಡಿಕೊಂಡು ಬಾ; ಅಥವಾ ಲೇಡೀಸ್ ಕ್ಲಬ್ಬಿಗೊ, ಭಗಿನೀ ಸಮಾಜಕ್ಕೊ ಮೆಂಬರ್ ಆಗಿ ಬಿಡು" ಎನ್ನುತ್ತ ತನ್ನ ಪ್ರೀತಿಯ ನಾಯಿಯ ಮರಿಯನ್ನು ಎತ್ತಿ ಮುದ್ದಿಸತೊಡಗಿದರು.

ನಾನು ಮನಸ್ಸಿನಲ್ಲಿ ಅಂದುಕೊಂಡೆ: 'ಇವರಿಗಿರುವುದು ಬರಿಯ ಅಧಿಕಾರದ ದರ್ಪ. ನಮ್ಮ ಹಾಗೆ ಇರುವ ಮನುಷ್ಯ ಜಾತಿಯನ್ನು ಪ್ರೀತಿಸಿದರೆ ತಪ್ಪು! ಅಂತೂ ನಾಯಿಗಿಂತಲೂ ಬಡವರು ಕೀಳಾದರಲ್ಲವೇ?' ಎಂದು. ಇದನ್ನರಿಯದ ನನ್ನ ಪತಿ ಮಾತು ಮರೆಯಿಸಲು "ನೋಡು ಕುಸುಮ್, ಈ ನಾಯಿಯ ಮರಿಯ ಬುದ್ಧಿ, ನನ್ನ ಮೇಲೆ ಅದಕ್ಕೆಷ್ಟು ಪ್ರೀತಿ?" ಎಂದು ಅದನ್ನು ನನ್ನ ಕೈಯಲ್ಲಿ ಇರಿಸಲು ಬಂದರು.

ನಾನು ತುಟಿಯಲ್ಲಿಯೇ ನಗುತ್ತ "ನನಗೇಕೊ ನಾಯಿಮರಿಯನ್ನು ಕಂಡರೆ ಅಷ್ಟು ಸೇರಿಕೆಯಿಲ್ಲ." ಎಂದು ಅದನ್ನು ಮರಳಿ ಅವರ ಕೈಗೇ ಕೊಟ್ಟೆ. ಅವರಿಗೆ ನನ್ನ ಮಾತು ಕಹಿಯಾಗಿಯೇ ಕಂಡಿರಬೇಕು.

'ಅದಕ್ಕೂ ಸಂಸ್ಕಾರಬೇಕು ಕುಸುಮ್. ನಿಮ್ಮ ಮನೆಯಲ್ಲಿ ಗಾಂಧಿಯ ಗೊಡ್ಡು ಆಚಾರದಿಂದಾಗಿ ಮೇಲ್ಮಟ್ಟದ ರೀತಿನೀತಿಗಳೇ ಗೊತ್ತಿಲ್ಲ, ಎಂದೇ ನಿನ್ನನ್ನು ಲೇಡೀಸ್ ಕ್ಲಬ್ಬಿಗೆ ಮೆಂಬರ್ ಮಾಡಿಸುತ್ತೇನೆ" ಎನ್ನುತ್ತ ಸಿಗರೇಟು ಸೇದತೊಡಗಿದರು.

ಅವರ ಮಾತಿನಿಂದಾಗಿ ನನ್ನ ಅಭಿಮಾನಕ್ಕೆ ಧಕ್ಕೆ ತಗಲಿದಂತಾಯಿತು. ಆದುದರಿಂದ ನಾನೂ ಸ್ವಲ್ಪ ಒರಟಾಗಿಯೇ "ನೀವೆನ್ನುವುದು ನಿಜ. ಆದರೆ ನಾಯಿಗಿಂತಲೂ ಬಡವರು ಇಷ್ಟು ಕೀಳೆಂದು ನಾನು ಈ ವರೆಗೂ ತಿಳಿದುಕೊಂಡಿರಲಿಲ್ಲ" ಎಂದು ನುಡಿದು, ಅಲ್ಲಿಂದ ಏಳುವ ಪ್ರಯತ್ನಮಾಡಿದೆ.

ಸುಧಾ, ನನ್ನ ರಾಯರಿಗೆ ಸೋಲೆಂಬುದೇ ಇಲ್ಲ ಎನ್ನಬಹುದು. ಹೋದಲ್ಲಿ, ಬಂದಲ್ಲಿ, ನಿಂತಲ್ಲಿ, ಕುಳಿತಲ್ಲಿ, ಮರ್ಯಾದೆ, ಹೊಗಳಿಕೆ ಇದ್ದದ್ದೆ. ಆದರೆ ಮನೆಯಲ್ಲಿ ತನ್ನ ಹೆಂಡತಿಯಿಂದ ವ್ಯಕ್ತಿತ್ವಕ್ಕೆ ಕುಂದು ಬರುವುದನ್ನು ಕಂಡು ನಿಜವಾಗಿಯೂ ಅವರು ಕೋಪಗೊಂಡರು. "ದಾಯಿ" ಎಂದು ಕರೆದರು. ವರ್ಷ ೫೦ ರ ಹತ್ತಿರಕ್ಕೆ ಬಂದರೂ ಗಂಗಮ್ಮ ಸ್ವಾಭಾವಿಕವಾದ ಒಯ್ಯಾರದಿಂದ ಬಂದು ಸಾಹೇಬರ ಎದುರಿಗೆ ಕೈ ಜೋಡಿಸಿ ನಿಂತುಕೊಂಡಳು. ಇದು ಅವರ ಹುಟ್ಟುಗುಣ. ನನ್ನ ಸಾಹೇಬರು ತನ್ನ ಮುದ್ದಿನ ನಾಯಿಮರಿಯನ್ನು ಅವಳ ಕೈಗಿತ್ತು ವಾಕಿಂಗ್ ಸ್ಟಿಕ್ ಹಿಡಿದು ಹೊರಗೆ ಹೋದರು. ಒಂದೆರಡು ದಿನ ಹೀಗೇ ಸಾಗಿದುವು.

ಸುಧಾ ಇನ್ನೂ ಮುಂದಿನ ವಿಷಯಗಳನ್ನು ಬರೆಯುತ್ತೇನೆ. ಈ ೮ ವರ್ಷಗಳನ್ನು ಹೇಗೆ ಕಳೆದೆ?—ಎನ್ನುವುದನ್ನು ಪೂರ್ಣ ಬರೆಯುವ ಕೌತುಕ ನನಗಿಲ್ಲ. ಸ್ವಲ್ಪ ಸ್ವಲ್ಪ ನಿನ್ನ ಮನಸಿನ ಸಮಾಧಾನಕ್ಕಾಗಿ ಬರೆಯುತ್ತೇನೆ.

ಒಂದು ಸಂಜೆ ನಾನು ಯಾವುದೋ ಪುಸ್ತಕ ಓದುತ್ತಿದ್ದೆ. ಅವಸರ ಅವಸರವಾಗಿ ನನ್ನೆಡೆಗೆ ಓಡಿಬಂದಳು ಗಂಗಮ್ಮ "ಬಾಯಿ ಸಾಹೇಬ್. ಹೊರಗೆ ನಿಮ್ಮನ್ನು ಕಾಣಲು ನಾಲ್ಕೈದು ಜನ ಹೆಂಗಸರು ಬಂದು ಕುಳಿತಿದ್ದಾರೆ" ಎಂದಳು.

ನಾನು ಮನದಲ್ಲಿಯೇ ಅಂದುಕೊಂಡೆ: ಇದು ಯಾವುದೊ ಕ್ಲಬ್ಬಿನ ಪಿಡುಗು—ಎಂದು. ಹೊರಗೆ ಬಂದೆ. ಕುಳಿತ್ತಿದ್ದ ಮಹಿಳೆಯರೆಲ್ಲ ಭಯಭಕ್ತಿಯಿಂದ ಎದ್ದುನಿಂತು ನಮಸ್ಕಾರ ಮಾಡಿದರು. ನಾನೂ ಅವರೆಲ್ಲರಿಗೆ ಪ್ರತಿನಮಸ್ಕರಿಸಿ ಕುಳಿತುಕೊಳ್ಳುವಂತೆ ಹೇಳಿದೆ. ಬಂದ ಕಾರಣವನ್ನೂ ಕೇಳಿದೆ. ನನ್ನ ಹಿಂದೆ ಬೋಡಿಗಾರ್ಡ ಗಂಗಮ್ಮ ನಿಂತಿದ್ದಳು.

ಬಂದ ಮಹಿಳೆಯರಲ್ಲಿ ಒಬ್ಬರು ಸ್ವಲ್ಪ ಮುಂದುವರಿದು "ನಾವು ಇಲ್ಲಿಯ ಲೇಡೀಸ್ ಕ್ಲಬ್ಬನ್ನು ನಡೆಯಿಸಿಕೊಂಡು ಬರುತ್ತಿದ್ದೇವೆ. ತಮ್ಮ ಸಾಹೇಬರು ಮೊನ್ನೆ ನಮ್ಮ ಕ್ಲಬ್ಬಿಗೆ ಬಂದು ನಾವು ಮಾಡಿರುವ ಕೆಲಸಗಳನ್ನು ನೋಡಿ ತಮ್ಮ ಸಂತೋಷ ವ್ಯಕ್ತಪಡಿಸಿ ೨೦೦ ರೂ.ಗಳನ್ನು ದಾನವಾಗಿ ಕೊಟ್ಟರು. ನಿಮ್ಮನ್ನು ಮೆಂಬರ್ ಮಾಡಿಕೊಂಡು

ಧುರಗ್ರಸ್ಥ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ ನೀಲಿ ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಿಣಿಯರಿಗೆ ಜೀವಿನಿ ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ

ಅಜೀರ್ಣ ವಿಕಾರಗಳಿಗೆ ಪಂಚವಟಿ ರಾಮಬಾಣ

ಸದ್ವೈದ್ಯ ಶಾಲಾ, ನಂಜನಗೂಡು.

ನಂಜನಗೂಡು ಟೂತ್ ಪೌಡರ್ ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ

ಕಾರಖಾನೆ.

ಬಿಡಿ—ಎಂದು ಹೇಳಿದರು." ಎನ್ನುತ್ತ ತಮ್ಮ ಮುಖದಲ್ಲಿ ಬಂದಿದ್ದ ಬೆವರನ್ನು ಒರಿಸಿಕೊಳ್ಳತೊಡಗಿದರು. ಇನ್ನೊಬ್ಬ ಮಹಿಳೆ ದೇಶಾ ಪರಿ ನಗೆ ನಗುತ್ತ "ಅದೂ ಇಲ್ಲವೆ, ತಾವು ನಮ್ಮಲ್ಲಿ ಈ ಸಾರಿ ಜರುಗ ಲಿರುವ ವಾರ್ಷಿಕ ಮನೋರಂಜನ ಕಾರ್ಯಕ್ರಮಕ್ಕೆ ಅಧ್ಯಕ್ಷರಾಗ ಬೇಕೆಂದು ಕೇಳಿಕೊಳ್ಳಲು ಬಂದಿದ್ದೇವೆ" ಎಂದರು. ಬಹು ವಿನಯ ದಿಂದ ನಾನು ಹೇಳಿದೆ "ನೀವೆಲ್ಲ ಹೇಳುವುದು ಸರಿ. ಆದರೆ ನಾನು ಈ ವರೆಗೆ ಸಮಾಜಕ್ಕಾಗಿ ಯಾವ ಉಪಕಾರವನ್ನೂ ಮಾಡಿಲ್ಲವಲ್ಲಾ? ಇನ್ನು ಈ ಅಧ್ಯಕ್ಷ ಪದ ನನಗೆ ಸೇರದ ವಿಷಯ" ಎಂದು ಮಾತು ಮುಗಿಸಿದೆ. ಅದಕ್ಕೆ ಉತ್ತರ ಮೂರನೆಯ ಮಹಿಳೆ ಕೊಟ್ಟರು:

"ನಮ್ಮ ಸಂಸ್ಥೆಯ ಉದ್ದೇಶ ಬಡಬಗ್ಗರಿಗೆ ಸಹಾಯ ಮಾಡುವದು, ರೋಗಿಗಳಿಗೆ ಧರ್ಮಾರ್ಥವಾಗಿ ಔಷಧಕೊಡುವ ಏರ್ಪಾಡು, ಮತ್ತು ಅನಾಥಮಕ್ಕಳಿಗೆ ಹಾಲು ಕೊಡುವುದು, ಇತ್ಯಾದಿ!" ಎಂದರು ಒಂದು ಬಗೆಯ ಹೆಮ್ಮೆಯಿಂದ.

ಅದಕ್ಕೆ ಹಾರಿಬಂದವಳಂತೆ ಗಂಗಮ್ಮ "ನಮ್ಮ ಬಾಯಿ ಸಾಹೇಬ್, ಏನೂ ಇವಕ್ಕೆ ಹಿಂದಿಲ್ಲ. ಯಾವತ್ತಲೂ ಇಂಥ ಬಡಬಗ್ಗರ ಮನೆಗೆ ಹೋಗುವುದು, ಅವರ ಮಕ್ಕಳನ್ನು ಎತ್ತಿ ಪ್ರೀತಿಸುವುದೆಂದರೆ ಅವರಿಗೆ ತುಂಬಾ ಆನಂದದ ಕೆಲಸ" ಎಂದಳು.

ನನಗೆ ಈ ಮಾತುಗಳನ್ನು ಕೇಳಿ ಮೈಯಲ್ಲಿ ಮುಳ್ಳು ಬಂದಂತಾಯಿತು. ಮೂರು ದಿವಸಗಳ ಹಿಂದೆ ನನ್ನ ಸತಿಗೆ ೨ ಮಗುವನ್ನು ಹಿಡಿದುದಕ್ಕೆ ಒಂದಕ್ಕೆ ಹತ್ತರಷ್ಟು ಹೇಳಿ ಅವರಿಂದ ನನ್ನ ಮನಸ್ಸಿಗೆ ನೋವಾಗುವಂತೆ ಮಾತನಾಡಿಸಿದವಳು. ಇಂದು ಇವರೆದುರಿಗೆ ಅವನ್ನೇ ಹೊಗಳುತ್ತಿದ್ದಾಳೆ. ಅಂತೂ ಗಾಳಿಬಂದಲ್ಲಿ ಕೊಡೆಹಿಡಿಯುವ ಜಾತಿಯವಳು—ಎಂದುಕೊಂಡೆ. ಇಲ್ಲಿಗೆ ಮುಗಿಯಿತು.

ಲೇಡೀಸ್ ಕ್ಲಬ್ಬಿನ ನಾಟಕಕ್ಕೆ ನನ್ನ ಯಜಮಾನರು ವಿಪರೀತ ಸಹಾಯ ಮಾಡಿದರು. ಎಲ್ಲ ಶ್ರೀಮತಿಯರು ಹಗಲಿರುಳು ದುಡಿದರು. ಕೊನೆಯಲ್ಲಿ ಆಭಾರ ಮನ್ನಣೆಯಲ್ಲಿ ನನ್ನ ಸಾಹೇಬರ ಹಾಗೂ ನನ್ನ ಗುಣಗಾನ ಮಿತಿಮೀರಿ ಆಯಿತು.

ರಾತ್ರಿ ತುಂಬಾ ಹುಮ್ಮಸಿನಲ್ಲಿ ನನ್ನ ಪತಿ ಕೇಳಿದರು. "ಹೇಗಿತ್ತು ಕುಸುಮ್ ಇಂದಿನ ಕಾರ್ಯಕ್ರಮ?"

"ಇತ್ತು ಇರುವಂತೆ. ಎಲ್ಲ ಅಧಿಕಾರದ ಆಟವೆಂದು ಇಂದು ಪೂರಾ ತಿಳಿದುಕೊಂಡೆ"

"ಅದು ಹೌದು ಬಿಡು, ನಿನಗೆ ಅಧಿಕಾರ ಎಂದರೆ ಏನು ಎಂದೇ ಗೊತ್ತಿಲ್ಲ. ನಿಮ್ಮಲ್ಲಿ ಯಾರೂ ಅಧಿಕಾರಸ್ಥರು ಇಲ್ಲ. ಅದರ ಸುಖ ಗೊತ್ತಿದ್ದರೆ ಇಂದು ನೀನು ಹೀಗೆ ಹೇಳುತ್ತಿರಲಿಲ್ಲ." ಎಂದು ಪ್ಲೇಟಿನಲ್ಲಿ ಇಟ್ಟಿದ್ದ ಸೇಬುಹಣ್ಣನ್ನು ತಿನ್ನತೊಡಗಿದರು.

"ಹಾಗಿದ್ದರೆ ನೀವು ನನ್ನನ್ನೇಕೆ ಮದುವೆಯಾದಿರಿ? ಯಾವನಾದರೊಬ್ಬ ಅಧಿಕಾರಿಯ ಮಗಳನ್ನೇ ವರಿಸಬಹುದಿತ್ತಲ್ಲ?" ಎಂದೆ ತುಸು ಬೇಸರದಿಂದ.

ಅದಕ್ಕೆ ಏನು ಉತ್ತರಕೊಟ್ಟರು ಗೊತ್ತೇ ಸುಧಾ?

ಮಕ್ಕಳ ಸದೃಢತೆಗಾಗಿ

"ಬಗನ ಬಾಲಾಮೃತ"

ಹಲ್ಲು ಬರುವಾಗ

ಅನ್ನ ಗ್ರಾಯಪ್ ಹೀಲರ ಮಕ್ಕಳಿಗಾಗಿ

ಎಸ್ಸೆನ್ ಗ್ರಾಇಪ್ ಹೀಲರ್

ಜಂತು ಆದರೆ

TRADE MARK
ವರ್ಮ ಆಯಿಲ

"ವರ್ಮ ಆಯಿಲ್"

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಕ್ಕರಿಗೆ ಉಪಯೋಗವಾಗುವ ಔಷಧಗಳು.

The National Pharmacies &
Pharmaceuticals Ltd, Dharwar.

"ಶ್ರೀಮಂತ ಅಧಿಕಾರಿಯ ಮಗಳು ನಾನು ಹೇಳಿದಂತೆ ಕೇಳೋದಿಲ್ಲ. ನನ್ನನ್ನೇ ಕುಣಿಸಬಹುದೆಂದು; ನಿನ್ನನ್ನು ಮದುವೆಯಾದೆ. ಈಗಲಾದರೂ ತಿಳಿಯಿತೇ? ಅದೂ ಅಲ್ಲದೆ, ನೀನು ದೂರದ ನನ್ನ ಅಕ್ಕನ ಮಗಳಲ್ಲವೇ? ಮೇಲಾಗಿ ಅಂದದ ಹುಡುಗಿ ಎಂದುಕೊಂಡೆ. ಆದರೆ ಬರುಬರುತ್ತ ನೀನು ಬಲು ಜೋರಾಗತೊಡಗಿದ್ದೀ. ನಿನ್ನ ತಂದೆಯವರಿಗೆ ಬರಲು ತಿಳಿಸಿದ್ದೇನೆ. ನಿನಗೆ ಸ್ವಲ್ಪ ಬುದ್ಧಿ ಹೇಳಲು" ಎಂದು ಅವರೆಂದರು.

ಅದರಂತೆ ತಂದೆ ಬಂದರು. ನನಗೇ ಸ್ರತಿ ಬುದ್ಧಿ ಹೇಳಿದರು. ನಾನು ಸ್ವಲ್ಪವಾಗಿ ನನಗಿರುವ ಕೊರತೆಗಳನ್ನು ತಿಳಿಸಿದೆ. ಆದರೆ ನೋಡು ಸುಧಾ! ತಾಯಿಯಿದ್ದರೆ ಹೇಳುವ ಮೊದಲೇ ತಿಳಿದುಕೊಳ್ಳುತ್ತಿದ್ದರು. ಆದರೆ ಬಂದವರು ತಂದೆ. ಐದಾರು ದಿನಗಳ ವರೆಗೆ ನನ್ನ ಪತಿ ತಂದೆಯ ಜೊತೆಯಲ್ಲಿ ತುಂಬಾ ಸಂತೋಷದಲ್ಲಿ ಇದ್ದರು. ಆದರೆ ಒಂದು ರಾತ್ರಿ ಅಬ್ಬಾ! ನೆನೆಸಲೂ ಭಯವಾಗುತ್ತದೆ. ಆ ರಾತ್ರಿ ಅವರ ಆಪ್ತ ಗೆಳೆಯರೆಲ್ಲ ಬಂದು ರೂಮಿನಲ್ಲಿ ಖುಷಿಯಾಗಿ ಮಾತನಾಡುತ್ತ ಇಸ್ಪೇಟು ಆಡುತ್ತಿದ್ದರು. ಕೋಣೆಯಲ್ಲೆಲ್ಲ ಸಿಗರೇಟಿನ ಹೊಗೆ ತುಂಬಿತ್ತು. ನಾನು ಯಾವುದೋ ಕೆಲಸಕ್ಕಾಗಿ ರೂಮಿನಲ್ಲಿ

ಹತ್ತಿರದಿಂದ ಹೋಗುವಾಗ, ಗಂಗಮ್ಮ ಕರಗಿನಿಂದ ಕೆಲವು ಬಾಟ್ಲಿಗಳನ್ನು ಮುಚ್ಚಿಕೊಂಡು ಹೋಗುತ್ತಿದ್ದನ್ನು ಕಂಡೆ. 'ಏನುಮಾಡಲಿ?' ಎಂದು ತಿಳಿಯದಾಯಿತು. ಗಡಿಯಾರದ ಕಡೆಗೆ ನೋಡಿದೆ. ರಾತ್ರಿ ಹನ್ನೊಂದು ಗಂಟೆಯಾಗಿತ್ತು. ಗಾಢನಿದ್ರೆಯಲ್ಲಿದ್ದ ತಂದೆಯವರನ್ನು ಎಬ್ಬಿಸಿದೆ. ಗಾಬರಿಗೊಂಡಂತೆ ತಂದೆಯವರು ಎದ್ದು ಕುಳಿತು "ಏನಮ್ಮಾ ಸುಧಾ? ಎಬ್ಬಿಸಿದೆಯ?" ಎಂದು ಕೇಳಿದರು. ನನ್ನ ಕಳೆಗೆಟ್ಟ ಮುಖವನ್ನು ನೋಡಿ ಒಮ್ಮೆಲೇ ಎದ್ದುಬಿಟ್ಟರು. ನಾನು ಅವರಿಗೆ ಇಸ್ಪೀಟಿನ ಕೋಣೆಯಲ್ಲಾಗುವ ನಾಟಕವನ್ನು ತಿಳಿಸುವಂತೆ ಕೇಳಿಕೊಂಡೆ. ಪಾಪ, ತಂದೆ ಮುದುಕರಾದರೂ ತಲೆಗೆ ಕೈಯಿಟ್ಟು ಅಲ್ಲಿಯೇ ಕುಸಿದುಬಿಟ್ಟರು. ಆಗ ನನಗೆ ಏನುಮಾಡಬೇಕೆಂದು ತೋಚಲಿಲ್ಲ. ಮನಸ್ಸಿಗೆ ಧೈರ್ಯ ತಂದುಕೊಂಡು ಇಸ್ಪೀಟಿನ ಕೋಣೆಯ ಬಾಗಿಲನ್ನು ಬಲವಾಗಿ ದೂಡಿದೆ. ಆಗಲೇ ಕೆಲಸ ಕೈಮೀರಿತ್ತು. ಬಾಟಲಿಗಳು ಖಾಲಿಯಾಗಿ ಅಲ್ಲಿಯೇ ಬಿದ್ದಿದ್ದುವು. ಅವರೆಲ್ಲರ ಮುಖವನ್ನು ನೋಡಲು ನನಗೇ ಜಿಗುಪ್ಸೆ ಎನಿಸಿತು. ನಾನು ಬಂದುದನ್ನು ಕಂಡು ಗಂಗಮ್ಮ ಹೌಹಾರಿ ಮೂಲೆಯಲ್ಲಿ ನಿಂತಿದ್ದಳು. ಅವಳನ್ನು ಕಂಡು ನನಗೆ ಸಿಟ್ಟನ್ನು ತಡೆದುಕೊಳ್ಳಲಾಗಲಿಲ್ಲ. ಅವಳ ರಟ್ಟೆಯನ್ನು ಹಿಡಿದು ಹೊರಗೆ ದೂಡಿದೆ. ಕೂಡಲೇ ನನ್ನವರು, "ಸುಧಾ, ಯಾರು ನಿನಗೆ ಇಲ್ಲಿಗೆ ಬರಲು ಹೇಳಿದರು?" ಎಂದರು ...ಕೆಂಪಗಾದ ಕಣ್ಣುಗಳಿಂದ.

"ನನ್ನ ಮನೆಯಲ್ಲಿ ನಾನು ಅಡ್ಡಾಡುವುದಕ್ಕೂ ಇಲ್ಲಿಗೆ ಬರಲೂ ಅಪ್ಪಣೆ ದೊರಕಿಸಿಕೊಳ್ಳಬೇಕೆಂದು ಇಲ್ಲವಲ್ಲಾ!" ಎಂದೆ ನಾನು.

"ಗಂಗಮ್ಮನನ್ನು ಏಕೆ ದೂಡಿದೆ ಮತ್ತೆ?" ಎನ್ನುತ್ತ ಅವರು ನನ್ನ ಹತ್ತಿರಕ್ಕೆ ಬಂದರು.

"ಗಂಗಮ್ಮ ಇರುವುದು ಬೇಕಿಲ್ಲ ನನಗೆ. ಅವಳು ಈಗಲೇ ಹೊರಟು ಹೋಗಲಿ!" ಎಂದೆ ಹಟದಿಂದ.

ಇದರಿಂದ ಅವರಿಗೆ ಬಹಳ ಕೋಪ ಬಂತು. ಕೈಯನ್ನು ಮೇಲೆತ್ತಿದ್ದರು. ಆದರೆ ಆ ಪೆಟ್ಟು ನನ್ನನ್ನು ಬಿಡಿಸಲು ಬಂದ ತಂದೆಯವರಿಗೆ ಬಿತ್ತು.

ನನ್ನ ಪತಿಗೆ ಮತ್ತು ತಂದೆಯವರಿಗೆ ದೊಡ್ಡ ಜಗಳವೇ ಆಯಿತು. ಇದರ ಪರಿಣಾಮವೆಂದರೆ, ತಂದೆಯವರು ಆ ರಾತ್ರಿಯೇ ನಮ್ಮ ಮನೆಯಿಂದ ಹೊರಟರು. ನನಗೆ ತವರೂರಿನ ಸುಖ ಇಲ್ಲದಾಯಿತು. ಇದಾದ ವೇಳೆ ತಂದೆಯವರು ಬಹಳ ಕಾಲ ಉಳಿಯಲಿಲ್ಲ. ತಂದೆಯವರಿಗೆ ಈಗೋ ಇನ್ನೊಂದು ಗಳಿಗೆಗೋ—ಎಂಬ ಅಣ್ಣನಿಂದ ತಂತಿ ಬಂದಾಗ, ನನ್ನವರಿಗೆ ತುಂಬ ಅತ್ತು ಕರೆದು ಕೇಳಿಕೊಂಡೆ. ಅವರದು ಒಂದೇ ಉತ್ತರ:

"ಬೇಕಾದರೆ ನೀನು ಹೋಗು. ತಿರುಗಿ ಮಾತ್ರ ಬರಬೇಡ!"

ಆ ವಿಷಯದಲ್ಲಿ ನಾನು ತುಂಬಾ ವಿಚಾರಮಾಡಿದೆ. ಮದುವೆಯಾದ ಹೆಣ್ಣನ್ನು ಗಂಡನು ತೊರೆದ ಮೇಲೆ, ಸಮಾಜದಲ್ಲಿ ಇರುವುದು ಕಠಿಣ. ಸಮಾಜದ ಕ್ರೂರ ನುಡಿಗಳನ್ನು ಎದುರಿಸುವುದು ಸಾಮಾನ್ಯವಲ್ಲ. ತಂದೆಯವರ ಅಂತಿಮಕಾಲಕ್ಕೆ ತವರೂರಿಗೆ ಬಂದು ಅಣ್ಣನಿಗೆ ಭಾರವಾಗುವುದಕ್ಕಿಂತ, ಇಲ್ಲಿಯೇ ಇದ್ದು ಬಂದ ಕಷ್ಟಗಳನ್ನು ಎದುರಿಸಬೇಕೆಂದು ಸಂಕಲ್ಪ ಮಾಡಿದೆ. ಆದರೆ ಏನಾಯಿತು?

ಅವರಿಗೆ ಆನಂದವಾಯಿತು; ಏಕೆಂದರೆ ನಾನು ತಂದೆಯವರನ್ನು ನೋಡಲು ಹೋಗಲಿಲ್ಲವೆಂದು ಗಂಗಮ್ಮನನ್ನು ಕೆಲಸದಿಂದ ತೆಗೆದರು. ನನ್ನ ಜೊತೆಯಲ್ಲಿ ಸುಖವಾಗಿ ಇದ್ದರು. ಅದೇ ಇರಬಹುದು.... ನನ್ನ ಜೀವನದಲ್ಲಿಯ ಅಮೃತಗಳಿಗೆ. ನನ್ನ ನೌಕೆ ಸಮುದ್ರದಲ್ಲಿ ಉಲ್ಲಾಸದಿಂದ ವಿಹರಿಸುತ್ತಿತ್ತು. ನೋಡು ಸುಧಾ, ಎಲ್ಲಿಂದಲೋ ಏನೋ ಒಂದು ದೊಡ್ಡ ಬಿರುಗಾಳಿಯಂತೆ ನನ್ನ ಪತಿಯ ಅಕ್ಕನ ಮಗಳು—ವಿಧವೆ—ಬಂದಳು. ನನ್ನ ನೌಕೆ ಬಂಡೆಗಲ್ಲಿಗೆ ಅಪ್ಪಳಿಸಿತು. ಬಂದವಳು ಕೇವಲ ಹತ್ತು ದಿನದ ಮಟ್ಟಿಗೆ ಎಂದವಳು 'ಖಾಯಂ' ಆಗಿ ಇಲ್ಲಿಯೇ ತಳ ಊರಿದಳು. ಹೊರಗಿನ ರೀತಿಗೆ ಅವರು ನನ್ನೊಡನೆ ತುಂಬಾ ಪ್ರೀತಿಸುತ್ತಿರುವಂತೆ ನಟಿಸುತ್ತಿದ್ದರು. ರಾತ್ರಿಯಲ್ಲಿ ಮಧ್ಯೆ ನನಗೆ ಎಚ್ಚರವಾದಾಗ, ಅವರು ಹಾಸಿಗೆಯಲ್ಲಿ ಇರುತ್ತಿರಲಿಲ್ಲ. ಆಗಿನಿಂದಲೇ ಮನಸ್ಸನ್ನು ಕಲ್ಲು ಮಾಡಿಕೊಂಡೆ. ಸುಧಾ, ಹಿರಿಯರು ಹೇಳುವ ಮಾತು ಸುಳ್ಳಲ್ಲ!

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ದೊಡ್ಡ ಮರದ ಹತ್ತಿರ ಒಂದು ಪುಟ್ಟಗಿಡ ಬೆಳೆದಿತ್ತಂತೆ. ...ಲ್ಲರೂ ಬಂದು ದೊಡ್ಡ ಮರದಲ್ಲಿ ಆದ ಹಣ್ಣು ತಿನ್ನುತ್ತ, ಅದರ ...ತ್ತು ಇರುತ್ತಿದ್ದರು. ಇದನ್ನು ನೋಡಿ ಪುಟ್ಟಗಿಡ ಮರುಗಿತಂತೆ— ನನ್ನಂಥ ಬಡಪಾಯಿಯನ್ನು ಯಾರೂ ಕೇಳುವುದೇ ಇಲ್ಲ' ಎಂದು. ...ದರೆ ದೊಡ್ಡ ಬಿರುಗಾಳಿ ಬಂತು. ದೊಡ್ಡ ಮರವು ಉರುಳಿ ಹೋಯಿತಂತೆ. ಪುಟ್ಟಗಿಡ ಹಾಗೇ ಇತ್ತು. ಆಗ ಪುಟ್ಟಗಿಡಕ್ಕೆ ...ಬುದ್ಧಿ ಬಂತಂತೆ.

ಹಾಗೇ ಶ್ರೀಮಂತರಿಗೆ. ಇರುವ ಸುಖದ ಜೊತೆಗೆ ತೊಂದರೆ ...ಹೇಗೆ ಬಂದೀತು ಎನ್ನುವುದು ಕಷ್ಟ.

× × × ×

ಸುಧಾ, ಇದಕ್ಕೆ ನಗಬೇಕೋ ಅಳಬೇಕೋ ತಿಳಿಯದಾಯಿತು. ...ಂದಿನ ಸರಕಾರ ಹೋಗಿ ನಮ್ಮ ಕಾಂಗ್ರೆಸು ಅಧಿಕಾರಕ್ಕೆ ಬಂತು, ...ನನಗೆ ಗೊತ್ತು. ಆಗ ನಮ್ಮಲ್ಲಿ ತುಂಬ ಬದಲಾವಣೆಯಾಯಿತು.

ನನ್ನ ಪತಿ ಮನೆಗೆ ಬಂದವರೇ, ಗಾಂಧೀಜಿಯನ್ನು ಕಾಂಗ್ರೆಸನ್ನು ...ಮನದಣಿಯುವಂತೆ ಬೈದರು. ಆದರೆ ಉಪಾಯವಿಲ್ಲ. ಗೆದ್ದ ...ತ್ತಿನ ಬಾಲವನ್ನು ಹಿಡಿಯಬೇಕಲ್ಲವೇ? ಮೊದಲಿಗೆ ಗೋಡೆಯಲ್ಲ ...ನ್ನು ಅಲಂಕರಿಸಿದ. ಬ್ರಿಟಿಶ್ ರಾಜ ರಾಣಿ, ಮುಖಂಡರ ಫೋಟೊ ...ಎಲ್ಲ ಕೆಳಗಿಳಿದುವು. ಗಾಂಧೀ, ನೆಹರು ರಾಜೇಂದ್ರ ಪ್ರಸಾದ ಇನ್ನಿ- ...ತರರ ಫೋಟೋಗಳು ಆ ಸ್ಥಳವನ್ನು ಅಲಂಕರಿಸಿದುವು. ಮನುಷ್ಯ ...ನು ಬೇಕಾದರೂ ಮಾಡುತ್ತಾನೆ. ಅದಕ್ಕೇ ಎನ್ನುತ್ತಾರೆ: ವ್ಯಕ್ತಿತ್ವ ...ಇಲ್ಲದ ಮನುಷ್ಯ ಎಂದು.

ಒಂದು ಸಂಜೆ ಅವರು ಆಫೀಸಿನಿಂದ ಅವಸರವಾಗಿ ಬಂದು ...ಗುನಗುತ್ತಲೇ ಹೇಳಿದರು :

"ಕುಸುಮ್, ನಾಳೆ ಸಾಯಂಕಾಲ ನಾಲ್ಕು ಗಂಟೆಗೆ, ೫-೬ ...ನ ದೊಡ್ಡ ಮನುಷ್ಯರನ್ನು ಚಹಾಪಾರ್ಟಿಗೆ ಕರೆದಿದ್ದೇನೆ. ಅದರಲ್ಲಿ ...ಬ್ಬರು ನಿನ್ನ ತಂದೆಯವರ ಗೆಳೆಯರಂತೆ. ನಿನ್ನನ್ನು ತುಂಬಾ ...ಕೇಳಿದರು."

ಚಹಾಪಾರ್ಟಿಯ ಏರ್ಪಾಡು ಜೋರಾಗಿಯೇ ನಡೆದಿತ್ತು. ಗಾಂಧೀಜಿಯ ತತ್ತ್ವದಂತೆ ಮಿತವ್ಯಯ ಇರಲಿಲ್ಲ. ಬರುವವರಿಗೂ ...ದು ಬೇಕಿರಲಿಲ್ಲ. ಸಾಮಾನೇನು ನಾವು ಹಣ ಕೊಟ್ಟು ತರುವಂತಿಲ್ಲ. ...ಎಲ್ಲವೂ ತಾನಾಗಿಯೇ ಮನೆಗೆ ಬಂದು ಬೀಳುತ್ತಿತ್ತು.

ಕೆಲಸಕ್ಕೂ ಜನ ಕಡಿಮೆ ಇಲ್ಲ. ತಿಂಡಿ ತೀರ್ಥ ಎಲ್ಲವೂ ...ಸಿದ್ಧವಾಗಿತ್ತು. ಇನ್ನು ಸ್ವಲ್ಪ ಡ್ರೆಸ್ಸು ಮಾಡಿಕೊಳ್ಳೋಣವೆಂದು ಮುಖ ...ತೊಳೆದುಕೊಳ್ಳಲು ಬಚ್ಚಲು ಮನೆಗೆ ಹೋದೆ; ಹೊರಗಿನ ಗೋಡೆಗೆ ...ಒರಗಿಕೊಂಡು ಇಬ್ಬರು ಸಿಪಾಯಿಗಳು ನಿಂತಿದ್ದರು. ಅವರವರೊಳಗೆ ಮಾತು ನಡೆದಿತ್ತು; ಅವರ ಮಾತು ಕೇಳುವ ಇಚ್ಛೆ ನನಗೆ ಎಳ್ಳಷ್ಟೂ ...ಇರಲಿಲ್ಲ. ತಾನಾಗಿಯೇ ಕೆಲವು ಮಾತು ಕಿವಿಗೆ ಬಿತ್ತು :

"ಅಲ್ಲಿ ಪೋಲೀಸ್ ಸ್ಟೇಷನಿನಲ್ಲಿಯೂ ದುಡಿಯಬೇಕು. ಉಳಿದ ...ವೇಳೆ ಇಲ್ಲಿಯೂ ಕೆಲಸ ಮಾಡಬೇಕು. ಅಂತೂ ಇಂತೂ ಕುಂತಿಯ ಮಕ್ಕಳಿಗೆ ಸುಖವಿಲ್ಲಾ ಎನ್ನುವಂತೆ ನಮ್ಮ ಸ್ಥಿತಿಯಾಯಿತು ರಾಮೂ!" ...ಎಂದು ಒಬ್ಬ ಹೇಳುತ್ತಿದ್ದ.

ಅವರ ಮನಃಶಕ್ತಿ ಎಷ್ಟು ಶಕ್ಯ ಅತಿಶಯವಾಗಿತ್ತು! ಬಡವರಾದ ತಪ್ಪಿಗೆ ಹಾಯಾಗಿ ಹೆಂಡತಿ-ಮಕ್ಕಳೊಡನೆ ಚಳ್ಳಂದವಾದಲು ಅವ- ಕಾಶವೂ ಇಲ್ಲ.

ಇನ್ನೇನು, ಅತಿಥಿಗಳು ಬರುವ ವೇಳೆ. ನನ್ನವರು ನನ್ನ ಸಿದ್ಧತೆ- ಯನ್ನು ನೋಡಲು ಬಂದರು. ಆದರೆ ನಾನು ಉಟ್ಟುಕೊಂಡಿದ್ದ ಸೀರೆಯನ್ನು ನೋಡಿ,

"ಕುಸುಮ್, ನಿನ್ನ ಮೊದಲಿನ ಖಾದೀ ಸೀರೆಯನ್ನೇ ಉಟ್ಟುಕೋ; ಹಿಂದೆ ನಾನು ಅದರ ವಿಷಯದಲ್ಲಿ ಏನಾದರೂ ಅಂದಿದ್ದರೆ ಕ್ಷಮಿಸಿ ಬಿಡು!" ಎಂದು ನನ್ನನ್ನು ಬೇಡಿಕೊಂಡರು. ಅಷ್ಟರಲ್ಲಿ ಹೊರಗೆ ಅತಿಥಿಗಳೂ ಬಂದರೆಂದು ಕಾಣುತ್ತದೆ. ಅವರು ಗಡಿಬಿಡಿಯಿಂದ ಹೊರಗೆ ಹೋದರು.

ಇನ್ನು ವಿರಸವೇ ಮಾಡಿಕೊಳ್ಳುವುದು ಎಂದು, ಹಿಂದಿನ ನನ್ನ ಖಾದಿಬಟ್ಟೆಯ ಟ್ರಂಕನ್ನು ತೆರೆದೆ. ಅವರಿಂದ ಚೆಲುವಾದ ಪ್ರಿಂಟೆಡ್ ಖಾದೀ ಸೀರೆಯನ್ನು ತೆಗೆದು ಉಟ್ಟುಕೊಂಡೆ. ಆಗ ನನಗೆ ಕಳೆದ ವಸ್ತುವನ್ನು ಪುನಃ ಪಡೆದಷ್ಟು ಗೆಲುವಾಯ್ತು. ಮುಂದೆ ಎಲ್ಲವೂ ತೃಪ್ತಿಕರವಾಗಿಯೇ ಸಾಗಿತು. ಅವರ ಅಕ್ಕನ ಮಗಳು ಶೀಲಾ ಊರಿಗೆ ಹೋದವಳು ಮತ್ತೆ ಬಂದಳು.

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

(ಸಂ.: ಶ್ರೀ. ಪಿ. ವೆಂಕೋಬಾಚಾರ್ಯ ಬಿ ಎ. ಬಿ. ಟಿ.)

ಬೆಲೆ ಬಾಳುವ ಪುಸ್ತಕಗಳು ಕಡಿಮೆ ಬೆಲೆಗೆ

(೧೫-೮-೦ (೮-೦-೦)

೧ ಪೂರ್ಣಿಮಾ (ಸಂಸಾರ ಸುಖದ ಚಿತ್ರಗಳು)	೨-೪-೦
೨ ಮನೋರಾಜ್ಯ (ಮೂರಂಕದ ನಾಟಕ)	೨-೪-೦
೩ ಮೋಪಾಸಾನ ಓಲೆಗಳು (ಜೀವನ ಚರಿತ್ರೆ)	೨-೦-೦
೪ ರುಕ್ಮಿಣಿ, (ಕಾದಂಬರಿ)	೨-೦-೦
೫ ಮುಡಿಯದ ಹೂ ಮೋಪಾಸಾನ ಕತೆಗಳು)	೧-೮-೦
೬ ಕಲ್ಪನಾ ವಿಲಾಸ (ಸಣ್ಣ ಕತೆಗಳು)	೧-೮-೦
	೧೧-೮-೦

ಈ ಮೇಲಿನ ಪುಸ್ತಕಗಳು ಕೇವಲ ೮-೦-೦ ಗೆ
ಅಂಚೆ ವೆಚ್ಚ ಸಹಿತ
ಒಳ್ಳೇ ಸುಸಂಧಿ. ಇಂದೇ ಬರೆಯಿರಿ.

೬೦೦ ಗೌಳಿಗಲ್ಲಿ ಹುಬ್ಬಳ್ಳಿ

ಪಿ. ವಿ. ಆಚಾರ್ಯ & ಕಂ.
ಸಂಚಾಲಕರು, ಆನಂದ ಗ್ರಂಥಮಾಲಾ

ಮುಂದೆ ಈಗ ನಾವಿರುವ ಊರಿಗೆ ಇವರಿಗೆ ವರ್ಗವಾಯಿತು. ನಮ್ಮ ಬಂಗ್ಲೆಯ ಹತ್ತಿರದಲ್ಲಿಯೇ ಐದಾರು ಸಿಪಾಯಿಗಳ ಮನೆ ಇದ್ದುವು. ಮನೆಯಲ್ಲಿ ಕೆಲಸ ಮಾಡುವ ಸಿಪಾಯಿ ಗೋಪಾಲ ಬಹಳ ಒಳ್ಳೆಯ ಹುಡುಗ. ಅದೇ ತಾನೇ ಮದುವೆಯಾಗಿ ಎರಡು ತಿಂಗಳಾಗಿತ್ತು. ಇನ್ನೂ ಹೆಂಡತಿಯನ್ನು ಮನೆಗೆ ಕರೆದುಕೊಂಡು ಬಂದಿರಲಿಲ್ಲ. ಹೀಗಾಗಿ ಬೆಳಗ್ಗೆ, ಮಧ್ಯಾಹ್ನ, ರಾತ್ರಿ ತಾನೇ ಕೈಯಿಂದ ಅಡಿಗೆ ಮಾಡಿಕೊಳ್ಳುತ್ತಿದ್ದ. ಆಗ ನಾನೇ ಹೇಳುತ್ತಿದ್ದೆ: 'ಹೆಂಡತಿಯನ್ನು ಕರೆಯಿಸು ಗೋಪಾಲ್! ಎಷ್ಟು ದಿನಗಳೆಂದು ನೀನು ಕೈ ಸುಟ್ಟುಕೊಳ್ಳುತ್ತೀ'? ಎಂದು. ಆಗ ಅವನು ನಗುತ್ತ :

"ಬಾಯಿ ಸಾಹೇಬ್, ನೀವು ನನ್ನ ತಾಯಿಯಂತೆ ಇದ್ದೀರಿ ನನಗೆ ಯಾವುದಕ್ಕೂ ಕಡಿಮೆ ಇಲ್ಲ. ನನ್ನ ತಾಯಿಯೂ ಊರಿಗೆ ಹೋಗಿದ್ದಾಳೆ. ಅವಳೇ ಸೊಸೆಯನ್ನು ಕರೆದುಕೊಂಡು ಬರಬಹುದು! ಎಂದು ನುಡಿದ.

ಗೋಪಾಲನ ತಾಯಿ ಸೊಸೆಯನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಬಂದಳು. ನನಗೆ ಆಶ್ಚರ್ಯವಾಯಿತು. ಇಷ್ಟು ಚೆಲುವಿನ ಹುಡುಗಿ ಅವಳು ಇರಬಹುದೆಂದು ನಾನು ಕನಸಮನಸಿನಲ್ಲಿಯೂ ನೆನೆಸಿರಲಿಲ್ಲ. ಅವಳು ಹೆಸರಿಗೆ ತಕ್ಕಂತೆ ಗೌರಿಯೇ ಇದ್ದಳು.

ನನ್ನವರು ಆಗಾಗ, ಸರ್ಕೀಟಿಗೆ ಬೇರೆ ಊರಿಗೆ ಹೋಗುತ್ತಿದ್ದರು. ಶೀಲಾನ ಜೊತೆಗೆ ನಾನು ಹೆಚ್ಚು ಮಾತಾಡುತ್ತಿರಲಿಲ್ಲ. ಅವಳಿಗೆ ಅದು ಬೇಕೂ ಇರಲಿಲ್ಲ. ಆಗೆಲ್ಲ ಗೌರಿ ನನ್ನೊಡನೆ ಜೊತೆಗಾತಿಯಾಗುತ್ತಿದ್ದಳು. ಅವಳ ಅತ್ತೆಯೂ ದೂರದಲ್ಲಿ ಕುಳಿತುಕೊಂಡು ತನ್ನ ಸೊಸೆ ಮತ್ತು ಮಗನ ಗುಣಗಾನ ಮಾಡುತ್ತಿದ್ದಳು. ಅವಳಿಗೆ ಅವರಿಬ್ಬರೂ ಎರಡು ಕಣ್ಣುಗಳಂತಿದ್ದರು.

ಅಂದು ರಾತ್ರಿ ನನ್ನ ಪತಿ ಸರ್ಕೀಟಿನಿಂದ ಮರಳಿ ಬಂದರು. ತುಂಬಾ ದಣಿದಿದ್ದಂತೆ ಕಂಡಿತು. ನನ್ನ ಹತ್ತಿರ ಬಂದಾಗ ಗೌರಿ ದೂರ ಹೋಗುವುದನ್ನು ನೋಡಿ "ಯಾರದು ಹುಡುಗಿ ಕುಸುಮ?" ಎಂದು ಕೇಳಿದರು. ನನಗೆ ತೋರಿತು "ಇದೆಲ್ಲ ಇವರಿಗೆ ಯಾಕೆ?" ಎಂದು. ಆದರೂ ಅದನ್ನು ತೋರಗೊಡದೆ "ನಮ್ಮ ಸಿಪಾಯಿ ಗೋಪಾಲನ ಹೆಂಡತಿ ಗೌರಿ" ಎಂದು ಹೇಳಿದೆ. "ಓಹೋ, ಹೀಗೋ!" ಎನ್ನುತ್ತ ಮಂಚದ ಮೇಲೆ ಬಿದ್ದುಕೊಂಡರು.

× × × ×

ಗೋಪಾಲ ತಾನಿನ್ನು ತಂದೆಯಾಗಲಿರುವೆನೆಂದು ತಾಯಿಯಿಂದ ತಿಳಿದು ಕುಣಿದಾಡಿಬಿಟ್ಟ "ಬಾಯಿಸಾಹೇಬ್! ನಿಮ್ಮ ಪಾದದ ಪುಣ್ಯ, ನನ್ನ ಗೌರಿ...." ಎಂದ ನಾಚಿಕೆಯಿಂದ ಮಾತನ್ನು ಅಲ್ಲಿಗೇ ನಿಲ್ಲಿಸಿದ.

ಇನ್ನು ನನ್ನಿಂದ ಬರೆಯುವುದು ತುಂಬ ಪ್ರಯಾಸದ ಕೆಲಸ. ಸುಧಾ, ಲೇಖನಿಕೆ ಮುಂದೆ ಸಾಗದಾಗಿದೆ. ಕಣ್ಣೀರು ಕೋಡಿಯಾಗಿ ಹರಿಯುತ್ತಿದೆ. ತಂಗಿ ಗೌರಿಗೆ ಮೂರು ತಿಂಗಳು ತುಂಬಿತ್ತು. ಕಳ್ಳ-ಕುಪ್ಪಸವೆಂದು ಸಣ್ಣ ಪ್ರಮಾಣದಲ್ಲಿ ಹಬ್ಬಮಾಡಿದರು. ಆ ದಿನ ಅವಳು

ಚಂದದ ಹಸಿರು ಸೀರೆಯುಟ್ಟು ಹಸಿರು ರವಿಕೆ ತೊಟ್ಟು ಜಡೆಗೆ ಮಲ್ಲಿಗೆ ದಂಡೆ ಇಟ್ಟು ಶೃಂಗಾರದಿಂದ ಬಂದು ನನ್ನ ಕಾಲಿಗೆರಗಿದಳು. ಅಷ್ಟೇ ಮಮತೆಯಿಂದ ನಾನೂ ಅವಳನ್ನು ಎಬ್ಬಿಸಿದೆ. ನೆಲದಲ್ಲಿ ಹಾಸಿದ್ದ ರತ್ನ-ಗಂಬಳಿಯ ಮೇಲೆ ಕುಳಿತಳು ಗೌರಿ. ಅವಳಿಗೆ ನಾನು ಒಂದು ಸೀರೆ ಹಾಗೂ ಖಣವನ್ನು ಕೈಯಲ್ಲಿ ಇರಿಸಿ ಹಣೆಗೆ ಕುಂಕುಮವಿಟ್ಟೆ. ಅವಳ ಮುಖ ಉಲ್ಲಾಸದಿಂದ ತುಂಬಿತ್ತು. ಅಷ್ಟರಲ್ಲಿ ಒಬ್ಬ ಸಿಪಾಯಿ ಬಂದು ಒಂದು ಕಾಗದ ಕೊಟ್ಟುಹೋದ. ಅದರಲ್ಲಿ ಹೀಗೆ ಬರೆದಿತ್ತು :

"ಕುಸುಮ್, ನಾನು ಅಗತ್ಯದ ಕೆಲಸಕ್ಕಾಗಿ ಹತ್ತಿರದ ಹಳ್ಳಿಗೆ ಹೋಗುತ್ತೇನೆ. ರಾತ್ರಿ ಮನೆಗೆ ಬರಲಿಕ್ಕಾಗಲಿಕ್ಕಿಲ್ಲ. ನಿನ್ನ ಜೊತೆಗೆ ಗೋಪಾಲನ ತಾಯಿ ಅಥವಾ ಗೌರಿಯನ್ನು ಇರಿಸಿಕೊ!

ನಿನ್ನ

ಮೋಹನ"

ಸುಧಾ, ಈ ಕಾಗದವನ್ನು ನಿಜವೆಂದೇ ನಂಬಿದೆ; ಅದರಂತೆ ಆಲೋಚನೆ ಮಾಡಿದೆ. 'ಮುದುಕಿಗಿಂತಲೂ ಗೌರಿ ಮಲಗಿದರೆ ನನ್ನ ಜೀವಕ್ಕೂ ಹಿತ; ಅವಳಾಡುವ ಗಂಡನ ವಿಷಯಕ ಪ್ರೀತಿಯ ಮಾತು-ಗಳು ನನ್ನ ಮನಸ್ಸಿಗೆ ಸಮಾಧಾನ ತಂದೀತು!' ಎಂದುಕೊಂಡೆ ನನ್ನ ಮಂಚದಿಂದ ಸ್ವಲ್ಪದೂರದಲ್ಲಿಯೇ ಗೌರಿ ನನ್ನ ಚಾಪೆಯ ಮೇಲೆ ಮಲಗಿದ್ದಳು. ಅವಳನ್ನು ಕಂಡಾಗಲೆಲ್ಲ, 'ನಾನು ಇನ್ನೂ ತಾಯಿ-ಯಾಗಲಿಲ್ಲವಲ್ಲಾ!' ಎಂದು ಒಳದನಿ ಮಿಡುಕುತ್ತಿತ್ತು. ಆ ಮಾತು ಈ ಮಾತು ಆಡುತ್ತ ನಿದ್ದೆಹೋದೆವು.

ಥಟ್ಟನೆ ಒಂದು ಆರ್ತಧ್ವನಿ ನನ್ನನ್ನು ಎಚ್ಚರುಗೊಳಿಸಿತು. ಹೆದರಿಕೊಂಡು ಲಾಯಿಟಿನ ಸ್ವಿಚ್ ಒತ್ತಿದೆ. ಗೌರಿ ತನ್ನ ಚಾಪೆಯ ಮೇಲಿರಲಿಲ್ಲ. ಗಾಬರಿಯಾದೆ. ಹೊರಗೆ ಓಡಿದೆ. ಗೋಪಾಲ ಹೊರಗೆ ಮಲಗಿದ್ದ. 'ಅಲ್ಲಿ ಹೋಗಿರಬಹುದೇ' ಎಂದು ಅಲ್ಲಿಗೂ ಹೋದೆ. ಅಲ್ಲಿಯೂ ಗೌರಿಯು ಸುಳಿವಿಲ್ಲ. ಅಷ್ಟರಲ್ಲಿ ಗೋಪಾಲನೂ ಎದ್ದು ಬಿಟ್ಟ. ಹಾಗಾದರೆ ಗೌರಿ ಎಲ್ಲಿ? ಏನೂ ತಿಳಿಯದಂತಾಗಿ ತಲೆ ತಿರುಗಿದಂತಾಯಿತು. ತಿರುಗಿ ನೋಡುತ್ತೇನೆ; ಗೋಪಾಲ ಹುಚ್ಚನಂತೆ ನಿಂತು ಬಿಟ್ಟಿದ್ದಾನೆ. ಓಡಿ ಬಂದವನೇ "ಬಾಯಿಸಾಹೇಬ್, ನನ್ನ ಗೌರಿಯನ್ನು ಸಾಹೇಬರ ಕೈಯಿಂದ ಬಿಡಿಸಿಕೊಡಿರಿ! ನಾಳಿನಿಂದಲೇ ಕೆಲಸ ಬಿಟ್ಟುಬಿಡುತ್ತೇನೆ. ಎಲ್ಲಿಯಾದರೂ ಕೂಲಿನಾಲಿ ಮಾಡಿ ನಾನೂ ಗೌರಿಯೂ ಹೊಟ್ಟೆತುಂಬಿಸಿಕೊಂಡೇವು. ಎಂದು ನನ್ನ ಕಾಲುಗಳನ್ನು ಗಟ್ಟಿಯಾಗಿ ಹಿಡಿದುಕೊಂಡ.

ಅವರ ಕೋಣೆಯಿಂದಲೇ ಗೌರಿ ಚೀರಿದಂತೆ ಕೇಳಿತು. ಆಮೇಲೆ ಶಬ್ದವಿಲ್ಲ. ಕೋಣೆಯಲ್ಲಿ ಲಾಯಿಟ್ ಇದೆ. ಹಾಗಾದರೆ ಅವರು ಯಾವಾಗ ಬಂದರು? ನನ್ನ ಯಾವ ತಪ್ಪಿಗೆ ಈ ಪ್ರಾಯಶ್ಚಿತ್ತ ದೇವಾ! ಎನ್ನುತ್ತ ಹೋಗಿ ಬಾಗಿಲನ್ನು ಬಲವಾಗಿ ನೂಕಿದೆ. ಒಳಗಿನ ದೀಪ ಆರಿತು. ಬಾಗಿಲು ತೆರೆಯಿತು. ನಾನೂ ಒಳಗೆ ಹೋಗಿ ದೀಪಹಚ್ಚಿದೆ. ಗೋಪಾಲನೂ ಬಂದ. ಗೌರಿ ಅಲ್ಲಿಯೇ ಮೂರ್ಛೆಬಂದು ಬಿದ್ದಿದ್ದಳು. ಕೂದಲೆಲ್ಲ ಕೆದರಿದ್ದುವು.

ಗೋಪಾಲ ಗೌರಿಯನ್ನು ಎತ್ತಿಕೊಂಡು ಮನೆಗೆ ಹೋದ. ನನ್ನ ಎದೆ ಬಿರಿದಂತೆ ಆಯಿತು. ಹೊರಗೆ ಬಂದೆ. ಅಲ್ಲಿಯೇ ಇಝೀಚೇರಿನ ಮೇಲೆ ನನ್ನ ಪತಿರಾಜ ಬಿದ್ದುಕೊಂಡಿದ್ದರು. ತಾಳ್ಮೆಗೂ ಒಂದು ಮಿತಿ ಇದೆ. ಅದೂ ಈಗ ಇಲ್ಲದಂತಾಯಿತು. ನಾನೇ ಕೇಳಿದೆ:

"ರಾತ್ರಿ ಬರೋದಿಲ್ಲವೆಂದು ಸುಳ್ಳು ಹೇಳಿ, ಹೀಗೆ ಮೋಸ ಮಾಡಬೇಕೇ?" ಎಂದು ಹೇಳಿ, ನನ್ನ ರೂಮಿಗೆ ಬಂದುಬಿಟ್ಟೆ. ಅದರಿಂದ ಅವರ ಮೇಲೆ ಯಾವ ತರದ ಪರಿಣಾಮವೂ ಆಗಲಿಲ್ಲ.

ರಾತ್ರಿ ನನಗೆ ನಿದ್ರೆಯೇ ಬರಲಿಲ್ಲ. ಗೋಪಾಲನ ಮನೆಯಲ್ಲಿ ಸ್ವಲ್ಪ ಗಲಾಟೆಯಾದಂತೆ ಕೇಳಿಸಿತು. ಗೌರಿ ಶುದ್ಧಿಯ ಮೇಲೆ ಬಂದಿರಬೇಕು ಎಂದುಕೊಂಡೆ. ಸುಧಾ, ನನ್ನ ಬಾಳ್ವೆ ಇದು ಒಂದು ಬಾಳೇ ಎಂದೆನಿಸಿತು.

ಬೆಳಗ್ಗೆ ಎದ್ದೊಡನೆ, ಗೋಪಾಲ ಮನೆಬಿಟ್ಟು ಹೋದ—ಎಂಬ ವಾರ್ತೆ ಕೇಳಿದೆ. ಗೌರಿ ಹೋಗಿರಬಹುದೆ? ಮುದುಕಿ ಮಾತ್ರ ನೆಲದಲ್ಲಿ ಜೋರಲಾಗಿ ಬಿದ್ದು ಅಳುತ್ತಿತ್ತು. ಆದರೆ ಒಂದೇ ಒಂದು ಪ್ರಶ್ನೆ ಭೂತವಾಗಿ ಬಂದು ನನ್ನೆದುರಿಗೆ ನಿಂತು ಕೇಳಿದಂತಾಯಿತು:

"ಕುಸುಮಾ, ನಿಮ್ಮ ಶ್ರೀಮಂತಿಕೆಯ ಮದ ಈ ಬಡಪಾಯಿಗಳ ಮೇಲೆ ಹೀಗೆ ಅತ್ಯಾಚಾರ ಮಾಡಬೇಕೆ?" ಎಂದು. ಸುಧಾ ನಿಜವಾಗಿಯೂ ಇದರಲ್ಲಿ ನನ್ನದೇ ಪೂರ್ಣ ತಪ್ಪು. ನನ್ನವರ ಸ್ವಭಾವ ನನಗೆ ಗೊತ್ತಿದ್ದೂ, ಗೌರಿಯನ್ನು ನನ್ನ ಹತ್ತಿರ ಮಲಗಿಸಿ ಕೊಳ್ಳಬಾರದಾಗಿತ್ತು. ಆದರೆ ನಾನು ಪತಿಯ ಈ ಮೋಸ ತಿಳಿಯದಾದೆ ಸುಧಾ! ಯಾರ ತಪ್ಪಿಗೆ ಯಾರಿಗೆ ಶಿಕ್ಷೆ? ಸುಂದರ ಹಕ್ಕಿಗಳಂತೆ ಜೊತೆಯಾಗಿ ಇದ್ದ ಪತಿ-ಪತ್ನಿಗೇಗೆ ನನ್ನಿಂದ ಈ ದುರ್ಗತಿ ಬಂತಲ್ಲವೇ?

ಮನಸ್ಸು ಕದಡಿ ಹೋಗಿದೆ. ಇನ್ನು ಇದ್ದಾದರೂ ಯಾವ ಪ್ರಯೋಜನವೂ ಇಲ್ಲ. ನನ್ನಿಂದ ಆದಷ್ಟು ಅವರನ್ನು ತಿದ್ದಲು ನೋಡಿದೆ. ಆದರೆ ನನ್ನ ಆಶೆ ಇಡೇರಲಿಲ್ಲ. ಈಗ ನಾನು ಮಾಡುತ್ತಿರುವುದು ಪಾಪವೋ ಪುಣ್ಯವೋ ನಾನರಿಯೆ.

ತಂಗಿ, ನೀನು ನಿನ್ನ ಮನಸ್ಸಿಗೊಪ್ಪುವ ಪತಿಯನ್ನು ಆರಿಸಿ ಮದುವೆ ಮಾಡಿಕೊ. ಕೊನೆಯವರೆಗೂ ಚೆನ್ನಾಗಿ ಇದ್ದರೇ ದಾಂಪತ್ಯ-ಜೀವನ ಸಾರ್ಥಕ.

ನೀನು ಎಲ್ಲಿದ್ದರೂ ಸುಖವಾಗಿರು. ಇದೇ ನಿನ್ನ ಅಕ್ಕನ ಅಂತಿಮ ಆಶೆ. ಈಗಾಗಲೇ ನಾನು ತೆಗೆದುಕೊಂಡ ನಿದ್ರೆಯ ಗುಳಿಗೆಗಳು ಕೆಲಸ ಮಾಡುತ್ತಿವೆ. ಇನ್ನು ಧೀರ್ಘನಿದ್ರೆ.

ಇತಿ ನಿನ್ನ

ನಿರ್ಭಾಗ್ಯ ಅಕ್ಕ

ಸುಧಾನ ಕಣ್ಣುಗಳಲ್ಲಿ ಹರಿಯುತ್ತಿದ್ದ ನೀರು ನಿಂತುಬಿಟ್ಟುವು. ಒಂದು ಬಗೆಯ ಶಾಂತಿ ಅವಳನ್ನು ಆವರಿಸಿತು. ಸಾಧನನನ್ನು ಕುರಿತು "ಅಕ್ಕ ಮಾಡಿದ್ದು ನಿಜವಾಗಿಯೂ ಪಾಪವಲ್ಲ. ಈ ವರೆಗೆ ಅವಳು ನರಕದಲ್ಲಿ ಇದ್ದಳು. ಈಗ ಮುಕ್ತಿಯಾಯಿತು. ಬೇರೆ ಯಾವ ವಿಧದಿಂದಲೂ ಅಕ್ಕನಿಗೆ ಶಾಂತಿ ದೊರೆಯುತ್ತಿರಲಿಲ್ಲ. ಅವಳು ಮಾಡಿದ್ದೇ ಸರಿ!" ಎಂದು ಆ ಓಲೆಯನ್ನು ತನ್ನ ತುಟಿಗೆ ಒತ್ತಿ ಕೊಂಡಳು.

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ
ಪ್ರಚಾರವಾಗಬೇಕಾಗಿದ್ದರೆ

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ತರಹದ
ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

ಪುಣೆಯಲ್ಲಿ ನಮ್ಮ ಏಜಂಟರು:
ಪ್ರೋ. ಎನ್. ಬಿ. ಮತಕರ
೮೩, ರವಿವಾರಪೇಠ ಪುಣೆ ೨

"ಪರಬ್ರಹ್ಮನ ದಯಾಘನತ್ವ"

ಶ್ರೀ. ಕೆ. ಎಸ್. ಭುಜಂಗೆ ಬಿ. ಎ. (ಆನರ್ಸ) ಮುಂಬಯಿ

●

ಇಂದಿನ ವಿಜ್ಞಾನ ಯುಗದಲ್ಲಿಯೂ ಪರಮಾತ್ಮ ಭಾವದ ಆಸ್ತಿಕ ಬುದ್ಧಿ ಬೆಳೆಯುತ್ತಲಿದೆಯೇ ಹೊರತು ಅಳಿಯುತ್ತಿರಲಿಲ್ಲ. ಈ ರಂಗದಲ್ಲಿ ಪರಮಾತ್ಮ ಶಕ್ತಿಯ ಪ್ರಮೇಯವನ್ನು ಬಿಡಿಸಲು ಹವಣಿಸಿದವರು ಹಲವಾರು ಜನರು. ಹಾಗೆ ಹವಣಿಸಿದವರಲ್ಲಿಯ ಒಬ್ಬರ ವಿಚಾರಸರಣಿಯಿದು.

●

'ಪರಮಾತ್ಮನು ಕರುಣಾಕರಮುದ್ರನು-ಭಕ್ತಪರಾಧೀನನು-ದಯಾಘನನು-ಜಗತ್ತಿನಲ್ಲಿ ಕ್ರಮಬದ್ಧವಾಗಿ ಸುವ್ಯವಸ್ಥಿತವಾಗಿ ತೋರುವದೆಲ್ಲವೂ ಅವನಿಂದಲೇ ನಿರ್ಮಿತವಾದದ್ದು; ಮತ್ತು ಜೀವರುಗಳಿಗಾಗುವ ಸಕಲ ಕಲ್ಯಾಣವೂ ಅವನ ಕೃಪಾಕಟಾಕ್ಷದಿಂದಲೇ' ಎಂದು ಸಕಲ ಸನಾತನಶಾಸ್ತ್ರಗಳೂ ಭಾರತ-ಭಾಗವತಾದಿ ಪುರಾಣಗಳೂ ಮತ್ತು ಸಾಧುಸಂತ ಜನರ ವಚನಗಳೂ ಸಾರಿಸಾರಿ ಹೇಳುತ್ತವೆ. ಸಾಮಾನ್ಯವಾಗಿ ಯಾವನೊಬ್ಬ ಮನುಷ್ಯನಲ್ಲಿ ಕರುಣಾಳುತನ-ದಯೆ ಇದ್ದರೆ, ಅದು ಅವನಲ್ಲಿ ಒಂದು ಉತ್ತಮವಾದ ಸದ್ಗುಣವಿದ್ದು ಆ ಮನುಷ್ಯನು ಎಲ್ಲರ ಪ್ರೀತಿಗೂ ಪಾತ್ರನಾಗುವನೆಂಬುದು ಅನುಭವದ ಮಾತಾಗಿದೆ. ಎಂದಮೇಲೆ, ಸಕಲ ಸದ್ಗುಣಗಳಿಗೂ ನಿಧಿಯಾದ ಆದರ್ಶ ಭೂತನಾದ ಪರಬ್ರಹ್ಮನೆಂಬ ವಸ್ತುವಿನಲ್ಲಿ ಇಂತಹ ಗುಣ ಇರಲೇ ಬೇಕಾದದ್ದು ಎಂದು ಎನಿಸುವುದು ಸಹಜವಾಗಿದೆ. ಆದರೆ ಜಿಜ್ಞಾಸುವಿಗೆ ತನ್ನ ಆಳವಾದ ವಿಚಾರತರಂಗಗಳಲ್ಲಿ ತೇಲುವಾಗ, ಕೆಲವು ಸೂಕ್ಷ್ಮವಾದ-ಒಂದಕ್ಕೊಂದು ವಿರುದ್ಧವಾದ-ಶಂಕೆಗಳುದ್ಭವಿಸುತ್ತವೆ. ಇಂತಹ ಕೆಲವು ಪ್ರಶ್ನೆಗಳನ್ನೆತ್ತಿ ಅವುಗಳಿಗೆ ಸಮರ್ಪಕವಾದ ಉತ್ತರವನ್ನು ತರ್ಕಶುದ್ಧವಾಗಿ ತತ್ತ್ವಜ್ಞಾನದ ತಳಹದಿಯ ಮೇಲೆ ದೊರಕಿಸಲು ಪ್ರಯತ್ನಿಸುವ.

ಸಕಲ ಜೀವರುಗಳಿಗೂ ಪರಬ್ರಹ್ಮನೇ ತಂದೆ-ತಾಯಿ ಎಂಬ ಭಾವನೆ ಇದೆಯಷ್ಟೆ? ನಾವೆಲ್ಲರೂ ಅವನ ಮಕ್ಕಳು. ಅಲ್ಪರು ಅಜ್ಞಾನಿಗಳೂ ಆದ ಮಕ್ಕಳಿಂದ ಮಾಡಲ್ಪಡುವ ಎಲ್ಲ ತಪ್ಪುಗಳನ್ನೂ ದಯಾಘನನಾದ ಪರಮಾತ್ಮನು ಕ್ಷಮಿಸಿಬಿಡಬೇಕು. ನಮ್ಮೆಲ್ಲರಿಗೂ ಶಾಶ್ವತ ಸುಖಾನುಭವವನ್ನು ತಂದೊದಗಿಸಬೇಕೆಂದು ನಮ್ಮ ಅಭಿಲಾಷೆ; ಆದರೆ ಭಗವಂತನ ಚರಿತ್ರರೂಪವಾದ ಪುರಾಣಗಳ ಕಥೆಗಳಲ್ಲಿ; ಅವನು ಹೀಗೆ ಮಾಡುವುದು ಕಂಡು ಬರುವುದಿಲ್ಲ. ತನ್ನ ಭಕ್ತರಿಗಷ್ಟೇ ಇಂತಹ ಸುಖವನ್ನು ಅನುಗ್ರಹಿಸುವನೆಂದೂ ತನ್ನ ದ್ವೇಷಿಗಳಿಗೆ ಶಾಶ್ವತ ದುಃಖಾನುಭವವನ್ನು ಹೊಂದಿಸುವನೆಂದೂ ಕಂಡುಬರುತ್ತದೆ. ಭಕ್ತ ಪ್ರಹ್ಲಾದನ ಪಕ್ಷವಹಿಸಿ ಹಿರಣ್ಯಕಶ್ಯಪನ ಸಂಹಾರ ಮಾಡಿರುವದರಲ್ಲಿಯೂ ಪಾಂಡವರ ಪಕ್ಷವಹಿಸಿ ದುರ್ಯೋಧನಾದಿಗಳನ್ನು ನಾಶಗೈದದ್ದರಲ್ಲಿಯೂ ಆಶ್ಚರ್ಯವೇನೆನಿಸುವುದಿಲ್ಲ. ಒಂದು ರೀತಿಯಿಂದ ನೋಡಿದರೆ, ಇದೇ ನ್ಯಾಯವಾದದ್ದು. ಯಾಕೆಂದರೆ ಲೋಕವ್ಯವಹಾರದಲ್ಲಿಯೂ ತಪ್ಪಿತಸ್ಥರಿಗೆ ಶಿಕ್ಷೆವಿಧಿಸಲ್ಪಡುವುದೇ ನ್ಯಾಯ. ಆದರೆ ಹೀಗೆ ಮಾಡುವುದರಲ್ಲಿ ಅವನ ಕರುಣೆ ದಯೆ ಇವುಗಳ ಅರ್ಥವಾಗುವುದಿಲ್ಲ. ಆದರೆ ಎಲ್ಲೆಡೆಗೂ 'ದೇವತೆಗಳ ಪಕ್ಷಪಾತಿ' ಎಂದೂ 'ದೈತ್ಯರ ಅಥವಾ ಅಸುರರ ಕಡುವೈರಿ' ಎಂದೂ ಪ್ರಸಿದ್ಧನಾಗಿದ್ದಾನೆ. ಪುರಾಣಗಳಲ್ಲಿಯ ಕೆಲವು ಉದಾಹರಣೆಗಳು ಅತಿ ಸೋಜಿಗವಾಗಿವೆ. ದೇವೇಂದ್ರನನ್ನು ಕಾಪಾಡುವದಕ್ಕೋಸ್ಕರ ದೇವತೆಗಳ ಪಕ್ಷಕಟ್ಟಿ, ಸತ್ವಶೀಲನೂ ಭಕ್ತನೂ ಆದ ಬಲಿಚಕ್ರವರ್ತಿಯನ್ನು, ಕೇವಲ ಅಸೂಯೋತ್ಪನ್ನನೆಂದು, ವಾಮನಾವತಾರ ಮಾಡಿ ಪಾತಾಳಕ್ಕೆ ಮೆಟ್ಟಿದನೆಂಬ ಕಥೆ ಬರುತ್ತದೆ. ಇದರಂತೆ ಇನ್ನೊಂದೆಡೆಗೆ ದೇವತೆಗಳಿಗೋಸುಗ ವೃತ್ರಾಸುರನ ವಧೆ ಮಾಡಿಸುತ್ತಾನೆ. ಅವನ ವಧೆಗೆ ಮುಂಚೆ ವೃತ್ರಾಸುರನು ಸುಜ್ಞಾನಿಯೂ ಭಕ್ತನೂ ಎಂಬ ವರ್ಣನೆ ಇದೆ. ಅಲ್ಲದೆ ವೃತ್ರಾಸುರನ ಪ್ರಾಣವನ್ನು ಕೊಂದ ತಪ್ಪು ದೇವತೆಗಳ ಅಧಿಪತಿಯಾದ ದೇವೇಂದ್ರನದೆಂದೇ ಎನಿಸುತ್ತದೆ. ಈ ಕಥೆಯನ್ನು ಕೇಳಿ ಪರೀಕ್ಷಿತ ರಾಜನು ಶುಕಾಚಾರ್ಯರಿಗೆ ಪ್ರಶ್ನೆ ಮಾಡಿದ್ದಾನೆ. ದೇವತೆಗಳಿಂದ ಶ್ರೀಹರಿಗೆ ಏನಾಗಬೇಕಾಗಿದೆ? ಇಷ್ಟೊಂದು ವೈರುಧ್ಯವನ್ನು ದೈತ್ಯರ ಮೇಲೆ ಏಕೆ ತೋರುತ್ತಾನೆ! ಇಲ್ಲಿ ಅವನ ನ್ಯಾಯನಿಷ್ಠೆ, ಸಮದರ್ಶಿತ್ವ ಕಾಣುವದೆ? ಅವನಲ್ಲಿ ವೈಷಮ್ಯ ನೈರ್ಘೃಣ್ಯದೋಷ ಉಂಟೇ? ಎಂದು ಶಂಕೆ ತೆಗೆಯುತ್ತಾನೆ. ಇನ್ನೊಂದೆಡೆಗೆ ಇದಕ್ಕೆ ವಿರುದ್ಧವಾಗಿ ಆಚರಿಸಿದ ಕಥೆ ಕೂಡ ಉಂಟು. ರಾಜಸೂಯಯಜ್ಞದಲ್ಲಿ, ಅತ್ಯಂತ ಭಗವದ್ವೇಷಿಯಾದ ಶಿಶುಪಾಲನು ಶ್ರೀಕೃಷ್ಣನನ್ನು ನಿಂದಿಸುತ್ತಿರಲು, ಕೊನೆಗೆ ಶ್ರೀಕೃಷ್ಣನು ಅವನನ್ನು ತನ್ನ ಚಕ್ರದಿಂದ ಸಂಹರಿಸುತ್ತಾನೆ. ಆಗ ಸಕಲರ ಸಮಕ್ಷಮ ಶಿಶುಪಾಲನಲ್ಲಿಯ ಜೀವಜ್ಯೋತಿಯು ಶ್ರೀಕೃಷ್ಣನಲ್ಲಿ ಬಂದು ಸೇರುತ್ತದೆ. ಇದನ್ನು ನೋಡಿ ಧರ್ಮರಾಜನು ಆಶ್ಚರ್ಯಗೊಂಡು, ಶಾಸ್ತ್ರವಿರುದ್ಧವಾದ ಭಗವದ್ವೇಷಿಯಾದ ಶಿಶುಪಾಲನಿಗೆ ಇಂಥ ಸಾಯುಜ್ಯರೂಪವಾದ ಸದ್ಗತಿಯಾದದ್ದು ನ್ಯಾಯವೇ?-ಎಂದು ಶಂಕೆ ತೆಗೆಯು-

ತ್ತಾನೆ. ಪರೀಕ್ಷಿತ್-ಧರ್ಮರಾಜರಂಥವರಿಗೇ ಭಗವಂತನ ಕಾರ್ಯಗಳ ಬಗ್ಗೆ ಜಟಿಲವಾದ ಸಂಶಯಗಳು ಬರುತ್ತಿರುವಾಗ, ನಮ್ಮಂತಹ ಸಾಮಾನ್ಯರಿಗೆ ಅನೇಕ ಶಂಕೆಗಳು ಬರುವುದು ಸಹಜ. ಪುರಾಣಗಳಲ್ಲಿ ಬರುವ ಕಪಟನಾಟಕ ಸೂತ್ರಧಾರನೆನಿಸಿದ ಪರಬ್ರಹ್ಮನ ಚರಿತ್ರೆಯಲ್ಲಿಯ ಅನೇಕ ಸನ್ನಿವೇಶಗಳು, ಪರಮಾತ್ಮನ ನೀತಿಯ ಬಗ್ಗೆ ಶಂಕೆಗಳಿಗೆ ಆಸ್ಪದ ಕೊಡುತ್ತವೆ. ಇನ್ನು ಈ ಮೇಲಿನ ಸಂಶಯಗಳ ನಿವಾರಣೆಗಳನ್ನು ಅತಿ ಸೂಕ್ಷ್ಮವಾದ ತತ್ತ್ವಜ್ಞಾನದ ಸಿದ್ಧಾಂತಗಳನ್ನವಲಂಬಿಸಿ ಪುರಾಣಗಳಲ್ಲಿಯೇ ವಿವರಿಸಿದ್ದಾರೆ. ಅವು ಯಾವುವೆಂಬುದನ್ನು ನೋಡೋಣ

ಗೀತಾಶಾಸ್ತ್ರದ ಪ್ರಕಾರ, ಪರಮಾತ್ಮನಂತೆ ಅನಂತಾನಂತ ಜೀವರುಗಳೂ ಅನಾದಿನಿತ್ಯರು ಮತ್ತು ಜ್ಞಾನ-ಆನಂದ ಸ್ವರೂಪವುಳ್ಳವರು. ಆದರೆ ಅಲ್ಪರು ಅಸ್ವತಂತ್ರರು ಮತ್ತು ಭಿನ್ನ ಭಿನ್ನ ಸ್ವರೂಪ ಯೋಗ್ಯತೆಯುಳ್ಳವರು. ಎಂದರೆ ಒಬ್ಬೊಬ್ಬರ ಜ್ಞಾನಾನಂದದಲ್ಲಿ ವ್ಯತ್ಯಾಸವುಂಟು. ಜ್ಞಾನ ಆನಂದ ಕಡಿಮೆಯಾಗಿಯಾಗಿ ಅಜ್ಞಾನ ದುಃಖಸ್ವರೂಪ ಉಳ್ಳವರೂ ಕೆಲವು ಜೀವಗಳು ಇದ್ದಾರೆ. ಈ ಸ್ವರೂಪಯೋಗ್ಯತೆಯನ್ನವಲಂಬಿಸಿ, ಮುಖ್ಯವಾಗಿ ಅವರನ್ನು ಎರಡು ಪಂಗಡಗಳಲ್ಲಿ ವಿಂಗಡಿಸಿದ್ದಾರೆ: ದೈವೀಸಂಪತ್ತುಳ್ಳವರು, ಅಸುರೀಸಂಪತ್ತುಳ್ಳವರು—ಎಂದು. ದೈವೀಸಂಪತ್ತುಳ್ಳವರು ಪರಮಾತ್ಮನ ಭಕ್ತರಾಗಿಯೂ ಆಸುರೀಸಂಪತ್ತುಳ್ಳವರು ದ್ವೇಷಿಗಳಾಗಿಯೂ ಪರಿಣಮಿಸುವರೆಂದು ಅಭಿಪ್ರಾಯ. ಈ ಜೀವರನ್ನು ಸತ್ತ್ವ ರಜಃ ತಮೋಗುಣಯುಕ್ತವಾದ ಪ್ರಕೃತಿಯಿಂದ ಕೂಡಿಸಿ ಪರಮಾತ್ಮನು ಸೃಷ್ಟಿಸುತ್ತಾನೆ. ಅವರವರ ಕರ್ಮಕ್ಕೂ ಕಾಲಕ್ಕೂ ಅನುಸಾರವಾಗಿ ಜಯಾಪಜಯಗಳನ್ನು ಕೊಡುತ್ತಾನೆ. ಸತ್ತ್ವಗುಣದ ಉತ್ಸಾಹವಾಗುವ ಕಾಲಬಂದಾಗ, ದೇವತೆಗಳಿಗೆ ಜಯವನ್ನೂ ರಜಸ ತಾಮಸ ಗುಣಗಳ ಉತ್ಸಾಹವಾಗುವ ಕಾಲ ಬಂದಾಗ, ದೈತ್ಯರಕ್ಕಸರಿಗೆ ಜಯವನ್ನೂ ತಂದುಕೊಡುತ್ತಾನೆ. ಕಾಲಕಾಲಕ್ಕೆ ಬೇರೆ ಬೇರೆ ಗುಣಗಳ ಉತ್ಸಾಹವಾಗುವದು ಅನಾದಿಯಾದ ಪ್ರಕೃತಿಯ ಸ್ವಭಾವವಾಗಿದೆ. ಮತ್ತು ಜೀವರುಗಳ ಕರ್ಮವನ್ನವಲಂಬಿಸಿದೆ. ಹೀಗಿರುವುದರಿಂದ ಪರಮಾತ್ಮನಿಗೆ ವೈಷಮ್ಯ ನೈರ್ಘೃಣ್ಯದೋಷ ಬರುವುದಿಲ್ಲ. ದೈವೀಸಂಪತ್ತುಳ್ಳ ಕೆಲವು ಜೀವರು ಶಾಪವಶಾತ್ ಕೆಲವು ವೇಳೆ ಅಸುರರಲ್ಲಿ ಹುಟ್ಟುತ್ತಾರೆ. ಆ ಕಾಲಕ್ಕೆ ಅವರಿಗೆ ಅಪಜಯವಾದರೂ, ಮುಂದೆ ಅವರಿಗೆ ಸದ್ಗತಿ ಆಗುವುದೇ ನಿಶ್ಚಯ. ಚಿತ್ರಕೇತು ಎಂಬ ಗಂಧರ್ವನು, ಪಾರ್ವತಿಯ ಶಾಪದಿಂದ ವೃತ್ರಾಸುರನಾಗಿ ಹುಟ್ಟಿದ್ದನೆಂದೂ, ಶಿಶುಪಾಲನು ಸನತ್ಕುಮಾರರ ಶಾಪದಿಂದ ಹರಿದ್ವೇಷಿಯಾಗಿ ಹುಟ್ಟಿದ್ದನೇ ಹೊರತು ಪೂರ್ವದಲ್ಲಿ ವಿಷ್ಣುವಿನ ದ್ವಾರಪಾಲಕರಲ್ಲೊಬ್ಬನೆಂದೂ ವರ್ಣನೆ ಇದೆ. ಶಿಶುಪಾಲನ ಬಗ್ಗೆ ಸ್ವಲ್ಪ ಹೆಚ್ಚಿಗೆ ವಿವರಣೆ ಮಾಡಿದ್ದಾರೆ: ಮುಕ್ತಿ ಹೊಂದಬೇಕಾದರೆ ಭಕ್ತಿ ಬೇಕೇಬೇಕು. ಶಿಶುಪಾಲನು ಮಾಡಿದ್ದು ಕೇವಲ ದ್ವೇಷವಲ್ಲ; ದ್ವೇಷಯುತವಾದ ಭಕ್ತಿ. ಅವನಲ್ಲಿಯ ಸುಜೀವಿಯು ಪರಮಾತ್ಮನಲ್ಲಿಯೇ ನೆಟ್ಟ ಮನಸ್ಸುಳ್ಳವನಾಗಿದ್ದನೆಂದು ಸ್ಪಷ್ಟ ಮಾಡಿದ್ದಾರೆ. ಭಕ್ತಿಯಲ್ಲಿ ಭಯಸಹಿತ ಭಕ್ತಿ, ಕಾಮನಾಸಹಿತ ಭಕ್ತಿ, ಸ್ನೇಹಯುಕ್ತ ಭಕ್ತಿ ಎಂಬ ಅನೇಕ ಪ್ರಕಾರಗಳಿವೆಯೆಂದೂ ಕಂಸನು ಭಯಸಹಿತ ಭಕ್ತಿ ಮಾಡಿದನೆಂದೂ ಗೋಪಿಕಾಸ್ತ್ರೀಯರು ಕಾಮನಾಸಹಿತ ಭಕ್ತಿ ಮಾಡಿದರೆಂದೂ. ಆದರೆ ವೇನ, ದುರ್ಯೋಧನ ಮೊದಲಾದವರು ಕೇವಲ ಪರಮಾತ್ಮನ ದ್ವೇಷಿಗಳೆಂದೂ ಬೇರೆ ಬೇರೆ ಕಥೆಗಳಿವೆ. ಈ ವಿವರಣೆಗಳ ಮೇಲಿಂದ ಮುಖ್ಯವಾಗಿ ತಿಳಿಯುವುದೇನೆಂದರೆ ಜೀವರುಗಳಿಗೆ ಅವರವರ ಕರ್ಮಾನುಸಾರ, ಯೋಗ್ಯತಾನುಸಾರ ಕಾಲಾನುಸಾರ ಗತಿಯನ್ನು ಕೊಡುತ್ತಾನೆಂಬುದು ನಿರ್ಧಾರವಾಗುತ್ತದೆ. ಆದ್ದರಿಂದ ಅವನಲ್ಲಿ ವೈಷಮ್ಯ ನೈರ್ಘೃಣ್ಯದೋಷವಿಲ್ಲ. ಅವನು ಅತ್ಯಂತ ಸಮದರ್ಶಿಯು, ನ್ಯಾಯಪ್ರಿಯನು ಎಂಬುದು ನಿಶ್ಚಯವಾಗುತ್ತದೆ. ಆದರೆ ಅವನು ದಯಾಘನನು ಎಂಬುದು ಸ್ಪಷ್ಟವಾಗುವುದಿಲ್ಲ. ಯಾಕೆಂದರೆ ಜೀವರುಗಳು ಅಸ್ವತಂತ್ರರು 'ತೇನ ವಿನಾ ತೃಣಮಪಿನ ಚಲತಿ, ಎಂಬ ಉಕ್ತಿಗನುಸಾರವಾಗಿ, ಎಲ್ಲರಿಗೂ ಅವರವರ ಯೋಗ್ಯತೆಗನುಸಾರವಾಗಿ ನ್ಯಾಯಪ್ರಿಯನಾದ್ದರಿಂದ, ಅವರವರ ಗತಿಯನ್ನು ಹೊಂದಿಸುತ್ತಾನೆ. ಮುಕ್ತಿಯೋಗ್ಯರನ್ನು ಮುಕ್ತಿಗೆ ಒಯ್ಯುವುದು ಅವನ ಕೆಲಸ; ಅಯೋಗ್ಯರನ್ನು ದುಃಖಸಾಗರದಲ್ಲಿ ಮುಳುಗಿಸುವುದೂ ಅವನ ಕೆಲಸ. ನಾವು ಅಸ್ವತಂತ್ರರಾದ್ದರಿಂದಎಲ್ಲವೂ ನಮ್ಮ ಕರ್ಮಕ್ಕನುಸರಿಸಿ ಆಗುತ್ತದೆ. ಮತ್ತು ಹಾಗೆ ಮಾಡಿಸುವುದು ಅವನ ಕರ್ತವ್ಯ. ಇದರಲ್ಲಿ ಅವನ ಕರುಣೆಯು ? ನ್ಯಾಯಾಧೀಶನು ತನ್ನ ಸ್ಥಾನದಲ್ಲಿ ಕುಳಿತು ನ್ಯಾಯದ ತಕ್ಕಡಿಯಲ್ಲಿ ತೂಗಿ ಯಾವುದೊಂದು ತೀರ್ಪನ್ನು ಅತ್ಯಂತ ಸಮನಾಗಿ ಕೊಟ್ಟಮಾತ್ರಕ್ಕೆ, ಅವನೊಬ್ಬ ದಯಾಘನನು ಎಂದು ಹೇಳಲಿಕ್ಕಾಗುವುದಿಲ್ಲ. ಪರಮಾತ್ಮನು ದಯಾಘನನು ಹೇಗೆ? ಎಂಬ ಪ್ರಶ್ನೆ ಇನ್ನೂ ಉಳಿಯಿತು. ಶಾಸ್ತ್ರಗಳಾದರೋ ಏನು ಹೇಳುತ್ತಿವೆಯೆಂದರೆ: ಸದ್ಗತಿಯ ಅಪೇಕ್ಷೆಯುಳ್ಳ ಜೀವರುಗಳು ಪರಮಾತ್ಮನಿಗೆ ಅನನ್ಯವಾಗಿ ಶರಣುಹೋಗಬೇಕು. ಪ್ರಪಂಚದಲ್ಲಿಯ ಇನ್ನಿತರ ಎಲ್ಲ ವಸ್ತುಗಳನ್ನೂ ಬಿಟ್ಟು, ಕೇವಲ ಅವನಲ್ಲಿಯೇ ಮನಸ್ಸನ್ನಿಟ್ಟವರಾಗಬೇಕು. ಅವನ ಮಾಹಾತ್ಮ್ಯಜ್ಞಾನದಲ್ಲಿಯೇ ಅನುರಾಗವುಳ್ಳವರಾಗಬೇಕು. ಹೀಗೆ ಭಕ್ತಿ ಎಂದರೆ ಪ್ರೀತಿ-ವಿಶ್ವಾಸಗಳಿಂದ ಕೂಡಿದ ಅನನ್ಯಶರಣಾಗತಿ ಮಾಡುವವರ ಮೇಲೆ ತನ್ನ ಕರುಣೆ ಅಥವಾ ಅನುಗ್ರಹ ತೋರಿಸಿ, ಮುಕ್ತಿ ಕೊಡುವನೆಂದು ಸಾರುತ್ತವೆ. ಮುಕ್ತಿಗೆ ಭಕ್ತಿಯೇ ಮುಖ್ಯ ಸಾಧನ. ಇದು ಹೇಗೆ ಎಂಬುದನ್ನು ಚರ್ಚಿನೋಡೋಣ.

ಪರಮಾತ್ಮನಿಗೆ ನಮ್ಮಂತೆ ಇಂತಹದು ಕರ್ತವ್ಯ (ಡ್ಯೂಟಿ) ಎಂಬದು ಯಾವುದೂ ಇಲ್ಲವೆಂದು ಮೊದಲು ತಿಳಿಯಬೇಕು. ಇದರರ್ಥ ಅವನು ಯಾವ ಕಾರ್ಯವನ್ನೂ ಮಾಡುವುದಿಲ್ಲವೆಂತಲ್ಲ ಆದರೆ ಅವನಿಗೆ ಯಾವುದೇ ಪ್ರಕಾರದ ಕಾರ್ಯದ ನಿರ್ಬಂಧವಿಲ್ಲವೆಂದು ತಿಳಿಯಬೇಕು. ಇದು ಅವನ ಸ್ವಾತಂತ್ರ್ಯದ ದ್ಯೋತಕ. ನಾವು ಅಸ್ವತಂತ್ರರಾದ್ದರಿಂದ, ನಮಗೆ ಕರ್ತವ್ಯದ ನಿರ್ಬಂಧವುಂಟು. ಅಲ್ಲದೆ ನಮ್ಮ ಕರ್ತವ್ಯಕ್ಕೆ ಸ್ವಪ್ರಯೋಜನವಿರುತ್ತದೆ. ನಾವು ಮಾಡಬೇಕಾದ ಎಲ್ಲ ಧರ್ಮಕಾರ್ಯಗಳಿಗೂ ಪುಣ್ಯವೆಂಬ ಫಲದ

ಸ್ವ-ಪ್ರಯೋಜನವಿರುತ್ತದೆ. ಪರತಂತ್ರ ಸ್ವತಂತ್ರನಾದ ನಿತ್ಯಾನಂದ ಸ್ವರೂಪನಾದ ಪರಮಾತ್ಮನಿಗೆ ಇಂತಹ ಯಾವ ನಿರ್ಬಂಧವೂ ಸ್ವ-ಪ್ರಯೋಜನವೂ ಇರುವುದಿಲ್ಲ. ಅವನು ಮಾಡತಕ್ಕ ಎಲ್ಲ ಕಾರ್ಯಗಳ ಪ್ರಯೋಜನವು ಜೀವರ ಹಿತಕ್ಕಾಗಿ ಇದೆಯೇ ಹೊರತು ಅವನಿಗೆ ಅವರಿಂದೇನೂ ಆಗಬೇಕಾಗಿಲ್ಲ. ಅವನು ಸ್ವತೃಪ್ತನಾಗಿದ್ದಾನೆ. ಇಂತಹ ನಮ್ಮ ಭಗವಾನ್ ಪುರುಷೋತ್ತಮನ ಮೇಲೆ ನಾವು ಯಾವ ಕರ್ತವ್ಯದ ಹೊಣೆಯನ್ನು ಹೊರಿಸಲೂ ಸಾಧ್ಯವಿಲ್ಲ. ಶಾಸ್ತ್ರದ ಸಿದ್ಧಾಂತದ ಪ್ರಕಾರ, ಜ್ಞಾನಾನಂದಸ್ವರೂಪನಾದ ಜೀವನು ಮೂಲತಃ ಎಂದರೆ ಸೃಷ್ಟಿಗೆ ಬರುವ ಪೂರ್ವದಲ್ಲಿ ಲಿಂಗದೇಹವೆಂಬ ಅಜ್ಞಾನದ ಆವರಣದಲ್ಲಿ ಸಿಕ್ಕಿರುತ್ತಾನೆ. ಈ ಆವರಣದ ಮೂಲಕ ತನ್ನ ನಿಜಸ್ವರೂಪವನ್ನು ತಿಳಿಯದೆ ಸ್ವ-ಆನಂದವನ್ನು ಪಡೆಯಲು ಅಶಕ್ತನಾಗಿ ನಿಶ್ಚೇಷ್ಟಿತನಾಗಿ ಬಿದ್ದಿರುತ್ತಾನೆ. ಹೀಗಿರುವಾಗ ಯಾವ ಕರ್ತವ್ಯದ ಹೊಣೆಯೂ ಪರಮಾತ್ಮನಿಗೆ ಇಲ್ಲದಿದ್ದರೂ ಕೇವಲ ದಯಾಘನನಾದ್ದರಿಂದಲೇ ಜೀವರುಗಳ ಮೇಲಿನ ಕರುಣೆಯಿಂದ ಈ ಬಂಧ ವಿಮೋಚನೆಯಾಗಬೇಕೆಂದೇ ಅವರನ್ನು ಪ್ರಕೃತಿಯಿಂದ ಕೂಡಿಸಿ ಸೃಷ್ಟಿಗೆ ತರುತ್ತಾನೆ. ಅಸ್ವತಂತ್ರರಾದ ಜೀವರುಗಳಿಗೆ ಶ್ರೇಷ್ಠವಾದ ಮಾನವಜನ್ಮಗಳನ್ನು ಕೊಟ್ಟು, ಅನೇಕ ಸಾಧನ-ಸೌಕರ್ಯಗಳನ್ನೊದಗಿಸಿಕೊಟ್ಟು, ಕೆಲಮಟ್ಟಿಗೆ ಕಾರ್ಯಸ್ವಾತಂತ್ರ್ಯವನ್ನೂ ಕೊಟ್ಟು, ಒಂದೆಡೆಗೆ ಶಾಸ್ತ್ರರೂಪದಲ್ಲಿಯೂ ಅವತಾರರೂಪದಲ್ಲಿಯೂ ಅವರವರ ಕರ್ತವ್ಯಕರ್ಮಗಳ ಅರಿವನ್ನು ಅವರಿಗುಂಟುಮಾಡಿಕೊಟ್ಟು, ಅವರು ಮಾಡುತ್ತಿರುವ ಕರ್ಮಗಳನ್ನು ಅತ್ಯಂತ ನ್ಯಾಯಪ್ರಿಯನಾಗಿ ಪರೀಕ್ಷಿಸುತ್ತಾನೆ. ಇಲ್ಲಿ ಇನ್ನೊಂದು ಮಾತು ಹೇಳಬೇಕಾಗಿದೆ; ಸೃಷ್ಟಿಯ ಕೆಲಸವು ಕೇವಲ ನೈಸರ್ಗಿಕವಾಗಿ ನಡೆಯುತ್ತದೆ.—ಎಂದು, ಇನ್ನು ಕೆಲವರು ಹೇಳುತ್ತಾರೆ. (ಥ್ರೂ ಬ್ಲಾಯಿಂಡ್ ಫೋರ್ಸ್) ಎಂದರೆ ಜಡಶಕ್ತಿಯ ಮೂಲಕ ಎಂದು. ಇದು ಶುದ್ಧ ತಪ್ಪು. ಸೃಷ್ಟಿಕರ್ತನು ಕೇವಲ ಜಡಶಕ್ತಿಯನಾಗಿದ್ದರೆ, ಅವನಿಂದ ಯಾವುದೇ ಪ್ರಯೋಜನ ಕಾರ್ಯ- (ಪರ್ಪೋಜಿವ್ ಆಕ್ಟ್) ಘಟಿಸುತ್ತಿರಲಿಲ್ಲ. ನಮ್ಮಂತಹ ಜೀವರುಗಳಿಗೇ ಜ್ಞಾನ, ಇಚ್ಛಾ, ಮುಂತಾದ ಚೇತನಾ ಸ್ವರೂಪವಿದೆಯೆಂದ ಮೇಲೆ, ನಮ್ಮನ್ನು ಸೃಷ್ಟಿಸಿದ ಪರಮಾತ್ಮನು ಚೇತನನಿರಲೇಬೇಕು. ಜೀವರುಗಳನ್ನು ಉದ್ಧಾರಮಾಡಬೇಕೆಂಬ ಇಚ್ಛೆಯಿಂದಲೇ ಸೃಷ್ಟಿ ಮಾಡಿದ್ದಾನೆ. ಕೇವಲ ಜಡನಾಗಿದ್ದರೆ, ಮುಂದಾಗಬೇಕಾದ ಜೀವರುಗಳ ಉದ್ಧಾರಕ್ಕೆ ಇಂತಹದೇ ಒಂದು ನಿಯಮಿತ ಸಾಧನ ಮಾರ್ಗವಿರಬೇಕೆಂಬ ನಿರ್ಬಂಧವಿರುತ್ತಿರಲಿಲ್ಲ. ಅಲ್ಲದೆ ಇನ್ನೂ ಒಂದು ಪ್ರಶ್ನೆ:-ಜೀವರುಗಳಿಗೆ ಅವರವರ ಯೋಗ್ಯತೆಗನುಸರಿಸಿ ಒಮ್ಮೆಲೆ ಅವರವರ ಗತಿಯು ಯಾಕೆ ಸಿಗಬಾರದು? ಹಾಗಾದದ್ದೂ ಎಲ್ಲಿಯೂ ಕಂಡುಬಂದಿಲ್ಲ. ಕಾಲಾವಧಿಯ ಅಪೇಕ್ಷೆಯುಂಟು. ನಿಯಮಿತ ಮಾರ್ಗದಲ್ಲಿ ಸಾಧನವಾದ ಮೇಲೆ, ಕಾಲಾವಧಿಯಲ್ಲಿ ಮೋಕ್ಷ ಕೊಡುವೆನೆಂಬ ನಿರ್ಬಂಧವನ್ನು ಇಟ್ಟ ಪರಮಾತ್ಮನು, ಪರಮ ಚೇತನನಿರಲೇಬೇಕೆಂದು ನಿಶ್ಚಯವಾಗುತ್ತದೆ. ಇನ್ನು ಮುಕ್ತಿಯನ್ನು ಕೊಡುವುದು ಅವನ ಕರ್ತವ್ಯವಾಗಿದ್ದರೆ, ಜೀವನಿಗೆ ಒಂದು ಪ್ರಕಾರದ ಹೆಮ್ಮೆ ಬರುತ್ತದೆ. ಇಷ್ಟಿಷ್ಟು ಶಾಸ್ತ್ರಕ್ಕನುಗುಣವಾದ ಕರ್ಮಗಳನ್ನು ಮಾಡಿದರೆ ನಾನು ಮುಕ್ತಿಯನ್ನು ದೊರಕಿಸಿಯೇ ದೊರಕಿಸುತ್ತೇನೆಂದು ಹೆಮ್ಮೆಪಡಬಹುದು. ಅಸ್ವತಂತ್ರರಾದ ನಮಗೆ ನಮ್ಮ ಹಾಗೂ ತನ್ನ ನಿಜಸ್ವರೂಪದ ಅರಿವು ಉಂಟಾಗಬೇಕೆಂದು, ಅವನು ಇದಕ್ಕೆ ಆಸ್ಪದ ಕೊಟ್ಟಿಲ್ಲ. ಅವನಿಗೆ ಕರ್ತವ್ಯದ ಹೊಣೆಯಿಲ್ಲ. ಕೇವಲ ದಯಾಸಾಗರನಾದ್ದರಿಂದಲೇ ನಮ್ಮ ಉದ್ಧಾರ ಮಾಡುವನೆಂದು ನಾವು ಮನಗಾಣಬೇಕು. ನಮ್ಮ ಶಾಸ್ತ್ರಗಳ ಸಿದ್ಧಾಂತ ಪ್ರಕಾರ, ಒಂದು ಕರ್ಮವಾಗಿ ನಮ್ಮ ಪೂರ್ವಜನ್ಮಗಳಲ್ಲಿ ಮಾಡಿದ ಒಂದೊಂದು ಪಾಪವನ್ನು ಕಳೆದುಕೊಂಡೇವೆಂಬುದು ಸಾಧ್ಯವಿಲ್ಲವೆಂದು ಸಾರುತ್ತವೆ. ಅದ್ದರಿಂದಲೇ ಗೀತೆಯಲ್ಲಿ ಹೇಳುವುದೇನೆಂದರೆ, ಶಾಸ್ತ್ರಸಮ್ಮತವಾದ ಕರ್ಮಗಳನ್ನು ಕೇವಲ ನಿಷ್ಕಾಮರೂಪವಾಗಿ ಆಚರಿಸುವುದಲ್ಲದೇ ಅಂತಹ ಸಕಲ ಕರ್ಮಗಳನ್ನೂ ಪರಮಾತ್ಮನಿಗೇ ಅರ್ಪಿಸಿ, ಅವನಿಗೆ ಶರಣು ಹೋದರೇ ಅವನೇ ನಮ್ಮ ಪಾಪರಾಶಿಗಳನ್ನು ಸುಟ್ಟು ಬಿಡುವನೆಂದು ತಿಳಿಯಬೇಕು. ಇದು ಅವನ ಕರುಣಾಕಟಾಕ್ಷದ ದ್ಯೋತಕವಲ್ಲದೆ ಮತ್ತಿನ್ನೇನು! ಅಸ್ವತಂತ್ರನಾದ ಜೀವನಿಗೆ ಅನೇಕ ಮಾನವಜನ್ಮಗಳನ್ನು ಕೊಟ್ಟು ಕೆಲಮಟ್ಟಿಗೆ ಕಾರ್ಯಸ್ವಾತಂತ್ರ್ಯವನ್ನೂ ಕೊಟ್ಟು ದುಃಖಮಯವಾದ ಸಂಸಾರಸಾಗರದಲ್ಲಿ ಮೇಲಿಂದಮೇಲೆ ಮುಳುಗಿಸಿ, ಜೀವನ ಹಾಗೂ ಪರತಂತ್ರ್ಯದ ಪೂರ್ಣಜ್ಞಾನವಾದ ನಂತರ, 'ದಯಾಘನನಾದ ಪರಮಾತ್ಮನೇ ನೀನೇ ನಮ್ಮ ಉದ್ಧಾರಕನು' ಎಂದು ಅನನ್ಯವಾಗಿ ಭಜಿಸಿದ ಮೇಲೆಯೇ, ಮುಕ್ತಿ ಎಂಬ ಶಾಶ್ವತ ಸ್ವರೂಪಾನಂದಾನುಭವವು ಪರಮಾತ್ಮನಿಂದಲೇ ಅನುಗ್ರಹಿಸಲ್ಪಡುವುದು. ಈ ಪ್ರಕಾರದ ತತ್ತ್ವಜ್ಞಾನದ ವಿಚಾರಸರಣಿಯಲ್ಲಿ ಪರಮಾತ್ಮನು ದಯಾಘನನು ಎಂದು ಸಿದ್ಧವಾಗುತ್ತದೆ.

ವಾಗ್ ಲಹರಿ

ಕನ್ನಡದಲ್ಲಿಯೇ ವಿಶಿಷ್ಟವೆನಿಸಿದ ಸಾಹಿತ್ಯಕ ಪ್ರಕಾರ!

(ಹನ್ನೊಂದು ನಾಟ್ಯಛಟಗಳ ಸಂಕಲನ)

ಪ್ರೊ. ವಿ. ಕೆ. ಗೋಕಾಕ್ ಬಿ. ಎ. ಆಕ್ಸನ್ ಇವರ ಮುನ್ನುಡಿಯೊಡ

ಲೇಖಕರು: ಎಸ್. ಎಸ್. ಗದಗಕರ

ಬೆಲೆ ೦—೧೨—೦

ಮುಖ್ಯ ಮಾರಾಟಗಾರರು:

ಮನೋಹರ ಗ್ರಂಥ ಭಾಂಡಾರ ಧಾರವಾಡ

ಕನ್ನಡ ಚಲಚ್ಚಿತ್ರ 'ಜಲದುರ್ಗ'

(ವಿಹಂಗಮನ ವಿಮರ್ಶೆ)

●

ಚಲಚ್ಚಿತ್ರಗಳ ಸಂಖ್ಯೆ ಕನ್ನಡದಲ್ಲಿಯೂ ಬೆಳೆಯುತ್ತಿರುವುದು ಶುಭಲಕ್ಷಣವೆಂದೇ ಹೇಳಬೇಕು. ಮಾಡುತ್ತ ಹೋಗುವವನಿಂದ ಒಳ್ಳೆಯ ಕೃತಿಗಳು ಘಟಿಸಬಹುದಲ್ಲದೆ, ಕೈಮುಚ್ಚಿ ಕುಳಿತುಕೊಂಡವರಿಂದ ಯಾವ ಕಾರ್ಯವೂ ಸಾಧಿಸದು. ಅಂತೂ ಚಲಚ್ಚಿತ್ರ ಪ್ರಪಂಚದ ವಿಷಯದಲ್ಲಿ ಕನ್ನಡ ಕಲಾವಿದರಿಗೂ ಆಸಕ್ತಿ ಹುಟ್ಟಿದೆ. ಇಂದಿಲ್ಲ ನಾಳೆ ಸರ್ವಗುಣಪೂರ್ಣ ಕನ್ನಡ ಚಿತ್ರಗಳು ರಜತ ಪರದೆಯ ಬಂದು ಅಖಿಲಭಾರತ ಕೀರ್ತಿಯನ್ನೂ ಪಡೆಯಬಹುದು.

ಶ್ರೀಮಾನ್ ಗುಬ್ಬೀ ವೀರಣ್ಣನವರ 'ಜೀವನ ನಾಟಕ'ದಿಂದ ಶ್ರೀ. ಕೆಂಪರಾಜರಿಗೆ ಚಲಚ್ಚಿತ್ರರಂಗದ ಪರಿಚಯವಾಯಿತು. ಕನ್ನಡ ರಸಿಕರಿಗೆ ಶ್ರೀ. ಕೆಂಪರಾಜರ ಕುಶಲತೆಯ ಪರಿಚಯವಾಯಿತು. ಶ್ರೀ. ಕೆಂಪರಾಜರಿಗೆ ಅಂದು ಹಿಡಿದ ಚಲಚ್ಚಿತ್ರದ ಹವ್ಯಾಸ ಅವರನ್ನು ಸುಮ್ಮನಿರಗೊಡಲಿಲ್ಲ. ಏನೇನೋ ಹೋರಾಟ ಹೆಣಗಾಟಗಳನ್ನು ಹೂಡಲು ಹಚ್ಚಿ 'ರಾಜಾ ವಿಕ್ರಮ' ಎಂಬ ಪೌರಾಣಿಕ ಚಿತ್ರವನ್ನು ನಿರ್ಮಿಸಿ, ಲೋಕಪ್ರೀತಿಯನ್ನು ಗಳಿಸಿಕೊಟ್ಟಿತು. ಲೋಕಪ್ರೀತಿಯೊಂದಿಗೆ ಶ್ರೀ. ಕೆಂಪರಾಜರು ಆರ್ಥಿಕ ಲಾಭವನ್ನೂ ತಕ್ಕಮಟ್ಟಿಗೆ ಹೊಂದಿರಲಿಲ್ಲ. ಒಳ್ಳೆಯ ನಟರೂ ಒಳ್ಳೆಯ ದಿಗ್ದರ್ಶಕರೂ ಕುಶಲ ನಿರ್ಮಾತೃಗಳೂ ಆದವರಿಗೆ ಧನಲಕ್ಷ್ಮಿ ಒಲಿಯದಿರುವಳೆ?

ಈಗ ಶ್ರೀ ಕೆಂಪರಾಜರು 'ಜಲದುರ್ಗ' ಎಂಬ ಹೆಸರಿನ ಅದ್ಭುತ ರಮ್ಯವಾದ ಚಿತ್ರವನ್ನು ನಿರ್ಮಿಸಿ, ದಿಗ್ವಿಜಯಕ್ಕಾಗಿ ಚಲಚಿತ್ರರಂಗಕ್ಕೆ ಕಳುಹಿದ್ದಾರೆ. ಕನ್ನಡ ನಾಡಿನ ಹಲವು ನಗರಗಳಲ್ಲಿಂದು 'ಜಲದುರ್ಗ' ಪ್ರದರ್ಶಿತವಾಗುತ್ತಲಿದ್ದು, ಜನರ ಮನಸ್ಸನ್ನು ಆಕರ್ಷಿಸಿಬಿಟ್ಟಿದೆ.

ಮೂಲ ಕಥಾನಕ ಫ್ರೆಂಚ್ ದೇಶದ್ದಾದರೂ ಅದು ಕನ್ನಡಿಗರದೂ ಎನಿಸುವಂತೆ, ಕೆಂಪರಾಜರು ತುಂಬ ಪ್ರಯತ್ನಪಟ್ಟಿದ್ದಾರೆ. ಪ್ರತಾಪನೆಂಬವನೊಬ್ಬ ಹಡಗಿನಲ್ಲಿ ಕೆಲಸ ಮಾಡುವ ಸಾಮಾನ್ಯ ಕಪ್ತಾನ. ಅವನ ಜೊತೆಯ ಕಪ್ತಾನರೂ ಬೇರೆಯವರು ಇರುವರು. ಪ್ರತಾಪ ತನ್ನ ಕರ್ತೃತ್ವ ಶಕ್ತಿಯಿಂದ ಮೊದಲನೆಯ ತರಗತಿಯ ಕಪ್ತಾನ್ ಪದವಿಗೇರಿ, ತಾನು ಮೊದಲಿನಿಂದಲೂ ಪ್ರೀತಿಸುತ್ತಿದ್ದ ಸುಂದರಿ ಎಂಬ ಕನ್ನೆಯೊಂದಿಗೆ ಮದುವೆಮಾಡಿಕೊಳ್ಳುವುದರಲ್ಲಿ ಇರುತ್ತಾನೆ. ಪ್ರತಾಪನ ಮುದುಕ ತಂದೆಗೆ ಇದು ತುಂಬ ಸಂತೋಷದ ಸಂಗತಿ. ಆದರೆ ಸುಂದರಿಯನ್ನು ಪ್ರೀತಿಸುತ್ತಿದ್ದ ಇನ್ನೊಬ್ಬ ಯುವಕ ಆನಂದನಿಗೆ ಇದು ಅಸಂತೋಷವನ್ನುಂಟುಮಾಡಿತು. ಪ್ರತಾಪ ಮುಖ್ಯ ಕಪ್ತಾನನಾದುದರಿಂದ ಮಿಕ್ಕ ಕಪ್ತಾನರಿಗೆ ಹೊಟ್ಟೆಯುರಿಬಿದ್ದಿತು. ಈ ಸಂತೋಷ-ಹೊಟ್ಟೆಯುರಿಗಳು ಕೂಡಿ, ಪ್ರತಾಪನ ಮೇಲೆ ರಾಜದ್ರೋಹದ ಆಪಾದನೆಯೊಂದನ್ನು ಸೃಷ್ಟಿಸಿ, ಸರಕಾರಕ್ಕೆ ತಿಳಿಯುವಂತೆ ಮಾಡುವುವು.

ಲಗ್ನಮಂಟಪದಲ್ಲಿ ಸಮಾರಂಭ ನಡೆದಿದೆ. ಪ್ರತಾಪ ಸುಂದರಿ ವರ-ವಧುಗಳಾಗಿ ಹಸೆಯ ಮೇಲೆ ಕುಳಿತಿದ್ದಾರೆ. ಎಲ್ಲೆಲ್ಲಿಯೂ ಉಲ್ಲಾಸದ ಲಾಸ್ಯ. ಇನ್ನೇನು, ವರನು ವಧುವಿನ ಕೊರಳಿಗೆ ಮಾಂಗಲ್ಯ ಕಟ್ಟಬೇಕು; ಆಗಲೇ ರಾಜದೂತರು ಬಂದು ಪ್ರತಾಪನನ್ನು ಬಂಧಿಸಿ ಒಯ್ಯುವರು. ಮದುವೆಯ ಮಂಟಪ ದುಃಖದ ಬೀಡಾಗಿ ಪರಿಣಮಿಸುವುದು.

ಪ್ರತಾಪನ ನ್ಯಾಯವಿಚಾರಣೆ ನಡೆಯಿತು ಲಂಚಗುಳಿಯಾದ ನ್ಯಾಯಾಧೀಶ, ಪ್ರತಾಪನೆ ಅಪರಾಧಿಯೆಂದು ನಿರ್ಣಯಿಸಿ, ನಿರ್ವಾಸಿತ ಶಿಕ್ಷೆಯನ್ನು ವಿಧಿಸುವನು. ಪ್ರತಾಪನನ್ನು ಕಡಲ ನಡುವಿನ ಜಲದುರ್ಗದಲ್ಲಿ ಕಠಿಣವಾದ ಬಂಧನದಲ್ಲಿಡುವರು. ಭಗ್ನ ಮನೋರಥನಾದ ಪ್ರತಾಪನು, ಸೆರೆಮನೆಯಲ್ಲಿ ಪಡುತ್ತಿರುವ ಅಸೀಮ ದುಃಖವು ಕಲ್ಲೆದೆಯನ್ನೂ ಕರಗಿಸುವಂತಹದು.

ದೈವಾಯತ್ತವೆಂದೇ ಹೇಳಬೇಕು ಸೆರೆಮನೆಯಲ್ಲಿ ಪ್ರತಾಪನಿಗೆ ಇನ್ನೊಬ್ಬ ಸೆರೆಯಾಳು ಭೆಟ್ಟಿಯಾಗುವನು. ಅವನು ರಹಸ್ಯವಾಗಿ ಪಾರಾಗಿ ಹೋಗಲು ನಡೆಯಿಸಿದ ಹಂಚಿಕೆಯೂ ಪ್ರತಾಪನಿಗೆ ಗೊತ್ತಾಗುವದು. ಅವನ ಹಂಚಿಕೆ ಸ್ವತಃ ಅವನಿಗೆ ಉಪಯೋಗವಾಗದೇ ಹೋದರೂ ಪ್ರತಾಪನಿಗೆ ಉಪಯೋಗವಾಯಿತು. ಅಂತಹ ದುರ್ಗವು ಸೆರೆಮನೆಯಿಂದಲೂ ಸಾಹಸದಿಂದ ಪಾರಾದ. ಸತ್ತ ಸೆರೆಯಾಳಿನ ಗುಪ್ತಸಂಚನ್ನು ಅರಿತುಕೊಂಡು, ಅಪಾರವಾದ ಧನರಾಶಿಯನ್ನೂ ದೊರಕಿಸಿಕೊಂಡ.

ವೇಷ ಬದಲಿಸಿ ತನ್ನ ಊರಿಗೆ ಪ್ರತಾಪ ಬಂದ. ತನ್ನ ಹೆಂಡತಿಯಾಗಬೇಕಾದ ಸುಂದರಿ ಇನ್ನೊಬ್ಬನ ಹೆಂಡತಿಯಾಗಿ ಒಬ್ಬ ಮಗನ ತಾಯಾದುದು ತಿಳಿಯುವದು. ತನ್ನ ಮೇಲೆ ಆರೋಪ ಹೊರಿಸುವ ಸಂಚಿನಲ್ಲಿದ್ದ ಇನ್ನೊಬ್ಬ ಕಪ್ತಾನನು; ಮೋಸದ ವ್ಯವಹಾರದಿಂದ ಶ್ರೀಮಂತನಾಗಿ ಊರಲ್ಲಿ ಸಾವುಕಾರಿಕೆ ನಡೆಯಿಸಿಕೊಂಡಿರುವುದು ಗೊತ್ತಾಗುವುದು. ಅನಾಚಾರ ಅನ್ಯಾಯಗಳ ಪ್ರತಿಮೆಯಾದ ನ್ಯಾಯಾಧೀಶನು ತಾನು ಪಾಪದ ಪುಂಜನಾದರೂ ಸಮಾಜದಲ್ಲಿ ಗೌರವದಿಂದ ಬದುಕಿರುವದನ್ನು ಅರಿಯುವನು.

ನಿರಾಶೆ ಕ್ರೋಧಗಳ ಮೂಲಕ ಪ್ರತಾಪ ತನ್ನ ವೈರಿಗಳೆಲ್ಲರ ಸೇಡನ್ನು ಭೀಕರ ರೀತಿಯಿಂದ ತೀರಿಸುವನು. ಇವೆಲ್ಲವೂ ಕುತೂಹಲಕಾರಿಯಾದ— ಎದೆಯನ್ನು ಜುಮ್ಮೆನ್ನಿಸುವ ಸನ್ನಿವೇಶಗಳು ನೋಡಲು ಕುಳಿತವರ ಕುತೂಹಲವನ್ನು ಕೊನೆಯವರೆಗೂ ಕೆರಳಿಸುವಂತಹವು.

ಕನ್ನಡ ರಸಿಕಕುಲವು ಜಲದುರ್ಗವನ್ನು ಒಂದೆ ಸಲವಲ್ಲ, ಹಲವಾರು ಸಲ ನೋಡಬೇಕು. ಶ್ರೀ. ಕೆಂಪರಾಜರ ಕಡೆಯಿಂದ ನಾವು ಇನ್ನೂ ಹೆಚ್ಚಿನ ಕಲಾಪೂರ್ಣಕೃತಿಗಳನ್ನು ಪಡೆಯಬೇಕಾದರೆ, ಆರ್ಥಿಕ ದೃಷ್ಟಿಯಿಂದಲೂ ಅವರಿಗೆ ಇನ್ನೂ ಹೆಚ್ಚಿನ ಅನುಕೂಲತೆ ದೊರೆಯುವಂತೆ ಕನ್ನಡನಾಡು ಸಕ್ರಿಯವಾಗಿ ಸಹಕರಿಸಬೇಕು.

ಬೀಗರ ಜಗಳ

ಶ್ರೀ. ಬಿ. ಎಸ್. ಕಡಕೋಳ, ಹಾವೇರಿ

ಮದುವೆಯಾಯಿತು ....
ಎಲ್ಲ ಮುಗಿಯಿತು
ಬೀಗರ ಜಗಳಾಟ—
ಕೈ ಕೈ ಕಾದಾಟ. ॥ ೧ ॥

ಕರೆಯಲು ಬನ್ನಿರಿ ....
ನೋಡುವೆನೆಂದರು
ಹೆಣ್ಣಿನ ಕಡೆಯವರು
ತುಂಬಾ ಹಟದವರು. ॥ ೨ ॥

ನೀವೇ ಕಳಿಸದೆ
ಕರೆಯಲು ಬಂದರೆ
ನಾವೇ ಹೆಂಗಸರು!'
ಎಂದರು ಗಂಡಿನ ಕಡೆಯವರು
॥ ೩ ॥

ತಿಂಗಳು ಉರುಳಿ ....
ತಳಮಳಗಾದರು
ಕರೆಯೋ ಬರಲಿಲ್ಲ—
ಸೊಸೆಗೆ ಕರೆಯೋ ಬರಲಿಲ್ಲ. ॥ ೪ ॥

ಬೀಗರ ಜಗಳವು
ಮುಗಿಯಲೆ ಇಲ್ಲ.
(ಇತ್ತ) ಅಳಿಯನ ಗೋಳಾಟ—
(ಅತ್ತ) ಸೊಸೆಯು ಪೇಚಾಟ !
॥ ೫ ॥

ತಂದೆಗೆ ಹೇಳಿ
ನಲ್ಲಳ ಕರೆಸುವ
ಧೈರ್ಯವು ಇವನಿಲ್ಲ—
ಅಯ್ಯೋ ನಂಟೆ ಹರಿಬಲ್ಲ. ॥ ೬ ॥

ಮುಗುದೆಯು ನೊಂದಳು.
ಹೇಳುವ ಮಾತೇ ?
ಅಯ್ಯೋ ಪರಿತಾಪ—
ಒಳಗೇ ಸಂತಾಪ ! ॥ ೭ ॥

ಕಂದಿದ ಮೊಗವನು
ಕೊರಗಿದ ಮಗಳನು
ತಂದೆಯು ನೋಡುವನು
ಒಳಗೇ ಮರುಗುವನು. ॥ ೮ ॥

ಚಿಂತಿಸಿ, ಚಿಂತಿಸಿ
ತಂದೆಯು ತಾನು.
ಹಂಚಿಕೆ ಹುಡುಕಿದನು—
ಮಗಳಿಂದೋಲೆಯ ಬರೆಯಿಸಿದನು
॥ ೯ ॥

ಮಾವನಿಗೊಂದು
ಗಂಡನಿಗೊಂದು:
ಬಂದರೆ ಕಾಣುವಿರಿ—
ಬಾರದೆ ನಿಲ್ಲದಿರಿ'' ॥ ೧೦ ॥

ಓಲೆಯ ಓದುತ
ತಂದೆಯು ಮಕ್ಕಳು
ಮಿಕಿ ಮಿಕಿ ನೋಡಿದರು—
ಗಾಡಿಯ ಹತ್ತಿದರು. ॥ ೧೧ ॥

ಬೀಗನು ಕಂಡು,
ತಂದೆಯು ಕೇಳಿದ
ಹೇಗಿದೆ ? ಈಗೆಂದು
ಕ್ಷೇಮವೆ ತಾನೆಂದು ॥ ೧೨ ॥

ಮೀಸೆಯ ಮರೆಯಲಿ
ನಗುತಾ ಬೀಗನು.
ಬೀಗರ ಕೂಡಿಸಿದ—
ಮಗಳನು ತಾ ಕರೆದ ॥ ೧೩ ॥

ಬಳಕುತ ಬಂದಳು
ವಿನಯದಿ ನಿಂದಳು
ಕಾಲಿಗೆ ಎರಗಿದಳು
ಇಬ್ಬರ ಕಾಲಿಗೆ ಎರಗಿದಳು
॥ ೧೪ ॥

ನಗು ನಗುತೆಲ್ಲರು
ಮಾತನು ಆಡುತ
ಊಟವ ಮಾಡಿದರು—
ಮದು ಮಕ್ಕಳ ಹರಸಿದರು ॥ ೧೫ ॥

ಆಗಲೆ ಮುಗಿಯಿತು
ಬೀಗರ ಜಗಳ
ಎಲ್ಲವು ಝಳ ಝಳ—
ದೂರಾಯಿತು ಕಳವಳ ॥ ೧೬ ॥

ಮರುದಿನ ತಂದೆಯು
ಊರಿಗೆ ಹೊರಟನು
ಮಗನನು ತಾ ಬಿಟ್ಟು
ತೊಲಗದ ಮದುಮಕ್ಕಳ ಬಿಟ್ಟು
॥ ೧೭ ॥

ಮದುವೆಯಾಯಿತು
ಜಗಳವಾಯಿತು ....
ಜಗಳದ ಆ ಸಿಟ್ಟು—
ಹೋಯಿತೆಲ್ಲೊ ಕೆಟ್ಟು ! ॥ ೧೮ ॥

———

ಪುಸ್ತಕ ವಿಮರ್ಶೆ

ಸಚಿತ್ರ ಕಸೂತಿಕಲೆ

ಬರೆದವರು ಶ್ರೀಮತಿ ಸರೋಜಿನಿ ಮಹಿಷಿ ಎಂ. ಎ ಪ್ರಕಾಶ-ಕರು ಶ್ರೀ. ಸಿ. ಡಿ ಹಳಪೇಟ, ಗಾಂಧೀಚೌಕು, ಧಾರವಾಡ. ಬೆಲೆ ೨-೮-೦.

ಇಂದು ಭಾರತೀಯ ಜೀವನದ ಎಲ್ಲ ವಿಭಾಗಗಳಲ್ಲಿಯೂ ಕಂಡು ಬರುವಂತೆ, ಭಾರತೀಯ ಕಸೂತಿ ಕಲೆಯಲ್ಲಿಯೂ ಪೂರ್ವ-ಪಶ್ಚಿಮದ ಸೌಂದರ್ಯಸಮನ್ವಯವು ಕಾಣುತ್ತಿದೆ. ಇಂದು ಕಸೂತಿಯಕಲೆ ಹಿಂದಿನ ಕಾಲದಂತೆ 'ಮೊಗ್ಗಿಯ ಕುಬಸ' 'ಮೊಗ್ಗಿಯ ಸೀರೆ' ಗಳಷ್ಟಕ್ಕೆ ನಿಲ್ಲದೆ, ನಮ್ಮ ಜೀವನದಲ್ಲಿಯ ಹಲವು ಸ್ಥಾನ-ಸಂದರ್ಭ-ಗಳನ್ನು ಶೃಂಗರಿಸುವ ಸಿದ್ಧತೆಯಿಂದ ಮುಂದುವರಿದು ಬರುತ್ತಲಿದೆ. ಹಿಂದಿನ ಕಾಲದಲ್ಲಿ ಕಸೂತಿಯ ಕಲೆ ಕೇವಲ ಕೈಯಿಂದಲೇ ರೂಪು-ಗೊಳ್ಳಬೇಕಾಗಿದ್ದಿತು. ಇಂದಿನ ಪಶ್ಚಿಮದೇಶದ ಸಾಂಸ್ಕೃತಿಕ ಸಂಬಂಧವು, ಕಸೂತಿಕಲೆಯ ಅಭಿವೃದ್ಧಿಗಾಗಿ ಹಲವು ಬಗೆಯ ಯಂತ್ರಗಳ ಸಹಕಾರವನ್ನೂ ಒದಗಿಸಿಕೊಟ್ಟಿದೆ.

ಹೆಣ್ಣುಮಕ್ಕಳು ಉಡು-ತೊಡುವ ಬಟ್ಟೆಗಳಿಗೆ ಕಸೂತಿಕಲೆಯು ಹೊಸ ಬಗೆಯ ಸೌಂದರ್ಯವನ್ನು ಒದವಿಸುವುದಲ್ಲದೆ, ಟೇಬಲ್-ಕ್ಲಾಥು, ಟೀಪಾಯ್ ಕ್ಲಾಥು, ಬಾಗಿಲ ತೆರೆಗಳು, ಕರವಸ್ತ್ರಗಳು, ತಲೆದಿಂಬಿನ ಮೇಲುಹೊದಿಕೆಗಳು, ಮೇಲ್ವಾಸುಗಳು, ಸೊಳ್ಳೆಯಪರದೆ-ಯೆಲ್ಲ ಉಪಯುಕ್ತ ವಸ್ತುಗಳನ್ನೂ ಕಸೂತಿಕಲೆಯು ಸೌಂದರ್ಯ ವಸ್ತುಗಳತ್ತ ತಿರುಗಿಸುತ್ತಲಿದೆ. ಗೋಡೆಗಳನ್ನು ಅಲಂಕರಿಸಬಲ್ಲ ನಾನಾವಿಧದ ಸುಳಿವು-ಬಳ್ಳಿಯ ಚೌಕಟ್ಟುಗಳೂ ಚಿತ್ರಪಟಗಳೂ ಕಸೂತಿಕಲೆಯಿಂದಲೆ ಇಂದು ಸಿದ್ಧವಾಗುತ್ತಲಿವೆ.

ನಾಗರಿಕತೆಯ ಅಚ್ಚುಕಟ್ಟಿನಿಂದ ಬಾಳಬೇಕೆನ್ನುವ ಸಂಸಾರಿ-ಗಳಿಗೆ, ಇಂದು ಕಸೂತಿಕಲೆಯ ಪರಿಚಯವಿರಲೇ ಬೇಕಾದುದು ಅವಶ್ಯಗತ್ಯದ ಸಂಗತಿಯಾಗಿದೆ. ಅಲ್ಲದೆ ಕಸೂತಿಕಲೆಯಲ್ಲಿ ತಜ್ಞತೆ ಪಡೆದುಕೊಂಡು ಅದರಿಂದ ಹಣವನ್ನೂ ತಕ್ಕಮಟ್ಟಿಗೆ ಸಂಪಾದಿಸ-ಬಹುದು. ಮಧ್ಯಮತರಗತಿಯ ಸಂಸಾರಿಕರ ಮನೆಯ ಹೆಣ್ಣು ಮಕ್ಕಳಿಗೆ, ದೈನಂದಿನಜೀವನದಲ್ಲಿ ಬಿಡುವಿನ ವೇಳೆ ಸಾಕಷ್ಟು ದೊರೆಯುವುದು. ಈ ವೇಳೆಯನ್ನವರು ಕಸೂತಿಕಲೆಗಾಗಿ ಉಪಯೋಗಿಸತೊಡಗಿದರೆ, ಮನೆಯ ಸೌಂದರ್ಯವನ್ನು ಹೆಚ್ಚಿಸ ಬಹುದು; ಅಗತ್ಯವಿದ್ದರೆ ಹಣವನ್ನೂ ಸಂಪಾದಿಸಬಹುದು. ಇಂದಿನ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ, ಪ್ರತಿಯೊಂದು ಮಧ್ಯಮ ತರಗತಿಯ ಸಂಸಾರವೂ ಕೊರತೆಯ ಬಾಳನ್ನು ಬಾಳುತ್ತಿರುವುದು ಎಲ್ಲೆಲ್ಲಿಯೂ ಕಣ್ಣಿಗೆ ಬೀಳುವ ಸಂಗತಿ. ಆದುದರಿಂದ, ಅಂತಹ ಹೆಣ್ಣುಮಕ್ಕಳು ಮನೆಯ ಶೃಂಗಾರಿಕೆಯನ್ನಾಗಿ ಕಸೂತಿಕಲೆಯನ್ನು ಉಪಯೋಗ ಮಾಡಿಕೊಂಡರೆ, ಕೊರತೆಯ ಎಷ್ಟೋ ಭಾಗವನ್ನವರು ಕಡಿಮೆ ಮಾಡಿದಂತಾದೀತು.

ಕಸೂತಿಯನ್ನು ಕಲಿಯಬಯಸುವವರ ಉಪಯೋಗಕ್ಕಾಗಿ ಶ್ರೀಮತಿ ಸರೋಜಿನಿ ಮಹಿಷಿಯವರು, ಈ ಸರ್ವಾಂಗ ಸುಂದರವಾದ ಪುಸ್ತಕವನ್ನು ಬರೆದು ಒದಗಿಸಿದ್ದಾರೆ. ಈ ಪುಸ್ತಕದ ಆವಶ್ಯಕತೆ-ಯನ್ನೂ ಪ್ರಯೋಜನವನ್ನೂ ಮನವಾರೆ ಒಪ್ಪಿಕೊಂಡು, ಶ್ರೀಮತಿ ಪಿ. ಎ. ಭಾಸ್ಕರ ಬಿ. ಎ., ಬಿ. ಟಿ. ಲೇಡಿ ಸುಪರಿಂಟೆಂಡೆಂಟ್ ಹೆಣ್ಣು-ಮಕ್ಕಳ ಸರಕಾರಿ ಟ್ರಿ. ಕಾಲೇಜ್ ಧಾರವಾಡ ಅವರು, ಒಳ್ಳೆಯ ಅಭಿಪ್ರಾಯದ ಮುನ್ನುಡಿಯನ್ನೂ ಬರೆದಿದ್ದಾರೆ.

ಪುಸ್ತಕವು ಎರಡು ಭಾಗಗಳಲ್ಲಿ ವಿಭಾಗಿತವಾಗಿದ್ದು, ಮೊದಲ-ನೆಯ ಭಾಗವು ೧. ಕಸೂತಿಯ ಕಲಾಭಿರುಚಿ, ೨. ಕಸೂತಿಯ ಪೂರ್ವಸಿದ್ಧತೆ, ೩. ಬಟ್ಟೆಯನ್ನು ರಿಂಗಿನಲ್ಲಿ ಕೂಡ್ರಿಸಬೇಕು, ೪. ವಿವಿಧ ಹೊಲಿಗೆಗಳು, ೫. ಯಂತ್ರದಲ್ಲಿ ಕಸೂತಿಯೇ? ೬. ವಿಶಿಷ್ಟ ಕಸೂತಿಗಳು, ೭. ಚರ್ಮದ ಮೇಲಿನ ಕಸೂತಿ, ೮. ಯಂತ್ರದ ಪರಿಚಯ ಎಂಬ ಎಂಟು ವಿಷಯಗಳ ಚಿತ್ರಸಹಿತ ವಿವರಣೆಗಳಿಂದ ಕೂಡಿರುವುದು. ೨ನೆಯ ಭಾಗದಲ್ಲಿ ೧. ಕೈಕಸೂತಿಯ ಕಲಾವೈ-ಭವ, ೨. ಕೈಕಸೂತಿಯ ಸಾಧನಗಳು—ಅವುಗಳ ಪರಿಚಯ, ೩. ಬೇರೆ ಬೇರೆ ಕೈ ಹೊಲಿಗೆಗಳು, ೪. ಕನ್ನಡ ಕಸೂತಿ. ೫. ಕಟ್-ವರ್ಕ—ರೆಚಲೊ ಕಸೂತಿ....ಇತ್ಯಾದಿ. ೬. ಕನ್ನಡಿ ಕಟ್ಟಿನಲ್ಲಿಯ ಕಸೂತಿ.... ೭. ಕೊಕ್ಕೆಸೂಜಿಯಿಂದ ನೂಲಿನ ಹೆಣಿಕೆಯ ವಿಧಾನ ೮. ವಿವಿಧ ಬಣ್ಣಗಳ ತಾರತಮ್ಯ ೯. ಹೆಣಿಕೆ ಕಸೂತಿಯ ಬಟ್ಟೆ-ಗಳನ್ನು ತೊಳೆಯುವ ವಿಧಾನ—ಈ ಎಲ್ಲ ವಿಷಯಗಳನ್ನು ಪ್ರಾಯೋ-ಗಿಕ ಚಿತ್ರ-ನಕ್ಷೆಗಳೊಂದಿಗೆ ವಿವರಿಸಲಾಗಿದೆ.

ಪುಸ್ತಕದ ಭಾಷೆಯು ವಿಷಯವಿವರಣೆಗೆ ಉಚಿತವಾಗಿದ್ದು ಶುದ್ಧವೂ ಸರಳವೂ ಆಗಿದೆ. ಲೇಖಿಕೆಯರಿಗೆ ವಿಷಯದಲ್ಲಿ ತಜ್ಞತೆಯೂ ಅಭಿರುಚಿಯೂ ಇದ್ದುದರಿಂದ, ಯೋಗ್ಯವಾದ ಪರಿಭಾಷಾ ಪದ-ಗಳನ್ನೂ ಅವರು ನಿರ್ಮಿಸಿ ಕೊಂಡಿದ್ದಾರೆ. ಅವು ಹೊಸ ಪದಗಳೆನಿಸಿ-ಕೊಂಡರೂ ಪರಿಚಿತ ಪದಗಳಂತೆ ಸುಲಭಾರ್ಥಬೋಧಕವಾಗಿವೆ.

ಕನ್ನಡದಲ್ಲಿ ಇದುವರೆಗೂ ಈ ಮಾದರಿಯ ಪುಸ್ತಕವಿರಲಿಲ್ಲ. ಈಗ ಇದನ್ನು ಸಕಾಲದಲ್ಲಿ ಒದಗಿಸಿ ಕೊಟ್ಟು, ಲೇಖಿಕೆಯರೂ ಪ್ರಕಾಶಕರೂ ನಾಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ನಮ್ಮ ನಾಡಿಗರ ಪ್ರತಿಯೊಂದು ಮನೆಯಲ್ಲಿಯೂ ಇರಬೇಕಾದಂತಹ ಉಪಯುಕ್ತ ಪುಸ್ತಕ. ಜನರು ಇದರ ಪ್ರಯೋಜನ ಪಡೆಯಲಿ!

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ **‘ಪೂಜಾರಿಯ ಕತೆ’**ಯನ್ನು ಕುರಿತು ಬರೆದ ವಿಮರ್ಶೆಗಳು ಆರು ಜನರಿಂದ ಬಂದಿವೆ. ಅವರ ಅನುಕ್ರಮ ಹೀಗಿದೆ :

೧. ಶ್ರೀ. ಎನ್. ಆರ್. ಬೆಳ್ಳಟ್ಟಿ ಎಫ್. ವೈ. ಆರ್ಟ್ಸ್, ಕೆ. ಇ. ಬೋರ್ಡ್ ಕಾಲೇಜ್, ಧಾರವಾಡ. ೨ ಶ್ರೀ. ಎಂ. ಕೇಶವಭಟ್ಟ ‘ವಿದ್ವಾನ್’ ಕಾಸರಗೋಡು. ೩ ಶ್ರೀ. ಪಿ. ಗೋಪಾಲಕೃಷ್ಣ ಪೈ ‘ಸಾಹಿತ್ಯಾಲಂಕಾರ’ ಹಿಂದೀ ಪಂಡಿತ, ಮಿಶನ್ ಹೈಸ್ಕೂಲ್ ಕಾಸರಗೋಡು. ೪. ಶ್ರೀ ಲಕ್ಷ್ಮಣ ಜೋಶಿ ಬಿ.ಎ.,ಬಿ. ಇಡಿ. ಕೂಡಲಿಗಿ. ೫. ಶ್ರೀಮತಿ ಪದ್ಮಾ, ಗವಿಪುರಂ ಗುಟ್ಟಹಳ್ಳಿ, ಬಸವನ ಗುಡಿ—ಬೆಂಗಳೂರು. ೬. ಶ್ರೀ. ವಿ. ಬಿ. ಹೊಸಮನೆ, ಪೇಜಾವರಮಠ, ಉಡುಪಿ

ಎಲ್ಲ ವಿಮರ್ಶೆಗಳನ್ನೂ ಸಂಪಾದಕ ಸಮಿತಿಯವರೇ ನೋಡಿ ನಿರ್ಣಯವನ್ನು ಕೊಟ್ಟಿದ್ದಾರೆ. ಶ್ರೀಮಾನ್ **ಲಕ್ಷ್ಮಣ ಜೋಶಿ**ಯವರ ವಿಮರ್ಶೆ ಅತ್ಯುತ್ತಮವಾಗಿದೆ. ಶ್ರೀಮಾನ್ ಕೇಶವಭಟ್ಟರು. ಶ್ರೀಮತಿ ಪದ್ಮಾ, ಶ್ರೀಮಾನ್ ವಿ. ಬಿ. ಹೊಸಮನೆ ಅವರ ವಿಮರ್ಶೆಗಳು ಉತ್ತಮವೆನಿಸಿಕೊಂಡಿವೆ. ಮಿಕ್ಕುವೆರಡೂ ಸಾಮಾನ್ಯವಾಗಿವೆ.

ಮುಂದಿನ ಸಲದ ಮೇಲಾಟಕ್ಕಾಗಿ ಈ ಸಂಚಿಕೆಯಲ್ಲಿ ಪ್ರಕಟವಾದ **‘ಕಸದ ಬುಟ್ಟಿ’** ಅಥವಾ ‘ಇದು ಪಾಪವೆ ?’ ಎಂಬ ಕಥೆಗಳನ್ನು ವಿಮರ್ಶೆಗೆ ತೆಗೆದುಕೊಳ್ಳಬೇಕು.

— **ಸಂಪಾದಕ**ರು

ಪೂಜಾರಿಯ ಕಥೆ

[ವಿಮರ್ಶೆ]

ವಿಮರ್ಶಕ: **ಲಕ್ಷ್ಮಣ ಜೋಶಿ, ಕೂಡ್ಲಿಗಿ.**

ಇದನ್ನು ಬರೆದವರು ಸುಪ್ರಸಿದ್ಧ ಕತೆಗಾರರಾದ ಶ್ರೀ. ಅಶ್ವತ್ಥರು. ಇವರು ತಮ್ಮ ಹೆಸರಿಗೆ ತಕ್ಕಂತೆಯೇ ತಮ್ಮ ಕಥಾಕಥನಕೌಶಲದಲ್ಲಿ ಅಶ್ವತ್ಥವೃಕ್ಷದಂತೆ ಅನುಭವವೈಶಾಲ್ಯವನ್ನೂ, ಆಯಾಸಪಟ್ಟು ಬಂದ ಓದುಗರಿಗೆ ಮನೋಜ್ಞ ಕಥಾನಕವನ್ನೊದಗಿಸಿ ವಿಶ್ರಾಂತಿಯನ್ನೊದಗಿಸುವ ಸಂಪನ್ನತೆಯುನ್ನೂ ಪಡೆದಿರುವರು. ಇವರ ಕೈ ಪಳಗಿದುದು. ಇವರ “ಬಾಳಹೊಳೆ” ಓದಿದವರು, ಕಥಾವಸ್ತುವನ್ನು ಅತ್ಯಂತ ರಮ್ಯವಾಗಿ ಬಳಸಿಕೊಳ್ಳುವ ಇವರ ಕೈಚಳಕವನ್ನು ಎಂದೆಂದೂ ಮರೆಯಲಾರರು, ಮತ್ತು ಅದು ಅನನುಕರಣೀಯ.

ಪೂಜಾರಿಯ ಕಥೆಯನ್ನೋದಿದರೆ ನಮಗೆ, ಈ ಸಂಪ್ರದಾಯ ಶರಣರನ್ನು ಏನು ಮಾಡಿದರೆ ಸಮಾಜವು ನೆಟ್ಟಗಾದೀತು, ಸಮಾಜದ ಬಲಹೀನವಾದ ಮನಸ್ಸನ್ನು ಹೇಗೆ ಧೂರ್ತರು ಉಪಯೋಗಿಸಿಕೊಳ್ಳುವರು-ಎಂಬ ಮಾತು ಅದ್ವಿತೀಯವಾಗಿ ಗೋಚರವಾಗುತ್ತದೆ.

ಈ ನಿಷ್ಠುರವಾದ ಸತ್ಯಾಂಶವನ್ನು ಶ್ರೀ. ಅಶ್ವತ್ಥರು ಹೇಳಿದ್ದರೂ, ಹೇಳಿಲ್ಲವೇನೋ ಎಂಬ ಪರಿಯಲ್ಲಿ ಕಥಾನಕದಲ್ಲಿ ಬೆರಸಿರುವರು. ಇದೇ ಉತ್ತಮವಾದ ರೀತಿ, ಇದೇ ಕಾವ್ಯದ ಲಕ್ಷಣ. ಕೆಲವರು ಬೈಯುತ್ತಾರೆ; ಅದರ ಪರಿಣಾಮವು ಫಲಕಾರಿಯಾಗಿರುತ್ತದೆ; ಆದರೂ, ಅವರು ಬೈದರೆಂಬ ಭಾವನೆ ಯಾರಿಗೂ ಆಗಿರುವುದಿಲ್ಲ. ಕೆಲವರು ಹಿತೋಕ್ತಿಗಳನ್ನಾಡಿದ್ದರೂ ಆಡಿದವರನ್ನು ದ್ವೇಷಿಸುವಷ್ಟು ಮನಸ್ಸು ಪ್ರಕ್ಷೋಭಗೊಂಡಿರುತ್ತದೆ—ಅವರ ಮಾತನ್ನು ಕೇಳಿದವರಿಗೆ. ಶ್ರೀ. ಅಶ್ವತ್ಥರ ರೀತಿ ಮೊದಲನೆಯದು.

ಕಥಾನಿರೂಪಣೆಯ ವಿಧಾನವು ಮನಸ್ಸಿನ ಮೇಲೆ ಬಹಳ ಅಧಿಕಾರ ಮಾಡುವಂತಿದೆ. ಓದುಗನನ್ನು ಕಥೆಗೆ ಅಂಟಿಸಿ ಬಿಡುವಂತಿದೆ. ಓದಲು ಮೊದಲಿಟ್ಟಾಗ ಪೂಜಾರಿಯ ಕಥೆಯೇ ಬರಲಿಲ್ಲವೆಂಬಂತಿದೆ. ಕಥೆ ಹೇಳುವವನ ಮತ್ತು ಅವನ ಅಕ್ಕ-ಭಾವಂದಿರ ಸಂಭಾಷಣೆಯಲ್ಲಿ, ಅಕ್ಕನ ಪ್ರೀತಿಯ ದುರ್ಭರ ದುಷ್ಪರಿಣಾಮಗಳನ್ನೂ ಪಟ್ಟಣವಾಸಿಯ ಜೊಳ್ಳುಬಾಳುವೆಯನ್ನೂ, ಗ್ರಾಮವಾಸಿಗರ ಸಹಜಬಲಿಷ್ಠತೆಯನ್ನೂ ನಿರೂಪಿಸುವಲ್ಲಿ ಅಶ್ವತ್ಥರು ನೈಪುಣ್ಯದಿಂದ ನಡೆದಿರುವರು.

ಕಥೆಯು ಓದುಗರಿಗೆ, ಸಹಜವಾಗಿ ನಡೆದ ಸಂಗತಿಯ ಉಲ್ಲೇಖದಂತೆ ಎನಿಸುತ್ತದೆ.

ಅಕ್ಕನು ಪ್ರೀತಿಯಿಂದ ತುರುಕಿದ್ದ ಮೃಷ್ಟಾನ್ನದ ಪರಿಣಾಮವಾಗಿ ಕಕ್ಕಸಬಡುವ ಕತೆಗಾರ, ಅದರ ನಿವಾರಣೋಪಾಯವನ್ನು ಹುಡುಕುತ್ತ........ಗೆ ಹೋಗುವುದಕ್ಕೆ ಬರುವನು. ಸಮಯ ಮೀರಿದ್ದರೂ ಮಿತಿಮೀರಿ ಬಂದ ಅವನ ಜಠರದ ಅವಸ್ಥೆಗೆ ಇನ್ನು ಗತ್ಯಂತರ ಕಾಣದೆ ಹೊರಟೇ ಬಿಡುತ್ತಾನೆ. ಕಷ್ಟಪಟ್ಟು ಗುಡಿ ಸೇರುತ್ತಾನೆ. ಹಾದಿಯಲ್ಲಿ ಅವನು ದಾಟುವ ಹಳ್ಳದ ವರ್ಣನೆ

ಅವನಿಗಾದ ಆಯಾಸ ಮತ್ತು ಅನುಭವದ ವರ್ಣನೆಯಿಂದ, ನಮಗೆ ಆ ಹಳ್ಳ-ಕೊಳ್ಳಗಳ ಪ್ರತ್ಯಕ್ಷ ದೃಶ್ಯ ಕಂಡು ಬರುತ್ತದೆ. ಶ್ರೀ. ಅಶ್ವತ್ಥರು ಇಲ್ಲಿ ಬಳಸಿಕೊಂಡಿರುವ ಪದಸಮೂಹವು ನಿಜವಾಗಿಯೂ ಗಮನಾರ್ಹವಾದುದು. ಕೊನೆಗೆ ಗುಡಿಯನ್ನು ಸೇರುವಷ್ಟರಲ್ಲಿ, ಅವನನ್ನು ಕೆಡುಹಿಕೊಂಡು ಬೀಳಬಹುದೆಂಬಂತೆ ಇದ್ದ ಅನಾರೋಗ್ಯವು ಭಸ್ಮೀಭೂತವಾಗುತ್ತದೆ. ಹಾಳು ದೇಗುಲವನ್ನು ಕಂಡು ಅದನ್ನೆಲ್ಲ ಪರಿಶೀಲಿಸಿ, ದೇವರ ದರ್ಶನವನ್ನು ಮುಚ್ಚಿದ ಬಾಗಿಲನ್ನು ದೂಕಿ ಸಂದಿನೊಳಗಿನಿಂದಲೇ ಪಡೆದು, ಸರೋವರವನ್ನು ನೋಡಿಕೊಂಡು ಅಲ್ಲಿ ಮೆಟ್ಟಲಿನಲ್ಲಿ ಕುತೂಹಲವನ್ನು ಕೆರಳಿಸುವ ಟೊಳ್ಳು ಶಬ್ದದ ಚಿಪ್ಪಟೆಯನ್ನು ಕಂಡು, ಅಶ್ವತ್ಥವೃಕ್ಷದ ಬಳಿಯಲ್ಲಿದ್ದ ಆ ಲಿಂಗ ವನ್ನೂ ಅದನ್ನು ಅಪ್ಪಿದ್ದ ಹೆಣ್ಣು ವಿಗ್ರಹವನ್ನೂ ನೋಡಿ, ಇವೆಲ್ಲ ಮನೋಭೂಮಿಕೆಯಲ್ಲಿ ಅಸ್ಪಷ್ಟ ಭಾವನೆಗಳನ್ನು ಮೂಡಿಸಿದಾಗ, ಅವನಿಗೆ ಆಯಾಸದಿಂದಾಗಿ ನಿದ್ರೆ ಬರುತ್ತದೆ.

ನಿದ್ರೆಗೈದು ಏಳುವಷ್ಟರಲ್ಲಿಯೇ ಯಾರೋ ಮಹಾದ್ವಾರವನ್ನು ತೆರೆದ ಸಪ್ಪುಳವಾಗುತ್ತದೆ-ಎಂದು ಮೂರನೆಯ ಭಾಗವನ್ನು ಪ್ರಾರಂಭಿಸಿರುವರು. ಈ ಭಾಗವೆಲ್ಲ ಕನಸು. ಆದರಿದು ಸ್ವಪ್ನಭಾಗವೆಂದು ಓದುಗರಿಗೆ ತಿಳಿಯುವುದಿಲ್ಲ. ಕಥೆಯು ಮುಂದೆನಡೆದಿದೆ ಎನಿಸುತ್ತದೆ. ಕಥೆಯನ್ನೆಲ್ಲ ಮುಗಿಸಿದ ನಂತರ, ಇದೆಲ್ಲ ಕನಸೆಂದೂ ಆ ಕನಸಿಗೆ ಕಥಾವಸ್ತುವು ಅವನು ಆಗ ತಾನೇ ಕಂಡ ದೃಶ್ಯಗಳ ಪರಿಣಾಮವೆಂದೂ ತಿಳಿದುಬರುತ್ತದೆ. ಈ ರೀತಿಯ ಕಥಾರಚನಾವಿಧಾನವು ಬಹು ರಮ್ಯವಾಗಿದೆ. ೧೯೪೮ ನೆಯ ಜುಲೈ ತಿಂಗಳಿನ "ಜೀವನ" ದಲ್ಲಿ ಶ್ರೀ. ನವರತ್ನ ರಾಮರಾಯರು ಬರೆದ "ತಾವರೆಕೋಟೆ" ಯಲ್ಲಿ ಇದೇ ರೀತಿಯ ರಚನಾಕ್ರಮವಿದೆ.

ಕಥೆಯು ನಾಲ್ಕು ಭಾಗಗಳಾಗಿದೆ ಅದರ ಮೊದಲ ಭಾಗವೆಲ್ಲ ಕಥಕನು ಹಾಳುದೇಗುಲವನ್ನು ಕಾಣಲು ಹೊರಡುವುದಕ್ಕೆ ಸುದೀರ್ಘವಾದರೂ ಸಹಜವಾದ ಪೀಠಿಕೆಯಾಗಿದೆ. ಎರಡನೆಯ ಭಾಗವೆಲ್ಲ ಅರ್ಧಪಾಲು ದೇವಾಲಯದತ್ತ ಪಯಣವನ್ನೂ, ಅವನು ಪಟ್ಟ ಪ್ರಯಾಸವನ್ನೂ, ಹಾಳೂರಿನ ವರ್ಣನೆಯನ್ನೂ, ಪಾಳುದೇಗುಲದ ಪರಿಸರ ನಿರ್ಜನಪ್ರಾಂತದ ವರ್ಣನೆಯನ್ನೂ ಒಳಗೊಂಡಿದೆ. ಎರಡನೆಯ ಭಾಗವೆಲ್ಲ ಮೂರನೆಯ ಭಾಗದಲ್ಲಿಯ ಕನಸಿನ ಕಥಾವಸ್ತುವಿಗೆ ಮಾನಸಿಕ ಹಿನ್ನೆಲೆಯನ್ನು ಒದಗಿಸುವಲ್ಲಿ ಬಹಳ ಪರಿಣಾಮಕಾರಿಯಾಗಿದೆ. ನಾಲ್ಕನೆಯ ಭಾಗವನ್ನು ಓದಿದ ಮೇಲೆಯೇ ಮೂರನೆಯ ಭಾಗವೆಲ್ಲ ಕನಸಿನ ವರ್ಣನೆಯೆಂದು ತಿಳಿಯುವುದು. ಈ ನಾಲ್ಕನೆಯ ಭಾಗವು ಕಥಕನ ಮಾನಸಿಕ ಧೈರ್ಯವನ್ನೂ ಅವನ ಭಾವನ ಮತ್ತು ಅಕ್ಕನ ಭಯವಿಹ್ವಲತೆಯನ್ನೂ ಸೂಚಿಸುತ್ತ, ಕಥೆಯ ಮುಕ್ತಾಯವನ್ನು ಮಾಡುತ್ತದೆ. ಆದರೆ ಓದುಗರಿಗೊಂದು ಸಂಶಯವು ಇಲ್ಲಿ ಬರಬಹುದು : ಕಥಕನು ಅಂತಹ ಮನೋಧೈರ್ಯದವನೇ–ಎಂದು ಆದರೆ ಇಲ್ಲಿ ಒಂದು ಅಂಶವನ್ನು ಓದುಗರು ಗಮನಕ್ಕೆ ತಂದುಕೊಳ್ಳಬಹುದು : ಭಾವ ಮತ್ತು ಭಾವಮೈದುನರ ಸಂಭಾಷಣೆಯಲ್ಲಿ ಗುಂಭವಾಗಿ ಪಾಳುದೇಗುಲದ ಸಂದರ್ಭವನ್ನೂ ಸೂಚಿಸಿರುವುದನ್ನು ಮರೆಯ ಬಾರದು. ಮೈದುನನನ್ನು ಒರ್ವನನ್ನೆ ಕಳುಹಲು ಭಾವನು ಅಕ್ಕನು ಹಿಂಜರಿಯುವರು. ಅದರ ಅಂತರಾರ್ಥವನ್ನು ಕಥಕನು ಗಮನಕ್ಕೆ ತಂದುಕೊಂಡಂತೆ ಕಾಣಿಸಲಿಲ್ಲ. ಗುಡಿಯನ್ನು ನೋಡುವ ಉದ್ದೇಶದಿಂದ ತನ್ನ ಕಂಗೆಡುವ ದೇಹಾರೋಗ್ಯವನ್ನು ಸುಧಾರಿಸಿಕೊಳ್ಳುವ ಆತುರತೆಯಲ್ಲಿ, ಭಾವಮೈದುನ ಕನಸಿನಲ್ಲಿ "ಆ" ಎಂಬುದಕ್ಕೂ ಭಾವ ಮತ್ತು ಒಬ್ಬ ಆಳು ಬಂದೆಬ್ಬಿಸುವುದಕ್ಕೂ ಸರಿ ಹೋಗುತ್ತದೆ. ಇಲ್ಲವಾದರೆ ಕನಸಿನ ನಂತರ ಕಥಕನ ಅವಸ್ಥೆ ಏನಾಗು ತ್ತಿತ್ತೋ....ಕಣ್ಣುತೆಗೆದು ಆ ಕನಸಿನನಂತರ ತನ್ನೊಬ್ಬನನ್ನೇ ಆ ಪಾಳುದೇಗುಲದಲ್ಲಿ ಕಂಡುಕೊಂಡಾಗ.

ಆದರೆ ಇಲ್ಲಿ ಒಂದು ಸ್ವಪ್ನಶಾಸ್ತ್ರದ ಪ್ರಶ್ನೆ ಬಂದುಬಿಡುತ್ತದೆ. ದೊಡ್ಡ ಕನಸಿನ ಅವಧಿ ಎಂದರೆ ೧೦ ಸೆಕಂಡೆದು ಹೇಳುವರು. ಹಾಗೆಂದ ಮೇಲೆ. ಆ ಮಾನಸಿಕ ಹಿನ್ನೆಲೆಯಲ್ಲಿ ಮಲಗಿದ್ದಾಗ ಭಾವ ಮತ್ತು ಆಳು ದೀಪವನ್ನು ಹಿಡಿದುಕೊಂಡು ದೇವಾಲಯದ ಹೆಬ್ಬಾಗಿಲನ್ನು ತೆರೆದುಕೊಂಡು ಬಂದಾಗ, ಆ ಕಿಶ್ರಿಂಬ ಧ್ವನಿ ಮತ್ತು ಆ ದೀಪದ ಬೆಳಕು ಇವುಗಳ ಸಂಯುಕ್ತ ಪರಿಣಾಮವೇ ಆ ಕನಸಿಗೆ ಕಾರಣವಾಗಿರುತ್ತದೆ.

ಏನೆಂದರೂ ಕಥಕನು ಸಾಹಸಿಗನೆಂದು ಹೇಳಲು ಅಭ್ಯಂತರವಿಲ್ಲ.

ಶೀರ್ಷಿಕೆಯನ್ನು ಅನ್ವರ್ಥಗೊಳಿಸುವ ಭಾಗವೆಂದರೆ, ಮೂರನೆಯ ಭಾಗದಲ್ಲಿರುವುದು ಮಾತ್ರ. ಎಂದರೆ ನಿಜವಾದ ಕಥಾಭಾಗ ಇಡೀ ಕಥೆಯ ಮೂರರಲ್ಲಿ ಒಂದಂಶವಾಗಿದ್ದರೂ, ಉಳಿದ ಮೊದಲಿನ ಎರಡು ಭಾಗಗಳೂ ಓದುಗನ ಮನಸ್ಸಿಗೆ ಬೇಜಾರನ್ನುಂಟುಮಾಡದೆ ಇರುವುದು ಹಾಗಿರಲಿ, ಅವರ ಮನಸ್ಸಿನಲ್ಲಿ ತನ್ಮಯತೆಯನ್ನು ತಂದಿಡುತ್ತದೆ. ಕುತೂಹಲವನ್ನು ಕೆರಳಿಸುತ್ತದೆಯಾಗಲಿ, 'ಏನಿದು ಕಥೆ ಬರಲಿಲ್ಲವೇ' ಎಂಬ ಬೇಜಾರು ಬಾರದಂತೆ ಇದೆ. ಈ ರೀತಿಯು ಕಥಕನ ವೈಖರಿಯ ವೈಭವದ ದ್ಯೋತಕವು.

ಕಥಾವಸ್ತುವಿಗೆ ಬಂದರೆ, ಸ್ವಲ್ಪದರಲ್ಲಿಯೇ ರಸಪೂರ್ಣವಾಗಿ ಅದನ್ನು ಬಳಸಿಕೊಂಡಿರುವುದು ಕಂಡು ಬರುತ್ತದೆ.

ಪಟೇಲರ ಹಿರಿಯ ಮಗಳನ್ನು ಬಸವಿಯಾಗಿ ಬಿಡುವಂತೆ ಮಾಡಬೇಕಾದರೆ, ಧೂರ್ತರು ಮಾನವನ ಕಲಕಿದ ಬಲಹೀನ ಮನಸ್ಸನ್ನು ಹೇಗೆ ದುರುಪಯೋಗ ಮಾಡಿಕೊಳ್ಳುತ್ತಾರೆಂಬುದು ವಿದಿತವಾಗುತ್ತದೆ.

"ದೇವದಾಸಿ"ಯ ಪದ್ಧತಿಯನ್ನು ಹೇಗೆ ದುರುಪಯೋಗಿಸಿಕೊಳ್ಳುತ್ತಿದ್ದರು— ಈ ಸಮಾಜದ ಧುರೀಣರು, ಪೂಜಾರಿಗಳು, ಎಂಬುವನ್ನು ನಿಷ್ಠುರವಾಗಿಯಿದ್ದರೂ, ರಮ್ಯವಾಗಿ- ವೈದ್ಯನು ಶಸ್ತ್ರಚಿಕಿತ್ಸೆ ಮಾಡಿದರೂ ನೋವಿನ ಅರಿವಾಗದಂತೆ ನೋಡಿಕೊಳ್ಳುವ ತೆರನಾಗಿ ಶ್ರೀ. ಅಶ್ವತ್ಥರ ವಿಧಾನವಿದೆ.

ವಯಸ್ಕಳಾದ ಮೇಲೆ ದೇವದಾಸಿಯ ಮದುವೆ ದೇವರೊಡನೆ ಆಗುತ್ತದೆ. ಅವಳೇನೋ ನಿಜವಾಗಿ ತಾನು ದೇವರ ದಾಸಿಯಾದೆನೆಂದೂ, ಪುನೀತಳಾದೆನೆಂದೂ ಭಾವಿಸಿಕೊಳ್ಳುವಳು. ಆದರೆ,

ಸಾದರ ಸ್ವೀಕಾರ

೧೦೮ **ಭಾರತ ಸಾರೋದ್ಧಾರ** (ಕುಮಾರವ್ಯಾಸನ ಕನ್ನಡ ಮಹಾಭಾರತದ ಗದ್ಯಾನುವಾದ.) ಸಂಪಾದಕರು ಶ್ರೀಮಾನ್ ಸಂ. ಗೋ. (ಭಾರತ) ಬಿಂದೂರಾಯರು ಪ್ರಕಾಶಕರು: ಲೋಕ-ಶಿಕ್ಷಣ ಧರ್ಮನಿಧಿ, ಹುಬ್ಬಳ್ಳಿ. ಡೇ. ಅ. ೧೨+೪೯೬ ಪುಟಗಳು. ಬೆಲೆ ೫-೦-೦.

೧೦೯ **ಮೊಗವೀರಸಾಂವತ್ಸರಿಕ** (ವಾರ್ಷಿಕ ಸಾಹಿತ್ಯ ಸಂಪುಟ) ಸಂಪಾದಕರು ಶ್ರೀಮಾನ್ ರಾಮಚಂದ್ರ ಉಚ್ಚಿಲ 'ವಿದ್ವಾನ್'. ಪ್ರಕಾಶಕರು: ಶ್ರೀ. ಆರ್. ಟಿ. ಕಾಂಚನ್, ಮೊಗವೀರ ಯುವಕ ಸಂಘ, ೪೬ ನೀರನರಿಮಾನ್ ರೋಡು, ಕೋಟೆ-ಮುಂಬಯಿ. ಕ್ರೌನ್ ೧/೧೬ ದ ೮೦ ಪುಟಗಳು. ಬೆಲೆ ೦-೮-೦.

ಸಂಪುಟವು ಒಳ್ಳೊಳ್ಳೆಯ ಲೇಖನ-ಕವನ-ಕತೆಗಳಿಂದ ಕೂಡಿದ್ದು, ಅಚ್ಚುಕಟ್ಟಾಗಿಯೂ ಇದೆ. ಯಾವಾಗಲೂ ಮೊಗವೀರ ಯುವಕರ ಯಾವುದೇ ಪ್ರಯತ್ನವು ಜೊಳ್ಳಾಗಿ ಇರುವುದಿಲ್ಲ.

೧೧೦ **ಲೆನಿನ್** (ಜೀವನಚರಿತ್ರ-ಸಚಿತ್ರ) ಬರೆದವರು ಶ್ರೀ. ಎನ್ ಎಸ್. ವೀರಪ್ಪನವರು. ಪ್ರಕಾಶಕರು ನವೋದಯ ಸಾಹಿತ್ಯಮಂದಿರ,-೯೯೦೬ ಬಿಹಾರಿವಿಲಾಸ್., ರಾಮಮಂದಿರ ರಸ್ತೆ, ಮೈಸೂರು. ಕ್ರೌ. ಅ. ೨೬೪ ಪುಟಗಳು ಬೆಲೆ ೨-೦-೦.

೧೧೧ **ಅಮರವಾಣಿ** (ಕನ್ನಡ ಮಾಸಪತ್ರಿಕೆ.) ಸಂಪಾದಕರು ಶ್ರೀ. ಬಿ. ಎಂ. ವೀರೇಶ್ವರ ಶಾಸ್ತ್ರಿ 'ವಿದ್ವಾನ್' ಮತ್ತು ಸಹಸಂಪಾದಕರು: ವೈದ್ಯಭೂಷಣ ಶ್ರೀ. ಕಲ್ಲಿನಾಥ ಶಾಸ್ತ್ರಿ, ದ್ಯಾಂಪೂರ. ಪ್ರಕಾಶನ ಸ್ಥಲ: 'ಅಮರವಾಣಿ' ಕಾರ್ಯಾಲಯ, ಯಾದಗಿರಿ, ಹೈದರಾಬಾದ್ ಸ್ಟೇಟ್. ಡೆ. ೧/೧೬ ದ ೪೮ ಪುಟಗಳು. ವಾ. ಚಂ. ೬ ರೂಪಾಯಿಗಳು. ಬಿಡಿಸಂಚಿಕೆಗೆ ೦-೮-೦.

೧೧೨ **ರಾಯಭಾರಿ** (ಪರ್ಯಾಯ ವಿಶೇಷಾಂಕ.) ಸಂಪಾದಕರು ಶ್ರೀ. ಪಾಂಗಾಳ ರಬೀಂದ್ರ ನಾಯಕ ಮತ್ತು ಶ್ರೀ ಎಸ್. ಆರ್. ನಾರಾಯಣಭಟ್ಟ, ಉಡುಪಿ. ಸಂಪಾದಕರೇ ಪ್ರಕಾಶಕರು. ಕ್ರೌ. ೧/೧೬ ದ ೧೦೮ ಪುಟಗಳು. ಬೆಲೆ ೦-೮-೦.

ಸರ್ವಾಂಗ ಸುಂದರವಾದ ಸಂಚಿಕೆ. ಸಂಗ್ರಾಹ್ಯ ಲೇಖನಗಳಿಂದಲೂ ಪರ್ಯಾಯ ಸಂಬಂಧ ಆಕರ್ಷಕ-ಚಿತ್ರಗಳಿಂದಲೂ ಸಂಚಿಕೆಯುಸರ್ವಪ್ರಿಯವೆನಿಸ-ಬಹುದಾಗಿದೆ. ಬೆಲೆಯೂ ಹೆಚ್ಚೆನಿಸುವಂತಿಲ್ಲ.

೧೧೩ DIGEST OF BOMBAY RENT CESES (ಕಾನೂನು ವಿಷಯಕ ಗ್ರಂಥ) ಬರೆದವರು ಶ್ರೀಮಾನ್ ವಿ. ಎಸ್. ಕುಲಕರ್ಣಿ ಬಿ. ಎ., ಎಲ್‌ಎಲ್.ಬಿ. ಅಡ್ವೋಕೇಟ್, ಹೈಕೋರ್ಟ ಮುಂಬಯಿ. ಪ್ರಕಾಶಕರು ಲಾ ಬುಕ್‌ಹೌಸ್, ೨೬೮ ನಾರಾಯಣ-ಪೇಠ, ಲಕ್ಷ್ಮೀರೋಡ್, ಪೂನಾ ೨. ಡೆ. ಅ. ೬೨ ಪುಟಗಳು. ಬೆಲೆ ೩-೦-೦.

೧೧೪ **ಮುಗಿಯದ ಕಥೆ** (ಸ್ವತಂತ್ರ ಸಾಮಾಜಿಕ ಕಾದಂಬರಿ.) ಲೇಖಕರು ಶ್ರೀ. ವಿ. ಎಂ. ಇನಾಮದಾರರು. ಪ್ರಕಾಶಕರು: ಶ್ರೀ. ದ. ಬಾ. ಕುಲಕರ್ಣಿ, ದೀಪದಾನ ಪ್ರಕಾಶನ, ಧಾರವಾಡ. ಫೂ. ಕ್ಯಾ. ೧/೧೬ ದ ೧೬೦ ಪುಟಗಳು. ಉತ್ತಮ ಪ್ರತಿಗೆ ೨-೦-೦. ಸಾದಾಪ್ರತಿಗೆ ೧-೦-೦.

ಪೂಜಾರಿಯ ಮಗನೇನೋ ಅವಳನ್ನು ದೇವರ ದಾಸಿಯೆಂದು ಭಾವಿಸದೆ, ತನ್ನ ಕಾಮವನ್ನು ಈಡೇರಿಸುವ, ಸಮಾಜವು ತನ್ನ ದೌರ್ಬಲ್ಯದಿಂದ ತನಗಿತ್ತ, ರಮಿಸುವ ವಸ್ತುವೆಂದು ಬಗೆದ. ಸಾಂಪ್ರದಾಯಿಕವಾಗಿ ದೇವದಾಸಿಗಳನ್ನು ಮನುಷ್ಯರ ಸಿಷೇಕಕ್ಕೆಂಬಂತೆ ದೇವರಿಗೆ ಮೀಸಲೆಂದು ಗರ್ಭಗುಡಿಯಲ್ಲಿ ಬಿಡುತ್ತಿದ್ದರೆಂಬುದನ್ನು, ಹೇಗೆ ಆ ಮುಗ್ಧೆಯರನ್ನು ಮೋಸಗೊಳಿಸಿ ಪೂಜಾರಿಗಳು ಗುಪ್ತ-ಮಾರ್ಗಗಾಮಿಗಳಾಗಿ ಅವರನ್ನು ಕಾಮಿಸುತ್ತಿದ್ದರೆಂಬುದನ್ನು, ಶ್ರೀ. ಅಶ್ವತ್ಥರು ಅನುಮಾನವಿಲ್ಲದಂತೆ ಸೂಚಿಸಿರುವರು ಆದರೆ, ದೇವದಾಸಿಯು ನಿಜವಾಗಿ ಕಾಳಿಯಾಗಿ ತನ್ನ ಭೈರವೀರೂಪವನ್ನು ಪ್ರಕಟಗೊಳಿಸಿದಳೆಂಬುದನ್ನು ನಿರೂಪಿಸಿರುವರು ಇದು ಕೆಲವರಿಗೇಕೆ ಬಹುಜನರಿಗೆ ಅಸಹಜವೆನಿಸಿರಬಹುದು. ಅದು ಹಾಗಲ್ಲ. "ಒಲಿದರೆ ನಾರಿ, ಮುನಿದರೆ ಮಾರಿ!" ಎಂಬುದು ಸುಳ್ಳಲ್ಲವೆಂದು ಇದರಲ್ಲಿ ಅಡಕವಾಗಿರುವ ಮಾತು.

ಕಾಳಿ ದೇವರೇ ಪ್ರಾದುರ್ಭವಿಸಿದನೆಂಬ ಸಾತ್ತ್ವಿಕ ಭಾವನೆಯಿಂದ ಎದ್ದು ಬರುವಾಗ, ಅವಳಲ್ಲಿ ತನ್ನನ್ನು ದೇವರು ಸ್ವೀಕರಿಸಲು ಬರುವಾಗ ತಾನೂ ಆತನಿಗೆ ತಕ್ಕವಳಾಗಿದ್ದಿರಬೇಕೆಂಬ ಭಾವನೆ ತುಳುಕಿ ಬಿಟ್ಟಿದೆ. ಆದರಿಂದಾಗಿ ಅವಳು ಕಾಳಭೈರವಿಯಂತೆ ಪೂಜಾರಿಗೆ ಭಾಸವಾದುದು ಚೋದ್ಯವಲ್ಲ. "ದೇವರಲ್ಲಿನ ಅನುಪಮ ಶ್ರದ್ಧಾಭಕ್ತಿಪ್ರೇಮಗಳಿಂದ, ಕಾಳಿ ಮಾನವ ಮಟ್ಟದಿಂದ ಅತಿಮಾನವ ಮಟ್ಟವನ್ನು ಮುಟ್ಟಿ, ಅತಿ ಭೀಕರಾಕೃತಿಯಲ್ಲಿ ಎದ್ದುಬಂದಳು ಆದರೆ ದೇವರ ರೂಪದಲ್ಲಿ ಬಂದ ದುಷ್ಕಾಮಿಯಾದ ಪೂಜಾರಿಯ ಮಗನು, ಕ್ಷುದ್ರ ಮಾನವನಾಗಿ ಕಾಳಿಯನ್ನು ನೋಡಿ ತತ್ತರಿಸಿದನು. ಈ ಸನ್ನಿವೇಶವು ಮನೋವಿಜ್ಞಾನದ ತಳಹದಿಯ ಮೇಲೆ ನಿಂತಿದೆ

ಸಮಾಜದ ಗುಣ ನೋಡಿ! ವ್ಯಕ್ತಿಯನ್ನು ಸಮಾಜದಲ್ಲಿನ ಧೂರ್ತನೊರ್ವನು ತನ್ನ ನೀಚತನಕ್ಕೆ ಬಲಿ ಕೊಡಲಿಕ್ಕೆ ಯತ್ನಿಸಿದಾಗ ನೋಡುತ್ತ ನಿಲ್ಲುತ್ತದೆ. ಅವನನ್ನು ತಡೆಯುವ ಧೈರ್ಯವನ್ನು ಮಾಡದು. ಆಕಸ್ಮಿಕವಾಗಿ, ಆವೇಶವಶತೆಯಿಂದ ಆ ಧೂರ್ತನನ್ನು ಪ್ರತಿಭಟಿಸುವುದಾದರೆ, ಆ ಸಂಗ್ರಾಮದಲ್ಲಿ ಜಯಶೀಲವಾದರೆ, ಸಮಾಜವು ಅವನನ್ನು ದೈವತ್ವಕ್ಕೆ ಏರಿಸಿ, ಶಿಲಾವಿಗ್ರಹವನ್ನಾಗಿ ಮಾಡಿ ಪೂಜೆಗೈವುದು. ಬದುಕಿದ್ದಾಗ ಬಾಳುವೆ ಸಾಗದಂತೆ ಮಾಡಿದವನನ್ನು ಹಿಡಿದು ದಂಡಿಸಲಾಗದ ಸಮಾಜ, ಅವನ ಅತ್ಯಾಚಾರಕ್ಕೆ ಒಳಗಾಗದೆ ಪ್ರಾಣವನ್ನು ಕಳಕೊಂಡ ಮೇಲೆ, ಆ ವ್ಯಕ್ತಿಯನ್ನು ಪೂಜಿಸುವುದು ಇದು ನಮ್ಮ ಸಮಾಜದ ದುರ್ಗತಿಯ ದ್ಯೋತಕ!

ಕನ್ನಡದಲ್ಲಿ

ಜಲದುರ್ಗ

ಹೊಸ ಚಲಚ್ಚಿತ್ರ

ಸುಪ್ರಸಿದ್ಧ ನಟರೂ ದಿಗ್ದರ್ಶಕರೂ ಆದ **ಕೆಂಪರಾಜರ ನಿರ್ಮಾಣ!**

ಅದ್ಭುತರಮ್ಯ ಕಥಾನಕ!

ರೋಮಾಂಚಕ ಸಾಹಸ!

ಸುಮಧುರ ಸಂಗೀತ!

ನಯನಮನೋಹರ ನೃತ್ಯ!

ಅತ್ಯುಚ್ಚಮಟ್ಟದ ತಾರಾಗಣ!

ನಗೆಯಲ್ಲಿ ತೇಲಿಸುವ ಹಾಸ್ಯ!

ಇದುವರೆಗೆ ನೋಡದ ಮನೋಹರ

ದೃಶ್ಯಗಳು!

ಸ್ವಾರ್ಥಿಗಳು ಕೆಲವರು ಸೇರಿ, ಪ್ರತಾಪನ ಪ್ರೇಮದ ಬಾಳನ್ನು ಕೆಡಿಸಿ, ಜಲದುರ್ಗದಲ್ಲಿ ಏನು ಸೆರೆಯಾಳಾಗುವಂತೆ ಮಾಡಿದರು.

ಈ ಕಷ್ಟದ ಸೆರೆಮನೆಯಿಂದ ಪಾರಾಗಿ, ಶ್ರೀಮಂತನಾಗಿ ಆ ಸ್ವಾರ್ಥಿಗಳೆಲ್ಲರ ಸೇಡನ್ನು ವಿವಿಧರೀತಿಯಿಂದ ತೀರಿಸಿದ ರೌದ್ರ ಕಥಾನಕ!

ತಾರಾಗಣ

ಕೃಷ್ಣಕುಮಾರಿ, ಕೆಂಪರಾಜ,
ಪಂತುಲು, ಸಂಧ್ಯಾ, ಭಟ್ಟಿ,
ಜಯಲಕ್ಷ್ಮಿ ಇತ್ಯಾದಿ

ದಿಗ್ದರ್ಶಕ

ಶ್ರೀ. ಕೆಂಪರಾಜ

ಒಂದೆಸಲ ನೋಡಿದರೆ ಸಾಕೆನಿಸಿದ ರಮ್ಯಚಿತ್ರವಿದು.

ಕನ್ನಡ ಚಲಚ್ಚಿತ್ರಪ್ರಪಂಚದಲ್ಲಿಯೇ ಇದು ತನ್ನದೊಂದು ವಿಶಿಷ್ಟಸ್ಥಾನವನ್ನು ಕಲ್ಪಿಸಿಕೊಂಡಿದೆ!

ಡಿ. ಎಂಟರ್‌ಟೇನರ್ಸ್ ಮತ್ತು ಜನತಾ ಪಿಕ್ಚರ್ಸ್ (ಧಾರವಾಡ) ರಿಲೀಜ್

ಶರತ್ ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು!

ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

'ಆನಂದಕಂದ'ರ ಕಥೆ, ಕಾದಂಬರಿ, ಕವನಸಂಕಲನ, ನಾಟಕಸಂಕಲನ, ಸಾಹಿತ್ಯ ಸಂಸ್ಕೃತಿಯ ಗ್ರಂಥಗಳು. ಎಲ್ಲವೂ ನಮ್ಮಲ್ಲಿ ದೊರೆಯುವವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮೀಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು.

ನಮ್ಮ ಮಂದಿರ ಪ್ರಕಟಿಸಿದ 'ಆನಂದಕಂದ'ರ ಸಾಮಾಜಿಕ ಕಾದಂಬರಿ:

ಮಗಳ ಮದುವೆ

೧೯೩೦ನೆಯ ಸತ್ಯಾಗ್ರಹ ಚಳವಳಿಯ ಹಿನ್ನೆಲೆಯಲ್ಲಿ ಉತ್ತರಕರ್ನಾಟಕದ ಸಾಮಾಜಿಕ ಜೀವನವನ್ನು ವಿವಿಧ ಮುಖದಲ್ಲಿ ಚಿತ್ರಿಸಿ ತೋರಿಸಿದ ರಮ್ಯ ಕಥಾನಕ. ಓದಲು ಕೈಯ್ಯಲ್ಲಿ ತೆಗೆದುಕೊಂಡರೆ, ಮುಗಿಸುವ ವರೆಗೂ ಪುಸ್ತಕವನ್ನು ಕೆಳಗೆ ಇರಿಸಲಿಕ್ಕಾಗದಂತಹ ಆಕರ್ಷಕವಾದ ಕತೆಗಾರಿಕೆ. ಓದಿದ ರಸಿಕರಿಂದ ಧನ್ಯವಾದಗಳ ಸುರಿಮಳೆ!

ಕ್ರಾ. ಅ. ೩೫೦ ಪುಟಗಳು ಸಾದಾ ಪ್ರತಿಗೆ ೪-೦-೦; ಸುಂದರ ಪ್ರತಿಗೆ ೪-೧೨-೦

ಬೆಳವಡಿ ಮಲ್ಲಮ್ಮ

(ಕರಂಗನಾಟಕ ಸಂಕಲನ)

ಕ್ರಾ. ಅ. ೧೧೬ ಪುಟ. ಬೆಲೆ ೧-೮-೦

ಕಾರಹುಣ್ಣಿವೆ

(ಕವನಸಂಕಲನ)

ಕ್ರಾ. ಅ. ೧೨೮ ಪುಟ. ಬೆಲೆ ಸಾದಾ ೨-೦-೦
ಸುಂದರ ೨-೮-೦

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಬೇರೆ ಗ್ರಂಥಗಳು

ಕಾದಂಬರಿ	ಕವನ ಸಂಕಲನ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	ವಿರಹಿಣಿ	ಬಡತನದ ಬಾಳು	ಕರ್ನಾಟಕ ಜನಜೀವನ
ಸುದರ್ಶನ	ಒಡನಾಡಿ	ನಮ್ಮ ಬದುಕು	ಜೀವನ ಚರಿತ್ರ
ಅಶಾಂತಿಪರ್ವ		ಸಂಸಾರ ಚಿತ್ರ	ಶ್ರೀ ಬಸವಣ್ಣನವರು
ಮಗಳ ಮದುವೆ		ಮಾತನಾಡುವ ಕಲ್ಲು	

ಅಲ್ಲದೆ ಶ್ರೀ ಹುದ್ದಾರರ 'ಚಿತ್ರಕಲಾಪ್ರವೇಶ'ವೂ ಚಾಡಿಯ ಚಾಣಕ್ಯನ 'ಜಾತೀಯ ಸಮಸ್ಯೆ' 'ಕರ್ನಾಟಕ ಏಕೀಕರಣ' ಈ ಕಿರುಹೊತ್ತಿಗೆಗಳೂ ದೊರೆಯುವವು.

ಶರತ್ ಪ್ರಕಾಶನ ಮಂದಿರಕ್ಕೆ ೫ ರೂ. ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ ಸವಲತ್ತುಗಳು. ಬೇಗನೆ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ:

ಎಸ್. ಡಿ. ಧರಮಟ್ಟಿ, ಶರತ್ ಪ್ರಕಾಶನ ಮಂದಿರ, ಧಾರವಾಡ

Printed by N. A. Hosketi at the Vijaya Press, Dharwar, and published forthe Proprietors Jayantipu blications, by S. D. Dharmatti at the Jayanti Office, Dharwar

ಏಪ್ರಿಲ್ ೧೯೫೪

ಸಂಪುಟ ೧೬

ಸಂಚಿಕೆ ೧೧

ಬೆಲೆ ೮ ಆಣೆ

ಈ ಸಂಚಿಕೆಯಲ್ಲಿ:

ಹಿಂದೀ ಮಾಧ್ಯಮದ ಗೊಂದಲ (ಸಂಪಾದಕೀಯ) ಸಂಪಾದಕರು ೪೦೧
ನಾಡನಡೆ (ಸಾಂದರ್ಭಿಕ ಟಿಪ್ಪಣಿಗಳು) 'ಕಾಲಭೈರವ' ೪೦೩
ಸಾಧ್ಯಾನ ಕರಾಮತ್ತು (ಒಂದು ಹುಚ್ಚಾಟ) ಶ್ರೀ. ಬೇಂದ್ರೆ ಲಕ್ಷ್ಮಣರಾಯರು ಧಾರವಾಡ ೪೦೫
ಮಳೆಗೆ (ಕವನ) ಶ್ರೀ. ಟಿ. ಎನ್. ಶ್ರೀನಿವಾಸಮೂರ್ತಿ, ಮೈಸೂರು ೪೦೯
ಹಿಂದೀ—ವೀರಗಾಥಾಕಾಲ (ಪರಿಚಯಾತ್ಮಕ) ಶ್ರೀ. ಬಿ. ಧೀರೇಂದ್ರ 'ರಾ ಭಾ. ವಿಶಾರದ' 'ಕೋವಿದ' ೪೧೦
ಕನಸಿನ ಮನೆ (ಸಣ್ಣ ಕತೆ) ಕು. ಚಂದ್ರಿಕಾ ಅ. ಕೊಪ್ಪರ, ಹಳಿಯಾಳ ೪೧೩
ಕೊಸ್ಮದೆದೆಗೆ (ಕವನ) ಶ್ರೀ. ಖೋತ ಶ್ರೀಕಾಂತ, ಶಮನೇವಾಡಿ ೪೧೬
ಲೈಂಗಿಕ ಅವ್ಯವಸ್ಥೆ ಮತ್ತು ಯೋಗಾಸನ (ವಿ. ಪ್ರ.) ಶ್ರೀ. ಎಲ್. ಬಿ. ಜೋಶಿ ಬಿ. ಎ., ಬಿ. ಇಡಿ. ೪೧೭
ತಪ್ಪು ತಿಳಿವಳಿಕೆ (ಸಣ್ಣ ಕತೆ) ಶ್ರೀ. ಎನ್. ಎಲ್. ಹಳ್ಳೆಪ್ಪನವರ ಎಂ. ಎಸ್ ಸಿ. (ಆಗ್ರಿ) ೪೨೦
ಶ್ರಾವಣ (ಕವನ) ಶ್ರೀ. ಗೋವರ್ಧನಾಚಾರ್ಯ ಗಲಗ್ಲಿ ಎಂ. ಎ., ಬಿ. ಟಿ. ೪೨೩
ಪುರುಷಾರ್ಥದ ಉಪಾಸಕ (ವ್ಯಕ್ತಿ ಪರಿಚಯ) ಶ್ರೀ. ಆಮಲಕ, ಮಣಿಪಳ ೪೨೪
ಕೃಷಿಸಂಪದ (ಕವನ) ಶ್ರೀ. ಶಿಗ್ಗಾಂವಿ ವೀರೇಶ್ವರ ೪೨೬
ದೇವರ ದರ್ಶನ (ಅನುಭವ ಚಿತ್ರ) ಶ್ರೀಮತಿ ಇಂದಿರಾ ರಾವ್ ಎಂ. ಎ. ಜಬಲ್‌ಪುರ ೪೨೭
ಮುತ್ತಿನ ಚೆಂಡು (ಜಾನಪದ ಕಥೆ) ಶ್ರೀ. ರಾಘವೇಂದ್ರ ಕುಷ್ಟಗಿ, ಸುರಪುರ ೪೩೦
ಸಾಹಿತ್ಯವಿಹಾರ (೩ ಪತ್ರಗಳು) ಬೇರೆ ಬೇರೆ ಲೇಖಕರು ೪೩೫
ಸಾ. ವಿಮರ್ಶೆಯ ಶಿಕ್ಷಣರಂಗ ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು ೪೩೯
ಸಾದರ ಸ್ವೀಕಾರ ಕವ್ಹರ್ ೩ನೆಯ ಪುಟದಲ್ಲಿ

ಅವಧಿಯನ್ನು ಮುಂದುವರಿಸಲಾಗಿದೆ!

◆ ಸಣ್ಣಕತೆಗಳ ಮೇಲಾಟ ◆

ಆಕರ್ಷಕವಾದ ಮೂರು ಬಹುಮಾನಗಳು

೨೦ ರೂ. ೧೫ ರೂ. ೧೦ ರೂ.

೧೯೫೪ನೆಯ ಮೇ ೩೦ನೆಯ ದಿನಾಂಕದೊಳಗೆ ತಲ್ಲುವಂತೆ ಕತೆಗಳನ್ನು ಕಳುಹಬೇಕು.

ಮೇಲಾಟದ ನಿಯಮಗಳು:

೧. ಕತೆಯು ಸ್ವತಂತ್ರವಾಗಿದ್ದು ಕರ್ನಾಟಕದ ಸಾಮಾಜಿಕ ಹಿನ್ನೆಲೆಯಿಂದ ಕೂಡಿದುದಾಗಿರಬೇಕು.

೨. ಜಯಂತಿಯ ಮುದ್ರಿತ ಪುಟ ೫ಕ್ಕಿಂತ ಹೆಚ್ಚಿಗಾಗಬಾರದು; ಎಂದರೆ ಫೂಲ್ಸ್‌ಕ್ಯಾಪ್ ಅರ್ಧ ಹಾಳೆ ೮ರಲ್ಲಿ ಮುಗಿದಿರಬೇಕು.

೩. ವಯಸ್ಸಿನ ನಿರ್ಬಂಧವಿಲ್ಲ. ಹಿರಿಯರು ಕಿರಿಯರು ಎಲ್ಲರೂ ಮೇಲಾಟದಲ್ಲಿ ಭಾಗವಹಿಸಬಹುದು.

೪. ಒಬ್ಬರೇ ಲೇಖಕರು ೨-೩ ಕತೆಗಳನ್ನೂ ಮೇಲಾಟಕ್ಕೆ ಕಳುಹಬಹುದು. ಆದರೆ, ಒಬ್ಬರೇ ಎಲ್ಲ ಬಹುಮಾನಗಳನ್ನು ಪಡೆಯಲಾರರು.

೫. ಮೇಲಾಟಕ್ಕಾಗಿ ಕತೆಗಳನ್ನು ಕಳುಹುವವರು ತಮ್ಮ **ಪ್ರತಿಯೊಂದು ಕತೆಗೆ ೮ ಆಣೆಯಂತೆ ಪ್ರವೇಶ ಧನವನ್ನು ಕಳುಹಬೇಕು.** (ಅಂಚೆಯ ಟಿಕೀಟು, ನಗದು ಹಣ, ಪೋಸ್ಟಲ್ ಆರ್ಡರ್ ರೂಪದಲ್ಲಿ ಕಳುಹಬಹುದು.) ಪ್ರವೇಶಧನವಿಲ್ಲದೆ ಬಂದ ಕತೆಗಳನ್ನು ಮೇಲಾಟದಲ್ಲಿ ಸೇರಿಸಿಕೊಳ್ಳುವುದಿಲ್ಲ.

೬. ಕತೆಯನ್ನು ಕಳುಹಬಹುದಾದ ಕೊನೆಯ ದಿನವೆಂದರೆ ೧೯೫೪ನೆಯ ಮೇ ೩೦ ನೆಯ ದಿನಾಂಕ. ಮೇಲಾಟದಲ್ಲಿ ಮೇಲಿನ ಕ್ರಮಾಂಕ ಪಡೆದ ಕತೆಗಳನ್ನೆಲ್ಲ ಜೂನ್ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

೭. ಬಹುಮಾನಕ್ಕೆ ತಕ್ಕ ಕತೆಗಳು ಬಾರದಿದ್ದಲ್ಲಿ, ಬಹುಮಾನ ಕೊಡದೆ ಇರುವುದಕ್ಕೂ ಬಂದವುಗಳಲ್ಲಿ ಒಳ್ಳೆಯವೆಂದು ತೋರಿದ ಕತೆಗಳಿಗೆ ತಕ್ಕ ಮನ್ನಣೆ ಸಲ್ಲಿಸಲಿಕ್ಕೂ "ಜಯಂತಿ"ಯ ಸಂಪಾದಕ ಮಂಡಲಿ ತನ್ನ ಕಡೆಗೆ ಕೊನೆಯ ಅಧಿಕಾರವನ್ನಿರಿಸಿಕೊಂಡಿದೆ.

ಕನ್ನಡ ಕತೆಗಾರರೆಲ್ಲ ಉತ್ಸಾಹದಿಂದ ಭಾಗವಹಿಸಬೇಕು.

ಸಂಪಾದಕರು: 'ಜಯಂತಿ' ಧಾರವಾಡ

ಜಯಂತಿ

ಸಂಪುಟ ೧೩ ಸಂಚಿಕೆ ೧೧

ಕುಟುಂಬದಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

◆

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ವ್ಯವಸ್ಥಾಪಕರು:
ಮತ್ತು
ಪ್ರಕಾಶಕರು :
ಶ್ರೀ. ಡಿ. ಶರತ್‌ಕುಮಾರ

**ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.**

◆

**ವಾರ್ಷಿಕ ವರ್ಗಣಿ ೫ ರೂ
ಬಿಡಿ ಸಂಚಿಕೆ ೮ ಆಣೆ**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು

**ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.**

◆ ಸಂಪಾದಕೀಯ ◆

ಹಿಂದೀ ಮಾಧ್ಯಮದ ಗೊಂದಲ :

ಭಾರತಕ್ಕೊಂದು ಸಾಮಾನ್ಯವಾದ ಆಡಳಿತದ ಭಾಷೆಯಿರಬೇಕೆಂಬುದರಲ್ಲಿ ಯಾರೂ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಲಾರರು. ಇಂದಿನ ಭಾರತದ ಅಂತರ ಪ್ರಾಂತೀಯ ವ್ಯವಹಾರದ ಅನುಕೂಲತೆಗಾಗಿ ಸಾಮಾನ್ಯ ಭಾಷೆಯ ಅಗತ್ಯವು ಇದ್ದೇಇದೆ; ಆದರೆ ಅಂತಹ ಸಾರ್ವರಾಜ್ಯಿಕ ಸಾಮಾನ್ಯಭಾಷೆ—ಎಂದರೆ ರಾಷ್ಟ್ರಭಾಷೆ—ಯಾವುದಿರಬೇಕೆಂಬುದರ ವಿಚಾರದಲ್ಲಿ ಮಾತ್ರ ಭಿನ್ನಾಭಿಪ್ರಾಯಗಳು ಅಲ್ಲಲ್ಲಿ ಕಿವಿಗೆ ಬೀಳುತ್ತಿವೆ.

ಭಾರತೀಯ ಸಂಸ್ಕೃತಿಯ ಅಭಿಮಾನಿಗಳಲ್ಲಿ ಕೆಲವು ಜನರು, ಸಂಸ್ಕೃತ ಭಾಷೆಯನ್ನೇ ರಾಷ್ಟ್ರಭಾಷೆಯನ್ನಾಗಿ ಮಾಡಬೇಕೆಂದು ಹೇಳುತ್ತಾರೆ. ಇದು ನಿಜವಾಗಿಯೂ ವಿಚಾರಮಾಡಬೇಕಾದ ಸಂಗತಿಯಾಗಿದೆ. ಇಂದು ಸಂಸ್ಕೃತವು ವ್ಯವಹಾರದ ಭಾಷೆಯಾಗಿಲ್ಲವಾದುದರಿಂದ, ಬಹಳ ಜನರು ಸಂಸ್ಕೃತದವರ ಅಭಿಪ್ರಾಯವನ್ನು ಒಪ್ಪಲಾರರು. ಆದರೆ ಭಾರತದಲ್ಲಿಯ ಯಾವ ಭಾಷೆಯ ಜ್ಞಾನ-ವಿಜ್ಞಾನದ ಪರಿಭಾಷೆಗಳನ್ನೆಲ್ಲ ನಾವು ಸಂಸ್ಕೃತಭಾಷೆಯ ನೆರವಿನಿಂದಲೇ ನಿರ್ಮಿಸಿ ಪ್ರಚಾರದಲ್ಲಿ ತರುತ್ತಲಿದ್ದೇವೆ. ಪ್ರತಿಯೊಂದು ಭಾಷೆಯೂ ಸಂಸ್ಕೃತಪದಗಳಿಂದಲೇ ಪುಷ್ಟಿಗೊಂಡಿದೆ; ಪುಷ್ಟಿಗೊಳ್ಳುತ್ತಲಿದೆ. ಹೀಗಿರುವಾಗ, ಸಂಸ್ಕೃತ ವ್ಯಾಕರಣವಿಚಾರವನ್ನಷ್ಟು ಅರಿತುಕೊಂಡುಬಿಟ್ಟರಾಯಿತು; ಆಗ ಯಾರಿಗೂ ಸಂಸ್ಕೃತವು ದೂರದ ಭಾಷೆಯೆನಿಸಲಾರದು. ಸಂಸ್ಕೃತ ಭಾಷೆಯು ಯಾವುದೇ ಒಂದು ಪಂಗಡದವರ ಸೊತ್ತಲ್ಲ. ಭಾರತದ ಎಲ್ಲ ವಿಭಾಗದ ಪ್ರಾಚೀನ ಜ್ಞಾನ-ವಿಜ್ಞಾನ ಭಾಂಡಾರವೂ, ಇತಿಹಾಸ-ಸಂಸ್ಕೃತಿಗಳ ಸಂಪತ್ತೂ, ವಿಚಾರ-ಅನುಭವಗಳ ವೈಶಾಲ್ಯವೂ ಸಂಸ್ಕೃತಭಾಷೆಯಲ್ಲಿಯೆ ತುಂಬುಗಿನಿಂತಿದೆ. ಆದುದರಿಂದ, ಅದು ಭಾರತೀಯರೆಲ್ಲರ ಭಾಷೆಯಾಗಿದೆ. ಇನ್ನೊಂದು ಮಹತ್ತ್ವದ ಸಂಗತಿಯೆಂದರೆ: ಸಂಸ್ಕೃತದಲ್ಲಿಯ ಶಬ್ದಭಾಂಡಾರವು ವಿಪುಲವಾಗಿರುವುದರಿಂದ, ಪಠ್ಯಪುಸ್ತಕಗಳನ್ನು ಯಾವ ತೊಂದರೆಯೂ ಇಲ್ಲದೆ ಬರೆಯಿಸಬಹುದು.

ಸಂಸ್ಕೃತಭಾಷೆಯು ಉಚ್ಚಾರಕ್ಕೆ ಕಷ್ಟಕರವಾಗುವುದೆಂದು ಬಹುಜನರಿಗೆ ಭೀತಿಯಿರಬಹುದು; ಆದರೆ ಒಂದು ಮಾತನ್ನು ಲಕ್ಷ್ಯದಲ್ಲಿಡಬೇಕು: ಅ-ಪರಿಚಿತವಾದ ಯಾವ ಭಾಷೆಯೂ ಮೊದ-ಮೊದಲು ಉಚ್ಚಾರಕ್ಕೆ ಕಷ್ಟಕಾರಿಯಾಗಿಯೇ ಪರಿಣಮಿಸುವುದುಂಟು. ಈಗ ೧೫–೧೬ ವರ್ಷಗಳುದ್ದಕ್ಕೂ ಇಂಗ್ಲಿಷ್ ಕಲಿತವರಲ್ಲಿ, ನಿಜವಾದ ಇಂಗ್ಲಿಷ್ ಸೊಲ್ಲನ್ನರಿಸಿ ಮಾತನಾಡಬಲ್ಲವರು ಎಷ್ಟು ಜನರು ಸಿಕ್ಕುವರು? ಆದರೂ ಆಡಳಿತದ ವ್ಯವಹಾರ ಇಂಗ್ಲಿಷಿನಲ್ಲಿ ನಡೆದಿದೆಯೋ ಇಲ್ಲವೋ? ಹಾಗೆಯೆ ಸಂಸ್ಕೃತಭಾಷೆಯ ಉಚ್ಚಾರಪದ್ಧತಿಯಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಾದರೂ, ವ್ಯವಹಾರಕ್ಕೇನೂ ತೊಂದರೆಯಾಗದು.

ಇಷ್ಟೆಲ್ಲ ಮಾತುಗಳು ನಿಜವಿದ್ದರೂ, ಸಂಸ್ಕೃತವು ರಾಷ್ಟ್ರಭಾಷೆಯಾಗುವ ಸಂಭವವೇನೂ ಇಲ್ಲ; ಏಕೆಂದರೆ ಇದಕ್ಕೆ ಬಹುಸಂಖ್ಯಾಕರ ಬೆಂಬಲವಿಲ್ಲ

ಈಗಿರುವ ಹಾಗೆ, ಇಂಗ್ಲಿಷ್ ಭಾಷೆಯನ್ನೇ ಸಾಮಾನ್ಯಭಾಷೆಯನ್ನಾಗಿ ಮುಂದೆಯೂ ಇರಿಸಿಕೊಳ್ಳುವುದು ಎಲ್ಲರೀತಿಯಿಂದಲೂ ಒಳ್ಳೆಯದೆಂದು, ಅನೇಕ ಧುರೀಣರು ಹೇಳುತ್ತಾರೆ. ಬುದ್ಧಿಯ ತರ್ಕ ಈ ಮಾತನ್ನು ಒಪ್ಪಿದರೂ, ಭಾರತೀಯ ಜನತೆಯ ರಾಷ್ಟ್ರೀಯ ಭಾವನೆಯು ಎಂದೂ ಇದನ್ನು ಒಪ್ಪಲಾರದು. ಯಾವುದೇ ಒಂದು ರಾಷ್ಟ್ರಕ್ಕೆ ತನ್ನದೆಂದು ಅಭಿಮಾನಪಡುವಂತಹ ಭಾಷೆ ರಾಷ್ಟ್ರಭಾಷೆಯಾಗಿರಬೇಕು. ಇಂಗ್ಲಿಷ್ ಭಾಷೆ ಜಾಗತಿಕ ವಿಜಯವನ್ನು ಸಂಪಾದಿಸಿರಬಹುದು; ಸಮೃದ್ಧ ವಾಙ್ಮಯದಿಂದ ಕೂಡಿರಬಹುದು: ಭಾರತೀಯ ಸುಶಿಕ್ಷಿತರಲ್ಲಿ ಬಹುಜನರು ಆ ಭಾಷೆಯಲ್ಲಿ ನೈಪುಣ್ಯವನ್ನೂ ಪಡೆದಿರಬಹುದು. ಆದರೆ ಇಂಗ್ಲಿಷ್ ಭಾಷೆಯು ಭಾರತೀಯರಿಗೆ ಗುಲಾಮಗಿರಿಯ ಚಿಹ್ನವಾಗಿ ಬಂದಿದೆ. ಇಂಗ್ಲಿಷರ ದಾಸ್ಯದಲ್ಲಿ ಭಾರತವು ಕಟ್ಟುಪಡೆಯದೆ ಹೋಗಿದ್ದರೆ, ಇಲ್ಲಿ ಇಂಗ್ಲಿಷ್ ಭಾಷೆಗೆ ಒಂದು ಮಹತ್ತ್ವದ ಸ್ಥಾನವೇ

ಇರುತ್ತಿರಲಿಲ್ಲ. ಭಾರತವು ಮೊದಲಿನಿಂದಲೂ ಸ್ವತಂತ್ರವಾಗಿದ್ದು, ಅಖಂಡತೆಯನ್ನು ಕಾಯ್ದುಕೊಳ್ಳಬೇಕೆಂಬ ಅಪೇಕ್ಷೆಯಿಂದ, ಕಾರ್ಯಮಾಡುತ್ತ ಬಂದಿದ್ದರೆ, ಅದು ಸ್ವಾಭಾವಿಕವಾಗಿ ತನ್ನದೇ ಆದ ಒಂದು ರಾಷ್ಟ್ರಭಾಷೆಯನ್ನು ಆರಿಸಿಕೊಳ್ಳುತ್ತಿತ್ತು. ಆ ಭಾಷೆ ಸಂಸ್ಕೃತವೆ ಆಗಿರಬಹುದಾಗಿತ್ತು.

ಸರಿ! ಈಗ ಭಾರತವು ಸ್ವತಂತ್ರವಾಗಿದೆ. ಹಳೆಯ ಗುಲಾಮಗಿರಿಯನ್ನು ಮರಳಿ ಮರಳಿ ನೆನಪಿಗೆ ತಂದುಕೊಡುವಂತಹ ಸ್ಮಾರಕವೆನಿಸಿದೆ—ಈಗಲೂ ಇಂಗ್ಲಿಷನ್ನು ಆಡಳಿತದ ಭಾಷೆಯೆಂದು ಒಪ್ಪುವುದು! ಯಾವ ದೇಶಾಭಿಮಾನಿಯೂ ಈ ಮಾತಿಗೆ ಒಪ್ಪಿಗೆ ಕೊಡಲಾರನು. ಇನ್ನೂ ಒಂದು ಸಂಗತಿಯೆಂದರೆ, ಇಂಗ್ಲಿಷ್ ಭಾಷೆ ನಮ್ಮಲ್ಲಿ ಬಹುಸಂಖ್ಯಾಕ ಜನತೆಯ ಜೀವನದಿಂದ ದೂರವಾಗಿಯೆ ಉಳಿದಿದೆ. ಇಂಗ್ಲಿಷ್ ಭಾಷೆಯ ಮಹತ್ತ್ವವೇ ಅವರಿಗೆ ಗೊತ್ತಿರದುದರಿಂದ, ಆ ಭಾಷೆಯ ವಿಷಯದಲ್ಲಿ ಆತ್ಮೀಯತೆಯನ್ನು ತೋರಿಸುವುದು ಶಕ್ಯವೇ ಇಲ್ಲ. ಆದುದರಿಂದ ಇನ್ನು ಮೇಲೆ ಇಂಗ್ಲಿಷು ಭಾರತದಲ್ಲಿ ಆಡಳಿತದ ಭಾಷೆಯ ಸ್ಥಾನ-ಮಾನಗಳನ್ನೆಂದೂ ಪಡೆಯಲಾರದು.

ಇನ್ನು ಹಿಂದಿಯನ್ನು ರಾಷ್ಟ್ರದ ಆಡಳಿತದ ಭಾಷೆಯನ್ನಾಗಿ ಮಾಡಬೇಕೆಂಬ ಪ್ರಯತ್ನ ಸ್ವಾತಂತ್ರ್ಯಪೂರ್ವಕಾಲದಿಂದಲೂ ಭಾರತದಲ್ಲಿ ನಡೆಯುತ್ತ ಬಂದಿದೆ. ಭಾರತದ ರಾಷ್ಟ್ರಸಭೆಯಂತೂ ಹಿಂದಿಯೇ ರಾಷ್ಟ್ರಭಾಷೆಯಾಗಬೇಕೆಂದು ಸಾರಿತು. ದೇಶದ ಮುಂದಾಳುಗಳೆಲ್ಲರ ಬೆಂಬಲವೂ ಅದಕ್ಕೆ ದೊರೆಯಿತು. ಸ್ವಾತಂತ್ರ್ಯೋತ್ತರ ಕಾಲದಲ್ಲಿ ರಾಷ್ಟ್ರದ ಅಧಿಸತ್ತೆಯೂ ಪೂರ್ತಿಯಾಗಿ ಕಾಂಗ್ರೆಸ್ಸಿಗರ ಕೈಗೆ ದೊರೆತುದರಿಂದ, ಹಿಂದೀಭಾಷೆಗೆ ರಾಷ್ಟ್ರಭಾಷೆಯ ಪಟ್ಟ ಸಿಕ್ಕೇಬಿಟ್ಟಿತು. ಅಂತರರಾಜ್ಯಗಳ ವ್ಯವಹಾರಕ್ಕಾಗಿ ಯಾವುದಾದರೊಂದು ಸಾಮಾನ್ಯ ಭಾಷೆ ಇರಬೇಕಾದ ಅಗತ್ಯವಿದ್ದರಿಂದ, ಬಹುಜನರು ಹಿಂದೀಭಾಷೆಯೇ ಇರಬಹುದೆಂದು ಒಪ್ಪಿಕೊಂಡುಬಿಟ್ಟರು.

ಬಹುಸಂಖ್ಯಾಕ ಭಾರತೀಯರಿಗೆ ಪರಿಚಿತವಿರುವುದೆಂಬ ಗುಣವೊಂದನ್ನು ಬಿಟ್ಟರೆ, ಹಿಂದೀಭಾಷೆಗೆ ರಾಷ್ಟ್ರಭಾಷೆಯ ಸ್ಥಾನ-ಮಾನಗಳನ್ನು ಪಡೆಯಬಹುದಾದಂತಹ ಗುಣ-ಗಾಂಭೀರ್ಯಗಳಾವುವೂ ಇಲ್ಲ. ಮೊದಲನೆಯದಾಗಿ ಹಿಂದೀ ಭಾಷೆಯಲ್ಲಿ ಅಸಂಖ್ಯ ದೇಶಿಗಳು ಪ್ರಚಾರದಲ್ಲಿದ್ದು, ಅದು ಒಂದೆ ಒಂದಾದ ಮಾರ್ಗ ಪದ್ಧತಿಯಲ್ಲಿ ನಡೆಯುತ್ತಿಲ್ಲ. ಎರಡನೆಯದಾಗಿ ಅದಕ್ಕೆ ಪ್ರಾಚೀನ-ಅರ್ವಾಚೀನ ವಾಙ್ಮಯಸಮೃದ್ಧಿಯಿಲ್ಲ. ಪ್ರಾಚೀನತೆಯ ಸತ್ತ್ವ-ಸಾಮರ್ಥ್ಯಗಳ ದೃಷ್ಟಿಯಿಂದ ನೋಡಿದರೆ, ನಮ್ಮ ದಕ್ಷಿಣ ಭಾರತದಲ್ಲಿ ಪ್ರಚಾರದಲ್ಲಿರುವ ಯಾವ ಪ್ರಮುಖ ಭಾಷೆಯನ್ನೂ ಹಿಂದಿಯು ಸರಿಗಟ್ಟಿ ನಿಲ್ಲಲಾರದು. ಜ್ಞಾನ-ವಿಜ್ಞಾನಪ್ರಪಂಚಕ್ಕೆ ಸೇರಿದ ಹಿಂದೀ ಭಾಷೆಯವೇ ಆದ ಪರಿಭಾಷಾ ಪದಗಳಾವುವೂ ಸಿಕ್ಕುವುದಿಲ್ಲ. ಇಷ್ಟೇ ಅಲ್ಲ, ಜಗನ್ಮಾನ್ಯವೆನಿಸುವಂತಹ ಸ್ವತಂತ್ರಗ್ರಂಥಗಳ ನಿರ್ಮಿತಿಯೂ ಹಿಂದಿಯಲ್ಲಿ ತೀರ ಕಡಿಮೆಯಾಗಿದೆ. ಆದರೂ ಆಡಳಿತದ ವ್ಯವಹಾರವನ್ನು ಸಾಗಿಸುವ ಲೌಕಿಕ ರಾಷ್ಟ್ರಭಾಷೆಯನ್ನಾಗಿ—ಕೆಲವೊಂದು ವಿಶಿಷ್ಟ ಕಾರಣಗಳ ಮೂಲಕ—ನಾವು ಅದನ್ನು ಒಪ್ಪಿಕೊಳ್ಳಬಹುದಿಷ್ಟೆ! ಹಾಗೆಒಪ್ಪಿಕೊಂಡೂ ಆಗಿದೆ. ಆದರೆ ಸ್ಥಾನವಲ್ಲದ ಸ್ಥಾನದಲ್ಲಿಯೂ ಹಿಂದೀಭಾಷೆಗೆ ಸಾಮ್ರಾಜ್ಯ ಪಟ್ಟವನ್ನು ಕಟ್ಟಲು ಹೊರಟಿರುವ ಭಾರತದ ಬೇರೆ ಬೇರೆ ಸರಕಾರಗಳ ಹವಣಿಕೆಗಳು, ತೀರ ಅನುಚಿತವಾಗಿವೆಯೆಂಬುದನ್ನು ಸ್ಪಷ್ಟವಾಗಿ ಹೇಳದೆ ಗತ್ಯಂತರವಿಲ್ಲವಾಗಿದೆ.

ಎಲ್ಲ ರಾಜ್ಯಗಳಲ್ಲಿಯೂ ಮಾಧ್ಯಮಿಕ ಮತ್ತು ಉಚ್ಚ ಶಿಕ್ಷಣದ ಮಾಧ್ಯಮಭಾಷೆಯು ಹಿಂದಿಯೇ ಆಗಬೇಕೆಂದು ಅಲ್ಲಲ್ಲಿಯ ಸರಕಾರಗಳು ನಡೆಯಿಸಿದ ಪ್ರಯತ್ನಗಳೆಂದರೆ, ಹೊಲಬು ತಪ್ಪಿದ ದುಡುಕಿನ ನಡೆಗಳಾಗಿವೆ. ಹಿಂದಿಗಿಂತಲೂ ಹೆಚ್ಚಿನ ಮಟ್ಟದುವಾಗಿ ಅನೇಕ ಪ್ರಾದೇಶಿಕ ಭಾಷೆಗಳಿರುವಾಗ, ಅವುಗಳನ್ನು ಹಿಂದಕ್ಕೆ ದಬ್ಬಿ, ಹಿಂದಿಯನ್ನು ಶಿಕ್ಷಣಮಾಧ್ಯಮವನ್ನಾಗಿ ಮಾಡುವುದರಿಂದ ಯಾವ ಪುರುಷಾರ್ಥವನ್ನು ಸಾಧಿಸಬಹುದು? ಬಹುಸಂಖ್ಯಾಕ ಜನತೆಯೂ ದೇಶದ ವಿಚಾರಿಗಳೂ ಈ ಅಸ್ವಾಭಾವಿಕವಾದ ಶಿಕ್ಷಣಮಾಧ್ಯಮವನ್ನು ಎಂದೂ ಒಪ್ಪಲಾರರು.

ಹಿಂದೀಭಾಷೆಯನ್ನು ರಾಷ್ಟ್ರಭಾಷೆಯೆಂದು ತಿಳಿದು, ಅದನ್ನು ಎಲ್ಲರೂ ಕಲಿಯುವಂತೆ, ಶಿಕ್ಷಣದಲ್ಲಿ ಅದನ್ನೊಂದು ಒತ್ತಾಯದ ವಿಷಯವನ್ನು ಮಾಡಲಿ; ಈ ಕ್ರಮವನ್ನು ಬಹುಜನರು ಅವಿರೋಧವಾಗಿ ಪುರಸ್ಕರಿಸಲೂಬಹುದು. ಏಕೆಂದರೆ ಅಂತರ ರಾಜ್ಯಗಳೊಡನೆ ವ್ಯವಹರಿಸುವುದಕ್ಕಾಗಿ, ಹಿಂದಿಯ ಅಗತ್ಯವಿದ್ದೇ ಇರುವುದು. ಪ್ರಾದೇಶಿಕ ಭಾಷೆಗಳ ಮೇಲೆ ಅಭಿಯೋಗವನ್ನು ಮಾಡದಂತಹ ಸ್ಥಾನದಲ್ಲಿರಿಸಿ, ಹಿಂದೀ ಭಾಷೆಯನ್ನು ಬೆಳೆಯಿಸುತ್ತಿರುವುದರಲ್ಲಿಯೇ ಅದಕ್ಕೂ ಕ್ಷೇಮವಿದೆ; ಪ್ರಾದೇಶಿಕ-ಭಾಷೆಗಳ ಅಭಿವೃದ್ಧಿಗೂ ಅವಕಾಶವಿದೆ. ಇದನ್ನು ಬಿಟ್ಟು ಅಧಿಕಾರದರ್ಪದಿಂದ—ಅತಾತ್ತ್ವಿಕವಾಗಿ—ಹಿಂದೀಭಾಷೆಯನ್ನು ಶಿಕ್ಷಣಮಾಧ್ಯಮವನ್ನಾಗಿ ಮಾಡಿಯೇ ತೀರುವೆವೆಂದು ಹೊರಟರೆ, ಇಲ್ಲದ ಗೊಂದಲವನ್ನು ಎಬ್ಬಿಸಿದಂತೆ ಆಗುವುದಲ್ಲದೆ ಇನ್ನೇನೂ ಇಲ್ಲ.

ಜಯಂತಿಗೆ ಸಹಾಯಧನ

ಜಯಂತಿಯ ಸಾಂಸ್ಕೃತಿಕ ಕಾರ್ಯದ ಮಹತ್ತ್ವವನ್ನೂ ಸದ್ಯ ಅದು ಪಡುತ್ತಿರುವ ಆರ್ಥಿಕಸಂಕಷ್ಟವನ್ನೂ ಮನದಂದು, ಜಯಂತಿಯ ಹಿತಚಿಂತಕರಾದ ಶ್ರೀಮಾನ್ ಆರ್. ಜಿ. ದೇಶಪಾಂಡೆ ಎಂ.ಎ. ಧಾರವಾಡ ಅವರು ೨೦ ರೂಪಾಯಿಗಳನ್ನೂ, ಪ್ರೊ. ರಂ.ಶ್ರೀ. ಮುಗಳಿ ಎಂ. ಎ., ಬಿ. ಟಿ. ಸಾಂಗಲಿ ಅವರು ೧೦ ರೂಪಾಯಿಗಳನ್ನೂ ಸಹಾಯಧನವೆಂದು ಸಲ್ಲಿಸಿದ್ದಾರೆ. ಅವರ ಸಹಕಾರ ಸಹಾನುಭೂತಿಗಳಿಗಾಗಿ ಕೃತಜ್ಞತೆಯ ವಂದನೆಗಳು.

ನಾಡಿನ ಬೇರೆ ಉದಾರಮತಿಗಳೂ ಜಯಂತಿಗೆ ಸಹಾಯ ಸಹಕಾರಗಳನ್ನು ಸಲ್ಲಿಸುತ್ತ ಹೋದರೆ, ಅದರ ಕಾರ್ಯಕ್ಷೇತ್ರ ಬೆಳೆದೀತು. ಅದರಿಂದ ನಾಡಿನ ಸಂಸ್ಕೃತಿಪ್ರಚಾರಕ್ಕೆ ಅನುಕೂಲವಾದೀತು.

—**ಸಂಪಾದಕರು**

ನಾಡನಡೆ

'ಪ್ರಪಂಚ'ಕ್ಕೆ ಸುಸ್ವಾಗತಂ!

ಒಂದು ಕಾಲದಲ್ಲಿ ಕನ್ನಡ ಪತ್ರಿಕೆಗಳಿಗೇ ಬರಗಾಲವಿತ್ತು. ಇಂದು ಎಣಿಕೆಗೆ ಹತ್ತರಷ್ಟು ಕನ್ನಡ ಪತ್ರಿಕೆಗಳು ಹೊರಡುತ್ತಲಿವೆ-ಯಾದರೂ, ಉಚಿತವಾದ ಗುರಿಯನ್ನಿರಿಸಿಕೊಂಡು ಕಾರ್ಯ ಮಾಡುವ ಪತ್ರಿಕೆಗಳಿಗೆ ಬರಗಾಲವಿದೆ.

ಪತ್ರಿಕಾ ಪ್ರಕಟನೆಯು ಒಂದು ವ್ಯವಸಾಯವೆನಿಸಿದರೂ, ಅದು ಕೇವಲ ಆರ್ಥಿಕ ವ್ಯವಹಾರದ ಕಡೆಗೇ ದೃಷ್ಟಿಯಿರಿಸಿಕೊಂಡು ಹೊರಟರೆ, ಪತ್ರಿಕಾವ್ಯವಸಾಯದ ಮುಖ್ಯೋದ್ದೇಶವು ಎಂದೂ ಸಾಧಿಸದು. ಪತ್ರಿಕೆಯ ಸಂಪಾದಕನೆಂದರೆ ಸಮಾಜಕ್ಕೆ ಸಾಂಸ್ಕೃತಿಕ ಶಿಕ್ಷಕನಿದ್ದಂತೆ. ಒಂದೊಂದು ಪತ್ರಿಕೆಯೂ ಒಂದೊಂದು ಸಾಮಾಜಿಕ ವಿಶ್ವವಿದ್ಯಾನಿಲಯವಾಗಿ ಕಾರ್ಯ ಮಾಡುತ್ತಿರಬೇಕು.

ಕೇವಲ ದೇಶ-ವಿದೇಶದ ವರ್ತಮಾನಗಳನ್ನು ಹರಡುವುದಷ್ಟೇ ಪತ್ರಿಕೆಯ ಕಾರ್ಯವಲ್ಲ. ಜೀವನದ ಸರ್ವತೋಮುಖವಾದ ವಿಷಯಗಳನ್ನೂ ಪರಿಚಯ ಮಾಡಿಕೊಟ್ಟು, ನಾಡಿನ ಜನತೆಯನ್ನು ನಿಜವಾದ ನಾಗರಿಕರನ್ನಾಗಿ ಅಣಿಗೊಳಿಸುವುದು ಪತ್ರಿಕೆಗಳ ಮುಖ್ಯ ಕರ್ತವ್ಯವಾಗಿದೆ.

ಆದುದರಿಂದಲೇ ಪತ್ರಿಕಾ ಸಂಪಾದಕನಾಗಲು ಬಯಸುವವನು ಮೊದಲು ಆ ಬಗೆಯ ಅಧಿಕಾರವನ್ನು ತಂದುಕೊಂಡು, ಪತ್ರಿಕಾ ವ್ಯವಸಾಯದಲ್ಲಿ ಕಾಲಿರಿಸಬೇಕು. ಅನಧಿಕಾರಿಗಳಾದ ಸಂಪಾದಕರ ವೃತ್ತಪತ್ರಿಕೆಗಳಿಂದ ಜನತೆಗೆ ಯಾವ ಪ್ರಯೋಜನವೂ ಸಿಕ್ಕಲಾರದು. ಕೇವಲ ಹಣವನ್ನು ಸಂಪಾದಿಸುವ ಉದ್ದೇಶದಿಂದ ಹೊರಟ ಸಂಪಾದಕರಂತೂ, ಜನಸಾಮಾನ್ಯರ ಮನಸ್ಸಿನ ಅಶಕ್ತತೆಗಳೊಂದಿಗೆ ಆಟ ನಡೆಯಿಸಿ, ದುರಭಿರುಚಿಪ್ರಚೋದಕ ಲೇಖನಗಳನ್ನು ಬರೆದು, ದೇಶದಲ್ಲಿ ಅನಾಗರಿಕತೆ-ಅಸಂಸ್ಕೃತಿಗಳು ಬೆಳೆಯುವುದಕ್ಕೆ ಕಾರಣರಾಗಿ ನಿಲ್ಲುವರು.

ನಮ್ಮಲ್ಲಿಯ ಇಂದಿನ ವಾರ-ಮಾಸಪತ್ರಿಕೆಗಳಲ್ಲಿ ಬಹುಸಂಖ್ಯೆಯವು, ಸರಿಯಾದ ಧ್ಯೇಯ-ಧೋರಣಗಳು ಇಲ್ಲದುವೇ ಆಗಿರುವುವು. ಇಂತಹ ದುಷ್ಕಾಲದಲ್ಲಿ, ಸಂಪಾದಕತ್ವಕ್ಕೆ ಬೇಕಾಗುವ ಎಲ್ಲ ಬಗೆಯ ಅಧಿಕಾರಗಳನ್ನೂ ಹೊಂದಿದವರಾಗಿ ಶ್ರೀಮಾನ್ ಪಾಟೀಲ ಪುಟ್ಟಪ್ಪನವರು, ಕನ್ನಡ ನಾಡಿಗೆ 'ಪ್ರಪಂಚ' ದರ್ಶನ ಮಾಡಿಸಲು ಮುಂದೆ ಬಂದುದು ಸಂತೋಷದ ಸಂಗತಿಯಾಗಿದೆ.

ಶ್ರೀ. ಪಾಟೀಲ ಪುಟ್ಟಪ್ಪನವರು ಮೂಲತಃ ಸಾಹಿತ್ಯಿಕರು; ಕಾನೂನಿನ ಪದವಿಯನ್ನು ಪಡೆದುಕೊಂಡು, ಸಾಮಾಜಿಕ-ರಾಜಕೀಯ ವ್ಯವಹಾರ-ಸಮಸ್ಯೆಗಳ ಪರಿಚಯವನ್ನೂ ಮಾಡಿಕೊಂಡವರು. ಅಮೇರಿಕೆಗೆ ಹೋಗಿ ವೃತ್ತಪತ್ರ ಕಲೆಯನ್ನೇ ಅಭ್ಯಾಸ ಮಾಡಿ ಪದವಿಯನ್ನು ಸಂಪಾದಿಸಿಕೊಂಡು ಬಂದವರು. ಇಂತಹರು ಹೊರಡಿಸಿದ 'ಪ್ರಪಂಚ' ವಾರಪತ್ರಿಕೆಯು, ಪ್ರಯೋಜನಕಾರಿಯಾಗದೆ ಹೋಗದೆಂದು ಯಾರೂ ನಿರೀಕ್ಷಿಸಬಹುದು.

ಈಗಾಗಲೇ ಪ್ರಕಟವಾಗಿರುವ ನಾಲ್ಕು ಸಂಚಿಕೆಗಳನ್ನು ನೋಡಿದರೆ, ಅವುಗಳಲ್ಲಿರುವ ವಿಷಯವೈವಿಧ್ಯವೂ ಸಂಪಾದನೆಯ ಕ್ರಮವೂ ಆಶಾದಾಯಕವೆನಿಸುಸುವಂತಿವೆ. ಪತ್ರಿಕೆಗೆ ಭವ್ಯತೆಯೂ ಇದೆ; ಸೌಂದರ್ಯವೂ ಇದೆ. 'ಈ ಬಗೆಯ ವಾರಪತ್ರಿಕೆಯು ಕನ್ನಡ ನಾಡಿನಲ್ಲಿ ಇದೊಂದೇ!' ಎಂದು ಜನರಾಡುವ ಮಾತು ಹುರುಳಿಲ್ಲದುದೇನೂ ಅಲ್ಲ.

'ಪ್ರಪಂಚ' ಪತ್ರಿಕೆಯು ಬಹುಕಾಲ ಬಾಳಿ, ಕನ್ನಡಿಗರ ನಾಗರಿಕ ಜೀವನ ಸಂವರ್ಧನೆಗೆ ಕಾರಣವಾಗಲಿ!

ರಾಜಧಾನಿಯಲ್ಲಿ ಕನ್ನಡದ ಬಾವುಟ

ಇದೇ ತಿಂಗಳ ಎರಡನೆಯ ವಾರದ ಕೊನೆಯ ದಿನಗಳಲ್ಲಿ ರಾಜಧಾನಿ ದಿಲ್ಲಿಯಲ್ಲಿ, ಕನ್ನಡ ಸಾಂಸ್ಕೃತಿಕ ಮಹೋತ್ಸವವು ನಡೆಯಲಿದೆ. ಅದಕ್ಕಾಗಿ ಬೇರೆ ಬೇರೆ ಕಡೆಯಿಂದ ಕನ್ನಡದ ಅಭಿಜ್ಞರು ದಿಲ್ಲಿಗೆ ಹೋಗಲಿದ್ದಾರೆ. ಕನ್ನಡಿಗರಿಗೆ ಇದೊಂದು ಸಂತೋಷದ ಸಂಗತಿಯೇ ಆಗಿದೆ.

ಕಾರ್ಯಾಂತರದಿಂದ ಹೊರನಾಡುಗಳಿಗೆ ಹೋಗುತ್ತಿದ್ದ ಕನ್ನಡಿಗರು ಕನ್ನಡಿಗರಾಗಿ ಉಳಿಯದಂತಹ ಕಾಲವೂ ಒಂದಿತ್ತು. ಇಂತಹ ಕಾಲದಲ್ಲಿ ಅನೇಕ ವಿದ್ಯಾವಂತರ ಕುಟುಂಬಗಳಿಗೆ ಕರ್ನಾಟಕವು ಎರವಾಗಬೇಕಾಯಿತು. ಹೊರನಾಡುಗಳಿಗೆ ಹೋದ ಕನ್ನಡಿಗರಲ್ಲಿ ಸರಿಯಾದ ಸಂಘಟನೆಯಿರುತ್ತಿರಲಿಲ್ಲವಾದುದರಿಂದ, ಅವರು ಇನ್ನೊಂದು ಭಾಷೆಯವರೊಂದಿಗೆ ಸಮರಸರಾಗಿ, ತಾವು ಕನ್ನಡಿಗರೆಂದು ಹೇಳಿಕೊಳ್ಳಲಿಕ್ಕೂ ಹಿಂಜರಿಯುತ್ತಿದ್ದರು. ಇಂತಹ ಕಾಲದಲ್ಲಿ ಹೊರನಾಡಿನ ಜನರಿಗೆ ಕರ್ನಾಟಕದ ಸಾಹಿತ್ಯ-ಸಂಸ್ಕೃತಿಗಳ ಅಸ್ತಿತ್ವದ ಕಲ್ಪನೆಯಾದರೂ ಹೇಗೆ ಆಗಬೇಕು? ಎಂತಲೇ ಕರ್ನಾಟಕದ ಅನೇಕ ವಿದ್ಯಾವಂತರು, ಕಲಾವಿದರು, ರಾಜಕಾರಣಿಗಳು ಅನ್ಯಪ್ರಾಂತಗಳವರೆಂದು ಪ್ರಸಿದ್ಧಿ ಪಡೆದರು. ದೂರದ ಮಾತಲ್ಲ; ಇತ್ತೀಚಿಗಿನದೊಂದು ಘಟನೆ: ಮಹಾರಾಷ್ಟ್ರದ ಸುಪ್ರಸಿದ್ಧ ಮಾಸಪತ್ರಿಕೆಯೊಂದು, ದಿಲ್ಲಿಯಲ್ಲಿರುವ ಸುಪ್ರಸಿದ್ಧ ಮಹಾರಾಷ್ಟ್ರೀಯರ ಪರಿಚಯ ಮಾಡಿಕೊಡುವಾಗ, ಮಾನ್ಯ ದಿವಾಕರ ಮತ್ತು ಮಾನ್ಯ ಕರಮರಕರರೂ ಮಹಾರಾಷ್ಟ್ರಿಯರೆಂದು ಸಚಿತ್ರವಾಗಿ ಪರಿಚಯ ಮಾಡಿಕೊಟ್ಟಿತು. ಅದರ ತಪ್ಪು ತಿಳಿವಳಿಕೆಯನ್ನು ಯಾರೂ ತಿದ್ದಿದಂತೆ ಕಾಣಲಿಲ್ಲ.

ಈಗ ಕಾಲವು ಬದಲಾಗಿದೆ. ಜಾಗೃತ ಕರ್ನಾಟಕದಿಂದ ಹೊರನಾಡುಗಳಿಗೆ ಹೋದ ಕನ್ನಡ ತರುಣರು ಅಲ್ಲಲ್ಲಿ ಇದ್ದುಕೊಂಡು, ಕನ್ನಡಾಭಿಮಾನದ ನಂದಾದೀಪವನ್ನು ಬೆಳಗಿಸುತ್ತಲಿದ್ದಾರೆ. ಈ

ತರುಣರೇ ಅಲ್ಲಲ್ಲಿ ಕನ್ನಡ ಹಿರಿಯರನ್ನೂ ಎಚ್ಚರಿಸಿ, ಹೊರ-ನಾಡುಗಳಲ್ಲಿಯೂ ಕರ್ನಾಟಕದ ಘನತೆಯನ್ನು ಮೆರೆಯಿಸುವ ಕಾರ್ಯವನ್ನು ನಡೆಸಿದ್ದಾರೆ. ದಿಲ್ಲಿಯಲ್ಲಿ ನಡೆಯಲಿರುವ ಸಾಂಸ್ಕೃತಿಕ ಮಹೋತ್ಸವವೂ ಅವರ ಈ ಕಾರ್ಯಗಳಲ್ಲೊಂದು. ದಿಲ್ಲಿಯಲ್ಲಿರುವ ಎಲ್ಲ ಹಿರಿಯ ಕನ್ನಡಿಗರೂ ತರುಣರ ಈ ಸಾಂಸ್ಕೃತಿಕ ಚಟುವಟಿಕೆಗೆ ಬೆಂಬಲರಾಗಿ ನಿಂತುದು ಆನಂದದ ಸಂಗತಿ.

ರಾಜಧಾನಿಯಲ್ಲಿ ನಡೆಯಲಿರುವ ಈ ಸಾಂಸ್ಕೃತಿಕ ಮಹೋತ್ಸವದಲ್ಲಿ ಒಳ್ಳೊಳ್ಳೆಯ ಜನರು ಭಾಗವಹಿಸಿ, ಕರ್ನಾಟಕದ ಸರ್ವತೋಮುಖ ಸಂಸ್ಕೃತಿಯ ಪರಿಚಯವನ್ನು ಅಲ್ಲಿಯವರಿಗೆ ಮಾಡಿಕೊಡಬೇಕು. ವೈಯಕ್ತಿಕ ಮತಭೇದ, ಜಾತಿ-ಪಂಗಡಗಳ ಕಲಹ, ರಾಜಕೀಯ ಪಕ್ಷ-ಪಕ್ಷಗಳ ಕೋಳಿ—ಇವಾವುವೂ ಅಲ್ಲಿಯ ಕಾರ್ಯಕಲಾಪಗಳಿಗೆ ತಗಲದಿರಬೇಕು. ಎಲ್ಲೆಲ್ಲಿಯೂ ಎಲ್ಲರ ಬಾಯಲ್ಲಿಯೂ ಕರ್ನಾಟಕ ಸಂಸ್ಕೃತಿಯ ಮಹತಿಯ ಕೊಂಡಾಟ ನಡೆಯಬೇಕು.

ಫ್ರೆಂಚ್ ಭಾರತದ ಸ್ವಾತಂತ್ರ್ಯ ಸಂಗ್ರಾಮ

ಭಾರತಕ್ಕೆ ಸ್ವಾತಂತ್ರ್ಯ ದೊರೆತು ಏಳು ವರ್ಷಗಳಾಗಿ ಹೋದರೂ, ಅದರವೇ ಉಪಾಂಗಗಳಾದ ಫ್ರೆಂಚ್ ಭಾರತ ಪ್ರದೇಶಗಳೂ ಪೋರ್ತುಗೀಜ್ ಭಾರತ ಪ್ರದೇಶಗಳೂ ಇದುವರೆಗೂ ಪಾರತಂತ್ರ್ಯದ ಬೆಂಕಿಯಲ್ಲಿಯೆ ಬೇಯುತ್ತಲಿವೆ. ಅಲ್ಲಿಯ ಜನತೆ ಒಕ್ಕೊರಲಿನಿಂದ ಭಾರತದೊಂದಿಗೆ ಹೊಂದಿಕೊಳ್ಳುವೆವೆಂದು ಕೂಗಿಕೊಳ್ಳುತ್ತಲಿದ್ದರೂ, ಫ್ರೆಂಚ್-ಪೋರ್ತುಗೀಜರ ಸಾಮ್ರಾಜ್ಯಲೋಭವು ಇದುವರೆಗೂ ಅವರನ್ನು ಬಿಡುಗಡೆಗೊಳಿಸಲೊಲ್ಲದಾಗಿದೆ. ಫ್ರೆಂಚ್‌ಪ್ರಭುತ್ವವು ತನ್ನ ಪ್ರದೇಶದ ಜನತೆಯಲ್ಲಿ ಬುದ್ಧಿಭೇದವನ್ನು ಹುಟ್ಟಿಸಲು ಹಲವಾರು ಪ್ರಯತ್ನಗಳನ್ನು ಮಾಡಿತು. ಆ ಪ್ರಯತ್ನಗಳಿಂದಲೇ ಈ ಏಳು ವರ್ಷಗಳನ್ನು ಹೇಗೋ ಹೆಗೋ ಕಳೆಯಿತು. ಆದರೆ ಆ ಬಗೆಯ ಬುದ್ಧಿಭೇದದ ಪ್ರಯತ್ನವೀಗ ಪೂರ್ಣವಾಗಿ ಕುಂಠಿತವಾಗಿದೆ. ಫ್ರೆಂಚ್‌ಭಾರತದ ಎಲ್ಲ ಜನರಲ್ಲಿಯೂ ಸ್ವಾತಂತ್ರ್ಯ ಜಾಗೃತಿ ಮೂಡಿನಿಂತಿದೆ. ಶಾಸನಬದ್ಧವಾದ ದಾರಿಯಿಂದ ಫ್ರೆಂಚ್ ಪ್ರಭುತ್ವದೊಂದಿಗೆ ನಡೆದು ನೋಡಿ, ಗುರಿಯನ್ನು ಕಾಣುವ ವಿಷಯದಲ್ಲಿ ನಿರಾಶರಾಗಿ, ಅಲ್ಲಿಯ ಜನರು ಈಗ ಕ್ರಾಂತಿಯ ದಾರಿಯನ್ನೇ ಕೈಕೊಂಡಿರುವರು. ಮಹಾತ್ಮರ ನಿಶ್ಶಸ್ತ್ರಸಮರದ ಮಾರ್ಗವನ್ನು ಅವರೂ ಮನವರಿಕೆ ಮಾಡಿಕೊಂಡು, ಫ್ರೆಂಚ್ ಪ್ರಭುತ್ವದೊಂದಿಗೆ ಸಾಮಾಜಿಕ ಯುದ್ಧವನ್ನು ಪ್ರಾರಂಭಿಸಿ, ಈಗಾಗಲೇ ಹಲವಾರು ಹಳ್ಳಿಗಳನ್ನು ಫ್ರೆಂಚ್‌ಪ್ರಭುತ್ವದ ದಾಸ್ಯದಿಂದ ವಿಮೋಚನೆಗೊಳಿಸಿದ್ದಾರೆ.

ಸದ್ಯದ ಫ್ರೆಂಚ್‌ರಾಜಕೀಯ ವ್ಯವಸ್ಥೆಯನ್ನು ನಿರೀಕ್ಷಿಸಿದರೆ, ಫ್ರೆಂಚ್ ಭಾರತದ ಪ್ರದೇಶವನ್ನು ಸ್ವಾಧೀನದಲ್ಲಿ ಇರಿಸಿಕೊಂಡೇ ತೀರಬೇಕೆನ್ನುವಂತಹ ಪರಿಸ್ಥಿತಿಯು ಅಲ್ಲಿ ಇಲ್ಲ. ಇಂಗ್ಲೀಷರು ವಿಶಾಲಭಾರತವನ್ನೇ ಬಿಟ್ಟುಹೋಗುವ ಜಾಣತನವನ್ನು ತೋರಿಸಿರುವಾಗ ಈ ಭಾರತದ ಶಕಲಗಳನ್ನು ತಮ್ಮ ಕಡೆಗೆ ಇರಿಸಿಕೊಂಡೇ ತೀರಬೇಕೆನ್ನುವ ಮೂರ್ಖತನಕ್ಕೆ ಫ್ರೆಂಚರು ಏಕೆ ಸಿದ್ಧರಾಗಬೇಕು? ಇದರ ಹಿಂದೆ ರಾಜಕೀಯ ಕುತಂತ್ರವೇನೋ ಇದ್ದಂತೆ ತೋರುವುದು. ಫ್ರೆಂಚ್‌ರಿಗಿಂತಲೂ ಹೆಚ್ಚಾಗಿ ಇನ್ನಾವ ಕುಟಿಲರಾಜಕಾರಣಗಳೋ ಫ್ರೆಂಚ್‌ರು ತಮ್ಮ ಆಧೀನದಲ್ಲಿರುವ ಭಾರತಪ್ರದೇವನ್ನು ಬಿಟ್ಟುಕೊಡಬಾರದೆಂದು ಪ್ರಚೋದಿಸುತ್ತಿರಬಹುದು. ಸದ್ಯದ ಫ್ರಾನ್ಸ್ ದೇಶವು ತನ್ನ ಸ್ವಂತದ ಶಕ್ತಿ-ಸತ್ತ್ವಗಳನ್ನು ಕಳೆದುಕೊಂಡು ಅಮೇರಿಕೆಯ ಆಟದ ಗೊಂಬೆಯಂತಾಗಿದೆ. ಅದು ಸೂತ್ರವಾಡಿಸಿದಂತೆ ಇದು ತನ್ನ ಕೈಕಾಲುಗಳನ್ನು ಆಡಿಸುತ್ತಿರುವುದು.

ಫ್ರೆಂಚ್‌ಭಾರತೀಯರ ಈ ಸ್ವಾತಂತ್ರ್ಯಯುದ್ಧದಲ್ಲಿ, ಭಾರತೀಯರಿಗೆ ವಿಜಯವು ಕಟ್ಟಿಟ್ಟಮಾತೇ ಆಗಿದೆ. ಶೇಖ್ ಅಬ್ದುಲ್ಲಾನ ಅವತಾರ ಮುಗಿಸಿ ಕಾಶ್ಮೀರದಲ್ಲಿ ನಿರಾಶೆಯ ಏಟನ್ನು ತಿಂದಂತೆ, ಈಗ ಫ್ರೆಂಚ್‌ಭಾರತದಲ್ಲಿ ಫ್ರೆಂಚ್‌ರ ಅವತಾರವನ್ನು ಮುಗಿಸಿ, ಅಮೇರಿಕೆಯು ಇಲ್ಲಿಯೂ ನಿರಾಶೆಯ ನಿಟ್ಟುಸಿರನ್ನು ಬಿಡಬೇಕಾಗುವುದು.

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

(ಸಂ: ಶ್ರೀ. ಪಿ. ವೆಂಕೋಬಾಚಾರ್ಯ) ಬಿ ಎ., ಬಿ. ಟಿ.

ಬೆಲೆ ಬಾಳುವ ಪುಸ್ತಕಗಳು ಕಡಿಮೆ ಬೆಲೆಗೆ

(೧೩-೮-೦) (೯-೮-೦)

೧	ಪೂರ್ಣಿಮಾ (ಸಂಸಾರ ಸುಖದ ಚಿತ್ರಗಳು)	೨-೪-೦
೨	ಮನೋರಾಜ್ಯ (ಮೂರಂಕದ ನಾಟಕ)	೨-೪-೦
೩	ಮೋಪಾಸನ ಓಲೆಗಳು (ಜೀವನ ಚರಿತ್ರೆ)	೨-೪-೦
೪	ರುಕ್ಮಿಣಿ, (ಕಾದಂಬರಿ)	೨-೦-೦
೫	ಮುಡಿಯದ ಹೂ (ಮೋಪಾಸಾನ ಕತೆಗಳು)	೧-೮-೦
೬	ಕಲ್ಪನಾ ವಿಲಾಸ (ಸಣ್ಣ ಕತೆಗಳು)	೧-೮-೦
೭	ಪ್ರವಾದಿ. (ಗಿಬ್ರಾನರ "ಪ್ರೊಫೆಟ್")	೨-೦-೦
		೧೩-೮-೦

ಈ ಮೇಲಿನ ಪುಸ್ತಕಗಳು ಕೇವಲ ೯-೮-೦ ಗೆ
ಅಂಚೆ ವೆಚ್ಚ ಸಹಿತ

ಒಳ್ಳೇ ಸುಸಂಧಿ. ಇಂದೇ ಬರೆಯಿರಿ.

೬೦೬೦ ಗೌಳೀಗಲ್ಲಿ **ಪಿ. ವಿ. ಆಚಾರ್ಯ & ಕಂ.**
ಹುಬ್ಬಳ್ಳಿ ಸಂಚಾಲಕರು: ಆನಂದ ಗ್ರಂಥಮಾಲಾ

ನಾರ್ಯಾನ ಕರಾಮತ್ತು

[ಒಂದು ಹುಚ್ಚಾಟ]*

ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ

—●—

ಪಾತ್ರಪರಿಚಯ

ತಿರಕಪ್ಪ	ತಂದೆ
ಪುಟ್ಟವ್ವ	ತಾಯಿ
ನಾರ್ಯಾ	ಮಗ
ಸುಲೂ	ನಾರ್ಯಾ ತಂದ ವಧು

[ತಿರಕಪ್ಪನ ಮನೆ. ಗೋಡೆಗೆ ಶ್ರೀರಾಘವೇಂದ್ರಸ್ವಾಮಿಗಳ ಪಟ ತೂಗು ಹಾಕಿದೆ. ಮಂಚದ ಮೇಲೆ ತಿರಕಪ್ಪ ಮಲಗಿದ್ದಾನೆ. ಅವನ ವಯಸ್ಸು ಸುಮಾರು ೫೭-೫೮. ಬಡಕಲು ದೇಹ. ಗೂರುಬೇನೆಯಿಂದ ಬಳಲುತ್ತಿರುವ. ಆಗಾಗ ದಮ್ಮು ಬಂದು ಕೆಮ್ಮುತ್ತಾನೆ.]

ತಿರಕಪ್ಪ :— ನಾರ್ಯಾ, ಏ ನಾರ್ಯಾ....(ಕೆಮ್ಮುತ್ತ, ಇನ್ನಷ್ಟು ದನಿ ಏರಿಸಿ) ಏಽಽ ನಾರ್ಯಾ, (ಮತ್ತೆ ಕೆಮ್ಮುತ್ತ, ಹೆಂಡತಿಯನ್ನು ಉದ್ದೇಶಿಸಿ) ಏನಽಽಽ ಏಽ....ಇದ್ದಾನೇನಽ ಅಂವ? ಅವನ ಧನಿ ಕೇಳಿಸಿ-ಧಾಂಗಾತ್ಯು! ಏಽಽ........

ಪುಟ್ಟವ್ವ :— (ಒಳಗಿಂದಲೆ) ಯಾಕ ಒದರಿಕೋತೀರಿ ಹಾಂಗ? ಏನು ಬೇಕಾಗೇದ? (ಹೊರಗೆ ಬಂದು ಮಂಚದ ಹತ್ತಿರ ನಿಲ್ಲುತ್ತಾಳೆ.)

ತಿರಕ :— ಸಾಯೋದು ಬೇಕಾಗೇದ! ನಾಽ ಅರೆ ಸಾಯ-ಬೇಕು,....ಇಲ್ಲ, ಅಂವಽ ಅರೆ ಸಾಯಬೇಕು!

ಪುಟ್ಟವ್ವ :— ಏನಾಗೇದೇನೀಗ? ನಾರ್ಯಾ ಯಾಕ ಬೇಕು?

ತಿರಕ :— ಅವರಪ್ಪ ಸತ್ತಾನಿಲ್ಲೆ. ಸುಡಗಾಡ ಕಾಣಿಸಬೇಕಾ-ಗೇದ! (ಕೆಮ್ಮುತ್ತ ಎದ್ದು ಕೂಡುತ್ತಾನೆ.)

ಪುಟ್ಟವ್ವ :— ಏನು ಅಮಂಗಳ ಮಾತಾಡ್ತೀರಿ? ದೀಪಾ ಹಚ್ಚೋ ವ್ಯಾಳ್ಯಾ ಆಗೇದ; ಮಾತಿಗೆ ಮಕಾಡಽ ಇಲ್ಲಲಾ!

ತಿರಕ :— ಮಸಡಿಗೆ ಕೊಟ್ಟೇನು—ಜಾಸ್ತೀ ಮಾತಾಡಿದರ! (ಮತ್ತೆ ಕೆಮ್ಮುತ್ತಾನೆ) ಎಲ್ಲಿಬ್ಬಾನವ?

ಪುಟ್ಟವ್ವ :— ಎಲ್ಲೆ ಹೋಗ್ತಾನ? ಇಲ್ಲೇ ಒಳಗಿದ್ದಾನ. (ನಾರ್ಯಾ ಹೊರಗೆ ಬರುತ್ತಾನೆ.) ಅಗಾ ಬಂದ ನೋಡ್ರಿ!

ನಾರ್ಯಾ :— (ಅಪ್ಪನ ಹತ್ತಿರ ನಿಲ್ಲುತ್ತಾನೆ) ಯಾಕಪಾ ಅಪ್ಪಾ?

ತಿರಕ :— (ಅಣಕಿಸಿ) ಯಾಕಪಾ ಅಪ್ಪಾ! ಮೂರು ದಿವಸಾತು ನಿನ್ನ ಮಾರೀ ನೋಡದ. ಎಲ್ಲೆ ಸೆಟದಿದ್ದಿ? ನೋಕರೀ ಖಟಪಿಟ ನೆವ ಮಾಡಿ, ಕಂಡವರಿಗೆ ಕಾಲು ಬೀಳೋದಾತ್ಯು! ಕಡೇಗೇನಾತ್ಯು?

ಪುಟ್ಟವ್ವ :— ಅಲ್ಲಾ, ನೋಕರೀ ಏನು ಇಂಗು-ಜೀರಿಗೀ ಹಾಂಗ ಇಟ್ಟು ಮಾರತಿರ್ತಾರಽ....ಕೇಳಿದ ಘಳಿಗ್ಗೆ ಕೊಟ್ಟುಬಿಡಲಿಕ್ಕೆ? ನಿಮ್ಮದೊಂದು ಮಾತಽ!

ತಿರಕ :— ಏಽಽ, ಅವನ್ನ ಕೇಳೋ ಮುಂದ ನೀ ನಡಮಽ ಒಟಗುಡಬ್ಯಾಡ! ಅವನ ಬಾಯಿಂದಽನಽ ಉಚ್ಚಾರಾಗಲಿ. ಯಾಕೋ? ಏನಾತ್ಯು?

ನಾರ್ಯಾ :— (ನಿರ್ಲಕ್ಷ್ಯದಿಂದ) ಏನೂ ಆಗೋಹಾಂಗಿಲ್ಲ.

ತಿರಕ :— (ಮತ್ತೆ ಅಣಕಿಸಿ) ಏನೂ ಆಗೋಹಾಂಗಿಲ್ಲ! ಏನಾಗ್ತಽದ ಹಂಗಾರ ನಿನ್ನ ಕಡಿಯಿಂದ, ಪಿಂಡಪ್ರದಾನ! ಆಗೋ-ದಿಲ್ಲ ಅಂದರೇನು ನಿಮ್ಮಪ್ಪನ ಹಿಂಡೇಕೂಳು? ಅಲ್ಲೋ, ಎಲ್ಲೆಲ್ಲೆ ಹೋಗಿದ್ದಿ? ಏನೇನಾತ್ಯು?

ನಾರ್ಯಾ :— (ಅಷ್ಟೇ ನಿರ್ಲಕ್ಷ್ಯದಿಂದ) ಆಗೋದೇನು, ಒಬ್ಬೊ-ಬ್ಬರು ಒಂದೊಂದು ರೀತೀ ಮಾತಾಡ್ತಾರಪಾ!

ತಿರಕ :— ಏನು, ಅಂದದ್ದಽರೆ ಏನು? ಒಬ್ಬಿಬ್ಬರು ಅಂದದ್ದಽರೆ ಬೊಗಳು!

ನಾರ್ಯಾ :— ಶಿಕ್ಷಣಖಾತೇದಾಗ ಶಿಕ್ಷಣೆಲ್ಲಾ ಅಂದರು!

ಪುಟ್ಟವ್ವ :— ಯಾರಿಗೆ? ನಿನಗ? ಅಯ್ ಸುಡ್ಲಿ! ಪಾಟಿ-ಯಿಂದ ಹಿಡಿದು ನಿನ್ನ ಪ್ಯಾಂಟಿನ ತನಕ, ಐದು ಸಾವಿರ ಅದಕ್ಕಽ ಬಡಿದೆವಲ್ಲೋ ಮ್ಹಾರಾಯಾ!

ತಿರಕ :— ಪಾಟಿ ಆತ್ಯು, ಪ್ಯಾಂಟ್ ಆತ್ಯು, ಇಂವ ಪಾಸಾ-ದದ್ದೇನು? (ನಾರ್ಯಾ ಹತ್ತಿರದಲ್ಲಿರುವ ಪೇಪರ್ ಓದುತ್ತ ನಿಲ್ಲುವನು.)

ಪುಟ್ಟವ್ವ :— ಅಯ್ಯ, ನಪಾಸಽರೇ ಆಗ್ಯಾನಲ್ಲ! ಎಷ್ಟೋ ಹುಡುಗರು ಆದಽರೆ ಎಲ್ಲೆ ಆಗಿರ್ತಾವ?

ತಿರಕ :— ನಿನ್ನ ತಲಿ! ಆಗೋ ಪರೀಕ್ಷಾ ಆದರೂ ಈ ಕಾಲದಾಗ ನೋಕರೀ ಸಿಗೋದು ಕಷ್ಟ!

ಪುಟ್ಟವ್ವ :— ಆಗೋ ಪರೀಕ್ಷಾ ಅಂವ ಆಗೇ ಬಿಟ್ಟಾನ. ಆಗದವು ಆಗು ಅಂದರ ಏನಾದಾನು? ಹನ್ನೊಂದರಾಗ ಹತ್ತಾದರ ಸಾಕಾಗಲಿಲ್ಲೇನು?

ತಿರಕ :— ಸಾಕಾಗಲಿಲ್ಲ! ಹನ್ನೊಂದೂ ಆಗಬೇಕು, ಹನ್ನೆ-ರಡೂ ಆಗಬೇಕು. ಅವು ಆದವ್ಯಾಲ ಸೀ ಮುಟ್ಟೋದು! ಇವು ಯಾವೂ ಆಗಲಿಲ್ಲ ಅಂದರ ಕಲಿತವರ ಮರಣ, ಕಲಿಸಿದವರ ತರ್ಪಣ!

ಪುಟ್ಟವ್ವ :— ನಿಮಗ ವಾಗತ್ಯ ಅಂಬೋದಿಲ್ಲೇ ಇಲ್ಲ! ಈಗ ಯಾರಿಗೇನು ಸಾಯೋ ಹೊತ್ತು ಬಂದಽದ?

ತಿರಕ :— ಬಂದಿಲ್ಲ, ಬರ್ತ್ಽದ.! ಆದಿರಲಿ. (ನಾರ್ಯಾನನ್ನು ಉದ್ದೇಶಿಸಿ) ಹಂ, ಮತ್ತ ಯಾರೇನಂದರೋ?

ನಾರ್ಯಾ :— (ಪೇಪರು ಓದುವುದನ್ನು ನಿಲ್ಲಿಸಿ. ತಂದೆಯ ಕಡೆಗೆ ದೃಷ್ಟಿಹೊರಳಿಸಿ) ಪಿ. ಡಬ್ಲ್ಯು-ದಾಗ, 'ಪ್ರಾಮಾಣಿಕತನ ಬೇಕು!' ಅಂದರು.

ಪುಟ್ಟವ್ವ :— ಯಾರಿಗೆ? ನಿನಗ?

ನಾರ್ಯಾ :— ಹೌದು, ಮತ್ತ ನನಗಽ!

---

* ಈ ರೂಪಕವನ್ನು ಧಾರವಾಡ ಆಕಾಶವಾಣಿಯಿಂದ ದಿ. ೧೩-೬-೫೮ರಲ್ಲಿ ಕುಸು ವ್ಯತ್ಯಾಸದೊಡನೆ ಬಿತ್ತರಿಸಲಾಯಿತು. —ಸಂ.

ಪುಟ್ಟವ್ವ :– ನಿನಗೇನು ಬೇಕು ಅಂತಾರ? ಅವರಿಗೇ ಅದೆಲ್ಲಾ ಬೇಕಾಗಿದ್ದೀತು! ಇಲ್ಲದ್ದs ಕೇಳ್ತಾರ!

ತಿರಕ :– ಹೌದs, ಅವರಿಗೆ ಯಾವದು ಬೇಕೋ ಅದನ್ನ ಕೇಳ್ತಾರ! (ಕೆಮ್ಮುತ್ತಾನೆ.)

ಪುಟ್ಟವ್ವ :– ಕೇಳ್ಯಾರು! ಯಾವುದನ್ನ ಕೇಳಬೇಕು, ಯಾವ-ದನ್ನ ಕೇಳಬಾರದು—ಇದರ ವಿಚಾರಬೇಕು ಕೇಳವರಿಗೆ!

ತಿರಕ :– ನಿನ್ನ ವಿಚಾರ ಸುಟ್ಟಿತು! (ನಾರ್‍ಯಾನಿಗೆ) ಹಂ, ಇರಲಿ, ಮತ್ತ ಯಾರೇನಂದರೋ?

ನಾರ್‍ಯಾ :– ಮತ್ತ್ಯಾರಿಗೂ ನಾ ಕೇಳಲೇ ಇಲ್ಲ.

ತಿರಕ :– ಯಾಕ ಕೇಳೀಯಪಾ? ನಿನಗೇನು ಅಡಗಾಣಿ-ಸೇದ?.... ಮುಂದ? ಮುಂದ ಏನೂ ಅಂದೆ!

ಪುಟ್ಟವ್ವ :– ಹಿಂದಾದದ್ದs ಮುಂದ! ಅಂವ ಏನು ಮಾಡ್ಯಾನು ಪಾಪ! ಕಾಣಬೇಕಾದವರ್ನೆಲ್ಲಾ ಕಂಡ; ಕೇಳಬೇಕಾದವರ್ನೆಲ್ಲಾ ಕೇಳಿದ. ಕಾಡೋ ಕಾಲದಾಗ ಕೈಯಾಗಿನ ತುತ್ತು ಬಾಯಾಗ ಬೀಳೋದಿಲ್ಲಂತ! (ನಾರ್‍ಯಾ ಒಳಗೆ ಹೋಗುತ್ತಾನೆ. ತಿರಕಪ್ಪ ಪುಟ್ಟವ್ವ ಇಬ್ಬರೇ ಉಳಿಯುತ್ತಾರೆ.) ನಿಮ್ಮ ವ್ಯಾಳ್ಯಕ್ಕೂ ಹಿಂಗs ಆಗಿದ್ದಿಲ್ಲೇನು? ನೌಕರೀ ಹುಕುಮು ಸಿಕ್ಕದ್ದು, ಆಯಿತಾ ವ್ಯಾಳ್ಯಕ್ಕ ರದ್ದಾತ್ತು. ಅವ್ಯಾಲ ಮೂರುವರ್ಷ ಮನೀ ಹಿಡಿದು ಕೂತಿರಿ. ನಾ ನಮ್ಮ ಅಪ್ಪನ ಕೈಕಾಲು ಹಿಡಕೊಂಡು, ನಿಮಗ ಹೊಟ್ಟಿಗೆ ನಡಾಗ್ಗ........

ತಿರಕ :– (ಆಣಕವ ದನಿಯಲ್ಲಿ) ಸಾಕು, ಸುಮ್ಮನಿರು. ಆ ಹಿಂದಿನ ಪುರಾಣಾ ಈಗ ಬಿಚ್ಚಬ್ಯಾಡ. ತನ್ನ ತವರಮನೀ ಶಿಫಾ-ರಸ್ತು ಹೇಳಿಕೊಳ್ಳಿಕ್ಕೆ ಬಂದಾಳ!

ಪುಟ್ಟವ್ವ :– ಗಂಡನ ಶಿಫಾರಸ್ತು ಹೇಳಿಕೊಳ್ಳಿಕ್ಕೆ ಬಾರದಿದ್ದರ, ಹೆಂಗಸರು ಮತ್ತ.... ತಮ್ಮ ತವರ ಮನೀದs ಹೇಳಿಕೋಬೇಕಲ್ಲ!

ತಿರಕ :– ಪಸs, ನನ್ನ ಮುಂದ ಅವರ ದಿಮಾಕು ಕೊಚ್ಚ-ಬ್ಯಾಡ! ನಿನ್ನ— ಕುಬೇರಗದ ಕನ್ಯಾ ಅಂತ— ಕಂಗೆಟ್ಟು ಬಂದು, ನನ್ನ ಕೊರಳಿಗೆ ಕಟ್ಟಿದರು. ನಾ ಕಣ್ಣು ಮುಚಿಗೊಂಡು ನಿನ್ನ ಮಾಡಿಕೊಳ್ಳದಿದ್ದರ, ಕೂಡ್ತಿದ್ದಿ ಕಡೆತನಕಾ ಕನ್ಯಾಕುಮಾರಿ ಆಗಿ!

ಪುಟ್ಟವ್ವ :– ನನ್ನ ನೋಡೋಮುಂದ ನೀವು ಕಣ್ಣು ಮುಚ್ಚಿ-ದ್ದರ, ನಿಮ್ಮನ್ನ ನೋಡೋ ಮುಂದ ನಾಅರೆ ಕಣ್ಣು ತೆರೆದಿದ್ದೆ— ಅಂತ ತಿಳಕೊಂಡೀರೇನು? ವರ ಅಂಬೋ ದೃಷ್ಟಿಯಿಂದ ವರೀಗೆ ಹಚ್ಚಿ ನೋಡಿದ್ದರ, ಏನಿತ್ತು ನಿಮ್ಮಲ್ಲೆ?

ತಿರಕ :– ಮತ್ತ ನಿನ್ನಲ್ಲೇನs ಏನಿತ್ತು? ಹುಳಕ ಮೂರಿ-ಸೊಳಕ ಮೈ!

ಪುಟ್ಟವ್ವ :– ಮತ್ತ ನಿಮ್ಮದು? ಕರಕ ಬಣ್ಣ, ಹರಕ ಜೆಣ್ಣ! ಏನೋ.... ಆ ಕಾಲಕ್ಕ ನಾಕು ಇಂಗ್ರೇಜಿ ಅಕ್ಷರ ನಿಮ್ಮ ಎದ್ಯಾಗ ಮೂಡಿದ್ದುವು ಅಂತ ನಿಮ್ಮ ಸೆರಗಿನ್ಯಾಗ ಬಿದ್ದೆ ನಾ! ಈ ಕಾಲಕ್ಕ ನಿಮ್ಮಷ್ಟು ಇಂಗ್ರೇಜೀಗೆ ಪೋರ್ಟರ್ ಕೆಲಸ ಸಹಿತ ಸಿಗೋದಿಲ್ಲ! ನನ್ನ ತವರಮನೀ ಹೆಸರು ತಗದರ, ನಿಮ್ಮ ತಲೀಗೆ ಕಾವೇರ್ತದ! ಅವರು ಮಾಡಿದ ನಿಮ್ಮ ಲುಕ್ಸಾನಾದರೂ ಏನು? ಕಲಿತವರು ಅ ಕನ್ಯಾ ಕೊಟ್ಟರು, ಕೆಲಸಿಲ್ಲದಾಗ ಕೈ ಹಿಡಿದರು, ಒಂದಲ್ಲದ ಬಾಣಾ ಬಾಣಂತಿತನದ ಭಾರಾ ಹೊತ್ತರು!

ತಿರಕ :– ಇದು—ನೋಡು, ಮಾಡಿದ ಉಪಕಾರ ಅತಿ ಹೋತ್ಯು. ವೈರಿಗಳ ಉಪಕಾರ ಸಹಿತ ಸೈರಿಸಬಹುದಂತ; ಆದ ಹೆಂಡರ ಹಂಗಣಿ—ಅಂದರ, ಅಂಗಾಲಾಗ ಆನಿಬೆಳದ್ಹಾಂಗ! ಹೆಜ್ಜೆಜ್ಜಿಗೆ—ಅಳುಕು! ಇಂಥಾದರಾಗ, ನಾ ಮುಪ್ಪಾದರೂ ಮಾನ ಮುಪ್ಪು ಮಾಡಿಕೊಳ್ಳದs ಮನೆತನ ನಡಸೀನಿ, ಅದನ್ನೋಡು! ಆದಕ್ಕs ನಾ ನಾರ್‍ಯಾಗ ಹೇಳೀನಿ: 'ಮಗನs, ನಾ ಇರೋದರಾಗ ಯಾವದ್ವರೆ ಕಟ್ಟಿಗೆ ಹೊಂದಿಕೊ' ಅಂತ. ದಾರೀಮ್ಯಾಲಿನ ಕಲ್ಲಾಗ ಕಂಡವರ ಕೈಲೆ ಉಗುಳಿಸಿಗೊಂಬೋದು ಬ್ಯಾಡ!

ಪುಟ್ಟವ್ವ :– ಹುಟ್ಟಿಸಿದ ದೇವರೇನು ಹುಲ್ಲು ಮೇಸೋದಿಲ್ಲ ಬಿಡಿರಿ!

ತಿರಕ :– ಆದರ ದೇವರ ಕೈಯಾಗ ಉಳದ್ದೇನೀಗ? ಅಂತ ಮಾಡೋದ್ನೆಲ್ಲಾ ಈಗ ಮನಶಾನs ಮಾಡಲಿಕ್ಕೆ ಹತ್ಯಾನ! ಅಂವ ಅಂತ ಇಟ್ಟ ನೈವೇದ್ಯ ಸಹಿತ ಅವನ ಬಾಯಿಗೆ ಬೀಳೋದಿಲ್ಲ. ಅಂಥಂವ ಮನಿಶಾರಿಗೇನು ಉಣಿಸ್ತಾನ? ಈ ಕಾಲದಾಗ, ದೇವರು ಸಹಿ ದಿಕ್ಕೇಡಿ ಆಗಿ ಕೂತಾವ! ಈ ಪುರಾಣಗೋಷ್ಠಿ ಸಾಕು! ಇವನ ವಾದಿಸಿ ನಮಗಾಗೋದೇನು? ನಮ್ಮ ಬಾಯಾಗ ತುತ್ತು ಬೀಳೋ ದನ್ನ ನಾವು ಸದ್ಯಕ್ಕ ನೋಡಿಕೊಂಬೋಣು!

ಪುಟ್ಟವ್ವ :– ಮತ್ತ ಅದಕ್ಕs ಅಲ್ಲs, ಅಂಗಾಲು ಸವಿಯ ಹಾಂಗ—ಆರು ತಿಂಗಳಾತ್ಯು—ಓಡ್ಯಾಡ್ತsದ ಕೂಸು! ಯಾವ ನೆಲೀಗೆ ಹತ್ತವೊಲ್ಲದು.

ತಿರಕ :– ಇಲ್ಲಿ ನೋಡು, ಮೊದಲು ಅವನ ತಲೀಗೆ ಹತ್ತಿದ ನೆಲೀಗೆ ತಾನs ಹತ್ತತsದ. ಇಂವ ಮನಸಿಗೆ ಹಚ್ಚಿಗೊಂ ಪ್ರಯತ್ನ ಮಾಡ್ತಾನೋ ಇಲ್ಲೋ ಅಂತ ಅನಿಸ್ತsದ! ಇದs ನೋ ನಾವು ಅವನ ಬಗ್ಗೇ ಈಗ ಮಾತೀಡ್ತೀವಿ–ಒಳಗ ಹೊಂಟುಹೋ ಒಳಗೇನು ತತ್ತೀ ಕಾಸ್ತಾನೇನು? ಈಗ ಒಳಗೇನು ಕೆಲಸಿತ್ತು

[ಪುಟ್ಟವ್ವ ಒಳಬಾಗಿಲಲ್ಲಿ ಹಣಿಕಿ ಹಾಕುತ್ತಾಳೆ. ನಾರ್‍ಯಾ ಬರುತ್ತಾನೆ

ತಿರಕ :– ಏನು, ಮುಂದ ಗತಿಯೇನು? ಮತ್ತ ಯಾ ಖಾತೇದಾಗ ಕೇಳಬೇಕಂತ ಮಾಡೀ?

ನಾರ್‍ಯಾ :– (ತ್ರಾಸುಗೊಂಡು) ಇನ್ನ ಯಾರಿಗೂ ಕೇಳೋ ಹಾಂಗಿಲ್ಲ! ಖಾತೆಯಿಲ್ಲ, ಗೀತೆ ಇಲ್ಲ! (ಮೇಜಿಗೆ ಆತುಗೊಂ ನಿಲ್ಲುವನು.)

ತಿರಕ :– ಹಂಗಾರ? ಮನ್ಯಾಗಂತೂ ಎಲ್ಲಾರದೂ–ಯಥಾ ಸ್ಥಿತ ಖಾತೇ ನಡದs ಬಿಟ್ಟದ—ತುಮ್ ಭಿ ಖಾತೇ, ಹಮ್ ಭೀ ಖಾತೇ ಸಬ್ ಭೀ ಖಾತೇ! ಈ ಅನ್ನಖಾತೆ ನಡಸೋದ್ಹ್ಯಾಂಗ? ಹೇಳ ತುಸು! ನಾ ಏನು ಕಿಡ್ವಾಯಿ ಅಂತ ತಿಳಕೊಂಡೀರೇನು, ಮಕ್ಕ

ನಾರ್‍ಯಾ :– ನಾ.... ಒಂದು ಬ್ಯಾರೇನs ವಿಚಾರ ಮಾಡಿ

ತಿರಕ :– ಏನದು? ಹುಂ, ಬೊಗಳು, ಉಚ್ಚಾರಾಗಲಿ!

ನಾರ್ಯಾ :— (ಮುಖ ಗೋಡೆಯುತ್ತ ತಿರುವಿ ಅಲ್ಲಿರುವ ಪಟದ ಕಡೆಗೆ ನೋಡುತ್ತ) ಮದಿವೀ ಮಾಡಿಕೋಬೇಕೂ ಅಂತ.. .....

ತಿರಕ :— (ದನಿಯನ್ನು ಒಮ್ಮೆಲೆ ಗದ್ದರಿಸುವ ರೀತಿಯಲ್ಲಿ ಏರಿಸಿ) ಏನು? ಮದಿವೇ? ಮುಂಡೇಗಂಡ! ಮದಿವೆಂತ ಮದಿವಿ! ಆ್ಯಹಹಹ.... (ಉಪಹಾಸದ ನಗೆ ನಗುವನು.)

ಪುಟ್ಟವ್ವ :— ಮಾಡಿಕೋವಲ್ಲ್ಯಾಕ ಬಿಡ್ರಿ........

ತಿರಕ :— (ಒಮ್ಮೆಲೇ ರೇಗಿ, ಮಂಚದ ಮೇಲೆಯೇ ಸಿಡಿದು-ಬಿದ್ದು,) ಮತ್ತ್ಯಾತರಿಂದನೂ ಹೊಡೀಲಿಕ್ಕಿಲ್ಲ!..ನಾರ್ಯಾ, ನಾ ಈಗs ಹೇಳ್ತೀನಿ, ಇಂಥಾದ್ದೇನಾದರೂ—ಮಂಗ್ಯಾತನ ಮಾಡಿದಿ ಅಂದರ, ನಿನ್ನ ಮಗ್ಗಲಾನs ಮುರದೀತು! ಹುಷಾರಿ! ಅನ್ನಕ್ಕ ಗತಿ ಇಲ್ಲ, ಲೌಡೀಮಕ್ಕಳಿಗೆ! ಮದಿವೆಂತ ಮದಿವಿ! ಅಲ್ಲಾ, ಈಗಿನ ಹುಡುಗರ ತಲಿ ನೋಡಿರೀ ಅಂತೀನಿ. ಹಿರೇರ ಹೆದರಿಕಿಲ್ಲ, ಕಿರೇರ ಕಾಳಜೀ ಇಲ್ಲ! ಇದ್ದ ಮೂರು ಮಂದಿಗೇ ಕದ್ದು ತಿಂಬೋ ಹೊತ್ತು ಬಂದಾಗ, ನಾಲ್ಕನೇದೊಂದು ಜೀವಾ ತಂದು, ನನ್ನ ಜೀವಕ್ಕ ಉರ್ಲು ಹಾಕಬೇಕೂ—ಅಂತಿಯೇನು?

ಪುಟ್ಟವ್ವ :— ಉರ್ಲು ಯಾತರದು? ಮನಿಗೆ ಸೊಸಿ ಬರ್ತಾಳ, ನನಗ ಮಾಡಲಿಕ್ಕೆ........

ತಿರಕ :— ನಿನಗ ಮಾಡಲಿಕ್ಕೆ? ಏನು ಮಾಡೋದು? ಇನ್ನ ಒಂದs ಉಳದsದ ನಿಂದು-ಅವಿಧವಾನವಮಿ! ಅಷ್ಟ್ಯಾಗ್ತsದ! ಮಾತು-ಮಾತಿಗೆ ಆಕಿ ನಿನ್ನ ಕಟಬಾಯಿಗೆ ತಿವೀಲಿಕ್ಕೆ ಹತ್ತಿದ್ಲು ಅಂದರ, ಅದೂ ಆಗಲಿಕ್ಕೆ ತಡಾ ಹಿಡಿಯೋದಿಲ್ಲ. ಸೊಸೀ ಅಂತ ಸೊಸೀ! ಸೊಸಿ—ಬಾಯಿ ಕಿಸಿ! ಮೊದಲs ಮನ್ಯಾಗ ಭಾಗ್ಯ ಅಕ್ತsದ, ಇನ್ನ ಸೊಸೀ ಅಷ್ಟು ಬಂದು ಸೌಭಾಗ್ಯ ಸುರಕೊಂಬೋದು-ಉಳಿದsದ! ಅಲ್ಲs, ನಾರ್ಯಾಗ ಕೆಲಸ ಸಿಗೋದು ಮುಖ್ಯೋ, ಕನ್ಯಾ ಸಿಗೋದು ಮುಖ್ಯೋ? ಯಾಕೋ ನಾರ್ಯಾ, ನೀನs ಉತ್ತರಾ ಕೊಡು! ಸಟ್‌ಸಟ್ ಉತ್ತರ ಬರಲಿ!

ನಾರ್ಯಾ :— ಈಗ ಕನ್ಯಾ ಬಂದsದ........

ತಿರಕ :— ಅಹಹ! ನಿನ್ನ ಮಾರಿಗೆ ಮಳ್ಳಾಗಿ ಬಂದಿದ್ದೀತು ಪಾಪ! ಯಾವ ಕನ್ಯಾಅಪಾ ಅದು? ಸುದಾಮಕನ್ಯಾನೋ, ಸುಗ್ರೀವ ಕನ್ಯಾನೋ? ಯಾವ ಕನ್ಯಾ? ಎಲ್ಲೀದು?

ನಾರ್ಯಾ :— ಇದs ಊರಾಗ ಈಗ ಇದ್ದಾರ!

ತಿರಕ :— ಯಾರು? ಅವರ ನಾಮೋಚ್ಚಾರಾಗಲಿ!

ನಾರ್ಯಾ :— ಗುರ್ರಾಯರು-ಅಂತ.

ತಿರಕ :— ಯಾವ ಗುರ್ರಾಯರು? ಪೂರಾ ಹೆಸರsರ ಹೇಳೋ! (ಕೆಮ್ಮುತ್ತಾನೆ.)

ನಾರ್ಯಾ :— ಮುತಾಲೀಕ ಗುರ್ರಾಯರು....ಅಂತ.

ತಿರಕ :— ಯಾರು? ಮುತಾಲೀಕ ಗುರ್ರಾಯರs?

ಪುಟ್ಟವ್ವ :— ಹುಂ, ಸ್ಮಾರ್ತರು!

ತಿರಕ :— (ಒಮ್ಮೆಲೆ ಕೆರಳಿ) ಏನು ಸ್ಮಾರ್ತರs?

ನಾರ್ಯಾ :— ಹುಂ,

ತಿರಕ :— ನಿನ್ನ ಕೊಂದs ಬಿಟ್ಟೇನು.

ಪುಟ್ಟವ್ವ :— ಆದರೇನಾತು ಬಿಡ್ರಿ. ಪೂರ್ವದಿಂದ ಹೆಣ್-ಗಂಡು ನಡದs ನಡದಾವ! ನಾನs ಇಲ್ಲೇನು ಸ್ಮಾರ್ತರ ಮನಿಯಾಕಿ?

ತಿರಕ :— ಅಂತs ಆ ತಪ್ಪು ಪುನಃ ಮಾಡೋದು ನನಗ ಬ್ಯಾಡಾಗೇದ! (ಕೆಮ್ಮುತ್ತಾನೆ.)

ಪುಟ್ಟವ್ವ :— ನೀವs ಪುನಃ ಯಾಕ ಮಾಡಲಿಕ್ಕೆ ಹೋಗ್ತೀರಿ? ನಾರ್ಯಾಗ ಮಾಡೋದು! ಅವರ ಕನ್ಯಾ ಅಂದರ ವಿರುದ್ಧಂತೂ ಆಗೋದಿಲ್ಲs ಬ್ಯಾರೆ? ಉದ್ದೇನು ಅಡ್ಡೇನು; ಎಲ್ಲಾನೂ ಒಂದೇ!

ತಿರಕ :— ಉದ್ದೇನು, ಅಡ್ಡೇನs? ಇದು ನೋಡು, ಈಗ ನೀ ಅಡ್ಡ ಕೂಡಿದ್ದರ ಪರಿಣಾಮುನs ಇದು! ಯಾತರಾಗೊಂದೂ ಅಡ್ಡs! ಜಾಡು-ಹಿಡಿದು ಗಾಡ ಸಾಗೊ ಹಾಂಗs ಇಲ್ಲ! ಹೋಗಲಿ, ಗೋತ್ರ ಯಾವುದಂತ? ಯಾವುದೋ ನಾರ್ಯಾ? ಕೇಳಿಯೇನು?

ನಾರ್ಯಾ :— ಹುಂ, ಇಬ್ಬರದೂ-ಒಂದs!

ತಿರಕ :— ಏನು ಸಗೋತ್ರs?

ನಾರ್ಯಾ :— ಹುಂ....

ತಿರಕ :— (ಅಣಕಿಸಿ) ಹುಂ! ಹೊಯಿಕೊಳ್ರಿಪಾ! (ದನಿ ಬದಲಿಸಿ) ಏನು ಅನಾಚಾರ ಬಂತಪಾ ದೇಶದಾಗs ಅಂತೀನ್ನಾ!

ಪುಟ್ಟವ್ವ :— ಯಾರಿಗsರೆ ದತ್ತಕ ಮಾಡಿದರಾತ್ಯ—ಬರ್ತs-ದಂತಲ್ಲ?

ತಿರಕ :— ಯಾರಿಗೆ ದತ್ತಕ ಮಾಡ್ತೀ?

ಪುಟ್ಟವ್ವ :— ಹುಡುಗ-ಹುಡುಗಿ ಇಬ್ಬರ ಪೈಕಿ, ಯಾರನ್ನ ಮಾಡಿದರೂ ನಡೀತದಂತ.

ತಿರಕ :— ಅದ್ಯಾಕ? ನಾವs ದತ್ತಕ ಆಗಿಬಿಡೋಣು. (ದೈನಾಸ ಬಟ್ಟು) ನಾರ್ಯಾ, ಸಗೋತ್ರದಾಗ ಮದಿವ್ಯಾಗಿ ಯಾವ ನರಕಕ್ಕ ಹೋಗಬೇಕಂತೀಯಪಾ? ಏನು ಪುಣ್ಯಾತ್ಮರು ಹುಟ್ಟಿದರಪಾ ಜಗತ್ತಿನೊಳಗ! ಪರಮಾತ್ಮಾ, ಸಾಕಪಾ ಇನ್ನ ಕಣ್ಣುಮುಚ್ಚು!

ಪುಟ್ಟವ್ವ :— ಅಲ್ಲಾ, ಹೀಂಗ ಸಗೋತ್ರದಾಗ ಆದ ಮದಿವೇನು ಬೇಗು-ಬೆಳಗು ಕಂಡೇ ಇಲ್ಲ? ನಮ್ಮ ಓಣ್ಯಾಗಿಂದs ಉದಾಹರಣೆ-ಅದ. ದೂರ್ಯಾಕ ಹೋಗಬೇಕು?

ತಿರಕ :— ಇದು ನೋಡು, ಅವರು-ತುತ್ತು ಕಿಂವ್ಯಾಗ ಇಡ್ತಾ-ರಂತ, ನಾವು ಮೂಗಿನ್ಯಾಗ ಇಡೋದೋ ಏನು? ಹೋಗಲಿ, ನಾಡಿ ಯಾವದಂಬೋದ್ವರೇ ಕೇಳೀಯೇನು, ನಾರ್ಯಾ?

ನಾರ್ಯಾ :— ಹುಂ,

ತಿರಕ :— ಯಾವದಂತ? ಅದ್ವರೆ ಛಿನ್ನಾಗ್ತದೋ?

ನಾರ್ಯಾ :— ಇಲ್ಲ!

ತಿರಕ :— ಏನು, ಅದೂ ಏಕನಾಡೇ? (ಅತ್ಯಂತ ಕೆರಳಿ, ದನಿ ಏರಿಸಿ) ಏss ಸಾಕಿನ್ನ. ನಾ ಇರೋದಿಲ್ಲ, ನನ್ನ ಕಟಿಗೀ ಕಳಸು ಸ್ಮಶಾನಕೀಗ! ನಾ ಹೊಂಟೆ. ನನ್ನ ಉತ್ತರಕ್ರಿಯಾ ನೀ ಮಾಡ-ದಿದ್ದರೂ ನನ್ನಡ್ಡೀ ಇಲ್ಲ. ನಾ ಹೊಂಟೆ, ನಾ ಹೊಂಟೆ ಅಂವೆ

ಸ್ಮಶಾನಕ್ಕ! ನನಗ ಟಾಂಗಾ ತರಸು....... (ಮಂಚದಲ್ಲಿಯೇ ಜಿಗಿಜಿಗಿದು ಬೀಳುವನು.)

ನಾರ್‍ಯಾ:– (ಅಷ್ಟೇ ಶಾಂತಧ್ವನಿಯಲ್ಲಿ) ಅಲ್ಲಪಾ, ನೀ ಟಾಂಗಾದಾಗ ಸ್ಮಶಾನಕ್ಕ ಹೋಗಾಂವೇನು?

ತಿರಕ:– ಹೌದು- ನಾ ಹೊಂಟೆ, ನನಗ ಜೀವ ಬ್ಯಾಡಾಗೇದ!

ಪುಟ್ಟವ್ವ:– ಅಯ್ಯ, ಯಾಕ ಹೀಂಗ ತಲ್ಯಾಗ ಬೂದೀ ಹಾಕ್ಕೋತೀರಿ?

ತಿರಕ:– ನಾ ಹಾಕ್ಕೋಂಬೋದಿಲ್ಲ; ನೀವಿಬ್ಬರೂ ಹಾಕಲಿಕ್ಕೆ ನಿಂತೀರಿ! ತಾಯೀ-ಮಗನ ಮಸಲತ್ತು! ಆ ನಾರ್‍ಯಾ ಏನು ಮಾಡಿದ್ದೂ ಛಂದ ನಿನಗ!

ಪುಟ್ಟವ್ವ:– ಪುರಾ ಹಕೀಕತ್ತರೆ ಕೇಳಿಕೊಳ್ರಿ ಒಮ್ಮೆ! ಮಾತಿಗೊಮ್ಮೆ ಗುರ್ ಅಂದರೇನು ಬಂತು?

ತಿರಕ:– ಇನ್ನ ಕೇಳಿಕೊಂಬೋದು ಉಳದದೇನು? ಹೇಳೋದು ಕೇಳೋದು ಎಲ್ಲಾ ಮುಗಿದಾವ! ಕಾಶೀತೀರ್ಥಾ ತಂದಷ್ಟು ಬಾಯಾಗ ಬಿಡ್ರಿ; ಅಂದರ ಈ ಇಹಲೋಕದ ಯಾತ್ರಾ ಒಮ್ಮೆ ಮುಗಿಸಿ ಬಿಡ್ತೀನಿ! ಆಮ್ಯಾಲ ನಿನ್ನ ಸೊಸಿನ್ನ ಕರಕೊಂಡು ಬಂದು, ಎಲ್ಲಾರೂ ಸೋಸಿಲೆ ಇರ್ರಿ! ನಾ ಅದನ್ನ.... ಈ ಕಣ್ಣಲೇನ ನೋಡೋದು ಬ್ಯಾಡ. ಮುಂದೀ ಮುನ್ಯಾಗ ನಡದದ್ದುವನ್ನ ಕೇಳಿದ್ದೆ. ಈಗ ಪ್ರತ್ಯಕ್ಷ ಮನ್ಯಾಗ ನಡಿಯೋದನ್ನ ನೋಡೋದು ಪಾಲಿಗೆ ಬಂತು. ಹೆಣ್ತಿ ಅಂತ ನೀ ಕೊಟ್ಟ ಸುಖ,—ಮಗ ಅಂತ ನಾರ್‍ಯಾ ಕೊಟ್ಟ ಸುಖ, ಉಂಡುಂಡು ಉಬ್ಬಳಿಕಿ ಬರಲಿಕ್ಕೆ ಹತ್ತ್ಯಾವ! ಕೆಮ್ಮು ಒತ್ತರಿಸಿ ಬರುತ್ತದೆ (ಅದನ್ನು ತಡೆಯುತ್ತ) ನಾಕಿನ್ನ (ಮತ್ತೆ ಕೆಮ್ಮುತ್ತ) ನನ್ನ ಆಯುಷ್ಯದ ಅಲಾರ್ಮ್ ಗಂಟೆ ಬಡಕೊಳ್ಳಿಕ್ಕೆ ಹತ್ತಿ ಬಹಳ ದಿನ ಆತ್ಯು! (ಮತ್ತೆ ಗಟ್ಟಿಯಾಗಿ ಕೆಮ್ಮುತ್ತ) ಇದು ನೋಡು— (ಮತ್ತೆ ಕೆಮ್ಮುತ್ತ) ಇದ ಆ ಗಂಟೆ—ಕೇಳತ್ತದೇನು? ಯಾವಾಗ ಪ್ರಾಣ ಪಟ್ ಅಂತ ಹಾರಿ ಹೋದೀತು..............

ಪುಟ್ಟವ್ವ:– (ಕಾತರಸ್ವರದಲ್ಲಿ) ಸಾಕು ಹೋಗ್ರಿ, ಇಂಥಾದು ಏನಾರೇ ಮಾತಾಡಿ, ನನ್ನ ಕಣ್ಣಿಗೆ ನೀರು ತರಿಸಬ್ಯಾಡ್ರಿ! ನೀವು ಹೋಗಿ ನಾ ಇರಬೇಕು-ಅಂತ ನನಗೆಂದಾದರೂ ಅನಿಸೀತ? ಹಿಂಗ ಬಯಸೋ ಆಕಿ ಯಾವ ಚಂಡಾಳಿ ಇದ್ದಿದ್ದಾಳು? (ದುಃಖ ತಡೆಯಲಾರದೆ ಬಿಕ್ಕುವಳು.)

ತಿರಕ:– (ಹೃದಯ ಕರಗಿದಂತಾಗಿ) ಹೀಂಗ ಅತ್ತ ನಮ್ಮನ್ನ ಗೋಳಿಗೆ ಹಾಕ್ತೀರಿ ನೋಡ್ರಿ.....ನೀವು ಹೆಂಗಸರು!

ಪುಟ್ಟವ್ವ:– (ತುಸು ಸಮಾಧಾನ ತಾಳಿ) ಅಲ್ಲಾ, ನಾನರೆ ಏನು ಮಾಡಬೇಕು ಹೇಳ್ರಿ ಹಂಗಾರ? ಇತ್ಲಾಗ ನಿಮ್ಮನ್ನ ನೋಡಬೇಕೋ, ಅತ್ಲಾಗ ಮಕ್ಕಳ್ನ ನೋಡಬೇಕೋ?

ತಿರಕ:– (ತಿಳಿವಳಿಕೆ ಬಂದಂತಾಗಿ) ಅದೂ ಖರೆ! ನಾವ ಕಲೆತಿರುಕ ನನ್ನ ಮಕ್ಕಳು! ಹಿಂದ ಮುಂದ ನೋಡದ ಹಂದೀ ಹಾಂಗ ಹೊಂಡತೀವಿ. ಹೋಗಲಿ. ಈ ನಾರ್‍ಯಾ ಇದನ್ನೇನು ಈಗ ತಕ್ಕೊಂಡು ಕೂತಾನ? ಘಳಿಸಾಳಿ ಆಗದೆ ;ಮದಿವಿ ಅಂದರ! ಕೊಡವರಿಗ್ರs ಬುದ್ಧಿ ಬೇಕೋ ಬ್ಯಾಡೋ?

ಪುಟ್ಟವ್ವ:– ಅವರ ಬುದ್ಧೀದು ನಾವ್ಯಾಕ ವಿಚಾರ ಮಾಡಬೇಕು? ಕೊಡ್ತಾರ ಮುಗೀತು. ಅವರು ಅಷ್ಟು ವಿಚಾರ ಮಾಡದ ಕೊಡ್ತಾರ? ಇದು ನೋಡ್ರಿ, ನಿಮಗ ಇನ್ನೊಂದು ಮುಖ್ಯ ಮಾತ ಗೊತ್ತಿಲ್ಲ!

ತಿರಕ:– ಮತ್ತೇನದು?

ಪುಟ್ಟವ್ವ:– ಈ ಕನ್ಯಾನ್ನ ಮಾಡಿಕೊಂಡರ; ನಮಗ ಫಾಯದೇನ ಅದ! ಅದೆಲ್ಲಿ ನಿಮಗ ಗೊತ್ತದ?

ತಿರಕ:– ಇದೇನು ತಗದಿ ಮತ್ತ?

ಪುಟ್ಟವ್ವ:– ಹೌದು, ಆಕೀ ತಂದೀ ಆಸ್ತಿಯೆಲ್ಲ ನಾರ್‍ಯಾಗ ಬರ್ತದ! ಹೌದಲ್ಲೋ, ನಾರ್‍ಯಾ?

ನಾರ್‍ಯಾ:– ಹೂಂ. ಈಗ ಮಗಳ ಹೆಸರ್ಲೆ ಕಾಗದ-ಪತ್ರ ಸಹಿತ ಮಾಡಿಬಿಟ್ಟ್ಯಾರ. ಮದಿವ್ಯಾದ ಮ್ಯಾಲ ಆಸ್ತಿ ಎಲ್ಲಾ ಆಕೀಗೇ ಬರೋದು!

ತಿರಕ:– ಹೌದೋ, ಆ ಕನ್ಯಾನ್ನ—ನಿನಗ ಕಾಮಣ್ಣಗ ಕೊಡ್ತಾರ ಅಂತ ಯಾತರ ಮ್ಯಾಲಿಂದ?

ನಾರ್‍ಯಾ:– ಹಾಂಗ ಮಾತು ಆಗ್ಯಾವ!

ತಿರಕ:– ಅಲ್ಲೀ ತನಕಾ ಬಂದದೇನು ಈ ಮಸಲತ್ತು? ಯಾರವು ಮಾತಾಗ್ಯಾವ? ಏನು?

ನಾರ್‍ಯಾ:– ನನ್ನವು—ಸುಬ್ಬೂನವು!

ತಿರಕ:– ನಿನ್ನ ಸುಲೂ-ವಸೂಲೂ! ಅಲ್ಲೋ ಶತಮೂರ್ಖಾ, ಆ ಉಲಕೋಚಿ ಹುಡುಗಿ ಒಪ್ಪಿದರೇನು ಮಾತು ಮುಗದ್ಹಾಂಗಾತೇನು? ಮಳ್ಳು ಹುಡುಗಿಯರ ಮಾತೆಲ್ಲಾ ವಚನ ಅಂತ ತಿಳೀತಾರೇನೋ ಮಂಗ್ಯಾ?

ಪುಟ್ಟವ್ವ:– ಅಯ್ಯ, ಅಷ್ಟು ಥಡ್ಡಿದ್ದಾನೇನು ನಮ್ಮ ನಾರ್‍ಯಾ? ಅಂವ ಆ ಹುಡುಗೀ ಅಪ್ಪನ ಕಡಿಂದನ ವಚನಾ ತಗೊಂಡು ಬಂದಾನ!

ತಿರಕ:– ಹೌದೇನೋ?

ನಾರ್‍ಯಾ:– ಹೂಂ!

ತಿರಕ:– ಎಷ್ಟದ ಅಂತ ಆಸ್ತಿ? ಖರೇವಂದರೂ ಅದನೋ? ಏನು ಕಾಗದ ಮ್ಯಾಲ ಬರೆ ಡ್ರಾಯಿಂಗ್ ತಗದು ತೋರಿಸ್ಯಾರೊ?

ನಾರ್‍ಯಾ:– ಡ್ರಾಯಿಂಗ್ ಯಾಕ? ಊರಾಗ ಎರಡು ಮನಿ ಆವ. ಮ್ಯಾಲ ಹತ್ತು ಸಾವಿರ ರೂಪಾಯಿ ಬ್ಯಾಂಕಿನೊಳಗದ. ಎಲ್ಲಾ ಆ ಹುಡುಗ್ಗೀ ಬರೋದು!

ತಿರಕ:– ನೀವು ಹೇಳೋದೆಲ್ಲಾ ಖರೇನ ಇದ್ದರ, ಇದೆಲ್ಲಾ ಠೀಕ ಆತು. ಆದರ ಸಗೋತ್ರದ್ದೇನು ಮಾಡೋದು?

ನಾರ್‍ಯಾ:– ಹುಡುಗಿನ್ನ ಸೋದರತ್ತಿಗೆ ದತ್ತಕ ಮಾಡತಾರಂತ! ಅದನ್ನೂ ವಿಚಾರ ಮಾಡ್ಯಾರ.

ತಿರಕ:– ಆ ಸೋದರತ್ತೀ ಯಾರು? ಸ್ಮಾರ್ತರೋ ವೈಷ್ಣವರೋ? ಇನ್ನೇನು—ಯಾರಿದ್ದರೂ ನಡೀತದ ಬಿಡು!

ಪುಟ್ಟವ್ವ:– ಇಲ್ಲ, ಅವರೂ ವೈಷ್ಣವರ!

ತಿರಕ :-- ಹಂಗಾರ ಎಲ್ಲಾನೂ-ಹೊಂದಿಕೊಂಡ ಅಂದ್ಹಾಂಗಾತು!

ನಾರ್ಯಾ :-- ಹುಂ,

ತಿರಕ :-- (ಆನಂದಿತನಾಗಿ) ಅಡ್ಡಿಯಿಲ್ಲ, ಅಡ್ಡಿಯಿಲ್ಲ. ಈ ಮಾತೆಲ್ಲಾ ಮೊದಲs ಹೇಳಬಾರದೇನೋ ಮುಠ್ಠಾಳಾ! ನಾ ಎಲ್ಲೆ ಇಷ್ಟು ತಲೀ ಕೆಡಿಸಿಕೋತಿದ್ದೆ!

ಪುಟ್ಟಿವ್ವ :-- ಈ ಎಲ್ಲಾದಕ್ಕಿಂತಾ ಇನ್ನೂ ಒಂದು ಹೆಚ್ಚಿನ ಮಾತದ! ಅದೆಲ್ಲಿ ನಿಮಗ ಗೊತ್ತದ?

ತಿರಕ :-- ಅದೇನದು ಮತ್ತ?

ಪುಟ್ಟಿವ್ವ :-- ಈ ಕನ್ಯಾದ ಅಪ್ಪನs ಅಂತ, ನಿಮ್ಮ ನೋಕರೀ ಹುಕುಮು ರದ್ದು ಮಾಡಿದ್ದು!

ತಿರಕ :-- ಹೌದೇನೋ, ನಾರ್ಯಾ?

ನಾರ್ಯಾ :-- ಹುಂ. ಅವರs ತಮ್ಮ ಬಾಯಿಲೆ ಹೇಳಿದರು! ಜಿ. ವಿ. ಮುತಾಲೀಕ ಅಂದರ ಅವರs!

ತಿರಕ :-- ಯಾರು? ಜಿ. ವಿ. ಮುತಾಲಿಕ ಅಂದರ ಈ ಗುರ್‍ರಾಯರs ಏನು?

ನಾರ್ಯಾ :-- ಹುಂ!

ತಿರಕ :-- ಎಲಾ ಮುಂಡೇಗಂಡಾ! ನಾರ್ಯಾ, ಇನ್ನ ಸಾಕು, ನನಗ ಹೇಳಬ್ಯಾಡ. ನನಗ ಹೇಳಬ್ಯಾಡ ಅಂದೆ. ಅವನ ಮಗಳ್ನ ಮಾಡಿಕೊಂಡು, ಆ ಹಿಂದಿನ ಸೇಡು ತೀರಿಸೇ ಬಿಡೋದು! ಅಂತೂ ನನ್ನ ಹೊಟ್ಟೆಲೆ ಹುಟ್ಟಿದ್ದಕ್ಕೂ ಸಾರ್ಥಕಮಾಡಿದಿ, ಮಗನ! (ಹರ್ಷಿತನಾಗಿ) ಆಂ, ಆಂ, ಹ್ಯಾಂಗಿದ್ದಾನs ನಮ್ಮ ನಾರ್ಯಾ? ವಾಹವ್ವಾರೆ ಮಗನ!

ಪುಟ್ಟಿವ್ವ :-- ನಾ ಮೊದಲs ಹೇಳಲಿಲ್ಲೇನು?

ತಿರಕ :-- ಏನು ಹೇಳಿದಿ? ನಿನಗ, ಮೊದಲು ಯಾವದು ಹೇಳಬೇಕು, ಹಿಂದಾಗಡೆ ಯಾವದು ಹೇಳಬೇಕು,-ತಿಳಿಯೋದs ಇಲ್ಲ. ಆದದ್ದಾತ್ತು. ನಾರ್ಯಾ! ಆ ಹುಡುಗಿನ್ನ ಎಂದು ತಂದು ತೋರಸ್ತೀ ನನಗ?

ಪುಟ್ಟಿವ್ವ :-- ಈಗ ತೋರಿಸಲಿಕ್ಕೆ ಆಕಿನ್ನ ತಂದs ಬಿಟ್ಟಾನ; ಒಳಗ ಕೂಡಿಸಿ ಬಂದೀನಿ.

ತಿರಕ :-- ವಾಹವ್ವಾರೆ ಮಕ್ಕಳ! ಏನು ತಯಾರೀ ಇಟ್ಟೀರೊ? ಆಗಲಿ ನಡೀರಿ! ಸೊಸೀನೂ ಬರ್‍ತಾಳ,ಸಂಪತ್ತೂ ಬರ್‍ತದs! ಏನs ಏ, ಮೊದಲು ಪೇಢೆ ತರಸು, ಪೇಢೆ ಕೈಯಾಗಿಟ್ಟs ಸೊಸಿನ್ನ ನೋಡೋದು!

ಪುಟ್ಟಿವ್ವ :-- ನಾರ್ಯಾ, ಲಗು ಪೇಢೆ ತೊಗೊಂಡು ಬಾರಪಾ!

ನಾರ್ಯಾ :-- ಅವ್ವಾ, ಅವನ್ನೂ ತಂದs ಬಿಟ್ಟೇನಿ! ಮತ್ತ ಅಪ್ಪಗ್ಯಾಕ ಒಳಗ ಹೋಗಿ ನೋಡೋ ಧಾವತಿ? ಸುಲೂನ್ನ ಹೊರಗs ಕರಕೊಂಡು ಬರ್‍ತೀನಿ.

ಪುಟ್ಟಿವ್ವ :-- ಹಾಂಗs ಮಾಡು! (ನಾರ್ಯಾ ಒಳಗೆ ಹೋಗುತ್ತಾನೆ.) ಹುಡುಗಿನ್ನ ನೋಡಿದರ ಲಕ್ಷ್ಮೀದೇವಿನs! ಆದರ........ (ತಡವರಿಸಿ) ....ಒಂದು ಕಾಲು ತುಸು ಡೊಂಕದ!

ತಿರಕ :-- ಹಾಂ, ತಿಳೀತು ಬಿಡು! ಅಂದಲ್ಲೇ ನಾರ್ಯಾಗ ಕೊಡಲಿಕ್ಕೆ ತಯಾರಾಗ್ಯಾರ! (ಮತ್ತೆ ಸಮಾಧಾನ) ಆತ್ಯು, ಲಕ್ಷ್ಮೀ ಹೆಳವಿದ್ದಾಳ ಅಂದವ್ರ್ಯಾಲ, ನಮ್ಮ ಮನ್ಯಾಗs ಕಾಲು ಮುರಕೊಂಡು ಬಿದ್ದಿರ್‍ತಾಳ ಅಂಥಾಂಗಾತ್ಯು!

(ನಾರ್ಯಾ ಸುಲೂನನ್ನು ಕರೆದುಕೊಂಡು ಬರುತ್ತಾನೆ. ಆಕೆ ಕುಂಟುತ್ತ ಬರುತ್ತಾಳೆ., ಮತ್ತು ತಿರಕಪ್ಪನಿಗೆ ನಮಸ್ಕರಿಸುತ್ತಾಳೆ.)

ತಿರಕ :-- "ಸೌಭಾಗ್ಯವತಿಯಾಗು." ನಾರ್ಯಾ ಪೇಢೆ ತಾ.

(ನಾರ್ಯಾ ಪೇಢೆದ ಪೊಟ್ಟಣ ಕೈಯಲ್ಲಿ ಇಡುತ್ತಾನೆ. ಅವನ್ನು ಸುಲೂನ ಕೈಯಲ್ಲಿ ಕೊಡುವನು.)

(ತೆರೆ ಬೀಳುವುದು.)

ಮಳೆಗೆ

ಶ್ರೀ. ಟಿ. ಎಸ್. ಶ್ರೀನಿವಾಸಮೂರ್ತಿ, ಮೈಸೂರು

೧

ಬೀಳು ಬೀಳು ಬೀಳು ಮಳೇ!
ಬೀಳು ಬೀಳು, ತೋಯಲಿಳೆ!
ಬೀಳು, ಹಸಿರು ಚಿಮ್ಮಲಿ....
ಮುಗಿಲು ಅಡಕಿ ಬಾನಿನಲಿ-
ಗಿರಿಯ ರವಿಯ ಮುಸುಕುತಲಿ-
ಬೀಳು, ಬನವು ಚಿಗುರಲಿ!

೨

ಬೀಳು, ಬನವು ಬಿಸಿಲೆಯಾಗೆ
ತಳಿರು ಅಲರು ತೊನೆದು ತೂಗೆ
ಕಣ್ಣಿಗೊಸಗೆಯಾಗಲು....
ಬೀಳು ತುಂಬಿ ಬರಲು ತೊರೆ-
ಮಿಂಚಿ ಹೊಳೆಯೆ ಬೆಳ್ಳಿತೆರೆ-
ಭೋರ್ಗರೆದದು ಸಾಗಲು!

೩

ಕೋಡಿವರಿದು ಇಳಿಯೊಳೋಡು;
ಮಕ್ಕಳಾಡುವಾಟದೋಡ
ತೇಲಿಸಿ ನಲಿದಾಡಲಿ....
ಬುವಿಯ ಬಾನ ಸಂಧಿಸಿ ಸುರಿ!
(ಪರಕೆಯ ಸೇಸೆಯೆ ನೀ ಸರಿ!)
ನಮ್ಮಿಳೆ ಕಳೆಗೂಡಲಿ!

೪

ಚಿಮುಕಿಸೆಲ್ಲು ಚೈತ್ರದ್ಯುತಿ
ಬನದ ಕೊರಳ ಪಿಕದ ರುತಿ....
ಗೇಯದ ಹೊನಲ್ಹರಿಯಿಸು....
ಮೋಹದ ಮಳೆಬಿಲ್ಲ ಮಾಡಿ
ವರ್ಷಿಸು ಹೊಂಬಿಸಿಲ ಕೂಡಿ
ಕವಿಮನವಲರಲರಿಸು!

ಹಿಂದೀ ಸಾಹಿತ್ಯದ ವೀರಗಾಥಾಕಾಲ

ಶ್ರೀ. ಬಿ. ಧೀರೇಂದ್ರ 'ರಾ. ಭಾ. ವಿಶಾರದ' ಮತ್ತು 'ಕೋವಿದ' ಧಾರವಾಡ

ಭಾರತದಲ್ಲಿ ನಾಗರಿಕಸಾಹಿತ್ಯವು ದೇಶಭಾಷೆಗಳಿಗೆ ಇಳಿದುದೇ ಆ ಆ ದೇಶದ ರಾಜಕಾರ್ಯದ ಮೂಲಕ; ಎಂತಲೇ ಭಾರತದ ಯಾವ ದೇಶಭಾಷಾಸಾಹಿತ್ಯದಲ್ಲಿಯೂ 'ವೀರಗಾಥಾಸಾಹಿತ್ಯ'ಕ್ಕೆ ವಿಶಿಷ್ಟವಾದ ಸ್ಥಾನವು ದೊರೆತಿರುವುದು.

ಸಾಮಾನ್ಯವಾಗಿ ಪ್ರತಿಯೊಂದು ಭಾಷೆಯಲ್ಲಿಯೂ ಸಾಹಿತ್ಯದ ಎರಡು ರೂಪುಗಳನ್ನು ನಾವು ಕಾಣುತ್ತೇವೆ: ಒಂದು ಪದ್ಯ, ಎರಡನೆಯದು ಗದ್ಯ. ಭಾರತದ ಅನೇಕ ಭಾಷೆಗಳ ಕ್ರಮೋನ್ನತಿಯ ಇತಿಹಾಸವನ್ನು ಕೂಲಂಕಷವಾಗಿ ನಿರೀಕ್ಷಿಸಿದಲ್ಲಿ, ಪ್ರತಿಯೊಂದು ಭಾಷೆಯಲ್ಲಿಯೂ ಮೊದಲು ಪದ್ಯದ ಕಡೆಗೆ ಜನಗಳ ಒಲವು ಇತ್ತೆಂಬುದು ಕಂಡುಬರುವುದು. ಈ ಮಾತನ್ನು ಪುಷ್ಟೀಕರಿಸುವುದರಲ್ಲಿ ಅನ್ಯ ಭಾಷೆಗಳಷ್ಟೇ ಹಿಂದೀ ಸಾಹಿತ್ಯದಿಂದ ಸಹಾಯವಾಗುವುದೆಂಬುದರಲ್ಲಿ ತಿಲಮಾತ್ರವೂ ಸಂದೇಹವಿಲ್ಲ. ಏಳನೆಯ ಶತಾಬ್ದಿಯಲ್ಲಿಯೇ ಹಿಂದೀ ಸಾಹಿತ್ಯದ ಉತ್ಪತ್ತಿಯಾಗಿತ್ತೆಂದೂ, ಅಲ್ಲದೆ ಹಳೆಯ ಹಿಂದೀ (ಪುರಾನಿ ಹಿಂದೀ) ಯಲ್ಲಿ ಕವಿತೆಗಳು ಬರೆಯಲ್ಪಡಲಾರಂಭಿಸಿದುವೆಂದೂ ಅಭಿಪ್ರಾಯಗಳುಂಟು. ಆದರೆ ಈ ವಿಷಯವಾಗಿ ಅನೇಕ ವಾದ-ಪ್ರತಿವಾದಗಳಿರುವುವು. ಅವುಗಳನ್ನು ಇಲ್ಲಿ ಚರ್ಚಿಸುವುದು ಪ್ರಸಂಗೋಚಿತವಾಗಲಾರದು. ಏಕೆಂದರೆ ಅವುಗಳ ಚರ್ಚೆಯೇ ಪ್ರತ್ಯೇಕ ಲೇಖನವಾಗುತ್ತದೆ. ಆದರೆ ಇಷ್ಟು ಮಾತ್ರ ಖಂಡಿತ: ೧೦ನೆಯ ಶತಮಾನದಿಂದ ಇದರ ಕ್ರಮಬದ್ಧ ವಿಕಾಸದ ಇತಿಹಾಸವನ್ನು ಕಾಣುವೆವು ಎಂಬ ಮಾತು ಆಧಾರಯುಕ್ತವಾದಂತಹದೂ ನಿರ್ವಿವಾದವಾದುದೂ ಆಗಿದೆ. ಎಂದರೆ, ಸುಮಾರು ಸಾವಿರ ವರ್ಷಗಳ ಪೂರ್ವದಿಂದಲೂ ಹಿಂದೀ ಪದ್ಯಸಾಹಿತ್ಯವು-ಇಂದಿನ ವರೆಗೆ ಕ್ರಮೇಣ ಅಭಿವೃದ್ಧಿಯಾಗುತ್ತ ಬಂದಿದೆ.

ಈ ಸಾವಿರ ವರ್ಷಗಳ ಹಿಂದೀಸಾಹಿತ್ಯದ ಇತಿಹಾಸವನ್ನು ಆಯಾಕಾಲದ ರಾಜನೈತಿಕ, ಸಾಮಾಜಿಕ ಹಾಗೂ ಧಾರ್ಮಿಕ ಸ್ಥಿತಿಗಳ ಆಧಾರದ ಮೇಲೆ ನಾಲ್ಕು ಭಾಗಗಳಲ್ಲಿ ವಿಂಗಡಿಸಿದ್ದಾರೆ. ದೇಶದ ರಾಜನೈತಿಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ ಸ್ಥಿತಿಗಳು ಬದಲಿಸಿದಂತೆ, ಸಾಹಿತ್ಯದ ದೃಷ್ಟಿ-ಧೋರಣೆಗಳೂ ಆಯಾಕಾಲಕ್ಕೆ ತಕ್ಕಂತೆ ಬದಲಿಸುವುವೆಂಬ ಮಾತು, ಹಿಂದೀ ಸಾಹಿತ್ಯದ ನಾಲ್ಕು ವಿಭಿನ್ನ ಕಾಲಗಳಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ಸಾಹಿತ್ಯವು ಸಮಾಜದ ಪ್ರತಿಬಿಂಬವೆಂಬ ಮಾತನ್ನು ಹಿಂದೀಸಾಹಿತ್ಯವು ಎತ್ತಿ ತೋರಿಸುತ್ತದೆ.

ಹಿಂದೀಸಾಹಿತ್ಯದ ಕಾಲವಿಭಜನೆ:—

೧.	**ವೀರಗಾಥಾ ಕಾಲ**	ಸನ್ ೧೦೦೦ ದಿಂದ ೧೩೭೫
೨.	**ಭಕ್ತಿಕಾಲ**	ಸನ್ ೧೩೭೫ ರಿಂದ ೧೭೦೦
೩.	**ರೀತಿಕಾಲ**	ಸನ್ ೧೭೦೦ ರಿಂದ ೧೯೦೦
೪.	**ಆಧುನಿಕ ಕಾಲ**	ಸನ್ ೧೯೦೦ ರಿಂದ ಇಂ. ವ.

ಈ ಎಲ್ಲ ಕಾಲಗಳಲ್ಲಿ **'ವೀರಗಾಥಾ'** ಕಾಲದ ವಿಷಯವನ್ನು ಹೆಚ್ಚಾಗಿ ವಿಚಾರಿಸುವುದೇ ಈ ಲೇಖನದ ಉದ್ದೇಶವಾಗಿದೆ.

ವೀರಗಾಥಾ ಕಾಲ (ಸನ್ ೧೦೦೦ ದಿಂದ ೧೩೭೫)

ಹತ್ತನೆಯ ಶತಮಾನದಲ್ಲಿ ಉತ್ತರಭಾರತದಲ್ಲಿದ್ದ ಅನೇಕ ಸಣ್ಣ ಸಣ್ಣ ಸಂಸ್ಥಾನಗಳ ರಾಜರುಗಳು(ರಜಪೂತರು), ತಮ್ಮ ತಮ್ಮೊಳಗೆ ರಾಜ್ಯದ ಅಭಿವೃದ್ಧಿಗಾಗಿ ಹಾಗೂ ಆತ್ಮಗೌರವಕ್ಕಾಗಿ ಕಾದಾಡುತ್ತಿದ್ದರು. ಅರಬರ ಹಾಗೂ ಮುಸಲ್ಮಾನರ ಹಾವಳಿಗಳು ಈ ಪೂರ್ವದಲ್ಲಿಯೇ ಪ್ರಾರಂಭವಾಗಿದ್ದುವು. ಇಂತಹ ಸುಸಂದರ್ಭವನ್ನು ಸಾಧಿಸಿ, ಭಾರತದ ಹೊರದೇಶಗಳಿಂದ ಶತ್ರುಗಳು ಭಾರತದಲ್ಲಿ ಒಳನುಗ್ಗಹತ್ತಿದರು. **ಮುಹಮ್ಮದ ಗಝ್ನಿ** ಹಾಗೂ **ಶಹಾಬುದ್ದೀನ್ ಮುಹಮ್ಮದ ಘೋರಿ** ಮೊದಲಾದವರು ದಂಡೆತ್ತಿ ಬಂದದ್ದು ಇದೇ ಕಾಲದಲ್ಲಿ. ತತ್ಕಾಲೀನ ರಜಪೂತ ರಾಜರುಗಳು, ಆ ದಾಳಿಗಳನ್ನು ತಡೆಯುವುದಕ್ಕೋಸುಗ, ಅನೇಕ ಸಣ್ಣ ಪುಟ್ಟ ಯುದ್ಧಗಳನ್ನು ಮಾಡುತ್ತಿದ್ದರು. ಈ ಕ್ರಮವು ಅಖಂಡವಾಗಿ ೧೪ನೆಯ ಶತಮಾನದ ವರೆಗೆ ಪ್ರಚಾರದಲ್ಲಿದ್ದಿತು. ಇಂತಹ ಸಂದರ್ಭದಲ್ಲಿ, ಸೈನಿಕರಲ್ಲಿ ಹಾಗೂ ರಾಜರುಗಳಲ್ಲಿ ಯುದ್ಧಕ್ಕೆ ಬೇಕಾಗಿರುವಂತಹ ಉತ್ಸಾಹ, ಹುರುಪು, ಹುಮ್ಮಸ ಹಾಗೂ ವೀರಾವೇಶಗಳನ್ನು ಹುಟ್ಟಿಸುವುದು ತುಂಬ ಆವಶ್ಯಕವಾಗಿತ್ತು. ಈ ಕಾರಣದಿಂದಲೇ ಆಗಿನ ಕಾಲದ ರಜಪೂತ ರಾಜದರ್ಬಾರುಗಳಲ್ಲಿ ಚಾರಣರು ಹಾಗೂ ಭಾಟರು, ಆ ಕಾರ್ಯವನ್ನು ನಿರ್ವಹಿಸುವುದಕ್ಕೋಸ್ಕರ ಇರುತ್ತಿದ್ದರು. ಕಾದಾಡುವ ಪ್ರಸಂಗಗಳಲ್ಲಿ ಇವರು, ತಮ್ಮ ತಮ್ಮ ಆಶ್ರಯದಾತರ ಅದ್ವಿತೀಯ ವರ್ಣನೆ ಅಲ್ಲದೆ ಸೈನಿಕರಲ್ಲಿ ಅಪೂರ್ವ ಉತ್ಸಾಹ ಹಾಗೂ ಸ್ಫೂರ್ತಿಯನ್ನು ಹುಟ್ಟಿಸುವಂತಹ ಸಣ್ಣ ಸಣ್ಣ ಕವಿತೆಗಳನ್ನು ರಚಿಸಿ,

ಅವುಗಳಿಂದ ಜನರನ್ನು ಯುದ್ಧಕ್ಕೆ ಅಣಿಮಾಡುತ್ತಿದ್ದರು. ಶಾಂತಿಯ ಸಮಯದಲ್ಲಿ ತಮ್ಮ ತಮ್ಮ ಆಶ್ರಯದಾತರ ರೂಪ, ಗುಣ, ದಾನ, ಮಾನ, ಸನ್ಮಾನ ಹಾಗೂ ಐಶ್ವರ್ಯಗಳ ವಿಷಯವಾಗಿ ಅನೇಕ ಸರಸಕೃತಿಗಳನ್ನು ರಚಿಸಿ, ರಾಜರುಗಳಿಗೆ ಸುಖ-ಶಾಂತಿಗಳನ್ನುಂಟು ಮಾಡುತ್ತಿದ್ದರು. ಈ ಚಾರಣ ಹಾಗೂ ಭಾಟರ ರಚನೆಗಳಲ್ಲಿ ವೀರರಸವೇ ಪ್ರಧಾನವಾಗಿದೆ. ಆದುದರಿಂದಲೇ ಈ ಅವಧಿಗೆ (೧೦೦೦-೧೩೭೫) 'ವೀರಗಾಥಾ ಕಾಲ'ವೆಂದು ನಾಮಕರಣ ಮಾಡಿದುದುಂಟು.

ಈ ಕಾಲವು ನಿಜವಾಗಿ ರಾಜನೈತಿಕ ಕೋಲಾಹಲಗಳಿಂದ ಭೀಷಣ ರೂಪವನ್ನು ತಳೆದು, ಸಮಾಜದಲ್ಲಿ ಅಶಾಂತಿ ಹಾಗೂ ಶೋಚನೀಯ ಪರಿಸ್ಥಿತಿಯನ್ನು ಉಂಟು ಮಾಡಿತು' ಸಕಲ ಸಂಪತ್ತಿನಿಂದ ಸಮೃದ್ಧವಾದ ಸೋಮನಾಥ ದೇವಾಲಯವು ವಿಧರ್ಮೀಯರ ಭಯಂಕರ ದಾಳಿಯಿಂದ ನುಚ್ಚುನೂರಾದುದು ಈಗಲೆ.

ಅಶಾಂತಿ, ಅಂಧಕಾರ, ಅನೀತಿ, ಬಲಾತ್ಕಾರ ಮೊದಲಾದುವುಗಳಿಂದ ಓತಪ್ರೋತವಾದ ಈ ಯುಗದಲ್ಲಿಯೇ, ಹಿಂದೀ ಸಾಹಿತ್ಯವು ತನ್ನ ಶೈಶವಾವಸ್ಥೆಯಿಂದ ತನ್ನ ಪೂರ್ವಬಾಲಾವಸ್ಥೆಯಲ್ಲಿ ಹೆಜ್ಜೆ ಹಾಕಲಾರಂಭಿಸಿತು. ಹಿಂದೀಸಾಹಿತ್ಯಕ್ಕೆ ತನ್ನ ಶೈಶವಾವಸ್ಥೆಯಲ್ಲಿಯೇ ಅನೇಕಪ್ರಕಾರದ ಕಷ್ಟ-ನಷ್ಟಗಳನ್ನು ಎದುರಿಸಬೇಕಾಗಿ ಬಂತು.

ಈ ಕಾಲದ ಗ್ರಂಥಗಳಲ್ಲಿ ಹೆಚ್ಚು ಪ್ರಸಿದ್ಧಿಯನ್ನು ಅಲ್ಲದೆ ಗೌರವನ್ನು ಪಡೆದುವುಗಳೆಂದರೆ ಮೂರು:

೧. **ಪೃಥ್ವೀರಾಜರಾಸೋ ೨. ಬೀಸಲ ದೇವರಾಸೋ ೩. ಆಲ್ಹಾ**

೧. **ಪೃಥ್ವಿರಾಜರಾಸೋ**:— ಇದು ಸಂಪೂರ್ಣ ವೀರಗಾಥಾ ಕಾಲದ ಮಹತ್ತ್ವಪೂರ್ಣವಾದ ಮಹಾಕಾವ್ಯ. ಈ ಗ್ರಂಥವು ಸುಮಾರು ೧೨ನೆಯ ಶತಮಾನದಲ್ಲಿ **ಚಂದ್ ಬರದಾಯಿ** ಎಂಬವನಿಂದ ರಚಿಸಲ್ಪಟ್ಟಿತು. ಈ ಗ್ರಂಥವು ಕೇವಲ ವೀರಗೀತೆಗಳಿಂದೊಡಗೂಡಿದ್ದರೂ, ಕೆಲವೊಂದೆಡೆಯಲ್ಲಿ ಕೋಮಲ ಕಲ್ಪನೆಗಳೂ ಮನೋಹರವಾದ ಉಕ್ತಿಗಳೂ ಇದ್ದು, ಗ್ರಂಥದ ಹಿರಿಮೆಯನ್ನು ಹೆಚ್ಚಿಸಿವೆ; ಅಲ್ಲದೆ ಅಲ್ಲಲ್ಲಿ ಕಾಣುವ ಛಂದಗಳ ವಿಸ್ತಾರ ಮತ್ತು ಭಾಷೆಯ ವೈವಿಧ್ಯಗಳು, ಗ್ರಂಥದಲ್ಲಿ ಒಂದು ವಿಶೇಷಪ್ರಕಾರದ ಚಮತ್ಕಾರವನ್ನುಂಟು ಮಾಡಿರುತ್ತವೆ. ಇದರಲ್ಲಿ **'ರಾಮಚರಿತ ಮಾನಸ'** ಹಾಗೂ **'ಪದ್ಮಾವತ'** ದಂತೆ ಭಾವನೆಗಳ ಏಕತೆ, ಮಾರ್ಮಿಕತೆ ಹಾಗೂ ಅಭಿನವ ಕಲ್ಪನೆಗಳ ಬಹುಲತೆ ಇಲ್ಲದಿದ್ದರೂ, ವೀರಭಾವನೆಗಳ ಸುಂದರ-ಸುಕೋಮಲ ಹಾಗೂ ಸಹಜವರ್ಣನೆಗಳು ಬರುತ್ತಿದ್ದು ಅವು ಓದುಗರಲ್ಲಿ ಕುತೂಹಲ ಮತ್ತು ಆಶ್ಚರ್ಯವನ್ನುಂಟು ಮಾಡುತ್ತವೆ.

ಈ ಗ್ರಂಥದ ಲೇಖಕರ ವಿಷಯವಾಗಿ ಕೆಲವು ಭಿನ್ನ ಭಿನ್ನ ಮಾತುಗಳುಂಟು. ಈ ಕಾಲದ ಯಾವ ಮಾತನ್ನಾದರೂ ಅಧಿಕೃತವಾಗಿ ಸಿದ್ಧಮಾಡಿ ತೋರಿಸಲು ಸಬಲ ಪ್ರಮಾಣಗಳು ಸಿಕ್ಕುವುದು ದುರ್ಲಭವಾಗಿದೆ. ಪ್ರಸ್ತುತ ಗ್ರಂಥದಲ್ಲಿ, ಜಯಚಂದನ ಮಗಳಾದ ಸಂಯುಕ್ತೆಯು ಪೃಥ್ವಿರಾಜನೊಡನೆ ಮಾಡಿದ ಪ್ರೇಮ ಹಾಗು ಅವರಿಬ್ಬರ ವಿವಾಹವಾದ ರೀತಿ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ಸುಂದರ ಗೀತಗಳಿವೆ.

ಚಂದ್‌ಬರದಾಯಿಯು ಈ ಗ್ರಂಥವನ್ನು ಮುಗಿಸಲಿಲ್ಲವೆಂದೂ ಅವನ ಮರಣದ ನಂತರ ಬೇರೆ ಕೆಲವರು ಈ ಗ್ರಂಥದಲ್ಲಿ ಕೆಲವು ವಿಷಯಗಳನ್ನು ಸೇರಿಸಿ ಪೂರ್ತಿಗೊಳಿಸಿರುವರೆಂದೂ ಅನೇಕರ ಅಭಿಪ್ರಾಯವಿದೆ.

೨. **ಬೀಸಲದೇವರಾಸೋ**:— ಈ ಗ್ರಂಥದಲ್ಲಿ ಸುಪ್ರಸಿದ್ಧ ವೀರಗೀತಗಳುಂಟು. ಈ ಗ್ರಂಥವು ಸುಮಾರು ಸನ್ ೧೧೫೫ ರಲ್ಲಿ ನರಪತಿ ನಾಲ್ಹನಿಂದ ಬರೆಯಲ್ಪಟ್ಟಿತು. ಇದರಲ್ಲಿ ಬೀಸಲದೇವರಾಜನ ಮಾರ್ಮಿಕ ಕತೆ ಹಾಗೂ ಅವನು ಮಾಡಿದಂತಹ ಅನೇಕ ಘನಘೋರ ಯುದ್ಧಗಳ ವರ್ಣನೆ, ಅಲ್ಲದೆ ಇಷ್ಟಪಟ್ಟು ವಿವಾಹ ಮಾಡಿಕೊಂಡಂತಹ ಪತ್ನಿಯನ್ನು ತ್ಯಜಿಸಿ ಓಡಿಸಾಕ್ಕೆ ಓಡಿಹೋದ ಸಂಗತಿ–ಇವುಗಳ ಸಂಪೂರ್ಣ ವಿಷಯವು ತುಂಬಾ ರೋಚಕವಾಗಿ ಚಿತ್ರಿಸಲ್ಪಟ್ಟಿದೆ.

೩. **ಆಲ್ಹಾ**:— ಇದು ಈ ಯುಗದ ಮೂರನೆಯ ಸುಪ್ರಸಿದ್ಧ ಗ್ರಂಥವು. ಇದು ಜಗನಿಕನೆಂಬ ಪ್ರತಿಭಾಶಾಲಿ ಕವಿಯಿಂದ ರಚಿಸಲ್ಪಟ್ಟಿತು. ಈ ಕವಿಯು ಕಲಿಂಜರದ ರಾಜನ ಆಸ್ಥಾನದಲ್ಲಿ ಭಾಟನಾಗಿಯೂ ಮತ್ತು ಕನೋಜದ ಅಧಿಪತಿಯಾದ ಜಯಚಂದನ ಮಿತ್ರನಾಗಿಯೂ ಇದ್ದನು. ಈ ಗ್ರಂಥದಲ್ಲಿ ತತ್ಕಾಲೀನ ಕ್ಷತ್ರಿಯವಂಶದ ಮಹಾವೀರ ಆಲ್ಹಾ ಹಾಗೂ ಅದ್ವಿತೀಯ ಶೂರ ವಾದಲರಿವರಿಬ್ಬರು ಯುದ್ಧಗಳಲ್ಲಿ ಪ್ರದರ್ಶಿಸಿದ ಶೌರ್ಯ-ಧೈರ್ಯ-ಪರಾಕ್ರಮಾದಿಗಳ ಸುಂದರ ಮತ್ತು ಸ್ವಾಭಾವಿಕ ವರ್ಣನೆಗಳಿವೆ. ಸಾಹಿತ್ಯದ ದೃಷ್ಟಿಯಿಂದ ಅನೇಕ ಗುಣಗಳ ನ್ಯೂನತೆ ಕಂಡು ಬಂದರೂ, ಉತ್ತರ ಭಾರತೀಯರಿಗೆ ಈ ಗ್ರಂಥವು ತುಂಬ ಪ್ರಿಯವಾಗಿದೆ. ಉತ್ತರ ಭಾರತೀಯರು ಈ ಗ್ರಂಥಕ್ಕೆ ಕೊಡುವ ಆದರ-ಗೌರವಗಳು ಅಷ್ಟಿಷ್ಟಲ್ಲ. ಉತ್ತರ ಭಾರತದ ಅನೇಕ ಹಳ್ಳಿಗಳಲ್ಲಿ, ಪ್ರಸ್ತುತ ಗ್ರಂಥದ ಗೀತಗಳನ್ನು ಪಾಡಿ, ಆಡಿ, ನಲಿದು ಒಲಿದು ಕುಣಿದಾಡುವುದು ಇಂದಿಗೂ ಕಾಣುವುದು. ಜನಗಳು ತಮ್ಮ ವಿಶ್ರಾಂತಿಕಾಲದಲ್ಲಿ ಕೌಟುಂಬಿಕ ಕಾರ್ಯಗಳಿಂದ ಕಳವಳಗೊಂಡ ಮನಸ್ಸನ್ನು ತೃಪ್ತಿಪಡಿಸುವುದಕ್ಕೋಸ್ಕರ, ಇಚ್ಛೆ ಬಂದಂತೆ ಈ ಗ್ರಂಥದ ಮೂಲರೂಪದಲ್ಲಿ ಕೆಲಮಟ್ಟಿಗೆ ಪರಿವರ್ತನೆ ಮಾಡಿಕೊಂಡಿದ್ದಾರೆ ಹಾಗೂ ಮಾಡುತ್ತಿದ್ದಾರೆ. ಈ ಗ್ರಂಥದಲ್ಲಿ ವರ್ಣಿಸಲ್ಪಟ್ಟ ಅನೇಕ ರೋಮಾಂಚಕಾರಿ ಅದ್ಭುತ ಘಟನೆಗಳಿಂದ ಪೂರ್ಣಪ್ರಭಾವಿತರಾಗಿ, ಅನೇಕರು ಹೊಸ ಚೈತನ್ಯ, ಹೊಸ ಶಕ್ತಿಗಳನ್ನು ತಾಳಿ ಆವೇಶಕ್ಕೊಳಪಟ್ಟು, ಯುದ್ಧಕ್ಕೆ ಅಣಿಯಾದ ಕಡುಗಲಿಯಂತೆ ಭುಜ ಚಪ್ಪರಿಸಿ ಮೈದಾನಕ್ಕಿಳಿದ ಉದಾಹರಣೆಗಳು ಉತ್ತರಭಾರತದಲ್ಲಿ ಸಿಕ್ಕುತ್ತವೆ. ಒಟ್ಟಿನಲ್ಲಿ ವೀರರಸವೇ ಈ ಗ್ರಂಥದ ಜೀವಾಳವೆಂದು ಹೇಳಬಹುದು. ಇದರ ಕೊನೆಯು ಬಹಳ ಕರುಣಾಪೂರ್ಣವಾಗಿದೆ. ಸಮಸ್ತವೀರರೂ ಮಹಾವೀರರೂ ಯುದ್ಧದಲ್ಲಿ ಮಡಿದು ಅವರುಗಳ ರಾಣಿಯರು ಒಬ್ಬೊಬ್ಬರಾಗಿ ಸತಿ ಹೋಗುತ್ತಾರೆ. ಕೊನೆಗೆ ಆಲ್ಹಾ ಹಾಗೂ ಅವನ ಮಗ ಇವರಿಬ್ಬರು ಮಾತ್ರ ಉಳಿದು, ಗೃಹ-

ಪರಿತ್ಯಾಗ ಮಾಡಿ, ದಿಕ್ಕೆಟ್ಟು ಅಡವಿಯನ್ನು ಸೇರುತ್ತಾರೆ.

ಈ ಮೂರೂ ಗ್ರಂಥಗಳು ತತ್ಕಾಲೀನ ಹಿಂದೂ ರಾಜರುಗಳ ವಿಭಿನ್ನ ಮನೋವೃತ್ತಿಗಳ ಪರಿಚಯವನ್ನು ಮಾಡಿಕೊಡುತ್ತವೆ. ಇದೇ ರೀತಿಯಾಗಿ ಅಮೀರ್ ಖುಸರು ಎಂಬ ಮುಸಲ್ಮಾನ್ ಕವಿಯ ಕೃತಿಗಳಲ್ಲಿ, ಮುಸಲ್ಮಾನರ ಮನೋಭಾವಗಳ ಪ್ರತಿಬಿಂಬವನ್ನು ಕಾಣುತ್ತೇವೆ. ಅನ್ಯದೃಷ್ಟಿಯಿಂದ ಇವನ ಕೃತಿಗಳು ಅಷ್ಟೊಂದು ಉಪಯುಕ್ತ ಹಾಗೂ ಲಾಭದಾಯಕವಾಗಿಲ್ಲದಿದ್ದರೂ, ಭಾಷೆಯ ವಿಕಾಸದ ದೃಷ್ಟಿಯಿಂದ ರಚಿಸಿದಂಥ 'ಮುಸನಲಿ' ಹಾಗೂ 'ಪಹೇಲಿ' ಗಳಿಗೆ ತುಂಬಾ ಮಹತ್ತ್ವ ಕೊಡುವುದು ನ್ಯಾಯಸಂಗತವು.

ವಿದ್ಯಾಪತಿಯೆಂಬ ಮತ್ತೊಬ್ಬ ಈ ಕಾಲದ ಕವಿಯು, ರಾಧಾಕೃಷ್ಣರ ಪ್ರೇಮಲೀಲಾಗೀತಗಳನ್ನು ಶೃಂಗಾರ ರಸದೊಂದಿಗೆ–ಸೊಗಸಾಗಿ ಹಾಡಿದ್ದಾನೆ. ಇವನ ರಚನೆಗಳು ತುಂಬ ಸರಸ ಹಾಗೂ ಮಧುರವಾಗಿರುವುವು.

ಈ ಕಾಲದಲ್ಲಿ ಮುಖ್ಯತಃ ಎರಡು ಭಾಷೆಗಳು ಹೆಚ್ಚು ಪ್ರಚಲಿತವಿದ್ದುವು. ಒಂದು ಹಳೆಯ ಅಪಭ್ರಂಶಭಾಷೆಯ ಹೊಸರೂಪ; ಮತ್ತೊಂದು ಸಾಧಾರಣ ಜನರಲ್ಲಿ ನಿತ್ಯಬಳಕೆಯಲ್ಲಿದ್ದ ರೂಪ; ಇವೆರಡೂ ಭಿನ್ನರೂಪಗಳು ಅನುಕ್ರಮವಾಗಿ **ಡಿಂಗಲ್** ಮತ್ತು **ಪಿಂಗಲ್** ಎಂದು ಕರೆಯಲ್ಪಟ್ಟವೆ. ಅನಂತರ ಮೊದಲನೆಯ ಭಾಷೆಯಾದ ಡಿಂಗಲ್‌ದ ಪ್ರಚಾರ ಕ್ರಮೇಣ ಕಡಿಮೆಯಾಗಲಾರಂಭಿಸಿತು ಅಲ್ಲದೆ ಎರಡನೆಯ ಭಾಷೆಯಾದ ಪಿಂಗಲ್‌ದ ಪ್ರಚಾರ ಮತ್ತು ಪ್ರಸಾರ ನಿತ್ಯಪ್ರತಿ ಹೆಚ್ಚಾಗಿ, ಕೆಲವೊಂದು ವರ್ಷದನಂತರ ಇದೇ '**ವ್ರಜಭಾಷೆ**' ಎಂಬ ಹೆಸರಿನಿಂದ ಪ್ರಸಿದ್ಧಿಗೆ ಬಂದಿತು.

ಇನ್ನು ಈ ಕಾಲದ ಛಂದಗಳ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳುವುದು ಉಚಿತವು. ಮೊದಲನೆಯದಾಗಿ ಈ ಕಾಲದ ಹೆಸರೇ (ವೀರಗಾಥಾಕಾಲ) ಈ ಮಾತನ್ನು ಸ್ಪಷ್ಟಪಡಿಸುವಂತಹದಾಗಿದೆ. ಹೇಗೆಂದರೆ: ಈ ಕಾಲದ ಒಂದೆರಡು ಕೃತಿಗಳನ್ನು ಬಿಟ್ಟು ಉಳಿದೆಲ್ಲ ಕೃತಿಗಳು, ವೀರರಸದಿಂದ ಪರಿಪೂರ್ಣವಾಗಿವೆ ಎಂಬ ಮಾತನ್ನು ಬೇರೆ ಹೇಳಬೇಕಾಗಿಲ್ಲ.

ನಾನು ಈ ಕಾಲದ ಮೂರೇ ಪ್ರಧಾನ ಕೃತಿಗಳನ್ನು ಪಾಠಕರ ಮುಂದೆ ಇಟ್ಟಿರುವೆ. ಅಲ್ಲದೆ ಇನ್ನೂ ಕೆಲವು ಸಣ್ಣಪುಟ್ಟ ಕೃತಿಗಳೂ ಉಂಟು. ಅವೆಲ್ಲವುಗಳ ವಿಷಯವನ್ನು ಈ ಚಿಕ್ಕ ಲೇಖನದಲ್ಲಿ ವಿವರಿಸುವುದು ಕಷ್ಟಸಾಧ್ಯ. ಕಾರಣ ವಾಚಕರು, ವಿವರಿಸದುದು ಈ ಕಾಲದ ಒಂದು ಸ್ಥೂಲರೂಪವೆಂದು ಮಾತ್ರ ತಿಳಿದುಕೊಳ್ಳಬೇಕು. ಈ ಯುಗದ ಕೃತಿಗಳು **ದೋಹಾ ಕವಿತ್ತ, ಛಪ್ಪಯ, ತೋಮರ** ಮುಂತಾದ ಛಂದಗಳಿಂದಲೇ ರಚಿಸಲ್ಪಟ್ಟವೆ.

ಈ ಕಾಲದ ಎಲ್ಲ ಕವಿಗಳೂ ತತ್ಕಾಲೀನ ರಾಜನೇ ತಮ್ಮ ಸರ್ವಸ್ವವೆಂದು ತಿಳಿದುಕೊಂಡಿದ್ದರು. ಯಾವಾಗಲೂ ತಮ್ಮ ಆಶ್ರಯದಾತನ ಕೀರ್ತಿಯನ್ನು ಹೊಗಳುವುದೇ ತಮ್ಮ ಕೃತಿಯ ಮಹೋದ್ದೇಶವೆಂದು ಅವರ ಭಾವನೆ ಇತ್ತು. ತಮ್ಮ ಒಡೆಯನನ್ನು ಹಸನ್ಮುಖನನ್ನಾಗಿ ಹಾಗೂ ಪ್ರಸನ್ನನಾಗಿ ಇರಿಸಲು, ತಮ್ಮ ಸ್ವಾಮಿಯ ಕೃತ್ಯಗಳ ಸಮರ್ಥನೆಯೇ ತಮ್ಮ ಜೀವನದ ಗುರಿ ಅಥವಾ ಸಾರ್ಥಕತೆ ಅವರು ತಿಳಿದುಕೊಂಡಿದ್ದರು. ದೇಶದ ಹಾಗೂ ಸಮಾಜದ ಉ ಹಾಗೂ ಭವಿಷ್ಯದ ಬಗ್ಗೆ ವಿಚಾರಗಳು ಸ್ವಪ್ನದಲ್ಲಿ ಕೂಡ ಅ ಬರುತ್ತಿರಲಿಲ್ಲ. ಕವಿಗಳ ಪಾಡೇ ಹೀಗಿದ್ದ ಮೇಲೆ, ಇನ್ನು ಅವರ ಕೃತಿಗ ಉಚ್ಚ ಆದರ್ಶಗಳ ಸಮಾವೇಶವಾಗುವುದಂತೂ ದೂರವೇ ಉಳಿ ಹಿಂದೀ ಸಾಹಿತ್ಯದ ಆದಿಕಾಲದ ಕವಿಗಳು, ಕೇವಲ ತಮ್ಮ ಸ್ವಾ ಸಾಧನೆಗಾಗಿಯೇ ಕೃತಿಗಳನ್ನು ರಚಿಸುತ್ತಿದ್ದರೆಂದು ಹೇಳಿದರೆ ಏ ತಪ್ಪಾಗದು. ತಾತ್ಪರ್ಯವಿಷ್ಟೇ: ರಾಜನೀತಿಯ ಭೀಕರ ಪರಿ ಯಲ್ಲಿ ಸಿಲುಕಿ, ಹಿಂದೀಸಾಹಿತ್ಯದ ಆದಿಯುಗವಾದ ವೀರಗಾ ಕಾಲದಲ್ಲಿ, ಸರ್ವತೋಮುಖವಾದ ಸಾಹಿತ್ಯವು ಹುಟ್ಟದೆ ಏಕಾಂಗಿಯಾಯಿತು.

ಮೇಲಿನ ಚರ್ಚೆಯಿಂದ ಹಿಂದೀ ಸಾಹಿತ್ಯದ ಪ್ರ ಯುಗವಾದ 'ವೀರಗಾಥಾ' ಕಾಲದ ಸ್ಥೂಲರೂಪವನ್ನು ನಾ ಕಂಡುಕೊಳ್ಳುತ್ತೇವೆ. ಇನ್ನು ಈ ಸಮಯದಲ್ಲಿ ಕನ್ನಡ ಸಾಹಿ ಯಾವ ಯುಗವು ಪ್ರಚಲಿತವಿತ್ತೆಂಬುದನ್ನು ಒಂದೆರಡು ಮಾತುಗ ಇಲ್ಲಿ ಹೇಳುವುದು ಆವಶ್ಯಕವೆಂದು ತೋರುತ್ತದೆ. ಏಕೆಂದರೆ ಇದ ಓದುಗರಲ್ಲಿ ತುಲನಾತ್ಮಕ ದೃಷ್ಟಿಯು ಉಂಟಾಗುತ್ತದೆ. ಹಿಂ ಸಾಹಿತ್ಯದಂತೆಯೇ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಕ ನಾವು ನಾಲ್ಕು ವಿಭಾಗಗಳನ್ನು ಕಾಣುತ್ತೇವೆ.

೧. ಚಂಪೂಯುಗ ೯೦೦–೧೨೦೦.
೨. ವಚನ ಯುಗ ೧೨೦೦–೧೪೦೦.
೩. ಜಾನಪದ ಯುಗ ೧೪೦೦–೧೮೦೦.
೪. ಆಧುನಿಕ ಯುಗ ೧೮೦೦ ರಿಂದ.....

ಹಿಂದೀ ಸಾಹಿತ್ಯದ ವೀರಗಾಥಾ ಕಾಲದಲ್ಲಿ, ಕನ್ನಡ ಸಾಹಿ ಚಂಪೂಯುಗ ಹಾಗೂ ವಚನ ಯುಗದ ಪ್ರಾರಂಭಿಕ ಕಾಲವಿತ್ತೆ ಹೇಳಬಹುದು. ಆದಿಪಂಪನೇ ಚಂಪೂಯುಗದ ಪ್ರಾತಿನಿಧಿಕ ಯೆಂದು ಹೇಳುತ್ತಾರೆ. ಚಂಪೂಯುಗಕ್ಕೆ ಪಂಪಯುಗವೆಂ ಹೇಳುವುದುಂಟು. ವೀರಗಾಥಾ ಕವಿಗಳಂತೆಯೇ ಪಂಪನು ಕ ತನ್ನ ಆಶ್ರಯದಾತನ ತೃಪ್ತಿಗೋಸ್ಕರವೇ "ವಿಕ್ರಮಾರ್ಜುನ ವಿಜ ಅರ್ಥಾತ್ "ಪಂಪಭಾರತ" ವನ್ನು ಬರೆದನು. ಈ ರೀತಿ ಹಿ ಸಾಹಿತ್ಯದ ವೀರಗಾಥಾ ಕಾಲ ಹಾಗೂ ಕನ್ನಡ ಸಾಹಿತ್ಯದ ಚಂ ಯುಗ ಇವೆರಡರಲ್ಲಿ ಏಕರೂಪತೆ ಕಂಡು ಬರುತ್ತದೆ.

ಈ ಲೇಖನದಲ್ಲಿ ಹಿಂದೀ ಹಾಹಿತ್ಯದ ವೀರಗಾಥಾಕಾ ಸಂಬಂಧಪಟ್ಟ ಎಲ್ಲ ವಿಷಯ ಬಂದಿರಲಿಕ್ಕಿಲ್ಲ ಹಾಗೂ ಬರಲು ಸಾ ವಿಲ್ಲ. ನನಗೆ ತೋರಿದಂತೆ ಹಲವು ಮುಖ್ಯ ಮುಖ್ಯ ವಿಷಯಗ ಮಾತ್ರ ಕನ್ನಡಿಗರಾದ ತಮಗೆ ನಿರೂಪಿಸಬೇಕೆಂದು ಇಚ್ಛಿಸಿ, ಇ ಬರೆದದ್ದುಂಟು.

ಕನಸಿನ ಮನೆ

(ಒಂದು ಸಣ್ಣ ಕತೆ)

ಕು. ಚಂದ್ರಿಕಾ ಅನಂತರಾವ ಕೊಪ್ಪರ, ಹಳಿಯಾಳ

●

ಅನೇಕ ಸವಿನೆನಪುಗಳ ಮೂಲಕ ಆತ್ಮೀಯಭಾವಕ್ಕೆ ಆಗರವಾದ ತಾತನ ಮನೆಯು ಕಾಲದ ಬಾಯಿಗೆ ಆಹುತಿಯಾಗುವುದರಲ್ಲಿತ್ತು; ಅಷ್ಟರಲ್ಲಿಯೆ ಆ ಮನೆಯ ಒಂದು ಸಂಸ್ಕೃತಿಯ ಗುಣವೇ ಅದನ್ನುಳಿಸಿತು!

"ಮನೆ ಮನೆ–ನನ್ನ ಮನೆ......."

ವೀಣೆ ಅಂಗಳದಲ್ಲಿ ಚಪ್ಪಾಳೆ ತಟ್ಟಿ ಕುಣಿಯುತ್ತಿದ್ದಳು. ಹೂವಿನ ಮಾಲೆ ಮಾಡುತ್ತಿದ್ದ ಅವಳ ಐದಾರು ಜನ ಗೆಳತಿಯರೂ ತಮಗೆ ತೋಚಿದಂತೆ ಅವಳ ಜತೆಗೆ ಹಾಡುತ್ತಿದ್ದರು. ದೂರದಲ್ಲಿ ಗೋಪಾಲ ಕೊಳಲೂದುವುದರಲ್ಲಿ ಮಗ್ನನಾಗಿದ್ದ. ಜತೆಯ ಮೂರು ನಾಲ್ಕು ಹುಡುಗರು ತೆಂಗಿನ ಗರಿಯ ಪೀಪಿಗಳನ್ನೂದುತ್ತಿದ್ದರು. ಪುಟ್ಟ ಕಿಶೋರಿ ಉಪಾಯಗಾಣದೆ, ಯಾವುದೋ ಡಬ್ಬದ ಮುಚ್ಚಳವನ್ನು ಕೋಲಿನಿಂದ ಬಡಿಯುತ್ತಿದ್ದಳು.......

ಕಟ್ಟೆಯ ಮೇಲೆ ಕುಳಿತು ಇದೆಲ್ಲವನ್ನೂ ನೋಡುತ್ತಿದ್ದಂತೆ ನನ್ನ ಮನಸ್ಸು ಎಲ್ಲೆಲ್ಲಿಯೋ ಅಲೆದಾಡಿತು.... ಮುಂಜಾನೆಯಿಂದ ಊಟ-ತಿಂಡಿಗಳ ಪರಿವೆಯಿಲ್ಲದೆ, ಗೆಳತಿಯರ ಸಹಾಯದಿಂದ ವೀಣೆ ಒಂದು ಮನೆಯನ್ನು ತಯಾರಿಸಿದ್ದಳು. ನಿತ್ಯ ಮಾತುಮಾತಿಗೆ ಜಗಳ ತೆಗೆಯುವ ಗೋಪಾಲನೂ ಇಂದು ಮನೆ ಕಟ್ಟಲು ಮನಃಪೂರ್ವಕ ನೆರವಾಗಿದ್ದ. ನಾಲ್ಕು ಚಿಕ್ಕ ಗಳುವನ್ನು ನಿಲ್ಲಿಸಿ, ಮೇಲೆ ಗಿಡದ ಟೊಂಗೆಗಳಿಂದ ಮುಚ್ಚಿ, ಚಿಕ್ಕದೊಂದು ಪರ್ಣಕುಟಿಯನ್ನಾಗಿ ಮಾಡಿದ್ದರು. ಸುತ್ತಲೂ ಹೂವಿನ ಸರಗಳು ತೂಗುಹಾಕಲ್ಪಟ್ಟಿದ್ದುವು ಅಲಂಕೃತವಾದ ಬೊಂಬೆಯೊಂದು ಅದರಲ್ಲಿಡುವುದಕ್ಕೋಸ್ಕರ ಸಿದ್ಧವಾಗಿತ್ತು. ಊದಿನ ಕಡ್ಡಿಗಳ ಸುವಾಸನೆ ಸುತ್ತಲೂ ಹರಡಿತ್ತು. ಎರಡು ಮೂರು ದಿನಗಳಿಂದ ಕೂಡಿಟ್ಟ ತನ್ನ ಪಾಲಿನ ತಿಂಡಿಯನ್ನೆಲ್ಲ ವೀಣೆ ತಟ್ಟೆಯಲ್ಲಿಟ್ಟಿದ್ದಳು........

ದಿನದ ಶ್ರಮದಿಂದ ದಣಿದು ಮನೆಗೆ ಹೊರಡುತ್ತಿರುವ ಸೂರ್ಯ, ಕ್ಷಣಕಾಲ ಚಿಕ್ಕಮಕ್ಕಳ ಆಟ ನೋಡುತ್ತ ತನ್ಮಯನಾಗಿ ನಿಂತಂತೆ, ಸಂಧ್ಯಾಕಾಲದ ಸುವರ್ಣಛಾಯೆ ಅದಕ್ಕೊಂದು ಅವರ್ಣನೀಯ ಶೋಭೆ ತಂದಿತ್ತು.

"ಜಲಜಾ ಹೇಗೆ ನಗುತ್ತಿದ್ದಾಳೆ ನೋಡು ಸರೂ. ಮನೆ ಅವಳಿಗೆ ಒಪ್ಪಿಗೆಯಾದಂತೆ ಕಾಣುತ್ತದೆ ಅಲ್ಲವೇ?" ವೀಣೆ ತನ್ನ ಬೊಂಬೆಯನ್ನು ನೇವರಿಸುತ್ತ, ಬೊಂಬೆಯ ಬದಲು ತಾನೇ ನಗುತ್ತ ಹೇಳಿದಳು.

"ಮುಂಜಾನೆಯಿಂದ ಕಷ್ಟಪಟ್ಟು ಇಷ್ಟು ಚೆನ್ನಾಗಿ ಅಲಂಕಾರ ಮಾಡಿದ್ದೇವೆ. ಅಬ್ಬಾ, ಒಪ್ಪಿಗೆಯಾಗದೇನು ಮಾಡುತ್ತದೆ!" ಸರೋಜಾ ಹೆಮ್ಮೆಯಿಂದ ಮನೆಯನ್ನು ನೋಡುತ್ತ ಹೇಳಿದಳು.

ನನ್ನ ಕಣ್ಣು ಮಂಜಾಯಿತು.... ಎದುರಿಗೆ ತಳಿರು-ತೋರಣಗಳಿಂದ ಅಲಂಕೃತವಾದ ಮನೆಯೊಂದು ಕಂಡಿತು.... ಓಲಗದ ಸದ್ದು ಕೇಳುತ್ತಿತ್ತು. ಜನರೆಲ್ಲ ಆತುರದಿಂದ ನೋಡುತ್ತಿದ್ದರು. ಹುಡುಗರೆಲ್ಲ ಬಣ್ಣಬಣ್ಣದ ಬಟ್ಟೆಗಳನ್ನುಟ್ಟು ಪಟಾಕ್ಷಿ ಹಾರಿಸುವುದರಲ್ಲಿ ಮಗ್ನರಾಗಿದ್ದರು. ಸಾಲಾಗಿ ಹಚ್ಚಿದ ಹಣತೆಗಳ ಶಾಂತ ಜ್ಯೋತಿಯಿಂದ ಮನೆ ಒಂದು ತರದ ಅಪೂರ್ವ ತೇಜದಿಂದ ಬೆಳಗುತ್ತಿತ್ತು. ಆದರೆ....ಗಾಳಿಬೀಸಿತು. ಹಣತೆಗಳೆಲ್ಲ ಒಂದರ ಹಿಂದೊಂದು ಮಾಯವಾದುವು. ಮನೆ ಬೀಳುವಂತೆ ಅಲುಗ ತೊಡಗಿತು.... ಛೇ, ಇದೇನು, ಇನ್ನೂ ಅಲುಗಾಡುತ್ತಿದೆಯಲ್ಲ!........

ಕಣ್ಣೊರಸಿಕೊಂಡು ಸುತ್ತಲೂ ನೋಡಿದೆ. ವೀಣೆ ಬೊಂಬೆಯನ್ನೆತ್ತಿ ಮನೆಯಲ್ಲಿ ಇಡತೊಡಗಿದ್ದಳು. ಉಳಿದವರೆಲ್ಲ ಬಾರಿಸುತ್ತ ಕುಣಿಯುತ್ತ ಹಾಡುತ್ತಿದ್ದರು. ನನಗಿದನ್ನು ನೋಡುವುದಾಗಲಿಲ್ಲ. ಅಲ್ಲಿಂದ ಎದ್ದು ಗುಲಾಬಿ ಗಿಡಗಳ ಮಧ್ಯೆ ಇದ್ದ ಕಟ್ಟೆಯ ಮೇಲೆ ಕುಳಿತೆ. ಆದೇ ಅರಳುತ್ತಿದ್ದ ಮೊಗ್ಗುಗಳು ಆನಂದದಿಂದ ಬಳುಕುವುದನ್ನು ಕಂಡು ಮತ್ಸರವೆನಿಸಿತು. ಗಾಳಿಯು ಬಂದಾಗಲೊಮ್ಮೆ ಸಂಪಿಗೆಯ ಸುವಾಸನೆಯನ್ನು ಎಳೆದು ತರುತ್ತಿತ್ತು. ಗಿಡದ ತುದಿಗೆ ಅರಳಿದ ಸಂಪಗೆಯ ಹೂಗಳು 'ಇಲ್ಲಿ ಬಂದು ಹೇಗೆ ನಮ್ಮನ್ನು ಕರೆದೊಯ್ಯುವಿರೋ ನೋಡೋಣ!' ಎನ್ನುವಂತೆ, ಅಭಿಮಾನದಿಂದ ಬಳುಕುತ್ತಿದ್ದುವು. ಮೊಗ್ಗುಗಳೆಲ್ಲ ಭವಿಷ್ಯದ ಸುಖವನ್ನು ನೆನೆಯುತ್ತ ಆನಂದದಿಂದ ನಲಿಯುತ್ತಿದ್ದುವು. ಆದರೆ ಜೀವನವೆಂದರೆ ಹಸಿರು ಹುಲ್ಲಿನ ಮೇಲೆ ನಡೆಯುತ್ತ ಸುತ್ತಲಿನ ವನಸಿರಿಯನ್ನು ಕಂಡು ಆನಂದಿಸಿ

ದಂತಲ್ಲ; ಮೃಗಜಲದಂತೆ ಕ್ಷಣಕಾಲ ಸುಂದರ ದೃಶ್ಯ ಕಂಡು ತನ್ಮಯವಾದರೂ, ಮರುಕ್ಷಣವೇ ಆಪತ್ತುಗಳ ತಗ್ಗು-ದಿನ್ನೆಗಳನ್ನು ನೋಡುತ್ತ ಮುಂದುವರಿಯಬೇಕಾಗುತ್ತದೆ. ಪ್ರಯತ್ನಪಟ್ಟು ಕಟ್ಟಿದ ಕನಸಿನ ಮನೆ ಬೀಳುತ್ತಿದ್ದರೂ, ಪರಿವೆಯಿಲ್ಲದೆ ಮುಂದುವರಿಯ ಬೇಕಾಗುತ್ತದೆ. ಜೀವನವನ್ನೆಲ್ಲ ಕನಸಿನ ಮಂಡಿಗೆ ತಿನ್ನುತ್ತ ಕಳೆದರೂ, ಕೊನೆಗೂ ಗೋಥಿಯ ದರ್ಶನವಾಗುವಂತಿಲ್ಲ........

ನನ್ನ ಮನೆ! ಆಹಾ, ಎಂತಹ ಮಧುರ ಶಬ್ದ, ಎಂತಹ ಮಧುರ ಭಾವನೆ! ಎಷ್ಟು ಆಕರ್ಷಣ ಶಕ್ತಿಯಿದೆ ಆ ಶಬ್ದದಲ್ಲಿ! ಆಡಿ ಬೆಳೆದ ಮನೆಯಲ್ಲಿಯೇ ಕೊನೆಯದಾಗಿ ತನ್ನ ದೇಹ ವಿಶ್ರಮಿಸ ಬೇಕೆಂದು ಎಲ್ಲರೂ ಆಶೆ ಪಡುವುದು ಸಹಜ. ಆದರೆ ಎಷ್ಟೋ ಜನರಿಗೆ ನನ್ನಂತೆಯೇ ಮನೆಯೆಂದರೆ ಕನಸಿನ ಮನೆಯಾಗಬಹುದು!

ಕನಸಿನ ಮನೆ! ನಿಜ, ಕನಸಿನಲ್ಲಿಯ ಅರಮನೆಯನ್ನೇ ತನ್ನ-ದೆಂದು ತಿಳಿದು ಆನಂದಪಟ್ಟಂತಾಯಿತು ನನ್ನ ಗತಿ! ಅಯ್ಯೋ, ಎಷ್ಟು ವಿಧದಿಂದ ಆಶೆಪಟ್ಟಿದ್ದೆ! ಆದರೆ ಅದನ್ನು ಹೀಗೆ ನೆಲಸಮ ಗೊಳಿಸುವ ಉದ್ದೇಶವೇನಿದೆಯೋ ಬಲ್ಲವರಾರು?.. .....

ಸಂಜೆಯ ತಂಗಾಳಿಯಿಂದ ತಲೆನೋವು ಕಡಿಮೆಯಾಗುವ ಬದಲು ಹೆಚ್ಚಾಗತೊಡಗಿತು. ಗಾಳಿ ಬಂದಾಗಲೊಮ್ಮೆ, ಬಾಡಿದ ಗುಲಾಬಿಹೂಗಳ ಪಕಳೆಗಳುದುರುತ್ತಿದ್ದುವು. ತುಳಸಿಕಟ್ಟೆಯ ಬಳಿ ಇಟ್ಟಿದ್ದ ಪಣತಿ ಮಂದವಾಯುವನ್ನೆದುರಿಸುವ ವಿಫಲಪ್ರಯತ್ನ ಮಾಡುತ್ತಿತ್ತು........

ಅಷ್ಟರಲ್ಲಿ ವೀಣೆ ಅಳುತ್ತ ಓಡಿಬಂದಳು. ಗೋಪಾಲನೂ ಬೆದರಿ-ದಂತೆ ಕಾಣುತ್ತಿದ್ದ. "ಅಯ್ಯೋ, ಎಷ್ಟು ಚೆನ್ನಾಗಿ ಮನೆ ಕಟ್ಟಿದ್ದೆ ತಾತ! ಬೊಂಬೆಯನ್ನಿಟ್ಟು ತಿಂಡಿತಿನ್ನಬೇಕೆನ್ನುವಷ್ಟರಲ್ಲಿ, ಆಕಳು ಕೊಂಬಿನಿಂದ ತಿವಿದು ಕೆಡವಿಬಿಟ್ಟಿತು ನೋಡು. ನನ್ನ ಬೊಂಬೆ ಎಲ್ಲಿ ಬಿದ್ದಿದೆಯೋ ಏನೋ!'' ಶೈಲ ಅಳುತ್ತ ನನ್ನನ್ನು ಕರೆದೊಯ್ದಳು.

ನಿಜ, ಅವಳ ಮನೆಯ ನಾಲ್ಕು ಗಳುಗಳು ನಾಲ್ಕು ದಿಕ್ಕಿಗೆ ಬಿದ್ದಿದ್ದುವು. ಹೂಮಾಲೆಗಳೆಲ್ಲ ಚೆಲ್ಲಾಪಿಲ್ಲಿಯಾಗಿದ್ದವು. ಬೊಂಬೆ ದೂರ ಮಣ್ಣಿನಲ್ಲಿ ಬಿದ್ದಿತ್ತು. ಕ್ಷಣದ ಹಿಂದೆ ನಗುತ್ತಿದ್ದ ಮುಖ-ಗಳೆಲ್ಲ ಈಗ ಅಳುತ್ತಿದ್ದುವು!........

ಅಂದು ರಾತ್ರಿ ನಿದ್ದೆಯೇ ಬರಲಿಲ್ಲ. ಚಿಕ್ಕಂದಿನ ಸ್ಮೃತಿಗಳು ಮರಳಿದುವು. ಮನೆಯ ಪ್ರತಿಯೊಂದು ಭಾಗ, ಒಬ್ಬೊಬ್ಬರ ನೆನಪು ತರುತ್ತಿತ್ತು. ಕತ್ತಲೆಯ ಕೋಣೆಯಲ್ಲಿದ್ದ ಪುಟ್ಟ ಬೀರುವಿನಲ್ಲಿ ತಿಂಡಿ ಯಿಡುತ್ತಿದ್ದ ತಂಗಿ ಸೀತೆಯ ತಿಂಡಿಯನ್ನೆಲ್ಲ ತಿಂದು ಬಾಗಿಲ ಹಾಕಿ ಡುತ್ತಿದ್ದೆವು. ಅದನ್ನು ತೆರೆದು ನೋಡಿದಾಗ, ಅವಳ ಅಳುವಿಗೆ ಪಾರ ವಿರಲಿಲ್ಲ. ಆದರೆ ಕೂಡಲೇ ಗಿಡವನ್ನು ಹತ್ತಿ ನಾಲ್ಕು ಸಂಪಗೆ ಹೂ ಗಳನ್ನು ಕೊಯ್ದು ಕೊಟ್ಟರೆ, ಅವಳ ಅಳು ನಿಂತು ಹೋಗುತ್ತಿತ್ತು....

ದೇವರ ಮನೆಯ ಸರ್ವಾಧಿಕಾರಿ ಅಜ್ಜಿ, ನಾವೆಲ್ಲ ಬಾಗಿಲಿನ ಬಳಿ ಹೋಗುತ್ತಲೇ ಮೈಲಿಗೆಯಾಯಿತೆಂದು ಕೂಗುತ್ತಿದ್ದಳು. ನಾವು ಅಲ್ಲಿ ಹೋಗಲು ಒಂದು ಬಲವಾದ ಕಾರಣವಿತ್ತು. ಅಜ್ಜಿಯ ಬಳಿಯಲ್ಲಿ ಯಾವಾಗಲೂ ಹುರಿಗಾಳು, ತಂಬಿಟ್ಟು, ಕರಿದ ಸಂಡಿಗೆ ಮುಂತಾ ಯಾವುದಾದರೊಂದು ತಿಂಡಿಯಿರುತ್ತಿತ್ತು.

ಒಮ್ಮೊಮ್ಮೆ ಏನೂ ಇಲ್ಲದಿದ್ದರೆ, ಬೆಲ್ಲದಚೂರಿನ ಲಂಚವನ್ನಾ ದರೂ ಕೊಟ್ಟು ನಮ್ಮನ್ನು ಹಿಂದಕ್ಕಟ್ಟುತ್ತಿದ್ದಳು. ಯಾಕೆಂದ ನಮ್ಮ 'ಅಗಸರ ಮಡಿ' ಬಟ್ಟೆಗಳ ಗಾಳಿ ಬಡಿದರೂ, ಅವಳಿಗೆ ಮೈಲಿಗೆ ಯಾಗುತ್ತಿತ್ತು. !

ಅಡಿಗೆಯ ಮನೆಯಲ್ಲಿ ತಾಯಿ ಏನನ್ನೋ ಗುಣುಗುಣಿಸುತ್ತ ಅಡಿಗೆ ಮಾಡುತ್ತಿದ್ದಳು. ದಿನವೆಲ್ಲ ಕೆಲಸ ಮಾಡುತ್ತಿದ್ದರೂ ಎಂದೂ ಅವಳ ಮುಖದ ಮೇಲಿನ ನಗು ಮಾಯವಾಗುತ್ತಿರಲಿಲ್ಲ. ಅವಳ ಅಮೃತಹಸ್ತ ಎಂತಹ ವಸ್ತುವಿನಿಂದಲೂ ರುಚಿಕಟ್ಟಾದ ಅಡಿಗೆ ತಯಾರಿಸುತ್ತಿತ್ತು........

ಮಹಡಿಯ ಮೇಲಿನ ರೂಮೊಂದರಲ್ಲಿ ಅಕ್ಕ ಹೆಣಿಕೆಹಾಕುತ್ತ ಕುಳಿತಿರುತ್ತಿದ್ದಳು. ಅವಳ ಕಣ್ಣುತಪ್ಪಿಸಿ, ಗಾಳಿಪಟಕ್ಕಾಗಿ ದಾರ ತರುತ್ತಿದ್ದೆವು. ಒಮ್ಮೊಮ್ಮೆ ಸಿಗದಿದ್ದರೆ, ಅವಳು ಹೆಣಿಕೆಹಾಕುತ್ತಿದ್ದ ವಸ್ತ್ರದ ದಾರ ಎಳೆದರೆ ಬೇಕಾದಷ್ಟು ಸಿಗುತ್ತಿತ್ತು. ಅವಳು ಎರಡು ಮೂರು ದಿನ ಕುಳಿತು ತಯಾರಿಸಿದ ವಸ್ತ್ರವನ್ನು ಹತ್ತುನಿಮಿಷದಲ್ಲಿ ಹಾಳುಮಾಡಿ ಪಟಹಾರಿಸಲು ಓಡುತ್ತಿದ್ದೆವು........

ಕೊನೆಗೆ ಶಿಕ್ಷಣಮುಗಿಸಿ ಹೈಸ್ಕೂಲಿನ ಮಾಸ್ತರನಾದ ದಿನ ಅಜ್ಜಿ ಊರಲ್ಲೆಲ್ಲ ಹೇಳಿಬಂದಳು. ತಂದೆ ಎರಡು ಗಂಟೆಗಳ ಕಾಲ ಶಿಕ್ಷಕರ ಉದಾತ್ತಧ್ಯೇಯವನ್ನು ವರ್ಣಿಸಿದರು. ತಾಯಿ ದೇವ-ರೆದುರು ನೀರಾಜನ ಹಚ್ಚುತ್ತಿದ್ದಳು. ದೀಪದ ಬೆಳಕಿನಲ್ಲಿ ಅವಳ ಕಣ್ಣೀರು ಹೊಳೆಯುತ್ತಿತ್ತು.

ಮ್ಯಾಟ್ರಿಕ್ ನಾಪಾಸಾದ ನನ್ನ ವಿದ್ಯಾರ್ಥಿಯೊಬ್ಬ ಅಂದ ಇದೇ ರೂಮಿನಲ್ಲಿ ಅಳುತ್ತ ಕುಳಿತಿದ್ದ. ಬಡತನವನ್ನು ಲೆಕ್ಕಿಸದೆ ಕಷ್ಟಪಟ್ಟು ಅಭ್ಯಾಸ ಮಾಡಿದರೂ ತಕ್ಕಫಲ ದೊರೆಯದ್ದರಿಂದ ಅವನಿಗೆ ಅತ್ಯಂತ ನಿರಾಶೆಯಾಗಿತ್ತು. ಎಷ್ಟು ಸಮಾಧಾನ ಹೇಳಿದರೂ ಅವನ ದುಃಖ ಕಡಿಮೆಯಾಗಿರಲಿಲ್ಲ.

ಇಂತಹ ನನ್ನ ಮನೆಯನ್ನು ನಾಳೆ ಮುಂಜಾನೆ ಒಂಬತ್ತು ಗಂಟೆಗೆ ಬಿಟ್ಟು ಹೊರಡಬೇಕು. ಸುಖ, ದುಃಖ, ಹರ್ಷ, ನೋವು ಗಳ ಸ್ಮೃತಿಯನ್ನು ಮರೆತು ಹೊರಡಬೇಕು. ಅಂಗಳದಲ್ಲಿಯ ಪೇರಲಗಿಡ ಹತ್ತಿ ಕಾಯಿ ತಿಂದು ಮನೆಯವರಿಂದ ಬೈಯ್ಯಿಸಿಕೊಂ ನೆನಪನ್ನು ಮರೆತು ಹೊರಡಬೇಕು. ಅಬ್ಬ ಎಂಥ ವಿಪರ್ಯಾಸ

ನಿಜ, ಇವರಲ್ಲಿ ಮಗನದೇನು ತಪ್ಪು? ಅವನ ಮೇಲೇ ವ್ಯರ್ಥ ದೋಷಾರೋಪಣೆ? ಅವನ ನೂರು ರೂಪಾಯಿಯ ಸಂಬಳ ದಲ್ಲಿ ಹತ್ತು ಜನರ ಸಂಸಾರ ಹೇಗೆ ಸಾಗಬೇಕು? ಅದಕ್ಕೆಂದೇ ಸಾಲವಾಯಿತು. ಅದರ ಪ್ರತಿಫಲವೇ ನಾಳೆ ಮನೆಬಿಟ್ಟು ಹೊರಡು-ವುದು........

ಆದರೆ ಹೇಗೆ ಇಲ್ಲಿಂದ ಹೊರಡಲಿ? ಚಿಕ್ಕಂದಿನಲ್ಲಿ ಕಣ್ಣು-ಮುಚ್ಚಾಣಿಕೆಯಾಡುವಾಗ, ಇದರ ಕತ್ತಲುಕೋಣೆಗಳೆಲ್ಲ ಅಡಗಿ ಕೊಳ್ಳಲು ಉಪಯೋಗವಾಗುತ್ತಿದ್ದುವು; ಆದರೆ ಈಗ ಮಾತ್ರ

ನಿರುಪಯೋಗಿಯಾಗಿವೆ. ಮೊಮ್ಮಕ್ಕಳು ಈ ಮನೆಯೆಂದರೆ ಮೂಗು ಮುರಿಯುತ್ತಾರೆ. "ಈ ಕತ್ತಲುಮನೆಗೇಕೆ ಇಷ್ಟು ದುಃಖಪಡುತ್ತೀ ತಾತ! ಇದರ ಕಂಬಗಳನ್ನು ನೋಡು! ಮನೆಯೆಂದರೆ ಕೊಂಚ-ವಾದರೂ ಅಚ್ಚುಕಟ್ಟು ಬೇಡವೇ? ಹೆಸರಿಗೆ ಹದಿನೈದು ರೂಮು. ಗಳಿದ್ದರೂ ಒಂದೂ ಉಪಯೋಗವಿಲ್ಲ. ನಮ್ಮ ಬಾಡಿಗೆ ಮನೆ ಎಷ್ಟು ಚೆನ್ನಾಗಿದೆ ಗೊತ್ತೇ? ಅಭ್ಯಾಸಕ್ಕೆ ಎರಡು ರೂಮುಗಳು, ಬಟ್ಟೆಯಿಡಲು ಸ್ಟ್ಯಾಂಡುಗಳು, ಶೆಲ್ಫುಗಳು ಎಲ್ಲ ಇವೆ. ಅಂಥ ಹೊಸಮನೆ-ಯನ್ನು ಬಿಟ್ಟು, ಇದಕ್ಕೇಕೆ ಇಷ್ಟು ಯೋಚನೆ?"

ಆದರೆ ನನ್ನ ಮನಸ್ಸಿನ ನೋವನ್ನು ಅವರೇನು ಬಲ್ಲರು? ಹೇಳಿದರೂ ಪ್ರಯೋಜನವೇನು? ಮನೆಯ ಸಂದು-ಗೊಂದುಗಳೆಲ್ಲ ಒಂದೊಂದು ತರದ ಕತೆ ಹೇಳುತ್ತಿರುವಂತೆ ಭಾಸವಾಗುತ್ತಿವೆ. ಇಂದು ಕನಿಷ್ಟ ಒಂಬತ್ತು ಸಾರಿಯಾದರೂ ಮನೆಯನ್ನೆಲ್ಲ ಸುತ್ತಿರಬಹುದು. ಆದರೂ ಮನಸ್ಸಿಗೆ ಸಮಾಧಾನವಿಲ್ಲ. ನಿಜ, ಈ ಮನೆಯ ಜತೆಗೆ ಬೆಳೆದುಬಂದ ಆತ್ಮೀಯತೆ, ಅರಮನೆಗೆ ಹೋದರೂ ಕಡಿಮೆಯಾಗ-ಲಾರದು. ಇಂಥ ಸ್ಥಿತಿಯಲ್ಲಿ ನಾಳೆ ಹೇಗೆ ಹೊರಡಲಿ? ಛೆ!........

x x x x x

"ಕಾಫಿ ಕುಡಿಯದಿದ್ದರೆ ತಲೆ ನೋಯುತ್ತದಂತೆ ತಾತ! ಬಿಸಿಯಾಗಿದೆ ಕುಡಿದುಬಿಡು!" ಚಿಕ್ಕಮಕ್ಕಳಿಗೆ ಹೇಳುವಂತೆ ಗೋಪಾಲ ತಿಳಿಸಿ ಹೇಳುತ್ತಿದ್ದ. ನನಗೆ ನಗು ಬಂದಿತು. ಇನ್ನು ಒಂದು ತಾಸಿನಲ್ಲಿ ಈ ಮನೆ ಬಿಡಬೇಕು. ಅಬ್ಬ, ಗಲ್ಲಿಗೆ ಹಾಕುವ ಮೊದಲು ಮೊಸರನ್ನ ಉಣ್ಣಲು ಕೊಟ್ಟಂತಿದೆ! ಹುಡುಗರೆಲ್ಲ ಆನಂದದಿಂದ ಹೊಸಮನೆಯ ಬಗ್ಗೆ ಮಾತಾಡುತ್ತ ತಿಂಡಿ ತಿನ್ನುತ್ತಿದ್ದಾರೆ. ಅಯ್ಯೋ, ಎಂಥ ಅಜ್ಞಾನಿಗಳು! ಇದೇ ಇಲ್ಲಿಯ ಕೊನೆಯ ಉಪಾಹಾರ. ಇಂದಿಗೆ ಈ ಮನೆಯ ಋಣಾನುಬಂಧ ಮುಗಿಯಿತು! ಹಿರಿಯರ ಆಸ್ತಿಯನ್ನು ಪಾಳುಮಾಡಿದ ಪಾಪಿಗಳು ನಾವು.... ಅಲ್ಲ ನಾನು!

"ಇದೇನು ಅಪ್ಪ, ನೀನೇ ಹೀಗೆ ಕಣ್ಣೀರುದುರಿಸಿದರೆ ನಾವೇನು ಮಾಡಬೇಕು? ನಮಗೇನು ದುಃಖವಿಲ್ಲವೇ? ನಿನಗೆ ಗೊತ್ತಿದೆ–ನಾನೆಂದೂ ದುಂದುವೆಚ್ಚ ಮಾಡಿ ಸಾಲ ಮಾಡಲಿಲ್ಲ. ಆದರೆ ನಾನಾದರೂ ಏನು ಮಾಡಲಿ? ಹೀಗೆ ನಿರಾಶೆ ಪಟ್ಟರೇನು ಲಾಭ? ಧೈರ್ಯದಿಂದ ಮುಂದುವರಿಯಬೇಕು....ಅಲ್ಲವೇ?"

ಕಣ್ಣೊರಸಿಕೊಂಡು ನೋಡಿದೆ. ರಾಮು ಕೂಡಲೇ ಅಲ್ಲಿಂದ ಒಳಗೆ ಹೊರಟುಬಿಟ್ಟ. ನನ್ನ ಮೂರ್ಖತನಕ್ಕಾಗಿ ನಾಚಿಕೆಯಾ-ಯಿತು. ಎಂಟು ದಿನಗಳಿಂದ ಕೇವಲ ನನ್ನದೇ ಮನೆಯೆಂಬಂತೆ ಯೋಚನೆ ಮಾಡುತ್ತಿದ್ದೆ. ಆದರೆ ನನ್ನಂತೆ ಎಲ್ಲರೂ ದುಃಖ ಪಡುತ್ತಿದ್ದಾರೆ. ನನ್ನ ಈ ತರದ ನಡತೆ ಕಂಡು ಅವರ ದುಃಖ ಹೆಚ್ಚಾಗಿದೆ. ಛೆ!....

ರಾಮು ಹೊರಡಲು ಸಿದ್ಧನಾಗಿ ಬಂದುದನ್ನು ಕಂಡು, ಲಗುಬಗೆ-ಯಿಂದ ಎದ್ದೆ. ಇನ್ನು ಕೇವಲ....ಒಂದೇ ಸಲ ಈ ಮನೆಯನ್ನೆಲ್ಲ ಕಣ್ಣುತುಂಬ ನೋಡಬೇಕು..... ಕತ್ತಲೆ ಮನೆಯಂತೆ....ಕತ್ತಲು ರೂಮುಗಳಂತೆ....ಮನೆತುಂಬ ಕಂಬಗಳಂತೆ....ಹಳೆಯ ಕಾಲದ ಮನೆ-ಯಂತೆ....ಅಬ್ಬ! ಈ ಕತ್ತಲೆಯಲ್ಲಿಯೇ ಯಾವ ವಸ್ತು ಎಲ್ಲಿದೆ-ಯೆಂದು ಹೇಳಬಲ್ಲೆ. ಆದರೆ ಏನು ಪ್ರಯೋಜನ? ಇನ್ನು ಹೊರಡಲೇಬೇಕು. ಅಗೋ, ಒಂಬತ್ತು ಹೊಡೆಯಿತು....ಇದೇನು, ಎಲ್ಲರೂ ಹೊರಬಾಗಿಲಿನ ಬಳಿ ನಿಂತುಬಿಟ್ಟಿದ್ದಾರೆ. ಬೇಗನೆ ಹೊಸ ಮನೆಗೆ ಹೋಗುವ ಆತುರವೇನೋ! ಇಲ್ಲ, ಇಲ್ಲ. ನನ್ನಂತೆಯೇ ಅವರಿಗೂ ದುಃಖವಿದೆ ಆದರೆ ನಿರುಪಾಯರಾಗಿ ಹೊರಟಿದ್ದಾರೆ. ಪಾಪ!....

ಇನ್ನು ನನ್ನ ಹೂದೋಟವನ್ನೊಮ್ಮೆ ನೋಡಬೇಕು. ಸಂಪಗೆಯ ಹೂಗಳು ಅರಳಿವೆ. ಗುಲಾಬಿಯ ಹೂಗಳು ಅರಳುತ್ತಿವೆ. ಇನ್ನು ಕೆಲವೇ ದಿನಗಳಲ್ಲಿ ಹಂದರ ಮಲ್ಲಿಗೆಹೂಗಳಿಂದ ತುಂಬಬಹುದು. ಪಾಪ, ಅವುಗಳಿಗೇನು ಗೊತ್ತು ಮಾನವನ ಜೀವನದಲ್ಲಿಯ ಸ್ಥಿತ್ಯಂತರ?

" ಪೋಸ್ಟ್‌ಮನ್ ಈ ಪತ್ರ ಕೊಟ್ಟಿದ್ದಾನೆ ತಾತ! ನಿನ್ನ ಹೆಸರಿದೆ ನೋಡು. " ಗೋಪಾಲ ಕವರೊಂದನ್ನು ತಂದು ಕೊಟ್ಟ ನನ್ನ ಕೋಪ ಎಲ್ಲೆ ಮೀರಿತು.

" ಹರಿದು ಹಾಕಿ ಬಿಡು ಗೋಪು. ನನ್ನ ಕ್ಷೇಮದ ಆವಶ್ಯಕತೆ ಯಾರಿಗಿದೆ? "

ಆದರೆ ಗೋಪಾಲ ಹೊರಟು ಹೋಗಿದ್ದ. ಪತ್ರದ ಮೇಲಿದ್ದ ಅಶೋಕನ ಹೆಸರನ್ನು ಕಂಡು,ಓದುವ ಕುತೂಹಲ ತಡೆಯಲಾಗಲಿಲ್ಲ. ಅಶೋಕ–ನಾಲ್ಕು ವರ್ಷಗಳಿಂದ ಪತ್ತೆಯಿಲ್ಲದ ಅಶೋಕ–ಏನೆಂದು ಬರೆದಿರಬಹುದು. ಒಮ್ಮೆ ಓದಲೇಬಾರದೆನಿಸಿತು. ಆದರೆ 'ಹತ್ತರ ಜತೆಗೆ ಹನ್ನೊಂದು' ಎನ್ನುವಂತೆ, ಇಷ್ಟು ಆಘಾತಗಳನ್ನು ಸಹಿಸಿದ ಹೃದಯ ಇದನ್ನೂ ಸಹಿಸಲಾರದೇ?

ಅಷ್ಟರಲ್ಲಿ ರಾಮು ಬಂದು ಪತ್ರವನ್ನೋದತೊಡಗಿದ:

"ನಮಸ್ಕಾರ,

ನಾಲ್ಕು ವರ್ಷಗಳ ವರೆಗೆ ಪತ್ತೆಯಿಲ್ಲದ ಇವನು ಒಮ್ಮೆಂದೊಮ್ಮೆ ಹೇಗೆ ಪ್ರಕಟವಾದನೆಂದು ತಮಗೆ ಆಶ್ಚರ್ಯವಾಗಬಹುದು. ಆದರೆ ನಾನು ಇಲ್ಲಿದ್ದರೂ ಗೆಳೆಯರಿಂದ ನಮ್ಮೂರಿನ ಸುದ್ದಿಗಳೆಲ್ಲ ತಿಳಿಯುತ್ತವೆ.

ಈಗ ನಾನು ವ್ಯಾಪಾರ ಮಾಡುತ್ತಿದ್ದೇನೆ. ವ್ಯವಹಾರದ ಭಾಷೆಯಲ್ಲಿ ಹೇಳಬೇಕಾದರೆ ಶ್ರೀಮಂತನಾಗಿದ್ದೇನೆ. ಶ್ರೀಮಂತನಷ್ಟೇ ಅಲ್ಲ, ಈ ಊರಿನ ಸನ್ಮಾನ್ಯ ಗೃಹಸ್ಥನಾಗಿದ್ದೇನೆ. ಹಿಂದೆ ಸ್ಕೂಲಿನ ಚರ್ಚಾಕೂಟದಲ್ಲಿ ನಾಲ್ಕುಮಾತಾಡಲು ಅಂಜಿಕೆಯಾಗುತ್ತಿದ್ದರೂ, ಈಗ ಗಂಟೆಗಟ್ಟಲೆ ವಿದ್ವತ್ಪೂರ್ಣ (!) ಭಾಷಣ ಮಾಡಬಲ್ಲೆ. ನನ್ನ ಭಾಷಣದ ವಿಮರ್ಶೆ–ವಿಮರ್ಶೆಯೇನು ಬಂತು–ವರ್ಣನೆ ಪ್ರತಿಯೊಂದು ಪತ್ರಿಕೆಯಲ್ಲಿ ಅಚ್ಚಾಗಿರುತ್ತದೆ! ಕಲೆಯ ಗಂಧವಿರದಿದ್ದರೂ ಅಧಿಕಾರ-ವಾಣಿಯಿಂದ ಅದರಲ್ಲಿಯ ತಪ್ಪು-ಒಪ್ಪುಗಳನ್ನು ತೋರಿಸಿಕೊಡಬಲ್ಲೆ. ಲಕ್ಷ್ಮಿಯ ಜತೆಗೆ ಸರಸ್ವತಿಯೂ ಬರುವಳೆಂದು ತಿಳಿದಿರುವರೇನೊ ಈ ಮಂಕುಜನ! ಎಂಥ ವಿಪರ್ಯಾಸ!

ಸುಂದರವಾದ ಮಹಲನ್ನು ನೋಡುವರಲ್ಲದೆ, ಅದಕ್ಕೆ ಆಧಾರ-ವಾದ ಪಾಯವನ್ನು ಯಾರೂ ನೋಡುವುದಿಲ್ಲ. ಕೇವಲ ಶ್ರೀಮಂತಿಕೆ-ಯಿಂದ ಜ್ಞಾನವನ್ನಳೆಯುವ ಇವರು, ಯಾರ ಪ್ರೋತ್ಸಾಹದಿಂದ

ಹೀಗಾಯಿತೆಂದು ಗಮನಿಸುವುದಿಲ್ಲ.

ಅಂದು ಮ್ಯಾಟ್ರಿಕ್ ನಾಪಾಸಾದ ದಿನ ತಮ್ಮ ಮನೆಯಲ್ಲಿ ಬಂದು ಅಳುತ್ತ ಕುಳಿತಿದ್ದೆ ನೆನಪಿದೆಯೇ? ಯಾಕೆಂದರೆ ಜನರ ಧಿಕ್ಕಾರದ ಮಾತುಗಳನ್ನು ಕೇಳಲು ಸಾಧ್ಯವಿರಲಿಲ್ಲ. 'ಗೂಳಿ ಬಿದ್ದರೆ ಆಳಿಗೊಂದು ಕಲ್ಲು' ಎಂಬಂತೆ, ಪ್ರತಿಯೊಬ್ಬರೂ ತಮ್ಮ ಕೌಶಲ್ಯ ಬೆರೆಸಿ ಒಂದೊಂದು ತರದ ವ್ಯಂಗ್ಯ ಮಾತುಗಳನ್ನಾಡಿದರು. ಆ ಕ್ಷಣಕ್ಕೆ ನನಗೆ ಜೀವನದಲ್ಲಿ ಅತ್ಯಂತ ನಿರಾಶೆಯೆನಿಸಿತ್ತು. ಆದರೆ ತಾವು ಧೈರ್ಯ ಹೇಳಿ ಇನ್ನೊಂದು ಸಲ ಪ್ರಯತ್ನಿಸಲು ಮನಃಪೂರ್ವಕ ಸಹಾಯ ಮಾಡಿದಿರಿ. ತಮಗೆ ತಾಪತ್ರಯವಿದ್ದರೂ ಲೆಕ್ಕಿಸದೆ, ಹಣದ ಸಹಾಯ್ಯವನ್ನೂ ಮಾಡಿದಿರಿ. ತಮ್ಮ ಸಹಾಯವಿರದಿದ್ದರೆ ಬಿರುಗಾಳಿಗೆ ಸಿಕ್ಕ ತರಗೆಲೆಯಂತೆ, ಎಲ್ಲಿ ಹೋಗಿ ಮಣ್ಣಿನಲ್ಲಿ ಬೆರೆಯುತ್ತಿದ್ದೆನೋ ಕಾಣೆ.

ನಿನ್ನೆ ತಾಮುನಿನ ಪತ್ರ ಓದಿ, ಏನು ಮಾಡಬೇಕೆಂದು ತಿಳಿಯದಾಯಿತು. ತಮಗೆ ಆ ಮನೆಯೆಂದರೆ ಎಷ್ಟು ಪ್ರೀತಿಯೆಂದು ನನಗೆ ಗೊತ್ತಿದೆ. ಆ ಮನೆ ನನ್ನಂತಹ ಎಷ್ಟು ಜನ ನಿರ್ಭಾಗ್ಯರಿಗೆ ಆಶ್ರಯವಾಗಿದೆಯೋ! ತಾವು ಅದನ್ನು ಖಂಡಿತ ಬಿಡಕೂಡದು. ನಾನು ನಾಳೆ ಮಧ್ಯಾಹ್ನ ಅಲ್ಲಿಗೆ ಬರುತ್ತೇನೆ. ತಾವು ಚಿಂತಿಸುವ ಕಾರಣವಿಲ್ಲ.

ಇತಿ ತಮ್ಮ

ಅಶೋಕ"

ನೃತ್ಯ ಭಾರತಿ

ನೃತ್ಯ, ಸಂಗೀತ, ಇನ್ನಿತರ ಲಲಿತಕಲೆಗಳಿಗೆ
ಮೀಸಲಾದ

ಕನ್ನಡದ ಒಂದೇ ಒಂದಾದ ತ್ರೈಮಾಸಿಕ.

ಭಾರತೀಯ ನೃತ್ಯಕಲಾಕೇಂದ್ರದ ಮುಖಪತ್ರ.

ಸಂಪಾದಕರು:

ನಾಟ್ಯಾಚಾರ್ಯ **ಕುಲಕರ್ಣಿ ಶ್ರೀನಿವಾಸ** ಬಿ. ಎ.

ಮೊದಲನೆಯ ಸಂಚಿಕೆ ೨೬-೧-೫೪ ರಂದು ಪ್ರಕಟವಾಗಿದೆ.

ಚಂದಾ: ಅಂಚೆವೆಚ್ಚ ಸೇರಿ ೫-೦-೦

ವಿವರಗಳಿಗೆ:

ನೃತ್ಯಭಾರತೀ ಕಾರ್ಯಾಲಯ
ಗುರುಕುಲ, **ಹಾಂಸಭಾಂವಿ**
(ಜಿಲ್ಹಾ ಧಾರವಾಡ)

ಶೂನ್ಯದೆಡೆಗೆ:

ಶ್ರೀ. ಶೋಕ ಶ್ರೀಕಾಂತ ತಮನೇವಾಡಿ

೧

ಹಿಡಿಯೆನಲು ನೀನು, ನಾ ಹಿಡಿದು ಬಂದೆ
ಕಿರುಬೆರಳ ಹಿಂದಿನಿಂದೆ—
ಹೊರಹೊರಳಿ ನೋಡದೆಯೆ ನೆರಳು ಆಗಿನಾ
ಹಿಂದೆ, ನೀನು ಮುಂದೆ!

೨

ಮುಂದಿರುವ ಗತ್ತು ನನಗೇನು ಗೊತ್ತು?
ಕೈವಿಡಿದು ಮೇಲಕೆತ್ತು!
ನಿದ್ರೆಯನು ಬಿಡಿಸಿ ಹೆದ್ದಾರಿ ಹಿಡಿಸಿ
ನಡೆಸುವುದು ನಿನ್ನ ಚಿತ್ತು!

೩

ತಿಳಿಗಾಳಿ ಸುಳಿಗೆ ತಲೆದೂಗ್ಗಿ ನಲಿವ
ಹಾಲ್ದೆನೆಗೆ ಹಿಗ್ಗಿ ಹಿಗ್ಗಿ
ಆ ಹಿಂಡು ಹಕ್ಕಿಗಳ ದಂಡು ಕಂಡು,
ಬಂಡುಂಡು ತಣಿವ ಸುಗ್ಗಿ!

೪

'ಅದು ಯಾರ ಸುಗ್ಗಿ!' ಎಂದಾನು ಹಿಗ್ಗಿ!
ನುಗ್ಗಾಡಿ ನಡೆದೆ ಮುಂದೆ;
ಕಡೆಗೇನೋ ಕಂಡೆ! ನಾನೇನೋ ಉಂಡೆ!
ಇನ್ನುಳಿದುದಾವುದೆಂದೆ!

೫

ನೀ ಸೂತ್ರಧಾರ ನಾ ಪಾತ್ರಧಾರಿ
ಈ ವಿಶ್ವರಂಗದಲ್ಲಿ;
ನೀ ಚಲಿಸಿದಂತೆ ನಾನುಲಿಸುತಿರುವೆ
ಕಾಲ್ಗೆಜ್ಜೆ ಹೆಜ್ಜೆ ಚೆಲ್ಲಿ!

೬

ನಿನ್ನಿಂದ ದೇಹದಲಿ ಜೀವ-ಭಾವ
ರಸದುಂಬಿ ಗೊಂಬೆಯಂತೆ-
ಒಂದೊಂದರಂತೆ ಒಂದಿರದರಂತೆ
ಸೃಜಿಸಿರುವೆ ಸಿದ್ಧನಂತೆ

೭

ಮನ-ಕಾಯ-ವಚನ ನರನಾಡಿ ನಾಡಿ
ಎಡೆ ಬಿಡದೆ ಮಿಡಿಯುತಿರುವೆ-
ಅಡಿಗಡಿಗೆ ನಿನ್ನ ಅಡಿಗಳಿಗೆ ಎರಗಿ-
ದೊಡನೆತ್ತು ಚಿತ್ತ ಸಿರಿಯೆ!

೮

ಹೃತ್ಪ್ರಣತಿಯಲ್ಲಿ ಹಚ್ಚಿರುವೆ ನಾನು
ಹುರಿಗೊಳಿಸಿ ಕರುಳ ಬತ್ತಿ-
ಬೆಳಗುವೆನು. ಮತ್ತೆ ಮುತ್ತೈದೆಯಾಗಿ
ಬರಲೆಂದೆ ಅದನು ಎತ್ತಿ!

★ ಲೈಂಗಿಕ ಅವ್ಯವಸ್ಥೆ ಮತ್ತು ಯೋಗಾಸನ ★

(ಒಂದು ವಿಚಾರ ಪ್ರಚೋದಕ ಪ್ರಬಂಧ)

ಶ್ರೀ. ಎಲ್. ವಿ. ಜೋಶಿ ಬಿ. ಎ., ಬಿ. ಇಡಿ. ಕೂಡ್ಲಿಗಿ

●

ಉತ್ತರಾರ್ಧ

ಮಾನವನ ದೇಹವನ್ನೂ ಮನಸ್ಸನ್ನೂ ಲೈಂಗಿಕ ಅವ್ಯವಸ್ಥೆ ದುರ್ಬಲಗೊಳಿಸಿ, ಅವನ ಜೀವನವನ್ನೇ ಹಾಳುಮಾಡುವುದು. ಹೀಗಾದಂತೆ ಎಚ್ಚರು ತೆಗೆದುಕೊಳ್ಳುವವರು, ಬೇರೆ ಬೇರೆ ಯೋಗಾಸನಗಳ ಅನುಷ್ಠಾನದ ಕಡೆಗೆ ಅವಶ್ಯವಾಗಿ ಲಕ್ಷ್ಯವನ್ನು ಕೊಡಬೇಕು.

▼

ಲೈಂಗಿಕ ಪತಿತರನ್ನುದ್ಧರಿಸಿ ಅವರಲ್ಲಿ ಸ್ಥಿತ್ಯಂತರವನ್ನೊದಗಿಸಲು ಯೋಗಪದ್ಧತಿಯು ಸಹಾಯವಾಗುವುದೇ?—ಎಂದರೆ, ಒಮ್ಮೆ ಕಡಿದುಬಿದ್ದ ಲೈಂಗಿಕ ಪದ್ಧತಿಯನ್ನು ಸಂಪೂರ್ಣವಾಗಿ ಅದರ ಪೂರ್ವಸ್ಥಿತಿಗೆ ತಂದಿಡಲು ಸಾಧ್ಯವಿಲ್ಲದಿದ್ದರೂ, ನಾಶಹೊಂದಿದ ಈ ಲೈಂಗಿಕಪದ್ಧತಿಯ ಬಹುಭಾಗವನ್ನು ಉದ್ಧರಿಸಲು ಸಾಧ್ಯವಾಗುವಲ್ಲಿ ಯೋಗಪದ್ಧತಿಯೇ ಅತ್ಯುತ್ತಮ.

ಈ ಲೇಖನದಲ್ಲಿ ಎರಡೇ ದುಷ್ಪರಿಣಾಮಗಳ ಬಗೆಗೆ ವಿಚಾರ ಮಾಡುವ: ಶೀಘ್ರಸ್ಖಲನ (Premature ejaculation) ಮತ್ತು ದುರ್ಬಲ ಉದ್ರಿಕ್ತ ಸ್ಥಿತಿ (Feeble erection):— ಈ ರೋಗಗಳ ನಿವಾರಣೋಪಾಯದ ಹಾದಿಯಲ್ಲಿ ಯೋಗಪದ್ಧತಿಯಲ್ಲಿಯ ಕೆಲವು ಅಭ್ಯಾಸಗಳು ಎಷ್ಟರ ಮಟ್ಟಿಗೆ ಕೆಲಸ ಮಾಡುವುವೆಂಬದನ್ನು ತಿಳಿಸುವ ಮುನ್ನ, ಈ ವ್ಯಾಧಿಗಳ ರಚನಾತ್ಮಕ ಮತ್ತು ವ್ಯಾವಹಾರಿಕ ಅಂಶಗಳಲ್ಲಿ ಕೆಲವನ್ನು ತಿಳಿದುಕೊಳ್ಳುವುದುತ್ತಮ, ಅತ್ಯಗತ್ಯ.

ಈಗ ಈ ಅಂಶಗಳನ್ನು ಅತಿ ಕ್ಷಿಪ್ರವೀಕ್ಷಣದಲ್ಲಿಯೆ ಗಮನಿಸುವ:

ಪುರುಷನ ಜನನೇಂದ್ರಿಯದ ಮುಖ್ಯವಾದ ಭಾಗವೆಂದರೆ ಉದ್ರಿಕ್ತವಾಗುವ ಒಂದು ರಚನೆ. ಈ ಅಂಗಭಾಗದ ಉದ್ರಿಕ್ತ ಸ್ಥಿತಿಯು, ಇದರಲ್ಲಿಯ ಅಭಿಧಮನಿಗಳ ವಿಶಿಷ್ಟ ವ್ಯವಸ್ಥಾಪನೆಯ ಮೇಲೆಯೂ ಇದರಲ್ಲಿಯ ಅಭಿಧಮನಿಕ ರಕ್ತಪ್ರಸರಣವನ್ನು ನಿಯಂತ್ರಿಸುವ ಸ್ನಾಯುಗಳ ವಿಶೇಷರಚನಾಕ್ರಮದ ಮೇಲೆಯೂ ಮುಖ್ಯವಾಗಿ ಆಧಾರಪಟ್ಟಿದೆ. ಈ ಭಾಗದ ತಂತುಸಂಬಂಧವಾದ ಹೊರ ಆವರಣದೊಳಗೆ, ಅಭಿಧಮನಿಗಳ ಸಾಂದ್ರವಾದ ಜಾಲವಿದೆ. ಈ ಅಭಿಧಮನಿಗಳು ಸಣ್ಣವು ಮತ್ತು ಎಲ್ಲಾ ದಿಕ್ಕುಗಳಲ್ಲಿಯೂ ಪಾರಸ್ಪರಿಕವಾಗಿ ಹೆಣೆದುಕೊಂಡು, ಒಂದಕ್ಕೊಂದು ಅಡ್ಡವಾಗಿ ತೊಡರಿಕೊಂಡು ಇರುತ್ತವೆ. ಇವು ಹೆಚ್ಚು ವ್ಯಾಕೋಚವಿಕಾಸಗಳನ್ನು ಹೊಂದಬಲ್ಲುವು. ಆದುದರಿಂದ ಬರಿಯದಾಗಿ ಇದ್ದಾಗ ಕುಸಿದಿದ್ದು, ರಕ್ತದಿಂದ ತುಂಬಿದಾಗ ಅತುಲವಾಗಿ ಉಬ್ಬಿಕೊಳ್ಳುತ್ತವೆ. ನರಗಳ ಪ್ರೇರಣೆಗೆ ಒಳಪಟ್ಟ ಉದ್ರೇಕದಲ್ಲಿ, ಅಭಿಧಮನಿಗಳು ಹಿಗ್ಗಿ ಅಸಾಧಾರಣವಾದ ಅಧಿಕಪ್ರಮಾಣದ ರಕ್ತವನ್ನು ಈ ರಚನೆಗೆ ಕಳಿಸುತ್ತವೆ. ಈ ಆಕಸ್ಮಿಕ ಅತಿರೇಕದ ರಕ್ತದ ಒಳನುಗ್ಗುವಿಕೆಯು ಅಭಿಧಮನಿಗಳನ್ನು ಹಿಗ್ಗಿಸುವುವು: ಹೀಗಾಗಿ ಅಧಿಕ ಆಂತರಿಕ ಪ್ರವಾಹವನ್ನು ತಡೆಯಲಾರದೆ ಇವು ಉಬ್ಬಿಕೊಳ್ಳುವುವು. ಇದರಿಂದಾಗಿ ಇಡೀ ರಚನೆಯು ಉದ್ರಿಕ್ತಸ್ಥಿತಿಗೆ ಒರುತ್ತದೆ. ಉದ್ರೇಕದಲ್ಲಿ ಒಳಕ್ಕೆ ಹರಿದು ಬಂದ ರಕ್ತದ ಪರಿಣಾಮಗಳನ್ನು ತಡೆದು ಇಡಲು ಬೇಕಾದ ವ್ಯವಸ್ಥೆ ಇಲ್ಲದಿದ್ದರೆ, ಈ ಉದ್ರಿಕ್ತಸ್ಥಿತಿಯು ಕ್ಷಣಿಕವೂ ಬಲಹೀನವೂ ಆಗಿರುತ್ತಿತ್ತು. ಏಕೆಂದರೆ ನಿರ್ಗಮಾಭಿಧಮನಿಗಳು ಈ ಅಂಗದಿಂದ ಅತಿರೇಕದ ರಕ್ತವನ್ನು ತಕ್ಷಣವೇ ಖಾಲೀ ಮಾಡುತ್ತಿದ್ದುವು. ಆದರೆ ಈ ಭಾಗದ ಅಭಿಧಮನಿಕ ರಕ್ತಪ್ರಸರಣದ ಮೇಲೆ ಎರಡು ತಡೆಗಳಿವೆ. ಒಂದೇನೆಂದರೆ: ಈ ಅಂಗದೊಳಗಿರುವ ಜಾಲದ ರಕ್ತನಾಳಗಳಿಗಿಂತ, ಈ ರಚನೆಯಿಂದ ಖಾಲಿ ಮಾಡುವ ಅಭಿಧಮನಿಗಳು ಅತಿ ಚಿಕ್ಕವು. ಎಂದಮೇಲೆ ಈ ರಚನೆಯನ್ನು ಒಳನುಗ್ಗುವ ರಕ್ತದ ಅಸಾಧಾರಣ ಅತಿರೇಕದ ಪರಿಣಾಮವನ್ನು ಹೊರಗೆ ಒಯ್ಯಲು ಅಸಮರ್ಥವಾಗಿರುವುದು ಸಹಜವೇ ಆಗಿದೆ. ಇದಲ್ಲದೆ ಉದ್ರೇಕದಲ್ಲಿ ಒಳನುಗ್ಗಿ ಬಂದ ರಕ್ತದ ನಿರ್ಗಮನವನ್ನು ಪರಿಪೂರ್ಣವಾಗಿ ತಡೆಗಟ್ಟಲು ಬೇರೊಂದು ವ್ಯವಸ್ಥೆ ಇದೆ. ನಿರ್ಗಮಾಭಿಧಮನಿಗಳ ಪಾರ್ಶ್ವದಲ್ಲಿಯೇ ಒಂದು ಸ್ನಾಯು ಇದೆ. ಇದು ಸಡಿಲಾಗಿದ್ದಾಗ ಅಭಿಧಮನಿಕ ರಕ್ತಪ್ರಸರಣವು ಯಥೇಚ್ಛೆಯಾಗಿರಲು ಬಿಡುತ್ತದೆ. ಆದರೆ ಇದು ಸಂಕುಚಿಸಿದಾಗ, ಅಭಿಧಮನಿಗಳ ಮೇಲೆ ಒತ್ತಡವನ್ನು ಹಾಕಿ, ಬಹುಮಟ್ಟಿಗೆ ಅವುಗಳ ಕೆಲಸವನ್ನು ನಿಲ್ಲಿಸುತ್ತದೆ ಈಗ ಲೈಂಗಿಕ ಪ್ರೇರಣೆಯು ಇದನ್ನು ಪ್ರಬಲವಾದ ಸಂಕೋಚನೆಗೆ ಈಡು ಮಾಡುತ್ತದೆ. ಈ ಸಂಕೋಚನೆ ಅಭಿಧಮನಿಕ ರಕ್ತದ ನಿರ್ಗಮನ

ವನ್ನು ಚೆನ್ನಾಗಿ ತಡೆಗಟ್ಟುತ್ತದೆ. ಹೀಗಾಗಿ, ಅಪಧಮನಿಗಳು ವಿಪುಲವಾಗಿ ರಕ್ತವನ್ನು ಒಳನುಗ್ಗಿಸುತ್ತವೆ. ಈ ರಕ್ತವು ಹೊರಗೆ ಬರಲಾರದೆ ಅಂಗವನ್ನು ಉದ್ರಿಕ್ತಸ್ಥಿತಿಯಲ್ಲಿ ಇಡುತ್ತದೆ.

ಲೈಂಗಿಕ ಉದ್ರೇಕವು ಕಡಿಮೆಯಾದಮೇಲೆ, ಈ ಸ್ನಾಯುವು ಸಡಿಲವಾಗುತ್ತದೆ ಮತ್ತು ಅಂಗದ ಒಳಸ್ಪೈಯ ಅಂಚುಗಳಿಗೆ ಒತ್ತುತ್ತಿದ್ದ ರಕ್ತವು ಸಾವಕಾಶವಾಗಿ ತನ್ನ ನಿರ್ಗಮನವನ್ನು ನಡೆಸುತ್ತದೆ. ಈ ಲೈಂಗಿಕ ರಚನೆಯಿಂದ ಹೆಚ್ಚಾದ ರಕ್ತವು ಹೊರಗೆ ಬಂದ ಮೇಲೆ, ಅದು ಮಿದುವಾಗಿ ತನ್ನ ಮೊದಲಿನ ಅಳತೆಗೆ ಬರುವುದು.

ಇಲ್ಲಿ ಉಲ್ಲೇಖಿತವಾದ ಅವ್ಯವಸ್ಥೆಗಳನ್ನು ತಿಳಿದುಕೊಳ್ಳುವಲ್ಲಿ ಲಕ್ಷ್ಯಕೊಡತಕ್ಕ ಮತ್ತೊಂದು ಶರೀರ ವ್ಯಾವಹಾರಿಕ ವಿಚಾರಣೀಯ ವಿಷಯವೆಂದರೆ ರಕ್ತಸಂಚಯ. ರಕ್ತದ ಪರಿಚಲನೆಯನ್ನು ಬಲ್ಲವರಿಗೆ ಇದು ಸುಗ್ರಾಹ್ಯ. ಅಪಧಮನಿಗಳನ್ನು ಹಾದುಹೋಗುವ ರಕ್ತವು ಲೋಮನಾಳಗಳ ದ್ವಾರಾ ಹರಿಯಬೇಕಾಗುತ್ತದೆ. ಈ ರಕ್ತನಾಳಗಳು ಅತ್ಯಂತ ಸೂಕ್ಷ್ಮ–ರಕ್ತದ ಸಾಮಾನ್ಯ ಪರಿಣಾಮ ಪ್ರಸರಣಕಾರ್ಯಕ್ಕೆ ಮಾತ್ರ ಅನುಕೂಲವಾಗುವಷ್ಟು ಸೂಕ್ಷ್ಮವಾಗಿರುತ್ತವೆ. ಯಾವುದೇ ಕಾರಣದಿಂದ ಅಸಾಧಾರಣ ಪರಿಣಾಮದ ರಕ್ತವು ಯಾವುದಾದರೂ ಒಂದು ಅಂಗಭಾಗಕ್ಕೆ ಬರುವಂತೆ ಆದರೆ, ಈ ಹೆಚ್ಚಿನ ರಕ್ತದ ಪ್ರಸರಣಕ್ಕಾಗಿ ಆ ಭಾಗದ ಲೋಮನಾಳಗಳು ಹಿಗ್ಗುತ್ತವೆ. ಒಂದು ಘಾಯವಾಗಲಿ, ಉದ್ರೇಕವಾಗಲಿ, ತಿಂಡಿ ಬಿಡಲಿ, ಅಥವಾ ಪುನರಾವೃತ್ತವಾದ ನರದ ಪ್ರಚೋದನೆಯು, ಘಾಯವಾದ-ತಿಂಡಿಬಿಟ್ಟ-ಅಥವಾ ಪ್ರಚೋದಿತವಾದ ಭಾಗಕ್ಕೆ ಅಸಾಧಾರಣವಾಗಿ ಹೆಚ್ಚಾದ ರಕ್ತವನ್ನು ಬರಮಾಡಿಕೊಳ್ಳುತ್ತದೆ. ಈ ಕಾರ್ಯಕಾರೀ ನಿಯೋಗವು ತಾತ್ಕಾಲಿಕವಾದರೆ, ಲೋಮನಾಳಗಳು ತತ್ಕಾಲಕ್ಕೆ ಹಿಗ್ಗುವುವೇ ವಿನಾ ತಾವು ಹಾದು ಹೋಗುತ್ತಿರುವ ಅಂಗಭಾಗದ ಸ್ನಾಯುಗಳಿಗಾಗಲಿ ಅಂಗಾಂಶಗಳಿಗಾಗಲಿ ಅಪಾಯವನ್ನುಂಟುಮಾಡುವುದಿಲ್ಲ. ಆದರೆ ಈ ಎಡೆ ಬಿಡದೆ ಇದ್ದರೆ, ಈ ಪ್ರಚೋದನೆಯು ಸ್ಥಿರವಾಗಿದ್ದರೆ ಅಥವಾ ಅಲ್ಪ ಶೀಘ್ರ ವಿರಾಮಗಳಲ್ಲಿ ಪುನರಾವೃತ್ತಿಯನ್ನು ಹೊಂದುತ್ತಿದ್ದರೆ, ಉಂಟಾಗುವ ಪರಿಣಾಮಗಳು ಬೇರೆ.

ಲೋಮನಾಳಗಳ ಹಿಗ್ಗುವಿಕೆ ಸ್ಥಿರವಾಗುವ ಸಂಭವವಿದ್ದು, ರಕ್ತದ ಪರಿಚಲನೆಯ ವೇಗವು ಕಡಿಮೆಯಾಗುತ್ತ ಬರುತ್ತದೆ ಹೀಗೆ ಹಿಗ್ಗಿದ ಲೋಮನಾಳಗಳುಳ್ಳ—ತಡವಾಗಿ ಆಗುವ ರಕ್ತದ ಪರಿಚಲನೆಯುಳ್ಳ—ಸ್ಥಿತಿಗೆ ರಕ್ತಸಂಚಯವೆನ್ನುವರು. ಇದು ರಕ್ತ ಕಟ್ಟಿದ ಭಾಗಗಳಲ್ಲಿ ಅಮಿತವಾದ ರಕ್ತವು ಉಳಿದು ಬಿಡುವುದನ್ನು ಸೂಚಿಸುತ್ತದೆ. ಹಳೆಯದಾದ ರಕ್ತಸಂಚಯಕ್ಕೆ ಒಳಪಟ್ಟ ಅಂಗಗಳು ತಮ್ಮ ಕಾರ್ಯನಿರ್ವಹಣದ ಬಗ್ಗೆ ಬರುಬರುತ್ತ ಬಲಹೀನವಾಗುತ್ತಹೋಗುತ್ತವೆ; ಅದರಿಂದಾಗಿ ಅತ್ಯಲ್ಪ ಪ್ರಚೋದನೆಯೇ ಅಂಗದ ಆತ್ಯಧಿಕ ಚಟುವಟಿಕೆಯನ್ನು ಒದಗಿಸುತ್ತದೆ.

ಈಗ ಈ ಶರೀರ ವ್ಯಾವಹಾರಿಕ ವಾಸ್ತವಾಂಶಗಳನ್ನರಿತ ಮೇಲೆ, ಜನರೇಕೆ ಶೀಘ್ರಸ್ಖಲನ ದೋಷದಿಂದ ಪೀಡಿತರಾಗುವರೆಂಬುದನ್ನು ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿದ್ದೇವೆ. ಸಹಜವೇ ಆಗಲಿ ಅಸಹಜವೇ ಆಗಲಿ, ಲೈಂಗಿಕ ಅತಿ ವ್ಯವಹಾರವು ಲೈಂಗಿಕ ಸಲಕರಣೆಯಲ್ಲಿ ರಕ್ತಸಂಚಯಕ್ಕೆ ದಾರಿಯನ್ನು ಮಾಡಿಕೊಡುತ್ತದೆ. ಅದರಲ್ಲೂ ಪುನಃ ಪುನಃ ಉಂಟಾದ–ಕೊನೆಗೆ ತೃಪ್ತಿಯಿಲ್ಲದ–ಲೈಂಗಿಕ ಉದ್ರೇಕವು ಆಂತರಿಕ ಲೈಂಗಿಕ ಅಂಗಗಳಲ್ಲಿ ರಕ್ತಸಂಚಯವನ್ನುಂಟು ಮಾಡುವ ಪರಿಸ್ಥಿತಿಗಳಲ್ಲಿ ಅತಿಕೆಟ್ಟುದು. ಆತ್ಮಪ್ರಕಾಮವು ಲೈಂಗಿಕ ಸಲಕರಣೆಯಲ್ಲಿ ಎಡೆಬಿಡದೆ ಉದ್ರೇಕವನ್ನು ಸಾಧಿಸಿಕೊಂಡು ಬಂದು, ಲೋಮನಾಳಗಳ ಅವಿಶ್ರಾಂತ ವ್ಯಾಕೋಚನವನ್ನುಂಟು ಮಾಡುತ್ತದೆ. ರಕ್ತಸಂಚಯವಾಗಿರುವ ಭಾಗಗಳು ಆಗ ಬಲಹೀನವಾಗುತ್ತ ತಮ್ಮ ಕಾರ್ಯದಕ್ಷತೆಯಲ್ಲಿ ಬಲಹೀನವಾಗುತ್ತವೆ. ಆದರಿಂದ ಅತ್ಯಲ್ಪ ಲೈಂಗಿಕ ಆವೇಗವು ಅತಿ ಪ್ರಬಲವಾದ ಪ್ರತಿಕ್ರಿಯೆಯನ್ನು ಪ್ರೇರೇಪಿಸುತ್ತದೆ.

ಲೈಂಗಿಕ ಉದ್ರೇಕದಲ್ಲಿ ಸ್ಖಲನವಾಗಬೇಕಾದರೆ, ಸ್ಖಲನನಾಳಗಳು ತೆರೆದು ವೀರ್ಯದ್ರವವನ್ನು ಸ್ಖಲಿಸಲೋಸುಗ ಹಾದಿಮಾಡಿಕೊಡಬೇಕಾಗುವುದು. ಈ ನಾಳಗಳ ಸಂದಿನಂತಹ ರಂಧ್ರಗಳು (Sail-liko Passages.) ಮುಚ್ಚಿಕೊಂಡಿರುವ ತನಕ, ಸ್ಖಲನವು ಸಾಧ್ಯವಿಲ್ಲ. ಈ ಜನನೇಂದ್ರಿಯದ ಈ ಭಾಗದಲ್ಲಿಯೇ ರಕ್ತಸಂಚಯವಾದರೆ, ಅದರ ಕಾರ್ಯಕಾರಿಶಕ್ತಿಯು ಕುಂದಿ ಅತ್ಯಲ್ಪ ಪ್ರಚೋದನೆಗೂ ಪ್ರತಿಕ್ರಿಯೆಯನ್ನೊದಗಿಸಲು ಸಿದ್ಧವಾಗುತ್ತದೆ. ಹೀಗಾಗಿ ಅತಿ ಬಲಹೀನವಾದ ಲೈಂಗಿಕ ಆವೇಗವೇ ಸ್ಖಲನವನ್ನುಂಟು ಮಾಡಬಲ್ಲುದಾಗುತ್ತದೆ. ಕಾಮುಕಯೋಚನೆ ತಲೆದೋರಿದರೆ ಸಾಕು; ವೀರ್ಯಪತನವಾಗುವಷ್ಟು ತಮ್ಮ ವೀರ್ಯಪದ್ಧತಿಯನ್ನು ಹಾಳುಮಾಡಿಕೊಂಡಿರುವ ಯುವಕರನೇಕರಿರುವರು.

ಹಾಗೆಯೇ ಅತಿರೇಕದ ಲೈಂಗಿಕವ್ಯವಹಾರವೂ ಬಲಹೀನವಾದ ಉದ್ರಿಕ್ತ ಸ್ಥಿತಿಗೆ ಕಾರಣವಾಗುವುದು. ಅಭಿಧಮನಿಕ ರಕ್ತ ಪ್ರವಾಹವನ್ನು ನಿಯಂತ್ರಿಸಿ ಉದ್ರಿಕ್ತಸ್ಥಿತಿಯನ್ನು ಸ್ಥಿರಗೊಳಿಸಲು, ಸಂಕೋಚಿಸುವ ಸ್ನಾಯುವು ಹೆಚ್ಚು ಶ್ರಮಕ್ಕೆ ಒಳಪಟ್ಟು ಬಲಹೀನವಾಗುತ್ತದೆ. ಒಂದು ವೇಳೆ ನರಗಳ ಪ್ರಚೋದನೆಗೆ ಅದು ಸಂಕೋಚಗೊಂಡರೆ, ಆ ಸಂಕೋಚನೆ ಬಲಹೀನವಾಗಿದ್ದು ಅಲ್ಪಾವಧಿಯವರೆಗೆ ಮಾತ್ರ ಇರುತ್ತದೆ. ಇದರ ಫಲವಾಗಿ, ಉದ್ರೇಕದಲ್ಲಿ ಒಳನುಗ್ಗಿದ ರಕ್ತವು ಹಿಗ್ಗಿದ ರಕ್ತನಾಳದ್ವಾರಾ ಶೀಘ್ರವಾಗಿ ಹೊರಕ್ಕೆ ಹಿಂತಿರುಗುವುದು ಮತ್ತು ಅಂಗವು ತಕ್ಷಣವೇ ಮಿದುವಾಗಿಬಿಡುವುದು.

ಇದರಿಂದಾಗಿ ರೋಗಿಯು ಹೆದರಿ, ಕಂಡವರ ಕಾಲನ್ನು ಕಟ್ಟಿಕೊಳ್ಳುವನು. ಕಂಡ ಕಂಡ ಔಷಧೋಪಚಾರಗಳನ್ನೂ ಲೇಪನಗಳನ್ನೂ ಉಪಯೋಗಿಸುವನು. ಬಜಾರದಲ್ಲಿ ಅನೇಕ ತರದ ಔಷಧಗಳ ಪ್ರಚಾರವು ನಡೆದೇ ಇರುತ್ತದೆ. ಮಣಗಟ್ಟಲೆ ನುಂಗಿದರೂ ಉಪಯೋಗವಿಲ್ಲದೆ, ಮತ್ತಿಷ್ಟು ಕಂಗಾಲರಾದ ಈ ಯುವಕರನ್ನು ಕಂಡು ಮರುಕ ಉಂಟಾಗುತ್ತದೆ. ಅವರಿವರ ಬಳಿ ಸಾರುವುದರ ಬದಲಾಗಿ, ವೈದ್ಯರಲ್ಲಿ ಮೊರೆಯಿಟ್ಟುಕೊಂಡರೆ ಅವರು ತಕ್ಕಮಟ್ಟಿಗೆ ಸಹಾಯವನ್ನು ನೀಡುವರು, ಆದರೂ ಔಷಧೋಪಚಾರಗಳಿಂದ ಈ ದುರ್ಗತಿ ಕಡಿಮೆಯಾಗಲಾರದು. ಪ್ರಚೋದಕೋಪ

ಚಾರಗಳಿಂದ ಉದ್ರಿಕ್ತವಾಗುವ ರಚನೆಗೆ (Erectlle Shuehmv) ಹೆಚ್ಚು ರಕ್ತಪ್ರಸರಣವಾಗುವುದು ನಿಜ; ಆದರೆ ಆವೇಗಕ್ಕೆ ಪ್ರತಿಕ್ರಿಯೆಯು ಶೀಘ್ರತರವಾಗಿದ್ದು, ಸ್ಖಲನವು ಹೆಚ್ಚು ಅವಸರದ್ದಾಗುವುದು. ಶಾಮಕಗಳು ಅಲ್ಪ ಸ್ವಲ್ಪ ಉಪಯೋಗಿಗಳಾಗುತ್ತವೆ. ಆದರೆ ಅವುಗಳ ತೊಂದರೆಗಳನ್ನೂ ಆಗಲೇ ತಿಳಿಸಿರುವೆನು; ಆದರೂ ಬಹಳ ಕಾಲದವರೆಗೂ ನಡೆದುಕೊಂಡು ಬಂದರೆ, ಶಾಮಕಗಳು ಉತ್ತಮ.

ಆಧುನಿಕ ಪಾಶ್ಚಿಮಾತ್ಯ ವೈದ್ಯಕೀಯ ಸಂಸ್ಕೃತಿಯಲ್ಲಿಯೂ, ಯೌಗಿಕ ಸಂಸ್ಕೃತಿಯಲ್ಲಿಯೂ ವಿಶೇಷ ಪರಿಶೀಲನಾತ್ಮಕ ಪರಿಶ್ರಮ ಮತ್ತು ಅನುಭವವು ಉಳ್ಳ ಶ್ರೀ ಶ್ರೀ ಸ್ವಾಮೀ ಕುವಲಯಾನಂದರಂತಹರ ನಿಸ್ಸಂಶಯಾತ್ಮಕ ಅಭಿಪ್ರಾಯವೇನೆಂದರೆ: ಈ ಬಗ್ಗೆ ಅನುಮಾನರಹಿತವಾಗಿ ಪ್ರಾಕೃತಿಕ ನಿವಾರಣೋಪಾಯಗಳೇ ಅತ್ಯಂತವಾಗಿ ಪರಿಣಾಮಕಾರಿಗಳಾಗಿರುತ್ತವೆಯೆಂದು. ಅವುಗಳಲ್ಲಿ ಯೋಗಶಾಸ್ತ್ರದಲ್ಲಿಯ ಅಭ್ಯಾಸಗಳು--ಬುದ್ಧಿವಂತಿಕೆಯಿಂದ ಅಭ್ಯಸಿಸಿದರೆ— ಈ ಅವ್ಯವಸ್ಥೆಗಳಿಂದ ಪೀಡಿತನಾದವನಿಗೆ ಹೆಚ್ಚಿನ ಉಪಶಮನವನ್ನು ಕೊಡುತ್ತವೆ.

ರಕ್ತವು ಕಟ್ಟಿ ನೋವು ಆಗಿದ್ದರೆ, ನೋವು ಆಗಿದ್ದ ಭಾಗವನ್ನು ಹೃದಯಕ್ಕಿಂತ ಎತ್ತರವಾಗಿ ಇಡಬೇಕೆಂಬುದು ಸರ್ವಮಾನ್ಯವಾದ ತತ್ತ್ವವು. ಆಗ ಎತ್ತರಿಸಲ್ಪಟ್ಟ ಭಾಗದಿಂದ ಹೆಚ್ಚಿಗೆಯಾದ ರಕ್ತವು ಭೂಮ್ಯಾಕರ್ಷಣೆಯ ತತ್ತ್ವಾನುಸಾರವಾದ ಶಕ್ತಿಯಿಂದ ಧೃತಿ ಪಡೆದು ಹೊರಹೊರಡುವುದು. ರಕ್ತ ಕಟ್ಟುವುದರಿಂದುಂಟಾದ ನೋವು ಎಂಬುದು ರಕ್ತಸಂಚಯದ ಅತಿಯಾದ ಸನ್ನಿವೇಶ. ಮತ್ತೆ ಎತ್ತಿ ಹಿಡಿಯುವುದರಿಂದ ರಕ್ತ ಕಟ್ಟುವುದರ ನೋವು ಉಪಶಮನವಾಗುವುದಾದರೆ, ರಕ್ತಸಂಚಯದ ಉಪಶಮನವೂ ಆಗಿಯೇ ತೀರಬೇಕು.

ಸರ್ವಾಂಗಾಸನವು ಅಭಿಧಮನಿಕ ರಕ್ತಪ್ರಸರಣದ ಮೇಲೆ ಬಹಳ ಅನುಕೂಲ ಪರಿಣಾಮಗಳನ್ನು ಸಾಮಾನ್ಯವಾಗಿ ಒದಗಿಸುತ್ತದೆ. ಈಗ ಈ ಆಸನಸ್ಥಿತಿಯಲ್ಲಿ ರಕ್ತದಿಂದ ಅತಿಶಯವಾಗಿ ತುಂಬಿರುವ ಈ ಜನನೇಂದ್ರಿಯ ಭಾಗವು ಉನ್ನತವಾಗುವುದರಿಂದ, ತಮ್ಮಲ್ಲಿರುವ ಹೆಚ್ಚಿನ ರಕ್ತವನ್ನು ಖಾಲಿ ಮಾಡಿಕೊಳ್ಳದೆ ಇರಲಾರವು. ಈ ಆಸನವನ್ನು ನಿತ್ಯವೂ ಬಹಳ ಹೊತ್ತಿನ ವರೆಗೂ ಅಭ್ಯಸಿಸುತ್ತ, ಬಹಳ ದಿನಗಳ ವರೆಗೂ ನಡೆಸಿದರೆ, ಈ ಜನನೇಂದ್ರಿಯ ಭಾಗವು ಖಂಡಿತವಾಗಿ ತನ್ನಲ್ಲಿದ್ದ ಹೆಚ್ಚಿನ ರಕ್ತವನ್ನು ಖಾಲಿ ಮಾಡಿಕೊಳ್ಳುವುದು. ನಿತ್ಯವೂ ರಕ್ತಸಂಚಯವಾಗಿರುವ ಈ ಭಾಗಕ್ಕೆ ಉಪಶಮನವು ದೊರೆಯುತ್ತಲಿದ್ದರೆ, ಹಿಗ್ಗಿದ ಲೋಮನಾಳಗಳು ನಿಧಾನವಾಗಿ ಸಂಕೋಚಗೊಳ್ಳುತ್ತ ಬಂದು, ಕೆಲವು ತಿಂಗಳುಗಳ ಅಭ್ಯಾಸದಿಂದ, ಲೈಂಗಿಕ ಕಾರ್ಯಕಲಾಪವು ಸಹಜಸ್ಥಿತಿಗೆ ಸಮೀಪತರವಾಗುವುದು.

ಅಹುದು, ಕೆಲವು ತಿಂಗಳುಗಳ ಅಭ್ಯಾಸವು ಬೇಕಾಗುವುದು. ಇದು ಅತ್ಯಂತ ಅವಸರ. ರೋಗದ ಚಿಕಿತ್ಸೆ ಆಗದಿರುವುದು ಒಂದನೆಯದು, ರೋಗದ ಸಾವಕಾಶವಾದ ಚಿಕಿತ್ಸೆ ಎರಡನೆಯದು. ಇವೆರಡರಲ್ಲಿ ಯಾವುದು ಬೇಕಾಗುವುದು? ಯಾವ ತಿಳಿವಳಿಕೆಯುಳ್ಳ ರೋಗಿಯಾದರೂ, ಚಿಕಿತ್ಸೆ ಇಲ್ಲದಿರುವಿಕೆಗಿಂತಲೂ ಸಾವಕಾಶವಾದ ಚಿಕಿತ್ಸೆಯನ್ನು ಅಪೇಕ್ಷಿಸುವನೆಂದು ನನ್ನ ನಂಬಿಕೆ. ನಿಧಾನವಾದ ಚಿಕಿತ್ಸೆಗಿಂತ ಉತ್ತಮವಾದ ಉಪಾಯವಿಲ್ಲ.

ಇನ್ನು, ಬಲಹೀನವಾದ ಉದ್ರಿಕ್ತಸ್ಥಿತಿಗೆ ಕಾರಣವಾದ ಸ್ನಾಯುವನ್ನು ಬಲಗೊಳಿಸಲೂ ಬಹುದು. "ಅಶ್ವಿನೀಮುದ್ರೆಯು" ಈ ಬಗ್ಗೆ ಬಹಳ ಸಹಾಯಕವಾಗುವುದು. ಉದ್ರೇಕದಲ್ಲಿ ಈ ಸ್ನಾಯುವು ಸತತವಾದ ದೀರ್ಘಕಾಲದ ಸಂಕೋಚನಕ್ಕೆ ಒಳಪಟ್ಟಿರುತ್ತದೆ. ಅದರಿಂದಾಗಿ ಅದರ (Perineum) ಬಲವು ಕುಗ್ಗುತ್ತದೆ. ಆದರೆ ಈ ಅಭ್ಯಾಸದಲ್ಲಿ ಸ್ನಾಯುವು ಪರ್ಯಾಯವಾಗಿ ಸಂಕೋಚವಿಕಾಸಗಳನ್ನು (ಬಿಗಿಯುತ್ತ ಸಡಿಲಾಗುತ್ತ) ಹೊಂದುವುದು ಆದಕಾರಣ, ಅದರ ಮೊದಲಿನ ಬಲಯುಕ್ತವಾದ ಹದಕ್ಕೆ ಬರುತ್ತದೆ. ಆದುದರಿಂದ ಸರ್ವಾಂಗಾಸನ ಸ್ಥಿತಿಯಲ್ಲಿ, ಆದರೆ ಅದರ ನಿಯಮಿತ ಸಮಯದ ಉತ್ತರಾರ್ಧದಲ್ಲಿ, ಅಶ್ವಿನೀಮುದ್ರೆಯನ್ನು ನಿತ್ಯವೂ ಅಭ್ಯಾಸ ಮಾಡಿದರೆ, ಬಹಳ ಅನುಕೂಲವಾಗುವುದು.

ಈ ರೀತಿಯ ಅವ್ಯವಸ್ಥೆಗಳಲ್ಲಿ ಅನೇಕವುಗಳ ಸಾರಭೂತವಾಗಿ ಈ ಎರಡು ಅಭ್ಯಾಸಗಳಿಂದ ಸರಿಪಡಿಸಲ್ಪಟ್ಟಿವೆಯೆಂದು ಸ್ವಾಮಿ ಕುವಲಯಾನಂದರು ಘಂಟಾಘೋಷವಾಗಿ ಹೇಳಿರುವರು ಅನೇಕ ವೇಳೆ ಇವುಗಳ ಜೊತೆಗೆ ಬೇರೆ ಅಭ್ಯಾಸಗಳನ್ನೂ ಮಾಡುವುದುತ್ತಮ. ಇದರಿಂದಾಗಿ ಈ ಎರಡು ಅಭ್ಯಾಸಗಳ ಯೋಗ್ಯತೆ ಕಡಿಮೆಯೆಂದಲ್ಲ. ಏಕೆಂದರೆ, ಈ ಇತರ ಅಭ್ಯಾಸಗಳು ಹೆಚ್ಚಿನವು, ಕನಿಷ್ಠ ಪಕ್ಷದಲ್ಲಿ ರೋಗಿಯ ಸಾಮಾನ್ಯ ಆರೋಗ್ಯಕ್ಕೆ ಈ ಎರಡು ಅಭ್ಯಾಸಗಳು ಅನುಕೂಲವಾಗುವಂತೆ ಮಾಡುವುದಕ್ಕೆಂದೇ ಇವೆ. ನಿಜವಾದ ಉಪಶಮನ ಮುಖ್ಯವಾಗಿ ಈ ಸರ್ವಾಂಗಾಸನ ಮತ್ತು ಅಶ್ವಿನೀಮುದ್ರೆಗಳಿಂದಲೇ ದೊರೆಯುವುದು.

ಆದರೆ ಒಂದು ಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕಾದ ಅಂಶವೆಂದರೆ, ರಕ್ತಸಂಚಯದ ಚಿಕಿತ್ಸೆಗೆ ಒಳಪಟ್ಟ ರಕ್ತ ಕಟ್ಟಿದ ಅಂಗಕ್ಕೆ ಕೇವಲ ವಿಶ್ರಾಂತಿ ಅತ್ಯವಸರ. ಆದಕಾರಣ, ಚಿಕಿತ್ಸಾ ಸಮಯದಲ್ಲಿ ರೋಗಪೀಡಿತನು ಯಾವ ವಿಧವಾದ ಲೈಂಗಿಕ ಚಟುವಟಿಕೆಯನ್ನೂ ಪ್ರಯತ್ನಿಸಬಾರದು. ರೋಗಿಯು ಯೋಗವು ಆಧ್ಯಾತ್ಮಿಕ ಸಂಸ್ಕೃತಿಯ ಪದ್ಧತಿಯೆಂದು ನಂಬುವುದಾದರೆ, ಯೌಗಿಕ ಉಪಶಮನೋಪಾಯಗಳನ್ನು ಕೈಕೊಂಡಲ್ಲಿ, ಹೆಚ್ಚಾಗಿ ಲೈಂಗಿಕ ಆವೇಗಗಳಿಂದ ಮುಕ್ತನಾಗುವುದರಿಂದ ಲಾಭವನ್ನು ಪಡೆಯುವನು

ಗ್ರಂಥಋಣ:

"ಯೋಗಮೀಮಾಂಸಾ"

ಶ್ರೀ ಸ್ವಾಮಿ ಕುವಲಯಾನಂದರು.

ವನ್ನು ಚೆನ್ನಾಗಿ ತಡೆಗಟ್ಟುತ್ತದೆ. ಹೀಗಾಗಿ, ಅಪಧಮನಿಗಳು ವಿಪುಲವಾಗಿ ರಕ್ತವನ್ನು ಒಳನುಗ್ಗಿಸುತ್ತವೆ. ಈ ರಕ್ತವು ಹೊರಗೆ ಬರಲಾರದೆ ಅಂಗವನ್ನು ಉದ್ರಿಕ್ತಸ್ಥಿತಿಯಲ್ಲಿ ಇಡುತ್ತದೆ.

ಲೈಂಗಿಕ ಉದ್ರೇಕವು ಕಡಿಮೆಯಾದಮೇಲೆ, ಈ ಸ್ನಾಯುವು ಸಡಿಲವಾಗುತ್ತದೆ ಮತ್ತು ಅಂಗದ ಒಳಸ್ಪೈಯ ಅಂಚುಗಳಿಗೆ ಒತ್ತುತ್ತಿದ್ದ ರಕ್ತವು ಸಾವಕಾಶವಾಗಿ ತನ್ನ ನಿರ್ಗಮನವನ್ನು ನಡೆಸುತ್ತದೆ. ಈ ಲೈಂಗಿಕ ರಚನೆಯಿಂದ ಹೆಚ್ಚಾದ ರಕ್ತವು ಹೊರಗೆ ಬಂದ ಮೇಲೆ, ಅದು ಮಿದುವಾಗಿ ತನ್ನ ಮೊದಲಿನ ಅಳತೆಗೆ ಬರುವುದು.

ಇಲ್ಲಿ ಉಲ್ಲೇಖಿತವಾದ ಅವ್ಯವಸ್ಥೆಗಳನ್ನು ತಿಳಿದುಕೊಳ್ಳುವಲ್ಲಿ ಲಕ್ಷ್ಯಕೊಡತಕ್ಕ ಮತ್ತೊಂದು ಶರೀರ ವ್ಯಾವಹಾರಿಕ ವಿಚಾರಣೀಯ ವಿಷಯವೆಂದರೆ ರಕ್ತಸಂಚಯ. ರಕ್ತದ ಪರಿಚಲನೆಯನ್ನು ಬಲ್ಲವರಿಗೆ ಇದು ಸುಗ್ರಾಹ್ಯ. ಅಪಧಮನಿಗಳನ್ನು ಹಾದುಹೋಗುವ ರಕ್ತವು ಲೋಮನಾಳಗಳ ದ್ವಾರಾ ಹರಿಯಬೇಕಾಗುತ್ತದೆ. ಈ ರಕ್ತನಾಳಗಳು ಅತ್ಯಂತ ಸೂಕ್ಷ್ಮ–ರಕ್ತದ ಸಾಮಾನ್ಯ ಪರಿಣಾಮ ಪ್ರಸರಣಕಾರ್ಯಕ್ಕೆ ಮಾತ್ರ ಅನುಕೂಲವಾಗುವಷ್ಟು ಸೂಕ್ಷ್ಮವಾಗಿರುತ್ತವೆ. ಯಾವುದೇ ಕಾರಣದಿಂದ ಅಸಾಧಾರಣ ಪರಿಣಾಮದ ರಕ್ತವು ಯಾವುದಾದರೂ ಒಂದು ಅಂಗಭಾಗಕ್ಕೆ ಬರುವಂತೆ ಆದರೆ, ಈ ಹೆಚ್ಚಿನ ರಕ್ತದ ಪ್ರಸರಣಕ್ಕಾಗಿ ಆ ಭಾಗದ ಲೋಮನಾಳಗಳು ಹಿಗ್ಗುತ್ತವೆ. ಒಂದು ಘಾಯವಾಗಲಿ, ಉದ್ರೇಕವಾಗಲಿ, ತಿಂಡಿ ಬಿಡಲಿ, ಅಥವಾ ಪುನರಾವೃತ್ತವಾದ ನರದ ಪ್ರಚೋದನೆಯು, ಘಾಯವಾದ-ತಿಂಡಿಬಿಟ್ಟ-ಅಥವಾ ಪ್ರಚೋದಿತವಾದ ಭಾಗಕ್ಕೆ ಅಸಾಧಾರಣವಾಗಿ ಹೆಚ್ಚಾದ ರಕ್ತವನ್ನು ಬರಮಾಡಿಕೊಳ್ಳುತ್ತದೆ. ಈ ಕಾರ್ಯಕಾರೀ ನಿಯೋಗವು ತಾತ್ಕಾಲಿಕವಾದರೆ, ಲೋಮನಾಳಗಳು ತತ್ಕಾಲಕ್ಕೆ ಹಿಗ್ಗುವವೇ ವಿನಾ ತಾವು ಹಾದು ಹೋಗುತ್ತಿರುವ ಅಂಗಭಾಗದ ಸ್ನಾಯುಗಳಿಗಾಗಲಿ ಅಂಗಾಂಶಗಳಿಗಾಗಲಿ ಅಪಾಯವನ್ನುಂಟುಮಾಡುವುದಿಲ್ಲ. ಆದರೆ ಈ ಎಡೆ ಬಿಡದೆ ಇದ್ದರೆ, ಈ ಪ್ರಚೋದನೆಯು ಸ್ಥಿರವಾಗಿದ್ದರೆ ಅಥವಾ ಅಲ್ಪ ಶೀಘ್ರ ವಿರಾಮಗಳಲ್ಲಿ ಪುನರಾವೃತ್ತಿಯನ್ನು ಹೊಂದುತ್ತಿದ್ದರೆ, ಉಂಟಾಗುವ ಪರಿಣಾಮಗಳು ಬೇರೆ.

ಲೋಮನಾಳಗಳ ಹಿಗ್ಗುವಿಕೆ ಸ್ಥಿರವಾಗುವ ಸಂಭವವಿದ್ದು, ರಕ್ತದ ಪರಿಚಲನೆಯ ವೇಗವು ಕಡಿಮೆಯಾಗುತ್ತ ಬರುತ್ತದೆ ಹೀಗೆ ಹಿಗ್ಗಿದ ಲೋಮನಾಳಗಳುಳ್ಳ—ತಡವಾಗಿ ಆಗುವ ರಕ್ತದ ಪರಿಚಲನೆಯುಳ್ಳ–ಸ್ಥಿತಿಗೆ ರಕ್ತಸಂಚಯವೆನ್ನುವರು. ಇದು ರಕ್ತ ಕಟ್ಟಿದ ಭಾಗಗಳಲ್ಲಿ ಅಮಿತವಾದ ರಕ್ತವು ಉಳಿದು ಬಿಡುವುದನ್ನು ಸೂಚಿಸುತ್ತದೆ. ಹಳೆಯದಾದ ರಕ್ತಸಂಚಯಕ್ಕೆ ಒಳಪಟ್ಟ ಅಂಗಗಳು ತಮ್ಮ ಕಾರ್ಯನಿರ್ವಹಣದ ಬಗ್ಗೆ ಬರುಬರುತ್ತ ಬಲಹೀನವಾಗುತ್ತ-ಹೋಗುತ್ತವೆ; ಆದರಿಂದಾಗಿ ಅತ್ಯಲ್ಪ ಪ್ರಚೋದನೆಯೇ ಅಂಗದ ಅತ್ಯಧಿಕ ಚಟುವಟಿಕೆಯನ್ನು ಒದಗಿಸುತ್ತದೆ.

ಈಗ ಈ ಶರೀರ ವ್ಯಾವಹಾರಿಕ ವಾಸ್ತವಾಂಶಗಳನ್ನರಿತ ಮೇಲೆ, ಜನರೇಕೆ ಶೀಘ್ರಸ್ಖಲನ ದೋಷದಿಂದ ಪೀಡಿತರಾಗುವರೆಂಬುದನ್ನು ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿದ್ದೇವೆ. ಸಹಜವೇ ಆಗಲಿ ಅಸಹಜವೇ ಆಗಲಿ, ಲೈಂಗಿಕ ಅತಿ ವ್ಯವಹಾರವು ಲೈಂಗಿಕ ಸಲಕರಣೆಯಲ್ಲಿ ರಕ್ತಸಂಚಯಕ್ಕೆ ದಾರಿಯನ್ನು ಮಾಡಿಕೊಡುತ್ತದೆ. ಅದರಲ್ಲೂ ಪುನಃ ಪುನಃ ಉಂಟಾದ–ಕೊನೆಗೆ ತೃಪ್ತಿಯಿಲ್ಲದ–ಲೈಂಗಿಕ ಉದ್ರೇಕವು ಆಂತರಿಕ ಲೈಂಗಿಕ ಅಂಗಗಳಲ್ಲಿ ರಕ್ತಸಂಚಯವನ್ನುಂಟು ಮಾಡುವ ಪರಿಸ್ಥಿತಿಗಳಲ್ಲಿ ಅತಿಕೆಟ್ಟುದು. ಅತೃಪ್ತಕಾಮವು ಲೈಂಗಿಕ ಸಲಕರಣೆಯಲ್ಲಿ ಎಡೆಬಿಡದೆ ಉದ್ರೇಕವನ್ನು ಸಾಧಿಸಿಕೊಂಡು ಬಂದು, ಲೋಮನಾಳಗಳ ಅವಿಶ್ರಾಂತ ವ್ಯಾಕೋಚನವನ್ನುಂಟು ಮಾಡುತ್ತದೆ. ರಕ್ತಸಂಚಯವಾಗಿರುವ ಭಾಗಗಳು ಆಗ ಬಲಹೀನವಾಗುತ್ತ ತಮ್ಮ ಕಾರ್ಯದಕ್ಷತೆಯಲ್ಲಿ ಬಲಹೀನವಾಗುತ್ತವೆ. ಆದರಿಂದ ಅತ್ಯಲ್ಪ ಲೈಂಗಿಕ ಆವೇಗವು ಅತಿ ಪ್ರಬಲವಾದ ಪ್ರತಿಕ್ರಿಯೆಯನ್ನು ಪ್ರೇರೇಪಿಸುತ್ತದೆ.

ಲೈಂಗಿಕ ಉದ್ರೇಕದಲ್ಲಿ ಸ್ಖಲನವಾಗಬೇಕಾದರೆ, ಸ್ಖಲನನಾಳಗಳು ತೆರೆದು ವೀರ್ಯದ್ರವವನ್ನು ಸ್ಖಲಿಸಲೋಸುಗ ಹಾದಿಮಾಡಿಕೊಡಬೇಕಾಗುವುದು. ಈ ನಾಳಗಳ ಸಂದಿನಂತಹ ರಂಧ್ರಗಳು (Sail-liko Passages.) ಮುಚ್ಚಿಕೊಂಡಿರುವ ತನಕ, ಸ್ಖಲನವು ಸಾಧ್ಯವಿಲ್ಲ. ಈ ಜನನೇಂದ್ರಿಯದ ಈ ಭಾಗದಲ್ಲಿಯೇ ರಕ್ತಸಂಚಯವಾದರೆ, ಅದರ ಕಾರ್ಯಕಾರಿಶಕ್ತಿಯು ಕುಂದಿ ಅತ್ಯಲ್ಪ ಪ್ರಚೋದನೆಗೂ ಪ್ರತಿಕ್ರಿಯೆಯನ್ನೊದಗಿಸಲು ಸಿದ್ಧವಾಗುತ್ತದೆ. ಹೀಗಾಗಿ ಅತಿ ಬಲಹೀನವಾದ ಲೈಂಗಿಕ ಆವೇಗವೇ ಸ್ಖಲನವನ್ನುಂಟು ಮಾಡಬಲ್ಲುದಾಗುತ್ತದೆ. ಕಾಮುಕಯೋಚನೆ ತಲೆದೋರಿದರೆ ಸಾಕು; ವೀರ್ಯಪತನವಾಗುವಷ್ಟು ತಮ್ಮ ವೀರ್ಯಪದ್ಧತಿಯನ್ನು ಹಾಳುಮಾಡಿಕೊಂಡಿರುವ ಯುವಕರನೇಕರಿರುವರು.

ಹಾಗೆಯೇ ಅತಿರೇಕದ ಲೈಂಗಿಕವ್ಯವಹಾರವೂ ಬಲಹೀನವಾದ ಉದ್ರಿಕ್ತ ಸ್ಥಿತಿಗೆ ಕಾರಣವಾಗುವುದು. ಅಭಿಧಮನಿಕ ರಕ್ತ ಪ್ರವಾಹವನ್ನು ನಿಯಂತ್ರಿಸಿ ಉದ್ರಿಕ್ತಸ್ಥಿತಿಯನ್ನು ಸ್ಥಿರಗೊಳಿಸಲು, ಸಂಕೋಚಿಸುವ ಸ್ನಾಯುವು ಹೆಚ್ಚು ಶ್ರಮಕ್ಕೆ ಒಳಪಟ್ಟು ಬಲಹೀನವಾಗುತ್ತದೆ. ಒಂದು ವೇಳೆ ನರಗಳ ಪ್ರಚೋದನೆಗೆ ಅದು ಸಂಕೋಚಗೊಂಡರೆ, ಆ ಸಂಕೋಚನೆ ಬಲಹೀನವಾಗಿದ್ದು ಅಲ್ಪಾವಧಿಯವರೆಗೆ ಮಾತ್ರ ಇರುತ್ತದೆ. ಇದರ ಫಲವಾಗಿ, ಉದ್ರೇಕದಲ್ಲಿ ಒಳನುಗ್ಗಿದ ರಕ್ತವು ಹಿಗ್ಗಿದ ರಕ್ತನಾಳದ್ವಾರಾ ಶೀಘ್ರವಾಗಿ ಹೊರಕ್ಕೆ ಹಿಂತಿರುಗುವುದು ಮತ್ತು ಅಂಗವು ತಕ್ಷಣವೇ ಮಿದುವಾಗಿಬಿಡುವುದು.

ಇದರಿಂದಾಗಿ ರೋಗಿಯು ಹೆದರಿ, ಕಂಡವರ ಕಾಲನ್ನು ಕಟ್ಟಿಕೊಳ್ಳುವನು. ಕಂಡ ಕಂಡ ಔಷಧೋಪಚಾರಗಳನ್ನೂ ಲೇಪನಗಳನ್ನೂ ಉಪಯೋಗಿಸುವನು. ಬಜಾರದಲ್ಲಿ ಅನೇಕ ತರದ ಔಷಧಗಳ ಪ್ರಚಾರವು ನಡೆದೇ ಇರುತ್ತದೆ. ಹಣಗಟ್ಟಲೆ ನುಂಗಿದರೂ ಉಪಯೋಗವಿಲ್ಲದೆ, ಮತ್ತಿಷ್ಟು ಕಂಗಾಲರಾದ ಈ ಯುವಕರನ್ನು ಕಂಡು ಮರುಕ ಉಂಟಾಗುತ್ತದೆ. ಅನರಿವರ ಬಳಿ ಸಾರುವುದರ ಬದಲಾಗಿ, ವೈದ್ಯರಲ್ಲಿ ಮೊರೆಯಿಟ್ಟುಕೊಂಡರೆ ಅವರು ತಕ್ಕಮಟ್ಟಿಗೆ ಸಹಾಯವನ್ನು ನೀಡುವರು, ಆದರೂ ಔಷಧೋಪಚಾರಗಳಿಂದ ಈ ದುರ್ಗತಿ ಕಡಿಮೆಯಾಗಲಾರದು. ಪ್ರಚೋದಕೋಪ

ಕಾರಗಳಿಂದ ಉದ್ರಿಕ್ತವಾಗುವ ರಚನೆಗೆ (Erectlle Shuehmv) ಹೆಚ್ಚು ರಕ್ತಪ್ರಸರಣವಾಗುವುದು ನಿಜ; ಆದರೆ ಆವೇಗಕ್ಕೆ ಪ್ರತಿಕ್ರಿಯೆಯು ಶೀಘ್ರತರವಾಗಿದ್ದು, ಸ್ಖಲನವು ಹೆಚ್ಚು ಅವಸರದ್ದಾಗುವುದು. ಶಾಮಕಗಳು ಅಲ್ಪ ಸ್ವಲ್ಪ ಉಪಯೋಗಿಗಳಾಗುತ್ತವೆ. ಆದರೆ ಅವುಗಳ ತೊಂದರೆಗಳನ್ನೂ ಆಗಲೇ ತಿಳಿಸಿರುವೆನು; ಆದರೂ ಬಹಳ ಕಾಲದವರೆಗೂ ನಡೆದುಕೊಂಡು ಬಂದರೆ, ಶಾಮಕಗಳು ಉತ್ತಮ.

ಆಧುನಿಕ ಪಾಶ್ಚಿಮಾತ್ಯ ವೈದ್ಯಕೀಯ ಸಂಸ್ಕೃತಿಯಲ್ಲಿಯೂ, ಯೌಗಿಕ ಸಂಸ್ಕೃತಿಯಲ್ಲಿಯೂ ವಿಶೇಷ ಪರಿಶೀಲನಾತ್ಮಕ ಪರಿಶ್ರಮ ಮತ್ತು ಅನುಭವವು ಉಳ್ಳ ಶ್ರೀ ಶ್ರೀ ಸ್ವಾಮೀ ಕುವಲಯಾನಂದ ರವರ ನಿಸ್ಸಂಶಯಾತ್ಮಕ ಅಭಿಪ್ರಾಯವೇನೆಂದರೆ: ಈ ಬಗ್ಗೆ ಅನುಮಾನರಹಿತವಾಗಿ ಪ್ರಾಕೃತಿಕ ನಿವಾರಣೋಪಾಯಗಳೇ ಅತ್ಯಂತ ಹೆಚ್ಚಾಗಿ ಪರಿಣಾಮಕಾರಿಗಳಾಗಿರುತ್ತವೆಯೆಂದು. ಅವುಗಳಲ್ಲಿ ಯೋಗಶಾಸ್ತ್ರದಲ್ಲಿಯ ಅಭ್ಯಾಸಗಳು—ಬುದ್ಧಿವಂತಿಕೆಯಿಂದ ಅಭ್ಯಸಿಸಿದರೆ— ಅವ್ಯವಸ್ಥೆಗಳಿಂದ ಪೀಡಿತನಾದವನಿಗೆ ಹೆಚ್ಚಿನ ಉಪಶಮನವನ್ನು ಕೊಡುತ್ತವೆ.

ರಕ್ತವು ಕಟ್ಟಿ ನೋವು ಆಗಿದ್ದರೆ, ನೋವು ಆಗಿದ್ದ ಭಾಗವನ್ನು ಹೃದಯಕ್ಕಿಂತ ಎತ್ತರವಾಗಿ ಇಡಬೇಕೆಂಬುದು ಸರ್ವಮಾನ್ಯವಾದ ತತ್ತ್ವವು. ಆಗ ಎತ್ತರಿಸಲ್ಪಟ್ಟ ಭಾಗದಿಂದ ಹೆಚ್ಚಿಗೆಯಾದ ರಕ್ತವು ಭೂಮ್ಯಾಕರ್ಷಣೆಯ ತತ್ತ್ವಾನುಸಾರವಾದ ಶಕ್ತಿಯಿಂದ ಧೃತಿ ಪಡೆದು ಹೊರಹೊರಡುವುದು. ರಕ್ತ ಕಟ್ಟುವುದರಿಂದುಂಟಾದ ನೋವು ಎಂಬುದು ರಕ್ತಸಂಚಯದ ಅತಿಯಾದ ಸನ್ನಿವೇಶ. ಮತ್ತೆ ಎತ್ತಿ ಹಿಡಿಯುವುದರಿಂದ ರಕ್ತ ಕಟ್ಟುವುದರ ನೋವು ಉಪಶಮನವಾಗುವುದಾದರೆ, ರಕ್ತಸಂಚಯದ ಉಪಶಮನವೂ ಆಗಿಯೇ ತೀರಬೇಕು.

ಸರ್ವಾಂಗಾಸನವು ಅಭಿಧಮನಿಕ ರಕ್ತಪ್ರಸರಣದ ಮೇಲೆ ಬಹಳ ಅನುಕೂಲ ಪರಿಣಾಮಗಳನ್ನು ಸಾಮಾನ್ಯವಾಗಿ ಒದಗಿಸುತ್ತದೆ. ಈಗ ಈ ಆಸನಸ್ಥಿತಿಯಲ್ಲಿ ರಕ್ತದಿಂದ ಅತಿಶಯವಾಗಿ ತುಂಬಿರುವ ಈ ಜನನೇಂದ್ರಿಯ ಭಾಗವು ಉನ್ನತವಾಗುವುದರಿಂದ, ತಮ್ಮಲ್ಲಿರುವ ಹೆಚ್ಚಿನ ರಕ್ತವನ್ನು ಖಾಲಿ ಮಾಡಿಕೊಳ್ಳದೆ ಇರಲಾರವು. ಈ ಆಸನವನ್ನು ನಿತ್ಯವೂ ಬಹಳ ಹೊತ್ತಿನ ವರೆಗೂ ಅಭ್ಯಸಿಸುತ್ತ, ಬಹಳ ದಿನಗಳ ವರೆಗೂ ನಡೆಸಿದರೆ, ಈ ಜನನೇಂದ್ರಿಯ ಭಾಗವು ಖಂಡಿತವಾಗಿ ತನ್ನಲ್ಲಿದ್ದ ಹೆಚ್ಚಿನ ರಕ್ತವನ್ನು ಖಾಲಿ ಮಾಡಿಕೊಳ್ಳುವುದು. ನಿತ್ಯವೂ ರಕ್ತಸಂಚಯವಾಗಿರುವ ಈ ಭಾಗಕ್ಕೆ ಉಪಶಮನವು ದೊರೆಯುತ್ತಲಿದ್ದರೆ, ಹಿಗ್ಗಿದ ಲೋಮನಾಳಗಳು ನಿಧಾನವಾಗಿ ಸಂಕೋಚಗೊಳ್ಳುತ್ತ ಬಂದು, ಕೆಲವು ತಿಂಗಳುಗಳ ಅಭ್ಯಾಸದಿಂದ, ಲೈಂಗಿಕ ಕಾರ್ಯಕಲಾಪವು ಸಹಜಸ್ಥಿತಿಗೆ ಸಮೀಪತರವಾಗುವುದು.

ಅಹುದು, ಕೆಲವು ತಿಂಗಳುಗಳ ಅಭ್ಯಾಸವು ಬೇಕಾಗುವುದು. ಇದು ಅತ್ಯಂತ ಅವಸರ. ರೋಗದ ಚಿಕಿತ್ಸೆ ಆಗದಿರುವುದು ಒಂದ-[illegible] ಸಾವಕಾಶವಾದ ಚಿಕಿತ್ಸೆ ಎರಡನೆಯದು. ಇವೆರಡರಲ್ಲಿ ಯಾವುದು ಬೇಕಾಗುವುದು? ಯಾವ ತಿಳಿವಳಿಕೆಯುಳ್ಳ ರೋಗಿಯಾದರೂ, ಚಿಕಿತ್ಸೆ ಇಲ್ಲದಿರುವಿಕೆಗಿಂತಲೂ ಸಾವಕಾಶವಾದ ಚಿಕಿತ್ಸೆಯನ್ನು ಅಪೇಕ್ಷಿಸುವನೆಂದು ನನ್ನ ನಂಬಿಕೆ. ನಿಧಾನವಾದ ಚಿಕಿತ್ಸೆಗಿಂತ ಉತ್ತಮವಾದ ಉಪಾಯವಿಲ್ಲ.

ಇನ್ನು, ಬಲಹೀನವಾದ ಉದ್ರಿಕ್ತಸ್ಥಿತಿಗೆ ಕಾರಣವಾದ ಸ್ನಾಯುವನ್ನು ಬಲಗೊಳಿಸಲೂ ಬಹುದು. "ಅಶ್ವಿನೀಮುದ್ರೆಯು" ಈ ಬಗ್ಗೆ ಬಹಳ ಸಹಾಯಕವಾಗುವುದು. ಉದ್ರೇಕದಲ್ಲಿ ಈ ಸ್ನಾಯುವು ಸತತವಾದ ದೀರ್ಘಕಾಲದ ಸಂಕೋಚನಕ್ಕೆ ಒಳಪಟ್ಟಿರುತ್ತದೆ. ಆದರಿಂದಾಗಿ ಅದರ (Perineum) ಬಲವು ಕುಗ್ಗುತ್ತದೆ. ಆದರೆ ಈ ಅಭ್ಯಾಸದಲ್ಲಿ ಸ್ನಾಯುವು ಪರ್ಯಾಯವಾಗಿ ಸಂಕೋಚ-ವಿಕಾಸಗಳನ್ನು (ಬಿಗಿಯುತ್ತ ಸಡಿಲಾಗುತ್ತ) ಹೊಂದುವುದು ಆದಕಾರಣ, ಅದರ ಮೊದಲಿನ ಬಲಯುಕ್ತವಾದ ಹದಕ್ಕೆ ಬರುತ್ತದೆ. ಆದುದರಿಂದ ಸರ್ವಾಂಗಾಸನ ಸ್ಥಿತಿಯಲ್ಲಿ, ಆದರೆ ಅದರ ನಿಯಮಿತ ಸಮಯದ ಉತ್ತರಾರ್ಧದಲ್ಲಿ, ಅಶ್ವಿನೀಮುದ್ರೆಯನ್ನು ನಿತ್ಯವೂ ಅಭ್ಯಾಸ ಮಾಡಿದರೆ, ಬಹಳ ಅನುಕೂಲವಾಗುವುದು.

ಈ ರೀತಿಯ ಅವ್ಯವಸ್ಥೆಗಳಲ್ಲಿ ಅನೇಕವುಗಳ ಸಾರಭೂತವಾಗಿ ಈ ಎರಡು ಅಭ್ಯಾಸಗಳಿಂದ ಸಂಪಡಿಸಲ್ಪಟ್ಟವೆಯೆಂದು ಸ್ವಾಮೀ ಕುವಲಯಾನಂದರು ಘಂಟಾಘೋಷವಾಗಿ ಹೇಳಿರುವರು ಅನೇಕ ವೇಳೆ ಇವುಗಳ ಜೊತೆಗೆ ಬೇರೆ ಅಭ್ಯಾಸಗಳನ್ನೂ ಮಾಡುವುದುತ್ತಮ. ಇದರಿಂದಾಗಿ ಈ ಎರಡು ಅಭ್ಯಾಸಗಳ ಯೋಗ್ಯತೆ ಕಡಿಮೆಯೆಂದಲ್ಲ. ಏಕೆಂದರೆ, ಈ ಇತರ ಅಭ್ಯಾಸಗಳು ಹೆಚ್ಚಿನವು, ಕನಿಷ್ಠ ಪಕ್ಷದಲ್ಲಿ ರೋಗಿಯ ಸಾಮಾನ್ಯ ಆರೋಗ್ಯಕ್ಕೆ ಈ ಎರಡು ಅಭ್ಯಾಸಗಳು ಅನುಕೂಲವಾಗುವಂತೆ ಮಾಡುವುದಕ್ಕೆಂದೇ ಇವೆ. ನಿಜವಾದ ಉಪಶಮನ ಮುಖ್ಯವಾಗಿ ಈ ಸರ್ವಾಂಗಾಸನ ಮತ್ತು ಅಶ್ವಿನೀಮುದ್ರೆಗಳಿಂದಲೇ ದೊರೆಯುವುದು.

ಆದರೆ ಒಂದು ಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕಾದ ಅಂಶವೆಂದರೆ, ರಕ್ತಸಂಚಯದ ಚಿಕಿತ್ಸೆಗೆ ಒಳಪಟ್ಟ ರಕ್ತ ಕಟ್ಟಿದ ಅಂಗಕ್ಕೆ ಕೇವಲ ವಿಶ್ರಾಂತಿ ಅತ್ಯವಸರ. ಆದಕಾರಣ, ಚಿಕಿತ್ಸಾ ಸಮಯದಲ್ಲಿ ರೋಗಪೀಡಿತನು ಯಾವ ವಿಧವಾದ ಲೈಂಗಿಕ ಚಟುವಟಿಕೆಯನ್ನೂ ಪ್ರಯತ್ನಿಸಬಾರದು. ರೋಗಿಯು ಯೋಗವು ಆಧ್ಯಾತ್ಮಿಕ ಸಂಸ್ಕೃತಿಯ ಪದ್ಧತಿಯೆಂದು ನಂಬುವುದಾದರೆ, ಯೌಗಿಕ ಉಪಶಮನೋಪಾಯಗಳನ್ನು ಕೈಕೊಂಡಲ್ಲಿ, ಹೆಚ್ಚಾಗಿ ಲೈಂಗಿಕ ಆವೇಗಗಳಿಂದ ಮುಕ್ತನಾಗುವುದರಿಂದ ಲಾಭವನ್ನು ಪಡೆಯುವನು.

ಗ್ರಂಥಋಣ:

"ಯೋಗಮೀಮಾಂಸಾ"

ಶ್ರೀ ಸ್ವಾಮೀ ಕುವಲಯಾನಂದರು.

ತಪ್ಪು ತಿಳಿವಳಿಕೆ

(ಸಣ್ಣ ಕತೆ) *

ಪ್ರೊ. ಎಸ್. ಎಲ್. ಹಳ್ಳಿಕ್ಕನವರ ಎಂ. ಎಸ್‌ಸಿ. ಒಕ್ಕಲುತನದ ಕಾಲೇಜು, ಧಾರವಾಡ

▼

ಪ್ರೇಮ ಹೂವಿನಗೊನೆಯೂ ಅಹುದು; ಕತ್ತಿಯ ಮೊನೆಯೂ ಅಹುದು!
ವ್ಯಕ್ತಿಯ ಸ್ವಭಾವಾನುಸಾರ ಅದು ಬೇರೆ ಬೇರೆ ರೂಪವನ್ನು ಪಡೆಯುತ್ತದೆ.
ರೆನಾಡನ ಸ್ವಭಾವಕ್ಕೆ, ಅವನ ಪ್ರೇಮ ಕತ್ತಿಯ ಮೊನೆಯಾಯಿತು.

▼

ನಾನೀಗ ಬರೆಯುತ್ತಿರುವ ಸಂಗತಿಯನ್ನು ಒಂದು ವಿಶಿಷ್ಟ ವ್ಯಕ್ತಿಯು ಓದಿದರೆ, ನನ್ನ ಮನಸ್ಸಿನ ಉದ್ದೇಶವು ಸಫಲವಾಗುವುದೆಂದು, ಸಂಪೂರ್ಣ ನಂಬುಗೆಯಿದೆ ನನಗೆ.

೧೯೪೫ ನೆಯ ವರುಷದಲ್ಲಿ, ಜರ್ಮನಿಯಲ್ಲಿದ್ದ ಫ್ರೆಂಚ್ ಸೈನಿಕ-ಸೆರೆಯಾಳುಗಳು ಯಾವ ಗಾಡಿಯಿಂದ ಹಿಂತಿರುಗುತ್ತಿದ್ದರೋ ಆ ಗಾಡಿಯಲ್ಲಿ ಈ ಸಂಗತಿಯು ಘಟಿಸಿತು. ಐದು ವರ್ಷಗಳ ದೀರ್ಘ ಕಾಲಾವಧಿಯ ಬಳಿಕ, ಆ ಸೆರೆಯಾಳುಗಳು ತಮ್ಮ ಮಾತೃದೇಶಕ್ಕೆ, ತಮ್ಮ ತಮ್ಮ ಊರುಗಳಿಗೆ, ತಮ್ಮ ತಮ್ಮ ಕುಟುಂಬಗಳೆಡೆಗೆ ಹೋಗುವವರಿದ್ದರು. ಈ ಉತ್ಸಾಹಭಾವದಲ್ಲಿಯೇ ಅವರು, ಐದು ವರ್ಷಗಳಲ್ಲಿ ತಾವು ಅನುಭವಿಸಿದ ಕಷ್ಟ-ನಷ್ಟಗಳೆಲ್ಲವನ್ನೂ ಮರೆತು ಬಿಟ್ಟಿದ್ದರು.

ಆ ಕೈದಿಗಳಲ್ಲಿ ಪ್ರತಿಯೊಬ್ಬನ ಮನಸ್ಸಿನಲ್ಲಿಯೂ ಒಬ್ಬ ಸ್ತ್ರೀಯ ಪ್ರತಿಬಿಂಬ, ಆವಳ ಬಗ್ಗೆ ನಡೆದ ವಿಚಾರಗಳು—ಇವೇ ಒಡೆದುಕಾಣುವಂತಿದ್ದುವು. ಪ್ರತಿಯೋಬ್ಬನೂ ತನ್ನ ಪತ್ನಿಯ ಬಗೆಗೋ ಪ್ರೇಯಸಿಯ ಸಲುವಾಗಿಯೋ ವಿಚಾರಮಾಡುವುದರಲ್ಲಿ ಮಗ್ನನಾಗಿದ್ದನು:— ತನ್ನ ಹೆಣ್ಣು ಮೊದಲಿನಂತೆಯೇ ತನ್ನನ್ನು ಪ್ರೇಮಿಸುತ್ತಿರಬಹುದಲ್ಲವೆ? ಕಳೆದ ಐದು ವರ್ಷಗಳ ಕಠಿಣ ಕಾಲ-ವನ್ನು ಹೇಗೆ ಕಳೆದಿರಬಹುದು? ಮೊದಲಿನಂತೆಯೇ ನನ್ನಿಂದ ಆವಳೊಡನೆ ಪ್ರಣಯಜೀವನವನ್ನು ನಡೆಯಿಸಲು ಸಾಧ್ಯವಾಗ-ಬಹುದೆ?—ಎಂಬ ಪ್ರಶ್ನೆಗಳು ಪ್ರತಿಯೊಬ್ಬನ ಮನಸ್ಸಿನಲ್ಲಿಯೂ ಎದ್ದು ನಿಲ್ಲುತ್ತಿದ್ದುವು.

* ಮೂಲ ಇಂಗ್ಲಿಷ್ ಕತೆಯು ‹ಗ್ರೈರ್ ಸಮುಜ› ಎಂಬ ಹೆಸರಿನಿಂದ ಮರಾಟಿಗೆ ಅನುವಾದಿತವಾಗಿದೆ. ಅದರ ಭಾಷಾಂತರವಿದು.

ಎಸ್. ಎಲ್. ಹ.

ಅದೇ ಗಾಡಿಯ ಒಂದು ಮೂಲೆಯಲ್ಲಿ, ಹೊಳೆಯುವ ಕಣ್ಣು-ಗಳುಳ್ಳ ಸೈನಿಕನೊಬ್ಬನು ಕುಳಿತುಕೊಂಡಿದ್ದನು. **ರೆನಾಡ್ ಲೀ ಮಾರಿ** ಎಂದು ಅವನ ಹೆಸರು. ಶಾರ್ಡವಿಲ್ ಎಂಬುದು ಆತನ ಊರು. ರಾತ್ರಿಯ ಶಾಂತವಾತಾವರಣದಲ್ಲಿ, ಅವರ ಪ್ರವಾಸ ನಡೆದ ವೇಳೆಯಲ್ಲಿ ಅವನು ತನ್ನ ಬದಿಯಲ್ಲಿ ಕುಳಿತವನನ್ನು ಕೇಳಿದ:

"ಸಾಟರ್ನಿನ್ ನಿನ್ನ ಲಗ್ನವಾಗಿದೆಯೇ?"

"ಓಹೋ! ಆಗಿದೆ. ಯುದ್ಧಕ್ಕಿಂತ ಮೊದಲು ಎರಡು ವರ್ಷ-ಗಳ ಹಿಂದೆಯೇ ನನ್ನ ಲಗ್ನವಾಗಿದೆ. ನನ್ನ ಹೆಂಡತಿಯ ಹೆಸರು **ಮಾರ್ಥಾ**. ನಿನಗೆ ಅವಳನ್ನು ನೋಡುವುದಿದೆಯೇನು"

ಯುದ್ಧದಲ್ಲಾದ ಗಾಯವು ಸಾಟರ್ನಿನನ ಮುಖದ ತುಂಬ ತುಂಬಿ ಬಿಟ್ಟಿದ್ದಿತು. ಅವನು ತನ್ನ ಜೇಬಿನಿಂದ, ಜೀರ್ಣವಾದ ತೊಗಲಿನ ಪಾಕೀಟೊಂದನ್ನು ತೆಗೆದು, ಅದರೊಳಗಿರಿಸಿದ ಮಾಸಿದ ಹಳೆಯ ಫೋಟೋವೊಂದನ್ನು ರೇನಾಡನಿಗೆ ತೋರಿಸಿದ.

"ಭಲೆ! ನಿನ್ನ ಹೆಂಡತಿ ತುಂಬ ಚೆಲುವೆಯಾಗಿದ್ದಾಳೆ. ಆದರೆ ನೀನೀಗ ಮರಳಿ ಮನೆಗೆ ಹೊರಟಿದ್ದೀಯೆ. ಈಗ ನಿನ್ನ ಮನಸ್ಸಿಗೆ ವಿಶೇಷವೇನಾದರೂ ಎನಿಸುತ್ತಿಲ್ಲವೆ?"

"ವಿಶೇಷ! ಅದೇಕೆ? ನನ್ನ ಮನೆಗೆ ನಾನು ಹೊರಟಿದ್ದೇನೆ. ವಿಶೇಷವೇನು ಎನಿಸಬೇಕು?"

"ಇನ್ನೇನೂ ಇಲ್ಲ. ನಿನ್ನ ಹೆಂಡತಿ ಚೆಲುವೆದೂಗಿದ್ದಾಳೆ. ಅವಳು ಈ ವರೆಗೂ ಒಬ್ಬೊಂಟಿಗಳಾಗಿಯೆ ಇದ್ದಾಳೆ. ಅಲ್ಲದೆ ಅವಳ ಪರಿಸರದಲ್ಲಿ ಅದೆಷ್ಟೋ ಜನರು...." ಮಾತಾಡುತ್ತಿರುವಂತೆಯೇ ಅವನ ಮಾತನ್ನು ನಿಲ್ಲಿಸಿ ಸಾಟರ್ನಿನ್ ನುಡಿದ:

"ನಿನ್ನ ಮಾತನ್ನು ಕೇಳುವಾಗ ನನಗೆ ನಗೆ ಬಂದುಬಿಡುತ್ತದೆ. ಅವಳ ಮನಸ್ಸಿನಲ್ಲಿ ಬೇರೆ ಯಾವ ಪುರುಷನ ಬಗೆಗೂ ವಿಚಾರ-ವುಂಟಾಗುವುದು ಶಕ್ಯವಿಲ್ಲ. ನಾವಿಬ್ಬರೂ ತುಂಬ ಸುಖಿಗಳಾಗಿದ್ದೆವು. ಕಳೆದ ಐದು ವರ್ಷಗಳ ಅವಧಿಯಲ್ಲಿ ಅವಳು ನನಗೆ ಬರೆದ ಪತ್ರ-ಗಳನ್ನು ನೀನು ನೋಡಿದೆಯಾದರೆ.. ..... "

"ಪತ್ರ ! ಅವುಗಳ ಮೇಲೆ ಯಾವುದನ್ನೂ ಊಹಿಸಲಿಕ್ಕೆ ಬರು-ವುದಿಲ್ಲ. ನನಗೇನೋ ವಿಚಿತ್ರಯೋಚನೆ ಉಂಟಾಗತೊಡಗಿದೆ."

"ನಿನಗೆ ನಿನ್ನ ಹೆಂಡತಿಯ ವಿಷಯದಲ್ಲಿ ಭರವಸೆ ಇಲ್ಲವೇ ?

"ಹಾಗೇನೋ ಇದೆಯೆನ್ನು. ಮಿಕ್ಕವರಿಗಿಂತಲೂ ಹೆಚ್ಚಿನ ಭರವಸೆಯಿದೆ. ನಮ್ಮ ಲಗ್ನವಾಗಿ ಆರು ವರ್ಷಗಳಾಗಿದ್ದರೂ, ನಮ್ಮಲ್ಲಿ ಒಮ್ಮೆ ಕೂಡ ಜಗಳವಾಗಿಲ್ಲ !"

"ಎಂದ ಮೇಲೆ ನಿನ್ನ ವಿಚಿತ್ರಯೋಚನೆಗೆ ಕಾರಣವೇನು ?

"ನನಗೆನಿಸುವದು: ಇದು ಪ್ರತಿಯೊಬ್ಬನ ಭಾವನೆಯ ಆಟ-ವಾಗಿರಬಹುದು. ನನ್ನ ದೈವ ಚೆನ್ನಾಗಿದೆಯೆಂಬುದರಲ್ಲಿ ನನ್ನ ವಿಶ್ವಾಸವೇ ಕೂಡದಂತಾಗಿದೆ. ಯಾಕೆಂದರೆ ನನ್ನ ಹೆಂಡತಿ ಹೆಲೆನ್, ನನ್ನ ದೃಷ್ಟಿಯಿಂದ ತುಂಬ ಸುಂದರಿಯು; ಸುಶಿಕ್ಷಿತಳು; ಬುದ್ಧಿ-ವಂತಳು. ಒಂದು ಸಾದಾ ಅರಿವೆಯ ತುಂಡು ಕೂಡ, ಅವಳ ಕೈಯ ಸ್ಪರ್ಶದಿಂದ ವಿವಿಧರೀತಿಯ ಕಲಾಕೃತಿಯಾಗುತ್ತದೆ. ಅವಳ ಇರುವಿಕೆಯಿಂದ ಬಡ ಗುಡಿಸಿಲು ಕೂಡ ಅರಮನೆಯಾಗುತ್ತದೆ. ನಾನು ಯುದ್ಧದಲ್ಲಿರುವಾಗ, ಎಷ್ಟೋ ಜನರ ಕೂಡ ಅವಳ ಪರಿಚಯ ವಾಗಿರಬಹುದು. ಅಲ್ಲದೆ ಆ ಪರಿಚಿತ ಪುರುಷರಲ್ಲಿ ಯಾವನೊಬ್ಬನು, ರೂಪ ಹಾಗೂ ಗುಣದಿಂದ ನನಗಿಂತ ಚೆನ್ನಾಗಿ ಇರಲೂ ಬಹುದು. ನನ್ನ ಹೆಲೆನಳು ಸುಸ್ವರೂಪಿಯಾಗಿರುವುದರಿಂದ, ಪುರುಷರ ಲಕ್ಷ್ಯವು ಅವಳೆಡೆಗೆ ಹೋಗುವುದು ಸ್ವಾಭಾವಿಕವೇ !"

"ಅದರಿಂದ ನಿನ್ನದೇನು ಕೇಡಾಗುವುದು ? ನಿನ್ನ ಮೇಲೆ ಅವಳ ಪ್ರೇಮವಿದೆ; ಅವಳು ನಿಜವಾಗಿಯೂ ನಿನ್ನನ್ನು ಪ್ರೀತಿಸು-ತ್ತಾಳೆ. "

"ಆದರೆ ಐದು ವರ್ಷಗಳನ್ನು ಒಬ್ಬೊಂಟಿಗಳಾಗಿಯೇ ಕಳೆಯುವುದೆಂದರೆ ಅದೇನು ಸಾಮಾನ್ಯವಾದ ಮಾತೇ ? ಇದಲ್ಲದೆ ಶಾರ್ಪವಿಲ್ ಹಳ್ಳಿ ಅವಳ ಊರು ಅಲ್ಲ; ಅದು ನನ್ನ ಊರು. ಆ ಊರಲ್ಲಿ ಅವಳ ಆಪ್ತೇಷ್ಟರೂ ಯಾರೂ ಇಲ್ಲ. ಆದುದರಿಂದ ಅವಳು ಮೋಹದಲ್ಲಿ ಬೀಳುವುದೇನೂ ಅಸ್ವಾಭಾವಿಕವಲ್ಲ ! "

"ನೀನು ಎಲ್ಲಿಯೋ ತಪ್ಪುತ್ತೀ ಎಂದು ನನಗೆನಿಸುತ್ತದೆ" ಸಾರ್ಟರ್ನಿನ್ ಮಾತನ್ನು ಮುಂದುವರಿಸಿದ: "ಒಂದು ವೇಳೆ ಹಾಗೆ ಆಗಿದೆ ಎಂದು ತಿಳಿ. ಆದರೆ ಅದೆಲ್ಲವನ್ನೂ ಅವಳು ಮರೆತು ಇರಲೂ ಬಹುದು. ಎಂದ ಮೇಲೆ ನೀನೇಕೆ ಇಷ್ಟು ಕೊರಗಬೇಕು ? ನನಗೇನಾದರೂ ನನ್ನ ಮಾರ್ಥಾಳ ಬಗ್ಗೆ ಯಾರಾದರೂ ಹುಚ್ಚಾಬಟ್ಟೆ ಹೇಳಿದ್ದಾದರೆ, 'ಮಾರ್ಥಾ ನನ್ನ ಹೆಂಡತಿಯಾಗಿದ್ದಾಳೆ. ಯುದ್ಧ ನಡೆದಾಗ ಅವಳು ಒಬ್ಬಳೇ ಇದ್ದಳು. ಆದರೆ ಯುದ್ಧವೀಗ ನಿಂತಿದೆ. ನನ್ನ ಮುಂದೆ ಹಿಂದಿನ ರಗಳೆಯನ್ನು ಏನೂ ಹೇಳಬೇಡಿರಿ' ಎಂದು ಖಂಡಿತ ಹೇಳಿಬಿಡುತ್ತೇನೆ.''

"ಸರಿ !.... ಆದರೆ ನಾನು ನಿನ್ನ ಮತದವನಲ್ಲ ! ನಾನು ಅಂಥದೇನಾದರೂ ಒಂದು ಕ್ಷುಲ್ಲಕ ಸಂಗತಿ ದೊರೆಕಿದರೂ...."

"ದೊರೆಕಿದರೂ.... ದೊರೆಕಿದರೆ ಏನು ಮಾಡುವೆ ? ಅವಳ ಜೀವ ತೆಗೆದುಕೊಳ್ಳುವೆಯಾ ? "

"ಇಲ್ಲ; ನಾನು ಅಂಥದೇನೂ ಮಾಡುವುದಿಲ್ಲ. ನಾನೇ ಅಲ್ಲಿಂದ ಹೊರಟುಬಿಡುವೆನು. ಎಲ್ಲಾದರೂ ಬೇರೆಯ ಕಡೆಗೆ ಹೋಗಿ ನನ್ನ ಮಿಕ್ಕ ಆಯುಷ್ಯವನ್ನು ಕಳೆಯುವೆನು. ನನ್ನ ಮನೆ, ಮಾರು, ಧನ, ದೌಲತ್ತು ಎಲ್ಲವನ್ನೂ ಅವಳಿಗೆ ಕೊಡುವೆನು. ನನಗೆ ಅವುಗಳಾವುದ-ರದೂ ಅವಶ್ಯಕತೆ ಎನಿಸದು. ನಾನು ವ್ಯಾಪಾರದಲ್ಲಿ ತೊಡಗಿ, ಹೊಸ ಜೀವನವನ್ನು ಪ್ರಾರಂಭಿಸುವೆನು. ನನ್ನೀ ವಿಚಾರಸರಣಿಯು ಮೂರ್ಖತನದ್ದಾಗಿರಬಹುದು. ಆದರೆ ನನ್ನ ಸ್ವಭಾವವೇ ಹಾಗಿದೆ; ನಾನೇನು ಮಾಡಲಿ ! "

ಗಾಡಿಯು ಕರ್ಕಶವಾದ ಧ್ವನಿಯಲ್ಲಿ ಕೂಗಿತು. ಬಳಿಕ ಕೆಲ-ವೇಳೆಯನಂತರ ಸೈನಿಕರ ಡಬ್ಬಿಯಲ್ಲಿ ಶಾಂತತೆ ಹರಡಿ ನಿಂತಿತು.

x x x x

'ಆಗಸ್ಟ ೨೦ ನೆಯ ತಾರೀಖಿಗೆ ರೆನಾಡ್ ತನ್ನ ಊರಿಗೆ ತಿರುಗಿ ಬರುವವನಿದ್ದಾನೆ' ಎಂಬ ಸುದ್ದಿಯು ಶಾರ್ಪವಿಲ್ಲಿನ ಮೇಯ-ರನಿಗೇ ಮೊದಲು ತಿಳಿಯಿತು. ಅವನು ಬರುವುದಕ್ಕಿಂತ ಮೊದಲೇ ಆ ಸುದ್ದಿಯನ್ನು ರೆನಾಡನ ಹೆಂಡತಿಗೆ ತಿಳಿಸಬೇಕೆಂದು ಮೇಯರನು ವಿಚಾರ ಮಾಡಿದ. ಅದರಂತೆಯೆ ಅವಳ ಕಡೆಗೆ ಹೋದ. ಆಗ ರೆನಾಡನ ಹೆಂಡತಿಯು ತೋಟದಲ್ಲಿ ಕೆಲಸಮಾಡುತ್ತಿದ್ದಳು. ಮೇಯರ್ ಅವಳಿಗೆ ಆನಂದದಿಂದ ಹೇಳಿದ:

"ನಮಸ್ಕಾರ; ನಿಮಗೊಂದು ಆನಂದದ ಸುದ್ದಿಯನ್ನು ಈಗ ಹೇಳುವವನಿದ್ದೇನೆ. ರೆನಾಡ್ ಶೀಘ್ರದಲ್ಲಿಯೇ ಬರುವವನಿದ್ದಾನೆ. ಅವನಿಗೆ ಸುಸ್ವಾಗತವನ್ನೀಯಬೇಕೆಂದು ನಿಮಗೆನಿಸುತ್ತಿರಬಹುದು. ಅವನು ಯುದ್ಧದ ಮೇಲಿದ್ದಾಗ ಒಂದೇಸವನೆ ನೀವು ಅವನ ಯೋಚನೆ ಮಾಡುತ್ತಿದ್ದಿರಿ. ಮನಸ್ಸುಕೊಟ್ಟು ಊಟಕೂಡ ಎಂದೂ ಮಾಡುತ್ತಿರಲಿಲ್ಲ, ಆದರೆ ಇಂಥ ಆನಂದದ ಪ್ರಸಂಗದಲ್ಲಿ........ !"

ಹೆಲೆನ್ ನುಡಿದಳು :

"ನೀವೆನ್ನುವುದು ನಿಜ. ಮನಃಪೂರ್ವಕವಾಗಿ ನಾನವರಿಗೆ ಸ್ವಾಗತ ನೀಡುವೆನು. ಅವರು ಯಾವಾಗ ಬರುವವರಿದ್ದಾರೆ? ೨೦ನೆಯ ತಾರೀಖಿಗೆ ಅಲ್ಲವೇ ? ಅವರಿಲ್ಲಿ ಎಷ್ಟೊತ್ತಿಗೆ ಬರಬಹುದೆಂದು ನಿಮಗೆನಿಸುತ್ತದೆ ? "

"ಅವನು ಸುಮಾರು ಮಧ್ಯಾಹ್ನದ ಸಮಯ ಇಲ್ಲಿಗೆ ಬರಬಹು-ದೆಂದು ನನಗೆನಿಸುತ್ತದೆ "

"ಅಂದರೆ.... ಮಧ್ಯಾಹ್ನದ ಊಟಕ್ಕೆ ಇಲ್ಲಿಗೆ ಬರುವರೆನ್ನಿರಿ, ಈ ಆನಂದದ ಸುದ್ದಿಯನ್ನು ತಾವು ಮೊದಲೇ ತಿಳಿಸಿದ್ದಕ್ಕಾಗಿ ನಾನು ತುಂಬಾ ಕೃತಜ್ಞಳಾಗಿದ್ದೇನೆ. " ಎಂದು ಹೆಲೆನ್ ನುಡಿದಳು.

x x x x

ಅಂದು ೨೦ ನೆಯ ತಾರೀಖು. ಹೆಲೆನ್ ನಸುಕಿನಲ್ಲಿ ಬೇಗನೆ ಎದ್ದಳು. ನಿಜವಾಗಿ ಹೇಳಬೇಕೆಂದರೆ, ಇಡಿ ರಾತ್ರಿಯೆಲ್ಲ ಅವಳಿಗೆ ನಿದ್ರೆ ಹತ್ತಿರಲಿಲ್ಲ. ಹಿಂದಿನ ದೀನವೇ ಅವಳು ಮನೆಯನ್ನು ಗುಡಿಸಿ ಸ್ವಚ್ಛ ಮಾಡಿದ್ದಳು. ಕಿಟಕಿಗೆ ಒಗೆದ ಪರದೆಗಳನ್ನು ಕಟ್ಟಿದಳು. ಪತಿಯು ಯುದ್ಧಕ್ಕೆ ಹೋದಂದಿನಿಂದ ಅವಳು ಎಂದೂ ಹಾಕಿಕೊಳ್ಳದ ರೇಶಿಮೆಯ ಫ್ರಾಕನ್ನು ಹಾಕಿಕೊಳ್ಳಬೇಕೆಂದು ನಿಶ್ಚಯಿಸಿದಳು. ಆದರೆ ಅದನ್ನು ಹಾಕಿಕೊಂಡು ನೋಡಲು, ಅದು ಬಹಳ ಸಡಿಲಾಗಿದೆ ಎಂದು ಅವಳಿಗೆ ಎನಿಸಿತು. ಕಳೆದ ಐದು ವರ್ಷಗಳಲ್ಲಿ ಅವಳು ತುಂಬ ಸೊರಗಿಹೋಗಿದ್ದಳು.

ರೆನಾಡನಿಗೆ ಯಾವ ಅಡಿಗೆಯು ಸೇರುತ್ತದೆಂಬದನ್ನು ಮೊದಲು ಅವಳು ವಿಚಾರಿಸಿದಳು. ಯುದ್ಧದ ಮೂಲಕ ಬೇಕಾದ ಸಾಮಾನು ಸಿಕ್ಕುತ್ತಿರಲಿಲ್ಲ; ಸಿಕ್ಕರೂ ಬೆಲೆ ಹೆಚ್ಚು. ಕಡೆಗೊಮ್ಮೆ ಅವಳು ಬೇಯಿಸಿದ ತತ್ತಿ ಹಾಗೂ ತತ್ತಿಯವೇ ಉಳಿದ ಪದಾರ್ಥಗಳನ್ನು ಮಾಡುವುದಾಗಿ ನಿಶ್ಚಯಿಸಿದಳು. ಬ್ರೆಡ್ಡಿನೊಡನೆ ಮುರಬ್ಬಾ ಸೇರಿಸಿ ತಿನ್ನುವುದೆಂದರೆ ರೆನಾಡನಿಗೆ ತುಂಬ ಪ್ರೀತಿ. ಅವಳ ಊರಲ್ಲಿ ಮುರಬ್ಬಾ ಸಿಕ್ಕುವಂತಿರಲಿಲ್ಲ. ನೆರೆಯ ಊರಿನವನೊಬ್ಬನು ಮುರಬ್ಬಾವನ್ನು ಕಳ್ಳಪೇಟೆಯಲ್ಲಿ ಮಾರುತ್ತಿದ್ದನೆಂಬುದು ಅವಳಿಗೆ ಗೊತ್ತಿತ್ತು.

" ಬೆಳಗಿನ ಎಂಟುಗಂಟೆಗೆ ಹೊರಟನೆಂದರೆ ಒಂಬತ್ತು ಗಂಟೆಗೆ ನಾನು ತಿರುಗಿ ಬರುವೆ. ಅದ್ದರಿಂದ ಹೊರಡುವ ಮೊದಲು ಅಡಿಗೆಯ ಎಲ್ಲ ಸಿದ್ಧತೆಯನ್ನು ಮಾಡಿಡುವೆ. ಎಂದರೆ ತಿರುಗಿ ಬಂದನಂತರ ನನಗೆ ಹೆಚ್ಚು ವೇಳೆಯನ್ನು ಅದರಲ್ಲಿ ತೊಡಕಿಸಲು ಕಾರಣ ಬೀಳದು" ಎಂದು ಮನಸ್ಸಿನಲ್ಲಿ ನಿಶ್ಚಯಿಸಿದಳು.

ರೆನಾಡ್ ಬರುವವನಿದ್ದಾನೆಂದು ಆ ದಿನ ಅವಳು ತುಂಬ ಉಲ್ಲಸಿತಳಾಗಿದ್ದಳು. ವಾತಾವರಣವೆಲ್ಲವೂ ತನ್ನಂತೆಯೇ ಆನಂದಿತವಾಗಿದೆ—ಎಂದು ಅವಳಿಗೆ ಎನಿಸುತ್ತಿತ್ತು. ಹಾಡಿನ ತೆರೆಯೊಂದನ್ನು ಹವೆಯಲ್ಲಿ ತೇಲಿಸಿ ಬಿಟ್ಟು, ಟೇಬಲಿನ ಮೇಲೆ ಬಟ್ಟೆಯನ್ನು ಹಾಸಿದಳು. ಅನಂತರ ಆ ಟೇಬಲ್ಲಿನ ಮೇಲೆ ಬಣ್ಣ ಬಣ್ಣದ ಬಟ್ಟೆಗಳನ್ನು ಹೊಂದಿಸಿ, ಆದರ ಮಧ್ಯದಲ್ಲೊಂದು ಪುಷ್ಪಗುಚ್ಛಗಳಿಂದೊಡಗೂಡಿದ ಪಾತ್ರೆಯನ್ನಿಟ್ಟಳು. ರೆನಾಡನಿಗೆ ಹೂಗಳು ಬಹಳ ಸೇರುತ್ತಿದ್ದುವು. ಅಂತೆಯೇ ಹೆಲೆನಳು ನಿತ್ಯವೂ ಅವನ್ನು ತಂದು ವ್ಯವಸ್ಥಿತವಾಗಿ ಹೊಂದಿಸಿಡುತ್ತಿದ್ದಳು.

ಮನೆಯಿಂದ ಹೊರಬೀಳುವ ಮೊದಲು ಹೆಲೆನ್. ಮತ್ತೊಮ್ಮೆ ಮನೆಯ ಕಡೆಗೆ ದೃಷ್ಟಿಗಳನ್ನು ಚೆಲ್ಲಿದಳು. ಎಲ್ಲ ವಸ್ತುಗಳು ವ್ಯವಸ್ಥಿತವಾಗಿದ್ದುವು. ಇಷ್ಟು ವರ್ಷಗಳ ನಂತರವೂ ತನ್ನ ಮನೆ ಹಾಗೂ ತನ್ನ ಹೆಂಡತಿ ಮೊದಲಿನಷ್ಟೇ ಆಕರ್ಷಕರಾಗಿದ್ದಾರೆಂಬುದನ್ನು ನೋಡಿ ರೆನಾಡನಿಗೆ ನಿಜವಾಗಿಯೂ ಆನಂದವಾಗುವುದೆಂದುಕೊಂಡಳು. ತಾನು ಮಾತ್ರ ಸ್ವಲ್ಪ ಸೊರಗಿದ್ದಳು; ಆದರೂ ಅವಳ ಸೌಂದರ್ಯದಲ್ಲಿ ಸ್ವಲ್ಪ ಸಹ ವ್ಯತ್ಯಾಸವಾಗಿರಲಿಲ್ಲ. ಇವೆಲ್ಲ ಸಂಗತಿಗಳ ಬಗ್ಗೆ ಅವಳಿಗೆ ಮನಸ್ಸಿನಲ್ಲಿ ತುಂಬ ಆನಂದವಾಗುತ್ತಿತ್ತು. ಬಳಿಕ ಅವಳು ಮನೆಯಿಂದ ಹೊರಟಳು.

ರೆನಾಡನ ಈ ಚಿಕ್ಕಮನೆಯು, ಹಳ್ಳಿಯ ಹೊರವಲಯಕ್ಕೆ ಹೊಂದಿಕೊಂಡಿತ್ತು. ಅವಳು ಹೋಗಿ ಅರ್ಧಗಂಟೆ ಅಥವಾ ಮುಕ್ಕಾಲು ಗಂಟೆಯಾಗಿರಬಹುದು. ಪಕ್ಕದ ಮನೆಯ ಗೃಹಸ್ಥನೊಬ್ಬನು, ಯಾವನೋ ಒಬ್ಬ ಸೈನಿಕನು ಆ ಮನೆಯ ಮುಂದೆ ನಿಂತದ್ದನ್ನು ಕಂಡನು. ಸೈನಿಕನ ಕಣ್ಣಲ್ಲಿ ಆನಂದ ನೆಲಸಿತ್ತು. ಅವನು ಸಾಕಷ್ಟು ಉತ್ಸುಕನೂ ಆಗಿದ್ದನು. ತನ್ನ ಮನೆಯನ್ನು ತನ್ನ ಕಣ್ಣಿನಿಂದ ತಿರುಗಿ ನೋಡಿದೆ—ಎಂಬುದರಲ್ಲಿ ಅವನಿಗೆ ವಿಶ್ವಾಸವೆನಿಸುತ್ತಿರಲಿಲ್ಲ. ಆ ಸಿದ್ಧತೆಯಲ್ಲಿಯೇ ಸ್ವಲ್ಪ ಹೊತ್ತು ನಿಂತಿರಲು, ಅಸ್ಪಷ್ಟವಾದ ಕೋಮಲಭಾವದ ಒಂದು ಶಬ್ದ ಅವನ ಬಾಯಿಂದ ಹೊರಬಿತ್ತು: "ಹೆಲೆನ್" ಎಂದು. ಆದರೆ ಅವನ ಕೂಗಿಗೆ ಯಾರಿಂದಲೂ ಉತ್ತರ ಬರಲಿಲ್ಲ.

"ಹೆಲೆನ್ !" "ಹೆಲೆನ್ !! "

ಆದರೂ ಅವನಿಗೆ ಉತ್ತರ ಸಿಕ್ಕಲಿಲ್ಲ. ಅವನಿಗೆ ಮನಸ್ಸಿನಲ್ಲಿ ಆ ಶಾಂತತೆಯ ಬಗೆಗೆ ಭೀತಿಯೆನಿಸತೊಡಗಿತು. ಅವನು ಮನೆಯ ಬಾಗಿಲ ಹತ್ತಿರಕ್ಕೆ ಬಂದ. ಬಾಗಿಲ ಕಿಂಡಿಯೊಳಗಿಂದ ಆ ಸಿಂಗರಿಸಿದ ಟೇಬಲನ್ನು ನೋಡಿದ. ಟೇಬಲಿನ ಹತ್ತಿರ ಎರಡೇ ಎರಡು ಖುರ್ಚಿಗಳಿದ್ದುವು. ಆತನ ಮನಸಿನಲ್ಲಿ ವಿಚಿತ್ರ ವಿಚಾರವೊಂದು ಮಿಂಚಿತು. ಅತಿಶಯ ದುಃಖವೆನಿಸಿತು. ಅವನು ಆ ಗೋಡೆಗೆ ಹೊಂದಿಕೊಂಡು ಹಾಗೆಯೇ ನಿಂತು:

" ಹಾಗಾದರೆ ಇವಳು ಒಬ್ಬಳೇ ಇಲ್ಲ!" ಎಂದು ಅವನು ವ್ಯಾಕುಲಸ್ವರದಲ್ಲಿ ನುಡಿದ. ಅದಾದನಂತರ ಸ್ವಲ್ಪ ವೇಳೆಯಲ್ಲಿ ಹೆಲೆನ್ ತಿರುಗಿ ಬರಲು, ನೆರೆಮನೆಯ ಗೃಹಸ್ಥ ಹೇಳಿದ : "ನಾನು ತಮ್ಮ ರೆನಾಡನನ್ನು ಕಂಡೆ; ಬಾಗಿಲ ಹತ್ತಿರ ಬಂದು ನೋಡಿ, ಅವನು ಓಡುತ್ತ ತಿರುಗಿ ಹೋದ. ನಾನು ಅವನನ್ನು ಕೂಗಿದೆ; ಆದರೂ ಅವನು ಬರಲಿಲ್ಲ.

" ಅವರು ಓಡಿಹೋದರೆ? ಯಾವ ಕಡೆಗೆ? "

" ಊರ ಹೊರಗೆ! "

ಹೆಲೆನ್ ಓಡುತ್ತಲೇ ಮೇಯರನ ಮನೆಗೆ ಹೋಗಿ ಎಲ್ಲ ಸುದ್ದಿಯನ್ನೂ ಅವನಿಗೆ ಹೇಳಿದಳು.

ಮೇಯರನಿಗೆ ಯಾವುದೂ ಗೊತ್ತಿರಲಿಲ್ಲ. ಹೆಲೆನ್ ಮಾತನಾಡಿದಳು:

" ನನಗೆ ಬಹಳೇ ಅಂಜಿಕೆಯೆನಿಸುತ್ತಿದೆ. ಇಷ್ಟು ವರ್ಷಗಳ ಸಹವಾಸದ ನಂತರವೂ ಅವರ ಸ್ವಭಾವವು ಅಷ್ಟೊಂದು ಭಾವನಾಶೀಲವೂ ಹೊಟ್ಟೆಕಿಚ್ಚಿನದೂ ಆಗಿ ಉಳಿದಿದೆ. ಅವರು ಟೇಬಲಿನ ಹತ್ತಿರ ಎರಡು ಖುರ್ಚಿಗಳನ್ನು ನೋಡಿರಬಹುದು; ಆದರೆ ಅವು ನಮ್ಮಿಬ್ಬರ ಸಲುವಾಗಿಯೇ ಇದ್ದುವೆಂಬುದು ಅವರ ಲಕ್ಷ್ಯಕ್ಕೆ ಬಂದಿರಲಿಕ್ಕಿಲ್ಲ. ಏನಿದ್ದರೂ ನಾನವರನ್ನು ಹುಡುಕಿ ತರಲೇ ಬೇಕು! ಒಂದು ವೇಳೆ ಅವರು ತಿರುಗಿ ಬರಲಿಕ್ಕಿಲ್ಲ. ಆದರೂ ಅವರ ವಿಷಯವಾದ ಪ್ರೇಮವು ಮೊದಲಿನಂತೆಯೇ ಇದೆ; ನಾನವರನ್ನು ಹುಡುಕಲೇ ಬೇಕು! "

ಮೇಯರನು ಅದೆಲ್ಲವನ್ನೂ ಕೇಳಿ, ತನ್ನ ನೌಕರರನ್ನು ರೆನಾಡನನ್ನು ಹುಡುಕಲು ಕಳುಹಿದನು; ಆದರೆ ರೆನಾಡ ಅದೆಲ್ಲಿ ಗುಪ್ತವಾಗಿದ್ದನೊ! ರೆನಾಡನ ಹಾದಿ ಕಾಯುತ್ತ, ಟೇಬಲಿನ ಮೇಲಿಟ್ಟ ಬಾಡುತ್ತಿದ್ದ ಹೂಗಳ ಕಡೆಗೆ ನೋಡುತ್ತ, ಹೆಲೆನ್ ಇಡಿ ರಾತ್ರಿ ಕುಳಿತಿದ್ದಳು.

ಒಂದು ದಿವಸ ಉರುಳಿತು, ಒಂದು ವಾರ ಉರುಳಿತು. ಹಾಗೆಯೇ ಒಂದು ತಿಂಗಳೂ ಕಳೆಯಿತು.—

ಈ ಕರುಣಾಪೂರ್ಣ ಕಥೆಯು ಘಟಿಸಿ ಇಂದಿಗೆ ನಾಲ್ಕು ವರ್ಷಗಳಾದುವು. ತನ್ನ ಪತಿಯ ಬಗ್ಗೆ ಅವಳಿಗೆ ಯಾವ ಸುದ್ದಿಯೂ ತಿಳಿದಿಲ್ಲ.

ಆದರೆ ನನ್ನ ಈ ಕತೆಯನ್ನು ಓದಿಯಾದರೂ ರೆನಾಡ್ ತಿರುಗಿ ತನ್ನ ಮನೆಗೆ ಬರಬಹುದು. ಮತ್ತು ಅವನ ತಪ್ಪು ಕಲ್ಪನೆಯು ದೂರವಾಗಬಹುದು—ಎಂಬ ಆಶೆಯಿಂದಲೇ ನಾನು ಈ ಕತೆಯನ್ನು ಬರೆದಿದ್ದೇನೆ.

ಮಕ್ಕಳ ಸದೃಢತೆಗಾಗಿ "ಬಗನ ಬಾಲಾಮೃತ"

ಹಲ್ಲು ಬರುವಾಗ "ಎಸ್ಟನ್ಸ್ ಗ್ರಾಇಪ್" ಹೀಲರ್

TRADE MARK
ವರ್ಮ ಆಯಿಲ

ಜಂತು ಆದರೆ "ವರ್ಮ್ ಆಯಿಲ್"

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ಔಷಧಗಳು.

The National Pharmacies & Pharmaceuticals Ltd., Dharwar

ಶ್ರಾವಣ

ಶ್ರೀ. ಗೋವರ್ಧನಾಚಾರ್ಯ ಗಲಗಲಿ

ಎಂ. ಎ., ಬಿ, ಟಿ. ಧಾರವಾಡ

೧

ವಾತವೇಗಾಹತಿಗೆ ಕೇಸರಂಗಳ ಕೆದರಿ,
ಕತ್ತ ಕೊಂಕಿಸಿ ಚಲಿಪ ಚಪಲಾಶ್ವಗಳ ತೆರದಿ,
ಕರಿ ಬಿಳಿಯ ಮೋಡಗಳ ಹೂಡಿರ್ದ ರಥವೇರಿ
ಎತ್ತಲುಂ ಬೀಸುತಿದೆ ಶೀತಲ ಶ್ರಾವಣಸಮೀರಣವು!

೨

ಘನನೀಲ ನಿಬಿಡವನ ಕೃತ್ತಿವಾಸಸನಾಗಿ,
ಉತ್ಫುಲ್ಲ ಕುಸುಮೇಂದುಮೌಳಿಮಂಡಿತನಾಗಿ,
ಊರ್ಧ್ವಕಂಧರನಾಗಿ ತಪವಿರ್ಪ ಹರನಂತೆ
ಕಣ್ಮನವ ಸೆಳೆಯುತಿದೆ ಪರ್ವತಂಗಳ ರಾಜಿ!

೩

ದಕ್ಷಯಜ್ಞದ ದಗ್ಧ ದಾಕ್ಷಾಯಿಣಿಯ ತೆರದಿ,
ಬೇಸಗೆಯ ಕಡುವಿಸಿಲ ತಾಪಕುರೆ ತಾ ಬಳಲಿ,
ಹೊಸ ಹುಟ್ಟು ತಳೆದೆದ್ದು, ಏರುಜವ್ವನೆಯಾಗಿ
ಪತಿಪಾದಕಿಳೆ ಸಾರುತಿದೆ ಪಾರ್ವತಿಯ ತೆರದಿ!

೪

ಹಚ್ಚ ಹಸುರಿನ ಪೈರು-ಸೀರೆಕುಪ್ಪಸ ತೊಟ್ಟು,
ಸ್ವಚ್ಛಪಲ್ಲವ ವಜ್ರದೋಲೆಗಳ ಕಿವಿಗಿಟ್ಟು,
ಕಲಕಂಠ ಖಗವಿರುತ ವಲಯ ಮಧುರ ಸ್ವನದಿ,
ವಿವಿಧ ವಿಕಸಿತ ಕುಸುಮ ಪಾತ್ರ ಪಾಣಿಯೊಳಿರಿಸಿ—

೫

ಮೌನದಿಂ ಪತಿಸೇವೆಗಣಿಯಾಗಿ ನಿಂತಿಹಳು
ಧೌತನಿರ್ಮಲಗಾತ್ರೆ, ನಮಿತ ಲಜ್ಜಾವಕ್ತ್ರೆ.
"ತೊರೆ ತಪವ ಪತಿರಾಯ, ತೆರೆ ನೇತ್ರ, ನೋಡೆನ್ನ!
ಸಕಲ ಜೀವಾಧಾರವಾದ ಗರ್ಭವ ಹರಸು!

೬

ನಿನ್ನಣುಗ ಕೃಷಿಜನರು ಕಾಯಕಷ್ಟದಿ ನೂಕಿ,
ಸ್ವೇದ ಸಲಿಲವ ಸುರಿಸಿ, ಸಾಕಿ ಸಲದ ಪೈರು
ನಿನ್ನ ಕೃಪೆಯಿಲ್ಲದಿರೆ ನಶಿಸುವುದು ನಿಶ್ಚಯವು.
ನಸುಗೋಪ ತೋರದಿರು ನೊಸಲಗಣ್ತೆರೆಯದಿರು"

೭

ಶ್ರಾವಣದ ಕಾಡಿನೊಳು ಮಲೆನಾಡ ಬೀಡಿನೊಳು,
ದೂರದೂರದ ವರೆಗೆ ಕಾಂತಾರ-ಕೇದಾರ—
ನೀಲ ಹರಿತಶ್ರೀಯ ಸಂಗಮವನೀಕ್ಷಿಪಗೆ
ಧರಣಿತಲದೀ ಬಯಕೆ ಕೇಳಿಪುದು ಬಗೆಗಿವಿಗೆ.

◀ ಪುರುಷಾರ್ಥದ ಉಪಾಸಕ ▶

ಶ್ರೀ. ಕಿರ್ಲೋಸ್ಕರ ಲಕ್ಷ್ಮಣರಾಯರು

(ವ್ಯಕ್ತಿ ಪರಿಚಯ)

ಶ್ರೀ. ಅಮುಲಕ ಮಣಿಪಳ (ದ. ಕ.)

[ಶ್ರಮಬಿಂದುಗಳಿಂದ ಶೋಭಿಸುವ ಹಣೆಯಿಂದ ಹಲವು ವರ್ಷಗಳ ತನಕ ಪುರುಷಾರ್ಥದ ಅಧಿಷ್ಠಾತ್ರಿಯಾದ ಶ್ರೀದೇವಿಯ ಸಫಲ ಉಪಾಸನೆಯನ್ನು ಮಾಡಿದಂಥ ಶ್ರೀ ಲಕ್ಷ್ಮಣರಾವ್ ಕಿರ್ಲೋಸ್ಕರರು ಇಂದು ನವಯುವಕ ಪರಂಪರೆಗೊಂದು ಪ್ರಕಾಶಸ್ತಂಭದಂತಿದ್ದಾರೆ. "ಜಯಂತಿ" ಯ ವಾಚಕರಿಗಾಗಿ ಇಲ್ಲಿ ಅವರ ತಪೋಜ್ವಲ ವ್ಯಕ್ತಿತ್ವದ ಸಂಕ್ಷಿಪ್ತ ಪರಿಚಯವು ಕೊಡಲ್ಪಟ್ಟಿದೆ. —ಲೇ.]

ಸನ್ ೧೮೮೭ ಅಥವಾ ೮೮ರ ಮಾತು. ಬೆಳಗಾಂವಿಯಿಂದೊಬ್ಬ ೧೮ ವರ್ಷದ ತರುಣನು, ಯಾವುದಾದರೂ ನೌಕರಿಯನ್ನು ದೊರಕಿಸಿಕೊಳ್ಳುವುದಕ್ಕಾಗಿ ಬೊಂಬಾಯಿಗೆ ಬಂದನು. ಈ ತರುಣನು ನೋಡಲು ಸ್ವಲ್ಪ ಸಹ ಆಕರ್ಷಕನಿರಲಿಲ್ಲ. ಸಾಧಾರಣ ಆಕೃತಿ, ದಪ್ಪವಾದ ಧೋತರ, ಮತ್ತು ಗ್ರಾಮ್ಯರೀತಿಯ ಸಾಧಾರಣ ಅಂಗಿ. ಈ ತರುಣನಿಗೆ ಬಾಲ್ಯದಿಂದಲೇ ಯಂತ್ರಗಳಲ್ಲಿ ಅಭಿರುಚಿಯಿತ್ತು. ಆದುದರಿಂದವನು, ಬೊಂಬಾಯಿಯಲ್ಲಿ ತನ್ನ ಮನೋವಾಂಛಿತ ವಿಷಯದಲ್ಲಿ ಅಭಿವೃದ್ಧಿಹೊಂದಲು ಅವಕಾಶವಿರುವ ಉದ್ಯೋಗ ಮಾಡಲೆಳಸುತ್ತಿದ್ದನು. ಯಾವುದೇ ಉಚ್ಚ ಉದ್ಯೋಗದ ವಿಚಾರವನ್ನೇ ಮಾಡುತ್ತಿರಲಿಲ್ಲ. ಕಾರಣ ಅವನ ಶೈಕ್ಷಣಿಕ ಯೋಗ್ಯತೆಯು ಬಹಳ ಕಡಿಮೆಯಾಗಿತ್ತು. ಮರಾಠಿಯ ಓದು-ಬರೆಹದೊಂದಿಗೆ ಸಾಮಾನ್ಯ ಇಂಗ್ಲೀಷ್ ಜ್ಞಾನವಿತ್ತು. ಹಲವು ದಿನಗಳ ತನಕ ಆ ತರುಣನು ಅಲ್ಲಿಯಿಲ್ಲಿ ಉದ್ಯೋಗದ ಅನ್ವೇಷಣೆ ಮಾಡಿದನು; ಕೊನೆಗೆ ತನ್ನ ಬಯಕೆಯ ವಿಷಯದ ಜ್ಞಾನವೃದ್ಧಿಗಾಗಿ ಕೃತಸಂಕಲ್ಪನಾಗಿ, ಅವನು ಬೊಂಬಾಯಿಯ ಪ್ರಸಿದ್ಧ ಯಾಂತ್ರಿಕ ಶಿಕ್ಷಣಾಲಯವಾದ "ವಿಕ್ಟೋರಿಯಾ ಜ್ಯುಬಿಲಿ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್" ನ ತತ್ಕಾಲೀನ ಪ್ರಧಾನ ಪ್ರಾಧ್ಯಾಪಕ ಶ್ರೀ. ಫಿಥಿಯನರ ಹತ್ತಿರ ಹೋದನು. ಫಿಥಿಯನರು ಅವನ ಶ್ರದ್ಧೆ ಮತ್ತು ಸಂಕಲ್ಪಶಕ್ತಿಯಿಂದ ಬಹಳ ಪ್ರಭಾವಿತರಾದರು. ಅವರು ಅವನನ್ನು "ಡ್ರಾಫ್ಟ್ಸಮೆನ್‌ಶಿಪ್" ವರ್ಗದಲ್ಲಿ ಸೇರಿಸಿಕೊಂಡರು. ಕೆಲವೇ ದಿನಗಳಲ್ಲಿ ಈ ಉತ್ಸಾಹೀ ತರುಣನು, ಇನ್‌ಸ್ಟಿಟ್ಯೂಟಿನ ಪುಸ್ತಕಾಲಯಕ್ಕೆ ಬರುವ ಯಂತ್ರವಿಜ್ಞಾನ ಸಂಬಂಧದ ಪತ್ರಿಕೆ ಹಾಗೂ ಪುಸ್ತಕಗಳ ಮೂಲಕ, ಬೆಳಗ್ಗೆ ತಾನು ಸ್ವತಃ ವಿದ್ಯಾರ್ಥಿಯಂತೆ ತರಗತಿಯಲ್ಲಿ ಕಲಿಯುತ್ತಿದ್ದರೆ, ಮಧ್ಯಾಹ್ನ ಶಿಕ್ಷಕನಾಗಿ ಇತರರಿಗೆ ಕಲಿಸುವಷ್ಟು ತನ್ನ ತಿಳಿವಳಿಕೆಯನ್ನು ಬೆಳಸಿಕೊಂಡನು. ಶ್ರೀ. ಫಿಥಿಯನರು ತರುಣನ ಈ ಕರ್ತೃತ್ವಶಾಲಿತ್ವದ ಪ್ರಖರ ವ್ಯಕ್ತಿತ್ವದಿಂದ ಅತ್ಯಂತ ಪ್ರಸನ್ನರಿದ್ದರು.

ಜ್ಞಾನದ ಭಂಡಾರವು ಬಂಧಿತವಾಗಿರುವುದಿಲ್ಲವೆಂದು ಹೇಳಲ್ಪಡುತ್ತದೆ. ಹಾಗಿರುವಾಗ, ಯಾರು ತನ್ನ ಜ್ಞಾನ ಮತ್ತು ಪರಿಶ್ರಮದ ಆಧಾರದಿಂದ ಜೀವನಯಾತ್ರೆಯಲ್ಲಿ ಮುಂದುವರಿಯುವ ಅಭಿಲಾಷೆಯಿಟ್ಟಿರುತ್ತಾನೋ ಅವನು, ತನ್ನ ಜ್ಞಾನವನ್ನು ತನ್ನಲ್ಲೇ ಹೇಗೆ ಸೀಮಿತಗೊಳಿಸಿಯಾನು? ಈ ವಿದ್ಯಾರ್ಥಿ-ಅಧ್ಯಾಪಕನು ತನ್ನ ವಿಷಯ ಕಲಿಸುವಾಗ, ಅಮೇರಿಕಾ ಹಾಗೂ ಅನ್ಯ ಪಾಶ್ಚಾತ್ಯ ದೇಶಗಳಲ್ಲಿ ವಿಕಸಿತವಾದ, ನಿತ್ಯನವೀನವಾದ, ಯಂತ್ರವಿಜ್ಞಾನ ಪದ್ಧತಿಯ ತಿಳಿವಳಿಕೆಯನ್ನು ಸಹ ತನ್ನ ವಿದ್ಯಾರ್ಥಿಗಳಿಗೆ ಮಾಡಿಸಲು ತೊಡಗಿದನು. ವಿದ್ಯಾರ್ಥಿಗಳು ಈ ಹೊಸ ತಿಳಿವಳಿಕೆಯಲ್ಲಿ ಬಹಳ ಆಸಕ್ತರಾಗಿರುತ್ತಿದ್ದರು! ಆದರೆ ಗುಲಾಮ್ ದೇಶದ ನಾಗರಿಕರಿಗೆ ತಮ್ಮ ಜ್ಞಾನಪಿಪಾಸೆಯನ್ನು ಶಾಂತಪಡಿಸಿಕೊಳ್ಳುವ ಅಧಿಕಾರ ಸಹ ಇಲ್ಲವೆಂದು ಅವನಿಗೇನು ಗೊತ್ತು?

ಫಿಥಿಯನ್ ಸಾಹೇಬರಾದರೋ ಗುಣಗ್ರಾಹಿಯಾಗಿದ್ದರು; ಆದರೆ ಅವರು ಸಹ ರೂಢಿಯಾಗಿದ್ದ ಸಾಮ್ರಾಜ್ಯವಾದದ ಶಾಸನಚಕ್ರದ ಒಂದು ಅಂಗವಾಗಿದ್ದರು. ಅವರಿಗೆ ಈ ತರುಣನ ಉಚ್ಚಾಭಿಲಾಷೆಯು ಒಳ್ಳೆಯದೆನಿಸಲಿಲ್ಲ, ಅವರು ಅವನನ್ನು ಒಂದು ದಿನ ಕರೆಯಿಸಿ ಹೇಳಿದರು:— "ನೋಡು, ನೀನು ತರಗತಿಯಲ್ಲಿ ನಿರ್ಧಾರಿತ ಪಾಠ್ಯಕ್ರಮಕ್ಕಿಂತ ಹೆಚ್ಚು ಹೇಳಬೇಡ. ಹಾಂ, ನೀನು ಸ್ವತಃ ಬೇಕಾದಷ್ಟು ಓದು! ನಾನು ನಿನಗೆ ಎಲ್ಲಾತರದ ಅನುಕೂಲತೆಯನ್ನೊದಗಿಸಲು ಸಿದ್ಧನಿದ್ದೇನೆ."

ಈ ಗ್ರಾಮ್ಯತರುಣನಿಗೆ ರಾಜನೈತಿಕ ಸಮಸ್ಯೆಗಳ ಪರಿಚಯವಾದರೋ ಆ ಸಮಯ ಇದ್ದಂತಿರಲಿಲ್ಲ; ಆದರೆ ಪ್ರಿನ್ಸಿಪಾಲರ ಈ ಆದೇಶವು ಅವನಿಗೆ ಒಳ್ಳೆಯದೆನಿಸಲಿಲ್ಲ. ನಿಧಾನವಾಗಿ ಅವನು ಒಂದು ದಿನ ನೌಕರಿಗೆ ರಾಜೀನಾಮೆಯಿತ್ತನು. ಚಾಫ್‌ಕಟರ್, ಅಂಗಿ ಗುಬ್ಬಿ, ಡಬ್ಬಿಗಳಂತಹ ಸಣ್ಣ ಸಣ್ಣ ವಸ್ತುಗಳನ್ನು ಸ್ವತಃ ತಯಾರಿಸಲು ತೊಡಗಿದನು. ಆ ಸಮಯ ಈ ವಸ್ತುಗಳ ಮಾರುವಿಕೆಗಾಗಿ ಬಹಳ ಪರಿಶ್ರಮ ಪಡಬೇಕಾಗುತ್ತಿತ್ತು. ಆದುದರಿಂದ ಅವನೊಂದು ಸೈಕಲನ್ನು ಕೊಂಡುಕೊಂಡನು. ಆ ಕಾಲದಲ್ಲಿ ಸೈಕಲಿಟ್ಟುಕೊಳ್ಳುವುದು ಸಹ ಒಂದು ಮಹತ್ತ್ವದ ವಿಷಯವಾಗಿತ್ತು. ನಿಶ್ಚಯವಾಗಿಯೂ ಈ ಸೈಕಲಿನ ಖರೀದಿ ಮತ್ತು ಸಣ್ಣವ್ಯಯದ ವ್ಯವಸಾಯದ ಆರಂಭದಲ್ಲಿಯೇ ಅವನ ಒಟ್ಟು ಸಂಚಿತನಿಧಿಯು ನಿಶ್ಶೇಷವಾಯಿತು. ದೈವದುರ್ಯೋಗದಿಂದ ಅದೇ ಸಮಯ—ಸನ್ ೧೮೯೬ ರ ಸುಮಾರಿಗೆ—

ಅವನಿಗೆ 'ಪ್ಲೇಗ್' ಸಹ ಆಯಿತು. ಈ ಸ್ವಾಸ್ಥ್ಯಹಾನಿಯೊಂದಿಗೆ ಅವನ ಈ ಸಣ್ಣ ಉದ್ಯೋಗವು ಸಂಪೂರ್ಣ ಸಮಾಪ್ತವಾದಂತಾಯಿತು.

ಆದರೆ ಅದೇ ಆತ್ಮನಿಷ್ಠ, ಕರ್ತವ್ಯಶೀಲ, ಹಾಗೂ ಆಕರ್ಷಣ ಹೀನ ತರುಣನೇ ಇಂದು ಹಲವು ಉದ್ಯೋಗಗಳ ಸಂಸ್ಥಾಪಕನೆಂದು ಹೇಳಿದರೆ ತಮಗೆ ಆಶ್ಚರ್ಯವಾಗಬಹುದು. ಆ ಉದ್ಯೋಗಗಳಲ್ಲಿ ನೇಗಿಲಿನ ನಿರ್ಮಾಣದಿಂದ ಹಿಡಿದು, ಪತ್ರಿಕೆಯ ಪ್ರಕಾಶನದಂತಹ ಎಲ್ಲಾ ಕಾರ್ಯಗಳೂ ಇವೆ. ಅವರು ಔದ್ಯೋಗಿಕ ಮಹರ್ಷಿಯಂತೆ ಪ್ರತಿಯೊಂದು ಮಹಾರಾಷ್ಟ್ರೀಯ ಪರಿವಾರದಲ್ಲಿ ಆದರಿಸಲ್ಪಡುತ್ತಾರೆ. "ಪರೋಪಕಾರಾಯ ಸತಾಂ ವಿಭೂತಯಃ" (ಸಜ್ಜನರ ವಿಭೂತಿಯು ಪರೋಪಕಾರಕ್ಕಾಗಿದೆ) ಎನ್ನುವ ಮಾತು ಯಾರಿಗೆ ಪೂರ್ಣ ಅನ್ವಯಿಸುತ್ತದೋ ಅಂಥ ಮಾನಾರ್ಹ ಉದ್ಯೋಗಪತಿಗಳಲ್ಲಿ ತನ್ನ ಪ್ರತ್ಯೇಕ ಏಕತೆಯನ್ನಿರಿಸಿಕೊಂಡಿದ್ದಾರೆ.

ಈ ೮೪ ವರ್ಷದ ಔದ್ಯೋಗಿಕ ಮಹರ್ಷಿಯ ಹೆಸರು ಶ್ರೀ. ಲಕ್ಷ್ಮಣ ಕಾಶೀನಾಥ ಕಿರ್ಲೋಸ್ಕರ ಅಥವಾ ಶ್ರೀ. ಲಕ್ಷ್ಮಣರಾವ್ ಕಿರ್ಲೋಸ್ಕರ.

ಕಳೆದ ವರ್ಷ ಅಗೋಸ್ತಿನಲ್ಲಿ "ಮರಾಠಾ ಚೆಂಬರ್ ಆಫ್ ಕಾಮರ್ಸ್ ಎಂಡ್ ಇಂಡಸ್ಟ್ರೀಸ್" ನವರು ಇವರ ಗೌರವಾರ್ಥವಾಗಿ ಏರ್ಪಡಿಸಿದ ಒಂದು ಅಭಿನಂದನಾ ಸಮಾರಂಭದಲ್ಲಿ ಇವರಿಗೆ "ಕಿರ್ಲೋಸ್ಕರ್" ಕಾರ್ಖಾನೆಯಲ್ಲಿ ತಯಾರಾಗುವ ಒಂದು ರಜತ ಪ್ರತಿಮೆ ಹಾಗೂ ಅವರದ್ದೇ ಒಂದು ರಜತ ಪ್ರತಿಮೆಯನ್ನು ಕಾಣಿಕೆಯಾಗಿ ಅರ್ಪಿಸಿದರು. ಈ ಅಭಿನಂದನ ಸಮಾರಂಭದ ಅಧ್ಯಕ್ಷಸ್ಥಾನದಿಂದ ಭಾಷಣ ಮಾಡುತ್ತ ಸರ್. ಎಮ್. ವಿಶ್ವೇಶ್ವರಯ್ಯನವರು, ಲಕ್ಷ್ಮಣರಾಯರ ಅವಿಶ್ರಾಂತ ಪರಿಶ್ರಮ, ಅಸೀಮಕಾರ್ಯ ಶಕ್ತಿ, ಮತ್ತು ಅಜೇಯಬುದ್ಧಿ ಕೌಶಲವನ್ನು ಭಾರೀ ಪ್ರಶಂಸೆ ಮಾಡುತಾ ಹೀಗೆ ಹೇಳಿದರು:—"ಯಾವುದೇ ಕೆಲಸವನ್ನು ಇತರರ ಮೇಲೆ ಬಿಡದೆ ತಾನು ಸ್ವತಃ ಮಾಡುವುದೇ ಲಕ್ಷ್ಮಣರಾಯರ ಸರ್ವಾಧಿಕ ವಿಶೇಷತೆಯಾಗಿದೆ." ಈ ಹೇಳಿಕೆಯ ಯಥಾರ್ಥತೆಯನ್ನು ಪ್ರಮಾಣಿಸಲು ಕೆಳಗಿನ ಉದಾಹರಣೆಯೇ ಸಾಕು. ಅವರ ಪುತ್ರ-ಪೌತ್ರರ ಸಂಬಂಧಿಗಳ ಹಾಗೂ ಕಾರಖಾನೆಗಳಲ್ಲಿ ಕೆಲಸ ಮಾಡುವ ಕುಶಲ ಕರ್ಮಚಾರಿಗಳ ಒಂದು ದೊಡ್ಡ ಸೇನೆಯೇ ಇರುವ ಈ ಕಾಲದಲ್ಲಿಯೂ, ಅವರ ಈ ವಾರ್ಧಿಕ್ಯದಲ್ಲಿಯೂ ಯಾವುದೇ ಯಂತ್ರವು ನಿಂತಾದರೆ, "ಪಪ್ಪಾ" (ಎಲ್ಲರೂ ಅವರನ್ನು ಸ್ನೇಹ-ಶ್ರದ್ಧೆಯಿಂದ ಹಾಗೆ ಕರೆಯುತ್ತಾರೆ) ಸ್ವತಃ ಚೀಣಿ-ಸುತ್ತಿ ತೆಗೆದುಕೊಂಡು ದುರಸಿ ಪಡಿಸಲು ಹೋಗುತ್ತಾರೆ.

"ಕಿರ್ಲೋಸ್ಕರ್ ವಾಡಿ" (ಇದೇ ಅವರ ಔದ್ಯೋಗಿಕ ನಗರದ ಹೆಸರು) ಇಂದು ಮಹಾರಾಷ್ಟ್ರದಲ್ಲಿ "ತಾತಾಪುರ" ಕ್ಕಿಂತ ಕಡಿಮೆ ಮಹತ್ತ್ವದ್ದಾಗಿಲ್ಲ. 'ಕಿರ್ಲೋಸ್ಕರ' ವಾಡಿಯ ನಾಮಕರಣ ಹಾಗೂ ಅಲ್ಲಿಯ ಕಾರ್ಖಾನೆ ನಿರ್ಮಾಣವಾದುದರ ಕುರಿತು ಸಹ ಒಂದು ಮನೋರಂಜಕ ಕಥೆಯಿದೆ. ಮೇಲೆ ಹೇಳಿದ ಪ್ಲೇಗಿನಿಂದ ಬಿಡುಗಡೆ ಹೊಂದಿದ ಮೇಲೆ ಲಕ್ಷ್ಮಣರಾಯರಿಗೆ ಬೊಂಬಾಯಿಯ ಜೀವನವು ಒಳ್ಳೆಯದೆನಿಸಲಿಲ್ಲ. ಆದುದರಿಂದವರು ಬೆಳಗಾಂವಿಗೆ ಹೋದರು. ಬೆಳಗಾಂವಿಯಲ್ಲಿ ಅವರು ಸೈಕಲಿನ ಏಜೆನ್ಸಿಯನ್ನು ತೆಗೆದುಕೊಂಡರು ಮತ್ತು ಸೈಕಲ್ ರಿಪೇರಿ ಹಾಗೂ ಸೈಕಲ್ ನಡೆಸಲು ಕಲಿಸುವ ಉದ್ಯೋಗವನ್ನಾರಂಭಿಸಿದರು. ಈ ಉದ್ಯೋಗದ ಕಾರಣದಿಂದ ಅವರಿಗೆ ಬೆಳಗಾಂವಿಯ ಪ್ರಾಯಶಃ ಎಲ್ಲಾ ದೊಡ್ಡ ದೊಡ್ಡ ಇಂಗ್ಲೀಷ್ ಅಧಿಕಾರಿಗಳ, ರಾಜಕುಮಾರರ ಮತ್ತು ಸೇನಾಧಿಕಾರಿಗಳ ಪರಿಚಯವಾಯಿತು. ಅವರ ಸಹಾಯದಿಂದ ಇವರ ಉದ್ಯೋಗ ಸಾಕಷ್ಟು ಬೆಳೆಯಿತು. ಸ್ವಲ್ಪದಿವಸಗಳಲ್ಲಿಯೇ ತಮ್ಮ ಚಿಕ್ಕ ಅಂಗಡಿಗೆ ದೊಡ್ಡ ಕಾರ್ಖಾನೆಯ ರೂಪಕೊಡುವ ಅಗತ್ಯಬಿತ್ತು. ಆದುದರಿಂದವರು ತಮ್ಮ ಕಾರ್ಖಾನೆಯನ್ನು ನಗರದಿಂದ ಮೂರು ಮೈಲು ದೂರದ ಸೈನಿಕ ಸಿಬಿರದ ಹತ್ತಿರಕ್ಕೊಯ್ದರು. ಮೆಲ್ಲಮೆಲ್ಲನೆ ಅವರು ತಮ್ಮ ಕಾರಖಾನೆಯಲ್ಲಿ ವಿದ್ಯುತ್ತಿನ ಬೀಸುವಕಲ್ಲು ಮತ್ತು ಕಬ್ಬಿಣದ ನೇಗಿಲುಗಳನ್ನು ತಯಾರಿಸಲು ತೊಡಗಿದರು.

ಇದೇ ಸಮಯದಲ್ಲಿ ಔಂಧದ ಮಹಾರಾಜರಲ್ಲಿ ಏನೋ ಒಂದು ಸಮಾರಂಭವಿತ್ತು. ಆ ಸಂದರ್ಭದಲ್ಲಿ ಸಭಾಮಂಟಪ ಮಾಡಬೇಕಿತ್ತು. ಅದಕ್ಕೆ ಲಕ್ಷ್ಮಣರಾಯರು ನಿಯೋಜಿಸಲ್ಪಟ್ಟರು. ಈ ಕೆಲಸವನ್ನವರು, ರಾಜಾಸಾಹೇಬರು ಆಶ್ಚರ್ಯಸ್ತಬ್ಧರಾಗುವಷ್ಟು ಶೀಘ್ರ ಮತ್ತು ಸುಂದರವಾಗಿ ರಚಿಸಿದರು. ಪ್ರಸನ್ನರಾಗಿ ಅವರು ಲಕ್ಷ್ಮಣರಾಯರಿಗೆ ತಮ್ಮ ಕಾರ್ಖಾನೆಯನ್ನು ಔಂಧರಾಜ್ಯದ "ಕುಂಡಲ ರೋಡ್" ಎನ್ನುವ ಸ್ಥಳಕ್ಕೆ ತರಲು ಅನುಮತಿಯಿತ್ತರು. ಬೆಳಗಾಂವಿಯ ನಗರ ಸಭೆಯು ಇದೇ ವರ್ಷ ಸಿಬಿರದ ಹತ್ತಿರದ ಇವರ ಕಾರ್ಖಾನೆಯನ್ನು ಅಲ್ಲಿಂದ ತೆಗೆಯಲು ಅಪ್ಪಣೆಯನ್ನು ಕೊಟ್ಟಿದ್ದಿತು. ಈ ಸಂದರ್ಭ ಒಳ್ಳೆಯದಿತ್ತು. ಲಕ್ಷ್ಮಣರಾಯರು ರಾಜಾಸಾಹೇಬರ ಸೂಚನೆಯನ್ನೊಪ್ಪಿದರು. ರಾಜಾಸಾಹೇಬರು ಕಾರ್ಖಾನೆ ರಚಿಸಲು ಮತ್ತು ವಸತಿಯನ್ನೇರ್ಪಡಿಸಲು ೧೦ ಸಾವಿರ ರೂಪಾಯಿಗಳನ್ನು ಸಹ ಕೊಟ್ಟರು. ನಗರಸಭೆಯವರು ಸಹ ಸಂಭಾವನೆಯ ರೂಪದಲ್ಲಿ ೪ ಸಾವಿರ ರೂಪಾಯಿಗಳನ್ನಿತ್ತರು. ಸರಿ ಇನ್ನೇನು? ಲಕ್ಷ್ಮಣರಾಯರು ಹೊಸ ನಗರನಿರ್ಮಾಣದಲ್ಲಿ ತೊಡಗಿದರು. ಕೆಲವೇ ದಿನಗಳಲ್ಲಿ ಲಕ್ಷ್ಮಣರಾಯರ ಉಚ್ಚಾಭಿಲಾಷೆಯು ಸಾಕಾರ ಪ್ರತಿಮೆಯಾದ ಈ ಔದ್ಯೋಗಿಕ ನಗರವು ಸಿದ್ಧವಾಯಿತು. ಇಂದು ಕಿರ್ಲೋಸ್ಕರ ವಾಡಿಯು ಒಂದು ಆದರ್ಶ ಹಾಗೂ ಸ್ವಯಂಸಂಪೂರ್ಣ ನಗರವಾಗಿದೆ; ಮತ್ತು ಆವಶ್ಯಕತೆಯ ಎಲ್ಲಾ ವಸ್ತುಗಳನ್ನು ತಾನೇ ತಯಾರಿಸುತ್ತದೆ.

ಸನ್ ೧೯೨೦ ರಲ್ಲಿ "ಕಿರ್ಲೋಸ್ಕರ ಬಂಧು" ಎನ್ನುವ ಹೆಸರಿನ ಈ ವೈಯುಕ್ತಿಕ ವ್ಯಾಪಾರೀ ಸಂಸ್ಥೆಯು, ಯೋಗ್ಯ ಕಾರ್ಯನಿರ್ವಾಹಕ್ಕಾಗಿ ಮರ್ಯಾದಿತ (ಲಿಮಿಟೆಡ್) ವಾಯಿತು. ಇಂದು ಕಿರ್ಲೋಸ್ಕರ ಬಂಧುವಿನ ಹಲವು ಉದ್ಯೋಗಗಳಿವೆ—ಕಿರ್ಲೋಸ್ಕರ್ ಬಂಧು ಲಿಮಿಟೆಡ್, ಕಿರ್ಲೋಸರ್‌ವಾಡೀ, ಮೈಸೂರ್ ಕಿರ್ಲೋಸ್ಕರ್ ಲಿಮಿಟೆಡ್, ಕಿರ್ಲೋಸ್ಕರ್ ಇಲೆಕ್ಟ್ರಿಕ್ ಕಂಪೆನಿ ಲಿಮಿಟೆಡ್ ಬೆಂಗಳೂರು, ಹಾಗೆಯೆ ಕಿರ್ಲೋಸ್ಕರ್ ಆಯಿಲ್ ಎಂಜಿನ್ಸ್ ಲಿಮಿಟೆಡ್,

ಖಡ್‌ಕೀ (ಪೂನಾ.) ಇವೆಲ್ಲವಲ್ಲದೆ ಮತ್ತೂ ಹಲವು ಸಣ್ಣ ಪುಟ್ಟ ಉದ್ಯೋಗಗಳಿವೆ.

ಆದರೆ ಔದ್ಯೋಗಿಕ ಮಹರ್ಷಿಯ ಕರ್ತೃತ್ವವು ಕೇವಲ ಲೋಹದ ಅಥವಾ ಮರದ ವಿಷಯಕ್ಕಷ್ಟೇ ಮುಗಿಯಲಿಲ್ಲ. ಮಹಾ-ರಾಷ್ಟ್ರದ ಸರ್ವಾಧಿಕ ವಾಚಕರಿಂದ ಪಠಿಸಲ್ಪಡುವ ಸಮೃದ್ಧ ಮಾಸಿಕ ಪತ್ರಿಕೆಯಾದ 'ಕಿರ್ಲೋಸ್ಕರ' ಹಾಗೂ ಅದರ ಎರಡು ಸಹಕಾರಿಗಳಾದ 'ಸ್ತ್ರೀ' ಮತ್ತು 'ಮನೋಹರ,' ಅವರ ರಾಷ್ಟ್ರ ನಿಷ್ಠಾರ್ತ್ಯವಾದ ವಿದ್ಯಾಪ್ರಿಯತೆಯ ಜ್ವಲಂತ ಉದಾಹರಣೆಯಾಗಿದೆ. 'ಕಿರ್ಲೋಸ್ಕರ್' ಮರಾಠಿಯ ಬಹಳ ಪುರಾತನವಾದ ಮಾಸಪತ್ರಿಕೆಯಾಗಿದೆ.

ತನ್ನ ವ್ಯಕ್ತಿಗತಜೀವನದಲ್ಲಿ ಶ್ರೀ. ಕಿರ್ಲೋಸ್ಕರರು ಬಹಳ ಸ್ನೇಹ ಶೀಲರು, ಸ್ವತಂತ್ರತಾ ಪ್ರೇಯರು. ನಿರಭಿಮಾನಿ, ಹಾಗೂ ಸಮತ್ವಭಾವದ ಪ್ರಬಲಸಮರ್ಥಕರು. ಅವರ ಸಮತ್ವ ಮತ್ತು ಪ್ರೇಮದ ಎಲ್ಲಕ್ಕಿಂತ ದೊಡ್ಡ ಉದಾಹರಣೆಯೆಂದರೆ: ಗಣೇಶ ಚತುರ್ಥಿ ಮತ್ತು ಕಿರ್ಲೋಸ್ಕರವಾಡಿಯ ಸ್ಥಾಪನೆಯ ವಾರ್ಷಿಕೋತ್ಸವದಲ್ಲಿ ತೋಟಿಯಿಂದ ಹಿಡಿದು ತನ್ನ ಮಗ ಮತ್ತು ಅಳಿಯರಾದಿಯಾಗಿ ಎಲ್ಲರನ್ನೂ ಅವರು ಒಂದೇ ತತ್ಪರತೆಯಿಂದ ಸನ್ಮಾನಿಸುವುದು. ಕೇವಲ ಪರ್ವ ಯಾ ವಿಶೇಷಸಂದರ್ಭಗಳಲ್ಲಿ ಮಾತ್ರವೇಕೆ? ವಾಡಿಯ ಪ್ರತಿಯೊಂದು ಪ್ರಾಣಿಯೂ ಅವರಿಗೆ ಪುತ್ರಸಮಾನವಾಗಿದೆ. ಎಲ್ಲ-ರಲ್ಲಿ ಅವರು ಸಮಾನಸ್ನೇಹದ ಛಾಯೆಯನ್ನು ನೋಡಿಯೇ ಸಂತೋಷಹೊಂದುತ್ತಾರೆ. ಸ್ವದೇಶಿಯ ಅನನ್ಯಭಕ್ತರವರು; ಮತ್ತು ಸಾಧ್ಯವಿದ್ದಷ್ಟು ಸರ್ವರಿಗೆ ಸ್ವದೇಶೀ ವಸ್ತುಗಳ ವ್ಯವಹಾರದ ಸಲಹೆಯನ್ನೀಯುತ್ತಾರೆ.

ಲಕ್ಷ್ಮಣರಾಯರು ತನ್ನೊಡನಾಟದಲ್ಲಿರುವ ಪ್ರತಿಯೊಬ್ಬ ತರುಣನೊಂದಿಗೆ ಹೀಗೆ ಹೇಳುತ್ತಾರೆ:—"ಯಾವ ಕೆಲಸ ಮಾಡುತ್ತೀ-ಯಾದರೂ ಪೂರ್ಣನಿಷ್ಠೆಯಿಂದ ಮಾಡು, ಇದೇ ಉನ್ನತ ಜೀವನದ ಮೂಲಮಂತ್ರವಾಗಿದೆ. ಸರಿ! ಆದರೆ ನಿಮ್ಮ ಯಾವುದೇ ಕೆಲಸವು ರಾಷ್ಟ್ರಗೌರವದ ವಿರುದ್ಧವಿರದಂತೆ ಸದಾ ಗಮನಿಸಿರಿ!" ಸ್ವಯಂ ಲಕ್ಷ್ಮಣರಾಯರು ತಮ್ಮ ಈ ಕಥನವನ್ನು ತಮ್ಮ ಜೀವನದ ಮೂಲಮಂತ್ರ-ವಾಗಿಟ್ಟು ಕೊಂಡಿದ್ದಾರೆ.

ವಸ್ತುತಃ ಈ ೮೪ ವರ್ಷದ ವೃದ್ಧನನ್ನು ನೋಡಿದರೆ, ನಮ್ಮೆ-ದುರು ಆದಮ್ಯ ಕಾರ್ಯನಿಷ್ಠೆ, ಪ್ರಬಲ ಇಚ್ಛಾಶಕ್ತಿ, ಅಕ್ಷುಣ್ಣ ದೇಶಭಕ್ತಿಯ ಜ್ವಲಂತ ಗೌರವ ಪ್ರತೀಕವು ನಮ್ಮೆದುರು ನಿಂತತೆ ಪ್ರತ್ಯಕ್ಷ ಅನುಭವವಾಗುವುದು. "ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀ" (ಉದ್ಯೋಗಿಯಾದ ಪುರುಷಸಿಂಹನ ಬಳಿಗೇ ಲಕ್ಷ್ಮೀಯು ಬರುತ್ತಾಳೆ) ಎನ್ನುವ ಮಾತೊಂದು ಸಂಸ್ಕೃತದಲ್ಲಿದೆ. ಶ್ರೀ. ಲಕ್ಷ್ಮಣರಾಯರು ಈ ಮಾತಿನ ಪ್ರತೀಕರಾಗಿದ್ದಾರೆ.

(ನವೆಂಬರ್, ೧೯೫೩ರ "ನವನೀತ" ದಲ್ಲಿ ಪ್ರಕಟವಾದ ಒಂದು ಲೇಖನದ ಅನುವಾದ)

ಕೃಷಿಸಂಪದ

—ಶ್ರೀ. ಶಿಗ್ಗಾಂವಿ ವೀರೇಶ್ವರ

ಎಳಬಿಸಿಲು ಬಳು-ಬಳುಕಿ ಬೆಳೆಯನಪ್ಪುತಲಿತ್ತು
ಅಪ್ಪುಗೆಯ ಸುಖಕೆ ಬೆಳೆ ಪೈರಿಯ ಮರೆತಿತ್ತು
ಸುಳಿಗಾಳಿ ಸ್ಪರ್ಶಿಸಲು
ನಗೆಮುಗುಳು ಬಾಧಿಸಲು
ಬಿಸಿಯುಸಿರ ಬಿಡುತಲಿತ್ತು—
ಅಲ್ಲಿ ಹರುಷರಸವುಕ್ಕುತಿತ್ತು.
ಆ ಹರುಷ ರಸದಲ್ಲಿ ಕೃಷಿವಲನ ಎದೆಯು
ಮುಳುಗೆದ್ದು ಹುಚ್ಚೆದ್ದು ಹಾರಾಡುತಿತ್ತು
ಹಾರಾಡಿ ತೂರಾಡಿ ಇರವ ಮರೆತಿತ್ತು.
ವರ್ಷಾನು ವರ್ಷ
ದುಡಿಮೆಯಲಿ ಹರ್ಷ
ದೊರೆತುದನು ಅನುಭವಿಸದೆ
(ಅನುಭವಿಪುದೆಂತೆಂಬುದನ್ನರಿಯದೆ)
ಬದುಕಿದ್ದ ಅವನೆದೆಗೆ ಆಗಲಿಷ್ಟೆ ಬೆದೆ!
ಆ ಬೆಳೆಯೆ ಅವನಿಳೆಯು
ಬದುಕು ಬಾಳುವೆಯು;
ಅದನುಳಿದ ಹಿರಿದೆನುವು—
ದವಗೆ ತಿರುಮುರುವು.
ಹಗಲಿರಳು ಮಳೆಬಿಸಿಲನೊಂದೆ ಮಾಡಿ
ಇಚ್ಛೆಯನು ಭೂದೇವಿಗೆಡೆಯ ಮಾಡಿ
ನೇಮ ಮಾತ್ರಕೆ ತಾನು ಎಂದು ದುಡಿವವಗೆ
ಏನಿದ್ದರಿಲ್ಲೆಂದರೇನೆಂದ ಹಾಗೆ?
ಅಂತೆ ಅವನಿಗೆ ದೂರ
ಬೆಳೆಯ ಲೆಕ್ಕಾಚಾರ
ಅದು ತಿಳಿದ ಮೇಲಿಲ್ಲ
ಒಳ್ಳೆ ಗ್ರಹಚಾರ!
ಬೆಳೆಯರ್ಧ ದುಡಿಯದಾ ಹೊಲದೊಡೆಯಗೆ
ಮತ್ತೆ ಧರ್ಮಾದಾಯ ಆಯ-ಹೋಯಗಳು
ಇನ್ನು ಉಳಿದದ್ದರಲಿ ಬದುಕು-ಗಿದುಕುಗಳು.
ಉಳಿಯದಿದ್ದರೆ ಸಾಲ
ಹಳೆಯದಕೆ ಬಾಲ
ಕೆಲವೆ ದಿವಸಗಳಲ್ಲಿ
ಜೀವಕ್ಕೆ ಶೂಲ!
ಶ್ರಮೆಯಿಂದಲೆ ಜಗವು ನಡೆದಿರುವುದಂತೆ!
ಶ್ರಮವನ ಸಾವಿಗದೆ ಶೋಭೆಯಂತೆ!!

ದೇವರ ದರ್ಶನ

(ಒಂದು ಜೀವನಾನುಭವ ಚಿತ್ರ)

ಶ್ರೀಮತಿ ಇಂದಿರಾ ಲಕ್ಷ್ಮೀನರಸಿಂಹರಾವ್ ಬಿ. ಎ. (ಆನರ್ಸ್) ಜಬಲ್ಪುರ

▼

ಯಾವ ಸಾಮಾನ್ಯ ಜೀವನದ ಸಾಮಾನ್ಯ ಅನುಭವವನ್ನೂ ಒಂದು ಹದದಿಂದ ಹೇಳಿದರೆ, ಅದು ಸಾಹಿತ್ಯವಾಗುವುದು. ಇಷ್ಟೇ ಅಲ್ಲ; ಕಲ್ಪನೆಯ ಕತೆಗಳಿಗಿಂತಲೂ ವಾಚಕರ ಮನಸ್ಸನ್ನು ಹೆಚ್ಚಾಗಿ ಹಿಡಿದು ನಿಲ್ಲಿಸುವುದು.

●

ಶಿವರಾತ್ರಿಯು ಹತ್ತಿರ ಬರುತ್ತಿತ್ತು. ಇನ್ನೂ ಒಂದು ವಾರ ಅವಕಾಶವಿರುವಾಗಲೇ ಸರಳೆ-ಸದಾಶಿವರಾಯರಿಗೆ ಅಂದು "ದೇವರ-ದರ್ಶನ" ಹೇಗೆ ಮಾಡಿಕೊಂಡು ಬರಬೇಕೆಂಬ ಚಿಂತೆ ಪ್ರಾರಂಭವಾಯಿತು. planning Committee ನಿತ್ಯವೂ ಸೇರಿ, ಅನೇಕ ನಿರ್ಣಯಗಳು ಪಾಸಾದುವು. ದೇವರ ದರ್ಶನಕ್ಕೆ ಇಷ್ಟೊಂದು ಚಿಂತೆ, Plans ಗಳೇಕೆ?—ಎಂದು ಕೇಳುವಿರಾ? ಅದಕ್ಕೆ ಕಾರಣವಿಲ್ಲದೆ ಇಲ್ಲ.

ಜಬಲ್ಪುರದಲ್ಲಿ ಈಶ್ವರನ ಒಳ್ಳೆಯ ದೇವಸ್ಥಾನ ಒಂದೇ ಒಂದು. ಅದು ಗುಪ್ತೇಶ್ವರ. ಊರುಬಿಟ್ಟು ಮೂರು ಮೈಲು ದೂರದಲ್ಲಿದೆ. ಗುಡ್ಡಗಾಡು ಪ್ರದೇಶದ ಮಧ್ಯದಲ್ಲಿ ದೇವಸ್ಥಾನ. ಒಳ್ಳೇ ನಿಸರ್ಗ ರಮಣೀಯ ದೃಶ್ಯ. ಸುತ್ತಲೂ ಹಸುರಾಗಿ ಮೆರೆಯುವ ಮಾವಿನ ಮರಗಳು. ದೇವಸ್ಥಾನದ ಹಿನ್ನೆಲೆಯಲ್ಲಿ ಕಾವಲಾಗಿ ನಿಂತ ಹೊಳೆಯುವ ಕಪ್ಪುಕಲ್ಲಿನ ಗುಡ್ಡಗಳು. ಒಂದು ಚಿಕ್ಕ ಗುಹೆಯಲ್ಲಿ ಸ್ವಯಂಭೂ ಶಂಕರಲಿಂಗವಿದೆ. ಈ ಗುಹೆಗೆ ಚಿಕ್ಕದೊಂದು ಬಾಗಿಲು. ಈ ಚಿಕ್ಕ ಗುಹೆಯ ಸುತ್ತಲೂ ದೊಡ್ಡ ದೇವಸ್ಥಾನನನ್ನು ಕಟ್ಟಿಸಿದ್ದಾರೆ. ವರುಷ-ವರುಷವೂ ಇಲ್ಲಿ ಜಾತ್ರೆ ಸೇರುವುದು. ಸಾವಿರಾರು ಜನರು ಕೂಡುವರು. ಗುಹೆಯ ಪ್ರವೇಶದ್ವಾರವು ತುಂಬ ಚಿಕ್ಕದಾಗಿರುವುದರಿಂದ, ದೇವರ ದರ್ಶನವಾಗುವುದು ತುಂಬ ಕಷ್ಟ. ೧೧ ಗಂಟೆಯ ನಂತರ ದರ್ಶನವಾಗುವುದು ದುರ್ಲಭ. ಆದಕ್ಕಾಗಿಯೇ ಅನೇಕರು ೧೧ಗಂಟೆಯೊಳಗಾಗಿ ದರ್ಶನ ಮಾಡಿಕೊಂಡು ಹೋಗುವರು. ಆದುದರಿಂದಲೇ ಸರಳೆ-ಸದಾಶಿವರಾಯರಿಗೆ "ದೇವರದರ್ಶನ"ದ ಚಿಂತೆ. ಅಲ್ಲಿಯವರೆಗೆ ಟಾಂಗಾ, ರಿಕ್ಷಾ, ಕಾರು, ಯಾವುದೇ ಹೋಗುವಂತಿಲ್ಲ. "ಕಾಲುಕಾರೇ" ಮೂರು ಮೈಲು ಹೋಗಬೇಕು. ಅದಕ್ಕಾಗಿಯೇ ಅವರ Plansಗಳು.

ಬೆಳಗಿನ ಜಾವ ಸ್ನಾನ ಮಾಡಿಕೊಂಡು ಹೊರಡಬೇಕು. ಹೊತ್ತುಮಾಡಿಕೊಂಡು ಹೋದರೆ ದರ್ಶನವಾಗುವುದು ದುರ್ಲಭ. ಅಲ್ಲಿಯ ನೂಕು-ನುಗ್ಗಾಟದಲ್ಲಿ ಹಿಂಸೆಪಡುವುದಕ್ಕಿಂತ ಬೇಗ ಎಂದರೆ ೭ ಗಂಟೆಗೇನೆ ಹೊರಡುವುದೆಂದು ಇಬ್ಬರೂ ನಿರ್ಧರಿಸಿದರು. ಈ ಕಡೆಯ ದೇವಸ್ಥಾನಗಳಲ್ಲಿ— "ಹಣ್ಣು-ಕಾಯಿ" ಮಾಡಿಸುವುದು ಗೊತ್ತಿಲ್ಲ. ಅಲ್ಲದೆ ಆ ಅಲ್ಪಾವಧಿಯಲ್ಲಿ ಮಾಡಿಸಿಕೊಂಡು ಬರಲು ಅವಕಾಶವೂ ಇರುವುದಿಲ್ಲ. ಅಲ್ಲಿಯ "ಪಂಡಿತಜೀ" (ಈ ಕಡೆಯ ಪೂಜಾರಿ) "ಫೂಲ್ ಚಢಾವ್, ಪೈಸೇ ಚಢಾವ್" (ಹೂ ಹಾಕಿ, ದುಡ್ಡು ಹಾಕಿ) ಎನ್ನುವನು ಆ ಗುಹೆಯೊಳಗೆ ಹೋದ ನಾವು ದರ್ಶನ ಮಾಡಿದ ಕೂಡಲೇ (ಇಲ್ಲಿಯವರು ಲಿಂಗವನ್ನು ಮುಟ್ಟಿಯೇ ದರ್ಶನ ಮಾಡುವರು) ಹೊರಗೆ ಬಂದುಬಿಡಬೇಕು.

ಆ ಒಂದು ನಿಮಿಷದ ದರ್ಶನಕ್ಕಾಗಿ ಒಂದು ವಾರದಿಂದಲೂ ಇವರ್ರಿಗೂ ಚಿಂತೆ. ವರುಷಕ್ಕೆ ಒಂದು ಸಲವಾದರೂ ದೇವರ ಹೆಸರಿನಲ್ಲಿ ಕಷ್ಟಪಡಬೇಕೆಂದು, ವರುಷ-ವರುಷವೂ ಶಿವರಾತ್ರಿಯ ದಿನ, ಸರಳೆ-ಸದಾಶಿವರಾಯರು ಗುಪ್ತೇಶ್ವರನ ದರ್ಶನಕ್ಕೆ ಹೋಗುತ್ತಿದ್ದರು. ಆ ದಿನ ಬೆಳಗಿನ ಜಾವ, ದೇವರ ದರ್ಶನವಿಲ್ಲದೆ ಬೆಳಗಿನ ಕಾಫೀ ಪಾನವಿಲ್ಲ. ಕಾರ್ಲಾಯಿಲನು "ಇಂಡಿಯಾದ ಆಧಿಪತ್ಯಬಿಟ್ಟೇವು: ನಮ್ಮ ಷೇಕ್ಸಪೀಯರನ್ನು ಬಿಡಲಾರೆವು" ಎಂದು ಹೇಳಿದ. ಹಾಗೆಯೇ ದಾಕ್ಷಿಣಾತ್ಯರು ಊಟ ಬಿಟ್ಟಾರು; ಕಾಫಿ ಬಿಡುತ್ತಾರೆಯೇ? ಆದರೆ ಅಂದು ದೇವರ ದರ್ಶನವಿಲ್ಲದೆ ಅವರಿಬ್ಬರಿಗೆ ಕಾಫೀಪಾನವಿಲ್ಲ. ಎದ್ದು ಸ್ನಾನಮಾಡಿ, ಮಡಿಬಟ್ಟೆಯುಟ್ಟುಕೊಂಡು ಹೊರಡುವುದೊಂದೇ ಕೆಲಸ. ಎಲ್ಲರೂ ಹೋಗುವ ಮೊದಲು ನೂಕಾಟವನ್ನು ತಪ್ಪಿಸಿಕೊಂಡು, ತಾವೇ ಮೊದಲು ಗುಪ್ತೇಶ್ವರನ ದರ್ಶನ ಮಾಡಿಕೊಳ್ಳಬೇಕೆಂಬ ಸಂಭ್ರಮ ಬಲಿಯಿತು. ಮೊದಲಿನ ರಾತ್ರಿ ೪ ಗಂಟೆಗೇನೆ Alarm set ಮಾಡಿ ಆಯಿತು. ಸರಳೆಗೆ ಬೇಗ ಏಳಬೇಕೆಂಬ ಚಿಂತೆಯಲ್ಲಿ ೩-೩೦ ಗಂಟೆಗೇನೆ ಎಚ್ಚರಾಯಿತು. "Alarm ಇಟ್ಟದ್ದೇಕೆ? ಅದು ಹೊಡೆಯಲಿ!" ಎಂದುಕೊಂಡು ಸರಳೆ, ಅದು ಕಿರ್ರ್ss ಅಂದಾಗಲೇ

ಎದ್ದು, ಸ್ನಾನಕ್ಕಾಗಿ ನೀರುಕಾಯಿಸಿದಳು. ಇನ್ನೇನು ಸ್ನಾನಮಾಡಬೇಕು. ಅವರ ಗೃಹಚಾರಕ್ಕಾಗಿ ಅಂದೇ ಪಾತ್ರೆತೊಳೆಯುವ ಆಳು ಬೇಗ ಬರಬೇಕೆ? ಅವನಿಗೂ ಅಂದು ಮಧ್ಯಾಹ್ನದ "ಛುಟ್ಟಿ" (ರಜಾ) ಬೇಕು. ನರ್ಮದಾಸ್ನಾನವಾಗಬೇಕು. ಬೇಗ ಬಂದುಬಿಟ್ಟ. ಬೇಗ ಹೋರಡಬೇಕೆಂದಿದ್ದ ದಂಪತಿಗಳಿಗೆ ಅರ್ಧಘಂಟೆ ಹೊತ್ತಾಯಿತು. ಅಂತೂ ಇಬ್ಬರೂ ಎಲ್ಲವನ್ನೂ ಬೇಗ ಬೇಗ ಮುಗಿಸಿ, ಮಡಿಬಟ್ಟೆಯುಟ್ಟುಕೊಂಡು, ಮನೆಯ ದೇವರ ಪೂಜೆಯನ್ನು ಯಥಾ ವಿಧಿಯಾಗಿ ಮಾಡಿ, ೬ ಗಂಟೆಗೆ ಹೊರಟರು.

ಅರ್ಧ ದಾರಿ ಬಂದಮೇಲೆ, ಬರುವ ಅವಸರದಲ್ಲಿ ಕೈಚೀಲ ತರುವುದು ಮರೆತು ಹೋಗಿತ್ತೆಂದು ತಿಳಿಯಿತು. ಇನ್ನೂ ಬೇಗ ಏಳಬೇಕಾತ್ತೆಂದು ಇಬ್ಬರೂ ಒಬ್ಬರಿಗೊಬ್ಬರು ಹೇಳಿಕೊಂಡು ಮುಂದೆ ಹೊರಟರು. ಇನ್ನೂ ಸೂರ್ಯೋದಯವಾಗಿರಲಿಲ್ಲ. ಆಗಲೇ ಬೀದಿಬೀದಿಗಳಿಂದ ಅಲ್ಲಿ ಇಲ್ಲಿ ಕೆಲವು ಮರಾಠೀ ಜನರು "ಹೇ ಕಾಯ? ಕಸ ಕಾಯ?" (ಇದೇನು? ಏನು ಸಮಾಚಾರ?) ಎಂದು ಆಡಿಕೊಳ್ಳುತ್ತ ಮಡಿಬಟ್ಟೆಯನ್ನುಟ್ಟುಕೊಂಡು ಬೇಗ ಬೇಗ ಹೊರಟಿದ್ದರು ದೇವರನ್ನು ಬೇಗ ಕಾಣುವ ಕಾತರತೆಯಿಂದ, ಬೇರೆ ದಾರಿಯಿಂದ ಇವರಿಬ್ಬರೂ ನಡೆದರು. ದಾರಿಯಲ್ಲಿ ಸುತ್ತಲೂ ಬಿದಿರಿನ ಚಪ್ಪರಹಾಕಿದ ರಮಣೀಯವಾದ ವೀಳ್ಯದೆಲೆಯ ತೋಟಗಳು. ಆ ತೋಟಗಳಿಗೆ ನೀರುಣಿಸುವುದಕ್ಕಾಗಿ ತೋಡಿದ ಅಗಲವಾದ ಬಾವಿಗಳು, ಅಲ್ಲಲ್ಲಿ ಹಕ್ಕಿಗಳ ಕಲಕಲನಾದ, ಆ ಬಾವಿಗಳಲ್ಲಿ ಬಣ್ಣಬಣ್ಣದ ಹಕ್ಕಿಗಳು ಸುರ್ರೆಂದು ಶಬ್ದಮಾಡಿ ಈಜಾಡುವ ದೃಶ್ಯ—ಇದೆಲ್ಲ ತುಂಬ ಮನೋಹಾರಿಯಾಗಿತ್ತು. ಆ ಮನೋಹರತೆಗೆ, ಬೆಳಗಿನ ಜಾವದ ಪ್ರಶಾಂತತೆ—ವಾತಾವರಣದ ಪ್ರಸನ್ನತೆಯೇ ಕಾರಣವಾಗಿತ್ತು.

ಮೂಡಣದ ಕಪ್ಪು ಕೆಂಪು ಬಣ್ಣಕ್ಕೆ ತಿರುಗುತ್ತಿತ್ತು. ಈ ಎಲ್ಲ ಸೌಂದರ್ಯವನ್ನು ಕಣ್ಣುಗಳಲ್ಲಿ ತುಂಬಿಕೊಂಡು ಇಬ್ಬರೂ ಬೇಗ ಬೇಗ ಹೊರಟರು. ದೇವಸ್ಥಾನದ ಹತ್ತಿರ ಬಂದ ಹಾಗೆಲ್ಲ ದರ್ಶನಾಪೇಕ್ಷಿಗಳ ಸಂಖ್ಯೆ ಹೆಚ್ಚಾಗತೊಡಗಿತು. ಮರಾಠಿಗರು ಪಂಜಾಬಿಗಳು, ಬಂಗಾಲಿಗಳು, ಎಲ್ಲರೂ ಶುಚಿರ್ಭೂತರಾಗಿ ಹೊರಟಿದ್ದರು.

ವಾಗ್ಲಹರಿ

ಕನ್ನಡದಲ್ಲಿಯೇ ವಿಶಿಷ್ಟವೆನಿಸಿದ ಸಾಹಿತ್ಯಿಕ ಪ್ರಕಾರ !
(ಹನ್ನೊಂದು ನಾಟ್ಯಛಟಗಳ ಸಂಕಲನೆ)
ಪ್ರಿ. ಫ್ಲಿ. ಕೆ. ಗೋಕಾಕ್ ಬಿ. ಎ. (ಆಕ್ಸನ್)
ಇವರ ಮುನ್ನುಡಿಯೊಡನೆ
ಲೇಖಕರು: **ಎನ್. ಎಸ್. ಗೆದಗಕರ**
ಬೆಲೆ ೦-೧೨-೦
ಮುಖ್ಯ ಮಾರಾಟಗಾರರು :
ಮನೋಹರ ಗ್ರಂಥಭಾಂಡಾರ, ಧಾರವಾಡ

ಅವರೆಲ್ಲರನ್ನೂ ಹಿಂದೆಹಾಕಿ ಸರಲೆ-ಸದಾಶಿವರಾಯರು ಬೇಗ ನಡೆದು ದೇವಸ್ಥಾನವನ್ನು ತಲುಪಿದರು. ಆಗಲೇ ೭ ಗಂಟೆಗೇ—ನೂರಾರು ಜನರು ಬಂದು ಸೇರಿ ಕಲಕಲ ಮಾಡುತ್ತಿದ್ದರು. ತಾವೇ ಮೊದಲು ದರ್ಶನ ಮಾಡುವೆವೆಂದಿದ್ದ ಅವರಿಬ್ಬರಿಗೆ, ಆ ಜನಸಂದಣಿಯನ್ನು ಕಂಡು ತುಂಬ ಆಚ್ಚರಿಯಾಯಿತು. "ಜಬಲ್ಪುರವೆಲ್ಲ ಮೊದಲ ರಾತ್ರಿ ಮಲಗಿಯೇ ಇಲ್ಲವೆ?" ಎಂದುಕೊಂಡರು. ಅಂದು ಎಷ್ಟು Alarm ಗಳು ಕಿರ್ರ್ರ್ ಅಂದಿದ್ದುವೋ, ಎಷ್ಟು ಜನ ಎಚ್ಚರಾಗಿಯೇ ಇದ್ದರೋ ಯಾರು ಹೇಳಬಲ್ಲರು?

ಪಾದತ್ರಾಣಗಳನ್ನು ತ್ಯಜಿಸಿ, ಒಂದುಬಾವಿಯ ಹತ್ತಿರ ಕೈಕಾಲು ತೊಳೆದುಕೊಳ್ಳುವುದಕ್ಕಾಗಿ ಇಬ್ಬರೂ ಬಂದರು. ಅಲ್ಲಿಯೂ ಜನಸಂದಣಿ. ಯಾವನೋ ಒಬ್ಬ ಉದಾರಿ, ನೀರುಸೇದಿ ಎಲ್ಲರಿಗೂ ಕೊಡುತ್ತಿದ್ದ. ಇವರಿಗೂ ಕೊಟ್ಟ. ಕೈಕಾಲು-ಮುಖ ತೊಳೆದುಕೊಂಡು ಇಬ್ಬರೂ ಗುಡಿಯೊಳಗೆ ಪ್ರವೇಶಮಾಡಿದರು. ದೇವಸ್ಥಾನದ ಮುಂದಿನ ಬೀದಿಗಳಲ್ಲಿ ಹೂ, ಹಣ್ಣು-ಕಾಯಿ, ಮಿಠಾಯಿ, ತರತರದ ತಿಂಡಿಗಳು, ಆಟದ ಸಾಮಾನುಗಳು ಮೊದಲಾದುವುಗಳ ಅನೇಕ ಅಂಗಡಿಗಳು ಆಗಲೇ ಬಂದಿದ್ದುವು. ಹೂ-ಬಿಲ್ವಪತ್ರಗಳನ್ನು ಕೊಂಡುಕೊಂಡು ಇಬ್ಬರೂ, ದೇವದರ್ಶನಕ್ಕೆಂದು ಕಾದುಕೊಂಡು ನಿಂತ ಗುಂಪುಗಳಲ್ಲಿ ಸೇರಿಕೊಂಡರು. ಹೆಂಗುಸರು ಒಂದು ಪಕ್ಕದಿಂದ ಹೋಗಬೇಕು; ಗಂಡಸರು ಇನ್ನೊಂದು ಪಕ್ಕದಿಂದ.

ಈ ಜನಸಂದಣಿಯೆಲ್ಲ ಆ ಚಿಕ್ಕ ಗುಹೆಯಲ್ಲಿ ಸೇರಿ ದರ್ಶನ ಮಾಡಿಕೊಂಡು ಹೊರಗೆ ಬರಬೇಕು. ಹೆಂಗುಸರ ಗುಂಪಿನಲ್ಲಿ ಸೇರಿದ ಸರಲೆ ಆಕಡೆ ಈಕಡೆ ನೋಡಿದಳು. ಹೆಂಗುಸರೇ ಹೆಚ್ಚಾಗಿ ಬಂದಿದ್ದರು. 'ಭಕ್ತಿ ಶ್ರದ್ಧೆ ಹೆಂಗುಸರಲ್ಲಿಯೇ ಹೆಚ್ಚಾಗಿದೆಯೆ?' ಎಂದುಕೊಂಡಳು. ಬಂಗಾಲಿ ಹೆಂಗುಸರು ಎರೆದುಕೊಂಡು, ಬೈತಲೆಯಲ್ಲಿ ಕುಂಕುಮ ಇಟ್ಟುಕೊಂಡು, ಹಣ್ಣು-ಹೂಗಳ ತಟ್ಟೆಯನ್ನು ಕೈಗಳಲ್ಲಿ ಹಿಡಿದುಕೊಂಡು ಗುಂಪಿನಲ್ಲಿ ನಿಂತಿದ್ದರು. ಕೆಲವರು ಅಭಿಷೇಕಕ್ಕಾಗಿ ಲೋಟಗಳಲ್ಲಿ ನೀರು ತಂದುಕೊಂಡಿದ್ದರು. ಆ ನುಗ್ಗಾಟದಲ್ಲಿ ಸರಲೆಯ ಪ್ರಗತಿ ಹೆಜ್ಜೆಹೆಜ್ಜೆಯಾಗಿ ಸಾಗಿತ್ತು. ಒತ್ತಡದಲ್ಲಿ ಮುಂದೆ ಬಂದುದೇ ಗೊತ್ತಾಗುತ್ತಿರಲಿಲ್ಲ. ಅಷ್ಟು 'ಬೇಗ ವ್ಯವಸ್ಥೆ ಮಾಡುವ ಪೋಲೀಸರು ಕೂಡ ಬಂದಿರಲಿಲ್ಲ. ಆದ್ದರಿಂದ ಜನಗಳು ತಮ್ಮ ಇಷ್ಟ ಬಂದಹಾಗೆ ನುಗ್ಗುತ್ತಿದ್ದರು. "ಹೋಗುವ ದಾರಿ, ಬರುವ ದಾರಿ!" ಎಂಬ ವ್ಯವಸ್ಥೆಯೇ ಇರಲಿಲ್ಲ. ಯಾರು ಬೇಕಾದವರು ಎಲ್ಲಿ ಬೇಕಾದಲ್ಲಿ ನುಗ್ಗಿ ಮುಂದೆ ಸಾಗುತ್ತಿದ್ದರು. ದರ್ಶನ ಮಾಡಿಕೊಂಡು ತಿರುಗಿ ಬರುವವರಿಗೆ ದಾರಿಯನ್ನೇ ಬಿಡುತ್ತಿರಲಿಲ್ಲ. "ಜಾನೇದೋ, ಜಾನೇದೋ!" ಎಂದು ಕೂಗುತ್ತ, ಬೆವರು ಸುರಿಸಿಕೊಂಡು ಅನೇಕರು ಹೊರಗೆ ಬರುತ್ತಿದ್ದರು. ಆ ನುಗ್ಗಾಟ, ಹಿಗ್ಗಾಟ, ಹಿಸುಕಾಟ ಒತ್ತಾಟದಲ್ಲಿ ಸರಲೆ ಹಣ್ಣಾಗಿ ಹೋದಳು. 'ದರ್ಶನಕ್ಕೆಂದು ಬೇಗ ಬಂದರೂ ಈ ಗತಿಯಾಯಿತಲ್ಲಾ! ಹೊತ್ತಾಗಿ ಬಂದರೇನೇ ಒಳಿತಾಗುತ್ತಿತ್ತೇನೋ!" ಎಂದುಕೊಂಡಳು. ಆ ಹಿಸುಕಾಟದಲ್ಲಿ ಸರಲೆಗೆ ಉಸಿರು ಕಟ್ಟಿದಂತಾಗಿ, ಪ್ರಾಣವೇ ಹೋದಂತಾಯಿತು. "ದೇವರೂ ಬೇಡ

ದರ್ಶನವೂ ಬೇಡ! ದೇವರು ಎಲ್ಲೆಲ್ಲಿಯೂ ಇದ್ದಾನೆ. ಕಲ್ಲು, ಮಣ್ಣು, ತಾನು ನಿಂತ ನೆಲ, ಎದುರುಗೋಡೆ, ಸುತ್ತು ನೆರೆದ ಜನರು, ಮಕ್ಕಳು ಇವರಲ್ಲೆಲ್ಲ ಇದ್ದಾನೆ. ಅವನು ಸರ್ವವ್ಯಾಪಿ. ಮನೆಯ ದೇವರಿಗೆ ಕೈ ಮುಗಿದಾಯಿತು. ಕಲ್ಲು, ಮಣ್ಣುಗಳಲ್ಲಿ ಕಂಡಾಯಿತು. ಸಾಲದೆ?'' ಎಂದೆನಿಸಿತು. ಆ ಕಷ್ಟದ ಅನುಭವದಲ್ಲಿ, ಗ್ರಂಥಸ್ಥ "ಸರ್ವವ್ಯಾಪಿತ್ವ"ದ ತತ್ತ್ವ ಝಳ್ಳೆಂದು ಕಣ್ಮುಂದೆ ಹರಿಯಿತು. 'ಇತರರನ್ನು ನೋಯಿಸಿ ಕೆಡುನುಡಿಗಳನ್ನಾಡದೆ, ಕೈಲಾದಷ್ಟು ಪರೋಪಕಾರಮಾಡಿ, ಸದಾ ಸಂತುಷ್ಟರಾಗಿದ್ದುಕೊಂಡು ದೇವರನ್ನು ನೆನೆಸಿಕೊಂಡರೆ ಸಾಲದೆ? ಆ ಮನದ ಸಂತೃಪ್ತಿಯ ದರ್ಶನವೊಂದೇ ಸಾಲದೇ? ಗುಹೆಯೊಳಗಿರುವ ಕಲ್ಲುದೇವರನ್ನೂ ನೋಡಲೇ ಬೇಕೆ?' ಎಂಬ ದಿವ್ಯಸತ್ಯ ಸರಳೆಯ ಕಣ್ಮುಂದೆ ಸುಳಿದಾಡಿತು. ಬೇಗನೆ ಗುಂಪಿನಿಂದ ಹೊರಗೆ ಬಂದಳು.

ಗಂಡುಸರ ಗುಂಪನ್ನು ನೋಡಿದಳು. ಆ ಗುಂಪಿನಿಂದ ಸದಾಶಿವ. ರಾಯರೂ ಹೊರಕ್ಕೆ ಬಂದಿದ್ದರು "ನಡೀ ಹೋಗೋಣ! ದರ್ಶನದ ಸಂಭ್ರಮ ಸಾಕಾಯಿತು. ಮನೆಯ ದೇವರೇ ಸಾಕು" ಎಂದರು. ಅವರಿಗೂ ಆಗಲೇ ಸರ್ವವ್ಯಾಪಿತ್ವದ ಸತ್ಯ ಮನದಟ್ಟಾಗಿತ್ತು. ಇಬ್ಬರೂ ನಾಲ್ಕು ಹೆಜ್ಜೆ ಈ ಕಡೆಗೆ ಬಂದರು. ಅಷ್ಟೊಂದು ಬೇಗ ಬಂದು ದರ್ಶನವಿಲ್ಲದೆ ಹಾಗೆಯೇ ತಿರುಗಿ ಹೋಗಲು ಇಬ್ಬರಿಗೂ ಮನಸ್ಸಿರಲಿಲ್ಲ. "ಇನ್ನೊಂದು ಸಲ ಪ್ರಯತ್ನಿಸೋಣ! ನೋಡಬೇಕೆಂಬ ಆಶೆಯೊಂದಿದೆಯಲ್ಲ!" ಎಂದರು ಸದಾಶಿವರಾಯರು. ಇಬ್ಬರೂ ತಮ್ಮ ಗುಂಪುಗಳನ್ನು ಸೇರಿದರು. ಜನರೆಲ್ಲ "ಕುಂಭಮೇಲಾ ಹೋಗಯಾ" ಎಂದು ಕೂಗಿಕೊಳ್ಳುತ್ತ, ಹಾಗೆಯೇ ಮುಂದೆ ಸಾಗಿದ್ದರು. ಈ ಸಲವೂ ಒತ್ತಾಟ ಸಹಿಸದೆ, ಇಬ್ಬರೂ ಅರ್ಧದಾರಿ ಹೋದವರು ತಿರುಗಿ ಬಂದರು. ಮನೆಗೆ ಹೋಗಲು ಮನಸ್ಸಿಲ್ಲ "ವರುಷ ಪೂರ್ತಿ, ದರ್ಶನವಾಗದೆ ಹೋಯಿತಲ್ಲಾ ಎಂದು ಪೇಚಾಡಬೇಕೇಕೆ?" ಎಂದುಕೊಂಡು, ಇಬ್ಬರೂ ಮೂರನೆಯ ಸಲ, ಕೊನೆಯ ಸಲ ಪ್ರಯತ್ನ ಮಾಡುವುದೆಂದು ನಿರ್ಧರಿಸಿದರು. ಇಮ್ಮಡಿ ಉತ್ಸಾಹದಿಂದ ಮತ್ತೆ ಗುಂಪನ್ನು ಸೇರಿದರು.

ಒತ್ತಾಟ ನುಗ್ಗಾಟದಲ್ಲಿ ಸರಳೆ ಹಾಗೆಯೇ ಗುಹೆಯ ದ್ವಾರದ ಬಳಿ ಬಂದಳು. ಆ ಹಿಸುಕಾಟ ಅಸಹನೀಯವಾಯಿತು. ಈ ಬಾಗಿಲ ಬಳಿ ಬಂದು ತಿರುಗಿಹೋಗಬೇಕಾಗುವುದೇ ಎಂದು ಕಳವಳಿಸಿದಳು. ಆಗಲೇ ಹಿಂದಿನಿಂದ ದರ್ಶನವಾಗದೇ ಇದ್ದ ಹೆಂಗುಸರು, ಕೈಯಲ್ಲಿಯ ನೀರನ್ನು ಇವಳ ತಲೆಯ ಮೇಲೆ ಮೈಮೇಲೆ ಚೆಲ್ಲಿದರು. ಅದನ್ನು ಸಹಿಸಿಕೊಂಡು ಮುಂದೆ ಬಂದಾಗ, ಆ ಗುಹೆಯಲ್ಲಿಯ ದೀಪದ ಬೆಳಕು ಕೊಂಚ ಕಂಡಿತು. 'ಇಷ್ಟನ್ನೇ ನೋಡಿ ಹಿಂತಿರುಗಬೇಕಾಗುವುದೇ!' ಎಂದು ವಿಷಾದಿಸಿದಳು. ಆ ಹಿಸುಕಾಟದಲ್ಲಿಯೇ ಧೈರ್ಯತಂದುಕೊಂಡು ಹಾಗೆಯೇ ಮುನ್ನುಗ್ಗಿ, ಕೆಳಗೆ ಬಗ್ಗಿ, ಒಬ್ಬ ಹೆಂಗುಸಿನ ಕಾಲುಸಂದಿಯಿಂದ ತೂರಿಕೊಂಡು ಮುಂದೆಹೋದಳು! ನೋಡಿದರೆ ಗುಹೆ ಬಂದೇ ಬಿಟ್ಟಿದೆ. ದೇವರ ಮುಂದೆ ದೀಪಗಳು ಉರಿಯುತ್ತಿವೆ. ಜನರ ಅಭಿಷೇಕದ ನೀರಿನಲ್ಲಿ ನೆನೆದ ದೇವರು, ದೀಪದ ಬೆಳಕಿನಲ್ಲಿ ತುಂಬ ದಿವ್ಯನಾಗಿ ಕಾಣುತ್ತಿದ್ದ. ಕಷ್ಟಸಹಿಸಿದ ಸರಳೆಗೆ ಅಂದು ಈಶ್ವರ ತುಂಬ ಸುಂದರನಾಗಿ ಕಂಡುಬಂದ. ಕೈಯಲ್ಲಿ ಭದ್ರವಾಗಿ ಹಿಡಿದಿದ್ದ, ಹೂ-ಬಿಲ್ವಪತ್ರಗಳನ್ನು ದೇವರ ಮೇಲೆ ಇಟ್ಟು, ಕೈಮುಟ್ಟಿ, ಕೈಮುಗಿದು, "ಸಂತತ ನಿನ್ನ ಕರುಣೆಯಿರಲಿ" ಎಂದು ಪ್ರಾರ್ಥಿಸಿಕೊಂಡು, ದುಡ್ಡು ಹಾಕಿ, ದೇವರ ದರ್ಶನವಾಯಿತಲ್ಲಾ—ಎಂದು ಹಿಗ್ಗಿ, ನುಗ್ಗಾಟದಿಂದ ಹೇಗೋ ಪಾರಾಗಿ ಹೊರಕ್ಕೆ ಬಂದಳು. ಸಂತೋಷ ಮನದಲ್ಲಿ, ಮುಖದಲ್ಲಿ ಮೂಡಿತ್ತು. ಗಂಡುಸರ ಗುಂಪನ್ನು ನೋಡಿದಳು. ಸದಾ-ಶಿವರಾಯರು ಇನ್ನೂ ಬಂದಿರಲಿಲ್ಲ. 'ದರ್ಶನವಾಯಿತೋ ಇಲ್ಲವೋ' ಎಂದವಳಿಗೆ ಚಿಂತೆಯಾಗಿತ್ತು. ಎರಡು ನಿಮಿಷಗಳಾದುವು. ಅರಳಿದ ಮುಖದಿಂದ ಸದಾಶಿವರಾಯರು ಹೊರಗೆ ಬಂದರು. "ಆ ನುಗ್ಗಾಟ-ದಲ್ಲಿ, ಒತ್ತಾಡಿಕೊಂಡು ಒಳಗೆ ಹೋಗುವ ಒಬ್ಬ ಪೂಜಾರಿಯ ಬೆನ್ನು ಹಿಡಿದುಕೊಂಡು ಹೋಗಿ, ದರ್ಶನ ಮಾಡಿಕೊಂಡು ಬಂದೆ!" ಎಂದು ಸಂತಸದಿಂದ ಸರಳೆಗೆ ಹೇಳಿದರು; ದರ್ಶನಾಪೇಕ್ಷಿಗಳಾಗಿ ಆ ಕಡೆ ಈ ಕಡೆ ನಿಂತ ಹೆಂಗುಸರು ಗಂಡುಸರು, ಇವರಿಬ್ಬರ ಕೆದರಿದ ಕೂದಲು ಮುದುರಿದ ಬಟ್ಟೆಗಳನ್ನು ಕಂಡು "ದರ್ಶನ್ ಹೋನಾ ಬಹುತ್ ಮುಷ್ಕಿಲ್ ದಿಖತಾ ಹೈ" (ದರ್ಶನವಾಗುವುದು ಬಹಳ ಕಷ್ಟವೆಂದು ತೋರುತ್ತದೆ.) ಎಂದು ಆಡಿಕೊಂಡರು.

ದಿಗ್ವಿಜಯಿಗಳಾದ ದಂಪತಿಗಳು ಹೊರಗೆ ಬಂದರು. ಸಂತಸ-ದಿಂದ ಅಲ್ಲಿಯ ಜನಸಂದಣಿಯನ್ನೂ ಅಂಗಡಿಗಳನ್ನೂ ನೋಡಿದರು. ಅಮ್ಮನವರ ದರ್ಶನಮಾಡಿಕೊಂಡುಬಂದು, ಮನೆಗೆ ಹೋಗಲು ಹೊರಟರು. ಮನೆಯ ಜನರಿಗೆಂದು ಹಣ್ಣು-ಹೂಗಳನ್ನು ಕೊಂಡು ಕೊಂಡು ಹೊರಟರು. ದಾರಿಯುದ್ದಕ್ಕೂ ದರ್ಶನಾಪೇಕ್ಷಿ ಭಕ್ತರ ತಂಡು, ತಂಡೋಪತಂಡವಾಗಿ ಬರುತ್ತಿತ್ತು. ಸಾಹಸಮಾಡಿದ ತುಂಬ ಸಂತುಷ್ಟರಾದ ಇವರಿರ್ವರು "ನಿಮಗಿಂತ ಮೊದಲು ದರ್ಶನಮಾಡಿ-ದೆವು ನೋಡಿ" ಎಂಬ ಹೆಮ್ಮೆಯ ಸಂತೋಷದಲ್ಲಿ, ಕೈಯಲ್ಲಿಯ ಹಣ್ಣು-ಹೂಗಳನ್ನು ತೋರಿಸಿಕೊಳ್ಳುತ್ತ (ಚೀಲತಂದಿರಲಿಲ್ಲವಲ್ಲ!) ನಗುಮುಖದಿಂದ ಮನೆಯ ಮಾರ್ಗ ಹಿಡಿದರು. ಒಂದು ಮೈಲು ನಡೆದು ರಸ್ತೆಗೆ ಬಂದಮೇಲೆ, ಸದಾಶಿವರಾಯರಿಗೆ ಇಲ್ಲಿಯವರೆಗೆ ಮರೆತೆ ಹೋಗಿದ್ದ ಕಾಫೀಪಾನ ಜ್ಞಾಪಕಕ್ಕೆ ಬಂತು. "ನಡೆ, ಬೇಗ ಹೊರಡೋಣ ಕಾಫಿ ಕುಡಿಯಬೇಕು!" ಎಂದೆಂದು, ಒಂದುರಿಕ್ಷಾ hire ಮಾಡಿದರು ಸರಳೆಯೂ "ಉಪವಾಸದ ಫಲಾಹಾರ" ತಯಾರಿಸುವ ಜ್ಞಾಪಕ ಬಂದು ರಿಕ್ಷಾ ಏರಿದಳು. ೧೦ ನಿಮಿಷದಲ್ಲಿ ಮನೆಯ ಹತ್ತಿರ ಬಂದರು. 'ದೇವರ ದರ್ಶನವಾಯಿತಲ್ಲಾ' ಎಂಬ ಸಂತೃಪ್ತಿಯ ನಗುಮುಖದಿಂದ ಮನೆಯ ಮೆಟ್ಟಲನ್ನು ಏರಿದರು. ಈ ವರುಷದ ಶಿವರಾತ್ರಿಯ ದರ್ಶನ ಹೀಗಾಯಿತು, ಮುಂದಿನ ವರುಷ ಹೇಗಿರುತ್ತೋ—ಎಂಬುದನ್ನು ಯಾರು ಹೇಳಬಲ್ಲರು?

"ಜಯಂತಿ"ಗೆ ಚಂದಾದಾರರಾಗಿರಿ
ಮನೆಯ ಜನರ ಸಂಸ್ಕೃತಿಯನ್ನು ಹೆಚ್ಚಿಸಿರಿ!

ಮುತ್ತಿನ ಚೆಂಡು

(ಒಂದು ಜಾನಪದ ಕಥೆ)

ಸಂಗ್ರಾಹಕರು: ಶ್ರೀ. ರಾಘವೇಂದ್ರ ಕಕ್ಕಗಿ, ಸುರಪುರ

●

ವಿಧಿಲಿಖಿತವು ಎಂದಿಗಾದರೂ ತಪ್ಪುವುದುಂಟೆ? ವಿಶ್ವಪ್ರಯತ್ನ ಮಾಡಿದರೂ ಅದು ಯಾರ ಸಹಾಯವಿಲ್ಲದೆಯೇ ನಡೆಯುತ್ತದೆ. ಕೇವಲ ಒಂದು ಸಣ್ಣ ಕಡ್ಡಿಯಾದರೂ ಅದು ಅದೇ ಸ್ಥಳದಲ್ಲಿ ತಾನು ಇರುವಷ್ಟು ಕಾಲ ಇರುತ್ತದೆಯೇ? ಇಲ್ಲ. ಏಕೆ? ವಿಧಿಯು ತಾನು ಸ್ವತಂತ್ರ. ನಾವೆಲ್ಲ ಅತನ ಸೆರೆಯಾಳು. ಅತನು ಕುಣಿಸಿದಂತೆ ನಿಸರ್ಗದ ಪ್ರತಿಯೊಂದು ವಸ್ತುವೂ ಕುಣಿಯಬೇಕಾಗುತ್ತದೆ. ಅದನ್ನು ನಾವು ಹುಡುಕಿಕೊಂಡು ಹೋಗಬೇಕಾಗಿಲ್ಲ. ಅದೇ ಬರುವವೇಳೆಗೆ ಹುಡುಕಿಕೊಂಡು ಬರುತ್ತದೆ. ಇದೇ ಭಾವವನ್ನು ಸರ್ವಜ್ಞನು ಈ ರೀತಿ ಹೇಳುತ್ತಾನೆ—

" ಏನಾನು-ನೆವದಿಂದ ತಾನೆಬಪ್ಪುದು ಸಿರಿಯು
ಕಾನನದೊಳಗೆ ಕರಿ ಹುಟ್ಟಿ ಪಟ್ಟಕ್ಕೆ
ತಾನೆ ಬಂದಂತೆ ಸರ್ವಜ್ಞ || "

ಇದೇ ಭಾವವನ್ನು ಈ ಕತೆಯು ಹೇಳುತ್ತದೆ. ನಮ್ಮ ಜಾನಪದ ಸಂಸ್ಕೃತಿಯ ಸಾರವಿದು.

ಸುಮುನಾವತಿ—ಎನ್ನುವುದು ಬಹು ದೊಡ್ಡ ಪಟ್ಟಣ. ಆ ಪಟ್ಟಣದ ಅರಸನಿಗೆ ಒಬ್ಬಳೇ ಮಗಳಿದ್ದಳು. ಆಕೆಯನ್ನೆ ಹೆಣ್ಣೂ ಎಂದು, ಗಂಡೂ ಎಂದುಕೊಂಡು, ರಾಜದಂಪತಿಗಳು ಕಾಲವನ್ನು ನೂಕುತ್ತಿದ್ದರು. ಆ ಪಟ್ಟಣದ ಅರಸನು ಪ್ರಜೆಗಳನ್ನು ಮಕ್ಕಳಂತೆ ಕಾಣುತ್ತಿದ್ದನು. ಆದ್ದರಿಂದಲೇ ಆತನು ಬಹು ಸುಂದರವಾದ ಬಾಜಾರವನ್ನೂ ಇನ್ನು ಅನೇಕ ಲೋಕೋಪಕಾರಿ ಕೆಲಸಗಳನ್ನೂ ಮಾಡಿಸಿದ್ದನು. ಆ ಬಾಜಾರವನ್ನು ನೋಡಲು ಕಣ್ಣುಗಳೆರಡೂ ಸಾಲವು. ಪಗಡಿಯ ಪಟ್ಟದಂತೆ ಪೇಟೆಯ ಮಧ್ಯದಲ್ಲಿ ಒಂದು ಸಾರ್ವಜನಿಕ ಉದ್ಯಾನ. ಉದ್ಯಾನದ ಮಧ್ಯದಲ್ಲಿ ಊರ ಕುಲದೇವರ ಮಂದಿರವು. ಆ ಮಂದಿರವನ್ನು ಅಮವಾಸ್ಯೆಯ ರಾತ್ರಿಯಲ್ಲಿ ನೋಡಬೇಕು. ಅಂದು ಪ್ರಣತಿಗಳ ಸಾಲು ಗುಡಿಯ ಸುತ್ತಲೆಲ್ಲವೂ ಇರುತ್ತವೆ. ಅದನ್ನು ಆಗ ನೋಡಿದರೆ, ದೀಪದ ಒಂದು ದ್ರಾಕ್ಷಿಯ ಗೊಂಚಲವನ್ನೆ ಆಕಾಶದಲ್ಲಿ ಬಿಟ್ಟಿರುವಂತೆ ಭಾಸವಾಗುವುದು ಸಹಜ.

ನಾಗರಚವುತಿಯ ಹಬ್ಬವೆಂದರೆ ಹೆಣ್ಣುಮಕ್ಕಳಿಗೆ—ಅದೂ ಹೊಸತಾಗಿ ಹೋದ ಅತ್ತಮನೆಯ ಸೊಸೆಯರಿಗೆ—ಬಲು ಹಿಗ್ಗು. "ಜೋಕಾಲಿ ಆಡುವೆವು, ತಂಬಿಟ್ಟು ತಿನ್ನುವೆವು" ಎಂದು ಬಾಲ-ಬಾಲಿಕೆಯರು ಎನ್ನುವುದನ್ನೂ, ಎಂದು ಎಂಟು ಆಡುವುದನ್ನೂ ನೀವೆಲ್ಲರೂ ನೋಡಿರಬಹುದು. ಇವರ ಸಂತೋಷಕ್ಕಿಂತಲೂ ಅತ್ತೆ-ಮನೆಯ ಸೊಸೆಯರದು ಅತ್ಯಧಿಕವಾದ ಹಿಗ್ಗು. ಯಾಕೆ? ತವುರಿಗೆ ಹೋಗುವ ಸಂಭ್ರಮಕ್ಕಾಗಿ. ಇದೇ ಹಬ್ಬದ ದಿವಸ, ಸುಮುನಾವತಿಯ ಅರಸನ ಮಗಳು, ಬಾಜರದ ರಮ್ಯವಾದ ಉದ್ಯಾನದಲ್ಲಿ, ತನ್ನ ಸಖಿಯರೊಂದಿಗೆ ಜೋಕಾಲಿಯಾಡುತ್ತ ನಗುವಿನ ಪ್ರವಾಹವನ್ನು ಗಾಳಿಯ ಮೂಲಕ ಹೊರಗೆ ಕಳುಹಿಸುತ್ತಿದ್ದಾಳೆ. ಜೋಕಾಲಿ-ಯಾಡುತ್ತಿದ್ದಂತೆ ಒಂದು ಮುತ್ತಿನ ಚಂಡನ್ನು ಅವರು ಕಂಡರು. ಆ ಚಂಡಿನ ಯಾವ ಭಾಗವೂ ಮುತ್ತಿನಿಂದ ಬಿಟ್ಟಿರಲಿಲ್ಲ. ಬಹು ಮುದ್ದಾದ ಚಂಡು. ಅದನ್ನು ಹಿಡಿದು ತಮ್ಮಲ್ಲಿಟ್ಟುಕೊಳ್ಳಬೇಕೆಂದು, ಅದನ್ನು ನೋಡಿದ ಪ್ರತಿಯೊಂದು ಮನುಷ್ಯ ಪ್ರಾಣಿಯೂ ಬಯಸ-ಲಾರದೆ ಇರಲಾರದು. ಬೆಲೆಬಾಳುವ ವಸ್ತುಗಳೆಂದರೆ ಕಲ್ಲು ಸಹ ಬಾಯಿ ತೆರೆಯುತ್ತದೆ. ಎಂದಮೇಲೆ, ನಿಮಗೂ ಈ ರೀತಿಯ ಅನುಭವ ಆಗಿರಲೇ ಬೇಕು. ಆಗಿದ್ದರೆ ಸಾಕು. ಎಂಥ ರಾಜ-ನಾದರೇನು! ಆತನಿಗೂ ಆಶೆಯಾಗದೇ ಇದ್ದೀತೆ! ಈಕೆ ರಾಜನ ಮಗಳು! ಪಾಪ; ನಾಲಗೆಗೆ ನೀರೂರಿತು. ಮನಸ್ಸು ಅದನ್ನು ಹಿಡಿಯಲು ಹೋಗಿ, ತನುವು ಅದರ ಅಧೀನವಾಯಿತು. ಅದರ ಸಮೀಪಕ್ಕೆ ಹೋದಕೂಡಲೆ ಅದು ಮುಂದೆ ಓಡಿಹೋಯಿತು. ಅದನ್ನು ಹಿಡಿದೇ ತೀರುವುದೆಂದು ನಿರ್ಧರಿಸಿ, ಅದರ ಹಿಂದೆಯೇ ಓಡುತ್ತ ಹೊರಟಳು. ಕಲ್ಲೆನ್ನಲಿಲ್ಲ, ಮುಳ್ಳೆನ್ನಲಿಲ್ಲ. ಸುಖದಿಂದ ಬೆಳೆದ ಜೀವ. ಹಣ್ಣು-ಹಣ್ಣಾಯಿತು. ಆ ಚೆಂಡು ಸುಮಾರು ೧೫ ಮೈಲು ದೂರ ಹೋಗಿ ನಿಂತಿತು. ಅಲ್ಲಿ ಒಂದು ತೋಟ. ಅದರಲ್ಲಿ ನಾನಾತರದ ಪಕ್ಷಿಗಳ ಸಂಗ್ರಹಾಲಯವು ಒತ್ತಟ್ಟಿಗೆ. ಇನ್ನೊಂದು ಬದಿಯಲ್ಲಿ ಜನರು ವಿಶ್ರಮಿಸಲು ಹಚ್ಚನೆಯ ಹುಲ್ಲು. ಹುಲ್ಲಿನ ಮೈದಾನದಲ್ಲಿ ಒಂದು ಕಾಲುವೆ ಹರಿದು ಹೋಗಿದೆ. ಅದರಲ್ಲಿ ಬಿಳುಪಾದ, ಹಾಲನ್ನು ಮೀರಿಸುವ ನೀರು ಹರಿದು ಹೋಗುತ್ತಿದೆ. ಕಾಲುವೆಯ

ಬದಿಯಲ್ಲಿ ಒಂದು ಮಂಚ. ಮಂಚದ ಮೇಲೆ ಒಂದು ಶವವನ್ನು ಬಿಳಿಯ ಬಟ್ಟೆಯಿಂದ ಹೊದಿಸಿ ಕಟ್ಟಿಬಿಟ್ಟಿದ್ದರು. ಆ ಮಂತ್ರಿನ ಚೆಂಡು ಕೂಡ ಆ ಮಂಚದ ಬಳಿಯೇ ಬಂದುನಿಂತದ್ದು. ಈಕೆ ಅದನ್ನು–ಆ ವಿಚಿತ್ರವನ್ನು–ನೋಡಿ ಹೆದರಿ ಹೋದಳು. ಯಾವಾಗಲೂ ಸೇವಕರೊಂದಿಗೆ ಇರುತ್ತಿದ್ದ ಜೀವ ಒಂಟಿಯಾಗಿರುವುದು. ಅದೂ ಅರಣ್ಯದಲ್ಲಿ— ಒಂದು ಶವದ ಮುಂದೆ. ಈಗಿನ ಹೆಣ್ಣುಮಕ್ಕಳಿಗೆ ಸಾಧ್ಯವೇ ? ! ಆಕೆ ಅಷ್ಟರಲ್ಲಿಯೇ ಒಂದು ಧೈರ್ಯವನ್ನು ತಂದುಕೊಂಡಳು. ಆಯುಷ್ಯಗಟ್ಟಿಯಾಗಿದ್ದರೆ ಏನಾದರೊಂದುಪಾಯ ಹೊಳೆಯುತ್ತದೆಯಲ್ಲವೆ? ಕುರುಡುಸಮಾಧಾನವಿಲ್ಲದಿದ್ದರೆ ಜಗತ್ತಿಲ್ಲಿ ಉಳಿಯುತ್ತಿತ್ತು? ಈ ತರದ ಸಮಾಧಾನವಿದ್ದುದರಿಂದಲೇ ಜೀವ ಮನುಷ್ಯಗ್ಗಲು ಹಾತೊರೆಯುತ್ತದೆ. 'ಗುರುವಾಕ್ಯವು ಎಂದಿಗೂ ಸುಳ್ಳಾಗುವುದಿಲ್ಲವೆಂದು ವಿಧಿ ತೋರಿಸುವುದಕ್ಕಾಗಿ ಈ ರೀತಿ ಮಾಡಿಸಿತು!' ಎಂದು ತರ್ಕ ಹಾಕಿದಳು. ಇದೇ ಆಕೆ ತಂದುಕೊಂಡ ಧೈರ್ಯ.

ರಾಜಕುಮಾರಿ ಬಾಲಿಕೆಯಾಗಿದ್ದಾಗ—ಊರಲ್ಲಿ ಸಂಗಾತಿಗಳೊಂದಿಗೆ ಅಯ್ಯನವರ ಶಾಲೆಗೆ ಹೋಗುತ್ತಿದ್ದಳು. ಆಗ ಈಗಿನಂತೆ ಸರಕಾರೀ ಶಾಲೆಗಳಿರಲಿಲ್ಲ. ಆಶ್ರಮಗಳಿದ್ದುವು. ಅಲ್ಲಿಯೇ ಪಾಠಪ್ರವಚನಗಳು ನಡೆಯುತ್ತಿದ್ದುವು. ದಿನಾಲು ಶಾಲೆ ಬಿಡುವಾಗ ಎಲ್ಲ ಶಿಷ್ಯರು ಗುರುಗಳಿಗೆ ಪಾದಮುಟ್ಟಿ ನಮಸ್ಕಾರ ಮಾಡುತ್ತಿದ್ದರು. ರಾಜಕುಮಾರಿಯೂ ಮಾಡುತ್ತಿದ್ದಳು; ಎಲ್ಲರೂ ಮಾಡುತ್ತಿದ್ದರು. ಗುರುಗಳು ಈಕೆಗೆ "ಸತ್ತ ಹೆಣ ಕಾಯೋ ದತ್ತುಗೇಡಿ" ಎಂದು ಹರಕೆ ಕೊಡುತ್ತಿದ್ದರು. ಉಳಿದವರಿಗೆ "ಒಳ್ಳೆಯದಾಗಲಿ!" ಎಂದು ಹರಸುತ್ತಿದ್ದರು. ಎಂದರೆ ಗುರುಗಳಿಗೆ ಆಕೆಯ ಮೇಲೆ ದ್ವೇಷವಿತ್ತೆಂದು ತಿಳಿಯಬಾರದು ಯಾಕೆಂದರೆ ಆಗಿನ ಗುರುಗಳು ತ್ರಿಕಾಲಜ್ಞಾನಿಗಳಿರುತ್ತಿದ್ದರು ಚಿಕ್ಕವಳಾದ ಈಕೆ ಹರಕೆಯ ಅರ್ಥವನ್ನೇನು ಬಲ್ಲಳು? ಹುಟ್ಟು–ಸಾವುಗಳ ಅರ್ಥವು ಅಥವಾ ಕಲ್ಪನೆಯು ಹುಟ್ಟಿದ ಕೂಡಲೆ ನಿಮಗೆ ಗೊತ್ತಾಗುವುದೋ ? ! ಇಲ್ಲ.

ಇಷ್ಟರಲ್ಲಿ ಆಕಾಶವು ಕತ್ತಲೆಯಿಂದ ತುಂಬಿಹೋಯಿತು. ಪಕ್ಷಿಗಳು ತಮ್ಮ ತಮ್ಮ ಗೂಡುಗಳನ್ನು ಸೇರಿದುವು. ಉದ್ಯಾನದ ಸಮೀಪದಲ್ಲಿ ಯಾವ ಹಳ್ಳಿಯೂ ಇಲ್ಲ. ಮನುಷ್ಯರ ಸಂಪರ್ಕವೇ ಇಲ್ಲವೆಂದು ತೋರುತ್ತದೆ ಆ ತೋಟಕ್ಕೆ. ಆದರೆ ಅಲ್ಲಿ ಒಂದು ದೊಡ್ಡದಾದ ಬಂಗಲೆಯು ಬೆಳ್ಳಗೆ ಶೋಭಿಸುತ್ತಿತ್ತು. ಆಕೆ ತನ್ನ ಕರ್ಮವನ್ನರಿತು ಅಲ್ಲಿಯೇ ಕುಳಿತುಬಿಟ್ಟಳು. ನೀರಿಲ್ಲ. ಉಪಾಹಾರವಿಲ್ಲ. ಹೆದರಿಕೆಯು ಬರುತ್ತಿತ್ತು. ಎಷ್ಟೆಂದರೂ ಹೆಣ್ಣಲ್ಲವೆ? ಸತ್ತ ಮನುಜನೇ ತನ್ನ ಪತಿಯೆಂದು ತಿಳಿದು ಮುಖವನ್ನು ನೋಡಲು ಬಯಸುತ್ತಿದ್ದಳು. ಅಷ್ಟರಲ್ಲಿ ಚಂದ್ರನು ಕೂಡ ಸಹಾಯ ಮಾಡಿದನು. ಮೇಲಿನ ಬಟ್ಟೆಯನ್ನು, ದೇವರ ಚಿತ್ರವನ್ನು ಕಣ್ಣೆದುರು ತರುತ್ತ ತೆಗೆದು ನೋಡಿದಳು. ಒಬ್ಬ ರಾಜಕುಮಾರನನ್ನು ಕಂಡಳು. ಜೀವ ಬಂದಂತಾಯಿತು. ಕಟ್ಟಿನೊಳಗೆ ಒಂದು ಪತ್ರವಿತ್ತು. ಅದನ್ನು ಓದಿ ಮತ್ತಿಷ್ಟು ಸಂತೋಷಪಟ್ಟಳು. ಆ ಪತ್ರದಲ್ಲಿ "ನಾನು ಒಬ್ಬ ಅರಸನ ಮಗನು. ಮನೆಯಲ್ಲಿಯ ಕೆಲವು ಕಾರಣದ ಮೂಲಕ ನನ್ನನ್ನು ಹೊರಗೆ ಹಾಕಿದರು. ನಾನು ಆ ಮೇಲೆ ಇಲ್ಲಿಗೆ ಬಂದು ಸುಖವಾಗಿದ್ದೆನು. ಆದರೆ ಇದನ್ನು ಸಹಿಸದ ನನ್ನ ಸಹೋದರರು, ನನ್ನನ್ನು ಮಂಚದಲ್ಲಿ ಮಲಗಿಸಿ ಬಿಗಿಯಾಗಿ ಕಟ್ಟಿ ವಿಷ ಹಾಕಿದರು" ಎಂದಿತ್ತು. "ದೇವರ ಚಿತ್ತ ಹೇಗಾಗುವುದೋ ನೋಡುವಾ. ಇದೊಂದು ರಾತ್ರಿ ಪಾರಾದರೆ ಸಾಕು" ಎಂದು ಮಲಗಿಕೊಂಡಳು.

ಬೆಳಗಾದ ಕೂಡಲೆ ಎದ್ದು ದೇವರ ಧ್ಯಾನ ಮಾಡಿ, ಪತಿಗೆ ನಮಸ್ಕರಿಸಿ ಸುಮ್ಮನೆ ಕುಳಿತಳು. ಆ ತೋಟವು ಹನುಮಂತದೇವರ ಶಿಷ್ಯರ (ಕೋತಿಗಳ) ಬೀಡಾಗಿತ್ತು. ಅವು ಬೆಳಗಾದ ಕೂಡಲೆ ಮರದಿಂದ ಮರಕ್ಕೆ ಹಾರುತ್ತ ತಮ್ಮ ನಂಟರಿಷ್ಟರನ್ನು ಭೆಟ್ಟಿಯಾಗುತ್ತಿದ್ದುವು. ಈ ರೀತಿ ನಡೆಯುತ್ತಿರುವಾಗ ಒಂದು ಕೋತಿಯ ಮಗಳು ತನ್ನ ಮಗುವನ್ನು ಅಮುಚಿಕೊಂಡು ಗಿಡದಿಂದ ಗಿಡಕ್ಕೆ ಹಾರುತ್ತಿರುವಾಗ, ಮರಿ ಬಿದ್ದು ಸತ್ತುಬಿಟ್ಟಿತು. ತಕ್ಷಣವೇ ಎಲ್ಲ ಕೋತಿಗಳು ಕೂಡಿ, ಒಕ್ಕಟ್ಟಿನಿಂದ ನಾನಾ ಮರಗಳ ತೊಪ್ಪಲನ್ನು ತಂದು, ಒಟ್ಟುಗೂಡಿಸಿ, ಅರೆದು, ರಸವನ್ನು ಹಿಂಡಿ, ಸತ್ತಮರಿಗೆ ಹಚ್ಚಿ ೫ ನಿಮಿಷ ಬಿಸಿಲಲ್ಲಿ ಇಟ್ಟುವು. ಆದಕ್ಕೆ ಜೀವ ಮರಳಿ ಬಂದಿತು ಕೋತಿಗಳು ಸಂತೋಷದಿಂದ ಕೇಕೆ ಹಾಕಿ ಹೊರಟುಹೋದವು.

ಈ ದೃಶ್ಯವನ್ನು ರಾಜಕುಮಾರಿಯು ನೋಡುತ್ತ ಕುಳಿತಿದ್ದಳು. ಎಲ್ಲವನ್ನೂ ಜ್ಞಾಪಕದಲ್ಲಿಟ್ಟಳು. ದೇವರ ದಯೆ ಇದ್ದರೆ ಯಾಕೆ ಚೆನ್ನಾಗಬಾರದು ? ದೇವರ ನಾಮೋಚ್ಚಾರಣೆ ಮಾಡುತ್ತ, ತಾನೂ ಕೋತಿಗಳಂತೆ ನಾನಾ ತೊಪ್ಪಲುಗಳ ರಸವನ್ನು ಮಾಡಿ, ಮಡಿದ ರಾಜಕುಮಾರನ ಮೈಗೆಲ್ಲ ಸವರಿದಳು. ಬಿಸಿಲೊಳಗೆ ಒಣಗಿಸಿದಳು. ರಾಜಕುಮಾರ ಒಂದು ತಾಸಿನೊಳಗೆ ಮೈಯನ್ನು ಮಿಸುಕಿಸ ತೊಡಗಿದನು. ಇದನ್ನು ಕಂಡ ರಾಜಕುಮಾರಿ "ತನ್ನ ದೈವ ತೆರೆಯಿತು" ಎಂದು ಕುಣಿದಳು. ವಿಧಿ ಮಾತ್ರ ಇನ್ನೂ ಬೆನ್ನು ಬಿಟ್ಟಿರಲಿಲ್ಲ.

ಆ ತೋಟವನ್ನು ಗುಡಿಸಲು ಮಾತ್ರ ಇಬ್ಬರು ಸೇವಕಿಯರು ನಿತ್ಯವೂ ಎಲ್ಲಿಂದಲೋ ಬರುತ್ತಿದ್ದರು. ಅಂದು ಅವರು ಬರುತ್ತಿರುವಾಗ ಜಾವ ಸಮಯವಾಗಿತ್ತು. ಸೂರ್ಯನು ಬಹು ಮುದ್ದಾಗಿ ಕಾಣುತ್ತಿದ್ದನು. ಒಂದು ತರದ ಬಿಸಿಲು ಭೂಪ್ರದೇಶದ ಮೇಲೆ ಬಿದ್ದು ಶಾಂತಿಯನ್ನು ತಂದೊಡ್ಡಿತ್ತು. ಮೊದಲು ಅವರು ಗುಡಿಸಲು ಹುಲ್ಲಿನ ಮೈದಾನವನ್ನೆ ಹೊಕ್ಕರು. ಈ ವಿಚಿತ್ರವನ್ನು ನೋಡಿ ಬೆರಗಾದರು. ಕೆಟ್ಟ ಮನಸ್ಸು ಅವರಲ್ಲಿ ಪ್ರೇರಿತವಾಯಿತು. ತಾವು ಆತನನ್ನು ಬದುಕಿಸಿದೆವು ಎಂದು ಹೇಳಿ, ಆತನಿಂದ ಮೆಚ್ಚು ಪಡೆಯಬೇಕೆಂದು, ಹತ್ತಿರವಿದ್ದ ರಾಜಕುಮಾರಿಯನ್ನು ಬಾರಿಗೆಯಿಂದ ಹೊಡೆದು ಓಡಿಸಿದರು. ಇಬ್ಬರಿಗೆ ಒಬ್ಬಳು ಈಡಾದಾಳೆ ? ಮುಖವನ್ನು ಚಿಕ್ಕದಾಗಿ ಮಾಡಿಕೊಂಡು, ದೈವವನ್ನು ಹಳಿಯುತ್ತ ತನ್ನ ಕಷ್ಟಮಯ ಜೀವನದ ಚಿತ್ರವನ್ನು ನೆನೆಯುತ್ತ, ಹತ್ತಿರವಿದ್ದ ಬಾವಿಯ ಬಳಿ ಹೋಗಿ, ವಿಶ್ರಾಂತಿಗಾಗಿ ಕುಳಿತಳು. ಈ ಇಬ್ಬರೂ ಸೇವಕಿಯರು ತಲೆಯ ಬಳಿ, ಕಾಲ ಬಳಿ ಒಬ್ಬೊಬ್ಬರು ಕುಳಿತರು. ಅದೇ ಕ್ಷಣ ಅರಸನು ಎಚ್ಚತ್ತನು. ಹತ್ತಿರವಿದ್ದ ಇಬ್ಬರು ಹೊಲತಿಯರನ್ನು

ನೋಡಿದನು; ಬೆರಗಾದನು. "ಹಾಯ್ ಎಂಥ ದೈವ! ದೇವನು ಜೀವವನ್ನು ತನ್ನ ಹತ್ತಿರ ತೆಗೆದುಕೊಂಡು ಹೋಗಿ ಪುನಃ ಬಿಟ್ಟನಲ್ಲ! ಈ ರೀತಿ ಕೊಡಲು ಕಾರಣವೇನು? ಇದೇನು ನನ್ನ ಪೈರುಪಿಲ್ಲ ಹಸಿರು? ನನ್ನನ್ನು ಬದುಕಿಸಲು ಪ್ರಯತ್ನ ಮಾಡಿದವರು ಇವರೇ ಎಂದು ಕಾಣುತ್ತದೆ. ಇವರಿಗೆ ನಾನೇನು ಮೆಚ್ಚುಕೊಡಲಿ? ಮೆಚ್ಚು-ಕೊಡುವಷ್ಟು ಕೆಲಸವನ್ನಷ್ಟೇ ಇವರುಮಾಡಲಿಲ್ಲ; ಅದಕ್ಕಿಂತಲೂ ಅದ್ಭುತವಾದ ಕೆಲಸ ಮಾಡಿದ್ದಾರೆ. ಆದ್ದರಿಂದ ಇವರನ್ನು ಪಾಣಿ-ಗ್ರಹಣ ಮಾಡುತ್ತೇನೆ." ಎಂದು ನಿರ್ಧರಿಸಿ ಎದ್ದನು.

"ದೇವಿಯರೇ—ನೀವೇ ಏನು ನನ್ನನ್ನು ಬದುಕಿಸಿದವರು?" "ಅಹುದು ಜೀಯಾ. ಪ್ರಯತ್ನ ನಮ್ಮದು, ಫಲ ಆತನದು." ಅವರ ಮನಸ್ಸು ಏನನ್ನು ಬಯಸುತ್ತದೆ ಎನ್ನುವುದನ್ನು ತಿಳಿದುಕೊಳ್ಳ-ಬೇಕೆಂದು "ನಿಮಗೇನು ಮೆಚ್ಚು ಕೊಡಲಿ?" ಎಂದು ಕೇಳಿದನು.

"ನಾವೇನು ಬೇಡಬೇಕು ಜೀಯಾ. ನೀನು ನಮ್ಮ ಒಡೆ-ಯನು. ನೀನು ಎಷ್ಟು ಮೆಚ್ಚುಗಳನ್ನು ಕೊಟ್ಟರೂ ಅವು ಒಂದಿಲ್ಲ ಒಂದು ದಿನಸ ಮಾಯವಾಗುವುವೇ ಎಂದ ಮೇಲೆ, ಅವುಗಳ ಬೆಲೆ ನಿನಗೇ ಗೊತ್ತು. ಜೀವ ಹೋಗುತ್ತದೆ ಆದರೆ ಅದು ಅಮರ. ಆದ್ದರಿಂದ ನಮ್ಮ ಜೀವನವನ್ನು ಉದ್ಧಾರಮಾಡು!" ಎಂದು ಬೇಡಿಕೊಂಡರು. ಮೀನುಗಳನ್ನು ಹಿಡಿಯಲು ಹೋದ ಅಂಬಿಗನಿಗೆ ಮೀನುಗಳಿಂದ ತುಂಬಲ್ಪಟ್ಟ ಬುಟ್ಟಿ ಸಿಕ್ಕರೆ-ದೇವರನ್ನು ಬಯಸಿ ಆಶಿಯುತ್ತಿದ್ದವನಿಗೆ ದೇವರೇ ಕಷ್ಟಪಡದೆ ಸಿಕ್ಕರೆ—ಎಷ್ಟು ಸಂತೋಷ ವಾಗುವುದು? "ಹಾಗೆಯೇ ಆಗಲಿ. ನಿಮ್ಮ ಮಾತಿಗೆ ಒಪ್ಪಿಗೆ ಯನ್ನು ಕೊಡುತ್ತೇನೆ. ನಿಮ್ಮನ್ನು ಉದ್ಧರಿಸುತ್ತೆನೆ. ನಾನೂ ಪಾವನ ನಾಗುತ್ತೇನೆ. ನಡೆಯಿರಿ ಆ ಬಂಗ್ಲೆಗೆ—ಅಲ್ಲಿಯೇ ವಾಸವಾಗಿರುವಾ" ಎಂದು ಹೇಳಿ, ಮನೆಗೆ ಹೋಗಿ ಕೆಲ ದಿವಸಗಳನ್ನು ಕಳೆದರು.

ರಾಜಕುಮಾರಿ ತನ್ನ ಗುರಿಯನ್ನು ಸಾಧಿಸಿಕೊಳ್ಳಬೇಕೆಂಬ ಉದ್ದೇಶದಿಂದ, ತೋಟದ ಹತ್ತಿರವೇ ಒಂದು ಗುಡಿಸಿಲನ್ನು ಕಟ್ಟಿ-ಕೊಂಡು, ತೋಟದಲ್ಲಿಯ ಹಣ್ಣು-ಹಂಪಲುಗಳನ್ನು ತಂದು ತಿಂದು ಜೀವಿಸುತ್ತಿದ್ದಳು. ಎಂದಿಗೆ ತನಗೆ ಸುಖ ಒದಗುವುದೋ ಎಂದು, ಒಂದೊಂದು ದಿವಸವನ್ನು ಒಂದೊಂದು ಯುಗದಂತೆ ಕಳೆಯುತ್ತಿದ್ದಳು. ಸುಂದರಿಯಾದ ರಾಜಕುಮಾರಿ ಬತ್ತಿಹೋಗಿದ್ದಳು. ಬತ್ತಿಹೋಗಿ-ದ್ದರೂ 'ಗೆದ್ದೇನು' ಎಂಬ ಆಶಾಂಕುರವು ಕಣ್ಣಿನಲ್ಲಿ ಮಿನುಗುತ್ತಿತ್ತು.

ರಾಜಕುಮಾರಿಯ ತಂದೆ-ತಾಯಿಗಳು ಇದ್ದ ಒಬ್ಬ ಮಗಳನ್ನು ಕಳೆದುಕೊಂಡು, ನಿರ್ಗತಿಕರಾಗಿ ಎಲ್ಲಸ್ಥಳಗಳನ್ನೂ ಹುಡುಕಿಸಿ ಆಶಾ-ಭಂಗರಾಗಿ, ಹಾಸಿಗೆಯನ್ನು ಹಿಡಿದುಬಿಟ್ಟಿದ್ದರು. ಇಷ್ಟು ಪರಿಸ್ಥಿತಿ ಇದ್ದರೂ, ಅರಸನು ತನ್ನ ಕರ್ತವ್ಯವನ್ನು ಮಾಡುತ್ತಿದ್ದನು. ಪ್ರಜೆಗಳು ತನ್ನ ಮಕ್ಕಳಲ್ಲವೆ? ಅವರನ್ನು ಚೆನ್ನಾಗಿ ನೋಡಿಕೊಂಡರೆ ತನಗೆ ಮುಂದಿನ ಜನ್ಮದಲ್ಲಿಯಾದರೂ ಸದ್ಗತಿ ದೊರೆಯುವುದು—ಎಂದು ತಿಳಿದಿದ್ದನು. ಆದರೆ ಆತನ ಪತ್ನಿ ಸದಾ ಮಗಳ ಧ್ಯಾನ-ದಲ್ಲಿಯೇ ಇರುತ್ತಿದ್ದು, ಅನ್ನನೀರನ್ನು ಬಿಟ್ಟು ಪರಿಚಯ ಕೂಡ ಹತ್ತದಂತೆ ಆಗಿದ್ದಳು. ಮಗಳು ಎಂದು ಊರು ಬಿಟ್ಟು ಹೋದಳೋ ಅಂದೇ ಬರಗಾಲ ಬಿದ್ದಿತು. ಜನರೆಲ್ಲರೂ ಆಗ ಸಾವಿನ ದವಡೆಯಲ್ಲಿ-ದ್ದರು. ಅವರು ಸುಖವಿದ್ದಾಗಲೇ ದೇವರನ್ನು ಮರೆತಿರಲಿಲ್ಲವೆಂದ-ಮೇಲೆ, ಬಡತನ ಒದಗಿದ ಮೇಲಂತೂ ದೇವರಲ್ಲಿ ಭಕ್ತಿ-ಪ್ರೀತಿ ಹೆಚ್ಚಾಗುವುದು ಅವರಲ್ಲಿ ಸರ್ವಸಾಮಾನ್ಯವಾದ ಸಂಗತಿ.

ರಾಜನನ್ನು ಮದುವೆಯಾದ ಹೊಲತಿಯರು, ದಿನಾಲೂ ಖಾರಬ್ಯಾಳಿ, ಒಣತೊಕ್ಕು, ಎಣ್ಣೆ, ಅವರಿಪಲ್ಯೆ, ರೊಟ್ಟಿ, ಕಿಚಡಿ ಗೋದಿಯಹುಗ್ಗಿ-ಹೀಗೆ ತಾವು ಉಣ್ಣುವ ಅಡಿಗೆಯನ್ನೇ ಮಾಡಿ ಹಾಕು ತ್ತಿದ್ದರು. ಇದು ಆತನಿಗೆ ಸರಿಬರುವುದೆಂತು?! ನಿತ್ಯವೂ ಶ್ರೀಖಂಡ, ಬಾಲುಷಾ, ಗುಲಾಬ ಜಾಂಬೂನ ಮುಂತಾದುವುಗಳನ್ನು ತಿಂದು ಬೆಳೆದ ದೇಹ, ಇಂತಹದನ್ನು ಬಯಸೀತೇ? ಬಯಸಬಹುದು, ಕೇವಲ ಒಂದು ದಿವಸಕ್ಕಾಗಿ. ಯಾವ ಜೀವ ಯಾವಮಟ್ಟದಲ್ಲಿ ಹುಟ್ಟುತ್ತ-ದೆಯೋ ಅದೇ ಮಟ್ಟದ ಸಂಸ್ಕಾರದಲ್ಲಿ ಬೆಳೆಯುತ್ತದೆ. ಉತ್ತಮ

ಬೆಂದ ಹೃದಯ

(ಸುಂದರರೂಪಕಗಳ ಸಂಕಲನ)

ಬರೆದವರು: 'ಆನಂದಕಂದ'. ಬೇಗನೆ ಬೆಳಕಿಗೆ ಬರುವುದು.
ಬೇಕಾದವರು ಕೂಡಲೆ ಪತ್ರವ್ಯವಹಾರ ಮಾಡಬೇಕು.

— ನಮ್ಮಲ್ಲಿ ದೊರೆಯುವ ಬೇರೆ ಪುಸ್ತಕಗಳು —

ಲೇ: ಶ್ರೀ. ವಿ. ಕಿ. ಹಿತ್ತಲಮನಿ ಬಿ. ಎಸ್‌ಸಿ.

ನೀಲಲೋಚನೆ (ಕಥಾಸಂಕಲನ) ೧-೮-೦
ಚೆಂದುಟಿಯ ಮುತ್ತು ,, ೧-೮-೦
ಶರಾವತಿಯಿಂದ ಸಾಬರಮತಿ (ಪ್ರವಾಸ) ೧-೮-೦

ಸಂಪಾದಕ: ಶ್ರೀ. ಪ. ಸು. ಭಟ್ಟ

ಸೌಭಾಗ್ಯ (ಪತ್ರಸಂಕಲನ) ೧-೮-೦

ಲೇ: ಶ್ರೀ. ನಾ. ಮು. ಕೊರವಾರ

ಅರಸೆಯ ತಾರೆ (ಸಾಮಾಜಿಕ ನಾಟಕ) ೧-೮-೦

ಲೇ: ಶ್ರೀ. ಬಿ. ಆರ್. ವಾಡಪ್ಪಿ

ಗಾಳಿಗುದುರಿ (ಲಲಿತಪ್ರಬಂಧ ಸಂಕಲನ) ೧-೪-೦
ಜೀವನರಂಗ (ಕಥಾಸಂಕಲನ) ೧-೪-೦

ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ ಕೊಡಲಾಗುವುದು.

ಶರತ್ ಪ್ರಕಾಶನ ಮಂದಿರ, ಧಾರವಾಡ

ವರ್ಗದವರು ನಾಲ್ಕುದಿವಸ ಚಟ್ನಿಣಿ—ರೊಟ್ಟಿ ತಿಂದರೆ, ಅವರಿಗೆ ಚಪಾತಿ ಆಲುಪಲ್ಲೆ ಎಂದಾದರೂ ತಿಂದಿದ್ದೇವೆಯೋ ಇಲ್ಲೊ ಎಂದೆನಿಸುತ್ತದಲ್ಲವೆ ? ಮಧ್ಯಮ ಮತ್ತು ಕೆಳದರ್ಜೆಯವರು ಸರ್ವಸಾಮಾನ್ಯವಾಗಿ ಸಮವೇ ಸರಿ. ನಾವು ಒಂದು ದಿನವೂ ಬಿಡದೆ ೬-೭ ದಿವಸ ಭಕ್ಷ್ಯ ಭೋಜನಗಳನ್ನು ಮಾಡಿದರೆ, ರೊಟ್ಟಿಯನ್ನು ತಿನ್ನಬೇಕೆನ್ನಿಸುವುದಿಲ್ಲವೆ ? ಅದರಂತೆ ರಾಜನಿಗೆ ಬೇಸರು ಬಂದಿತು. ಏನು ಮಾಡಬೇಕೆಂದು ಆತನಿಗೆ ತೋರಲಿಲ್ಲ. ಉಳಿದ ರಾಜಕಾರಣಗಳ ಸಮಸ್ಯೆಗಿಂತ ಇದು ಬಹಳ ಕಠಿಣವಾಗಿತ್ತು. ಇದನ್ನು ಬಿಡಿಸಲೇ ಬೇಕೆಂದು ಹೊರಗೆ ತಿರುಗಾಡಲು ಹೊರಟನು. ಬಾವಿಯ ಹತ್ತಿರ ಬರುವ ವೇಳೆಗೆ, ರಾಜಕುಮಾರಿ ಅಲ್ಲಿ ಕುಳಿತಿದ್ದಳು. ಈಕೆಯ ಮುಖ ರಾಜಕಳೆಯಿಂದ ತುಂಬಿರುವುದು ಆತನಿಗೆ ತಿಳಿಯಿತು. ಈಕೆಯು ರುಚಿಯಾದ ಅಡಿಗೆ ಮಾಡಬಹುದೆಂದು ತಿಳಿದನು. ಈಕೆಯನ್ನು ಮನೆಗೆ ಹೋಗಿ ಕರೆಸುವುದು ಮಾನವೆಂದು ತಿಳಿದು ಹೊರಟನು.

ಮನೆಗೆ ಹೋದಕೂಡಲೆ ತನ್ನ ಹೆಂಡತಿಯರನ್ನು ಕರೆದು, ಬಾವಿಯ ಬಳಿಯಲ್ಲಿರುವ ಹೆಂಗುಸು ಅಡುಗೆ ಮಾಡಿಕೊಂಡು ಇರುವು. ದಾದರೆ ಕರೆದು ತನ್ನಿರಿ—ಎಂದು ಹೇಳಿದನು. ರಾಜಪತ್ನಿಯರು ಅದರಂತೆ ಮಾಡಿದರು. ಅರಸುಗುಮರಿ ಇದೇ ಸುಸಮಯವೆಂದು ತಿಳಿದು 'ಹೂಂ' ಗುಟ್ಟಿ ಹೊರಟಳು. ಅವರ ಮನೆಯಲ್ಲಿ ರಾಜಕುಮಾರಿ ಹೋಗಿ ಅಡುಗೆಯವಳಾಗಿ ಇದ್ದು, ರುಚಿರುಚಿಯಾದ ತಿನಿಸುಗಳನ್ನು ಮಾಡಿ, ರಾಜನ ಮನಸ್ಸನ್ನು ಸಂತೋಷಗೊಳಿಸಿದಳು. ಅಂತೂ ಈಕೆಯ ಜೀವನವು ಒಂದು ಮಾರ್ಗವನ್ನು ಹಿಡಿಯಿತು. ಇನ್ನು ಮುಂದೆ ಯಾವುದಾದರೂ ಉಪಾಯ ಹೂಡಬೇಕೆಂದು ನಿರ್ಧರಿಸಿರಿಸಿದಳು. ಪೀಡೆ ಅಥವಾ ಕಾಟ ಬರುವುದು ಸ್ವಲ್ಪ ದಿವಸಗಳು ಮಾತ್ರ. ಆದರೆ ಅದೇ ಯುಗವೆಂದೆನಿಸುತ್ತದೆ. ಸುಖದ ದಿನಗಳು ಬಹಳ ಹಗುರು. ಯುಗಯುಗಗಳು ಉರುಳಿದರೂ ಯುಗ ದಿನವಾಗುತ್ತಿದೆ ಸುಖದ ದಿನಗಳಲ್ಲಿ.

ಉದ್ಯಾನದ ಬಳಿಯೆಂಪರೆ ಆರು ಹರದಾರಿಯ ಮೇಲೆ ಒಂದು ಪಟ್ಟಣವಿತ್ತು. ಅಲ್ಲಿ ಮೂಲರಾಮದೇವರ ಮಂದಿರವಂತೆ. ಪ್ರತಿ ರಾಮನವಮಿಯ ದಿವಸ ಅಲ್ಲಿ ಜಾತ್ರೆ ನೆರವೇರುತ್ತಿತ್ತು. ಜಾತ್ರೆಗೆ ಸುತ್ತಲಿನ ೨೦ ಹರದಾರಿಯ ಜನರು ಬರುತ್ತಿದ್ದರಂತೆ. ದೊಡ್ಡ ದೊಡ್ಡ ಅಂಗಡಿಗಳು ಬಂದಿರುತ್ತಿದ್ದುವು. ಜಾತ್ರೆಯೆಂದ ಮೇಲೆ ಇನ್ನೇನು? ಅದೂ ಆ ಜಿಲ್ಲೆಯಲ್ಲಿ ದೊಡ್ಡ ಜಾತ್ರೆ. ಜಾತ್ರೆಗೆ ರಾಜನೂ ಹೋಗಬೇಕೆಂದು ನಿರ್ಧರಿಸಿದನು. ಜಾತ್ರೆಗೆ ಹೋಗಿ ಬಂದಮೇಲೆ ತಂದೆಯು ಮಕ್ಕಳಿಗೆ ಮಿಠಾಯಿಯನ್ನು ತಂದುಕೊಟ್ಟು ಸಂತಯಿಸುವುದಿಲ್ಲವೇ? ಆ ರೀತಿ ಈತನು ಹಿರಿಯರಾದ ತನ್ನ ಪ್ರೇಮದ ಜೀವನದ ಒಡತಿಯರನ್ನೂ, ಅಡಿಗೆಯವಳನ್ನೂ ಸಂತಯಿಸಬೇಕಾಗಿತ್ತು. ಅವರು ಕೇವಲ ಮಿಠಾಯಿ, ಪುಠಾಣಿ, ಬತ್ತಾಸುಗಳಿಂದ ಸಂತೋಷಹೊಂದುವರೇ—? ಇಲ್ಲ. ಅಂದಮೇಲೆ ಅವರಿಗೆ ಇಷ್ಟವಾದ ಪದಾರ್ಥಗಳನ್ನು ತರಬೇಕೆಂದು ನಿಶ್ಚಯಿಸಿ, ಅವರವರ ಬಯಕೆಗಳನ್ನು ಕೇಳಿದನು. ಅರಸನ ಪತ್ನಿಯರು ಸೀರಹಣಿಗೆ, ಬಾಚುಹಣಿಗೆಗಳನ್ನೂ, ಮಂಡಾಳು ಪುಠಾಣಿಗಳನ್ನೂ ತರಲು ಹೇಳಿದರು— "ಇಂಥ ಸಾಮಗಳಿಗೇನು ಜಾತ್ರೆಯಲ್ಲಿ ಬರಗಾಲವೆ? ಕೆಳಮಟ್ಟದ ಜನಾಂಗ; ಅವರಿಗೆ ಬೇಕಾಗಿರುವ ವಸ್ತುಗಳೂ ಇವೇ ತಾನೆ?" ಎಂದು ಸುಮ್ಮನಾದನು. ಆ ಮೇಲೆ ಅಡಿಗೆಯವಳಿಗೆ ಏನುಬೇಕೆಂದು ವಿಚಾರಿಸಿಬರಲು ತಿಳಿಸಿದಾಗ, ಅವರಲ್ಲೊಬ್ಬಳು ತಿಳಿದುಕೊಂಡು ಬಂದು, "ರಾಮಣ್ಣ, ಲಚುಮಣ್ಣರ ಗೊಂಬೆ ಬೇಕಂತೆ" ಎಂದು ಹೇಳಿದಳು. ಅರಸು ಆಕೆಯ ಚಾತುರ್ಯಕ್ಕೆ ಬೆರಗಾದನು. ಹಾಗೆಯೇ ಕುದುರೆಯನ್ನು ಏರಿ ಹೊರಟುಹೋದನು. ಅವನ ಕುದುರೆ ನಿಮಿಷಕ್ಕೆ ಆರು ಮೈಲು ಹೋಗುವುದೆಂದ ಮೇಲೆ, ಸುಮಾರು ಮೂರುನಿಮಿಷಗಳಲ್ಲಿ ಜಾತ್ರೆಯನ್ನು ಸೇರಿರಬಹುದು.

ಅಲ್ಲಿ ಜನರು ಕಿಕ್ಕಿರಿದು ನೆರೆದಿದ್ದರು. ಎಲ್ಲಿನೋಡಿದರೂ ತಲೆಗಳು, ರುಮಾಲುಗಳು, ಕರಿಯ ಟೊಪ್ಪಿಗೆಗಳು ಕಾಣುತ್ತಿದ್ದುವು. ಇರುವೆ ಹೋಗಲು ಕೂಡ ದಾರಿ ಇರಲಿಲ್ಲ. ಜಾತ್ರೆಯ ಸುತ್ತಲೆಲ್ಲಾ ಬಂಡಿಗಳನ್ನು ಬಿಟ್ಟಿದ್ದರು. ರಾತ್ರಿ ಗಾಳಿ ಬಡಿಯಬಾರದೆಂದು ಜನರು ಗಾಡಿಯ ಕೆಳಗೆ ಮಲಗಿ ನಿದ್ರಿಸುತ್ತಿದ್ದರು. ಇನ್ನೊಂದು ಕಡೆ ಮತ್ತೊಂದು ಕಡೆ, ಮೊಗದೊಂದು ಕಡೆ ಮತ್ತು ಒಂದು ಕಡೆ ಅಲ್ಲಲ್ಲಿ ತರುಣರ ತಂಡಗಳು ಹಾಸ್ಯೋಕ್ತಿಗಳನ್ನಾಡಿ ನಗುತ್ತಿದ್ದುವು. ತೀರು, ಎಳಿದೊಡನೆ ರಾಜನು, ದೇವರ ದರ್ಶನ ತೆಗೆದುಕೊಂಡು ಸೀರಹಣಿಗೆ ಬಾಚಣಿಗೆಗಳನ್ನು ನಿರಾಯಾಸವಾಗಿ ಕೇವಲ ನಾಲ್ಕಾಣೆಯಲ್ಲಿ ವ್ಯಾಪಾರ ಮಾಡಿದನು. ಅನಂತರ ಅಡುಗೆಯವಳು ಹೇಳಿದ ಗೊಂಬೆಗಳನ್ನು ಹುಡುಕಲು ಪ್ರಾರಂಭಿಸಿದನು. ಎಲ್ಲಿಯೂ ಸಿಗಲಿಲ್ಲ. ಪ್ರತಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ **ನೀಲ** ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ

ಗರ್ಭಾಶಯಕ್ಕೆ **ಜೀವಿನಿ** ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ **ಪಂಚವಟಿ** ರಾಮಬಾಣ

ಸದ್ವೈದ್ಯ ಶಾಲಾ, ನಂಜನಗೂಡು

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರಖಾನೆ

ಯೊಂದು ಅಂಗಡಿಯಲ್ಲಿಯೂ ಹುಡುಕಿಸಿದನು. ಹಳೆಯ ಕಿರುಕಳೆಗಳನ್ನು ತೆಗೆಸಿದನು. ಸಿಗಲಿಲ್ಲ. ಆಯಾಸವಾಯಿತೇ ವಿನಾ ಕಾರ್ಯವಾಗಲಿಲ್ಲ. ಕೊನೆಯಲ್ಲಿ ಜಾತ್ರೆಯ ಕೊನೆಯ ಮೂಲೆಯಲ್ಲಿ, ಕಿರಿದಾದ ಅಂಗಡಿಯೊಳಗೆ ಮುದ್ದಾದ ಕಿಟ್ಟದ ರಾಮ-ಲಕ್ಷ್ಮಣರ ಗೊಂಬೆಗಳಿದ್ದುವು. ಅವುಗಳಿಗೆ ಪ್ರತಿಯೊಂದಕ್ಕೆ ೩೦೦ ರೂಪಾಯಿಗಳನ್ನು ಕೊಟ್ಟುಕೊಂಡನು. ತತ್ ಕ್ಷಣವೇ ತೇಜಿಯನ್ನೇರಿ ಗಾಳಿಯು ಓಡಿದಂತೆ ಓಡಿ, ತನ್ನ ಮನೆಯನ್ನು ಸೇರಿ ಅವರವರ ವಸ್ತುಗಳನ್ನು ಅವರವರಿಗೆ ಒಪ್ಪಿಸಿದನು. ಅರಸನ ಸತಿಯರಲ್ಲಿ, "ಒಬ್ಬಳು ಏನs ಇಕಿ ಸೌರ್ಯ! ಆ ಕಿಟ್ಟಿದ ಗೊಂಬೆಗಳನ್ನೇನು ತೆಗೆದುಕೊಂಡು ಆಡತಾಳ ಕೂಸಿನ್ಹಾಂಗs ?" ಎಂದಳು. "ಏನೋ ಎಕ್ಕಾs—ಮೂರು ವರ್ಸದ ಕಂಡಮ್ಮನಂಗs ಅೃತೆ ಈ ಮೂಳಾ" ಎಂದಳು. ಇನ್ನೊಬ್ಬಳು—"ನಾವs ಹುರಾರ ನೋಡ್ಯs ಎವ್ವಾ! ಏನ್s ಸಾಕ್ಷಾತ್ ಪಾರತಮ್ಮ ಇದ್ದ್ಹಾಂಗ ಇದ್ದಾಳ ನಮ್ಮವ್ವ. ಬಲು ಚೆಲುವೆ" ಎಂದು ಮಾತನಾಡಿಕೊಂಡರು.

ಕೋತಿಯ ಮಗಳು ತನ್ನ ಮಗಳನ್ನು ಬದುಕಿಸಿದ ವಿಧಾನದಿಂದ, ಈ ಎರಡು ಗೊಂಬೆಗಳನ್ನೂ ರಾಜಕುಮಾರಿ ಬದುಕಿದಸಿಳು. ಕೆಲಸ ಮಾಡಿ ಉಳಿದ ವೇಳೆಯಲ್ಲಿ ಅವುಗಳ ಸಂಗಡ ಆಟವಾಡುತ್ತಿದ್ದಳು. ಒಂದು ಗುರುವಾರ ರಾತ್ರಿ ಆ ಹುಡುಗರಿಗೆ ನಿದ್ರೆಯೇ ಬರಲಾರದಾಯಿತು ಅವು ಈಕೆಗೆ ಕಥೆಹೇಳೆಂದು ಪೀಡಿಸತೊಡಗಿದುವು. ಆಕೆ "ಸುಮ್ಮನೆ ಮಲಗಿರಯ್ಯ, ರಾತ್ರಿ ಬಹಳವಾಯಿತು." ಎಂದಳು. "ಇಲ್ಲ. ಅಮ್ಮ ನೀನು ಒಂದಾದರೂ ಕಥೆ ಹೇಳಲೇ ಬೇಕು. ಇಲ್ಲವಾದರೆ ನಿನ್ನನ್ನು ಮಲಗಗೊಡುವುದಿಲ್ಲ." ಎಂದುವು. "ನನ್ನದೆ ಒಂದು ಕತೆ. ಏನು ಹೇಳಲಿ ಅಪ್ಪ!" "ಅದನ್ನೇ ಹೇಳು ಅಮ್ಮಾ" "ಹೇಳುತ್ತೇನೆ—ಹಾಗೆಯೇ ಆಗಲಿ; ನಿಮ್ಮಿಷ್ಟದಂತೆ ಆಗಲಿ." ಎಂದು ತನ್ನ ಹಿಂದಿನ ಕತೆಯನ್ನೆಲ್ಲಾ ಹೇಳಿ ಮುಗಿಸಿದಳು. ಹುಡುಗರು ಕಣ್ಣೀರನ್ನಿಟ್ಟು ತಾಯಿಯ ಮೇಲೆ ಕೈಕಾಲುಗಳನ್ನು ಹೇರಿ ನಿದ್ರೆ ಹೋದರು. ಅರಸನು ಇವರು ಮಲಗಿದ ಕೋಣೆಯ ಹತ್ತಿರದ ಕೋಣೆಯಲ್ಲಿಯೆ ಮಲಗಿದ್ದನು. ಅವನಿಗೂ ಕೂಡ ನಿದ್ರೆ ಬಂದಿರಲಿಲ್ಲ. ಅವನು ಮೊದಲಿನಿಂದ ಇಲ್ಲಿಯ ವರೆಗೆ ಎಲ್ಲ ಆಕೆಯ ಕತೆಯನ್ನು ಕೇಳಿಯಾದಮೇಲೆ, ಮೋಸ ಮಾಡಿದ ತನ್ನ ಹೆಂಡತಿಯರನ್ನು ಅದೇ ರಾತ್ರಿ ಕರುವಿನಿಂದ ತೊಗಲು ಕಿತ್ತುವಂತೆ ಮೆತ್ತಗೆ ಹೊಡೆದು, ಅಟ್ಟಿದನು. ಇತ್ತ ಈಕೆಯೊಡನೆ ಲಗ್ನವಾದನು. ಗುರುವಾರ ದಿವಸ ಇಷ್ಟೆಲ್ಲವಾದದ್ದು ಎಂದುಹೇಳಿ, ರಾಜಕುಮಾರಿ-ಅಲ್ಲ ಅರಸನ ಸತಿಯೂ ಗುರುವಾರಕ್ಕೆ ಬಹಳ ಗೌರವ ಕೊಡಹತ್ತಿದಳು. ಆಗಿನ ಜನರು ಗುರುವಾರದ ಮಹತ್ತ್ವವನ್ನು ಕೇಳಬೇಕಾಗಿದ್ದರೆ, ರಾಣಿಯಿಂದಲೇ ಕೇಳಿ ತಿಳಿದುಕೊಳ್ಳುತ್ತಿದ್ದರು. ನಿಜವಾದ ಸತಿ-ಪತಿಯರು ಅಂದೇ ಒಂದಾದರು. ದುಃಖದ ಬಾಳನ್ನು ಸುಖದ ಬಾಳನ್ನಾಗಿ ಮಾಡಿಕೊಂಡರು. ಗುರುವಾರವು ಸುಖವನ್ನು ತಂದೊಡ್ಡಿದ ದಿನವೆಂದು ಪ್ರತಿ ವಾರ ಉತ್ಸವ ಮಾಡುತ್ತಿದ್ದರು ರಾಜಕುಮಾರಿ ಗುರುವಿನ ಆಜ್ಞೆಯಂತೆ ಸತ್ತ ಹೆಣಕಾಯ್ದು ಸದ್ಗತಿ ಪಡೆದಳು.

ಸುಮನಾವತಿಯ ರಾಜನಿಗೆ ಒಂದು ಗುರುವಾರ ಕನಸು ಬಿದ್ದಿತು. ಆ ಕನಸಿನೊಳಗೆ ತನ್ನ ಮಗಳು ಪಟ್ಟ ಕಷ್ಟದ ಚಿತ್ರ, ಈಗ ಮಗಳಿರುವ ಚಿತ್ರ ಎಲ್ಲವೂ ತೆರೆಯ ಮೇಲೆ ಬಂದು ಹೋದುವು. ಮುಂದಿನ ಗುರುವಾರವೇ ಮಗಳನ್ನು ಹುಡುಕಲು ಹೊರಟು, ಅಂದೇ ಸಾಯಂಕಾಲ ಅಲ್ಲಿ ಉತ್ಸವ ನಡೆಯುತ್ತಿದ್ದ ವೇಳೆಗೆ ಪರಿವಾರ ಸಹಿತ ತಲುಪಿದರು. ಎಲ್ಲ ಕುಟುಂಬ ಒಂದುಗೂಡಿತು. ಬಾಳನ್ನು ಹೋಳು ಮಾಡಿಕೊಂಡು ಗೋಳಾಡಿದ ಸುಮನಾವತಿಯ ರಾಜದಂಪತಿಗಳು ಖೊಳ್ಳೆಂದು ನಕ್ಕು ಜೋಳ್ವಾದ ಮುಖವನ್ನು ಗುಲ್ಲಾಗಿ ಮಾಡಿಕೊಂಡು, ಅಳಿಯ ಮಗಳು ಮತ್ತು ಮೊಮ್ಮಕ್ಕಳನ್ನು ನೋಡಿ ಸಂತೋಷಪಟ್ಟರು. ಗುರುವಾರದ ಮಹತ್ತ್ವವು ಮತ್ತಷ್ಟು ಹೆಚ್ಚಿತು. ಆಗ ಎಲ್ಲರೂ ತಾವು ಪಟ್ಟ ಕಷ್ಟಗಳನ್ನು ಆಪ್ತವರ್ಗದ ಮುಂದೆ ಹೇಳಿಕೊಂಡರು. ಕೊನೆಗೆ "ವಿಧಿ ಲಿಖಿತ" ಎಂದು ಸುಮ್ಮನಾದರು.

ಸಾಹಿತ್ಯ ವಿಹಾರ

ಈ ತಿಂಗಳಲ್ಲಿ ಸಾಹಿತ್ಯವಿಚಾರಕ್ಕೆ ಸಂಬಂಧಿಸಿದುವಾಗಿ ಹಲವು ಓಲೆಗಳು ಬಂದಿವೆ. ಅವುಗಳಲ್ಲಿ ವಿಶೇಷ ವಿಷಯಗಳಿಂದ ಕೂಡಿದು-ವೆಂದೆನಿಸಿದ ಮೂರು ಓಲೆಗಳನ್ನು ಇಲ್ಲಿ ಪ್ರಕಟಿಸಲಾಗಿದೆ. ಕೊನೆಯ ಓಲೆಯು ನಮ್ಮ ಸಂಪಾದಕೀಯಕ್ಕೇ ಸಂಬಂಧಿಸಿದುದು; ಆದುದರಿಂದ ಅದರ ಬಗೆಗೆ ನಮ್ಮ ಅಭಿಪ್ರಾಯವನ್ನೂ ಪ್ರಕಟಿಸಲಾಗಿದೆ. ಮಿಕ್ಕುವೆರಡೂ ಸದ್ಯದ ಸಾಹಿತ್ಯಪ್ರಪಂಚದ ಚಟುವಟಿಕೆಗಳ ವಿಷಯವಾಗಿ ಇರುವುದರಿಂದ, ಅವುಗಳನ್ನು ಕುರಿತು ಕನ್ನಡ ವಾಚಕ ವರ್ಗವೆ ಸಮತೋಲ ಬುದ್ಧಿಯಿಂದ ವಿಚಾರ ಮಾಡಬೇಕು.

— ಸಂಪಾದಕರು

೧ನೆಯ ಓಲೆ

ಕನ್ನಡದ ಜನರಲ್ಲಿ ಒಡಕು ನಡೆತಗಳು

ಕನ್ನಡವು 'ಕಾವೇರಿಯಿಂದಮಾ ಗೋದಾವರಿ' ತನಕವಿದ್ದ ಆದೊಂದು ಕಾಲದ ಹೆಮ್ಮೆಯನ್ನು ನಾವು ಆಡದಿಲ್ಲ. ಅದು ಮಾತ್ರವಲ್ಲ, ಅದಕ್ಕಿಂತಲೂ ಹಿಂದಿನ ಅರಸರಾದ ಕದಂಬರು ಆಲುಪರು ಚಾಳುಕ್ಯರು ಕನ್ನಡಿಗರೆಂಬ ಹಿರಿಮೆಯನ್ನೂ ನಾವು ಸಾರದೆ ಇಲ್ಲ. ಅದೇ ಕಾಲದಿಂದ ಇಂದಿನತನಕ ಚರಿತ್ರೆಯ ಒಂದೊಂದು ಪುಟಗಳನ್ನು ತಿರುವಿ ಹಾಕಿದರೆ, ಕನ್ನಡದ ಜನರಲ್ಲಿ ಒಡಕು ನಡತೆಗಳು ಯಥೇಷ್ಟವಾಗಿ ಉದಾಹರಣೆಗಳಾಗಿರುತ್ತವೆ: ರಾಷ್ಟ್ರಕೂಟ-ಚಾಳುಕ್ಯ ರಾಜವಂಶಗಳ ಅರಸರು, ತಂತಮ್ಮೊಳಗಿನ ಒಡಕುಗಳಿಂದ ಪುನಃ ಪುನಃ ತಮ್ಮತನವನ್ನು ಕಳಕೊಂಡು ಇದ್ದರೆಂದು ತಿಳಿವುದು. ಈ ಕೆಟ್ಟ ನಡತೆಯು ಅಂದಿನಿಂದ ಇಂದಿನ ವರೆಗೂ ಧಾರಾವಾಹಿಯಾಗಿ ಕೆಲವೊಮ್ಮೆ ಇದ್ದರೆ, ಕೆಲವೊಮ್ಮೆ ಅಂತರ್ಗಾಮಿಯಾಗಿ ನೆಲೆನಿಂತುದು ಕಂಡುಬರುವುದು. ಆಂಗ್ಲರ ಆಗಮನಕ್ಕಿಂತ ಮುಂಚಿತವಾಗಿ ಮುಸಲ್ಮಾನೀ ಬಾದಶಾಹಿಗಳು ನಮ್ಮ ದೇಶದರಸರ ಒಡಕು ನಡತೆಗಳಲ್ಲಿ ಅವಕಾಶ ಹೊಂದಿ, ಈ ಭಾರತಕ್ಕೆ ಒಳಬಂದರೆಂದು ಚರಿತ್ರೆಯಿಂದಲೇ ತಿಳಿಯುವುದಷ್ಟೇ! ಅವರಂತೆ ಆಂಗ್ಲೇಯರೂ ಇಲ್ಲಿ ವ್ಯಾಪಾರ-ವ್ಯವಹಾರಕ್ಕಾಗಿ ನೆಲೆಗೊಂಡು, ಈ ರಾಜ್ಯದೊಳಗಿನ ಪರಸ್ಪರ ದ್ವೇಷದಿಂದ ಹುಟ್ಟಿದ ಯುದ್ಧಾದಿ ಅವಸರಗಳಿಂದ ತಮಗೆಡೆಯಾಗಿಸಿ, ಇಡೀ ಭಾರತವನ್ನೇ ಆಕ್ರಮಿಸಿ, ಸಾರ್ವಭೌಮ ಪದವಿಯನ್ನು ಮೆರೆಯಿಸಿದರು. ಅಷ್ಟು ಮಾತ್ರವಲ್ಲ, ಭಾರತದೇಶದ ಪ್ರತಿಯೊಂದು ಭಾಗದ ಜನರೊಳಗೆ ಐಕ್ಯವಾಗದಂತೆ ಆಡಳಿತ ಹಾಗೂ ವ್ಯವಹಾರಗಳನ್ನು ಕಲ್ಪಿಸಿದರು. ಆ ದೆಸೆಯಿಂದಾಗಿ ಒಂದೆಡೆಯವರಿಗೂ ಇನ್ನೊಂದೆಡೆಯವರಿಗೂ—ಒಂದೇ ಒಂದುನುಡಿ ನಡೆಗಳಿರುವವರಲ್ಲಿ—ಪರಸ್ಪರ ಸಂಪರ್ಕ–ವ್ಯವಹಾರಗಳು ಕಡಿಮೆಯಾದುವು. ಇದು ಸರಿಯಾದ ಕ್ರಮವಲ್ಲೆಂದು ಈ ದೇಶದ ಬೇರೆಬೇರೆಡೆಯ ಪ್ರಾಮುಖ್ಯ ವ್ಯಕ್ತಿಗಳು ವಿಚಾರಿಸಿ, ಭಾಷಾವಾರು ಪ್ರಾಂತ್ಯಗಳಾಗಲೇಬೇಕೆಂದು ಒಮ್ಮತಕ್ಕೆ ಬಂದರು. ಈ ಹಿಂದೂದೇಶದ ರಾಜಕೀಯ ವಿಚಾರಗಳನ್ನು ವಿಚಾರಿಸಲೆಳಸಿದ ಅಖಿಲ ಭಾರತ ಕಾಂಗ್ರೆಸ್ಸು ಸಂಸ್ಥೆಯವರೂ ಈ ತತ್ತ್ವವನ್ನೊಪ್ಪಿದರು. ದೇಶದ ಸ್ವಾತಂತ್ರ್ಯಪ್ರಾಪ್ತಿಯಾದೊಡನೆ ಭಾಷಾವಾರು ಪ್ರಾಂತ್ಯಗಳನ್ನು ನಿರ್ಮಿಸುವ ವಿಷಯಕ್ಕೆಳಸುವುದೆಂದು ಸಾರಿದರು. ಈಗ ಸ್ವ-ದೇಶದ ಸ್ವಾತಂತ್ರ್ಯವು ಲಭಿಸಿ ನಾಲ್ಕಾರು ವರ್ಷಗಳಾದುವು. ಆದರೆ, ಈ ಮೇಲಿನ ಪ್ರಾಂತೀಕರಣಕ್ಕೆ ಮಾತ್ರ ಅವಕಾಶವಿಲ್ಲವೆಂದು ಅಲ್ಲೊಮ್ಮೆ ಇಲ್ಲೊಮ್ಮೆಯೆಂಬಂತೆ ದೇಶದ ನಾಯಕರು ಆಡುತ್ತಿದ್ದಾರೆ. ಇತ್ತೀಚೆಗೆ ಕರ್ನಾಟಕ ಸೀಮಾನಿರ್ಣಾಯಕ ಸಮಿತಿಯನ್ನು ಏರ್ಪಡಿಸಿದ್ದಾಗಿದೆಯೆಂದೂ, ಮುಂದಿನ ವರ್ಷದ ಮಧ್ಯಕಾಲದೊಳಗೆ ಆ ಸಮಿತಿಯು ವರದಿಯೊಪ್ಪಿಸುವುದೆಂದೂ ಕೇಳುತ್ತೇವೆ. ಇದು ತಕ್ಕ ಮಟ್ಟಿಗೆ 'ಕಾಲಕ್ಷೇಪ' ವಾಗದಂತೆ ಎಲ್ಲೆಡೆಯ ಕನ್ನಡಿಗರೂ–ವಿಶೇಷವಾಗಿ ಸೀಮಾಪ್ರದೇಶದಲ್ಲಿರುವ ಜನತೆಯು–ಜಾಗರೂಕರಾಗಬೇಕು. ಕೆಲವೊಂದು ಚಿಕ್ಕ ಪುಟ್ಟ ಒಳಸಂಚಿನಿಂದಾದರೂ ಅಜಾಗರೂಕತೆಯಾಗದಂತೆ ಎವೆಯಿಕ್ಕದೆ ನಿರೀಕ್ಷಿಸಿ, ನಾಡಿನ ಭದ್ರತೆಗೆ ಮನಗೊಡಬೇಕಾಗಿದೆ!

ಆಧುನಿಕ: ಈಯೆಡೆಯಲ್ಲಿ ಬೇರೆ ಕೆಲವು ವಿಷಯಗಳನ್ನು ಪ್ರಸ್ತಾಪಿಸಿದರೆ ಅನೌಚಿತ್ಯವಾಗಲಾರದು. ಕನ್ನಡ ಪ್ರಾಂತ್ಯದ ಕೆಲವೊಂದು ವಿಷಯ–ವೈಶಿಷ್ಟ್ಯಗಳನ್ನು ಬೇರೆಡೆಯ ಬೇರೆಭಾಷೆಯ ಪತ್ರಿಕೆಗಳಲ್ಲಿ ಪರಿಚಯಿಸುವ ಸದವಕಾಶವನ್ನು ತಾನಾಗಿ–ಆ ಪತ್ರಿಕೆಯವರಿಂದ–ಪಡೆದ ನಮ್ಮ ಕನ್ನಡದ ಧುರೀಣರೆನ್ನಿಸಿದವರು ತುಸ ಸಂಕೋಚ ಭಾವನೆಯನ್ನು ತಳೆದು, ಪ್ರವರ್ತಿಸುವುದು ವಿಷಾದಕರವೆನ್ನದೆ ಗತ್ಯಂತರವಿಲ್ಲ. ಅವುಗಳೆಂದರೆ:— ಕನ್ನಡದ ವೃತ್ತಪತ್ರಿಕೆಗಳ ವಿವರಣಾತ್ಮಕ ಲೇಖನವನ್ನು ಬೊಂಬ್ಬಾಪತ್ರಿಕೆಗೆ ಶ್ರೀಮಾನ್, ಡಿ. ವಿ. ಗುಂಡಪ್ಪನವರು ಕಳೆದ ವರ್ಷ ಬರೆದಿದ್ದರು. ಅದು ತೀರ ಅತೃಪ್ತಿಕಾರಕವೆಂದು ಓದಿದವರು ಹೇಳದಿರಲಾರರು ಇಂತಹ ಸಮರ್ಥರು ಹೀಗೆ ಬರೆವುದಲ್ಲ!!! ಇನ್ನೊಂದಾಗಿ, ಕನ್ನಡದ ಲೇಖನ

ವಿಕಾಸಕ್ರಮವನ್ನು ನಿರೂಪಿಸಿ ಶ್ರೀಮಾನ್, ಶಿವರಾಮ ಕಾರಂತರು ಕಳೆದ ಇಸವಿಯಲ್ಲಿ ಮುಂಬಾಯಿ ಪತ್ರಿಕೆಯೊಂದರಲ್ಲಿ ಬರೆದುದೆಂದರೆ, ಹತ್ತೊಂಬತ್ತನೆಯ ಶತಕದ ಕೊನೆ ಹಾಗೂ ಈ ಶತಕದ ಮೊದಲ ಕೆಲ ದಶಕಗಳಲ್ಲಿ ಆದ ಲೇಖನ ಹಾಗೂ ಗ್ರಂಥಪ್ರಕಟನೆಯಕ್ರಮವನ್ನು ಮಾತ್ರ—ಕೆಲವೇ ಮಂದಿಯ—ರೀತಿಯ ನಿದರ್ಶನದಿಂದ ಕೂಡಿದುದು! ಇದು ತೀರ ಸಂಕೋಚಭಾವವಲ್ಲದೆ ಬೇರೇನು? ಇಂತಹ ಸನ್ಮಾನ್ಯರು ಹೀಗೆ ಬರೆವುದು ಅದೆಷ್ಟಕ್ಕೂ ಹಿತವಲ್ಲೆಂದು ವಿನಯದಿಂದಲೇ ಸೂಚಿಸುತ್ತೇವೆ. ಇದರಂತೆ, ಇತ್ತೀಚಿಗೆ ಕನ್ನಡ ಸಾಹಿತ್ಯದ 'ವಿಹಂಗಮಾವಲೋಕನ' ಎಂಬ ಶಿರೋನಾಮೆಯಿಂದ ಬೆಂಗಳೂರ ಶ್ರೀಮಾನ್, ಅ. ನ. ಕೃಷ್ಣರಾಯರೂ ಕಳೆದ ಇಸ್ವಿಯ ಕೊನೆಯಲ್ಲಿ ತಿಳಿದ, ತನ್ನ ಬಳಗದವರನ್ನೆಲ್ಲಾ ಹೆಸರಿಸುವ ಉದ್ದೇಶದಿಂದಲೇ—ಬರೆದ—ಹಾಗೂ ಕಲಬೆರಕೆಯಾಗಿ ಕೆಲವೊಂದು ಮಹಾಜನರನ್ನೂ ಹೆಸರಿಸದ **ಕ್ಷುಲ್ಲಕ ಲೇಖಿಕೆಯಲ್ಲದೆ** ಇತ್ತೀಚಿಗೆ ಇಪ್ಪತ್ತೈದನೆಯ **ಕಾದಂಬರಿಯೊಂದು**—ಕನ್ನಡಮ್ಮನ ಗುಡಿಯಲ್ಲಿ—ಬರೆದುದರಲ್ಲಿ ಬೇರೆ ಬೇರೆ ಭಾಗದ ಸುಪ್ರಸಿದ್ಧರನ್ನು ಹಾಗೂ ಅಭ್ಯಾಸುಕರನ್ನು ಹೀಕರಿಸಲೋಸುಗವೇ ಬಯಸಿದುದು—ಬಣ್ಣಿಸಿದುದು—ವಿಚಿತ್ರತಮವೂ ವಿಷಾದಕರವೂ ಅಲ್ಲದೆ ಮತ್ತೇನು? ಇದೇನು, ಆತ್ಮಶ್ಲಾಘನೆಯೋ?

ಒಟ್ಟಾರೆ. ಕನ್ನಡದ ಜನರಲ್ಲಿರುವ ಕೆಲವೊಂದು ಒಡಕು ನಡತೆಗಳನ್ನು—ಇತ್ತೀಚಿನವುಗಳನ್ನು—ಇಲ್ಲಿ ನಮೂದಿಸಿ, ಇಂತಹ ಒಡಕುಗಳು ಅಳಿದುಹೋಗಿ ಕನ್ನಡದ ಸರ್ವತೋಭದ್ರವಾದ ಮುನ್ನಡೆಗೆ ತಕ್ಕ ಜಾಗೃತಿಯುಂಟಾಗಲೆಂದು ಶ್ರೀದೇವರನ್ನು ನಿರಂತರವೂ ಪ್ರಾರ್ಥಿಸುತ್ತೇವೆ ತಥಾಸ್ತು! ತತ್ಸತ್!

— ಕೆ. ವೆಂಕಟರಾಯಾಚಾರ್ಯ, ಸುರತ್ಕಲ್ಲು.

೩ನೆಯ ಓಲೆ

'ಕನ್ನಡಮ್ಮನ ಗುಡಿಯಲ್ಲಿ!'

ಶ್ರೀ. ಅ. ನ. ಕೃಷ್ಣರಾಯರ ೨೫ನೆಯ ಕಾದಂಬರಿ. ಹಿಂದುಸ್ತಾನ್ ಪ್ರಕಾಶನ ಬೆಂಗಳೂರು ಅವರು, ರಾಯರ ಈ ಕಾದಂಬರಿಯೊಂದಿಗೆ ಪ್ರಕಟನಾಕ್ಷೇತ್ರದಲ್ಲಿ ಕಾಲಿರಿಸಿದ್ದಾರೆ.

ಚಾರಿತ್ರ್ಯ ಪೂರ್ಣ ಸಾಹಿತ್ಯ ಬಯಸುವವರು ಇದನ್ನು ಓದಲೇ ಬಾರದು. ಇದೊಂದು ಹೊಲಸಿನ ಕಂತೆ. ಪ್ರತಿಯೊಂದು ಪುಟದ ಪ್ರತಿಯೊಂದು, ವಾಕ್ಯದಲ್ಲಿಯೂ ತನಗೆ ಬೇಡಾದವರ ಬಗ್ಗೆ ಈರ್ಷೆಯ ವಿಷ ಕಾರಿದ್ದಾರೆ. ಸಾಹಿತ್ಯಕ್ಕೊಂದು ಚಾರಿತ್ರ್ಯವಿದೆಯೆಂಬುದನ್ನು ಮರೆತಿರುವ ರಾಯರು ಏನನ್ನು ಮಾಡಲಿಕ್ಕೂ ಹೇಸಲಿಕ್ಕಿಲ್ಲ.

ಪ್ರಾರಂಭ ಪ್ರೊ. ರಂ. ಶ್ರೀ. ಮುಗಳಿಯವರ 'ಅನ್ನ' ದಂತೆ. ಭಾರತ ಮಾತೆಯ ಆದೇಶದ ಮೇರೆಗೆ ಕನ್ನಡತಾಯಿ ದೇಶಪರ್ಯಟನಕ್ಕಾಗಿ ಹೋಗುತ್ತಾಳೆ. ಅಲ್ಲಿಂದ ಕಥೆ ಮುಂದೆಸಾಗಿ, ಕನ್ನಡತಾಯಿ ಭಾರತಾಂಬೆಯ ಹತ್ತಿರ ಬಂದು, ತನ್ನ ನಾಡಿನವರ ಬಗ್ಗೆ, ತಾನು ಕಂಡುದನ್ನು ಹೇಳಿಕೊಳ್ಳುತ್ತಾಳೆ. ಇಲ್ಲಿಗೆ ಕಥೆ ಸಮಾಪ್ತಗೊಳ್ಳುತ್ತದೆ. ಇಡೀ ನಾಡನ್ನು ಸುತ್ತಿ ಬಂದಾಗ ಕನ್ನಡಾಂಬೆಯ ಕಣ್ಣಿಗೆ ಬೀಳುವ ವ್ಯಕ್ತಿಯೆಂದರೆ ಮಹಾಸಾಹಿತಿ ಮೂರ್ತಿಯೊರ್ವನೆ! ಹಾಸ್ಯಾಸ್ಪದ.

ಪ್ರಾರಂಭದ ಪುಟಗಳನ್ನೋದುತ್ತ ಹೋದಾಗ, ರಾಯರ ಅದೇ ಮೋಹಕ ಶೈಲಿ, ವಿಷಯಪ್ರತಿಪಾದನೆಯ ವೈಖರಿ ಗೋಚರಿಸದಿರವು. ಆಯಿತು, ಹತ್ತಾರು ಪುಟ ದಾಟಿದರೆ ಪ್ರಾರಂಭ ಅವರ ಕಸದ ಕಂತೆ. 'ಅಯ್ಯೋ' ಎನಿಸುತ್ತದೆ. 'ಹೀಗಾದರಲ್ಲ' ಎಂದು ಕನಿಕರ ಮೂಡುತ್ತದೆ ಓದುಗನಲ್ಲಿ.

ಪ್ರತಿಯೊಂದು ಪುಟದಲ್ಲಿ ನೋಡಿದಾಗ್ಯೂ ಕಾದಂಬರಿಯ ನಾಯಕ, ಹಿಂದೆ 'ಸಾಹಿತ್ಯರತ್ನ' ದಲ್ಲಿ ಬಂದ ಅದೇ ಮೂರ್ತಿ (ಕೃಷ್ಣರಾಯ) 'ನಾನೇ ಕೃಷ್ಣರಾಯ' ಎಂದು ಹೇಳಿಕೊಳ್ಳುತ್ತಾನೆ. 'ಇವನು ಕೃಷ್ಣರಾಯನಲ್ಲ, ಕಾದಂಬರಿಯ ನಾಯಕ ಮೂರ್ತಿ!' ಎಂದು ಭಾವಿಸಿ ಓದಿದರೂ, ಮತ್ತುಮತ್ತು ಆ ಮೂರ್ತಿ 'ನಾನು ಕೃಷ್ಣರಾಯ' ಎಂದೇ ಘೋಷಿಸುತ್ತದೆ.

ತಮ್ಮ ಕೃತಿಗಳ ಬಗ್ಗೆ ವಿಮರ್ಶೆ ಬಂದಾಗ 'ವಿಮರ್ಶಕರನ್ನು ಕುರಿತು 'ವಿಮರ್ಶಕ ಕೃತಿವಿಮರ್ಶೆ ಮಾಡಿಲ್ಲ. ಕೃತಿಕರ್ತನ ವಿಮರ್ಶೆ ಮಾಡಿದ್ದಾರೆ' ಎಂದು ಎಂದಿನಿಂದಲೂ ನುಡಿಯುತ್ತ, ವಿಮರ್ಶಕರ ಬಗ್ಗೆ ಪ್ರತ್ಯೇಕ ಗ್ರಂಥಗಳನ್ನೇ ಬರೆಯುತ್ತ ಬಂದಿರುವ ರಾಯರಿಗೆ 'ಮೂರ್ತಿ' ಕೃಷ್ಣರಾಯನೆಂದು ಹೇಳಿದರೆ ರುಚಿಸಲಿಕ್ಕಿಲ್ಲ. ಓದುಗರನ್ನು ಈ ನಾಯಕ ಒತ್ತಾಯಗೊಳಿಸುತ್ತಾನೆ ಹಾಗೆ ಹೇಳಲು. ಅದಕ್ಕೆ ಓದುಗ, ವಿಮರ್ಶಕ ಏನುಮಾಡಲಾದೀತು?

ಮೂರ್ತಿಯು, ತನ್ನ ಕೃತಿಯನ್ನು ಮೆಚ್ಚದವರಿಗೆ, ತನ್ನ ಭಾಷಣದ ಬಗೆ ಹೊಗಳದವರಿಗೆ, ತನಗೆ ಎದುರು ಆಡಿದವರ ಬಗ್ಗೆ ಅವ್ಯಕ್ತವಾಗಿ, ಅವಹೇಳನಮಾಡಿ ಅಪಮಾನಗೊಳಿಸಿದ್ದಾನೆ ಇಲ್ಲಿ.

ತನ್ನನ್ನು ಕುರಿತು ಪ್ರಶಂಸೆ ಮಾಡಿದವರ ಬಗೆಗೂ, ತಾನು ರಚಿಸಿದ ಸಾಹಿತ್ಯವೇ ಸಾಹಿತ್ಯ, 'ನೀನೊರ್ವನೇ ಕ್ರಿಯಾಶೀಲ ಲೇಖಕ' ಎಂದವರ ಬಗ್ಗೆ ಪೂಜೆ ನಡೆದಿದೆ, ಹೊಗಳಿಕೆ ನಡೆದಿದೆ ಇಲ್ಲಿ.

ಇಂಗ್ಲೀಷ ಕಲಿಯಲಾರದ ತಪ್ಪಿಗಾಗಿ ಬೆಟಗೇರಿ ಕೃಷ್ಣಶರ್ಮರನ್ನು ಕುರಿತು ವ್ಯಂಗ್ಯವಾಗಿ ಅಣಕವಾಡಿರುವ ಈ ರಾಯರ ಹೇಯ ಕಾರ್ಯ ನೋಡಿದರೆ; ಯಾವವ್ಯಕ್ತಿ ತನ್ನ ಪ್ರಥಮ ಕಾದಂಬರಿಯನ್ನು ರಾಯರಿಗೆ, ಕನ್ನಡದ ಹಿರಿಯ ಕಾದಂಬರಿಕಾರನೆಂದು ಸನ್ಮಾನಿಸಿ ಅರ್ಪಿಸಿದ ಒರ್ವ ಲೇಖಕ (ನಿರಂಜನ)ರ ಬಗ್ಗೆ ಓದುಗರಲ್ಲಿ ತಪ್ಪು ಕಲ್ಪನೆ ಹುಟ್ಟುವಷ್ಟರಮಟ್ಟಿಗೆ ಬರೆಯುವ ಇವರ ಹೊಲಸು ಗುಣ, ಈ ಅಪವಿತ್ರ ಹೃದಯ, ಇವರ ವ್ಯಕ್ತಿತ್ವದ ಪ್ರತೀಕವಾಗಿ ಈ 'ಕನ್ನಡಮ್ಮನ ಗುಡಿಯಲ್ಲಿ' ನಿಂತಿದೆ.

ಮೂರ್ತಿ, ಕೀರ್ತಿಯ ಹುಚ್ಚು ಹಂಬಲು ಹತ್ತಿ, ಕೀರ್ತಿಯ ಹಿಂದೆ ಹುಚ್ಚನಂತೆ ತಿರುಗಿದ್ದಾನೆ ಇಲ್ಲಿ—ತನ್ನ (ತನಗಾಗಿ) ನಾಯಕನಿಗಾಗಿ, ನಾಯಕನ ಕೀರ್ತಿ, ಪ್ರತಿಷ್ಠೆ ಹೆಚ್ಚಿಸಿಕೊಳ್ಳುವುದಕ್ಕಾಗಿ,

ರಾಯರು ನಾಡಿನ ಪುಣ್ಯವ್ಯಕ್ತಿಗಳನ್ನು ಮನ ಬಂದಂತೆ ಉಪಯೋ-
ಗಿಸಿಕೊಂಡಿದ್ದಾರೆ. ಇದು ಶುದ್ಧ ತಪ್ಪು. ಒರ್ವ ಜವಾಬ್ದಾರಿ
ಲೇಖಕನು ಮಾಡುವ ಕಾರ್ಯವಲ್ಲವಿದು.

"ಎಲ್ಲ ಸಂಸ್ಕೃತಿಯ ಬಗ್ಗೆಯೂ, ಎಲ್ಲ ಧರ್ಮದ ಬಗ್ಗೆಯೂ ನಾನು ಬರೆದಿದ್ದೇನೆ." ಎಂದು ಹೇಳಿಕೊಳ್ಳುವ ರಾಯರಿಗೆ, ಮಾನವ ಸಂಸ್ಕೃತಿಯ ಅರ್ಥವೇ ಇನ್ನೂ ಆಗಿಲ್ಲವೆಂದು ಹೇಳಬಹುದು ಈ ಕೃತಿಯ ಅವಗಾಹನೆಯಿಂದ. ಮೂರ್ತಿ (ಕೃಷ್ಣರಾಯ) ನಾಡಿನ ಸುತ್ತಲೂ ದಿಗ್ವಿಜಯ ಕೈಕೊಂಡಾಗ, ಧಾರವಾಡಕ್ಕೂ ಬರುತ್ತಾನೆ. ಇಲ್ಲಿಯ ಪರಮ ದಾಸೋಹಮೂರ್ತಿಗಳೂ, ತಪಸ್ವಿಗಳೂ, ಆದ ಶ್ರೀ ಮ. ನಿ. ಪ್ರ. ಸ್ವರೂಪಿಗಳಾದ ಮೃತ್ಯುಂಜಯ ಮಹಾಸ್ವಾಮಿಗಳು ಮೂರ್ತಿಯನ್ನು ಮಠಕ್ಕೆ ಭಾಷಣಕ್ಕಾಗಿ ಆಮಂತ್ರಿಸುತ್ತಾರೆ. ಮಠ. ದಲ್ಲಿ ಮೂರ್ತಿ 'ಪ್ರಭುದೇವ'ರ ಬಗ್ಗೆ ಮಾತಾಡುತ್ತಾನೆ. ಭಾಷಣ ಕೇಳಿದ ಮಹಾಸ್ವಾಮಿಗಳು 'ಈವೊತ್ತು ಪ್ರಭುವೇ ಮಾತನಾಡಿದನಪ್ಪಾ ಪ್ರಭು ಸಂಪೂರ್ಣ ನಿಮಗೆ ಒಲಿದಿದ್ದಾನೆ.' ಎಂದು, ಈ ಕಾದಂಬರಿಯ ಒಂದು ಸಂದರ್ಭದಲ್ಲಿ ಈ ಸನ್ನಿವೇಶ ರಚಿಸಿಕೊಂಡು, ತನಗಾಗಿಯೇ ಈ ಮಾತನ್ನು ಮಹಾಸ್ವಾಮಿಗಳಿಂದ ಹೇಳಿಸಿಕೊಂಡ ಈ ವ್ಯಕ್ತಿ, ತನಗಾಗಿ ಆಗದಿದ್ದರೂ ನಾಡಿನ ಕಲ್ಯಾಣದೃಷ್ಟಿಯಿಂದ ಲಾದರೂ. ಪ್ರಭುವಿನ ಹೃದಯವೈಶಾಲ್ಯತೆಯನ್ನೂ, ಪ್ರಭುವಿನ ದಿವ್ಯದೃಷ್ಟಿಯನ್ನೂ, ಹೃದಯ ಪಾವಿತ್ರ್ಯವನ್ನೂ ಪಡೆದುಕೊಳ್ಳಲು ಶ್ರಮಿಸಲಿ!

'ವ್ಯಕ್ತಿ ವಿದ್ವೇಷ' ವನ್ನು ಖಂಡಿಸುತ್ತ ಇದೇ ಕಾದಂಬರಿಯಲ್ಲಿಯೇ ಶ್ರೀ. ಕೋ. ಚೆನಬಸಪ್ಪನವರ ಕೃತಿಯ ಬಗ್ಗೆ ಬುದ್ಧಿವಾದ ಹೇಳುವ ಲೇಖಕ, ತನ್ನ. ಕಾದಂಬರಿಯ ಪ್ರತಿಯೊಂದು ಶಬ್ದದಲ್ಲಿಯೂ ವ್ಯಕ್ತಿದ್ವೇಷ ತುಂಬಿದೆಯೆಂಬುದನ್ನು ಅರಿಯದಿರುವುದೊಂದು ಶೋಚನೀಯ ಸಂಗತಿ.

'ಕನ್ನಡಮ್ಮನ ಗುಡಿಯಲ್ಲಿ' ಯ ಎರಡನೆಯ ಭಾಗ 'ದೀಪಾರಾಧನೆ.' 'ದೀಪಾರಾಧಾನೆ' ನಡೆಸುವುದಕ್ಕಿಂತ ಮುಂಚೆ ನಾಡಿನವರ ಅಭಿಪ್ರಾಯದತ್ತ ಮನಸ್ಸು ಹಾಕಲಿ. ತಮ್ಮನ್ನು ಅಭಿಮಾನದಿಂದ ಕಂಡ, ತಮ್ಮ ಕೃತಿಯನ್ನು ಮೆಚ್ಚಿಕೊಂಡ ಜನತೆಯ ಮಾತನ್ನು ಕಡೆಗಣಿಸಿ ರಾಯರು 'ದೀಪಾರಾಧನೆ' ಮಾಡಿದರೆ, ಇಲ್ಲಿಗೆ 'ರಾಯರ 'ಸಮಾರಾಧನೆ' ಕಟ್ಟಿಟ್ಟಬುತ್ತಿ. ಕನ್ನಡಮ್ಮನ ಗುಡಿಯಲ್ಲಿಯೇ ಮೂರ್ತಿ (ಕೃಷ್ಣರಾಯ) ಯ ಅವಸ್ಥೆ ಮುಗಿದಿರುವಾಗ, 'ದೀಪಾರಾದನೆ' ಯಲ್ಲಿ ಏನು ಕಾದಿದೆಯೋ ತಿಳಿಯದಾಗಿದೆ.

ಅಂತೂ ರಾಯರಿಗೆ ಬಡಿಮುಕೊಂಡಿರುವ ಆತ್ಮಪ್ರಶಂಸೆ, ಆತ್ಮಗ್ಲಾನಿಯ ಮಂಕು ಕಳೆಯಲಿ. ಕನ್ನಡ ಜನತೆಗೆ, ಸಾಹಿತ್ಯಕ್ಕೆ ವಂಚಕರಾಗಿ ಬಾಳದಿರಲಿ ಅ. ನ. ಕೃ!

ಧಾರವಾಡ — 'ತಿರುಳ'

೩ನೆಯ ಓಲೆ

"ಜಯಂತಿ" ಯ ಸಂಪಾದಕರಲ್ಲಿ,
ಸವಿನಯ ವಿಜ್ಞಾಪನೆಗಳು.

ಪ್ರಿಯರೇ,

ಬಹುದಿನಗಳನಂತರ ಪತ್ರ ಬರೆಯುತ್ತಿದ್ದೇನೆ. ಇದಕ್ಕೆ ಕಾರಣ ಮಾರ್ಚ್ ತಿಂಗಳ 'ಜಯಂತಿ' ಯ "ಸಾಹಿತ್ಯ ವಿಮರ್ಶೆಯ ಶಿಕ್ಷಣ ರಂಗ" ದಲ್ಲಿ ಪ್ರಕಟವಾದ ವಿಮರ್ಶೆ. ನಾನು ಬರೆಯುತ್ತಿರುವ ಮಾತುಗಳಲ್ಲಿ ತಮಗೆ ಅರಿಯದ ವಿಚಾರವೇನೂ ಇಲ್ಲ. ಆದರೆ ಮುಂದಿನ ಕೆಲವು ಮಾತುಗಳನ್ನು ಪ್ರಕಟಿಸಿದರೆ "ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ" ದಲ್ಲಿ ಭಾಗವಹಿಸುವವರಿಗೆ ಅಲ್ಪವಾದರೂ ಸಹಾಯವಾದೀತೆಂದು ಭಾವಿಸುತ್ತೇನೆ.

೧. ಮುಖ್ಯವಾಗಿ, ಇತ್ತೀಚೆಗೆ ಈ ವಿಭಾಗದಲ್ಲಿ ಬರುತ್ತಿರುವ ವಿಮರ್ಶೆಗಳಲ್ಲಿ ಅತಿಶಯ ಪ್ರಶಂಸೆಯೇ ತುಂಬಿರುತ್ತದೆ. ವಿಮರ್ಶೆಗೊಳಗಾಗುವ ಕೃತಿ "ಜಯಂತಿ" ಯಲ್ಲಿ ಪ್ರಕಟವಾದುದಾಗಿರುವುದೇ ಇದಕ್ಕೆ ಒಂದು ಕಾರಣವಾಗಿರಬೇಕು. ಪತ್ರಿಕೆಯಲ್ಲಿ ಬಂದ ಕೃತಿಯನ್ನು ಹೊಗಳಿ ಬಿಟ್ಟರೆ ಸಂಪಾದಕರು ಒಪ್ಪಲೇ ಬೇಕಲ್ಲ—ಎಂಬ ಒಣಧೈರ್ಯ ಈ ಅಭ್ಯಾಸಿಗಳಲ್ಲಿರುವಂತೆ ತೋರುತ್ತದೆ. ಆದುದರಿಂದ ವಿಮರ್ಶೆಯಲ್ಲಿ ವಿಮರ್ಶಕನ ಸ್ವಂತ ವಿಚಾರಶಕ್ತಿ ಗೋಚರಿಸುವುದೇ ಇಲ್ಲ. ಸ್ವಂತ ವಿಚಾರಶಕ್ತಿಯನ್ನುಪಯೋಗಿಸಿದಲ್ಲಿಯೂ ಹಾಸ್ಯಾಸ್ಪದ ಸಂಗತಿಗಳು ಕಾಣಿಸುತ್ತಿವೆಯಲ್ಲದೆ, ನಿಜವಾದ ವಿಮರ್ಶಕನ ಸೂಕ್ಷ್ಮ ಬುದ್ಧಿ ಗೋಚರಿಸುವುದಿಲ್ಲ. ಉದಾ :— ಮಾರ್ಚ್ ತಿಂಗಳ ವಿಮರ್ಶೆಯ ಳನೆಯ ಪ್ಯಾರಾ ಮತ್ತು ಸ್ವಪ್ನಶಾಸ್ತ್ರದ ಕುರಿತು ವಿಮರ್ಶಕರ ವ್ಯಾಖ್ಯಾನ. (ಈ ವಿಚಾರವನ್ನು ಪ್ರಾಯಶಃ ಕತೆಗಾರರೂ ಯೋಚಿಸಿರಲಿಕ್ಕಿಲ್ಲ).

೨. ವಿಮರ್ಶೆಗೆ ಹೆಚ್ಚಾಗಿ ಸಣ್ಣಕತೆಯನ್ನೇ ಆರಿಸುವುದು ವಿಮರ್ಶೆಯು ಪುಟ್ಟ ಕೆಳಗಿಳಿಯುತ್ತಿರುವುದರ ಇನ್ನೊಂದು ಕಾರಣವಾಗಿದೆ. ಸಣ್ಣಕತೆಗಳ ಗಾತ್ರ ಸಾಮಾನ್ಯವಾಗಿ "ಜಯಂತಿ" ಯ ೩-೫ ಪುಟಗಳಷ್ಟು ಇರುತ್ತದೆ. ವಿಮರ್ಶೆಯ ಗಾತ್ರ ಹೆಚ್ಚಾಗಿ ೩ ಪುಟಗಳಷ್ಟು. ಎಂದರೆ ಕೃತಿ ಮತ್ತು ವಿಮರ್ಶೆ—ಎರಡರ ಗಾತ್ರವೂ ಒಮ್ಮೊಮ್ಮೆ ಸಮಾನವಾಗಿರುತ್ತವೆ. (ಮಾರ್ಚ್ ತಿಂಗಳ 'ಕಸದ ಬುಟ್ಟಿ' ಕಥೆಗೆ ಬಂದ ವಿಮರ್ಶೆಗಳಲ್ಲಿ, ಕೆಲವು ಕಥೆಗಿಂತಲೂ ದೊಡ್ಡವಿದ್ದಿರಬಹುದೆ?) ನಿಜವಾಗಿ ಸಾಮಾನ್ಯವಾದ ಒಂದು ಸಣ್ಣಕಥೆಯ ವಿಮರ್ಶೆಗೆ 'ಜಯಂತಿ' ಯ ಅರ್ಧ ಪುಟ ಸಾಕು. ಆದರೆ ಅಷ್ಟು ಚಿಕ್ಕ ಬರೆಹ 'ವಿಮರ್ಶೆ' ಎನಿಸೀತೆ? ಪ್ರಕಟನಾರ್ಹವಾದೀತೆ? ಎಂಬ ಸಂದೇಹದಿಂದ ಈ ಬರೆಹಗಾರರು ವ್ಯರ್ಥವಾಗಿ ಲೇಖನವನ್ನು ಬೆಳೆಯಿಸುತ್ತಾರೆ. ಉದ್ಧೃತವಾಗಿ ಕಥಾಸಾರಾಂಶವನ್ನು ಬರೆಯುತ್ತಾರೆ. (ಮಾರ್ಚ್‌ತಿಂಗಳ ವಿಮರ್ಶೆಯಲ್ಲಂತೂ ಕಥಾಸಾರಾಂಶ ೨ ಸಲ ಬಂದಿದೆ!)

೩. ವಿಮರ್ಶಿಸಲ್ಪಡುವ ಕೃತಿಯು ಯಾವಾಗಲೂ ಸಣ್ಣಕಥೆಯೇ ಆಗಿರುವುದರಿಂದ, ವಿಮರ್ಶಕರು ನಿರುತ್ಸಾಹಿಗಳಾಗುತ್ತಾರೆ. ವಿಮರ್ಶಕರ ವಿಚಾರಶಕ್ತಿಯ ಪ್ರಗತಿಗೆ ಬೇಕಾದಷ್ಟು ವಸ್ತುವೈವಿಧ್ಯವಾಗಲಿ, ವಿಶಾಲ ಅವಕಾಶಗಳಾಗಲಿ ಇಲ್ಲಿರುವುದಿಲ್ಲ.

ಇವುಗಳೆಲ್ಲದರ ಪರಿಹಾರಕ್ಕಾಗಿ, ಈ ಕೆಳಗಿನ ಸೂಚನೆಗಳನ್ನು ಗಮನಿಸಿದರೆ ಉಪಯೋಗವಾದೀತೇನೊ— ಎಂದು ನನಗೆನಿಸುತ್ತದೆ. ೧. ವಿಮರ್ಶೆಗೆ ಆರಿಸುವ ವಿಷಯದಲ್ಲಿ ವೈವಿಧ್ಯವಿರಬೇಕು. ಉದಾ:— ಕಾದಂಬರೀ ಸಾಹಿತ್ಯದ ಬೆಳವಣಿಗೆ, ಸಣ್ಣಕತೆಗಳ ಅವನತಿ, ಬೇಂದ್ರೆಯವರ ಕವಿತೆಗಳು ಇತ್ಯಾದಿ. ೨. ವಿಮರ್ಶೆಯು ಕೇವಲ ಪ್ರಶಂಸೆ ಅಥವಾ ದೂಷಣೆಯಿಂದ ತುಂಬಿರದಂತೆ, ಚರ್ಚಾಸ್ಪದವಾದ ವಿಷಯಗಳನ್ನೇ ವಿಮರ್ಶೆಗಾಗಿ ಆರಿಸುವುದು ಉತ್ತಮ. ಇದರಿಂದ ವಿಮರ್ಶಾಶಕ್ತಿ ಬೆಳೆಯಲು ತುಂಬ ಸಹಾಯವಾಗುವುದು. ಉದಾ:— ನವ್ಯ ಕವಿತೆ, ಅ. ನ. ಕೃ. ಕಾದಂಬರಿಗಳು. ೩. ಮೇಲಿನ ವಿಷಯಗಳು ವಿಮರ್ಶೆಗೆ ದೊಡ್ಡವೆನಿಸುವ ಸಂಭವವಿದೆ. ಅಂತಹ ಸಂದರ್ಭದಲ್ಲಿ ಹೆಚ್ಚು ಚರ್ಚಾಸ್ಪದವಾದ ಮತ್ತು ವಿಶಿಷ್ಟವಾದ ಕವಿತಾಸಂಗ್ರಹವನ್ನೋ ಕಥಾಸಂಗ್ರಹವನ್ನೋ ವಿಮರ್ಶೆಗಾಗಿ ಆರಿಸಬಹುದು. ೪. ವಿಮರ್ಶೆಗಾಗಿ ಆರಿಸುವ ವಿಷಯವು ಜನರಲ್ಲಿ ಆಸಕ್ತಿಯನ್ನು ಹುಟ್ಟಿಸುವಂತಹದೂ ಆಕರ್ಷಕವೂ ಆಗಿರಬೇಕು. ಇದರಿಂದ ವಿಮರ್ಶೆಯಲ್ಲಿ ಭಾಗವಹಿಸುವವರ ಸಂಖ್ಯೆ ಹೆಚ್ಚುವುದು. ೫. ವಿಷಯಕ್ಕೆ ಅನುಗುಣವಾಗಿ ವಿಮರ್ಶೆಯ ಗಾತ್ರದ ವಿಷಯದಲ್ಲಿ ಸಂಪಾದಕರು ಒಂದು ಮಿತಿಯನ್ನು ನಿರ್ಧರಿಸಬೇಕು. ಇದರಿಂ ಅನಾವಶ್ಯಕವಾಗಿ ವಿಮರ್ಶೆಯು ಬೆಳೆಯುವುದು ನಿಲ್ಲಬಹುದು.

ಪ್ರಿಯ ಸಂಪಾದಕರೆ, ನನಗೆ ತೋಚಿದ ಕೆಲವು ವಿಚಾರಗಳನ್ನು ಬರೆದಿದ್ದೇನೆ. ಇವನ್ನು ಪರಿಶೀಲಿಸಿ, ಉಚಿತವೆನಿಸಿದುದನ್ನು ತಮ್ಮ "ಶಿಕ್ಷಣರಂಗ"ದಲ್ಲಿ ಭಾಗವಹಿಸುವವರ ಗಮನಕ್ಕೆ ತರಬೇಕಾಗಿ ವಿನಂತಿ. ತಾವು ಮೇಲಿನ ವಿಚಾರಗಳನ್ನು ಪರಾಮರ್ಶಿಸುವಿರಾಗಿ ನಂಬುತ್ತೇನೆ. ಅಲ್ಲದೆ ಈ ಪತ್ರದಿಂದ, ವ್ಯರ್ಥವಾಗಿ ತಮ್ಮ ಅಮೂಲ್ಯ ಸಮಯವನ್ನು ಹಾಳುಮಾಡಿದಂತಾಗಿದ್ದರೆ, ಆ ಬಗ್ಗೆ ಕ್ಷಮೆ ಇರಲಿ.

ಇತಿ ಸಪ್ರೇಮ ವಂದನೆಗಳು

—ಯ. ರಾ.

ಪತ್ರಕ್ಕೆ ಉತ್ತರ.

ಪ್ರಿಯ ಮಿತ್ರರೆ,

ತಮ್ಮ ಪತ್ರ ತಲ್ಪಿ ಅಭಿಪ್ರಾಯವಾಯಿತು. ತಮ್ಮ ಹಿತ ಸೂಚನೆಗಳಿಗಾಗಿ ಕೃತಜ್ಞನಾಗಿದ್ದೇನೆ. 'ವಿಮರ್ಶೆ' ಎಂಬುದು ಒಬ್ಬ ರಸಿಕನ ಸಾಹಿತ್ಯಾಭಿರುಚಿಯನ್ನೂ ತಿಳಿವಳಿಕೆಯ ಆಳ-ಎತ್ತರಗಳನ್ನೂ ತಿಳಿಸುವುದು ಇಷ್ಟೆ. ಒಬ್ಬನ ವಿಮರ್ಶೆಯ ರೀತಿ, ಇನ್ನೊಂದು ಬಗೆಯ ಅಭಿರುಚಿಯವನಿಗೆ ಕುಂದು-ಕೊರತೆಗಳಿಂದ ಕೂಡಿದುದಾಗಿ ತೋರುವುದು ಸ್ವಾಭಾವಿಕ. ವಿಮರ್ಶಕನ ಪರಾಕಾಷ್ಠದಶೆಯೆಂದರೆ ವ್ಯಕ್ತಿ-ವ್ಯಕ್ತಿಗಳೆಲ್ಲರ ಅಭಿರುಚಿಯ ರೀತಿಯನ್ನರಿತುಕೊಂಡು, ಸಾಹಿತ್ಯಿಕ ಸತ್ವವನ್ನು ವಿಶ್ಲೇಷಣೆ ಮಾಡಿ ಹೇಳುವುದು. ಬರಿ ಹೊಗಳಿಕೆಯೂ ವಿಮರ್ಶೆಯಲ್ಲ; ಬರೀ ತೆಗಳಿಕೆಯೂ ವಿಮರ್ಶೆಯಲ್ಲ.

ಒಬ್ಬ ವಿಮರ್ಶಕನು ತಪ್ಪು ಅಭಿಪ್ರಾಯವನ್ನು ಪ್ರಕಟಿಸಿದ್ದಾನೆಂದೆನಿಸಿದರೆ, ಇನ್ನೊಬ್ಬ ವಿಮರ್ಶಕನು ಸಹಾನುಭೂತಿಯ ಶಬ್ದಗಳಿಂದಲೂ ಯುಕ್ತಪ್ರಮಾಣಗಳಿಂದಲೂ ಮೊದಲಿನವರ ಅಭಿಪ್ರಾಯವನ್ನು ತಿದ್ದಲೂ ಬಹುದು. ಅದಕ್ಕಾಗಿಯೇ 'ಸಾಹಿತ್ಯ ವಿಮರ್ಶಾ ಶಿಕ್ಷಣರಂಗ'ವನ್ನು ತೆರೆಯಲಾಗಿದೆ.

ನಿಮ್ಮದೊಂದು ಮಾತು ತೀರ ದುಡುಕಿನದಾಗಿ ಎನಿಸುವುದು. ವಿಮರ್ಶಕರು ಪ್ರಕಟನೆಯ ಆಶೆಯಿಂದ ಕೃತಿಯನ್ನು ಕೇವಲ ಪ್ರಶಂಸಿಸಿ ಬರೆಯಬಹುದೆಂದು ಒಂದು ಕ್ಷಣ ಕಲ್ಪಿಸೋಣ; ಪರೀಕ್ಷಕ ಮಂಡಲವೂ ಕೇವಲ ಪ್ರಶಂಸಾತ್ಮಕ ವಿಮರ್ಶೆಯನ್ನೇ ಆರಿಸುವುದು—ಎಂದು ನೀವು ಆರೋಪಮಾಡಿದಂತಾಗುವುದು. ಇದುವರೆಗಂತೂ ಈ ಆರೋಪಕ್ಕೆ ಕಾರಣವಾಗುವಂತಹ ಘಟನೆ ಘಟಿಸಿಲ್ಲ. ಸ್ಪರ್ಧೆಗೆ ಬಂದುವುಗಳಲ್ಲಿ ಒಳ್ಳೆಯವೆಂದೆನಿಸಿದುವುಗಳನ್ನು ಗುಣಾಂಕದೊಂದಿಗೆ ಆರಿಸಿದ್ದಾಗಿದೆ. ಇನ್ನೂ ಒಂದು ವಿಷಯ: ಮೊದಲನೆಯ ಸ್ಥಾನ ಪಡೆದು ಪ್ರಕಟವಾದ ವಿಮರ್ಶೆಗಳಲ್ಲಿ ವಿಮರ್ಶಿತ ಕೃತಿಯ ದೋಷದರ್ಶನವು ಇದ್ದುದನ್ನೂ ನೋಡಬಹುದಾಗಿದೆ.

ವಿಮರ್ಶೆಗೆ ಇರಿಸಬೇಕಾದ ವಿಷಯಗಳು ವಿವಿಧವಾಗಿರಬೇಕೆಂಬ ನಮ್ಮ ಹವಣಿಕೆಯು ಮುಚ್ಚುಮರೆಯಾಗಿ ಏನೂ ಇಲ್ಲ. ಹಿಂದಿನ ಸಂಚಿಕೆಗಳನ್ನು ತೆರೆದು ನೋಡಬಹುದು. ಬೇರೆಯ ವಿಷಯಗಳನ್ನು ವಿಮರ್ಶೆಗೆ ಇರಿಸಿದಾಗ, ನಿರಾಶಾದಾಯಕ ಪ್ರಸಂಗಗಳೇ ಹೆಚ್ಚಾಗಿ ಬಂದುದು ನಮ್ಮ ಅನುಭವವಾಗಿದೆ. ಆದುದರಿಂದಲೇ **ಜಯಂತಿ**ಯಲ್ಲಿ ಪ್ರಕಟವಾದ ಕೃತಿಗಳನ್ನೇ ವಿಮರ್ಶೆಗೆ ಇರಿಸಲಾಗುವುದು. ಇದರಿಂದ ವಿಮರ್ಶಕರ ಸಕ್ರಿಯ ಸಹಕಾರವೂ ದೊರೆಯುತ್ತಿರುವುದು.

ತಮ್ಮ ವಿಶ್ವಾಸದ

ಸಂಪಾದಕ '**ಜಯಂತಿ**'

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ
ಪ್ರಚಾರವಾಗಬೇಕಾಗಿದ್ದರೆ,

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವದೇ ಸರಕಿನ ಪ್ರಚಾರ ಮಾಡುವೆವು.
ಅರವಿಂದ ಪಬ್ಲಿಸಿಟಿ ಆ್ಯಂಡ ಪೇಂಟಿಂಗ ವರ್ಕ್ಸ್
ಗಾಂಧಿಚೌಕ, ಧಾರವಾಡ

ಪುಣೆಯಲ್ಲಿ ನಮ್ಮ ಏಜಂಟರು:
ಶ್ರೀ. ಎನ್. ಬಿ. ಮಾಳಕರ
೪೩, ರವಿವಾರಪೇಠ ಪುಣೆ ೨

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

◆

ಕಳೆದ ಸಂಚಿಕೆಯಲ್ಲಿ ಕೋರಿಕೊಂಡಂತೆ, 'ಕಸದ ಬುಟ್ಟಿ' ಕತೆಯ ವಿಮರ್ಶೆಗಳು ಏಳು ಜನರಿಂದಲೂ, **'ಇದು ಪಾಪವೆ?'** ಎಂಬ **ಕತೆಯ** ವಿಮರ್ಶೆಗಳು ಆರು ಜನರಿಂದಲೂ ಬಂದಿವೆ.

'ಕಸದ ಬುಟ್ಟಿ'ಯ ವಿಮರ್ಶಕರ ಪರಿವಿಡಿ :

೧. ಶ್ರೀ. ಶ್ರೀ. ಆ. ಸರ್ನಾಡ, ರಾಯಚೂರು. ೨. ಶ್ರೀ. ಪಿ. ಗೋಪಾಲಕೃಷ್ಣ ಪೈ 'ಸಾಹಿತ್ಯಾಲಂಕಾರ' ಕಾಸರಗೋಡು. ೩. ಶ್ರೀ. ಬಡಾಶೇಷ ರಾಘವೇಂದ್ರ, ಸುರಪುರ. ೪. ಶ್ರೀ. ಕೆ. ವೆಂಕಟರಾಯಾಚಾರ್ಯ, ಸುರತ್ಕಲ್ಲು. ೫. ಶ್ರೀ. ಕೆ. ಶ್ರೀನಿವಾಸ ಶರ್ಮ 'ವಿದ್ವಾನ್' ಕಾಸರಗೋಡು. ೬. ಶ್ರೀ. ಮ. ಗ. ಯಾಜಿ, ಇಡಗುಂಜಿ. ೭. ಶ್ರೀ ಪರಮೇಶ್ವರ ಭಟ್ಟ, ಕಾನತಿಲ, ದ.ಕ.(ಇವರು ಪ್ರಶಂಸೆಯ ಪತ್ರವನ್ನು ಮಾತ್ರ ಬರೆದಿದ್ದಾರೆ.)

' ಇದು ಪಾಪವೆ? ' ವಿಮರ್ಶಕರ ಪರಿವಿಡಿ :

೧. ಶ್ರೀ. ಲಕ್ಷ್ಮಣ ಜೋಶಿ, ಕೂಡಲಿಗಿ. ೨. ಶ್ರೀಮತಿ ಕುಮುದ ಕೇಶವ ಮುತಾಲಿಕ, ದಹಿಸರ ವೆಸ್ಟ್ (ಮುಂಬೈ) ೩. ಶ್ರೀ ಯಂ. ಕೇಶವಭಟ್ಟ 'ವಿದ್ವಾನ್' ಕಾಸರಗೋಡು. ೪. ಶ್ರೀ. ಎಂ. ಎಸ್. ಆಚಾರ್ಯ, ಕುಲಾಯಿ. ೫. ಶ್ರೀ. ವ. ವಿ. ಪಟ್ಟಣಶೆಟ್ಟರ, ಹತ್ತಿಮತ್ತೂರು. ೬. ಶ್ರೀ. ಸೀತಾರಾಘವ, ಮಲ್ಲೇಶ್ವರಂ, ಬೆಂಗಳೂರು ಸಿಟಿ.

ಎಲ್ಲ ವಿಮರ್ಶೆಗಳನ್ನೂ ಸಂಪಾದಕ ಮಂಡಲಿಯವರು ಓದಿ ನೋಡಿ ನಿರ್ಣಯವಿತ್ತಿದ್ದಾರೆ. ಶ್ರೀ. ಕೆ. ಎಸ್ ಶರ್ಮ (ವಿದ್ವಾನ್) ಅವರ ವಿಮರ್ಶೆ ಎಲ್ಲ ವಿಮರ್ಶೆಗಳಲ್ಲಿ ೧ನೆಯ ಸ್ಥಾನವನ್ನು ಪಡೆದಿರುತ್ತದೆ. ಶ್ರೀ. ಪಿ. ಗೋಪಾಲಕೃಷ್ಣ ಪೈ, ಶ್ರೀ. ಕೆ. ವೆಂಕಟರಾಯಾಚಾರ್ಯ, ಶ್ರೀ. ಶ್ರೀ. ಆ. ಸರ್ನಾಡ, ಶ್ರೀ. ಬಡಾಶೇಷ ರಾಘವೇಂದ್ರ, ಶ್ರೀ. ಸೀತಾರಾಘವ, ಶ್ರೀ. ಲಕ್ಷ್ಮಣ ಜೋಶಿ. ಇವರ ವಿಮರ್ಶೆಗಳೂ ಉತ್ತಮವಾಗಿವೆ. ಮಿಕ್ಕುವೆಲ್ಲ ಸಾಮಾನ್ಯವಾಗಿವೆ. 'ಕಸದ ಬುಟ್ಟಿ' ಕತೆಯನ್ನು ಕುರಿತು ಬಂದ ವಿಮರ್ಶೆಗಳಲ್ಲಿ ಹೆಚ್ಚಿನವು ಚೆನ್ನಾಗಿರುವುದು ಸಮಾಧಾನದ ಸಂಗತಿ.

ಮುಂದಿನ ಸಂಚಿಕೆಯ ಮೇಲಾಟಕ್ಕಾಗಿ ಈ ಸಂಚಿಕೆಯಲ್ಲಿ ಪ್ರಕಟವಾದ **'ನಾರ್‍ಯಾನ ಕರಾಮತು'** ಎಂಬ ನಗೆಯಾಟವನ್ನಾಗಲಿ, **' ತಪ್ಪು ತಿಳಿವಳಿಕೆ '** ಎಂಬ ಅನುವಾದಿತ ಕತೆಯನ್ನಾಗಲಿ ವಿಮರ್ಶೆಗೆ ತೆಗೆದುಕೊಳ್ಳಬೇಕು.

— ಸಂಪಾದಕರು

ಕಸದ ಬುಟ್ಟಿ

(ಸಣ್ಣ ಕತೆಯ ವಿಮರ್ಶೆ)

ಶ್ರೀ. ಕೆ. ಎಸ್. ಶರ್ಮಾ, ವಾಣೀಮಂದಿರಂ ಕಾಸರಗೋಡು.

ಸಂಸಾರದ ಜೀವಂತವಸ್ತುವೊಂದು ಪಡುವ ಬವಣೆ, ಹೆಣ್ಣು ಹೆತ್ತು ಹೊತ್ತವರ ಹೃದಯದ ದುಃಖಪರಿಸ್ಪಂದನ, ಇವು ವಾಸ್ತವಿಕ ಪರಿಸ್ಥಿತಿಗೆ ವಿರೋಧವಾಗದಂತೆ, ಮಾರ್ಮಿಕವಾಗಿ ನಿರೂಪಿಸಲ್ಪಟ್ಟ ವಿಚಾರವೇ " ಕಸದ ಬುಟ್ಟಿ "ಯಾಗಿ ಸ್ವಪ್ನರೂಪದಲ್ಲಿಳಿದು ಬಂದಿವೆ. ಇಂತಹ ಕನಸು—ಅನವರತ ಹೃದಯವನ್ನು ಕೊರೆಯುತ್ತಿರುವ ಹೆತ್ತೊಡಲ ಬೇನೆಯು ಕಾಣುವ ಕನಸು— ಈ ಭಯಾನಕ ಸನ್ನಿವೇಶದಲ್ಲಿ ನಿರೂಪಿತವಾದ ಚಿತ್ರಕ್ಕೆ ಅಸಂಭಾವ್ಯವಲ್ಲ. ಸ್ವಯಂವೇದ್ಯವಾದ ವಿಚಾರವಿದು. ಬೆಳೆಯುತ್ತಿರುವ ಹೆಣ್ಣು—ತಾಯ್ತಂದೆಯರ ಹೃದಯವನ್ನು ವಾತ್ಸಲ್ಯದ ಹಿರಿಮೆಯಲ್ಲಿ ತೇಲಾಡಿಸುವಂತೆಯೆ, ಅಂತರ್ನಿಗೂಢವಾದ ಯಾವುದೋ ಒಂದು ದುಃಖದ ಕೀಟವು ಅನವರತವೂ ಅವರನ್ನು ದುಃಖದಲ್ಲಿ ಅದ್ದುತ್ತಿರುವುದು; ಕರುಳನ್ನು ಕಿವುಚುವುದು. ಈ ವೇದನೆಯಲ್ಲಿ ಕನಸು—ನೆನಸುಗಳು ಸಮತ್ವದಲ್ಲಿದ್ದು, ತಾಕಲಾಟದ ಘೋರಸಮಸ್ಯೆಯಲ್ಲಿ "ಜೀವನವನ್ನು ಹೆತ್ತೊಡಲನ್ನು-ನಲೆದಾಡಿಸುವುದು.

ಒಂದು ಜೀವನದ, ಜೀವನಾನುಬಂಧಿಘಟನೆಯ ಚಿತ್ರವನ್ನು ಒಂದು ನಿಯತ ಸಂಪ್ರದಾಯದಲ್ಲಿ ವಿಶಿಷ್ಟ ವೇಗದಲ್ಲಿ "ಸನ್ನಿವೇಶ-ವ್ಯಕ್ತಿತ್ವ-ಇತಿವೃತ್ತ" ಗಳ ಸಾಮೂಹಿಕವಾದ ಬೆಳವಣಿಗೆಯಲ್ಲಿ ಕುಶಲ ಕಥನಮಾರ್ಗದಲ್ಲಿ ನಿರೂಪಿಸುವ ಕ್ರಮ 'ಸಣ್ಣ ಕತೆ' ಯ ಜೀವಾಳವಾಗಿದೆ. ಸಣ್ಣ ಕತೆಗಳ ಪ್ರಚಾರವು ಭರದಿಂದ ಸಾಗುತ್ತಿರುವ ಈ ಕಾಲದಲ್ಲಿ, ಕತೆಗಳಲ್ಲೂ 'ರಸಿಕಾವರ್ಜಕ' ವಾಗಿರುವ ನಿರೂಪಣೆಯ ವೈವಿಧ್ಯಗಳು ಹೊಸ ಹೊಸ ರೂಪರೇಷೆಗಳಿಂದ ಮುನ್ನುಗ್ಗುತ್ತಿವೆ. ಈ ಕ್ರಮದಲ್ಲೇ ಸಾಗಿಬಂದ ಒಂದು ನಿರೂಪಣೆಯೆಂದರೆ "ಮನೋವಿಶ್ಲೇಷಣಮೂಲವು." ಮನಸ್ಸಿನಲ್ಲಿ ನೆಲೆನಿಂತ ಸಮಾಜದಲ್ಲಿ ನೆಲೆಯೂರಿದ ಯಾವುದಾದರೊಂದು ಭಾವವು ವಿಶ್ಲೇಷಣ ರೂಪವಾಗಿ

ಮಥಿಸಲ್ಪಟ್ಟು, ಬಿಡಿಬಿಡಿಯಾಗಿ ನಿಂತ ಭಾವತಂತುಗಳು ಸಂಮಿಶ್ರವಾಗಿ ಮಾರ್ಮಿಕವಾಗಿ ಪ್ರಕಾಶವಾಗಬೇಕು. ಓದುಗನ ಭಾವತಂತ್ರಿಯನ್ನದು ಮಿಡಿದಂತೆ ಮನಸ್ಸಿನ ಮೇಲೂ ಅಚ್ಚಳಿಯದುಳಿಯುವ ಒಂದು ಬಗೆಯ ಕ್ರಾಂತಿಯನ್ನದು ಈಯಬೇಕು. ಹೀಗಾದರೆ ಮಾತ್ರ ಈ ಬಗೆಯ ನಿರೂಪಣೆಯು ಸಫಲವಾಗುವುದು.

ಸರಲೆ—ಮದುವೆಯಲ್ಲಿ—ಮುಖ್ಯವಾಗಿ ವರಪರೀಕ್ಷೆಯಲ್ಲಿ ಎದಿರೆದ್ದು ನಿಲ್ಲಬಹುದಾದ 'ಪರೀಕ್ಷೆಗಳಲ್ಲಿ-ಸಂಗೀತ, ಕಸೂತಿ, ಅಡುಗೆ ಮೊದಲಾದುವುಗಳಲ್ಲಿ ತಕ್ಕಮಟ್ಟಿಗೆ ತೇರ್ಗಡೆಹೊಂದಿದವಳು. ನಯ-ಸೌಜನ್ಯಗಳಿಂದ ಕೂಡಿದ ಸರಲೆ, ಲಕ್ಷಣವತಿಯಾಗಿ ಆಸ್ತಿಕ ಜೀವನದಲ್ಲಿ ನೆಲೆನಿಂತವಳು. ಆದರೆ ಆಕೆ ಮಾತ್ರ ಮಾಂಗಲ್ಯತಂತು ಬಂಧನದ ಮುಹೂರ್ತಕ್ಕೆ ದೂರವಾಗಿಯೇ ಸಾಗುತ್ತ, ಆ ಪರೀಕ್ಷೆಯಲ್ಲಿ ತೇರ್ಗಡೆಯಾಗಿಲ್ಲ; ಇದಕ್ಕೆ ಕಾರಣ ಆಕೆಯಲ್ಲ; ಆಕೆಯ ಮುಂದಿರುವ ಕ್ರೂರಸಮಾಜ!

ಸರಲೆಯ ತಾಯಿಯ ಹೃದಯದಲ್ಲಿ ಕವಿದ ವಿಚಾರವು—ಒಂದು ದಿನ ಸರಲೆಯ ಎದುರಲ್ಲೇ, ದುಃಖಭಾರವಾದ ಕಣ್ಣುಗಳ ವಿಶ್ರಾಂತಿಯ ವೇಳೆಯಲ್ಲೇ—ಅನ್ಯಾದೃಶವಾದ ಮನೋವಿಶ್ಲೇಷಣಾತ್ಮಕವಾದ ತೆರನ ಕನಸನ್ನುಂಟುಮಾಡುವುದು........

ಸರಲೆಯ ತಂದೆಯಿಂದ ಆಮಂತ್ರಿತರಾದ ತರುಣರೂ-ವಯಸ್ಕರೂ ಮನೆಗೆ ಬಂದಂತೆ ಸರಲೆಯ ತಾಯಿಯ ಸ್ವಪ್ನಲೋಕದಲ್ಲಿ ಕಾಣಿಸುವರು. ಅವರೆಲ್ಲರೂ ಅಲ್ಲಿಯ ನಿಯಮದಂತೆ ಒಬ್ಬೊಬ್ಬರಾಗಿ ಒಳಮನೆಗೆ ಬಂದು, ತಮ್ಮ ಕೈಯಲ್ಲಿದ್ದ ಧೂಳಿತುಂಬಿದ ಕಾಗದದ ಪುಡಿಕೆಯನ್ನು—ಕೋಣೆಯ ಗೋಡೆಗಳಲ್ಲಿ ತಗಲುಹಾಕಿದ ವರಪರೀಕ್ಷೆಯ ವರರ-ಹಾಗೂ ನೋಡಬಂದವರ ಉತ್ತರಗಳ ಇಲ್ಲವೆ ಹೇಳಿಕೆಗಳ ಅವಲೋಕನದ ಬಳಿಕ, ಅಲ್ಲೇ ಸಮೀಪದಲ್ಲಿರಿಸಿದ್ದ ಸಜೀವ ಕಸ ತುಂಬಿದ ಬುಟ್ಟಿಯಲ್ಲಿ ತುಂಬಿ ಹೊರಬೀಳುವುದು. ಇತ್ಯಾದಿ ಈ ಪರಿಸ್ಥಿತಿಯಲ್ಲೇ ಸ್ವಪ್ನಭಂಗ....

ಈ ಕತೆಯ ಕನಸಸಿನ ಹಿನ್ನೆಲೆಗೆ ಆಧಾರವಾಗುವಂತೆ, ಅದೇ ಬಗೆಯ ಕನಸಿನ ಸತ್ಯತೆಗೆ ಆಧಾರವಾಗಿರುವಂತೆ ಲೇಖಕರು, ಅಂದು ಸಂಜೆ ೪॥ ಗಂಟೆಗೆ ಸರಲೆಯ ವರಪರೀಕ್ಷೆಯನ್ನು ನಿವೇಶಗೊಳಿಸಿದ್ದಾರೆ. ಈ ಭಾಗವು ಕನಸಿನ ವಿಶ್ಲೇಷಣಾತ್ಮಕ, ಸುಂದರ ಘಟನೆಗೆ ಸಹಾಯಕವಾಗಿದೆ.

ಬಹು ಚಿಕ್ಕದಾದ ಈ ಕತೆಯು, ಹೊಸ ಬಗೆಯ ಕಥನಕಲೆಯಿಂದ ಮಿರುಗುಪಡೆದಿದೆಯೆಂದು ಹೇಳಬೇಕಾಗಿದೆ. ಸರಲೆಯ ಜೀವನ ಪರಿಚಯದ ಸೂಕ್ಷ್ಮಾವತರಣವನ್ನಿತ್ತ ಈ ಕತೆ, ಮುಂದೆ ದುಃಖದ ಬೇನೆಯಿಂದ ಬೆಂದು ಬೆಂಡಾದ ತಾಯಿಯ ಹೃದಯದ ಮುಂದೆಯೇ ಕನಸನ್ನೇಳಿಸುತ್ತದೆ. ಕನಸೂ ವಿಚಿತ್ರರೂಪದಲ್ಲಿದೆ. ಪ್ರಸ್ತುತೋಪಾತ್ತವಾದ ಘಟನೆಯಿದು ಸರ್ವಸಾಮಾನ್ಯವಾಗಿದ್ದರೂ ಪ್ರತಿಮನೆಯ (ಹೆಣ್ಣಿರುವ) ನಿತ್ಯದ ಗೋಳೇ ಆದರೂ—ಮನೋವಿಶ್ಲೇಷಣಾತ್ಮಕವಾದ ರೀತಿಯಿಂದ ಬೆಳಕು ಕಂಡ ಈ ಕತೆಯು, ನೂತ್ನವಾಗಿರುವಂತೆ ಹೃದಯಾವರ್ಜಕವಾಗಿಯೂ ಇದೆ. ಕನಸಿನಲ್ಲಿ ತಾಯಿ ಕಾಣುವ ಚಿತ್ರ ತೀರಾ ಹೊಸತು. ಇಂದು ಕೊಡುಗೂಸು ಕಸಕ್ಕಿಂತಲೂ ಕೀಳು, ವರಪರೀಕ್ಷೆಯೆಂಬುದೊಂದು ಕ್ರೂರ ಸಮಾಜದ ಹೇಯ ಪದ್ಧತಿ-ಎಂಬ ಸತ್ಯಚಿತ್ರವನ್ನು ಲೇಖಕರು ಕಟುವಾಗಿ ರೇಖಿಸಿದ್ದಾರೆ.

ಮಹತ್ತ್ವದ ಕಾರ್ಯಕ್ರಮಕ್ಕಾಗಿ ಬಂದು ಸೇರಿದ ಮಂದಿ—ಆಮಂತ್ರಣದ ವಿಚಾರವನ್ನರಿಯದೆ ಚಡಪಡಿಸುವುದು; ಟೀಕಿಸುವುದು ಮೊದಲಾದ ಭಾವತರಂಗಗಳೊಡನೆ ಸಾಗಿದ ರೀತಿಯು-ಸರಲೆಯ ತಂದೆಯು ಹೊರಬಂದು ಧೂಳಿತುಂಬಿದ ಕೋಣೆಯಲ್ಲಿ ಒಂದೆಡೆ ಬಿದ್ದಿರುವ ಧೂಳಿತುಂಬಿದ ಕಾಗದ ಪುಡಿಕೆಯ ಉಪಯೋಗದ ಕ್ರಮದ ವಿಸ್ತಾರದಲ್ಲಿ ಬಹುವಾಗಿ ಒಪ್ಪುವುದು. ಆಬಳಿಕ ಕಾರ್ಯಕ್ರಮಾರಂಭ. ಒಬ್ಬೊಬ್ಬರಾಗಿಯೆ ಒಳಬಂದು, ಗೋಡೆಗಳಲ್ಲಿ ಕಾಣುವ ಸಮಾಜ ಗುಣಾತೀತವಾಗಿರದ—ಹೆಣ್ಣಿನ ಮುಂದೆ ಇತ್ತ ಸ್ವಾಭಿಪ್ರಾಯಗಳ ಒಳನೋಟದ ಟೀಕೆಗಳನ್ನು ಕಾಣುವುದು. ಆ ಬಳಿಕ ತಾವೆತ್ತಿ ತಂದ ಕಸದ ಪುಡಿಕೆಗಳನ್ನು "ನನ್ನ ಮನೆಯಲ್ಲಿ ಮಗಳಿಲ್ಲ.... ಅದೋ ನೋಡಿ, ಕಸದ ಬುಟ್ಟಿಯ ಮುಚ್ಚಳ ತೆರೆಯಿರಿ....ಅಲ್ಲಿ ಸಜೀವ ಕಸವಿದೆ !!!" ಎಂಬ ಶಬ್ದಗಳಿಂದ ಅಂಕಿತವಾದ ಕೋಣೆಯ ಕಡೆಯ ಪಟವೊಂದರ ಸೂಚನೆಯಂತೆ—ದೀರ್ಘಶ್ವಾಸ ಬಿಟ್ಟು—ಬುಟ್ಟಿಯ ಬಾಗಿಲು ತೆರೆದು—ಅಲ್ಲಿ ಪುಡಿಕೆಯೆಸೆದುಹೋದಂತೆ, ಪಶ್ಚಾತ್ತಾಪದ ಗಾಳಿಸೋಂಕಿದಂತೆ, ಅವಮಾನಿತರಾದಂತೆ, ಆಗುವುದು ! ಸರಲೆಯ ತಾಯಿಯು ಈ ದೃಶ್ಯವನ್ನು ಸ್ವಪ್ನಲೋಕದಲ್ಲೇ ತೀಕ್ಷ್ಣದೃಷ್ಟಿಯಿಂದ ಎದುರಿಸುವುದು. ಸರಲೆಯು—ಜೀವಂತ ವಸ್ತುವು—ಕಸದ ಬುಟ್ಟಿಯಲ್ಲಿ-ಧೂಳಿತುಂಬಿದ; ಪುಡಿಕೆಗಳ ಅಡಿಯಲ್ಲಿ ಸ್ವಪ್ನದಲ್ಲಿ ದುರಂತವನ್ನು ಕಾಣುತ್ತಿರುವ ತಾಯಿಗೆ ಕಾಣಿಸುವುದು ! ಈ ಬಗೆಯ ತಂತ್ರಕೌಶಲ್ಯವು ನ್ಯಾಯವಾದ ರೀತಿಯಲ್ಲಿ ಹರಿದು ಸಮಾಜದ ಕಾರ್ಯವನ್ನು ತೋರುತ್ತಿರುವುದು ಬಹು ಸುಂದರವಾಗಿದೆ. ಕೊಡಗೂಸಿನ ಬಾಳು ಕಸಕ್ಕಿಂತಲೂ ಬೀಳು ! ತಾಯ್ತಂದೆಯ ಮುಂದೆ ನಿಂತ ಈ ಸಮಸ್ಯೆ ಈ ರೂಪಣೆಯ ಮುಂದೆ ಯಾವ ಬಗೆಯಲ್ಲೂ ಅತಿರೇಕದಲ್ಲಿಲ್ಲ.

ಪ್ರದರ್ಶನಾಲಯದಂತೆ ಏರ್ಪಟ್ಟ ಕೋಣೆಯಲ್ಲಿ ಕಾಣುವ ಮಾತುಗಳು ಬಹು ಮಾರ್ಮಿಕವಾಗಿವೆ. ಅಲ್ಲೂ "ಮುಗ್ಧಪ್ರಾಣಿ-ಹೇಗೆ ಸಂಸಾರ ಮಾಡಬಲ್ಲಳು? ನಡುವು ಇನ್ನಷ್ಟು ಸಣ್ಣದಿರಬೇಕಿತ್ತು: ನಡಿಗೆ Stylish ಇಲ್ಲ. ಅದಕ್ಕೆ ಬೇಡ," ಇವು ಯಾರ ಹೃದಯವನ್ನೂ ಕೊರೆಯಬಲ್ಲುವು. ಇಂತಹ ಮಾತುಗಳನ್ನೆಲ್ಲ ಕೇಳುತ್ತಿರುವ ಕೇಳಿ ಕುಸಿಯುತ್ತಿರುವ ತಾಯ್ತಂದೆಗಳು—ಕೊನೆಗೆ ಈಯುವ ಮಾತುಗಳು ಮರೆಯಲಾಗದ ಸತ್ಯ: "ಮಗಳೇ, ಇಷ್ಟೆಲ್ಲ ಜನ ನಿನ್ನ ಪರೀಕ್ಷೆ ಮಾಡಿದ್ದಾರೆ. ನೋಡು ಅವರ ಮೆರೆದಾಟ, ಕಣ್ಣು ಮುಚ್ಚಿ ಕುಳಿತ ಬೆಕ್ಕಿನ ಜಾತಿ ಅದು....." ಹೆಣ್ಣು ಹಡೆದರೆ ಜೋಕೆ !! ? ಮೊದಲಾದುವು ನೊಂದೆದೆಯಿಂದ ಕತ್ತರಿಸಿ ಬೀಳುವ ದುಃಖಪೂರ್ಣಗಳಾದ ನುಡಿಗಳು.

ಸಾದರ ಸ್ವೀಕಾರ

೧೧೬ **ಚಿತ್ತಾರ** (೨೧ನೆಯ ವಾರ್ಷಿಕ ಸಂಚಿಕೆ.) ಸಂಪಾದಕರು ಶ್ರೀ. ಜಿ. ಎ. ನರಸಿಂಹ ಮೂರ್ತಿ ಬಿ. ಎಸ್‌ಸಿ. ಪ್ರಕಾಶಕರು ಶ್ರೀ. ಜಿ. ಟಿ. ಶ್ರೀಕಂಠಯ್ಯ. ಆರ್. ಎನ್. ನ್ಯೂಜ್ ಏಜನ್ಸಿ, ಬೆಂಗಳೂರು ೨. ಕ್ರಾ. ೧/೮ ದ ೧೧೨ ಪುಟಗಳು. ಬೆಲೆ ೦-೧೨-೦.

ಕನ್ನಡ ನಾಡಿನ ಹೆಸರಾಂತ ಲೇಖಕರ ಸಣ್ಣಕತೆಗಳು ಈ ವಿಶೇಷಸಂಚಿಕೆಯಲ್ಲಿ ಬಂದಿರುವುವಲ್ಲದೆ, ಲಘು ಕಥಾಸಾಹಿತ್ಯ ವಿಷಯಕವಾದ ಬೇರೆ ಲೇಖನಗಳೂ ಇವೆ. ಎಂದಿನಂತೆ ಸಂಚಿಕೆಯು ವಾಚನೀಯವಾಗಿದೆ.

೧೧೭ **ನೃತ್ಯಭಾರತಿ** (ಹೊಸ ತ್ರೈಮಾಸಿಕ) ಸಂಪಾದಕರು ಶ್ರೀ ನಾಟ್ಯಾಚಾರ್ಯ ಕುಲಕರ್ಣಿ ಶ್ರೀನಿವಾಸ ಮತ್ತು ಶ್ರೀ... ಮಲ್ಹಾರಿ ಮೇವುಂಡಿ ಪ್ರಕಾಶಕರು ಭಾರತೀಯ ನೃತ್ಯ ಕಲಾಕೇಂದ್ರ ಗುರುಕುಲ, ಪೋ. ಹಾಂಸಭಾವಿ, ಜಿ. ಧಾರವಾಡ. ಡೆ. ಆ. ೮೮ ಪುಟಗಳು. ವಾ. ಚಂ. ೫ ರೂಪಾಯಿಗಳು. ಬಿಡಿ ಸಂಚಿಕೆಗೆ ೧-೪-೦.

೧೧೮ **ಧರ್ಮರಾಜ್ಯ** (ಮಾಸಪತ್ರಿಕೆ) ಸಂಪಾದಕರು ಶ್ರೀ. ಗುರುಸಿದ್ಧಸ್ವಾಮಿ ಎಂ. ಎ. ಧರ್ಮರಾಜ್ಯ ಕಾರ್ಯಾಲಯ ಹರಿಹರ. ರಾಯಲ್ ೧/೮ ದ ೩೬ ಪುಟಗಳು. ವಾರ್ಷಿಕಚಂದಾ ೫-೦-೦. ಬಿಡಿ ಸಂಚಿಕೆಗೆ ೦-೬-೦.

೧೧೯ **ನವಯುಗ** (ವಾರಪತ್ರಿಕೆಯ ಪ್ರಜಾರಾಜ್ಯ ವಿಶೇಷಾಂಕ) ಸಂಪಾದಕರು ಶ್ರೀ. ಕೆ. ಹೊನ್ನಯ್ಯಶೆಟ್ಟಿ, ನವಯುಗ ಪ್ರೆಸ್ ಉಡುಪಿ. ಕ್ರಾ ೧/೮ ದ ೧೧೬ ಪುಟಗಳು. ಬೆಲೆ ೫-೦-೦.

ನವಯುಗದ ಸಂಪಾದಕರು ವಿಶೇಷ ಸಂಚಿಕೆಯನ್ನು ಯಾವಾಗಲೂ, ತುಂಬ ಆಸಕ್ತಿವಹಿಸಿ, ವಾಚಕ ವರ್ಗಕ್ಕೆ ಉಪಯುಕ್ತವೂ ಮನೋರಂಜಕವೂ ಎನಿಸುವಂತೆ ಹೊರಡಿಸುತ್ತಾರೆ. ಎಂದಿನಂತೆಯೆ ಈ ಸಲದ ವಿಶೇಷ ಸಂಚಿಕೆಯೂ ಇದೆ.

೧೨೦ **ಪ್ರೇಮಚಂದ-ಸಾಹಿತ್ಯ ಹಾಗೂ ವಿಮರ್ಶೆ** (೨ನೆಯ ಭಾಗ.) ಸಂಪಾದಕರು ಶ್ರೀಮಾನ್ ಬುರ್ಲಿ ಬಿಂದುಮಾಧವರು. ಧಾರವಾಡದ ಮಿಂಚಿನ ಬಳ್ಳಿಯ ೧೬ನೆಯ ವರ್ಷದ ೨ನೆಯ ಕುಡಿ. ಬೆಲೆ ಉತ್ತಮ ಪ್ರತಿಗೆ ೨-೦-೦; ಸಾದಾ ಪ್ರತಿಗೆ ೧-೮-೦. ಕ್ರಾ. ೮. ೧೫೦ ಪುಟಗಳು.

೧೨೧ **ಬಾಳಬಂಡಿ** (ಕವನ ಸಂಕಲನ) ಲೇಖಕರು ಶ್ರೀ. ಬಾಳು ಬಿ ಉಪಾಧ್ಯೆ. ಕಮನೇವಾಡಿ. ಪ್ರಕಾಶಕರು ಶ್ರೀಮಾನ್ ಮಿರ್ಜಿ ಅಣ್ಣಾರಾಯರು, ಶಾಂತಿ ಸೇವಾಸದನ, ಸೇಡಬಾಳ. ಕ್ರಾ. ೮. ೪೦ ಪುಟಗಳು. ಬೆಲೆ ೦-೮-೦.

೧೨೨ **ಮಂತ್ರಬೀಜಕೋಶ** (ಆಧ್ಯಾತ್ಮಿಕಾರ್ಥ ಕೋಶ.) ಸಂಪಾದಕರು ಸುರಕೋಡ ಹಿರಿಯಮಠದ ಚರಪಟ್ಟಾಧ್ಯಕ್ಷ ಶ್ರೀ. ಷ. ಬ್ರ, ಗುರುಪಾದ ಶಿವಾಚಾರ್ಯರು. ಪ್ರಕಾಶಕರು: ಶ್ರೀ. ವಿ ಬಿ. ಸುರಕೋಡ, ದಲಾಲಿ ಮರ್ಚಂಟ್, ನರಗುಂದ. ಕ್ರಾ. ೮. ೧೮೪ ಪುಟಗಳು. ಬೆಲೆ ೧-೦-೦.

೧೨೩. **ಲಿಂಗಾಂಗ ಸಮರಸ** (ಪದ್ಯ ಗ್ರಂಥ.) ಮೂಲ ಕಲಬುರ್ಗಿಯ ಶ್ರೀ ರೇವಣಾರ್ಯರು ಬರೆದುದನ್ನು ಸುರಕೋಡದ ಶ್ರೀ ಗುರುಪಾದ ಶಿವಾಚಾರ್ಯರು ಸಂಪಾದನೆ ಮಾಡಿದ್ದಾರೆ. ಪ್ರಕಾಶಕರು ಶ್ರೀ. ಎಂ. ಜಿ. ಪಾಟೀಲ ಬಿ. ಎಸ್‌ಸಿ. ಮ್ಯುನಸಿಪಲ್ ಹೈಸ್ಕೂಲ್, ನರಗುಂದ ಪೂ. ಕ್ರಾ. ೮ ೨೦ ಪುಟಗಳು. ಬೆಲೆ ೦-೩-೦.

ಈ ಮಾತುಗಳ ಹಿರಿಮೆಗಾಗಿ ಸರಳೆಯ ತಂದೆ ಬಂದು" ಕಾಗದದ ಪುಡಿಕೆಗಳನ್ನು ಎಲ್ಲರ ಕೈಗಿತ್ತು, ಕೊನೆಗೆ ಒಟ್ಟೊಬ್ಬರನ್ನಾಗಿ ಆಮಂತ್ರಿಸುವ ವಿಧಾನವು ಅನುಗೊಳಿಸಲ್ಪಟ್ಟಿದೆ. ಈ ಬಗೆಯ ಕಥಾಪ್ರಥಮಾವತಾರಕ್ಕಾಗಿ ಯೋಜಿಸಿದ ವಿಧಾನವು ಕಥೆಗಲಂಕಾರವಾಗಿದೆ.

ಅಂತೂ ಮನೋವಿಶ್ಲೇಷಣಾತ್ಮಕವಾಗಿ ತಲೆದೋರಿದ ಈ ಕಥೆ ಸಮರ್ಪಕವಾಗಿದೆ. ಆದರೆ ಈ ಬಗೆಯ ಮಾರ್ಮಿಕ ಕಥಾಸಂವಿಧಾನಕ್ಕೆ ಉಚಿತವಾದ ಭಾಷಾಸಂಪತ್ತು ಈ ಕಥೆಯಲ್ಲಿ ವಿಶೇಷವಾಗಿ ಸ್ಫುರಿಸುವುದಿಲ್ಲವೆನ್ನಬೇಕು. ಭಾವಪೂರ್ಣವಾದ ಶೈಲಿಯು ಮುಖ್ಯವಾಗಿ ಇಂತಹ ಕತೆಗಳ ಜೀವಾಳವಾಗಿದೆ. ಅಲ್ಲದೆ "ಬಣ್ಣ ರಕ್ತ ರಂಜಿತವಾಗಿದ್ದರೂ ಕಪ್ಪಿನಲ್ಲಿ ಲೆಕ್ಕವಿಲ್ಲ. ಮಾತಿನಲ್ಲಿ ಕೊದಲ್ಲು ವಿ-ಯಿಲ್ಲ. ಫೋಟೋಗಳಲ್ಲಿಯೂ ಸಲಕ್ಷಣಗಳಾಗಿ ಕಾಣುತ್ತಾಳೆ." ಈ ಮಾತುಗಳ ಅರ್ಥಗ್ರಹಣವು ತುಸು ದುಸ್ತರವಾದಂತಿದೆ.

ಏನಿದ್ದರೂ ಕಥೆಗಳಲ್ಲಿ ನೂತನ ಬಗೆಯ ಸಂವಿಧಾನ ಕೌಶಲವನ್ನು ಒಳಗೊಂಡ ಈ ಬಗೆಯ ಕಥೆಗಳನ್ನು ಬೆಳಕಿಗೆ ತರುವ-ಜಯಂತಿಯ ಭಾಷಾ ಸೇವೆಯು ಸಾರ್ಥಕವಾಗಲೆಂದೇ ಆಶೆ!

ಶರತ್ ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕಪ್ರಕಾಶಕರು ಮತ್ತು ಪುಸ್ತಕವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು!
ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ, ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

"ಆನಂದಕಂದ"ರ ಕಥೆ, ಕಾದಂಬರಿ, ಕವನಸಂಕಲನ, ನಾಟಕಸಂಕಲನ, ಸಾಹಿತ್ಯ, ಸಂಸ್ಕೃತಿಯ ಗ್ರಂಥಗಳು, ಎಲ್ಲವೂ ನಮ್ಮಲ್ಲಿ ದೊರೆಯುವವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮೀಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು.

ನಮ್ಮ ಮಂದಿರ ಪ್ರಕಟಿಸಿದ 'ಆನಂದಕಂದ'ರ ಸಾಮಾಜಿಕ ಕಾದಂಬರಿ :

ಮುಗಳ ಮದುವೆ

೧೯೩೦ ನೆಯ ಸತ್ಯಾಗ್ರಹ ಚಳವಳಿಯ ಹಿನ್ನೆಲೆಯಲ್ಲಿ ಉತ್ತರಕರ್ನಾಟಕದ ಸಾಮಾಜಿಕ ಜೀವನವನ್ನು ವಿವಿಧ ಮುಖದಲ್ಲಿ ಚಿತ್ರಿಸಿ ತೋರಿಸಿದ ರಮ್ಯ ಕಥಾನಕ. ಓದಲು ಕೈಯಲ್ಲಿ ತೆಗೆದುಕೊಂಡರೆ, ಮುಗಿಸುವ ವರೆಗೂ ಪುಸ್ತಕವನ್ನು ಕೆಳಗೆ ಇರಿಸಲಿಕ್ಕಾಗದಂತಹ ಆಕರ್ಷಕವಾದ ಕತೆಗಾರಿಕೆ. ಓದಿದ ರಸಿಕರಿಂದ ಧನ್ಯವಾದಗಳ ಸುರಿಮಳೆ!

ಕ್ರೌ. ೮. ೩೫೦ ಪುಟಗಳು ಸಾದಾ ಪ್ರತಿಗೆ ೪-೦-೦; ಸುಂದರ ಪ್ರತಿಗೆ ೪-೧೨-೦

ಬೆಳವಡಿ ಮಲ್ಲಮ್ಮ
(ತರಂಗನಾಟಕ ಸಂಕಲನ)
ಕ್ರೌ. ೮. ೧೧೬ ಪುಟ. ಬೆಲೆ ೧-೮-೦

ಕಾರಹುಣ್ಣಿವೆ
(ಕವನಸಂಕಲನ)
ಕ್ರೌ. ೮. ೧೨೮ ಪುಟ. ಬೆಲೆ ಸಾದಾ ೨-೦-೦ ಸುಂದರ ೨-೮-೦

ಬೆಂದ ಹೃದಯ
(ರೂಪಕ ಸಂಕಲನ)
ಕ್ರೌ. ೮. ೧೧೨ ಪುಟ ಬೆಲೆ ೧-೪-೦

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಬೇರೆ ಗ್ರಂಥಗಳು

ಕಾದಂಬರಿ	ಕವನ ಸಂಕಲನ	ಕಥಾಸಂಕಲನ	ಇತರ ಗ್ರಂಥಗ
ರಾಜಯೋಗಿ	**ವಿರಹಿಣಿ**	**ಬಡತನದ ಬಾಳು**	**ಕರ್ನಾಟಕ ಜನಜೀವನ**
ಸುದರ್ಶನ	**ಒಡನಾಡಿ**	**ನಮ್ಮ ಬದುಕು**	ಜೀವನ ಚರಿತ್ರ
ಅಶಾಂತಿಪರ್ವ		**ಸಂಸಾರ ಚಿತ್ರ**	**ಶ್ರೀ. ಬಸವಣ್ಣನವರು**
ಮುಗಳ ಮದುವೆ		**ಮಾತನಾಡುವ ಕಲ್ಲು**	

ಅಲ್ಲದೆ ಶ್ರೀ. ಹುದ್ದಾರರ '**ಚಿತ್ರಕಲಾಪ್ರವೇಶ**'ವೂ ಚಾಡಿಯ ಚಾಣಕ್ಯ '**ಜಾತೀಯ ಸಮಸ್ಯೆ**' '**ಕರ್ನಾಟಕ ಏಕೀಕರಣ**' ಈ ಕಿರುಹೊತ್ತಿಗೆಗಳೂ ದೊರೆಯುವುವು.

ಶರತ್ ಪ್ರಕಾಶನ ಮಂದಿರಕ್ಕೆ ೫ ರೂ. ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ ಸವಲತ್ತುಗಳು. ಬೇಗನೆ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ:

ಎಸ್. ಡಿ. ಧರಮಟ್ಟಿ, ಶರತ್ ಪ್ರಕಾಶನ ಮಂದಿರ, ಧಾರವಾಡ.

Printed by S. G. Kulkarni at the Sadhana Press, Dharwar. and pulished for the Proprietors Jayanti publications, by S. D. Dharmatti, at the Jayanti Office, Dharwar.

ಜಯಂತಿ

ಮೇ ೧೯೫೪

ಸಂಪುಟ ೧೬

ಸಂಚಿಕೆ ೧೨

ಬೆಲೆ ೮ ಆಣೆ

ಸಂಚಿಕೆಯಲ್ಲಿ :

ಹದಿನಾರು ವರ್ಷ ಮುಗಿದುವು (ಸಂಪಾದಕೀಯ) ಸಂಪಾದಕರು ೪೪೧

ಪ್ರಕೃತಿ-ಪುರುಷ (ಕವನ) 'ಅಂಬಿಕಾತನಯದತ್ತ' ೪೪೪

ವಿರಹ ಸೆರೆಮನೆ (ಕವನ) 'ಉಲುವೀಶ' ಕಿತ್ತೂರ ನಾಡು ೪೪೪

ಕರುಳು (ಸಣ್ಣ ಕತೆ) ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ ೪೪೫

ಸಾಲಿ ರಾಮಚಂದ್ರರಾಯರು (ವ್ಯಕ್ತಿಪರಿಚಯ) ಶ್ರೀ. ಗೋವಿಂದಮೂರ್ತಿ ದೇಸಾಯಿ, ಧಾರವಾಡ ೪೪೯

ಸಾಧನೆಯ ಹಾದಿಯಲಿ (ಕವನ) ಶ್ರೀ. ಎಂ. ಗೋಪಾಲಕೃಷ್ಣ ಭಟ್ಟ, ಪೆರಡಾಲ ೪೫೨

ಮುಗಿಲ ಮೋಹಿನಿಗೆ (ಕವನ) ಶ್ರೀ. ಸುರೇಶ ಹೊಸಟ್ಟಿ, ದುಧನಿ ೪೫೨

ರುಕ್ಮಿಣೀ ಸ್ವಯಂವರ (ಪೌರಾಣಿಕ ರೂಪಕ) ಶ್ರೀ. ರಂ. ಸ್ವಾ. ದೇಶಪಾಂಡೆ, ಆಲದಕಟ್ಟಿ ೪೫೩

ನಾನು ಹಳ್ಳಿಗೆ ಹೋದಾಗ (ಸತ್ಯಚಿತ್ರ) ಶ್ರೀ. ಬಿ. ಪಿ. ಎಸ್. ರಾವ್, ಬೆಳಗಾಂವಿ ೪೬೨

ಅಹಲ್ಯೆ (ನವ್ಯಕವನ) ಶ್ರೀ. ಶಾಂತಿನಾಥ ದೇಸಾಯಿ ಎಂ. ಎ., ಮುಂಬಯಿ ೪೬೬

ಭಕ್ತಿಯೋಗ (ಆಕಾಶವಾಣಿ ಭಾಷಣ) ಶ್ರೀ. ನಿ. ಸಂಗನಬಸವ ಶಿವಯೋಗಿಗಳು ಬಂಥನಾಳ ೪೬೭

ಕಲಾವಿದ ಕಂಡ ಬೆಳಕು (ಸಣ್ಣ ಕತೆ) ಶ್ರೀ. ಮಹಾಲಿಂಗ ಯಾಳಗಿ, ಧಾರವಾಡ ೪೭೦

ಸಾಹೇಬರ ಸವಾರಿ (ನಾಟ್ಯಛಟಾ) ಶ್ರೀ. ಗೋವರ್ಧನಾಚಾರ್ಯ, ಗಲಗಲಿ ಎಂ.ಎ., ಬಿ.ಟಿ. ೪೭೪

ಸಾಹಿತ್ಯ ವಿಹಾರ (ಒಂದು ಓಲೆ) ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು ೪೭೬

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ (ವಿಮರ್ಶೆ) ವಿದ್ವಾನ್ ಕೆ. ಶ್ರೀನಿವಾಸ ಶರ್ಮ, ಕಾಸರಗೋಡು ೪೭೭

ಸಾದರ ಸ್ವೀಕಾರ ೪೮೦

JAYANTI

ಅವಧಿಯನ್ನು ಮುಂದುವರಿಸಲಾಗಿದೆ!

◆ ಸಣ್ಣಕತೆಗಳ ಮೇಲಾಟ ◆

ಆಕರ್ಷಕವಾದ ಮೂರು ಬಹುಮಾನಗಳು

೨೦ ರೂ.　　೧೫ ರೂ.　　೧೦ ರೂ.

೧೯೫೪ನೆಯ ಮೇ ೩೦ನೆಯ ದಿನಾಂಕದೊಳಗೆ ತಲ್ಪುವಂತೆ ಕತೆಗಳನ್ನು ಕಳುಹಬೇಕು.

ಮೇಲಾಟದ ನಿಯಮಗಳು:

೧. ಕತೆಯು ಸ್ವತಂತ್ರವಾಗಿದ್ದು ಕರ್ನಾಟಕದ ಸಾಮಾಜಿಕ ಹಿನ್ನೆಲೆಯಿಂದ ಕೂಡಿದುದಾಗಿರಬೇಕು.

೨. ಜಯಂತಿಯ ಮುದ್ರಿತ ಪುಟ ೫ಕ್ಕಿಂತ ಹೆಚ್ಚಿಗಾಗಬಾರದು; ಎಂದರೆ ಫೂಲ್ಸ್‌ಕ್ಯಾಪ್ ಅರ್ಧಹಾಳೆ ೮ರಲ್ಲಿ ಮುಗಿದಿರಬೇಕು.

೩. ವಯಸ್ಸಿನ ನಿರ್ಬಂಧವಿಲ್ಲ ಹಿರಿಯರು ಕಿರಿಯರು ಎಲ್ಲರೂ ಮೇಲಾಟದಲ್ಲಿ ಭಾಗವಹಿಸಬಹುದು.

೪. ಒಬ್ಬರೇ ಲೇಖಕರು ೨-೩ ಕತೆಗಳನ್ನೂ ಮೇಲಾಟಕ್ಕೆ ಕಳುಹಬಹುದು. ಆದರೆ, ಒಬ್ಬರೇ ಎಲ್ಲ ಬಹುಮಾನಗಳನ್ನು ಪಡೆಯಲಾರರು.

೫. ಮೇಲಾಟಕ್ಕಾಗಿ ಕತೆಗಳನ್ನು ಕಳುಹುವವರು ತಮ್ಮ **ಪ್ರತಿಯೊಂದು ಕತೆಗೆ ೮ ಆಣೆಯಂತೆ ಪ್ರವೇಶ ಧನವನ್ನು ಕಳುಹಬೇಕು.** ಅಂಚೆಯ ಟಿಕೇಟು, ನಗದುಹಣ, ಪೋಸ್ಟಲ್ ಆರ್ಡರ್ ರೂಪದಲ್ಲಿ ಕಳುಹಬಹುದು.) ಪ್ರವೇಶಧನವಿಲ್ಲದೆ ಬಂದ ಕತೆಗಳನ್ನು ಮೇಲಾಟದಲ್ಲಿ ಸೇರಿಸಿಕೊಳ್ಳುವದಿಲ್ಲ.

೬. ಕತೆಯನ್ನು ಕಳುಹಬಹುದಾದ ಕೊನೆಯ ದಿನವೆಂದರೆ ೧೯೫೪ ನೆಯ ಮೇ ೩೦ ನೆಯ ದಿನಾಂಕ. ಮೇಲಾಟದಲ್ಲಿ ಮೇಲಿನ ಕ್ರಮಾಂಕ ಪಡೆದ ಕತೆಗಳನ್ನೆಲ್ಲ ಜೂನ್ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

೭. ಬಹುಮಾನಕ್ಕೆ ತಕ್ಕ ಕತೆಗಳು ಬಾರದಿದ್ದಲ್ಲಿ ಬಹುಮಾನ ಕೊಡದೆ ಇರುವುದಕ್ಕೂ ಬಂದುವುಗಳಲ್ಲಿ ಒಳ್ಳೆಯವೆಂದು ತೋರಿದ ಕತೆಗಳಿಗೆ ತಕ್ಕ ಮನ್ನಣೆ ಸಲ್ಲಿಸಲಿಕ್ಕೂ "ಜಯಂತಿ"ಯ ಸಂಪಾದಕ ಮಂಡಲಿ ತನ್ನ ಕಡೆಗೆ ಕೊನೆಯ ಅಧಿಕಾರವನ್ನಿರಿಸಿಕೊಂಡಿದೆ.

ಕನ್ನಡ ಕತೆಗಾರರೆಲ್ಲ ಉತ್ಸಾಹದಿಂದ ಭಾಗವಹಿಸಬೇಕು.

ಸಂಪಾದಕರು: 'ಜಯಂತಿ' ಧಾರವಾಡ

ಜಯಂತಿ

ಸಂಪುಟ ೧೬ ಸಂಚಿಕೆ ೧೨

ಕುಟುಂಬದಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕರು :
ಮತ್ತು
ಪ್ರಕಾಶಕರು :
ಶ್ರೀ. ಡಿ. ಶರತ್‌ಕುಮಾರ

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ
ಬಿಡಿ ಸಂಚಿಕೆ ೮ ಆಣೆ

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಹದಿನಾರು ವರ್ಷಗಳು ತುಂಬಿದುವು !

ಜಯಂತಿಯ ಹದಿನಾರನೆಯ ವರ್ಷದ ಕೊನೆಯ ಸಂಚಿಕೆಯಿದು. ಜಯಂತಿಗೆ ಹದಿನಾರು ವರ್ಷಗಳು ತುಂಬಿದುವು-ಎಂಬ ಮಾತನ್ನು ಕೇಳಿದಾಗ, ನಮ್ಮದು ನಮಗೇ ಆಶ್ಚರ್ಯವಾಗುತ್ತದೆ. ಹುಟ್ಟಿದಂದಿನಿಂದಲೂ ಒಂದರ ಹಿಂದೊಂದಾಗಿ ಎದುರಿಸಿದ ವಿರೋಧಕ ಪರಿಸ್ಥಿತಿಗಳನ್ನು ಲಕ್ಷ್ಯಕ್ಕೆ ತಂದುಕೊಂಡು ನೋಡಿದರೆ, ಇಂತಹ ಗಂಡಾಂತರಗಳನ್ನು ದಾಟುತ್ತ ಹದಿನಾರು ವರ್ಷಗಳನ್ನು ಹೇಗೆ ಕಳೆದಿರಬಹುದೆಂದು ಯಾರೂ ಆಶ್ಚರ್ಯ ಪಡುವಂತಿದೆ.

ತುಂಬ ವಿಜೃಂಭಣೆಯಿಂದಲೇ ಪ್ರಾರಂಭವಾದ ಈ ಪತ್ರಿಕೆಯು, ಮೂರು ವರ್ಷಗಳು ಮುಗಿಯುವುದರಲ್ಲಿಯೆ ಬಾಲಾರಿಷ್ಟರೋಗದಿಂದ ಸಾಯುವುದರಲ್ಲಿದ್ದಿತು. ಅಂತಹ ಪರಿಸ್ಥಿತಿಯಲ್ಲಿಯೆ ಆ ರೋಗದ ಕೂಸನ್ನು ಸಾಕಲು ತೆಗೆದುಕೊಂಡು, ತುಂಬ ಚಿಕಿತ್ಸೆ-ಉಪಚಾರಗಳಿಂದ ಬದುಕಿಸಲಾಯಿತು. ಈ ಚಿಕಿತ್ಸೆ-ಉಪಚಾರಗಳಿಗಾಗಿ ಸಾಕಷ್ಟು ಹಣವನ್ನು ಹಾಕಬೇಕಾಯಿತು. ಹಾಕಿದ ಹಣವು ಮರಳಿ ಬರುವುದೆಂಬ ನಿರೀಕ್ಷೆ ಆಗಲೂ ಇರಲಿಲ್ಲ; ಈಗಲೂ ಇಲ್ಲ.

ಮುಂದೆ ಮಹಾಯುದ್ಧ ಬಂದು, ಅಚ್ಚಿನ ಕಾಗದ ದುರ್ಮಿಳವಾಯಿತು. ಒಂದಕ್ಕೆ ಇಪ್ಪತ್ತರಷ್ಟು ಹೆಚ್ಚಿನ ಬೆಲೆಗೆ ಕಾಗದ ದೊರೆತರೂ, 'ದೊರೆಯಿತಲ್ಲಾ!' ಎಂದು ಸಮಾಧಾನ ಪಡುವಂತಹ ಕಾಗದದ ಬರಗಾಲವಾಗ. ಆಗಲೂ ಬೇಡಿದಷ್ಟು ಬೆಲೆಕೊಟ್ಟು ಕಾಗದ ಸಂಪಾದಿಸಿ ಜಯಂತಿಯನ್ನು ಜೀವದಿಂದಿಡಲಾಯಿತು.

ಯುದ್ಧ ನಿಂತಿತು; ಸ್ವಾತಂತ್ರ್ಯ ದೊರೆಯಿತು. ಈಗಲೂ ಜಯಂತಿಗೆ ಒಳ್ಳೆಯ ಕಾಲ ಬರಲಿಲ್ಲ. ಮುದ್ರಣದರಗಳು ಮುಮ್ಮಡಿಯಷ್ಟು ಏರಿದುವು. ಕಾಗದದ ಏರಿದ ದರವೂ ಕಡಿಮೆಯಾಗಲಿಲ್ಲ. ಆದರೂ ಜಯಂತಿಯನ್ನು ಬದುಕಿಸಿ ಕನ್ನಡ ಸಹೃದಯರ ಸೇವೆಗೆ ಕಳುಹಲಾಯಿತು.

ಜಯಂತಿಯನ್ನು ಹದಿನಾರು ವರ್ಷ ಜೀವದಿಂದಿರಿಸಿದುದರ ಪರಿಣಾಮವೇನೆಂದರೆ, ಪ್ರತಿವರ್ಷವೂ ಸಂಪಾದಕರು ಸಹಿಸಬೇಕಾದ ನಷ್ಟ. ಜಯಂತಿಯನ್ನು ಯಾವ ಸ್ವರೂಪದಲ್ಲಿ ತೆಗೆದರೂ ಅದರ ಚಂದಾದಾರರ ಸಂಖ್ಯೆಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂಬುದು ಆಶ್ಚರ್ಯದ ಮಾತೇ ಆಗಿದೆ. ಪ್ರಾರಂಭದ ವರ್ಷಗಳಲ್ಲಿ ೮೦ ಪುಟಗಳ ಸಚಿತ್ರಸಂಚಿಕೆಯನ್ನು ಹೊರಡಿಸಿ ೩ ರೂ. ಚಂದಾ ಇರಿಸಿದಾಗ ಚಂದಾದಾರರ ಸಂಖ್ಯೆ ಎಷ್ಟಿದ್ದಿತೋ, ಅಷ್ಟೇ ಈಗಲೂ ಇದೆ. ಈಗ ಚಿತ್ರವಿಲ್ಲದೆ ಇರುವ ೬೦ ಪುಟಗಳ ಸಂಚಿಕೆ, ವಾರ್ಷಿಕ ಚಂದಾ ೫ ರೂಪಾಯಿ. ಆದರೂ ಚಂದಾದಾರರ ಸಂಖ್ಯೆಯಲ್ಲಿ ಹೆಚ್ಚು-ಕಡಿಮೆಯಾಗಿಲ್ಲ.

ಜಯಂತಿ ತನ್ನ ಗುಣವೈಶಿಷ್ಟ್ಯದ ಮೂಲಕ, ಹಣವನ್ನು ಗಳಿಸುತ್ತಿಲ್ಲವಾದರೂ ಜನರ ಆದರವನ್ನು ಗಳಿಸುತ್ತ ಬಂದಿದೆ. ಸಹೃದಯ ಕನ್ನಡಿಗರ ಮನದಲ್ಲಿ ಜಯಂತಿ ತನ್ನದೊಂದು ಸ್ಥಾನವನ್ನು ಕಲ್ಪಿಸಿಕೊಂಡು ಬಿಟ್ಟಿದೆ. ಇದಕ್ಕೆ ಪ್ರತ್ಯಕ್ಷ ಉದಾಹರಣೆಯೆಂದರೆ, ಕರ್ನಾಟಕದಲ್ಲಿಯ ಅನೇಕ ವಾಚನಾಲಯಗಳೂ ವಿದ್ಯಾಸಂಸ್ಥೆಗಳೂ ತಪ್ಪದೆ ಜಯಂತಿಯನ್ನು ತರಿಸಿಕೊಳ್ಳುತ್ತಲಿವೆ. ಜಯಂತಿಯ ಚಂದಾದಾರರ ಸಂಖ್ಯೆಯಲ್ಲಿ ಮುಕ್ಕಾಲು ಮೂರುವೀಸಪಾಲು, ವಾಚನಾಲಯ ವಿದ್ಯಾಸಂಸ್ಥೆ–ಇವುಗಳದೇ ಆಗಿದೆ. ವೈಯಕ್ತಿಕವಾಗಿ ಹಣ ಸಲ್ಲಿಸಿ ಚಂದಾದಾರರಾಗಿರುವವರ ಸಂಖ್ಯೆ ತೀರ ಚಿಕ್ಕದಾಗಿದೆ. ಆದರೆ ಜಯಂತಿಯನ್ನು ಓದುವವರ ಸಂಖ್ಯೆ ಸಾಕಷ್ಟು ದೊಡ್ಡದಾಗಿದೆಯೆಂಬುದು ನಮ್ಮ ಅನುಭವದ ಸಂಗತಿಯಾಗಿದೆ. ಈ ಅನುಭವವೇ ನಮ್ಮನ್ನು ಉತ್ಸಾಹದಿಂದ ಮುಂದೆಮುಂದೆನೂಕಿ, ಜಯಂತಿಯನ್ನು ಮತ್ತೆ ಮತ್ತೆ ಮುಂದುವರಿಸಲು ಹಚ್ಚುತ್ತವೆ.

ಆದರೆ ಜಯಂತಿಯ ಸಂಪಾದಕರ ಭಾಂಡಾರವೇನೂ ಅಕ್ಷಯವಾದುದಲ್ಲ. ಪರಿಮಿತಧನದಿಂದ ಕೂಡಿದ್ದಿತು. ಈ ಹದಿನಾರು ವರ್ಷಗಳಲ್ಲಿ ಆ ಭಾಂಡಾರವು ಬರಿಯದಾಗಿ, ಹತ್ತು ಸಾವಿರ ರೂಪಾಯಿಗಳ ಸಾಲದ ಹೊರೆಯನ್ನು ಸಂಪಾದಕರು ಹೊರಬೇಕಾಗಿದೆ. ಇನ್ನು ಹೆಚ್ಚಿನ ಹೊಣೆಯನ್ನು ಹೊರುವ ಸಾಮರ್ಥ್ಯ ಸಂಪಾದಕರಲ್ಲಿ ಇಲ್ಲವಾದುದರಿಂದ, ಜಯಂತಿ ತನ್ನ ಜೀವಿತ-ಅಸ್ತಿತ್ವಗಳಿಗಾಗಿ, ಉದಾರಿಗಳಾದ ಕನ್ನಡಿಗರ ಕೈಯ ಕಡೆಗೇ ಆಶೆಯಿಂದ ನೋಡಬೇಕಾಗಿದೆ.

ಮೊದಲಿನಿಂದಲೂ ಜಯಂತಿ ಸರ್ವಸಮಾಜದ ಸುಖ-ಶಾಂತಿಗಳ ಗುರಿಯನ್ನಿಟ್ಟುಕೊಂಡು ಹೊರಟಿದೆ. ಆದುದರಿಂದ ಈ ಪತ್ರಿಕೆ, ಯಾವುದೊಂದು ಪಕ್ಷ-ಪಂಗಡಗಳ—ಯಾವುದೊಂದು ರಾಜಕೀಯ ವಿಚಾರದ—ಪುರಸ್ಕರ್ತ್ರವಾಗಿ ಕಾರ್ಯ ಮಾಡುತ್ತಿಲ್ಲ. ಜಯಂತಿ ಎಲ್ಲರ ಪತ್ರಿಕೆ; ಆದುದರಿಂದಲೇ ಅದಕ್ಕೆ ತಕ್ಕ ಪೋಷಣೆ ದೊರೆಯುತ್ತಿಲ್ಲ. ಜಾತಿ, ಪಂಗಡ, ಮತ, ಪಂಥ ಇವುಗಳ ಪಟ್ಟಿಯನ್ನು ಹಣೆಗೆ ಹಚ್ಚಿಕೊಂಡಿದ್ದರೆ, ಜಯಂತಿಗೆ ಈಗಿರುವುದಕ್ಕಿಂತ ಆರ್ಥಿಕ ಪರಿಸ್ಥಿತಿ ಅನುಕೂಲವಾಗಿರಬಹುದಾಗಿತ್ತೇನೋ! ಆದರೆ ಜಯಂತಿ ಇರಿಸಿಕೊಂಡ ಗುರಿಯೆಂದರೆ, ಊರ ಗುದ್ದಲಿ ತೆಗೆದುಕೊಂಡು, ನಾಡ ಕಾಲುವೆ ಕಡಿಯಲು ಹೋಗುವುದು! ಕೂಲಿಯೇನು ದೊರೆತೀತೆಂಬ ವಿಚಾರವನ್ನೇ ಅದು ಮಾಡಿಲ್ಲ.

ಈ ಹದಿನಾರು ವರ್ಷಗಳಲ್ಲಿ ಅದು ನಾಡಿನಲ್ಲಿ ಕಾಲುವೆ ಕಡಿದು, ವಿಚಾರಪ್ರವಾಹಗಳನ್ನೂ ರಸದ ಝರಿಗಳನ್ನೂ ಹರಿಸಿದೆಯೆಂಬುದನ್ನು ಎಲ್ಲರೂ ಬಲ್ಲರು. ಮುಂದೆಯೂ ಇಂತಹ ಕೆಲಸಕ್ಕಾಗಿಯೆ ಜಯಂತಿ ಬದುಕಿ-ಬಾಳಬೇಕಾಗಿದೆ. ಅದಕ್ಕೆ ಬೇಕಾಗುವ ಆಹಾರ ಸಾಮಗ್ರಿಗಳನ್ನು ಸಮೃದ್ಧವಾಗಿ ಒದಗಿಸಿಕೊಡಬೇಕೆಂಬ ಜಾಗೃತಿ ನಮ್ಮ ನಾಡಿಗರಲ್ಲಿ ಮೂಡಿದರೆ ಸಾಕು. ಈಗ ಜಯಂತಿಯ ಪರಿಸ್ಥಿತಿಯೆಂದರೆ, 'ಎಲ್ಲರ ಪತ್ರಿಕೆ' ಎಂದು ಕರೆಯಿಸಿಕೊಳ್ಳುತ್ತಿದ್ದರೂ, ಯಾರದೂ ಅಲ್ಲದ ಪತ್ರಿಕೆಯಾಗಿ ಬಾಳನ್ನು ನೂಕುತ್ತಲಿದೆ.

ಜಯಂತಿ ಹೇಡಿಯಲ್ಲ; ಕೆಲಸಗೇಡಿಯಲ್ಲ; ಉತ್ಸಾಹಹೀನೆಯಲ್ಲ; ಅಳುಬುರುಕಿಯಲ್ಲ ಆದರೆ ಆರ್ಥಿಕ ಅಸಾಮರ್ಥ್ಯದ ಮೂಲಕ, ಮಾಡಬೇಕೆಂದಿರುವಷ್ಟು ಕಾರ್ಯವನ್ನು ಮಾಡಲಿಕ್ಕಾಗಲೊಲ್ಲದಲ್ಲ! —ಎಂಬ ಕಳವಳದಿಂದ ಕುದಿಯುತ್ತಲಿದೆ. ಸಂಪಾದಕರ ಏಕಾಕಿ ಹಸ್ತದ ದುಡಿಮೆಯು ಪಡಿ ಸಾಲದಾಗಿದೆ. ಪ್ರಾಮಾಣಿಕತನದಿಂದ ದುಡಿಯುವ ಕಾರ್ಯಕರ್ತರ ಬಲವು ಜಯಂತಿಗೆ ಇದುವರೆಗೆ ಎಂದೂ ದೊರೆತಿಲ್ಲ. ಆದುದರಿಂದಲೇ ಜಯಂತಿ ವರ್ಷಕ್ಕೊಂದು ಸಲ ಕನ್ನಡಿಗರ ಬಳಿ ಮೊರೆಯಿಡುತ್ತದೆ. ಕನ್ನಡಿಗರ ಅಸಂಖ್ಯ ಸಹಾಯಹಸ್ತಗಳು ನೆರವಿಗೆ ದೊರೆತರೆ, ಸಂಪಾದಕರ ಕಾರ್ಯಕಾರಿಶಕ್ತಿ ಹತ್ತು ಮಡಿ ಹಿಗ್ಗುವುದು. ಆದರಿಂದ ಜಯಂತಿಯ ಜೀವನ ನಿರ್ಭಯದಿಂದ ಸಾಗುವುದು.

ಈಗೊಂದು ಮುಖ್ಯವಾದ ಬಿನ್ನಹ ನಾಡಿಗರಲ್ಲಿ : ಜಯಂತಿಯ ಅಸ್ತಿತ್ವ ನಾಡಿಗೆ ಆವಶ್ಯಕವೆಂದು ಭಾವಿಸುವವರೆಲ್ಲರೂ ಜಯಂತಿಯ
ಚಂದಾದಾರರ ಬಳಗವನ್ನು ಹೆಚ್ಚಿಸುವ ಕಾರ್ಯವನ್ನು ಮಾಡಬೇಕ
ಬಾಯಿತೆರೆದು ಕೇಳಿದರೆ, ಉದಾರ ಸಿರಿವಂತರಿಂದ ಸಹಾಯಧನ
ಸಿಕ್ಕಬಹುದು; ಆದರೆ ಅದಕ್ಕಿಂತ ಜಯಂತಿ, ಜನರಿಗಾಗಿ ದುಡಿ
ಅವರು ಸಲ್ಲಿಸಿದ ಪಡಿಯಿಂದಲೇ ಬದುಕಬೇಕೆಂಬ ಆದರ್ಶವಾದ
ಪುರಸ್ಕರ್ತ್ರವಾಗಿದೆ.

ಈ ವರುಷದ ಕಾರ್ಯ

ಈ ಹದಿನಾರನೆಯ ವರ್ಷದಲ್ಲಿ ಜಯಂತಿಯು ಮಾಡಿ
ಸಾಹಿತ್ಯ ಪ್ರಚಾರಕಾರ್ಯವು ಅಲಕ್ಷಿಸುವಂತಹದೇನೂ ಅ
ಯಾವುದೇ ವಿಶೇಷಸಂಚಿಕೆಯನ್ನು ಚಂದಾದಾರರಿಗೆ ಕೊಟ್ಟಿ
ವಾದರೂ, ಪ್ರತಿಯೊಂದು ಸಂಚಿಕೆಯೂ ತನ್ನದೊಂದು ವೈಶಿಷ್ಟ್ಯದಿ
ಕೂಡಿರುವಂತೆ ಸಂಪಾದನೆಯು, ಜಾಗೃತಿಯನ್ನು ವಹಿಸಲಾಗಿ
ಸಣ್ಣಕತೆಗಳು, ಏಕಾಂಕ, ಲಲಿತ ಪ್ರಬಂಧ, ಜೀವನ ಚರಿತ್ರೆ
ವೈಜ್ಞಾನಿಕ ಲೇಖನ, ಪರಿಚಯಾತ್ಮಕ ಪ್ರಬಂಧ—ಇವುಗಳಿಂದ ಪ್ರ
ಯೊಂದು ಸಂಚಿಕೆಯೂ ವಾಚಕರ ಮನಸ್ಸಿಗೆ ರುಚಿಯೆನಿಸಿದೆ. ಸಂಪ
ದಕೀಯ ವಿಚಾರಗಳಂತೂ, ಅನೇಕ ಜನ ವಾಚಕರಿಂದ ಪ್ರಶಂಸೆ
ಮಾಲೆಯನ್ನೇ ಹಾಕಿಸಿಕೊಂಡಿವೆ. ಸಂಪಾದಕರ ಸೂಕ್ಷ್ಮರೀತಿಯ
ಆಯ್ಕೆಯ ದೋರಣದ ಮೂಲಕ, ಅನೇಕ ತರುಣಲೇಖಕರು ಅನಿ
ವಾರ್ಯವಾಗಿ ನೊಂದುಕೊಳ್ಳಬೇಕಾಗುತ್ತದೆ; ಆದರೆ ಬೆನ್ನು ತ
ಪ್ರೋತ್ಸಾಹಿಸುವಂತಿದ್ದ ಯಾವ ತರುಣ ಲೇಖಕರನ್ನೂ ಜಯಂ
ಕಡೆಗಣಿಸಿಲ್ಲವೆಂಬುದನ್ನು ಯಾರೂ ಮರೆಯಲಾಗದು. ಪ್ರೋತ್ಸಾಹ
ವೆಂದು, ಬಂದ ಲೇಖನಗಳನ್ನೆಲ್ಲ ಪ್ರಕಟಿಸುತ್ತ ಹೋದರೆ, ಜಯಂತಿ
ಈಗ ಇರುವ ವೈಶಿಷ್ಟ್ಯವು ಉಳಿಯಬೇಕು ಹೇಗೆ?

ಡೆಮಿ ೧/೮ ದ ೫೦೦ ಪುಟಗಳನ್ನು, ಅಂಚೆಯ ವೆಚ್ಚ ಸಹಿ
೫ ರೂಪಾಯಿಗಳಿಗೆ ಕೊಡುವುದೆಂದರೆ—ಈಗಿನ ದಿನಗಳಲ್ಲಿ ಶು
ಎಂದು ಯಾರೂ ಹೇಳಲಾರರು. ಜಯಂತಿ ಈ ವರ್ಷ ೫೦
ಕ್ಕಿಂತಲೂ ಹೆಚ್ಚು ಪುಟಗಳನ್ನು ಕೊಟ್ಟಿದೆ. ಮುಂದಿನ ವರ್ಷದ
ಅನುಕೂಲ ಕಾಲ ದೊರೆತರೆ, ಇದಕ್ಕಿಂತ ಹೆಚ್ಚಿನ ಪುಟಸಂಖ್ಯೆಯನ
ಸಲ್ಲಿಸಬಹುದು.

ನಮ್ಮ ಏಜಂಟರು

ಅದೇಕೋ, ಈ ವರುಷ ಬಹಳ ಜನ ಏಜಂಟರು ನಮ್ಮೊಂದಿ
ಸಮಯನಿಷ್ಠೆಯನ್ನಿರಿಸಿ ನಡೆದುಕೊಳ್ಳದೆ ತೊಂದರೆ ಕೊಡುತ್ತ ಬಂ
ದ್ದಾರೆ. ಹಣವು ಬಂದೇ ಬರುವುದೆಂಬ ನಂಬುಗೆಯಿಂದ ಜಯಂ
ಯನ್ನು ಕಳುಹುತ್ತಿದ್ದರೆ, ಆರಾರು ಎಂಟೆಂಟು ತಿಂಗಳಾದರೂ ಬಾ
ಯನ್ನು ಕಳುಹದವರೂ ಕೆಲವು ಜನರು ಹೊರಟಿದ್ದಾರೆ. ಕಾ
ಮಹಿಮೆ! ಏಜಂಟರೆಂದರೆ ಜಯಂತಿಗೆ ರಕ್ತನಾಳಗಳಿದ್ದಂತೆ. ಈ ರ
ನಾಳಗಳ ಕಾರ್ಯ ಸರಿಯಾಗಿ ನಡೆಯದೆ ಹೋದರೆ, ಪತ್ರಿಕೆಯ ಜೀ
ತಕ್ಕೆ ಗಂಡಾಂತರವು ತಪ್ಪಿದುದಲ್ಲ. ಬಾಕಿ ನಿಲ್ಲಿಸಿಕೊಂಡ ಎ
ಏಜಂಟರೂ ದಯೆಯಿಟ್ಟು ಕೂಡಲೇ ಹಣ ಕಳುಹುವ ಉಪಕಾ
ಮಾಡಬೇಕು. ವಿಶ್ವಾಸದಿಂದ ವರ್ತಿಸಿದ ನಮ್ಮ ಏಜಂಟರಿಗೆ ಕೃತಜ್ಞ
ತೆಯ ವಂದನೆಗಳು.

ಅಭಿನಂದನೆಗಳು

ಹಲವಾರು ಜನರ ಸಕ್ರಿಯ ಸಹಾನುಭೂತಿ--ಸಹಕಾರಗಳು ಸಕಾಲದಲ್ಲಿ ಸಿಕ್ಕದೆ ಹೋಗಿದ್ದರೆ, ಈ ಸಲದ ಜಯಂತಿಯ ಮಾರ್ಗ ಕ್ರಮಣ ನಿಜವಾಗಿಯೂ ಕುಂಠಿತವಾಗುತ್ತಿತ್ತು. ಇಂತಹ ಸಹಕಾರಿಗಳಲ್ಲಿ ಮೊದಲನೆಯವರನ್ನಾಗಿ ಹೆಸರಿಸಬೇಕೆಂದರೆ, ಧಾರವಾಡದ ವಿಜಯ ಮುದ್ರಣಾಲಯ ಒಡೆಯರಾದ ಶ್ರೀ ಹೊಸಕೇರಿ ನಾರಾಯಣರಾಯರು. ಇವರು ಜಯಂತಿಗೆ ಕೊಟ್ಟ ಸಹಕಾರ ಬಹುಮುಖವಾದುದು. ಸಾಧನ ಮುದ್ರಣಾಲಯದ ಒಡೆಯರಾದ ಕುಲಕರ್ಣಿ ಶೇಷಗಿರಿರಾಯರ ನೆರವೂ ಜಯಂತಿಗೆ ಶಕ್ತಿಯನ್ನೊದಗಿಸಿದೆ.

ಏಪ್ರಿಲ್, ಮೇ ಸಂಚಿಕೆಗಳೆರಡಕ್ಕೂ ಸಾಲುವಷ್ಟು ಕಾಗದವು ಶ್ರೀಮಾನ್ ಮೋಹರೇ ಹಣಮಂತರಾಯರ ಔದಾರ್ಯದಿಂದ, ಪುಕ್ಕಟೆಯಾಗಿ ದೊರೆಯಿತು, ಅದಕ್ಕಾಗಿ ಶ್ರೀಮಾನ್ ಮೋಹರೆಯವರಿಗೂ ಅವರ 'ಸಂಯುಕ್ತ ಕರ್ನಾಟಕ' ಪ್ರಕಾಶನಸಂಸ್ಥೆಗೂ ಕೃತಜ್ಞತೆಯ ವಂದನೆಗಳನ್ನು ಸಲ್ಲಿಸುತ್ತೇವೆ.

ಡಾ. ದೇಶಪಾಂಡೆ ಭಗೀರಥರಾಯರು, ಡಾ. ಕಮಲಾಪುರ ಕಾಂತರಾಯರು, ಶ್ರೀ. ದೀಕ್ಷಿತ ನರಸಿಂಗರಾಯರು, ಶ್ರೀ. ಕಣವೀಕರ ವಕೀಲರು, ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಶ್ರೀ. ಮೆಳ್ಳಿಗಟ್ಟಿಯವರು–ಇವರೆಲ್ಲರ ಉದಾರವೃಷ್ಟಿಯೂ ಜಯಂತಿಯ ದಾರಿಯನ್ನು ಸುಗಮ ಮಾಡಿಕೊಟ್ಟಿದೆ. ಆದುದರಿಂದ ಈ ಮಹನೀಯರಿಗೆಲ್ಲ ವಂದನೆಗಳು.

ಚಂದಾದಾರರಲ್ಲಿ

ಜಯಂತಿಯ ಜೀವಿತವು ಅವಲಂಬಿಸಿ ನಿಂತುದೇ ಚಂದಾದಾರರ ಬಳಗವನ್ನು. ಅವರು ಆದರಿಸಿ ಮೈದಡಹದಿದ್ದರೆ, ಜಯಂತಿಯ ಉತ್ಸಾಹವೇ ಶೂನ್ಯವಾಗುವುದು. ಚಂದಾದಾರರ ಸಹಕಾರವೇ ನಮ್ಮ ಮಾರ್ಗದ ಮೂಲ ತಳಹದಿ ಹಳೆಯ ವರ್ಷದ ಕೊನೆಯಲ್ಲಿ ಅವರಿಗೂ ನಮ್ಮ ಆದರದ ವಂದನೆಗಳನ್ನು ಸಲ್ಲಿಸುತ್ತೇವೆ.

ಜಯಂತಿಯ ವಿಷಯಕವಾಗಿರುವ ಜನಪ್ರೀತಿಯ ಒಂದು ಮಾದರಿ

ಮೊನ್ನೆ ಒಂದು ದಿನ, ಪಾಕೆಟ್ಟು ಪತ್ರವೊಂದು ಅಂಚೆಯಿಂದ ಬಂದಿತು. ಯಾರದಾದರೂ ಲೇಖನವೋ ಕವಿತೆಯೋ ಇರಬಹುದೆಂಬ ನಿತ್ಯದ ಸಹಜಭಾವನೆಯಿಂದ ಒಡೆದು ನೋಡಿದಾಗ, ಪಾಕೀಟಿನಲ್ಲಿ ಒಂದು ಪತ್ರವೂ ಐದು ರೂಪಾಯಿಗಳದೊಂದು ನೋಟೂ ಕಣ್ಣಿಗೆ ಬಿದ್ದು ಕುತೂಹಲವನ್ನುಂಟು ಮಾಡಿದುವು. ಅದೇ ಕುತೂಹಲದಲ್ಲಿ ಪತ್ರವನ್ನೋದಿ ಮುಗಿಸಿದಾಗ, ಜಯಂತಿಯನ್ನು ಈ ರೀತಿಯಲ್ಲಿ ಪ್ರೀತಿಸುವ ಹಿತಚಿಂತಕರೂ ಇದ್ದಾರಲ್ಲವೇ—ಎಂಬ ಸಾತ್ತ್ವಿಕ ಅಹಂಕಾರ ತಲೆದೋರಿತು. ಪತ್ರ ಬರೆದವರು ಸಂಪೂರ್ಣ ಅಜ್ಞಾತರಾಗಿ ಉಳಿಯಲು ಬಯಸಿದ್ದಾರೆ. ಪತ್ರದ ಮೇಲೆ ಹೆಸರು–ದಸಿಗಳಿಲ್ಲವಾದರೂ ಪತ್ರಬರೆದ ವ್ಯಕ್ತಿ ಧಾರವಾಡದ್ದೇ ಎಂಬುದು ಗೊತ್ತಾಗುವಂತಿದೆ. ತಾವು ಕಳುಹಿದ ಸಹಾಯಧನವು ಜಯಂತಿಗೆ ತಲ್ಪಿದೆಯೆಂಬುದು ತಿಳಿಯುವಂತೆ, ಎಲ್ಲಿಯಾದರೂ ಮೂಲೆಯಲ್ಲಿ 'B. K. G.' ಎಂಬ ಸಂಕೇತಾಕ್ಷರಗಳನ್ನೂ ಮುದ್ರಿಸಲು ಸೂಚಿಸಿದ್ದಾರೆ. ತಮ್ಮ ಪತ್ರದ ವಿಷಯವನ್ನು ಎಲ್ಲಿಯೂ ಪ್ರಕಟಿಸಬಾರದಾಗಿ ಬರೆದಿದ್ದಾರಾದರೂ, ಅವರ ಕ್ಷಮೆಯನ್ನು ಕೋರಿ, ಜಯಂತಿಯ ವಿಚಾರದಲ್ಲಿ ಅವರು ಬರೆದ ಮಾತುಗಳನ್ನಷ್ಟೆ ಇಲ್ಲಿ ಉದ್ಧರಿಸಿರುವೆವು:

"ನಿಮ್ಮನ್ನು ಎರಡು ಮೂರು ವರ್ಷಗಳಿಂದಲೂ 'ಜಯಂತಿ'ಯ ಮುಖಾಂತರ–ಪೂರ್ಣವಾಗಿ ಅಲ್ಲದಿದ್ದರೂ–ಸ್ವಲ್ಪಮಟ್ಟಿಗೆ ಅರಿತುಕೊಂಡಿದ್ದೇನೆ. ನನ್ನ ಹತ್ತಿರದ ಗೆಳೆಯ 'ಜಯಂತಿ'ಯ ಚಂದಾದಾರನಾಗಿ ಇದ್ದುದರಿಂದ, ನಿಮ್ಮ 'ಜಯಂತಿ'ಯು ಅನಾಯಾಸವಾಗಿಯೆ ನನ್ನ ಕೈ ಸೇರುತ್ತಿದ್ದಾಳೆ. ಜಯಂತಿಯನ್ನು ಪ್ರತಿ ತಿಂಗಳೂ ಓದಿಯೇ ತೀರಬೇಕೆಂಬ ಅಷ್ಟು ಉತ್ಕಟ ಇಚ್ಛೆಯಿಲ್ಲವಾದರೂ, ಅದು ಕೈ ಸೇರಿದಾಗ ಓದದೆ ಇರಲು ಆಗುವುದಿಲ್ಲ. ನನಗಿಂತ ಎಷ್ಟೋ ಪಟ್ಟು ಹಿರಿಯರೂ ಜೀವನದ (ಸಿಹಿ) ಕಹಿಗಳನ್ನು ಅನುಭವಿಸಿದವರೂ ಆದ ತಮ್ಮಲ್ಲಿ ಪೂಜ್ಯಭಾವನೆ ಹುಟ್ಟದೆ ಮತ್ತಾವ ಭಾವ ಮೂಡಬೇಕು!

........ಮಧ್ಯಮ ತರಗತಿಯವರ ಚಿತ್ರ ತಮಗೆ ಗೊತ್ತೇ ಅದೆ. ಅದರ ಮೇಲೆ ನನ್ನ ಕಾಲೇಜು ಶಿಕ್ಷಣ. ಹೇಗೋ ಗಟ್ಟಿ ಮನಸ್ಸು ಮಾಡಿ ರೂ. ಐದನ್ನು ಕಳಿಸಿದ್ದೇನೆ. ತಾವು ಆದರದಿಂದ ಸ್ವೀಕರಿಸಬೇಕು........."

ಕಳುಹಿದ ಈ ಐದುರೂಪಾಯಿ ಚಂದಾ ಹಣವಲ್ಲ. ಜಯಂತಿಗೆ ಸಹಾಯಧನ. ಇಂತಹ ಹೃದಯಗಳ ಬಲವೂ ಶುಭಾಕಾಂಕ್ಷೆಯೂ ಇದ್ದರೆ ಸಾಕು; ಜಯಂತಿಗೆ ಆನೆಯ ಕಸುವು ಬರುವದು. ಸಹಾಯಧನ ಕಳುಹಿದ ಆ ಅಜ್ಞಾತ ಮಹನೀಯರಿಗೆ ಒಲವುಗಳು.

ಒಂದು ತಿಳಿವಳಿಕೆ:

ಕಳೆದ ತಿಂಗಳ ಜಯಂತಿಯ ಸಂಚಿಕೆಯಲ್ಲಿ 'ತಿರುಕ' ಎಂಬ ಮುಚ್ಚುಹೆಸರಿನವರೊಬ್ಬರು ಶ್ರೀ. ಅ. ನ. ಕೃ. ಅವರ ಕಾದಂಬರಿಯೊಂದನ್ನು ಟೀಕಿಸಿ ಬರೆದ ಪತ್ರವು ಪ್ರಕಟವಾಗಿದೆ. ಮಲ್ಲಾಡಿಹಳ್ಳಿಯ ಅನಾಥಾಶ್ರಮದ ಸಂಚಾಲಕರು 'ತಿರುಕ' ಎಂಬ ಹೆಸರಿನಿಂದಲೇ ಅನೇಕ ಗ್ರಂಥಗಳನ್ನು ಬರೆದು ಪ್ರಕಟಿಸಿದ್ದಾರೆ. ಜಯಂತಿಯಲ್ಲಿ ಪ್ರಕಟವಾದ ಪತ್ರವನ್ನು ಬರೆದ 'ತಿರುಕ'ರು, ಈ ಮಲ್ಲಾಡಿಹಳ್ಳಿಯ 'ತಿರುಕ'ರಲ್ಲ. ಬೇರೆಯ 'ತಿರುಕರು'. ಇವರೂ ಇದೇ ಮುಚ್ಚುಹೆಸರಿನಿಂದ, ಕಾವ್ಯ-ಲೇಖನಾದಿಗಳನ್ನು ಬರೆದು ಪ್ರಕಟಿಸುತ್ತಿರುವರು. ಇದನ್ನು ಸ್ಪಷ್ಟೀಕರಿಸಬೇಕೆಂದು ನಮಗೆ ಮಲ್ಲಾಡಿಹಳ್ಳಿಯಿಂದ ಕಾಗದ ಬಂದುದರಿಂದ, ಈ ವಿಷಯವನ್ನಿಲ್ಲಿ ಪ್ರಸ್ತಾಪಿಸಬೇಕಾಯಿತು.

—ಸಂಪಾದಕ

[illegible]

[illegible]

“ಸರಸ ಸೆರೆಮನೆ”

[illegible]

ಕರುಳು

(ಸಣ್ಣ ಕತೆ)

ಶ್ರೀ. ನಿರ್ಜೆ ಅಪ್ಪಾರಾಯರು, ಉಗಾರ.

ಎರಡು ವ್ಯಕ್ತಿತ್ವದ ಚಿತ್ರಗಳು! ಜೀವನದ ಸುಖ-ಶಾಂತಿಗೆ ಶಿವಾನಂದರಂತಹ ಶ್ರೀಮಂತ ಸಂನ್ಯಾಸಿಗಳ ಅಗತ್ಯ ವಿದೆಯೋ-ಗೌರೀಶಂಕರನಂತಹ ಸಜ್ಜನರು ಗೃಹಸ್ಥರ ಅಗತ್ಯವಿದೆಯೋ?

[illegible]

ಕಠೋರ ಜೀವಿಗಳವರು. ನಿಯಮವೆಂದರೆ ನಿಯಮ; ಮಡಿ ಅಂದರೆ ಮಡಿ; ನಿಷ್ಠೆಯೆಂದರೆ ನಿಷ್ಠೆ. ಆಗಾಗ ಅವರು ಹೇಳುತ್ತಿದ್ದರು: "ನೋಡು ಗೌರೀಶಂಕರ, ಸನಾತನ ಧರ್ಮದ ಆಚಾರ ವಿಚಾರಗಳನ್ನು ನಾವು ಚಾಚೂ ತಪ್ಪದೆ ಆಚರಿಸಬೇಕು. ಅದರಲ್ಲಿಯೇ ಲೋಕಕಲ್ಯಾಣವಿದೆ." ಅಂತೆಯೇ ಅವರು ತಮ್ಮ ಮನಸ್ಸು ಒಪ್ಪದಿದ್ದರೆ ವ್ಯವಹಾರಕ್ಕಾಗಿ ಯಾವ ಕಾರ್ಯವನ್ನೂ ಮಾಡುವವರಲ್ಲ. ಇಷ್ಟಿದ್ದೂ ಎಂತಹ ವಿಶಾಲ ಹೃದಯ ಅವರದು! ನಮ್ಮ ಮಕ್ಕಳನ್ನು ನಾವು ಚೆನ್ನಾಗಿ ಸಲಹುವೆವೋ ಇಲ್ಲವೋ.... ಲೋಕದ ಮಕ್ಕಳನ್ನೆಲ್ಲ ಸಂರಕ್ಷಿಸುವ ಪುಣ್ಯವಂತರವರು! ಅವರ ಹೃದಯ ಒಂದು ಸಮುದ್ರ; ಮನಸ್ಸೊಂದು ಮಹಾಸಾಗರ! ಶಿವಾನಂದರು ನನ್ನಲ್ಲಿ ತಿಂಡಿ-ತೀರ್ಥಗಳನ್ನೇನೂ ಸ್ವೀಕರಿಸುವವರಲ್ಲ. ಅದನ್ನು ಆ ದಿನ ಆಶ್ರಮವಲ್ಲಿಯೇ ಅವರು ಸೂಚ್ಯವಾಗಿ ಮಾತನಾಡಿದರು.

" ಬೆಳಗಿನ ಆಹಾರ ತೀರಿಸಿಕೊಂಡೇ ನಿಮ್ಮಲ್ಲಿ ಬಂದು ಬಿಡುವೆವು..... "

" ಹೀಗೋ ? ತಮ್ಮಿಷ್ಟ ! "

"ಅಲ್ಲ; ನಮ್ಮ ಪೂಜೆ ಪುರಸ್ಕಾರಗಳಿಂದ ನಿಮಗೆಲ್ಲ ತೊಂದರೆ! ಅದೊಂದು ಹೆಚ್ಚಿನದೇಕೆ? ನಿಮ್ಮ ತಿಂಡಿ-ತೀರ್ಥಗಳೆಲ್ಲ ಹೋಟೇಲದವರಿಂದ ಸಾಗುತ್ತಿರುವಾಗ........"

ಗೌರೀಶಂಕರ ಹೋಟೇಲಿನಲ್ಲಿ ಊಟಮಾಡುವನೋ ಹೇಗೋ ಎಂದು ತಿಳಿದು ಕೊಳ್ಳುವುದಕ್ಕಾಗಿಯೇ ಸ್ವಾಮಿಗಳವರು ಹೀಗೆ ಮಾತನಾಡಿದ್ದರು. ಅದು ಅವರಿಗೆ ಸೇರದ ವಿಷಯ. ಇದನ್ನರಿತೇ ಗೌರೀಶಂಕರ ನೇರವಾಗಿ ಉತ್ತರಿಸದೆ ಎಂದ:—

"ಒಪ್ಪಿದರೆ ಹಾಲು-ಹಣ್ಣಿನ ವ್ಯವಸ್ಥೆ ಮಾಡುವೆ."

„ಅದೂ ನಮಗೆ ನಡೆಯದು. ಏನನ್ನು ತಕ್ಕೊಂಡರೂ ದಿನಕ್ಕೆ ಒಂದೇ ಹೊತ್ತು; ಒಂದೇ ಸಲ. ನಮ್ಮ ಆಶ್ರಮದ ವಿದ್ಯಾರ್ಥಿಗಳಿಗೂ ಸಹ ಒಪ್ಪತ್ತೇ ಊಟ. ಆ ಮೇಲೆ ಏನೂ ಸಿಕ್ಕದು"

ಖಂಡಿತಸ್ವರದಲ್ಲಿ ಸ್ವಾಮಿಗಳು ನುಡಿದರು. ಮಾತಿನಲ್ಲಿ ಸ್ವಲ್ಪ ಆಧ್ಯತೆಯೂ ಇದ್ದಂತೆ ಗೌರೀಶಂಕರನಿಗೆ ಭಾಸವಾಯಿತೇನೋ!

ಅದೇಕೋ ಈ ಕಠೋರತೆಯು ಗೌರೀಶಂಕರನಿಗೆ ಹಿಡಿಸಲಿಲ್ಲ. ಶಿವಾನಂದರು ತಮ್ಮಷ್ಟಕ್ಕೆ ತಾವು ಹೇಗೋ ಇದ್ದುಕೊಳ್ಳಲೊಲ್ಲರೇಕೆ? ಆಶ್ರಮದ ಚಿಕ್ಕ ಮಕ್ಕಳಿಗೆಲ್ಲ ಇಂತಹ ನಿಯಮ, ನಿರ್ಬಂಧಗಳೇಕೆ? ಇನ್ನೂ ಬೆಳೆಯುವ ಹಾಲುಹಲ್ಲಿನ ಎಳೆಯ ಮಗುಗಳವು! ಅವು ಶಿವಾನಂದರ ಸಂರಕ್ಷಣೆಯಲ್ಲಿದ್ದುಕೂಡ ಅನಾಥ ಬಾಲಕರಂತೆಯೇ ಇರುವುವಲ್ಲ! ಒಂದು ತರದ ಉತ್ಸಾಹದ ಕಳೆಯೇ ಹುಡುಗರ ಮುಖದ ಮೇಲೆ ಇಲ್ಲ ಶಿವಾನಂದರ ಈ ಹೃದಯ ಶೂನ್ಯತೆಯಿಂದ ಆಶ್ರಮವಾಸವೊಂದು ಕಾರಾಗೃಹದಂತೆ ಆಗಿದಿಯೋ ಏನೋ ಮಕ್ಕಳಿಗೆ ? ಶಿವಾನಂದರ ಹೃದಯ ಶೂನ್ಯತೆ !

ಛೀ ! ಇದನ್ನೇನು ಭಾವಿಸುತ್ತಿರುವೆ ನಾನು. ಹಾಗೆ ನಿರ್ದಯಿಯಾಗಿದ್ದರೆ ಶಿವಾನಂದ ಇಂಥ ಕಾರ್ಯಕ್ಕೆ ತನ್ನ ಜೀವನವನ್ನೇ ಮುಡುಪಾಗಿಡುತ್ತಿದ್ದನೇ ?

ಅದೇನು ಗೊತ್ತು ? ಬ್ರಹ್ಮಚಾರಿಗೆ ಮಕ್ಕಳ ಮೇಲಿನ ಮಮತೆ! ಎಲ್ಲವೂ ಗೊತ್ತಿರುವುದು! ಬ್ರಹ್ಮಚಾರಿಯಾದರೇನು? ಸಹೃದಯನಲ್ಲವೆ ? ಶಿವಾನಂದನೇನು ಜನರ ದರ್ಶನವೇ ಬೇಡವೆಂದು ಬೂದಿಯನ್ನು ಬಳಿದುಕೊಂಡು ಹಿಮಾಲಯವನ್ನು ಸೇರಿದ ಬೈರಾಗಿ ಶಿವನೇ?

ಆ ಶಿವನಿಗಾದರೂ ಕರುಳು ಇಲ್ಲದಿಲ್ಲ. ಗಂಗೆ, ಗೌರಿ, ಗುಹ, ಗಜಾನನರ ಬಳಗವಿದ್ದೇ ಇದೆ. ಅವನೂ ಕೇವಲ ತಾಪಸಿಯಲ್ಲ. ಗೌರೀಶಂಕರನವನು!

ಯೋಗ-ಭೋಗಗಳ ಸಾಮರಸ್ಯವಲ್ಲಿದೆ. ಎಂತಲೇ ಅವನು ತ್ರಿಲೋಕ ಶಂಕರ! ವಿಶ್ವಕಲ್ಯಾಣಕಾರಿ!

ಏನೇ ಆಗಲಿ; ಮನೆಯ ಮುಖ್ಯ ಭಾಗವನ್ನನ್ನಾದರೂ ಸ್ವಚ್ಛ ಮಾಡಿ, ಶಿವಾನಂದರಿಗೆ ಕೂಡಲಿಕ್ಕೆ ಕುರ್ಚಿಯನ್ನು ಹಾಕಿ ಇಟ್ಟರಾಯಿತು. ಆ ಮೇಲೆ ಶಕ್ಯವಿದ್ದಷ್ಟು ಬೇಗ ಊಟವನ್ನು ತೀರಿಸಿಕೊಂಡು, ಸ್ವಾಮಿಗಳ ಸ್ವಾಗತಕ್ಕೆ ಸಿದ್ಧವಾಗಿ ಬಿಡುವುದು.

ಮನೆಯಲ್ಲಿ ಅರ್ಧಾಂಗಿ ಇದ್ದರೆ ಇಂತಹ ತೊಡಕುಗಳು ಉತ್ಪನ್ನವಾಗುತ್ತಿರುವುದಿಲ್ಲ. ಅವಳು ಹಡೆಯಲಿಕ್ಕೆ ತವರು ಮನೆಗೆ ಹೋದುದರಿಂದಲೇ ಗೌರೀಶಂಕರನ ಮೇಲೆ ಈ ಹೊಣೆ.

ಸ್ವಾಮಿಗಳ ಆಗಮನದ ಹಾರಯಿಕೆಯಲ್ಲಿ ತನ್ನ ಹುದ್ದೆ-ಅಧಿಕಾರಗಳನ್ನೆಲ್ಲ ಒಂದು ಕ್ಷಣ ಮರೆತು, ಗೌರೀಶಂಕರ ಕಸಬರಿಗೆಯನ್ನು ಕೈಯಲ್ಲಿ ಹಿಡಿದು, ಪಡಸಾಲೆಯ ಕಸಗುಡಿಸಿ ಸ್ವಚ್ಛ ಮಾಡಿದ ಕುರ್ಚಿ ಮೇಜುಗಳನ್ನೆಲ್ಲ ಒರಸಿ ಇಟ್ಟ. ಇನ್ನೇನು ಉಳಿದ ಹೆಚ್ಚಿನ ಜನರು ಯಾರಾದರೂ ದರ್ಶನಕ್ಕೆ ಬಂದರೆ ಇರಲಿ ಎಂದು ಒಂದು ಜಮಖಾನೆಯನ್ನು ಹಾಸಿಟ್ಟರಾಯಿತು. ಎಂದುಕೊಂಡು ಜಮಖಾನೆಯನ್ನು ತರಲಿಕ್ಕೆಂದು ಒಳಮನೆಗೆ ಹೋದ.

ನಡುಗತ್ತಲೆಯಲ್ಲಿ ಕಪಾಟಿನ ಮೇಲೆ ಇಟ್ಟಿದ್ದ ಜಮಖಾನಕ್ಕೆ ಕೈಯಿಕ್ಕಿದ 'ಗುರ್!' ಎಂದಿತು ಸ್ವರ. ಹೊರಗಣ್ಣುಗಳನ್ನು ತೆರೆದು ನೋಡಿದ, ಗೌರೀಶಂಕರ. ಬೆಕ್ಕಿನ ಎರಡು ಕಣ್ಣುಗಳು ಹೊಳೆದುವು. 'ಉಶ್ !' ಎಂದ. ಬೆಕ್ಕನ್ನು ಜಮಖಾನೆಯ ಮೇಲಿಂದ ಎಬ್ಬಿಸಬೇಕಾಗಿತ್ತವನಿಗೆ. ಅವನ ಬೆದರಿಕೆಗೆ ಅದು ಕೂಡಲೇ ಅಲ್ಲಿಂದ ಏಳಲಿಲ್ಲ. ಇನ್ನೂ ತುಸು ಗೌರೀಶಂಕರನ ಕಣ್ಣುಗಳು ತೆರೆದುವು. ಬೆಕ್ಕು ತನ್ನ ಮುದ್ದು ಮರಿಗಳಿಗೆ ಮೊಲೆ ಕುಡಿಸುತ್ತ ಕುಳಿತಿದೆ ಆ ಎರಡೂ ಪುಟ್ಟ ಮರಿಗಳು ಗೌರೀಶಂಕರನನ್ನು ಕಂಡು ನಸು ನಡುಗಿದುವು. ತಾಯ ಮಡಿಲಲ್ಲಿ ಇನ್ನಿಷ್ಟು ಅವಿತುಕೊಂಡು ಕುಳಿತುವು. ತಾಯಿ ಬೆಕ್ಕು ಕೆಳಗಿಳಿಯುವ ಸಿದ್ಧತೆಯಲ್ಲಿತ್ತು.

ಗೌರೀಶಂಕರನಿಗೆ ತಟ್ಟನೆ ತನ್ನ ಹೆಂಡತಿಯ ನೆನಪಾಯಿತು. ತಾನು ಇಲ್ಲಿಗೆ ಬರುವ ಪೂರ್ವದಲ್ಲಿ ತನ್ನವಳು ಹೆತ್ತ ಹತ್ತು ದಿನಗಳಾಗಿದ್ದುವು. ಆ ಮಗುವೂ ತೊಟ್ಟಿಲಲ್ಲಿ ಮಲಗಿ ಮೊಲೆ ಕುಡಿಯುತ್ತಿದ್ದ ದೃಶ್ಯ ಅವನ ಒಳಗಣ್ಣಿನೆದುರಿಗೆ ಸುಳಿಯಿತು. ಮಡದಿಯ ಮಡಿಲಲ್ಲಿ ಮಲಗಿದ್ದ ತನ್ನ ಮಗು ಪ್ರಣಯವೃಕ್ಷಕ್ಕೆ ಅರಳಿದ ಒಂದು ಗುಲಾಬಿ ಹೂವಿನಂತೆ ಅವನಿಗೆ ಅಂದು ಕಂಡಿದ್ದಿತು. ಆ ಚೆಲುವನ್ನು ಇತ್ತ ಬರುವಾಗ ಹತ್ತಿರ ನಿಂತು, ಕಣ್ಣು ತುಂಬ ನೋಡಿ

ಬಂದಿದ್ದ, ಗೌರೀಶಂಕರ. ಆಗಿನ ಅಕ್ಕರೆಯ ಸೆಲೆ ಈಗೂ ಅವನ ಹೃದಯದಲ್ಲಿ ಹರಿಯಿತು.

ಇಷ್ಟರಲ್ಲಿ ಬೆಕ್ಕು ತನ್ನ ಮರಿಗಳೊಡನೆ ಕೆಳಗಿಳಿದು ಹೊರಗೆ ಹೋಗಿದ್ದಿತು.

ಮರಿಗಳಿಗೆ ಮೊಲೆ ಕುಡಿಸುವದನ್ನು ಬಿಡಿಸಿ, ಬೆಕ್ಕನ್ನು ಎಬ್ಬಿಸಿದೆನಲ್ಲ!' —ಎಂದು ಕಳವಳಗೊಂಡ. ಮತ್ತೊಂದು ಕೂತರೆ ಹಾಗೇ ಕುಳಿತುಕೊಳ್ಳಲಿ—ಎಂದು ಹಿಂದೆ ಸರಿದು, ಹೊರಗೂ ಬಂದ. ಆಗಲೇ ಇವನ ಮುಂಚಿನ ಸೂಚನೆಯಂತೆ ಅವು–ತಾಯಿಮಕ್ಕಳು–ಇನ್ನೊಂದು ಕೋಣೆಗೆ ಹೋದುವು.

ಗೌರೀಶಂಕರನ ಮನಸ್ಸು ತುಂಬ ನೊಂದಿತು. ಹಾಗೆಯೇ ಜಮಖಾನೆಯನ್ನು ತಕ್ಕೊಂಡು ಹೊರಗೆ ಬಂದು ಹಾಸಿದ. ಪಶುವಾದರೇನು? ಮನುಷ್ಯನಾದರೇನು? ತಾಯಿಯಕರುಳು ಒಂದೇ ಅಲ್ಲವೆ?— ಎಂದು ಕೊಳ್ಳುತ್ತ ಬೇಗನೆ ಕೈಕಾಲು ತೊಳದುಕೊಂಡು ಒಳಗೆ ಊಟಕ್ಕೆ ಹೋದ. ಆದರೆ ಏನೋ ಒಂದು ಅಪರಾಧ ತನ್ನಿಂದ ಸಂಭವಿಸಿದಂತೆ ಅವನ ಮನಸ್ಸು ವಿಫಲವಾಗಿದ್ದಿತು.

ಗೌರೀಶಂಕರನಿಗೆ ಒಬ್ಬನೇ ಕುಳಿತು ಊಟ ಮಾಡಿದ ಪರಿಪಾಠ ಕಡಿಮೆ. ಹತ್ತಿರ ಯಾರಾದರೂ ಹರಟೆಗೆ ಬೇಕು. ನೌಕರಿಗಾಗಿ ಊರನ್ನು ಬಿಟ್ಟಮೇಲೆ ಮನೆಯಲ್ಲಿ ತಾನು ತನ್ನರಸಿ ಇಬ್ಬರೇ ಇರುತ್ತಿದ್ದುದರಿಂದ ಜೊತೆಯಾಗಿಯೇ ಊಟ ಮಾಡುವ ಪದ್ಧತಿಯನ್ನು ಬೆಳೆಯಿಸಿಕೊಂಡಿದ್ದರು. ಈಗ ಒಬ್ಬನೇ ಉಣ್ಣುವುದೆಂದರೆ ಅವನ ಜೀವದಸುತ್ತು ಬಂದಂತಾಯಿತು. ಅದರಲ್ಲಿ ಇಂದಿನ ಊಟ ಇನ್ನೂ ಬೇಜಾರನ್ನು ಉಂಟು ಮಾಡಿತು.

ಊಟದ ಡಬ್ಬಿಯನ್ನು ತೆರೆದು ಅನ್ನ, ಮೊಸರು, ಕಾಯಿಪಲ್ಲೆ ಮೊದಲಾದುವುಗಳನ್ನು ತೆಗೆದು ತಾಟನಲ್ಲಿ ಹಾಕಿಕೊಳ್ಳತೊಡಗಿದ. ಗೌರೀಶಂಕರ. ಆಗಲೇ 'ಮ್ಯಾಂವ್' ಎಂಬ ನಿಡಿದಾದ ಮೃದು. ಸ್ವರವೊಂದು ಅವನ ಕಿವಿಗೆ ಬಿದ್ದಿತು. ಆ ಬೆಕ್ಕಿನ ಮರಿಯೊಂದು ಹಿಂಬದಿಗೆ ಹತ್ತಿರ ಬಂದುದರ ತಿಳಿವಳಿಕೆ ಆಗ ಅವನಿಗಾಯಿತು. ಪುಟ್ಟ ಕಾಲುಗಳು! ಸರಳ ಬಾಲ! ಮೃದುವಾದ ಮೈಯು! ಮುದ್ದು ಮುಖ! ಅಕ್ಕರೆ ಬರುವಂತಹ ಮರಿಯದು. ಮೆಲ್ಲನೆ ಅವನ ಊಟದ ತಾಟನಹತ್ತಿರ ಬಂತು. ಆರ್ತ ಸ್ವರದಿಂದ 'ಮ್ಯಾಂವ್! ಮ್ಯಾಂವ್!' ಎಂದು ಅನ್ನ ಬೇಡಿತು. ಅದರ ಹಸಿವು ಅದರ ದನಿಯಲ್ಲಿ ಒಡಮೂಡಿದಂತಿತ್ತು.

ಗೌರೀಶಂಕರನು ತನ್ನ ಬಾಯಿಗೆ ತುತ್ತಿಡುವ ಮೊದಲು ಬೆಕ್ಕಿನ ಮರಿಗೆ ಒಂದು ತುತ್ತು ಅನ್ನವನ್ನು ಹಾಕಿದ. ಮರಿಯು ಅದನ್ನು ಅವಸರದಿಂದ ಗಪಗಪ ತಿನ್ನುವುದನ್ನು ನೋಡಿ ಸಂತಸಬಟ್ಟ! ಅಂತೆಯೇ ಸ್ವಲ್ಪಕಾಲ ಅದರ ತಿನ್ನುವಿಕೆಯನ್ನು ನೋಡುತ್ತ ಕುಳಿತ. ಆ ತುತ್ತನ್ನು ತಿಂದು ಮರಿಯು ಗೌರೀಶಂಕರನ ಮುಖದಕಡೆಗೊಮ್ಮೆ ಉಲ್ಲಸಿತಕಣ್ಣುಗಳಿಂದ ನೋಡಿತು. ತೆಳುವಾದ ತೆನ್ನಾಲಿಗೆಯಿಂದ ತನ್ನ ತುಟಿ-ಮೀಸೆಗಳನ್ನು ನೆಕ್ಕಿತು. ಮೆಲ್ಲನೆ ಮುಂಗಾಲು ತುದಿಗಳನ್ನೆತ್ತಿ ಮುಖವನ್ನು ಸವರಿಕೊಂಡಿತು. ಅವುಗಳಿಗೂ ಹತ್ತಿರ ಬಹುದಾದ ಮುಸುರೆಯನ್ನು ಸವಿಯಿತು. ಮತ್ತೆ ತನ್ನ ಅನ್ನದಾತೃವಿನ ಮುಖದ ಕಡೆಗೆ ನೋಡಿತು.

ಆ ದೃಷ್ಟಿಯಲ್ಲಿ ಗೌರೀಶಂಕರ ಏನನ್ನು ಕಂಡನೊ! ಮತ್ತೆ ಒಂದು ತುತ್ತು ಅನ್ನವನ್ನು ಹಾಲಿನಲ್ಲಿ ಕಲಿಸಿ ಹಾಕಿದನು 'ಮ್ಯಾಂವ್!' ಎಂಬ ಸಂತಸದ ಸ್ವರದಲ್ಲಿ ತೃಪ್ತಿಯನ್ನು ಸೂಸಿ ಮರಿಯು ಅನ್ನಕ್ಕೆ ಬಾಯಿಕ್ಕಿತು. ಇದರ ಇಂಥ ಸಮಾಧಾನದ ಸ್ವರವು ಅದರ ಅಣ್ಣನಿಗೂ ಹೊರಗೆ ಕೇಳಬಂದಿರಬೇಕು. ಅದರ ಅರ್ಥವನ್ನೂ ಅದು ಗ್ರಹಿಸಿತು. ಮನುಷ್ಯನಿಗಿಂತ ಪಶುಗಳಲ್ಲಿ ಕೆಲವು ಶಕ್ತಿಗಳು ಹೆಚ್ಚಿಗೆ ಇರುತ್ತವೆಯಂತೆ! ಅದೂ ಗೌರೀಶಂಕರನ ಹತ್ತಿರ ನುಗ್ಗಿತು. ತನ್ನ ತಮ್ಮನ ಊಟದಲ್ಲಿ ಪಾಲುಗೊಂಡಿತು. ಗೌರೀಶಂಕರ ಇನ್ನಿಷ್ಟು ಅನ್ನ ಹಾಕಿದ. ತಾನೂ ಊಟವನ್ನು ಆರಂಭಿಸಿದ.

ಈಗ ಗೌರೀಶಂಕರನ ಮನಸ್ಸಿಗೆ ಸ್ವಲ್ಪ ಸಮಾಧಾನವಾಯಿತು. ಬೆಕ್ಕಿನ ಮರಿಗಳಿಗೂ ನಡುನಡುವೆ ಒಂದೊಂದು ತುತ್ತು ಅನ್ನ ನೀಡುತ್ತ ತಾನೂ ಊಟ ಮಾಡುತ್ತಿದ್ದನು. ಮರಿಗಳಿಗೆ ಅನ್ನ ನೀಡಲು ಸ್ವಲ್ಪ ವಿಲಂಬವಾದರೂ ಸಾಕು, ಅವು ಸಲಿಗೆಯಿಂದ ಅವನ ತಾಟನಲ್ಲಿಯೇ ಬಾಯಿ ಹಾಕಲು ಹವಣಿಸುವವು. ಆಗ ಅವುಗಳನ್ನು ಮೆಲ್ಲನೆ ಎಡಗೈಯಿಂದ ಹಿಂದೆ ನೂಕುವ; ಮತ್ತೆ ಅವು ಮುಂದೆ ಬರುವವು. ಅನ್ನ ಹಾಕುವ. ತಿಂದು ಮತ್ತೆ ತಾಟನತ್ತ ಮುಖ ಚಾಚುವವು. ಅವುಗಳ ಕುತ್ತಿಗೆಯ ಹತ್ತರ ಹಿಡಿದು, ಎತ್ತಿ ತುಸು ದೂರ ಎಸೆಯುವ. ಮತ್ತೆ ಅವು ಮುಂದೆ ಓಡಿ ಬರುವವು.

ಹೀಗೆ ಗೌರೀಶಂಕರ ಮರಿಗಳನ್ನು ದೂರ ಎಸೆಯುವುದನ್ನು ಒಮ್ಮೆ ಬಾಗಿಲಲ್ಲಿ ನಿಂತ ಅವುಗಳ ತಾಯಿ ಕಂಡಿತು. 'ಗುರ್!' ಎಂದು ಗುರಿಕೆ ಹಾಕಿತು. ಕೆರಳಿದ ಕಣ್ಣುಗಳಿಂದ ಅವನನ್ನು ನೋಡಿತು. ಮೊಲೆ ಕುಡಿಯುವ ಮರಿಗಳನ್ನೂ ತನನ್ನೂ ಅಗಲಿಸಿದ ಗೌರೀಶಂಕರನ ಮೂರ್ತಿ ಮಾತ್ರ ಅದರ ನೆನಪಿನಲ್ಲಿರಬೇಕು. ಈ ಸಹೃದಯಿಯಾದ ಗೌರೀಶಂಕರನ ಪರಿಚಯ ಅದಕ್ಕಿರಲಿಲ್ಲ. ತನ್ನ ಮರಿಗಳನ್ನು ಹುಡುಕುತ್ತ ಇದೀಗ ಅಲ್ಲಿಗೆ ಅದು ಬಂದಿತ್ತು. ಈ ಉಪಟಳ ಅದಕ್ಕೆ ಸಹನವಾಗಲಿಲ್ಲ. ಎಂತಲೇ ಅದು ಗುರುಗುಟ್ಟಿತು. ಆ ಗುಡುಗಿಗೇನೇ ಗೌರೀಶಂಕರನ ಎದೆ ನಡುಗಿರಬೇಕು. ಹೊರಳಿ ನೋಡಿದ. ತಾಯಿಬೆಕ್ಕಿನ ಕಣ್ಣೊಳಗಿನ ರುದ್ರಾವತಾರವನ್ನು ತಿಳಿದನೇನೋ! ಇನ್ನೆರಡು ತುತ್ತು ಅನ್ನವನ್ನು ಅದರ ಮರಿಗಳಿಗೆ ಇಕ್ಕಿದ. ಅವು ಆನಂದದಿಂದ ತಿನ್ನ ಹತ್ತಿದುವು. ಅದೂ ತೀರಿದೊಡನೆ ಸಲಿಗೆಯಿಂದ ತಾಟನತ್ತ ಧಾವಿಸಿದುವು. ಮತ್ತೂ ಅನ್ನ ಕೊಟ್ಟ ಗೌರೀಶಂಕರ! ಈ ಸಲದ ಊಟದಲ್ಲಿ ತಾಯಿಬೆಕ್ಕು ಸಹ ಬಂದು ಭಾಗವಹಿಸಿತು. ಅದರಲ್ಲಿ ಮರಿಗಳ ಪಾಲಿಗೆ ಬಂದುದು ತೀರ ಸ್ವಲ್ಪವೇ.

ಕತ್ತೆತ್ತಿ ನೋಡಿದ ಗೌರೀಶಂಕರ. 'ಹೋ! ನೀನೂ ಬಂದು ಸೇರಿಕೊಂಡೆಯೋ!'—ಎಂದುಕೊಂಡ. ಇದು ಮರಿಗಳಿಗೆ ತಿನ್ನಲಿಕ್ಕೆ ಕೊಡದು—ಎಂದೂ ಭಾವಿಸಿದ. ಮರುಕ್ಷಣದಲ್ಲಿ 'ತಾಯಿ

ತಿಂದರೇನು ಹಾಲಿನ ರೂಪದಲ್ಲಿ ಮರಿಗಳಿಗೇ ಅಲ್ಲವೇ ಉಣಿಸುವುದು?' ಎಂಬ ವಿಚಾರ ಅವನ ತಲೆಯಲ್ಲಿ ಸುಳಿಯಿತು. ಆದರಿಂದ ತಾಯಿ ಬೆಕ್ಕಿಗೆ ಇನ್ನಿಷ್ಟು ಅನ್ನ ಹಾಕಿದ. ಮೂರೂ ಸೇರಿ ಕಚ್ಚಾಡುತ್ತ ತಿನ್ನಹತ್ತಿದುವು. ಅವುಗಳ ಆ ಕಚ್ಚಾಟದಲ್ಲಿಯೂ ಸಲಿಗೆ ಇತ್ತು! ಅದನ್ನು ಕಂಡು ಗೌರೀಶಂಕರನಿಗೆ ಒಂದಿಷ್ಟು ಸಂತಸ! ಮತ್ತೆ ಮತ್ತೆ ಅನ್ನ ಹಾಕಿ ಸಂತೋಷ ಪಟ್ಟ. ತನ್ನ ಹೊಟ್ಟೆಗೆ ಕಡಿಮೆ ಬೀಳುವು-ದೆಂಬ ಕಲ್ಪನೆ ಕೂಡ ಆಗ ಅವನಿಗೆ ಇರಲಿಲ್ಲ.

ತುಸು ಹೊತ್ತಿನಲ್ಲಿ ತಾಯಿ ಬೆಕ್ಕೊಂದೇ ಗೌರೀಶಂಕರ ಹಾಕಿದ ಅನ್ನವನ್ನು ತಿನ್ನಹತ್ತಿತು ಮರಿಗಳು ಮರಳಿ ಆದರ ಮೊಲೆಗೆ ಹೋಗಿ ಗಂಟು ಬಿದ್ದುವು. ಮರಿಗಳಿಗ ಮೊಲೆಯುಡಿಸುತ್ತ ತಾಯಿ ಅಡ್ಡಾ-ದಳು. ಇನ್ನೂ ತಿನ್ನಬೇಕಾದ ಅನ್ನ ಎದುರಿಗೇ ಇತ್ತು. ಹಸಿವೂ ಹಿಂಗಿರಲಿಲ್ಲ. ಅನ್ನದ ಕಡೆಗೆ ಆಶೆಗಣ್ಣಿನಿಂದ ನೋಡುತ್ತ ತೊರೆವು ಬಿಟ್ಟಿತು. ಮರಿಗಳು ಮುದದಿಂದ ಕುಡಿಯಹತ್ತಿದುವು.

ತನ್ನವಳು ತನ್ನ ಮಗುವಿಗೆ ಮೊಲೆ ಕುಡಿಸುವ ದೃಶ್ಯ ಒಮ್ಮೆ ಅವನ ಕಣ್ಣೆದುರಿಗೆ ಸುಳಿದು ಹೋಯಿತು. ಅಂತಃಕರಣ ತುಂಬಿ ಬಂದಿತು.

ಹೊರಗಿನ ಯಾವ ಪರಿವೆಯೂ ಇಲ್ಲದೆ ಗೌರೀಶಂಕರ ಆ ಬೆಕ್ಕು ಗಳ ಕೂಡ ಒಂದಾಗಿ ಊಟ ಮಾಡುತ್ತಲಿದ್ದ. ಆಫೀಸಿಗೆ ಹೋಗುವ ಅವಸರವಿರಲಿಲ್ಲ. ಶಿವಾನಂದರು ಬರುವ ವರೆಗೆ ಬೇರೆ ಕೆಲಸವೂ ಇರಲಿಲ್ಲ. ನಿಶ್ಚಿಂತೆಯಿಂದ ಸಾವಕಾಶ ಊಟ ಮಾಡುತ್ತಲಿದ್ದ. ಆದರೆ ಶಿವಾನಂದ ಅದಾವಾಗಲೋ ಬಂದು, ಇವನ ಚಟುವಟಿಕೆ-ಗಳನ್ನೆಲ್ಲ ನಿರೀಕ್ಷಿಸುತ್ತ ನಿಂತ ಅರಿವು ಇವನಿಗೆ ಇರಲಿಲ್ಲ.

ಸ್ವಾಮೀ ಶಿವಾನಂದರು ನಿಂತರು, ನಿಂತರು, ಹಾಗೇ ನಿಂತು-ಕೊಂಡೇ ಇದ್ದರು! ಗೌರೀಶಂಕರನ ಪಂಕ್ತಿ, ಸಾಗಿದ್ದಿತು. ಒಂದು ಬೆಕ್ಕಿನಮರಿಯು ತಾಟಿನಲ್ಲಿ ಬಾಯಿ ಹಾಕಲಿಕ್ಕೆ ಹವಣಿಸುವುದು. ಅದನ್ನಷ್ಟು ದೂರ ಸರಿಸುವುದರಲ್ಲಿ ಇನ್ನೊಂದು ಬಾಯಿ ಚಾಚು-ವುದು. ನಿಂತಲ್ಲಿಯೇ ಆಗ ಶಿವಾನಂದರು ಆ ಮರಿಯ ಮೇಲೆ ಕೆರಳುವರು. ಆದರ ಮುಖಕ್ಕೆ ಒಂದೇಟು ಬಿಗಿಯುವಷ್ಟು ಸಿಟ್ಟು ಬರುವುದು. ಗೌರೀಶಂಕರ ಮಾತ್ರ ಹಾಗೆಯೇ ಊಟ ಮಾಡು-ತ್ತಿರುವ!

ಶಿವಾನಂದರಿಗೆ ಈ ದೃಶ್ಯ ಮೊದಲ ಸಲ ಕಂಡಾಗ ಆಶ್ಚರ್ಯ-ವೆನಿಸಿತು. ಒಬ್ಬ ವಿದ್ಯಾವಂತ ತರುಣ, ಆರೋಗ್ಯಶಾಸ್ತ್ರದ ಜ್ಞಾನ-ವಿದ್ದವ, ಧರ್ಮ, ಮಡಿ-ಮೈಲಿಗೆಗಳ ಬಗ್ಗೆ ಸ್ವಲ್ಪಿಲ್ಲ ಸ್ವಲ್ಪ ತಿಳಿದು-ಕೊಂಡ ಜ್ಞಾನಿ ಹೀಗೆ ಬೆಕ್ಕುಗಳ ಕೂಡ ಸಲಿಗೆಯಿಂದ ಊಟ ಮಾಡುತ್ತಿದ್ದಾನೆ! ಅವನ ಕಣ್ಣುಗಳೇ ಮೊದಲು ಅದನ್ನು ನಂಬ-ಲಿಲ್ಲ. ಸಮಯ ಸರಿಯುತ್ತಹೋದಂತೆ ಗೌರೀಶಂಕರನ ಬಗ್ಗೆ ಇದ್ದ ಅವನ ಹೃದಯದೊಳಗಿನ ಆದರ ಆತ್ಮೀಯಭಾವಗಳು ಕಡಿಮೆ ಯಾಗುತ್ತ ನಡೆದುವು. ತಿರುಗಿ ಅವನ ನಡತೆಯ ವಿಷಯಕ್ಕೆ ಹೇಸಿಕೆ ಉತ್ಪನ್ನವಾತೊಡಗಿತು.

ಅದರಲ್ಲೂ ಒಂದು ಬೆಕ್ಕಿನ ಮರಿಯು ಗೌರೀಶಂಕರನ ತಡೆ-ಯನ್ನು ಲೆಕ್ಕಿಸದೆ ಅವನ ಊಟದ ತಾಟಿನಲ್ಲಿ ಬಾಯನ್ನೇ ಹಾಕಿ-ಬಿಟ್ಟಿತು!

ಛೀ! ಮಾಂಸಾಹಾರಿ ಜೀವಿ! ಅದರ ಎಂಜಲು ಅನ್ನವನ್ನೇ ಭುಂಜಿಸುವನೀತ. ಅದನ್ನು ನೋಡಲಾಗದೆ ತಟ್ಟನೆ ಮುಖ ತಿರುಗಿಸಿದರು ಶಿವಾನಂದರು. ಎರಡು ಹೆಜ್ಜೆ ಹಿಂದೆ ಸರಿದರು.

ಗೌರೀಶಂಕರ! ಏನೂ ಉಪಯೋಗವಿಲ್ಲದ ಪ್ರಾಣಿ! ಇಂಥ ಹೀನಾತ್ಮನಿಂದ ನನ್ನ ಪವಿತ್ರ ಅನಾಥಾಶ್ರಮಕ್ಕೆ ಸಹಾಯ? ಎಷ್ಟಿದ್ದರೂ ಅದು ಬೇಡ. ಗುರಿಯು ಶುದ್ಧವಿದ್ದಷ್ಟೇ ಅದನ್ನು ಸಾಧಿಸುವ ಮಾರ್ಗಗಳೂ ಕೂಡ ಶುದ್ಧವಿರಬೇಕು. ಅದಿಲ್ಲದಿದ್ದರೆ ಏನು ಪ್ರಯೋಗ? ತ್ಯಾಗ ಜೀವನವನ್ನೇ ಸ್ವೀಕರಿಸಿದ ಶಿವಾನಂದ-ರಿಗೆ ಇಂಥವರ ನೆರವನ್ನು ಬಿಡುವುದಕ್ಕೂ ಜಡವೆನಿಸಲಿಲ್ಲ. ಧರ್ಮದ ಮೇಲೆ ಅಧಿಷ್ಠಿತವಾದ ನನ್ನ ಅನಾಥಾಶ್ರಮ, ನನ್ನ ಕಾರ್ಯಗಳು ಎಂದೇನೇನೋ ಭಾವನಾ ತರಂಗಗಳು ಶಿವಾನಂದರ ಹೃದಯ-ದಲ್ಲಿ ಏಳತೊಡಗಿದುವು. ಸಧ್ಯಕ್ಕಂತೂ ಶಿವಾನಂದನನ್ನು ಕಾಣುವ ಇಚ್ಛೆ ಅವನಿಗಿಲ್ಲದಂತಾಯಿತು. ಮೆಲ್ಲನೆ ಅಲ್ಲಿಂದ ಹಿಂದೆ ಸರಿದು ಹೊರಟು ಹೋದರು.

ಬೆಕ್ಕು ಬಾಯಿ ಹಾಕಿದ ಅನ್ನವನ್ನು ಇನ್ನೇನು ತಿನ್ನುವುದು. —ಎಂದುಕೊಂಡು, ಇನ್ನೂ ತುಂಬ ಹಸಿವಿದ್ದರೂ ಕೂಡ ತನ್ನ ಊಟದ ತಟ್ಟೆಯನ್ನೇ ಬೆಕ್ಕುಗಳ ಎದುರಿಗೆ ಸರಿಸಿ, ಊಟ ಬಿಟ್ಟು, ಎದ್ದ ಗೌರೀಶಂಕರ. ಹೊರಗೆ ಬಂದು, ಸ್ವಾಮಿ ಶಿವಾನಂದರ ಬರವನ್ನು ನಿರೀಕ್ಷಿಸುತ್ತ ಕುಳಿತು ಬಿಟ್ಟ.

ಈಗ ಶಿವಾನಂದರು ಬರುವರು. ಇನ್ನೊಂದು ಕ್ಷಣಕ್ಕೆ ಬರು-ವರು ಶಿವಾನಂದರು! ಅವರ ಆಶ್ರಮಕ್ಕೆ ತುಂಬ ಸಹಾಯಧನವನ್ನು ಕೂಡಿಸಿ ಕೊಡಬೇಕು. ಅನಾಥ ಮಕ್ಕಳು ಎರಡೂ ಹೊತ್ತು ಹೊಟ್ಟೆ ತುಂಬ ಉಣ್ಣುವಂತೆ ಮಾಡಬೇಕು. ಅದಕ್ಕೆ ಯಾರಿಂದ ಎಷ್ಟೆಷ್ಟು ಹಣ ಪಡೆಯಬೇಕು. ತಾನೆಷ್ಟು ಹಾಕಬೇಕು. ಇದೇ ಲೆಕ್ಕದಲ್ಲಿ ಗೌರೀಶಂಕರನಿಗೆ ಹೊತ್ತು ಹೊರಳಿದುದೇ ಗೊತ್ತಾಗಲಿಲ್ಲ. ಬರ-ಬರುತ್ತ ಅಂದು ಆಶ್ರಮದಲ್ಲಿ ಕೇಳಿದ ಅನಾಥ ಬಾಲಕರ ಸ್ಥಿತಿಗತಿ-ಗಳನ್ನೆಲ್ಲ ನೆನೆ ನೆನೆದು ಹೃದಯವೂ ಕಳವಳದಿಂದ ತುಂಬ ತೊಡಗಿತು. ಕಣ್ಣೀರು ಕೋಡಿಗಟ್ಟಿ ಹರಿಯಿತು. ಮೊದಲೇ ಅರೆಹೊಟ್ಟೆ; ಹೃದ-ಯದಲ್ಲಿ ಕಳವಳ. ದೇಹ ಮನಸ್ಸುಗಳೆರಡೂ ಸೋತು ಹಣ್ಣಾದುವು. ಅಷ್ಟೇ ಅವನ ಮನಸ್ಸು ಅನಾಥ ಮಕ್ಕಳ ಸಹಾಯಕ್ಕಾಗಿ ಆತುರ-ಗೊಂಡಿತು; ಹಾತೊರೆಯತೊಡಗಿತು.

ಕಾಲ ಕಳೆಯುತಲಿತ್ತು. ಆದರೆ ಸ್ವಾಮಿ ಶಿವಾನಂದರ ಸುಳಿವೇ ಇರಲಿಲ್ಲ!

ಶ್ರೀ. ಸಾಲೀ ರಾಮಚಂದ್ರರಾಯರು

(ವ್ಯಕ್ತಿಪರಿಚಯ)

ಶ್ರೀ ಗೋವಿಂದಮೂರ್ತಿ ದೇಸಾಯಿ, ಧಾರವಾಡ

—●—

ಸಾಲೀ ರಾಮಚಂದ್ರರಾಯರು ನಡೆಯಿಸುತ್ತಿರುವಂತಹ ಸಾತ್ತ್ವಿಕ ಜೀವನವು, ನಮ್ಮ ಸಮಾಜದಲ್ಲಿಯ ವ್ಯಕ್ತಿ-ವ್ಯಕ್ತಿಗಳಿಗೂ ಆದರ್ಶವೆನಿಸುವಂತಹದು. ವೈಚಾರಿಕಕ್ರಾಂತಿ ರಾಜಸಬುದ್ಧಿಯವರ ಚಳವಳಿಗಳಿಂದ ಸಾಧ್ಯವಾಗವು. ಸಾತ್ತ್ವಿಕಹೃದಯದವರ ನಿತ್ಯಜೀವನದ ನೋಟ, ಅದನ್ನು ಸಾಧ್ಯಗೊಳಿಸುವುದು.

"ದರಿದ್ರನಾಗಿಯೇ ಹುಟ್ಟಿದ್ದೇನೆ, ದರಿದ್ರನಾಗಿಯೇ ಬೆಳೆದು ಬಾಳಿದ್ದೇನೆ; ದರಿದ್ರನಾಗಿಯೇ ಪಂಚಮಹಾಭೂತಗಳಲ್ಲಿ ಲೀನವಾಗ ಬೇಕೆಂದು ಬಯಸಿದ್ದೇನೆ." ಸಾಲೀಯವರು ಸದಾ ಜೀವನದಲ್ಲಿ ಜಪಿಸುವ ತಾರಕ ಮಂತ್ರ. ಅಗಲವಾದ ಹಣೆ, ಹಣೆಯತುಂಬ ದಾರಿದ್ರ್ಯ ನಿದರ್ಶಕ ನರಗಳು; ಗಂಭೀರವಾದ ಮುಖ, ನೀಳವಾದ ಸಾದು ಗಪ್ಪಿನ ಮೂಗು; ವಾಮನಮೂರ್ತಿಯ ನಿಲವು. ಮುಖದ ತುಂಬ ನಗು. ನಗುತ್ತಲೇ ಮಾತನಾಡುತ್ತಾರೆ. ಒಮ್ಮೊಮ್ಮೆ ನಗುತ್ತಲೇ ಅಳುವು ದುಂಟು. ಕಣ್ಣಿನಲ್ಲಿ ಹನಿಗಳು ಉದುರಿದರೂ ತುಟಿಯಲ್ಲಿ ನಗು ನಲಿಯುತ್ತಿರುತ್ತದೆ. ಅವರಿಗೆ ನಗುವೆ ಜೀವನದ ಬದುಕು. ಆದರೆ ಜೀವನದ ತುಂಬಾ ಬೇವಿನ ಕಹಿಯ ಸ್ವಾದವೇ ಹೆಚ್ಚು. ಮಾತನಾಡು ವಾಗ ಅಡೆತಡೆಯಿಲ್ಲ, ಅವಸರವಿಲ್ಲ. ನಿಂತು, ನಿಂತು, ತೂಗಿ, ತೂಗಿ, ಅನುಭವದ ಮಾತಿನ ಮುತ್ತುಗಳನ್ನು ಸುರಿಸುತ್ತಾರೆ. ಕನ್ನಡಕವನ್ನು ಹಣೆಗೆ ಏರಿಸಿ ಮಾತನಾಡಿದರೆ, ಬಾಪುವಿನ ನೆನಪು ಬರುತ್ತದೆ. 'ಶ್ರೀನಿಕೇತನಕ್ಕೆ' (ಅವರ ಮನೆಯ ಹೆಸರು) ಬಂದವರು ಚಿಕ್ಕವರಿರಲಿ, ಹಿರಿಯರಿರಲಿ, ಅಜ್ಞರಿರಲಿ, ಸುಜ್ಞರಿರಲಿ ಎಲ್ಲರಿಗೂ ಒಂದೆ ಬಗೆಯ ಆದರ. ಎಲ್ಲರೊಡನೆಯೂ ಒಂದೆ ರೀತಿಯ ಮಾತುಕಥೆ. ಶ್ರೀ. ಸಾಲೀಯವರು ಶಿಕ್ಷಕರಾಗಿ, ಕವಿಗಳಾಗಿ, ವಾಗ್ಮಿಗಳಾಗಿ, ದಾರ್ಶನಿಕರಾಗಿ ನಾಡಿನ ತುಂಬ ಹೆಸರು ಪಡೆದರೂ, ಅವರಿಗೆ ಗರ್ವದ ಲವಲೇಶವೂ ಇರುವುದಿಲ್ಲ. ಮನೆಯಲ್ಲಿ ಮಕ್ಕಳಿರದಿದ್ದರೂ ಮಕ್ಕಳ ಸ್ನೇಹಬೇಕು. ಮನೆಗೆ ಯಾರೋ ಬರುತ್ತಾರೆ, ಯಾರೋ ಮಾತನಾಡುತ್ತಾರೆ. ಎಲ್ಲರೊಡನೆಯೂ ಹರಟೆ. ತುಂಬಾ ತೆರೆದಿಟ್ಟ ಜೀವನ. ಬಂದವರು ನೇರವಾಗಿ ಅಡಿಗೆಯ ಮನೆಗೇ ಹೋಗುತ್ತಾರೆ. ರಾಯರು ಅಡಿಗೆಯನ್ನು ಮಾಡುತ್ತಲೆ ಆಗಂತುಕರ ಕ್ಷೇಮ-ಸಮಾಚಾರವನ್ನು ವಿಚಾರಿಸುತ್ತಾರೆ. ಬಂದವರ ದುಃಖದ ಆಳವನ್ನು ಕ್ಷಣಾರ್ಧದಲ್ಲಿ ಅರಿತು ಸಾಂತ್ವನಗೊಳಿಸುತ್ತಾರೆ. ಅವರಿಗೆ ದುಃಖವೆಂದರೆ ಬಾಳಿನ ಹಾಸುಹೊಕ್ಕು. ಎಲ್ಲರ ದುಃಖವನ್ನು ಒಂದು ಪರಡಿಯಲ್ಲಿ, ಸಾಲೀಯವರ ದುಃಖವನ್ನು ಇನ್ನೊಂದು ಪರಡಿಯಲಿಟ್ಟು ತೂಗಿದರೆ, ಸಾಲೀಯವರ ದುಃಖವು ಶ್ರೀಕೃಷ್ಣನ ತುಳಸಿಯಿದ್ದಂತೆ. ಸಾಲಿಯವರನ್ನು ತಂದೆ, ಗುರು, ಮಾರ್ಗದರ್ಶಕರನ್ನಾಗಿಮಾಡಿಕೊಂಡವರು ಹಲವರು. ಅವರ ಶಿಷ್ಯಕೋಟಿ ಹಿರಿದು. ಜೀವನದಲ್ಲಿ ಅವರು ಸ್ವತಃ ಸಂಪತ್ತನ್ನು ಗಳಿಸದೆ ಹೋದರೂ, ಸಾಂಪತ್ತಿಕ ಸ್ಥಿತಿಯು ಉತ್ತಮವುಳ್ಳ ಮಿತ್ರರನ್ನೂ ಅದಕ್ಕೂ ಹೆಚ್ಚಾಗಿ ಹೃದಯ ಸಂಪತ್ತನ್ನು ಪಡೆದ ಮಿತ್ರರನ್ನೂ ದೊರೆಕಿಸಿಕೊಂಡಿದ್ದಾರೆ.

ಮೊನ್ನೆ ತಾನೇ ಕೇಂದ್ರಸರಕಾರವು "ಬರೆಹಗಾರರಿಗೆ ನೀಡುವ ಅಲ್ಪಸಹಾಯದ ಯೋಜನೆಯಂತೆ" ಕನ್ನಡನಾಡಿನ ಇಬ್ಬರು ಹೆಸರು ಹೊಂದಿದ ಕವಿಗಳಿಗೆ ಸಹಾಯ ಸಲ್ಲಿಸಿದೆ. ಆ ಕೃಪೆಗೆ ಪಾತ್ರರಾದವರಲ್ಲಿ ಒಬ್ಬರು ಶ್ರೀ. ಸಾಲೀರಾಮಚಂದ್ರರಾಯರು.

ಶ್ರೀ. ರಾಮಚಂದ್ರರಾಯರು ೧೮೮೯ರಲ್ಲಿ ಜನಿಸಿ, ಕೇವಲ ಒಂದುವರೆ ವರ್ಷದವರಿರುವಾಗಲೇ ತಂದೆಯನ್ನು ಕಳೆದುಕೊಂಡು ನಿರ್ಗತಿಕರಾದರು. ಕೂಸು ಒಂಬತ್ತು ವರುಷದವರೆಗೂ ತಾಯಿಯ ಪೋಷಣೆಯಲ್ಲಿಯೇ ಬೆಳೆದು, ಅವರನ್ನೂ ಕಳೆದುಕೊಂಡು ನಿರಾಶ್ರಿತವಾಯಿತು. ಪ್ರಕೃತಿಯೇ ತಾಯಿ-ತಂದೆಯಾಗಿ ಅವರನ್ನು ಸಲಹಿತಂತೆ. ಅಲ್ಲಲ್ಲಿ ತಿರುಗಾಡಿ, ಸಿಕ್ಕಲ್ಲಿ ಊಟಮಾಡಿ ಬೆಳೆಯುತ್ತ, ಬೆಳಗಾಂವಿಗೆ ಬಂದರಂತೆ. ಆಂಗ್ಲಭಾಷೆಯ ಎರಡು ಇಯತ್ತೆಗಳನ್ನು ಕಲಿತರಂತೆ. ಮುಂದೆ ವಿಜಾಪುರಕ್ಕೆ ಬಂದು ಮ್ಯಾಟ್ರಿಕ್ ಪರೀಕ್ಷೆಯವರೆಗೆ ಅಲ್ಲಿಯೇ ನಿಂತು, ಕಲಿತು ಮ್ಯಾಟ್ರಿಕ್ ಪಾಸಾದರಂತೆ. ಕೇವಲ ವಾರಾನ್ನದ ಮೇಲೆ ತಮ್ಮ ಅಭ್ಯಾಸವನ್ನು ಸಾಗಿಸಿದರಂತೆ. ಒಂದುಸಲ ವಿಜಾಪುರದಲ್ಲಿ ವಾರವೊಂದನ್ನು ಕೇಳಲು ಹೋದಾಗ, ಸಿರಿವಂತರೊಬ್ಬರು ಸಾಲಿಯವರಿಗೆ ಮನಸ್ವಿ ಬಯ್ದರಂತೆ. ಅಂದಿನಿಂದ ಅವರಿಗೆ ವಾರಾನ್ನವೆಂದರೆ ಬಹು ದುಃಖವಾಗುತ್ತದೆ. ಅಂದು ಅವರು ಮಾತನಾಡಿದ

ಮೊನೆಯ ಛಾಯೆಗಳು ಇಂದಿಗೂ ಇವರಲ್ಲಿ ಮೂಡಿ ನಿಂತಿವೆ. ಅದನ್ನೆಲ್ಲ ನೆನಸಿಕೊಂಡು ಮಾತನಾಡುತ್ತಾರೆ. ಮ್ಯಾಟ್ರಿಕ್ ಪರೀಕ್ಷೆಯನ್ನು ಪಾಸಾದಕೂಡಲೇ ಒಂದು ವರುಷದ ವರೆಗೆ ಪೋಸ್ಟ್-ಆಫೀಸಿನಲ್ಲಿ ನೌಕರಿಯನ್ನು ಹಿಡಿದರು. ೧೯೦೮ ರಲ್ಲಿ ಸ್ವಾತಂತ್ರ್ಯ ಪಿತಾಮಹ ಟಿಳಕರು ಚಳವಳಿಯನ್ನು ಪ್ರಾರಂಭಿಸಲು, ಅದರಲ್ಲಿ ಹೊಕ್ಕು ತಮ್ಮ ನೌಕರಿಯನ್ನು ತ್ಯಜಿಸಿದರು. ಕಲಿಯಬೇಕೆಂಬ ಹವ್ಯಾಸವು ಬಲವತ್ತರವಾಗಲು, ಪುಣೆಗೆ ಹೋಗಿ ಕಾಲೇಜನ್ನು ಸೇರಿದರು. ಪ್ರವೇಶ ಪರೀಕ್ಷೆಯನ್ನು ಪಾಸಾದ ಕೂಡಲೆ ಚಳಿಜ್ವರದ-ಮೂಲಕ ಕಾಲೇಜನ್ನೇ ನಿಲ್ಲಿಸಬೇಕಾಯಿತು. ವ್ಯಾಧಿಯಿಂದು ಮನೆಯಲ್ಲಿ ಕೂಡದೇ ಹುಬ್ಬಳ್ಳಿಯ ತೊರವೀಹಾಯಸ್ಕೂಲಿನಲ್ಲಿ ನೌಕರಿಯನ್ನು ಪ್ರಾರಂಭಿಸಿದರು. ಅದೂ ಅವರನ್ನು ಬಹುದಿವಸ ಹಿಡಿಯಲಿಲ್ಲ. ಮತ್ತೆ ಉಚ್ಚಶಿಕ್ಷಣದ ಅಭ್ಯಾಸದ ಹಂಬಲವು ಬೆಳೆಯಲು, ಪುಣೆಗೆ ಹೋಗಿ ೧೯೧೭ ರಲ್ಲಿ ಬಿ. ಏ ಪರೀಕ್ಷೆ ಪಾಸಾದರು. ಪ್ರಾರಂಭದಿಂದಲೂ ಶಿಕ್ಷಣದ ಕಡೆಗೆ ಒಲವಿದ್ದುದರಿಂದ, ೧೯೧೮ ರಿಂದ ೨ ವರ್ಷಗಳವರೆಗೆ ವಿಜಾಪುರದ ಶ್ರೀಕೃಷ್ಣಪಾಠಶಾಲೆಯಲ್ಲಿ ಶಿಕ್ಷಕವೃತ್ತಿಯನ್ನು ಕೈಕೊಂಡರು. ಅಂದಿನ ಆ ಶ್ರೀಕೃಷ್ಣ ಪಾಠಶಾಲೆಯೆಂದರೆ ಇಂದಿನ 'ಪಿ. ಡಿ. ಜೆ.' ಹಾಯಸ್ಕೂಲು. ಸರಿ ಮತ್ತೆ ದೇಶದ ಕೂಗು ಎಚ್ಚರಿಸಿತು. ೧೯೨೦ ರ 'ಅಸಹಕಾರ' ಚಳವಳಿಯೆಂದರೆ ಸಮಗ್ರಭಾರತದ ಯುವಕರನ್ನೇ ಜಾಗೃತಗೊಳಿಸಿತು. ರಾಷ್ಟ್ರೀಯ ಸ್ಫೂರ್ತಿಯಿಂದ ಕಾರ್ಯಕರ್ತರ ಗುಂಪಿನಲ್ಲಿ ಸೇರಿ, ದೇಶಕ್ಕೆ ಸಹಾಯವಲ್ಲಿಸುವವರಲ್ಲಿ ಶ್ರೀ. ರಾಮಚಂದ್ರರಾಯರೂ ಒಬ್ಬರಾದರು ನಾಗಪುರದಲ್ಲಿ ನೆರೆದಿದ್ದ ಅಖಿಲಭಾರದ ಕಾಂಗ್ರೆಸ್ ಅಧಿವೇಶನಕ್ಕೆ ಹೋಗಿ, ಅಲ್ಲಿಯೇ ದೇಶದ ಕಾರ್ಯಕ್ಕಾಗಿ ಜೀವನವನ್ನು ಮುಡಿಪಿಡಬೇಕೆಂದು ನಿರ್ಧರಿಸಿದರು. ಇಷ್ಟರಲ್ಲಿಯೆ ಇವರ ಮದುವೆ ಆಗಿ ಹೋಗಿತ್ತು. "ನಾನು ಒಳ್ಳೆಯ ಹುಡುಗನೆಂದು, ಯಾರೋ ಕರೆದು ಮದುವೆಮಾಡಿಬಿಟ್ಟರು; ಮದುವೆಯಾಯಿತು. ನನ್ನ ಹೆಂಡತಿಯು ತುಂಬಾ ಒಳ್ಳೆಯವಳು. ಅವಳಿಗೆ ತಕ್ಕಂತೆ ನಾನು ಒಳ್ಳೆಯ ಪತಿಯಾಗಿಯೇ ವರ್ತಿಸಿದೆ. ನಮ್ಮ ಬಾಳು ಬಹು ಸುಗಮವಾಗಿ ಸಾಗಿತು." ಎಂದು ಪ್ರಾಂಜಲಮನಸ್ಸಿನಿಂದ ಒಮ್ಮೆ ಮಾತನಾಡುವಾಗ ಸಾಲಿಯವರು ಹೇಳಿದರು. ಅವರದು ತೀರ ನಿರ್ಮಲವಾದ ಮನಸ್ಸು. ಹೃದಯದಲ್ಲಿ ಯಾವುದಕ್ಕೂ ಆಸ್ಪದವಿಲ್ಲ. ಎಲ್ಲವನ್ನೂ ಆಡಿಯೇ ತೋರಿಸುವ ಸ್ವಭಾವ. ೧೯೧೫ ರಲ್ಲಿ ಮದುವೆಯಾದ ಮೇಲೆ, ಹದಿಮೂರು ವರುಷಗಳಕಾಲ ದೇಶವನ್ನೆಲ್ಲಾ ಸುತ್ತಾಡಿದರಂತೆ. ೧೯೨೮ ರ ಹೊತ್ತಿಗೆ ಇಬ್ಬರು ಹೆಣ್ಣುಮಕ್ಕಳು ಹಾಗು ಒಬ್ಬ ಗಂಡುಮಗು ಜನಿಸಿದರಂತೆ. ಹೆಣ್ಣುಮಕ್ಕಳಿಬ್ಬರನ್ನೂ ಮದುವೆಮಾಡಿಕೊಟ್ಟರು. ಗಂಡುಮಗು ಮಾತ್ರ ಅವರ ಪಾಲಿಗೆ ಉಳಿಯಲಿಲ್ಲ. ಜೀವನದ ಸಂಗಾತಿಯನ್ನಂತೂ ಮೊದಲೇ ಕಳೆದುಕೊಂಡಿದ್ದರು.

೧೯೨೮ ರ ಪ್ರಾರಂಭದಲ್ಲಿ ಅಸಹಕಾರ ಚಳವಳಿಯು ಕೊಂಚ ತಗ್ಗಿತು. ಅಂದು ಕರ್ನಾಟಕ ಶಿಕ್ಷಣಸಂಸ್ಥೆಯವರು (Karnatak Education Board) ಆಹ್ವಾನಿಸಿ ತಮ್ಮ ಕರ್ನಾಟಕ ಹಾಯಸ್ಕೂಲಿನಲ್ಲಿ ಅಧ್ಯಾಪಕ ವೃತ್ತಿಯನ್ನು ಕೊಟ್ಟರು. ಇದಕ್ಕೂ ಮೊದಲು ೧೯೩೬ ರಿಂದ ೧೯೩೭ ರ ವರೆಗೆ ಜಯಕರ್ನಾಟಕದ ಸಂಪಾದಕತ್ವವನ್ನು ವಹಿಸಿ ಅದನ್ನು ಮುಂದಕ್ಕೆ ಸಾಗಿಸಿದರು. ಶಾಲೆಯಲ್ಲಿ ಸಾಲಿಯವರೆಂದರೆ ಬಹುಪ್ರೀತಿಯ ಗುರುಗಳು. ಅಲ್ಲಿಯೂ ಅವರು ತಮ್ಮ ಸತ್ಯಾಗ್ರಹವನ್ನು ಹೂಡುತ್ತಿದ್ದರು. ಶಾಲೆಯಲ್ಲಿ ಯಾವ ಕಾರಣವೂ ಇಲ್ಲದೆ ಮಕ್ಕಳು ಗೊಂದಲವನ್ನೆಬ್ಬಿಸಿ ವರ್ಗದಲ್ಲಿ ಅಶಾಂತಿಯನ್ನು ಎಬ್ಬಿಸಿವುದು ವಾಡಿಕೆ. ಅದು ವಿದ್ಯಾರ್ಥಿಗಳಿಗೆ ಸ್ವಭಾವ ಜನ್ಮವಾದದ್ದು. ಅದನ್ನಿವರು ಖಂಡಿಸಿ ಅವರು ಸರಿಯಾದ ಮಾರ್ಗಕ್ಕೆ ಬರುವ ವರೆಗೂ ಅವರನ್ನು ಬಿಡುವಂತಿಲ್ಲ. ತಾವು ಕಷ್ಟವನ್ನು ಅನುಭೋಗಿಸಿದರೂ ಸರಿಯೇ, ತಮ್ಮ ವಿದ್ಯಾರ್ಥಿಗಳು ಸರಿಯಾದ ಮಾರ್ಗಕ್ಕೆ ಬರಬೇಕು. ಶ್ರೀ. ಸಾಲಿಯವರು ಸಾಹಿತ್ಯಿಕರೆಂಬುದಕ್ಕಿಂತಲೂ ಮಾಸ್ತರರೆಂದೇ ವಿಶೇಷವಾಗಿ ಪ್ರಸಿದ್ಧಿಯನ್ನು ಹೊಂದಿದ್ದಾರೆ.

೧೯೩೫ ರಲ್ಲಿ ಮಾಸ್ತಿಯವರ ಪರಿಚಯವಾಯಿತಂತೆ. ಅಂದಿನಿಂದಲೇ ಸಾಹಿತ್ಯಾಭ್ಯಾಸದಲ್ಲಿ ವಿಶೇಷ ರುಚಿಯು ಹುಟ್ಟಿ ಅದರ ಆಸ್ವಾದನಕ್ಕೆ ಪ್ರಾರಂಭಿಸಿದರಂತೆ. ಹಳಗನ್ನಡವನ್ನು ಓದಿ ಅರಗಿಸಿಕೊಳ್ಳಬೇಕೆಂಬ ಹಂಬಲವು ಬೆಳೆಯುತ್ತ ಹೊರಟಾಗ ಮುದ್ದಣನ ರಾಮಾಶ್ವಮೇಧವನ್ನು ತಂದು ಓದಲು ಪ್ರಾರಂಭಿಸಿದರಂತೆ–ಅಲ್ಲಿಯ 'ಗಡ' ಎಂಬ ಶಬ್ದವನ್ನು ಕೇಳಿ ಸಿಡಿಲು ಬಡಿದವರಂತಾದರಂತೆ. ಆದರೂ ಸ್ವಪ್ರಯತ್ನದಿಂದಲೇ ಓದಲು ಪ್ರಾರಂಭಿಸಿ, ಅದರಲ್ಲಿ ಪ್ರಭುತ್ವವನ್ನು ಘಳಿಸಿದರು. ಅವರಿಗೆ ಸಂಸ್ಕೃತದಲ್ಲಿಯೂ ಕನ್ನಡದಷ್ಟೇ ಪಾಂಡಿತ್ಯ. "ಪಾಲೀ, ಮರಾಠಿ, ಗುಜರಾತಿ" ಭಾಷೆಗಳನ್ನು ಬಲ್ಲರು ಅವರು ತಮ್ಮ ಜಾತಕಕಥೆಗಳನ್ನು ಪಾಲೀ ಭಾಷೆಯಿಂದಲೇ ಭಾಷಾಂತರ ಗೊಳಿಸಿದ್ದಾರೆ. ಅದರ ಮುಂದಿನ ಭಾಗವನ್ನು ಬರೆಯುವ ಪ್ರಯತ್ನದಲ್ಲಿದ್ದಾರೆ. ಅರವತ್ತಕ್ಕೂ ಮಿಕ್ಕ ವಯಸ್ಸು, ಅಶಕ್ತದೇಹ ಕೊರೆಯುವಚಳಿ ಇಂತಹದರಲ್ಲಿ ನೀಲಗಿರಿಬೆಟ್ಟದಲ್ಲಿಯ 'ಉದಕ ಮಂಡಲಕ್ಕೆ' ಹೋಗಿ ಅಲ್ಲಿಯ ಇತಿಹಾಸ ಪ್ರಾಚ್ಯಸಂಶೋಧನಮಂಡಳದಲ್ಲಿದ್ದ ಪಾಲೀಗ್ರಂಥದಿಂದ 'ಜಾತಕ ಕಥೆ'ಗಳನ್ನು ಬರೆಯಹತ್ತಿದ್ದಾರೆ ಒಟ್ಟು ಜಾತಕದ ೨೦೦ ಕಥೆಗಳನ್ನು ಮಾಡಿ ಕನ್ನಡಿಗರಿಗೆ ನಾಲ್ಕು ಅಥವಾ ಐದು ಭಾಗಗಳಲ್ಲಿ ಕೊಡುವವರಿದ್ದಾರೆ. ಶ್ರೀ. ರಾಮಚಂದ್ರರಾಯರು ಅಸಂಖ್ಯ ಕೃತಿಗಳನ್ನು ಹೊರಡಿಸಿ ಲೋಕದ ಕಣ್ಣನ್ನು ತಿರುಗಿಸಿಕೊಳ್ಳಲು ಯಾವ ಪ್ರಯತ್ನವನ್ನು ಮಾಡದಿದ್ದರೂ ಅವರ ನಿಯಮಿತ ಸಂಖ್ಯೆಯಕೃತಿಗಳ ಹೂರಣವೇ ಅಸಂಖ್ಯಾತರನ್ನು ತೃಪ್ತಿಗೊಳಿಸಿದೆ. ಸಂಸ್ಕೃತದಲ್ಲಿ ಬರೆಯುವುದೆಂದರೆ ಅವರಿಗೆ ಪ್ರೀತಿ "ನಮ್ಮ ಭಾಷೆಯನ್ನು ನಾವು ಮಾತನಾಡುವಾಗ ಒಂದೆರಡು ಆಂಗ್ಲ ಭಾಷೆಯ ಶಬ್ದಗಳನ್ನು ಬೆರಸಿ ಮಾತನಾಡುವುದಿಲ್ಲವೇ ? ಅದೇ ರೀತಿ ನಾನು ಸಂಸ್ಕೃತವನ್ನು ಯಾವಾಗಲಾದರೂ ಬರೆಯುತ್ತೇನೆ" ಎಂದು ಹೇಳಿದರು. ಅವರು ಸಂಸ್ಕೃತದಲ್ಲಿ "**ಅನಕ್ಕ ಅಷ್ಟೋತ್ತರಶತಕಂ, ವಾಸುದೇವಶತಕಂ, ಅಭಿಸಾರ** ಬರೆದಿದ್ದಾರೆ. ಇನ್ನೊಂದು

ಅವರ ಅಮೂಲ್ಯ ಕಾಣಿಕೆ **ಸುದಾಮ ಚರಿತ್ರೆ**." ಸುದಾಮನ ಭಕ್ತಿಯಿಂದಲೂ, ಕೃಷ್ಣನ ಸ್ನೇಹವಾತ್ಸಲ್ಯದಿಂದಲೂ ಅವರು ತೀರ ಹರ್ಷಪುಲಕಿತರಾಗಿದ್ದಾರೆ. ಸುದಾಮನೆಂದರೆ ತಮ್ಮ ಆದರ್ಶವ್ಯಕ್ತಿಯೆಂದು ಉದ್ಗಾರ ತೆಗೆಯುತ್ತಾರೆ. 'ಅವನಿಂದಲೇ ತಮ್ಮ ಜೀವನವು ಇದುವರೆಗೂ ನಡೆಯುತ್ತ ಹೊರಟಿದೆ.' ಎಂದು ಹೇಳುತ್ತಾರೆ. ಕನ್ನಡದಲ್ಲಿ ಕಾದಂಬರಿಗಳನ್ನು ಹಾಗು ಕಾವ್ಯಗಳನ್ನು ಬರೆದಿದ್ದಾರೆ.

ಅವರಿಗೆ ಜೀವನದಲ್ಲಿ ಮಾರ್ಗದರ್ಶಕರೆಂದರೆ ಬುದ್ಧ, ಕ್ರೈಸ್ತ. ಹಾಗು ಗಾಂಧೀಜಿ. ಕ್ರೈಸ್ತತತ್ತ್ವವನ್ನು ಒಪ್ಪಿದರೂ ಚರ್ಚಿನ ಧರ್ಮಕ್ಕೆ ಅವರು ಮಾನ್ಯತೆಯನ್ನೀಯುವುದಿಲ್ಲ. ಕ್ರೈಸ್ತನೇ ತಮ್ಮ ಜೀವನದ ಮಾರ್ಗದರ್ಶಕನೆಂದು ಒಪ್ಪುತ್ತಾರೆ. ವಚನಕಾರರ ವಚನಗಳನ್ನು ಅರೆದು ಕುಡಿದು ಅರಗಿಸಿಕೊಂಡಿದ್ದಾರೆ. ಅವರಿಗೆ ಯಾವ ಧರ್ಮವಾದರೂ ಸರಿಯೇ! ಎಲ್ಲೆಲ್ಲಿ, ಯಾವ ಯಾವ ಧರ್ಮದಲ್ಲಿ ದೇವರು, ಶ್ರದ್ಧೆ, ಭಕ್ತಿ ಮುಂತಾದುಗಳಿವೆಯೋ ಅಲ್ಲಲ್ಲಿ ಇವರಿಗೆ ನಂಬಿಗೆ ಇದೆ. ಶ್ರೀ ಸಾಲಿಯವರದು ಸಮನ್ವಯ ಧರ್ಮ! ತಮ್ಮದೇ ಆದ ವೈಷ್ಣವ ಧರ್ಮಕ್ಕೆ ಅಂಟಿಕೊಂಡಿದ್ದರೂ ಅದರ ಮಡಿವಂತಿಕೆ ಹಾಗು ಅರ್ಥರಹಿತ ಸಂಪ್ರದಾಯಗಳಲ್ಲಿ ಅವರಿಗೆ ನಂಬಿಕೆಯಿಲ್ಲ. ಧರ್ಮದ ಬಗ್ಗೆ, ವಿಕಾಸವಾದದ ಬಗ್ಗೆ ಅವರಲ್ಲಿ ಕ್ರಾಂತಿಕಾರಕ ವಿಚಾರಗಳಿಲ್ಲ. ವಿಕಾಸವಾಗಬೇಕೆಂದು ಒಪ್ಪುತ್ತಾರೆ. ವಿಕಾಸದ ಹಾದಿಯನ್ನು ತುಳಿಯುವಾಗ ತನ್ನದೆನ್ನುವ 'ಮೂಲತತ್ತ್ವವನ್ನು' ಮಾನವನು ಮರೆಯುವುದೆಂದರೆ ಅವರಿಗಾಗದು. ತನ್ನದೆನ್ನುವ ಮೂಲತತ್ತ್ವವನ್ನಾಗಲಿ, ಧರ್ಮದ ತಳಹದಿಯನ್ನಾಗಲಿ, ಸಂಸ್ಕೃತಿಯ ನೆಲಗಟ್ಟನ್ನಾಗಲಿ ಇಟ್ಟುಕೊಂಡು ಬೇರೆಯವರು ನೋಯದಂತೆ ವಿಕಾಸವಾದವನ್ನು ಬೆಳೆಯಿಸಿದರೆ ಅವರು ಒಪ್ಪುತ್ತಾರೆ.

ಅವರು ಜೀವನದಲ್ಲಿ ಯಾವ ಸಂದೇಹಕ್ಕೂ ಆಸ್ಪದವನ್ನಿತ್ತಿಲ್ಲ. ಯಾವಾಗಲೂ ತಮ್ಮ ಹೃದಯವನ್ನು ತೆರೆದಿಟ್ಟುಕೊಂಡೇ ಕುಳಿತಿರುತ್ತಾರೆ. ಎಲ್ಲರೊಡನೆಯೂ ಬಿಚ್ಚುಮಾತನಾಡುತ್ತಾರೆ. ಯಾರು ಬಂದರೂ ಸ್ವಾಗತಿಸುತ್ತಾರೆ. ಆದರೆ ತಮ್ಮ ಮನೆಬಿಟ್ಟು ಹೊರಕ್ಕೆ ಕಾಲಿಡುವಾಗ ಮಾತ್ರ ತುಂಬಾ ಎಚ್ಚರಿಕೆಯನ್ನು ವಹಿಸುತ್ತಾರೆ. ಸಾರ್ವಜನಿಕ ಕಾರ್ಯಕರ್ತರಾದರೂ ಸಾರ್ವಜನಿಕದಲ್ಲಿ ಬೆರೆಯುವುದು ಬೇಡ. 'ಕರೆಯಲಿ, ಕರೆಯದಿರಲಿ, ಕರೆಯಿಸಿಕೊಂಡವರಂತೆ ಎಲ್ಲ ಚಟುವಟಿಕೆಗಳಲ್ಲಿ ತಾವು ಭಾಗವಹಿಸಿ ತಮ್ಮ ಹೆಸರು ಮುಂದೆ ಬರುವಂತಾಗಲಿ!' ಎಂಬ ವ್ಯಕ್ತಿಯೇ ಇವರಲ್ಲ. ಹೈದ್ರಾಬಾದ ಸಾಹಿತ್ಯ ಸಮ್ಮೇಲನದ ಕವಿಗೋಷ್ಠಿಯ ಅಧ್ಯಕ್ಷರಾಗಿದ್ದರು. ಅದನ್ನು ಬಿಟ್ಟು ಬೇರೆ ಅಂತಹ ಯಾವ ಸಮಾರಂಭದಲ್ಲಿಯೂ ಇವರು ಭಾಗವಹಿಸಿಲ್ಲ. ಇವರಿಗೆ ತಮ್ಮದೇ ಆದ ಒಂದು ವೈಶಿಷ್ಟ್ಯಪೂರ್ಣ ಕಾರ್ಯವಿದ್ದರೆ ಸಭೆಗೆ ಹೋಗುತ್ತಿರಬಹುದೆಂದು ನೀವು ಅವರಿಗೆ ಆಪಾದಿಸಬಹುದು. ಸುಳ್ಳು. ಅವರು ಕರೆಯದಲೇ ಸೇವಾದಲಕ್ಕೆ ಹೋಗಿ ಅಲ್ಲಿಯ ಕಾರ್ಯಕ್ರಮಗಳನ್ನು ನಿರೀಕ್ಷಿಸುತ್ತಾರೆ. ಶುಷ್ಕ-ಕೀರ್ತಿ, ಜಂಬ, ಒಣಹೆಮ್ಮೆ ಅವರಿಗೆ ಹಿಡಿಸದು. ಕಾರ್ಯಮಾಡದಿದ್ದರೂ ಮಾಡಿರುವನೆಂದು ಹೊಗಳಿಸಿಕೊಳ್ಳುವ ರೀತಿಗೆ ಇವರ ವಿರೋಧಿಗಳು. ಅವರಿಗೆ ಎಲ್ಲವೂ ಸತ್ಯವಿರಬೇಕು. ಸತ್ಯಕ್ಕೆ ತುಂಬ ಮನ್ನಣೆಯನ್ನು ಅವರು ಕೊಡುತ್ತಾರೆ.

'ದೇವರೆಂದರೆ' ಅವನಲ್ಲಿ ಅವರಿಗೆ ತುಂಬಾ ಪ್ರೀತಿ. ದೇವರು ತಮಗೆ ಇಂತಹ ಪರಿಸ್ಥಿತಿಯನ್ನು ಒದಗಿಸಿದ್ದಾನೆಂದು ಅವನನ್ನು ಹೊಗಳುತ್ತಿದ್ದಾರೆ. "೬೪ ವರ್ಷಗಳನ್ನು ಕೊಟ್ಟಿದ್ದಾನೆ. ಇದು ಬಹು ದೀರ್ಘವಾದ ಜೀವನ. ಅಂತಿಮದವರೆಗೂ ಒಬ್ಬರನ್ನೂ ನೋಯಿಸಿ, ಪೀಡಿಸಿ ಜೀವನವನ್ನು ಸಾಗಿಸುವ ಪ್ರಸಂಗಗಳನ್ನು ಅವನು ತಂದೊಡ್ಡಲಿಲ್ಲ. ಎಂತಲೇ ಅವನು ದಯಾಘನನು" ಎಂದು ನನ್ನೆದುರು ಮಾತನಾಡುವಾಗ ಹೇಳಿದರು. ಹೇಳಿದಾಗ ಭಕ್ತಿ-ಪರವಶತೆಯಿಂದ ಅವರ ಕಣ್ಣಲ್ಲಿ ನೀರಿನಹನಿಗಳು ಉದುರಿದುವು.

ಅವರು ತಮ್ಮ **'ಯದುಪತಿ, ಜಯಗುರುದೇವ'**ಗಳಂತಹ ಕಾದಂಬರಿಗಳನ್ನೂ, **'ರಾಮಾಯಣ'** **'ಚಿತ್ರಸೃಷ್ಟಿ'** ಯಂತಹ ಕಾವ್ಯಗಳನ್ನೂ ಬರೆಯುವುದರಲ್ಲಿ ತಮ್ಮ ಜೀವನದ ಧ್ಯೇಯಗಳನ್ನೇ ಚಿತ್ರಿಸಲು ಪ್ರಯತ್ನಿಸಿದ್ದಾರೆ. ಶ್ರೀ ರಾಮಚಂದ್ರರಾಯರಲ್ಲಿ. ನಾವು ನಿಜವಾದ ತತ್ತ್ವಜ್ಞಾನಿಗಳನ್ನು ಕಾಣಬಹುದು. ಅವರಿಗೆ ಎಲ್ಲವೂ ಒಳ್ಳೆಯದು; ಎಲ್ಲರೂ ಒಳ್ಳೆಯವರು. ಆ ರೀತಿಯಾಗಿಯೆ ಜೀವನವನ್ನು ಸಾಗಿಸಿದ್ದಾರೆ. ನಾಡಿಗಾಗಿ ಅವರು ಸೇವೆಸಲ್ಲಿಸಿದ್ದಾರೆ. ನಾಡಿಗರೂ ಜಾಗೃತದೃಷ್ಟಿಯಿಂದ ಅವರಿಗೆ ತಕ್ಕ ಮನ್ನಣೆಯನ್ನು ಸಲ್ಲಿಸಲೂಬಹುದು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ ನೀಲ **ಹೇರ್ ಆಯಿಲ್**

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ ಜೀವಿನಿ **ಟಾನಿಕ್**

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ ಪಂಚವಟಿ **ರಾಮಬಾಣ**

ಸದ್ವೈದ್ಯ ಶಾಲಾ, ನಂಜನಗೂಡು

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರಖಾನೆ

ಸಾಧನೆಯ ಹಾದಿಯಲಿ....

ಶ್ರೀ. ಎಂ. ಗೋಪಾಲಕೃಷ್ಣ ಭಟ್ಟ, ಪೆರಡಾಲ

೧

ಹಿಮಗಿರಿಯ ಉತ್ತುಂಗ ಶಿಖರದಲಿ ಶಿರವೆತ್ತಿ
ನಿಂದು ಬಾಂದಳಕೊಮ್ಮೆ ನೆಗೆಯಬೇಕು!
ಅಲ್ಲಿ ರಾರಾಜಿಸುವ ಚಂದಿರನ ಬಿಗಿದಪ್ಪಿ
ಎದೆಯಾರೆ ಸೊದೆಗಡಲನೀಂಟಬೇಕು!

೨

ಯುಗಗಳಾಸರಿನಿಂದ ಬೆಂದು ಬಿದ್ದಿಹುದಲ್ಲಿ
ದೀನಯಾಚಕನಂತೆ ಮರಳುಭೂಮಿ!
—ಬಯಕೆಯಾಸರಿನಿಂದ ಸರ್ವಸ್ವವನು ಹೀರಿ
ತಣಿಯಲಾರನೆ ಇಲ್ಲಿ ಮರುಳು ಕಾಮಿ!

೩

ದಿವ್ಯಜ್ಯೋತಿಯನೆತ್ತಿ ಇಣುಕಿ ನೋಡಿದರಲ್ಲಿ
ನಡುವೆ ತೋರುವುದೊಂದು ಬೇರೆ ದಾರಿ!
ಮನ ಒಲಿದು ನಿಂದಿಹುದು ಜಲಧಿಯಾಳದಿ ಮುಳುಗಿ
ಮುತ್ತನೆತ್ತುವ ಧೀರನೊಡಲ ಮಾರಿ!

೪

ಮುಗಿಲ ಮಲ್ಲಿಗೆಯಲ್ಲಿ ಜೇನನರಸುವುದಿಲ್ಲ
ನಕ್ಷತ್ರಮಾಲೆಗಳ ಮುಡಿಯ ಬೇಕು!
ಇದುವೆ ದಿಟ ದಿಟ್ಟತನ ಸೆಟೆದಿಹುದು; ಸಾಧನೆಯ
ಹಾದಿಯಲಿ ಯೋಗಿಯನು ನಡೆಸಬೇಕು!

೫

ಗೌರಿಶಂಕರದಲ್ಲಿ ನೆಲೆನಿಂತ ಆ ಮಾತೆ
ತುಂಬಲಾರಳೆ ಎದೆಗೆ ನವಚೇತನ?
ಮೂಲೋಕವನು ಮೀರಿ ಹಾರಿ ಬರಲಿದೆ ಹಕ್ಕಿ
ಸಂಘವಾನುವುದಿನ್ನು ನವ ನೂತನ!

೬

ಹಿಮಗಿರಿಯ ಉತ್ತುಂಗ ಶಿಖರದಲಿ ಶಿರವೆತ್ತಿ
ನಿಂದು ಬಾಂದಳಕೊಮ್ಮೆ ನೆಗೆಯಬೇಕು!
ಅಲ್ಲಿ ರಾರಾಜಿಸುವ ಚಂದಿರನ ಬಿಗಿದಪ್ಪಿ
ಎದೆಯಾರೆ ಸೊದೆಗಡಲನೀಂಟಬೇಕು!

ಮುಗಿಲ ಮೋಹಿನಿಗೆ

ಶ್ರೀ. ಸುರೇಶ ಹೊಸಳ್ಳಿ, ಮುಧೋಳ

೧

ತಿಳಿಗಾಳಿಯಲಿ ತೇಲಿ, ಬಿಳಿಮುಗಿಲು ಹೊರಟಿಹುದು
ನೀಲಿಯಂಗಳದಲ್ಲಿ ಆಟವಾಡಿ—
ತಾನೆ ಆಟವಾಡಿ.

೨

ಮುಗುಳು ನಗೆಯನು ಬೀರಿ. ಮೋದದಲಿ ನಡೆದಿಹುದು
ಸೊಗದ ಸುಗ್ಗಿಯ ದಾಟಿ ಮುಂದೆ-ಮುಂದೆ—
ಮತ್ತೆ ಮುಂದೆ-ಮುಂದೆ.

೩

ಎಳಗೂಸಿನಾ ತೆರದಿ, ಹೊರಳಿನೋಡುತಲಿಹುದು
ಮರುಳು ಮಾಡುವ ಮಾಟ ಮೊಗದೊಳಿರಿಸಿ—
ಹಾದು ಮೊಗದೊಳಿರಿಸಿ.

೪

ಹಿಂಜಿದಾ ಅರಳಿಯನೆ ಹಾಸಿಗೆಯ ಹಾಕಿಹುದು
ಮಂಜುಮಂಜಾಗಿರುವ ಮುಗಿಲ ರಾಶಿ—
ನೋಡು ಮುಗಿಲರಾಶಿ.

೫

ಏಕರೂಪವ ಧರಿಸಿ ಒಂದಾಗಿ ನಡೆದಿಹುದು
ತಾಯಗರುಳಿನ ದಿವ್ಯ ಪ್ರೇಮದಂತೆ—
ನಿಜದ ಪ್ರೇಮದಂತೆ

೬

ನಿನ್ನ ಉಡುಪಿನ ಅಂಚು ಎಷ್ಟು ನಯವಾಗಿಹುದು
ಯಾವ ಜೇಡನು ಹೀಗೆ ನೇದು ಕೊಟ್ಟ—
ಹೇಳು ನೇದು ಕೊಟ್ಟ?

೭

ದಿಕ್ಕು ದೇಶವ ತಿರುಗಿ ಜಗದ ಪಯಣವಮುಗಿಸಿ
ಮತ್ತೆ ಯಾತ್ರೆಗೆ ನೀನು ಎಲ್ಲಿ ಹೊರಟೆ—
ಹೇಳು ಎಲ್ಲಿ ಹೊರಟೆ?

೮

ಕವಿಯೆದೆಯು ಅರಳಿಹುದು ಕಾವ್ಯಕುಸುಮವ ಹಿಡಿದು
ಏನು ನಿನ್ನಯ ಮಾಯೆ ಮೋಹದಾಟ—
ತುಂಬ ರಸದ ಊಟ!

ರುಕ್ಮಿಣೀ ಸ್ವಯಂವರ

(ಒಂದು ಪೌರಾಣಿಕ ರೂಪಕ)

ಶ್ರೀ. ರಂ. ಸ್ವಾ. ದೇಶಪಾಂಡೆ, ಆಲದಕಟ್ಟಿ

ಪಾತ್ರಪರಿಚಯ

ಭೀಷ್ಮಕ	(ವಿದರ್ಭದೇಶದ ರಾಜ)
ರುಕ್ಮಿ	(ರಾಜನ ಮಗ)
ರುಕ್ಮಿಣಿ	(ರಾಜನ ಮಗಳು)
ಶಿಶುಪಾಲ	(ಮಗಧದೇಶದ ರಾಜ)
ಶ್ರೀಕೃಷ್ಣ	(ರಾಜ್ಯವಿಲ್ಲದ ರಾಜಾಧಿರಾಜ)
ಕ್ರಥಕೌಶಿಕ	(ಶ್ರೀಕೃಷ್ಣನ ಮಿತ್ರರಾಜ)

ಕಂಸವಧಾನಂತರ ಕಾರಾಗ್ರಹದಲ್ಲಿದ್ದ ಉಗ್ರಸೇನ ಮಹಾರಾಜನನ್ನು ಬಂಧಮುಕ್ತನನ್ನಾಗಿ ಮಾಡಿ, ಪುನಃ ಸಿಂಹಾಸನದಲ್ಲಿ ಪ್ರತಿಷ್ಠೆಗೊಳಿಸಿದಂದಿನಿಂದ, ಶ್ರೀಕೃಷ್ಣನ ಕೀರ್ತಿಪರಿಮಳವು ದಿಗಂತದಲ್ಲಿ ಪಸರಿಸುತ್ತ ನಡೆದಂತೆ, ಅವನ ವಿರೋಧಿಗಳ ಸಂಖ್ಯೆಯೂ ಹೆಚ್ಚಿತು. ಅವರಲ್ಲಿ ವಿದರ್ಭದೇಶದ ಮಹಾರಾಜಭೀಷ್ಮಕನ ಮಗನಾದ ರುಕ್ಮಿಯೂ ಒಬ್ಬ. ರುಕ್ಮಿಯ ಸೋದರಿ ರುಕ್ಮಿಣಿಯ ಸ್ವಯಂವರ ಮಹೋತ್ಸವದಲ್ಲಿ, ಆಮಂತ್ರಿತರಾದ ರಾಜ-ಮಹಾರಾಜರು ಒಟ್ಟಿಗೆ ಕೂಡಿದ್ದಾರೆ. ಆ ಕಾಲಕ್ಕೆ ಶ್ರೀಕೃಷ್ಣನೂ ಆಕಸ್ಮಾತ್ ಅಲ್ಲಿಗೆ ಬಂದದ್ದನ್ನು ಕಂಡು, ವಿರೋಧಿ ಪಕ್ಷದ ರುಕ್ಮಿ-ಶಿಶುಪಾಲಾದಿಗಳ ಮತ್ಸರ ಕೆರಳಿತು. ಪ್ರತಿಸ್ಪರ್ಧಿಯಾಗಿ ಬಂದ ಶ್ರೀಕೃಷ್ಣನನ್ನು ಪ್ರತಿಭಟಿಸಲೆಂದು ಅವರು ಭೀಷ್ಮಕ ರಾಜನಲ್ಲಿಗೆ ಬಂದಿರುವರು.

ಭೀಷ್ಮಕ:— ಚೇದಿರಾಜಾ, ಸಾಲ್ವರಾಜಾ, ಸರ್ವರಿಗೂ ನನ್ನದೊಂದು ನಮ್ರ ವಿನಂತಿ. ಇಲ್ಲಿ ತಾವೆಲ್ಲ ಮಿಲಿತರಾಗಿರುವುದು ಸ್ವಯಂವರದ ಮಂಗಲಕಾರ್ಯಕ್ಕಾಗಿ. ಇದರಲ್ಲಿ ಸ್ಪರ್ಧೆಗೆ ಅವಕಾಶವಿದ್ದರೂ, ಇದೊಂದು ಬಗೆಯ ಸ್ನೇಹಸಮ್ಮೇಲನವೆ. ಪರಸ್ಪರರಲ್ಲಿಯ ಸೌಹಾರ್ದ ಭಾವನೆಯ ಸುಖೋದಯದಿಂದ, ಈ ಶುಭ ಪ್ರಸಂಗ ನಿರ್ವಿಘ್ನದಿಂದ ಸಾಂಗವಾದೀತೆಂದು ಅಪೇಕ್ಷಿಸುವೆ. ಪಕ್ಷಪಂಗಡಗಳಿಗೆ ಹೆಸರಿಡಲು ನಾನು ಬಯಸುವುದಿಲ್ಲ—ಒಂದು ಹಾಗೆ ಇನ್ನೊಂದು ಹೀಗೆ ಎಂದು. ಪ್ರತಿಸ್ಪರ್ಧಿಯನ್ನು ಕೆಣಕಿ ಯುದ್ಧ ಮಾಡುವುದು ಕ್ಷಾತ್ರ ಧರ್ಮ—ಅದು ರಣರಂಗದಲ್ಲಿ. ಅದಕ್ಕೆ ನನ್ನ ಆಕ್ಷೇಪವಿಲ್ಲ. ಆದರೆ ಇದು ಸ್ವಯಂವರ ರಂಗ—ಶುಭಪ್ರಸಂಗ. ಎಲ್ಲರೂ ಸರಸದಿಂದ ಸ್ವಯಂವರದ ನ್ಯಾಯ-ನೀತಿಗಳಿಗನುಗುಣವಾಗಿ ವರ್ತಿಸಿ ಕೀರ್ತಿಶಾಲಿಗಳಾಗಿ, ನನ್ನನ್ನೂ ಕೃತಾರ್ಥನನ್ನಾಗಿ ಮಾಡಬೇಕೆಂದು ಕೈಜೋಡಿಸಿ ಬೇಡಿಕೊಳ್ಳುವೆ.

ಶಿಶುಪಾಲ:— ಸ್ವಯಂವರದ ನ್ಯಾಯನೀತಿಯಲ್ಲಿಯೇ ವ್ಯತ್ಯಾಸವಾಗಿದ್ದಲ್ಲಿ?

ಭೀಷ್ಮಕ:— ಮರೆವಿನಿಂದೇನಾದರೂ........ಆಗಿದ್ದ ಪಕ್ಷದಲ್ಲಿ.. ....ತಿದ್ದಿಕೊಳ್ಳಬಹುದು.

ಶಿಶುಪಾಲ:— ಮರೆವಿನಿಂದಲೋ ಮತ್ತೇತರಿಂದಲೋ........ ಅದರ ಪರಿಣಾಮದ ಹೊಣೆ ಮಾತ್ರ ನಮ್ಮ ಮೇಲಿಲ್ಲ. ನಿಮ್ಮ ಮೇಲೆ. ಮಹಾರಾಜ, ಆಮಂತ್ರಣ ಕೊಡುವುದರಲ್ಲಿ ನೀವು ಸ್ಥಾನ-ಮಾನದ ತಾರತಮ್ಯವನ್ನಿಟ್ಟುಕೊಳ್ಳದಿದ್ದರೂ, ಆಮಂತ್ರಿತರಾಗಿ ಬಂದ ನಮ್ಮಲ್ಲಿ ನಮ್ಮ ನಮ್ಮ ಸ್ಥಾನ-ಮಾನದ ಅರಿವಿಲ್ಲದಿಲ್ಲ.

ಭೀಷ್ಮಕ:— ಏನುಗಿದರ ಅರ್ಥವಾಗಲಿಲ್ಲ.

ಶಿಶುಪಾಲ:— ಭೂಪಾಲಕರೆಲ್ಲರನ್ನೂ ಬರಮಾಡಿಕೊಂಡುದು ಅವರನ್ನು ಅಪಮಾನಗೊಳಿಸಬೇಕೆಂದಲ್ಲವಷ್ಟೇ?

ಭೀಷ್ಮಕ:— ಇದೇನು? ಸಲ್ಲದ ಸಂಶಯ! ಕಾರಣ ತಿಳಿದವೆ....

ಶಿಶುಪಾಲ:— ಈ ಗೊಲ್ಲನೂ ರಾಜರ ಪಙ್ತಿಯಲ್ಲಿ! ಗೋಪಾಲ-ಭೂಪಾಲರು ಸರಿಸಮಾನರೇನೋ ನಿಮ್ಮ ದೃಷ್ಟಿಯಲ್ಲಿ!!

ಕೃಷ್ಣ :– ಗೊಲ್ಲ–ಗೋಪಾಲನೆಂದು ಸಂಬೋಧಿಸಿ, ನನ್ನ ಸನ್ಮಾನವನ್ನೇ ಮಾಡುತ್ತಿರುವೆ ಶಿಶುಪಾಲಾ! ನಿರ್ವ್ಯಾಜದಿಂದ ನನ್ನನ್ನು ತನ್ನ ಉಡಿಯಲ್ಲಿಟ್ಟುಕೊಂಡು ಕಾಪಾಡಿ....ನಿರಂಕುಶಪ್ರಭೃತಿ ಭೂಪಾಲಾಭಾಸರ ಶಾಸ್ತಿಗಾಗಿ ನನ್ನಲ್ಲಿ ಬಲ-ವೀರ್ಯ-ಸಾಹಸ-ಹುಮ್ಮಸ್ಸನ್ನು ಹುಟ್ಟಿಸಿ ಬೆಳಸಿದ ಗೊಲ್ಲ ಸಮಾಜದ ಗೋಪಾಲ ನಾನಲ್ಲವೆಂದು ಹೇಗೆ ಹೇಳಲಿ? ಅಲ್ಲಗಳೆದರೆ ಕೃತಘ್ನತೆಯ ದೋಷಕ್ಕೆ ಪಾತ್ರನಾದೇನು. ನಾನು ಗೊಲ್ಲನೇ, ಗೋಪಾಲನೇ! ಆದರೆ ಮಹಾರಾಜ ಕಂಸನ ಕರಾಳಶಾಸನದಿಂದ ಬೆಂದುನೊಂದ ಅಸಹಾಯಪ್ರಜರ ಆರ್ತನಿನಾದ, ಗೋಕುಲದ ರಮ್ಯ-ಶಾಂತ ಜೀವನದಿಂದ–ಕಠೋರ ಕರ್ತವ್ಯದಲ್ಲಿ ಕಾಲಿಡುವಂತೆ ಮಾಡಿತು ನನ್ನನ್ನು. ಗೋಪಾಲರ ವ್ಯವಸಾಯ ಬಿಡಿಸಿ ಭೂಪಾಲರ ವ್ಯವಸಾಯಕ್ಕೆ ಹಚ್ಚಿತು ನನ್ನನ್ನು. ಅದರಲ್ಲಿ ಹೇಳಿಕೊಳ್ಳುವಷ್ಟು ಪ್ರಗತಿಯನ್ನು ಪಡೆದಿರುವೆನೆಂಬುದು ಈ ಶಿಶುಪಾಲಾದಿಗಳಿಗೆ ಗೊತ್ತಿದೆ. ಅನುಭವಕ್ಕೂ ಬಂದಿದೆ. ಪ್ರಜೆಗಳೆಲ್ಲರೂ ನನ್ನನ್ನೀಗ ರಾಜಗೋಪಾಲನೆಂದು ಕರೆಯುವರು. ಈ ಸ್ವಯಂವರಕ್ಕೆ ಬಂದಿರುವುದು ಕೇವಲ ಗೋಪಾಲನೆಂದಲ್ಲ–ರಾಜಗೋಪಾಲನೆಂದು.

ಶಿಶುಪಾಲ :– ಮಹಾರಾಜ, ಈ ಗೊಲ್ಲನ ಗೊಡ್ಡುಹರಟೆ ಕೇಳಲು ನಾವಿಲ್ಲಿ ಬಂದವರಲ್ಲ. ಈ ದನಗಾಹಿಯನ್ನು ತಾವು ಬರ. ಮಾಡಿಕೊಳ್ಳುವುದಾದರೆ, ಅವನೀಶರಿಗಿದು ಶುದ್ಧ ಅಪಮಾನ. ಸಹನೆಗೆ ಮೀರಿದ ಅಪಮಾನದ ಪರಿಣಾಮ! ನಾಳೆ ಸ್ವಯಂವರರಂಗ ರಣ-ರಂಗವಾಗಿ ನಿಂತೀತು!

ಕೃಷ್ಣ :– ಯಾರಿಗಿದು ಈ ಬೆದರಿಕೆ? ಮಹಾರಾಜ, ಸ್ವಲ್ಪವೂ ಚಿಂತಿಸಬೇಡಿ. ಇಂತಹ ಅನಾರ್ಯರ ಅಧರ್ಮಕ್ಕೆ ತಡೆ ಹಾಕಲೆಂದೇ ರಾಜತಂತ್ರದಲ್ಲಿ ಕಂಕಣಬದ್ಧನಾಗಿರುವುದು ನಾನು. ಸ್ವಯಂವರರಂಗದ ಶಾಂತತೆಯ ಹೊಣೆ ನನ್ನದು. ಸ್ವಯಂವರದಲ್ಲಿ ಪಣವೇನೂ ಇದ್ದಂತಿಲ್ಲ—ಈ ಸೊಕ್ಕಿದ ಸಲಗಗಳನ್ನು ಮಣ್ಣುಮುಕ್ಕಿಸುವುದೇ ಪಣವಾಗಲಿ!

ರುಕ್ಮಿ :– ಅಸಹ್ಯ-ಅಸಭ್ಯ-ಅತಿಪ್ರಸಂಗ!! ಕೃಷ್ಣಾ, ಯಾದವರಿಗೆ ಮಿಕ್ಕುಳಿವಷ್ಟು ವೀರ್ಯವಿದೆ ಇನ್ನೂ ವಿದರ್ಭರಾಜರಲ್ಲಿ. ಹೀನರಿಂದ ಸಂರಕ್ಷಿತರಾಗಬೇಕಾದಷ್ಟು ಹತವೀರ್ಯರಾಗಿಲ್ಲ ಕೃಷ್ಣಾ, ಲಕ್ಷ್ಯಕೊಡು. ರಾಜಕುಮಾರಿಯ ಸ್ಥಾನ-ಮಾನಕ್ಕಿಂತ ಹೀನರಾದವರು ಯಾರೂ ಸ್ವಯಂವರ ಮಂಟಪದಲ್ಲಿ ಕುಳ್ಳಿರಕೂಡದೆಂದು ನಿಯಮವೊಂದಿದೆ. ನೆನಪಿನಲ್ಲಿರಲಿ!

ಭೀಷ್ಮಕ :– ರುಕ್ಮಿ!

ರುಕ್ಮಿ :– ರಾಜವಂಶದ ಗೌರವಕ್ಕೆ ಕುಂದು ಬಂದಿರಬಾರದೆಂದು, ಇಂದೇ ತಮ್ಮ ಅನುಮತಿಯ ಪೂರ್ವಭಾವಿಯಾಗಿ ರಾಜ-ಮಹಾರಾಜರೆಲ್ಲರಿಗೂ ನಾನೇ ಈ ರೀತಿ ಆಶ್ವಾಸನ ಕೊಟ್ಟಿರುವೆ.

ಕ್ರಥಕೌಶಿಕ :– ಮಹಾರಾಜ, ಯಾದವೇಶಕೃಷ್ಣನ ಯೋಗ್ಯತೆಗೆ ಆಕ್ಷೇಪವೆತ್ತುವವರಿಗೆ ಯೋಗ್ಯಾಯೋಗ್ಯತೆಯ ಪರಿಜ್ಞಾನವೇ ಇಲ್ಲವೆನ್ನಬೇಕಾಗುವುದು. ಯಾವ ರಾಜ-ಮಹಾರಾಜರಿಗಿಂತಲೂ....

ಶಿಶುಪಾಲ :– ಇರಬಹುದು.... ಇರಬಹುದು. ಕಲ್ಪನಾರಾಜ್ಯದ ರಾಜನೇಕೆ, ಕಲ್ಪನಾ ಸಾಮ್ರಾಜ್ಯದ ಸಮ್ರಾಟನಿಗಿಂತಲೂ ಹೆಚ್ಚಿರಬಹುದು.

ರುಕ್ಮಿ :– ಕಾಲ್ಪನಿಕ ರಾಜಕುಮಾರಿಯನ್ನು ವರಿಸಲು ಕಾಲ್ಪನಿಕ ಸ್ವಯಂವರದಲ್ಲಿ ಕುಕ್ಕರಿಸಬಹುದು. ನಮ್ಮ ರುಕ್ಮಿಣಿಯೇನೂ ಕಾಲ್ಪನಿಕ ರಾಜಕುಮಾರಿ ಅಲ್ಲ.

ಕೃಷ್ಣ :– ಮಹಾರಾಜ, ರಾಜತಂತ್ರದಲ್ಲಿ ಕಂಕಣಬದ್ಧನಾದ ಮೇಲೆ, ಮೊದಲು ಕಂಸನ ಕೂಡ ಆದ ದ್ವಂದ್ವದಲ್ಲಿ ವಿಜಯ ಸಂಪಾದಿಸಿದೆ. ಆ ಮೇಲೆ ಈ ಶಿಶುಪಾಲಾದಿ ರಾಜಮಹಾರಾಜರು ಸಂಘಟನೆಯಿಂದ ಹೂಡಿದ ಯುದ್ಧಗಳಲ್ಲಿ, ಹದಿನೇಳು ಬಾರಿ ನನಗೇ ಜಯ! ಹೀಗೆ ಬಲಾಢ್ಯರೆಂದು ಹೇಳಿಕೊಳ್ಳುವ ಈ ರಾಜಮಹಾರಾಜರ ಮೇಲೆ ವಿಜಯ ಸಂಪಾದಿಸಿದವನಾದ್ದರಿಂದ, ರಾಜಮಂಡಲದಲ್ಲಿ ಮಂಡಿಸುವ ನನ್ನ ಯೋಗ್ಯತೆ ಸ್ವತಃಸಿದ್ಧ!

ರುಕ್ಮಿ :– ಆಗಂತುಕಾ, ನಾಳೆ ಸ್ವಯಂವರ ಮಂಟಪದ ಮಹಾದ್ವಾರದಲ್ಲಿಯೇ ನಿನ್ನನ್ನು ತಡೆ ಹಿಡಿದು........

ಶಿಶುಪಾಲ :– ಶಿರ ಹರಿಗಡಿದು....ಕಂಸವಧೆಯ ಸೇಡು ತೀರಿತೆಂದು ಸಮ್ರಾಟ್ ಜರಾಸಂಧ ಮಹಾರಾಜರ ಕಡೆಗೆ ಸಂದೇಶವಾಹಕನನ್ನಟ್ಟಿ.... ಸ್ವಯಂವರ ಮಂಟಪದ ಮೆಟ್ಟಿಲನ್ನೇರುವುದು!

ಕೃಷ್ಣ :– ಮಹಾರಾಜ, ಈ ಶಿಶುಪಾಲಾದಿಗಳು ನನ್ನಿಂದ ಪೂರ್ಣಪರಾಭವ ಹೊಂದಿದ್ದರೂ ಇನ್ನೂ ನಿರಾಕರಿಸುವಂತಿದೆ. ಹೆಮ್ಮೆ ತಗ್ಗಿಲ್ಲ. ನಾಳೆ–ಇನ್ನೊಮ್ಮೆ–ಹದಿನೆಂಟನೆಯ ಬಾರಿ–ಸ್ವಯಂವರದ ಮೊದಲೇ–ಇವರೆಲ್ಲರನ್ನೂ ಒಟ್ಟಾರೆ ಪರಾಭವಗೊಳಿಸಿ "ರಾಜತ್ವವು ಪೌರುಷದಿಂದ ಬರುವುದಲ್ಲದೆ ಕುಲನಾಮಮಾತ್ರದಿಂದಲ್ಲ" ಎಂದು ಈ ವಿರೋಧಿಗಳಿಗೆ ಸಿದ್ಧಮಾಡಿಕೊಡುವೆ. ಶಿಶುಪಾಲಾ, ನಿನ್ನ ಈ ಯುದ್ಧದ ಆಹ್ವಾನವನ್ನು ಆನಂದದಿಂದ ಸ್ವೀಕರಿಸಿರುವೆ. ನೀನು ಮಾತ್ರ ಈ ಬಾರಿಯೂ ಓಡಿಹೋಗದಿರು. ಮೊದಲು ನಿನ್ನ ಪತನ; ಅನಂತರ ಮಂಟಪದಲ್ಲಿ ನನ್ನ ಪಾದಾರ್ಪಣ!

ಕ್ರಥಕೌಶಿಕ :– ಮಹಾರಾಜ, ಕೇವಲ ಶಬ್ದಚ್ಛಲಕ್ಕಾಗಿ ಯುದ್ಧದಂತಹ ಭಯಂಕರ ಪ್ರಸಂಗವೇಕೋ ನನಗಂತೂ ತಿಳಿಯದು! ಮಥುರೆಯ ರಾಜಸಿಂಹಾಸನದ ಇತಿಹಾಸ ತಮಗೆ ತಿಳಿಯದ ವಿಷಯವೇನಲ್ಲ. ತ್ಯಾಗಗುಣದಿಂದ ಲೋಕಪೂಜ್ಯನಾದ ಶ್ರೀಕೃಷ್ಣ, ಪ್ರಾದೇಶಿಕ ಭೂಮಿ-ಸೀಮೆ-ರಾಜ್ಯದ ಒಡೆಯನಲ್ಲನೆಂದು, ಸ್ವಯಂವರ ಮಂಟಪದಲ್ಲಿ ಪ್ರವೇಶಿಸಲೂ ಅನರ್ಹನೆಂದು ಹಟ ಹಿಡಿಯುವುದು ನ್ಯಾಯಸಮ್ಮತವಾಗದು. "ರಾಜ" ಉಪಪದವಿರದಿದ್ದರೂ........

ಶಿಶುಪಾಲ :– (ಅಣಕು) ಏನು ಕ್ರಥಕೌಶಿಕ ಮಹಾರಾಜರೇ, ನೀವೂ ಹೀಗೆ ಹೇಳಿದರೆ? ರಾಜಗೋಪನಲ್ಲವೇ ಇವನು! ವಿಸ್ತೀರ್ಣವಾದ ಹುಲ್ಲುಗಾವಲಿನ ಸಾರ್ವಭೌಮ!! ಗೋ–ಗೊಲ್ಲ–ಗೋಪಾಲರ ರಾಜಾಧಿರಾಜ! ಹೂಂ, ಹೇಳು ಕೃಷ್ಣಾ. ಯಾವ ಪ್ರದೇಶದ ರಾಜ ನೀನು? ನಿನ್ನ ತಾತ ಮುತ್ತಾತರಾರಾದರೂ....ಭವಿಷ್ಯತ್ ಕಾಲದಲ್ಲಿ-ಯಾದರೂ....ಯಾರಿಂದಾದರೂ ಅಪ್ಪರಿಂದ........

ಭೀಷ್ಮಕ :– (ಗಂಭೀರವಾಗಿ) ಚೇದಿರಾಜ, ಸಮಯದ ಸಂದುಕಟ್ಟಿನಲ್ಲಿ ಇಂತಹ ವಿರಸೋಕ್ತಿಯಿಂದೇನು? ಯಾದವೇಶನಲ್ಲಿದ್ದ ಅಸಾಧಾರಣ ಶಕ್ತಿಸಾಮರ್ಥ್ಯದ ಅನುಭವ ನಿಮಗೆ-ನಮಗೆ-ಎಲ್ಲರಿಗೂ ಇಲ್ಲದಿಲ್ಲ. ಪೌರುಷದಿಂದ ಯಾವುದು ತಾನೇ ಅಸಾಧ್ಯ? ಇಂದು ರಾಜನಲ್ಲದಿದ್ದರೂ ಎಂದಾದರೂ....

ಕ್ರಥಕೌಶಿಕ :– ಮಹಾರಾಜ, ಕಾಲನಿರೀಕ್ಷಿಸುವುದೇನೂ ಕಾರಣವಿಲ್ಲ. ಶ್ರೀಕೃಷ್ಣಾ, ನನ್ನದೊಂದು ಮಾತು ನಡಿಸಿಕೊಡುವೆಯಾ? ನಿರಾಕರಿಸ ಬೇಡ....ನಿರಾಶೆ ಗೊಳಿಸಲೂ ಬೇಡ. (ತನ್ನ ತಲೆಯ ಮೇಲಿನ ಕಿರೀಟವನ್ನು ಶ್ರೀಕೃಷ್ಣನ ಪಾದದಲ್ಲಿ ಅರ್ಪಿಸುವನು.)

ಕೃಷ್ಣ :– ಆ! ಇದೇನಿದು! ಏನಿದು!!

ಕ್ರಥಕೌಶಿಕ :– ನನ್ನ-ನಿನ್ನ ಗಾಢಮೈತ್ರಿಯ ಮುಡಿವು ಇದು. ಕೃಷ್ಣಾ, ಈ ರಾಜಚಿಹ್ನದ ಮುಕುಟವನ್ನು ನನ್ನ ಕೈಯಿಂದಲೇ ನಿನ್ನ ಶಿರಸ್ಸಿನ ಮೇಲೆ ಇರಿಸಗೊಡು. ಮಹಾರಾಜ, ನನ್ನ ರಾಜ್ಯ-ಕೋಶ-ಭೂಮಿ-ಕಾಣಿ ಎಲ್ಲಕ್ಕೂ ಈ ಕ್ಷಣದಿಂದ ಶ್ರೀಕೃಷ್ಣನೇ ಅಧಿಪತಿ. ಈ ಕ್ಷಣದಿಂದ ನನ್ನ ರಾಜ್ಯಕ್ಕೆ ನಾನು ರಾಜನಲ್ಲ; ಶ್ರೀಕೃಷ್ಣನೇ ರಾಜ. ಶ್ರೀಕೃಷ್ಣಮಹಾರಾಜರಿಗೆ ಸ್ವಯಂವರದ ಆಮಂತ್ರಣ ಕೊಡುವುದಾಗಲಿ!

ಭೀಷ್ಮಕ :– ಶ್ರೀಕೃಷ್ಣಮಹಾರಾಜರಿಗೆ ಅಭಿನಂದನೆಗಳು. ನನ್ನ ಆದರದ ಆಮಂತ್ರಣ ಸ್ವೀಕರಿಸಿ, ಸ್ವಯಂವರ ಸಾಂಗಗೊಳಿಸಬೇಕಾಗಿ ವಿನಂತಿ.

ರುಕ್ಮಿ :– ಸಮಯಸಾಧಕರ ಮೋಸ ತಿಳಿಯದಷ್ಟು ಕೂಸುಗಳಿಲ್ಲ ಇಲ್ಲಿ ಯಾರೂ! ಮೂರ್ಧಾಭಿಷಿಕ್ತನಲ್ಲದವನಾವನೂ....

ಕ್ರಥಕೌಶಿಕ :– ಯುವರಾಜ, ಯುವರಾಜ, ದುಡುಕುವುದೇಕೆ? ನಾಳೆ ಸೂರ್ಯೋದಯದ ಸುಮುಹೂರ್ತದಲ್ಲಿಯೇ ನನ್ನ ಶಿಬಿರದಲ್ಲಿ ನಡೆಯಲಿರುವ ಶ್ರೀಕೃಷ್ಣಮಹಾರಾಜರ ಮೂರ್ಧಾಭಿಷೇಕಮಹೋತ್ಸವದ ಆಮಂತ್ರಣವನ್ನು ನಾನು ಕೊಡುವುದರಲ್ಲಿದ್ದೆ ಅಷ್ಟರಲ್ಲಿ.... ಅಯ್ತು, ಎಲ್ಲರೂ ಕೃಪೆಯಿಟ್ಟು ಮಹೋತ್ಸವಕ್ಕೆ ಬಂದು ಶ್ರೇಯೋಭಾಗಿಗಳಾಗಬೇಕೆಂದು ನನ್ನ ಅಗ್ರಹದ ವಿನಂತಿ.

ಶಿಶುಪಾಲ :– ಅಗ್ರಹ! ದುರಾಗ್ರಹ!! ಈ ಮೂರ್ಧಾಭಿಷೇಕದ ಸೇಡು ನಿನ್ನ ವಂಶಜರ ರಕ್ತಾಭಿಷೇಕದಿಂದ.... ಎಂಬುದನ್ನು ನೆನಪಿಡು. (ರುಕ್ಮಿಯೂ ಶಿಶುಪಾಲನೂ ಕಾಲಪ್ಪಳಿಸುತ್ತ ಹೋಗುವರು.)

ಭೀಷ್ಮಕ :– ಕ್ರಥಕೌಶಿಕ, ಮಿತ್ರಕಾರ್ಯಕ್ಕಾಗಿ ಸರ್ವಸ್ವವನ್ನೂ ತ್ಯಾಗಮಾಡುವ ನಿನ್ನಂತಹ ಮಹಾತ್ಮರು ಇನ್ನೂ ಭೂಮಿಯ ಮೇಲೆ ಇರುವರೆಂದೇ ಅಧರ್ಮಕ್ಕೆ ತಲೆಯೆತ್ತಲು ಶಕ್ಯವಾಗಿಲ್ಲ.

ಕೃಷ್ಣ :– ಮಹಾರಾಜ, ಕ್ರಥಕೌಶಿಕನೆಂದರೆ ಮೂರ್ತಿಮಂತ ಧರ್ಮಾವತಾರ! ಕಂಸಾದಿ ಕ್ರೂರ ಅಧರ್ಮಿಗಳನ್ನು ಕೊಂದು ರಕ್ಷಿಸಿದ ಧರ್ಮವೇ ನನ್ನ ಈ ಮಿತ್ರನ ರೂಪುವೆತ್ತು ನನ್ನ ಪ್ರತಿ ಕಾರ್ಯದಲ್ಲಿಯೂ ನನ್ನ ಬೆಂಬಲಕ್ಕಿದೆ. ಮಿತ್ರಾ, ನಿನ್ನ ಅಕೃತ್ರಿಮ ಸ್ನೇಹದಿಂದ ಇಂದು ನಾನು ಕೃತಕೃತ್ಯನಾದೆ.

೨

ಕ್ರಥಕೌಶಿಕನ ಶಿಬಿರದಲ್ಲಿ, ಶ್ರೀಕೃಷ್ಣನ ರಾಜ್ಯಾಭಿಷೇಕ ಮಹೋತ್ಸವ. "ಶ್ರೀಕೃಷ್ಣ ಮಹಾರಾಜರಿಗೆ ಸದಾ ಜಯ" ಎಂಬ ಜಯಘೋಷ ಮತ್ತು ಮಂಗಲವಾದ್ಯ.

ರುಕ್ಮಿ :– ಏನೇ, ಏ, ರುಕ್ಮಿಣೀ, ಬಾ ಇಲ್ಲಿ! ಆ ಕೃಷ್ಣನ ರಾಜ್ಯಾಭಿಷೇಕನೋಡಲು ಯಾರು ಹೋಗಹೇಳಿದ್ದರು ನಿನಗೆ? ಅಂ!

ರುಕ್ಮಿಣಿ :– ಕ್ರಥಕೌಶಿಕ ಮಹಾರಾಜರು ಅಗ್ರಹ ಮಾಡಿದರು. ತಾತನೂ "ಅಗಲಿ ಹೋಗಿ ಬಾ" ಎಂದರು. ನಾನೂ ರಾಜ್ಯಾಭಿಷೇಕ ಎಂದೂ ನೋಡಿರಲಿಲ್ಲ.

ರುಕ್ಮಿ :– (ಅಣಕಿಸುತ್ತ) ರಾಜ್ಯಾಭಿಷೇಕ ನೋಡಿರಲಿಲ್ಲ! ದರಿದ್ರ.... ದರಿದ್ರಬ್ರಾಹ್ಮಣನ ಹೊಟ್ಟೆಯಲ್ಲಿ ಹುಟ್ಟಬೇಕಿತ್ತು. ರಾಜ್ಯಾಭಿಷೇಕ ನೋಡಿದ್ದಾಯಿತು; ರುಧಿರಾಭಿಷೇಕವನ್ನು ನೋಡಿನ್ನು!

ರುಕ್ಮಿಣಿ :– ಅದರದೇನು ಮಹಾ! ದೈವದಲ್ಲಿದ್ದರೆ ಅದೂ ಆಗಬಹುದು.... ವೀರಕ್ಷತ್ರಿಯರ ಕನ್ಯೆಗೆ.

ರುಕ್ಮಿ :– ಆ ಹಾ! ತಾತನ ಸಲುಗೆ ಏರಿದೆ ತಲೆಗೆ! ಸ್ವಯಂವರ-ಸ್ವಯಂವರವೆಂದು ಛಲಹಿಡಿದ ತಾತನ ಅಡ್ಡಡ್ಡಮಾತು ಅಡ್ಡ ಬಾರದಿದ್ದರೆ, ಎಂದೋ ಲಗ್ನವಾಗಿ........

ರುಕ್ಮಿಣಿ :– ಅಣ್ಣಾ.... ತಾತರ ಅಡ್ಡಡ್ಡ ಮಾತಿನದೇನು ಮಹಾ, ನಿನ್ನದರ ಮುಂದೆ? ತಾತನ ಮಾತಲ್ಲಣ್ಣಾ....ಪಾಪ....ಕಂಸನ ಸಾವು ಜರಾಸುತನ ಸೋಲು ಅಡ್ಡವಾಗಿ ಬಂದುವು. ಏನೋ, ನಮ್ಮೆಲ್ಲರ ಸುದೈವ. ಇಲ್ಲವಿದ್ದರೆ ಅವರ ತಾಳಕ್ಕೆ ಕುಣಿಯಬೇಕಿತ್ತು ನಾವೆಲ್ಲ. ಮಥುರೆಯ ವೃದ್ಧ ಉಗ್ರಸೇನಮಹಾರಾಜರೊಬ್ಬರದೇ ಬಂಧಮುಕ್ತತೆಯಾಗಿ ಕ್ಷೇಮವಾಗಿ ಇರುವಂತೆ ಆಯಿತೆಂತಲ್ಲ.... ಕಂಸವಧೆಯಿಂದ ವೃದ್ಧರಾಜರೆಲ್ಲರ ಮೇಲೂ ಬಂದ ಆಪತ್ತು ಪರಿಹಾರವಾಗಿ ಕ್ಷೇಮವಾಯಿತು. ರಾಜಕುಮಾರಿಯರಿಗಂತೂ ತಮ್ಮ ತಮ್ಮ ತಾಯಿ-ತಂದೆಗಳ ಮಾಯಾ— (ಭೇರಿಯ ಶಬ್ದ)

ರುಕ್ಮಿ :– ಹಂ! ರುಕ್ಮಿಣಿ, ಕೇಳು, ಕೇಳು. ನೆಟ್ಟಗೆ ಕಿವಿಗೊಟ್ಟು ಕೇಳು. ಈ ಭೇರಿಯ ಶಬ್ದ. ಇದೇಕೆ ಗೊತ್ತಾಯಿತೇ?

ರುಕ್ಮಿಣಿ :– (ನಗು) ಒಳ್ಳೆಯ ಪ್ರಶ್ನೆ! ಸ್ವಯಂವರ.... ಮಂಗಲವಾದ್ಯ....

ರುಕ್ಮಿ :– ರುಕ್ಮಿಣೀ, ಮಂಗಲವಾದ್ಯವಲ್ಲ.... ಅಮಂಗಲ ಸೂಚಕ ರಣವಾದ್ಯ! ಸಮ್ರಾಟ್ ಸೇನೆಯ ಸನ್ನಾಹದ ರಣವಾದ್ಯ! (ಮತ್ತೆ ಭೇರಿಯ ಶಬ್ದ) ಕೇಳು ರುಕ್ಮಿಣೀ.... ಕೇಳಿದೆಯಾ? ಇನ್ನು ನಾನು ಕೇಳುವ ಪ್ರಶ್ನೆಗೆ—ಜಾಣೆಯಂತೆ ವಿಚಾರಮಾಡಿ ಉತ್ತರ ಕೊಡು!

ರುಕ್ಮಿಣಿ :– ಬೆದರಿಸುವುದನ್ನೆಲ್ಲ ಮುಗಿಸಿಬಿಡು ಒಮ್ಮೆ! ಆಮೇಲೆ ನೀನೂ ಶಾಂತಚಿತ್ತದಿಂದ ವಿಚಾರಮಾಡ ಕೇಳು. ನಾನೂ ಶಾಂತಚಿತ್ತದಿಂದ ವಿಚಾರಮಾಡಿ ಉತ್ತರಕೊಡುವೆ.

ರುಕ್ಮಿ :– ಶಾಂತಚಿತ್ತ!! ಮನೆತನದಗೌರವ ಮಣ್ಣುಗೂಡಿ ಹೋಗುತ್ತಿರುವುದು ಕಣ್ಣಿಗೆ ಕಾಣಿಸುತ್ತಿರುವಾಗ ಚಿತ್ತಕ್ಕೆ ಶಾಂತಿ?

ಸಾಧ್ಯವಿಲ್ಲ! ರುಕ್ಮಿಣೀ, ವಿದರ್ಭದೇಶದ ಕೀರ್ತಿ, ವಿದರ್ಭದೇಶದ ರಾಜಮನೆತನದ ಚಿರಸ್ಮರಣೀಯ ಮಾನ-ಸನ್ಮಾನ ಅಳಿಸಿಹೋಗುವ ಕಾಲ ಸಮೀಪಿಸಿದೆ. ರುಕ್ಮಿಣೀ.... ಉಳಿಸಬೇಕು, ಉಳಿಸಬೇಕು! ಹುಟ್ಟಿದ ವಂಶದ ಕೀರ್ತಿವಾರ್ತೆ ಜಗದ್ವಿಖ್ಯಾತವಾಗಿ, ಅಜರಾಮರವಾಗಿ ನಿಷ್ಕಲಂಕವಾಗಿ ಉಳಿಯಲೆಂಬ ಕಳವಳ ನನ್ನಂತೆ ನಿನಗೂ ಇದೆಯೇ ? ಹುಟ್ಟಿದ ಮನೆಯ ಅಭಿಮಾನವಿದೆಯೇ ?

ರುಕ್ಮಿಣಿ:– ಅಹ್ಹಹ್ಹಾ! ಒಳ್ಳೆಯ ಪ್ರಶ್ನೆ ! ಹುಟ್ಟಿದ ಮನೆಯ ಅಭಿಮಾನ ಗಂಡುಮಕ್ಕಳಿಗೇ ಮೀಸಲೆಂದು ತಿಳಿದೆಯೇನು ? ಹೆಣ್ಣುಮಕ್ಕಳಿಗೆ ಇಲ್ಲವೇ ಇಲ್ಲ ಎಂದು ಭಾವನೆಯೇ ? ಗಂಡುಮಕ್ಕಳಿಗೆ! ಒಂದು ಪಾಲಿದ್ದರೆ, ನಮಗೆ–ಹೆಣ್ಣುಮಕ್ಕಳಿಗೆ–ಇಮ್ಮಡಿ ಅಭಿಮಾನ! ಹುಟ್ಟಿದ ಮನೆಯ ಕೀರ್ತಿಯನ್ನು ಕಾಲಿಟ್ಟ ಮನೆಯ ಕೀರ್ತಿಯಿಂದ ಬೆಳಗಿಸಿ, ಇಮ್ಮಡಿ.... ನೂರ್ಮಡಿ ಮಾಡುವವರು ನಾವು. ಅಂತೆಯೇ ಎಂದಿನಿಂದಲೂ—ಸೀತಾ-ಸಾವಿತ್ರಿಯರ ಕಾಲದಿಂದಲೂ—"ಉಭಯ ಕುಲಪಾವನೆಯರು" ಎಂದು ಹೆಣ್ಣುಮಕ್ಕಳಿಗೆ ಹೆಸರು. ...

ರುಕ್ಮಿ:– ಹೀಗೆ ಜಾಣೆಯಾಗು ರುಕ್ಮಿಣೀ ಜಾಣೆಯಾಗು! ಮೊದಲು ಹುಟ್ಟಿದ ಮನೆಯ ಕೀರ್ತಿ ಹಾಳಾಗದಂತೆ ನೋಡಿಕೊಳ್ಳಬೇಕಲ್ಲವೇ ?

ರುಕ್ಮಿಣಿ:– ಅವಶ್ಯ ! ಅವಶ್ಯ !!

ರುಕ್ಮಿ:– ಹಾಗಾದರೆ ನಿನ್ನಿಂದೊಂದು ಕಾರ್ಯವಾಗಬೇಕು.

ರುಕ್ಮಿಣಿ:– ಯಾವ ಕಾರ್ಯ ? ನನ್ನಿಂದೇನಾಗಬೇಕು ?

ರುಕ್ಮಿ:– ಮೊದಲು ಅಭಿವಚನ ಬೇಕು.

ರುಕ್ಮಿಣಿ:– ಏನೆಂದು ?

ರುಕ್ಮಿ:– ಸ್ವಯಂವರ ಮಂಟಪದಲ್ಲಿ ಶಿಶುಪಾಲ ಮಹಾರಾಜರನ್ನೇ........

ರುಕ್ಮಿಣಿ:– ನೋಡುವಾ....ಈಗಲೇ ಆ ಮಾತೇಕೆ?

ರುಕ್ಮಿ:– ರುಕ್ಮಿಣೀ, ಮೊಂಡುತನ ಸಾಕು. ಈಗಲೇ ನೀನು ಒಪ್ಪಿ........ನಿನ್ನಿಂದ ವಚನ ಬಾರದಿದ್ದರೆ, ಸ್ವಯಂವರಮಂಟಪದ ವಿಧ್ವಂಸ ನೋಡಬೇಕಾದೀತು....ಇನ್ನು ತಾಸರ್ಧತಾಸಿನಲ್ಲಿ !

ರುಕ್ಮಿಣಿ:– ವಿಧ್ವಂಸ ತಡೆಯುವ ಶಕ್ತಿ ವಿದರ್ಭದೇಶದ ಯುವರಾಜನಾದನಿನ್ನಲ್ಲಿ ಇಲ್ಲವೆಂದು ಭಾವಿಸಿಕೊಳ್ಳುವುದೆಂದರೆ,ನಮ್ಮ ಗೌರವವನ್ನು ನೀನೇ ಗಾಳಿಗೆ ತೂರಿಕೊಂಡಂತಾಗುವುದಿಲ್ಲವೇ? ಅಣ್ಣಾ. ನೀನು ಮನಸ್ಸು ಮಾಡಿದರೆ, ಅರೆನಿಮಿಷದಲ್ಲಿ ಅರಿಗಳನ್ನೋಡಿಸಬಹುದು. ಬಲವಂತನಾದ ನೀನೇ ಅಬಲೆಯಾದ ನನ್ನನ್ನು ಕೇಳಿಕೊಳ್ಳುವುದೆಂದರೆ—

ರುಕ್ಮಿ:– ಅದಕ್ಕೆ ಕಾರಣವಿದೆ, ರುಕ್ಮಿಣೀ ಕಾರಣವಿದೆ! ಶಿಶುಪಾಲ ನನ್ನ ಮಿತ್ರ–ನನ್ನ ಎರಡನೆಯ ಪ್ರಾಣ. ಈ ರುಕ್ಮಿಯ ಬಾಹುಗಳಲ್ಲಿದ್ದ ಶಕ್ತಿ, ಮಿತ್ರಕಾರ್ಯಸಾಧಿಸಿ ಕೀರ್ತಿಶಿಖರಕ್ಕೇರೆಂದು ಪ್ರೇರಿಸುತ್ತದೆ.

ರುಕ್ಮಿಣಿ:– ಅಂದರೆ........? ಅಣ್ಣಾ, ನೀನಾಗಿಯೇ ನಿನ್ನ ಕೈಯಿಂದ ನಿನ್ನ ತಂಗಿಯ ಮಂಗಲಮಹೋತ್ಸವದ ಮಂಟಪ ಕಿತ್ತೊಗೆಯಲು.... ! ಚೆನ್ನಾದ ವಿಚಾರ! ಸ್ವಯಂವರವನ್ನಾದರೂ ಯಾಕೆ ಪ್ರಾರಂಭಿಸಬೇಕಿತ್ತು! ಸ್ವಯಂವರ ನಿಶ್ಚಯಿಸುವುದೂ ಬಿಡುವುದೂ ನಿಮ್ಮೆಲ್ಲರ ಮನಸ್ಸಿನ ಮಾತಿತ್ತಷ್ಟೇ? ಮನೆಯ ಗೌರವ ಹೆಚ್ಚಿ ನನಗೂ ಹೆಚ್ಚಿನ ಸೌಖ್ಯ ಸಿಕ್ಕಬೇಕೆಂದೇ ಅಲ್ಲವೇ ಇದನ್ನೆಲ್ಲ ಹಮ್ಮಿಕೊಂಡದ್ದು ?

ರುಕ್ಮಿ:– ಇಲ್ಲವೆನ್ನುವವರಾರು? ಆದರೆ.... ನಮ್ಮ ಕಾಲ ಮೇಲೆ ನಾವೇ ಕಲ್ಲಿಕ್ಕಿಕೊಂಡಂತಾಗಿದೆ ಈಗ. ಆ ಅನಿಷ್ಟ ಕೃಷ್ಣ ಬಂದುದರಿಂದ, ಇಷ್ಟರ ವರೆಗೆ ಸಂಪಾದಿಸಿದ ಕೀರ್ತಿ ನಷ್ಟವಾಗಿ ಹೋಗುವಂತಾಗಿದೆ. (ಭೇರಿಯ ಶಬ್ದ) ಅಕೋ, ಅಕೋ, ಕೇಳಿದೆಯಾ ಭೇರಿ: ವಿಶ್ವಕ್ಕೇ ಸಾರುತಿದೆ ಈ ಭೇರಿ! ವಿದರ್ಭದೇಶದ ಪ್ರತಿಷ್ಠೆ ಹಾಳಾಯಿತು. ವಿದರ್ಭದೇಶದ ಕೀರ್ತಿ ಕವಡೆಗೂ ಕಡೆಯಾಯಿತು. ವಿದರ್ಭರಾಜಮನೆತನದ ಮಾನ–ಸನ್ಮಾನ....

(ಭೀಷ್ಮಕ-ಕ್ರಥಕೌಶಿಕ ಇವರಿಬ್ಬರ ಪ್ರವೇಶ)

ಭೀಷ್ಮಕ:– ಯಾರವರು ಬೊಗಳುವವರು ಈ ಅಭದ್ರವಾಣಿಯನ್ನು ಯಾರು? ಯಾರು, ರುಕ್ಮಿ? ವಿದರ್ಭದೇಶದ ಯುವರಾಜ ರುಕ್ಮಿ? ರುಕ್ಮಿಣಿಯ ಸೋದರ ರುಕ್ಮಿ? ಭೀಷ್ಮಕ ರಾಜಕುಮಾರ ರುಕ್ಮಿ? ರುಕ್ಮಿ, ನಿನ್ನ ಮುಖದಿಂದ ಈ ಅವಾಚ್ಯ, ಅಶ್ರಾವ್ಯ, ಅಮಂಗಲ ನುಡಿ! ನಿನ್ನ ನಾಲಗೆಗೆ ಸ್ವಲ್ಪವಾದರೂ ನಾಚಿಕೆ!

ರುಕ್ಮಿ:– ತಾತಾ, ಪರಿಸ್ಥಿತಿಯ ಒತ್ತಾಯ ಮಾಡಿಸುತ್ತಿದೆ ಈ ರೀತಿ! ರಣವಾದ್ಯ ಕೇಳಿಸಲಿಲ್ಲವೇ? ಸಮ್ರಾಟ್ ಸೇನೆ ಸ್ವಯಂವರ ಮಂಟಪ ಮುಟ್ಟಿ ಧ್ವಂಸ ಮಾಡುವ ಹವಣಿಕೆಯಲ್ಲಿದೆ. ವಂಶದ ಅಪ್ರತಿಷ್ಠೆಗೆ ಬಂದ ಪತ್ತನ್ನೂ ದುರ್ಲೌಕಿಕದ ದುರದೃಷ್ಟವನ್ನೂ ಲಕ್ಷ್ಯದಲ್ಲಿ ತಂದು, ಆ ಮೇಲೆ ನನಗೆ ದೋಷ ಕೊಡಿ.

ಭೀಷ್ಮಕ:– ರುಕ್ಮಿ, ಈ ಮುಕುಟ ಈ ನನ್ನ ತಲೆಯ ಮೇಲಿನ ಮುಕುಟ ನಿನ್ನ ತಲೆಯ ಮೇಲೆ ಬರುವವರೆಗೆ, ಗೌರವ-ಪ್ರತಿಷ್ಠೆಗಳ ಹೊಣೆ ನಿನ್ನ ಮೇಲಿಲ್ಲ, ನನ್ನ ಮೇಲಿದೆ. ಈಗದರ ಗೊಡವೆ ನಿನಗೆ ಬೇಡ. ರುಕ್ಮಿಣಿಗೂ ಹಾಗೆ ಮಾಡು–ಹೀಗೆ ಮಾಡೆಂದು ಹೇಳುವ ಅಧಿಕಾರ ನಿನಗಿಲ್ಲ,

ಕ್ರಥಕೌಶಿಕ:– ರುಕ್ಮಿ, ಕಂಸವಧೆಯ ಪೂರ್ವದ ದಿನಮಾನ ಇಂದಿಲ್ಲ. ಶ್ರೀಕೃಷ್ಣ ಇಲ್ಲಿಯೇ ಇರುವ. ಮಥುರೆಯಲ್ಲಿಲ್ಲ–ಕುಂಡಿನೀಪುರದಲ್ಲಿಯೇ ಎಂಬುದನ್ನು ಮರೆತರಾಗದು.

ರುಕ್ಮಿ:– ಸಾಕು ನಿಮ್ಮುಪದೇಶ. ಈ ರಣದುಂದುಭಿಯ ನಿನಾದ ಕೇಳಿ....

ಭೀಷ್ಮಕ:– ಈ ರಣದುಂದುಭಿ ಯಾರದೆಂದು ತಿಳಿದೆ ರುಕ್ಮಿ? ಯಾದವ-ವಿದರ್ಭ-ಕೌಶಿಕರ ಸಂಘಟಿತ ಸೇನೆ ಅದು! ಚಕ್ರವ್ಯೂಹ ರಚಿಸಿ ಸ್ವಯಂವರ ರಕ್ಷಣೆಗೆ ಸಜ್ಜಾಗಿರುವುದನ್ನು ಸರ್ವರಿಗೂ ತಿಳಿಸಲು ಮೊಳಗುತಿದೆ, ಈ ರಣದುಂದುಭಿ; ತಿಳಿಯಿತೇ ?

ರುಕ್ಮಿಣಿ:– ತಾತಾ, ನಿಜಕ್ಕೂ....

ಕ್ರಥಕೌಶಿಕ :– ನಿಜವಮ್ಮಾ ನಿಜ! ಸ್ವಯಂವರದ ನಂತರವೂ ವಧೂವರರ ರಕ್ಷಣೆಗೆ ದಕ್ಷವಾಗಿದೆ ಈ ನಮ್ಮ ಸೇನೆ.

ಭೀಷ್ಮಕ :– ರುಕ್ಮಿ, ಸಾಕು ಬಿಡು ಈ ದುರಾಗ್ರಹ! ದುಷ್ಟರ ಸಂಗದಿಂದ ದುರ್ಲೌಕಿಕವಲ್ಲದೆ ಅನಿಷ್ಟವು ಒದಗುವುದೆಂದು, ಕಂಸನ ಉದಾಹರಣೆ ಸಾಕಿಲ್ಲವೇ ಇನ್ನೂ ನಿನಗೆ? ಹೋಗು ಆ ವಿಘ್ನ-ಸಂತೋಷಿಗಳ ದಂತಭಗ್ನಮಾಡಲು ಸಾಕಷ್ಟು ಬಲವಿದೆ ಈ ಭೀಷ್ಮಕ-ನಲ್ಲಿ—ಎಂದು ತಿಳಿಹೇಳವರಿಗೆ.

ರುಕ್ಮಿ:– (ಸ್ವಗತ) ಒಳ್ಳೇಯದು, ಒಳ್ಳೇಯದು! ಆ ಗೊಲ್ಲನ ಬೆಂಬಲದಿಂದ ಈ ಬಿಗುವು! ಕಂಸನ ಉದಾಹರಣೆ! ಇದೇ ನನ್ನ ಕಣ್ಣೆದುರಿಗೆ! ಆದರಿಂದಲೇ ಆ ಕಂಸಘಾತಕಿ ಕೃಷ್ಣನ ಉದ್ದೇಶ ಈ ಸ್ವಯಂವರದಲ್ಲಿ ಸಫಲವಾಗದಂತೆ ನೋಡಿಕೊಳ್ಳುವುದು ನನ್ನ ಕರ್ತವ್ಯ! ಪ್ರಾಣವನ್ನು ಪಣಕ್ಕಿಟ್ಟಾದರೂ........ವಿಫಲಗೊಳಿಸಲೇ ಬೇಕು. ನೋಡುವಾ ಯಾರ ಛಲಕ್ಕೆ ಗೆಲವೆಂಬುದನ್ನು!

೩

(ಸ್ವಯಂವರ ಮಂಟಪ. ಮಂಗಳವಾದ್ಯ ಮೊಳಗುತ್ತಿವೆ.)

ಭೀಷ್ಮಕ :– ಮಹಾರಾಜಾಧಿರಾಜರೆಲ್ಲರನ್ನೂ ನನ್ನ ಕುಮಾರಿ ರುಕ್ಮಿಣಿಯ ಈ ಸ್ವಯಂವರ ಶುಭಪ್ರಸಂಗದಲ್ಲಿ ಸ್ವಾಗತಿಸಲು ಬಹು ಆನಂದವಾಗುವುದು. ಆಮಂತ್ರಣಕ್ಕೆ ಮನ್ನಣೆಯಿತ್ತು ಪರಿ-ವಾರದೊಂದಿಗೆ ಆಗಮಿಸಿ, ಈ ಮಂಟಪವನ್ನು ಅಲಂಕರಿಸಿದುದಕ್ಕಾಗಿ ಎಲ್ಲರಿಗೂ ನಾನು ಋಣಿಯಾಗಿರುವೆ. ತಮ್ಮೆಲ್ಲರ ಈ ಶುಭಾಗಮನ, ವಿದರ್ಭದೇಶಕ್ಕೊಂದು ದೊಡ್ಡ ಸನ್ಮಾನ. ನಮ್ಮ ಮೇಲಿಟ್ಟ ಈ ಆದರ ಅಭಿಮಾನಗಳು, ಸ್ವಯಂವರ ಸಾಂಗವಾದ ಮೇಲೂ—ಲಗ್ನ-ಮಹೋತ್ಸವದಲ್ಲಿ—ಇದಕ್ಕೂ ಹೆಚ್ಚಾಗಿ ಪ್ರಕಟವಾಗುವುವೆಂದು ಅಪೇಕ್ಷಿಸುವೆ. ಇನ್ನು ಅನುಜ್ಞೆ ಕೊಡೋಣವಾಗಲಿ. ರುಕ್ಮೀ, ರುಕ್ಮಿಣಿ ಯನ್ನು ಬರಮಾಡು. ತನ್ನ ಇಚ್ಛೆ ಬಂದವರನ್ನು ವರಿಸಲಿ!

ರುಕ್ಮಿ:– (ಮೆಲ್ಲಗೆ, ಆದರೆ ಅಧಿಕಾರವಾಣಿಯಿಂದ) ರುಕ್ಮಿಣೀ, ನಿನ್ನ ಜಾಣತನದ ಪರೀಕ್ಷಾಕಾಲವಿದು. ನಾನು ಹೇಳಿದ್ದೆಲ್ಲವೂ ನೆನಪಿ-ನಲ್ಲಿದೆಯೇ? ನೋಡು. ಜೋಕೆ!.... ಚೇದಿರಾಜ....ಹೂಂ, ನಡೆ ಇನ್ನು! (ಸ್ವಾಭಾವಿಕವಾಗಿ) ರುಕ್ಮಿಣಿ, ಇಲ್ಲಿ ನೋಡು....ಇತ್ತ ಕಡೆ.... ಇತ್ತ ಕಡೆ ಕುಳಿತವರು ಸಮ್ರಾಟ್ ಜರಾಸಂಧ ಮಹಾರಾಜರು. ಅವರ ಬಳಿಯಲ್ಲಿ ಕುಳಿತವರೇ ಚೇದಿದೇಶಕ್ಕೆ ಅಧಿಪತಿ ಶಿಶುಪಾಲ ಮಹಾ-ರಾಜರು. ನೋಡಿದೆಯಾ? ಇನ್ನುಳಿದವರು ಸಾಲ್ವ, ದಂತವಕ್ರ ಮೊದಲಾದ ರಾಜ-ಮಹಾರಾಜರು! ಇತ್ತ ಕಡೆ ಕುಳಿತವರು ಕ್ರಥಕೌಶಿಕ, ಕೃಷ್ಣ ಇತ್ಯಾದಿ ಇತ್ಯಾದಿ. ಹೂಂ, ನಡೆ ಇನ್ನು (ರುಕ್ಮಿಣಿಯು ಶಿಶು-ಪಾಲನನ್ನು ದಾಟಿ ಮುಂದೆ ಹೆಜ್ಜೆ ಇಡುತ್ತಲೇ)

ಶಿಶುಪಾಲ:– (ಅಸಹನೆಯಿಂದ ಹೂಂಕಾರ) ಹೂಂ, ಒಳ್ಳೆಯದು!

ರುಕ್ಮಿ :– ಒಮ್ಮೆ ರಂಗವನ್ನು ಸುತ್ತಿ ಬರುವೆಯಾ? ಆಗಲಿ.... ಆಗಲಿ.... (ರುಕ್ಮಿಣಿಯು ಶ್ರೀಕೃಷ್ಣನನ್ನು ಸಮೀಪಿಸುತ್ತಿರುವಾಗ) ಹೂಂ, ನಡೆ ಮುಂದೆ! (ಶ್ರೀಕೃಷ್ಣನ ತೀರ ಹತ್ತಿರದಲ್ಲಿ ನಿಂತದ್ದನ್ನು ನೋಡಿ ಗದ್ದರಿಸುವ ದನಿಯಲ್ಲಿ) ಹೂಂ, ನಡೆ ಮುಂದೆ. ಎತ್ತಲಿಕ್ಕಾ-ಗದು ಕೈ. (ರುಕ್ಮಿಣಿಯು ಮಾಲೆ ಹಿಡಿದ ಎರಡೂ ಕೈಗಳನ್ನು ಮೇಲೆತ್ತುತ್ತಲೇ ರುಕ್ಮಿಣಿಯನ್ನು ಹಿಂದಕ್ಕೆ ಜಗ್ಗುತ್ತ ಸಿಟ್ಟಿನ ಧ್ವನಿ-ಯಲ್ಲಿ) ಸರಿ ಹಿಂದಕ್ಕೆ....

ರುಕ್ಮಿಣಿ :– ಅಣ್ಣಾ, ಇದೇನಿದು? ನನ್ನ ಇಚ್ಛೆಯಂತೆ ನಾನು.....

ರುಕ್ಮಿ :– (ದರ್ಪ) ನಿನ್ನಿಚ್ಛೆಯಂತಲ್ಲ—ನನ್ನ ಇಚ್ಛೆಯಂತೆ! ಕೃಷ್ಣಾ, ಖಡ್ಗ! ಒರೆಗಳೆ ಖಡ್ಗ! (ಸಭೆಯಲ್ಲಿ 'ಹಾ ಏನಿದು? ಏನಿದು' ಎಂಬ ಶಬ್ದ)

ಭೀಷ್ಮಕ: (ಸಿಟ್ಟಿನಿಂದ) ರುಕ್ಮಿ, ಉದ್ದಾಮಾ,....

ರುಕ್ಮಿ:– ಏನು ಬೇಕಾದರೂ ಹೇಳಬಹುದು; ರುಕ್ಮಿಣಿಯ ಕೈಯಲ್ಲಿಯ ಈ ಮಾಲೆ ಈ ಗೊಲ್ಲನ ಕೊರಳಲ್ಲಿ ಬಿದ್ದದ್ದನ್ನು ರುಕ್ಮಿಯ ಕಣ್ಣು ಎಂದೂ ನೋಡಲಾರವು. ರುಕ್ಮಿಣೀ, ನಾನೀಗ ಕೃಷ್ಣವಧೆ ಮಾಡಿ, ನಿನ್ನಿಂದ ಈ ಶಿಶುಪಾಲನ ಕೊರಳಲ್ಲಿ ಮಾಲೆ ಹಾಕಿಸುವೆ. ದುರ್ದೈವದಿಂದ ಈ ಗೊಲ್ಲನ ಕೊರಳಲ್ಲಿಯೇ ಬೀಳುವು-ದಿದ್ದರೆ, ನನ್ನ ರುಂಡವನ್ನು ಅದರಲ್ಲಿ ಪೋಣಿಸಿ, ನನ್ನ ರಕ್ತದಲ್ಲಿ ಅದ್ದಿ, ಈ ಮಾಲೆ ಹಾಕು. ಕೃಷ್ಣಾ, ಒರೆಗಳೆ ಖಡ್ಗ! ನಾನಾದರೂ ಸಾಯಬೇಕು. ಅಥವಾ ನೀನಾದರೂ....

ಕೃಷ್ಣ :– ಉನ್ಮತ್ತಾ.... ವಿದ್ಯುದ್ವೇಗದಿಂದ ನೆಲಕ್ಕುರುಳಿಸಿ, ಒದ್ದು ನಿನ್ನೆದೆಯ ಮೇಲೆ ಕುಳಿತು ತೋರಿಸುವೆ, ನಿನ್ನ ಕಣ್ಣಿಗೆ ಈ ಮಾಲೆಯನ್ನು! (ಖಡ್ಗ ಹಿಡಿದು ಮುಂದೆ ಬರುವನು)

ರುಕ್ಮಿಣಿ :– (ರುಕ್ಮಿ-ಕೃಷ್ಣರ ಮಧ್ಯದಲ್ಲಿ ನಿಂತು) ಅಣ್ಣಾ, ಅಣ್ಣಾ, ಸ್ವಲ್ಪ ತಾಳು. ಖಡ್ಗ ಒರೆಗಾಣಿಸು. (ಕೃಷ್ಣನ ಕಡೆಗೆ ತಿರುಗಿ) ಖಡ್ಗ ಒರೆಗಾಣಿಸುವುದಾಗಲಿ! ಅಣ್ಣಾ, ನಿನ್ನ ಪ್ರಾಣದ ಬಲಿಯಿಂದ ದೊರಕುವ ಪೂರ್ಣಸೌಖ್ಯವನ್ನು ನಾನು ಬಯಸುವುದಿಲ್ಲ. ಇಂದು ಯಾರ ಕೊರಳಲ್ಲಿಯೂ ಬೀಳಲಾರದು ಈ ಮಾಲೆ. ಸ್ವಯಂವರದ ಸ್ವಾತಂತ್ರ್ಯವನ್ನು ಸಂತೋಷದಿಂದ ಇಂದಿನ ಮಟ್ಟಿಗೆ ಬಿಟ್ಟುಕೊಟ್ಟಿರುವೆ. ಆಯಿತೇ? ಯದುವೀರಾ, ಈ ಅದ್ಭುತ ಪ್ರಸಂಗ-ದಿಂದ ಸಂಭ್ರಾಂತಳಾದ ಈ ವಿದರ್ಭರಾಜಕನ್ಯೆ, ಸಹಜ ಶಾಲೀನತೆ ವಿನಯಗಳಿಗೆ ಹೊರತಾಗಿರುವಳೆಂದು ಮಾತ್ರ ಭಾವಿಸಬಾರದಾಗಿ ಬೇಡಿಕೊಳ್ಳುವೆ.

ಕೃಷ್ಣ :– ರಾಜಕನ್ಯೆ.... ಸ್ವಕೀಯರ ಸಂಹಾರವನ್ನು ತಪ್ಪಿ-ಸಲು ಸ್ವಸುಖವನ್ನು ಸಂತೋಷದಿಂದ ತ್ಯಾಗಮಾಡಿ ತೋರಿಸಿದ ಈ ಧರ್ಮಬುದ್ಧಿಯಿಂದ, ಮೊದಲಿಗಿಂತಲೂ ವಿಶೇಷ ಆದರಣೀಯಳಾ-ಗಿರುವೆ.

ರುಕ್ಮಿಣಿ :– ಅಣ್ಣಾ, ಇನ್ನೊಂದು ಪ್ರಾರ್ಥನೆ ನಿನ್ನಲ್ಲಿ. ಹತ್ತರಲ್ಲೊಂದು ಪಾಲಾದರೂ ನಿನ್ನ ಮಾತು ನಾನು ನಡಿಸಿ ಕೊಟ್ಟಂತಾಯಿತಲ್ಲ! ನನ್ನ ಮಾತನ್ನು ನೀನು ನಡೆಸಿ ಕೊಡಬೇಕೀಗ. ಇಂದಿನಿಂದ ಒಂದು ವರುಷದ ವರೆಗೆ, ನನ್ನ ಲಗ್ನದ ಮಾತೆತ್ತ ಬೇಡ ಇಂದಿನ ಸ್ವಯಂವರ ಮುಕ್ತಾಯವಾದಂತಾಯಿತು.

ರುಕ್ಮಿ : (ಸಂತೋಷದ ಉದ್ರೇಕದಿಂದ) ಸ್ವಯಂವರ ಮುಕ್ತಾಯ....ಸ್ವಯಂವರ ಮುಕ್ತಾಯ! ಮುಂದಿನ ಆಲೋಚನೆಗಾಗಿ ನನ್ನೊಡನೆ ಜರಾಸಂಧ ಮಹಾರಾಜರ ಶಿಬಿರದಲ್ಲಿ ಕೂಡೋಣ. ಬನ್ನಿ. ಸ್ವಯಂವರದ ಮುಕ್ತಾಯ..ಸ್ವಯಂವರದ ಮುಕ್ತಾಯ!....

(೪)

ಸ್ವಯಂವರ ಮುಕ್ತಾಯವಾದ ಕೆಲಕಾಲದನಂತರ, ಶಿಶುಪಾಲ ಜರಾಸಂಧಾದಿಗಳು ಮತ್ತೆ ಸಂಘಟಿಯ ಮೇಲೆ ಸಾಗಿ ಹೊಸಗಿ ಮುಕ್ತಿಗೆ ಹಾಕಿದರು. ಅತ್ತ ಸಾದ ಶ್ರೀಕೃಷ್ಣನು, ವಿದರ್ಭ ರಾಜಕುಮಾರಿಯನ್ನು ತನ್ನೊಡನೆ ಮರ್ಥುರಾಪುರವಾಸಿಯಾಗುವಂತೆ ಕೇಳಿಕೊಂಡು, ಹೊರಟಾಗ ಬಿಕ್ಕ ಕರ್ಣನಿಂದ ಮುನ್ನಡೆದ ಸ್ವಾಮಿ ದಯೆ ಸ್ತ್ರೀಯರಿಗೆ ಆದರದಿ. ಬೆನ್ನಟ್ಟಿದ ಈ ರುಕ್ಮಸೇನೆ, ಮಧ್ಯ ಮಾರ್ಗದಲ್ಲೇ ಒಂದು ಸಣ್ಣಯುದ್ಧ ನಡೆದು, ಅದಿಗೆ ಸೋತು ದುರಭಿಮಾನದಿಂದ, ಅವನಿಗೆ ಸಾಕ್ಷ್ಯ ಕೊಟ್ಟಿತು ಕಾದುಕೊಂಡು ಬಂದರು. ಈ ಎಲ್ಲಾ ಘಟನೆ ಭದ್ರವಾದನಂತರ, ಕೃಷ್ಣನ ಜೊತೆ ರುಕ್ಮಿಣಿ ಸಂತೋಷ ಭದ್ರವಾಗಿ ದ್ವಾರಕೆ ಸೇರಿದರು, ವಿಜಯೋತ್ಸವದಿಂದ ಸಂತೋಷದ ಹೊಸ್ತಿಲು, ನನ್ನ ರಾಜ್ಯಗಳಿಗೆ ಹಿಂದಿರುಗಿದರು. ಈ ಸೋಲನ್ನು ಸಹಿಸಲಾರದ ರುಕ್ಮಿ-ಶಿಶುಪಾಲರಿಗೆ, ವಿಜಯೋತ್ಸವದಿಂದ ಕುಂದಿನಪುರಕ್ಕೆ ಹಿಂದಿರುಗಿದರು..

ಶಿಶುಪಾಲ : ರುಕ್ಮಿ, ನಿನ್ನ ಈ ಕುಂಡಿನಪುರದ ರಮ್ಯ ಪ್ರಾಂತ ಮನೋಹರವಾದ ದಿವ್ಯರಾತ್ರಿಯ ರಂಗಿನಲ್ಲಿ ಸುಳಿದು, ನನ್ನಲ್ಲಿ ಒಂದು ಬಗೆಯ ನವಚೈತನ್ಯ ಹುಟ್ಟಿಸಿದೆ. ವಿಶೇಷವಾಗಿ ಮಹಾರಾಜರ ಮನದಲ್ಲಿ ಈಗ ಆನುಕೂಲ ಹುಟ್ಟಿಕ್ಕೆ ಒಂದಿದೆಯೆಂದು ನನಗೆ ತಿಳಿಸಲು........

ರುಕ್ಮಿ : ಅಂ. ಇದೇನು ಚೇದಿರಾಜ! ಆಡಿಗಡಿಗೆ ನನ್ನ ಮನಸನ್ನು ನಡೆಯಲೇ ಕೊಡಬಾರದೆಂದು ಹಟ ಆನರಡು! ತಾನೇ ಹಿಂದಿರುಗಿಬಿಟ್ಟ ದುರ್ಭಿಮಾನದ ಮಾದ ಇಳಿಯಿತೇನೋ?

ಶಿಶುಪಾಲ :– ನಮ್ಮ ವಿಜಯಯಾತ್ರೆಯ ವಿವರಗಳನ್ನೆಲ್ಲ ಸಾವಕಾಶ ಕೇಳಿಕೊಂಡರು.

ರುಕ್ಮಿ :– ಕೃಷ್ಣನ ದುರಂತದ ವಿವರ ಕೇಳಿ, ಕಣ್ಣೀರು ಸುರಿಸಿರಬಹುದು. ಅಲ್ಲವೇ? ಅವನ ಬೆಂಬಲದ ಭರವಸೆ ಒಡಹುಟ್ಟಿತ್ತು ಈ ಹುಡುಗನಿಗೆ.

ಶಿಶುಪಾಲ :- ಇಕ್ಕಟ್ಟಿನಲ್ಲಿ ಸಿಕ್ಕ ಯಾದವರು ಸುಟ್ಟು ಭಸ್ಮವಾಗುವಂತೆ ಮಾಡಿದ ಶ್ರೇಯಸ್ಸು, ನಿನ್ನದೆಂದು ಹೇಳಿದಾಗ ಮಾತ್ರ ಉಸಿರು ಹಾಕಿದರು ಅಷ್ಟೇ! ಯಾದವರೇನು? ಯಾರು ಕರೆದರೇನು? ಕೃಷ್ಣ ಬರುವುದಷ್ಟರಲ್ಲೇ ಆದೆ....ಅವರ ಬೆಂಬಲಕ್ಕೆ ಇನ್ನು!

ರುಕ್ಮಿ :– ಅದೆಲ್ಲ ಸರಿ. ಇದರೆ....ಎದುರಾಳಿಯಾಗಿ ಕಾದಾಡಬೇಕಿತ್ತು ಆ ಕೃಷ್ಣ. ಸ್ವಯಂವರದಲ್ಲಿ ನನ್ನನ್ನು ಕೆಣಕಿದಾಗ........ ನಲಿಕ್ಕರುಳಿಸಿ....ಎದೆಯು ಮೇಲೊಡ್ಡು ಕುಳಿತು, ತನ್ನ ಕೊರಳಲ್ಲಿಯ ರುಕ್ಮಿಣಿಯ ಮಾಲೆಯನ್ನು ನನ್ನ ಕಣ್ಣಿಗೆ ತೋರಿಸುವನೆಂದು ಆಡಿದ ದರ್ಪೋಕ್ತಿಗೆ ಪ್ರತಿಯಾಗಿ, ರುಕ್ಮಿಣಿಯ ಬದಲು ರುಕ್ಮಿಯ ಶೂಲ ನಿನ್ನೆದೆಯಲ್ಲಿ ನೋಡೆಂದು ಹಂಗಿಸಿ ಹಂಗಿಸಿ ಪ್ರಾಣ ಹೀರಬೇಕಿತ್ತವನದು! ಉಪಾಯವಿಲ್ಲ!

ಶಿಶುಪಾಲ :– ರುಕ್ಮಿ, ವೈರಿಯ ನಾಶ ಮುಖ್ಯ. ಹೇಗಾದರೇನು? ಅವನ್ನು ನಮ್ಮನ್ನು ಕೆಣಕುವ ಎದೆಗಾರರು ಯಾರು? ಅದಿರಲಿ, ಅನ್ನು ನಿನ್ನ ಸೋದರಿಯ ಮನದೊಳಗನ್ನಷ್ಟು....

ರುಕ್ಮಿ :– ಛೀ ಛೀ! ಅದಾದರೂ ನಮಗೆ ಏತಕ್ಕೆ ಬೇಕು?

ಶಿಶುಪಾಲ :– ಬಲಾತ್ಕಾರದಿಂದ ಹರಣ ಮಾಡುವುದಕ್ಕಿಂತಲೂ ಒಲಿಸಿದರೆ........

ರುಕ್ಮಿ :– ಹೌದೌದು....ನಿನ್ನದೆನ್ನ ಅಲ್ಲವೆ? ಸರಿ ಸರಿ. ಚೇದಿರಾಜ, ತಂದೆಯ ಮಗನ್ನೇ ಮಗಳ ಮನಸ್ಸು, ಮಗಳ ಮನಸ್ಸೇ ತಂದೆಯ ಮನಸ್ಸು ಅನುಕೂಲವೆಂದು ನೀವೇ ನಿಮ್ಮ ಅನುಭವ ಹೇಳಿದಿರಿ.... ಆದರೆ....ಗಂಭೀರ ಜಲರಾಶಿಯ ಆಳ ಸಿಂತರೆ, ಹೇಗೆ ನಿಜ ತಿಳಿಯುವುದೋ ಒಳಹೊಕ್ಕು ನೋಡಿದಾಗಲೇ ತಿಳಿಯುವುದೋ ಹಾಗೆ, ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡಬೇಕಲ್ಲವೆ? ನಾಳೆ ತಿಳಿದು ಬಿಡುವ!

೫

ಭೀಷ್ಮಕ : (ದೀರ್ಘ ನಿಟ್ಟುಸಿರು, ಸ್ವಗತ) ಇದೆಲ್ಲ ಅಧ್ಯಕ್ಷದ ಆಟ.... ಅದೃಷ್ಟದ ಆಟ! ಸುಖ ಬೇಕು, ಶಾಂತಿ ಬೇಕು, ಆದರೆ ದೈವ....!ಮುಕ್ಕಿನಲ್ಲಿ ಮನಃಶಾಂತಿ ಇಲ್ಲದ ಮಾನವ ಜೀವನ ವ್ಯರ್ಥ.... ವ್ಯರ್ಥ! ಪರಿಣಾಮದಲ್ಲಿಯ ಸುಖವೇ ನಿಜವಾದ ಸುಖ! ಇದೆ.... ಎಲ್ಲವೂ ಇದೆ! ಸಿರಿ, ಸಂಪತ್ತು, ಸಂತಾನ (ನಿಟ್ಟುಸಿರು) ಸಂತಾನ.... ವಿವೇಕಹೀನ ಪುತ್ರಸಂತಾನ ವಿಷದ ಸಮಾನ! (ನಿಟ್ಟುಸಿರು) ರುಕ್ಮಿಣೀ!

ರುಕ್ಮಿಣಿ :– (ಪ್ರವೇಶಿಸುತ್ತ) ಕರೆಯೋಣಾಯಿತೇನು ತಾತಾ? ಇಲ್ಲಿಯೇ ಇರುವೆ.

ಭೀಷ್ಮಕ :- ಬಾ ಮಗೂ, ಬಾ ಕುಳಿತುಕೋ. (ದೀರ್ಘ ನಿಟ್ಟುಸಿರು)

ರುಕ್ಮಿಣಿ :– ಹೀಗೇಕೆ? ಏನಾಯಿತು? ಏನು ಬೇಕು?

ಭೀಷ್ಮಕ :– ಶಾಂತಿ ಬೇಕು ಮಗು, ಶಾಂತಿ ಬೇಕು! ಈ ಹಣ್ಣಾದ ಹೃದಯಕ್ಕೆ ಶಾಂತಿ!

ರುಕ್ಮಿಣಿ :– ಸುಮ್ಮನೆ ಹೀಗೆ ಬೇಸರಪಟ್ಟುಕೊಂಡರೆ ಏನಂತೆ ತಾತಾ! ದೈವಾನುಗ್ರಹದಿಂದ ಯಾವುದಕ್ಕೆ ಏನು ಕೊರತೆಯಿದೆ?

ಭೀಷ್ಮಕ :– ಇಲ್ಲ, ಮಗೂ, ಇಲ್ಲ; ನಿನ್ನಂಥ ಸುಗುಣೆಯ ತಂದೆಯಾದ ನನಗೆ ಯಾವ ಕೊರತೆಯೂ ಇಲ್ಲ. ನಾನೇ ಭಾಗ್ಯವಂತ; ಆದರೆ ಆದರೆ – ಒಂದು ಕೊರಗು ಮಗೂ! ಒಂದು ಕೊರಗು! ನಿನ್ನ ಸ್ವಯಂವರ ಸಾಂಗವಾಗಿ, ಸುಖದಿಂದ ಪತಿಯ ಕೂಡ ನೀನು ಇದ್ದದ್ದನ್ನು ಈ ಹತಭಾಗ್ಯನ ಕಣ್ಣು ಕಾಣಲಿಲ್ಲ.

ರುಕ್ಮಿಣಿ :– ಎಲ್ಲವೂ ಸರಿಹೋಗುವುದು ತಾತಾ, ಇನ್ನು ಸ್ವಲ್ಪೇ ದಿನಗಳಲ್ಲಿ!

ಭೀಷ್ಮಕ :– ಈ ಅನಿಷ್ಟವಾರ್ತೆ – ಈ ಕುಹಕಿಗಳು ಹರಡಿದ ಕೃಷ್ಣ ದುರಂತ ವಾರ್ತೆ..........

ಭೀಷ್ಮಕ :– ಅಮ್ಮಾ, ರುಕ್ಮಿಣೀ, ರುಕ್ಮಿಣೀ, ಇದೇನಿದು! ನನ್ನಯಾತನೆ ತಪ್ಪಿಸಲು ನರಕಯಾತನೆಯನ್ನು ಅಜನ್ಮ ಸ್ವಿನಕರಿಸುವೆಯಾ?

ರುಕ್ಮಿಣಿ :– ಅಣ್ಣಾ, ಸ್ವಯಂವರ ಮಂಟಪದಲ್ಲಿ, ನಿನಗಾಗಿ ನಾನು ಶ್ರೀಕೃಷ್ಣನ ಕೊರಳಲ್ಲಿ ಮಾಲೆ ಹಾಕಲಿಲ್ಲ. ಇಂದು ನನ್ನದೊಂದು ಮಾತಿಗೆ ಒಪ್ಪಿ ಅದರಂತೆ ನಡೆಯುವೆನೆಂದು ವಚನವಿತ್ತರೆ, ನೀನು ಹೇಳಿದವರ ಕೊರಳಲ್ಲಿ........

ರುಕ್ಮಿ :– ಹೂಂ, ಹೇಳು ಹೇಳು, ಅದೇನು ನಾನು ಮಾಡಬೇಕಾದುದು?

ರುಕ್ಮಿಣಿ :– ಲಗ್ನಮುಹೂರ್ತ ಇಂದಿನಿಂದ ಎರಡು ತಿಂಗಳಾದ ಮೇಲೆ ಇಡಬೇಕು. ಇಂದೆಯೆ ದ್ವಾರಕೆಗೆ ಆಮಂತ್ರಣ ಪತ್ರಿಕೆ ಕಳುಹಬೇಕು. ಆ ಅವಧಿಯಲ್ಲಿ ಅವರು ಬಂದು ನನ್ನ ಹರಣ ಮಾಡದಿದ್ದರೆ, ಆ ಮೇಲೆ........

ರುಕ್ಮಿ :– ಆ ಮೇಲೇನು? ಶಿಶುಪಾಲನನ್ನು ವರಿಸುತ್ತೀ? ಲಗ್ನವಾಗುತ್ತೀ? ಕೃಷ್ಣನನ್ನು ನಿಂದಿಸುತ್ತೀ? ನಮ್ಮನ್ನು ಸ್ತುತಿಸುತ್ತೀ?

ಭೀಷ್ಮಕ :– ಆ ರೀತಿ ಲಗ್ನವಾದ ಮೇಲೆ, ನನ್ನ ವಾಣಿಯಲ್ಲಿ ಶಕ್ತಿ ಉಳಿದರೆ........ಅಯ್ಯೋ! ಮೊದಲು ತಾತನನ್ನು ಬಂಧಮುಕ್ತ ಮಾಡು

ಶಿಶುಪಾಲ :– (ಪ್ರವೇಶಿಸಿ) ರುಕ್ಮಿ! ರುಕ್ಮಿಣಿಯ ಈ ನಿರ್ಬಂಧ ನಮಗೆ ಪಥ್ಯ..ಮಾನ್ಯ! ಮಹಾರಾಜರಲ್ಲಿ ಇಂತಹ ಕಠೋರ ವೃತ್ತಿ ಬೇಡ. ಈ ತ್ರಿಲೋಕಸುಂದರಿಯ ಆಜ್ಞೆಯಂತೆ ಬಂಧಮುಕ್ತರು! ಎಂದಿಗೂ ವಿದರ್ಭದೇಶದ ರಾಜರೇ! ಮಹಾರಾಜ, ಲಗ್ನನಿಶ್ಚಯವಾಯ್ತು. ಇನ್ನು ನಿಶ್ಚಿಂತೆಯಿಂದ ಅರಮನೆಯಲ್ಲಿ ಸುಖವಾಗಿ........

ಭೀಷ್ಮಕ :– ಅ್ಹಃ! ಸುಖವಾಗಿ! ಅರಮನೆಯ ಸೌಖ್ಯ ಸೆರೆಮನೆಯ ದುಃಖ ಸರಿಸಮಾನ. ಅವಿಧೇಯ ಮಕ್ಕಳ ತಂದೆಯಾದವನ ಹಣೆಯಲ್ಲಿ ಎಂದೋ ಬರೆದಿದೆ ಈ ವಿಧಿಲೇಖನ! (ಹೋಗುವನು.)

ರುಕ್ಮಿ :– ರುಕ್ಮಿಣೀ, ಲಗ್ನ ನಿಶ್ಚಿತವಾಯಿತಷ್ಟೇ?

ರುಕ್ಮಿಣಿ :– ಒಪ್ಪಿಗೆಯೆಂದು ಹೇಳಿದೆನಲ್ಲ! ಎರಡು ತಿಂಗಳಾದ ಮೇಲೆ.... ದ್ವಾರಕೆಗೆ ತಿಳಿಸಿಯಾದ ಮೇಲೆ........

ಶಿಶುಪಾಲ :– ರುಕ್ಮಿ, ಈಗಿಂದೀಗಲೇ ಮುಹೂರ್ತ ನಿಶ್ಚಯಿಸಿ, ದ್ವಾರಕೆಗೆ ಆಮಂತ್ರಣಪತ್ರಿಕೆ ಕಳಿಸಿ ಬಿಡುವಾ; ನಡೆ, ಹೋಗೋಣ!

ರುಕ್ಮಿಣಿ :– ಆಯಿತು! ಆಪ್ತಬಂಧುಗಳ ಋಣದಿಂದ ಮುಕ್ತಳಾದೆ! ಇನ್ನು ಈ ಶರೀರದ ಋಣ ಶೌರಿಯ ಪಾದಾರವಿಂದದಲ್ಲಿ ಎಂದೋ ಅರ್ಪಣ! ಅನನ್ಯ ಚಿಂತನೆ ಮಾಡುವವರ ಯೋಗಕ್ಷೇಮದ ಹೊಣೆ ಅವರದೇ ಅಲ್ಲವೆ? ಆದರೂ, ನನ್ನ ಕರ್ತವ್ಯ ನಾನು ಮಾಡಲೇ ಬೇಕು. ನನ್ನ ಬಿನ್ನಹ ನಾನು ತಿಳುಹಲೇ ಬೇಕು.

(ಎರಡು ತಿಂಗಳ ಅವಧಿ ಕಳೆದು ಹೋಗಿದೆ. ಲಗ್ನಮುಹೂರ್ತ ನಿಶ್ಚಿತವಾದ ದಿನ. ವರನಾದ ಶಿಶುಪಾಲನನ್ನು ವಾದ್ಯವೈಭವದ ಮೆರೆವಣಿಗೆಯಿಂದ ಪುರಪ್ರವೇಶ ಮಾಡಿಸಿದ ಮೇಲೆ.)

ಶಿಶುಪಾಲ :– ರುಕ್ಮಿ, ಬಹುದಿನಗಳಿಂದ ನಿರೀಕ್ಷಿಸುತ್ತಲಿದ್ದ ಶುಭದಿನ ಇಂದು ಬಂದುದಕ್ಕೆ ಬಹು ಸಂತೋಷ! ರುಕ್ಮೀ, ದ್ವಾರಕೆಯಿಂದೇನಾದರೂ....?

ರುಕ್ಮಿ :– ಇಲ್ಲ, ಏನೂ ಇಲ್ಲ. ಒಂದು ಪಿಳ್ಳೆಕೂಡ ಒಳಗೆ ನುಸಿಯದಂತೆ, ಪುರದ ಸುತ್ತಲೂ ಭದ್ರ ಕಾವಲಿದೆ. ಇದರ ಮೇಲೂ ಬಂದರೆ ಒಳಿತೇ ಅಲ್ಲವೇ? ಆಮಿಷಕ್ಕೆ ಆಶಿಪಟ್ಟು ಆ ಮದ್ದಾನೆ ತಾನಾಗಿಯೇ ನಮ್ಮ ಬಲೆಯಲ್ಲಿ....

ಶಿಶುಪಾಲ :– (ನಗು) ಸರಿ. ಅದಿರಲಿ, ರುಕ್ಮೀ, ನಿನ್ನ ಸೋದರಿ ನನ್ನ ಭಾವೀರಾಣಿ ರುಕ್ಮಿಣಿ, ಈಗ........ ಮೊದಲಿನ ಹಟಮಾರಿತನ ಬಿಟ್ಟು ಉಲ್ಲಾಸದಿಂದಿರುವಳೇ?

ರುಕ್ಮಿ :– (ನಗು) ಪಳಗಿಸುವುದರಲ್ಲಿದೆ ಜಾಣತನ, ಚೇದಿ ರಾಜಾ!

ಶಿಶುಪಾಲ :– (ಸಮಾಧಾನದ ಉಸಿರು) ಇನ್ನೊಂದರ್ಧದಿನ; ಆ ಮೇಲೆ ಸ್ವರ್ಗಸಾಮ್ರಾಜ್ಯ. ರುಕ್ಮೀ, ದೇವೀದರ್ಶನದ ಶಾಸ್ತ್ರವಷ್ಟು ಸುಗಮವಾಗಿ....

ರುಕ್ಮಿ :– ಹೋ! ಒಳ್ಳೆಯ ನೆನಪು ಮಾಡಿದೆ. ದಕ್ಷರಾದ ವೀರರರಕ್ಷಣೆಯಲ್ಲಿಯೇ ಕಳಿಸತಕ್ಕದ್ದು, ಅವಳನ್ನು ದೇವಾಲಯಕ್ಕೆ! ನಡೆ, ನಡೆ, ಜಾಗ್ರತೆಯಾಗಿ ಅದನ್ನು ಮುಗಿಸಿ ಬಿಡುವಾ!

೭

ರುಕ್ಮಿಣಿ :– (ಸ್ವಗತ) ರಾಜಗೋಪ! ಗೋಪರಾಜ!! ಎಷ್ಟು ಮುದ್ದಾದ ಹೆಸರು! ಅದ್ಭುತರಮ್ಯ ಬಾಲಲೀಲೆಗಳಿಂದ ಗೋಕುಲದ ಗೋಪ-ಗೋಪಿಯರನ್ನು ಮುಗ್ಧಗೊಳಿಸಿದ ಗೋಪಾಲಾ, ಎಲ್ಲಿರುವೆ. ಬೇಗ ಬಾ! ಬ್ರಾಹ್ಮಣನ ಮುಖಾಂತರ ನನ್ನ ಬಿನ್ನಹಪತ್ರಿಕೆ ನಿನ್ನ ಕೈಸೇರಿಯೂ ಇನ್ನೂ ಬಾರದಿರುವುದೇಕೆ? ಕೃಷ್ಣಾ, ಸತ್ತ್ವವನ್ನು ಪರೀಕ್ಷಿಸುತ್ತಿರುವೆಯಾ? ಅಥವಾ ನನ್ನ ಅಸ್ತಿತ್ವವೇ ಸ್ಮರಣೆಯಲ್ಲಿಲ್ಲವೋ? ರಾಧೆಯ ಸಹವಾಸದಲ್ಲಿರುವೆಯೋ–ರಾಸೋಲ್ಲಾಸದ ಭರದಲ್ಲಿ ಮತ್ತೆ ತೊಡಗಿ, ಈ ಸಮಯಕ್ಕೆ ಒದಗಬೇಕೆಂಬುದು ಮರೆತೇ ಹೋಯಿತೇ? ಮಾಧವಾ! ಭಕ್ತಪರಾಧೀನನೆಂಬ ಬಿರುದು ಬರಿದಾಗಬಾರದೆಂದು ಮತ್ತಾರದಾದರೂ ಭಕ್ತರ ಆಪತ್‌ಪರಿಹಾರಕ್ಕೆ ಧಾವಿಸಿರುವೆಯಾ? ದ್ವಾರಕಾಧೀಶಾ, ಭಕ್ತಜನ ದುರಿತ ಕರ್ಷಣಶೀಲ ಕೃಷ್ಣಾ! ನಾನೂ ಭಕ್ತಳೇ ಅಲ್ಲವೇ? ನಾಥ, ನಾಥನೆಂದು ನಂಬಿದ ನನ್ನನ್ನು ಸನಾಥಳನ್ನಾಗಮಾಡು ಗೋಪೀನಾಥಾ! ಬಾ, ಬಾ, ಬೇಗ ಬಾ! ("ಬಂದರು"...."ಬಂದರು"....ಎಂದು ಹೊರಗಿನಿಂದ ಶಬ್ದ) ಹಾಂ, ಬಂದರೇ? ಬಂದರೇ? (ರುಕ್ಮಿಯ ಪ್ರವೇಶ)

ರುಕ್ಮಿ :– ರುಕ್ಮಿಣೀ, ಎಷ್ಟು ಆಲಸ್ಯವಿದು? ಬಂದವರೆಲ್ಲ ನಿನ್ನ ದಾರಿ ಕಾಯುತ್ತಿರುವರು. ಇನ್ನೂ ನಿನ್ನ ಸಿಂಗರಿಸಿಕೊಳ್ಳುವುದು ಮುಗಿದೇ ಇಲ್ಲವೇ? ಹೂಂ, ಏಳು, ಏಳು; ಬೇಗ ಹೊರಡು!

ರುಕ್ಮಿಣಿ :– ಆಯಿತಣ್ಣಾ, ಆಯಿತು! ಈ ಹಾರವೊಂದನ್ನು ಹಿಡಿದು ಹೊರಟೇ ಬಿಟ್ಟೆ

ರುಕ್ಮಿ :– ಏನು ಹಾರವೋ, ಏನೋ! ಅಲ್ಲಿ ಎಲ್ಲ ಸಿದ್ಧವಿದೆ, ಹೊರಡು ಮೊದಲು. ಈ ಹಾರದ್ದೇನು ಅವಶ್ಯ?

ರುಕ್ಮಿಣಿ :– ಆಯಿತು! ಭಕ್ತಿಯಿಂದ ಕಟ್ಟಿಟ್ಟದ್ದು ಕೊರಳಲ್ಲಿ ಹಾಕಲು ಬೇಡವೇ?

ರುಕ್ಮಿ :– ಹೂಂ, ಚೆನ್ನಾಯಿತು. ಚೆನ್ನಾಯಿತು, ಬೇಗ ಹೊರಡು!

೮

(ಶ್ರೀದುರ್ಗಾದೇವಾಲಯಕ್ಕೆ ಹೊರಟ ಮೆರವಣಿಗೆಯಲ್ಲಿ ವಾದ್ಯವೈಭವದ ಕೋಲಾಹಲ.)

ರುಕ್ಮಿಣಿ :– ಸ್ನೇಹಲತೆ, ಗದ್ದಲವಾಗದಿರಲಿ. ಎಲ್ಲರೂ ಗರ್ಭಾಲಯದ ಹೊರಗೇ ಇರಬೇಕು. ದೇವಿಯ ಧ್ಯಾನಕ್ಕೆ ಏಕಾಂತ ಅವಶ್ಯ. (ಬಾಗಿಲು ಮುಚ್ಚಿದ ಶಬ್ದ)

"ಸರ್ವ ಮಂಗಲ ಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ, ಶರಣ್ಯೇ, ತ್ರ್ಯಂಬಕೀ, ದೇವೀ, ನಾರಾಯಣಿ, ನಮೋಸ್ತುತೇ" ದೇವಿ, ದೇವಿ, ದುಷ್ಟ ಕಂಸನನ್ನು ಚಕಿತಗೊಳಿಸಿದ ಕೃಷ್ಣಭಗಿನಿ! ಶ್ರೀಕೃಷ್ಣನ ದರ್ಶನಲಾಲಸಳಾಗಿ ಧಾವಿಸಿ ಬಂದ ನನಗೆ ದರ್ಶನ ಮಾಡಿಸು! ಪ್ರಸನ್ನಳಾಗು....ಸುಪ್ರಸನ್ನಳಾಗು! ಶ್ರೀಕೃಷ್ಣಾ, ದ್ವಾರಕಾಧೀಶಾ! ಅನನ್ಯಗತಿಕಳಾದ ನನ್ನನ್ನು ಕೈಹಿಡಿದು ಕಾಪಾಡು. ಸರ್ವಾಂತರ್ಯಾಮಿಯಾದ ನೀನು ಎಲ್ಲಿರುವೆ? ಎಲ್ಲಿಲ್ಲ? ಭಕ್ತ ಪ್ರಹ್ಲಾದನಿಗಾಗಿ ಸ್ತಂಭದಲ್ಲಿ ಪ್ರಕಟವಾದ ಮಹಾಪ್ರಭು, ನೀನು ತ್ವರೆಮಾಡು, ತ್ವರೆಮಾಡು! ಮುಹೂರ್ತ ಸಮೀಪಿಸಿತು. ಆರ್ತಳಾದ ನನ್ನ ಮೊರೆ ಕೇಳುವುದಿಲ್ಲವೇ, ನಾಥಾ! ತಾಯಿ, ದುರ್ಗೆ, ಈ ನಿನ್ನ ಮಂದಹಾಸದ ಅರ್ಥವಾದರೂ ಏನು? ನನಗೆ ವರದಹಸ್ತವನ್ನು ನೀಡಿ ಬೇಗ ನನ್ನವರನ್ನು ಬರಮಾಡು, ಬರಮಾಡು; ದೇವಿ! ಕರುಣಾಶೀಲೆಯೆಂದು ಶರಣಾಗತಳಾದೆ ನನ್ನನ್ನು ಕರುಣಿಸದಿದ್ದರೆ, ಈ....ನಿನ್ನ.... ಕೈ ...ಕರವಾಳವೇ........

ಕೃಷ್ಣ :– ರುಕ್ಮಿಣೀ, ಸಾಹಸ ಸಾಕು. ಇದೊ, ಇದೊ, ಇದು ನೋಡು! ಮುಹೂರ್ತಕ್ಕೆ ಸರಿಯಾಗಿ ಪಾಣಿಗ್ರಹಣ! ನಿನ್ನ ಸ್ವಯಂವರವೂ ಸಾಂಗವಾಯಿತಲ್ಲವೇ?

ರುಕ್ಮಿಣಿ :– ನಾಥ....ನಾಥ....ಧನ್ಯಳಾದೆ!

ಕೃಷ್ಣ :– ನಡೆ ಇನ್ನು ಹೋಗೋಣ!

ರುಕ್ಮಿಣಿ :– ಹೊರಗೆ, ಹೊರಗೆ, ಅಪಾರ ಶತ್ರುಸೇನೆ....

ಕೃಷ್ಣ :– (ನಗು) ಇರಲಿ, ನಡೆ, ಆದರ ಗೊಡವೆ ನಿನಗೆ ಬೇಡ. ರಕ್ತಪಾತವಾಗದಂತೆ ನೋಡಿಕೊಳ್ಳುವೆ. ಅಧೀರಳಾಗದಿರು. ನನ್ನ ವಾಹನ ಸಿದ್ಧವಿದೆ. ಗರುಡಾ! (ಗರುಡನ ಆಗಮನದ ಶಬ್ದ)

ಶ್ರೀಕೃಷ್ಣಾರ್ಪಣಮಸ್ತು!



"ಜಯಂತಿ"ಗೆ ಚಂದಾದಾರರಾಗಿರಿ
ಮನೆಯ ಜನರ ಸಂಸ್ಕೃತಿಯನ್ನು ಹೆಚ್ಚಿಸಿರಿ!

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ
ಪ್ರಚಾರವಾಗಬೇಕಾಗಿದ್ದರೆ,

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ ಪೇಂಟಿಂಗ ವರ್ಕ್ಸ್
ಗಾಂಧಿಚೌಕ, ಧಾರವಾಡ

ಪುಣೆಯಲ್ಲಿ ನಮ್ಮ ಏಜಂಟರು:
ಶ್ರೀ. ಎಸ್. ಬಿ. ಮಾತಕರ
೪೩ ರವಿವಾರಪೇಠ, ಪುಣೆ ೨

ನಾನು ಹಳ್ಳಿಗೆ ಹೋದಾಗ :

(ಜೀವನದ ಸತ್ಯಚಿತ್ರ)

ಶ್ರೀ. ಬಿ. ಪಿ. ಎಸ್. ರಾವ್, ಬೆಳಗಾಂವಿ.

●

ಪ್ರತಿಯೊಂದು ವ್ಯಕ್ತಿಯ ಪ್ರತಿಯೊಂದು ಜೀವನದ ಅನುಭವದಲ್ಲಿಯೂ ರಸ-ಭಾವಗಳು ಹುದುಗಿರುತ್ತವೆ; ಸತ್ಯದ ಸಾಕ್ಷಾತ್ಕಾರ ಕಂಡುಬರುತ್ತದೆ. ಆದರೆ ಆ ವ್ಯಕ್ತಿಯಲ್ಲಿ ಸಾಹಿತ್ಯಿಕದೃಷ್ಟಿ ಅರಳಿರಬೇಕು. ಅರಳದಿದ್ದರೆ, ಆ ಅನುಭವದಲ್ಲಿಯ ರಸ-ಭಾವಗಳೂ ಸತ್ಯಸಾಕ್ಷಾತ್ಕಾರವೂ ವ್ಯರ್ಥವಾಗುತವೆ!

▼

ಹಾದಿಯಲ್ಲಿ :

ನಾನು ಹಳ್ಳಿಯಲ್ಲಿಯೆ ಹುಟ್ಟಿ ಬೆಳೆದವನಾದರೂ, ಈಗ ಇಪ್ಪತ್ತೈದು ವರ್ಷಗಳಿಂದ ನನ್ನ ಹಳ್ಳಿಯ ಮುಖವನ್ನೇ ನಾನು ಕಂಡಿರಲಿಲ್ಲ. ಮೊನ್ನೆ ಮೊನ್ನೆ ಅಲ್ಲಿಗೆ ಹೋಗಿ ಬರಬೇಕಾದ ಅನಿವಾರ್ಯ ಸಂದರ್ಭವೊಂದು ಒದಗಿತು.

ನಾನು ಚಿಕ್ಕತನದಲ್ಲಿ ನನ್ನ ಹಳ್ಳಿಯನ್ನು ಬಿಟ್ಟು ಬಂದಾಗ, ಅಲ್ಲಿಗೆ ಹೋಗಿಬರಲು ಒಳ್ಳೆಯ ದಾರಿಗಳು ಇರಲೇ ಇಲ್ಲ. ಮೋಟಾರು-ಬಸ್ಸುಗಳಂತೂ ನಮ್ಮ ಹಳ್ಳಿಯ ವರೆಗೆ ಬಂದಾವೆಂದು ಕನಸಿನಲ್ಲಿಯೂ ಭಾವಿಸುವಂತಿರಲಿಲ್ಲ. ಪಟ್ಟಣದಲ್ಲಿಯ ಜನರ ಹೃದಯರಹಿತ ಜೀವನವನ್ನೂ ಅಪ್ರಾಮಾಣಿಕ ವ್ಯವಹಾರಗಳನ್ನೂ ಕಂಡಾಗೆಲ್ಲ, ನಾನು ಹಿಂದೆ ಹಳ್ಳಿಯಲ್ಲಿರುವಾಗ ಕಂಡ ಅಲ್ಲಿಯ ಜನರ ದಯಾ-ದಾಕ್ಷಿಣ್ಯಮಯ ಜೀವನವೂ, ಪ್ರಾಮಾಣಿಕತೆ-ಪಾಪಭೀರುತ್ವಗಳೂ ನೆನಪಿಗೆ ಬಂದು, ಹಳ್ಳಿಯ ಜನರ ವಿಚಾರದಲ್ಲಿ ನನ್ನಲ್ಲಿ ಗೌರವಾದರಗಳು ತಲೆಯೆತ್ತಿ ನಿಲ್ಲುತ್ತಿದ್ದುವು. ನಿಜವಾದ ಮನುಷ್ಯತ್ವ ಹಳ್ಳಿಯ ಜನರಲ್ಲಿಯೆ ಇದೆಯೆಂದು ನನ್ನ ಬುದ್ಧಿ-ಮನಸ್ಸುಗಳು ನಿರ್ಣಯಿಸುತ್ತಿದ್ದುವು. ಆದುದರಿಂದಲೇ ನನ್ನ ಆಯುಷ್ಯದ ಕೊನೆಯ ಭಾಗವನ್ನು ನನ್ನ ಹಳ್ಳಿಯ ಶಾಂತಿ-ಸೌಹಾರ್ದಮಯ ವಾತಾವರಣದಲ್ಲಿ ಕಳೆಯಬೇಕೆಂದು ನಾನು ಅನೇಕಸಲ ಯೋಚಿಸಿದ್ದೇನೆ.

ಹೊಸಕಾಲದ ಒಕ್ಕಲಿಗರ ಕಾಯಿದೆಯ ಪರಿಣಾಮದ ಕಾರಣದಿಂದಾಗಿ, ಮೊನ್ನೆ ಮೊನ್ನೆ ನಾನು ನನ್ನ ಹಳ್ಳಿಗೆ ಹೋಗಬೇಕಾಗಿ ಬಂದಿತು. ಹಳ್ಳಿಯಲ್ಲಿರುವ ನನ್ನ ಅಲ್ಪ-ಸ್ವಲ್ಪ ಹೊಲನೆಲಗಳನ್ನು, ಬಹಳ ಕಾಲದಿಂದಲೂ ಒಬ್ಬ ಒಕ್ಕಲಿಗನ ಮನೆತನ ಮಾಡುತ್ತ ಬಂದಿದೆ. ಆ ಮನೆತನದ ಹಿರಿಯ ಒಕ್ಕಲಿಗನು ಇರುವ ವರೆಗೆ, ನಮ್ಮ ಹೊಲ-ನೆಲಗಳ ಆದಾಯ-ಖಂಡುಗಳ ವಿಷಯದಲ್ಲಿ ನಮಗೆ ಯಾವ ತೊಂದರೆಯೂ ಇರಲಿಲ್ಲ. ವರುಷಕ್ಕೊಮ್ಮೆ, ತಾನಾಗಿಯೇ ಬಂದು, ನಾವು ಇದ್ದಲ್ಲಿಯೆ ಎಲ್ಲ ಲೆಕ್ಕಾಚಾರವನ್ನೂ ಒಪ್ಪಿಸಿ ಹೋಗುತ್ತಿದ್ದ. ಆ ಹಿರಿಯ ಒಕ್ಕಲಿಗನನ್ನು ನಾವು ಯಾರೂ ಹೊರಗಿನವನೆಂದು ಭಾವಿಸುತ್ತಿರಲಿಲ್ಲ. ಆವನೂ ನಮ್ಮ ಮನೆತನದ ಎಲ್ಲರೊಂದಿಗೂ ವಿಶ್ವಾಸ-ಪ್ರೀತಿಗಳಿಂದ ನಡೆದುಕೊಳ್ಳುತ್ತಿದ್ದ. ನಮ್ಮ ದುರ್ದೈವವೆಂದೇ ಹೇಳಬೇಕು; ಮೂರು ವರ್ಷಗಳ ಹಿಂದೆ ಆ ಹಿರಿಯ ಒಕ್ಕಲಿಗನು ತೀರಿಹೋದ. ಕಾನೂನಿಗನುಸಾರವಾಗಿ ನಮ್ಮ ಹೊಲ-ನೆಲಗಳನ್ನು ಆತನ ಮಕ್ಕಳು ಮಾಡಲುತೊಡಗಿದರು. ಅಂದಿನಿಂದಲೂ ನಮ್ಮ ಹೊಲ-ನೆಲಗಳ ಹುಟ್ಟುವಳಿಯೇ ನನ್ನ ಕೈಗೆ ಹತ್ತಿಲ್ಲ. ಅದರ ವಿಚಾರವನ್ನು ಮಾಡುವುದಕ್ಕಾಗಿಯೆ ನಾನು ಹಳ್ಳಿಗೆ ಹೋಗಬೇಕಾಯಿತು.

ಹೊರಡುವಾಗ, ನನ್ನ ಹಳೆಯಕಾಲದ ಹಳ್ಳಿಯ ವಾಸ ನೆನಪಿಗೆ ಬಂದು, ತುಂಬ ಉತ್ಸಾಹದಿಂದಲೇ ಹೊರಟೆ. ಆರುಗಂಟೆಗಳ ಕಾಲದ ರೈಲಿನ ಪ್ರಯಾಣದ ಕಾಲದಲ್ಲಿ, ನನ್ನ ಚಿಕ್ಕತನದ ಹಳ್ಳಿಯ ಜೀವನದ ಸುಂದರವಾದ ನೆನಪುಗಳೇ ಮನದ ಮೇಲೆ ಮೂಡಿ ನಿಂತು, ಉತ್ಸಾಹವನ್ನು ಹೆಚ್ಚಿಸಿ ಹೆಚ್ಚಿಸಿ ಮರೆಯಾಗುತ್ತಿದ್ದುವು. ಹಿಂದೆ ನಮ್ಮೂರಿಗೆ ಲೈನುದಾರಿಯಿರಲಿಲ್ಲ. ಇಂದು ನಮ್ಮ ತಾಲೂಕಿನ ನಗರದಿಂದ ಹೊಸತಾಗಿ ಲೈನುದಾರಿಯೊಂದು ಹೊರಟು, ನಮ್ಮ ಹಳ್ಳಿಯನ್ನು ದಾಟಿ ಮುಂದೆ ಹೋಗಿದೆಯಂತೆ. ಹಿಂದೆ ನಾವು ತಾಲೂಕಿನ ನಗರಕ್ಕಾಗಲಿ, ರೇಲ್ವೇ ಸ್ಟೇಶನಿಗಾಗಲಿ ಹೋಗಿ ಬರಬೇಕಾದರೆ, ಎತ್ತಿನ ಬಂಡಿಯಲ್ಲಿ ಕುಳಿತು ಕಾಡುದಾರಿಯ ತಗ್ಗು-ದಿಗ್ಗುಗಳನ್ನು ಇಳಿಯುತ್ತ ಏರುತ್ತ ಸಾವಕಾಶವಾಗಿ ಪ್ರಯಾಣ ಮಾಡಬೇಕಾಗುತ್ತಿತ್ತು. ಇಂದು ಎಸ್. ಟಿ. ಬಸ್ಸುಗಳು ನಮ್ಮೂರ ದಾರಿಯಲ್ಲಿ ಓಡಾಡುತ್ತಿವೆಯಂತೆ. ಬಸ್ಸಿನ ಮೂಲಕ ಬೇಗನೆ ಹಳ್ಳಿಯನ್ನು ಕಾಣುವೆನೆಂಬ ಯೋಚನೆಯಿಂದ, ನಾನು ಹೊಸಕಾಲದ ಸುಧಾರಣೆಗಳನ್ನು ಮೆಚ್ಚಿ ಒಳಗೊಳಗೇ ಹಾಡಿಹರಸಿದೆ.

ರೈಲನ್ನು ಇಳಿದು, ಸ್ಟೇಶನ್‌ಬಸ್ಸಿನಿಂದ ಹೊರಟು ನಮ್ಮ ತಾಲುಕಿನ ನಗರಕ್ಕೆ ಬಂದಾಗ, ಹಗಲು ಹನ್ನೆರಡುವರೆಗಂಟೆಯಾಗಿಹೋಗಿತ್ತು. ಬಸ್‌ಸ್ಟ್ಯಾಂಡಿಗೆ ಹೋಗಿ ನೋಡಿದಾಗ, ನಮ್ಮ ಹಳ್ಳಿಗೆ ಹೋಗಬೇಕಾದ ಬಸ್ಸು ಹೊರಟುಹೋಗಿತ್ತು. ಇನ್ನೊಂದು ಸಲ ಬಸ್ಸು ಬಿಡುವ ವೇಳೆಯೆಂದರೆ, ರಾತ್ರಿ ಏಳುವರೆ ಗಂಟೆ. ಅಲ್ಲಿಂದ ನಮ್ಮ ಹಳ್ಳಿ ಬರೀ ಹನ್ನೆರಡು ಮೈಲುಗಳ ಅಂತರದಲ್ಲಿದೆ. ಎಸ್. ಟಿ. ಬಸ್ಸಿನ ಅನುಕೂಲತೆಯಿದೆಯೆಂದು ಎತ್ತಿನ ಬಂಡಿಯನ್ನು ಕಳುಹಲು ಬರೆದಿರಲಿಲ್ಲ. ಸಾಮಾನು ಹೊತ್ತುಕೊಂಡು ಹನ್ನೆರಡು ಮೈಲು ನಡೆದು ಹೋಗುವುದೆಂದರೆ ಸಾಧ್ಯವೇ ಇರಲಿಲ್ಲ. ಆದುದರಿಂದ ರಾತ್ರಿಯ ಬಸ್ಸಿನಿಂದಲೇ ಹೊರಡುವುದಾಗಿ ನಿರ್ಣಯಿಸಿದೆ. ಹನ್ನೆರಡು ಮೈಲಿಯ ಪ್ರವಾಸಕ್ಕಾಗಿ, ನನ್ನ ಆಯುಷ್ಯದ ಬಹುಮೂಲ್ಯವಾದ ೭-೮ ಗಂಟೆಗಳ ಕಾಲವನ್ನು ವ್ಯರ್ಥಗೊಳಿಸಲು ಸಿದ್ಧನಾದೆ. ನಮ್ಮ ಇಂದಿನ ನಾಗರಿಕ ಜೀವನದಲ್ಲಿ ಸುಖದ ಆಭಾಸಕ್ಕೆ ಇರುವಷ್ಟು ಬೆಲೆಯು, ನಮ್ಮ ಆಯುಷ್ಯಕ್ಕೆ ಇರುವುದೆ?

ಸ್ಟ್ಯಾಂಡಿನಿಂದ ಹಿಂದಿರುಗಿ, ಒಂದು ಊಟದ ಹೋಟೆಲನ್ನು ಪ್ರವೇಶಿಸಿದೆ. ಬಯಲುಸೀಮೆಯ ಬೇಸಗೆಯ ಮಧ್ಯಾಹ್ನ. ಮೈಯೆಲ್ಲ ಬೆವತು ಉರಿಯ ತೊಡಗಿತ್ತು. ಸ್ನಾನ ಮಾಡಬೇಕೆಂದು ಕೇಳಿದರೆ, ಹೊಟೇಲಿನಲ್ಲಿ ಸ್ನಾನದ ವ್ಯವಸ್ಥೆಯೆ ಇರಲಿಲ್ಲ. ಅದು ಬರಿ ಊಟದ ಹೋಟೆಲು. ಅನೇಕ ಜನರು ಬಂದು ಬಂದು ಸ್ನಾನದ ವಿಚಾರವನ್ನೇನೂ ಮಾಡದೆ, ಉಂಡು ಉಂಡು ತಾಟ ನಲ್ಲಿಯೆ ಕೈ ತೊಳೆದುಕೊಂಡು ಹೋಗುತ್ತಿದ್ದರು ಆಪದ್ಧರ್ಮವೆಂದು ನಾನೂ ಹಾಗೆಯೇ ಮಾಡಿಬಿಡಬೇಕೇನೋ—ಎಂದು ಮನಸ್ಸು ಹೊಯಿದಾಡಿತಾದರೂ, ದೇಹವು ಕೇಳುವಂತಿರಲಿಲ್ಲ. ಆದುದರಿಂದ, ಸಮೀಪದಲ್ಲಿಯೇ ಇದ್ದ ಹೊಳೆಗೆ ಹೋಗಿ, ಸುಖವಾಗಿ ತಣ್ಣೀರಿನಲ್ಲಿ ಸ್ನಾನ ಮಾಡಿ ಬಂದೆ. ಆ ದಿನ ನನಗೆ ಸುಖದ ಕ್ಷಣಗಳೇನಾದರೂ ದೊರೆತಿದ್ದರೆ, ಈ ನದೀಸ್ನಾನದ ಕಾಲದಲ್ಲಿಯೆ ಎಂದು ಹೇಳಬಹುದು.

ಹೋಟೆಲಿಗೆ ಹೋಗಿ, ಹಸಿದ ಹೊಟ್ಟೆಯನ್ನು ತುಂಬಿಕೊಳ್ಳುವ ತವಕದಿಂದ ಊಟಕ್ಕೆ ಕುಳಿತೆ. ಕುಳಿತ ಸ್ಥಳದಲ್ಲಿ ಇಡುಗಿದ ಸಮ್ಮಿಶ್ರ ದುರ್ಗಂಧವೇ ಅರೆಬರೆಯಾಗಿ ನನ್ನ ಹಸಿವನ್ನು ಕೊಂದುಹಾಕಿತು. ಇನ್ನು ಊಟದ ಸುಖವೋ! ಕೇಸಕ್ಕಿಯ ಬೇಯದ ಅಗುಳಿನ ಅನ್ನ. ತುಪ್ಪವೆಂದು ಹಾಕಿದ ಆ ನೆಲಗಡಲೆಯ ಎಣ್ಣೆ. ಹಳಸಲು ವಾಸನೆಯ ಹುಳಿ; ಸೊಪ್ಪಿನೊಂದಿಗೆ ಸಿಕ್ಕಿದುದನ್ನೆಲ್ಲ ಹೆಚ್ಚಿ ಮಾಡಿದ ಆ ಪಲ್ಲೆ; ಪೇಟೆಯಿಂದ ತಂದ ಮುಗ್ಗುಜೋಳವನ್ನು ಇದ್ದ ಹಾಗೆಯೆ ಬೀಸಿದ ಹಿಟ್ಟಿನಿಂದ ಮಾಡಿದ—ಮರುಳು ಕೂಡಿದ-ರೊಟ್ಟಿ; ಎಂದೋ ಮಾಡಿದ ಗುನುಗುವಾಸನೆಯ ಹುಳಿಮಜ್ಜಿಗೆ. ಉಸುಳಿಯ ಕಾಳೆಂದು ಹಾಕಿದುವುಗಳಲ್ಲಿ ತುತ್ತಿಗೆ ಎರಡು ಮೂರು ಕಲ್ಲಿನ ಮರಿಗಳು. ಇಂತಹ ಊಟವನ್ನೇ ಎಲ್ಲರಿಗೂ ಒದಗಿಸುತ್ತಿದ್ದ ಆ ಹೊಟಲಿನ ಹೆಸರು 'ಅನ್ನಪೂರ್ಣಾ ವಿಲಾಸ ಖಾನಾವಳಿ' ಎಂದು. ಒಂದು ಊಟಕ್ಕೆ ದರ ಒಂದು ರೂಪಾಯಿ.

ಕಾಸುಕೊಟ್ಟ ತಪ್ಪಿಗೆ, ಕಂಠದ ಕೆಳಗೆ ಇಲ್ಲಿಯ ಬಹುಪಾದುನ್ನೆಲ್ಲ ಹೊಟ್ಟೆಯಲ್ಲಿ ತುಂಬಿಕೊಂಡು, ಗುನುಗುಮಜ್ಜಿಗೆಯ ವಾಸನೆಯಿಂದ ಕೂಡಿದ ತೇಗುಗಳನ್ನು ಬಿಡುತ್ತ, ಎದ್ದು ಕೈತೊಳೆದುಕೊಂಡೆ. ಹೋಟೆಲಿನ ಯಜಮಾನನಿಗೆ ಹೇಳಿ, ಒಂದು ಎಡೆಯನ್ನು ಪಡೆದು, ಅಲ್ಲಿಯೇ ವಿಶ್ರಾಂತಿಗಾಗಿ ಪವಡಿಸಿದೆ. ಸವಿಯಾದ ಊಟವು ಸಿಕ್ಕದೆ ಹೋದರೂ, ಸುಖವಾದ ನಿದ್ರೆಯನ್ನು ಅಲ್ಲಿ ಅನುಭವಿಸಿದೆ. ಸಾಕಷ್ಟು ಹಣವನ್ನು ವೆಚ್ಚ ಮಾಡಿದರೂ ಊಟದ ಸುಖವು ಅಲ್ಲಿ ಸಿಕ್ಕಲಿಲ್ಲ; ಆದರೆ ಪಯಣದ ದಣಿವು-ಬೇಸಗೆಯ ಬಿಸಿಲು ಕೂಡಿ, ನನ್ನಿಂದ ಹಣವನ್ನು ಸ್ವಲ್ಪವೂ ಅಪೇಕ್ಷಿಸದೆ, ನಿದ್ರೆಯ ಸೌಖ್ಯವನ್ನು ಪೂರ್ಣವಾಗಿ ಒದಗಿಸಿದುವು. ನಿದ್ರೆಯಿಂದ ಎದ್ದಾಗ ಸಂಜೆಯ ಆರುವರೆ ಗಂಟೆ. ಸೂರ್ಯ ಕಣ್ಮರೆಯಾಗಿದ್ದರೂ ವಾತಾವರಣದಲ್ಲಿ ಹರಡಿಹೋಗಿದ್ದ ಅವನ ಪ್ರತಾಪ ಇನ್ನೂ ಕಡಿಮೆಯಾಗಿರಲಿಲ್ಲ. ಈ ಪ್ರತಾಪಕ್ಕೆ ಹೆದರಿಯೋ ಏನೋ, ಇತ್ತಣ ಭಾಗದಲ್ಲಿ ಗಾಳಿರಾಯ, ಬೇಗನೆ ತನ್ನ ದೂತರನ್ನು ಕಳುಹುವುದೇ ಇಲ್ಲ. ಎದ್ದು ಮುಖ ತೊಳೆದುಕೊಂಡು, ಸಾಮಾನುಗಳನ್ನು ಹೊರಸಿಕೊಂಡು ಮೋಟಾರ್ ಸ್ಟ್ಯಾಂಡಿನ ಕಡೆಗೆ ಹೊರಟೆ. ನಮ್ಮ ಹಳ್ಳಿಗೆ ಹೊರಡಲಿರುವ ಬಸ್ಸಿಗೆ ಇನ್ನೂ ಸಾಕಷ್ಟು ವೇಳೆಯಿದ್ದಿತಾದರೂ, ಹೋಟೆಲಿನಲ್ಲಿ ಕುಳಿತು ಮಾಡುವುದೇನು? ಮೋಟಾರ್ ಸ್ಟ್ಯಾಂಡಿನ ಮೇಲೆ ಕುಳಿತು ಅಲ್ಲಿಯ ದೃಶ್ಯಗಳನ್ನು ನೋಡುತ್ತ ಮನೋರಂಜನೆಯಲ್ಲಿ ಕಾಲವನ್ನು ಕಳೆಯಬಹುದಲ್ಲವೆ?

ಬಸ್‌ಸ್ಟ್ಯಾಂಡನ್ನು ತಲ್ಪಿ ನೋಡುತ್ತೇನೆ. ಅಂಗಳ ಸಾಲದಂತೆ ಜನಜಂಗುಳಿ ಕಿಕ್ಕಿರಿದಿದೆ. ಬರುವ ಬಸ್ಸುಗಳು, ಕುರಿಗಳಂತೆ ಮಂದಿಯನ್ನು ತುಂಬಿಕೊಂಡು ತಂದು ಇಳುಹುತ್ತಲಿವೆ; ಹೊರಡುವ ಬಸ್ಸುಗಳು, ಹತ್ತುವ ಜನರ ಮಹಾಯುದ್ಧವನ್ನು ಹೇಗೊಹೇಗೋ ಮುಗಿಸಿ, ಉಸಿರಾಡಿಸಲು ಕೂಡ ಇಂಬು ಇಲ್ಲದಂತೆ ಜನರನ್ನು ತುಂಬಿಕೊಂಡು ಸಾಗುತ್ತಲಿವೆ. ನಿಂತು ನೋಡಿಯೇ ನೋಡುತ್ತಲಿದ್ದೆ. ಅಂತಹದರಲ್ಲಿಯೆ ವಿಚಾರವೊಂದು ಸುಳಿಯಿತು: "ಹಿಂದೆ ಮಾಲಕರ ಸಾರಿಗೆ ಬಸ್ಸುಗಳಿದ್ದಾಗ, ನಿಯಮಿತ ಸಂಖ್ಯೆಗಿಂತ ಹೆಚ್ಚು ಜನರನ್ನು ಬಸ್ಸಿನಲ್ಲಿ ಕೂಡಿಸಿದರೆ, ನೋಡಿಕೊಳ್ಳಲೂ ದಂಡ-ಶಿಕ್ಷೆಗಳನ್ನು ಮಾಡಿಸಲೂ ಸರಕಾರದಪೋಲೀಸರಿರುತ್ತಿದ್ದರು. ಇಂದುಸರಕಾರದುವೇ ಸಾರಿಗೆ ಬಸ್ಸುಗಳು. ಅವುಗಳಿಗೆ ಪೋಲೀಸರ ಭೀತಿಯೆಲ್ಲಿಯದು? ಹಿಂದಿನ ಬಸ್ಸುಗಳ ಮಾಲಕರು ಹೆಚ್ಚು ಜನರನ್ನು ಹಾಕಿದರೂ, ಪ್ರಯಾಣಿಕರಿಗೆ ಹೆಚ್ಚು ಅನನುಕೂಲತೆಯಾಗದಂತೆ ದಕ್ಷತೆಯಿಂದ ನೋಡಿಕೊಳ್ಳುತ್ತಿದ್ದರು. ಇಂದಿನ ಈ ಸರಕಾರೀ ಸಾರಿಗೆ ಬಸ್ಸುಗಳಲ್ಲಿ, ಪ್ರವಾಸಿಕರ ಅನುಕೂಲತೆ-ಅನನುಕೂಲತೆಗಳನ್ನು ನೋಡುವ ನಿಯಂತ್ರಕರೇ ಇಲ್ಲ. ಎಲ್ಲರೂ ಸ್ವಾವಲಂಬಿಗಳೇ ಆಗಬೇಕು. ಬಲವುಳ್ಳವರಿಗೇ ಬಸ್ಸಿನಲ್ಲಿ ಕುಳಿತುಕೊಳ್ಳಲು ಎಡೆಯು ಸಿಕ್ಕುವುದು. ಬಲಹೀನರಿಗೂ ಅಬಲೆಯರಾದ ಹೆಣ್ಣುಮಕ್ಕಳಿಗೂ ಹುಡುಗರಿಗೂ ಬಸ್ಸಿನೊಳಗೆ ಪ್ರವೇಶಸಿಕ್ಕುವುದೇ ದುಸ್ತರ. ಸಿಕ್ಕರೂ ಕೂಡುವುದಕ್ಕೆ ಸ್ಥಳ ದೊರೆಯದೆ, ಅವರೆಲ್ಲ ನಿಂತುಕೊಂಡೇ ಪ್ರವಾಸವನ್ನು

ಮುಗಿಸಬೇಕಾಗುವುದು. ಮುಪ್ಪಿನವರು ರೋಗಿಗಳು ಇದ್ದರಂತೂ ಮುಗಿದೇ ಹೋಯಿತು. ಮೂರು ಮೂರು ದಿನ ದಾರಿ ಕಾಯ್ದರೂ ಬಸ್ಸಿನಲ್ಲಿ ಎಡೆಯಿ ಸಿಕ್ಕುವಂತಿಲ್ಲ. ಸರಕಾರವು ಜನತೆಗೆ ಒದಗಿಸಿದ ಅನುಕೂಲ ಪ್ರಯಾಣಸೌಕರ್ಯದ ಮಾದರಿಯಿದು! ಖಾಕೀ ವೇಷವನ್ನು ಧರಿಸಿ ಅಧಿಕಾರದ ದರ್ಪ ತೋರಿಸುತ್ತ ತಿರುಗುವ ಎಸ್. ಟಿ. ಕೆಲಸಗಾರರು ಅಲ್ಲಲ್ಲಿ ಕಣ್ಣಿಗೆ ಬೀಳುತ್ತಾರೆ; ಆದರೆ ಬಸ್ಸು ಹಿಡಿಯುವುದಕ್ಕಾಗಿ ಜನರು ಪಡುವ ಬವಣೆ ಅವರ ಕಣ್ಣಿಗೆ ಬೀಳುವುದೇ ಇಲ್ಲ........

....ಸರಕಾರವು ಜನತೆಗಾಗಿ ಒದಗಿಸುವ ಪ್ರತಿಯೊಂದು ಅನುಕೂಲತೆಯ ಹಣೆಬರಹವೂ ಇಷ್ಟೇ ಅಲ್ಲವೇ? ಕೂಳು ಒದಗಿಸುವೆಂಬ ಕಲ್ಯಾಣಬುದ್ಧಿಯಿಂದ ಕಾಳನ್ನು ಕೊಟ್ಟರೆ, ಜನರಿಗದು ಕಸವಾಗಿಯೋ ಕಲ್ಲು ಕೂಡಿದುದಾಗಿಯೋ ತಲ್ಪುತ್ತಿತ್ತು. ಪುಕ್ಕಟೆ ಔಷಧ ಕೊಡಲಿಕ್ಕೆಂದು ಅಲ್ಲಲ್ಲಿ ಆಸ್ಪತ್ರೆಗಳನ್ನು ತೆರೆದರೆ, ಔಷಧಿ ಬೆಲೆ ಪಡೆದು ಡಾಕ್ಟರುಗಳ ಜೇಬನ್ನು ತುಂಬುವುದು; ಎಂತಹದೋ ಬಣ್ಣದ ನೀರು ಔಷಧಿಯೆಂದು ಜನರ ಹೊಟ್ಟೆಯಲ್ಲಿ ಸೇರುವುದು. ಈ ಎಸ್. ಟಿ. ಬಸ್ಸುಗಳ ರೀತಿಯೋ ಜನತೆಗೆ ತೀರ ಅಪ್ರಯೋಜಕ. ಒಂದೇ ಎರಡೇ! ಸರಕಾರದ್ದೆಂದು ಹೇಳುವ ಯಾವ ಕ್ಷೇತ್ರದಲ್ಲಿ ಕಣ್ಣಿಟ್ಟು ನೋಡಿದರೂ, ಅನನುಕೂಲತೆ ನಿಷ್ಪ್ರಯೋಜಕತೆಗಳೇ ತಲೆಯೆತ್ತಿ ನಿಂತುದು ಎದ್ದು ಕಾಣುತ್ತದೆ. ನಮ್ಮ ಸರಕಾರದ ದುರ್ದೈವ........ಜನತೆಯ ದುರ್ದಶೆ!"

" ವೇಳೆಗಳೆಯುತ್ತಿದ್ದಂತೆ ನನ್ನ ದುರ್ದೈವ-ದುರ್ದಶೆಗಳೂ ನನ್ನ ಕಣ್ಣೆದುರು ಕುಣಿಯಲು ತೊಡಗಿದುವು. ವಯಸ್ಸು ನನಗೆ ಬಹಳವಾಗಿಲ್ಲವಾದರೂ, ನನ್ನ ಅನಾರೋಗ್ಯ ಪರಿಸ್ಥಿತಿಯು ನನ್ನಲ್ಲಿ ಮುಪ್ಪಿನ ಬಲಹೀನತೆಯನ್ನೇ ತಂದುಬಿಟ್ಟದೆ. ಇಂತಹ ನಾನು ಇಲ್ಲಿ ಬಸ್ಸಿನಲ್ಲಿ ಸ್ಥಳವನ್ನು ಹೇಗೆ ದೊರಕಿಸಿಕೊಳ್ಳಬೇಕು? ಸುಮ್ಮನೆ ಈ ಬಸ್ಸನ್ನು ನಂಬಿಬಂದಂತಾಯಿತು. ಎತ್ತಿನ ಗಾಡಿಯೊಂದಕ್ಕೆ ಬರಹೇಳಿ ಮೊದಲೇ ಕಾಗದ ಬರೆದಿದ್ದರೆ, ನಿದಾನವಾದರೂ ಸುರಕ್ಷಿತವಾಗಿ ಇಷ್ಟರಲ್ಲಿಯೆ ಊರನ್ನು ತಲ್ಪಬಹುದಾಗಿದ್ದಿತು. ಈಗ ಅದರ ಬಗ್ಗೆ ಯೋಚಿಸಿ ಉಪಯೋಗವೇನು?........

ಹಾಗೆಯೆ ಹೋಗಿ ಎಸ್. ಟಿ. ಆಫೀಸಿನಲ್ಲಿ ವಿಚಾರಿಸಿದೆ: 'ಒಂದು ಸೀಟನ್ನು ರಿಜರ್ವ್ ಮಾಡಿಕೊಡಿರಿ. ಅದಕ್ಕಾಗಿ ತಗಲುವ ಹೆಚ್ಚಿನ ಹಣವನ್ನು ನಾನು ಕೊಡುತ್ತೇನೆ' ಎಂದು ಹೇಳಿದೆ. 'ಹಳ್ಳಿಗೆ ಹೋಗುವ ಬಸ್ಸಿನಲ್ಲಿ ಸೀಟನ್ನು ರಿಜರ್ವ್ ಮಾಡಿಕೊಡಲಿಕ್ಕೆ ಬರುವುದಿಲ್ಲ!' ಎಂದು ಅಲ್ಲಿಯ ಅಧಿಕಾರಿಗಳು ನಿರುಪಾಯಭಾವದಿಂದ ಉತ್ತರಕೊಟ್ಟರು. ನಾನು ನಿರಾಶನಾದೆ. ನಿರಾಶೆ ಇಲ್ಲದ ಬಲವನ್ನು ಹೆಚ್ಚಿಸುವುದಂತೆ. ನಾನೂ ನನ್ನ ಮನೋಬಲವನ್ನು ಹುರಿಗೊಳಿಸಿಕೊಳ್ಳಲು ತೊಡಗಿದೆ. ಆದರೆ ಆಗಾಗ ಬಸ್ಸನ್ನು ಹತ್ತಿ ಹೋಗುವುದು ನೆನಪಾಗಿ, ಗುಂಡಿಗೆಯು ನಡುಗುವುದು. ಆಪತ್ತಿ ಉಪಾಯದ ತವರುಮನೆ. ಒಂದು ಏರ್ಪಾಡನ್ನು ಕಂಡು ಹಿಡಿದೆ.

ರಾತ್ರಿಯ ಏಳುವರೆ ಗಂಟೆಯಾದರೂ, ನಮ್ಮ ಹಳ್ಳಿಗೆ ಹೋಗಬೇಕಾದ ಬಸ್ಸು, ಸ್ಟ್ಯಾಂಡಿನ ಬಯಲಲ್ಲಿ ಕಾಣಲಿಲ್ಲ. ಜನಜಂಗುಳಿ ಕಾತರಭಾವದಿಂದ ದಾರಿಕಾಯುತ್ತ ಕುಳಿತಿದ್ದಿತು. ಜಾತ್ರೆ-ನಿಬ್ಬಣದ ಕಾಲವದು. ಪ್ರವಾಸಿಕರ ಸಂಖ್ಯೆ ಒಂದಕ್ಕೆ ಹತ್ತರಷ್ಟಾಗಿತ್ತು. ಅದನ್ನು ನೋಡಿದಂತೆಲ್ಲ ನನ್ನ ಮುಖದ ಮೇಲೆ ದೈನ್ಯಭಾವ ಬೆಳೆಯುತ್ತ ನಡೆಯಿತು. ನಿರಾಶೆ ಮನದಲ್ಲೆಲ್ಲ ವ್ಯಾಪಿಸುತ್ತಲಿತ್ತು. x x x ಗಲ್ಲಿನಿಂದ ಬಂದ ಬಸ್ಸೇ ಮುಂದೆ ನಮ್ಮ ಹಳ್ಳಿಯ ಕಡೆಗೆ ಹೊರಡುವುದೆಂದು ಗೊತ್ತಾಯಿತು. ಆದರೆ ಎಂಟು ಗಂಟೆ ರಾತ್ರಿಯಾದರೂ ಬಸ್ಸು ಬರುವ ಸುದ್ದಿಯೇ ಇಲ್ಲ. ಆ ಸ್ಟ್ಯಾಂಡಿನಿಂದ ಕೊನೆಯದಾಗಿ ಬಿಡುವುದೆಂದರೆ ನಮ್ಮ ಬಸ್ಸೇ! ಮಿಕ್ಕ ಕಡೆಗೆ ಹೋಗುವ ಯಾವ ಬಸ್ಸು ಇರದಿದ್ದರೂ, ಸ್ಟ್ಯಾಂಡಿನ ಮೇಲಿನ ಪ್ರಯಾಣಿಕರ ಸಂಖ್ಯೆಯೇನೂ ಕಡಿಮೆಯಾಗಿರಲಿಲ್ಲ. ಹೆಚ್ಚುತ್ತಲಿತ್ತೇ ಹೊರತು ಕಡಿಮೆಯಾಗುತ್ತಿರಲಿಲ್ಲ. "ಇಷ್ಟೆಲ್ಲ ಜನರನ್ನೂ ಒಮ್ಮೆಲೆ ಒಯ್ಯುವಂತಹ ಆ ಬಸ್ಸು ಎಷ್ಟು ದೊಡ್ಡದಾಗಿರಬಹುದು?........" ಎಂದು ಯೋಚಿಸುತ್ತ ನಿಂತಿರುವಾಗಲೇ, ದೂರದಿಂದ ಬಸ್ಸಿನ ಮಹಿಷಗರ್ಜನೆ ಕೇಳಿಸಿತು. ಜನರು ಒಮ್ಮೆಲೆ ಜಾಗೃತರಾದರು. ಎಲ್ಲರಲ್ಲಿಯೂ ಚಟುವಟಿಕೆ ಆಟ ನಡೆಯಿಸಿತು. ಬಸ್ಸು ನಿಲ್ಲುವ ಸ್ಥಳದ ಕಡೆಗೆ ಗುಂಪುಗುಂಪಾಗಿಯೆ ಓಡಲು ತೊಡಗಿದರು. ಹಮಾಲನೊಬ್ಬನಿಗೆ ಕಾಣಿಕೆಯ ಆಶೆ ತೋರಿಸಿ, ನನಗೆ ಸ್ಥಳ ಹಿಡಿದುಕೊಡುವಂತೆ ಮೊದಲೇ ಹೇಳಿಟ್ಟದ್ದೆನಾದರೂ, ನಾನೂ ಬಸ್ಸಿನ ಕಡೆಗೆ ಗಡಿಬಿಡಿಯಿಂದ ಓಡಿದೆ. ಓಡಿ ಉಪಯೋಗವೇನು? ಬಸ್ಸಿಗಿರುವ ಆ ಒಂದೆ ಒಂದು ಪ್ರವೇಶದ್ವಾರದೆದುರು ಮಲ್ಲಯುದ್ಧ-ಮುಷ್ಟಿಯುದ್ಧಗಳೇ ನಡೆದಿದ್ದುವು. ನನ್ನ ಸಾಮಾನು ಹೊತ್ತುಕೊಂಡ ಹಮಾಲ, ನಿತ್ಯದ ಅಭ್ಯಾಸದಿಂದಲೊ, ಕಂಡಕ್ಟರನ ಪರಿಚಯದ ಮೂಲಕವೊ, ಮೋಟಾರಿನೊಳಗೆ ನುಗ್ಗಿ ಎಡೆ ಪಡೆದುದನ್ನು ನೋಡಿದೆ. ಮನದ ಭಾರ ಸ್ವಲ್ಪ ಕಡಿಮೆಯಾದಂತೆನಿಸಿತು. ನಿಶ್ಚಿಂತಭಾವದಿಂದ, ಗುರಿಯನ್ನು ಸಾಧಿಸುವುದಕ್ಕಾಗಿ ಪ್ರಯಾಣಿಕರು ನಡೆಯಿಸಿದ ಯುದ್ಧ ಚಟುವಟಿಕೆಗಳನ್ನು ನೋಡುತ್ತ ನಿಂತುಕೊಂಡೆ.

ಭಾರತದಲ್ಲಿ ಆರ್ಥಿಕಸಮತಾವಾದವನ್ನು ತರಬೇಕೆಂದು ಅನೇಕ ಉತ್ಸಾಹಿಗಳು ಪ್ರಯತ್ನ ನಡೆಯಿಸಿದ್ದಾರೆನೊ ಸರಿಯೆ! ಆದರೆ ನಿಸರ್ಗವು ಸ್ವಾಭಾವಿಕವಾಗಿಯೆ ಉಂಟುಮಾಡುತ್ತಿರುವ ಶಕ್ತಿವೈಷಮ್ಯವನ್ನು ಕಂಡು, ಅದರಲ್ಲಿ ಸಮತೆಯನ್ನು ತಂದು ಹಾಕುವಂತಹ ಚಟುವಟಿಕೆಗಳನ್ನು ನಡೆಯಿಸುವ ಉತ್ಸಾಹಿಗಳು ನಮ್ಮ ನಾಡಿನಲ್ಲಿ ಮೊದಲು ಬೇಕು-ಎನ್ನಿಸಿತು. ಬಲದ ಬೆಲೆ ಎಂತಹದೆಂಬುದು ಪ್ರತ್ಯಕ್ಷ ಉದಾಹರಣೆಯಿಂದ ಕಂಡುಬಂದಿತು ನನಗಂದು. 'ಎಸ್. ಟಿ. ಬಸ್ಸಿನಲ್ಲಿ ಸ್ಥಳ ದೊರಕಿಸಿಕೊಳ್ಳಬೇಕಾದರೆ, ಎಲ್ಲರೂ ಗರಡಿಮನೆಯ ಬಂಟರಾಗಬೇಕು. ಅದಕ್ಕಾಗಿ ಹಳ್ಳಿಹಳ್ಳಿಗೂ—ಹೆಂಗುಸರಿಗಾಗಿ ಕೂಡ—ಗರಡಿಮನೆಗಳನ್ನು ತೆರೆಯಬೇಕು' ಎಂಬ ವಿಚಾರ ತಲೆಯಲ್ಲಿ ಮೂಡಿತು.

ನುಗ್ಗಿ ಹೋಗುವ ಶಕ್ತಿಯಿದ್ದವರೆಲ್ಲ, ಒಬ್ಬರ ಹಿಂದೊಬ್ಬರಂತೆ ಬಸ್ಸಿನ ಬಾಗಿಲಿಂದ ಒಳಸೇರತೊಡಗಿದರು. 'ಸೀಟು'ಗಳೆಲ್ಲ ಮುಗಿದುವು; 'ಸ್ಟ್ಯಾಂಡು'ಗಳು ಉಳಿದಿದ್ದುವು. ಬಸ್ಸಿನಲ್ಲಿ ಕಾಲಿಡಲು ಎಡೆಯಿರುವಲ್ಲೆಲ್ಲ ಪ್ರಯಾಣಿಕರು ನುಗ್ಗಿ ನಿಂತುಕೊಂಡರು. ೪೦-೪೨ ಜನರಿಗಾಗಿ ಇದ್ದ ಆ ಬಸ್ಸಿನಲ್ಲಿ ನೂರಕ್ಕೆ ಮಿಕ್ಕಿ ಜನರು ಸೇರಿಕೊಂಡಿದ್ದರು. ಹೊರಗೆ ಇನ್ನೂ, ಒಳಗೆ ಸೇರಬೇಕೆನ್ನುವವರ ಗುದ್ದಾಟ ಸಾಗಿಯೆ ಇದ್ದಿತು. ಇನ್ನು ಒಂದು ಪಿಳ್ಳೆಯನ್ನೂ ತುರುಕುವುದಕ್ಕೆ ಸಾಧ್ಯವಿಲ್ಲವೆಂದು ಕಂಡಕ್ಟರ್ ಸಾಹೇಬನಿಗೆ ಕಂಡಾಗ, ಅವನು ಬಾಗಿಲನ್ನು ಗಟ್ಟಿಯಾಗಿ ಹಾಕಿಬಿಟ್ಟ. ಕೆಳಗೆ ಉಳಿದವರೆಂದರೆ ದುರ್ಬಲರಾದ ಹೆಣ್ಣುಮಕ್ಕಳು, ಮುದುಕರು! ನಿರಾಶರಾದ ಅವರಿಗೆ ಕೋಪ ಬಂದು ಬಿಟ್ಟಿತು. ಕೋಪ ಬಂದಮೇಲೆ ಯಾರನ್ನಾದರೂ ಬೈಯಲೇ ಬೇಕಲ್ಲವೇ ? ಎಲ್ಲರೂ ಕಂಡಕ್ಟರನಿಗೆ ಸಾವಿರಾರು ಶಾಪಗಳನ್ನು ಕೊಡುತ್ತ ಬಸ್ಸಿನಿಂದ ದೂರಸರಿಯತೊಡಗಿದರು. ಆಗಲೇ ಒಳಗೆ ಸೇರಿದ್ದ ನಮ್ಮ ಹಮಾಲ, ಹೇಗೋ ದಾರಿಮಾಡಿಕೊಂಡು ಬಾಗಿಲನ್ನು ತೆಗೆದು ಹೊರಗೆ ಬಂದ. ನನ್ನನ್ನು ಬಸ್ಸಿನೊಳಕ್ಕೆ ಸೇರಿಸಿ, ಕಾಣಿಕೆ ಪಡೆದುಕೊಂಡು ಹೊರಟುಹೋದ. ನಾನು ಹೋಗುವ ಹಳ್ಳಿಗೆ ಬಸ್ಸಿನ ಬಾಡಿಗೆ ಬರೀ ಒಂಬತ್ತು ಆಣೆ; ಆದರೆ ಹಮಾಲನಿಗೆ ಕೊಡಬೇಕಾಗಿ ಬಂದ ಕಾಣಿಕೆ ಒಂದು ರೂಪಾಯಿ. ಅಷ್ಟನ್ನು ಕೊಡದೆ ಹೋಗಿದ್ದರೆ, ನನಗಂದು ಬಸ್ಸಿನಲ್ಲಿ ಪ್ರವೇಶಸಿಕ್ಕುವುದು ಸಾಧ್ಯವೇ ಇರಲಿಲ್ಲ. ಇಂದಿನ ನಾಗರಿಕಜೀವನದಲ್ಲಿ ಬದುಕಿ-ಬಾಳುವುದಕ್ಕೆ ಸಾಕಷ್ಟು ದೇಹಬಲವಾದರೂ ಇರಬೇಕು; ಇಲ್ಲವೆ ಸಾಕಷ್ಟು ಧನ ಬಲವಾದರೂ ಇರಬೇಕು.

ಬಸ್ಸಿನೊಳಗೆ ಸೇರಿ, ಹಮಾಲನು ನನಗಾಗಿ ಹಿಡಿದಿಟ್ಟ ಸೀಟನ್ನು ಕಷ್ಟದಿಂದಲೇ ಸಂಧಿಸಿ ಕುಳಿತುಕೊಂಡೆ. ಕಂಡಕ್ಟರ್ ಸಾಹೇಬ, ಅಂತಹ ಜನಸಂದಣಿಯ ಸಂಖ್ಯೆಯನ್ನು ಹೇಗೆ ಎಣಿಸಿದನೋ! ಎಲ್ಲರಿಗೂ ಟಿಕೀಟನ್ನು ಕೊಟ್ಟ. ಒಳಗಿನ ಜನರೆಲ್ಲ ಕುತ್ತುಸುರು ಬಿಡುತ್ತಿದ್ದರು. ಅಂತಹದರಲ್ಲಿಯೇ 'ಕಂಟ್ರೋಲರ್' ಬಂದು ಜನರನ್ನು ಎಣಿಸಿಕೊಳ್ಳತೊಡಗಿದ. ನಿತ್ಯದ ಅಭ್ಯಾಸ. ಲೆಕ್ಕಾಚಾರ ಸರಿಹೋಯಿತು. 'ಗಣಗಣ' ಗಂಟೆಯಾಯಿತು. ಬಸ್ಸು ಮತ್ತೆ ಮುಂದುವರಿಯುವ ಚೈತನ್ಯವನ್ನು ತೋರಿಸತೊಡಗಿತು. ಸ್ಥಳದೊರೆಯದೆ ನಿರಾಶರಾಗಿ ಹೊರಗೆ ನಿಂತ ಪ್ರಯಾಣಿಕರ ಕರುಣಾಕ್ರಂದನಗಳು ಕಿವಿಗೆ ಬೀಳುತ್ತಿರುವಾಗಲೇ, ಬಸ್ಸು ಭರ್ರೆಂದು ಮುಂದೆ ಸಾಗಿತು.

ನಮ್ಮ ಹಳ್ಳಿಗೆ ಲೈನ್‌ದಾರಿಯಾದುದೇನೋ ನಿಜ. ಆದರೆ ಅದು ಎಂತಹದು! ಕೇವಲ ಮಣ್ಣನ್ನೆ ಕಡಿದು ಏರಿಸಿದ ಕಚ್ಚಾಲೈನು. ಭಾರವಾದ ಬಸ್ಸಿನ ರಭಸದ ನಡಿಗೆಗೆ ಧೂಳಿ ಎದ್ದು, ಬಸ್ಸಿನೊಳಗೆ ತುಂಬತೊಡಗಿತು. ಕತ್ತಲೆಯಲ್ಲಿ ಧೂಳಿ ಕಣ್ಣಿಗೆ ಕಾಣುತ್ತಿರಲಿಲ್ಲವಾದರೂ, ಕಣ್ಣು-ಮೂಗು-ಬಾಯಿಗಳಲ್ಲಿ ತುಂಬುತ್ತ ಅದು ತನ್ನ ಸ್ವರೂಪದ ಪರಿಚಯ ಮಾಡಿಕೊಡುತ್ತಿತ್ತು. ಬಸ್ಸಿನಲ್ಲಿ ನಿಂತಿದ್ದ ಪ್ರಯಾಣಿಕರ ದೇಹದ ಮರೆ ಇರದೆ ಹೋಗಿದ್ದರೆ, ಕುಳಿತಿದ್ದವರೆಲ್ಲ ಧೂಳಿಯಲ್ಲಿ ಹೂತುಹೋಗಬಹುದಾಗಿದ್ದಿತೇನೋ ! 'ದೇವರು ಎಲ್ಲವನ್ನೂ ಯಾವಾಗಲೂ ನಮ್ಮ ಒಳ್ಳೆಯದಕ್ಕಾಗಿ ಮಾಡುತ್ತಾನೆ !'

ದಾರಿಯಲ್ಲಿ ಸಿಕ್ಕಿದ ಮೊದಲನೆಯ ಹಳ್ಳಿಯಲ್ಲಿ ಬಸ್ಸುನಿಂತಾಗ, ಇಳಿಯುವವರ ಏರುವವರ ಚಳವಳಿ ಸ್ವಲ್ಪ ಕಂಡು ಬಂದಿತಾದರೂ, ಕಂಡಕ್ಟರನು ಪ್ರಸಂಗಾವಧಾನವನ್ನು ತೋರಿಸಿ, ವಿಶೇಷ ಗದ್ದಲಗಲಾಟೆಗಳು ನಡೆಯದಂತೆ ಮಾಡಿದನು. ಬಸ್ಸು ಮತ್ತೆ ಮುಂದುವರಿಯಿತು. ಬರಲಿರುವ ಹಳ್ಳಿಯೆ ನಮ್ಮದು. ಹಳ್ಳಿ ಹತ್ತಿರ ಹತ್ತಿರಕ್ಕೆ ಬಂದಂತೆ, ನನ್ನ ಮೈಯಲ್ಲಿ ಮಿಂಚಿನ ಹೊಳೆಯು ತುಳುಕಾಡತೊಡಗಿತು. ಎಷ್ಟೋ ದಿನಗಳ ಮೇಲೆ ನನಗೆ ನನ್ನ ಹಳ್ಳಿಯ ದರ್ಶನವಾಗಲಿದ್ದಿತು. ಆತುರಭಾವ ಕರುಳನ್ನು ಕುಣಿಸಲು ತೊಡಗಿತು.

ಬಸ್ಸು ನಮ್ಮ ಹಳ್ಳಿಯನ್ನು ತೀರ ಸಮೀಪಿಸಿತು. ದೃಷ್ಟಿಗಳನ್ನು ದೂರಕ್ಕೆ ಚಾಚಿ ನೋಡುತ್ತಿರುವಾಗ, ನಮ್ಮ ಹಳ್ಳಿಯ ಬಳಿಯಲ್ಲಿ, ಲೈನ್‌ದಾರಿಗೆ ಸಮಾಂತರವಾಗಿ, ಎರಡೂ ಪಕ್ಕಗಳಲ್ಲಿ ಝಗಝಗಿಸುವ ಬೆಳಕಿನಿಂದ ಕೂಡಿದ ಕಟ್ಟಡಗಳು ಕಾಣಲು ತೊಡಗಿದುವು. ನಾನು ಹಳ್ಳಿಯನ್ನುಬಿಟ್ಟಾಗ ಆ ಎಡೆಯೆಲ್ಲ ಬೀಳು-ಬಯಲಾಗಿದ್ದಿತು. ಈಗ ಬೆಳಕಿನಿಂದ ಕೂಡಿದ ಕಟ್ಟಡಗಳು ಕಾಣುತ್ತಲಿವೆ. ಇದೇನು ಮಯನ ಮಾಯಾಲೀಲೆಯೋ! —ಎಂದು ಯೋಚಿಸುತ್ತಿರುವಾಗಲೇ, ಬಸ್ಸು ಬಂದು ಅಲ್ಲಿಯೆ ನಿಂತುಕೊಂಡಿತು. ಇಳಿಯುವವರೆಲ್ಲ ಇಳಿದರು. ನಾನೂ ಇಳಿದೆ; ವಿಸ್ಮಯದೃಷ್ಟಿಗಳನ್ನು ಅತ್ತಿತ್ತ ಹೊರಳಿಸಿ ನೋಡಿದೆ. ಆ ಬೆಳಕಿನ ನಿಲಯಗಳೆಲ್ಲ ಚಹದ ಅಂಗಡಿಗಳು. ಒಂದಲ್ಲ, ಎರಡಲ್ಲ, ದಾರಿಯ ಆ ಪಕ್ಕದಲ್ಲಿ ಸಾಲಾಗಿ ನಾಲ್ಕು; ಈ ಪಕ್ಕದಲ್ಲಿ ಐದು. ಒಟ್ಟು ಒಂಬತ್ತು ಚಹದ ಅಂಗಡಿಗಳು. ಎಲ್ಲ ಅಂಗಡಿಗಳಿಂದಲೂ ಪೆಟ್ರೋಮ್ಯಾಕ್ಸ್ ದೀಪಗಳ ಪ್ರಕಾಶ ಹೊರಕ್ಕೆ ತೂರಿಬರುತ್ತಲಿದೆ. ಒಂದೆರಡು ಅಂಗಡಿಗಳಲ್ಲಿ ರೇಡಿಯೋ ಯಂತ್ರ ಇದ್ದಂತೆ ಕಂಡಿತು ಬಸ್ಸುನಿಂತ ಸ್ಥಳದ ಅಂಗಡಿಯಲ್ಲಿ ಗ್ರಾಮೊಫೋನು 'ಇನ್ನೂ ಯಾಕ ಬರಲಿಲ್ಲವ್ವಾ ಹುಬ್ಬಳ್ಳಿಯಾವಾ! ' ಎಂಬ ಹಾಡನ್ನು ಹಾಡುತ್ತಿತ್ತು. ಪ್ರತಿಯೊಂದು ಅಂಗಡಿಯಲ್ಲಿಯೂ ಗಿರಾಕಿಗಳ ಗುಂಪು ಕುಳಿತಿತ್ತು. ನೋಡಿ ತುಂಬ ಆಶ್ಚರ್ಯವಾಯಿತು. ಸಂಜೆಯಾದೊಡನೆಯೆ ಕತ್ತಲೆಯ ಕುಪ್ಪೆಯಾಗಿ ಕುಳಿತಿರುತ್ತಿದ್ದ ಹಳ್ಳಿ, ಈಗ ಬೆಳಕಿನ ನೆಲೆಯಾಗಿರುವುದನ್ನು ಕಂಡು, ಒಂದು ಬಗೆಯ ಹೆಮ್ಮೆಯೂ ಎನಿಸಿತು. ಈ ಆಶ್ಚರ್ಯ–ಹೆಮ್ಮೆಗಳಲ್ಲಿ ನಾನು ಮುಳುಗಿ ನಿಂತಿರುವಾಗಲೇ, ನನ್ನನ್ನು ಸ್ವಾಗತಿಸಲು ಬಂದ ನಮ್ಮ ಅಣ್ಣ (ದೊಡ್ಡಪ್ಪನ ಮಗ) ನನ್ನು ನೋಡಿದೆ. ಮೊದಲ ನೋಟದ ಮಾತು-ನಗೆಗಳು ಮುಗಿದ ಮೇಲೆ, ಸಾಮಾನುಗಳನ್ನು ಹೊರಸಿಕೊಂಡು ಇಬ್ಬರೂ ಕೂಡಿ ಮನೆಗೆ ಹೋದೆವು.

ಪ್ರಯಾಣದ ಕಾಲದ ಮಾತುಗಳೇ ಬೆಳೆದುಬಿಟ್ಟುವು. ಹಳ್ಳಿಗೆ ಹೋದ ಮೇಲೆ ಬಂದ ಕೆಲವು ನನ್ನ ಅನುಭವಗಳನ್ನು ಇನ್ನೊಂದು ಸಲ ಹೇಳುತ್ತೇನೆ. ನಮಸ್ತೇ !

ಅಹಲ್ಯೆ

ಶ್ರೀ. ಶಾಂತಿನಾಥ ದೇಸಾಯಿ, ಎಂ. ಎ ಮುಂಬಯಿ

ಆ ದಿನ....ಒಂದಾನೊಂದು ದಿನ
ನಾನು ಕಲ್ಲಾದೆ.
ಗೌತಮುನಿ ರೌದ್ರಶಾಪಕ್ಕೆ ಈಡಾದೆ :
'ಕಲ್ಲಾಗು- ಕಲ್ಲಾಗು'
ಕಣ್ಣೀರು ಹರಿಸಿದ್ದೆ ಸೆರಗೊಡ್ಡಿ ಬೇಡಿದ್ದೆ :
'ನಿರ್ದೋಷಿ ನಾನು, ನಿಷ್ಪಾಪಿ ನಾನು'
ನನ್ನೊಲವಿನ ಪೂರ್ಣತೆಯೆ ಮುಳುವಾಯಿತು ನನಗೆ
ಅರಿವಿಲ್ಲದೆ ಮೈಮರೆತೆ ಪಾಪವನು ಮಾಡಿದೆ,
ಶಾಪವನು ಪಡೆದೆ :
'ಕಲ್ಲಾಗು — ಕಲ್ಲಾಗು'.
ನಾನಿಲ್ಲಿ ಕಲ್ಲಾಗಿ ಕುಳಿತೆ
ಯಾರದೊ ಅಮೃತಸ್ಪರ್ಶಕೆ
ಕಾತರಿಸಿ ಕುಳಿತೆ.

ಎಲ್ಲಿಹುದು ಆ ಪಾಪ, ಆ ನೋವು, ಆ ನೆನವು
ಕಲ್ಲಿನೊಳು ಕಲ್ಲಾಗಿ ಕರಗಿ ಹೋಗಿಹವು.
ಈಗ
ಬಂದುದನು ಅನುಭವಿಸಿ
ಬರುವುದಕೆ ಕಾದಿಹೆನು.
ಬಂದುದೆಲ್ಲವು ಬರಲಿ
ದೈವಗರ್ಭವು ಹೆರಲಿ
ಎಲ್ಲ ಕೈವಾಡಕ್ಕೆ
ಎದೆಗೊಟ್ಟು ನಿಂತಿಹೆನು.

ಈ ಕಲ್ಲಿನಲಿ ಕಾಣುತಿದೆ ಮತ್ತೊಂದು ಜೀವನ :
ಗಾಳಿ ಮಳೆ ಬಿಸಿಲು ಚಳಿ
ಮಿಟುಕಲಾರವು ನನ್ನ
ತುಡುಕಲಾರವು ಮನವ....
ಎಲ್ಲವೂ ಕಲ್ಲು-ಕಲ್ಲು !

ಅದು ನೋಡು ಆ ಚಿಕ್ಕೆ
ಅದಕಿಹುದು ಮಿಣುಕು....
ಅನಂತ ಮಿಣುಕು !
ಅದನೆ ನಿಟ್ಟಿಸುತ್ತ ನಾನು
ಶೂನ್ಯ ಚಿತ್ತಳಾಗಿ ಕಲ್ಲು
ನಿಂತಿರುವೆ ನಿಲ್ಲುವೆ.
ಭಾಗ್ಯ ಬರಲಿ ಇಲ್ಲ ಬಿಡಲಿ
ಕಲ್ಲೆ ನನ್ನ ಭಾಗ್ಯ-ಮುಕ್ತಿ
ಕಲ್ಲಿನಲೆ ಮೂಡುತಿದೆ ಮತ್ತೊಂದು ಜೀವನ
ಮುಕ್ತ ಜೀವನ.

ಕೆಳಗೆ ಭೂಮಿ ಮೇಲೆ ಬಾನು
ಅಲ್ಲಿ ಚಿಕ್ಕೆ ಇಲ್ಲಿ ನಾನು
ವಿಶ್ವದೆರಡು ಹನಿಗಳು........
ಜೀವದರ್ಶಿ ತಾರೆಯೇ,
ರಾಮ ಬರಲಿ ಇಲ್ಲ ಬಿಡಲಿ,
ಬಂದರೂ
ಭವಿತವ್ಯದ ದೈವದಿಂದ
ಪುನಃ ನಾನು ಜೀವಂತಳಾದರೂ
ಈ ಕಲ್ಲು ಮನವೆ ನನಗೆ ಇರಲಿ
ಮುಕ್ತಿ ನನ್ನ ಭಾಗ್ಯಕಿರಲಿ........
ಕಲ್ಲೆ ನನ್ನ ದೈವ-ಪ್ರಾಣ
ಅದುವೆ ನನ್ನ ಗೌತಮುನಿಗೆ
ಪ್ರೇಮಾರ್ಪಣ !

ನುಡಿಮುತ್ತುಗಳು

ತಾನು ಸುಖವಾಗಿ ಬದುಕಬೇಕೆನ್ನುವವನು ನೆರೆಯವರ ಸುಖದ ಬದುಕಿನ ಕಡೆಗೆ ತೆರೆದ ಕಣ್ಣುಗಳಿಂದ ನೋಡುತ್ತಿರಬೇಕು. ನೆರೆಯವರ ದುಃಖಜೀವನವು ನಿನ್ನ ಸುಖಜೀವನವನ್ನು ತಿಂದು ಹಾಕುವುದು.

ನಾಲಗೆಯಿದೆಯೆಂದು ಬಾಯಿಗೆ ಬಂದುದನ್ನು ನುಡಿಯಬೇಡ! ಒಳಗಿನದನ್ನೆಲ್ಲ ಹೊರಗೆ ಗಳುಹುತ್ತಲಿದ್ದರೆ, ಅಡಿಗಡಿಗೂ ಕಲಹದ ಮುಖ ತಪ್ಪಿದುದಲ್ಲ. ತಿಳಿದು ತೂಗಿ ನುಡಿವವನು ಉಳಿದುಬಾಳುವನು.

ಭಕ್ತಿಯೋಗ

(ಆಕಾಶವಾಣಿ ಭಾಷಣ)

ಶ್ರೀ. ಷ. ಸಂಗನಬಸವ ಶಿವಯೋಗಿಗಳು, ಬಂಥನಾಳ ಸುಕ್ಷೇತ್ರ

ಜಗತ್ತಿನಲ್ಲಿ, ದೇವರು ಇದ್ದಾನೆಂದು ತಿಳಿದು ಬಾಳುವವರ ಸಂಖ್ಯೆಯೆ ಹೆಚ್ಚಾಗಿದೆ. ದೇವರಿದ್ದಾನೆನ್ನುವವರಿಗೆ ಅವನ ವಿಷಯಕವಾದ ಭಕ್ತಿಯು ಬೇಕೇಬೇಕು. ಭಕ್ತಿಯೆಂದರೇನು? ಜೀವನದಲ್ಲಿ ಅದರ ಸ್ಥಾನವೆಂತಹದು?

ಮಾನವನು ಮಾಯಾಬಂಧನದಿಂದ ಮುಕ್ತನಾಗಲು, ಮತ್ತು **ಸತ್ಯವಾದ**, ಶಾಶ್ವತವಾದ ಸುಖಶಾಂತಿ ಸಮಾಧಾನಗಳನ್ನು ಹೊಂದಲು ಹಿಂದೂಧರ್ಮದಲ್ಲಿ ಮಾರ್ಗತ್ರಯಗಳೇ ಮುಖ್ಯವಾದುವುಗಳೆಂದು ಶ್ರುತಿಯು ಸಾರಿದೆ. ವೇದದಲ್ಲಿ ಈ ಮಾರ್ಗತ್ರಯಗಳಿಗೆ ಕರ್ಮಕಾಂಡವೆಂತಲೂ, ಉಪಾಸನಾಕಾಂಡವೆಂತಲೂ, ಜ್ಞಾನಕಾಂಡವೆಂತಲೂ,— ಅರ್ಥಾತ್ ಕರ್ಮಯೋಗ, ಭಕ್ತಿಯೋಗ, ಜ್ಞಾನಯೋಗಗಳೆಂದು,— ಸಂಬೋಧಿಸಲಾಗಿದೆ. ಈ ಮೂರು ಮಾರ್ಗಗಳಲ್ಲಿ ಭಕ್ತಿಯೋಗವು ಅತಿಶಯ ಸುಲಭ ಹಾಗೂ ಸರಳವಾಗಿರುವುದಲ್ಲದೆ, ಅಂತಹ ಪರಂಧಾಮಕ್ಕೆ ಕೈಹಿಡಿದು ಕರೆದೊಯ್ಯುವ ಸ್ವಾಭಾವಿಕವಾದ ಮಾರ್ಗವಾಗಿದೆ.

ಭಕ್ತಿಯೋಗವೆಂದರೆ ಪರಮೇಶ್ವರನನ್ನು ಅಂತಃಕರಣಪೂರ್ವಕವಾಗಿ ಶೋಧಿಸುವುದು. ಈ ಶೋಧನೆಯು ಪ್ರೇಮದಲ್ಲಿ ಪ್ರಾರಂಭವಾಗಿ ಪ್ರೇಮದಲ್ಲಿಯೇ ಕೊನೆಗೊಳ್ಳುವುದು. ಇದನ್ನೇ ಪುರಾತನ ಋಷಿಯಾದ ಶಾಂಡಿಲ್ಯನು "**ಸಾಪರಾನುರಕ್ತಿರೀಶ್ವರೇ**" ಎಂದು ತನ್ನ ಭಕ್ತಿಸೂತ್ರದಲ್ಲಿ ಹೇಳಿದ್ದಾನೆ. ನಾರದಋಷಿಯು ಕೂಡ "ಸಈಶ್ವರಃ ಅನಿರ್ವಚನೀಯ ಪ್ರೇಮಸ್ವರೂಪಃ" ಎಂದು ತನ್ನ ಭಕ್ತಿಸೂತ್ರದಲ್ಲಿ ಹೇಳಿದ್ದಾನೆ. ಎಂದರೆ ದೇವರು ಪ್ರೇಮಸ್ವರೂಪನಾಗಿದ್ದು, ಆತನಲ್ಲಿ ತ್ರಿಕರಣಪೂರ್ವಕವಾಗಿ ಉಚ್ಚತಮ ಪ್ರೇಮವನ್ನಿಡುವುದೇ ಭಕ್ತಿಯೋಗವೆಂದು ಹೇಳಿರುವರು.

ಈ ಪ್ರಪಂಚವೆಲ್ಲವೂ ಪ್ರೇಮದ ಆಕರ್ಷಣಶಕ್ತಿಯಿಂದಲೇ ನಿಂತಿದೆ. ಸಮಾಜದಲ್ಲಿ ಯಾವುದು ಉದಾತ್ತವಾದದ್ದು, ಉತ್ತಮವಾದದ್ದು ಮತ್ತು ಉತ್ಕರ್ಷವಾದದ್ದಿದೆಯೋ, ಅದೆಲ್ಲವೂ ಪ್ರೇಮದಿಂದಲೇ ಉದ್ಭವವಾಗಿದೆ. ಅದರಂತೆಯೆ ಕೀಳಾದ, ಕೆಡುಕಾದ ರಾಕ್ಷಸೀವೃತ್ತಿಯು ಕೂಡ ಪ್ರೇಮದಲ್ಲಿಯೇ ಉಗಮವಾಗಿದೆ. ವ್ಯತ್ಯಾಸವಿಷ್ಟೆ: ಎರಡನೆಯ ಪ್ರಕಾರದಲ್ಲಿ ಪ್ರೇಮದ ದುರುಪಯೋಗವಾಗಿರುತ್ತದೆ. ಒಬ್ಬನು ಬಹು ಪರೋಪಕಾರಿಯಾಗಿದ್ದಾನೆ—ತನ್ನಲ್ಲಿದ್ದುದನ್ನೆಲ್ಲ ಬಡವರಿಗೂ ಅನಾಥರಿಗೂ ದಾನಮಾಡುವ ಭಾವದವನಾಗಿರುವನೆಂದು ತಿಳಿಯುವಾ. ಮತ್ತೊಬ್ಬನು ಅನ್ಯರಿಗೆ ಅನ್ಯಾಯ ಬಗೆದು, ಮೋಸಮಾಡಿ, ತನ್ನ ಸ್ವಾರ್ಥವನ್ನೇ ಸಾಧಿಸುತ್ತಿರುವನೆಂದು ತಿಳಿಯುವಾ! ಹೀಗೆ ಪರಸ್ಪರ ವಿರೋಧವಾದ ಈ ಕೃತಿಗಳಿಗೆ, ಮೂಲ ಭಾವನೆಯು ಮಾತ್ರ ಒಂದೇ ಆಗಿರುವುದು. ಪರೋಪಕಾರಿಯಾದ ಮನುಷ್ಯನ ಪ್ರೇಮವು ಅನ್ಯರ ಮೇಲಿದ್ದರೆ, ಸ್ವಾರ್ಥಸಾಧಕನ ಪ್ರೇಮವು ತನ್ನ ಮೇಲಿರುವುದು. ಅಂತೂ ಈ ಎರಡೂ ಕಾರ್ಯಗಳಿಗೂ ಮೂಲಕಾರಣವಾಗಿರುವ ಪ್ರೇಮವು ಒಂದೇ ಆಗಿರುವುದು. ಸಚ್ಛೀಲ ಮನುಷ್ಯನಲ್ಲಿರುವ ಪ್ರೇಮವು ಯೋಗ್ಯದಿಶೆಯಲ್ಲಿ ಸಾಗಿದ್ದರೆ, ದುಶ್ಶೀಲ ಮನುಷ್ಯನಲ್ಲಿಯ ಪ್ರೇಮವು ತಪ್ಪುದಿಶೆಯಲ್ಲಿ ಸಾಗಿರುವುದು. ಈ ಪ್ರಕಾರವಾಗಿ ಮಾನವನಲ್ಲಿ ಸ್ವಾಭಾವಿಕವಾಗಿರುವ ಪ್ರೇಮದ ಪ್ರಮೇಯವನ್ನು ತಿಳಿದುಕೊಂಡು, ಅದರ ಸದುಪಯೋಗ ಮಾಡಿಕೊಳ್ಳುವುದೇ ಭಕ್ತಿಯೋಗವಾಗಿರುವುದು.

ಮನುಷ್ಯನಲ್ಲಿಯ ನೈಸರ್ಗಿಕವಾಗಿರುವ ಮತ್ತು ಸಹಜವಾಗಿರುವ ಪ್ರೇಮವನ್ನೇ ಹೆಂಡತಿಯ ಮೇಲೆ ಇಟ್ಟಿದ್ದಾದರೆ, ಅದಕ್ಕೆ **ಮೋಹ**ವೆನ್ನುವರು. ಅದೇ ಪ್ರೇಮವನ್ನೇ ತನ್ನ ಮನೆ, ಹೊಲ, ದನಕರು ಮೊದಲಾದ ಸ್ಥಾವರ-ಜಂಗಮ ಆಸ್ತಿಗಳ ಮೇಲೆ ಇಟ್ಟಿದ್ದಾದರೆ, ಅದಕ್ಕೆ **ಮಮ**ಕಾರವೆನ್ನುವರು. ಅದೇ ಪ್ರೇಮವನ್ನೇ ಮಕ್ಕಳ ಮೇಲೆ ಇಟ್ಟಿದ್ದಾದರೆ ಅದಕ್ಕೆ **ವಾತ್ಸಲ್ಯ**ವೆನ್ನುವರು. ಅದೇ ಪ್ರೇಮವನ್ನೇ ಗೆಳೆಯರ ಮೇಲೆ ಇಟ್ಟಿದ್ದಾದರೆ, ಅದಕ್ಕೆ **ಸ್ನೇಹ**ವೆನ್ನುವರು. ಅದೇ ಪ್ರೇಮವನ್ನೇ ಬಡವರ ಮೇಲೆ ಇಟ್ಟಿದ್ದಾದರೆ, ಅದಕ್ಕೆ **ದಯೆ**ಯೆನ್ನುವರು. ಅದೇ ಪ್ರೇಮವನ್ನೇ ತನ್ನ ದೊಡ್ಡಸ್ತಿಕೆಯ ಮೇಲೆ ಇಟ್ಟಿದ್ದಾದರೆ, ಅದಕ್ಕೆ **ಅಹಂಕಾರ**ವೆನ್ನುವರು. ಅದೇ ಪ್ರೇಮವನ್ನೇ ದುಡ್ಡಿನ ಮೇಲೆ ಇಟ್ಟಿದ್ದಾದರೆ ಅದಕ್ಕೆ **ಲೋಭ**ವೆನ್ನುವರು. ಅದೇ ಪ್ರೇಮವನ್ನೇ ಚಹಾ, ಕಾಫಿ, ಬಿಡಿ, ಸಿಗರೇಟು, ನಶ್ಯ ಮೊದಲಾದುವುಗಳ ಮೇಲೆ ಇಟ್ಟಿದ್ದಾದರೆ, ಅದಕ್ಕೆ **ಚಟ**ವೆನ್ನುವರು. ಅದೇ ಪ್ರೇಮವನ್ನೇ ಸಿಂದಿ, ಸೆರೆ, ಗಾಂಜಾ, ಅಫೀಮು ಮೊದಲಾದುವುಗಳ ಮೇಲೆ ಇಟ್ಟಿದ್ದಾದರೆ, ಅದಕ್ಕೆ **ವ್ಯಸನ**ವೆನ್ನುವರು. ಅದೇ ಪ್ರೇಮವನ್ನೇ ಸ್ವಸ್ತ್ರೀಯನ್ನು ಬಿಟ್ಟು ಪರಸ್ತ್ರೀಯಲ್ಲಿಟ್ಟಿದ್ದಾದರೆ, ಅದಕ್ಕೆ **ವ್ಯಭಿಚಾರ**ವೆನ್ನುವರು. ಅದೇ ಪ್ರೇಮವನ್ನೇ ಪರಮಾತ್ಮನ ಮೇಲೆ ಇಟ್ಟಿದ್ದಾದರೆ, ಅದಕ್ಕೆಯೇ **ಭಕ್ತಿ** ಎಂದೆನ್ನುವರು.

ಭಕ್ತಿಯೋಗವು ಉಚ್ಚಪ್ರೇಮದ ಶಾಸ್ತ್ರವಾಗಿದೆ. ಪ್ರೇಮಸೂತ್ರದ್ವಾರದಿಂದ ಕೊನೆಗೆ ವಿಶ್ವಪ್ರೇಮವನ್ನು ಹಾಗೂ ಬ್ರಹ್ಮಾನಂದವನ್ನು ಹೇಗೆ ಪ್ರಾಪ್ತಿಮಾಡಿಕೊಳ್ಳಬೇಕೆಂಬುದನ್ನು ತೋರಿಸಿಕೊಡುವುದೇ ಭಕ್ತಿಯೋಗದ ಗುರಿಯಾಗಿದೆ.

ಮಹಾನುಭಾವನಾದ ನಿಜಗುಣ ಶಿವಯೋಗಿಯು ತನ್ನ ಕೈವಲ್ಯ ಪದ್ಧತಿಯೊಳಗೆ, "ಅನಕಾಲದೊಳು ಬಳಿಕಾವದೇಶದೊಳು ಬೇರಾದ ವಸ್ತುವಿನೊಳಿಡೆವರೆಯದತಿ ಮಮತೆ, ಆವ ಪರಿಯೊಳು ತನ್ನ ಮೇಲಿರ್ಪದಂತೆ ಗುರು-ದೇವತೆಯೊಳನುರಾಗಪಡುದೆ ನಿಜ ಭಕ್ತಿಯು!" ಎಂದರೆ ಹಗಲು ರಾತ್ರಿ ಮೊದಲಾದ ಯಾವ ಕಾಲದಲ್ಲಿಯೋ ಆಗಲಿ, ಬಾಲ್ಯ, ತಾರುಣ್ಯ, ವಾರ್ಧಕ್ಯಾದಿ ಆವ ಅವಸ್ಥೆಯಲ್ಲಿಯೋ ಇರಲಿ, ಸ್ವಸ್ಥಲ ಪರಸ್ಥಲಾದಿಯಾಗಿ ಆವ ದೇಶದಲ್ಲಿಯೋ ಇರಲಿ, ಪ್ರಪಂಚದ ಯಾವ ವಸ್ತುವಿನೊಡನೆ ಬೆರೆತಿದ್ದರೂ, ಮಾನವನು ತನ್ನ ಮೇಲಿನ ಪ್ರೀತಿಯನ್ನು ಹೇಗೆ ಮರೆತಿರುವುದಿಲ್ಲವೋ ಹಾಗೆಯೇ ಸತತವಾಗಿ ಪರಮಾತ್ಮನ ಮೇಲೆ ಪ್ರೇಮವನ್ನಿಟ್ಟಿರುವುದೇ ಭಕ್ತಿಯೆಂದು ಹೇಳಿರುವನು.

ಹೀಗೆ ಪರಮೇಶ್ವರನಲ್ಲಿ ಅಹೇತುಕವಾಗಿ, ಅಖಂಡವಾಗಿ ಪ್ರೇಮವನ್ನಿಡುವುದೇ ಭಕ್ತಿಯೋಗವಾಗಿದ್ದರೂ. ಸ್ವಾಮಿ ವಿವೇಕಾನಂದರು ಹೇಳಿದಂತೆ, ಈ ಮಾರ್ಗದಲ್ಲಿಯೂ ಒಂದು ಭೀತಿಯ ಸ್ಥಾನವಿದೆ. ಕೆಳಮಟ್ಟದ ಭಕ್ತಿಯಲ್ಲಿ ಅಥವಾ ಗೌಣೀಯ ಭಕ್ತಿಯಲ್ಲಿ ಸಂಕುಚಿತ ಭಾವನೆಯ ಭಕ್ತರು ವಿಶೇಷವಾಗಿ ಉದಯಿಸುವ ಸಂಭವವಿದೆ. ಜಗತ್ತಿನೊಳಗಿನ ಎಲ್ಲ ಧರ್ಮಗಳಲ್ಲಿಯೂ ಇಂತಹ ಸಂಕುಚಿತ ಭಾವನೆಯ ಭಕ್ತರು, ಧರ್ಮದ ಹೆಸರಿನ ಮೇಲೆ ಅತ್ಯಾಚಾರಗಳನ್ನು ಮಾಡಿದ ಉದಾಹರಣೆಗಳು ಇತಿಹಾಸದಲ್ಲಿ ವಿಪುಲವಾಗಿ ಸಿಕ್ಕುತ್ತವೆ. ಅವೆಲ್ಲ ಗೌಣೀಭಕ್ತಿಯಲ್ಲಿದ್ದವರ ಕೃತಿಗಳಾಗಿವೆ. ತನ್ನ ಪ್ರೀತಿಯ ವಿಷಯವಾದ ಇಷ್ಟದೇವತೆಯಲ್ಲಿ ಪೂಜ್ಯಭಾವನೆಯನ್ನು ಮತ್ತು ದೃಢವಾದ ನಿಷ್ಠೆಯನ್ನು ಇಟ್ಟ ಹೊರತು, ಭಕ್ತಿಯು ನಿರ್ಮಾಣವಾಗಲು ಸಾಧ್ಯವಿಲ್ಲ. ಆದರೆ ತನ್ನ ಇಷ್ಟದೇವತೆಯಲ್ಲಿರುವ ಪೂಜ್ಯಭಾವವು ಅನ್ಯರ ಪೂಜ್ಯವಸ್ತುಗಳ ವಿಷಯದಲ್ಲಿ ಅನಾದರಣೆಯನ್ನುಂಟು ಮಾಡುವುದಕ್ಕೆ ಕಾರಣವಾಗಿರುವುದು ಕಂಡುಬರುತ್ತದೆ. ಯಾವ ಸಾಧಕನಲ್ಲಿ ಪರಾಭಕ್ತಿಯು ಇನ್ನೂ ಪ್ರಾರಂಭವಾಗಿರುವುದಿಲ್ಲವೋ ಅಂಥ ಗೌಣೀಭಕ್ತಿಯ ಭಕ್ತರು, ಸ್ವಕೀಯ ದೇವತಾ ವಿಷಯದಲ್ಲಿ ಅನುರಾಗವನ್ನು ತಾಳಿ, ಅನ್ಯರ ದೇವತಾ ವಿಷಯದಲ್ಲಿ, ಧರ್ಮದ ವಿಷಯದಲ್ಲಿ, ದ್ವೇಷವನ್ನೂ ತಿರಸ್ಕಾರವನ್ನೂ ತೋರಿಸುತ್ತಿರುತ್ತಾರೆ. ಇಂಥವರು ಶ್ವಾನನಿಗಿಂತ ಅಲ್ಪಬುದ್ಧಿಯವರೆಂದು ಹೇಳಬಹುದು.

ಶ್ವಾನವು ತನ್ನ ಒಡೆಯನ ವಸ್ತುಗಳನ್ನು ಯಾರೂ ಸ್ಪರ್ಶ ಕೂಡ ಮಾಡದಂತೆ ದಕ್ಷತೆ ವಹಿಸಲು ಯಾವ ಪ್ರೇಮವನ್ನು ತೋರಿಸುತ್ತಿರುವುದೋ, ಅದು ಅದರ ಜನ್ಮಜಾತಗುಣವಾಗಿರುತ್ತದೆ. ಆದರೆ ಶ್ವಾನದ ಈ ಹುಟ್ಟುಗುಣವು ಸಂಕುಚಿತ ಭಾವನೆಯ ಭಕ್ತಿಗಿಂತಲೂ ಶ್ರೇಷ್ಠವಾದುದೆಂದು ಹೇಳಬಹುದಾಗಿದೆ. ತನ್ನ ಯಜಮಾನನು ಯಾವ ವೇಷದಲ್ಲಿಯೇ ಬರಲಿ ಅಥವಾ ವೇಷವಿಲ್ಲದೆ ತೆರೆದ ಸ್ವರೂಪದಲ್ಲಿ; ಆತನು ಬೇರಾವ ರೀತಿಯಲ್ಲಿದ್ದರೂ ಆತನನ್ನು ಅದು ಶತ್ರುಭಾವದಿಂದ ನೋಡುವುದಿಲ್ಲ. ತನ್ನ ಒಡೆಯನೆನ್ನುವ ಭಾವವನ್ನು ಮರೆಯುವುದಿಲ್ಲ. ಆದರೆ ಸಂಕುಚಿತ ಭಾವನೆಯ ಭಕ್ತರು "ಏಕಂ ಸದ್ವಿಪ್ರಾ ಬಹುಧಾ ವದಂತಿ" ಎಂಬ ಶ್ರುತಿವಾಕ್ಯದಂತೆ ಹರ, ಹರಿ, ಅಲ್ಲಾ, ಗಾಡ್ ಮೊದಲಾದ ಎಲ್ಲ ನಾಮಗಳೂ ಒಬ್ಬ ಪರಮೇಶ್ವರನನ್ನು ಕುರಿತು ಹೇಳುವುವುಗಳಾಗಿವೆಯೆಂಬುದನ್ನು ತಿಳಿಯದೆ, ಪರರ ಧರ್ಮ ಹಾಗು ದೇವತೆಗಳ ಬಗೆಗೆ ಅನಾಚಾರಗಳನ್ನೂ ಅತ್ಯಾಚಾರಗಳನ್ನೂ ಮಾಡುವುದನ್ನು ನೋಡಿದರೆ, ಇವರ ಬುದ್ಧಿ ಹೀನವಾದುದೆಂದು ಸ್ಪಷ್ಟವಾಗಿ ತಿಳಿಯುವುದಿಲ್ಲವೆ? ಸಮಾಜದಲ್ಲಿ ಇಂತಹ ಸಂಕುಚಿತ ಭಾವನೆಯ ಭಕ್ತರೇ ವಿಶೇಷವಾಗಿರುವರು. ಪೂರ್ಣಭಕ್ತನು ಅಥವಾ ಪರಾಭಕ್ತಿಯುಳ್ಳವನು, ಒಬ್ಬ ಪರಮಾತ್ಮನ ಸ್ವರೂಪವೇ ಅನೇಕರಿಗೆ ಅವರವರ ಭಾವನೆಗನುಸರಿಸಿ ಅನೇಕ ಪ್ರಕಾರವಾಗಿ ಪ್ರತೀತಿಯಾಗಿದೆಯೆಂದೂ ಮತ್ತು ಈಶ್ವರನ ವಿಷಯದಲ್ಲಿರುವ ಅನೇಕ ಪ್ರಕಾರವಾದ ವರ್ಣನೆಗಳು ಒಬ್ಬ ಪರಮೇಶ್ವರನ ವರ್ಣನೆಯೇ ಆಗಿದೆಯೆಂದೂ ನಂಬಿರುತ್ತಾನೆ. ಒಬ್ಬ ದೇವನೇ ಅನೇಕ ನಾಮಗಳಿಂದಲೂ ರೂಪಗಳಿಂದಲೂ ಭಕ್ತರ ಇಚ್ಛಾನುಸಾರವಾಗಿ ಹೇಳಿಸಿಕೊಳ್ಳುವನೆಂದೂ, ಕಾಣಿಸಿಕೊಳ್ಳುವನೆಂದೂ ತಿಳಿದ ಭಕ್ತನು, ಅನ್ಯರ ಧರ್ಮ ಹಾಗೂ ದೇವತೆಗಳ ಬಗೆಗೆ ತಿಲಮಾತ್ರವಾದರೂ ದ್ವೇಷ-ಅಸೂಯಾದಿಗಳನ್ನು ತೋರಿಸದೆ, ಆದರವನ್ನೇ ವ್ಯಕ್ತ ಮಾಡುತ್ತಿರುತ್ತಾನೆ. ಆದರೆ, ಕೆಲವು ದಾಂಭಿಕರು ಅನ್ಯಧರ್ಮಗಳ ವಿಷಯದಲ್ಲಿ ತಾವು ಬಹು ಉದಾರಭಾವವುಳ್ಳವರೆಂದು ತೋರಿಸುವುದಕ್ಕಾಗಿ, ಮೂರ್ಖತನದಿಂದ ಅನೇಕ ಮಾರ್ಗಗಳಲ್ಲಿ ಈ ಕಡೆಯಿಂದ ಆಕಡೆಗೆ, ಆಕಡೆಯಿಂದ ಈಕಡೆಗೆ ಯಾವುದೊಂದು ಧ್ಯೇಯವಿಲ್ಲದೆ ಓಡಾಡುತ್ತಿದ್ದಾರೆ. ಇವರು ನಿಜವಾದ ಭಕ್ತರಾಗಲು ಯೋಗ್ಯರಲ್ಲವೆಂದು ತಿಳಿಯಬೇಕು. ಕಾರಣವೇನೆಂದರೆ ಆಗ ತಾನೇ ಭೂಮಿಯಿಂದ ಅಂಕುರಿಸುತ್ತಿರುವ ವೃಕ್ಷದ ಸುತ್ತಲೂ ಬೇಲಿಯನ್ನಿಡುವುದು ಆವಶ್ಯಕವಾಗಿರುವಂತೆ, ಭಕ್ತಿಮಾರ್ಗದಲ್ಲಿ ಸಾಗುತ್ತಿರುವ ಸಾಧಕನ ಸೂಕ್ಷ್ಮಮನಸ್ಸು, ಅನೇಕ ಪ್ರಕಾರವಾದ ಕಲ್ಪನೆಗಳಲ್ಲಿ ಧ್ಯೇಯಗಳಲ್ಲಿ ತೊಡಗುವುದು ಅಪಾಯಕರವಾಗುವುದು. ಒಂದು ಸ್ಥಲದಲ್ಲಿ ಬಿತ್ತಿದ ಬೀಜವನ್ನು ಅಲ್ಲಿಯೇ ಇಟ್ಟರೆ, ಅದು ಮೊಳೆತು, ಸಸಿಯಾಗಿ, ಬೇರೂರಿಟ್ಟು ಹೇಗೆ ಗಿಡವಾಗಿ ಫಲವನ್ನು ಕೊಡುತ್ತಿರುವುದೋ ಹಾಗೆಯೇ ಭಕ್ತಿಯೆಂಬ ಬೀಜವನ್ನು ಇಷ್ಟಮೂರ್ತಿಯೆಂಬ ಒಂದೇ ಸ್ಥಾನದಲ್ಲಿ ಇರಿಸಿದರೇನೇ ಆ ಭಕ್ತಿಯು ಅಂಕುರಿಸಿ ಫಲವನ್ನುಂಟು ಮಾಡುವುದು. ಎಲ್ಲ ಭೂಮಿಯು ಒಂದೇ ಎಂದು, ಒಂದು ಸ್ಥಳದಲ್ಲಿ ಬಿತ್ತಿದ ಬೀಜವನ್ನು ತೆಗೆದು ಮತ್ತೊಂದು ಸ್ಥಳದಲ್ಲಿಟ್ಟು, ಮತ್ತೆ ಅಲ್ಲಿಂದ ತೆಗೆದುಕೊಂಡು ಇನ್ನೊಂದು ಸ್ಥಳಕ್ಕೆ ಒಯ್ಯುತ್ತ ಹೋದರೆ, ಹೇಗೆ ಆ ಬೀಜವು ಮೊಳೆತು ಸಸಿಯಾಗಿ ಫಲವನ್ನು ಕೊಡುವುದಿಲ್ಲವೋ, ಹಾಗೆಯೇ ಭಕ್ತಿಯ ಬೀಜವನ್ನು ನಾನಾ ಮೂರ್ತಿಗಳೆಂಬ ಬೇರೆ ಬೇರೆ ಸ್ಥಳದಲ್ಲಿಡುತ್ತ ಹೋದರೆ, ಆ ಭಕ್ತಿಯಿಂದ ಮೋಕ್ಷವೆಂಬ ಫಲವು ದೊರೆಯುವುದಿಲ್ಲ. ಆದಕಾರಣ ಒಂದು ಮೂರ್ತಿಯಲ್ಲಿ ಭಕ್ತಿಯನ್ನಿಡುವುದು ಹಿತವಾಗಿದೆ. ಅದಕ್ಕಾಗಿಯೇ ಬಸವೇಶ್ವರನು "ದೇವನೊಬ್ಬ, ನಾಮ ಹಲವು. ಪರಮ ಪತಿವ್ರತೆಗೆ ಗಂಡನೊಬ್ಬ; ಮತ್ತೊಂದಕ್ಕೆರಗಿದರೆ ಕಿವಿ-ಮೂಗ ಕೊಯ್ಯುವನು ಹಲವು ದೇವರೆಂಜಲ ತಿಂಬರನೇನೆಂಬೆ ಕೂಡಲಸಂಗಮದೇವಾ!

ಎಂದರೆ ಒಬ್ಬ ಮನುಷ್ಯನನ್ನೇ ಪತ್ನಿಯು ಪತಿಯೆಂತಲೂ ತಮ್ಮನು ಅಣ್ಣನೆಂತಲೂ, ಅಣ್ಣನು ತಮ್ಮನೆಂತಲೂ, ಮಗನು ತಂದೆಯೆಂತಲೂ ತಂದೆಯು ಮಗನೆಂತಲೂ, ಸೊಸೆಯು ಮಾವನೆಂತಲೂ ಹೇಗೆ ಅನೇಕ ಹೆಸರುಗಳಿಂದ ಕರೆಯುತ್ತಾರೆಯೊ, ಹಾಗೆಯೇ ಸರ್ವವ್ಯಾಪಿಯಾದ ಪರಮಾತ್ಮನೊಬ್ಬನನ್ನೇ ಅನೇಕ ಹೆಸರುಗಳಿಂದ ಕರೆಯುತ್ತಾರೆ. ಯಾರು ಯಾವ ಹೆಸರಿನಿಂದ ಪ್ರಾರ್ಥಿಸಿದರೂ, ಆ ಪ್ರಾರ್ಥನೆಯು ಪರಬ್ರಹ್ಮನಿಗೇನೆ ಮುಟ್ಟುತ್ತದೆ. ಆದರೂ ಭಕ್ತನು ತನ್ನ ಇಷ್ಟ ಮೂರ್ತಿಯಲ್ಲಿಯೇ ನಿಷ್ಠೆಯುಳ್ಳವನಾಗಿರಬೇಕು. ಲೋಕದಲ್ಲಿರುವ ಎಲ್ಲ ಪುರುಷರೂ ತನ್ನ ಪತಿಯಂತೆಯೇ ಪುರುಷರಾಗಿದ್ದರೂ ಪತಿವ್ರತೆಯಾದ ಸ್ತ್ರೀಯಳು ಹೇಗೆ ತಾನು ಲಗ್ನವಾದ ಪುರುಷನನ್ನು ಮಾತ್ರ ಪತಿಯೆಂದು ಭಾವಿಸಿ, ಪತಿಭಕ್ತಿಯನ್ನು ಆತನಲ್ಲಿ ಮಾತ್ರ ಇಡುತ್ತಾಳೆಯೊ, ಹಾಗೆಯೇ ಭಕ್ತನು ತನ್ನ ಇಷ್ಟದೇವತೆಯಂತೆ ಅನ್ಯರ ಇಷ್ಟ ಮೂರ್ತಿಗಳು ದೇವತೆಗಳೇ ಎಂದು ತಿಳಿದುಕೊಂಡರೂ, ತನ್ನಿಷ್ಟ ಮೂರ್ತಿಯಲ್ಲಿಯೇ ನೈತಿಕಭಕ್ತಿಯನ್ನು ನೆಲೆಗೊಳಿಸಬೇಕೆಂದು ಹೇಳಿರುವನು.

ತುಲಸೀ ರಾಮಾಯಣದಲ್ಲಿ ಹನುಮಂತನು "ಜಾನಕೀನಾಥನು ಮತ್ತು ಶ್ರೀನಾಥನು ಒಂದೆ ರೂಪದ ಎರಡು ಅವತಾರಗಳೆಂದು ನನಗೆ ಪೂರ್ಣವಾಗಿ ಗೊತ್ತಿದೆ. ಆದರೆ ಕಮಲನಯನನಾದ ರಾಮನ ಮೂರ್ತಿಯೇ ನನ್ನ ಹೃದಯದಲ್ಲಿ ವಾಸವಾಗಿರುವುದು. ಸರ್ವತ್ರ ರಾಮರೂಪವನ್ನೇ ನನಗೆ ಕಾಣುತ್ತಿರುವುದು." ಎಂದು ಹೇಳಿರುವ ಮಾತು, ಭಕ್ತಿಯೋಗದ ಮೂಲಸೂತ್ರವೇ ಆಗಿದೆ. ಸರ್ವರ ಕೂಡ ಸರ್ವರ ಹೆಸರು ತಕ್ಕೊಳ್ಳಬೇಕು. ಎಲ್ಲದಕ್ಕೂ ಹೌದು, ಹೌದು, ಎನ್ನಬೇಕು; ಆದರೆ ಸ್ವಕೀಯವಾದ ಧ್ಯೇಯವನ್ನು ಮಾತ್ರ ಯಾವಾಗಲೂ ಬಿಟ್ಟಿರಬಾರದು. ಇದೇ ಭಕ್ತಿಯೋಗದ ರಹಸ್ಯವಾಗಿದೆ.

ಭಕ್ತಿಯೋಗವು ಪರಿಪೂರ್ಣತೆಯನ್ನು ಹೊಂದಬೇಕಾದರೆ, ಭಕ್ತನಲ್ಲಿ ಪರಮಾತ್ಮನ ಬಗೆಗೆ ಇನ್ನೊಂದು ಭಾವವು ಪ್ರಕಟವಾಗುವುದು. ಅದಕ್ಕೆ ವಿರಹಭಕ್ತಿಯೆಂತಲೂ, ಮಧುರಭಕ್ತಿಯೆಂತಲೂ ಕರೆಯುವರು. ಪರಮೇಶ್ವರನ ದರ್ಶನವಾಗಲೊಲ್ಲದೆಂಬ ವಿರಹದಿಂದ ಭಕ್ತನು ಅತ್ಯಂತ ವ್ಯಾಕುಲನಾಗುವನು; ದುಃಖಿಯಾಗುವನು; ದುಃಸ್ವಾಸ್ಥನಾಗುವನು. ಅವನಿಗೆ ಯಾವ ವಿಷಯದಲ್ಲಿಯೂ ಸುಖವೆನಿಸುವುದಿಲ್ಲ. ಪರಮಾತ್ಮನ ಹೊರತು ಮತ್ತಾವ ವಸ್ತುವಿನ ದರ್ಶನವಾದರೂ, ಅವನ ಭಾವದ ಸಮತೋಲನವು ತಪ್ಪಿಬಿಡುತ್ತದೆ. ಲೌಕಿಕದ ಪ್ರೇಮದಲ್ಲಿ ಕೂಡ ಈ ಪ್ರಕಾರವಾದ ವಿರಹವು ನಮಗೆ ಕಾಣುತ್ತಿರುವುದು. ಒಬ್ಬ ಪುರುಷನು ಒಬ್ಬ ಸ್ತ್ರೀಯಳಲ್ಲಿ ಅಥವಾ ಒಬ್ಬ ಸ್ತ್ರೀಯಳು ಒಬ್ಬ ಪುರುಷನಲ್ಲಿ ಅತಿಶಯವಾದ ಅನುರಾಗವನ್ನಿಟ್ಟಿದ್ದಾದರೆ, ತಮ್ಮ ಪ್ರೀತಿಯ ವ್ಯಕ್ತಿಗಳ ವಿನಾ ಇತರರ ದರ್ಶನವು ಅವರಿಗೆ ಅಸಹ್ಯವಾಗಿ ತೋರುತ್ತದೆ. ಅದರಂತೆ ಪರಾಭಕ್ತಿಯ ಉದ್ರೇಕವು ಮನಸ್ಸಿನಲ್ಲುಂಟಾದರೆ, ಪರಮಾತ್ಮನ ವಿನಾ ಬೇರೆ ಯಾವ ವಸ್ತುವಿನ ಸಂಪರ್ಕವನ್ನೂ ಆ ಭಕ್ತನಿಗೆ ಸಹಿಸುವುದಾಗುವುದಿಲ್ಲ. ಅವನು ನೆನಸಿದಲ್ಲಿಯೂ ಕನಸಿನಲ್ಲಿಯೂ [illegible] ಚಿಂತನೆಯನ್ನೇ ಮಾಡುತ್ತಿರುವನು. ಪ್ರಹ್ಲಾದ, [illegible] ಮೊದಲಾದ ಮಧುರಭಕ್ತಿಯುಳ್ಳವರೇ ಕಾಲಕಳೆಯುವರು. [illegible] ಬಸವ, ಅಕ್ಕಮಹಾದೇವಿ, [illegible] ಮೊದಲಾದವರು, ಈ ಪರಾಭಕ್ತಿಗೆ [illegible] ಗಿರುತ್ತಾರೆ. ಇದೇ ಭಕ್ತಿಯೋಗದ ಕೊನೆಯ [illegible] ಭಗವದ್ಭಕ್ತರಿಗೆ ಲೋಕದ ಜನರು 'ಹುಚ್ಚರು' ಎಂದು [illegible] ಹುವರು. ಆದರೆ ಚೆನ್ನಾಗಿ ವಿಚಾರ ಮಾಡಿ [illegible] ದರೆ, ಇಡೀ ಪ್ರಪಂಚವೇ ಹುಚ್ಚರ ಆಸ್ಪತ್ರೆಯ [illegible] ವಾಗಿ ಕಂಡುಬರುವುದು. ಪ್ರಪಂಚದಲ್ಲಿರುವ [illegible] ನಿಗೂ ಒಂದಿಲ್ಲೊಂದು ಪ್ರಕಾರದ ಹುಚ್ಚು [illegible] ಕೆಲವರಿಗೆ ಹೆಣ್ಣಿನ ಹುಚ್ಚು, ಕೆಲವರಿಗೆ [illegible] ಹುಚ್ಚು, ಕೆಲವರಿಗೆ ಹೊನ್ನಿನ ಹುಚ್ಚು, ಕೆಲವರಿಗೆ ಮಕ್ಕಳ ಹುಚ್ಚು, ಕೆಲ[illegible] ಮಕ್ಕಳ ಹುಚ್ಚು, ಕೆಲವರಿಗೆ ಅಧಿಕಾರದ ಹುಚ್ಚು, ಕೆಲವರಿಗೆ [illegible]ವಿನ ಹುಚ್ಚು, ಕೆಲವರಿಗೆ ಕೀರ್ತಿಯ ಹುಚ್ಚು, ಕೆಲವರಿಗೆ [illegible] ಹುಚ್ಚು—ಅಂತೂ ಮನುಷ್ಯ ಮಾತ್ರಕ್ಕೆಲ್ಲ [illegible] ಹುಚ್ಚುತನ ಬಡಕೊಂಡದ್ದೇ ಕಂಡುಬರುವುದರಿಂದ, ಭಗವದ್ಭಕ್ತರಿಗೆ ದೇವರ ಹುಚ್ಚು ಹಿಡಿದಿದೆಯೆನ್ನುವುದರಲ್ಲಿ ಯಾವ ದೋಷವೂ ಇಲ್ಲ. ಆದರೆ ಉಳಿದವರ ಹುಚ್ಚು ಕ್ಷಣಿಕ ಸುಖದಾಯಕವಾದ ಮಿಥ್ಯಾವಸ್ತುಗಳಿಗಾಗಿರುವುದು. ಭಕ್ತರ ಹುಚ್ಚು ಮಾತ್ರ ಅತ್ಯಂತ ದುಃಖನಿವೃತ್ತಿ-ಪರಮಾನಂದಪ್ರಾಪ್ತಿಗೆ ಕಾರಣವಾದ ಪರಮಾತ್ಮನಲ್ಲಿ ಕೂಡುವುದಾಗಿರುವುದು.

ಇಂತಹ ಹುಚ್ಚು ಹಿಡಿದ ಜೀವನವೇ ಪುಣ್ಯಜೀವನವು. ಪವಿತ್ರಜೀವನವು. ಕಡೆಯ ಜೀವನವು. ಹೀಗೆ ದೇವರ ಹುಚ್ಚು ಹಿಡಿದ ಭಕ್ತನನ್ನು ಕುರಿತು ಶ್ರೀಕೃಷ್ಣನು ಗೀತೆಯ ೯ನೆಯ ಅಧ್ಯಾಯದ ೩೧ನೆಯ ಶ್ಲೋಕದಲ್ಲಿ "ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ । ಕೌಂತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ"

ಎಂದರೆ 'ಭಗವದ್ಭಕ್ತನು ಭಕ್ತಿಯ ಸಮಕಾಲದಲ್ಲಿಯೇ ಧರ್ಮಾತ್ಮನಾಗಿ ಶಾಶ್ವತವಾದ ಆನಂದವನ್ನು ಹೊಂದುವನೆಂದು ಪ್ರತಿಜ್ಞಾಪೂರ್ವಕವಾಗಿ ತಿಳಿದುಕೊ' [illegible] ಹೇಳಿದ್ದಾನೆ. ಅದರಂತೆ ಬಸವೇಶ್ವರನು ಸಹ :

"ವೇದಪ್ರಿಯನೆಂಬರು ಶಿವನು, ವೇದಪ್ರಿಯನಲ್ಲವಯ್ಯ [illegible] ಪ್ರಿಯನೆಂಬರು ಶಿವನು, ನಾದಪ್ರಿಯನಲ್ಲವಯ್ಯ [illegible] ಬ್ರಹ್ಮನ ತಲೆ ಹೋಯಿತ್ತು; ನಾದವ ಮಾಡಿದ [illegible] ಆಯುಷ್ಯ ಆಯಿತ್ತು. ವೇದಪ್ರಿಯನೂ ಅಲ್ಲ, [illegible] ಅಲ್ಲ; ಭಕ್ತಿಪ್ರಿಯ ನಮ್ಮ ಕೂಡಲ ಸಂಗಮದೇವ [illegible] ಹಂಗುರ ನಾವಿದ್ದಾನೆ.

(೪೨೬ ನೆಯ ಪುಟ ನೋಡಿ)

ಕಲಾವಿದ ಕಂಡ ಬೆಳಕು

(ಸಣ್ಣಕತೆ)

ಶ್ರೀ. ಮಹಾಲಿಂಗ ಯಾಳಗಿ, ಧಾರವಾಡ.

ಪ್ರಭಾಕರನ ಕಲಾಪೂರ್ಣಜೀವನದಲ್ಲಿ ಮೋಹಿನಿಯ ದರ್ಶನವು ಆಕಸ್ಮಿಕ ವಿದ್ಯುತ್ಪಾತದಂತೆ ಪರಿಣಮಿಸಿತು. ಪಾಪ ಮೋಹಿನಿಯದೇನು ತಪ್ಪು? ಹಾಗಾದರೆ ತಪ್ಪುಗಾರರು ಯಾರು?

ಪ್ರಭಾಕರ ಅದೇ ಕೆರೆಯ ದಂಡೆಯ ಮೇಲೆ ಕುಳಿತುಕೊಂಡಿದ್ದನು. ಮೇಲೆ ನೀಲಗಗನತಲ, ಅದರಲ್ಲಿ ಹೊಳೆಯುವ ಚಂದ್ರ, ಚಂದ್ರನೊಂದಿಗೆ ನಾಟ್ಯವಾಡುತ್ತಿದ್ದ ತಾರಾರಮಣಿಯರು. ಅಲ್ಲಿಯೇ ಮಾಮರದಲ್ಲಿದ್ದ ಕೋಗಿಲೆಯೊಂದು ತನ್ನ ಕಿನ್ನರಕಂಠದಿಂದ 'ಕೂಹು ಕೂಹು' ಎಂದು ಕೂಗಿತು. ನಿಸರ್ಗದೇವಿಯ ಸೌಂದರ್ಯವನ್ನೇ ಈಕ್ಷಿಸುತ್ತಿದ್ದ ಪ್ರಭಾಕರನ ಬಾಯಿಂದ " ಅಬ್ಬಾ ದಿವ್ಯಸೌಂದರ್ಯ ! " ಎಂಬ ಶಬ್ದಗಳು ಹೊರಬಿದ್ದುವು. ನೀರಲ್ಲಿ ಕಾಲುಬಿಟ್ಟುಕೊಂಡು ಕುಳಿತವನು, ನೀರಿನೆಡೆಗೆ ತನ್ನ ದೃಷ್ಟಿಕೋನವನ್ನು ಹೊರಳಿಸಿದನು. ಅಲ್ಲಿಯೂ ಪ್ರತಿಬಿಂಬ. ಅನಿರೀಕ್ಷಿತವಾಗಿ ಮೋರೆಯ ತುಂಬೆಲ್ಲಾ ಕೈಯಾಡಿಸಿಕೊಂಡನು. ಅವನ ಬಾಯಿಂದ ಸಹಜವಾಗಿ "ನಾಟ್ಯಕಲಾವಿದೇ, ಮೋಹಿನೀ!" ಎಂಬ ಶಬ್ದಗಳು ಹೊರಬಿದ್ದುವು. ನೀರನ್ನು ಕಲಕಾಡಿಸಿ ಬಿಟ್ಟನು. 'ನಾಟ್ಯಕಲಾಕೋವಿದೇ, ಮೋಹಿನಿ!'

ನೀರಲ್ಲಿ ತರಂಗಗಳು ಎದ್ದುವು. ಆ ನೀರಿನ ತರಂಗಗಳೊಂದಿಗೆ ಅವನ ಜೀವನದಲ್ಲಿ ನಡೆದ ತರಂಗಗಳು ಅವನ ಸ್ಮೃತಿಪಥದಲ್ಲಿ ಎದ್ದುವು.

" ನಾಟ್ಯಪ್ರವೀಣ, ನಾಟ್ಯಾಚಾರ್ಯ ಪ್ರಭಾಕರ!" ಎಂದಿತವನ ಮನಸ್ಸು "ಛೇ. ಎಲ್ಲಿಯ ನಾಟ್ಯಪ್ರವೀಣ ಪ್ರಭಾಕರ! ಅವನು ಎಂದೋ ಸತ್ತು ಹೋಗಿದ್ದಾನೆ. ಎಂದು ಅವನ ಮೋಹಿನಿ ಅವನನ್ನು ಕೈಬಿಟ್ಟಳೋ, ಅಂದೇ ಸತ್ತಿದ್ದಾನೆ" ಎಂದಿತು ಮತ್ತೊಂದು ಮನಸ್ಸು. "ಇಲ್ಲ ಇಲ್ಲ, ಪ್ರಭಾಕರ ಸತ್ತಿಲ್ಲ, ನಾಟ್ಯಪ್ರವೀಣನೆಂದು ಹೆಸರುವಾಸಿಯಾದ ಪ್ರಭಾಕರ ಜೀವಂತನಾಗಿದ್ದಾನೆ. ಅವನ ಜೀವನ ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿದೆ. ತನ್ನ ಕಲಾದೇವಿಯನ್ನು ಮರೆತು ಬಿಟ್ಟಿದ್ದಾನೆ" ಎಂದಿತವನ ಮನಸ್ಸು.

ಈ ಮನಸ್ಸಿನ ತಾಕಲಾಟವನ್ನು ತಡೆಯದೆ ಪ್ರಭಾಕರ, ತನ್ನೆರಡೂ ಕೈಗಳಿಂದ ತನ್ನ ತಲೆಯನ್ನು ಅದುಮಿಕೊಂಡು, ಅಲ್ಲಿಂದ ಎದ್ದು ನಡೆದನು. ಬೆಳುದಿಂಗಳಿರುಳಿನಲ್ಲಿ ಎಷ್ಟು ನಡೆದನೋ ಅವನಿಗೇ ಗೊತ್ತು! ಕಾಲೆಳೆದತ್ತ ನಡೆದ. ಆದರೆ ಪಯಣಕ್ಕೆ ಕೊನೆಯೆಲ್ಲಿ? ಕಡೆಗೊಂದು ಭಗ್ನಮಂದಿರ ಕಂಡಿತವನಿಗೆ. ಆ ಮಂದಿರವನ್ನು ಒಳಹೊಕ್ಕನು. ಕಣ್ಣುಗಳೇನೋ ತೇವುಗೂಡಿದ್ದುವು. ಅಲ್ಲಿಯೇ ಇದ್ದ ಹಾಸುಗಲ್ಲಿನ ಮೇಲೆ ಮಲಗಿಕೊಂಡನು. ಮಂದಿರದ ಮೇಲ್ಛಾವಣಿ ಬಿದ್ದದ್ದರಿಂದ, ಮೇಲೆ ಆಗಸದಲ್ಲಿ ನಡೆಯುತ್ತಿದ್ದ ಚಂದ್ರ-ತಾರಾಮಣಿಯರ ನಾಟ್ಯ ಸ್ಪಷ್ಟವಾಗಿ ಕಾಣುತ್ತಿತ್ತು. ಮೇಲೆ ಕಣ್ಣುಕಪ್ಪಡಿಗಳು ಹಾರಾಡುತ್ತಿದ್ದುವು. ಪ್ರಭಾಕರನನ್ನು ನಿದ್ರಾದೇವಿ ಆಲಿಂಗಿಸಲಿಲ್ಲ. ಬಹುಶಃ ಅಂದು ಅವಳೂ ಬೇಜಾರು ಪಟ್ಟಿದ್ದಳೇನೊ! ಪ್ರಭಾಕರ ಎದ್ದು ಕುಳಿತು, ಕಡ್ಡಿಯನ್ನು ಕೊರೆದು ಸಿಗಾರೇಟು ಹಚ್ಚಿದನು. ಕಡ್ಡಿಯ ಬೆಳಕಿನಲ್ಲಿ ಅವನಿಗೆ ಭಗ್ನಮೂರ್ತಿಗಳು ಕಂಡುವು. ನೃತ್ಯಭಂಗಿಯಲ್ಲಿದ್ದ ಮೂರ್ತಿಗಳು. ಮತ್ತೊಂದು ಕಡ್ಡಿಯನ್ನು ಕೊರೆದು ಒಂದು ಮೂರ್ತಿಯನ್ನು ನೋಡಿದಾಗ " ಭರತನಾಟ್ಯ " ಎಂದುಸುರಿದನು. ಮತ್ತೊಂದು ಕಡ್ಡಿಯನ್ನು ಕೊರೆದನು. ಅದು ಗಾಳಿಗೆ ಸಿಕ್ಕಿ ಆರಿಹೋಯಿತು. ಕಡ್ಡಿಪೆಟ್ಟಿಗೆಯಲ್ಲಿಯ ಕಡ್ಡಿಗಳು ತೀರಿದ್ದರಿಂದ, ಸಿಟ್ಟಿನಿಂದ ಕಡ್ಡಿಪೆಟ್ಟಿಗೆಯನ್ನು ಒಗೆದು, ಒಂದು ಗೋಡೆಗೆ ಆತುಕೊಂಡು, ಸಿಗಾರೇಟಿನ ಹೊಗೆಯನ್ನು ಬಿಡಹತ್ತಿದನು. " ಕಲಾವಿದಾ, ಓ ಕಲಾವಿದಾ ! " ಎಂದ ಹಾಗಾಯಿತು ಆ ಭಗ್ನಮೂರ್ತಿ. ಎದ್ದು ಕುಳಿತು ಕೇಕರಿಸುತ್ತ, ಸುತ್ತಲೆಲ್ಲಾ ತನ್ನ ದೃಷ್ಟಿಬೀರಿದನು. ಗೆಜ್ಜೆಯ ನಿನಾದ ಅವನ ಕಿವಿಗಳಲ್ಲಿ ಗುಳುಗುಳಿಸಹತ್ತಿತು. ಮುಂದೆ ಬರುಬರುತ್ತ " ತಿತ್ ತಿತ್ ಧುನ್ ಧನ್, ತಿಗಿದಿಗಿ ಥೈ—ತಿಗಿದಾ, ತಿಗಿಧಿಗಿಥೈ ತಿಗಿದಾ ತಿಗಿದಿಗಿ ಥೈ " ಮುಂತಾದ ಶಬ್ದಗಳು ಬಂದುವು. ಪ್ರಭಾಕರ ಎದ್ದು ಕುಳಿತನು ಸಿಟ್ಟಿನಿಂದ ಸಿಗಾರೇಟನ್ನು ನೆಲದ ಮೇಲೆ ಬೀಸಾಡಿ " ಥೂ ! ಈ ಹಾಳು ಶಬ್ದಗಳೇ ಬೇಡ! ಇದು ನನ್ನ ಜೀವನವನ್ನು ಹಾಳುಮಾಡಿತು. ಕಲೆ, ಕಲೆ ! ಈ ಕಲೆಗಾಗಿ ನನ್ನ ಜೀವನದಲ್ಲಿ ಎಷ್ಟೂ ಸುಖ ಕಾಣಲಿಲ್ಲ. " ಎಂದು ಪ್ರಭಾಕರನು ನುಡಿದನು.

" ಇದೇ ಕಲೆಗಾಗಿಯೇ ನಿನ್ನ ಜೀವನವನ್ನು ಮುಡಿಪಿರಿಸಿದ್ದೆಯಲ್ಲವೇ ಅಂದು ? " ಎಂದು ಪ್ರಶ್ನಿಸಿತು ಆ ಭಗ್ನಮೂರ್ತಿ.

“ ಹೌದು, ಅಂದು.... ಆದರೆ....ಇಂದಿಲ್ಲ ! ಕಲೆಯ ದಾರಿ ಇಷ್ಟು ಗಡುಚಾದುದೆಂದು ನಾನು ತಿಳಿದಿರಲಿಲ್ಲ !'' ಎಂದನು ಪ್ರಭಾಕರ,

“ಪ್ರಭಾಕರ, ಕಲೆಯ ಹಾದಿಯಲ್ಲಿ ಹೂಗಳನ್ನು ಹಾಸಿರುವುದಿಲ್ಲ. ಮುಳ್ಳುಗಳಿರುತ್ತವೆ. ಆದರೆ ಆ ಮುಳ್ಳುಗಳ ಮೇಲೆ ಕುಸುಮವೊಂದಿದೆ. ನೀನು ಕೇವಲ ಕಲೆಯ ಮುಳ್ಳುಗಳನ್ನೇ ಕಂಡಿರುತ್ತಿ ವಿನಾ, ಆ ಕಲಾ ಕುಸುಮವನ್ನು ಕಂಡಿಲ್ಲ. ಕಂಡಿದ್ದರೂ ಕಲಾಕುಸುಮದ ಸೌರಭ ವನ್ನು ಮೂಸಿದ್ದರೂ, ಇಂದು ಅದೆಲ್ಲಾ ಅವಳ ಜತೆಗೆ............''

“ಥೂ! ಆ ಹಾಳುಹೆಸರು! ಮತ್ತೇಕೆ ಈಗವಳ ನೆನಹು! ಈಗವಳು ನೃತ್ಯಕಲಾಕೋವಿದೆಯೆಂದು ಹೆಸರು ಪಡೆದಿದ್ದಾಳೆ. ಅವಳನ್ನು ನನ್ನ ಜೀವನಕ್ಕಿಂತಲೂ ಹೆಚ್ಚಾಗಿ ಪ್ರೀತಿಸಿದೆ. ಅದಕ್ಕೆ ಬದ ಲಾಗಿ ಅವಳು ನನ್ನನ್ನು............ತಿರಸ್ಕರಿಸಿದಳು. ”

“ ಥೂ ! ನೀನು ಕಲಾವಿದನಲ್ಲ. ಯಃಕಶ್ಚಿತ್ ಒಬ್ಬ ಹುಡುಗಿಯ ಮೋಹದಿಂದ ಹೀಗೆಲ್ಲಾ ಅನ್ನುತ್ತಿರುವೆ. ನೀನು ಕಲಾವಿದನಲ್ಲ ! ”

“ಇಲ್ಲ, ನಿಜವಾಗಿಯೂ ಇಲ್ಲ. ನಾನು ಕಲಾವಿದ! ಇದೇ ನೃತ್ಯ-ಕಲೆಗಾಗಿ ನನ್ನ ಜೀವನವನ್ನೆಲ್ಲಾ ಧಾರೆ ಎರೆದೆ. ಕಲೆಯಲ್ಲಿ ಪಾರಂಗತ ನಾದೆ. ಎಲ್ಲಿ ನೋಡಿದಲ್ಲಿ ನನ್ನ ಗುಣಗಾನ. ಅಯ್ಯೋ....ಆದರೆ ಮೋಹಿನಿ! ಅವಳನ್ನು ನಾನೇ ಮುಂದೆ ತಂದೆ, ನನ್ನಿಂದಲೇ ಮುಂದೆ ಬಂದಳು. ನಾನವಳ ಗುರು, ಆದರೆ........”

“ಆದರೆ........ತಡವರಿಸುತ್ತಿರುವೆ ಏಕೆ? ಮುಂದೇನಾಯಿತು?” ಎಂದಂತಾಯಿತು ಕಥಕ್ಕಳಿಯ ಭಂಗಿಯಲ್ಲಿ ನಿಂತ ಮೂರ್ತಿ.

“ಮುಂದೆ. ಮುಂದೆ ನನಗೇನೂ ಬೇಡ! ನನಗೆ ಬೇಕಾದದ್ದು ಚಿರವಿಶ್ರಾಂತಿ; ಕಲಾವಿದನ ಕೊನೆ. ಜೀವನದ ಕೊನೆ........''

“ಥೂ ಹೇಡಿ, ಕಲಾವಿದನಂತೆ ಕಲಾವಿದ ! ಕಲಾದೇವಿಯ ಪಾದದಡಿಯಲ್ಲಿ ಅರ್ಪಿಸಿದ ನಿನ್ನ ಜೀವನಕುಸುಮವನ್ನು ಯಃಕ-ಶ್ಚಿತ್ ಪ್ರಮದೆಗಾಗಿ........”ಎಲ್ಲ ಮೂರ್ತಿಗಳು ನಕ್ಕಂತಾದುವು. “ಹಃ ಹಃ ಹಃ” ಎಂಬ ಕೂಗು ಅವನ ಕರ್ಣಕುಹರವನ್ನು ಭೇದಿಸಿತು. ಮತ್ತೆ ಒಂದು ಮೂರ್ತಿ ಮಾತು ಮುಂದುವರಿಸಿದಂತಾಯಿತು: “ಪ್ರಭಾಕರ, ನಮ್ಮನ್ನು ನೋಡು, ಎಷ್ಟು ಜನರು ನಮಗಾಗಿ ದುಡಿ-ದಿದ್ದಾರೋ ಏನೋ ! ಎಂದು ಯಾವ ಮಣ್ಣಿನಲ್ಲಿ ಬೆರೆತಿದ್ದಾರೋ ಏನೋ ! ನಾವು ಮಾತ್ರ ಇದ್ದೇವೆ. ನಮ್ಮನ್ನು ಕಡೆದ ಕಲಾವಿದರು ಇಂದು ಇಲ್ಲ. ನಾವು ಅವರ ಪ್ರತೀಕ. ಅವರ ಅಂದಿನ ಭಕ್ತಿ, ಕಲೆಗಾಗಿ ಇದ್ದ ಪ್ರೀತಿ, ಕಲಾಸೌರಭವನ್ನು ಸೂಸಲು ನಾವಿಂದು ನಿಂತಿದ್ದೇವೆ. ಅಂದಿನವರ ಪ್ರತೀಕ ನಾವು. ಕಲೆಯ ಕೊಲೆ ಎಂದಿಗೂ ಆಗಲಾರದು.” ಮತ್ತೆ ನಕ್ಕಂತಾಯಿತು. “ಅಹುದು, ಕಲೆಯ ಕೊಲೆಯಾಗಲಾರದು. ನಾನು ....ನಾನು ? ನನ್ನಿಂದ ಕಲಾದೇವಿ ನೊಂದುಕೊಂಡಿದ್ದಾಳೆ. ಆದರೆ ನನ್ನ ಅಂದಿನ ಜೀವನ, ...ನನ್ನ ಮೊದಲಿನ ಜೀವನ....”ಪ್ರಭಾಕರನಿಗೆ ನೆನಪು ಬರಹತ್ತಿತು. ಅಂದು....

ಅಂದು,........ ನಾನಾಗ ಎಂಟು ವರುಷದ ಹಸುಳೆ. ಮೊದಲಿ ನಿಂದಲೂ ನಾಟ್ಯಕಲೆಯಲ್ಲಿ ಆಸಕ್ತಿ ಬಹಳೇ ಇತ್ತು. ಸಿನೇಮಾ ಮುಂತಾದುವುಗಳಲ್ಲಿಯ ಅಭಿನಯವನ್ನು ಮನೆಯಲ್ಲಿ ಮಾಡುತ್ತಿದ್ದೆ. ಆದರೆ, ಮನೆಯಲ್ಲಿ ಯಾರಿಗೂ ಸರಿಬರಲಿಲ್ಲ. ಮಲತಾಯಿಯ “ಇದೇನು ಹೆಂಗಸ್ನಾಂಗ ಹಾಂಗ ಕುಣಿಯೋದು—ಮೂಗು ಮೂರಿಯೋದು !” ಎಂಬ ಶಬ್ದಗಳನ್ನು ದಿನಕ್ಕೆ ಮೂವತ್ತು ಸಲ ಕೇಳುತ್ತಿದ್ದೆ. ಕಡೆ-ಗೊಂದು ದಿನ ಮನೆ ಬಿಟ್ಟೆ. ಮನೆಯೆಂಬ ಪಂಜರದಿಂದ ತಪ್ಪಿಸಿ-ಕೊಂಡು, ಜಗತ್ತೆಂಬ ವಿಶಾಲವಾದ ಪಂಜರದಲ್ಲಿ ಸಿಕ್ಕಿಬಿದ್ದೆ.

ಅಯ್ಯೋ, ಆಗಿನ ನನ್ನ ಜೀವನ........

ಎಷ್ಟೋ ದಿನಗಳ ವರೆಗೆ ಭಿಕ್ಷೆ ಬೇಡಿದೆ. ಹೊಟ್ಟೆಯ ಹೋರಾಟವನ್ನು ನಡೆಸಿದೆ. ಆದರೆ ಹಸಿದ ಹೊಟ್ಟೆಯುರಿ ಹಿಂಗಲಿಲ್ಲ, ಕಡೆಗೊಂದು ದಿನ ಶಾಮರಾಯರ ಕಣ್ಣಿಗೆ ಬಿದ್ದೆ. ಮಕ್ಕಳಿಲ್ಲದ ಕೊರಗಿನಿಂದ ಕೊರಗುತ್ತಿದ್ದ ಆ ದಂಪತಿಗಳಿಗೆ ಮುದ್ದಿನ ಮಗುವಾದೆ. ಅದಕ್ಕೆ ಕಾರಣ........

ಪೂರ್ವಜನ್ಮದ ಪುಣ್ಯಫಲವೇನೋ........

ಮುಂದೆ ನನ್ನ ಜೀವನವನ್ನು ಕಲಾದೇವಿಯ ಪಾದಾರವಿಂದದ ಕುಸುಮವನ್ನಾಗಿ ಮಾಡಿದೆ. ಆ ಸಾಕುತಂದೆ-ತಾಯಿಗಳೇ ನನ್ನ ನಿಜ ತಂದೆ-ತಾಯಿಗಳಾದರು. ಕಲೆಗೆ ಮುನ್ನುಗ್ಗುವ ಪ್ರೋತ್ಸಾಹನ ಕೊಟ್ಟರು. ಸುಶೀಲಮ್ಮ—ಶಾಮರಾಯರ ಧರ್ಮಪತ್ನಿ, ನನ್ನ ಹಡೆ-ದಾಕೆಗಿಂತ ಹೆಚ್ಚಾದಳು. ಅಂತೂ ಕಡೆಗೆ ನೃತ್ಯಶಾಲೆಯನ್ನು ಸೇರಿದೆ. ಕಲೆಗಾಗಿ, ಕಲಾದೇವಿಗಾಗಿ........

ಹನ್ನೆರಡು ವರುಷ—

ಹನ್ನೆರಡು ವರುಷಗಳು ಹೇಗೆ ಕಳೆದುವೋ ತಿಳಿಯಲೇ ಇಲ್ಲ. ಅಂತೂ ಹನ್ನೆರಡು ವರುಷಗಳ ಪರಿಶ್ರಮದಿಂದ ಕಲಾಕೋವಿದನಾದೆ. ನಾಟ್ಯಾಚಾರ್ಯನಾದೆ.ಎಲ್ಲರಿಂದಲೂ ಆಹ್ವಾನ ಪತ್ರಿಕೆಗಳು ಬರಲಾರಂಭಿ ಸಿದುವು. ಅಂದಿನ ಜಗತ್ತಿಗೆ ನಾನೊಬ್ಬ ಪ್ರತಿಭಾವಂತ ಕಲಾಕಾರ.

ಆದರೆ....ಇಂದು ಈ ಹಾಳು ಗುಡಿಯಲ್ಲಿ........

‘ಹಃ ಹಃ ಹಃ’ ಎಂದು ಮೂರ್ತಿಗಳು ಮತ್ತೆ ನಕ್ಕಂತಾಯಿತು. ಪ್ರಭಾಕರ ತನ್ನ ಕಿವಿಯ ಮೇಲೆ ಬೆರಳನ್ನಿರಿಸಿಕೊಂಡನು. ಆದರೆ ತಲೆಯಲ್ಲಿ ಅದೇ ಯೋಚನೆ, ಅದೇ ವಿಚಾರ, ಮಿದುಳನ್ನು ಮಿಡಿದೇ ಮಿಡಿಯುತ್ತಿತ್ತು. ಎಲ್ಲ ಭಗ್ನಮೂರ್ತಿಗಳು “ಮುಂದೆ, ಮುಂದೆ?” ಎಂದಂತಾಯಿತು.

ಮುಂದೆ. ನಾನೊಂದು ನೃತ್ಯಶಾಲೆಯನ್ನು ತೆರೆದೆ. ಅಬ್ಬಾ, ಎಷ್ಟು ಜನ ಆಗ ನನ್ನ ಶಿಷ್ಯೆಯರಿದ್ದರು! ಎಂಥ ಸುಂದರಿಯರು! ಆದರೆ ಆ ಸೌಂದರ್ಯದ ಪಕ್ಷಿಗಳಲ್ಲಿ ಯಾವ ಪಕ್ಷಿಯೂ ನನ್ನ ಹೃದಯವನ್ನು ಗೆದ್ದುಕೊಂಡಿರಲಿಲ್ಲ. ಆದರೆ ಒಂದು ದಿನ:

ಒಬ್ಬಳು ನನ್ನ ನಾಟ್ಯಶಾಲೆಯಲ್ಲಿ ಬಂದಳು. ನೇರವಾಗಿ ನನ್ನ ಹತ್ತಿರ ಬಂದವಳೇ “ನಮಸ್ಕಾರ ಸಾರ್” ಎಂದಳು. ಮೊಗ ಮೇಲಕ್ಕೆ ಎತ್ತಿದೆ. ಕಂಡದ್ದೇನು? ಹದಿನಾರರ ಹೊಸ್ತಿಲಲ್ಲಿ ಕಾಲಿಟ್ಟ ಹೆಣ್ಣು ! ಉಟ್ಟುದೊಂದು ಬಿಳಿಯ ಸೀರೆ, ಅದರ ಮೇಲೆ ಜೆಂಬಣ್ಣದ ರವಿಕೆ. ಕಿರಿದಾದ ಜಡೆಗಳಲ್ಲಿ ಸಿಲುಕಿದ್ದ ಸಂಪಿಗೆಯ ಗುಚ್ಛ. ದಿಟ್ಟಿಸಿ ಅವಳನ್ನೇ ನೋಡಿದೆ, ನನ್ನ ಮೂಗು ನನಗೆ ಗೊತ್ತಿಲ್ಲದೆ. ತನ್ನ ಕಾಯಕ ನಡೆ-ಸಿತ್ತು. ಅವಳು ಇನ್ನೂ ನಿಂತಿದ್ದಳು. ನಾನು ಕೂಡಬಹುದೆಂದು ಸೂಚಿಸಿ “ನನ್ನಿಂದ ನಿಮಗೆ ಏನಾಗಬೇಕಿತ್ತು?” ಎಂದು ಪ್ರಶ್ನಿಸಿದೆ.

"ನಾನು ನೃತ್ಯವನ್ನು ಅಭ್ಯಾಸಿಸಬೇಕೆಂದು......." ತಡವರಿಸುತ್ತ ಆಕೆ ಹೇಳಿದಳು ಸೌಜನ್ಯವು ಅವಳಲ್ಲಿ ತುಂಬಿಕೊಂಡಿತ್ತು.

"ತಮ್ಮ ಹೆಸರು?" ಎಂದು ನಾನು ಅವಳಿಗೆ ಪ್ರಶ್ನಿಸಿದೆ.

"ಮೋಹಿನಿ. ಆದರೆ.........." ಮುಂದೆ ಮಾತನಾಡಲಿಲ್ಲ. ತಲೆಬಾಗಿತು. ಕಣ್ಣಿನ ಹನಿಯೊಂದು ಹಾಳೆಯ ಮೇಲೆ ಪಟ್ಟನೇ ಬಿದ್ದ ಸಪ್ಪಳಾಯಿತು. "ಮೋಹಿನೀದೇವಿ, ಸಂಕೋಚ ಪಟ್ಟುಕೊಳ್ಳಬೇಡಿರಿ!" ಎಂದು ಔಪಚಾರಿಕವಾಗಿ ನುಡಿದೆ.

"ಸಾರ್, ನಾನು ಬಡವಿ. ಅಭ್ಯಾಸಕ್ಕೆ ಕೊಡಲು ದುಡ್ಡಿಲ್ಲ. ನನ್ನನ್ನೇ ಬೇಕಾದರೆ ಕಲಾದೇವಿಗೆ ಅರ್ಪಿಸಬಲ್ಲೆ," ಎಂದು ನುಡಿದಳು.

ತಲೆ ತುರಿಸಿಕೊಂಡೆ. ನನಗೆ ನನ್ನ ಹಿಂದಿನ ನೆನಹು ಬಂದಿತು. ಅಂದು ನಾನಾದರೂ ಕಲಾದೇವಿಗೆ ನನ್ನನ್ನು ಅರ್ಪಿಸಿಕೊಂಡಿದ್ದ ವಿಚಾರಗಳ ಸುರುಳಿಯನ್ನು ಉಚ್ಚುತ್ತಿದ್ದಂತೆಯೇ "ಸಾರ್!" ಎಂದಳು ಮೋಹಿನಿ. ಕಣ್ಣಲ್ಲಿ ನೀರು ತುಂಬಿತ್ತು. ಮತ್ತೆ ಮಾತು ಮುಂದುವರಿಸಿದಳು: "ತಮಗೆ ಇಷ್ಟವಿದ್ದಲ್ಲಿ......."

"ಓಹೋ ಆಗಲಿ! ಹತ್ತು ಜನರೊಡನೆ ಹನ್ನೊಂದನೆಯವಳು. ನಾಳೆಯೇ ಐದು ಘಂಟೆಗೆ ಬರಬಹುದು!" ಎಂದು ಹೇಳಿದೆನು. ಅವಳು ಮುಂಬರಿದು "ತಮ್ಮ ಉಪಕಾರ......." ಎನ್ನುವಾಗಲೇ ನಾನು ನುಡಿದೆ:

"ಇರಲಿ, ಮನೆಯಲ್ಲಿ ಯಾರಿದ್ದೀರಿ?" ಎಂದು ಪ್ರಶ್ನಿಸಿದೆ.

"ಕೇವಲ ನನ್ನ ತಾಯಿ, ಹಾಗೂ ಒಬ್ಬ ತಮ್ಮ!" ಎಂದು ಉತ್ತರಿಸಿದಳು.

ಅಂದವಳು ಹೋದಳು. ಅವಳು ಹೋದರೂ, ಅವಳ ಮುಡಿಯಲ್ಲಿ ಮುಡಿದಿರುವ ಹೂವಿನ ಕಂಪು ನನ್ನ ಮೂಗಿನಲ್ಲಿ ಇನ್ನೂ ಉಳಿದಿತ್ತು. ನನ್ನ ಕಣ್ಣುಗಳು ಅವಳ ಹಿಂದೆಯೇ ಇದ್ದುವು. ಹಾಗೆಯೇ ಎಷ್ಟು ಹೊತ್ತಿನ ವರೆಗೆ ಕುಳಿತಿದ್ದೇನೋ ಏನೋ!

ಅಂತೂ ರಾತ್ರಿಯಾಯಿತು, ಬೆಳಗಾಯಿತು. ಮಧ್ಯಾಹ್ನ ಸಂಜೆ. ಸಂಜೆ, ಜಗತ್ತಿನ ದಿನಚರಿ!

ಸಂಜೆಯ ಮುಂದೆ ಬಂದಳು. ನನ್ನ ಕಣ್ಣುಗಳು ಅವಳ ಬರವನ್ನೇ ಕಾಯುತ್ತಿದ್ದುವೋ ಏನೋ!

ಅವಳ ನಡೆ-ನುಡಿಗಳಲ್ಲಿ ಬೆಡಗಿರಲಿಲ್ಲ, ಬಿನ್ನಾಣವಿರಲಿಲ್ಲ! ಬಿಂಕವಿರಲಿಲ್ಲ, ಒಯ್ಯಾರವಿರಲಿಲ್ಲ. ಯಾವಾಗಲೂ ಅವಳ ತುಟಿಗಳಿಂದ ಹೊರಚಿಮ್ಮುತ್ತಿದ್ದುದು ಮುಗುಳುನಗೆ, ಮುಪ್ಪಿಲ್ಲದ ಮುಗುಳುನಗೆ.

ದಿನಾಲು ಬರಹತ್ತಿದಳು.

ಮೋಹಿನಿ ಚೆನ್ನಾಗಿ ಅಭ್ಯಾಸ ಮಾಡಹತ್ತಿದಳು.

ಕೆಲವೊಂದು ದಿವಸಗಳಲ್ಲಿ ನಾಟ್ಯಕಲೆಯಲ್ಲಿ ಪ್ರವೀಣಳಾದಳು. ನನ್ನ ಜೊತೆಯಾಡಿ ನೃತ್ಯ ಮಾಡಹತ್ತಿದಳು. ಎಲ್ಲಿ ನೋಡಿದಲ್ಲಿ 'ಪ್ರಭಾಕರ-ಮೋಹಿನಿ' ಎಂದೇ ಗುಣಗಾನ. ನನಗೆ ನಾನೇ ತಿಳಿಯದಂತೆ ಅವಳನ್ನು ಪ್ರೇಮಿಸಿದೆ. ಇದು ಕೇವಲ ನನ್ನ ಕಲ್ಪನೆ ಮಾತ್ರ-

ಆದರೆ ಅವಳ ಕಲ್ಪನೆ..........

ಅಂದು, ನಮ್ಮ ನೃತ್ಯಕಲಾನಿಕೇತನದ ವಾರ್ಷಿಕೋತ್ಸವ. ಅಂದು ನಾನು ಶಿವ, ನನ್ನ ಮೋಹಿನಿ ಪಾರ್ವತಿ. ನಾನು ಕುಣಿದೆ; ಶಿವನೇ ನಾನಾಗಿ ಕುಣಿದೆ. ಮೋಹಿನಿಯು ಕುಣಿದಳು; ಕರತಾಡನಗಳಿಂದ ಕಿವಿ ಕಿಕ್ಕಿರಿದುಹೋಯಿತು. ಪೂಮಾಲೆಗಳಿಂದ ಕತ್ತು ಬಗ್ಗಿಹೋದುವು. ನಾನು ಮತ್ತು ಮೋಹಿನಿ ಜತೆಯಾಗಿಯೇ ನಿಂತಿದ್ದೆವು. ನನಗೊಂದು ವಿಚಾರ ಹೊಳೆಯಿತು.

'ಒಂದುವೇಳೆ ಮೋಹಿನಿ ನನ್ನವಳಾದರೆ!.......' ಇದಕ್ಕೂ ಮೊದಲು ಎಷ್ಟೋ ಕನಸುಗಳನ್ನು ಕಟ್ಟಿದ್ದೆ. ಆದರೆ ಮರುದಿನ ಅವಳನ್ನು ಕೇಳಿದೆ: "ಮೋಹಿನೀ, ನನ್ನನ್ನು ಲಗ್ನವಾಗುವೆಯಾ" ಎಂದು. ಅವಳು ಒಮ್ಮೆಲೆ ಮೋರೆ ಮೇಲಕ್ಕೆತ್ತಿ, ತಲೆ ಅಲ್ಲಾಡಿಸಿದಳು. ಒಲಿಯಬಹುದು, ಆನಂದ ಪಡಬಹುದೆಂದು ತಿಳಿದಿದ್ದ ನನಗೆ ಸಿಟ್ಟುಬಂದಿತು. ತಿಪ್ಪೆಯಲ್ಲಿ ಬಿದ್ದವಳನ್ನು ಎಬ್ಬಿಸಿ ಉಪ್ಪರಿಗೆಗೆ ತಂದೆ; ಅದಕ್ಕೆ ತಕ್ಕ ಪ್ರತಿಫಲ! ಹಾವಿಗೆ ಹಾಲು ಎರೆದಂತಾಯಿತು. ಮೊದಲೇ ಉನ್ಮತ್ತನಾಗಿದ್ದೆ. ಮುಂದೆ ನಿಂತವಳನ್ನು ಗಟ್ಟಿಯಾಗಿ ತಬ್ಬಿಕೊಂಡು ಮುದ್ದು ಕೆನ್ನೆಗಳ ಮೇಲೆ ಮುತ್ತನ್ನಿಟ್ಟೆ. ಮರುಕ್ಷಣದಲ್ಲಿ, ನಾನು ಕೆಳಗೆ ಬಿದ್ದಿದ್ದೆ. ನನ್ನ ಗಲ್ಲಗಳು ಉರಿಯುತ್ತಿದ್ದುವು. ಅವಳನ್ನು ನೋಡಿದೆ; ಮೈಯೆಲ್ಲಾ ಕಂಪಿಸುತ್ತಿತ್ತು. ಬಿದ್ದಲ್ಲಿಂದಲೇ:

"ಮೋಹಿನೀ, ನಾನು ನಿನ್ನನ್ನು ಪ್ರೀತಿಸಿದ್ದೇನೆ" ಎಂದೆ.

ಅವಳು ನಡುಗುತ್ತ, ಕೆಂಗಣ್ಣುಗಳಿಂದ ನನ್ನನ್ನೇ ನೋಡುತ್ತ "ಪ್ರೀತಿಸಿರಬಹುದು. ಒಬ್ಬ ಅಣ್ಣ ತಂಗಿಯನ್ನು ಪ್ರೀತಿಸುವಂತೆ, ಗುರು ಶಿಷ್ಯಳನ್ನು ಪ್ರೀತಿಸುವಂತೆ, ಕಲಾವಿದ ಕಲಾವಿದನನ್ನು ಪ್ರೀತಿಸುವಂತೆ! ಸಾರ್, ಇಂದಿಗೆ ನಮ್ಮ ನಿಮ್ಮ ಸಂಬಂಧ ಕಡಿದುಹೋಯಿತು. ನಮ್ಮಿಂದ ಕಲಾಮಂದಿರ ಅಪವಿತ್ರವಾಗಬಾರದು. ನನಗಾಗಿ ನೀವು ಕಲಾದೇವಿಯನ್ನು ಕೊಲ್ಲಲಾರಿರಿ. ಇನ್ನು ನನ್ನ ಹಾದಿ ನನಗೆ! ಇನ್ನು ಮುಂದೆ ನನಗೆ ಬಂದ ಕೀರ್ತಿ, ಎಲ್ಲವೂ ನಿಮ್ಮದೇ! ಎಲ್ಲಿದ್ದರೂ ನಾನು ನೀವು ಬಿಟ್ಟ ಎಂಜಲವನ್ನೇ ತಿನ್ನುವೆ. ಎಲ್ಲಿದ್ದರೂ ನಿಮ್ಮ ಕಲಾಭಿವೃದ್ಧಿಗಾಗಿ ದೇವರಲ್ಲಿ ಬೇಡಿಕೊಳ್ಳುವೆ. ನನ್ನನ್ನು ಮರೆತು ಬಿಡಿ; ಕಲೆಗಾಗಿ ಮುನ್ನುಗ್ಗಿರಿ!"

ಇಷ್ಟು ಹೇಳಿ ಮೋಹಿನಿ ಹೋದಳು; ಹೊರಟುಹೋದಳು. ಕೊಠಡಿಯನ್ನು ಬಿಟ್ಟುಹೋದರೂ ನನ್ನ ಕಣ್ಣಿನಿಂದ ದೂರವಾಗಲಿಲ್ಲ, ನನ್ನ ಹೃದಯದಿಂದ ದೂರವಾಗಲಿಲ್ಲ. ನನ್ನ ಬಾಳ ದೋಣಿ ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿದೆ. ನನಗೇಕೋ ಬಲವಾದ ವ್ಯಥೆಯಾಯಿತು. ನಾನು ಹೊರಬಿದ್ದೆ, ಒಬ್ಬರಿಗೂ ತಿಳಿಸಲಿಲ್ಲ. ಶಿಷ್ಯರಿಗೂ ತಿಳಿಸಲಿಲ್ಲ. ಹೊರಬಿದ್ದೆ ಹೊರಬಿದ್ದೆ. ಕಾಲೆಳೆದತ್ತ ಹೊರಟೆ, ಕಾಲೆಳೆದತ್ತ ಹೊರಟವನು, ಕೊನೆಗೆ ಇಲ್ಲಿಗೆ ಬಂದು ಮುಟ್ಟಿದೆ. ಆದರೆ ನನ್ನ ಪಯಣ ಮುಗಿದ ಹಾಗೆ ತೋರುವುದಿಲ್ಲ. ಇನ್ನೆಲ್ಲಿ ಹೋಗುವೇನೊ ಏನೋ! ಎಲ್ಲವೂ ಕತ್ತಲೆ, ಬೆಳುದಿಂಗಳಿರುಳಿನಲ್ಲಿಯೂ ಸಹ ಕತ್ತಲೆ! ಕಣ್ಣಿಗೆ ಕತ್ತಲೆ, ಹೃದಯದಲ್ಲಿ ಕತ್ತಲೆ. ಜಗವೆಲ್ಲಾ ಕತ್ತಲಾಗಿ ತೋರುತ್ತಿರುವುದು ಇಂದೆನಗೆ!

"ಕತ್ತಲೆ! ನಿನ್ನ ಕಣ್ಣಿಗೆ ಕತ್ತಲೆಯೇ ಕಲಾವಿದಾ? ಹಃ ಹಃ ಹಃ" ಎಂದು ಎಲ್ಲ ಮೂರ್ತಿಗಳು ನಕ್ಕಂತಾದುವು. "ಓ ಕಲಾವಿದಾ, ನೀನು ಬೆಳಕನ್ನೇ ಕಂಡಿಲ್ಲ, ನಿನ್ನ ಒಳಗಣ್ಣನ್ನು ತೆರೆದು ನೋಡು, ಅಂದರೇ ನಿನಗೆ ಕಾಣುವುದು ಬೆಳಕು. ಏಳು, ಕಲಾದೇವಿ, ನಿನ್ನನ್ನು ಕರೆಯುತ್ತಿದ್ದಾಳೆ. ನಿನಗಾಗಿ ದಾರಿ ಕಾಯುತ್ತಿದ್ದಾಳೆ. ಎರಡು ದಿನ ಮಗು ಬಂದಿಲ್ಲವೆಂದು ದಾರಿನೋಡುತ್ತಿದ್ದಾಳೆ. ಏಳು, ಕಲೆಗಾಗಿ ಬಾಳು! ಬಾಳೇ ಒಂದು ಕಲೆ! ಹೂಂ ನಡೆ ಮುಂದೆ," "ಛೆ, ಸಾಧ್ಯವಿಲ್ಲ, ಆ ಕಲೆಯಿಂದ ನನ್ನ ಜೀವನದ ಕೊಲೆಯಾಗಿದೆ. ನಾನು ಪ್ರೀತಿಸಿದ ಮೋಹಿನಿ! ಅವಳಿಗಾಗಿ ನನ್ನ ಜೀವನ........" "ಥೂ, ನರಹೇಡಿ! ಕಲಾವಿದನಂತೆ, ಕಲಾವಿದ! ಬಿಡು ಎಲ್ಲವನ್ನು! ಕಲೆಗಾಗಿ ಆತ್ಮಾರ್ಪಣ ಬೇಕು! ನಿನ್ನ ಆತ್ಮದ ಜ್ಯೋತಿ, ಕಲೆಯಲ್ಲವೆ ಜ್ಯೋತಿ! ಎದ್ದೇಳು ಎದ್ದೇಳು, ನಡೆ ಮುಂದೆ, ಮುಂದೆ, ಕಲೆಗಾಗಿ. ಆದ ಗಾಯವನ್ನು ಮರೆ! ನಿನ್ನ ಮೋಹಿನಿ ಕಲಾದೇವಿಯಲ್ಲಿ ಅಡಗಿದ್ದಾಳೆ. ಹೂಂ ಎದ್ದೇಳು, ಎದ್ದೇಳು! ಕಲಾದೇವಿಯನ್ನು ನೋಯಿಸಬೇಡ, ಕಾಯುತ್ತಿದ್ದಾಳೆ. ಏಳು! ಏಳು, ಎದ್ದೇಳು! ಏಳು" ಎಲ್ಲ ಮೂರ್ತಿಗಳು ಅಂದಂತಾಯಿತು. ಕಲಾವಿದ ಪ್ರಭಾಕರ ಎದ್ದನು. ಆಗಲೇ ಬಾನಿನಲ್ಲಿ ಬೆಳ್ಳಿ ಮೂಡಿತ್ತು, ಆ ಬೆಳ್ಳಿಚುಕ್ಕಿಯಲ್ಲಿ ಒಂದು ಬೆಳಕನ್ನು ಕಂಡನು. ಅದು ಒಂದು ಕಲೆ, ಸೃಷ್ಟಿಯೇ ಒಂದು ಕಲೆಯ ಬಲೆ, ಸೃಷ್ಟಿಯೆಲ್ಲವೂ "ಏಳು, ಎದ್ದೇಳು!" ಎಂದಂತಾಯಿತು. ಪ್ರಭಾಕರನು ಹೊರಟನು. ನೀರು ತುಂಬಿತ್ತು ಕಣ್ಣುಗಳಲ್ಲಿ, ಕೊರಳು ಬಿಗಿದಿತ್ತು. "ಅಮ್ಮಾ' ಕಲಾದೇವಿ! ಬಂದೆನಮ್ಮಾ ಬಂದೆ! ಕಲಾದೇವಿ, ಬಂದೆ! ಇದೋ ನಿನ್ನ ಪಾದಕ್ಕೆ ನನ್ನ ತಲೆ!" ಎಂದು ಕೂಗಿಕೊಂಡನು. ಸೃಷ್ಟಿಯ ಸೊಬಗೆಲ್ಲಾ ಹೊರಳಿ ನಿಂತಂತಾಯಿತು ಕಲಾದೇವಿಯ ರೂಪದಲ್ಲಿ! "ಬಾ ಮಗು ಬೆಳಕು ಕಂಡೆಯಾ?" ಎಂದಂತಾಯಿತು. "ಕಂಡೆನಮ್ಮಾ ನಶಿಸಲಾರದ ಬೆಳಕು ಕಂಡೆ! ಅಚ್ಚಳಿಯದ ಬೆಳಕು ಕಂಡೆ! ಇಂದು ನನ್ನ ಜೀವನದ ಅರುಣೋದಯ!"

ಆಗಲೇ ಮೂಡಣದಲ್ಲಿ ದಿನಕರ ಮೇಲಕ್ಕೇಳುತ್ತಿದ್ದ. ಇತ್ತ ಚಂದ್ರತಾಯ ಮಡಿಲನ್ನು ಸೇರುತ್ತಿದ್ದ. ಪ್ರಭಾಕರ ನಡೆದನು, ನಡೆದನು, ತನ್ನ ಗುರಿಯೆಡೆಗೆ, ಬೆಳಕಿನೆಡೆಗೆ, ಕಲಾದೇವಿಯೆಡೆಗೆ. ಗಾಳಿ ಅಲೆ-ಅಲೆಯಾಗಿ ಬಂದು "ಕಲಾವಿದಾ ಬೆಳಕು ಕಂಡೆಯಾ?" ಎಂದು ಕೇಳುತ್ತಿತ್ತು. ಪ್ರಭಾಕರ ಗೋಣು ಹಾಕುತ್ತ ನಡೆದೇ ಇದ್ದನು.

"ಎತ್ತಕಡೆಗೆ! ಕಲಾದೇವಿಯೆಡೆಗೆ, ಬೆಳಕಿನೆಡೆಗೆ!"

(೪೬೯ ನೆಯ ಪುಟದಿಂದ ಬಂದುದು)

ಕೊನೆಯ ಮಾತು

ಒಬ್ಬ ಮಹಾನುಭಾವರ ಅನುಭವದ ಉಕ್ತಿಯಂತೆ ಭಕ್ತಿಯ ಶಕ್ತಿಯೆಂದರೆ ದೇವರಿಗೆ ಶರಣಾಗುವುದು, ರಕ್ತವು ಭಕ್ತಿಯಾಗಬೇಕು. ತನ್ನನ್ನು ಮರೆತು ದೇವನಲ್ಲಿ ಬೆರೆತುಕೊಳ್ಳಬೇಕು. ಎಂದರೆ ಎಲ್ಲವೂ ಸರಿಹೋಗುವುದು. ಕಷ್ಟನಷ್ಟಗಳು ಕಾಣವು. ಅಸಾಧ್ಯ ಸಾಧ್ಯವಾಗುವುದು. ನಮ್ರನಾಗಿ ನಡೆಯಬೇಕು. ಸೊಕ್ಕುತಕ್ಕುಗಳು ತಕ್ಕುದಲ್ಲ. ದೇವನಲ್ಲಿ. ಹೊಳೆಯಲ್ಲಿ ಹೊಳೆಯುವ ಮತ್ಸ್ಯವನ್ನು ನೋಡಬೇಕು. ಜಲವೇ ಅದರ ಜೀವನವಾಗಿರುವುದು. ಮೀನು ನೀರಿಲ್ಲದೆ ನಲಿಯದು; ಜಲವಿಲ್ಲದೆ ಜೀವಿಸದು. ಇಷ್ಟೇ ಅಲ್ಲ, ನೀರಿಲ್ಲದ ನೆಲದಲ್ಲಿ ತೊಳಲುವುದು. ಬಳಲುವುದು. ವಿಲಿವಿಲಿ ಒದ್ದಾಡುವುದು. ಕಡೆಗೆ ನೀರಿಗಾಗಿ ತಡವಿಲ್ಲದೆ ಮಡಿಯುವುದು. ಇದೇ ಜಲದಲ್ಲಿಯ ಮೀನಿನ ಭಕ್ತಿ. ಅಂತೆಯೇ ಹೊಳೆಯಾದರೂ ಮೀನಿಗೆ ಮನಬಂದಂತೆ ಬಳಕೆ ಮಾಡಕೊಡುವುದು. ಮೀನು, ಮಹಾ ಪ್ರವಾಹದಲ್ಲಿಯೂ ನೀರಿನ ಇದಿರು ಈಸುವುದು ಅದೇ ಗುಡ್ಡದಂತಹ ಮದ್ದಾನೆಯು ನದಿಯಲ್ಲಿ ಇದಿರು ಈಸಲು ಹೋಗಿ, ತೆರೆಯ ಹೊಡೆತಕ್ಕೆ ಕಾಲು ಮೇಲಾಗಿ, ಸೊಂಡಿಲು ಕೆಳಗಾಗಿ, ಹೊರಳುತ್ತ ಉರುಳುತ್ತ ಹೊಳೆಯ ತಳಕ್ಕೆ ಸಿಕ್ಕಿ ಸಾಯುವುದು. ಇದು ಸೊಕ್ಕಿನ ಸಾವು. ಗರ್ವದ ಗಂಡಾಂತರ. ಮೀನಿನದು ವಿನಯದ ವಿಜಯವು. ಭಕ್ತಿಯೋಗದ ಭಾಗ್ಯವು. ಇಂತಹ ಭಕ್ತಿಯೋಗದ ಅನುಭವವನ್ನು ಭಾರತೀಯರೆಲ್ಲರಿಗೂ ಭಗವಂತ ಅನುಗ್ರಹ ಮಾಡಲಿ!

"ನೂತನ ಗಣಿತ" ಗಳ ತಿದ್ದಿದ ಹೊಸ ಆವೃತ್ತಿಗಳು
೧ ರಿಂದ ೭ ತರಗತಿಗಳ ವರೆಗೆ
ಎಲ್ಲಕಡೆಗೂ ದೊರೆಯುವವು
ಎಲ್ಲ ಜಿಲ್ಲಾ ಸ್ಕೂಲ್ ಬೋರ್ಡ್ ಹಾಗೂ ಮ್ಯುನಸಿಪಲ್ ಸ್ಕೂಲ್ ಬೋರ್ಡುಗಳೂ ಮನ್ನಣೆಯನ್ನಿತ್ತಿರುವವು.
ಎಂತಲೇ ನಿಮ್ಮ ಪ್ರತಿಗಳನ್ನು ಇಂದೇ ಸಂಗ್ರಹಿಸಿರಿ. ವ್ಯಾಪಾರಿಗಳಿಗೆ ಧಾರಾಳ ಕಮಿಶನ್.
ಆಕಳವಾಡಿ ಬುಕ್‌ಡಿಪೋ, ಧಾರವಾಡ

◀ ಸಾಹೇಬರ ಸವಾರಿ ▶

(ನಾಟ್ಯಛಟಾ)

ಶ್ರೀ. ಗೋವರ್ಧನಾಚಾರ್ಯ ಗಲಗಲಿ ಎಂ. ಎ., ಬಿ. ಟಿ.
ಧಾರವಾಡ

[ದಟ್ಟಡವಿಯಲ್ಲಿ ಹಾಯ್ದು ಬರುವಾಗ, ಹಾವು ಹಾದಿಯಲ್ಲಿ ಅಡ್ಡ ಬಂದುದರಿಂದಲೂ, ಕಳೆದೊಂದು ವಾರದಿಂದ ಆ ಅಡವಿಯಲ್ಲಿ ಹುಲಿಯು ನಡೆಸಿದ ಉಪಟಳವನ್ನು ಕೇಳಿಯೂ, ಆ ಹಳ್ಳಿಯಿಂದ ಹಿಂದಿರುಗಿ ಹೇಗೆ ಹೋಗಬೇಕೆಂಬ ವಿಚಾರದಲ್ಲಿ, ಸಾಹೇಬರ ಮನವನ್ನು ಭಯವೂ ಚಿಂತೆಯೂ ಆವರಿಸಿದ್ದರೆ ಅದು ಆಶ್ಚರ್ಯವಲ್ಲ. ಸುದೈವದಿಂದ ಆ ಹಳ್ಳಿಗೆ, ಪ್ರತಿ ಮಂಗಳವಾರ ಎಲೆಯ ವ್ಯಾಪಾರಕ್ಕೆಂದು ಬರುತ್ತಿರುವ ಹುಸೇನ್‌ಸಾಹೇಬನ ಜೊತೆಯೂ, ಅವನ ಕುದುರೆಯ ವಾಹನವೂ ಸಾಹೇಬರಿಗೆ ದೊರಕಿದುವು. ತನ್ನ ಕುದುರೆಯ ಮೇಲೆ ಸಾಹೇಬರು ಕೂಡುವರಲ್ಲ—ಎಂಬ ಹೆಮ್ಮೆ, ಹುಸೇನ್‌ಸಾಹೇಬನಲ್ಲಿ ಮೂಡಿದೆ. ಈ ಉಬ್ಬಿನಲ್ಲಿ ಅವನ ನಾಲಗೆ ಹೇಗೆ ಸುಮ್ಮನಿದ್ದೀತು? ತನ್ನ ಎಲ್ಲ ಅನುಭವಗಳನ್ನೂ, ತತ್ವಜ್ಞಾನವನ್ನೂ ಒಟಗುಟ್ಟುತ್ತ ಹುಸೇನಿಯು ಹಿಂದೆ ನಡೆದಿದ್ದಾನೆ. “ಹೂಂ” “ಹೀಂಗೇನು?” “ಅಲ್ಲಽ ಮತ್ತ!” “ನೋಡಬೇಕು ಮತ್ತ!” ಎಂದಿಷ್ಟೇ ಉದ್ಗಾರಗಳನ್ನು ತೆಗೆಯುತ್ತ, ಸಾಹೇಬರು ಕುದುರೆಯ ಸವಾರರಾಗಿ ಮುಂದೆ ನಡೆದಿದ್ದಾರೆ.]

“ನೀವೇನೂ ಅಂಜಬ್ಯಾಡ್ರಿ ಸಾಹೇಬರ! ನೆಟ್ಟಗ ಸೆಟಕೊಂಡು ಕುಂದರ್ರಿ. ನೋಡೆರೆ....ನೊಡ್ರಿ, ಎಷ್ಟು ತೂಕದ ಮ್ಯಾಲೆ ಹೋಕ್ಕೈತಿ ನನ್ನ ಕುದರಿ! ‘ರಿಕೇಪೂ, ಲಗಾಮು, ಏನೂ ಇಲ್ಲಲೋ, ಹುಸೇನೀ, ಹ್ಯಾಂಗರೆ ನಿನ್ನ ಕುದರೀ ಮ್ಯಾಲೆ ಕುಂದರಬೇಕು?’ ಅಂತೀರ್‍ಯಾ? ಅವ್ಯಾಕ ಬೇಕ್ರೀ ನನ್ನ ಕುದರಿಗೆ? ತೂಕಾ ತಪ್ಪಿ ನಡ್ಯಾವರಿಗೆ, ಹಾದೀ ಬಿಟ್ಟು ಹೋಗವರಿಗೆ, ಲಗಾಮೂ ಬೇಕು, ರಿಕೇಪೂ ಬೇಕು—ಮ್ಯಾಲೆ ಒಂದು ಕೋರ್ಡಾಸೂ ಬೇಕು! ಸಾಹೇಬರ, ನಾ ಆತು ನನ್ನ ಕುದುರಿ ಆತು, ಅಡ್ಡ ಹಾದೀ ಎಂದೂ ಹಿಡ್ಯಾಣಿಲ್ಲ ನೋಡ್ರಿ. ‘ಇಂವೇನಪಾ, ನನ್ನ ಮುಂದ ತತ್ತ್ವಾ ಹೇಳಾಕ ಬಂದಾನು!’ ಅಂತೀರ್‍ಯಾ? ಆದರ ಸಾಹೇಬರ, ನಾ ಬಾಳ ಮಂದಿ ತತ್ತ್ವಾ ಹೇಳವರನ್ನ ಕೇಳೀನ್ರಿ. ಅವರ ಮಾತು ಉತ್ತರದ ಕಡೆ ಮಾರೀ ಮಾಡಿದ್ದರ, ನಡತಿ ದಕ್ಷಿಣದ ಕಡೆ ತಿರಿಗಿರತೈತಿರಿ. ಸಾಹೇಬರ, ಬಾಳೇ ಇದೊಂದು ಅಡಿವ್ಯಾಗಿನ ಹಾದಿ ಇದ್ದಾಂಗರಿ! ಆಚೀ ದಂಡಿಗೆ ಹೋಗಲಾಕಽ ಬೇಕು! ಅದೇನು ಯಾರಪ್ಪಗೂ ಬಿಟ್ಟಿದ್ದಲ್ಲ. ಅಂಜಿಕೊಂತಽ ಕೂತರ ಸಾಗಬೇಕು ಹ್ಯಾಂಗ? ಈ ಅಡವೀ ದಾಟೂ ಮಟ, ನನ್ನ ತಲ್ಯಾಗ ಇದೇ ಇಚಾರರಿ! ಈ ಊರಿಗೆ ಬರಲಾಕ ಹತ್ತಿ ಹದಿನೈದು ವರಸಾತು. ಒಂದು ವಾರರೇ ತಪ್ಪಿಸೀನೇನು? ಇಲ್ಲೀ ಮಂದಿನ್ನ ಕೇಳ್ರಿ ಬೇಕಾದರ! ‘‘ಸೂರ್ಯಾ ಒಂದು ಯಾಳೇ ಮೂಡಾಕಿಲ್ಲ; ಆದರ ಹುಸೇನಿ, ಅವನ ಕುದುರಿ, ಮಂಗಳವಾರ ಮುಗದೂರೇನೂ ತಪ್ಪಸವರಲ್ಲ!” ಅಂತಾರು. ಮುಖ್ಯ ಏನರಿ....ನಂಬಿಕಿ ಬೇಕ್ರಿ ಸಾಹೇಬರ! ಈಗಿನ ಮಂದೇನು ಎಲ್ಲಾ ಕೆಟ್ಟೈತಿ; ಖರೇತನಾ ಕಿರೇ—ಸ್ಕೊರಿಸಿ ಯಾರೂ ನಡ್ಯಾಣಿಲ್ಲ. ಕಲಿಯುಗಾ— ಅಂತ ಎಲ್ಲಾರೂ ಅನ್ನವರಽ! ನನಗೇನೂ ಇದರ ಮ್ಯಾಲೆ ನಂಬಿಗಿ ಇಲ್ಲ! ತಾ ಇದ್ಧಾಂಗ ಜಗಾ ಇರತೈತೇನ್ರಿಪಾ! ಈ ಎಡ್ಡೂ ಹಳ್ಳಿ ನೋಡ್ರಿ; ನನಗ ವರಸಾ ಐವತ್ತು ಚೀಲ ಭತ್ತಾ ಕೊಡತಾವರಿ! ವರಸದ ಮಟಾ ನಾ ಅವರಿಗೆ ಎಲೀ ಕೊಡಾಂವ! ಸುಗ್ಗ್ಯಾಗ ನನಗವರು ಭತ್ತಾ ಕೊಡವರು! ನಾನೂ ತಪ್ಪಿಸೂ ಹಾಂಗಿಲ್ಲ; ಅವರೂ ತಪ್ಪಿಸೂ ಹಾಂಗಿಲ್ಲ! ಮಾತಾದಕಿಂತಾ ಒಂದು ಮುಕ್ಕೇನೂ ಯಾವನೂ ಇನ್ನೂ ತನಕಾ ಕಡಿಮಿ ಕೊಟ್ಟಿಲ್ಲ ನೋಡ್ರಿ!

ಬೇಕಾದಂತಾ ಗಾಳಿ ಇರಲಿ, ಮಳಿ ಇರಲಿ, ರಾಡಿ ಇರಲಿ, ರೊಜ್ಜು ಇರಲಿ, ನಾ ಏನೂ ಇಲ್ಲಿ ಬರೂದು ಬಿಟ್ಟಿಲ್ಲ. ಆರು ಹರವಾರೀ ಮ್ಯಾಲಿಂದ, ದರಾ ಮಂಗಳವಾರ, ಹುಸೇನಿ ಅವನ ಕುದರಿ ಇಲ್ಲಿ ಇರವರಽರಿ! ಮಳಿಗಾಲದಾಗ ಇದು ದಾರಿನಽ ಅಲ್ಲರಿ ಸಾಹೇಬರ! ಎದೀ ಮಟಾ ನೀರಾಗ ಒಮ್ಮೊಮ್ಮೆ ಈಸಿ ಬಂದೇವ ನೋಡ್ರಿ. ಆಗ ಈ ಅಡಿವಿ ಏನು ಚೆಂದ ಕಾಣಿಸತೈತಿ ಅಂದ್ರಿ! ನೆದರ ಹರಿಯೂತನಕಾ ಹಸರಽ ಹಸರು! ಇತ್ಲಾಗ, ಮುಗಿಲ ಮಟಾ ಮಾಡದ ಹಾಂಗ, ಕರ್‍ರಗ ಗುಡ್ಡ ಏನ್ರಿಪಾ! ಅದೇನು ಬಾಯಿಂದ ಹೇಳಾಕ ಬರಾಣಿಲ್ಲ ಬಿಡ್ರಿ. ಖುದ್ದ ಶಿವಾ–ಪಾರ್ವತಿನ್ನ ಕಂಡ್ಹಾಂಗಽ ಆಕ್ಕೈತಿ ನನಗಂತೂ. ‘ಅಲ್ಲಾನ ಬಿಟ್ಟು ನಮ್ಮ ದೇವರನ್ನ ಯಾಕ ನೆನಸತೀಯೋ ಹುಸೇನೀ!’ ಅಂತೀರ್‍ಯಾ? ದೇವರೇನ್ರಿ, ಎಲ್ಲಾ-ರಿಗೂ ಒಂದಽರಿ.! ಆ ದೇವರು ಈ ದೇವರು ಅಂತ ಸುಳ್ಳ ಸುಳ್ಳಽ ನೋಡ್ರಿ ಮಂದಿ ಬಡದಾಡೂದು! ಇದರ ಕತೀನಽ ಮೋಜೈತಿ ಬಿಡ್ರಿ. ತಮ್ಮ ತಮ್ಮ ಧರಮದ ಪ್ರಕಾರ ಯಾಂವನರೇ ನಡೀತಾನ ಅಂತೀರ್‍ಯಾ? ಅದರ ಸುದ್ದಿಲ್ಲ! ನಾ ನೋಡ್ರಿ, ಪರಮೇಸುರನ ಆಣೀ ಮಾಡಿ ಹೇಳತೀನಿ, ಒಂದು ದಿವಸ ಚಹಾ ಕುಡದಂವ ಅಲ್ಲ! ಖುದ್ದ ಎಲೀ ಯಾಪಾರಾ ಮಾಡತಿನಲ್ರಿ; ಒಂದು ದಿನಾ ಏನೂ ಎಲೀ ಅಡಿಕೀ ಹಾಕ್ಕೊಂಡಿಲ್ಲರಿ! ನನ್ನ ಹಲ್ಲರೆ ನೋಡ್ರಿ, ತಂಬಾಕು ಹಕ್ಕೊಳ್ಳವರ ಹಾಂಗ ಆದಾವರೆ? ಮಂದೇನು ಅಂತಾರು: “ಹುಸೇನೇನ ಜಿಬಟಪಾ! ಒಂದೂ ಪೈಏನೂ ಖರ್ಚು ಮಾಡಾಂವಲ್ಲ ನೋಡು!” ಅಂತ. ಆದರ ನಾ ಏನು ಅದಕ್ಕ ದರಕಾರ ಮಾಡಾಂವಲ್ಲ! ಜನಾ ಏನ್ರಿ....ಹಾಂಗಿದ್ದರ ಹಾಂಗ್ಯಾಕ ಅಂತೈತಿ; ಹೀಂಗಿದ್ದರ ಹಿಂಗ್ಯಾಕ ಅಂತೈತರಿ! ಆದರ ಬಾಯಿ ಹಿಡಿದು ಎಷ್ಟಂತ ಪೂಕ್ಸೈಸತೀರಿ? ಈ ಚಟಾ ಇರಬೇಕೂ ಅಂತ ಯಾವ ಧರ್ಮದಾಗ ಹೇಳೈತ್ರಿಪಾ? ಹರ್‍ಯಾಗ ಎದ್ದ ಕೂಡಲೇ ಎಡ್ಡು ರೊಟ್ಟೀ ಜಡದು, ನನ್ನ ಉದ್ಯೋಗಕ್ಕ ಹತ್ತಾಂವ. ಆದರ ಎಡ್ನೇ ಊರಿಗೆ ಹೋದಾಗ ಮಾತ್ರ ಹಾಟೀಲಕ್ಕ ಹೋಗಲಾಕಽ ಬೇಕಾಗತೈತ್ರಿ! ಆಗ ಮಾತ್ರ, ಹೋಗಾಂವ. ನಿಮ್ಮ ಧಾರವಾಡಕ್ಕ ಎಲೀ ಖರೀದಿಗೆ ದರಾ ಆಯಿತ್ವಾರ ಇರಾವನಽ ನಾ! ಅಲ್ಲಿ ಮಟನ್ ಮಾರ್ಕೆಟನ ಸಂದ್ಯಾಗ ಐತಿ ನೋಡ್ರಿ “ಮದೀನಾ ಮಿಲ್ಟ್ರೀ ಹಾಟೇಲ್” ಅಂತ ಪಾಟೀ ಬರದು ಹಚ್ಚ್ಯಾರು? ಅಲ್ಲೀ ಮೋಜು ಏನ ಹೇಳಲ್ರಿ ಸಾಹೇಬರ! ನಮ್ಮ ಮಂದೀಕಿಂತಾ ನಿಮ್ಮ ಮಂದೀನಽ ಬಾಳ್ರಿ

ಅಲ್ಲೆ! ಅಡ್ಡನಾವೂ, ಉದ್ದನಾವೂ, ಈಬತ್ತಿ ಎಲ್ಲಾ ಅಲ್ಲೆ ಬೆಟ್ಟೆ ಆಗತಾವ್ರಿ! ನಮ್ಮ ಸಾಮಾನು ತುಟ್ಟಿ ಆಗಲಾಕ ಇವರs ಕಾರಣ್ರಿ! ಮೊದಲ ಎಂಟಾಣೆಕ್ಕ ಸೇರಿದ್ದದ್ದು, ಈಗ ಎಡ್ಡೂವರಿ ರೂಪಾಯಿಗೆ ಸೇರು ಆಗ್ಯೆತ್ರಿ! ಮತ್ತ ಸಭಾದಾಗ ನಿಂತು ಲಕ್ಚರ್ ಬಿಗೀತಾರ್ರಿ. ಹೇಳೂ ಸೋವಿಲ್ಲ! ನಾ ಲೆಕ್ಕಾ ಹಾಕೀನೇನ್ರಿ. ಜಾತಿ, ಧರ್ಮ ಅಂಬೂದು ಮೂರರ ಪೂರ್ತೇಕ್ಕs ಉಳದೈತೀಗ! ಅವು ಯಾವಂವ್ರ ಊಟ, ಹೋಟ, ನೋಟ! ಹಾಟೇಲಿನಾಗ ಕುಂತು, ಬೇಕಾದವರ ಜೋಡಿ ಬೇಕಾದ್ದು ತಿನ್ನವ್ರೊಲ್ಯಾಕ; ಮನೀಗೆ ಬಂದವ್ಯಾಲಿ ಮಾತ್ರ 'ನಾ ಅವರ ಜೋಡೀ ಊಟಾ ಮಾಡೂದಿಲ್ಲ; ನಾ ಇವರ ಜೋಡೀ ಊಟಾ ಮಾಡೂದಿಲ್ಲ.' ಅಂತ ಆಗೊಂದು ಧರ್ಮ ನೆನಪಾಗತೈತಿ! "ನಾವು ನೀವು ಒಂದs ಜಾತಿಯವರು; ನನಗs ನೀ ಹೋಟು ಕೊಡಾಕ ಬೇಕು." ಎಂದು ಆಗೊಂದು ಜಾತೀ ನೆನಪ ತಗಿತಾರ; ಮತ್ತ ಇನ್ನ ತಿಂಗಳ ಅಖೈರಕ್ಕ ಸಿಗೂ ಪಗಾರದ ನೋಟು! ಅಂಥಾ ನೌಕರೀ ಸಲುವಾಗಿ ಒಂದು ಜಾತೀ ಉಪಯೋಗ ಆಕ್ಕೈತಿ! ಸತ್ಯ ನುಡೀಬೇಕು. ಕಿರೇ ಸೂರಿಸಿ ನಡೀಬೇಕು. ಒಬ್ಬರನ್ನ ಟೊಪ್ಪಿಗೀ ಹಾಕಬಾರದು—ಅಂಬೂದಕ್ಕ, ಒಂದೀಟರೆ ಧರ್ಮ, ಜಾತಿ, ನೆನಪಾಗತೈತಿ ಅಂತೀರೇನು? ಕೇಳಬ್ಯಾಡ್ರಿ. ಒಟ್ಟೀನ್ರಿ ಜನಕ್ಕ ಮಡೀಲಾಕ ಬ್ಯಾಡ; ದುಡ್ಡು ಖರ್ಚು ಮಾಡಲಾಕ ಬೇಕು!

ನಮ್ಮ ತಮ್ಮಂದs ಉದಾರಣೀ ತೊಗೊಳ್ರಿ. ಅಂವಾ ಮ್ಯಾಟ್ರಿಕ್ ಪರೀಕ್ಷಾ ಪಾಸಾಗ್ಯಾನೇನ್ರಿ. ಆದರ ಖಾಲೀ ಕುಂತಾನು. ಅವ ಏನು ಕೊಟ್ಟ ಇಲ್ಲರಿ ಮತ್ತ! ಅಳ್ಳು ಹುರದ್ಹಾಂಗ ಇಂಗ್ರೇಜೀ ಪುಸ್ತಕ ಓದತಾನು. ಆದರ ಎಲ್ಲಾರೂ ಕೂತು ನೌಕರೀ ಬೇಡಿದರ ಸರಕಾರರೇ ಎಲ್ಲಿಂದ ಕೊಡಬೇಕರಿ? ನಾ ಹೇಳಿದ್ನಿ ಅವಗ; "ಇಕಾ, ಸುಮ್ಮನs ಕುಂದರ ಬ್ಯಾಡ. ಇತ್ಲಾಗ ಇನ್ನೂ ನಾಕೈದು ಹಳ್ಳಿ ಆದಾವು. ನಿನಗೂ ಒಂದು ಕುದರೀ ಕೊಂಡು ಕೊಡತೀನಿ! ಎಲೀ ಯಾಪಾರ ಸುರು ಮಾಡಪಾ" ಅಂತ. ಆದರ ಅವನ ಮನಸಿಗೇನೂ ಬರವೊಲ್ಲದರಿ! "ಮಾಡಿದರ ಸೆಳ್ಯಾಗ ಕುಂತು ಕೆಲಸಾ ಮಾಡಂವ; ಇಲ್ಲದಿದ್ದರ ಹಾಂಗs ಇರಾಂವ" ಅಂತಾನರಿ! ಸಾಹೇಬರ, ನೀವು ನನ್ನ ಬೇದರ ಬೇಯವೊಲ್ಯಾಕ; ಈ ನಿಮ್ಮ ಓದು-ಬರಿ ಮನಿಶ್ಯಾನ ವೈ ಮೆತ್ತಗs ಮಾಡತಾವ ನೋಡ್ರಿ. ಲೇಕಣೀ ಹಿಡೀಲಾಕ ತಪ್ಪs ಬರಾಬರಿ! ಉಳಿದ ಎಲ್ಲಾ ಕೆಲಸಕ್ಕೂ ಬಾದ ನೋಡ್ರಿ! ಒಂದೀಟು ಮನಸು ಹಾಕಿ ಸ್ವಯಮುರದು ದುಡಿದರ, ಯಾರಿಗೂ 'ಯಪ್ಪಾ' ಅನದ್ಹಾಂಗ ರಾಜಾನ ಗತೆ ಇರಲಾಕ ಬರೂದಿಲ್ಲ? ನಾವು ನಿಮಗ ಸಾಹೇಬರs, ಅಂತ ಸಲಾಮು ಮಾಡತೇವ ಅನ್ರಿ! ನೀವು ನಿಮ್ಮ ವ್ಯಾಲಿನವರಂಗೆ, ಸಾಹೇಬ್ರು ಅಂತ ಬ್ಯಾಡ, 'ಸsರ್' ಅಂತರೇ ನಿಂತು ಮುಜರೀ ಮಾಡಲಾಕs ಬೇಕಲ್ರಿ! ಅಂದು ಅನಿಸಿಗೊಂಬೋದು ಏನು ಚಂದಾ—ಅಂತೀನ್ರಿ ನಾ.

(ತೆರೆ)

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

(ಸಂ.: ಶ್ರೀ ಪಿ. ವೆಂಕೋಬಾಚಾರ್ಯ ಬಿ ಎ., ಬಿ. ಟಿ.)

ಬೆಲೆ ಬಾಳುವ ಪುಸ್ತಗಳು ಕಡಿಮೆ ಬೆಲೆಗೆ!

(೧೩-೮-೦) (೯-೮-೦)

೧	ಪೂರ್ಣಿಮಾ (ಸಂಸಾರ ಸುಖದ ಚಿತ್ರಗಳು)	೨-೪-೦
೨	ಮನೋರಾಜ್ಯ (ಮೂರಂಕದ ನಾಟಕ)	೨-೪-೦
೩	ಮೋಪಾಸನ ಓಲೆಗಳು (ಜೀವನ ಚರಿತ್ರೆ)	೨-೪-೦
೪	ರುಕ್ಮಿಣಿ, (ಕಾದಂಬರಿ)	೨-೦-೦
೫	ಮುಡಿಯದ ಹೂ (ಮೋಪಾಸಾನ ಕತೆಗಳು)	೧-೮-೦
೬	ಕಲ್ಪನಾ ವಿಲಾಸ (ಸಣ್ಣ ಕತೆಗಳು)	೧-೮-೦
೭	ಪ್ರವಾದಿ (ಗಿಬ್ರಾನರ "ಪ್ರೊಫೆಟ್")	೨-೦-೦
		೧೩-೮-೦

ಈ ಮೇಲಿನ ಪುಸ್ತಕಗಳು ಕೇವಲ ೯-೮-೦ ಗೆ
ಅಂಚೆ ವೆಚ್ಚ ಸಹಿತ
ಒಳ್ಳೇ ಸುಸಂಧಿ. ಇಂದೇ ಬರೆಯಿರಿ.

೬೦೬೦ ಗೌಳೀಗಲ್ಲಿ **ಪಿ. ವಿ. ಆಚಾರ್ಯ & ಕಂ.**
ಹುಬ್ಬಳ್ಳಿ ಸಂಚಾಲಕರು: ಆನಂದ ಗ್ರಂಥಮಾಲಾ

ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

ಹಾಲು-ಹಣ್ಣು (ಕವನ ಸಂಗ್ರಹ) ೧-೮-೦
ಶ್ರೀ. ಭುಜೇಂದ್ರ ಮಹಿಷವಾಡಿ

ಬಾಳ-ಬಂಡಿ (ಕವನ ಸಂಗ್ರಹ) ೦-೮-೦
ಶ್ರೀ. ಬಾಳು ಬಿ. ಉಪಾಧ್ಯೆ

ಮೂಲ ಶಿಕ್ಷಣದ ಮೌಲ್ಯಮಾಪಣ ೦-೧೨-೦
ಶ್ರೀ. ಮಿರ್ಜಿ ಅಣ್ಣಾರಾಯ

ಭರತೇಶನ ನಾಲ್ಕು ಚಿತ್ರಗಳು ೧-೪-೦
ಶ್ರೀ. ಮಿರ್ಜಿ ಅಣ್ಣಾರಾಯ

ಶ್ರೀಶಾಂತಿಸಾಗರ ೦-೪-೦

ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ನು.

ಪ್ರತಿಗಳಿಗಾಗಿ ಬರೆಯಿರಿ :

ಶ್ರೀ. ಮಿರ್ಜಿ ಅಣ್ಣಾರಾಯರು
ಪೊ. **ಉಗಾರ ಬುದ್ರುಕ್** (ಜಿಲ್ಹಾ ಬೆಳಗಾಂವಿ)

◆ ಸಾಹಿತ್ಯ ವಿಹಾರ ◆

ಕಳೆದ ತಿಂಗಳ ಸಾ. ವಿ. ದಲ್ಲಿ ಪ್ರಕಟವಾದ ೩ನೆಯ ಪತ್ರವನ್ನು ಕುರಿತು ಬಂದ ಒಂದು ಓಲೆಯನ್ನು ಇಲ್ಲಿ ಪ್ರಕಟಿಸಲಾಗಿದೆ. —ಸಂ. ಜ.

'ಜಯಂತಿ' ಯ ಸಂಪಾದಕರಲ್ಲಿ, ಅರಿಕೆಗಳು

ಪ್ರಿಯರೆ,

ಏಪ್ರಿಲ್ ತಿಂಗಳ ಸಂಚಿಕೆಯ 'ಸಾಹಿತ್ಯ ವಿಹಾರ'ದಲ್ಲಿ ೩ನೆಯ ಓಲೆಯಾಗಿ ಬೆಳಕು ಕಂಡ ಪತ್ರಕ್ಕೆ, ಸಂಪಾದಕರ ನೆಲೆಯಲ್ಲಿ ತಾವು ಉತ್ತರಿಸಿರುವಿರಾದರೂ—ಓದುಗನ ನೆಲೆಯಲ್ಲಿ—ವಿಮರ್ಶಾಭ್ಯಾಸಿಯ ನೆಲೆಯಲ್ಲಿ—ನನ್ನದೊಂದು ಅಭಿಪ್ರಾಯವನ್ನು ಇತ್ತರೆ, ಅಧಿಕವೆಂದು ಭಾವಿಸದೆ ಒಲವಿನಿಂದ ಪ್ರಕಟಿಸುವಿರಾ ?

"ಸಾಹಿತ್ಯವಿಮರ್ಶೆಯ ಶಿಕ್ಷಣರಂಗದಲ್ಲಿ" ಉದ್ಯಮಿಸುವ ಅಭ್ಯಾಸಿಗಳಿಗೆ ಸಹಾಯವಾದೀತೆಂಬ ಭರವಸೆಯಲ್ಲಿ, ಶ್ರೀ "ಯ. ರಾ" ರಿತ್ತ ಅಭಿಪ್ರಾಯಗಳು ಯಾವ ಬಗೆಯಲ್ಲೂ ಸಮರ್ಪಕವಾಗಿಲ್ಲವೆಂದು ನನಗೆನಿಸುತ್ತದೆ. ಜಯಂತಿಯ ಶಿಕ್ಷಣರಂಗದಲ್ಲಿ ಕಾಣುವ ವಿಮರ್ಶೆಗಳು, ಜಯಂತಿಯ ಕೃತಿಗಳಲ್ಲೇ ಆಗಿರುವುದರಿಂದ ಅತಿಶಯ ಪ್ರಶಂಸೆಯಿಂದ ಸೇರಿವೆಯೆಂಬಾಡುವ ಮಾತು ಸುಂದರವಲ್ಲ. ಅತಿಶಯ ಪ್ರಶಂಸಾಮಯಗಳವಾಗಿದ್ದರೆ,ತತ್ಸಂಬಂಧವಾದ ಕೃತಿಗಳು ಗುಪ್ತವಾಗಿ ಇಲ್ಲವಷ್ಟೆ ! ಅಥವಾ ಭಿನ್ನಾಭಿರುಚಿಯ ಗತಿಯಲ್ಲಾದರೂ ವಿಮರ್ಶೆಯ ಒಲವನ್ನು ಅದೇಕೆ ಶ್ರೀಯುತರು ಮನಗಾಣಲಿಲ್ಲ ? ಗುಣ-ದೋಷಗಳನ್ನು ವಿಮರ್ಶಕನು ಸಾರಬೇಕೆಂದರೆ, ದೋಷರಹಿತವಾದ ಕಥೆಯಲ್ಲಿ ದೋಷವನ್ನು ಕಾಣಿಸಬೇಕೆ ? ಪಕ್ಷಪಾತರಹಿತವಾದ ದೃಷ್ಟಿಯಿಂದ ಸಾಹಿತ್ಯಿಕ ಸತ್ಯವನ್ನು ವಿಶ್ಲೇಷಣೆ ಮಾಡಿ ತೋರಿಸುವುದು ಮಾತ್ರ ವಿಮರ್ಶಕನ ಗುಣವಲ್ಲದೆ, ಹೊಗಳಿಕೆ ತೆಗಳಿಕೆಗಳಲ್ಲೇ ಸಾಗುವುದು ಯಥಾರ್ಥಗತಿಯಲ್ಲವಷ್ಟೆ ! ಲೇಖಕರು ಸ್ವಾಭಿಪ್ರಾಯದ ಹಿನ್ನೆಲೆಯಲ್ಲೇ ಮಾರ್ಚಿ ತಿಂಗಳ ವಿಮರ್ಶೆಯನ್ನೋದಿ ಈವರೆಗೆ ಬಂದ ಜಯಂತಿಯ ಶಿಕ್ಷಣರಂಗವನ್ನು ಟೀಕಿಸಿ, ಅಭ್ಯಾಸಿಗಳ ಒಣ ಧೈರ್ಯವೆಂದು ಸಾರಿ—ವಿಮರ್ಶಾಭ್ಯಾಸಿಗಳನ್ನೂ-ಅವರ ಅಭ್ಯಾಸ ಲೇಖನಗಳ ನಿರ್ಣಯವೀಯುವ ಸಂಪಾದಕ ಮಂಡಲಿಯನ್ನೂ ಟೀಕಿಸಿದುದು ಹಾಸ್ಯಾಸ್ಪದವೆಂದು ಮಾತ್ರವಲ್ಲ; ವ್ಯರ್ಥಾಲಾಪವೆಂದೂ ಹೇಳಬೇಕಾಗಿದೆ. ನಿಜವಾದ ವಿಮರ್ಶಕನು-ವಿಮರ್ಶೆಯ ಒಲವನ್ನು ಬಲ್ಲವನು ಆಡುವ ಮಾತು ಇದಲ್ಲ. ಈ ವರೆಗೆ ನಡೆದು ಬಂದ ಕ್ರಮದಲ್ಲಿ ಸಂಪಾದಕ ಮಂಡಲಿಯು ನ್ಯಾಯವಾದ ನಿರ್ಣಯವನ್ನಿತ್ತಿದೆಯೆಂದು ಓದುಗರಾಡುವ ಮಾತನ್ನು ಕೇಳಿದ ಅನುಭವ ನನಗಿದೆ. ಜಯಂತಿಯಲ್ಲಿ ಬೆಳಕುಕಂಡ ಲೇಖನಗಳೇ ವಿಮರ್ಶೆಗೆ ಬರುವುವುಗಳೆಂದ ಮೇಲೆ, ಇದರ ಸತ್ಯವನ್ನು ಧಾರಾಳವಾಗಿ ಮನಗಾಣಬಹುದು.

೨ ವಿಮರ್ಶೆಗೆ ಸಣ್ಣಕತೆ-ದೊಡ್ಡಕತೆಯೆಂದಿಲ್ಲ. ವಿಮರ್ಶಕನು ಗುಣ-ದೋಷಗಳನ್ನು ಸಣ್ಣಕತೆಯಲ್ಲೂ ಧಾರಾಳವಾಗಿ ಹುಡುಕಬಹುದು. ಇದರಿಂದ ವಿಮರ್ಶೆಯ ಮಟ್ಟ ಕೆಳಗಾಗದು. ಸಣ್ಣಕತೆಯ ವಿಮರ್ಶೆಯು ಸುಲಭವಲ್ಲ. ಅಭ್ಯಾಸಿಯು ಅಭ್ಯಾಸಮಾಡಬಹುದಾದ ಧಾರಾಳ ವಿಚಾರಗಳು ಅವುಗಳಲ್ಲಿವೆಯೆಂದರಿಯಬೇಕಾಗಿದೆ: ಅಲ್ಲದೆ "ಸಣ್ಣಕತೆಯ ವಿಮರ್ಶೆಗೆ ಜಯಂತಿಯ ಅರ್ಧಪುಟ ಸಾಕು. ಆದರೆ ಅಷ್ಟು ಚಿಕ್ಕ ಬರೆಹ ವಿಮರ್ಶೆಯೆನಿಸಿತೇ ? ಪ್ರಕಟಣಾರ್ಹವಾದಿತೇ?" ಎಂಬ ಸಂದೇಹದಿಂದ ಬರೆಹಗಾರರು ವ್ಯರ್ಥವಾಗಿ ಲೇಖನವನ್ನು ಬೆಳೆಸುತ್ತಾರೆಂಬ ಮಾತು ಸರ್ವಾತ್ಮನಾ ಖಂಡನೀಯವು ! ಆದರೆ ಅರ್ಧಪುಟದ ಮಾತಂತಿರಲಿ ! ಅದು ಅವರವರ ಅಭಿರುಚಿ. ಆದರೆ "ಸಂದೇಹದಿಂದ ಲೇಖನವನ್ನು ಬೆಳೆಸುತ್ತಾರೆಂಬುದಿದು—" ವಿಮರ್ಶಾಭ್ಯಾಸಿಗಳಿಗಿದ್ದ ಹಂಬಲವೆಂದಾಗಲಿ, ಸಂಪಾದಕರಿಗಿದ್ದ ದೃಷ್ಟಿಯೆಂದಾಗಲೀ, ಈ ವರೆಗೆ ತಿಳಿದು ಬಂದಿಲ್ಲವೆಂದು ಸ್ಪಷ್ಟ ! ವಿಚಾರಪೂರ್ಣತೆಯಲ್ಲಿದ್ದ ಚಿಕ್ಕಕಥೆಗಾದರೂ ವಿಮರ್ಶೆ ವಿಶಾಲವಾಗಿ ಬರಬಹುದು. ವಿಚಾರಪೂರ್ಣತೆಯಿಲ್ಲದ ಕಾದಂಬರಿಗಾದರೂ ವಿಮರ್ಶೆ ಅರ್ಧಪುಟ-ಕಾಲು ಪುಟಗಳನ್ನೇ ಕೊನೆಗೊಳ್ಳಲೂ ಬಹುದು. ಆದುದರಿಂದ ವಿಮರ್ಶೆಗೆ ಪುಟಗಳಲ್ಲ ಕಾರಣ. ವಿಚಾರ ಕಾರಣವೆಂಬ ಸತ್ಯವನ್ನು ಕಾಣಬೇಕು.

೩ "ವಿಮರ್ಶಿಸಲ್ಪಡುವ ಕೃತಿ ಸಣ್ಣಕತೆಯಾದುದರಿಂದ ವಿಮರ್ಶಕರ ನಿರುತ್ಸಾಹಿಗಳಾಗುತ್ತಾರೆ-ವಿಚಾರಪ್ರಗತಿಗೆ ಬೇಕಾದ ಅವಕಾಶವಾಗಲೀ ಸಿಗುವುದಿಲ್ಲ" ಎಂಬೀ ಮಾತು ಅನುಭವದ ಮಾತಲ್ಲ ! ವೈವಿಧ್ಯವಾದ ರೂಪರೇಷೆಗಳಲ್ಲಿ ಪ್ರಕಾಶಿತವಾಗುವ ಕಥೆಗಳಲ್ಲಿ, ಪ್ರತಿ ಒಂದೊಂದರಲ್ಲಿಯೂ ಒಂದೊಂದು ಬಗೆಯ ವಸ್ತುವೈವಿಧ್ಯವೂ ನಿರೂಪಣವೈವಿಧ್ಯವೂ ಇದೆಯೆಂಬುದನ್ನು ಅರಿಯಲು ಮರೆಯಬಾರದು. ಇಂತಹ ಗುಣವನ್ನನುಲಕ್ಷಿಸಿ-ಪ್ರತಿಸಂಚಿಕೆಯಲ್ಲೂ ಸಂಪಾದಕರು ವಿಷಯವನ್ನಾರಿಸುವಾಗ, ಬಹು ವಿಚಕ್ಷಣತೆಯನ್ನು ಉಪಯೋಗಿಸುತ್ತಾರೆ.

ಕೊನೆಗೆ ದೋಷಪರಿಹಾರಕ್ಕೆಂದು ಶ್ರೀಯುತರು ಕೊಟ್ಟ ಸೂಚನೆಗಳು ನ್ಯಾಯವಾಗಿದ್ದರೂ, ಜಯಂತಿಗದು ಬೇಕಿಲ್ಲ. ಈ ಸೂಚನೆಗಳೆಲ್ಲಾ ಅನುಭವದ ನೆಲೆಯಲ್ಲೇ ಜಯಂತಿಗೆ ಗೊತ್ತಿದೆ. ವಿಷಯವೈವಿಧ್ಯವೆಂದು ಜಯಂತಿ--ವಿಮರ್ಶೆಯಗತಿಯಲ್ಲಿ ಹೊಸತನ್ನು ತಂದರೆ, ವಿಮರ್ಶಾಭ್ಯಾಸಿಗಳ ಬಲವೇ ಕಡಿಮೆಯಾದುದು ಅನುಭವದ ಮಾತು. ಶ್ರೀಯುತರು ಜಯಂತಿಯ ಸಂಚಿಕೆಗಳನ್ನು ಪರಾಮರ್ಶಿಸಿದರೆ-ತಿಳಿಯಬಹುದು. ಅದನ್ನವಲೋಕಿಸದೆ, ಆಡುವ ನುಡಿಗಳು ವ್ಯರ್ಥಕಾಲಹರಣವಲ್ಲದೆ ಮತ್ತೇನು ?

ಕೊನೆಯದಾಗಿ ಒಂದು ಮಾತು: ವಿಮರ್ಶಾಭ್ಯಾಸಿಗಳಿಗೆ ಜಯಂತಿಯು ಈಯುವ ಈ ಬಗೆಯ ಶಿಕ್ಷಣವು ಪತ್ರಿಕಾರಂಗಕ್ಕೇ ಒಂದು ಮಾದರಿಯಾಗಿದೆ. ಮಾತ್ರವಲ್ಲ, ಜಯಂತಿಯಲ್ಲೇ ಬೆಳಕು ಕಂಡ ಲೇಖನಗಳನ್ನೇ ವಿಮರ್ಶೆಗೀಯುವ ಈ ಎಡೆಗಾಣಿಕೆಯನ್ನು ಶ್ಲಾಘಿಸಬೇಕಾಗಿದೆ.

—ಕೆ. ಎಸ್. ಕವಾರ್, ಕಾಸರಗೋಡು

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ 'ನಾರ್ಯಾನ ಕರಾಮತು' ಎಂಬ ಹುಚ್ಚಾಟದ ವಿಮರ್ಶೆಗಳು ಇಬ್ಬರಿಂದಲೂ 'ತಪ್ಪು ತಿಳಿವಳಿಕೆ' ಎಂಬ ಅನುವಾದಿತ ಕತೆಯ ವಿಮರ್ಶೆ ೬ ಜನರಿಂದಲೂ ಬಂದಿವೆ.

'ನಾರ್ಯಾನ ಕರಾಮತು' ವಿಮರ್ಶಿಸಿದವರು :

೧ ಶ್ರೀ. ಎಂ. ಎಸ್. ಜೋಶಿ, ಉಮಾವಿದ್ಯಾಲಯ, ಲಕ್ಷ್ಮೇಶ್ವರ. ೨ 'ವಿದ್ವಾನ್' ಪಿ. ಗೋಪಾಲಕೃಷ್ಣ ಪೈ, ಕಾರ್ಕಳ.

'ತಪ್ಪು ತಿಳಿವಳಿಕೆ' ವಿಮರ್ಶಿಸಿದವರು :

೧ ಶ್ರೀ. ಕೆ. ಎಸ್. ಪ್ರಭು, ಕಾರ್ಕಳ. ೨ ಶ್ರೀ. ಕೆ. ಎಸ್. ಶರ್ಮಾ 'ವಾಣೀಮಂದಿರಂ' ಕಾಸರಗೋಡು. ೩ ಶ್ರೀ. ವಿ. ಎ. ಗಾಡಗೀಳ, ವಿಜಾಪುರ. ೪ ಶ್ರೀ. ಶಂಕರ ಪಾಣಾಜೆ, ಪಾಣಾಜೆ (ದ. ಕ.) ೫ ಶ್ರೀ. ಕೆ. ವೆಂಕಟರಾಯಾಚಾರ್ಯ ಸರತಕಲ್ಲು. ೬ ಶ್ರೀ ಎಂ. ಎಸ್. ಆಚಾರ್, ಕುಳಾಯಿ.

ಹುಚ್ಚಾಟವೊಂದನ್ನು ವಿಮರ್ಶೆಗೆ ಇರಿಸಿದರೆ, ಹೆಚ್ಚು ಜನರಿಂದ ವಿಮರ್ಶೆಗಳು ಬರಲಿಲ್ಲ. ಕತೆಯ ವಿಷಯಕ ವಿಮರ್ಶೆಗಳೇ ಹೆಚ್ಚಿಗೆ ಬಂದಿವೆ. ಇದಕ್ಕೆ ಕಾರಣವೇನಿರಬಹುದೆಂಬುದನ್ನು ವಿಮರ್ಶಕರೇ ಕಂಡುಕೊಳ್ಳಬೇಕು.

ಸಂಪಾದಕ ಮಂಡಲಿಯವರೇ ಎಲ್ಲ ವಿಮರ್ಶೆಗಳನ್ನೂ ಓದಿ ನಿರ್ಣಯವನ್ನು ಕೊಟ್ಟಿದ್ದಾರೆ. ಶ್ರೀಮಾನ್ **ಕೆ. ಎಸ್. ಶರ್ಮಾ** ಅವರ ವಿಮರ್ಶೆಯೆ ಅತ್ಯುತ್ತಮವೆಂದು ತೀರ್ಮಾನವಾಗಿದೆ. ಮಿಕ್ಕ ವಿಮರ್ಶೆಗಳಲ್ಲಿ ಶ್ರೀ. ಪಿ. ಗೋಪಾಲಕೃಷ್ಣ ಪೈ, ಶ್ರೀ. ಎಂ. ಎಸ್. ಜೋಶಿ, ಶ್ರೀ. ಶಂಕರ ಪಾಣಾಜೆ ಇವರವು ಚೆನ್ನಾಗಿವೆ. ಉಳಿದುವೆಲ್ಲ ತೀರ ಸಾಮಾನ್ಯವಾಗಿವೆ.

ಇದೀಗ ೧೬ನೆಯ ವರ್ಷದ ಕೊನೆಯ ಸಂಚಿಕೆ. ಬರಲಿರುವ ಸಂಚಿಕೆಯಿಂದ ಹೊಸ ವರ್ಷ ಆರಂಭವಾಗುವುದು. ಆದುದರಿಂದ ಮುಂದಿನ ಸಲದ ವಿಮರ್ಶೆಯ ಮೇಲಂಟಕ್ಕೆ, ಜಯಂತಿಯ ಈ ಸಂಚಿಕೆಯನ್ನೇ ಇರಿಸಲಾಗಿದೆ. ಹೆಚ್ಚು ಜನ ವಾಚಕರು ವಿಮರ್ಶೆ ಬರೆದು ಕಳುಹಿದರೆ, ಜಯಂತಿಯ ವಿಷಯದಲ್ಲಿಯ ಜನಾಭಿಪ್ರಾಯ ಗೊತ್ತಾಗಿ, ಮುಂದಿನ ವರ್ಷದ ಅದರ ಮಾರ್ಗಕ್ರಮಣಕ್ಕೆ ನೆರವು ಸಿಕ್ಕಂತಾಗಬಹುದು.

—ಸಂಪಾದಕರು

ತಪ್ಪು ತಿಳಿವಳಿಕೆ

(ಸಣ್ಣ ಕತೆಯ ವಿಮರ್ಶೆ)

ಶ್ರೀ. ಕೆ. ಎಸ್. ಶರ್ಮಾ

ವಾಣೀ ಮಂದಿರಂ, ಕಾಸರಗೋಡು.

ಭಾಷೇತರ ಸಾಹಿತ್ಯಾನುವಾದವು ಸ್ವಭಾಷಾಸಾಹಿತ್ಯಕ್ಕೆ ಸಾಹಿತ್ಯ ಸಂಪತ್ತಿಯನ್ನೂ ವೈಶಾಲ್ಯವನ್ನೂ ನೀಡುತ್ತದೆಯೆಂಬ ಮಾತು ಸರ್ವ ವಿದಿತವಿದೆ. ಸ್ವಾಯತ್ತ ಸಂಪತ್ತು ಪುಷ್ಕಲವಾಗಬೇಕಾದರೆ, ಅಂತರಾಷ್ಟ್ರೀಯ ಸಂಪತ್ತಿನೊಂದಿಗೆ ಮಿರುಗಬೇಕಾದರೆ, ಅನ್ಯಾಯತ್ತಧರ್ಮವು ಸುಪುಷ್ಟ ಗೌರವದೊಡನೆ ಅನುವಾದ ಇಲ್ಲವೆ ಛಾಯಾನುವಾದಗಳ ಮೂಲಕ ಬರೆಯಬೇಕು. ಸ್ವಾಯತ್ತ ಭಾಷಾಕೃತಿಯಲ್ಲಿ ಲೇಖಕನು ಅನುಭಾವಿಯಾಗಿ ಪ್ರಭಾವಿತನಿದ್ದಂತೆ– ಅನುವಾದಕಾರ್ಯದಲ್ಲಿ ಅನುವಾದಕನು ರಸಿಕನಿದ್ದು – ಉಭಯಭಾಷಾಗತ ಧರ್ಮದಲ್ಲಿ ಅತ್ಯಂತ ಪ್ರಭಾವಿತನಿರಬೇಕು. ಲೇಖಕನಿಗಿಂತ ಅನುವಾದಕನ ಸ್ಥಾನ ಹಿರಿದು; ಸತ್ತ್ವಪೂರ್ಣ. ಅನುವಾದವು ಇದ್ದಕ್ಕಿದ್ದಂತೆ ಪರಭಾಷಾಗತ ಧರ್ಮವನ್ನು ಸ್ವಸಾಹಿತ್ಯದಲ್ಲಿ ಇಳಿಸುವುದಾದರೆ, ಛಾಯಾನು-ವಾದವು ಅನ್ಯಾಯತ್ತ ಧರ್ಮವನ್ನು ಸ್ವಭಾಷಾಸಂಪತ್ತಿನಲ್ಲಿ ಸ್ವದೇಶ ಕಾಲಾನುಗುಣವಾಗಿ ಪಾತ್ರಗಳನ್ನಿರಿಸಿ ಸಾಗುವುದು. ಇವೆರಡರಲ್ಲೂ ಒಂದೊಂದು ತೆರದ ವೈಶಿಷ್ಟ್ಯವಿದೆ.

'ತಪ್ಪು ತಿಳಿವಳಿಕೆ' ಇದೊಂದು ಅನುವಾದಿತ ಕಥೆ. ಆಂಗ್ಲ ಕತೆಯೊಂದು ಮರಾಠಿ ಭಾಷೆಯಲ್ಲಿ 'ಗೈರ್ ಸಮಜ್' ಎಂಬ ಹೆಸರಿನಿಂದ ಪರಿವರ್ತಿತವಾಗಿ, ಪುನಃ ಅದು ಕನ್ನಡಕ್ಕೆ ಅನುವಾದಿತವಾಗಿದೆ. ಸಣ್ಣಕತೆಯ ಧರ್ಮಕ್ಕೆ ಅನುಗುಣವಾದ ತೆರನಲ್ಲೇ ಇದೊಂದು ಜೀವನದ ಘಟನೆಯನ್ನಳವಡಿಸಿಕೊಂಡು, ಜೀವನದ ಒಂದು ಭಾಗದಿಂದಾರಂಭಿಸಿ, ಅದೇ ಭಾಗದ ಒಂದು ಅನಿಶ್ಚಿತ ಹಾಗೂ ಮನೋವೇಧಕ ಪರಿಸ್ಥಿತಿಯಲ್ಲಿ ಕೊನೆಗೊಂಡು, ಆ ಭಾಗದ ಪೂರ್ಣತೆಯಲ್ಲಿ, ಆಶಾಬಂಧದ ಜೀವಿತಾಲಂಬ ಹೇತುವಿನಲ್ಲಿ ಜೀವನವನ್ನು ಹೊಸೆದು

ನಿಂತಿದೆ. ಆ ಆಶೆಯೆ ಈ ಕತೆಯ ಜೀವನಕ್ಕೂ ಕಾರಣವಾಗಿದೆಯೆಂಬ ಸತ್ಯದ ಹೊಸಬಗೆಯ ರೂಪಣವನ್ನು ಈ ಕತೆಯಲ್ಲಿ ನಾವು ಕಾಣಬಹುದು.

ಪ್ರೇಮವು ಬಾಳಿನ ಪೂರ್ಣತೆಗಿರುವ ಅಮೃತಬಿಂದುವೂ ಅಹುದು; ಬಾಳಿನ ವೈರೂಪ್ಯಕ್ಕಿರುವ ವಿಷಬಿಂದುವೂ ಅಹುದು. ಆದರೆ ಬಾಳಿನಲ್ಲಿ ಪ್ರವೇಶಿಸುವ ವ್ಯಕ್ತಿಗತ ಸ್ವಭಾವವು-ಅನುಭವವು-ಮನಸ್ಸು ಇವು ಬಾಳಿನಲ್ಲಿ ಸರಸವನ್ನೂ ವಿರಸವನ್ನೂ ತಂದೊಡ್ಡುವ ವಸ್ತುಗಳೆಂಬುದನ್ನು ತಿಳಿಯಲು ಮರೆಯಬಾರದು.

'ರೆನಾಡ್ ಲೀ ಮಾರಿ' ಇವನು ಜರ್ಮನಿಯಲ್ಲಿದ್ದ ಫ್ರೆಂಚ್ ಜನಾಂಗದ ಸೆರೆಯಾಳು. ೧೯೪೫ರಲ್ಲಿ ಬಿಡುಗಡೆಯನ್ನು ಪಡೆದ ರೆನಾಡ್, ಐದು ವರ್ಷಗಳ ಅವಧಿಯಲ್ಲಿ ತನ್ನ ಗೆಳೆಯರೊಂದಿಗೆ ತನ್ನೂರಾದ 'ಶಾರ್ಡವಿಲ್' ಗೆ ಬರುವನು. ಸಾಗುದಾರಿಯಲ್ಲಿ ಪ್ರತಿಯೊಬ್ಬನ ವಿಚಾರವು ಸ್ವಾಯತ್ತ ಸ್ತ್ರೀಜೀವನದ ಪ್ರತಿಬಿಂಬದಲ್ಲೇ ಮುಳುಗಾಡುತ್ತಿರುವುದು. ರೆನಾಡನು ತನ್ನ ಪತ್ನಿಯ ವಿಚಾರದಲ್ಲೇ ಮುಳುಕಾಡುತ್ತಾ ತನ್ನ ಬಳಿಯ ಗೆಳೆಯನಾದ ಸಾಟರ್ನಿನ್ ಇವನನ್ನು, ಅವನ ಜೀವನದ ಕುರಿತು ಪ್ರಶ್ನಿಸುವನು. ಯುದ್ಧದಲ್ಲಾದ ಗಾಯಗಳಿಂದ ವಿರೂಪನಾದ ಸಾಟರ್ನಿನ್, ತನ್ನ ಪತ್ನಿಯ ಕುರಿತು ಆಶಾಪ್ರದ ವಚನಗಳನ್ನಿತ್ತು, ಉಲ್ಲಸಿತನಾಗಿ ಆಕೆಯಲ್ಲಿ ತನಗಿರುವ ಭರವಸೆಯನ್ನೆತ್ತಿ ಹಿಡಿದು—ತನ್ನ ಹೆಂಡತಿಯಲ್ಲಿ ಕಳಂಕದ ಆರೋಪಣೆಯಿದ್ದರೂ ತಾನದನ್ನು ಗಣಿಸಲಾರೆನೆಂಬ ನುಡಿಯನ್ನೀಯುವನು. ರೆನಾಡನು ಮಾತ್ರ 'ನಾನು ನಿನ್ನ ಮತದವನಲ್ಲ; ಅಂಥದೇನಾದರೂ ಒಂದು ಕಷ್ಟಿಲ್ಲದ ಸಂಗತಿ ದೊರಕಿದರೆ—ಹೊರಟೇ ಬಿಡುವೆನು" ಎಂಬ, ಮಾತನ್ನೀವನು. ಅದೇ ತೆರನ ಸಂಭಾಷಣೆಯಲ್ಲೇ ಕಥೆಯ ಪೂರ್ವಾರ್ಧವು ಕೊನೆಗೊಂಡರೆ, ಉಳಿದರ್ಧವು ಶಾರ್ಡ್ ವಿಲ್‌ನಲ್ಲಿ ೩ನೆಯ ತಾರೀಖಿಗೆ, ಮೇಯರನು ರೆನಾಡನ ಪತ್ನಿಗೆ ರೆನಾಡನ ಶುಭಾಗಮನವನ್ನು ಸೂಚಿಸಿ ಆನಂದಗೊಳಿಸುವಲ್ಲಿಂದ ಆರಂಭವಾಗುವುದು. ರೆನಾಡನ ಪತ್ನಿ ಹೆಲೆನಳು ಪತಿಯ ಸ್ವಾಗತಕ್ಕಾಗಿ ಮನೆಯನ್ನು ಓರಣವಾಗಿಸಿ, ಪತಿಯ ನೆಚ್ಚಿಗೆ-ಮೆಚ್ಚಿಗೆ ಪಾತ್ರನಾಗುವಂತೆ ಉಡುಗೆಯನ್ನು ಆರಿಸಿಕೊಂಡು, ಅವನಿಗೆ ಸೇರುವ ಅಡುಗೆಯನ್ನು ತಯಾರಿಸಲು 'ಮುರಬ್ಬಾ' ಕ್ಕಾಗಿ ನೆರೆಯ ಊರಿಗೆ—ಒಂದು ಗಂಟೆಯ ಅವಧಿಯಲ್ಲಿ ತಿರುಗಿ ಬರುವ ಸೌಕರ್ಯದಲ್ಲಿ—ಸಾಗುವಳು. ಅದೇ ಕಾಲದಲ್ಲೇ ರೆನಾಡ್ ಬರುವನು. ಆನಂದದ ಕಣ್ಣಿನಿಂದ ಮನೆ ನಿಟ್ಟಿಸಿ, ಸ್ವಲ್ಪ ಹೊತ್ತು ತಡೆದು 'ಹೆಲೆನ್' ಎಂಬ ದನಿಯಿಂದ ಪತ್ನಿಯನ್ನು ಕೂಗುವನು. ಇದನ್ನು ನೆರೆಯ ಗೃಹಸ್ಥನೊಬ್ಬನು ದಿಟ್ಟಿಸುತ್ತಿದ್ದನು ತನ್ನ ದನಿಗೆ ಸಿಕ್ಕಬೇಕಾದ ಓ ನಾದವನ್ನು ಹೊಂದದ ರೆನಾಡನು. ತನ್ನ ಸ್ವಭಾವಗತಿಯಲ್ಲೇ ಭೀತಿಗೊಳಪಟ್ಟು, ಮನೆಯ ಬಾಗಿಲ ಹತ್ತಿರಕ್ಕೆ ಬಂದು, ಒಳಗೆ ನಿಟ್ಟಿಸಿ, ಅಲ್ಲಿ ಓರಣವಾಗಿರಿಸಿದ ಎರಡು ಆಸನಗಳನ್ನು ಕಂಡು. "ಹಾಗಾದರೆ ಇವಳು ಒಬ್ಬಳೇ ಅಲ್ಲ!" ಎಂದು ವ್ಯಾಕುಲ ಮನಸ್ಕನಾಗಿ ನಿರಾಶೆಯ ಗತಿಯಲ್ಲಿ, ಅನಿರ್ದಿಷ್ಟವಾದ ಗುರಿಯಲ್ಲಿ ಸಾಗುವನು. ಅವನು ಸಾಗಿದ ಬಳಿಕ ಹೆಲೆನ್ ಬಂದು, ನೆರೆಯ ಗೃಹಸ್ಥನಿಂದ ವಿಚಾರವರಿತು, ಮೇಯರನಿಗೆ ಈ ವರ್ತಮಾನವನ್ನು ತಿಳಿಸಿ "ನಾನವರನ್ನು ಪಡೆಯಲೇ ಬೇಕು; ಹುಡುಕಲೇ ಬೇಕು!" ಎಂಬ ನಿರ್ಧಾರದಲ್ಲೇ ದಿನಗಳನ್ನೂ-ವಾರಗಳನ್ನೂ-ತಿಂಗಳುಗಳನ್ನೂ ಜೀವನದಲ್ಲಿ ದಾಟಿ—ನಾಲ್ಕು ವರ್ಷಗಳ ಅನುದಿನದ ಪ್ರತೀಕ್ಷೆಯಲ್ಲಿ ಆಶೆಯನ್ನಿರಿಸಿ ನಿಂತಿದ್ದಾಳೆ. ಆ ಆಶೆಯು "ಈ ಕತೆಯನ್ನು ಓದಿಯಾದರೂ ರೆನಾಡ್ ಬರಬಹುದು, ತನ್ನ ತಪ್ಪು ಕಲ್ಪನೆಯನ್ನು ಮರೆಯಬಹುದು. ಆದಕ್ಕಾಗಿಯೆ ಈ ಕತೆಯನ್ನು ಬರೆದಿರುವೆನು" ಎಂಬ ಸುಂದರವಾದ ಹಾಗೂ ನೂತ್ನವಾದ ರೀತಿಯ ಉಪಸಂಹಾರದಲ್ಲಿ ತೇಲಾಡುತ್ತಿದೆ.

ಕಥಾರಂಭದಲ್ಲೇ ಕಾಣುವ "ನಾನೀಗ ಬರೆಯುತ್ತಿರುವ ಸಂಗತಿಯನ್ನು ಒಂದು ವಿಶಿಷ್ಟ ವ್ಯಕ್ತಿ ಓದಿದರೆ, ನನ್ನ ಮನಸ್ಸಿನ ಉದ್ದೇಶವು ಸಫಲವಾಗುವುದೆಂದು, ಸಂಪೂರ್ಣ ನಂಬಿಗೆಯಿದೆ ನನಗೆ" ಈ ಮುನ್ನುಡಿಯಂತಿರುವ ಮಾತು, ಮೂಲಕಥೆಗೊಂದು ಸತ್ಯಜೀವನದ ಮುನ್ನುಡಿಯನ್ನಿತ್ತಂತಿದೆ. ಕಥೆಯು ಕೊನೆಗಂಡ ಗತಿಯಲ್ಲೇ ಈ ಮುನ್ನುಡಿಯನ್ನವಲೋಕಿಸಿದರೆ—ಇದೊಂದು ವಾಸ್ತವಚಿತ್ರವೆಂದೇ ಹೇಳಲು ಅಡ್ಡಿಯಿಲ್ಲ. ಕವಿಕಲ್ಪಿತವಾಗಬಹುದಾದ—ಅತಿಶಯವಾಗಬಹುದಾದ ಯಾವೊಂದು ಘಟನೆಯೂ ಈ ಕಥೆಯಲ್ಲಿಲ್ಲವೆಂದು ಧಾರಾಳವಾಗಿ ಹೇಳಬಹುದು. ಮೂಲಕಥೆಯ ವಸ್ತುವೇ ಸಾಕಾತ್ತಾಗಿ ಎರಕಗೊಂಡ ಈ ಕತೆಯು, ಎಲ್ಲಾ ಬಗೆಯಲ್ಲೂ ತತ್ ಭಾಷಾಯತ್ತ ದೇಶದ ಸಂಪ್ರದಾಯವನ್ನೇ ಅನುಸರಿಸಿ ನಿಂತಿದೆ.

ಐದು ವರುಷಗಳ ದುರಂತವಿರಹದಲ್ಲಿ ಮುಳುಗಾಡಿ ಊರಿಗೆ ಮರಳುವ ಸೆರೆಯಾಳುಗಳು, ತಮ್ಮ ಕಷ್ಟನಷ್ಟಗಳೆಲ್ಲವನ್ನೂ ಮರೆತು ಕುಟುಂಬದೆಡೆ—ಪತ್ನಿಯೆಡೆ ಯೋಚನೆ ಮಾಡಿ, ವಿವಿಧ ಪ್ರಶ್ನೆಗಳನ್ನು ತಮ್ಮ ಮನಸ್ಸಿನಲ್ಲಿ ಎಬ್ಬಿಸಿಕೊಂಡು, ಆಕೆಯ ಗುಣವಿಷಯಕವಾಗಿ ಚಿಂತಿಸುತ್ತಿರುವುದು ಸ್ವಭಾವಾತೀತವಾಗಿರದೆ ಸುಂದರವಾಗಿದೆ; ಸೆರೆಯಾಳುಗಳ ವಿಷಯದಲ್ಲದು ಸಹಜವಾಗಿದೆಯೆಂದೆನ್ನಬೇಕಾಗಿದೆ. ಆ ಬಳಿಕ ಹೊಳೆವ ಕಣ್ಣುಗಳುಳ್ಳ ರೆನಾಡನು ರಾತ್ರಿಯ ಶಾಂತ ವಾತಾವರಣದಲ್ಲಿ, ತನ್ನ ಮನದಲ್ಲಿ ಅನಸ್ಯೂತವಾಗಿ ಪುಟದೇಳುತ್ತಿರುವ ಭಾವನಾಮಯ ವಿಚಾರಗಳ ಪ್ರಕಾಶನಕ್ಕಾಗಿ, ಮನಸ್ಸಿನ ಶಾಂತತೆಗಾಗಿ, ತನ್ನ ಬಳಿಯಲ್ಲೇ ಕುಳಿತಿರುವವನನ್ನು ಕೇಳುವ "ಸಾಟರ್ನಿನ್, ನಿನ್ನ ಲಗ್ನವಾಗಿದೆಯೇ?" ಎಂಬ ಮಾತು, ಪ್ರಾಕೃತ ವಿಚಾರ ಪರಂಪರೆಗೆ ಹೊಂದಿಕೊಂಡು ಬಂದ ಸಹಜ ನುಡಿಯಾಗಿದೆ. ಆ ಬಳಿಕ ನಡೆದ ಸಂಭಾಷಣೆಯಲ್ಲಿ "ಪ್ರೇಮದಲ್ಲಿ ದೋಷವಿದ್ದರೂ ಕಾಲಾಯತ್ತವಾಗಿ ಬರಬಹುದಾದ ಅದನ್ನು ತಾಳ್ಮೆಯಿಂದಲೇ ಪರಿಹರಿಸಿ—ಯುದ್ಧದ ಬಳಿಕಿನ ದಿನದಲ್ಲಿ ಹಿಂದಿನ ರಗಳೆಯನ್ನು ಮರೆಯುವ ಸ್ವಭಾವದ ಸಾಟರ್ನಿನನನ್ನೂ— "ತನ್ನ ಹೆಂಡತಿಯ ಅಸದೃಶಕಲಾಕೃತಿಯಲ್ಲಿ ಸುಂದರ ರೂಪಿನಲ್ಲಿ ಪುರುಷರ ಲಕ್ಷ್ಯವನ್ನು ಸ್ವಾಭಾವಿಕವಾಗಿ ಸೆಳೆಯಬಹುದಾದ ಆಕರ್ಷಣೆಯಲ್ಲಿ ಕೇಡನ್ನೇ ಚಿಂತಿಸುವ, ಚಿಂತಿಸಿ ಪ್ರತಿಕೂಲಸ್ಥಿತಿಯಲ್ಲಿ ಪರಾರಿಯಾಗುವ ಬಗೆಯ ನಿರ್ಬಲ ಮನೋವೃತ್ತಿಯುಳ್ಳ ಸಂಶಯಗ್ರಸ್ತ ಹೃದಯದ ರೆನಾಡನ ಹೃದಯ

ನನ್ನೂ" ವ್ಯಕ್ತವಾಗಿ ಕಾಣಬಹುದು. ರೆನಾಡನು ತನ್ನ ವಿಚಾರ ಸರಣಿಯು ತಪ್ಪೆಂದು ಅರಿತವನಾದರೂ "ನನ್ನ ಸ್ವಭಾವವೇ ಹಾಗೆ, ನಾನೇನೂ ಮಾಡಲಾರೆನು" ಎಂದು ವಿರಮಿಸುವನು. ಮುಂದೆ ಸಂಭವಿಸಬಹುದಾದ ವಿಪ್ಲವದ ಸೂಚನೆಯೋ ಎಂಬಂತೆ, ಆಗ ತಾನೇ ಗಾಡಿಯು ಕರ್ಕಶವಾದ ಧ್ವನಿಯಲ್ಲಿ ಸಿಳ್ಳು ಹಾಕುವುದು. ಕೆಲವು ವೇಳೆಯ ನಂತರ ಬಳಿಕ ಅದೇ ಮೌನ. ಅದೇ ಶಾಂತತೆ. ಅದೇ ಪ್ರಶಾಂತ ರಾತ್ರಿ ಅಂತೂ ಕಥೆಯ ಪೂರ್ವಾರ್ಧವು ಉತ್ತರಾರ್ಧದ ಕಥಾಭಾಗಕ್ಕೆ ಒಂದು ಉತ್ತಮವಾದ ಪೀಠಿಕೆಯೆಂದು ಮಾತ್ರವಲ್ಲ; ಇದೇ ಕಥೆಗೆ ಇರುವ ಪೋಷಕಘಟನೆಯೆಂದು ಧಾರಾಳವಾಗಿ ಹೇಳಬಹುದು. ಈ ಭಾಗದಲ್ಲಿ ಕಾಣಬಹುದಾದ ಎಲ್ಲ ಸಂಭಾಷಣೆಗಳೂ ಆ ಆ ವ್ಯಕ್ತಿಯ ಮನೋಧರ್ಮದಿಂದ ದೂರವಾಗಿರದ ರೀತಿಯಲ್ಲಿ ಉಚಿತವಾಗಿ ನಿರೂಪಿತವಾಗಿವೆಯೆಂದೆನ್ನಬಹುದು. ಉತ್ತರಾರ್ಧದಲ್ಲಿ ಹೆಲೆನಳು ತನ್ನ ಪ್ರಿಯನ ಆಗಮನವನ್ನು ಮೇಯರನಿಂದ ಕೇಳಿ ಉಲ್ಲಸಿತಳಾಗಿ, ಉತ್ಕಂಠಿತಳಾಗುವ ಬಗೆಯ ಎಲ್ಲಾ ವಿಚಾರಗಳೂ ಸುಂದರವಾಗಿದ್ದರೂ—೩೦ನೆಯ ತಾರೀಖಿನಂದು ಆಕೆ ಮುರಬ್ಬಾಕ್ಕಾಗಿ ಹೋಗುವ ಪ್ರಸಂಗ ಅಷ್ಟು ಸಮುಚಿತವೆನಿಸದು. ಒಬ್ಬೊಂಟಿಗಳಾಗಿ ಹೋದುದು ಸರಿಯಲ್ಲವೆಂದಲ್ಲ; ಅದು ಆ ದೇಶದ ವಾತಾವರಣಕ್ಕೆ ಉಚಿತವಾಗಿದ್ದರೂ—ಆ ದಿನ ಆ ಉತ್ಕಂಠಿತ ಪರಿಸ್ಥಿತಿಯಲ್ಲಿ ಹೋಗುವಂತಾದುದು ಉಚಿತವಲ್ಲ. ಅದು ಈ ಬಗೆಯ ಕಥಾಸಮಾಪ್ತಿಗೆ ಉಚಿತವಾಗುವುದಾದರೂ–ಸ್ವಭಾವ ವಿರುದ್ಧವೆಂದು ಆಡಲೇ ಬೇಕಾಗಿದೆ. ಇದರಂತೆಯೆ ಮತ್ತೊಂದು ವಿಚಾರ: ಮನೆಯ ಬಾಗಿಲಿಗೆ ಬಂದು ಹೆಲೆನಳಿಗಾಗಿ ದನಿಗೊಟ್ಟು ಸಾಗುವ ರೆನಾಡನನ್ನು ಕಂಡ ನೆರೆಯ ಗೃಹಸ್ಥನು, ಆತನ ಬಳಿ ಬಂದು ಹೆಲೆನಳ ವಿಚಾರವನ್ನಾಗಲಿ, ಆಗಿನ ಆಕೆಯ ಗಮನವೃತ್ತಾಂತವನ್ನಾಗಲಿ ತಿಳಿಸದಿರುವುದು ಸರ್ವಾತ್ಮನಾ ಸಮುಚಿತವಲ್ಲ; ಒಂದು ವೇಳೆ ಅವನಿಗದು ಗೊತ್ತಿಲ್ಲವಾಗಿದ್ದರೆ, ಹೆಲೆನಳಾದರೂ ತನ್ನ ಗಮನವಾರ್ತೆಯನ್ನು ನೆರೆಯಲ್ಲಿ ತಿಳಿಸುವ ಆಗತ್ಯವಿತ್ತು. ಯಾಕೆಂದರೆ ಅದು ೩೦ ನೆಯ ತಾರೀಖು. ದೂರದಿಂದ ಬರುವ ರೆನಾಡನು ಯಾವ ಕಾಲದಲ್ಲಿ ತಲುಪುವನೆಂಬುದನ್ನು ಊಹಿಸಲು ಅಸಾಧ್ಯ. ಈ ಬಗೆಯ ಈ ಘಟನೆ ಸಮುಚಿತವಾಗಬಲ್ಲುದೆ? ಹೆಲೆನಳಿಗೆ ಈ ವಾರ್ತೆ ಗೊತ್ತಾದ ಬಳಿಕ, ಆಕೆ ಅಲ್ಲುಳಿಯದೆ ಮೇಯರಲ್ಲಿಗೆ ಸಾಗಿ ಆಡುವ ಮಾತು ಆ ವ್ಯಾಕುಲಪರಿಸ್ಥಿತಿಯಲ್ಲಿ ಬರುವ ಸಹಜ ನುಡಿಗಳಲ್ಲ. ಸುಶಿಕ್ಷಿತ ಗೃಹಿಣಿಯ ಹೃದಯವು ಆ ಬಗೆಯ ಪರಿಸ್ಥಿತಿಗೆ ಪಕ್ಕಾಗುವುದಾದರೂ–ತದಾಯತ್ತಗಳಾದ ಮಾತುಗಳು ಸುಂದರವಾಗಿಲ್ಲ. ಇದು ಅನುವಾದದ ದೋಷವೋ–ಅಲ್ಲ ಮೂಲ ಕಥೆಯ ರೀತಿಯೋ ತಿಳಿಯದಾಗಿದೆ.

ಇವುಗಳಲ್ಲದೆ ಮೇಯರು ಆಡುವ ಶುಭವಾರ್ತೆಯ ಕೊನೆಯಲ್ಲಿ "ಆದರೆ ಇಂಥ ಆನಂದದ ಪ್ರಸಂಗವಲ್ಲಿ....?" ಸಾರ್ಟರ್ನಿನ್ನನು ಆಡುವ "ನಿನಗೆ ಅವಳನ್ನು ನೋಡುವುದಿದೆಯೇನು ?" ಎಂಬ ಮಾತುಗಳು ಸ್ಪಷ್ಟವಾಗಿರದ ಅನೌಚಿತ್ಯದಲ್ಲಿ ನೆಲೆಗೊಂಡಿವೆಯೆಂದೆನ್ನಬೇಕಾಗಿದೆ.

ಅನುವಾದಕಾರ್ಯವು ಸಾಮಾನ್ಯವಲ್ಲ. ಅದರ ಹೊಣೆ ಹಿರಿದು. ಏನಿದ್ದರೂ ಅನುವಾದಕರ್ತರು ಅನುವಾದಿತಕಥೆಯಲ್ಲಿ ಘಟನೆಯ ಸ್ವಾರಸ್ಯವನ್ನು ತಂದಿಳಿಸಿದ್ದಾರೆ. ತಿಳಿಯಾದ ಭಾಷೆಯ ಲಾಲಿತ್ಯಗತಿಯಲ್ಲಿ ಕಥೆಯನ್ನು ಹಾಯಿಸಿಕೊಂಡು ಹೋಗಿದ್ದಾರೆ. ಕರುಣಾಪೂರ್ಣ ಕಥೆಯಾದ ಈ ಬಾಳಿನಲ್ಲಿ ಸವೆದ—ಮುಂದೊಂದು ದಿನದ ಆಶೆಯಲ್ಲಿ ತೇಲಿನಿಂತಿರುವ ಈ ಬಗೆಯ ಹೊಸತಾದ ಚಿತ್ರಣವು ಮಧುರವಾಗಿದೆ. ಮುಖ್ಯವಾಗಿ ಈ ಭಾಗದಲ್ಲಿ ನಾವೀಯಬೇಕಾದ ವಿಮರ್ಶೆಯ ವಚನಗಳು ಕೇವಲ ಅನುವಾದಕ್ಕಿರಬೇಕಲ್ಲದೆ ಕಥಾವಸ್ತುವಿಗಲ್ಲ. ಆದರೂ ಕಥಾಭಾಗವನ್ನು ಕುರಿತು—ಅದಕ್ಕನುಗುಣವಾಗಿಯೆ ಚಿತ್ರವನ್ನು ಸವೆದ ಈ ಅನುವಾದಕರ್ತರ ಸಾಹಸವು ಪ್ರಶಂಸನೀಯವಿದೆಯೆಂದನ್ನಬೇಕಾಗಿದೆ. ರಾಷ್ಟ್ರೀಯ ಸಾಹಿತ್ಯದಲ್ಲಿ ಅಂತರ್ರಾಷ್ಟ್ರೀಯ ಸಾಹಿತ್ಯಾನುಭಾವವೂ ಭರದಿಂದ ರಸಪೂರ್ಣವಾಗಿ ಮಿರುಗುವಂತಾಗಲಿ !

ಮಕ್ಕಳ ಸದೃಢತೆಗಾಗಿ

"ಬಗನ ಬಾಲಾಮೃತ"

ಹಲ್ಲು ಬರುವಾಗ

"ಎಸ್ಸನ್ಸ್ ಗ್ರಾಇಪ್" ಹೀಲರ್

ಜಂತು ಆದರೆ

"ವರ್ಮ ಆಯಿಲ್"

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ಔಷಧಗಳು.

The National Pharmacies & Pharmaceuticals Ltd., Dharwar

ಸಾದರ ಸ್ವೀಕಾರ

◆

೧೨೪ **ಪ್ರವಾದಿ** (ಅನುವಾದಿತ ಗ್ರಂಥ) ಮೂಲಲೇಖಕರು ಸಿರಿಯಾದೇಶದ ಸುಪ್ರಸಿದ್ಧ ಕವಿ ಖಲೀಲ್ ಗಿಬ್ರಾನ್ ಅವರು. ಕನ್ನಡದಲ್ಲಿ ಅನುವಾದಿಸಿದವರು ಶ್ರೀ. ದೇಸಾಯಿ ದತ್ತಮೂರ್ತಿ, ಹುಬ್ಬಳ್ಳಿ. ಹುಬ್ಬಳ್ಳಿಯ 'ಆನಂದ' ಗ್ರಂಥಮಾಲೆಯ ೧೩ನೆಯ ಕುಸುಮ. ಕ್ರೌ. ಅ. ೧೦೦ ಪುಟಗಳು. ಬೆಲೆ ಸಾದಾಪ್ರತಿಗೆ ೧-೪-೦. ಉತ್ತಮ ಪ್ರತಿಗೆ ೨-೦-೦.

೧೨೫ **ಲೋಕದ ಕಣ್ಣು** (ಕಥಾಸಂಕಲನ.) ಶ್ರೀ ಮಹಾದೇವ ಬಣಕಾರರು ಲೇಖಕರು. ಹುಬ್ಬಳ್ಳಿಯ ಮಕರಂದ ಸಾಹಿತ್ಯಮಾಲೆಯ ೨ನೆಯ ಕುಡಿ. ಕ್ರೌ. ಅ. ೯೨ ಪುಟಗಳು. ಬೆಲೆ ೦-೧೨-೦.

೧೨೬ **ಸುಕನ್ಯಾ** (ಹಿಂದೀ ಏಕಾಂಕಿಕಾ.) ಮೂಲ ಕನ್ನಡ ಲೇಖಕರು ಶ್ರೀ.ಸಾಲೀ ರಾಮಚಂದ್ರರಾಯರು ಬರೆದುದನ್ನು ಶ್ರೀ ಕ. ಬ. ಜೋಳದ ಅವರು ಹಿಂದಿಯಲ್ಲಿ ಭಾಷಾಂತರಿಸಿದ್ದಾರೆ. ಪ್ರಕಾಶಕರು ಶ್ರೀ. ಜೆ. ಡಿ. ಮೈಸಾಳೇ, ಸಾಹಿತ್ಯಸೇವಾ ಸದನ, ಬೋರಗಾಂವ, ಜಿ. ಬೆಳಗಾಂವ. ಕ್ರೌ. ಅ. ೨೪ ಪುಟಗಳು. ಬೆಲೆ ೦-೬-೦.

೧೨೭ **ಪ್ರಪಂಚ** (ವಾರಪತ್ರಿಕೆ) ಸಂಪಾದಕರು ಶ್ರೀಮಾನ್ ಪಾಟೀಲ ಪುಟ್ಟಪ್ಪನವರು ಎಲ್ ಎಲ್. ಬಿ., ಎಂ. ಎಸ್ ಸಿ. (ಕ್ಯಾಲಿಫೋರ್ನಿಯಾ). ಪ್ರಕಾಶಕರು ಜನಸೇವಾ ಪ್ರಕಾಶನಸಮಿತಿ, ದುರ್ಗದ ಬೈಲು, ಹುಬ್ಬಳ್ಳಿ. ರಾಯಲ್ ಫೋಲಿಯೋ ೨೪ ಪುಟಗಳು. ವಾ. ಚಂ. ೧೦ ರೂಪಾಯಿ. ಆರು ತಿಂಗಳಿಗೆ ೫-೮-೦. ಬಿಡಿ ಸಂಚಿಕೆಗೆ ೦-೩-೦.

೧೨೮ **ಬೃಹದಾರಣ್ಯಕೋಪನಿಷತ್ತು** (ಮೂಲ ಮತ್ತು ಸರಳ ಕನ್ನಡ ಭಾಷಾಂತರ, ಸಾರಾಂಶ ಇತ್ಯಾದಿ) ಲೇಖಕರು ಶ್ರೀಮಾನ್ ರಂಗನಾಥ ರಾಮಚಂದ್ರ ದಿವಾಕರರು. ಪ್ರಕಾಶಕರು ಅಧ್ಯಾತ್ಮ ಕಾರ್ಯಾಲಯ, ಹುಬ್ಬಳ್ಳಿ. ಕ್ರೌ. ಅ. ಸುಮಾರು ೩೦೦ ಪುಟಗಳು. ಬೆಲೆ ೩-೮-೦.

೧೨೯ **ಮಹಾಯೋಗಿ** (ಶ್ರೀ ಅರವಿಂದ ಯೋಗಿಗಳ ಜೀವನ ಚರಿತ್ರ.) ಶ್ರೀಮಾನ್ ರಂಗನಾಥ ದಿವಾಕರರು ಮೂಲ ಇಂಗ್ಲೀಷಿನಲ್ಲಿ ಬರೆದುದನ್ನು, ಶ್ರೀ. ಪ್ರಲ್ಹಾದ ನರೇಗಲ್ಲ ಮತ್ತು ಶ್ರಿ. ನಾರಾಯಣ ಸಂಗಮರು ಕನ್ನಡದಲ್ಲಿ ಭಾಷಾಂತರಿಸಿದ್ದಾರೆ. ಪ್ರಕಾಶನ ಸ್ಥಳ: ಅಧ್ಯಾತ್ಮ ಕಾರ್ಯಾಲಯ, ಹುಬ್ಬಳ್ಳಿ. ಕ್ರೌ. ಅ. ೨೬೨ ಪುಟಗಳು. ಬೆಲೆ ೨-೮-೦.

೧೩೦ **ಒಡೆದ ಹೃದಯ** (ರೂಪಕಸಂಕಲನ.) ಲೇಖಕರು ಶ್ರೀ. 'ಆನಂದ ಕಂದ'. ಪ್ರಕಾಶಕರು ಶರತ್ ಪ್ರಕಾಶನ ಮಂದಿರ, ಧಾರವಾಡ. ಕ್ರೌ. ಅ. ೧೧೨ ಪುಟಗಳು. ಬೆಲೆ ೧-೪-೦.

೧೩೧ **ಪ್ರದೀಪ** (ವಾರ್ಷಿಕ ಸಂಚಿಕೆ.) ಸಂಪಾದಕ ಶ್ರಿಮಾನ್ ಎಸ್. ಕೆ. ಹುದ್ದಾರ, 'ಪ್ರದೀಪ' ಕಾರ್ಯಾಲಯ, ತುಂಗಳ, ಜಿಲ್ಲಾ ವಿಜಾಪುರ. ಡೆ ಅ. ೯೬ ಪುಟಗಳು. ಬೆಲೆ ೦-೮-೦.

ಹಳ್ಳಿಯಲ್ಲಿದ್ದುಕೊಂಡು ಕನ್ನಡ ಸಾಹಿತ್ಯ ಪರಿಪೋಷಕ ಕಾರ್ಯಮಾಡುತ್ತಿರುವ, 'ಪ್ರದೀಪ' ದ ಉತ್ಸಾಹೀ ತರುಣ ಸಾಹಿತ್ಯಿಕರ ಈ ಪ್ರಕಾಶನಕಾರ್ಯವು ಪ್ರಶಂಸನೀಯವಾಗಿದೆ. ಇಂತಹ ಪತ್ರಿಕೆಗಳೆಂದರೆ, ತರುಣ ಸಾಹಿತ್ಯಿಕರ ಸಾಧನೆಗೆ ಗರಡಿಮನೆಗಳಿದ್ದಂತೆ.

೧೩೨ **ಉದಯಾಸ್ತ** (ಸಾಮಾಜಿಕ ಕಾದಂಬರಿ.) ಬರೆದವರು 'ತಿರುಕ'. ಪ್ರಕಾಶನ ಸ್ಥಲ: 'ಅನಾಥ ಸೇವಾಶ್ರಮ' ಮಲ್ಲಾಡಿಹಳ್ಳಿ, ತಾ. ಹೊಳಲ್ಕೆರೆ. ಕ್ರೌ ಅ. ೧೫೮ ಪುಟಗಳು. ಬೆಲೆ ೨-೦-೦.

೧೩೩ **ಸಮಾಜಸಂಪತ್ತು** (ಚಿಕ್ಕ ನಾಟಕ) ಲೇಖಕರು ಶ್ರೀಯುತ ಶೇಡಂ ಗೋವಿಂದರಾಯರು. ಪ್ರಕಾಶಕರು; ಶ್ರೀ. ವೀರನಗೌಡಾ ಪೋಲಿಸ ಪಾಟೀಲ, ಬೂದಿಗುಂಪಿ, ತಾ. ಗಂಗಾವತಿ, ಜಿ. ರಾಯಚೂರು. ಕ್ರೌ. ಅ. ೧೮ ಪುಟಗಳು. ಬೆಲೆ ೦-೨-೦.

೧೩೪ **ಕೈವಶಾಂಶ** (ಸಾಮಾಜಿಕ ಕಾದಂಬರಿ.) ಬರೆದವರು ಶ್ರೀಯುತ ಜನಾರ್ದನ ಗುರಿಕಾರ್ ಅವರು. ಧಾರವಾಡದ ಲಲಿತ ಸಾಹಿತ್ಯಮಾಲೆಯ ೯ನೆಯ ವರ್ಷದ ೨ನೆಯ ಪ್ರಕಟನೆ. ಕ್ರೌ. ಅ. ೧೪೮ ಪುಟಗಳು. ಬೆಲೆ ೧-೮-೦.

೧೩೫ **ಮೂಲಶಿಕ್ಷಣದ ಮೌಲ್ಯಮಾಪನ** (ಶೈಕ್ಷಣಿಕ ಗ್ರಂಥ.) ಬರೆದವರು ಶ್ರೀಯುತ ಮಿರ್ಜಿ ಅಣ್ಣಾರಾಯರು, ಉಗಾರೆ. ಪ್ರಕಾಶನ ಸ್ಥಳ: ಶಾಂತಿಸೇವಾ ಸದನ, ಸೇಡಬಾಳ, ಜಿಲ್ಲಾ ಬೆಳಗಾಂವಿ ಕ್ರೌ. ಅ. ೬೪ ಪುಟಗಳು. ಬೆಲೆ ೦-೧೨-೦.

೧೩೬ **ಬನಶಂಕರಿ** (ಸ್ವತಂತ್ರ ಸಾಮಾಜಿಕ ಕಾದಂಬರಿ.) ಬರೆದವರು 'ನಿರಂಜನ'. ಪ್ರಕಾಶಕರು ಮೆ. ಎಚ್. ವೆಂಕಟರಾಮಯ್ಯ ಆಂಡ್ ಸನ್ಸ್, ವಿದ್ಯಾನಿಧಿ ಬುಕ್ ಡಿಪೊ ಮೈಸೂರು. ಕ್ರೌ ಅ. ೩೪೦ ಪುಟಗಳು. ಬೆಲೆ ೧-೮-೦.

೧೩೭ **ಉಷಾಪರಿಣಯ** (ಪೌರಾಣಿಕ ನಾಟಕ) ಲೇಖಕರು ಶ್ರೀ. ಬೇಲಿಗದ್ದೆ ಅಪ್ಪಯ್ಯ ವಿದ್ವಾನ್. ಪ್ರಕಾಶಕರು ಶ್ರೀಮಾನ್ ಎ. ಮಂಜುನಾಥ ಶಾಲಿವಾಹನ, 'ಶ್ರೀ ಶಿವಕಲಾ ನಾಟಕಸಭಾ' ಅತ್ತಾವರ, ಮಂಗಳೂರು ಜಿಲ್ಲಾ. ಕ್ರೌ. ಅ. ೮೪ ಪುಟಗಳು. ಬೆಲೆ ೦-೮-೦.

೧೩೮ **ತಿಂಡೋಡಿ** (ಸಾಮಾಜಿಕ ನಾಟಕ) ಲೇಖಕರು ಶ್ರೀಯುತ ಮಹಾದೇವ ಬಣಕಾರರು. ಪ್ರಕಾಶಕರು. ವೀಣಾ ಬುಕ್ ಡಿಪೊ, ಮಾರುತಿ ಬೀದಿ, ಬೆಳಗಾಂವಿ. ಕ್ರೌ. ಅ. ೧೧೬ ಪುಟಗಳು. ಬೆಲೆ ೧-೦-೦.

೧೪೯ TRIDENT-**ತ್ರಿಶೂಲ** (ಇಂಗ್ಲೀಷ್ ಕನ್ನಡ ವಾರ್ಷಿಕ ಸಂಪುಟ.) ಮುಂಬಯಿಯ ಜವಹರಲಾಲ್ ಫ್ರೀ ನಾಯಿಟ್ ಹೈಸ್ಕೂಲಿನವರು ಪ್ರಕಟಿಸಿದುದು. ಕ್ರಾ. ಅ. ೧/೪ ದ ೪೦ ಪುಟ.

೧೫೦ **ಸಹಕಾರ** (ಮಾಸಪತ್ರಿಕೆಯ ಸುವರ್ಣ ಮಹೋತ್ಸವ ವಿಶೇಷಾಂಕ) ಸಂಪಾದಕರು ಶ್ರೀಮಾನ್ ಶಂಕರ ಕಡೂರ ಎಂ. ಎ. ಅವರು. ಪ್ರಕಾಶಕರು ದಿ ಕರ್ನಾಟಕ ಡಿವಿಜನಲ್ ಕೋ-ಆಪರೇಟಿವ್ ಬೋರ್ಡ್ ಲಿ. ಧಾರವಾಡ. ಕ್ರಾ. ೧/೪ ದ ೬೨ ಪುಟಗಳು.

ಸಹಕಾರ ತತ್ತ್ವವನ್ನೂ ಅದರ ಕಾರ್ಯಕಾರಿತ್ವದ ಚರಿತ್ರೆಯನ್ನೂ ಕುರಿತು, ಅನೇಕ ಉಪಯುಕ್ತ ಲೇಖನಗಳು ಈ ಸಂಚಿಕೆಯಲ್ಲಿ ಪ್ರಕಟವಾಗಿವೆ. ಸಂಪಾದಕರ ಪ್ರಯತ್ನವು ಪ್ರಶಂಸನಾರ್ಹವಾಗಿದೆ.

೧೫೧ **ವಾಗ್‌ಲಹರಿ** (ನಾಟ್ಯಛಟಗಳ ಸಂಕಲನ). ಬರೆದವರು ಶ್ರೀಮಾನ್ ಎಸ್. ಎಸ್. ಗದಗಕರ ಅವರು. ಪ್ರಕಾಶಕರು ಶ್ರೀ. ದ. ಬಾ. ಕುಲಕರ್ಣಿ, ಮನೋಹರ ಗ್ರಂಥಭಾಂಡಾರ, ಧಾರವಾಡ. ಕ್ರಾ. ಅ. ೬೪ ಪುಟಗಳು. ಬೆಲೆ ೦—೧೨—೦.

೧೫೨ **ಮುಂಬಯಿ ರಾಜ್ಯದಲ್ಲಿ ಸಮಾಜವಿಕಾಸ ಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣ ಕಾರ್ಯಕ್ರಮ.** (ಪರಿಚಯಾತ್ಮಕ ಕಿರುಹೊತ್ತಗೆ) ಮುಂಬಯಿ ಸರಕಾರದ ಪ್ರಸಿದ್ಧಿಶಾಖೆಯ ಪ್ರಕಟನೆ. ಕ್ರಾ. ಅ. ೪೦ ಪುಟಗಳು. ಬೆಲೆ ೦—೧೨—೦.

೧೫೩ **ಮುಂಬಯಿ ಸಾಗುವಳಿ ಕಾಯಿದೆಯ ಮಹತ್ತ್ವ** (ಪರಿಚಯಾತ್ಮಕ). ಮುಂಬಯಿ ಸರಕಾರದ ಪ್ರಕಟನೆ ಕ್ರಾ. ಅ. ೧೨ ಪುಟಗಳು.

೧೫೪ **ಪುಷ್ಪಗುಚ್ಛ** (ಕವನಸಂಕಲನ) ಬರೆದವರು ಶ್ರೀಮಾನ್ ಸಂಗನೋಶ ಹೊಸಮನಿ, ರಾಮವಾಡಿಗಿ. ಕ್ರಾ. ಅ. ೩೨+೬೨ ಪುಟಗಳು. ಬೆಲೆ ೧—೦—೦.

೧೫೫ **ದಿನಾಂಕಸೂಚಿ** (ಕ್ಯಾಲೆಂಡರ್) ವಿಜಾಪುರದ 'ಕರ್ನಾಟಕ ವೈಭವ' ಮುದ್ರಣಾಲಯದವರು, ೧೯೫೪ ಏಪ್ರಿಲ್ ತಿಂಗಳಿಂದ ೧೯೫೫ ಮಾರ್ಚ್ ವರೆಗೆ ಹೊಸ ದಿನಾಂಕಸೂಚಿಯನ್ನು ಸುಂದರವಾಗಿ ಪ್ರಕಟಿಸಿದ್ದಾರೆ.

೧೫೬ **ನಾಗರಿಕ ನೀತಿಸಾರ** (ಸಮಾಜ ವಿಜ್ಞಾನ ವಿಷಯಕ) ಬರೆದವರು ಶ್ರೀ ಎಸ್. ವಿ. ಪಾಟೀಲ ಎಂ. ಎ. ಎಲ್. ಎಲ್ ಬಿ, ಬಿ. ಟಿ.— ಪ್ರಿನ್ಸಿಪಾಲ್ ಸಿದ್ಧೇಶ್ವರ ಹೈಸ್ಕೂಲ್, ವಿಜಾಪುರ. ಪ್ರಕಾಶಕರು ಹೊಂಬಾಳಿ ಬಂಧುಗಳು, ಗದಗು. ಕ್ರಾ. ಅ. ೧೬೦ ಪುಟಗಳು. ಬೆಲೆ ೨—೦—೦.

೧೫೭ **ಸರ್ವಜ್ಞವಚನಗಳು** (ಸಂಕಲನ). ಪ್ರಕಾಶಕರು ಶ್ರೀ. ಪ ಅ. ಉಪಾಧ್ಯಾಯ, ಉಪಾಧ್ಯಾಯ ಪ್ರಕಟನಾಲಯ, ಗೋಪಾಲಕೃಷ್ಣಸ್ವಾಮಿ ಗುಡಿಬೀದಿ, ಚಿಕ್ಕಪೇಟೆ, ಬೆಂಗಳೂರು ನಗರ. ಕ್ರಾ. ಅ. ೨೪ ಪುಟಗಳು. ಬೆಲೆ ೦—೬—೦.

೧೫೮ **ಕೊಡಗಿನ ಕತೆಗಳು** (ಕಥಾಸಂಕಲನ). ಬರೆದವರು ಶ್ರೀಮಾನ್ ಜಿ. ಟಿ. ನಾರಾಯಣರಾಯರು. ಪ್ರಕಾಶಕರು 'ವಸಂತ ಮಾಲಿಕೆ' ವಸಂತಪ್ರೇಮಾ ಮಂಡಲ, ಮಂಗಳೂರು ೩. ಕ್ರಾ. ಅ ೯೬ ಪುಟಗಳು. ಬೆಲೆ ೧—೦—೦

೧೫೯ **ಮುಳುಗು-ತೇಲು** (ಸಾಮಾಜಿಕ ಕಾದಂಬರಿ). ಬರೆದವರು ಶ್ರೀ. ಬಿ. ವಿ. ದಕ್ಷಿಣಾಮೂರ್ತಿ ಬಿ. ಎಸ್‌ಸಿ. ಬಿ. ಟಿ. ಮೈಸೂರಿನ ಉಷಾ ಸಾಹಿತ್ಯಮಾಲೆಯ ೪೫-೪೬ ನೆಯ ಕುಸುಮ ಕ್ರಾ. ಅ. ೩೩೦ ಪುಟಗಳು. ಬೆಲೆ ೨—೦—೦.

೧೬೦ **ರೂಪಾರಾಧಕ** (ವಿ ಸಿ. ಮುತ್ತು ಅವರ ಕೃತಿ ಪರಿಚಯ) ಬೇರೆ ಬೇರೆ ಲೇಖಕರ ಲೇಖನಸಂಕಲನ. ಮೈಸೂರಿನ ಉಷಾ ಸಾಹಿತ್ಯಮಾಲೆಯ ಬಿಡಿಮುತ್ತು ೨೦. ಕ್ರಾ. ಅ. ೧೧೨ ಪುಟಗಳು; ಬೆಲೆ ೧—೦—೦.

೧೬೧ **ಶಾಸನನಿರೋಧದ ಕತೆಗಳು** (ಕಥಾಸಂಕಲನ) ಬರೆದವರು ಶ್ರೀ. ಭವಾನೀಶಂಕರ ಶಿವರಾವ್ ಮಾವಿನಕುರ್ವೆ, ಎಡ್ವೊಕೇಟ್, ಪಬ್ಲಿಕ್ ಪ್ರೊಸಿಕ್ಯೂಟರ್, ಕಾರವಾರ. ಕ್ರಾ. ಅ. ೬೬ ಪುಟಗಳು. ಬೆಲೆ ೧—೦—೦.

೧೬೨ **ಭಗಿನಿಯರಿಗೆ ಕರೆ** (ಕೈಹೊತ್ತಿಗೆ) ಬರೆದವರು ಶ್ರೀಮತಿ ಪ್ರಭುದಾಸಿ ನಿವೇದಿತಾ. ಪ್ರಕಾಶಕರು ಪ್ರೇಮಕುಂಜ ಪ್ರಕಾಶನ ಸಮಿತಿ, ರೈಟರಗಲ್ಲಿ, ಧಾರವಾಡ ಕ್ರಾ. ಅ. ೧೨ ಪುಟಗಳು.

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತದೆ.

ಶರತ್ ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕಪ್ರಕಾಶಕರು ಮತ್ತು ಪುಸ್ತಕವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು!
ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ, ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

"ಆನಂದಕಂದ"ರ ಕಥೆ, ಕಾದಂಬರಿ, ಕವನಸಂಕಲನ, ನಾಟಕಸಂಕಲನ, ಸಾಹಿತ್ಯ, ಸಂಸ್ಕೃತಿಯ ಗ್ರಂಥಗಳು, ಎಲ್ಲವೂ ನಮ್ಮಲ್ಲಿ ದೊರೆಯುವವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮೀಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಸಬೇಕು.

ನಮ್ಮ ಮಂದಿರ ಪ್ರಕಟಿಸಿದ 'ಆನಂದಕಂದ'ರ ಸಾಮಾಜಿಕ ಕಾದಂಬರಿ :

ಮಗಳ ಮದುವೆ

೧೯೩೦ ನೆಯ ಸತ್ಯಾಗ್ರಹ ಚಳವಳಿಯ ಹಿನ್ನೆಲೆಯಲ್ಲಿ ಉತ್ತರಕರ್ನಾಟಕದ ಸಾಮಾಜಿಕ ಜೀವನವನ್ನು ವಿವಿಧ ಮುಖದಲ್ಲಿ ಚಿತ್ರಿಸಿ ತೋರಿಸಿದ ರಮ್ಯ ಕಥಾನಕ. ಓದಲು ಕೈಯಲ್ಲಿ ತೆಗೆದುಕೊಂಡರೆ, ಮುಗಿಸುವ ವರೆಗೂ ಪುಸ್ತಕವನ್ನು ಕೆಳಗೆ ಇರಿಸಲಿಕ್ಕಾಗದಂತಹ ಆಕರ್ಷಕವಾದ ಕತೆಗಾರಿಕೆ. ಓದಿದ ರಸಿಕರಿಂದ ಧನ್ಯವಾದಗಳ ಸುರಿಮಳೆ!

ಕ್ರೌ. ೮. ೩೫೦ ಪುಟಗಳು ಸಾದಾ ಪ್ರತಿಗೆ ೪-೦-೦; ಸುಂದರ ಪ್ರತಿಗೆ ೪-೧೨-೦

ಬೆಳವಡಿ ಮಲ್ಲಮ್ಮ
(ತರಂಗನಾಟ್ಯ ಸಂಕಲನ)
ಕ್ರೌ. ೮. ೧೧೬ ಪುಟ. ಬೆಲೆ ೧-೮-೦

ಕಾರಹುಣ್ಣಿವೆ
(ಕವನಸಂಕಲನ)
ಕ್ರೌ. ೮. ೧೭೮ ಪುಟ. ಬೆಲೆ ಸಾದಾ ೨-೦-೦ ಸುಂದರ ೨-೮-೦

ಬೆಂದ ಹೃದಯ
(ರೂಪಕ ಸಂಕಲನ)
ಕ್ರೌ. ೮. ೧೧೨ ಪುಟ ಬೆಲೆ ೨-೪-೦

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಬೇರೆ ಗ್ರಂಥಗಳು

ಕಾದಂಬರಿ	ಕವನ ಸಂಕಲನ	ಕಥಾಸಂಕಲನ	ಇತರ ಗ್ರಂಥಗ
ರಾಜಯೋಗಿ	**ವಿರಹಿಣಿ**	**ಬಡತನದ ಬಾಳು**	**ಕರ್ನಾಟಕ ಜನಜೀವನ**
ಸುದರ್ಶನ	**ಒಡನಾಡಿ**	**ನಮ್ಮ ಬದುಕು**	ಜೀವನ ಚರಿತ್ರೆ
ಅಶಾಂತಿಪರ್ವ		**ಸಂಸಾರ ಚಿತ್ರ**	**ಶ್ರೀ. ಬಸವಣ್ಣನವರು**
ಮಗಳ ಮದುವೆ		**ಮಾತನಾಡುವ ಕಲ್ಲು**	

ಅಲ್ಲದೆ ಶ್ರೀ. ಹುದ್ದಾರರ '**ಚಿತ್ರಕಲಾಪ್ರವೇಶ**'ವೂ ಚಾಡಿಯ ಚಾಣಕ್ಯ '**ಜಾತೀಯ ಸಮಸ್ಯೆ**' **ಕರ್ನಾಟಕ ಏಕೀಕರಣ**' ಈ ಕಿರುಹೊತ್ತಿಗೆಗಳೂ ದೊರೆಯುವವು.

ಶರತ್ ಪ್ರಕಾಶನ ಮಂದಿರಕ್ಕೆ ೫ ರೂ. ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ ಸವಲತ್ತುಗಳು. ಬೇಗನೆ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ :

ಎಸ್. ಡಿ. ಧರಮಟ್ಟಿ, ಶರತ್ ಪ್ರಕಾಶನ ಮಂದಿರ, ಧಾರವಾಡ.

Printed by S. G. Kulkarni at the Sadhana Press, Dharwar. and pulished for the Proprietors Jayanti publications, by S. D. Dharmatti, at the Jayanti Office, Dharwar.



ಜಯಂತಿ

ಜೂನ್ ೧೯೫೪



ಪ. ಜರ್ಮನಿಯಲ್ಲಿರುವ ಮಾಯಿನ್ಸ ನಗರದ ಕೆಥೋಲಿಕ್ 'ದೋಂ'

ಸಂಪುಟ ೧೭ **JAYANTI** ಸಂಚಿಕೆ ೧

ಈ ಸಂಚಿಕೆಯಲ್ಲಿ :

ಭಾರತದಲ್ಲಿ ವಿವಾಹಶಾಸನ ಸುಧಾರಣೆ (ಸಂಪಾದಕೀಯ)
ಸಂಪಾದಕರು ೧

ನಾಡನಡೆ (ಸಾಂದರ್ಭಿಕ ಟಿಪ್ಪಣಿಗಳು)
'ಕಾಲಭೈರವ' ೨

ನಿಧಿಸಂಗ್ರಹ (ಸಣ್ಣ ಕತೆ)
ಶ್ರೀ. ಜಿ. ಟಿ. ನಾರಾಯಣರಾವ್ ಎಂ. ಎ. ಮಡಿಕೇರಿ ೫

ಕನ್ನಡದ ಒಗಟುಗಳು (ಒಂದು ವಿವೇಚನೆ)
ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ ೯

ವೈಶಾಖದ ಮಳೆ ಬಂದಿತ್ತು (ಕವನ)
ಶ್ರೀ. ಚಿದಾನಂದ ಬಿ. ಎ., ಬಿ. ಟಿ. ಧಾರವಾಡ ೧೩

ನಗೆ (ಲಘುಪ್ರಬಂಧ)
ಶ್ರೀ. ಎನ್. ಎಸ್. ಗದಗಕರ ಬಿ. ಎ. ಧಾರವಾಡ ೧೪

ಕಾಮದಹನ (ಗೀತರೂಪಕ)
ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ ೧೬

ಪುತ್ರವತಿ (ಅನುವಾದಿತ ಕತೆ)
ಶ್ರೀ. ಚಿದಂಬರ ಕಾಶೀನಾಥ ಜೋಶಿ
ಜ್ಯೂ. ಬಿ. ಎಸ್‌ಸಿ. ಬೆಳಗಾಂವಿ ೨೦

ಪಶ್ಚಿಮ ಜರ್ಮನಿಯಿಂದೊಂದು ಪತ್ರ
ಶ್ರೀ. ಎಂ. ಕೆ. ವರಾಹಮೂರ್ತಿ ಬಿ. ಎಸ್‌ಸಿ. (ಟೆಕ್)
ಎಂ. ಎಸ್‌ಸಿ. ೨೯

ಶ್ರೀ. ದಣ್ಣಾಭಾಯಿಯವರು (ವ್ಯಕ್ತಿಪರಿಚಯ)
ಶ್ರೀ. ಎನ್. ಎಲ್. ಹಳ್ಳಿಪ್ಪನವರ
ಎಂ. ಎಸ್‌ಸಿ. (ಅಗ್ರಿ) ಧಾರವಾಡ ೩೨

ಇಂದಿನ ಕನ್ನಡ ಕಾದಂಬರಿಗಳ ಸರ್ವಕಾಲೀನತೆ (ಸಾ. ವಿಮರ್ಶೆ)
ಶ್ರೀ. ಮಿರ್ಜಿ ಅಣ್ಣಾರಾಯರು ಉಗಾರ, ೩೫

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ (ಜಯಂತಿಯ ಮೇ ಸಂಚಿಕೆ)
ಶ್ರೀ. ಕೆ. ಎಸ್. ಶರ್ಮಾ 'ವಿದ್ವಾನ್' ಕಾಸರಗೋಡು ೩೮

ಸಾದರ ಸ್ವೀಕಾರ .... ಹೊದಿಕೆಯ ೩ನೆಯ ಪುಟದಲ್ಲಿ

◆ ಸಣ್ಣ ಕತೆಗಳ ಮೇಲಾಟ ◆

ಜಯಂತಿಯ ಸಣ್ಣ ಕತೆಗಳ ಮೇಲಾಟದ ನಿರ್ಣಯದ ಅವಧಿಯನ್ನು ಮುಂದುವರಿಸಬೇಕಾಗಿ ಬಂದು, ಅನೇಕ ಜನರನ್ನು ದಾರಿ ಕಾಯಲು ಹಚ್ಚಬೇಕಾಯಿತು. ಅನಿವಾರ್ಯವಾದ ಈ ವಿಲಂಬಕ್ಕಾಗಿ, ಮೇಲಾಟದಲ್ಲಿ ಭಾಗವಹಿಸಿದ ಕತೆಗಾರರಲ್ಲಿ ಕ್ಷಮೆಯನ್ನು ಯಾಚಿಸುತ್ತೇವೆ.

ಮೇ ೩೧ನೆಯ ತಾರೀಖಿನ ವರೆಗೂ ಕಥೆಗಳಿಗೆ ಸ್ವಾಗತವಿದ್ದಿತು. ತೃಪ್ತಿಕರವೆಂದು ಹೇಳುವಂತಿರದಿದ್ದರೂ ತಕ್ಕಮಟ್ಟಿಗೆ ಕಥೆಗಳು ಮೇಲಾಟಕ್ಕಾಗಿ ಬಂದಿವೆ.

ಬರಲಿರುವ ಜುಲೈ ಸಂಚಿಕೆಯಲ್ಲಿ ಮೇಲಾಟದ ನಿರ್ಣಯವನ್ನೂ ವರದಿಯನ್ನೂ ಬಹುಮಾನ ಪಡೆದ ಕತೆಗಳನ್ನೂ ಪ್ರಕಟಿಸಲಾಗುವುದು. **ಸಂಪಾದಕ 'ಜಯಂತಿ' ಧಾರವಾಡ**

ಕನ್ನಡ ನಾಡಿನ ಮನೆ-ಮನೆಗಳಲ್ಲಿಯೂ ಜಯಂತಿಗೆ ಸ್ವಾಗತವು ದೊರೆಯಬೇಕು. ಈ ಮೊದಲೇ ಚಂದಾದಾರರಾಗಿ ಇರುವ ಮಹನೀಯರು ಕನಿಷ್ಟಪಕ್ಷಕ್ಕೆ ಒಬ್ಬನನ್ನಾದರೂ ಹೊಸ ಚಂದಾದಾರನನ್ನು ಒದಗಿಸಿ ಕೊಡಬೇಕು. ನಾಡಿನಲ್ಲಿರುವ ವಾಚನಾಲಯಗಳೆಲ್ಲವೂ ತಪ್ಪದೆ ಜಯಂತಿಯನ್ನು ತರಿಸಿಕೊಳ್ಳಬೇಕು. ಜಯಂತಿಯ ವಾಚಕರು ತಮ್ಮದೇ ಆದ ಜಯಂತಿ ಮನೆಗೆ ಬರಲೆಂದು ಮನಸ್ಸು ಮಾಡಬೇಕು.

ಜಯಂತಿ ಕನ್ನಡನಾಡಿನ ಸಂಸ್ಕೃತಿಯ ದುಂದುಭಿ!

ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

ಹಾಲು-ಹಣ್ಣು (ಕವನ ಸಂಗ್ರಹ) ೧–೮–೦
ಶ್ರೀ. ಭುಜೇಂದ್ರ ಮಹಿಷವಾಡಿ

ಬಾಳ-ಬಂಡಿ (ಕವನಸಂಗ್ರಹ) ೦–೮–೦
ಶ್ರೀ. ಬಾಳ. ಬಿ. ಉಪಾಧ್ಯೆ

ಮೂಲ ಶಿಕ್ಷಣದ ಮೌಲ್ಯಮಾಪನ ೦–೧೨–೦
ಶ್ರೀ. ಮಿರ್ಜಿ ಅಣ್ಣಾರಾಯ

ಭರತೇಶನ ನಾಲ್ಕು ಚಿತ್ರಗಳು ೧–೪–೦
ಶ್ರೀ. ಮಿರ್ಜಿ ಅಣ್ಣಾರಾಯ

ಶ್ರೀ ಶಾಂತಿಸಾಗರ ೦–೪–೦

ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ನು.

ಪ್ರತಿಗಳಿಗಾಗಿ ಬರೆಯಿರಿ :

ಶ್ರೀ. ಮಿರ್ಜಿ ಅಣ್ಣಾರಾಯರು
ಪೋ. **ಉಗಾರ ಬದ್ರುಕ್** (ಜಿಲ್ಲಾ ಬೆಳಗಾಂವಿ)

ಜಯಂತಿ

ಸಂಪುಟ ೧೬ ಸಂಚಿಕೆ ೧

ಕುಟುಂಬದಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕರು:
ಮತ್ತು
ಪ್ರಕಾಶಕರು :
ಶ್ರೀ. ಡಿ. ಶರತ್‌ಕುಮಾರ

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ
ಬಿಡಿ ಸಂಚಿಕೆ ೮ ಆಣೆ

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

◆ ಸಂಪಾದಕೀಯ ◆

ಭಾರತದಲ್ಲಿ ವಿವಾಹಶಾಸನ ಸುಧಾರಣೆ

ಗಂಡು-ಹೆಣ್ಣಿನ ವಿವಾಹವೆಂಬುದು ಒಂದು ತ್ರಿಕಾಲಾಬಾಧಿತ ಸಮಸ್ಯೆಯೇ ಆಗಿದೆ. ದೇಶ-ಕಾಲ-ಪರಿಸ್ಥಿತಿಗನುಗುಣವಾದ ಯಾವ ನಿಯಮಗಳನ್ನು ಮಾಡಿದರೂ, ವ್ಯವಹಾರ ಪ್ರಪಂಚದಲ್ಲಿ ವಿವಾಹವೆಂಬುದು ಒಂದು ಸಮಸ್ಯೆಯಾಗಿಯೇ ಉಳಿಯುತ್ತ ಬಂದಿದೆ.

ವ್ಯಕ್ತಿಯ ಜೀವನದಲ್ಲಾಗಲಿ, ಸಾಮಾಜಿಕ ಜೀವನದಲ್ಲಾಗಲಿ, ಮದುವೆಯೆಂಬುದು ಅತ್ಯಂತ ಮಹತ್ತ್ವದ ಘಟನೆಯೆ ಸರಿ! ಆದುದರಿಂದಲೆ ಇದನ್ನು ಸುಯಂತ್ರಿತಗೊಳಿಸಲು, ಭಾರತದಲ್ಲಿ ನಡೆದಷ್ಟು, ವಿವಿಧ ಪ್ರಯೋಗಗಳು ಬೇರೆ ರಾಷ್ಟ್ರಗಳಲ್ಲಿ ನಡೆದಿಲ್ಲವೆಂಬುದು ಭಾರತೀಯ ವಿವಾಹಸಂಸ್ಥೆಯ ಚರಿತ್ರೆಯಿಂದ ಎಲ್ಲರಿಗೂ ಕಂಡುಬರುವ ಮಾತಾಗಿದೆ.

ಭಾರತೀಯರ ವಿವಾಹದ ಮುಖ್ಯ ಉದ್ದೇಶವೆಂದರೆ ವಂಶಸಂರಕ್ಷಣೆ; ಅದಕ್ಕಾಗಿ ಸುಸಂತಾನ ನಿರ್ಮಾಣ. ಈ ವಿವಾಹಪದ್ಧತಿಯಲ್ಲಿ ವ್ಯಾವಹಾರಿಕ ವೈಲಾಸಿಕ ಕಾಮಜೀವನವು ಗೌಣಸ್ಥಾನವನ್ನು ಪಡೆದಿರುವುದು. ಆದುದರಿಂದಲೇ ಭಾರತೀಯ ವೈವಾಹಿಕಸಂಬಂಧಕ್ಕೆ ಆಧ್ಯಾತ್ಮಿಕ ಸಂಬಂಧವೆಂಬ ಭಾವನೆ, ನಮ್ಮ ಸನಾತನಪರಂಪರೆಯಲ್ಲಿ ಹರಿದುಕೊಂಡು ಬಂದಿದೆ.

ಸಾಂಸ್ಕೃತಿಕ ರೀತಿಯಲ್ಲಿ ಮುಂದುವರೆಯುತ್ತ ಹೋದ ಭಾರತೀಯ ಸಮಾಜದ ವರ್ಗಗಳಲ್ಲಿ, ವಿವಾಹನಿಯಮಗಳು ಹೆಚ್ಚು ಬಿಗಿಗೊಂಡಿರುವುದನ್ನು ನಾವು ನೋಡಬಹುದು. ಅದೇ, ಸಾಂಸ್ಕೃತಿಕ ರೀತಿಯಿಂದ ಕೆಳಮಟ್ಟದಲ್ಲಿ ಇರುವ ಜನಸಾಮಾನ್ಯರಲ್ಲಿ ವಿವಾಹನಿಯಮಗಳು ತೀರ ಶಿಥಿಲವಾಗಿರುವುವು. ಇಂದಿನ ಸುಶಿಕ್ಷಿತರೆನ್ನಿಸಿಕೊಳ್ಳುವವರು ಸುಧಾರಣೆಗಳೆಂದು ಬಯಸಿ ಬೇಡುವ ನಿಯಮಗಳೆಲ್ಲ, ನಮ್ಮ ಈ ಜನಸಾಮಾನ್ಯರ ವಿವಾಹಸಂಸ್ಥೆಯಲ್ಲಿ ಈಗಾಗಲೇ ಪ್ರಚಾರದಲ್ಲಿವೆ.

ವಿಧವಾಪುನರ್ವಿವಾಹಕ್ಕೆ ಅವರಲ್ಲಿ ಒಪ್ಪಿಗೆಯಿದೆ. ವಿವಾಹವಿಚ್ಛೇದಕ್ಕೆ ಸಾಕಷ್ಟು ಅವಕಾಶವಿದೆ. ಬೇಡವಾದವರನ್ನು ಬಿಟ್ಟು ಬೇಕಾದವರನ್ನು ಉಡಿಕೆ ಮಾಡಿಕೊಳ್ಳುವ ಸ್ವಾತಂತ್ರ್ಯಕ್ಕೂ ಅವರಲ್ಲಿ ವಿಶೇಷ ಅಡ್ಡಿಗಳಿರಲಿಲ್ಲ. ಪ್ರೇಮವಿವಾಹದ ಕಲ್ಪನೆಯು ಅವರಲ್ಲಿ ಇರದೆ ಇರಬಹುದಾದರೂ, ಪ್ರೇಮವಿಲ್ಲದೆ ದಂಪತಿಗಳ ಸಂಸಾರ ಸುಸೂತ್ರವಾಗಿ ನಡೆಯದೆಂಬುದನ್ನು ಪ್ರತ್ಯಕ್ಷ ಜೀವನ ಪ್ರಮಾಣದಿಂದ ಅವರು ಸಿದ್ಧಗೊಳಿಸಿ ತೋರಿಸುತ್ತಿರುವರು.

ಸುಸಂಸ್ಕೃತ ಸಮಾಜದವರ ವಿವಾಹವಿಷಯಕ ಅಭಿಪ್ರಾಯವನ್ನು ಸೂಕ್ಷ್ಮದೃಷ್ಟಿಯಿಂದ ಅಭ್ಯಾಸ ಮಾಡಿ ನೋಡಿದರೆ, ಅವರು ಮಾನವೀಯ ಮನಸ್ಸನ್ನು ಚೆನ್ನಾಗಿ ಕಂಡುಹಿಡಿದು, ಸಾಕಷ್ಟು ತಾರ್ಕಿಕ ಬುದ್ಧಿಯನ್ನು ಉಪಯೋಗಿಸಿಯೇ ತಮ್ಮ ವಿವಾಹಪದ್ಧತಿಯಲ್ಲಿ ವಿಶಿಷ್ಟವಾದ— ಬಂಧನವೆನಿಸುವಂತಹ— ನಿಯಮಗಳನ್ನು ಹಾಕಿಕೊಂಡಿದ್ದಾರೆಂದು ಹೇಳಬಹುದು. ಪ್ರೇಮವಿವಾಹವೆಂಬುದು ಅವರ ದೃಷ್ಟಿಯಲ್ಲಿ ಅವ್ಯವಹಾರ್ಯವೆನಿಸುವಂತಹದು. ಅಲ್ಲದೆ ಅದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟರೆ, ಸಮಾಜದ ಶಾಂತಿ-ಸಮಾಧಾನಗಳಿಗೆ ವ್ಯತ್ಯಯ ಬಾರದಿರದೆಂಬುದರ ಮನವರಿಕೆಯೂ ಅವರಿಗೆ ಸಾಕಷ್ಟು ಆಗಿರಬಹುದು. ವಿವಾಹೋತ್ತರದ ಅನಿವಾರ್ಯ ಸಂಬಂಧ-ಸಹಚಾರಿತ್ವಗಳಿಂದ, ಪ್ರೇಮವು ಸ್ವಾಭಾವಿಕವಾಗಿಯೇ ಬೆಳೆಯುವುದೆಂಬ ಮನಸ್ತತ್ತ್ವವನ್ನು ಅನುಭವದಿಂದ ಅರಿತಿದ್ದರು. ಆದುದರಿಂದಲೇ ಅವರು ಕನ್ಯಾ-ವರಗಳ ಕುಲೀನತೆ-ಶಾಲೀನತೆಗಳ ಕಡೆಗೆ ಸಾಕಷ್ಟು ಲಕ್ಷ್ಯಕೊಡಬೇಕೆಂದು ನಿಯಮ ಮಾಡಿದರು. ವಿವಾಹ ಬಂಧನವು ಕೊನೆಯ ವರೆಗೂ ಅವಿಚ್ಛಿನ್ನವಾದುದೆಂಬುದನ್ನು ಒಪ್ಪಿಕೊಂಡರು. ಭಾರತೀಯರ ಈ ಪುರಾತನ ವಿವಾಹಪದ್ಧತಿಯು ಅವೈಜ್ಞಾನಿಕವೆಂದೂ ಪ್ರಗತಿಗೆ ವಿರೋಧಿಯೆಂದೂ ಕೂಗೆಬ್ಬಿಸುವವರು, ಅದರ ತತ್ತ್ವದ ತಳಹದಿಯನ್ನು ತಿಳಿಯದವರೆಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ.

ಹೊರನಿಂಬಿಗೆ ಮರುಳಾಗಿ, ಮಿಂಚಿನ ಜಾತಿಯ ಪ್ರಣಯದ ಬೆನ್ನು ಹತ್ತುವ ಇಂದಿನ ಪ್ರಣಯಿಗಳ ಮನೋಭಾವನೆಯು, ನಮ್ಮ ಪ್ರಾಚೀನ ವಿವಾಹ ಶಾಸನಕಾರರಿಗೆ ಅರಿಯದ ವಿಷಯವೇನೂ ಆಗಿರಲಿಲ್ಲ. ಆದರೆ ಇಂತಹ ಕ್ಷಣಿಕಪ್ರೇಮವು ವಿವಾಹದಲ್ಲಿ ಪರಿಣಾಮಗೊಂಡರೆ, ಸ್ವಭಾವವಿಭಿನ್ನತೆಯಿರುವಲ್ಲಿ ದಾಂಪತ್ಯ ಸುಖಾವಹವಾಗದೆಂಬ ಅನುಭವವನ್ನೂ ಅವರು ಕಂಡವರಾಗಿದ್ದಾರೆ. ಆದುದರಿಂದಲೇ ಕಾಮಸಂಬಂಧವು ಬರುವುದಕ್ಕಿಂತ ಮೊದಲೇ, ಕನ್ಯಾ-ವರರಲ್ಲಿ ಪತಿ-ಪತ್ನೀಭಾವವು ಸಹಜವಾಗಿ ಬೆಳೆಯಲು ಅನುಕೂಲವಾಗುವಂತೆ, ಎಳೆಯತನದಲ್ಲಿಯೇ ಮದುವೆಯನ್ನು ಮಾಡಬೇಕೆಂಬ ನಿಯಮವನ್ನು ಮಾಡಿದರು. ಈ ನಿಯಮ ದಾಂಪತ್ಯಸಾಮರಸ್ಯಕ್ಕೆ ಹೆಚ್ಚು ಸಹಕಾರಿಯಾಯಿತೆಂಬುದು ಸಾವಿರಾರು ವರ್ಷಗಳ ಅನುಭವವಾಗಿದೆ. ಈ ನಿಯಮವು ಬಾಲವೈಧವ್ಯವನ್ನು ಹೆಚ್ಚಿಸುವುದೆಂದು ತರ್ಕ ಮಾಡುವವರೂ ಇಲ್ಲದಿಲ್ಲ. ಈ ತೊಡಕನ್ನು ಒಪ್ಪಿಕೊಂಡರೂ, ಸಮಾಜದಲ್ಲಿಯ ಹೆಚ್ಚು ಸಂಖ್ಯೆಯ ದಾಂಪತ್ಯಗಳಲ್ಲಿ ಈ ನಿಯಮವು ಸಾಮರಸ್ಯವನ್ನು ಒದಗಿಸಿತೆಂಬುದನ್ನೂ ಒಪ್ಪಿಕೊಳ್ಳಬೇಕಾಗುತ್ತದೆ

ಈಗ ಕೂಡ ವಿವಾಹನಿಯಮದಲ್ಲಿ ಸುಧಾರಣೆಯನ್ನು ಬಯಸುವವರು ಎಷ್ಟು ಜನರು ? ಸನಾತನ ವಿಚಾರದವರು ಇಂತಹ ಸುಧಾರಣೆಗಳನ್ನು ಒಪ್ಪುವುದಿಲ್ಲ. ಬಹುಸಂಖ್ಯಾತರಾದ ಸಾಮಾನ್ಯ ಜನರಿಗೆ ಸುಧಾರಣೆಯ ಅಗತ್ಯವೆ ಕಾಣುತ್ತಿಲ್ಲ; ಇನ್ನೊಂದು ಬಗೆಯಿಂದ ಹೇಳಬೇಕೆಂದರೆ, ಆರ್ಥಿಕ ದೃಷ್ಟಿಯಿಂದ ಮಧ್ಯಮ ತರಗತಿಯವರೆಂದು ಕರೆಯಿಸಿಕೊಳ್ಳುವವರಿಗೆ, ಈ ಹೊಸ ಬಗೆಯ ವಿವಾಹಶಾಸನದಿಂದ ಯಾವ ಪ್ರಯೋಜನವೂ ಆಗುವಂತಿಲ್ಲ. ಕೆಳತರಗತಿಯವರಿಗೆ ವೈವಾಹಿಕ ನಿಯಮಗಳಲ್ಲಿ ಬದಲಾವಣೆಯೇಕೆ ಬೇಕೆಂಬುದು ತಿಳಿಯುವಂತೆಯೆ ಇಲ್ಲ.

ಈಗ ಭಾರತೀಯ ವಿವಾಹಶಾಸನದಲ್ಲಿ ಬದಲಾವಣೆಯು ಬೇಕಾಗಿದ್ದುದು ಸುಶಿಕ್ಷಿತರೆನಿಸಿಕೊಳ್ಳುವ ಕೆಲವು ಜನ ಸಿರಿವಂತರಿಗೆ ಮಾತ್ರ. ಅವರ ಸ್ವೈರ ಪ್ರಣಯ ಜೀವನವನ್ನು ಧಾರ್ಮಿಕ ನಿಯಮಗಳು ಒಪ್ಪದೆ ಹೋದರೂ, ಸರಕಾರದ ಕಾನೂನು ಒಪ್ಪಿದರೆ ಸಾಕೆಂಬ ವಿಚಾರದ ಗಡಬಡಿಯಲ್ಲಿ ಅವರು ಇದ್ದಾರೆ. ಇಂತಹರಲ್ಲಿ ಅನೇಕ ಜನರು ಇಂದಿನ ಸರಕಾರದಲ್ಲಿ ಹೊಣೆಗಾರಿಕೆಯ ಸ್ಥಾನಗಳನ್ನು ಹಿಡಿದುಕೊಂಡು ಕುಳಿತಿದ್ದಾರೆ. ಆ ಸ್ಥಾನಬಲದಿಂದ, ಅದೆಷ್ಟು ಬೇಗನೆ ಭಾರತೀಯ ವಿವಾಹ ನಿಯಮಗಳಲ್ಲಿ ಹೆಚ್ಚು-ಕಡಿಮೆ ಮಾಡಬೇಕೆಂದು ಬೇರೆ ಬೇರೆ ವಿಧೇಯಕಗಳನ್ನು ತಂದು ಚರ್ಚೆ ನಡೆಯಿಸಿದ್ದಾರೆ. ಸಮಗ್ರ ಸಾಮಾಜಿಕ ದೃಷ್ಟಿಯಿಲ್ಲದೆ, ಕೇವಲ ವೈಯಕ್ತಿಕ ಭೋಗದೃಷ್ಟಿಯಿಂದ ನೋಡುವ ಸಂಕುಚಿತ ಬುದ್ಧಿಗೆ ಸಾಕ್ಷಿಯಿದು.

ಕನ್ಯಾ-ವರರ ಪರಸ್ಪರ ವಿವಾಹಸ್ವಾತಂತ್ರ್ಯದ ಕಾನೂನು, ವಿವಾಹವಿಚ್ಛೇದನದ ಕಾನೂನು ಇವೆರಡೂ ಆಗಿಬಿಟ್ಟರೆ, ಭಾರತೀಯರ ಸಂಸ್ಕೃತಿ ಪರಂಪರೆಯು ಬೇರಿಗೇ ಕೊಡಲಿಯೇಟು ಬಿದ್ದಂತೆ ಸರಿ. ಇಂದಿನ ವೈಜ್ಞಾನಿಕ ಬುದ್ಧಿ, ಮೊದಲೇ ಭಾರತೀಯರ ಸಾಮಾಜಿಕ ನಿಯಮಗಳಲ್ಲಿ ನಿರಾಸಕ್ತಿಯನ್ನು ಹುಟ್ಟಿಸಿದೆ. ಅಂತಹದರಲ್ಲಿ ಈ ಬಗೆಯ ಕಾಯಿದೆಗಳ ಸಹಕಾರ ದೊರೆತರಂತೂ ತೀರಿಹೋಯಿತು. ‘ ಪವಿತ್ರವಾದ ’ ‘ ಸುಂದರವಾದ ’ ಭಾರತೀಯ ಪ್ರಾಚೀನ ಸಂಸ್ಕೃತಿಯು ಉಳಿಯುವುದೇಕೆ ? ಭಾರತೀಯ ಪ್ರಾಚೀನ ಸಂಸ್ಕೃತಿಯು ಪವಿತ್ರವೆನಿಸಿಕೊಳ್ಳುವುದಕ್ಕೂ ಸುಂದರವೆನಿಸಿಕೊಳ್ಳುವುದಕ್ಕೂ ಸ್ವೈರಭಾವವು ಕಾರಣವಾಗಿಲ್ಲ; ಸಂಯಮವು ಕಾರಣವಾಗಿದೆ. ಲೌಕಿಕ ಭೋಗಲಾಲಸೆಯು ಕಾರಣವಾಗಿಲ್ಲ; ತ್ಯಾಗ-ತಪಸ್ಸುಗಳು ಕಾರಣವಾಗಿವೆ. ಬಾಯಿಂದ ಭಾರತೀಯ ಸಂಸ್ಕೃತಿಯ ಗುಣಗಾನ ಮಾಡುತ್ತಲೆ ಆ ಸಂಸ್ಕೃತಿಮಂದಿರವನ್ನು ಕೆಡಹುತ್ತಲಿರುವವರಿಗೆ ಏನೆಂದು ಹೇಳಬೇಕು ? ಭಾರತದಲ್ಲಿಯ ಬೇರೆ ಧರ್ಮದವರು ಸಮಾಜದ ಪ್ರಗತಿಗೆ ವಿರೋಧಕವೆನಿಸುವಂತಹ ಯಾವ ತಮ್ಮ ಧರ್ಮನಿಯಮಗಳನ್ನೂ ಬಿಡಲು ಸಿದ್ಧರಿಲ್ಲ; ಇಷ್ಟೇ ಅಲ್ಲ ನಮ್ಮ ಸರಕಾರವು ಅವರ ನಿಯಮಪಾಲನೆಗೆ ಸಂರಕ್ಷಣೆ ಕೊಡುತ್ತದೆ. ಆದರೆ ಭಾರತೀಯರ ಉತ್ತಮೋತ್ತಮ ನಿಯಮ ಪರಂಪರೆಯನ್ನೂ ಕೆಲವೊಂದು ವ್ಯಕ್ತಿಗಳ ಲಹರಿಗಳಿಗೆ ಮಹತ್ತ್ವಕೊಟ್ಟು—ಹಾಳು ಮಾಡುತ್ತಲಿವೆ. ಇದರಿಂದಾಗುವ ಸಾಮಾಜಿಕ ದುಷ್ಪರಿಣಾಮದ ಭವಿಷ್ಯತ್ತಿಗೆ ಯಾರು ಹೊಣೆಗಾರರು ?

ಜಯಂತಿಗೆ ಸಹಾಯಧನ

ಶ್ರೀಮಾನ್ ಆರ್. ಎಸ್. ತಂತ್ರಿ, ಸಂಚಾಲಕ ಶ್ರೀಕೃಷ್ಣ ಕೆಫೆ, ಬೆಳಗಾಂವಿ ಅವರು ಮೊದಲಿನಿಂದಲೂ ಜಯಂತಿಯ ಅಭಿಮಾನಿಗಳು. ಜಯಂತಿಯ ಆರ್ಥಿಕ ಸಂಕಟದ ಕತೆಯನ್ನು ಕೇಳಿ, ಚಂದಾ ಹಣವಲ್ಲದೆ ೫ ರೂಪಾಯಿ ಸಹಾಯಧನವನ್ನೂ ಕಳುಹಿ ಸಹಾನುಭೂತಿಯ ಕಾಗದವನ್ನು ಬರೆದಿದ್ದಾರೆ. ಈ ಬಗೆಯ ಸ್ವಯಂಪ್ರೇರಿತ ಸಹಕಾರಗಳೆಂದರೆ ಜಯಂತಿಯ ದಾರಿಯಲ್ಲಿ ಆಶೆಯ ಕೈಗೋಲುಗಳು ದೊರೆತಂತೆ. ಶ್ರೀ. ಆರ್. ಎಸ್. ತಂತ್ರಿಯವರಿಗೆ ನಮ್ಮ ಕೃತಜ್ಞತೆಗಳು.

— **ಸಂಪಾದಕರು**

ನಾಡ ನಡೆ

ಕನ್ನಡಿಗರಿಗೆ ಪರೀಕ್ಷೆಯ ಪ್ರಸಂಗ

ರಾಜ್ಯಗಳ ಪುನರ್ಘಟನಾ ಸಮಿತಿಯೆದುರು ಕರ್ನಾಟಕಸ್ಥರೆಲ್ಲ ಸೇರಿ ಒಕ್ಕೊರಲಿನಿಂದ ಕರ್ನಾಟಕ ರಾಜ್ಯದ ಬೇಡಿಕೆಯನ್ನು, ಯೋಗ್ಯರೀತಿಯಿಂದ ಮಂಡಿಸಬೇಕಾದ ದಿನಗಳು ತೀರ ಹತ್ತಿರಕ್ಕೆ ಬಂದಿವೆ. ಮಿಕ್ಕ ಪಕ್ಷ–ಸಂಗಡಗಳೊಂದಿಗೆ ಸೇರಿ ಕರ್ನಾಟಕ ರಾಜ್ಯ ನಿರ್ಮಾಣದ ಬೇಡಿಕೆಯ ಕಾರ್ಯದಲ್ಲಿ, ಇಲ್ಲಿಯ ಕಾಂಗ್ರೆಸ್ಸಿಗರಿಗೂ ಭಾಗವಹಿಸುವುದಕ್ಕೆ ಕಾಂಗ್ರೆಸ್ ವರಿಷ್ಠರಿಂದ ಅಪ್ಪಣೆ ದೊರೆತುದು, ಸಮಾಧಾನದ ಸಂಗತಿಯಾಗಿದೆ.

ನಮ್ಮ ನಾಡಿಗರಲ್ಲಿ ವಿಭಿನ್ನ ರಾಜಕೀಯ ತತ್ತ್ವದ ಸಂಗಡಗಳು ಕಣ್ಣಿಗೆ ಬೀಳುತ್ತಲಿದ್ದರೂ, ಕರ್ನಾಟಕ ಪ್ರಾಂತ ನಿರ್ಮಾಣದ ವಿಷಯದಲ್ಲಿ ಎಲ್ಲರಲ್ಲಿಯೂ ಮತೈಕ್ಯವಿರುವುದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಕನ್ನಡಿಗರ ಪ್ರತ್ಯೇಕ ರಾಜ್ಯವನ್ನು ಮೊದಲು ದೊರಕಿಸಬೇಕಾದುದು ಪ್ರತಿಯೊಬ್ಬ ಕರ್ನಾಟಕಸ್ಥನ ಜೀವಾಳದ ಸಂಗತಿಯಾಗಿದೆ. ಪ್ರತ್ಯೇಕ ರಾಜ್ಯದೊರೆತ ಮೇಲೆ ಇಲ್ಲಿ ಯಾವ ರಾಜಕೀಯ ತತ್ತ್ವದ ಬಹುಮತಪಕ್ಷವೂ ಆಡಳಿತ ಸೂತ್ರವನ್ನು ವಹಿಸಬಹುದು. ಆದರೆ ಮೊದಲು ಪ್ರತ್ಯೇಕ ರಾಜ್ಯವು ನಿರ್ಮಾಣವಾಗಬೇಕು. ಕರ್ನಾಟಕತ್ವ ಭಾವದ ಪ್ರಾಣಕ್ಕೆ ಮೊದಲು ಕರ್ನಾಟಕ ರಾಜ್ಯದ ಅಧಿಷ್ಠಾನದ ಅಗತ್ಯವಿದೆ.

ಈ ಸಂದರ್ಭದಲ್ಲಿ ಕನ್ನಡಿಗರು ಕರ್ತವ್ಯಗೇಡಿಗಳಾಗಿ ಕೈಮುಚ್ಚಿ, ಕುಳಿತುಕೊಂಡರೆ, ಪ್ರತ್ಯೇಕ ರಾಜ್ಯನಿರ್ಮಿತಿಯ ಗುರಿಯನ್ನು ಸಾಧಿಸುವುದಕ್ಕೆ ಮುಂದೆ ಬಹಳ ಕಾಲ--ಶ್ರಮಗಳನ್ನು ವೆಚ್ಚಮಾಡಬೇಕಾದೀತು. ಆದುದರಿಂದ ಕರ್ನಾಟಕಸ್ಥರಡೆಲ್ಲ ಇಂದು ಏಕಕಂಠದ ಕೂಗು ಕೇಳಬೇಕು: ‘ಮೊದಲು ಕರ್ನಾಟಕ ರಾಜ್ಯನಿರ್ಮಾಣ! ಆಮೇಲೆ ಮುಂದಿನ ರಾಜಕೀಯ!’

ಶಾಸನಬದ್ಧ ದಾರಿಯಿಂದ ನಡೆಯೋಣ!

ಇಂದು ಕರ್ನಾಟಕದ ಉತ್ತರ ತುದಿಯ ಮರಾಟಿಗರೂ ಆಗ್ನೇಯ ಗಡಿಯಲ್ಲಿರುವ ತೆಲುಗರೂ ಬೆಳಗಾವಿ–ಬಳ್ಳಾರಿಗಳಿಗಾಗಿ, ಅವು ಕನ್ನಡಿಗರವಲ್ಲವೆಂದು ಕೂಗಾಟವನ್ನೇ ಎಬ್ಬಿಸಿದ್ದಾರೆ. ಅವರೇ ನಿತ್ಯವೂ ನಡೆಯಿಸುತ್ತಿರುವ ಕಿಡಿಗೇಡಿತನದ ಚಳವಳಿಯ ವರ್ತಮಾನಗಳು ಕ್ಷಣ ಕ್ಷಣಕ್ಕೂ ಕಿವಿಗೆ ಬೀಳುತ್ತಲಿವೆ. ಮರಾಟಿಗರೂ ಆಂಧ್ರರೂ ಕನ್ನಡಿಗರಿಗೆ ಹೋರಾಟದ ಬೆದರಿಕೆಯನ್ನೇ ತೋರಿಸುತ್ತಲಿದ್ದಾರೆ.

ಬೆಳಗಾಂವಿ ಮತ್ತು ಬಳ್ಳಾರಿಯ ಕನ್ನಡಿಗರು ಈಗ ಸರ್ವತೋಮುಖವಾಗಿ ಕರ್ತವ್ಯತತ್ಪರರಾಗಬೇಕಾಗಿದೆ. ಬೆಳಗಾಂವಿ ಜಿಲ್ಲಾ ಕಾಂಗ್ರೆಸ್ ಕಮಿಟಿಯು, ಸಂಪೂರ್ಣ ಬೆಳಗಾಂವಿ ಜಿಲ್ಲೆಯು ಕನ್ನಡ ನಾಡಿಗೆ ಸೇರಬೇಕೆಂಬುದನ್ನು ಆಯೋಗಕ್ಕೆ ಸಕಾಲದಲ್ಲಿ ತಿಳುಹಿ ಮಹತ್ತ್ವದ ಕಾರ್ಯವನ್ನು ಮಾಡಿದೆ. ಇದಕ್ಕಾಗಿ ಜಿಲ್ಲಾ ಕಾಂಗ್ರೆಸ್ ಕಮಿಟಿಯನ್ನು ಕನ್ನಡಿಗರೆಲ್ಲರೂ ಅಭಿನಂದಿಸಬೇಕು. ಬೆಳಗಾಂವಿಯಲ್ಲಿ ದಿನದಿನಕ್ಕೂ ಮರಾಟಿಗರ ಪುಂಡಾಟಿಕೆ--ಕಿಡಿಗೇಡಿತನದ ಚಳವಳಿಯು ಹೆಚ್ಚಾಗುತ್ತ ಹೊರಟಿದೆ. ನಿತ್ಯವೂ ಮೆರವಣಿಗೆ ಹೊರಡಿಸಿ ‘ಕನ್ನಡಿಗರೇ, ಬೆಳಗಾಂವಿಯನ್ನು ಬಿಟ್ಟು ತೊಲಗಿರಿ’ ಎಂದವರು ಘೋಷಣೆ ಮಾಡುತ್ತಲಿದ್ದಾರೆ. ಪರಸ್ಪರರಲ್ಲಿ ದ್ವೇಷವು ಹುಟ್ಟಿ ಹಬ್ಬುವಂತಹ ವಾತಾವರಣವನ್ನು ನಿರ್ಮಿಸುತ್ತಿದ್ದಾರೆ.

ನಿಜವಾಗಿ ನೋಡಿದರೆ ಈಗಿನ ಸಂದರ್ಭದಲ್ಲಿ ಯಾರು ರಜೋಮಾರ್ಗಕ್ಕೆ ಇಳಿಯಬೇಕಾದ ಕಾರಣವೇ ಇಲ್ಲ. ಎಲ್ಲರಿಗೂ ಯೋಗ್ಯವಾದ ನ್ಯಾಯವು ದೊರೆಯಬೇಕೆಂದೇ ಕೇಂದ್ರ ಸರಕಾರವು ಆಯೋಗವನ್ನು ನಿಯಮಿಸಿರುವುದು. ಈಗ ನಾವೆಲ್ಲರೂ ಶಾಸನ ಬದ್ಧವಾದ ಮಾರ್ಗದಿಂದ ನಡೆದರೆಯೆ ಎಲ್ಲರಿಗೂ ಹಿತವಿದೆ ರಾಜ್ಯ ಭಿನ್ನವಾದರೇನು? ನಾವೆಲ್ಲರೂ ಭಾರತೀಯರಾಗಿ ಒಂದೆ ರಾಷ್ಟ್ರದಲ್ಲಿಯೇ ಬಂಧುಭಾವದಿಂದ ಬಾಳಬೇಕಾಗುವುದೆಂಬುದನ್ನು ಎಲ್ಲರೂ ಲಕ್ಷ್ಯದಲ್ಲಿಟ್ಟುಕೊಂಡು ನಡೆಯಬೇಕು.

ಪುಂಡರಿಗಾಗಿ ಪೂರ್ವ ಜಾಗೃತಿಯಿರಲಿ!

ಕನ್ನಡಿಗರು ಶಾಸನಬದ್ಧಮಾರ್ಗವನ್ನೇ ಅವಲಂಬಿಸಿ ಹೋರಟಿದ್ದಾರೆಂಬುದು, ಈ ಮೊದಲು ಬಳ್ಳಾರಿಯ ಕನ್ನಡಿಗರು ನಡೆಯಿಸದ ವಿಧಾಯಕ ಚಟುವಟಿಕೆಗಳನ್ನೂ, ಬೆಳಗಾಂವಿಯ ಕನ್ನಡಿಗರು ಇದೀಗ ಹಿಡಿದಿರುವ ವಿಧಾಯಕ ಮಾರ್ಗವನ್ನೂ ನೋಡಿದವರೆಲ್ಲ ಒಪ್ಪಿಕೊಳ್ಳಬೇಕಾದ ಮಾತು. ಆಂಧ್ರರೂ ಮರಾಟಿಗರೂ ಹೊಡೆದಾಟದ ರಜೋಮಾರ್ಗವನ್ನೇ ಅಪೇಕ್ಷಿಸಿದರೆ, ಕನ್ನಡಿಗರು ಅದಕ್ಕೂ ಹಿಂದೆ ಮುಂದೆ ನೋಡಲಾರರೆಂಬುದನ್ನು ಅವರಿಗೆ ಮನವರಿಕೆ ಮಾಡಿಕೊಡಬೇಕಾದೀತು. ಕನ್ನಡಿಗರು ತಾವಾಗಿ ಯಾರ ಮೇಲೂ ಏರಿಹೋಗಕೂಡದು; ಆದರೆ ಏರಿ ಬಂದವರಿಂದ ತಮ್ಮನ್ನು ಸಂರಕ್ಷಿಸಿಕೊಳ್ಳುವಂತಹ ಪೂರ್ವಸಿದ್ಧತೆಯನ್ನು ಸಂಘಟಿಸಿಕೊಳ್ಳಬೇಕಾದ ಅಗತ್ಯವು ತೋರುತ್ತಲಿದೆ.

ಬೆಳಗಾಂವಿಯ ಮರಾಟಿಗರೂ ಬಳ್ಳಾರಿಯ ಆಂಧ್ರರೂ ಇಂದು ತಮ್ಮ ಚಟುವಟಿಕೆಗಳಿಗೆ ಅನಾಗರಿಕತೆಯ ಸ್ವರೂಪವನ್ನು ಕೊಡತ್ತಲಿದ್ದಾರೆ. ಆಡಳಿತದ ಕಾಯಿದೆಗಳ ಕಡೆಗೂ ಅವರು ದುರ್ಲಕ್ಷ್ಯದಿಂದ ನೋಡುತ್ತಲಿದ್ದಾರೆ. ಇಷ್ಟೇ ಅಲ್ಲ, ಮುಂಬಯಿ ಸರಕಾರದಲ್ಲಿದ್ದು ಆಡಳಿತದ ಹೊಣೆಗಾರಿಕೆಯ ಸೂತ್ರವನ್ನು ವಹಿಸಿದ ಕೆಲವು ಮರಾಠೀ ಅಧಿಕಾರಿಗಳು ಬೆಳಗಾಂವಿಯ ಮರಾಟಿಗರನ್ನು ಅಡ್ಡ ದಾರಿಗೆ ಎಳೆಯುತ್ತಲಿದ್ದಾರೆ. ಇದರಂತೆಯೆ ಆಂಧ್ರ ರಾಜ್ಯದ ಆಡಳಿತವೇ ಬಳ್ಳಾರಿಯ ತೆಲುಗರನ್ನು ಪುಂಡಾಟಿಕೆಗೆ ಪ್ರಚೋದಿಸುತ್ತಲಿದೆ.

ಕನ್ನಡಿಗರು ಈ ಮಾತನ್ನು ಯಾವಾಗಲೂ ಕಣ್ಮುಂದೆದುರು ಇರಿಸಿಕೊಂಡು ನಡೆಯಬೇಕು. ಪುಂಡರಿಂದ ತಮ್ಮ ವಿತ್ತ--ಜೀವಿತಗಳಿಗೆ ತೊಂದರೆಯಾಗದಂತೆ ಜಾಗೃತಿಯನ್ನು ವಹಿಸಬೇಕು. ಅಲ್ಲಲ್ಲಿಯ ಆಡಳಿತದವರೂ ಇದರ ಬಗೆಗೆ ಜಾಗೃತರಾಗಿರಬೇಕು. ಕಳೆದುಕೊಂಡು, ಗುದ್ದು ತಿಂದು, ಪಶ್ಚಾತ್ತಾಪ ಪಡಬೇಕಾದ ಪ್ರಸಂಗ ಬಾರದಂತೆ ಕನ್ನಡಿಗರು ಕಣ್ಣು ತೆರೆದು ನಡೆಯಬೇಕು.

ಕರ್ನಾಟಕವನ್ನು ವಿರೋಧಿಸುವ ಜಾತಿವಾದಿಗಳೇ !

ಕನ್ನಡಿಗರಿಗೆ ಬಂದಿರುವ ಇಂತಹ ಸುವರ್ಣ ಸಂಧಿಯಲ್ಲಿಯೂ ಮೈಸೂರಿನ ಕೆಲವು ಜನ ಕನ್ನಡಿಗರ ಗುಂಪೇ ಕರ್ನಾಟಕ ರಾಜ್ಯ ನಿರ್ಮಾಣದ ವಿಚಾರದಲ್ಲಿ ಅಪಸ್ವರದಿಂದ ಕೂಗುತ್ತಲಿರುವುದು ವಿಷಾದದ ಸಂಗತಿಯಾಗಿದೆ. ಜಾತೀಯದೃಷ್ಟಿ ಇದಕ್ಕೆ ಕಾರಣವೆಂದು ಹೊರಗಣ್ಣಿಗೆ ತೋರುತ್ತಲಿದ್ದರೂ, ವಾಸ್ತವವಾಗಿ ಇದು ಒಂದು ಜಾತೀಯ ಜನಜಂಗುಳಿಯ ಕೂಗು ಆಗಿರದೆ, ಆ ಜಂಗುಳಿಯ ನಾಯಕರ ವೈಯಕ್ತಿಕ ವ್ಯಾಮೋಹದ ಕುಯುಕ್ತಿಯು ಕಿರುಚಾಗಿದೆಯೆಂದು ಹೇಳಬಹುದು ನವಭಾರತದಲ್ಲಿ ಇನ್ನು ಯಾವ ಹಳೆಯ ಜಾತಿಗಳೂ ಸುಸಂಘಟಿತವಾಗಿ ಉಳಿಯಲಾರವು. ಯಾರೂ ಯಾವ ಉದ್ಯೋಗವನ್ನೂ ಮಾಡಬಹುದಾದ ಕಾಲದಲ್ಲಿ, ಎಲ್ಲರಲ್ಲಿಯೂ ಉಣ್ಣು-ತಿನ್ನುವ ಕೊಡ-ಕೊಳ್ಳುವ ವ್ಯವಹಾರವು ನಿರಾತಂಕವಾಗಿ ನಡೆಯಬೇಕೆಂದು ಸರಕಾರವೇ ಕಾಯಿದೆಯನ್ನು ಮಾಡುತ್ತಿರುವ ಕಾಲದಲ್ಲಿ, ಹಳೆಯ ವಿಚಾರದ ಜಾತಿ-ಪಂಗಡಗಳು ಉಳಿಯುವ ಬಗೆಹೇಗೆ? ಜಾತೀಯ ಭಾವನೆಯಿಂದ ಈಗ ಕರ್ನಾಟಕ ರಾಜ್ಯವು ಬೇಡವೆನ್ನುವವರು, ಮುಂದೆ ಜಾತಿ-ಕರ್ನಾಟಕ ಎರಡೂ ಇಲ್ಲದೆ ಬಾಯಿಬಾಯಿ ಬಿಡಬೇಕಾದೀತು

ರಾಜ್ಯದ ಅಧಿಕಾರ ಸೂತ್ರಗಳು, ಸಮರ್ಥರಾದ ನಿಃಪಕ್ಷಪಾತಿ ವ್ಯಕ್ತಿಗಳ ಕೈಯಲ್ಲಿದ್ದರೆ ಸರ್ವಜನರ ಕಲ್ಯಾಣವಾದೀತಲ್ಲದೆ, ಅಸಮರ್ಥರಾದ ಜಾತೀಯವಾದಿಗಳ ಕೈಯಲ್ಲಿದ್ದರೆ, ಆ ಜಾತಿಯವರಿಗೂ ಕಲ್ಯಾಣವಾಗಲಾರದು; ಮಿಕ್ಕ ಜನರಿಗೂ ಸುಖ-ಸಮಾಧಾನಗಳು ಸಿಕ್ಕಲಾರವು. ಈ ಮಾತಿಗೆ ಪ್ರತ್ಯಕ್ಷ ಉದಾಹರಣೆ ಬೇಕೆಂದರೆ ಇಂದಿನ ಪಾಕಿಸ್ತಾನದ ಆಡಳಿತದ ದುರ್ದೆಶೆಯನ್ನು ನೋಡಬಹುದು. ಅಲ್ಲಿ ಎಲ್ಲರೂ ಒಂದೇ ಜಾತಿಗೆ ಸೇರಿದವರು. ಆದರೆ ಆಡಳಿತದಲ್ಲಿರುವ ವ್ಯಕ್ತಿಗಳ ಅಸಾಮರ್ಥ್ಯ–ಅಯೋಗ್ಯತೆಗಳು, ಪಾಕಿಸ್ತಾನದ ಪ್ರಜೆಗಳ ಸುಖ-ಶಾಂತಿಗಳನ್ನೇ ಹುಡಿಗೂಡಿಸಿ ಬಿಡುವುದರಲ್ಲಿವೆ. ಕರ್ನಾಟಕ ರಾಜ್ಯನಿರ್ಮಾಣವಾಗಬೇಕಾದುದು ವ್ಯಕ್ತಿಗಳಿಗೆ ಅಧಿಕಾರ ದೊರಕಿಸಿಕೊಡಲಿಕ್ಕಲ್ಲ; ಕನ್ನಡಿಗರೆಲ್ಲರಿಗೂ ಸುಖ-ಸ್ವಾಸ್ಥ್ಯಗಳನ್ನು ಒದಗಿಸಲಿಕ್ಕೆ !

ಕೊಡಗರ ಹುಡುಗಾಟ

ಕೊಡಗು ಪ್ರಾಂತ್ಯದಂತಹ ಕರ್ನಾಟಕ ಅವಿಭಾಜ್ಯ ತುಣುಕೂ ಕರ್ನಾಟಕ ಪ್ರಾಂತನಿರ್ಮಾಣವನ್ನು ವಿರೋಧಿಸುತ್ತಿರುವುದು ಇನ್ನೊಂದು ವಿಷಾದದ ಸಂಗತಿ ಒಂದು ಸಂಪೂರ್ಣ ಜಿಲ್ಲೆಯೆನಿಸುವಷ್ಟು ಕ್ಷೇತ್ರವೂ ಜನಸಂಖ್ಯೆಯೂ ಇಲ್ಲದ ಕೊಡಗು ಪ್ರದೇಶವು, ತಾನೊಂದು ಪ್ರತ್ಯೇಕ ರಾಜ್ಯವಾಗಿ ಉಳಿಯಬೇಕೆಂದು ಅಪೇಕ್ಷಿಸುವುದೆಂದರೆಯೆ ನಗೆಪಾತೆನಿಸಬಹುದು. ಆದರೆ ವ್ಯಕ್ತಿಗಳ ಅಧಿಕಾರ ಲಾಲಸೆಯು ವಿವೇಕವನ್ನೇ ಮರೆಮಾಡಿಬಿಡುವುದೆಂಬುದಕ್ಕೆ ಕೊಡಗಿನ ರಾಜಕೀಯ ಮುಂದಾಳುಗಳ ಈಗಿನ ನಡತೆ ಪ್ರತ್ಯಕ್ಷ ಉದಾಹರಣೆಯೆನಿಸುವಂತಿದೆ.

ಕೊಡಗಿಗಿಂತ ಎಷ್ಟೋ ಮಡಿ ದೊಡ್ಡವಾದ ಹಲವಾರು ಸಂಸ್ಥಾನಗಳು ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ವಿಲೀನವಾದುದು ಯಾರಿಗೆ ಗೊತ್ತಿಲ್ಲ ? ಕೊಡಗಿನಂತಹ ಪುಟ್ಟಪುಟ್ಟ ಪ್ರದೇಶಗಳಿಗೂ ಪ್ರತ್ಯೇಕ ರಾಜ್ಯವಾಗಿರುವ ಅವಕಾಶವನ್ನು ಕಲ್ಪಿಸಿಕೊಡುತ್ತ ಹೋದರೆ, ಆಡಳಿತದಲ್ಲಿ ಒಂದು ಸುಯಂತ್ರತೆ ಉಳಿಯುವುದು ಹೇಗೆ ?

ಆಯೋಗದ ವಿಚಾರಣಾ ಕಾರ್ಯವು ಮುಗಿದನಂತರ, ಭಾರತದಲ್ಲಿ ಆಡಳಿತಕ್ಕೆ ಅನುಕೂಲವಾಗುವಂತೆ, ಭಾಷಾನ್ವಯ ಪ್ರಾಂತಗಳು ನಿರ್ಮಾಣವಾಗುವುದು ಕಟ್ಟಿಟ್ಟ ಮಾತು. ಕೊಡಗು ಪ್ರಾಂತದ ನಾಯಕರು ಈಗ ವಿವೇಕಬುದ್ಧಿಯನ್ನು ಇರಿಸಿಕೊಂಡು, ವಿಚಾರ ಮಾಡಬೇಕಾದುದೇನಾದರೂ ಇದ್ದರೆ, ಕೊಡಗು ಪ್ರದೇಶವನ್ನು ಯಾವ ಭಾಷೆಯ ರಾಜ್ಯಕ್ಕೆ ಸೇರಿಸಿದರೆ ಅಲ್ಲಿಯ ಜನರಿಗೆ ಒಳ್ಳೆಯದಾದೀತು ?— ಎಂಬುದನ್ನು. ಕರ್ನಾಟಕ ರಾಜ್ಯದಲ್ಲಿ ಸೇರುವುದೇ ಸ್ವಾಭಾವಿಕವಾದ ಮಾರ್ಗ— ಎಂಬುದನ್ನು ಅದನ್ನು ಬಿಟ್ಟು ಲೋಕ ವಿಲಕ್ಷಣವೆನಿಸುವಂತೆ, ಪ್ರತ್ಯೇಕ ರಾಜ್ಯವನ್ನು ಅಪೇಕ್ಷಿಸುವುದೆಂದರೆ, ಕೇಂದ್ರ ಸರಕಾರವೂ ಕಾಂಗ್ರೆಸ್ಸಿನ ನಾಯಕರೂ ಒಪ್ಪಿಕೊಳ್ಳುವರೆ ? ಕೊಡಗರು ಹುಡುಗಾಟದ ಹಟವನ್ನೇ ಹಿಡಿದರೆ, ನಾಳೆ ರಾಷ್ಟ್ರದ ನಾಯಕರಿಂದ ಛೀ ಹಾಕಿಸಿಕೊಳ್ಳುವ ಪ್ರಸಂಗ ಬರುವುದು ಅಷ್ಟೆ !

ಉತ್ತರ ಕನ್ನಡ ಜಿಲ್ಲೆಯ ಕಮಕ್ಕೆ ಬಗೆಹರಿಯಿತು

ಉತ್ತರ ಕನ್ನಡ ಜಿಲ್ಲೆಯ ಎಲ್ಲ ಜನರೂ ಕರ್ನಾಟಕ ರಾಜ್ಯ ನಿರ್ಮಾಣವನ್ನು ಆದರದಿಂದ ಸ್ವಾಗತಿಸಲು ಸಿದ್ಧರಾದುದು ಸಂತೋಷಪಡುವ ವಿಷಯವಾಗಿದೆ. ಹೊಟ್ಟೆತುಂಬಿಕೊಳ್ಳಲು ಉತ್ತರ ಕನ್ನಡ ಜಿಲ್ಲೆಯಲ್ಲಿ ಬಂದು ಮನೆಮಾಡಿಕೊಂಡಿದ್ದ ಕೆಲವು ಕೃತಘ್ನ ವ್ಯಕ್ತಿಗಳು, ಆ ಜಿಲ್ಲೆಯ ಮುಂದುವರಿದ ಸಮಾಜದವರಾದ ಕೊಂಕಣಿಗರಲ್ಲಿ ಬುದ್ಧಿಭೇದವನ್ನು ಹುಟ್ಟಿಸಲು ಈ ಮೊದಲೆ ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ಈಗಲೂ ಮಾಡುತ್ತಲಿದ್ದಾರೆ. ಆದರೆ ಸುವಿವೇಕಿಗಳಾದ ಕೊಂಕಣಿಗರು, ಸಾಕಷ್ಟು ಹಿಂದು–ಮುಂದಿನ ವಿಚಾರವನ್ನು ಮಾಡಿ, ಕರ್ನಾಟಕ ರಾಜ್ಯದಲ್ಲಿರುವುದೇ ತಮ್ಮ ಪ್ರಗತಿಗೆ ಸಾಧಕವೆಂಬ ಮಾತನ್ನು ಮನವರಿಕೆ ಮಾಡಿಕೊಂಡಿದ್ದಾರೆ. ಎಂತಲೇ ಅವರು ಉತ್ತರ ಕನ್ನಡ ಜಿಲ್ಲೆಯ ಎಲ್ಲ ಪ್ರದೇಶವೂ ಕರ್ನಾಟಕರಾಜ್ಯದ ಅವಿಭಾಜ್ಯಭೂಮಿಯೆಂಬ ನಿರ್ಣಯಕ್ಕೆ ಬಂದಿದ್ದಾರೆ. ಅವರ ವಿಶ್ವಾಸಕ್ಕೆ ಸರಿಯಾಗಿ ಕನ್ನಡಿಗರೂ ಅವರನ್ನು ಆತ್ಮೀಯತೆಯಿಂದ ನೋಡುವುದು ಅತ್ಯಗತ್ಯವಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಕೆಲವೊಂದು ಭಾಗವನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂಬ ಚಳುವಳಿಯನ್ನು ಮಹಾರಾಷ್ಟ್ರರಾಜ್ಯ ನಿರ್ಮಾಣನಾಯಕರು ನಡೆಯಿಸಿಯೇ ಇದ್ದಾರೆ. ಅವರ ಈ ಚಳವಳಿಯು ಉತ್ತರಕನ್ನಡಜಿಲ್ಲೆಯ ಕೊಂಕಣಿಗರು ತಮ್ಮ ಕಡೆಗೆ ಒಲಿಯುವರೆಂಬ ಭರವಸೆಯಿಂದಲೇ ನಡೆದಿದ್ದಿತು. ಇಷ್ಟೇ ಅಲ್ಲ: ಭಾವೀ ಬೃಹನ್ಮಹಾರಾಷ್ಟ್ರದ ಭೂಪಟದಲ್ಲಿ ಕಾರವಾರ ಜಿಲ್ಲೆಯನ್ನು ಈಗಾಗಲೇ ಸೇರಿಸಿಬಿಟ್ಟಿದ್ದಾರೆ. ಬಹುಜನ ಕೊಂಕಣಿಗರಲ್ಲಿಯ ಕರ್ನಾಟಕರಾಜ್ಯಪ್ರೀತಿಯು, ಮರಾಟಿಗರಿಗೆ ಒಂದು ದೊಡ್ಡ ಆಘಾತವಾಗಿ ಪರಿಣಮಿಸದಿರದು.

ನಿಧಿಸಂಗ್ರಹ

(ಸಣ್ಣ ಕತೆ)

. ಜಿ. ಟಿ. ನಾರಾಯಣರಾವ್ ಎಂ. ಎ. ಮಡಿಕೇರಿ (ಕೊಡಗು)

●

ಹೊಸ ಮಾದರಿಯ ಕತೆಯೊಂದಿದು. ಸಂಶೋಧಕರೊಬ್ಬರಿಗೆ ದೊರೆತ ಸಾಂಕೇತಿಕ ಭಾಷೆಯ ಲೇಖನವು, ಅವರ ಬುದ್ಧಿಯ ಪರೀಕ್ಷೆಗೆ ನಿದರ್ಶನವಾಗಿ ನಿಂತಿತು.

●

ಸುಮಾರು ಹತ್ತು ವರ್ಷಗಳ ಹಿಂದೆ, ಕೊಡಗು ಸಂಸ್ಥಾನದ ಐತಿಹಾಸಿಕ ಘಟನೆಗಳನ್ನು ಸಂಶೋಧಿಸಲೆಂದು ನಾನು ಹಳ್ಳಿ-ಹಳ್ಳಿಗಳಲ್ಲಿ ಅಲೆಯುತ್ತಿದ್ದೆನು. ಪ್ರಾಚೀನತಮವಾಗಿದ್ದ ಗುಡಿ-ಮಠಗಳನ್ನೂ ಮನೆ-ಮಂದಿರಗಳನ್ನೂ ಸಂದರ್ಶಿಸಿ, ದೊರೆತ ಅನೇಕ ಉಲ್ಲೇಖಗಳನ್ನು ಸಂಗ್ರಹಿಸಿದೆನು. ಹಲವಾರು ಶಾಸನದ ಕಲ್ಲುಗಳನ್ನು ಪ್ರತಿ ಮಾಡಿಕೊಂಡೆನು. ಎಷ್ಟೋ ಜನ ಹಿರಿಯರನ್ನು ಕಂಡು ಅವರೊಡನೆ ಚರ್ಚಿಸಿ ಅನೇಕ ವಿಷಯಗಳನ್ನು ಅರಿತೆನು. ಹೀಗೆ ಮಾತಾಡಿ ತಿಳಿದುದು ಒಂದು ಗುಡಿಯ ಕತೆ, ಒಂದು ಪ್ರತಿಮೆಯ ಇತಿಹಾಸ, ಒಂದು ಕುಟುಂಬದವರ ಸಾಹಸೋದ್ಯಮ....ಇತ್ಯಾದಿ. ನನ್ನ ಸಂಗ್ರಹ ಅತಿ ಭರದಿಂದ ಬಲು ಯಶಸ್ವಿಯಾಗಿ ಮುಂದುವರಿಯಿತು.

ಮುಂದಿನ ಮಳೆಗಾಲ ಪ್ರಾರಂಭವಾದೊಡನೆಯೇ, ದೊರೆತ ಆಧಾರಗಳನ್ನು ಹೊಂದಿಸಿ ಒಂದು ಇತಿಹಾಸವನ್ನು ಬರೆಯಲು ಕುಳಿತೆನು. ಕೂಲಂಕಷವಾಗಿ ಅವುಗಳನ್ನು ಪರಿಶೀಲಿಸುತ್ತಿದ್ದಾಗ, ಒಂದು ಅತ್ಯಾಶ್ಚರ್ಯಕರವಾದ ಲೇಖನವು ದೊರೆಯಿತು. ಅದರ ಒಕ್ಕಣಿಕೆ ಹೀಗಿದ್ದಿತು:—

“ ಛಕಛಿದಣಿಯ್ಕೋಲಳಣಾಡುಗಲೆಛಿ
ಕೊರ್ಝು್ ಟಂಡೊಝುಶುಲು ಉಲ್ಪಾಮಗಮಂ ‖
ಯೆಂಡಿಮಣಕಂಡರ್ಝುಕಬಿಕ್ಯುಗು
ಮೇಕಿರ್ಝುಣಕಟ್ಟೆ ತಿಡುಕಿಕ್ಯುಲು ‖
ಮೇಕಿರ್ಝುಳಣಕಲಿಂಲಯೆಂಡಿಮಣಕಡರ್ಝುಬೆಡೆ
ಡಣಛಿಸಖಗೆಬಡರ್ಝುಡೆಯಿಕುಯಿಕುಡಯ
ಸಂಲಲೂಕಗಮುಬೆಲುಮೇಕಿಲಿಕುಟಕ್ಸೆಛೆಳಿ
ಛಂವಿಛುಗ ಸಿಂಲುಗಿಮುಖಿಜುಲುಮಿವಿಳು ‖

—ಘಿಗಕಾದೇಂಲ್ಕ”

ಈ ಲೇಖನದ ನಾವೀನ್ಯದಿಂದ, ಅದಕ್ಕಿಂತಲೂ ಹೆಚ್ಚಾಗಿ ಸ್ಥೂಲ ಪರಿಶೀಲನೆ ಮಾಡುವಾಗ ಅದರ ಅರ್ಥವೇ ತಿಳಿಯದ ಕಾರಣದಿಂದ, ಬೇರೆಲ್ಲ ವಿಷಯಗಳನ್ನೂ ಮೂಲೆಗೊತ್ತಿ, ಇದನ್ನೇ ಅಭ್ಯಸಿಸ ತೊಡಗಿದೆನು. ಇದೊಂದು ಗೂಢಲೇಖನವಾಗಿರಬೇಕು. ಇದನ್ನು ಬರೆದ ವ್ಯಕ್ತಿಯ ಹೆಸರು, ಪ್ರಾಯಶಃ ‘ಘಿಗಕಾದೇಂಲ್ಕ’ ಎಂದು ಆ ಭಾಷೆಯಲ್ಲಿರಬೇಕು. ಇಂತಹ ಗೂಢಲೇಖನವನ್ನು ಬಿಡಿಸುವುದು ಸಾಧ್ಯವಾದರೆ, ಪರಮರಹಸ್ಯವೊಂದು ಬಯಲಾಗಬಹುದು. ಅದರ ಸಹಾಯದಿಂದ ಇತಿಹಾಸವನ್ನೇ ಪುನಾರಚನೆ ಮಾಡಬಹುದು— ಎಂದು ಮುಂತಾಗಿ ಚಿಂತಿಸಿದೆ.

ಲೇಖನವನ್ನು ಹತ್ತಿಪ್ಪತ್ತು ಸಲ ಓದುವಾಗ, ಎರಡು ವಿಷಯಗಳು ತಿಳಿದುವು: ಲೇಖನವು ಛಂದೋಬದ್ಧವಾಗಿದೆ ಮತ್ತು ಮಹಾಪ್ರಾಣಾಕ್ಷರಗಳು ತುಂಬ ಬಂದಿವೆ. ಮೊದಲಿನೆರಡು ಪಙ್ಕ್ತಿಗಳು ನಾಲ್ಕು ಮಾತ್ರೆಯ ನಾಲ್ಕು ಗಣಗಳಿಂದ ಕೂಡಿವೆ. ಮತ್ತಿನ ಎರಡು ಪಙ್ಕ್ತಿಗಳು ಒಂದು ರೀತಿಯ ಅಕ್ಷರಛಂದಸ್ಸಿನಲ್ಲಿವೆ (ಭಜಸಲಗಂ). ಕೊನೆಯ ನಾಲ್ಕು ಪಙ್ಕ್ತಿಗಳು ಕುಸುಮಷಟ್ಪದಿಯ ಚೌಪದಿ ಆಕಾರ.

ಕನ್ನಡ ನಾಡಿನಲ್ಲಿ ದೊರೆತ ಲೇಖನ, ಕನ್ನಡ ಛಂದಸ್ಸಿನಲ್ಲಿ ವಿರಚಿತವಾಗಿ ಕನ್ನಡ ಅಕ್ಷರಗಳಲ್ಲಿ ಲಿಖಿತವಾಗಿರುವ ಲೇಖನ. ಆದುದರಿಂದ ಕನ್ನಡಭಾಷೆಯಲ್ಲಿಯೇ ಇದನ್ನು ಅರ್ಥಯಿಸಲು ಮೊದಲು ಪ್ರಯತ್ನಿಸಬೇಕು— ಎಂದು ನಿಶ್ಚಯಿಸಿದೆನು.

ಗೂಢಭಾಷೆಗಳಿಗೆ ಒಂದು ಕ್ರಮ—ಒಂದು ಸೂತ್ರ ಇರುವುದು. ಉದಾಹರಣೆಗೆ ಕಮಾತು. “ ಕಆಕನಂಕದಕಕಂಕದಕರು ಕಉಕತ್ತ ಕಮ ಕಕಕವಿಕಗಕಳು ”—ಕಮಾತಿನಲ್ಲಿ “ಆನಂದಕಂದರು ಉತ್ತಮ ಕವಿಗಳು ” ಎಂದಾಗುವುದು. ಶಬ್ದಗಳನ್ನು ಎಡದಿಂದ ಬಲಕ್ಕೆ ಓದಿದರೆ, ಇನ್ನೊಂದು ಗೂಢಭಾಷೆ ದೊರೆಯುವುದು. ಉದಾಹರಣೆ— “ ಷತೋಂಸಬಂತುಗೆಮನರೆದಂಬಜೆರಯಗೆಸಬೇ ” ಈ ವಾಕ್ಯ “ ಬೇಸಗೆಯ ರಜೆ ಬಂದರೆ ನಮಗೆ ತುಂಬ ಸಂತೋಷ ” ಎನ್ನುವ ವಾಕ್ಯದ “ ಶೀರ್ಷಾಸನ ” ರೂಪ. ಇವೆರಡರ ಸಾಲಿಗೂ ಮೇಲಿನ ಗೂಢಲೇಖನ ಸೇರುವುದಿಲ್ಲವೆನ್ನುವುದು ಸ್ಪಷ್ಟ. ಕಠಿನತರವಾದ ಇನ್ನೊಂದು ಗೂಢಭಾಷೆಯಿದೆ. ಅದರ ಸೂತ್ರ- ಪ್ರತಿಶಬ್ದದ ಸ್ವರಾಕ್ಷರಗಳನ್ನು ಸ್ಥಾನಾಂತರಿಸದೆ ವ್ಯಂಜನಗಳನ್ನು ಮಾತ್ರ ಇಷ್ಟಬಂದಂತೆ ಸ್ಥಾನಪಲ್ಲಟನ ಮಾಡುವುದು. “ ಮೋಟುಕಾಲು ಕಾಟು ನಾಯಿ ”ಯ (ಮಕ್ಕಳ ಮಗ್ಗಿ ಪುಸ್ತಕದಲ್ಲಿರುವ ಪದ್ಯ) ಕತೆಯನ್ನು ಈ “ ತಿರುಗುಭಾಷೆ ”ಯಲ್ಲಿ ಕೆಳಗೆ ಬರೆಯಲಾಗಿದೆ—

ಟೋಮು ಲಾಕು ಟಾಕು ಯಾನಿ ಟೇವೆ ದೀಬಿ ಟಾದುಗಾವ
ಟಾಸೆ ಡುಮ್ತುದೊಮ್ನುಡಮ್ಕು ತಿಮ್ನು ಟಿತ್ತಿಬು
ಟೋತಿಬೊಯ್ಕು ಟಾಸೆ ಡುಮ್ತುದೊಮ್ನು ಗದಿತು ಟಿಪ್ಪುಡೊಪೆಯೆ
ಟೋಮುಲಾಕ ಡಬಿದು ಡಬಿದು ಣ್ರಾಪ ಟಿತ್ತಿಬು ‖

ಆದರೆ— ಈ ಸಲ ದೊಡ್ಡ ಆದರೆ— ನನಗೆ ದೊರೆತ ಗೂಢಲೇಖನ ಈ ಅಸ್ತ್ರಕ್ಕೂ ಮಣಿಯುವುದಿಲ್ಲ.

ಬಹುದಿನಗಳ ವರೆಗೆ ನಾನು ಈ ಲೇಖನವನ್ನು ಕುರಿತು ಯೋಚಿಸಿ

ದನು. ಇದರ ಕುರಿತಾದ ಆಧಾರಗ್ರಂಥವೊಂದೂ ನನಗೆ ದೊರೆಯ ಲಿಲ್ಲ. ಮಡಿಕೇರಿಯ ಮಳೆಗಾಲದ ಮಧ್ಯೆ ಹೂಬಿಸಿಲು, ಮುನಿಸಿನ ಮಧ್ಯೆ ಕಿರುನಗು ಮೂಡುವಂತೆ, ಒಂದು ಸಾಯಂಕಾಲ ಬಿರಿಯಿತು. ಆ ಸಾಯಂಕಾಲ ರಾಜಾಸೀಟಿನ ನಂದೀಮರದ ಬುಡದಲ್ಲಿ ಮಂಡಿಸಿ ಸ್ವರ್ಗೀಯ ದೃಶ್ಯವನ್ನು ನೋಡುತ್ತ ಅದರಲ್ಲಿ ಲೀನನಾಗಿದ್ದೆನು. ತರಂಗತರಂಗವಾಗಿ ವ್ಯಾಪಿಸಿದ್ದ ಪರ್ವತಶ್ರೇಣಿಗಳಲ್ಲಿಯೂ, ವಿವಿಧ ರೇಖಾವಿನ್ಯಾಸಗಳಿಂದ ಶೋಭಿಸುತ್ತಿದ್ದ ಜರಿಯಂಚಿನ ಮೋಡಗಳ ಲ್ಲಿಯೂ ಗೂಢಭಾಷೆಯು ಸುಪ್ತವಾಗಿರಬಹುದೇ, ಪ್ರಕೃತಿಯೇ ಒಂದು ಗೂಢಕೃತಿಯಲ್ಲವೇ ?— ಎಂದು ಮುಂತಾಗಿ ನಾನು ಆಲೋಚಿಸು ತ್ತಿದ್ದೆನು. ಮಂಗಳೂರಿಗೆ ಹೋಗುವ ಮಾರ್ಗವು ಕೆಳಗೆ ಸರ್ಪಗಮನ ದಿಂದ ಹರಿದು ದೂರದಲ್ಲಿ ಮಾಯವಾಗುತ್ತಿದ್ದಿತು. ಮನಸ್ಸು ಮುಂದು ವರಿದು ಮಂಗಳೂರನ್ನು ಸೇರಿತು. ಅಲ್ಲಿ ಸೈಂಟ್ ಎಲೋಯ್ಸಿಯಸ್ ಕಾಲೇಜಿನಲ್ಲಿ ನಾನು ಓದಿದುದು, ಲೆಕ್ಕ ಭೌತಶಾಸ್ತ್ರಗಳಲ್ಲಿ Strong ಆಗಿದ್ದರೂ ಕಡಲರಾಣಿ ಬ್ರಿಟಾನಿಯಳ ಮಾತಿನ ಕಡಲಿನಲ್ಲಿ ಮುಳುಗಿ ಇಂಟರ್ಮೀಡಿಯೇಟಿನಲ್ಲಿಯೇ ಕಾಲೇಜನ್ನು ತೊರೆದುದು, ಅನಂತರ ಸುಲಭವಾದ ಇತಿಹಾಸಸಂಶೋಧನೆಗೆ ಕೈಹಾಕಿದುದು— ಇವನ್ನೆಲ್ಲ ರೂಪಿಸಿಕೊಂಡೆ. ನನ್ನ ಭೌತಶಾಸ್ತ್ರದ ಲೆಕ್ಚರರ್ ಶ್ರೀ. ನಾರಾಯಣ ಹೊಳ್ಳರ ಮಂದಹಾಸ, ಅವರ ತರಗತಿಯಲ್ಲಿನ ನಗೆಗಡಲು, ಅವರ ರಾಜಕೀಯ ಗುಂಡುಗಳು ಇವುಗಳನ್ನು ಸ್ಮರಿಸಿದೆ. ಶ್ರೀ. ಹೊಳ್ಳರು ತಮ್ಮ ಪಾಠದಲ್ಲಿ ಒಂದು ಗಂಟೆಗೆ ೪೦ಕ್ಕಿಂತ ಕಡಿಮೆಯಿಲ್ಲದಷ್ಟು ಸರ್ತಿ thus ಎಂದು ಹೇಳುತ್ತಿದ್ದರು. ಇವುಗಳನ್ನು ಲೆಕ್ಕ ಹಾಕಿ ಎಳೆಯುತ್ತಿದ್ದುದೂ ಇತ್ತು! ಹಾಗೆ ಹೇಳುವುದು ಶ್ರೀ ಹೊಳ್ಳರ ವೈಶಿಷ್ಟ್ಯ ಪ್ರತಿ ಮನುಷ್ಯನಿಗೂ. ಹಾಗೆಯೇ ಭಾಷೆಗೂ ಒಂದು ವೈಶಿಷ್ಟ್ಯವಿರಬೇಕು. ಇಂಗ್ಲಿಷಿನಲ್ಲಿ ಸ್ವರಾಕ್ಷರಗಳು (Vowels) ಇಲ್ಲದ ಶಬ್ದಗಳೇ ಇಲ್ಲ. ಅವುಗಳಲ್ಲಿಯೂ e ಎನ್ನುವ ಅಕ್ಷರವು ಹೆಚ್ಚು ಸಲ ಬರುವುದು ಎಂದು ಕೇಳಿದ್ದೆನು. ಕನ್ನಡ ಭಾಷೆಯಲ್ಲಿ ಅಧಿಕಾವರ್ತಿ ಪ್ರಯೋಗವಾಗುವ ಅಕ್ಷರವು ಯಾವುದೆಂದು ತಿಳಿದರೆ ನನ್ನ ಸಂಶೋಧನೆ ಮುಂದುವರಿಯುವ ಸಾಧ್ಯತೆಯಿದೆ ಎಂದು ತೋರಿತು. ಬೆಳಕಿನ ಕಲಶವು ಬೆಟ್ಟದ ಮರೆಯಲ್ಲಿ ಚೆಲ್ಲಿ ಹೋಯಿತು ನನ್ನ ಮನಸ್ಸು ಆ ದ್ರವದಿಂದ ಸೇಚನೆ ಹೊಂದಿ ಮನಸ್ಸು ಪ್ರಭಾ ಮಯವಾಯಿತು.

ಆ ರಾತ್ರಿ (ನನ್ನ ಪಾಲಿಗೆ) ಮಹಾರಾತ್ರಿ. ಕನ್ನಡ ಭಾಷೆಯ ವರ್ಣಮಾಲೆಯ (ಅದಿಂದ ಳದ ವರೆಗೆ) ಪ್ರತಿ ಅಕ್ಷರಕ್ಕೂ ಒಂದು ಮನೆಯನ್ನು ಗುರುತು ಮಾಡಿದೆನು. ಕನ್ನಡದ ಬೇರೆ ಬೇರೆ ಗ್ರಂಥ ಗಳ ಪುಟಗಳನ್ನು ಮಗುಚಿದೆನು. ಪ್ರತಿ ಅಕ್ಷರಕ್ಕೂ ಅದರ ಮನೆ ಯಲ್ಲಿ ಒಂದು ಗುರುತು ಮಾಡಿದೆನು. "ಶ್ರೀ. ದ್ವಾರಂ ವೆಂಕಟ ಸ್ವಾಮಿ ನಾಯ್ಡುರವರು ಅತ್ಯುತ್ತಮ ಪಿಟೀಲು ವಾದನಕಾರರು" ಎಂದಿ ರುವ ವಾಕ್ಯವನ್ನು ವಿಭಜಿಸುವಾಗ, ಶ ಮನೆಯಲ್ಲಿ, ದ ಮನೆಯಲ್ಲಿ, ರ ಮನೆಯಲ್ಲಿ, ವ ಮನೆಯಲ್ಲಿ ಮುಂತಾಗಿ ಗುರುತುಗಳನ್ನು ಮಾಡ ಬೇಕು. ಹೀಗೆ ಅದಷ್ಟು ಹೆಚ್ಚು ಮತ್ತು ವಿವಿಧ ಲೇಖಕರ ಗ್ರಂಥ ಗಳನ್ನು ಪರಿಶೀಲಿಸಿದಾಗ ರಕಾರವು ಹೆಚ್ಚುಸಲ ಬರುವುದೆಂದೂ ತಿಳಿಯಿತು. ಆದಾದ ಮೇಲೆ ನನಗೆ ದೊರೆತ ಲೇಖನವನ್ನು ಇದೇ ರೀತಿ ವಿಭಜಿಸಿ ಕೆಳಗೆ ಬರೆದಿರುವ ವಿವರವರಿತೆನು. ಆವರಣದಲ್ಲಿ ಆಯಾ ಅಕ್ಷರದ ಆವರ್ತನ ಸೂಚಿತವಾಗಿದೆ.

ಕ (೧೬), ಲ (೧೩), ಡ (೧೨), ಮ (೧೦), ಥ (೭), ಣ (೭), ಝ (೭), ಗ (೭), ಯ (೬), ಳ (೫), ಬ (೪), ಟ (೩), ಸ (೩), ಖ (೩), ವ (೨). ಉ (೧), ದ (೧). ಶ (೧) ತ (೧), ಜ (೧)— ಒಟ್ಟು ೧೧೦.

ನನಗೆ ದೊರೆತ ಲೇಖನದಲ್ಲಿ ಕಕಾರ ಯಾವ ರೂಪದಲ್ಲಿ ಬಂದಿ ದೆಯೋ ಅಲ್ಲೆಲ್ಲ ಅದೇ ರೂಪದಲ್ಲಿ ರಕಾರ ಬರೆದೆನು—ಕೇ ಬಂದಲ್ಲಿ ರೇ, ಕೈ ಬಂದಲ್ಲಿ ರೈ ಹೀಗೆ. ಇದೇ ರೀತಿ ಲಕಾರದ ಬದಲು ದಕಾರ ವನ್ನು ಬರೆದೆನು ಇಷ್ಟು ಬರೆಯುವಾಗ ಲೇಖನದ ಕೊನೆಯ ಅಂಕಿ ತವು ಥಿಗರಾದೇಂದ್ಮ ಎಂದಾಯಿತು. ಈ ಹೆಸರಿನಲ್ಲಿ ಮೂರನೆಯ ಅಕ್ಷರ ರಾ ಎಂದಿದೆ. ಇಂತಹ ಲೇಖನ ಬರೆದವನು ಬುದ್ಧಿ- ಶ್ರೀಮಂತತೆಯಿಂದ ಕೂಡಿದವನಾಗಿರಬೇಕು. ಕೊಡಗು ಸಂಸ್ಥಾ ನದ ಇತಿಹಾಸವನ್ನು ಪರಿಶೀಲಿಸಿ ಥಿಗರಾದೇಂದ್ಮ ಎನ್ನುವುದು ಶಿವ ರಾಜೇಂದ್ರ ಎಂದಾಗಿರಬೇಕೆಂದೂ ಶಿವ–ಥಿಗ; ಜೇಂದ್ರ–ದೇಂದ್ಮ ಸಮಾನ ರೂಪಗಳೆಂದೂ ನಿರ್ಧರಿಸಿದೆನು. ಆದುದರಿಂದ ಶಿವರಾಜೇಂದ್ರ ಎನ್ನುವುದು ಈ ಗೂಢಭಾಷೆಯಲ್ಲಿ ಥಿಗಕಾದೇಂಲ್ಮ ಎಂದಾಗುವುದು. ಸುಮಾರು ೨೦೦ ವರ್ಷಗಳ ಹಿಂದೆ ಶತ್ರುಗಳಿಂದ ತಲೆತಪ್ಪಿಸಿಕೊಂಡು ಓಡಿಹೋದ ಶಿವರಾಜೇಂದ್ರನೇ ಈ ಗೂಢಲೇಖನದ ಕರ್ತೃ ಎಂದು ನಿಶ್ಚಯವಾಯಿತು.

ಆದುದರಿಂದ ಗೂಢಲೇಖನದ ಅಕ್ಷರಗಳಿಗೆ ಕೆಳಗೆ ಕಾಣಿಸಿ ದಂತೆ ಸಮಾನಾಕ್ಷರಗಳಿವೆ. ಥ–ಶ; ಗ–ವ; ಕ–ರ; ದ–ಜ; ಲ–ದ. ಉಳಿದ ವಿವರಗಳು ಇಷ್ಟು:–ಬಿಂದುಗಳನ್ನು ಪಲ್ಲಟನ ಮಾಡಿ ರುವುದಿಲ್ಲ; ಒತ್ತುಗಳನ್ನು ಸೂತ್ರದನುಸಾರವಾಗಿ ಪರಿವರ್ತಿಸಿರುವರು. ಗೂಢಭಾಷೆಯು ಏನಾದರೊಂದು ನಯಮಬದ್ಧವಾಗಿರಬೇಕು. (ನಿಸರ್ಗವೇ ನಿಯಮಬದ್ಧವಾಗಿದೆ) ಎಂದು ನನ್ನ ನಂಬಿಕೆ. ರ,ಲ,ವ, ಶ, ಷ. ಸ ಗಳಿಗೆ ಕ, ಖ, ಗ, ಘ, ಙ, ಚ ಗಳು ಬಂದಿರಬೇಕು. ಈ ರೀತಿಯಲ್ಲಿ ಮುಂದುವರಿದೆನು. ಒಂದು ಸೂತ್ರದ ಪಟ್ಟಿಯನ್ನು ನಿರ್ಮಿಸಿದೆನು. ಆದರಿಂದ ಪದ್ಯದ ಕೆಲವು ಶಬ್ದಗಳು ಮಾತ್ರ ಅರ್ಥವಾಗುವಂತಾದುವು. ಉಳಿದುವುಗಳು ಇನ್ನೂ ನಿಗೂಢವಾದುವು. ಮತ್ತೆ ಪುನಃ ಪ್ರಯತ್ನ. ದೊರೆತ ಅನುಭವದ ಮೇಲೆ ನೂತನ ಪಟ್ಟಿಯ ಸಿದ್ಧತೆ. ಅವುಗಳ ವಿವರ ಇಲ್ಲಿ ಅನಾವಶ್ಯಕ. ಈ ರೀತಿ ಯಲ್ಲಿ ಅದುರನ್ನು ಶುದ್ಧೀಕರಿಸಿ ಪುಟವಿಟ್ಟು, ಕೊನೆಗೆ ಸುವರ್ಣವನ್ನು ಹೊಂದಿದೆನು. ಗೂಢಲೇಖನವನ್ನು ಓದುವ ಸೂತ್ರದ ಪಟ್ಟಿಯನ್ನು ಮುಂದೆ ತೋರಿಸಲಾಗಿದೆ.

ಕ=ಟ	ಚ=ತ	ಟ=ಪ	ತ=ಯ	ಪ=ಶ
ಖ=ಠ	ಛ=ಥ	ಠ=ಫ	ಥ=ರ	ಫ=ಷ

ಗ=ಡ	ಜ=ದ	ಡ=ಬ	ದ=ಲ	ಬ=ಸ
ಘ=ಢ	ಝ=ಧ	ಢ=ಭ	ಧ=ವ	ಭ=ಹ
ಙ=?	ಞ=?	ಣ=?	ನ=ಮ	ಮ=ಣ

ಯ=ಳ	ಷ=ಚ
ರ=ಕ	ಸ=ಛ
ಲ=ಖ	ಹ=ಜ
ವ=ಗ	ಳ=ಝ
ಶ=ಘ	

ಅನುನಾಸಿಕಾಕ್ಷರಗಳನ್ನು ಪ್ರತ್ಯೇಕವಿಟ್ಟು ಉಳಿದುವುಗಳನ್ನು ಪಲ್ಲಟನ ಮಾಡಿರುವ ಕ್ರಮ ಗಮನಾರ್ಹ. ಙ, ಞ ಮತ್ತು ಣ ಕಾರಗಳ ಸಮಾನಾಕ್ಷರಗಳು ದೊರೆಯದಿರುವುದರಿಂದ, ಸಮಸ್ಯೆಯ ಪರಿಹಾರಕ್ಕೇನೂ ತೊಂದರೆಯಿಲ್ಲ. ಗೂಢಲೇಖನದ ಒಕ್ಕಣಿಕೆ ಹೀಗಾಗುವುದು–

ಸರಸಿಜಮಿತ್ರೋದಯವಾಗುವ ದೆಸೆ
ಯೊಳ್ ಕಂಗೊಳಿಪುದು ಉದ್ಯಾನವನಂ ||
ತೆಂಗಿನ ಮರಂಗಳೆರಡಿರ್ಪುವು
ನೇರಿಳೆ ಮರಕ್ಕೆ ಚಿಗುರಿರ್ಪುದು ||
ನೇರಿಳೆಯ ಮರದಿಂದ್ತೆಂಗಿನ ಮರಗಳೆಡೆಗೆ
  ಗಮಿಸಿ ಬಲಪೆಡಗಳಿಗೆ ತಿರುತಿರುಗುತ
ಬಂದ ದೂರವ ನಡೆದು ನೇರಿದಿರು ಕಲ್ಪಿಸೆಯೆ
  ಸಂಧಿಸುವ ಬಿಂದುವಿನಲಿಹುದು ನಿಧಿಯು ||

—ಶಿವರಾಜೇಂದ್ರ

"ಸಿದ್ಧಾರ್ಥ ಬುದ್ಧನಾಗುವ ರಾತ್ರಿ!" ನಿಧಿಯ ಇರವು ಅಕಸ್ಮಾತ್ತಾಗಿ ತಿಳಿದು "ಕಡವರವನೆಡಹಿ ಸಂಧಿಸಿದ ಕಡುಬಡವನಂತೆ" ನನಗೆ? ಪರಮ ಸಂತೋಷವಾಯಿತು. ಶಿವರಾಜೇಂದ್ರನು ರಾಜ್ಯಭ್ರಷ್ಟನಾಗಿ ಓಡಿಹೋಗುವ ಮೊದಲು ನಿಧಿಯನ್ನು ಹೂಳಿದ್ದಿರಬೇಕು. ಆ ನಿಧಿಯು ನನಗೆ ದೊರೆತರೆ ನನ್ನ ಖ್ಯಾತಿ 'ಆಕುಟ್ಟ ಕೊಡ್ಲೀಪೇಟೆ' (ಕೊಡಗು ಸಂಸ್ಥಾನದ ದಕ್ಷಿಣದ ಮತ್ತು ಉತ್ತರದ ಗಡಿಯ ಪಟ್ಟಣಗಳು ಕುಟ್ಟ ಮತ್ತು ಕೊಡ್ಲೀಪೇಟೆ) ವ್ಯಾಪಿಸಿದ್ದುದು, ಆಸೇತುಹಿಮಾಚಲ ವ್ಯಾಪಿಸುವುದು— ಎಂದು ಸಂತೋಷಿಸಿದೆನು. ಬುದ್ಧನು ಸಮಾಧಿ ಹೊಂದಿದನು....ಅಂದರೆ ನಾನು ನಿದ್ರಿಸಿದೆನು.

ಮರುದಿನ ನಡುಹಗಲಿನ ಹೊತ್ತಿಗೆ ಸರ್ವೋತ್ಸಾಹಭರಿತನಾಗಿ ಎದ್ದೆನು. ನಿಧಿಯ ಜೀವ ನನ್ನ ಕೈಯ್ಯಲ್ಲಿದೆ, ಅದರ ದೇಹ ದೊರೆತರಾಯಿತು. ನಿಧಿಯ ಕೀಲಿ ನನ್ನಲ್ಲಿದೆ, ಬೀಗವನ್ನು ಹುಡುಕಿದರಾಯಿತು. ಶಿವರಾಜೇಂದ್ರನ ರಾಜಧಾನಿ ಮಡಿಕೇರಿಯಾಗಿದ್ದಿತು. (ನನ್ನ ರಾಜಧಾನಿಯೂ ಇದೇ!). ಮಡಿಕೇರಿಯಿಂದ ಮುಂದೆ "ಸರಸಿಜಮಿತ್ರೋದಯವಾಗುವ ದೆಸೆ"ಯಾಗಿರುವ ಪೂರ್ವದಿಕ್ಕಿಗೆ ನಡೆದುಕೊಂಡೇ ಹೊರಟೆನು.

"ಇನ್ನೆಷ್ಟು ದಿನಗಳಲ್ಲಿಯೋ ಈ ಹುಚ್ಚಿನ ಪ್ರಯಾಣದಿಂದ ಮರಳುವುದು?" ಎಂದು ತನ್ನ ಪತಿದೇವನ ಮಹಾಸಂಶೋಧನೆಯನ್ನು ಅರಿಯದ ಮೂಢಪತ್ನಿ ಪ್ರಶ್ನಿಸಿದಾಗ "ಎಂದಿನಂತೆ ಹಾಳುಗರೆಯಬೇಡ. ಈ ಸಲ ನಿನ್ನನ್ನು ಸುವರ್ಣದಿಂದಲೇ ಅಭಿಷೇಕ ಮಾಡುತ್ತೇನೆ" ಎಂದೆನು.

"ಸದ್ಯ ಬೇಂಕ್‌ನಲ್ಲಿ ಅಡವಿಟ್ಟಿರುವ ನನ್ನ ಚಿನ್ನದ ಸರವನ್ನು ಬಿಡಿಸಿ ತಂದರೆ, ಅದೇ ಮಹಾಭಿಷೇಕ" ಎಂದಳು ಪಟ್ಟದರಸಿ

"ಬೇಂಕನ್ನೇ ಕೊಂಡುಕೊಳ್ಳುವ ಕುಬೇರನಾಗಿ ಬರುತ್ತೇನೆ, ನೋಡುತ್ತಿರು. ಲಕ್ಷ್ಮೀಪತಿಯಾಗಿರುವುದನ್ನು ಸಾರ್ಥಕಗೊಳಿಸುತ್ತೇನೆ" ಎಂದು ಅವಳ ಮಾತಿಗೆಡೆ ಕೊಡದೇ ಮುನ್ನಡೆದೆನು.

ಬೋಯಿಕೇರಿ, ಶುಂಠಿಕೊಪ್ಪ, ಆನೆಕಾಡು ಎಲ್ಲ ಕಡೆ ಕೂಲಂಕಷವಾಗಿ ವಿಚಾರಿಸುತ್ತ, ಅರಸುತ್ತ ಮುಂದೆ ಹೋದೆನು— ಉದ್ಯಾನವನದೆಡೆಗೆ. ೨೦೦ ವರ್ಷಗಳ ಹಿಂದಿನ ಮಾತು; ಈಗ ಉದ್ಯಾನವನ ಉಳಿದಿರಬೇಕಾಗಿಲ್ಲ.

ಒಂದು ರಾತ್ರಿ. ಕುಶಾಲ್ನಗರದ ಕೂಡಿಗೆಯಲ್ಲಿ ನನ್ನ ಮೊಕ್ಕಾಂ ಆಗಿದ್ದಿತು— ಬೆಟ್ಟೇಗೌಡರ ಮನೆಯಲ್ಲಿ. ಮಾತು ನಿರರ್ಗಳವಾಗಿ ಸಾಗಿತು. ಯುದ್ಧದ ವಿಷಯ, ಮಾತಿಗೆ ಕಳೆಯೇರುತ್ತಿತ್ತು. ಗೌಡರಂತೂ ಬಾಂಬು ಸುರಿದುದಕ್ಕೆ ಮಿತಿಯಿರಲಿಲ್ಲ. ಗೌಡರ ಅರ್ಧಾಂಗಿ ಒಳಗಿನಿಂದ ಏಟಂ ಬಾಂಬು ಎಸೆದಳು:

"ಉಡ್ಗೀಗೆ ಇನ್ನೂ ಜರ ಬಿಡ್ಲಿಲ್ಲ. ಆ ಚಂದ್ರೈನೋರ ಮನೇಗ್ಹೋಗಿ ಸಲ್ಪ ಯೀಬೂತಿ ತರ್ಬಾರ್ದಾ?"

"ಇನ್ನೂ ವಬರ್ತಾಳೋ?" ಗೌಡರ ಮಾತು.

ಜ್ವರದ ಕಾರಣವನ್ನು ನಾನು ವಿಚಾರಿಸಿದೆನು.

ಗೌಡರು ಹೇಳಿದರು— "ದನ ಮೇಯ್ಸ್ಕೊಂಡು ಉಡ್ಗಿ ಆ ಉದ್ನ ಕಾಡ್ಗೆ ವೋದ್ಳಂತೆ. ಅಲ್ಲಿ ಸೋಕೋ ಏನೋ ಆಗಿರ್ಬೇಕು."

ನನ್ನ ಕುತೂಹಲ ಅಧಿಕವಾಯಿತು. "ಗೌಡರೇ, ಅದೇನು ಕಾಡಿನಲ್ಲಿದೆ?"

"ಓ ಓ, ಅದು ಬಾಳ ವರ್ಸ್ದಿಂದ—ನಾವೆಲ್ಲಾ ಸಣ್ಣೋರಾಗಿದ್ದಾಗ್ನಿಂದ್ಲೂ—ಬೂತದ ಕಾಡು! ಹಗ್ಲೇ ಅಲ್ಲೆ ನಾವು ವೋಗಾಕಿಲ್ರ."

ಆ ಉದ್ದಿನ ಕಾಡಿನಲ್ಲಿ ಎಂದೋ ಯಾವಾಗಲೋ ಉದ್ದು ಬೆಳೆಯುತ್ತಿತ್ತೆಂದೂ ತಿಳಿದೆನು. ಆದರೆ ನನ್ನ ಇತ್ಯರ್ಥ ಬೇರೆಯಾಗಿದ್ದಿತು. ಉದ್ಯಾನವನವೇ ಕಾಲಾಂತರದಲ್ಲಿ ಉದ್ನ ಕಾಡಾಗಿರಬೇಕು—ಎಂದು ಆಲೋಚಿಸಿ, ಅದರ ಸಂತೋಷದಿಂದ ಹರ್ಷಪುಳಕಿತನಾದೆನು. (ಹೇಂಬ್ಡನ್ಸ್ ಬ್ರಿಜ್ ಬಾರ್ಬರ್ಸ್ ಬ್ರಿಜ್ ಆದಂತೆ ಬಸಪ್ಪನ ಜಮೀನು ಬಸಪ್ಪನ ಜಮೀಸು ಆದಂತೆ!)

ಮರುದಿನ ಬೆಳಗ್ಗೆ ಏಕಾಂಗಿಯಾಗಿ ಉದ್ದಿನ ಕಾಡಿಗೆ ಹೋದೆನು. ಅಲ್ಲಿ ಕಾಡೇ ಇರಲಿಲ್ಲ. ವಿಶಾಲವಾದ ಬಯಲು ಹಸುರಾಗಿದೆ. ದೂರ

ದಲ್ಲಿ ಅಲ್ಲಲ್ಲಿ ಕೆಲವು ಪೊದೆಗಳು ಗುಂಪಾಗಿ ಬೆಳೆದಿದ್ದುವು. ಬಯಲಿನ ಒಂದು ಕೊನೆಯಲ್ಲಿ ಹಾಳು ಬಿದ್ದಿದ್ದ ಮನೆಯ ದಳ. ದಳದಿಂದ ಊಹಿಸುವುದಾದರೆ ಮನೆಯು ದೊಡ್ಡದಾಗಿದ್ದಿರಬೇಕು. ಬರಿಯ ಕಣ್ಣುಗಳಿಗೇ ತೋರಬೇಕಾಗಿದ್ದ ಗಗನಚುಂಬಿ "ತೆಂಗಿನ ಮರಂಗಳೆರ" ಡನ್ನು ಇಡಿಯ ಬಯಲಿನಲ್ಲಿ ಅಲೆದಲೆದು ಹುಡುಕಿದೆನು. ಆದರೆ ತೆಂಗಿನ ಮರಗಳಿಲ್ಲ ಚಿಗುರಿರುವ ನೇರಿಳೆಯ ಮರವೂ ಇಲ್ಲ. ಅವೆಲ್ಲ ಸತ್ತು ಹೋಗಿರಬೇಕು. ಅವುಗಳ ಸ್ಥಾಣುಗಳಾದರೂ ಇರಬಹುದೇ ಎಂದು, ದಿಬ್ಬಗಳಂತೆ ಇದ್ದಲ್ಲೆಲ್ಲ ಹೋಗಿ ಸೂಕ್ಷ್ಮವಾಗಿ ಪರಿಶೀಲಿಸಿದೆ.

O ಮತ್ತು R ಗಳಲ್ಲಿ ಪರಸ್ಪರಾಭಿಮುಖವಾಗಿ ನಿಂತು "ನೇರಿದಿರು ಕಲ್ಲೆಸೆಯೆ ಸಂಧಿಸುವ ಬಿಂದು" ಎಂದರೆ OR ನ ಮಧ್ಯಬಿಂದು ಎಂದರ್ಥ. OR ನ ಮಧ್ಯಬಿಂದು GT ಯ ಲಂಬದ್ವಿಭಾಗಕಾರಕದ ಮೇಲೆ $\frac{1}{2}$GT ಯಷ್ಟು ದೂರದಲ್ಲಿಯೆಂದು ಗಣಿತಶಾಸ್ತ್ರದಿಂದ ಸಾಧಿಸಬಹುದು.

$$x \sin\theta = y \sin\phi = NV$$

$$GM = TI$$



ಅದೃಷ್ಟವಶಾತ್ (ಶ್ರಮಿಸುವವನಿಗೆ ಅದೃಷ್ಟ ಒಲಿಯುತ್ತದೆ) ಎರಡು ದಿಬ್ಬಗಳಲ್ಲಿ ತೆಂಗಿನ ಮರಗಳು ಎಂದೋ ಇದ್ದಿರಬಹುದಾದ ಗುರುತು ಬಲು ಅಸ್ಪಷ್ಟವಾಗಿ ತಿಳಿಯಿತು. ಆದರೆ ಮತ್ತೆಷ್ಟು ಹುಡುಕಿದರೂ ನೇರಿಳೆಯ ಮರವಿದ್ದ ಸ್ಥಳದ ಗುರುತು ಸಿಕ್ಕಲೇ ಇಲ್ಲ. ನೇರಿಳೆಯ ಮರದ ಸ್ಥಾನ ತಿಳಿಯದಿದ್ದರೆ ಸಮಸ್ಯೆ ಪರಿಹಾರವಾಗುವುದಿಲ್ಲ, ಕೈಗೆ ಬಂದ ತುತ್ತು ಬಾಯಿಗೆ ಬರುವುದಿಲ್ಲ. ಗಣಿತಶಾಸ್ತ್ರದಲ್ಲಿ Strong ಎಂದು ಹೆಮ್ಮೆಯಿದ್ದ ನಾನು ಮೇಲೆ ತೋರಿಸಿರುವ ರೇಖಾಕೃತಿಯನ್ನು ಚಿತ್ರಿಸಿದೆ.

G ಮತ್ತು T ಗಳು ತೆಂಗಿನ ಮರಗಳ ಸ್ಥಾನಗಳು. ಅವು ಗೊತ್ತಿರುವುದರಿಂದ GT ಯ ಉದ್ದ ಗೊತ್ತಿದೆ. N ಎನ್ನುವಲ್ಲಿ ನೇರಿಳೆಯ ಮರವಿದ್ದಿರಬಹುದು ಎಂದು ಊಹಿಸೋಣ. N ನಿಂದ G ಯ ವರೆಗೆ ನಡೆದು ಬಲಕ್ಕೆ ತಿರುಗಿ, R ವರೆಗೆ ಹೋಗಬೇಕು; ಹೀಗೆಯೇ N ನಿಂದ T ಯ ವರೆಗೆ ನಡೆದು ಎಡಕ್ಕೆ ತಿರುಗಿ O ಹೋಗಬೇಕು.

NG = GR (=x ಎಂದಿರಲಿ)
NT = TO (=y ಎಂದಿರಲಿ)
ಕೋನ NGR = ಕೋನ NTO = 90°.

∴ GT ಯ ಮಧ್ಯಬಿಂದು C ಯು MI ಯ ಮಧ್ಯಬಿಂದುವೂ ಆಗುವುದು. MI ಗೆ ಲಂಬವಾಗಿ CA ಯನ್ನೆಳೆಯಬೇಕು. A ಯು OR ನ ಮಧ್ಯಬಿಂದು.

$$CA = (MR + IO)$$
$$= \frac{1}{2}(x \,\mathrm{cas}\,\theta + y \cos\phi)$$
$$= \frac{1}{2}(GV + VT)$$
$$= \frac{1}{2} GT.$$

ಆದುದರಿಂದ ನೇರಿಳೆಯ ಮರ N ಎಲ್ಲಿದ್ದರೂ, ನಿಧಿಯ ಸ್ಥಾನ A ಸ್ಥಿರವೆನ್ನುವುದು ಸ್ಪಷ್ಟ.

ಆ ರಾತ್ರಿ ಬುದ್ಧ ಮಹಾಬುದ್ಧನಾದ ರಾತ್ರಿ. ನನಗೆ ನಿಧಿಯು ದೊರೆಯಿತು— ಈಗ ಆ ಹಣ ನನ್ನೊಡನೆ ಉಳಿದಿರುವುದಿಲ್ಲ!

ಈ ನೂತನ, ವಿಸ್ಮಯಕಾರಕ, ಹೃದಯಸ್ತಂಭಕ, ಧೀಶಕ್ತಿವರ್ಧಕ, ಅದ್ವಿತೀಯ, ನ ಭೂತೋ ನ ಭವಿಷ್ಯತಿ, ಮಹಾ ಪ್ರಚಂಡ, ಮಹಾ ಸಂಶೋಧನೆಯಿಂದ ನನ್ನ ಸುವರ್ಣಕೀರ್ತಿಯು ಕುಟ್ಟದಿಂದ ಉತ್ತರಕ್ಕೂ ಕೊಡ್ಲೀಪೇಟೆಯಿಂದ ದಕ್ಷಿಣಕ್ಕೂ ಮೀರಿಯಿಲ್ಲದೇ ವ್ಯಾಪಿಸಿತು! *

* ಸರ್ ಆರ್ಥರ್ ಕಾನನ್ ಡಾಯ್ಲರ ಒಂದು ಕತೆಯಿಂದ ಪ್ರೇರೇಪಿತವಾದುದು.

ಕನ್ನಡದ ಒಗಟುಗಳು

(ಒಂದು ವಿವೇಚನೆ)*

ಡಾ. ಬೆಟಗೇರಿ ಕೃಷ್ಣಶರ್ಮ, ಧಾರವಾಡ

ಬುದ್ಧಿಯ ಮೊನೆ ಹೃದಯದ ರಸಿಕತೆ ಇವೆರಡೂ ಸೇರಿ, ನಾಗರಿಕಸಮಾಜದಲ್ಲಿ ಒಗಟುಗಳನ್ನು ಹುಟ್ಟಿಸಿ ಬೆಳೆಯಿಸುತ್ತ ಬಂದಿದೆ. ಒಗಟು ಜಾನಪದ ಸಾಹಿತ್ಯದ ಸಂತಾನಕ್ಕೆ ಸೇರಿದುದು. ಆದರೂ ಕನ್ನಡ ಲಿಖಿತವಾಙ್ಮಯದಲ್ಲಿಯೂ ಇದು ಸ್ಥಾನವನ್ನು ದೊರಕಿಸಿಕೊಂಡಿದೆ.

'ನಾ ಒಂದು ಒಗಟಾ ಹಾಕತೀನಿ, ಒಡೀತೀಯಾ?'

ನಾಲ್ಕುಜನ ಹೆಣ್ಣುಮಕ್ಕಳು ವಿನೋದವಾಗಿ ಹರಟೆ ಹೊಡೆಯುತ್ತ ಕುಳಿತಲ್ಲಿ 'ನಾ ಒಂದು ಒಗಟಾ ಹಾಕತೀನಿ, ಒಡೀತೀಯಾ?' ಎಂಬ ಮಾತು ಕೇಳದೆ ಹೋಗುವುದೆಂದರೆ ಅಪೂರ್ವ. ಈ ಒಗಟ ಹಾಕುವುದರಲ್ಲಿ ಒಂದು ವಿಲಕ್ಷಣವಾದ ಆಕರ್ಷಣಶಕ್ತಿಯಿದೆ. ಮೊದ-ಮೊದಲು ಕಿರಿಯರ ವಿನೋದದಲ್ಲಿ ಪ್ರಾರಂಭವಾಗುವ ಈ ಒಗಟದ ಆಟವು, ಬರು-ಬರುತ್ತ ಹಿರಿಯರನ್ನೂ ಆಕರ್ಷಿಸಿ, ಅದರಲ್ಲಿ ಭಾಗವಹಿಸಲು ಹಚ್ಚುವುದು. ಒಂದರಹಿಂದೊಂದು ಚಿತ್ರ-ವಿಚಿತ್ರವಾದ ಒಗಟುಗಳನ್ನು ಒಬ್ಬೊಬ್ಬರು ಹೇಳತೊಡಗುವರು. ಕೇವಲ ನಾಗರಿಕ ಸಮಾಜದಲ್ಲಿಯೆ ಈ ಒಗಟಿನ ಪರಂಪರೆ ಕಾಣುವುದೆಂದಲ್ಲ; ಮೂರು ಗುಡಿಸಿಲಿನ ಹಳ್ಳಿಯ ಜನರಲ್ಲಿಯೂ ಇದು ಸಾಕಷ್ಟು ಬೆಳೆದು ಬಂದಿದೆ ನಮ್ಮ ನಾಡಿನಲ್ಲಿ 'ಒಡೆಯುವ' ಈ ಒಗಟುಗಳು, ಜನಸಾಮಾನ್ಯರ ಬಾಯಲ್ಲಿಯೆ ಹೆಚ್ಚಾಗಿ ಉಳಿದುಕೊಂಡಿವೆ ಹೊರತು, ಬರೆಹದಲ್ಲಿ ಮೂಡಿದುವು ತೀರ ಕಡಿಮೆ.

ನಾಗರಿಕವಾದ ಯಾವ ಜನಸಮಾಜದಲ್ಲಿಯೂ, ಬಹಳ ಹಿಂದಿನ ಕಾಲದಿಂದಲೂ ಒಗಟುಗಳ ಪರಂಪರೆ ಬೆಳೆದುಬಂದಿದೆ. ಸಂಸ್ಕೃತ ಭಾಷೆಯಲ್ಲಿ ಇವಕ್ಕೆ 'ಪ್ರಹೇಳಿಕೆ' ಎಂದೋ, 'ಪ್ರವಲ್ಹಿಕೆ' ಎಂದೋ ಹೇಳುತ್ತಾರೆ. ಸಂಸ್ಕೃತದ ಲಿಖಿತ ವಾಙ್ಮಯದಲ್ಲಿಯೂ 'ಪ್ರಹೇಳಿಕೆ'ಗಳು ಮಹತ್ತ್ವದ ಸ್ಥಾನವನ್ನು ಪಡೆದಿವೆ. ಮೂಲವಸ್ತುವನ್ನು ಮರೆಯಲ್ಲಿರಿಸಿ, ಉಪಮೆ, ರೂಪಕ, ಶ್ಲೇಷ, ಪರ್ಯಾಯೋಕ್ತಿ, ವ್ಯಾಜೋಕ್ತಿ ಮೊದಲಾದ ಅಲಂಕಾರದ ಭಾಷೆಯಲ್ಲಿ ಸಾಂಕೇತಿಕವಾಗಿ ಬಣ್ಣಿಸಿ, ಮೂಲವಸ್ತುವನ್ನು ಗುರುತಿಸಲು ಹೇಳುವ ತುಂಡು ಸಾಹಿತ್ಯವೆ ಪ್ರಹೇಳಿಕೆಯೆನಿಸುವುದು. ಕನ್ನಡದಲ್ಲಿ 'ಒಗಟು' ಎನಿಸಿಕೊಳ್ಳುವ ತುಂಡುಸಾಹಿತ್ಯಕ್ಕೂ ಈ 'ಪ್ರಹೇಳಿಕಾ' ಸಾಹಿತ್ಯಕ್ಕೂ ಯಾವ ಹೆಚ್ಚುಕಡಿಮೆಯೂ ಇಲ್ಲ. ಎರಡರ ಲಕ್ಷಣಗಳೂ ಒಂದೆ ಬಗೆಯವು. ಇಷ್ಟೇ ಅಲ್ಲ, ಕನ್ನಡದ ಪ್ರಾಚೀನ ಕೋಶಕಾರರೆಲ್ಲರೂ 'ಪ್ರಹೇಳಿಕೆ' ಎಂಬ ಸಂಸ್ಕೃತಪದಕ್ಕೆ ಸರಿಯಾದ ಕನ್ನಡ ಅರ್ಥವನ್ನು ಹೇಳುವಾಗ. '**ಒಗಟು**' ಎಂಬ ಮಾತನ್ನೇ ಒಪ್ಪಿ ಹೇಳಿದ್ದಾರೆ.

ಕ್ರಿ. ಶಕದ ೧೨ನೆಯ ಶತಮಾನದ ಮಧ್ಯದಲ್ಲಿ ಬದುಕಿಬಾಳಿದ ೨ನೆಯ ನಾಗವರ್ಮನು, ತನ್ನ 'ಅಭಿಧಾನ ವಸ್ತುಕೋಶ'ದಲ್ಲಿ '**ಒಗಂಟೆ ಕಾಂ ಪ್ರಹೇಳಿಕೆಯುಕ್ಕುಂ**' ಎಂದು ಹೇಳಿದ್ದಾನೆ. ಇಂದಿನ ಕಾಲದ '**ಒಗಟು**' ಈಗ ೮೦೦ ವರ್ಷಗಳ ಹಿಂದಿನ ಕಾಲದಲ್ಲಿ '**ಒಗಂಟೆ**' ಎಂಬ ರೂಪದಲ್ಲಿ ರೂಢವಾಗಿದ್ದಿತೆಂದು ತೋರುವುದು. ನಾಗವರ್ಮನಿಂದ ನೂರಾರು ವರ್ಷಗಳ ತರುವಾಯ ಮಹಾರಾಷ್ಟ್ರದಲ್ಲಿ ಬೆಳಕಿಗೆ ಬಂದ ಸಂತ ಜ್ಞಾನೇಶ್ವರನೆಂಬ ಕವಿಯು, ಈ ಕನ್ನಡ 'ಒಗಂಟೆ' ಶಬ್ದವನ್ನೇ 'ಓಗಂಟು' ಎಂಬುದಾಗಿ ತನ್ನ ಸಾಹಿತ್ಯದಲ್ಲಿ ಬಳಸಿದ್ದಾನೆ. ಔತ್ತರೇಯ ಭಾಷಾಪದ್ಧತಿಯಂತೆ, ಆದಿಯ ಹ್ರಸ್ವ ಒಕಾರವು ಅಲ್ಲಿ ದೀರ್ಘವಾಗಿದೆ.

ಮುಂದೆ ಹದಿನಾಲ್ಕನೆಯ ಶತಮಾನದಲ್ಲಿ ಬದುಕಿಬಾಳಿದ ಕನ್ನಡ ನಿಘಂಟುಕಾರ ಅಭಿನವ ಮಂಗರಾಜನು '**ಓಗಟೆಯುದು ಪ್ರಹೇಳಿಕೆ ಪ್ರವಲ್ಹಿಕೆಯುಂ**' ಎಂದು ಹೇಳಿ, ಔತ್ತರೇಯರಲ್ಲಿ ಬಳಕೆಯಲ್ಲಿದ್ದ ದೀರ್ಘ ಓಕಾರವನ್ನೇ ಸ್ವೀಕರಿಸಿಬಿಟ್ಟಿದ್ದಾನಲ್ಲದೆ, ನಾಗವರ್ಮನ 'ಒಗಂಟೆ'ಯಲ್ಲಿಯ ಅನುಸ್ವಾರವನ್ನು ಕಳೆದುಬಿಟ್ಟಿದ್ದಾನೆ. ಹದಿನಾಲ್ಕನೆಯ ಶತಮಾನದ ತರುವಾಯ ರಚನೆಗೊಂಡ ಷಟ್ಪದಿ ವಾಙ್ಮಯದಲ್ಲಿ 'ಓಗಟೆ' ಎಂಬ ಪದವನ್ನೇ ಬಳಸಲಾಗಿದೆ. ಕುಮಾರವ್ಯಾಸ ಕವಿಯು ಕೂಡ ತನ್ನ ಭಾರತದಲ್ಲಿ 'ಓಗಟೆ' ಎಂಬುದನ್ನೇ ಸ್ವೀಕರಿಸಿ ಬಳಸಿದ್ದಾನೆ. ಆದರೆ ಹೊಸಕನ್ನಡದಲ್ಲಿ ನಾಗವರ್ಮನ 'ಒಗಂಟೆ'ಯೂ ಉಳಿದಿಲ್ಲ; ಮಂಗರಾಜನ 'ಓಗಟೆ'ಯೂ ಉಳಿದಿಲ್ಲ. ಜ್ಞಾನೇಶ್ವರನ 'ಓಗಂಟು' ಎಂಬುದೂ ಉಳಿದಿಲ್ಲ. ಉತ್ತರಗಡಿಯ ಕನ್ನಡಿಗರು ಇದನ್ನು 'ಒಗಟ' ಎಂದು ಅಕಾರಾಂತವಾಗಿ ಹೇಳುವರು. ಮಧ್ಯದೇಶದ ಕನ್ನಡಿಗರು 'ಒಗಟು' ಎಂದು ಉಕಾರಾಂತವಾಗಿ ಹೇಳುವರು. ದಕ್ಷಿಣದ ಕನ್ನಡಿಗರು 'ಒಗಟೆ' ಎಂದು ಎಕಾರಾಂತವಾಗಿ ಹೇಳುವರು. ಇವೆಲ್ಲ ಮಾತುಗಳೂ ಒಂದೆ

---

* ತಾ. ೬-೫-೫೪ರಂದು ಧಾರವಾಡ ಆಕಾಶವಾಣಿಯಿಂದ ಬಿತ್ತರಗೊಂಡ ಭಾಷಣವಿದು. —ಸಂ. ಜ.

ಬಗೆಯ ತುಂಡುಸಾಹಿತ್ಯದ ಹೆಸರನ್ನು ಹೇಳುವಂತಹವಾಗಿವೆ.

ನಮ್ಮಲ್ಲಿಯ ಶಿವಶರಣರೂ ಹರಿದಾಸರೂ ಈ ಒಗಟಿನ ಜಾತಿಯ ಸಾಹಿತ್ಯವನ್ನು ಅಲ್ಪಸ್ವಲ್ಪ ರಚಿಸಿದ್ದಾರೆ; ಆದರೆ ಅವರು ತಮ್ಮ ಈ ಸಾಹಿತ್ಯಜಾತಿಯನ್ನು 'ಒಗಟು' ಎಂಬ ಹೆಸರಿನಿಂದ ಕರೆದಿಲ್ಲ. ಶಿವಶರಣರು ತಮ್ಮ ಒಗಟಿನ ಜಾತಿಯ ವಚನಗಳನ್ನು **'ಬೆಡಗಿನ ವಚನಗಳು'** ಎಂದು ಕರೆದಿದ್ದಾರೆ. ಸರ್ವಜ್ಞಮೂರ್ತಿಯು ತನ್ನ ತ್ರಿಪದಿಸಂಗ್ರಹದಲ್ಲಿ 'ಬೆಡಗಿನ ಪದ್ಧತಿ' ಎಂಬ ವಿಭಾಗವೊಂದನ್ನು ನಿರ್ಮಿಸಿ, ಅದರಲ್ಲೆಲ್ಲ ಒಗಟುಗಳ ತ್ರಿಪದಿಗಳನ್ನೇ ಸಂಕಲಿಸಿದ್ದಾನೆ. ಇದನ್ನು ನೋಡಿದಾಗ, ಶಿವಶರಣರು '**ಒಗಟೆ**' ಎಂಬ ಮಾತನ್ನು ಅದೇಕೋ ಬಿಟ್ಟು '**ಬೆಡಗು**' ಎಂಬುದನ್ನು ಅದಕ್ಕೆ ಪರ್ಯಾಯಪದವನ್ನಾಗಿ ಬಳಸಿದಂತೆ ತೋರುವುದು.

ಹರಿದಾಸರು '**ಒಗಟು**' ಎಂಬ ಪದಕ್ಕೆ ಪರ್ಯಾಯಪದವನ್ನಾಗಿ '**ಮುಂಡಿಗೆ**' ಎಂದು ಬಳಸಿರುವರಾದರೂ '**ಒಗಟು**' '**ಒಗಟೆ**' ಎಂಬ ಪದಗಳಿಗೆ ಸಂಪೂರ್ಣ ಬಹಿಷ್ಕಾರವನ್ನೇನೂ ಹಾಕಿಲ್ಲ. ಅಲೌಕಿಕಾರ್ಥವನ್ನು ಹೇಳುವ ಒಗಟುಗಳು 'ಮುಂಡಿಗೆ' ಎಂದು ಕರೆಯಿಸಿಕೊಳ್ಳುತ್ತಿದ್ದರೆ, ಲೌಕಿಕಾರ್ಥವನ್ನು ಹೇಳುವ 'ಒಗಟು'ಗಳು ಒಗಟುಗಳಾಗಿಯೆ ಸಂಬೋಧಿಸಿಕೊಳ್ಳುತ್ತವೆ. ಕನ್ನಡ ವೈಷ್ಣವ ಕೀರ್ತನಸಾಹಿತ್ಯದಲ್ಲಿ 'ದಾಸರ ಮುಂಡಿಗೆಗಳು' ಎಂದಿರುವುದನ್ನು ಅನೇಕರು ಕೇಳಿರಬಹುದು.

ಇಲ್ಲಿ ಉದಾಹರಣೆಗಾಗಿ ಶರಣರ ಬೆಡಗಿನ ವಚನಗಳೆರಡನ್ನು ಹೇಳುತ್ತೇನೆ. ಮೋಳಿಗೆ ಮಾರಯ್ಯನ ವಚನಗಳಿವು :

"ಕಣ್ಣಿಲ್ಲದವ ಕನ್ನಡಿಯ ನೋಡಿ ಕಂಡ. ಬಾಯಿಲ್ಲದವ ಹೊಟ್ಟೆತುಂಬ ಉಂಡು ದಣಿದ. ತಾನಿದ್ದು ಸತ್ತ; ನಿಃಕಳಂಕ ಮಲ್ಲಿಕಾರ್ಜುನ ಲಿಂಗದಲ್ಲಿಗೆ ಹೊದ್ದಿ ಹೋಗುತಿರ್ದ."

"ಕಾಡೆಮ್ಮೆಯ ಹಾಲ ಊರಕೋಣ ಕುಡಿದು, ಮತ್ತಾರನು ಲೆಕ್ಕಿಸದೆ ಬಹುಜನರ ನೋಯಿಸಿ ಬಾಹಲ್ಲಿ, ಒಂದಾಡಿನ ಬಾಲದ ಹೊಯ್ಲಿಂಗಂಜಿ ಓಡಿಹೋಯಿತ್ತು — ನಿಃಕಳಂಕ ಮಲ್ಲಿಕಾರ್ಜುನ ಲಿಂಗನ ವೇಧಿಸಲರಿಯದೆ."

ವೇದಾಂತ ತತ್ತ್ವವನ್ನು ತಿಳಿದವರು, ಈ ವಚನಗಳಲ್ಲಿಯ ಒಗಟನ್ನು ಚೆನ್ನಾಗಿ ಒಡೆದು ಹೇಳಬಹುದು. ಇನ್ನು ಸರ್ವಜ್ಞ ಮೂರ್ತಿಯ ಲೌಕಿಕ ಬೆಡಗುಗಳ ಒಂದೆರಡು ಮಾದರಿಯಿವು :

"ಕಾಲಿಲ್ಲದಲೆ ಹರಿಗು, ತೋಳಿಲ್ಲದಲೆ ಹೊರುಗು
ನಾಲಿಗಿಲ್ಲದಲೆ ಉಲಿವುದಿದ ಕವಿಕುಲದ
ಮೇಲುಗರು ಹೇಳಿ ಸರ್ವಜ್ಞ!"

ಕಾಲಿಲ್ಲದೆ ಹರಿಯುವುದೂ ತೋಳಿಲ್ಲದೆ ಹೊರುವುದೂ ನಾಲಗೆಯು ಇಲ್ಲದೆ ನುಡಿಯುವುದೂ ಯಾವುದು ಗೊತ್ತೆ ? **ಹೊಳೆ**. ಇನ್ನೊಂದು :

"ಹಲವು ಮಕ್ಕಳ ತಂದೆ, ತಲೆಯಲ್ಲಿ ಜುಟ್ಟವಗೆ
ಸಲೆ ಗಳಿಗೆ-ಜಾವವರಿಯುವನ ಹೆಂಡತಿಗೆ
ಮೊಲೆಯಿಲ್ಲ ನೋಡು ಸರ್ವಜ್ಞ!"

ಈ ಬೆಡಗಿನ ಅರ್ಥ 'ಹುಂಜ' (ಗಂಡುಕೋಳಿ) ಎಂಬುದು ಅನೇಕ ರಸಿಕರಿಗೆ ಗೊತ್ತಾಗಿರಬಹುದು. ಪುರಂದರದಾಸರ ಮುಂಡಿಗೆಗೊಂದಿದು ಉದಾಹರಣೆ :

"ಬೆಕ್ಕಿನ ಇಲಿನುಂಗೋ ತನಕಾ | ಕಾಳ
ರಕ್ಕಸಿಯನು ಕಂಡು ಗಿಣಿನುಂಗೋತನಕಾ ||
ಮಕ್ಕಳ ಭಕ್ಷಿಸುವನಕಾ | ಮದ
ಸೊಕ್ಕಿದ ಕರಿಯನು ನರಿ ನುಂಗೋತನಕಾ ||
ಸುಲಭವಲ್ಲವೊ ಮಹಾನಂದಾ ||
ಇಬ್ಬರೊಡನೆ ಕೂಡೋತನಕ | ಮೂವರ
ಹಬ್ಬಿದ ಬೆಟ್ಟವ ನೊಣನುಂಗೋತನಕಾ ||
ಒಬ್ಬನೊಡನೆ ಸೇರೋತನಕ | ಕೆಟ್ಟ
ಗುಬ್ಬಿಯ ರಾಜಹಂಸನ ಮಾಡೋತನಕಾ ||
ಸುಲಭವಲ್ಲವೊ ಮಹಾನಂದಾ ! ||

ಈ ಸಿದ್ಧಪುರುಷನ ಅನುಭವಾರ್ಥದ ಒಗಟನ್ನು ಬಲ್ಲವರೇ ಒಡೆಯಬೇಕು. ಇನ್ನೊಂದು ಕನಕದಾಸರ ಮುಂಡಿಗೆಯನ್ನು ನೋಡಿ ಇದಕ್ಕಿಂತ ವಿಲಕ್ಷಣವಾಗಿದೆ :

"ಅಯ್ಯಯ್ಯೋ ನನ್ನ ಜೀವ, ವ್ಯೆಯೆಲ್ಲಾ ನವಘಾಯ ||
ಘಾಯಕಟ್ಟವರಿಲ್ಲ, ಗಾಳಿ ಬೀಸುವರಿಲ್ಲ || ಪಲ್ಲವಿ ||

ಮಾಡಿಲ್ಲ, ಮಳೆಯಿಲ್ಲ, ಮರದ ಮೇಲೆ ನೀರನು ಕಂಡೆ |
ಕಾಡು ಸುಡುವುದು ಕಂಡೆ; ಬೂದಿಯ ಕಾಣಲಿಲ್ಲ ||೧||

ಅಡಿಕೆಯಷ್ಟು ಆಕಳಣ್ಣಾ, ಹಿಡಿಕೆಯಷ್ಟು ಮೊಲೆಯಣ್ಣಾ |
ಕರೆದರೆ ಹದಿನಾರು ರಂಜಣಿಗೆ ಹಾಲಣ್ಣಾ! ||೨||

ಮೂರುಮೊಳದಾ ತೋಟಕೆ ಆರುಮೊಳದಾ ಕಾಯಣ್ಣಾ!
ಕಾಯಿ ಕೊಯ್ಯೋ ಕುಡುಗೋಲು ಹದಿನಾರು
ಮೊಳವಣ್ಣಾ! ||೩

ಕಾಗಿನೆಲೆಯ ಕನಕದಾಸ ಹೇಳಿದಂಥಾ ಮುಂಡಿಗೆಯ
ಬಲ್ಲಾನು ಬಲ್ಲಾನು ಆದಿಕೇಶವನೊಬ್ಬ! ||೪||

ದಾಸರ ಕೀರ್ತನಸಾಹಿತ್ಯವನ್ನು ಜಾಳಿಸಿ ನೋಡಿದಲ್ಲಿ, ಈ ಬಗೆಯ ಒಗಟಿನ ಹಾಡುಗಳು ಹಲವಾರು ಸಿಕ್ಕುವುವು ಇವೆಲ್ಲ ಅಲೌಕಿಕಾರ್ಥವನ್ನು ಬಣ್ಣಿಸುವಂತಹವು. ಇನ್ನು ದಾಸರ ಅಂಕಿತವನ್ನೇ ಒಳಗೊಂಡ ಕೆಲವು ಲೌಕಿಕಭಾವದ ಒಗಟಿನ ಹಾಡುಗಳು, ನಮ್ಮ ನಾಡಿಗರ ಬಾಯಲ್ಲಿ ರೂಢಿಸಿವೆ. ಎರಡು ಪೌರಾಣಿಕ ವ್ಯಕ್ತಿಗಳನ್ನು ತಂದು, ಇಬ್ಬರೂ ವಿನೋದವಾಗಿ ಒಬ್ಬರಿಗೊಬ್ಬರು ಒಗಟೆಗಳನ್ನು ಹೇಳಿ, ಒಬ್ಬರು ಅರ್ಥವನ್ನು ಹೇಳಲಾರದೆ ಸೋತಂತೆಯೂ ಮತ್ತೊಬ್ಬರು ಗೆದ್ದಂತೆಯೂ ಈ ಹಾಡುಗಳಲ್ಲಿ ಬಣ್ಣಿಸಲಾಗಿರುವುದು.

ರುಕ್ಮಿಣಿ-ಪಾರ್ವತಿಯರ ಒಗಟುಗಳ ಹಾಡಿದೆ. ಸತ್ಯಭಾಮೆ-ಸುಭದ್ರೆಯರ ಒಗಟಿನ ಹಾಡಿದೆ. ಶ್ರೀಕೃಷ್ಣ-ರುಕ್ಮಿಣಿಯರ ಒಗಟಿನ ಹಾಡಂತೂ ತುಂಬ ರಸಮಯವಾಗಿದ್ದು ದೀರ್ಘವಾದುದಾಗಿದೆ. ಒಬ್ಬರಿಗೊಬ್ಬರು ಹೇಳಿದ ಅನೇಕ ಮನೋರಂಜಕ ಒಗಟುಗಳು ಈ ಹಾಡಿನಲ್ಲಿ ಹುದುಗಿಕೊಂಡಿವೆ. ಒಂದು ಮೋಜಿನ ಸಂಗತಿಯೆಂದರೆ : ಶ್ರೀಕೃಷ್ಣನು ಹಾಕಿದ ಎಲ್ಲ ಒಗಟುಗಳನ್ನೂ ರುಕ್ಮಿಣಿಯು ಒಡೆದು ಹೇಳುವಳು; ಆದರೆ ರುಕ್ಮಿಣಿಯು ಹಾಕಿದ ಒಗಟುಗಳಲ್ಲಿ ಶ್ರೀಕೃಷ್ಣನಿಗೆ ಒಂದೂ ಅರ್ಥವಾಗುವುದಿಲ್ಲ ಇಷ್ಟೇ ಅಲ್ಲ, ರುಕ್ಮಿಣಿಯ ಒಗಟಿನ ಮಾತುಗಳನ್ನು ಕೇಳಿ ಸಂದೇಹಗೊಂಡ ಶ್ರೀಕೃಷ್ಣನು, ಸಿಟ್ಟಿಗೇಳುವನು. ತುಂಬ ಮನೋಹರವಾಗಿವೆ ಈ ಒಗಟಿನ ಹಾಡು. ಎಲ್ಲವೂ ತ್ರಿಪದಿ ವೃತ್ತದಲ್ಲಿದೆ. ಇಲ್ಲಿ ಮಾದರಿಗಾಗಿ ಕೆಲವೊಂದು ಒಗಟುಗಳನ್ನು ಕೊಡದೆ ಹೋದರೆ ನನ್ನ ಲೇಖನದ ಪೂರ್ಣತೆಗೆ ಕೊರತೆಯೆನಿಸೀತು !

" ತಾನು ಹುಟ್ಟುವ ಮುನ್ನ ತಲೆಮೇಲೆ ಟೊಪ್ಪಿಗೆ |
ಮುಖವನೊಲೆದಾಡಿ ನಗುತಿಹುದೆ ರುಕ್ಮಿಣೀ
ನೀ ಹೇಳು ಒಗಟದರ್ಥವ ||

ರುಕ್ಮಿಣಿಯ ಉತ್ತರವಿದು :

ಇಂಗು-ಜೀರಿಗೆ-ಮೆಣಸು ಚೆಂದಾದ ಸಾಸಿವಿ |
ಕಮ್ಮನೊಗ್ಗರಣೆ ಕೊಡುವಂಥ ಬದನೆಯ
ಕಾಯಿಯಲ್ಲೇನು ನನ್ನರಸ !

ಶ್ರೀಕೃಷ್ಣ ಇನ್ನೊಂದು ಒಗಟು ಹೇಳಿದ :

ಹೊರಗೆ ಹಳದಿಯ ಕೋಟೆ ಒಳಗೆ ಬೆಳ್ಳಿಯ ಕೋಟೆ |
ತಿಳಿನೀರು ಒಳಗೆ ಗೊಣಕಲ್ಲು ರುಕ್ಮಿಣಿ |
ನೀ ಹೇಳು ಒಗಟದರ್ಥವ ! ||

ಇದಕ್ಕೆ ಉತ್ತರ :

ಅಲ್ಲಕ್ಕೆ ಅಧಿಕಾರಿ ಅನ್ನಕ್ಕೆ ಸಂಗಾತಿ
ಬಲ್ಲ ವೈದ್ಯರಿಗೆ ಉಪಕಾರಿ ಲಿಂಬಿಯಾ
ಹಣ್ಣಲ್ಲವೇನು ನನ್ನರಸ ! ||

ಹತ್ತಿಪ್ಪತ್ತು ಒಗಟುಗಳನ್ನು ಶ್ರೀಕೃಷ್ಣ ಹೇಳಿದರೂ, ತಪ್ಪದೆ ರುಕ್ಮಿಣಿಯು ಉತ್ತರ ಕೊಡುವಳು. ಮುಂದೆ ರುಕ್ಮಿಣಿ ತನ್ನ ಒಗಟುಗಳನ್ನು ಆರಂಭಿಸುವಳು :

" ಒಬ್ಬನನು ಕಟ್ಟಿದ್ದೆ, ಒಬ್ಬನನು ಬಿಚ್ಚಿದ್ದೆ,
ಒಬ್ಬನಾ ಕರೆದು ಒಳಗೊಯಿದೆನೆಂದಾಗ
ಉಗ್ರೇಶ ಕೋಪ ತಳೆದಿದ್ದ | "

ಕೋಪದಿಂದ ಕೃಷ್ಣ ಕೇಳುವನು :

ಯಾವನನು ಕಟ್ಟಿದ್ದೆ ಯಾವನನು ಬಿಚ್ಚಿದ್ದೆ ?
ಯಾವನನು ಕರೆದು ಒಳಗೊಯಿದೆ ರುಕ್ಮಿಣೀ !
ಹೇಳೆನುತ ಬೇಸಿದಲಗವ||

ಆಗ ರುಕ್ಮಿಣಿಯು ಶ್ರೀಕೃಷ್ಣನ ಆವಿರ್ಭಾವನ್ನು ಕಂಡು, ತುಂಟನಗೆ ನಗುತ್ತಲೇ ಹೇಳಿರಬೇಕು :

" ಹಸುವನ್ನು, ಕಟ್ಟಿದ್ದೆ ಕರುವನ್ನು ಬಿಚ್ಚಿದ್ದೆ
ಹಾಲನ್ನು ಕರೆದು ಒಳಗೊಯಿದೆನೆಂದಾಗ
ಭೂವಿಾಶ ಮುಗುಳುನಗೆ ನಕ್ಕ "

ಇದೀಗ ರುಕ್ಮಿಣಿಯ ಒಂದು ಒಗಟು ಮುಗಿಯಿತು. ಇದೋ ಇನ್ನೊಂದು :

" ಒಬ್ಬನಾ ಹೊರಗಿಟ್ಟೆ, ಒಬ್ಬನಾ ಒಳಗಿಟ್ಟೆ
ಒಬ್ಬನಾ ನೋಡಿ ನಗುತಿದ್ದೆನೆಂದಾಗ
ಉಗ್ರೇಶ ಕೋಪ ತಳೆದಿದ್ದ. "
ಯಾವನನು ಹೊರಗಿಟ್ಟೆ ? ಯಾವನನು ಒಳಗಿಟ್ಟೆ ?
ಯಾವನನು ನೋಡಿ ನಗುತಿದ್ದೆ ? ರುಕ್ಮಿಣೀ
ಹೇಳು-ಹೇಳೆನುತ ಗರ್ಜಿಸಿದ "

ಮತ್ತೆ ರುಕ್ಮಿಣಿಯ ತುಂಟ ನಗೆಗೂಡಿದ ಉತ್ತರವಿದು :

ಕುಂಕುಮವ ಹೊರಗಿಟ್ಟೆ, ಕಾಡಿಗೆಯ ಒಳಗಿಟ್ಟೆ;
ಕನ್ನಡಿಯ ನೋಡಿ ನಗುತ್ತಿದ್ದೆ ಎಂದ್ಯರೆ
ಶ್ರೀಕೃಷ್ಣ ಮುಗುಳುನಗುತಿದ್ದ."

ಇದೇ ಬಗೆಯ ಹತ್ತೆಂಟು ಒಗಟುಗಳನ್ನು ರುಕ್ಮಿಣಿ ಹಾಕುವಳು ಒಂದಕ್ಕಿಂತ ಒಂದು ವಿನೋದಪೂರ್ಣವಾಗಿವೆ. ಒಂದಕ್ಕೂ ಉತ್ತರಕೊಡದೆ ಶ್ರೀಕೃಷ್ಣನು ಸೋಲುವನು. ಹಿಗ್ಗಿದ ಹೃದಯದ ರುಕ್ಮಿಣಿ, ಶ್ರೀಕೃಷ್ಣನನ್ನು ಇನ್ನಿಷ್ಟು ಒಲವಿನಿಂದ ಉಪಚರಿಸುವಳು.

ಇವೆಲ್ಲ ಪರಂಪರೆಯ ಇತಿಹಾಸವನ್ನು ಕಂಡಾಗ, ಹಿಂದಿನ ಕಾಲದ ಕನ್ನಡಿಗರ 'ಸುಖ-ಸಂಕಥಾವಿನೋದ' ಪೂರ್ಣ ಜೀವನದಲ್ಲಿ, ಒಗಟುಗಳ ಸಾಹಿತ್ಯಕ್ಕೆ ಒಂದು ವಿಶಿಷ್ಟವಾದ ಸ್ಥಾನವಿದ್ದಿತೆಂಬುದು ಗೊತ್ತಾಗುವುದು. ಆ ಪರಂಪರೆಯು ಈಗಲೂ ಅಚ್ಚಳಿಯದೆ ಉಳಿದುಕೊಂಡು ಬಂದಿದೆ ಪ್ರತಿಯೊಂದು ಕನ್ನಡ ಕುಟುಂಬದ ಸರಸಜೀವನದಲ್ಲಿ ಒಗಟುಗಳಿಗೆ ಸ್ಥಾನವಿದ್ದೇ ಇರುವುದು. ವಿರಾಮವಾಗಿ ನಾಲ್ಕುಜನ ಸೇರಿ ಕುಳಿತರಾಯಿತು; ಅಲ್ಲಿ ಒಗಟುಗಳು ಸಾಗಿ ಬಂದೇಬಿಡುವುವು. ನಮ್ಮ ಜನರ ಬಾಯಲ್ಲಿ ಎಣಿಕೆಯಿಲ್ಲದಷ್ಟು ಒಗಟುಗಳು ಆಟವಾಡುತ್ತಿರುವುವು. ಮುಖ್ಯಪ್ರಾಸ, ಅನುಪ್ರಾಸ, ಅಂತ್ಯಪ್ರಾಸಗಳಿಂದಲೂ ಒಂದು ಬಗೆಯ ನಿಯಮಿತ ಗತಿಪದ್ಧತಿಯಿಂದಲೂ, ಎಲ್ಲ ಒಗಟುಗಳೂ ಒಂದು ಬಗೆಯ ಸಾಹಿತ್ಯಕ ರೂಪವನ್ನು ಪಡೆದಿರುವುವು ಎರಡೆರಡೇ ಸಾಲಿನ ಕೆಲವು ಜಾನಪದ ಒಗಟುಗಳ ಸೊಗಸನ್ನು ನೋಡಿರಿ :

" ಹಸಿರು ತೋಟ, ಬೆಳ್ಳಿಯ ಗೂಟ. " (ಮೂಲಂಗಿ).
"ಹಸರು ಹಚ್ಚಡದ ಮ್ಯಾಲ ಮೊಸರು ಬಿದ್ದ್ಯದ" (ಮಲ್ಲಿಗೆ ಬಳ್ಳಿ)
" ತಗ್ಗಿನೊಳಗಿನ ಬಸವ ಎದ್ದೆದ್ದು ನೋಡತಾನ "
(ಒಲೆಯಲ್ಲಿಯ ಉರಿ)
"ಕರಿಯ ಗಿಡ್ಡನಿಗೆ ಬಿಳಿಯ ನಾಮ"(ಉದ್ದಿನ ಕಾಳು).

"ಚಿಕ್ಕ ಕೋಣೆಯೊಳಗೆ ಸೆಕ್ಕೆ ತುಂಬ್ಯಾವ"(ಬಾಯೊಳಗಿನ ಹಲ್ಲು)

ಇಂತಹ ಚಿಕ್ಕ ಒಗಟುಗಳು ಲೆಕ್ಕವಿಲ್ಲದಷ್ಟು, ಜನರ ಬಾಯಲ್ಲಿವೆ.

ಒಂದು ರೂಪಕಚಿತ್ರವನ್ನು ಮೂಡಿಸುವಂತಹ ಒಗಟುಗಳೂ ಹಲವಾರು ಇವೆ :

"ಕೆಂಪು ಕುದುರೆಯ ಮ್ಯಾಲ ಕರಿಯ ಥಡಿ!
ಒಬ್ಬ ಇಳೀತಾನ, ಒಬ್ಬ ಏರತಾನ"

ಇದರರ್ಥ ಒಲೆಯಲ್ಲಿಯ ಉರಿ, ಕಬ್ಬಿಣ್ಣಹಂಚು, ರೊಟ್ಟಿಗಳು.

"ಅಪ್ಪನ ಸೀರೇ ಮಡಿಚಲಾರೆ, ಅಪ್ಪನ ಹಣವ ಎಣಿಸಲಾರೆ!"

ಇಲ್ಲಿ ಸೀರೆಯೆಂದರೆ ನೀಲಾಕಾಶ. ಹಣವೆಂದರೆ ತಾರೆಗಳು.

"ಮರದೊಳಗೆ ಮರಹುಟ್ಟಿ ಮರದಂತೆ ಕಾಯಾಗಿ.
ತಿನಬಾರದ ಹಣ್ಣು ಬಲು ಸವಿ!" (ಮುತ್ತಿಡುತ್ತಿರುವ ಮಗುವೇದು ಇದರರ್ಥ.)

"ಕಂಬಕಂಬದ ಮ್ಯಾಲೆ ದಿಂಬುದಿಂಬಿನ ಮ್ಯಾಲೆ.
ನಾಗಲೋಟಿಯ ಮ್ಯಾಲೆ ಹೊಸದು ಕೋಟೆಯ ಮ್ಯಾಲೆ.
ಕರಡಿಗೆಯೊಳಗೆರಡುದುಡ್ಡು ಓಡಾಡುತಾವೆ" ಇದರರ್ಥ ಕಣ್ಣುಗುಡ್ಡೆ.

ಮಾತಿನ ಚಮತ್ಕಾರವನ್ನು ತೋರಿಸುವ ಒಗಟುಗಳೂ ಹಲವು ಇವೆ :

"ಅಕ್ಕಿಯೊಳಗಿನ ಮರಿ, ಪಲ್ಲಿಯೊಳಗಿನ ಗಿರಿ,
ಕಣಕದೊಳಗಿನ ಕಾಯಿ!"

ಕ್ರಮವಾಗಿ ಚುರಮುರಿ, ರಾಜಗಿರಿ, ಕರಜೀಕಾಯಿ ಎಂದು ಇದರರ್ಥ.

"ಮನೆಯೊಳಗೆ ನಾಕೆಮ್ಮೆ, ಹೊಲದೊಳಗೆ ನಾಕೆತ್ತು, ಮನೆಯ
ತುಂಬಾ ಸೂರ್ಯಚಂದ್ರರ ಬೆಳಕು, ನನ್ನ ಸಂಪತ್ತೆಷ್ಟು?"

ಕೆಮ್ಮುವ, ಕೆತ್ತುವ, ಮಾಳಿಗೆಯಿಲ್ಲದೆ ಬಯಲಲ್ಲಿರುವ ಆತನಿಗೆ ಸಂಪತ್ತು ಎಲ್ಲಿಯದು ಬರಬೇಕು?

ಪದ್ಯವೆಂದು ಕಾಣುವಂತಹ ಒಗಟುಗಳು ಅಸಂಖ್ಯವಾಗಿವೆ :

"ಅಕ್ಕಿಗೆ ಅಗುಳಿಲ್ಲ, ತುಪ್ಪಕ್ಕೆ ನಾತಿಲ್ಲ
ಮಕ್ಕಳಾ ತಾಯಿಗೆ ಮೊಲೆಯಿಲ್ಲ!"

ಈ ಒಗಟಿನ ಉತ್ತರ ಯಾಲಕ್ಕಿ, ಜೇನುತುಪ್ಪ, ಕೋಳಿ.

"ಅಂಕುಡೊಂಕಿನ ಬಾವಿ ಶಂಖ-ಚಕ್ರದ ಬಾವಿ
ಹೊಕ್ಕು ನೋಡಿದರೆ ಮುಕ್ಕು ನೀರಿಲ್ಲ!"

ಈ ಅಂಕುಡೊಂಕಿನ ಬಾವಿಯೆಂದರೆ ಕಿವಿಯೆಂದರ್ಥ.

"ಮುಕ್ಕಣ್ಣ ಶಿವನಲ್ಲ, ಜಡೆಯುಂಟು ತಪಸ್ವಿಯಲ್ಲ!
ದೂರ ಮರದಲಿ ವಾಸಿಪುದು ಪಕ್ಷಿಯಲ್ಲ!"

ಇದರರ್ಥ ತೆಂಗಿನಕಾಯಿ ಎಂಬುದು ಎಲ್ಲರಿಗೂ ತಿಳಿದಿರಬಹುದು.

ಧ್ವನಿಯ ಅನುಕರಣದ ಮೇಲೂ ಕೆಲವು ಒಗಟುಗಳು ನಿಂತುಕೊಂಡಿವೆ:

"ಅಲ್ಲಿಯೂ ಬುಳುಬುಳು, ಇಲ್ಲಿಯೂ ಬುಳುಬುಳು!
ಕಲ್ಯಾಣ ತನಕಾ ಬುಳುಬುಳು!" ಇದು ಕುರಿಯ ಹಿಕ್ಕೆ.

ಇನ್ನೊಂದನ್ನು ನೋಡಿ :

"ಅದ್ರಂಗಿ ಬುದ್ರಂಗಿ ಬುದರ್ ಬುಮ್ಮಳ್ಳಿ.
ತದ್ರಂಗಿ ತಳಕೋಟೆ, ಬಾಗಿಬಂದಪ್ಪನ ಮಗಳು
ಜಟ್ಟೆಪ್ಪನ ತಂಗಿ ಲೊಟ್ಟಿ!"

ನೂಲುವ ರಾಟೆ, ನೂತ ಕುಕ್ಕಡಿ ಇದರರ್ಥ. ಈ ಒಗಟಿನಲ್ಲಿರುವ 'ಅದ್ರಂಗಿ ಬುದ್ರಂಗಿ' ಮೊದಲಾದ ಪದಗಳು, ರಾಟೆಯ ಸಪ್ಪುಳನ್ನು ಸೂಚಿಸುವಂತಹವಾಗಿವೆ. ಕೊನೆಯವಾಗಿ ಕವಿತೆಯ ಸ್ವಾರಸ್ಯಕ್ಕೆ ಏರಿನಿಂತಂತಹ ಒಂದೆರಡು ಒಗಟುಗಳನ್ನು ಹೇಳಬೇಕೆಂದಿದ್ದೇನೆ:

"ಅತ್ತಲಿಂದ ಬಂದೇವಮ್ಮಾ
ಮುತ್ತಿನ ಡೇರೆ ಹೊಡೆದೇವ
ಪಾಪೀ ಕೈಯಿಗೆ ಸಿಕ್ಕೇವಪ್ಪಾ
ಪರದೇಶ್ಯಾಗಿ ನಡೆದೇವ!"

ಕರುಣಾಭಾವ ತುಂಬಿದ ಕವನದಂತಿದೆ ಈ ಒಗಟು. ಜೇನು ಹುಳುಗಳ ಪಾಡು ಇದು. ಜೇನನ್ನು ಯಾವನೋ ಬಿಡಿಸಿಕೊಂಡು ಹೋಗಿದ್ದಾನೆ. ದುಃಖದಿಂದ ಹಾರುತ್ತ ಹೊರಟ ಆ ಜೇನ್ನೊಣಗಳ ಗುಂಪು 'ಪಾಪಿಯ ಕೈಯಿಗೆ ಸಿಕ್ಕೇವಪ್ಪಾ ಪರದೇಶ್ಯಾಗಿ ನಡೆದೇವ!' ಎಂದು ಹಂಬಲಿಸುತ್ತವೆ. ಕಟ್ಟಿದ ಜೇನಿಗೆ ಇಲ್ಲಿ ಮುತ್ತಿನ ಡೇರೆಯ ಸುಂದರ ಉಪಮೆ. ಇಂತಹದೆ ಇನ್ನೊಂದು ಒಗಟು ಇದು :

"ಅಂಗಾಲ ಮೇಲ್ಮಾಡಿ ನೀರ್ಕುಡಿಯವಣ್ಣಾ!
ಮೂಗಿನವ ಬರುತಾನೆ ಮುಂದೆ ಸರಿಯಣ್ಣಾ!"
"ನಿನಗಾರು ಹೇಳಿದರೊ ತಲೆಯಿಲ್ಲದಣ್ಣಾ!"
"ನನಗೊಬ್ಬ ಹೇಳಿದನು ಕರುಳಿಲ್ಲದಣ್ಣಾ!"

ಪ್ರಾಣಿಗಳ ವೈಶಿಷ್ಟ್ಯವನ್ನು ಈ ಒಗಟಿನಲ್ಲಿ ನೋಡಬಹುದು. ಒಂದು ಹೊಳೆ. ದಂಡೆಯಲ್ಲಿ ಬಂದ ಹೋತ ಮುಂಗಾಲನ್ನು ಮಡಿಸಿ, ಅಂಗಾಲನ್ನು ಮೇಲೆ ಮಾಡಿಕೊಂಡು ನೀರನ್ನು ಕುಡಿಯುತ್ತಿದೆ. ಇದು ಆ ಜಾತಿಯ ಸ್ವಭಾವ. ಆ ಹೋತನ್ನು ಒಂದು ಪ್ರಾಣಿ 'ಮೂಗಿನವ ಬರತಾನೆ' ಎಂದು ಎಚ್ಚರಿಸುವುದು. 'ಮೂಗಿನವ' ಎಂದರೆ ಆನೆ. ಆಗ ಹೋತ ತನಗೆ ಎಚ್ಚರಿಕೆ ಕೊಟ್ಟ ಪ್ರಾಣಿಯನ್ನು 'ನಿನಗಾರು ಹೇಳಿದರು ತಲೆಯಿಲ್ಲದಣ್ಣಾ!' ಎಂದು ಕೇಳುವುದು. ತಲೆಯಿಲ್ಲದಣ್ಣನೆಂದರೆ ಏಡಿ. ನೀರಲ್ಲಿಯೆ ಇದ್ದ ಆ ಏಡಿ, 'ನನಗೊಬ್ಬ ಹೇಳಿದನು ಕರುಳಿಲ್ಲದಣ್ಣಾ!' ಎಂದು ಹೇಳಿತು. ಕರುಳಿಲ್ಲದ ಅಣ್ಣನೆಂದರೆ ಗಂಟೆ. ಆನೆಯ ಕೊರಳಿಗೆ ಕಟ್ಟಿದ ಗಂಟೆಯ ಸಪ್ಪುಳನ್ನು ಕೇಳಿ ಆ ಏಡಿ ಎಚ್ಚರಿಕೆ ಕೊಟ್ಟಿತು. ಗಂಟೆಗೆ ನಾಲಗೆ ಇರುವುದು. ಕರುಳು ಇರುವುದಿಲ್ಲ.

ಸೋದರ ಸೋದರಿಯರೆ,

ಇದೀಗ ನಮ್ಮ ಕನ್ನಡ ನಾಡಿನ ಒಗಟುಗಳ ಸಾಮ್ರಾಜ್ಯದ ಚರಿತ್ರೆಯ ಹೊರರೇಷೆ. ಒಳಹೊಕ್ಕು ನೋಡಿದರೆ ಅಪಾರ ಸಾಗರದಂತಿದು ಕಾಣುವುದು. ಈ ಸಾಗರದಲ್ಲಿ ಒಗಟಿನ ರತ್ನರಾಶಿ ಅಸಂಖ್ಯವಾಗಿ ಹುದುಗಿಕೊಂಡಿವೆ. ಹೊರಕ್ಕೆ ತೆಗೆದು ತೋರಿಸುವ ರಸಗಾರರು ಮುಂದೆ ಬರಬೇಕು.

ವೈಶಾಖದ ಮಳೆ ಬಂದಿತ್ತು

ಶ್ರೀ. "ಚಿದಾನಂದ" ಧಾರವಾಡ

೧

ವೈಶಾಖದ ಮಳೆ ಬಂದಿತ್ತು....
ಹೃದಯವು 'ಆಹಾ!' ಎಂದಿತ್ತು;
ಬಿಸಿಲಿನ ಬೇಗೆಯು ಕಳೆದಿತ್ತು.
ಭೂಮಿಗೆ ತಂಪನು ತಂದಿತ್ತು!

೨

ಬೀಸುವ ಬಿರುಗಾಳಿಯ ಕೆಂಧೂಳಿ
ಸುತ್ತಲು ರಭಸದಿ ಹರಡಿತ್ತು;
ಕಣ್ಣೀರಿನ ಉಗಿ ಬಿಟ್ಟಿರುವಂತೆ—
ಜನತೆಯು ಎತ್ತಲು ಚೆದರಿತ್ತು!

೩

ಧರಣಿಗೆ ಕೊಡೆಯನು ಹಿಡಿದಿರುವಂತೆ
ಮೋಡವು ಸೂರ್ಯನ ಮುಚ್ಚಿತ್ತು;
ಹಗಲುಗನಸಿನಲಿ ಮುಚ್ಚಿದ ಕಣ್ಣು
ಮೆಲ್ಲ-ಮೆಲ್ಲನೇ ತೆರೆದಿತ್ತು!

೪

ವಿದ್ಯುತ್ತಿನ ಹೊಳೆ ಹರಿದಿರುವಂತೆ
ಮಿಂಚಿನ ಬಳ್ಳಿಯು ಮಿಂಚಿತ್ತು;
ಹಗಲೆ ಇದ್ದರೂ ಕಣ್ಣಿಗದೇನೋ
ಬೆಳಕಿನ ಕತ್ತಲು ಕವಿದಿತ್ತು!

೫

ಜಲ-ಜನಕದ ಆಸ್ಫೋಟನದಂತೆ
ಸಿಡಿಲಿನ ಸಪ್ಪಳ ಕೇಳಿತ್ತು;
ಮನೆಯೊಳಿದ್ದರೂ ಭಯದಿಂ ದೇಹವು
ಗಡಗಡನೆಯೆ ನಡು-ನಡುಗಿತ್ತು!

೬

ಗುಂಡಿನ ಮಳೆಯದು ಸುರಿದಿರುವಂತೆ—
ಆಣೆಕಲ್ಲ ಮಳೆ ಬಿದ್ದಿತ್ತು;
ಆವುಗಳನಾಯಲು ಎಳೆಯರ ಹಿಂಡು
ಮಳೆಯಲ್ಲಿಯೆ ತಾ ನುಗ್ಗಿತ್ತು!

೭

ಬಿಸಿಲಿನ ಬೇಗೆಗೆ ಬಳಲಿದ ಧಾರಿಣಿ
ತುಷಾರಸ್ನಾನವ ಗೈದಿರಲು....
ಹರಿದಿಹ ನೀರೋ— ಎನ್ನುವವೊಲು ತಾ-
ನೆಲ್ಲೆಡೆ ನೀರೇ ಆಗಿತ್ತು!

೮

ಮುಳುಗುವ ಸೂರ್ಯನು ಮೆಲ್ಲನೆ ಮೆ
ಇಣುಕುತ ಇಳೆಯನು ನೋಡಿರಲು....
ಮೂಡಣ ಕ್ಷಿತಿಜದಿ ಬಣ್ಣ-ಬಣ್ಣಗಳ
ಕಾಮನ ಬಿಲ್ಲದು ಮೂಡಿತ್ತು!

೯

ಭೂ-ಸ್ವರ್ಗಗಳಿಗೆ ಅಮರಶಿಲ್ಪಿಯು
ವಿವಿಧರನ್ನದಿಟ್ಟಿಗೆಗಳಲಿ—
ಕಟ್ಟಿದ ಸೇತುವೆಯಿದುವೊ?— ಎಂಬೊಲು
ಇಂದ್ರಚಾಪವದು ಮೆರೆದಿತ್ತು.

೧೦

ಯಾಂತ್ರಿಕ ಜೀವನ ನಡೆಯಿಸಿ ಜೀವವು
ಕನಸಿನ ಲೋಕವ ಬಯಸಿತ್ತು;
ಸ್ವರ್ಗದ ಸೇತುವೆ ಕಣ್ಣಿಗೆ ಕಾಣಲು
ಅದರಿಂ ನಾಕವನೇರಿತ್ತು.

೧೧

ವೈಶಾಖದ ಮಳೆ ಬಂದಿತ್ತು
ಹೃದಯವು 'ಆಹಾ!' ಎಂದಿತ್ತು
ನನಸು-ಕನಸು ಒಂದಾಗಿತ್ತು....
ನಾಕದ ಸೊಗ ಇಳೆಗಿಳಿದಿತ್ತು.

ನಗೆ

(ಲಘುಪ್ರಬಂಧ)

[illegible]. ಎಸ್. ಎಸ್. ಗದಗಕರ, ಬಿ. ಎ.
ಧಾರವಾಡ

ನಗೆಯು ಬೇಕೆಂದು ಬಯಸುವ ಜನರು ಬಹಳವಾದರೂ, ಒಳ್ಳೆಯ ನಗೆಯು ಯಾವುದೆಂದು ತಿಳಿಯದೆ, ಬಾಳನ್ನು ನಗೆಗೀಡುಮಾಡಿಕೊಳ್ಳುವವರ ಸಂಖ್ಯೆಯೇ ಲೋಕದಲ್ಲಿ ಹೆಚ್ಚಾಗಿದೆ. ನಗೆಯು ಬೇಕು. ಆದರೆ ಎಂತಹದು?

▲

'Laugh laugh the world laughs with you; Weep weep and you weep but alone' ಎಂಬ ಆಂಗ್ಲ ಜಾಣ್ನುಡಿ ನೆನಪಾದ ಕ್ಷಣವೇ, ಯಾರಿಗಾದರೂ ನಗೆಯ ಜೀವಾಳದ ಕಲ್ಪನೆ ಝಗ್ಗೆಂದು ಮಿಂಚುವುದು. ತಾನು ನಕ್ಕರೆ ಜಗತ್ತೇ ಕುಲು-ಕುಲು ನಗುವುದೆಂದು ಎನಿಸುವುದು ಎಷ್ಟೊಂದು ನೈಜವಾದುದು! ತನಗೆ ಆನಂದದ ಆವಿರ್ಭಾವವಾಗಿದ್ದರೆ ಹೆರವರಿಗೂ ಹಾಗೆಯೇ ಇದ್ದೀತೆಂದು ಭಾವಿಸುವುದು ಮಾನವನ ಸಹಜಗುಣ. ವಾಸ್ತವ ಪ್ರಪಂಚದಲ್ಲಿ ಇಂತಹ ನಗೆಯುಗುಳಿಗೆ, ಉಲ್ಲಾಸದ ಸೆಲೆಗೆ ಹಲವಾರು ಕಾರಣಗಳಿದ್ದಿದ್ದಾವು. ವಿದ್ಯಾರ್ಥಿಯಾದವನಿಗೆ ಪರೀಕ್ಷೆಯಲ್ಲಿ ಮೇಲಿನ ಸ್ಥಾನ ದೊರೆತಿದ್ದೀತು. ವಿಲಾಸಿನಟನು ತನ್ನ ಅನುಪಮ ಕೌಶಲ-ದಿಂದ ಪ್ರೇಕ್ಷಕರ ಮನವನ್ನು ಸೂರೆಗೊಂಡಿದ್ದಾನು. ಆಧುನಿಕ ಸುಸಂಸ್ಕೃತ ಯುವತಿ ತನ್ನ ಗೆಳತಿಯರಲ್ಲಿ ಕೋಕಿಲಕಂಠಕ್ಕಾಗಿ ಹೆಸರಾಗಿದ್ದಾಳು. ಅನುಭವಿ ಸದ್ಗೃಹಸ್ಥನೊಬ್ಬನು ರಾಜಕೀಯ ರಂಗದಲ್ಲಿ ಸಾಮಾಜಿಕ ಕ್ಷೇತ್ರದಲ್ಲಿ ಮುಂದಾಳೆನಿಸಿಕೊಂಡು ಸಹ-ಸ್ರಾರು ಜನರಿಗೆ ಆದರ್ಶನೆನಿಸಿದ್ದಾನು ಏನೇ ಇರಲಿ, ಹೃದಯ-ಪೀಠದಲ್ಲಿ ನಗೆಹೂ ಅರಳಿದ್ದರೆ, ಅದರ ಸೌರಭ ಸುತ್ತಲೂ ಹರಡಿ ಅಸಂಖ್ಯಾತರನ್ನು ಮುಗ್ಧರನ್ನಾಗಿಸುವುದು ಯುಕ್ತವಾದುದು. ಆದರೆ ಕಿರುಕುಳ ಕಾರಣದಿಂದಾಗಲಿ, ದೊಡ್ಡ ನಿಮಿತ್ತದಿಂದಾಗಲಿ ಮನ-ಸ್ತಾಪವಾಗಿ ವ್ಯಕ್ತಿಯ ಮನದಾಗಸದಲ್ಲಿ ಚಿಂತೆಯ ಕಾರ್ಮೋಡ ಮುಸುಕಿದ್ದರೆ, 'ಛೀ! ಇವನೇನು ಅಳುಬುರುಕ!' ಎಂದು ಶರಾಹಾಕಿ ಜೀವದ ಗೆಳೆಯರೂ (?) ಹಲವು ಸಲ ಮುಖ ತಿರುವಿಕೊಂಡು ಹೋಗಬಹುದು. 'ಸ್ನಿಗ್ಧಜನ ಸಂವಿಭಕ್ತಂ ಹಿ ದುಃಖಂ ಸಹ್ಯ-ವೇದನಂ ಭವತಿ' ಎಂದು ತಿಳಿದ ವಿವೇಕಿಗಳ ಮಾತೇ ಬೇರೆ. ಮೂಲೆಯನ್ನು ಹಿಡಿದು ಮುಳು-ಮುಳು ಅಳುವವನಿಗೆ ಯಾವ ಗತಿಯೂ ಇಲ್ಲವೆಂದಾಯಿತು!

ಅಹುದು. ನಗೆ ಹೀಗೆ ಉನ್ಮಾದದ ಉಗಮವೆನಿಸಿದುದರಲ್ಲಿ ಹೆಚ್ಚಿನದಿಲ್ಲ. ಆದರೆ ಜನಸಾಮಾನ್ಯರಿಗೆ ಅದರ ವಿರಾಟರೂಪದ ವಿಚಾರ ಮೊಳಗಿದರೆ ಸಾಕು. ಎಷ್ಟು ವಿಧದ ನಗೆ! ಅದನ್ನು ಕಂಡಾಗಲಿ, ಅನುಭವಿಸಿಯಾಗಲಿ ತೀರಬೇಕು. ಅದಕ್ಕಾಗಿ ಸಮಾಜದ ಒಳ-ಹೊರಗೂ ಸುತ್ತುಮುತ್ತಲು, ಮೇಲಕೆ-ಕೆಳಗೆ ನೋಡುವ ಚಟ ಅವಶ್ಯ. ಒಬ್ಬನು ಆನಂದಾತಿಶಯದಲ್ಲಿ ಖೊಳ್ಳೆಂದು— ಖೊಕ್ ಖೊಕ್ ಎಂದು—ನಕ್ಕರೆ, ಮತ್ತೊಬ್ಬ ವಿವೇಕಿಯು ಗೆಲುವಿನ ಮುಖ-ಮುದ್ರೆಯಲ್ಲಿ ಮಂದಹಾಸ ಬೀರುವನು. ಬೇರೊಬ್ಬ ಅಸಂಸ್ಕೃತನು ವಿನೋದದ ದೃಶ್ಯ ಕಂಡಾಗ ಕಿಕಿ, ಹಿಹಿ, ಹೊಹೊ ಎಂದು ಚಪ್ಪಾಳೆ ತಟ್ಟಿ ನಕ್ಕಾನು. ಮಗುವಿನ ನಗೆ ಕುಲುಕುಲು ಎಂದು ಕವಿಯೇ ಬಣ್ಣಿಸಿ-ರುವನು. ನಾರೀವೃಂದದ ನಗೆ ಕಿಲಕಿಲನೆ ಎಂದು ಎಲ್ಲರಿಗೂ ವಿದಿತ-ವಿದೆ. ಸಂಭಾಷಣೆ ರಂಗಿಗೆದ್ದಾಗ ಚಂಡಾಳ ಚೌಕಳಿಯ ಜನ ಹೊಟ್ಟೆ ಹುಣ್ಣಾಗುವಂತೆ ನಗುವುದು ತೀರ ಸಾಮಾನ್ಯ ನೋಟ. ಇದೇ ಆಂಗ್ಲ ವಾಙ್ಮಯದಲ್ಲಿ ಪ್ರಚಾರಪಡೆದ Side splitting laughter ಅಲ್ಲವೇ? ಲಾರೆಲ್-ಹಾರ್ಡಿ, ಘೋಸ-ದೀಕ್ಷಿತ, ಚಾರ್ಲಿ ಚಾಪ್ಲಿನ್-ರಂತಹರ ನಟನೆ ನೋಡಿದಾಗ ನಗೆಯ ಕಾರಂಜಿ ನೆಗೆದು ಬೀಳು-ವುದು. ಇಷ್ಟಿದ್ದರೂ ಎಲ್ಲ ನಗೆ ಒಂದೇ ಅಲ್ಲ. ಹಾಗೂ ಇದೆ; ಹೀಗೂ ಇದೆ ಅದು. ಹಲವರು ಮಾತಿನ ಚಮತ್ಕೃತಿಯಿಂದ ರಸಿಕರನ್ನು ರಂಜಿಸಿದಾಗ ಅದನ್ನು wit ಎಂದು ನಾವು ಹೆಸರಿಸಿದರೆ, humour ಎನ್ನುವುದು ಕೇವಲ ಮನಸ್ಸಿನ ಸಂಸ್ಕಾರದ ಮೂಲಕ ಹೊರಹೊಮ್ಮು-ವುದು. ಹೆರವರ ಮನಸಿಗೆ ನೋವಾಗದಂತೆ ಜಾಗ್ರತೆ ವಹಿಸುವುದೇ ಒಳ್ಳೇ ನಗೆಯ ಲಕ್ಷಣ. ಅಪೇ Sarcasm, Satire, ಭಿನ್ನ ಭಿನ್ನ ರೀತಿಯವು. ಒಂದು ಮಾತನ್ನು ವಕ್ರವಾಗಿ ಬಿಂಬಿಸುವುದು ಇವುಗಳ ಬಗೆ. ಇವಕ್ಕೆ ಆಂಗ್ಲಭಾಷೆಯಲ್ಲಿ ಜೋನಾಥನ್ ಸ್ವಿಫ್ಟ್, ವ್ಹಾಲ್ಟೇರ್, ಬರ್ನಾರ್ಡ್ ಶಾರಂತಹರು ಮಾದರಿಯಾದರೆ, ಇಂದಿನ ಕನ್ನಡ ನುಡಿ-ಯಲ್ಲಿ ಕಾರಂತ, ಕೈಲಾಸಂ, ಶ್ರೀರಂಗರನ್ನು ನಾವು ಉದಾಹರಿಸ-ಬಹುದು.

ಏನಿದ್ದರೂ ನಗೆಯ ಮೂಲ ಕಂಡುಹಿಡಿಯುವುದು ನಿಜವಾಗಿ ಉದ್ಬೋಧಕವಾದ ವಿಷಯ. 'Humour is a sense of the incongruous' ಎಂಬ ವ್ಯಾಖ್ಯೆಯಲ್ಲಿ ಅಡಕವಾದ ರಹಸ್ಯದಂತೆ, ನಗೆ ಬರುವಾಗಲಾದರೂ ಘಟನೆಯಲ್ಲಿ ಅಸ್ವಾಭಾವಿಕತೆ ಅಸಹಜ-ತೆಯೇ ಕಾರಣ. ಗಂಡುಮೆಟ್ಟಿನ ಪಟ್ಟಣದ ಪ್ರಮುಖ ಬೀದಿಯೊಂದ ರಲ್ಲಿ ಅಚ್ಚುಕಟ್ಟಾಗಿ ವೇಷಭೂಷಣ ಮಾಡಿಕೊಂಡವನೊಬ್ಬನು ವೈಭವಶಾಲಿ ಥಾಟಿನಲ್ಲಿ ಹೊರಟಾಗ, ತಿಳಿಗೇಡಿ ಮಗುವೊಂದು ಸುಲಿ-ದೊಗೆದ ಬಾಳೆಯ ಹಣ್ಣಿನ ಸಿಪ್ಪೆಯ ಮೇಲೆ ಜಾರಿ ಲಾಗಹೊಡೆದರೆ

ನಗೆ ಬಾರದಿದ್ದೀತೆ? ಇಷ್ಟೇ ಅಲ್ಲ. ನಗೆಯ ತೀರ ಗ್ರಾಮ್ಯಸ್ಥಿತಿ ಕಾಣಬೇಕಾದರೆ, ನಾವು ಇಪ್ಪತ್ತನೆಯ ಶತಮಾನದ ಸರ್ಕಸ್ಸನ್ನೇ ನೆನೆಸಿಕೊಳ್ಳಬೇಕು. ಸುದೈವದಿಂದ ಅವು ಈಗ ಕಡಿಮೆಯಾಗಿವೆ! ಅಲ್ಲಿಯ ಕೋಡಂಗಿ (Joker) ಎಂತಹ ಮೋಜಿನ ಮನುಷ್ಯ! ಒಳ್ಳೆ ಕಸರತ್ತುಗಾರರಂತೆ ಅವನು ಜೋಕಾಲಿಯನ್ನು ಆಡಿ ತೋರಿಸಿದರೂ, ಜಾದುಮಾಡಿದರೂ, ಮಂಗನ ಲಾಗ ಸಲೀಲವಾಗಿ ಹಾಕಿ ತೋರಿಸಿ ಕೆಳದರ್ಜೆಯ ಪ್ರೇಕ್ಷಕರನ್ನು ತಣಿಸಿದರೂ, ಹೆಚ್ಚು ನಗೆಗೆ ಕಾರಣ ಅವನ ಅಕರಾಳ-ವಿಕರಾಳ ಉಡಿಗೆ, ಪೆದ್ದತನ. ಅವನ ಬಣ್ಣದ ಕಾಗದದ ಟೊಪ್ಪಿಗೆ, ರಂಗು-ರಂಗಿನ ಚೌಕುಮನೆಯ ಕೋಟು, ಕೈಯಲ್ಲಿಯ ಬೆತ್ತ, ಇಜ್ಜೋಡು ಪಾದರಕ್ಷೆ, ಹುಚ್ಚುನಗೆ ಚಿರಸ್ಮರಣೀಯ. ವಿಖ್ಯಾತ ಕಸರತ್ತುಗಾರರ ಕೆಲಸ ಮನದ ರಂಗದಿಂದ ಒಂದು ವೇಳೆ ಮಸುಳಿಸಿ ಹೋದರೂ, ಈ ವಿನೋದಿ ಮಾತ್ರ ನಿರಂತರವಾಗಿ ನಗದವರನ್ನೂ ನಗಿಸುತ್ತಲೇ ಇರುವನು.

ಇರಲಿ. ನಗೆಯ ಪ್ರೌಢಸ್ವರೂಪದ ದರ್ಶನವಾಗುವುದು ಸಾಹಿತ್ಯ ರಂಗದಲ್ಲಿಯೇ. ಸಂಸ್ಕೃತ ನಾಟ್ಯಪ್ರಪಂಚದಲ್ಲಿ ವಿದೂಷಕನು ನಗೆಯ ಆಗರ. ಅವನು ಬಹುತರವಾಗಿ ಕಥಾನಾಯಕನ (Hero) ಜೊತೆಯಲ್ಲಿ ತಿರುಗುವವ. ಅವನ ಸುಖ-ದುಃಖಗಳಲ್ಲಿ ಭಾಗಿ. ವಿಚಿತ್ರ ವೇಷದಿಂದ, ಮಾತಿನ ಚಮತ್ಕೃತಿಯಿಂದ, ವಿಲಕ್ಷಣ ಆಕೃತಿಯಿಂದ ಎಲ್ಲರನ್ನೂ ನಗಿಸುವುದೇ ಅವನ ಪಾತ್ರದ ವೈಶಿಷ್ಟ್ಯ. ಸರ್ವಕಾಲದಲ್ಲಿಯೂ ಅರಸನನ್ನು ರಂಜಿಸುವುದಂತೂ ಸೈ. ಪ್ರಣಯಪ್ರಸಂಗದಲ್ಲಿ ಅವನಿಗೆ ಸಹಾಯ ಸಲ್ಲಿಸುವುದು ಇವನ ವಿಶಿಷ್ಟ ಕಾರ್ಯರಂಗ. ಪಾಶ್ಚಿಮಾತ್ಯ ರಂಗಭೂಮಿಯ ನಗೆಗಾರ (Buffoon, Fool) ನಿಗಿಂತಲೂ ಇವನು ಮೇಲು. ವಿಶ್ವಸಾಹಿತ್ಯದಲ್ಲಿ ರಮಣೀಯವೆನಿಸಿದ ಸಂಸ್ಕೃತ ಸುಭಾಷಿತಗಳತ್ತ ದಿಟ್ಟಿ ಚೆಲ್ಲಿದರೆ, ನಗೆಯ ಹೊಂಗಿರಣಗಳು ಅಲ್ಲಿ ಅಸಂಖ್ಯಾತವಾಗಿ ನಮಗೆ ಗೋಚರವಾಗುವುವು. ಕವಿಗೆ ಶಿವನ ಸ್ತೋತ್ರಮಾಡಬೇಕಾಗಿದೆ, ಆದರೆ ಚಮತ್ಕೃತಿಯ ಮೂಲಕವಾಗಿ! ಒಮ್ಮೆ ಅವನು ರೂಢಿಯಂತೆ ದಿಗಂಬರಾವಸ್ಥೆಯಲ್ಲಿದ್ದಾಗ, ವಿಷ್ಣು ತನ್ನನ್ನು ಕಾಣಲು ಬರುವನೆಂಬ ಸುದ್ದಿ ಹಟಾತ್ತಾಗಿ ತಲುಪಿತಂತೆ. ಇನ್ನೇನು ಮಾಡುವುದು? ಅವಸರದಲ್ಲಿ ಅಸ್ತವ್ಯಸ್ತವಾಗಿಯಾದರೂ ಉಡಿಗೆ-ತೊಡಿಗೆಯ ಸಿದ್ಧತೆ ಆಗಲೇಬೇಕಲ್ಲ! ಸುತ್ತಲೂ ನೋಡಿದ. ಗಜಚರ್ಮವೊಂದು ಕಂಡಿತು. ನಡುವಿಗೆ ಅದನ್ನೇ ಸುತ್ತಿಕೊಳ್ಳಲು ಆಧಾರ ಹುಡುಕಿದ. ಕೊರಳ ಸರ್ಪವು ಸಹಾಯಕ್ಕೆ ಬಂದಿತು. ವಸ್ತ್ರಧಾರಿಯಾಗಿ ಉಶ್ ಎಂದು ನಿಟ್ಟುಸಿರಿಡುವಷ್ಟರಲ್ಲಿ, ವಿಷ್ಣುವು ಗರುಡವಾಹನನಾಗಿ ಸಮ್ಮುಖದಲ್ಲಿ ನಿಂತೇ ಬಿಟ್ಟ. ಆದರೆ ಮುಂದಾದ ಅನರ್ಥ ಹೆಚ್ಚಿನದು. ಶಿವನು ತನ್ನ ನಡುವಿಗೆ ಆಧಾರವಾಗಿ ಕಟ್ಟಿದ ಸರ್ಪವು ವಿಷ್ಣುವಿನ ವಾಹನವಾದ ಗರುಡಪಕ್ಷಿಯನ್ನು ಕಂಡು ಹೆದರಿ ಓಡಿಬಿಡಬೇಕೆ? 'ಗಜಚರ್ಮ ಕಳಚಿ ಬಿದ್ದಾಗಿನ ಅಸಹಾಯ ಸ್ಥಿತಿಯ ಇಂಥ ಶಿವನಿಗೆ ನಮೋ ನಮಃ' ಎಂದು ಸುಭಾಷಿತಕಾರನ ಸ್ತುತಿ. ಎಂತಹ ಪರಿಶುದ್ಧ ನಗೆ! ಅನಿವಾರ್ಯತೆಯೇ ಇಲ್ಲಿಯ ನಗೆಯ ಮೂಲ. ಇನ್ನು ಆಂಗ್ಲ ಸಾಹಿತ್ಯದಲ್ಲಿ, ವಿಶಿಷ್ಟ ಸನ್ನಿವೇಶದಿಂದ ಉದ್ಭೂತವಾಗುವ ನಗೆಗೆ ಹಲವಾರು ನಿದರ್ಶನ ದೊರೆಯುವದುಂಟು. ಕೇವಲ ಮಾದರಿಗೆಂದು ಆಲಿವ್ಹರ ಗೋಲ್ಡ್‌ಸ್ಮಿಥ್‌ನ 'ಫ್ಯಾಮಿಲಿ ಪಿಕ್ಚರ್' ತೆಗೆದುಕೊಳ್ಳುವಾ. ವಿಕಾರ (ಧರ್ಮೋಪದೇಶಕ), ಅವನ ಹೆಂಡತಿ, ಹೆಣ್ಣುಮಕ್ಕಳಿಗೆ ತಮ್ಮ ಚಿತ್ರ ತೆಗೆಯಿಸಿಕೊಳ್ಳಬೇಕೆಂಬ ಆಕಾಂಕ್ಷೆ ಉತ್ಕಟವಾಗಿದೆ. ನೆರೆಹೊರೆಯವರಾದ ಫ್ಲ್ಯಾಂಬರೊ ಎಂಬವರು ತಮ್ಮ ಚಿತ್ರ ತೆಗೆಯಿಸಿಕೊಂಡು ಮೆರೆದಾಡಿದುದು ಅವರ ಅಸೂಯೆಗೆ ಇನ್ನಿಷ್ಟು ಕಾರಣ. ಅದಕ್ಕಾಗಿ ವಿಕಾರನು ಎಷ್ಟು ಹಣ ವೆಚ್ಚಮಾಡಲೂ ಸಿದ್ಧ. ಹೆಂಡತಿ ವ್ಹೀನಸ್ (ಪ್ರಣಯದೇವತೆ) ಆದಳು. ಚಿಕ್ಕಮಕ್ಕಳು ಮನ್ಮಥ (Cupids) ರಾದರು. ಆಲಿವ್ಹಿಯಾ ಎಂಬ ಮಗಳು ಅಮೇಝಾನ (ಅಶ್ವಾರೋಹಿಣಿ) ಆದರೆ ಇನ್ನೊಬ್ಬ ಮಗಳು ದನಗಾಹಿಣಿ ಆದಳಂತೆ! ಲಗ್ನವಾಗಲಿಚ್ಛಿಸುವ ಜಮೀನ್‌ದಾರನು (Squire) ಘನವಂತ ದೊರೆ ಅಲೆಕ್ಝಾಂಡರನ ವೇಷದಲ್ಲಿ ಆಲಿವ್ಹಿಯಾಳ ಪಾದಸೇವಕನಾದನಂತೆ! ಚಿತ್ರಕಾರನು ಇವರು ಕುಳಿತಂತೆ ಚಿತ್ರತೆಗೆದು ಬಣ್ಣಬೆರಸುವುದರಲ್ಲಿ ಹಿಂದುಮುಂದು ನೋಡಲಿಲ್ಲ. ಅಲ್ಲಲ್ಲಿ ಬಗೆಬಗೆಯ ಅಂದವಾದ ಹೂವಿನ ಚಿತ್ರತೆಗೆದು ಜರಿಹಚ್ಚಿದರೂ

ಮಕ್ಕಳ ಸದೃಢತೆಗಾಗಿ "ಬಗಸ ಬಾಲಾಮೃತ"

ಹಲ್ಲು ಬರುವಾಗ "ಎಕ್ಸನ್ಸ ಗ್ರಾಇಪ್" ಹೀಲರ್

ಜಂತು ಆದರೆ "ವರ್ಮ ಆಯಿಲ್"

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳವ ಔಷಧಗಳು.

The National Pharmacies & Pharmaceuticals Ltd., Dharwar

ಕೊನೆಗೊಂದು ಸಮಸ್ಯೆ ಎದ್ದಿತು. ಚಿತ್ರಪಟವನ್ನೆತ್ತಿ ಮನೆಯಲ್ಲಿ ಎಲ್ಲಿ ಇಡಬೇಕೆಂದು ತಿಳಿಯದಷ್ಟು ಅದು ದೊಡ್ಡದಾಯಿತಂತೆ! ಈ ಮಹತ್ತ್ವದ ಸಂಗತಿ ಒಬ್ಬರಿಗೂ ಏಕೆ ಮೊದಲೇ ಹೊಳೆಯಲಿಲ್ಲ?—ಎಂದು ವಿಸ್ಮಯವೆನಿಸಿತು. ಒಟ್ಟಿನಲ್ಲಿ ಚಿತ್ರಕ್ಕೆ ಹಣವನ್ನು ನೀರಿನಂತೆ ಸುರಿದರೂ, ಅದು ಮನೆ ಬಿಟ್ಟೀ ಹೊರಗೆ ಪ್ರದರ್ಶನಕ್ಕೆ ಬಾರದ್ದರಿಂದ, ವಿಕಾರನ ಕುಟುಂಬಕ್ಕೆ ಎಷ್ಟು ಹಳಹಳಿಯಾಗಿರಬೇಡ! ಗೋಲ್ಡಸ್ಮಿಥ್ ಕವಿ ಬೆರಗುಗೊಳಿಸುವ ಈ ಸನ್ನಿವೇಶವನ್ನು, ಬಾಟ್ಲಿಯಲ್ಲಿ ಹಾಕಿದ ರೇತಿಮೆಯ ದೊಡ್ಡ ಚಂಡಿಗೆ ಹೋಲಿಸಿದ. ಚಂಡು ಬಾಟ್ಲಿಯ ಸಣ್ಣ ಬಾಯಿಂದ ಹೊರಗೆ ಬರುವುದು ಕಠಿಣವಾದಂತೆ ಅದು ಮೊದಲಾದರೂ, ಒಳಗೆ ಹೇಗೆ ಹೋಗಿದ್ದೀತೋ ಎಂಬುದು ಆಶ್ಚರ್ಯಕಾರಕವಲ್ಲವೇ?—ಎಂದು ಉದ್ಗಾರ ತೆಗೆದ. ಎಂಥ ಗಂಭೀರಪ್ರಕೃತಿಯವರೂ ಪ್ರಸ್ತುತ ರಸವತ್ತಾದ ಕಾದಂಬರಿ ಓದುವಾಗ ನಗದೆ ವಿಧಿ ಇಲ್ಲ.

ತಾತ್ತ್ವಿಕ ದೃಷ್ಟಿಯಿಂದ ವಿಚಾರಿಸಲು ನಗೆ ಮಾನವಲೋಕದ ವಿಶಿಷ್ಟ ಸೊತ್ತಷ್ಟೆ! 'Man is a rational animal' ಎನ್ನುವ ಬದಲು, ನಗೆಯೇ ಮಾನವನನ್ನು ಇತರ ಪ್ರಾಣಿವರ್ಗದಿಂದ ಬೇರ್ಪಡಿಸುವ ಲಕ್ಷಣವೆಂದು ನಿರ್ವಿವಾದವಾಗಿ ಹೇಳಬಹುದು. ಹಾಯಿನಾ ಇಲ್ಲವೇ ಕಿರುಬ ಎಂಬದು ಅಪವಾದವೆಂದು ತಜ್ಞರು ಅಭಿಪ್ರಾಯಪಟ್ಟರೂ ಪ್ರಮಾದವಿಲ್ಲ.

ಕೊನೆಗೆ ಪ್ರತಿಕ್ಷಣ:ವಿವಿಧ ರೂಪತಾಳಿ ಪ್ರಗತಿಯ ಮಾರ್ಗದತ್ತ ಧಾವಿಸುವ ಇಂದಿನ ಜಗತ್ತಿನಲ್ಲಿ ನಗೆ ಇರದಿದ್ದರೆ ಮನುಷ್ಯನ ಬಾಳೇ ರಸಹೀನವಾಗುತ್ತಿತ್ತು. ಯಾವಾಗಲಾದರೂ ದರ್ಪದ ಮುಖಮುದ್ರೆಯಿಂದ ವ್ಯವಹರಿಸತೊಡಗಿದರೆ, ಸಾಮಾಜಿಕ ಜೀವನದಲ್ಲಿ ಅವನು ಅಸ್ಪೃಶ್ಯನೆನಿಸಿಕೊಳ್ಳನೇನು? ಹಾವ-ಭಾವದಿಂದಾಗಲಿ, ಮಾತಿನ ತಿರುವು ಮುರುವಿನ ಜಾಣ್ಮೆಯಿಂದಾಗಲಿ, ನಾಲಗೆಯ ಚಾಪಲ್ಯದಿಂದಾಗಲಿ ಸಹೋದರ-ಸಹೋದರಿಯರನ್ನು (ಲಗ್ನವಾದವನು ಹೆಂಡತಿಯನ್ನಂತೂ ಸರಿಯೆ!) ನಗಿಸುವ ಸಾಮಾನ್ಯ ಮಾನವನೇ ಇಂದು ಲೋಕಪ್ರಿಯನೆನಿಸುವಲ್ಲಿ ಸಂದೇಹವಿಲ್ಲ. ಅದೇ ವಿರುಮಣೆಯ ಮೇಲೆ ನಿಂತು ವಿರುದನಿಯಲ್ಲಿ ಎಷ್ಟು ಆವೇಶ ತಂದುಕೊಂಡು ಕಿರುಚುವವನಿಗೆ ಬೆಲೆ ಇಲ್ಲ. ಪ್ರಚಲಿತ ರಾಜಕಾರಣ ವಿಷಯವಾಗಿದ್ದರಂತೂ ಇಂತಹ ಉಪನ್ಯಾಸಕನನ್ನು ದೇವರೇ ಕಾಪಾಡಬೇಕು. ಯಾಕಂದರೆ ನಗೆಯ ಅಭಾವದ ಮೂಲಕ ಶ್ರೋತೃವರ್ಗ ಕ್ರಮೇಣ ಕರಗಹತ್ತುವದು—ಉಪನ್ಯಾಸಕ ಹಾಗೂ ವ್ಯವಸ್ಥಾಪಕ ಮಂಡಲಿಯನ್ನು ಹೊರತುಪಡಿಸಿ!

ಇಂತು ನಗೆಗೆ ಸುಸಂಸ್ಕೃತ ಸಮಾಜದಲ್ಲಿ ಮೇಲಿನ ಸ್ಥಾನ ಮೊದಲಿನ ಮಾನವಿದ್ದರೂ ಔಚಿತ್ಯವರಿತು ಅದಕ್ಕೆ ಮೊರೆಹೋಗದಿದ್ದರೆ ಅನರ್ಥಪರಂಪರೆ ಕಟ್ಟಿಟ್ಟದ್ದೆ! ಹೊಣೆಗೇಡಿತನದ ಮೂಲಕ ನಗೆ ಹೋಗಿ ಹೊಗೆ ಎಷ್ಟು ಸಲ ಆಗುವದಿಲ್ಲ? ಭಾವನಾ ಪ್ರಪಂಚವೆಲ್ಲ ನಗೆಯಲ್ಲಿ ಹುದುಗಿದೆ ಎಂದು ಸಾರುವ ಅನುಭಾವಿಗಳು ಅದಕ್ಕೆ ವಿವೇಕದ ಕಡಿವಾಣ ಹಾಕಿರೆಂದು ಬೋಧಿಸುವಲ್ಲಿ ಔಚಿತ್ಯವೇ ಇಲ್ಲವೆ!

"ಜಯಂತಿಗೆ" ಚಂದಾದಾರರಾಗಿ

ಕುಟುಂಬದ ಸಂಸ್ಕೃತಿಯ ಮಟ್ಟವನ್ನು ಹೆಚ್ಚಿಸಿರಿ!

ಕಾಮದಹನ

(ಒಂದು ಗೀತರೂಪಕ)

●

ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ

ಭೂಮಿಕೆಗಳು:

೧ ಕಾಮ	೬ ಶೃಂಗಿ
೨ ಇಂದ್ರ	೭ ವಸಂತ
೩ ಶಿವ	೮ ರತಿ
೪ ನಂದಿ	೯ ಉಮೆ
೫ ಭೃಂಗಿ	ದೇವಚಾರಣರು

ನಿವೇದಕ:– ರತಿ-ಕಾಮದೇವರತಿ ವೀಣಾವಿನೋದನದಿ
ಮಿಥದಲ್ಲಿ ಹಾಡುತಿರೆ ಅಲ್ಲಿಗೈದಿದ ಜವದಿ
ವ್ಯಥೆಯನರುಹಲು ಅಸುರಭಯಭರಿತ ಇಂದ್ರನ್
ಕಥಿಪೆವೈ ಅದನೆ ರೂಪಕದಿ ರಸಸಾಂದ್ರಂ!

[ದೇವಲೋಕದ ಒಂದು ನಿಲಯ— ರತಿದೇವಿ ವೀಣೆಯನ್ನು ನುಡಿಸುತಿದ್ದಾಳೆ— ಕೆಲ ನಿಮಿಷ ವಾದನ— ದೂರದಿಂದ ದೇವೇಂದ್ರನಾಗಮನದ ವಾದ್ಯ ವಿಜೃಂಭಣೆಯು ಮುಂದವಾಗಿ ಮಂದ್ರದಿಂದ ಮಧ್ಯಕ್ಕೆ ಸಮೀಪಿಸುತ್ತದೆ. ಗಮನವು ಅತ್ತ ಹರಿಯುತ್ತ ರತಿಯ ವಾದನವು ನಿದಾನವಾಗುವುದು.]

ಕಾಮ:– ನಲ್ಲೆ, ನಿಲ್ಲದೆ ನುಡಿಸುತಿರು, ರತಿ!
ವೀಣೆಯುಲಿಯಲಿ ರಾಗಿಣಿ!

ರತಿ:– ನಾಥ! ಮನ್ಮಥ! ನಿನ್ನ ಸೊಲ್ಲನೆ
ಮಿಡಿವೆನಾ ಕರದರಗಿಣಿ!

[ಇಬ್ಬರೂ ಕುಲುಕುಲು ನಗುವರು. ಐರಾವತದ ಹೆಜ್ಜೆ-ಗಂಟೆಗಳು ಸ್ಪಷ್ಟವಾಗುವವು.]

ಕಾಮ:– ಬಂದರಾರದು? ಏನು ಕಲಕಲ?

[ರತಿ ಎದ್ದು ಓಡಿಹೋಗಿ ನೋಡಿ ಬಂದ ನೂಪುರನಿನಾದ]

ರತಿ:– ಇಂದ್ರದೇವನೆ ಬಂದಿಹ!

ದೇವಚಾರಣರು:– ದೇವಾಧಿದೇವ ಸಕಲಸುರತ್ರಾಣ, ಅಮರಕುಲ ಸಾರ್ವಭೌಮ, ಷಡ್ಗುಣೈಶ್ವರ್ಯ ಸಂಪನ್ನ, ಶ್ರೀ ಮಹೇಂದ್ರ ಮಹಾರಾಜ ಭೋ ಪರಾಕು! (ಸ್ತುತಿಪಾಠದೊಡನೆ ಇಂದ್ರನ ಪ್ರವೇಶ.)

ಕಾಮ:– ದೇವ! ಏನಿದಪೂರ್ವ ಪರ್ವಣಿ!
ಸ್ವಾಗತವು ಸ್ವಾಗತವಹ!

ಇಂದ್ರ:– ಕಾಮದೇವ, ಬೇಡಿದು ಉಪಚಾರ
ನೇಮವಿಹುದು ಗುರುತರದ ವಿಚಾರ!

ಕಾಮ:– ಆಜ್ಞೆ! ಪ್ರಭೋ ಈ ಅನುಚರನು ಪ್ರ-
ತಿಜ್ಞೆ ಗೈವೆನ್ನೈ ಸಾಧಿಪೆ ಕ್ಷಿಪ್ರ!

ರತಿ:– ರಂಭಾಡಿದರೇ ರಂಭೆ–ಮೇನಕೆ?
ಸಂಭಾವಿಸಿ ಅವರನು ತರಬೇಕೆ?

ಇಂದ್ರ:– (ಹುಸಿನಕ್ಕು)
ಅವರೇನು ಮಹಾ?

ಕಾಮ:– (ಕೈತಟ್ಟಿ) — ಮಾಡಿದೆನೂ ಹಾ!
ಆವನದೋ ತಪ ನೀಡಿದೆ ದಾಹಾ!

ರತಿ:– (ನಕ್ಕು) ಅಥವಾ ಯಾವನಿಗೋ ಶಚಿಮೋಹಾ!

ಇಂದ್ರ:– (ಅಸಹನೆಯಿಂದ)
ಅಂಥದಲ್ಲ ಅಂಥದಲ್ಲ ಬಂದ ಘೋರ ಸಂಕಟ!
ಶಚಿಗೆ ಭೀತಿ ತಪದ ಮಹತಿ ಬಾಧಿಸಿಲ್ಲ, ಇದು ದಿಟ!
ದೇವಕುಲಕೆ ಮಾರಕನೈ ಶೂರ-ತಾರಕಾಸುರ
ಸ್ವರ್ಗದುರ್ಗ ಉರುಳಲಿದೆ ನಿರ್ಜರಬಲ ಜರ್ಜರ!

ಕಾಮ:– ಏತಕೆ ಭಯ? ಕಾತರತೆಯು ಮಾಣು ದೇವದೇವನೇ!
ವಜ್ರ ವ್ಯರ್ಥವಾದರೇನು? ಹೂಡು ಪುಷ್ಪಧನುವನೇ!

ರತಿ:– ಅಸುರನನುವ ಕಸಿವಿಸಿಗೊಳಿಸುವುದು ಕುಸುಮ-
ಸಾಯಕ,
ರತಿಯ ಶಕುತಿ ಅತಿಬಲವತಿ ಜತೆಗಿರೆ
ಋತುನಾಯಕ!

ಇಂದ್ರ:– ಬಲ್ಲೆನದನು, ಅದನೆ ಬಳಸಬಯಸಿ ಬಂದೆನಾ—
ಗೆಲುವುದಲ್ಲ ಕೊಲ್ಲುವುದೇ ಲೇಸು ದೈತ್ಯನಾ!

ಕಾಮ:– ಏನು ಸೇವೆ ಸಲಿಸಲಿ?

ರತಿ:– ಏನಾಣತಿ– ತಿಳಿಸಲಿ!

ಇಂದ್ರ:– ಸೇನಾನಿ ಸುರಬಲಕೆ ತಾನಾವನೂ ಇಲ್ಲ.

ಕಾಮ:– ನಾನಾಗಬಲ್ಲೆನೇ?

ಇಂದ್ರ:– ನೀನಲ್ಲ. ನೀನಲ್ಲ!

ರತಿ:– ನೀನ್ ಎನಗೆ ನಲ್ಲ! ಮುದ್ದಾಡು ಮಲ್ಲ!
(ಮೂವರೂ ನಗುವರು)

ಕಾಮ:– ಏನಾಣತಿ– ತಿಳಿಸಲಿ!

ರತಿ:– ಏನು ಸೇವೆ ಸಲಿಸಲಿ!

ಇಂದ್ರ:– ಸೇನಾನಿ ಸುರಬಲಕೆ ಯಾವನೂ ಇಲ್ಲದಕೆ
ಶಿವಶಕ್ತಿಸಂಯೋಗ ಸಂಭವಿಸಬೇಕೀಗ;
ಕಾರ್ತಿಕೇಯನ ಜನನ– ಅದುವೆ ದೈತ್ಯನ ಹನನ!
ಉನ್ನತ ಹಿಮಾದ್ರಿಯಲಿ ಸನ್ನುತ ಮಹೇಶಬಲಿ
ಉಗ್ರತಪವ್ಯಗ್ರನಿಹ—

ಕಾಮ:– ಸರಿ, ಏನು ಸನ್ನಾಹ?

ಇಂದ್ರ:– ಶಿವನ ಸನಿಯದಿ ಸೇವೆ-
ಯಲಿ ಸುಳಿವಳೈ ಚೆಲುವೆ,
ಹಿಮಶೈಲಬಾಲೆ– ಉಮೆ
ತ್ರಿಭುವನ ಮನೋರಮೆ!

ರತಿ:– (ಹಂಗಿಸಿ) ಅನಿತಿಹಳೆ ಅಪ್ರತಿಮೆ?

ಕಾಮ:– (ತಾಳ್ಮೆಗೆಟ್ಟು)

ಇರಲಿ ಬಿಡು ಕೇಳೊಮ್ಮೆ!

ಇಂದ್ರ:– ದಕ್ಷಾಧ್ವರ ಧ್ವಂಸದಲ್ಲಿ
ಹತಸತಿಯೇ ಉಮೆಯು ಅಲ್ಲಿ
ಚಂದ್ರಮಾವತಂಸನಲ್ಲಿ
ರತಳು, ಮರವ ಬಯಸಿ ಬಳ್ಳಿ!
ಸಖಿವಸಂತನೊಡನೆ. ಒಡನೆ
ಸಖಿರತಿಯನು ಕೂಡಿ ಓಡಿ
ಮೃಡನ ಮನವ ಮಥಿಸು, ಪೋಗು
ದೃಢದಿ ದೇವಕಾರ್ಯವೆಸಗು!

ಕಾಮ–ರತಿ:– ಪೋಗುವೆವು ಸಾಗುವೆವು, ತಮ್ಮಡಿಗೆ ಬಾಗುವೆವು
ನಮ್ಮೊಡೆಯ, ತಾಗುವೆವು ಕೃತಕಾರ್ಯರಾಗುವೆವು!

[ಹೋಗುಹೋಗುತ್ತ ದನಿ ತೇಲಿ ದೂರವಾಗುತ್ತ ನಡೆಯುವುದು. ನಡುವೆ ಸ್ಥಾನಾಂತರವನ್ನು ಸೂಚಿಸುವ ಸ್ವರರಚನೆ– ಅದರೊಳಗಿಂದ ಮತ್ತೆ ಕಾಮ-ರತಿಯರ ದನಿಗಳು ಮೂಡಿ ಬರುವುವು.]

ರತಿ:– ಬಂದೆವು ಇಕೊ ಹಿಮಪರ್ವತ

ಕಾಮ:– ನಿಂದಿದೆ ಅಕೊ ಶಿವದೈವತ!

ನಿವೇದಕ:– ನಂದಿ ಭೃಂಗಿ ಶೃಂಗಿ ಪ್ರಮಥರು
ವಂದಿಸಿ ಸ್ಥಾಣುವ ಸ್ತೋತ್ರವ ಪಠಿಪರು
ನಂದಿನಿ ಉಮೆ ತಾಪಸಿ ಸಿಂಗಾರದಿ
ಬಂದಳು ಪರವಶ ಪರಶಿವ ಸನ್ನಿಧಿ.

[ಹಿಮಾಲಯದಲ್ಲಿ ಶಿವನಾಶ್ರಮ. ಪ್ರಮಥಗಣಗಳ ವೃಂದಗೀತ]

ವೃಂದಗೀತ:– ಪಶುಪತಿ ಪರಶಿವ ಪರಿಪಾಹಿ

ಜಯಹರ ಶಂಕರ! ಪ್ರಲಯ ಭಯಂಕರ!
ಫಣೀಂದ್ರ ಭೂಷಣ! ತ್ರಿನೇತ್ರ ಭೂಷಣ
ಚಂದ್ರಮೌಳಿ ರುಂಡಮಾಲಿ
ವ್ಯಾಘ್ರಾಂಬರ ವಿಶ್ವಂಭರ
ತ್ರಾಹಿ ತ್ರಾಹಿ ತ್ರಾಹಿ! ಪರಶಿವ ಪರಿಪಾಹಿ!

ನಂದಿ:– ಮೌನವಿರಿ ಪ್ರಮಥರೇ
ಪ್ರಭು ಸಮಾಧಿಸ್ಥರೈ
ಪ್ರಣವ ಧ್ಯಾನಪ್ರವಣ
ಪದುಮಾಸನಸ್ಥರೈ! (ಶಂಖ ಊದುವನು.)
ಶಂಖ ಡಮರು ಘಂಟೆ ಶೃಂಗ
ಮಂದ್ರ ದುಂದುಭಿ ಮೃದಂಗ
ನಾದ ಬ್ರಹ್ಮವೊಳಗಲಿ
ಓಂಕಾರದ ಏಕತಾನ
ಧ್ಯಾನರಂಗ ಬೆಳಗಲಿ
ಮೋಹ ಮಾಯೆ ಎಲ್ಲ ಸಾಯೆ
ಜ್ಯೋತಿ ಲಿಂಗ ತೊಳಗಲಿ! (ಶಂಖ ಊದುವನು)

[ಹಾಡಿನಲ್ಲಿ ಸೂಚಿತವಾದ ವಾದ್ಯಗಳೆಲ್ಲ ಸ್ವರಸಂವಾದದಲ್ಲಿ ಮೊಳಗುತ್ತ ಕೇಳಿಸುವ ವೃಂದವಾದನವು ನಡೆಯುವುದು]

ನಿವೇದಕ:– ಕಾಮವಸಂತರು ಉಮೆಯನು ಕಂಡರು
ಹೂಡಲು ಹೊಂಚನು ರತಿಯೊಡಗೊಂಡರು.

ಕಾಮ:– ಕಾಮನ ಶರಸಂಧಾನಕೆ ಎರಗನಾವ ವೀರ?
ಕ್ಷೇಮದ ಅನುಸಂಧಾನಕೆ ಕರಗನಾವ ಧೀರ?

[ನೂಪುರಗಳ ಗೆಜ್ಜೆಯುಲಿಯು ಸಮೀಪಿಸುವುದು ಕೇಳಬರುತ್ತದೆ.]

ಕಾಮ:– ರೂಮು ಝೂಮು ರೂಮು ಝೂಮು
ಯಾರ ಮಂಜುನೂಪುರ?

ವಸಂತ:– ಇನ್ನಾರದು? ಶೈಲಬಾಲೆ ಬಹಳು ನಾತಿದೂರ!

ಕಾಮ:– ಅವಳ ಭ್ರೂವಿಲಾಸವೇ; ನನ್ನ ಬಿಲ್ಲುಗಾರಿಕೆ–

ವಸಂತ:– ಶಿವನ ಸನಿಯ ಸೇರೆ ಉಮೆಯು ಸಾರ್ಥಕಳಭಿಸಾರಿಕೆ!

ಕಾಮ:– ನಡೆ ನಲ್ಲೆ, ಹುಲ್ಲೆಯಂದದಿ ಓಡು ಉಮೆಯೆಡೆಗೆ
ಸಖನೇ ವಸಂತನೇ, ನೀಡು ಸೊಬಗಿನ ಕೊಡುಗೆ!

ವಸಂತ:– ನೋಡುತಿರುವಂತೆ ಕಡು ಕುಳಿರ ಬೆಟ್ಟದಲಿ
ಬೀಡು ಬಿಟ್ಟಿತು ಬೆಡಗು ಸುಗ್ಗಿ ಸಗ್ಗದಲಿ!

[ವಸಂತಾಗಮನಸೂಚಕ ವಾದ್ಯಸಂಗೀತ]

ಶೃಂಗಿ:– ಏನಿದು ಚಿತ್ರ....ಭೃಂಗಿ ವಿಚಿತ್ರ!

ಭೃಂಗಿ:– ಶಿಶಿರ ವಸಂತ!....ಫಾಲ್ಗುಣ ಚೈತ್ರ!

ನಂದಿ:– ಸುಮ್ಮನಿರಿ ಪ್ರಮಥರೇ
ಪ್ರಭು ಸಮಾಧಿಸ್ಥರೈ (ಶಂಖ ಊದುವಾಗ—)

ಭೃಂಗಿ-ಶೃಂಗಿ:– ನಾವು ಅಸ್ವಸ್ಥರೈ!
ಮೋಹಮದ ತ್ರಸ್ತರೈ!

ನಂದಿ:– (ಗದ್ದರಿಸಿ) ಸುಮ್ಮನಿರಿ! ನೆನಪಿಡಿರಿ
ಹರನ ಹಣೆಗಣ್ಣನುರಿ! (ಶಂಖ ಊದುವನು)

ರತಿ:– ನೋಡು ಉಮೆ ನವೋನವಾ
ವಾಸಂತಿಕ ವೈಭವಾ!

ಉಮೆ:– ಅಹುದು ಗೆಳತಿ! ಏನಿದು ಮಧು-
ಮಾಸ ಮಹತಿ! ಮೀರಿದೆ ಮಿತಿ!
ಮುಗುದವು ಮತಿ!
ಶಿವನ ಅಟ್ಟಹಾಸದಂತೆ
ತಾಂಡವದುಲ್ಲಾಸದಂತೆ
ಸುಗ್ಗಿ ಹಿಗ್ಗಿ ಹಬ್ಬಿದೆ;
ಭೂಮಿ ವ್ಯೋಮ ತಬ್ಬಿದೆ!

ರತಿ:– ಚೂತ ಕುಸುಮ ಕೋತು ಬಂತು ಅರಸಿದುಂಬಿದಂಡು!

ಉಮೆ:– ಕೋಗಿಲೆಗಳ ಕುಕಿಲನಣಕಿಸುವುವು ಗಿಳಿಯ ಹಿಂಡು!

ನಂದಿ:– (ವಿನಯದಿಂದ) ಸುಮ್ಮನಿರಿ ತಾಯದಿರೆ, ಶಿವಶಾಪ,
ಇಲ್ಲದಿರೆ!

ರತಿ:– (ನಕ್ಕು) ತಾಯದಿರು ಯಾರಿಲ್ಲ? ಉಮೆಗೆ ತಾಯ್ತನ ಬರಲಿ!

ಉಮೆ:– (ಮುನಿಸಿನಿಂದ) ಚೀ: ಗೆಳತಿ ದುಡುಕದಿರು!
ಆ ಶಿಲಾಸ್ಥಂಡಿಲದಿ
ಅಲತಾ ಮಂಟಪದಿ
ಶಿವನಕೋ ಧ್ಯಾನಸ್ಥ,
ಶಾಂತ ವಸ್ತುಸಮಸ್ತ!
— ನಂದಿಭದ್ರ!

ನಂದಿ:– ನಗನಂದಿನಿ,
ಉಮೆ:– ಶಿವಸೇವೆಗೆ ಸಮ್ಮತಿಯೇ?
ನಂದಿ:– ತಡೆಯಿರಿ ಪ್ರಭು ಕಣ್ತೆರೆದರೆ,
ಕೇಳಿಬರುವೆ, ಶ್ರೀಮತಿಯೇ!

[ನಂದಿ ಒಳಗೆ ಹೋಗಿ ಶಿವನೊಡನೆ ಮಾತನಾಡುವಾಗ, ಹಿನ್ನೆಲೆಯಲ್ಲಿ ಕಾಮ-ವಸಂತರು ದೂರದ ನೆಲೆಯಲ್ಲಿ ಹಾಡುವರು]

ವಸಂತ:– ಪ್ರೇಮದ ಅನುಸಂಧಾನಕೆ ಕರಗನಾವ ಧೀರ?
ಕಾಮ:– ಕಾಮನ ಶರಸಂಧಾನಕೆ ಎರಗನಾವ ವೀರ?
ಶಿವ:– (ಸಮಾಧಿ ಸಮಾಪ್ತಿಸೂಚನೆ) ಹರಿ, ಓಂ ತತ್ಸತ್!
ಹರಿ ಓಂ ತತ್ ಸತ್!
— ನಂದಿಭದ್ರ!

ನಂದಿ:– ನಮೋ ರುದ್ರ!
ಶಿವ:– ಹೊರಗೇನು ಮೆಲುಮಾತು? ಆರವರು ಹೇಳು!
ನಂದಿ:– ಪಾದ ಪರಿಚರ್ಯಕ್ಕೆ ಪಾರ್ವತಿಯು ಕಾದಿಹಳು.
ಶಿವ:– ಬರಬಹುದು ಒಳಗೆ ಬಿಡು!
ನಂದಿ:– ಬನ್ನಿ ತಾಯೆ, ಬನ್ನಿ ಇತ್ತ
ಸುಪ್ರಸನ್ನ ದೇವಚಿತ್ತ
ತಮ್ಮ ಗೆಳತಿ,—
ಉಮೆ:– ಪೋದಳೆತ್ತ?
ನಂದಿ:– ಪೋದಳೆಲ್ಲೊ ಉಳಿಯಲತ್ತ!
ಕಾಮ:– ಸಖನೆ ವಸಂತ, ತಪದ ದುರಂತ
ನಮ್ಮ ನಾಟಕವ ನೋಡುವಿ ಅಂತ!
ವಸಂತ:– ಉಮೆ ತಲೆಬಾಗಿ–ವಂದನೆಗಾಗಿ
ಶಿವಪದಕೆರಗಲು ಉದುರಲು ಹೂಗಳು
ಕೆನ್ನೆಗೆಂಪರಳೆ– ನಾಚಿ ರತಿ ಮರಳೆ
ರತಿ:– ಅಡಿಗೆರಗಿದ ಚಂದ್ರವದನ
ಕಂಡು ಮುಡಿಯ ಚಂದ್ರಮ್ಲಾನ–
ಸುರಸುಂದರಿ ನೀ ನಿರುಪಮೆ
ಅಹುದು ಶಿವಗೆ ಸರಿ ಪ್ರಿಯತಮೆ!
ಉಮೆ:– (ಶಿವನಲ್ಲಿ) ಓಂ ನಮಃ ಶಿವಾಯ ಓಂ ನಮಃ ಶಿವಾಯ!
ಶಿವ:– ಬಯಸಿದ ವರ ಫಲಿಸಲಿ
ಬಯಕೆಯ ವರ ಲಭಿಸಲಿ!

ವಸಂತ:– ಓ ಮದನ ಇದೆ ಹದನ ಸಮಯ ನಿನಗೆ–
ಹೂ ಬಾಣ ಕೈಗೆ ಹೂಡು, ಕಿವಿಗೆ ಬಿಲ್ಲು ನೆಗೆ!

[ಕಾಮನ ಶರಸಂಧಾನದ ಸೂಚನೆ– ಯೋಗ್ಯ ಸ್ವರರಚನೆ]

ಶಿವ:– (ಆಶ್ಚರ್ಯ)
ಏನಿದೇನಿದು ದಿಗಿಲು! ಎಂದು ಇಲ್ಲದ ಭುಗಿಲು.
ಎದೆಯೆ ಝಲ್ಲೆನ್ನುತಿದೆ! ಜಪದ ಸರ ಜಾರುತಿದೆ!
ಉಮೆ:– (ವಿನಯ) ಜಪಮಾಲೆ ಇದ ಕೊಳ್ಳಿ!
ಬೆರಳು ಸೋಂಕಿತು ಕ್ಷಮಿಸಿ!
ರತಿ:– (ದೂರದಲ್ಲಿ) ತಪಕೆ ಇಟ್ಟಿತು ಕೊಳ್ಳಿ! ತರಳೆ ಸ್ಪರ್ಶದಿ ರಮಿಸಿ!
ಶಿವ:– (ಗಾಬರಿಯಿಂದ) ಈ ಸ್ವರ್ಗ! ರಸವರ್ಷ! ಸ್ಮೈರಿಸೆನು,
ಸಹನೆ ಹುಸಿ!
ಕಾಮ:– ಪಂಚಪ್ರಾಣದಾಹುತಿ, ಪಂಚಬಾಣರತಿ
ಸ್ಮರಸಾಯುಧನಾಗಿರುತಾ ಹರ ಸಾಪಧನೆಂತು ವೃಥಾ!
ಶಿವ:– (ಕ್ಷೋಭೆಗೊಂಡು)
ತಾಪಸಕೆ ತಾಮಸವು ಕವಿವುದೆಂತು?
ಆರವನು? ಮನ್ಮಥಾ! ಲಯವಾಗು ಸರ್ವಥಾ!
ವಸಂತ – ರತಿ:– ಸಂಹರಿಸು ಕ್ರೋಧವನು
ಶಪಿಸದಿರು, ಶಿಶು ಅವನು!

[ಶಿವನ ಹಣೆಗಣ್ಣಿನಿಂದ ಹೊರಚೆಲ್ಲಿದ ಅಗ್ನಿಯು ಆಟೋಪದ ಸೂಚನೆ— ಆಕಾಶದಲ್ಲಿ ಉತ್ಪಾತದ ಹಾಹಾಕಾರ— ಸಿಡಿಲಗರ್ಜನೆ]

ನಂದಿ:– ಓ ಭೃಂಗಿ! ಓ ಶೃಂಗಿ!
ಶೃಂಗಿ-ಭೃಂಗಿ: ಏ, ನಂದಿ! ಏನಂದಿ?
ಏನು ರುದ್ರಪ್ರಕೋಪ?
ನಂದಿ:– ಘಾತ ಉತ್ಪಾತ ಘನ!
ಶೃಂಗಿ:– ಶಿವನು ಅಂತರ್ಧಾನ!
ಭೃಂಗಿ:– ಆಕಾಶ ಪಾತಾಲ ಅಗ್ನಿ ಜ್ವಾಲೋಡ್ಡಾಣ!
ನಂದಿ:– ಸ್ಮರನ ವಿಸ್ಮರಣವಿದು ಮದನದಮನ ಮಹಾಂತ!
ಶೃಂಗಿ-ಭೃಂಗಿ:– ಕಾಮದಹನ ದುರಂತ!
ಕಾಮದಹನ ದುರಂತ!
ರತಿ:– (ವಿಲಾಪ) ಹೃದಯರಮಣ ಅಗಲಿದೆಯಾ ಪ್ರಿಯ ಸಖಿಯಾ
ರತಿಯನುಳಿದು ತೊಲಗಿದೆಯಾ ಹೇ ಅದಯಾ!
ಅಂತಪಾರವಿಲ್ಲದಂಥ
ಅಂಧಕಾರಮಯ ದಿಗಂತ
ಎಂತೊ ಎಂದೊ ಮಿಲನ ಪ್ರಿಯಾ!
ನಿರುಕಿಸೆಯಾ?
ಶಿವ:– ಶೋಕಿಸದಿರು ಹೇ ಭೀರುಬಾಲಿಕೆ,
ಲೋಕಚರಿತ ಕಾಮನದೇ ಬಾಳಿಕೆ!
ಅಂಗವಾದುದಂಗಾರವು, ಆತನೆ
ಅನಂಗ, ಅಂಗಜ ಅನಂತ ಚೇತನೆ!

ಪುತ್ರವತಿ *

(ಸಣ್ಣ ಕತೆ)

ಶ್ರೀ. ಚಿದಂಬರ ಕಾಶೀನಾಥ ಜೋಶಿ
ಜ್ಯೂನಿಯರ್ ಬಿ. ಎಸ್‌ಸಿ.
ಲಿಂಗರಾಜ ಮಹಾವಿದ್ಯಾಲಯ, ಬೆಳಗಾಂವಿ

ಹೆಣ್ಣುಜೀವ ಸ್ವಭಾವವಾಗಿ ಬಯಸುವುದು ಎರಡನ್ನು : ಒಂದು ಪುರುಷಪ್ರೇಮ; ಇನ್ನೊಂದು ಸಂತಾನಸೌಖ್ಯ! ಇವೆರಡರಲ್ಲಿ ಯಾವುದೇ ಒಂದರ ಕೊರತೆಯಾದರೂ ಹೆಣ್ಣಿನ ಹೃದಯವು ಜ್ವಾಲಾಮುಖಿಯಂತಾಗುವುದು !

"ಟ್ಯಾಂಽ ಟ್ಯಾಂಽಽ ಟ್ಯಾಂಽಽಽ" ಚು, ಚು, ಚು ! ಎಷ್ಟು ಅಳುವಿ ಮಗೂ, ಇನ್ನು ನಿಲ್ಲಿಸು ! ನಿನ್ನ ಹೊಟ್ಟೆ ತುಂಬಲಿಲ್ಲವೇ ? ಹಾಗಾದರೆ ಹಾಲಿನ ಶೀಸೆಯನ್ನೇಕೆ ಬಿಟ್ಟೆ ಮತ್ತೆ ? ಹಾಲು ಬಿಸಿಯಾಗಿತ್ತೇನು, ಇಲ್ಲವೆ ತಣ್ಣಗಿತ್ತೊ? ನನಗೇನೋ ಅದರ ಪ್ರಮಾಣವೇ ತಿಳಿಯಲೊಲ್ಲದು. ನಾನು ಅಜ್ಞಾನಿಯು; ನೀನು ಮಾತನಾಡಲರಿಯದವನು. ಚೆನ್ನಾಗಿಯೇ ಕೂಡಿದೆ ನಮ್ಮ ಜತೆ! ನಿನ್ನನ್ನು ಕಂಡು ಮರುಕವೆನಿಸುತ್ತದೆ ನನಗೆ; ಆದರೆ ನಿನ್ನ ಹೃದಯದಲ್ಲಿ ನಾನು ಪ್ರವೇಶಿಸಲಾರೆನು. ನನ್ನ ನಿನ್ನ ಜಾತಿಯು ಒಂದೇ.... ಪುರುಷಜಾತಿ ! ಇದೇ ತಪ್ಪಿದೆ. ನನ್ನ ಮಾಡು-ಮುಟ್ಟುವುದು ನಿನಗೆ ಸರಿಹೋಗಲಾರದೆಂಬುದನ್ನು ನಾನು ಒಪ್ಪುವೆ; ಆದರೆ ದೊರೆಯೇ, ಈ ಬಗೆಯ ದುರ್ದೈವವನ್ನು ಕಟ್ಟಿಕೊಂಡು ಹುಟ್ಟಲು ನಾನೇನು ಹೇಳಿದ್ದೆನೇ ನಿನಗೆ ?

ಅಳುವನ್ನು ಮತ್ತೆ ಪ್ರಾರಂಭಿಸಿದೆಯಾ ! ಮಗೂ ಕುಳಿತಾಗಲೊಮ್ಮೆ, ಎದ್ದಾಗಲೊಮ್ಮೆ ಹೀಗೆ ಕಿರುಚಿದರೆ ನನ್ನ ಗತಿಯೇನು? ತಾಯಿ-ತಂದೆಯರೊಳಗಿನ ಅಂತರವನ್ನು ನೀನು ಬೇಗನೆ ಅರಿತುಕೊಳ್ಳಬೇಕು. ಅಳುವ ನಿನ್ನ ಚಾತುರ್ಯ ತಾಯಿಯ ಬಳಿ ನಡೆಯುವುದು. ನನ್ನ ಕಡೆಗೆ ಬೇಕಾದರೆ ತಿಂಡಿಬೇಡು, ಚೆಂಡು-ಬತ್ತಾಸುಗಳನ್ನು ಬೇಡು, ಕೊಡುವೆ; ಆದರೆ ಈ ನಿನ್ನ 'ಟ್ಯಾಂ ಟ್ಯಾಂ' ಮಾತ್ರ ಬೇಡವಪ್ಪಾ !....

....ಛೀ ಛೀ ಛೀ ! ನೀನೆಲ್ಲಿ ಕೇಳುವಿ ? ಈ ಶೀಸೆಯನ್ನು ತೆಗೆದುಕೊ .... ಬೇಡವೇ ? ಬಿಡುಬಿಡು. ಆ ಚೆಂಪಪ್ಪನನ್ನು ನೋಡು. ಅವನ ಬಳಿಯಲ್ಲಿಯ ತಾರೆಯನ್ನು ನೋಡು, ಹೇಗೆ ಮಿನುಗುತ್ತದೆ— ನಿನ್ನ ತಾಯಿಯಂತೆ! ನೋಡುವುದಿಲ್ಲವೇ? ಹೂಂ, ಇರಲಿ ಬಿಡು. ನೀನೀಗ ನಿದ್ರೆಹೋಗು ಹಾಗಾದರೆ ! ತೊಟ್ಟಿಲಲ್ಲಿ ಮಲಗಿಸಿ ತೂಗುವೆನು ಆದರೆ ಜೋಗುಳಗಳು ಮಾತ್ರ ನನಗೆ ಬರಲಾರವಪ್ಪಾ. ಬೇಕಾದರೆ ರಾಮರಕ್ಷೆಯನ್ನು ಅನ್ನುವೆನು ನೋಡು. 'ಅಸ್ಯ ಶ್ರೀರಾಮರಕ್ಷಾ— '.

ಅಯ್ಯೋ, ಇದೇನೋ ! ಒಮ್ಮೆಲೇ ಚೀರುತ್ತೀಯೇಕೆ ! ಸರಿ, ತೊಟ್ಟಿಲನ್ನು ಒದ್ದೆ ಮಾಡಿರುವೆಯೆಂದು ಕಾಣುತ್ತದೆ. ನಿನ್ನನ್ನು ಒಳಗೆ ಮಲಗಿಸುವ ಮೊದಲು ಹಾಸಿಗೆಯ ಮೇಲೆ ಕೈಯಾಡಿಸಿ ನೋಡತಕ್ಕದ್ದು. ಅಷ್ಟು ಬುದ್ಧಿಯು ನನಗೆಲ್ಲಿ ಬರಬೇಕು ? ನಮ್ಮದು ಹೀಗೆಯೇ ನಡೆಯತಕ್ಕದ್ದು. ಇದಕ್ಕೇ ನೀನು ಹೊಂದಿಕೊಂಡು ಹೋಗಬೇಕಾಗಿದೆ. ನಿನಗೊಬ್ಬ ಹಿರಿಯ ಅಕ್ಕನಿದ್ದರೆ ಒಳ್ಳೆಯದಾಗುತ್ತಿತ್ತಲ್ಲವೇ ? ಆದರೆ ನೀನೇ ಹಿರಿಯನಾಗಿ ಹುಟ್ಟಿದೆಯಲ್ಲ ? ಇಷ್ಟು ದಿನಗಳ ವರೆಗೆ ತಾಯಿಯನ್ನು ದಾರಿಕಾಯಹಚ್ಚಿದಿ; ನಿನಗೇನೂ ಎನಿಸಲಿಲ್ಲವೇ ಆ ಬಗ್ಗೆ ? ಎಷ್ಟು ನಿರ್ದಯನಾಗಿ ವರ್ತಿಸಿದೆಯಲ್ಲಾ !

ಇಡೀ ಮನೆತನವೇ ನಿನಗಾಗಿ ಕಾದಿತ್ತು. ಮೊಮ್ಮಗನ ಮುಖ ಕಾಣಬೇಕೆಂದು ಬಹುದಿನಗಳ ವರೆಗೆ ಜೀವಹಿಡಿದು, ನನ್ನ ತಾಯಿಯು, ಕಡೆಗೆ ನಿರಾಶೆಯ ಅಂಧಕಾರದಲ್ಲಿ ಮಾಯವಾದಳು. ಬಳಿಕ ಉಳಿದೆವು ನಾವಿಬ್ಬರು : ನಾನು ಮತ್ತು ನಿನ್ನ ತಾಯಿ. ನನಗೆ ಎರಡನೆಯವರ ಸಂಪರ್ಕವು ಬೇಕಾದಲ್ಲಿ ಅಡುಗೆಯ ಮನೆಗೆ ಹೋಗಬೇಕು. ಅವಳಿಗೆ ಯಾರಾದರೂ ಸಂಗಡಿಗರಿರುವರೆಂದೆನಿಸಿಕೊಳ್ಳಬೇಕಾದರೆ ಹೊರಗಿನ ಕೋಣೆಯಲ್ಲಿ ಹಣಿಯಿಕ್ಕಬೇಕು.

ನಾನು ಹೊರಬಿದ್ದು ಹೋದರೆ ಆಯಿತು; ಆರೇಳು ಗಂಟೆಗಳ ವರೆಗೆ ನಿಶ್ಚಿಂತೆ. ಅಷ್ಟು ವೇಳೆಯ ವರೆಗೆ ಅವಳು ಹೇಗೆ ಕಾಲಹಾಕುತ್ತಿದ್ದಳೋ, ದೇವರೇ ಬಲ್ಲ. ಪುಸ್ತಕದಲ್ಲಿಯ ಒಂದೆರಡು ಪ್ರಕರಣಗಳನ್ನು ಓದುತ್ತಿರಬಹುದೆಂದು ಬಗೆದರೆ, ಓದಿದ ಗುರುತು ಇದ್ದಲ್ಲಿಯೇ ಇರುತ್ತಿತ್ತು. ನಿದ್ರಿಸಿರಬಹುದೆಂದು ಊಹಿಸಿದರೆ, ಅವಳ ಕಣ್ಣುಗಳು ಎಷ್ಟೋ ಸಾರೆ ಕೆಂಪಾಗಿಯೇ ತೋರುತ್ತಿದ್ದುವು. ನನ್ನ ಆಗಮನವನ್ನು ತಿಳಿದ ಕೂಡಲೆ ಅವಳು, ತನ್ನ ಮುಖಮುದ್ರೆಯನ್ನು ವಿಕಸಿತಗೊಳಿಸಲು ಪ್ರಯತ್ನಿಸುತ್ತಿದ್ದಳು ಆದರೆ ಅದು ಎಳೆದು ತಂದ

* [ಶ್ರೀಯುತ ಶಿವರಾಮ ಮಹಾದೇವ ಜೋಶಿಯವರು ಮರಾಠಿಯಲ್ಲಿ ಬರೆದ 'ಪುತ್ರವತಿ' ಎಂಬ ಕತೆಯ ಅನುವಾದ.]

ಚಂದ್ರಕಾಂತಿಯಿರುವುದೆಂಬುದನ್ನು ನಾನು ಆಗಲೇ ತಿಳಿಯುತ್ತಿದ್ದೆ. ಮಲ್ಲಿಗೆಯ ಮೊಗ್ಗೆಯು ತಾನಾಗಿಯೇ ಅರಳದಿದ್ದಾಗ ಬೆರಳುಗಳಿಂದ ಅದರ ಪಕಳಿಗಳನ್ನು ವಿರಲಗೊಳಿಸುವಂತೆಯೇ ಅವಳ ರೀತಿಯಿರುತ್ತಿತ್ತು.

ಮಗೂ, ನಿನ್ನ ತಾಯಿಯೆಂದರೆ ನನ್ನ ಪಾಲಿಗೊಂದು ಸಮಸ್ಯೆಯೇ ಆಗಿದ್ದಳು. ನನಗೆಂದೂ ಅದನ್ನು ಪೂರ್ತಿಗೊಳಿಸಲಾಗಲಿಲ್ಲ. ಅವಳು ಸಕ್ಕರೆಯಂತೆ ಸಿಹಿಯೂ ಆಗಿದ್ದಳು, ಬೇವಿನಂತೆ ಕಹಿಯೂ ಆಗಿದ್ದಳು ಅವಳೊಡನೆ ಹದಿನೈದು ವರುಷಗಳ ಕಾಲ ಬಾಳುವೆ ಮಾಡಿದೆನು. ಇಷ್ಟೇ ಅವಧಿಯಲ್ಲಿ ಅವಳು ನನ್ನನ್ನೆಷ್ಟೋ ಸಾರಿ ಹೂವಿಗಿಂತ ಹಗುರಾಗಿಯೂ, ಸೀಸಿಗಿಂತ ಜಡವಾಗಿಯೂ ಮಾಡಿದಳು.

ಅವಳ ಸ್ವಭಾವವು ಒಂದು ನದಿಯಂತಿತ್ತು. ಪ್ರವಾಹ ತುಂಬಿ ಬಂದಾಗ ನೀರು ಕಲಕುರಾಡಿಯಾಗುವುದು; ಶರತ್ಕಾಲವು ಬರಲು ಪ್ರಸನ್ನ–ನಿರ್ಮಲವಾಗಿ, ತನ್ನ ಅಂತರಂಗದಲ್ಲಿ ಎರಡನೆಯವರ ಪ್ರತಿಬಿಂಬವನ್ನು ತೋರಿಸುವುದು. ಎಂಟೆಂಟು ದಿನಗಳ ವರೆಗೂ ಅವಳ ಪ್ರಕ್ಷೋಭವನ್ನೂ ಮೌನವನ್ನೂ ತಾಳಿರುವೆನು; ಆದರೆ ಒಮ್ಮೆ ಅರಳಿದಳೆಂದರೆ ಸಾಕು, ಇಡೀ ಮನೆಯೆಲ್ಲವೂ ಸುಗಂಧ–ಸೌರಭ್ಯಗಳಿಂದ ತುಂಬಿ ಚೈತನ್ಯಮಯವಾಗುತ್ತಿತ್ತು. ಇಂತಹ ವೇಳೆಯಲ್ಲಿ ಭ್ರಮರದಂತೆ ಅವಳು ನನ್ನ ಸುತ್ತಲೂ ಸುತ್ತುತ್ತಿದ್ದಳು, ಮತ್ತು ನನ್ನ ಭವಸಾಗರದಲ್ಲಿ ಶೃಂಗಾರನೌಕೆಯಾಗುತ್ತಿದ್ದಳು.

ನಿಜವಾಗಿಯೂ ಅವಳ ವಿಷಾದಕ್ಕೆ ಸೀಮೆಯಿರಲಿಲ್ಲ. ಆನಂದಕ್ಕೆ ಪಾರವಿರಲಿಲ್ಲ.

ಯಾವುದೊಂದು ಸಂಗತಿಯನ್ನು ಸಹಜವಾದ ರೀತಿಯಲ್ಲಿ ಸ್ವೀಕರಿಸುವುದು ಇಲ್ಲವೆ ನಿರಾಕರಿಸುವುದು ಅವಳಿಗೆ ಕಡೆಯ ವರೆಗೂ ಸರಿಹೋಗಲಿಲ್ಲ. ಮನೆಯ, ಹೊರಗಿನ ತೀರ ಕ್ಷುಲ್ಲಕ ಸಂಗತಿಯನ್ನೂ ಅವಳು ಗಂಭೀರವಾಗಿ ಮನಸ್ಸಿಗೆ ಹಚ್ಚಿಕೊಳ್ಳುತ್ತಿದ್ದಳು. ಎಂತಹ ಕ್ಷುದ್ರಶಲ್ಯವನ್ನು ಕೂಡ ಅವಳು ತಿಕ್ಕಿ ಹದನುಮಾಡಿ ತನ್ನ ಹೃದಯದಲ್ಲಿ ಚುಚ್ಚಿಕೊಳ್ಳುತ್ತಿದ್ದಳು. ಬಳಿಕ ಹಗಲಿರುಳೂ ಚಡಪಡಿಸುತ್ತಿದ್ದಳು! ತಾನೂ ಅಸ್ವಸ್ಥಳಾಗುತ್ತಿದ್ದಳಲ್ಲದೆ,ಎರಡನೆಯವರಿಗೂ ಸಮಾಧಾನದಿಂದ ಒಂದು ತುತ್ತು ಅನ್ನವನ್ನೂ ತಿನ್ನಗೊಡುತ್ತಿರಲಿಲ್ಲ. ಅವಳು ಯಾವಾಗ ಹಾಗೂ ಏತರಿಂದ ಬದಲಾಯಿಸಬಹುದೆಂಬುದನ್ನು ಪ್ರತ್ಯಕ್ಷ ಬ್ರಹ್ಮದೇವನಿಗೂ ಹೇಳಲು ಬರುವಂತಿರಲಿಲ್ಲ. "ನಿನ್ನ ಹೆಂಡತಿಯದು ಬಹಳ ಕಠಿಣವಿದೆಯಪ್ಪಾ!" ಎಂಬ ಪಲ್ಲವಿಯನ್ನು ಹಾಡುತ್ತ ಹಾಡುತ್ತಲೆ, ನನ್ನ ತಾಯಿಯು ಕೈಲಾಸವಾಸಿಯಾದಳು.

ನಿಜವೆಂದರೆ ಅವಳ ಸ್ವಭಾವದ ಒಲವೇ ನನಗೆ ಕಡೆಯ ವರೆಗೆ ತಿಳಿಯಲಿಲ್ಲ. ಮಗೂ, ಒಂದು ವೇಳೆ ನೀನು ಯೋಗ್ಯ ಸಮಯದಲ್ಲಿ ಹುಟ್ಟಿ ಬಂದಿದ್ದರೆ, ಅವಳ ಸ್ವಭಾವವು ಹೀಗೆ ಏಕಾಂತಿಕವಾಗುತ್ತಿರಲ್ಲಿಲ್ಲ. ಅವಳು ನಿನ್ನ ಧ್ಯಾನದಲ್ಲಿಯೇ ಮಗ್ನಳು ನಿನ್ನ ಹೊರತು ಅವಳಿಗೆ ಜೀವನವು ಶೂನ್ಯವಾಗಿತ್ತು. ನನ್ನ ಯಾವನೊಬ್ಬ ಗೆಳೆಯನು ಕುಟುಂಬಸಮೇತನಾಗಿ ಮನೆಗೆ ಬಂದರೆ, ಹಾಗೂ ಅವನದೊಂದು ಮುದ್ದುಮಗುವು ಮೊಗಸಾಲೆಯಲ್ಲಿ ಅಡ್ಡಾಡತೊಡಗಿದರೆ, ತನಗಾದ ಬ್ರಹ್ಮಾನಂದವನ್ನು ಅವಳಿಗೆ ತಡೆಯಲಾಗುತ್ತಿರಲಿಲ್ಲ. ಆ ಮಗುವು ತಾಯಿಯ ಕಂಕುಳಲ್ಲಿಂದಲೇ 'ನಮಸ್ತೇ' ಸಿರೋಪ ತೆಗೆದುಕೊಂಡ ಕೂಡಲೆ, ನೋಟ ತೀರ ಖಿನ್ನವಾಗುವುದು. ಒಮ್ಮೊಂದೊಮ್ಮೆ ಅವಳನ್ನು ಯಾವುವೋ ವ್ಯಥೆಗಳು ಬಾಧಿಸತೊಡಗುತ್ತಿದ್ದುವು. ಇಡೀ ದಿನ ಅವಳು ಯಾರವಳೂ ಆಗುತ್ತಿರಲಿಲ್ಲ.

ಹೀಗಾದಾಗ, ಎಷ್ಟೋ ಸಲ, ನನ್ನದೂ ತಲೆಯೇಳುತ್ತಿತ್ತು. ನಾನು ಅವಳ ವ್ಯಥೆಯನ್ನು ದೂರ ಮಾಡಲು ಬಹುಪರಿಯಾಗಿ ಪ್ರಯತ್ನಿಸುತ್ತಿದ್ದೆ. ಯಶಸ್ಸು ಬಾರದಿರಲು ಕೋಪಿಸುತ್ತಿದ್ದೆ. ನಾನು ಕೋಪಿಸಿದ ಕೂಡಲೆ ಅವಳು ಅಳುತ್ತಿದ್ದಳು. ವ್ಯಥೆಯ ಆ ಅವಸ್ಥೆಯಲ್ಲಿ ಅವಳಿಗೆ ನನ್ನ ಸಾನ್ನಿಧ್ಯವು ಬೇಡವಾಗುತ್ತಿತ್ತು. "ನನ್ನ ಮೇಲೆ ಪ್ರೇಮವನ್ನೂ ಮಾಡಬೇಡಿರಿ, ಕೋಪವನ್ನೂ ಮಾಡಬೇಡಿರಿ. ಕೃಪೆಮಾಡಿ ನನ್ನೊಬ್ಬಳನ್ನೇ ಬಿಟ್ಟುಬಿಡಿರಿ!" ಎಂದವಳು ಆರ್ತವಾಣಿಯಿಂದ ನುಡಿಯುತ್ತಿದ್ದಳು.

ಎಷ್ಟೋ ದಿನಗಳಿಂದಲೂ,ಗಾಣಗಾಪುರಕ್ಕೆ ಹೋಗುವ ಅಪೇಕ್ಷೆಯವಳದು. ಅಪೇಕ್ಷೆ ಈಡೇರಿರಲಿಲ್ಲ. "ಇಷ್ಟೆಲ್ಲ ಉಪವಾಸ, ವನವಾಸಗಳನ್ನೂ ಮಾಡುವೆ; ನಿಯಮ-ನಿತ್ಯಗಳನ್ನು ನಡೆಯಿಸುವೆ. ಇವೇನು ಕಡಿಮೆಯಾದುವೇ ? ಮತ್ತೆ ಗಾಣಗಾಪುರವೇತಕ್ಕೆ ಬೇಕು? ದತ್ತಗುರುವು ಗಾಣಗಾಪುರದಲ್ಲಿಯೇ ಇರುವನೆಂದಲ್ಲ; ಅವನು ನಮ್ಮ ಮನೆಯಲ್ಲಿ–ನಮ್ಮ ಹೃದಯದಲ್ಲಿ ಕೂಡ ಇರುವನು!"

"ಬೇಡವಾದುದಕ್ಕೆ ಈ ತತ್ತ್ವಜ್ಞಾನದ ಮುಸುಕು. ಕರೆದುಕೊಂಡು ಹೋಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿಬಿಡಿರಿ!"

ಇದಕ್ಕೆ ನಾನು ನಿರುತ್ತರ. ಹೋಗಬೇಕೆಂದರೆ ಅದಕ್ಕೆ ಎಷ್ಟೋ ಅಡ್ಡಿ-ಆತಂಕಗಳಿದ್ದುವು! 'ಇಂದು ಹೊರಡೋಣ—ನಾಳೆ ಹೊರಡೋಣ' ಎನ್ನುತ್ತ ನಾಲ್ಕು ತಿಂಗಳುಗಳು ಉರುಳಿದುವು. ಅವಳ ಉತ್ಕಟತೆಯು ಶಿಖರಕ್ಕೇರಿತು. ಈಗ ಮಾತ್ರ ಹೆಚ್ಚು ಜಗ್ಗಿದರೆ ಹರಿದೀತೆಂಬ ಭಯದಿಂದ, ರಜೆತೆಗೆದುಕೊಂಡು ಹೊರಡುವ ಮುಹೂರ್ತವನ್ನು ನಿಶ್ಚಯಿಸಿದೆನು.

ನಾವು ಗಾಣಗಾಪುರವನ್ನು ನಿರ್ವಿಘ್ನವಾಗಿ ತಲ್ಪಿದೆವು. ಆ ಕ್ಷೇತ್ರದಲ್ಲಿ ಪ್ರವೇಶಮಾಡುತ್ತಲೇ, ಮುಂದಿನ ಎಲ್ಲದಕ್ಕೂ ಅವಳೇ ಅಧಿಕಾರವನ್ನು ವಹಿಸಿದಳು. ಅವಳ ಅಭಿಪ್ರಾಯದ ಮೇರೆಗೆ ದೇವ-ಧಾರ್ಮಿಕ ಕಾರ್ಯಗಳಲ್ಲಿ ನನಗೇನೂ ತಿಳಿಯುತ್ತಿರಲಿಲ್ಲ.

ಆ ಯಾತ್ರೆಯಲ್ಲಿ ಅವಳು ಸಾಕಷ್ಟು ದೇಹದಂಡನೆಯನ್ನು ಮಾಡಿದಳು. ಕೈಕಾಲು ಕೊರೆಯುವಂತಹ ಮಾಘಮಾಸದ ಚಳಿಯೊಳಗೆ, ಮುಂಜಾವಿನಲ್ಲಿ ತೊಯ್ದ ಹುಲ್ಲಿನ ದಾರಿಯ ಮೇಲೆ ಒಂದು ವರೆ ಮೈಲುದ್ದ ನಡೆದು, ಭೀಮಾ-ಅಮರಜಾ ಸಂಗಮಕ್ಕೆ ಸ್ನಾನಕ್ಕೆ

ಎಂದು ಹೋಗುವಾಗ, ಅವಳು ತನ್ನ ಶರೀರವನ್ನು ಕಃಪದಾರ್ಥ-
ವೆಂದು ಬಗೆದಳು. ಎತ್ತರವಾದ ದಿನ್ನೆಯನ್ನಿಳಿದು ನದಿಯ ಪಾತ್ರ-
ಸೇರುವಾಗ, ಮರಳಿನಲ್ಲಿ ಮುಳ್ಳು-ಕಂಟಗಳನ್ನು ತುಳಿಯುವಾಗ,
ಮತ್ತು ಮೊಣಕಾಲುದ್ದ ನೀರಿನಲ್ಲಿ ಅಡ್ಡಬಿದ್ದು ಮುಳುಗುತ್ತಿರುವಾಗ,
ಅವಳು ಕಿಂಚಿತ್ತಾದರೂ ಹಿಂಜರಿಯಲಿಲ್ಲ. ಅಲ್ಲಿಂದ ಮರಳಿದ ಮೇಲೆ,
ಒದ್ದೆಯಿಂದಲೇ ಗುರುದತ್ತನಿಗೆ ಪ್ರದಕ್ಷಿಣೆಯನ್ನು ಹಾಕುವಾಗ,
ಸೂರ್ಯನು ನೆತ್ತಿಯ ಮೇಲಿಂದ ಸರಿಯುವ ವರೆಗೂ ಅವಳು ಒಂದು
ಕ್ಷಣ ಕೂಡ ವಿಶ್ರಾಂತಿ ಹೊಂದಲಿಚ್ಛಿಸಲಿಲ್ಲ. ಆ ಏಳು ದಿನಗಳ
ವರೆಗೆ ಕೇವಲ ದೇಹಧಾರಣೆಯಾಗಬೇಕು— ಪ್ರದಕ್ಷಿಣೆ ಹಾಕುವಷ್ಟು
ಶಕ್ತಿಯು ಕಾಲುಗಳಲ್ಲುಳಿಯಬೇಕೆಂದು ಅವಳು ಅನ್ನಗ್ರಹಣ ಮಾಡು-
ತ್ತಿದ್ದಳು.

ನನ್ನ ಉಣ್ಣು-ತಿನ್ನುವುದರ ಕಡೆಗೆ ಅವಳ ಲಕ್ಷ್ಯವಿರಲಿಲ್ಲ
'ದೇವರ ಸನ್ನಿಧಾನದಲ್ಲಿರುವುದು ದೇಹದ ಪೂಜೆಗಾಗಿಯಲ್ಲ!' ಎಂಬ
ತತ್ತ್ವಜ್ಞಾನಾಮೃತವನ್ನು ಅವಳು ಒಮ್ಮೆರಡು ಸಲ ನನಗೆ ಪ್ರಾಶಿಸಿ-
ದ್ದಳು. ಗುರುವಾರ ದಿನ ಪಲ್ಲಕ್ಕಿಯು ಹಿಂದಿನಿಂದ ಹೊರಟಾಗ,
ಜನಸಮ್ಮರ್ದಕ್ಕೆ ಅವಳು ಬೇಸರಿಯಲಿಲ್ಲ. ಪೂಜಾರಿಯು ಕರುಣಾ-
ಷ್ಟಕಗಳನ್ನು ಅನ್ನಲಾಗಿ, ತನ್ನ ಮಾಟಾದ ಕೃಷ್ಣವರ್ಣದ ನೇತ್ರ-
ಗಳ ಮುಂದೆ ಉಪೇಕ್ಷಿತ ಊರ್ಮಿಳೆಯ ಮೂರ್ತಿಯನ್ನು ತಂದು
ಕೊಂಡಳು:

"ಅರುವತ್ತು ವರ್ಷದ ಮುದಿಬಂಜೆ ।
ಸೆರಗನೊಡ್ಡುವಳು ನಿನ್ನ ಮುಂದೆ ।
ಕರುಣೆದೋರಿ ನೋಡು ಗುರುರಾಯಾ ! ॥

ಈ ಅಷ್ಟಕವನ್ನು ಅನ್ನುವಾಗಲಂತೂ ಅವಳು ಹಣೆಗೆ ಕೈಹಚ್ಚಿ-
ಕೊಂಡು ಕುಳಿತಳು. ಅವಳು ಯಾವುದರ ಬಗ್ಗೆ ಚಿಂತಿಸುತ್ತಿದ್ದ-
ಳೆಂಬುದನ್ನು ನಾನು ಕಂಡುಹಿಡಿದೆನು.

"ದೇವಾ, ದತ್ತರಾಜಾ ! ಅರುವತ್ತು ವರುಷದ ಮುದುಕಿಗೆ
ಪುತ್ರರತ್ನವನ್ನು ದಯೆಪಾಲಿಸಿ ಉದಾರಿಗಳ ಉದಾರನಾದೆ. ಆದರೆ
ನಾನು ಕೇವಲ ಮೂವತ್ತೈದು ವರುಷದವಳು. ನನ್ನ ಬಗ್ಗೆ ನಿನ-
ಗಾವುದೂ ಅಸಾಧ್ಯವಿಲ್ಲ. ನಾನು ನಿನ್ನನ್ನು ಮನಃಪೂರ್ವಕವಾಗಿ
ಸೇವಿಸುತ್ತಿರಲು, ನೀನು ನನ್ನ ಅಂತವನ್ನು ಹೀಗೇಕೆ ನೋಡು-
ತ್ತಿರುವಿ?........"

ಹತ್ತುದಿನಗಳ ವರೆಗೆ ನಾವು ಗಾಣಗಾಪುರದಲ್ಲಿ ನಿಂತೆವು
ಏನಿಲ್ಲವೆಂದರೂ ಹತ್ತು ಪೌಂಡುಗಳಷ್ಟು ತನ್ನ ತೂಕವನ್ನು ಕಡಿಮೆ
ಮಾಡಿಕೊಂಡು ಅವಳು ಮರಳಿದಳು. ಆದರೂ ಅವಳಿಗೆ ದಾರಿ
ಕಾಯಲೇ ಬೇಕಾಯಿತು. ಉಪವಾಸ, ವನವಾಸಗಳು ಹಾಗೆಯೇ
ಸಾಗಿದುವು. 'ದೇವರ ಹೃದಯವಾದರೂ ಒಡೆಯಬೇಕು, ಇಲ್ಲವೆ
ನಾನಾದರೂ ಮಡಿಯಬೇಕು' ಎಂಬ ಪ್ರತಿಜ್ಞೆಯಿಂದ ಅವಳು
ಸಾಗಿದ್ದಳು.

ಮುಗು, ಒಂದು ದಿನ ಅವಳಿಗೆ ನಿನ್ನ ಹೆಜ್ಜೆಯ ಸಪ್ಪಳು ಕೇಳ
ಬಂದಿತು. ಆದರೆ ಅವಳಿಗದು ಸತ್ಯವೆಂದೆನಿಸಲಿಲ್ಲ. ಯಾವುದೂ ಒಂದು
ಹೊಸ ಸಂಗತಿಯು ಅವಳ ಅನುಭವಕ್ಕೆ ಬರುತ್ತಿತ್ತು. ಆದರೆ ಅದರ
ಅನುಕೂಲ ಅರ್ಥಮಾಡುವ ಮನೋವೃತ್ತಿಯು ಇವಳದಾಗಿರಲಿಲ್ಲ.
'ನನ್ನದೇನಾದರೂ ಒಳ್ಳೆಯದಾಗಬೇಕಿದ್ದರೆ ಇಷ್ಟು ದಿವಸವೇಕೆ
ತಡೆಯುತ್ತಿತ್ತು?' ಎಂದು ವಿಚಾರಿಸುತ್ತಿದ್ದಳು. ಆದರೆ ಮುಂದೆ
ಕೆಲವೇ ದಿನಗಳಲ್ಲಿ ಅವಳಿಗದನ್ನು ಒಪ್ಪಲೇ ಬೇಕಾಯಿತು.

ಆ ಮೇಲೆ ಮಾತ್ರ ಅವಳ ಮನಸ್ಸು ಪ್ರಫುಲ್ಲವಾಯಿತು.
ಸಂತೋಷದಿಂದ ಹಿಗ್ಗಿದಳು. ಅವಳ ಸ್ವಭಾವದಲ್ಲಿ ಒಮ್ಮೆಲೇ ಬದ-
ಲಾವಣೆಯಾಯಿತು. ಹೊಸತೇ ಆದ ಮಾರ್ದವತೆಯು ಅವಳ
ಮಾತು-ಕತೆಗಳಲ್ಲಿ, ನಡತೆ-ನೋಟಗಳಲ್ಲಿ ಕಂಡುಬರತೊಡಗಿತು. ತನ್ನ
ದೇಹದಲ್ಲಿಯ ಎಲ್ಲ ಅಣು-ರೇಣುಗಳು ಬೇರೊಂದು ಬಗೆಯಿಂದ ಸಂಘ-
ಟಿತವಾಗುತ್ತಿವೆಯೆಂಬ ಭಾವನೆಯಿಂದ, ಅವಳು ತನ್ನನ್ನು ಕನ್ನಡಿ-
ಯಲ್ಲಿ ನೋಡತೊಡಗಿದಳು. ಆರೂ ಋತುಗಳು ಒಂದೇ ವೇಳೆಗೆ
ಅವತರಿಸಿ ಒಂದರೊಳಗೊಂದು ಕೂಡಿದರೆ ಉಂಟಾಗುವ ಸಂಭ್ರಮದ
ಅವಸ್ಥೆಯು ಇವಳಿಗೂ ಪ್ರಾಪ್ತವಾಗಿತ್ತು. ಆ ಸಂಭ್ರಮವು ನಿನ್ನ
ಆಗಮನದ್ದು. ಎಲ್ಲ ಅರ್ಘ್ಯ-ಪಾದ್ಯಾದಿಗಳಿಂದ ಅವಳು ನಿನ್ನ ಸ್ವಾಗತ-
ಕ್ಕಾಗಿ ಸನ್ನದ್ಧಳಾಗಿದ್ದಳು. ಕಾಣದಿದ್ದ ನಿನ್ನ ರೂಪದ ಪ್ರತಿಬಿಂಬವು
ಅವಳಿಗೆ ಮನೆತುಂಬ ಗೋಚರಿಸುತ್ತಿತ್ತು.

ಆ ವೇಳೆಯಲ್ಲಿ ಅವಳೆಡೆಗೆ ನೋಡುವುದೆಂದರೆ, ನನಗೊಂದು
ಆಟವೇ ಆಗಿತ್ತು. ಎಲ್ಲಿಂದಲೋ ಒಂದು ಅಸ್ಫುಟವಾದ ಮಧುರ
ಕರೆಯು ಕೇಳಬರುತ್ತಿದೆಯೋ ಎನ್ನುವಂತೆ, ಅದೆಷ್ಟೋ ಬಾರಿ ಅವಳು
ತನ್ನ ಮುಖಮುದ್ರೆಯನ್ನು ತೋರಿಸುತ್ತಿದ್ದಳು. ಆ ಕರೆಯು ಎಲ್ಲಿಂದ
ಹುಟ್ಟುತ್ತದೆಂಬುದು ಮಾತ್ರ ತಿಳಿಯಲಾರದು. ಅಲ್ಲದೆ ಕರೆಗೆ 'ಓ'
ಗೊಡಲು ಅವಳಿಗೆ ಲಜ್ಜೆಯೆನಿಸುತ್ತಿತ್ತು. ಆ ನಾಲ್ಕು ತಿಂಗಳ ಅವಧಿ-
ಯಲ್ಲಿ ಅವಳನ್ನು ಪ್ರಸನ್ನಳನ್ನಾಗಿಡಲು ಹೆಚ್ಚಿಗೇನೂ ಪರಿಶ್ರಮಿಸ-
ಬೇಕಾಗಲಿಲ್ಲ. ಅಂತಃಸರೋವರವೇ ಉಕ್ಕಿ ಮುತ್ತಿನ ಮಳೆಗರೆಯು-
ತ್ತಿರುವಾಗ, ನನ್ನ ಶಬ್ದಾಲಂಕಾರವು ಅದೆಷ್ಟು ಬೆಲೆಯದು ? ಅವಳಿಗೆ
ಎಲ್ಲೆಡೆಗೂ ದತ್ತಗುರುವೇ ಕಾಣುತ್ತಿದ್ದನು. ಮನೆಯಲ್ಲಿ ಅವನವೇ
ಹಾಡುಗಳು, ಅವನವೇ ಜಯಘೋಷಗಳು. ನನಗೊಂದು ದಿನ ನಗೆ-
ಯಾಟವಾಡುವ ಮನಸ್ಸುಂಟಾಯಿತು.

"ದತ್ತಗುರುವಿಗಿಂತಲೂ ಮೊದಲು 'ವಸುಮತಿ' ಡಾಕ್ಟರ-
ರನ್ನು ಅಭಿನಂದಿಸು. ಅವಳ ಉಪಚಾರಗಳೇ ಕಡೆಗೆ ಯಶಸ್ವಿ-
ಯಾದುವು."

"ನನ್ನ ಶ್ರದ್ಧೆಯನ್ನೇಕೆ ಕೆಣಕುತ್ತೀರಿ ? ನಾನೇನು ನಿಮ್ಮದನ್ನು
ಕೇಳುವವಳಲ್ಲ. ನಿಮಗೆ ಅದರಲ್ಲೇನೂ ತಿಳಿಯದು."

ಎಲ್ಲ ತಿಳಿವಳಿಕೆಯ ಗುತ್ತಿಗೆಯನ್ನು ಅವಳೇ ತೆಗೆದುಕೊಂಡಿ-
ದ್ದಳು. ಅವಳ ಆ ಸರಿ ತಪ್ಪು ತಿಳಿವಳಿಕೆಯನ್ನು ಒಪ್ಪಲು ನನ್ನ
ದಾದರೂ ಹೋಗುತ್ತಿತ್ತೇನು? ಒಂದು ದಿನ ತನ್ನದು ತನಗೇ ತಿಳಿಯ

ಜಯಂ

ದಂತಾಯಿತು ಅವಳಿಗೆ. ಮಾತಿಲ್ಲ, ಕತೆಯಿಲ್ಲ. ಅವಳನ್ನು ಮಾತಾಡಿಸಲು ಇಂದ್ರ-ಚಂದ್ರರನ್ನು ಕೆಳಕ್ಕೆ ತರಬೇಕಾಯಿತು ನನಗೆ. ಬಳಿಕ ಅವಳ ಅರ್ಧಮರ್ಧ ಮಾತಿನಿಂದ 'ಮಗನಾಗುವನೋ ಇಲ್ಲವೋ ?' ಎಂಬ ಚಿಂತೆಯಿಂದ ಕೂಡಿದವಳಾಗಿರುವಳೆಂದು ತಿಳಿಯಿತು.

ಈಗ ಇದೊಂದು ಹೊಸ ಬಗೆಯ ದುಃಖವು. ಇಂಥ ವೇಳೆಯಲ್ಲಿ ನಾನು ತಪ್ಪಿ ಏನಾದರೂ ನುಡಿದರೆ, ಅದು ಅವಳ ಮೇಲೆ ಬಹಳ ಪರಿಣಾಮವನ್ನು ಮಾಡುತ್ತಿತ್ತು. ಒಮ್ಮೆ ಅವಳು ಹೀಗೆಯೇ ಪೀಡೆಗೊಂಡು ನನ್ನ ಮುಂದೆ ಹಾಯ್ದು ಹೋಗುವಾಗ, ನಾನವಳಿಗೆ, ಅಂದೆನು :

“ ನಿಲ್ಲೇ ನಿಲ್ಲೇ ನಾಳಿನ ತಾಯೀ !
ಮೆಲ್ಲಡಿ ತೋಳೆವೆನು ತಡೆ ಮಹಾಮಾಯೀ!

ಅದಕ್ಕೆ ಅವಳು ನನ್ನ ಮೇಲೆ ಅದೆಷ್ಟು ಕೋಪಗೊಂಡಳು ಗೊತ್ತೇ ?

“ ನಿಮಗೇನು ಚಿಂತೆ ? ನಗೆಯಾಡುತ್ತೀರಿ ! ನನ್ನ ವೇದನೆಯು ನನಗೇ ಗೊತ್ತು. ತಂದೆಯಾಗುವುದು ಸುಲಭ ; ಆದರೆ ತಾಯಿಯ ಜೀವವು— ”

“ ಹಾಗಾದರೆ ನಾನೇನು ಮಾಡಬೇಕೆಂದು ನಿನ್ನ ಅಭಿಪ್ರಾಯವಿದೆ ? .... ಕಠಿಣವಿದೆ ನಿನ್ನ ಸಂಗತಿ ! ನಿನ್ನ ಸ್ವಭಾವಕ್ಕೆ ಯಾವ ಧನ್ವಂತರಿಯ ಕಡೆಯಿಂದ ಔಷಧ ಕೊಡಿಸಲಿ ? ”

“ಬೇಕಾದದ್ದು ಅನ್ನಿರಿ; ದೇವರು ನನ್ನ ಮೇಲೆ ಸೇಡನ್ನು ತೀರಿಸಿಕೊಳ್ಳುತ್ತಿದ್ದಾನೆ. ಅವನು ಗರ್ಭದಲ್ಲಿ ಜೀವಕಳೆಯನ್ನು ತುಂಬಿದನು. ಆದರೆ ಅದರ ಆರಭಾರವನ್ನು ಸಹಿಸುವ ಶಕ್ತಿಯನ್ನು ಮಾತ್ರ ಕಸಿದುಕೊಂಡಿದ್ದಾನೆ. ಒಂದನ್ನು ಕೊಡುವಾಗ ಇನ್ನೊಂದನ್ನು ಕಸಿದುಕೊಳ್ಳುತ್ತಾನೆ. ಮಹಾಜಿಪುಣ !”

ಒಂಬತ್ತುವರೆ ತಿಂಗಳುಗಳ ವರೆಗೆ ಅವಳನ್ನು ಕಷ್ಟಪಡಿಸಿ, ಮಗೂ, ನೀನು ಈ ವಿಶ್ವದಲ್ಲಿ ಕಾಲಿಕ್ಕುವ ವಿಚಾರ ಮಾಡಿದೆ. ದೀರ್ಘ ನಿದ್ರೆಯೊಳಗಿಂದ ಲಗುಬಗೆಯಿಂದ ಎದ್ದವರಂತೆ ಮಾಡಿ ' ನನಗೆ ಬಹಳೇ ವಿಲಂಬವಾಯಿತು. ಈಗ ಈ ಮನೆಯನ್ನು ಕೂಡಲೇ ಬಿಡಬೇಕು. ' ಎಂದು ಬಗೆದೆ. ಆ ಬಳಿಕ ಏನಾದರೇನು ಆ ಮನೆಯ ಗತಿ ? ಅವಳ ಹೊಟ್ಟೆಯಲ್ಲಿ ಕೂಡಲೆ ಬೇನೆಗಳೆರಡು ಬಂದುವು. ವಾಹನವನ್ನು ತರಲು ಹೇಳಿದಳು. ನಾವು ಟ್ಯಾಕ್ಸಿಯಲ್ಲಿ ಕುಳಿತು ಹೋದೆವು. ಆಗ ಮುಂಜಾವಿನ ಹತ್ತುಗಂಟೆಗಳಾಗಿದ್ದುವು. ಗ್ರೀಷ್ಮ ಋತುವಿನ ದಿನಗಳವು. ಪ್ರಸೂತಿಗೃಹದ ಆವಾರದ ಹೊರಗೆ ಎರಡು ಸಂಪಿಗೆಯ ಗಿಡಕ್ಕೆಹೂಗಳು ಪ್ರಫುಲ್ಲಿತವಾಗಿ ಅರಳಿ, ಪಕಳೆಗಳ ದಾಂಗುಡಿಯನ್ನು ಹಾಕಿದ್ದುವು. ಆಕಾಶದಲ್ಲಿ ಮೋಡಗಳೆರಡು ಇದ್ದುವು· ಸೆಕೆಯಾಗುತ್ತಿತ್ತು. ಪ್ರಸವವೇದನೆಗಳನ್ನು ಸಹಿಸಿ ಮ್ಲಾನಳಾದ ನಿನ್ನ ತಾಯಿ, ಮತ್ತು ಅವಳ ಅವಸ್ಥೆಯ ಕಡೆಗೆ ನೋಡಿ ನಾನು — ಹೀಗೆ ಇಬ್ಬರೂ ಬೆಮರು ಸುರಿಸುತ್ತಿದ್ದಾಗ, ಪ್ರಸೂತಿಗೃಹದ ಬಾಗಿಲಿನಲ್ಲಿಳಿದೆವು.

ನಾನು ಅವಳನ್ನು ಕೈಹಿಡಿದು ನಡೆಯಿಸಿಕೊಂಡು ಹೋದೆ. ಅವಳು ನಡೆದಳು. ಅಲ್ಲಿಯೇ ಬಾಕಿನ ಮೇಲೆ ಕುಳಿತುಕೊಳ್ಳಲು ಹೇಳಿದೆನು. ಕುಳಿತಳು. ಈ ವೇಳೆಯಲ್ಲಿ ಅವಳು ತೀರ ಪರಾಧೀನಳಾಗಿದ್ದಳು. ಕೂಡಲೆ ಒಬ್ಬಿಬ್ಬರು ಶುಭ್ರವೇಷದ ದಾದಿಯರು ಹೊರಗೆ ಬಂದರು. ಅವಳು ಎಲ್ಲರ ಮೇಲೂ ತನ್ನ ದೃಷ್ಟಿಯನ್ನು ಚೆಲ್ಲಿದಳು. ದಾದಿಯರು ಕರ್ತವ್ಯದಕ್ಷರೂ, ಕುಶಲರೂ ಆಗಿದ್ದರು ನಿಜ ! ಆದರೆ ಇವಳಿಗೆ ಅವಶ್ಯವೆಂದೆನಿಸುತ್ತಿದ್ದುದು (ಅವಳಿಗೆ) ಅವರ ಮುಖದ ಮೇಲೆ ಕಂಡುಬರಲಿಲ್ಲ. ಅವಳ ಬೇನೆಗಳು ಹೆಚ್ಚಾಗುತ್ತಿದ್ದುವು. ಮುಂದಿನ ವೇಳೆಯು ಹಿಂದಿನ ವೇಳೆಯನ್ನೇ ಒಳ್ಳೆಯದೆಂದು ಕರೆಯಹತ್ತುತ್ತಿತ್ತು. ಅವಳಿಗೆ ಈ ವೇಳೆಯಲ್ಲಿ ಕರುಣ-ಸಹಾನುಭೂತಿಗಳು ಬೇಕಾಗಿದ್ದುವು. ಧೈರ್ಯವು ಬೇಕಾಗಿತ್ತು.

ಒಬ್ಬ ಪರಿಚಾರಿಕೆಯು ತನ್ನ ಬೋಳುಗೈಗಳಿಂದ ಅವಳನ್ನು ಹಿಡಿದೆಬ್ಬಿಸಿದಳು. ಆ ಕೈ ಅವಳಿಗೆ ಕಟ್ಟಿಗೆಯದೆನಿಸಿತು ಅವಳ ಆಧಾರದಿಂದ ಒಳಗೆ ಹೋಗುವಾಗ ಇವಳು (ಹೆಂಡತಿಯು) ನನ್ನ ಕಡೆಗೆ ನೋಡಿದಳು. “ ನೀವು ಹೊರಗೇ ಉಳಿಯುವಿರಾ ? .... ನನ್ನನ್ನು ಇವರ ಕೈಯಲ್ಲಿ ನೂಕಿದಿರಾ ? ನನಗೆ ಭಯವೆನಿಸುತ್ತದೆ !” ಎಂದೇ ಅವಳ ಆ ದೃಷ್ಟಿಯು ನನಗೆ ಹೇಳುತ್ತಿತ್ತು.

ಅದೇಕೋ ನಾನರಿಯೆ. ಆ ಸ್ಪ್ರಿಂಗಿನ ಅರ್ಧದ್ವಾರಗಳೊಳಗಿಂದ ಒಳಗೆ ಹೋಗುವಾಗ ಅವಳು ನನಗೆ ಕೈಮುಗಿದಳು. ಅದೇಕೆ ಹಾಗೆ ಮಾಡಿರಬಹುದು ? ಅವಳಿಗೆ ಏನೆನಿಸಿರಬಹುದು ? ಆ ಅಪವಿತ್ರಯರ ಕೈಯಲ್ಲಿ ಬೀಳುವಾಗ ನನ್ನ ಪ್ರೇಮದ, ಗಾಢವಾದ ಸಹಾನುಭೂತಿಯ ಆಕಸ್ಮಿಕ ಸಾಕ್ಷಾತ್ಕಾರವು ಅವಳಿಗೆ ಆಗಿರಬಹುದೇ? ಇರಬಹುದು. ಸಂಭವನೀಯವಿದೆ. ಈ ವೇಳೆಯಲ್ಲಿ ನಾನವಳಿಗೆ ಬೇಕಾಗಿದ್ದೆನು. ಆದರೆ ಸಭ್ಯತೆಯ ರಜ್ಜುವು ನನ್ನನ್ನು ಹೊರಗೇ ತಡೆಗಟ್ಟಿತ್ತು. ನನ್ನನ್ನು ನೋಡು-ನೋಡುತ್ತ ಅವಳು ಮರೆಯಾದಳು. ನಾನು ಮೋರೆದಿರುವಿ ಜೇಬಿನಲ್ಲಿಯ ಕರವಸ್ತ್ರವನ್ನು ಹೊರತೆಗೆದೆನು.

ಅವಳು ನನಗೆ ಸುಖದುಃಖಗಳೆರಡನ್ನೂ ಕೊಟ್ಟಿದ್ದಳು. ದುಃಖವನ್ನು ಕೊಟ್ಟಿದ್ದಳು—ತಿಳಿಯದಲೇ; ಆದರೆ ಸೌಖ್ಯವನ್ನು ಮಾತ್ರ ತಿಳಿದುಕೊಟ್ಟಿದ್ದಳು. ಏನಾದರೂ ಅವಳು ನನಗೆ ಪ್ರಿಯಳಾಗಿದ್ದಳು. ಆದ್ದರಿಂದ ಈ ವೇಳೆಯಲ್ಲಿಯ ಅವಳ ವ್ಯಥೆಗಳೂ, ವೇದನೆಗಳೂ ನನ್ನ ಹೃದಯದ ವರೆಗೂ ಮುಟ್ಟಿದುವು. ಮಗೂ, ನಿನಗೆ ಜನ್ಮ ಕೊಡುವುದಕ್ಕಾಗಿ ಅವಳು ಏಳು ಪರದೆಗಳ ಮರೆಗೆ ಹೋಗಿದ್ದಳು. ನಾನು ಮಾತ್ರ ಹೊರಗೇ ಚಿಂತಾಗ್ರಸ್ತನಾಗಿ ಕುಳಿತಿದ್ದೆನು.

ಇಂತಹ ಸ್ಥಿತಿಯಲ್ಲಿ ಆಮೆಯ ಗತಿಯಿಂದ ಎರಡು ಗಂಟೆಗಳು ಕಳೆದುವು. ಆದರೆ ಅಳುವ ನಿನ್ನ ಸಪ್ಪಳ ಮಾತ್ರ ಕೇಳಬರಲೊಲ್ಲದು. ನನ್ನ ಕಣ್ಣು-ಕಿವಿಗಳೆರಡೂ ಅತ್ತಕಡೆಗೇ ಇದ್ದುವು. ಆ ಅರ್ಧತೆಗೆದ

ಬಾಗಿಲೊಳಗಿಂದ ದಾದಿಯರ ಸುಳಿದಾಟವು ಕಾಣುತ್ತಿತ್ತು. ನಾನು ದಾರಿ ಕಾಯ್ದು ಕಾಯ್ದು ಬೇಸರುಗೊಂಡೆನು. ಇಷ್ಟರಲ್ಲಿ ಒಬ್ಬ ಪರಿಚಾರಿಕೆಯು ಹೊರಗೆ ಬಂದಳು ಅವಳಿಗೆ ಪ್ರಶ್ನೆ ಮಾಡಲಾಗಿ ಅವಳು ಯಾಂತ್ರಿಕವಾಗಿ, ನಿರ್ವಿಕಾರ ಶಬ್ದಗಳಿಂದ ನುಡಿದಳು: "ಇನ್ನೂ ವೇಳೆಯುವೆ; ನೀವೇನೂ ಇಲ್ಲಿ ಕಾಯಬೇಕಿಲ್ಲ."

ನಿರುಪಾಯನಾಗಿ ನಾನು ಮನೆಯ ಕಡೆಗೆ ತೆರಳಿದೆನು. ಬಾಗಿಲು ತೆರೆದೆನು. ಸಂದಿಯೊಳಗಿಂದ ಒಳಕ್ಕೆ ಬಿದ್ದ ಪತ್ರವನ್ನು ಸುಮ್ಮನೇ ನೋಡಿದಂತೆ ಮಾಡಿದೆನು. ಆ ಪತ್ರವನ್ನು ನನಗೆ ಯಾರು, ಹಾಗೂ ಯಾಕೆ ಕಳುಹಿರುವರೆಂಬ ಅರ್ಥವೇ ನನಗಾಗ ಆಗಲೊಲ್ಲದು. "ನಮ್ಮ ಒಡತಿಯು ಸಮಾಚಾರವೇನು?" ಎಂದು ಮನೆಯಲ್ಲಿಯ ಪ್ರತಿಯೊಂದು ವಸ್ತುವೂ ನನ್ನನ್ನು ಕೇಳುತ್ತಿತ್ತು. ಆದರೆ ನನಗೇ ಯಾವುದೂ ಗೊತ್ತಿಲ್ಲದಿರುವಾಗ, ಅವುಗಳಿಗೆ ನಾನೇನು ಹೇಳಬಲ್ಲೆ? ಮಧ್ಯಾಹ್ನದ ನಾಲ್ಕು ಗಂಟೆಗಳ ವರೆಗಿನ ಕಾಲಾವಧಿಯನ್ನು ಚಿಂತೆಯಲ್ಲಿಯೇ ಕಳೆದೆನು.

ಇಷ್ಟರಲ್ಲಿ ಪ್ರಸೂತಿಗೃಹದ ಸೇವಿಕೆಯು ನನ್ನನ್ನು ಕರೆಯಲು ಬಂದಳು; ಆದರೆ 'ಬಾಯಿಯವರು ಕರೆದಿದ್ದಾರೆ' ಎಂದು ವಿನಾ ಅವಳು ಹೆಚ್ಚಿಗೇನೂ ಹೇಳಲಿಲ್ಲ. ಆದ್ದರಿಂದ ನನ್ನ ಮನಸ್ಥಿತಿಯು ಬಹಳೇ ವಿಚಿತ್ರವಾಯಿತು. ಪ್ರಸೂತಿಗೃಹಕ್ಕೆ ಹೋಗಿ ನೋಡಲಾಗಿ, ಅಲ್ಲಿಯ ವಾತಾವರಣವು ತೀರ ಗಂಭೀರವಾಗಿತ್ತು. ನನ್ನ ಎದೆಯು ಹಾರಹತ್ತಿತು. ನಸುಕಿನಲ್ಲಿಲ್ಲದ ಒಬ್ಬ ಹೊಸ ಮನುಷ್ಯನು ನನಗಲ್ಲಿ ಕಂಡನು. ಅವನು ಡಾಕ್ಟರು. ಬಿಳಿಯ ನಿಲುವಂಗಿ ಹಾಕಿಕೊಂಡು, ತೊಳೆದುಕೊಂಡ ತನ್ನ ಕೈಗಳನ್ನು ಒರಸಿಕೊಳ್ಳುತ್ತ ಹೊರಗೆ ಬಂದಿದ್ದನು. ಮುಖ್ಯ ಪರಿಚಾರಿಕೆಯು ನನ್ನ ಪರಿಚಯವನ್ನು ಅವನಿಗೆ ಮಾಡಿಕೊಡಲು, ಆ ನಿಡುದೇಹದ, ಭವ್ಯನೇತ್ರಗಳುಳ್ಳ ಮೇಧಾವಿಯಾದ ಡಾಕ್ಟರು ಹೇಳಿದನು :

"ನಿಮ್ಮ ಹೆಂಡತಿಯ ಪರಿಸ್ಥಿತಿಯು ಗಂಭೀರವಾಗಿದೆ. ಕೂಸು ಅಡ್ಡ ಸಿಲುಕಿದೆ...." ನಾನು ಏನನ್ನೋ ನೋಡುತ್ತಿದ್ದೆ, ಏನನ್ನೋ ಕೇಳುತ್ತಿದ್ದೆ ! ನನ್ನ ಸಂವೇದನೆಯೇ ಬಧಿರವಾಗಿತ್ತು. ಡಾಕ್ಟರನು ತೀವ್ರ ಶಬ್ದಗಳನ್ನುಪಯೋಗಿಸಲು ನನಗೆ ಪ್ರಜ್ಞೆ ಬಂದಿತು.

"ಶಸ್ತ್ರಕ್ರಿಯೆ ಮಾಡಬೇಕಾಗುವುದು; ಆದರೆ ಅವಳ ಮೈಯಲ್ಲಿ ರಕ್ತವಿಲ್ಲದುದೊಂದು ಆತಂಕ. ಕೂಸು-ಬಾಣಂತಿಯರಿಬ್ಬರೂ ಸುಖರೂಪವಾಗಿ ಪಾರಾಗುವ ಸಂಭವವಿಲ್ಲ. ಆದ್ದರಿಂದ ನಾನೇನು ಮಾಡಲಿ ಹೇಳಿರಿ ! ಕೂಸನ್ನು ಬದುಕಿಸಲೋ ಅಥವಾ ತಾಯಿಯನ್ನೊ ?"

ನಾನು ಒಮ್ಮೆಲೇ ಗಳಿತಗಾತ್ರನಾದೆನ್ನು. ಎಂತಹ ಆಪತ್ತು ಕಡಿದುಬಿದ್ದಿತ್ತು ನನ್ನ ಮೇಲೆ ! ಡಾಕ್ಟರರಿಗೆ ನನ್ನ ಅವಸ್ಥೆಯು ತಿಳಿದಿರಬೇಕು. ಯಾಕೆಂದರೆ ಅವರ ಸ್ವರದಲ್ಲಿ ಮಾರ್ದವವು ಮೂಡಿತ್ತು:

"ನಿಮ್ಮ ಮೇಲಿನ ಪ್ರಸಂಗವನ್ನು ನಾನು ಬಲ್ಲೆ: ಆದರೆ ವಸ್ತುಸ್ಥಿತಿಯನ್ನು ಸ್ಪಷ್ಟವಾಗಿ ಹೇಳುವುದು ನನ್ನ ಕರ್ತವ್ಯವು. ನಾನು ಇಬ್ಬರನ್ನೂ ಬದುಕಿಸಲು ಭಗೀರಥ ಪ್ರಯತ್ನ ಮಾಡುವೆ; ಆದರೆ ಎರಡೂ ಜೀವಗಳು ಕೈಬಿಟ್ಟು ಹೋಗುವ ವೇಳೆಯು ಬಂದರೆ ನಾನೇನು ಮಾಡಲಿ? ಯಾರನ್ನು ಬದುಕಿಸಲಿ? ಮಡದಿಯನ್ನೋ ಮಗುವನ್ನೋ ?"

'ಮಡದಿಯೋ, ಮಗುವೋ ? ಮಡದಿಯೋ, ಮಗುವೋ ?' ಎಷ್ಟು ಭೀಕರವಾದ ಸಮಸ್ಯೆಯಿದು ? ನನಗೇನೋ ಇಬ್ಬರೂ ಬೇಕು. ಮಡದಿಯು ಸಂಸಾರಕ್ಕೆ ಆಧಾರಳು; ಮಗುವು ವಂಶಕ್ಕೆ ಆಧಾರನು. ನಾನು ಯಾರ ಪ್ರಾಣದ ಮೇಲೆ ಉದಾರನಾಗಲಿ ? ಅದಕ್ಕಿಂತ ನಾನು ನನ್ನ ಪ್ರಾಣದ ಮೇಲೆಯೇ ನೀರು ಬಿಟ್ಟುಬಿಟ್ಟರೆ ?— ಅದರ ಪ್ರಯೋಜನವೇನು ? ಪ್ರಾಣಗಳು ಗಂಡಾಂತರದಲ್ಲಿ ಸಿಲುಕಿದ್ದುವು ನಿಮ್ಮಿಬ್ಬರವು. ಸಮಸ್ಯೆಯುಂಟಾದುದು ನಿಮ್ಮಿಬ್ಬರ– ತಾಯಿ–ಮಗನ ಸಲುವಾಗಿ. ನಾನೇನು ಉತ್ತರಿಸಲಿ ಈ ಪ್ರಶ್ನೆಗೆ? ನನಗೆ ಡಾಕ್ಟರನ ಮೇಲೆಯೆ ಕೋಪ ಬಂದಿತು. "ನನ್ನನ್ನೇನು ಕೇಳುವಿ ? ನಿನಗೆ

ಬೆಂದ ಹೃದಯ

(ಸುಂದರರೂಪಕಗಳ ಸಂಕಲನ)

ಬರೆದವರು: '**ಆನಂದಕಂದ**'. ಈಗಾಗಲೇ ಬೆಳಕಿಗೆ ಬಂದಿದೆ.

ಬೇಕಾದವರು ಕೂಡಲೆ ಪತ್ರವ್ಯವಹಾರ ಮಾಡಬೇಕು.

— ನಮ್ಮಲ್ಲಿ ದೊರೆಯುವ ಬೇರೆ ಪುಸ್ತಕಗಳು —

ಲೇ: ಶ್ರೀ. ವಿ. ಸಿ. ಹಿತ್ತಲಮನಿ ಬಿ. ಎಸ್‌ಸಿ.

ನೀಲಲೋಚನೆ (ಕಥಾಸಂಕಲನ) ೧-೮-೦

ಚಿಂದುಟಿಯ ಮುತ್ತು ,, ೧-೮-೦

ಶರಾವತಿಯಿಂದ ಸಾಬರಮತಿ (ಪ್ರವಾಸ) ೧-೮-೦

ಸಂಪಾದಕ : ಶ್ರೀ. ಪ. ಸು. ಭಟ್ಟ

ಸೌಭಾಗ್ಯ (ಪತ್ರಸಂಕಲನ) ೧-೮-೦

ಲೇ: ಶ್ರೀ. ನಾ. ಮ. ಕೋರವಾರ

ಅರಸಿಯ ತಾರೆ (ಸಾಮಾಜಿಕ ನಾಟಕ) ೧-೮-೦

ಲೇ: ಶ್ರೀ. ಬಿ. ಆರ್. ವಾಡಪ್ಪಿ

ಗಾಳಿಗುದರಿ (ಲಲಿತಪ್ರಬಂಧ ಸಂಕಲನ) ೧-೪-೦

ಜೀವನರಂಗ (ಕಥಾಸಂಕಲನ) ೧-೪-೦

ಗುರುದಕ್ಷಿಣೆ (ನಾಟಕ ಸಂಕಲನ) ೦-೧೦-೦

ಲೇ: ಶ್ರೀ ಆರ್. ಎಸ್. ದೇಶಪಾಂಡೆ

ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ ಕೊಡಲಾಗುವುದು.

ಶರತ್ ಪ್ರಕಾಶನ ಮಂದಿರ, ಧಾರವಾಡ

ಸರಿಯೆನಿಸಿದ್ದನ್ನು ಮಾಡು. ಬೇಕಾದವರನ್ನು ಕೊಲ್ಲು, ಬೇಕಾದವರನ್ನು ಉಳಿಸು." ಎಂದು ಮನಸ್ಸಿನಲ್ಲಿಯೇ ಅಂದೆ; ಆದರೆ ಅವನೇಕೆ ಈ ಪಾಪವನ್ನು ತನ್ನ ಪದರಿನಲ್ಲಿ ಕಟ್ಟಿಕೊಂಡಾನು? ಅವನು ನನ್ನನ್ನೇ ಕೇಳುತ್ತಿದ್ದನು.

"ಹೂಂ, ಹೇಳಿರಿ ಬೇಗ. ಪ್ರತಿಕ್ಷಣವು ಅಮೌಲ್ಯವಾಗಿದೆ!"

ಉತ್ತರವನ್ನಂತೂ ಕೊಡಲೇ ಬೇಕಾಗಿತ್ತು. ಅದೂ ಕೂಡ ಬೇಗನೇ. ವಿಚಾರಕ್ಕೆ ವೇಳೆಯೇ ಇರಲಿಲ್ಲ. 'ಇಬ್ಬರನ್ನೂ ಬದುಕಿಸಿರಿ, ಇಬ್ಬರೂ ನನಗೆ ಬೇಕು!' ಇದು ನನ್ನ ಅಂತರಂಗದೊಳಗಿನ ನಿಃಶಬ್ದ ಆಕ್ರೋಶವಾಗಿತ್ತು. ಆದರೆ ಅದು ನಿಷ್ಪ್ರಯೋಜಕವಾಗಿತ್ತು. ನಾನು ಮಾತನಾಡಲು ಪ್ರಯತ್ನಿಸಿದೆನು; ಆದರೆ ಮಾತುಗಳು ಒರಲೊಲ್ಲವು. ನಿರ್ಣಯವಾದರೂ ಸಿದ್ಧವಾಗಿತ್ತೇ? ಸರಿ. ಆಗಿತ್ತು. ಅದನ್ನು ಉಚ್ಚರಿಸುವುದಕ್ಕಾಗಿ ಎಲ್ಲಿಯೋ ಒಳಗೆ ಮೂರ್ಛೆಗೊಂಡು ಬಿದ್ದ ಶಬ್ದಗಳನ್ನು ಎಳೆದು ತೆಗೆದೆನು. ಬಹು ಕಷ್ಟದಿಂದಲೇ ಅದು ತುಟಿಯನ್ನು ದಾಟಿ ಹೊರಗೆ ಬಿದ್ದಿತು:

"ಡಾಕ್ಟರರೇ, ಮಗುವನ್ನು ಬದುಕಿಸಿರಿ!

ಮರುಕ್ಷಣಕ್ಕೆಯೆ ಡಾಕ್ಟರು ಒಳಕ್ಕೆ ನಡೆದರು. ನಾನು ಬಾಕಿನ ಮೇಲೆ ನನ್ನ ದೇಹವನ್ನು ಚೆಲ್ಲಿದೆನು. ದೊಡ್ಡದನಿಯಿಂದೊಮ್ಮೆ ಅತ್ತುಬಿಡಬೇಕೆಂದೆನಿಸಿತು. ಕಣ್ಣುಗಳು ನೀರೂರಲೊಲ್ಲವು. ಒಳಗಿನ ಎಲ್ಲ ಆರ್ದ್ರತೆಯೂ ಸುಟ್ಟುಹೋಗಿತ್ತು. ಮನುಷ್ಯನಾದ ನಾನು, ಕೇವಲ ಕಟ್ಟಿಗೆಯ ಪೊಳ್ಳು ಪೆಟ್ಟಿಗೆಯಾಗಿದ್ದೆನು. ಇಷ್ಟರಲ್ಲಿ ಒಳಗಿನಿಂದೊಂದು ಹೃದಯಭೇದಕ ಧ್ವನಿಯು ಕೇಳಬಂದಿತು. ನನಗೆ ಪ್ರಜ್ಞೆ ಬಂದಿತು. ಕಿವಿಗಳನ್ನು ನೆಟ್ಟಗೆ ಮಾಡಿದೆನು. ಮಗೂ, ನೀನವಳ ಪ್ರಾಣವನ್ನಪಹರಿಸಲು ಸಿದ್ಧನಾಗಿದ್ದೆ. ನಾನು ವಿಚಾರ ಮಾಡತೊಡಗಿದೆ:—

ಈಗ ಡಾಕ್ಟರು ತಮ್ಮ ಕಾರ್ಯಕ್ಕೆ ಉದ್ಯುಕ್ತರಾಗಿರಬಹುದು. ಶಸ್ತ್ರಕ್ರಿಯೆಯ ಸ್ಥಳದಲ್ಲಿ ಮಿನುಗುವ ಶಸ್ತ್ರಗಳ ಜೋಡಣೆಯು ನಡೆದಿರಬಹುದು. ಅವಳನ್ನು ತಂಬು ಮೇಜಿನ ಮೇಲೆ ಮಲಗಿಸಿರಬಹುದು. ಪರಿಚಾರಿಕೆಯರು ಡಾಕ್ಟರರ ಸಹಾಯಕ್ಕೆ ಸನ್ನದ್ಧರಾಗಿ ನಿಂತಿರಬಹುದು. ಕ್ಲೋರೋಫಾರ್ಮಿನ ವಾಸನೆಯು ಬರುತ್ತಿರಬಹುದು. ಒಂದು.......ಎರಡು.......ಮೂರು....... ....ಐದು............... ಹದಿಮೂರು...........ಊಂss.... ....ಊಂss! ಬಳಿಕ ಕೇವಲ ಶ್ವಾಸೋಚ್ಛ್ವಾಸವು, ಆಳವಾದ ಮತ್ತು ಒಂದೇ ಸಮನಾದ ಗೊರಕೆಯು! ಈಗ ಅವಳು ಯಾರವಳೂ ಇದ್ದಿಲ್ಲ; ಕೇವಲ ಡಾಕ್ಟರನ ಶಸ್ತ್ರಧಾರೆಯ ಕೆಳಗಿನ ಒಂದು ಅರ್ಧಮೃತ ವಸ್ತುವಾಗಿದ್ದಳು.

ನಾನು ಹೊರಗಿನ ಬಾಕಿನ ಮೇಲೆಯೇ ಕುಳಿತುಕೊಂಡಿದ್ದೆ. ಬಿಸಿಲು ಕಡಿಮೆಯಾಗುತ್ತಿತ್ತು; ಸೂರ್ಯನು ಅಸ್ತಾಚಲವನ್ನು ಸಮೀಪಿಸುತ್ತಿದ್ದನು. ಮುಂದೆ ಭಯಾನಕ ಕರ್ಗತ್ತಲೆಯು ವಿಶ್ವದಲ್ಲಿಯೂ ನನ್ನ ಜೀವನದಲ್ಲಿಯೂ ಕವಿಯುವುದಿತ್ತು. ದುರ್ದೈವದ ಭೂತವು ನನ್ನ ಸುತ್ತಲೂ ಸುಳಿದಾಡುವುದಿತ್ತು. ಅದೇ ನನ್ನ ಬಾಯಿಂದ 'ಮಗುವು ಬದುಕಲಿ' ಎಂದು ಆಡಿಸಿತ್ತು. ನನ್ನ ಸಂಸಾರಕ್ಕೆ ನಾನೇ ಕೊಡಲಿಯೇಟನ್ನು ಹಾಕಿದ್ದೆನು. ಶಸ್ತ್ರಕ್ರಿಯೆಯ ಕೋಣೆಯಲ್ಲಿ ಸಂಭವಿಸುತ್ತಿರುವ ಭವಿತವ್ಯವು ಕ್ಷಣಕ್ಷಣಕ್ಕೆ ತೀವ್ರವಾಗುತ್ತಿತ್ತು. ಯಾರ ಬಾಯಿಂದಲಾದರೂ ಸಂಗತಿಯನ್ನು ಕೇಳಿ ತಿಳಿದು, ಹಣೆಗೆ ಕೈಹಚ್ಚಿಕೊಂಡು ಕುಳಿತುಕೊಳ್ಳುವುದಷ್ಟೇ ನನ್ನ ಕೆಲಸವಾಗಿತ್ತು. ಅದಕ್ಕೆ ನಾನು ನನ್ನ ಹೃದಯವನ್ನು ಗಟ್ಟಿಮಾಡುತ್ತಿದ್ದೆನು.

ಕೂಡಲೆ ಒಮ್ಮಿಂದೊಮ್ಮೆ 'ಟ್ಯಾಂ ಟ್ಯಾಂ' ಧ್ವನಿಯು ಕಿವಿಗೆ ಬಿತ್ತು. ನೀನು ಹುಟ್ಟಿ ಬಂದಿದ್ದಿ. ಸಜೀವವಾಗಿ ಹುಟ್ಟಿದ್ದಿ. ಆದರೆ ಹುಟ್ಟಿದ ಕೂಸು ಗಂಡೋ ಹೆಣ್ಣೋ– ಎಂಬುದನ್ನು ತಿಳಿಯಲು ಮಾರ್ಗವಿರಲಿಲ್ಲ. ಅದನ್ನು ತಿಳಿದುಕೊಳ್ಳುವ ಉತ್ಕಂಠೆಯೂ ನನಗಿರಲಿಲ್ಲ ನನಗೆ ಅದಕ್ಕೆ ಮುಂದಿನದೇನೆಂಬುದನ್ನು ಕೇಳಬೇಕಿತ್ತು. ತುಸು ವೇಳೆಯಲ್ಲಿಯೇ ನೀನು ಅಳುವುದನ್ನು ನಿಲ್ಲಿಸಿದೆ. ನನಗೆನಿಸಿತು: ಒಂದು ವೇಳೆ ನೀನು ಕೂಡ—

ಇಷ್ಟರಲ್ಲಿ ಹೊರಗೆ ಬರುತ್ತಿರುವ ಡಾಕ್ಟರರ ಹೆಜ್ಜೆಗಳು ಕೇಳಬಂದುವು. ಅವರ ಹೆಜ್ಜೆಗಳು ಭೂಮಿಯ ಮೇಲೆ ಬೀಳುತ್ತಿರದೆ ನನ್ನ ಎದೆಯ ಮೇಲೆಯೇ ಬೀಳುತ್ತಿದ್ದುವು. ಅವರು ಹೊರಗೆ ಬಂದರು. ನಾನು ಅವರ ಮುದ್ರೆಯ ಕಡೆಗೆ ನೋಡಿದೆನು. ಅದು ತ್ರಸ್ತವಾಗಿತ್ತು. ಅವರ ತಿಳುವಾದ ತುಟಿಗಳಲ್ಲಿ ಸ್ಮಿತರೇಷೆಯೊಂದು ಕಂಡು ಬಂದಿತು. ಸೆಕೆಯಿಂದ ಇಳಿದಿತ್ತು. ಆದರೆ ಅವರು ನನ್ನನ್ನುದ್ದೇಶಿಸಿ ಅಂದರು: 'ಅಭಿನಂದನೆ!'

"ಅಭಿನಂದನೆ! ಏತಕ್ಕಾಗಿ? ಹೆಂಡತಿಯು ಸತ್ತದ್ದಕ್ಕಾಗಿಯೋ? ಅಥವಾ ಮಗನು ಹುಟ್ಟಿದುದಕ್ಕಾಗಿಯೋ?" ನಾನು ಹುಚ್ಚನಂತೆ ನೋಡತೊಡಗಿದೆನು.

"ಕೂಸು–ಬಾಣಂತಿಯರಿಬ್ಬರೂ ಸುಖರೂಪವಾಗಿರುವರು. ನಿಮಗೆ ಮಗನಾಗಿರುವನು!"

ಡಾಕ್ಟರನ್ನು ತಿರುಗಿ ಅಭಿನಂದಿಸಬೇಕೆನ್ನುವ ಪ್ರಜ್ಞೆ ಕೂಡ ನನಗೆ ಇರಲಿಲ್ಲ. ದೊಪ್ಪನೆ ಕೆಳಗೆ ಕುಳಿತೆನು. ಮತ್ತು ಹುಡುಗನಂತೆ ಅಳಲು ತೊಡಗಿದೆನು. ಆ ಆನಂದವು ನನ್ನನ್ನು ಸಂತುಷ್ಟನನ್ನಾಗಿ ಮಾಡಿರಲಿಲ್ಲ. ಕುಗ್ಗಿಸಿತ್ತು. ಹಿಸುಕಿತ್ತು. ಈ ನನ್ನ ಅವಸ್ಥೆಯನ್ನು ಅಲ್ಲಿ ಕೇಳುವವರಾರು? ಎಷ್ಟೋ ವೇಳೆಯ ವರೆಗೆ ನಾನಲ್ಲಿ ಕುಳಿತೇ ಇದ್ದೆನು. ಪರಿಚಾರಿಕೆಯು "ಚಿಟ್ಟೆಯಾಗುವುದಿದೆಯೇ ನಿಮಗೆ?" ಎಂದು ಕೇಳಿದಳು. ಹೆಂಡತಿಗೆ ಚಿಟ್ಟೆಯಾಗಬೇಕೆಂಬ ವಿಚಾರವೂ ನನಗಿರಲಿಲ್ಲ.

ನಾನು ಅವಳ ಹಿಂದಿನಿಂದಲೇ ಮೆಲ್ಲಗೆ ಒಳಕ್ಕೆ ಪ್ರವೇಶಿಸಿದೆನು. ಕಾಟಿನ ಮೇಲೆ ನಿನ್ನ ತಾಯಿ ಮಲಗಿದ್ದಳು. ನಿಶ್ಶಬ್ದ; ನಿಶ್ಚೇಷ್ಟೆ! ಕೇವಲ ತೌಡಿನಿಂದ ತುಂಬಿದ ಅರಿವೆಯ ಗೊಂಬೆಯಾಗಿದ್ದಳು. ಕರುಣಾರಸದ ಮೃಣ್ಮಯಮೂರ್ತಿಯಾಗಿದ್ದಳು. ದೇಹವೆಲ್ಲವೂ ಹೊದಿಕೆಯಿಂದ ಮುಚ್ಚಲ್ಪಟ್ಟಿತ್ತು. ಮೋರೆಯಷ್ಟೇ ತೆರೆದಿತ್ತು. ಮುಖಮುದ್ರೆಯ ಮೇಲೆ ಅಪಾರಕಷ್ಟಗಳ ಕರಿಯ ಛಾಯೆಯ ವಿನಾ ಮತ್ತೇನೂ ಕಾಣುತ್ತಿರಲಿಲ್ಲ. ಕಣ್ಣು ತೆರೆದು ನನ್ನನ್ನು ನೋಡುವಷ್ಟು ಶಕ್ತಿಯೂ ಅವಳಿಗಿರಲಿಲ್ಲ.

ಅಲ್ಲಿಯೆ ಬಳಿಯಲ್ಲಿ, ತೂಗಾಡುವ ತೊಟ್ಟಿಲಲ್ಲಿ ನೀನು ಮಲಗಿಕೊಂಡಿದ್ದೆ. ನೀನೇ ನಿನ್ನ ತಾಯಿಯ ಮೇಲೆ ಮಹಾವಿಪತ್ತನ್ನು

ತಂದೊಡ್ಡಿದ್ದೆ. ಅವಳ ಕರುಳುಗಳನ್ನು ಕಡಿದಿದ್ದೆ. ಅದೆಷ್ಟೋ ರಕ್ತ, ಬೆವರು, ಅಶ್ರುಗಳನ್ನು ಅವಳ ಮೈಯಿಂದ ಹರಿಸಿ, ಅವಳನ್ನು ನಿಶ್ಚೇಷ್ಟಿತಳನ್ನಾಗಿ ಕೆಡಹಿದ್ದೆ. ಇದರದೇನಾದರೂ ನಿನಗೆ ಕಲ್ಪನೆಯುಂಟೇ? ಆದರೆ ನಾನು ಮೊದಲು ನಿನ್ನ ಬಳಿಗೆ ಬರಲಿಲ್ಲ. ಮೊದಲು ಅವಳ ಕಡೆಗೆ—ನನ್ನ ಹದಿನೈದು ವರುಷಗಳ ಸಂಗಾತಿಯ ಕಡೆಗೆ–ಹೋದೆನು. ಅವಳನ್ನು ಮೊದಲು ಸಂತಯಿಸಿದೆನು. ಜೀವಂತಳಾಗಿರುವುದನ್ನೂ ಮನಗಂಡೆನು. ಅವಳು ತನ್ನ ಮಾಟವಾದ ಕೃಷ್ಣವರ್ಣದ ನೇತ್ರಗಳನ್ನು ಅರ್ಧವುರ್ಧ ತೆರೆದಾಗ ನಾನು ಕೇಳಿದೆನು:

"ಆರಾಮವೆನಿಸುವುದೇ ?"

ಅವಳು 'ಹೂಂ' ಎಂದಳು. ಆದರೆ ಆ ಹೂಂಕಾರದಲ್ಲಿ ಸ್ವಲ್ಪವೂ ಜೀವವಿರಲಿಲ್ಲ.

"ಮಗನಾಗಿರುವನು ತಮಗೆ !"

ಮತ್ತೆ 'ಹೂಂ'! ಅದರ ವಿನಾ ಮತ್ತೇನೂ ಇಲ್ಲ. ಅವಳ ಶರೀರದಲ್ಲಿಯ ಸಂವೇದನೆಯೂ ಮರಗಟ್ಟಿ ಹೋಗಿತ್ತು. ನಾನು ಅವಳ ಮೋರೆಯ ಮೇಲೆ ಕೈಯಾಡಿಸಿದೆನು, ಬೆವರಿನಿಂದ ಒದ್ದೆಯಾದ ತಲೆಗೂದಲುಗಳನ್ನು ಹಿಂದಕ್ಕೆ ಸರಿಸಿದೆನು. ಆಬಳಿಕ ನಿನ್ನ ತೊಟ್ಟಿಲ ಕಡೆಗೆ ಬಂದೆನು- ಕೆಂಪುಕಾಂತಿ, ಕೋಮಲ ಅವಯವಗಳು, ವಿರಲವಾದ ತಲೆಗೂದಲುಗಳು. ಜಗತ್ತಿನ ಹಾಗೂ ಪರಿಸ್ಥಿತಿಯ ಬಗ್ಗೆ ಪೂರ್ಣ ಅಜ್ಞಾನಿಯಾಗಿ, ನೀನು ಸ್ವಸ್ಥವಾಗಿ ಮಲಗಿದ್ದೆ. ತುಸು ವೇಳೆ ನೋಡಿ ಸೋಜಿಗದಿಂದ ಮುತ್ತಿಟ್ಟು 'ಇಂದು ನಾನು ತಂದೆಯಾದೆನು' ಎಂದು ಮನವರಿಕೆ ಮಾಡಿಕೊಂಡು, ಅಲ್ಲಿಂದ ಹೊರಟೆನು.

ಮನೆಗೆ ಬಂದು ಮನೆಯಲ್ಲಿಯ ಪ್ರತಿಯೊಂದು ವಸ್ತುವಿಗೂ ಹೇಳಿದೆನು: 'ನಿಮ್ಮ ಒಡತಿಯು ಸುಖರೂಪಳಾಗಿದ್ದಾಳೆ. ನಿಮ್ಮನ್ನು ಎತ್ತಿಬೀಸಾಡುವ ಮತ್ತೊಂದು ಉಚ್ಛೃಂಖಲ ಜೀವವೂ ತುಸು ದಿನಗಳಲ್ಲಿ ಬರುವುದು. ಸಾವಧರಾಗಿರಿ' ಎಂದೂ ಹೇಳಿದೆನು.

ಬಳಿಕ ನಿತ್ಯವೂ, ಮುಂಜಾನೆ ಸಂಜೆಗೆ ಪ್ರಸೂತಿಗೃಹಕ್ಕೆ ಹೋಗಿಬರುವುದು ನಡೆಯಿತು. ನಿನ್ನ ಜನ್ಮದ ಆನಂದವನ್ನು ಉಪಭೋಗಿಸುವಷ್ಟು ಶಕ್ತಿಯೂ ಪ್ರಫುಲ್ಲತೆಯೂ ನನ್ನಲ್ಲಿ ಬಂದಿದ್ದುವು. ನಿನ್ನ ತಾಯಿಗೆ ಏಳಲು ಬರುತ್ತಿರಲಿಲ್ಲ; ಏಳುವಂತೆಯೂ ಇರಲಿಲ್ಲ. ಅವಳ ಸ್ತನಗಳಿಗಿನ್ನೂ ನಿನ್ನ ನಾಲಗೆಯು ತಗುಲಿರಲಿಲ್ಲ ಅವಳ ಮಾತೃಹೃದಯಕ್ಕೆ ಅದೊಂದು ಹೊಸ ದುಃಖವೇ ಆಗಿತ್ತು. ಅವಳು ನನ್ನ ಸಹಾಯದಿಂದ ನಿನ್ನನ್ನು ಹತ್ತಿರ ಕರೆದುಕೊಳ್ಳುತ್ತಿದ್ದಳು. ಮಾತೃಸೌಖ್ಯವನ್ನು, ಕೇವಲ ಮೈಮೇಲೆ ಕೈಯಾಡಿಸಿ ನಿನಗೆ ಸಲ್ಲಿಸುತ್ತಿದ್ದಳು.

ಒಂದು ದಿನ ನಾನು ನಿನ್ನನ್ನು ದೃಷ್ಟಾಂತವಾಗಿರಿಸಿ ಅವಳಿಗೆಂದೆನು: "ಇದು ನೋಡು. ಈ ನಿನ್ನ ಮಗುವಿಗೆ ಚಿಂತೆ-ವ್ಯಥೆಗಳೇನಾದರೂ ಇವೆಯೇ? ಹೊಟ್ಟೆತುಂಬಿ ನಿದ್ರೆ ಲಭಿಸಿದರೆ ತೀರಿತು. ನಿಜಾನಂದದಲ್ಲಿ ತೇಲಾಡುವನು! ಮನುಷ್ಯನು ಸಂಸಾರದಲ್ಲಿ ಸಾಧ್ಯವಾದಷ್ಟು ಬಾಲವೃತ್ತಿಯನ್ನು ಸ್ವೀಕರಿಸಬೇಕು. ಅಂದರೆ ಇಂತಹ ಕ್ಷುಲ್ಲಕ ಸಂಗತಿಗಳು ಮನಸ್ತಾಪ ಮಾಡಲಾರವು!"

ಸಾಭಿಪ್ರಾಯನಾಗಿ ನಾನು ಅವಳ ಕಡೆಗೆ ನೋಡಿದೆನು. ಅವಳೂ ಅದನ್ನು ತಿಳಿದುಕೊಂಡಳು. ಇಬ್ಬರ ಮೋರೆಯ ಮೇಲೂ ನಗೆಯು ಮೂಡಿತು. ಸೋಜಿಗವೆನಿಸಿತು. ನಾನು ನಿನ್ನ ಮುಂದೆ ಒಂದು 'ಲಟಿಕೆ'ಯನ್ನು ಬಾರಿಸಿದೆನು. ನಿನ್ನ ಮಾಟವಾದ ಗದ್ದಕ್ಕೆ ಕೈಹಚ್ಚಿದೆನು. ಇನ್ನು ನಾಲ್ಕು ದಿನಗಳ ನಂತರ ನಿಮ್ಮಿಬ್ಬರನ್ನೂ ಮನೆಗೆ ಕರೆದುಕೊಂಡು ಹೋಗುವುದಿತ್ತು. ನಾನು ಅಂದಿನಿಂದಲೂ ಆ ಸಿದ್ಧತೆಗೆ ತೊಡಗಿದೆನು. ಮರುದಿನ ಶನಿವಾರ; ನಾನು ಬೇಗನೇ ಎದ್ದು ಪೇಟೆಯ ಕಡೆಗೆ ಹೋಗಿ ಕೆಲವು ಹಣ್ಣುಗಳನ್ನು ತಂದೆನು. ಮನೆಗೆ ಬಂದು ಬಟ್ಟೆಗಳನ್ನು ಬದಲಾಯಿಸಿ, ನಿನ್ನ ಸಂಗತಿಯಲ್ಲಿದ್ದು ಸುಖದಿಂದ ಎರಡು ಗಂಟೆಗಳನ್ನು ಕಳೆಯಬೇಕೆಂದು ಪ್ರಸೂತಿಗೃಹಕ್ಕೆ ಬಂದೆನು.

ನಾನು ಒಳಕ್ಕೆ ಹೋಗುವಾಗಲೇ ಒಬ್ಬ ಪರಿಚಾರಿಕೆಯು, ನಿನ್ನ ತಾಯಿಯ ಜ್ವರಮಾನವನ್ನು ನೋಡುತ್ತಿದ್ದಳು. ನನಗೆ ತೋರಗೊಡದೆಯೇ ಅವಳು ಉಷ್ಣಮಾಪಕಯಂತ್ರವನ್ನು ಝಾಡಿಸಿದಳು. ನಾನು ಸಭಯನಾಗಿ ಕೇಳಿದೆನು:

"ಏನಾಗಿದೆ? ಏನು ವಿಷಯ?"

"ಜ್ವರವು ತುಸು ಹೆಚ್ಚಾಗಿದೆ!"

"ತುಸುವೆಂದರೆ ಎಷ್ಟು?"

"ಅದನ್ನು ತೆಗೆದುಕೊಂಡು ನಿಮಗೇನು ಮಾಡುವುದಿದೆ? ಡಾಕ್ಟರರು ಬಂದು ನೋಡಬಹುದು!"

"ಸರಿ ಆದರೆ ಜ್ವರಬರಲು ಕಾರಣವೇನು?—"

"ಅವರಿಗೆ ನಿನ್ನೆರಾತ್ರಿ ನಿದ್ರೆ ಹತ್ತಲಿಲ್ಲ. ತಿಂದದ್ದು ಕೂಡ ಹೊಟ್ಟೆಯಲ್ಲಿ ತಡೆಯಲಿಲ್ಲ.

"ಪರಿಚಾರಿಕೆಯು ಅಲ್ಲಿಂದ ಹೊರಟು ಹೋದಳು. ನಾನು ಕಾಟಿನ ಮೇಲೆ ಕುಳಿತೆ. ಹೊದ್ದುಕೊಂಡುದನ್ನು ಸರಿಸಿ, ಮೈಗೆ ಕೈ ಹಚ್ಚಿದೆನು. ಅವಳ ಮೈ ತುಂಬ ಬಿಸಿಯಾಗಿತ್ತು.

"ಏನಾಗುತ್ತದೆ?" ನಾನು ಕೇಳಿದೆನು.

ಅವಳೇನೂ ಮಾತನಾಡಲಿಲ್ಲ. ಅವಳ ಮುದ್ರೆಯು ತ್ರಸ್ತವಾಗಿತ್ತು. ಅದರ ಮೇಲಿಂದ ಅವಳ ತಲೆಯು ನೋಯುತ್ತಿರಬಹುದೆಂದು ಊಹಿಸಿದೆನು.

"ತಲೆಯು ನೋಯುತ್ತದೆಯೆ?"

"ಹೂಂ!"

"ಎಂದಿನಿಂದ?" ಈ ಪ್ರಶ್ನೆಗೆ ಉತ್ತರವಿಲ್ಲ. ಅವಳನ್ನು ಮಾತನಾಡಿಸುವ ಕಲೆಯು ನನಗೆ ಗೊತ್ತಾಗಿತ್ತು ನಾನು ಅಂದೆ.

"ಮಗುವು ಯಾವಾಗ ಮಲಗಿದೆ?"

"ಯಾರು ಬಲ್ಲರು?"

"ಹೀಗೇಕೆ ಮಾತನಾಡುತ್ತಿ?"

"ಹಾಗಾದರೆ ಹೇಗೆ ಮಾತಾಡಬೇಕು? ಮಗನು ನಿಮ್ಮವನು. ನೀವು ಅವನವರು. ಕೇಳಿರಿ ಅವನನ್ನೇ?"

"ನೀನಲ್ಲವೇ ಅವನವಳು?"

“ನಾನು ಕೇವಲ ಅವನಿಗೆ ಜನ್ಮ ಕೊಡುವಷ್ಟರವಳು. ನಿಮ್ಮ ವಂಶವು ನಡೆಯಿತು. ನನ್ನ ಆವಶ್ಯಕತೆ ತೀರಿತು.”

“ಇದನ್ನಾರು ಹೇಳಿದರು ನಿನಗೆ?.......ಹೇಳು! ಯಾರು ಹೇಳಿದರು?”

“ಯಾರು ಹೇಳುವುದೇತಕ್ಕೆಬೇಕು? ಅದು ಅನಾದಿಕಾಲದಿಂದ ನಡೆದುಬಂದುದೇ ಇದೆ. ಹೆಂಡತಿಯ ಆವಶ್ಯಕತೆಯು ಅಷ್ಟೇ: ಅವಳು ಗಂಡನ ವಂಶವೃಕ್ಷವನ್ನು ಬೆಳೆಯಿಸುವುದು. ಅದಕ್ಕಾಗಿ ಕಷ್ಟನಷ್ಟ ಸಹಿಸುವುದು. ಕಡೆಗೆ ಸತ್ತುಹೋಗುವುದು....ಅಷ್ಟೇ ಅವಳ ಬೆಲೆ!”

“ಹೀಗೇನು ಮಾತನಾಡುವೆ ನೀನಿಂದು?”

“ಇದನ್ನು ನಾನು ಮಾತನಾಡುವುದಿಲ್ಲ. ನೀವೇ ಇದನ್ನು ಆಡಿರುವಿರಿ. ನಾನು ಇಂದಿನವರೆಗೆ ಬದುಕಿ ಉಳಿದೆನೆಂತಲೇ ಆ ಶಬ್ದಗಳನ್ನು ಕೇಳಲು ದೊರೆಯಿತು. ಶಸ್ತ್ರಕ್ರಿಯೆಯ ಮೇಜಿನ ಮೇಲೆಯೇ ಸತ್ತುಹೋಗಿದ್ದರೆ, ನನ್ನ ಬೆಲೆಯು ಕೂಡ ನನಗೆ ತಿಳಿಯುತ್ತಿರಲಿಲ್ಲ. ಕಳೆದ ಏಳೆಂಟು ದಿನಗಳಿಂದ ತಾವು ನನ್ನ ಕಡೆಗೆ ಬರುತ್ತಿದ್ದೀರಿ. ಗಂಟೆಯೆರಡು ಗಂಟೆಗಳವರೆಗೆ ಹರಟೆ ಹೊಡೆಯುತ್ತೀರಿ. ಆದರೆ ಈ ಮಾತನ್ನು ಮಾತ್ರ ನೀವು ನನಗೆ ಹೇಳಲಿಲ್ಲ. ನಿಮಗೆ ಅದನ್ನು ಹೇಳಬೇಕೆಂದೆನಿಸಲಿಲ್ಲ. ನೀವು ನನ್ನ ಪ್ರತಾರಣೆಯನ್ನು ಮಾಡಿದಿರಿ. ಹೀಗೆ ಮಾಡುವಲ್ಲಿ ನೀವು ಏನೋ ಒಂದು ಪಾಪ ಮಾಡುತ್ತಿರುವಿರೆಂದೂ ನಿಮಗೆನಿಸಲಿಲ್ಲ. ನಿನ್ನೆ ಸಂಜೆಯ ಮುಂದೆ ಸಹಜವಾಗಿ ಆ ನರ್ಸ್‌ಬಾಯಿಯವರು ಹೇಳಿದರು. ಎಂತಲೇ ನಿಮ್ಮ ಸಂಸಾರದಲ್ಲಿ ನನ್ನ ಬೆಲೆಯೆಷ್ಟು—ಎಂಬುದು ತಿಳಿಯಿತು.

“ನಿನಗೆ ತಿಳಿದುದಾದರೂ ಏನು?”

“ಎರಡನೆಯದೇನು? ನೀವೇ ಮಾತನಾಡಿದುದು”! ಡಾಕ್ಟರರು ‘ಮಗುವೋ ಮಡದಿಯೋ’ ಎಂದು ನಿಮ್ಮನ್ನು ಕೇಳಿದರು. ನೀವು ‘ಮಗುವನ್ನು ಬದುಕಿಸಿರಿ’ ಎಂದಿರಿ; ನೆನಪಿನಲ್ಲಿದೆಯೇ?”

ಹೀಗೆನ್ನುವಾಗ ಅವಳ ಶ್ವಾಸೋಚ್ಛ್ವಾಸವು ಭರದಿಂದ ಸಾಗಿತ್ತು. ಅವಳ ರಕ್ತರಹಿತ ತುಟಿಗಳು ಒಣಗಿದ್ದುವು. ಇಡೀ ಮುಖಮುದ್ರೆಯೇ ಹೊತ್ತಿ ಕರಕಾದ ಹಪ್ಪಳದಂತಾಗಿತ್ತು. ಅವಳು ಮಾತಾಡುವಾಗ ನನ್ನ ಕಡೆಗೆ ನೋಡುತ್ತಿದ್ದಿಲ್ಲ; ಎದುರಿನ ಗೋಡೆಯ ಮೇಲಿನ ಗಡಿಯಾರದ ಕಡೆಗೆ ನೋಡುತ್ತಿದ್ದಳು ನನಗೆ ಅದೇ ವಿಶೇಷವಾಗಿತ್ತು. ನಾನು ಆತುರನಾಗಿ ಅವಳಿಗೆ ಹೇಳಿದೆನು: “ನನ್ನ ಮಾತು ತುಸು ಕೇಳುತ್ತೀಯಾ?”

“ಕೇಳುವುದೇನು?” ಅವಳೆಂದಳು.... ಗೋಡೆಯ ಕಡೆಗೆ ನೋಡುತ್ತಲೇ.

ಅವಳ ಆ ಸ್ವರವು ಉದಾಸೀನವೂ, ಶುಷ್ಕವೂ ಆಗಿತ್ತು. ನಾನು ಗದ್ದವನ್ನು ಹಿಡಿದು ಅವಳ ಮೋರೆಯನ್ನು ನನ್ನ ಕಡೆಗೆ ತಿರುಗಿಸಿದೆನು. ಅವಳ ದೃಷ್ಟಿಯಲ್ಲಿ ನನ್ನ ದೃಷ್ಟಿಯನ್ನು ಸುರಿದು ಎಂದೆನು:

“ಸರಿ. ಹಾಗೆ ನಾನು ಅಂದುದು ನಿಜವು. ‘ಮಗುವೋ, ಮಡದಿಯೋ’ ಎಂಬ ಪ್ರಶ್ನೆಗೆ ‘ಮಗು’ ಎಂದು ಉತ್ತರಿಸಿದುದು ನಿಜ. ಆ ಎರಡೇ ಕ್ಷಣದಲ್ಲಿ ಸಾಧ್ಯವಿದ್ದಷ್ಟು ವಿಚಾರಮಾಡಿ ಈ ಉತ್ತರವನ್ನು ಕೊಟ್ಟೆನು. ಆದರೆ ಹುಚ್ಚಿ! ಅದರರ್ಥವು ಹೀಗಿರಲಿಲ್ಲ ತಿಳಿಯಿತೇ?”

“ಇರಬಹುದು. ನನಗೆಲ್ಲಿ ನಿಮ್ಮ ಮಾತಿನ ಅರ್ಥವು ತಿಳಿಯುತ್ತದೆ?”

“ತಿಳಿಯದಿದ್ದರೆ ನನ್ನ ಕಡೆಯಿಂದ ತಿಳಿಯಿಸಿಕೋ; ಸುಮ್ಮನೇ ತಪ್ಪು ತಿಳಿದುಕೊಳ್ಳಬೇಡ. ನಿನ್ನ ಬಗೆಗಿದ್ದ ಪ್ರೇಮವೇ ನನ್ನ ಬಾಯಿಂದ ಹೀಗೆ ಆಡಿಸಿತು. ನನ್ನ ಪ್ರೇಮಪರೀಕ್ಷೆಯೇ ಆ ವೇಳೆಯಲ್ಲಿ ಆಯಿತು. ಮಗನ ಬಗ್ಗೆ ನೀನೆಷ್ಟು ಆತುರಳಾಗಿದ್ದೆಯೆಂಬುದನ್ನು ನಾನು ಬಲ್ಲೆ. ಅವನನ್ನು ಒಂಬತ್ತು ತಿಂಗಳುಗಳ ವರೆಗೆ ಗರ್ಭದಲ್ಲಿ ಬೆಳೆಯಿಸಬೇಕಾದರೆ ಎಷ್ಟು ಯಾತನೆಯನ್ನು ಸಹಿಸುತ್ತಿದ್ದೆಯೆಂಬುದನ್ನೂ ನಾನೇನು ಅರಿಯದಿಲ್ಲ. ಯಾವುದೊಂದು ಸಂಗತಿಯನ್ನು ಕೂಡಲೇ ಮನಸ್ಸಿಗೆ ಹಚ್ಚಿಕೊಳ್ಳುವ ನಿನ್ನ ಸ್ವಭಾವವು ನನಗೇನು ಅಪರಿಚಿತವಾದುದಲ್ಲ. ಇಂತಹ ಅವಸ್ಥೆಯಲ್ಲಿ ಮುದ್ದು ಮಗನ ಬದಲಾಗಿ, ಪಾತ್ರೆಯಲ್ಲಿಯ ಅವನ ಛಿನ್ನ ವಿಚ್ಛಿನ್ನ ಅವಯವಗಳನ್ನು ನೋಡಬೇಕಿದ್ದರೆ.......”

“ಬೇಡ ಬೇಡ. ಹೀಗೇಕೆ ಅಭದ್ರ ನುಡಿಗಳನ್ನಾಡುವಿರಿ?”

“ಅಭದ್ರ ನುಡಿಯುತ್ತಿರಲಿಲ್ಲ; ಆದರೆ ನೀನೇ ಹಾಗೆ ನುಡಿಯಲು ಹಚ್ಚಿದಿ. ಆ ನವಿರೇಳುವ ಭಯಂಕರ ನೋಟವನ್ನು ನಿನ್ನ ಕಣ್ಣುಗಳಿಂದ ನೋಡುವುದಾಗುತ್ತಿತ್ತೇ? ಒಂದು ವೇಳೆ, ಅದರ ಪರಿಣಾಮದಿಂದಲೇ ನಿನ್ನ ಪ್ರಾಣವು ಹಾರಿ ಹೋಗಬಹುದಾಗಿತ್ತು. ಆದರಲ್ಲಿಯೂ ನೀನು ಬದುಕಿ ಉಳಿದಿದ್ದರೆ, ಆ ಬಾಳು ನಿನಗೆ ಮರಣಕ್ಕಿಂತಲೂ ದುಃಖಮಯವಾಗುತ್ತಿತ್ತು. ಪ್ರತಿ ಗಂಟೆ–ದಿನಗಳು ನಿನ್ನನ್ನು ಕೊರೆಯುತ್ತಿದ್ದುವು. ನೀನು ನಿನ್ನ ಮೇಲೆಯೇ ಕೋಪಗೊಳ್ಳುತ್ತಿದ್ದೆ. ನನ್ನ ಮೇಲೆಯೂ ಕೋಪಿಸುತ್ತಿದ್ದೆ. ಇಡೀ ಜಗತ್ತಿನ ಮೇಲೆ ಹಾಗೂ ಅದರಲ್ಲಿಯ ಎಲ್ಲ ಮಂಗಲ ವಸ್ತುಗಳ ಮೇಲೆ ನೀನು ಕೋಪಿಸುತ್ತಿದ್ದೆ. ಪಿಶಾಚಿಯಂತಾಗುತ್ತಿತ್ತು ನಿನ್ನ ಬಾಳು! ಇಂತಹ ವೇಳೆಯಲ್ಲಿ ನಿನ್ನ ಕೈಯಲ್ಲಿ ಕೈವಲ್ಯವನ್ನು ಕೊಟ್ಟರೂ ನಿನ್ನ ವಿಷದೃಷ್ಟಿಯಿಂದ ಅದನ್ನು ಕಮರಿಸಿ ಬಿಡುತ್ತಿದ್ದೆ. ನೀನು ಮಡಿದರೂ ‘ಪುತ್ರವತಿ’ ಎಂದು ಕರೆಯಿಸಿಕೊಂಡು ಮಡಿಯಬೇಕೆಂಬುದೇ ನನ್ನ ಹಿರಿಯಾಶೆಯಾಗಿತ್ತು!”

ಈಗವಳು ನನ್ನ ಮಾತನ್ನು ಕಿವಿ ನೆಟ್ಟಗೆ ಮಾಡಿ ಕೇಳುತ್ತಿದ್ದಳು. ನನ್ನ ಸ್ವರದಲ್ಲಿಯ, ಶಬ್ದದಲ್ಲಿಯ ಪ್ರಾಮಾಣಿಕತನವು ಅವಳಿಗೆ ಪ್ರತೀತವಾಗಿರಬೇಕು. ಅವಳ ಮುಖವು ಕೆಂಪೇರಿತು. ಅವಳ ಜ್ವರವೂ ಅರ್ಧಾಂಶದಿಂದ ಹೆಚ್ಚಾಗಿರಬಹುದು. ನಾನು ಮತ್ತೆ ಮಾತನಾಡತೊಡಗಿದೆ:

“ನಿನ್ನ ಮರಣವು ನಿನ್ನನ್ನು ಮುಕ್ತಗೊಳಿಸುತ್ತಿತ್ತು. ನನ್ನನ್ನು ಮಾತ್ರ ಹಣೆಯುತ್ತಿತ್ತು. ನಾನು ನನ್ನ ಕೈಯಿಂದಲೇ ಮನೆ ಮುರಿಯುತ್ತಲಿದ್ದೆ. ಆದರೆ ನಾನವನ್ನು ಭೋಗಿಸಲು ಸಿದ್ಧನಾಗಿದ್ದೆ. ಮನಸ್ಸಿನಲ್ಲಿಯೇ ಅಂದೆ: ನಿನ್ನ ಮಗನನ್ನು ನಾನು ಬೆಳೆಯಿಸಿ ದೊಡ್ಡವನನ್ನಾಗಿ ಮಾಡುವೆನು. ಅವನ ಮುಖದಲ್ಲಿ ನಿನ್ನನ್ನು ಕಾಣುವೆನು.

ಮಗುವಿನ ರೂಪದ ಒಂದೇ ದೇಹದಲ್ಲಿ ನಾವಿರ್ವರೂ ಏಕಜೀವವಾಗಿರುವೆವೆಂಬುದನ್ನು ಅನುಭವಿಸಿ, ನಿನ್ನ ಮನಸ್ಸಿಗೆ ಶಾಂತಿಯನ್ನು ನೀಡುವೆನು............

............ಇಲ್ಲವಾದರೇನು ? ನೀನೂ ಮೂವತ್ತೈದು ದಾಟಿದವಳು; ನಾನೂ ನಾಲ್ವತ್ತೆರಡರ ಆಚೆಗೆ ಹೋದವನು. ನಮ್ಮ ಬಂಡಿಯು ಮೆಲ್ಲನೇ ಇಳುಕಲಿಗೆ ಬಂದಿದೆ. ‘ ವಂಶವೃಕ್ಷವನ್ನು ಬೆಳೆಯಿಸಬೇಕು. ಅದಕ್ಕಾಗಿ ಕಷ್ಟನಷ್ಟಗಳನ್ನು ಸಹಿಸಬೇಕು. ಕಡೆಗೆ ಸತ್ತುಹೋಗಬೇಕು ’ ಎಂಬ ನಿನ್ನ ಮಾತು ಒಂದರ್ಥದಿಂದ ನಿಜವೇ ಆಗಿದೆ. ನಮಗೆ ಜನ್ಮಕೊಟ್ಟು—ನಮ್ಮನ್ನು ಬೆಳೆಯಿಸಿ, ನಿನ್ನ - ನನ್ನ ತಂದೆ-ತಾಯಿಯರು ಹೀಗೆಯೇ ಮೃತ್ಯುವಿನ ಪರದೆಯ ಮರೆಗೆ ನಡೆದರು. ನಮ್ಮದೂ ಅದೇ ಗತಿ. ಮುಂದಿನ ಪೀಳಿಗೆಯ ಬಲಿದಾನವನ್ನು ಕೊಟ್ಟು ಸ್ವತಃ ಬದುಕುವುದು ನನ್ನ–ನಿನ್ನ ಹಕ್ಕಲ್ಲ. ನಾವು ಅಮರರಾಗುವುದು ವಂಶದ ರೂಪದಿಂದ. ಜಗತ್ತಿನ ಓಟವು ಹೀಗೆಯೇ ನಡೆದಿದೆ. ಮತ್ತು ಅದು ಹೀಗೆಯೇ ನಡೆಯತಕ್ಕದ್ದು. ಅದಕ್ಕಾಗಿಯೇ ಆ ಪ್ರಸಂಗದಲ್ಲಿ ನಿನ್ನ ಪ್ರಾಣದ ಮೇಲೆ ಉದಾರನಾದೆನು. ಮತ್ತು ಪ್ರಸಂಗವೊದಗಿದ್ದೇ ಆದರೆ, ನನ್ನ ಪ್ರಾಣದ ಮೇಲೂ ಉದಕವನ್ನು ಬಿಡಲು ನಾನೇನು ಹಿಂಜರಿಯಲಾರೆನು. ತಿಳಿಯಿತೇ ?........ಸಮ್ಮತವಾಯಿತೇ ?........

.... ಹೀಗೆ ಸುಮ್ಮನೇ ಕುಳಿತು ನನ್ನ ಅಂತವನ್ನು ಪರೀಕ್ಷಿಸಬೇಡ. ಸ್ಪಷ್ಟವಾಗಿ ಹೇಳು. ನಾನು ಸ್ವಾರ್ಥಿ, ಕುಹಕ, ನಿರ್ದಯನೆಂದೆನಿಸುತ್ತಿದ್ದರೆ ಹಾಗೆ ಹೇಳು ! ”

ಮಾತನಾಡುತ್ತಿರುವಾಗಲೇ ನನ್ನ ಕಂಠವು ಬಿಗಿದು ಬಂದು ನಾನು ಮಾತನಾಡದಾದೆನು. ಮರುಕ್ಷಣದಲ್ಲಿಯೇ ಅವಳ ನೇತ್ರಗಳಿಂದ ಗಂಗೋತ್ರಿಯು ಹರಿಯತೊಡಗಿದಳು. ನಿಂತಿದ್ದ ಧಾರೆಯು ಮತ್ತೆ ಪ್ರಾರಂಭವಾಯಿತು. ಅವಳ ಅವಸ್ಥೆಯು ತೀರ ಅನುಕಂಪನೀಯವಾಗಿತ್ತು. ಅವಳು ನನ್ನ ಭುಜವನ್ನು ಒತ್ತಿ ಹಿಡಿದಳು. ಅವಳ ಕಂಠದಲ್ಲಿ ಭಾವನೆಗಳು ಕುದಿಯುತ್ತಿದ್ದುವು

“ ನಿಮ್ಮ ಅಭಿಪ್ರಾಯವು ನಿಜವಿದೆ........ಸತ್ಯವಾಗಿದೆ........ ಆದರೆ............ಆದರೆ............ನೀವು ಹೇಗೆ ಹೀಗೆ ಮಾತಾಡಿದಿರಿ?” ಅವಳು ನನ್ನ ದೇಹದ ಮೇಲಿನ ಕೈಯನ್ನು ತಕ್ಕೊಂಡು ಹಣೆ ಬಡಿದುಕೊಂಡಳು. “ ಈಗೇನು ಮಾಡುವುದು ನನ್ನ ಕರ್ಮಕ್ಕೆ ? ”

ಇಷ್ಟರಲ್ಲಿ ಒಬ್ಬ ನರ್ಸ್ ಅಲ್ಲಿಗೆ ಬಂದಳು. ನಾವು ಕುಳಿತಿರುವ ಈ ನೋಟವನ್ನು ಕಂಡು, ತಿರಸ್ಕಾರಯುಕ್ತ ಶಬ್ದಗಳಲ್ಲಿ ನನಗೆ ಕಟೂಕ್ತಿಗಳನ್ನಾಡಿದಳು; “ನೀವೇನು ಪ್ರಾರಂಭಿಸಿರುವಿರಿ ಇದನ್ನು? ರೋಗಿಯ ಮನಸ್ಸಿಗೆ ಪೀಡೆಯನ್ನು ಕೊಡಕೂಡದು. ಇಷ್ಟು ಕೂಡ ತಿಳಿಯಬಾರದೇ ? ನೀವೀಗ ಇಲ್ಲಿಂದ ಹೋದರೆ ಒಳಿತಾದೀತು ! ”

ಕೆನ್ನೆಗೆ ಹೊಡೆಸಿ ಕೊಂಡವರಂತೆ ನಾನು ಅಲ್ಲಿಂದೆದ್ದು, ನೆಟ್ಟಗೆ ಮನೆಗೆ ಬಂದೆನು. ಮಗೂ, ಏನು ಹೇಳಲಿ ನನ್ನ ಭೂಮಿಕೆಯನ್ನು ! ನನ್ನ ಅಂತರಂಗವು ಕಡೆಯ ವರೆಗೂ ಅವಳಿಗೆ ತಿಳಿಯಲಿಲ್ಲ ! ‘ ಇವರು ನನ್ನ ಜೀವದ ಮೇಲೆ ಉದಾರರಾದರು !’ ಎಂಬುದನ್ನೇ ಕಡೆಯವರೆಗೆ ಹಿಡಿದಳು. ಆ ಹೆಚ್ಚಾಗುತ್ತಿರುವ ಜ್ವರದಲ್ಲಿ ಕೂಡ ಅವಳು ಅದನ್ನೇ ಬಡಬಡಿಸುತ್ತಿದ್ದಳು ಅವಳು ತನ್ನ ವ್ಯಥೆಯನ್ನು ತನ್ನ ಮನಸ್ಸಿನಿಂದಲೇ ಹೆಚ್ಚಿಸಿಕೊಂಡಳು. ಕಡೆಯವರೆಗೂ ಅವಳು ಪೀಡೆಗೊಳ್ಳುತ್ತಲೇ ಇದ್ದಳು. ಅವಳ ಆ ಹೆಚ್ಚಾದ ಜ್ವರ ಕಡಿಮೆಯಾದುವು· ಅದಾವಾಗ ? ಪ್ರಾಣಜ್ಯೋತಿಯು ನಂದಿದ ಮೇಲೆ !

ನಾನು, ವೇಥೆಗಳನ್ನು ಹಂಚುತ್ತಾ ತಾಯಿ–ಮಗನನ್ನು ಮನೆಗೆ ಕರೆತರುವವನಿದ್ದೆನು. ಆದರೆ ನಿನ್ನ ತಾಯಿ ಆ ನನ್ನ ಮನೋರಥವನ್ನು ಪೂರ್ಣಗೊಳಿಸಗೊಡಲಿಲ್ಲ. ಅವಳು ತನ್ನನ್ನು ಬೇರೆ ಕಡೆಗೆಯೇ ಮುಟ್ಟಿಸಹಚ್ಚಿದಳು. ಬಳಿಕ, ದೈವಗೇಡಿಯಾದ ಮಗನೇ, ನಿನ್ನೊಬ್ಬನನ್ನೇ ದುಪ್ಪಟಿಯಲ್ಲಿ ಸುತ್ತಿಕೊಂಡು, ನಿನ್ನ ಮಸ್ತಕದ ಮೇಲೆ ಅಶ್ರುಗಳ ಅಭಿಷೇಕವನ್ನು ಮಾಡುತ್ತ, ಪ್ರಸೂತಿಗೃಹದ ಮೆಟ್ಟಲುಗಳನ್ನಿಳಿದೆನು.

“ ಟ್ಯಾಂ ss. ಟ್ಯಾಂ ss ! ”

“ ಪ್ರಾರಂಭಿಸಿದೆಯಾ ಮತ್ತೆ ಅಳಲು ? ನಾನು ನಿನಗೆ ದೈವಗೇಡಿಯೆಂದುದಕ್ಕೆ ಕೋಪಿಸಿದೆಯಾ ? ಇಲ್ಲವಪ್ಪಾ ಇಲ್ಲ; ನನ್ನ ಸದ್ಗುಣಗಳ ಪುತ್ಥಳಿ ನೀನು ! ”

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

(ಸಂ.: ಶ್ರೀ ಪಿ ವೆಂಕೋಬಾಚಾರ್ಯ ಬಿ ಎ, ಬಿ. ಟಿ.)

ಬೆಲೆ ಬಾಳುವ ಪುಸ್ತಕಗಳು ಕಡಿಮೆ ಬೆಲೆಗೆ !

(೧೩–೮–೦) (೯–೮–೦)

೧	ಪೂರ್ಣಿಮಾ (ಸಂಸಾರ ಸುಖದ ಚಿತ್ರಗಳು)	೨–೪–೦
೨	ಮನೋರಾಜ್ಯ (ಮೂರಂಕದ ನಾಟಕ)	೨–೪–೦
೩	ಮೋಪಾಸನ ಓಲೆಗಳು (ಜೀವನ ಚರಿತ್ರೆ)	೨–೪–೦
೪	ರುಕ್ಮಿಣಿ, (ಕಾದಂಬರಿ)	೨–೦–೦
೫	ಮುಡಿಯದ ಹೂ (ಮೋಪಾಸಾನ ಕತೆಗಳು)	೧–೮–೦
೬	ಕಲ್ಪನಾ ವಿಲಾಸ (ಸಣ್ಣ ಕತೆಗಳು)	೧–೮–೦
೭	ಪ್ರವಾದಿ (ಗಿಬ್ರಾನರ “ಪ್ರೊಫೆಟ್”)	೨–೦–೦
		೧೩–೮–೦

ಈ ಮೇಲಿನ ಪುಸ್ತಕಗಳು ಕೇವಲ ೯–೮–೦ ಗೆ

ಅಂಚೆ ವೆಚ್ಚ ಸಹಿತ

ಒಳ್ಳೇ ಸುಸಂಧಿ. ಇಂದೇ ಬರೆಯಿರಿ.

೬೦೬೦ ಗೌಳೀಗಲ್ಲಿ **ಪಿ. ವಿ. ಆಚಾರ್ಯ & ಕಂ.**

ಹುಬ್ಬಳ್ಳಿ ಸಂಚಾಲಕರು: ಆನಂದ ಗ್ರಂಥಮಾಲಾ

ಪಶ್ಚಿಮ ಜರ್ಮನಿಯದೊಂದು ಪತ್ರ

ಸದ್ಯ ಪಶ್ಚಿಮ ಜರ್ಮನಿಯ ಮಾಯಿನ್ಸ್ ವಿ.ವಿದ್ಯಾನಿಲಯದಲ್ಲಿ ಹೆಚ್ಚಿನ ವಿಜ್ಞಾನವನ್ನು ಅಭ್ಯಾಸ ಮಾಡುತ್ತಿರುವ ಶ್ರೀ ಎಂ. ಕೆ. ವರಾಹಮೂರ್ತಿ, ಬಿ. ಎಸ್‌ಸಿ. (ಟೆಕ್), ಎಂ. ಎಸ್‌ಸಿ. ಅವರು ತಮ್ಮ ತಾಯಿಯವರಿಗೆ ಬರೆದ ಪತ್ರವಿದು. ಇನ್ನುಮೇಲೆ ಆಗಾಗ ಇವರ ಪತ್ರಗಳು ಜಯಂತಿಯಲ್ಲಿ ಪ್ರಕಟವಾಗಲಿರುವವು. ಆ ಪತ್ರಗಳಲ್ಲಿ ಇಂದಿನ ಜರ್ಮನಿಯ ಜನಜೀವನದ ಬೇರೆ ಬೇರೆ ಮುಖಗಳ ಪರಿಚಯವಿರುವುದು.

— ಸಂ. ಜ.

ಮಾಯಿನ್ಸ್
೭—೩—೧೯೫೪

ಅಕ್ಕರೆಯ ತಾಯಿಗೆ ವಂದನೆಗಳು.

ನಿಮ್ಮ ಓಲೆ ತಲುಪಿ ವಿಷಯವೆಲ್ಲ ತಿಳಿಯಿತು. ಪ್ರತಿಯೊಂದು ಪತ್ರದಲ್ಲಿ ಎಷ್ಟೆಷ್ಟೋ ಪ್ರಶ್ನೆಗಳನ್ನು ಜರ್ಮನ್ ದೇಶದ ಬಗ್ಗೆ ಕೇಳಿದ್ದೀರಿ. ಇಲ್ಲಿಯ ವರೆಗೆ ಆ ಪ್ರಶ್ನೆಗಳಿಗೆ ಉತ್ತರವನ್ನು ಕೊಡದೆ ಇದ್ದದ್ದಕ್ಕೆ

ಕ್ಷಮೆ ಇರಲಿ. ಮುಖ್ಯ ಕಾರಣ: ಜರ್ಮನಿಯು ಚೆಲುವಿನ ನಾಡು; ರಸಿಕರ ಬೀಡು. ಶಾಸ್ತ್ರಜ್ಞರ ಗೂಡು. ಇಂಥ ದೇಶವನ್ನು ವರ್ಣಿಸುವುದಕ್ಕಾಗಲೀ, ಇಲ್ಲಿಯ ಬೇರೆ ಬೇರೆಯ ಸಮಸ್ಯೆಗಳನ್ನು ನಿಮಗೆ ತಿಳಿಸುವುದಕ್ಕಾಗಲೀ, ಬರೆಯುವ ಶೈಲಿ ಬೇಕು "ಬರೆಹಗಾರನಿಗೆ ಶೈಲಿ ಬೇಕು. ಶೈಲಿ ಇಲ್ಲದ ಬರೆಹ ಜೀವವಿಲ್ಲದ ದೇಹವಿದ್ದಂತೆ" ಎಂದು ಓದಿ ಮತ್ತಿಷ್ಟು ತಣ್ಣಗಾಗಿದ್ದೆನು. ಆದರೆ ನಿಮ್ಮ ಇತ್ತೀಚಿನ ಪತ್ರವು ನನ್ನನ್ನು ಹುರಿದುಂಬಿಸಿದೆ. ಉತ್ಸಾಹಿಸಿದೆ. ನನ್ನ ಶೈಲಿಯ ಮಹತ್ತ್ವಕ್ಕಿಂತಲೂ, ನಿಮ್ಮ ಕುತೂಹಲವನ್ನು ಸಂತುಷ್ಟಿಪಡಿಸುವುದರ ಸಲುವಾಗಿ, ನನಗೆ ತಿಳಿದ— ಬಂದ— ರೀತಿಯಲ್ಲಿ ನನ್ನ ಜರ್ಮನಿಯ ಜೀವನವನ್ನು ನಿಮಗೆ ತಿಳಿಸಲು ಪ್ರಯತ್ನಿಸುತ್ತೇನೆ. ಭಾರತ ದೇಶವನ್ನು ಬಿಟ್ಟು ಈವೊತ್ತಿಗೆ ಒಂದು ವರುಷ ಮೂರು ತಿಂಗಳಾಯಿತು. ಈ ಸಮಯದಲ್ಲಿ, ಬೇರೆ ಬೇರೆ ದೇಶಗಳ ರಾಜಕಾರಣದಲ್ಲಿ ತುಂಬ ಬದಲಾವಣೆಗಳಾಗಿವೆ. ಕೊರಿಯಾದಲ್ಲಿ ಯುದ್ಧವು ಸಮಾಪ್ತವಾದರೆ, ಇಂಡೋಚೀನಾದಲ್ಲಿ ಯುದ್ಧ ಸುರುವಾಗಿದೆ. ಇಜಿಪ್ತದಲ್ಲಿ ಜನರಲ್ ನೆಗೀಬರು ಹೋಗಿ ಮತ್ತೆ ತಿರುಗಿ ಅವರೇ ಅಧ್ಯಕ್ಷಪದಕ್ಕೆ ಬಂದರೆ, ಸಿರಿಯಾದಲ್ಲಿ ಶಿಷಾಕಲಿಯವರು ಉರುಳಿ, ಅಟಾಶಿಯವರು ಬಂದಿದ್ದಾರೆ. ಫ್ರಾನ್ಸದ ಅಧ್ಯಕ್ಷರ ಆಯ್ಕೆ ಸುಮಾರು ಏಳು ಸಾರೆ ಜರುಗಿದರೆ, ಬರ್ಲಿನಿನಲ್ಲಿ "ದೊಡ್ಡ ನಾಲ್ಕು ಜನರ" (Big Four Conference) ಸಮ್ಮೇಲನವು ೧೫ ದಿವಸಗಳವರೆಗೆ ನಡೆಯಿತು. ಜರ್ಮನಿಯ ಪುನರೈಕ್ಯ, ಆಸ್ಟ್ರಿಯಾದ ಶಾಂತಿಸಂಬಂಧದ ಪ್ರಶ್ನೆ ಇತ್ಯಾದಿ, ಈ ಸಮ್ಮೇಲನದ ಮುಖ್ಯ ಹೇತುಗಳಾಗಿದ್ದುವು. ಇಂಥ ಎಷ್ಟೋ ಸಮ್ಮೇಲನಗಳು ಆಗಿಹೋಗಿವೆ. ಅದರಂತೆ ಇದೂ ಒಂದು; ದುರ್ದೈವದಿಂದ ಯಾವ ಹೇತುವೂ ಇಡೇರಲಿಲ್ಲ.

ಜರ್ಮನಿಯ ಪುನರೈಕ್ಯವೆಂದರೆ, ಎರಡನೆಯ ಜಾಗತಿಕ ಮಹಾಯುದ್ಧದ ತರುವಾಯ, ೧೯೪೫ರಲ್ಲಿ, ಜರ್ಮನಿಯು ನಾಲ್ಕು ಭಾಗವಾಗಿ ವಿಭಾಗಿಸಲ್ಪಟ್ಟಿತು; ರಶಿಯನ್ನರ ಭಾಗ, ಆಂಗ್ಲರ ಭಾಗ, ಅಮೇರಿಕನ್ನರ ಭಾಗ ಮತ್ತು ಫ್ರೆಂಚರ ಭಾಗ. ಸದ್ಯಕ್ಕೆ ಮುಖ್ಯವಾಗಿ ಎರಡೇ ಭಾಗಗಳನ್ನಾಗಿ ಮಾಡಬಹುದು: ಪೂರ್ವಜರ್ಮನಿ ಮತ್ತು ಪಶ್ಚಿಮಜರ್ಮನಿ. ಪೂರ್ವಜರ್ಮನಿ ರಶಿಯನ್ನರ ಆಧಿಪತ್ಯದಲ್ಲಿದ್ದಂತೆ ಪಶ್ಚಿಮಜರ್ಮನಿ ಮಿತ್ರರ (Allied Control) ಆಧಿಪತ್ಯದಲ್ಲಿದೆ. ಬೇರೆಯ ಶಬ್ದಗಳಲ್ಲಿ, ಹೇಳಬೇಕೆಂದರೆ ಪೂರ್ವಭಾಗ ಕಮ್ಯೂನಿಸ್ಟರ ವಾತಾವರಣ (influence) ದಲ್ಲಿದ್ದರೆ, ಪಶ್ಚಿಮಭಾಗ ಪ್ರಜಾಸತ್ತಾತ್ಮಕರ ನೆಳಲಿನಲ್ಲಿದೆ. ನಾನಿರುವ ಭಾಗ ಪಶ್ಚಿಮಜರ್ಮನಿಯು. ಈ ಭಾಗದ ರಾಜಧಾನಿ ಅತಿ ಪುರಾತನ ಪಟ್ಟಣ ಬೊನ್ (Bonn). Buudes Republic ದ ಅಧ್ಯಕ್ಷರು ಅತಿ ಸುಪ್ರಸಿದ್ಧ ಇತಿಹಾಸಕಾರರಾದ Prof. Dr. Heuss; ಮುಖ್ಯಮಂತ್ರಿಗಳು (Bundes Kanzler) ೭೮ ವರುಷದವರಾದ ನುರಿತ ರಾಜಕಾರಣಪಟು ಡಾಕ್ಟರ್ ಕೊನ್ರಾಡ್ ಅಡನಾವರು. ಇವರು C.D. P (Christian Democratic Party) ಪಕ್ಷದವರು. ಸದ್ಯಕ್ಕೆ ಇಲ್ಲಿ Coialation

ಸರಕಾರವಿದೆ. ಉಳಿದ ಮಂತ್ರಿಗಳು ಕೂಡ ತಮ್ಮ ತಮ್ಮ ಭಾಗದಲ್ಲಿ ಕೈಯೆತ್ತಿದ ಪುರುಷರು. ಇತ್ತೀಚಿನ ಇಲ್ಲಿಯ Electionದ ಪರಿಣಾಮವನ್ನು ಕೂಲಂಕಷವಾಗಿ ಪರೀಕ್ಷಿಸಿದಲ್ಲಿ, ಸದ್ಯದ ಸರಕಾರದಲ್ಲಿ ಇರುವ ಜನರ ಅಪಾರನಂಬಿಗೆ ವ್ಯಕ್ತವಾಗುವುದು.

ಯುದ್ಧವಾಗಿ ಸುಮಾರು ೯ ವರುಷಗಳಾದುವು. ಜರ್ಮನಿಯಲ್ಲಿ ಎಲ್ಲ ಕಾರಖಾನೆಗಳು ೧೯೪೮ನೆಯ ಇಸ್ವಿಯಲ್ಲಿ ತೆರೆಯಲ್ಪಟ್ಟುವು. "ಹಣಕಾಸಿನ" (Wahrungs reform) ಸುಧಾರಣೆಯಾದ ಮೇಲೆ ಇಲ್ಲಿಯ ಆರ್ಥಿಕ ಪರಿಸ್ಥಿತಿ ಸುಧಾರಿಸತೊಡಗಿತು. ಮೊನ್ನೆ "Dic Welt" "ಜಗತ್ತು" ಎಂಬ ದೈನಿಕ ಪತ್ರದಲ್ಲಿ, ಜರ್ಮನಿಯ ಅತಿ ದೊಡ್ಡ ಪ್ರವಾಸಿಕರ ಹಡಗವು, ಉತ್ತರ ಸಮುದ್ರಲ್ಲಿ ಸುರುವಾಯಿತೆಂದು ಓದಿದೆ. ಇದು ಸುಮಾರು ೨೦–೨೨ ಸಾವಿರ ಟನ್ ಭಾರವಾದ ಹಡಗು. ಇಂಥ ಹಡಗನ್ನು ಆರೇ ತಿಂಗಳಲ್ಲಿ ಜರ್ಮನರು ಕಟ್ಟಿದ್ದಾರೆ.

"Allgemeine Zeitung" ಎಂಬ ಇನ್ನೊಂದು ಮಾಯಿನ್ಸದ ದೈನಿಕಪತ್ರದಲ್ಲಿ ಮತ್ತೊಂದು ಮಹತ್ತ್ವವಾದ ಸಂಗತಿಯನ್ನೋದಿದೆ. ರಶಿಯಾಕ್ಕೆ ಇತ್ತೀಚೆಗೆ, ಆಂಗ್ಲವರ್ತಕ ಸದಸ್ಯರ ಗುಂಪು (Delegation) ವ್ಯಾಪಾರದ ಮಾತುಕತೆಗಳಿಗಾಗಿ ಹೋದದ್ದು ನಿಮಗೆ ಗೊತ್ತಿರಲಿಕ್ಕೆ ಸಾಕು. ಆಂಗ್ಲರು ಮತ್ತು ಅಮೇರಿಕನರು, ತಮ್ಮ ಮಾಲಿಗೆ ಕೊಡಹೇಳಿದ ಮಾರಾಟದ ಕ್ರಯಕ್ಕಿಂತಲೂ ಕಡಿಮೆಯಾಗಿ ಪಶ್ಚಿಮ ಜರ್ಮನಿಯ ವರ್ತಕರು ಅವೇ ಮಾಲನ್ನು ಕ್ರಯಕ್ಕೆ ಕೊಡಲಿಕ್ಕೆ ಸಿದ್ಧರಾದರು. ಅದರಂತೆ ಫ್ರಾನ್ಸಿನಲ್ಲಿ ಆಂಗ್ಲ ಮತ್ತು ಜರ್ಮನ್ ಜನರ ನಡುವೆ Competition ನಡೆಯಿತು. ಇಂಥ ಉದಾಹರಣೆಗಳು ಎಷ್ಟೋ ಇವೆ. ಇವುಗಳನ್ನು ನಿಮಗೆ ತಿಳಿಸುವ ಉದ್ದೇಶ ಇಷ್ಟೆ: ಜರ್ಮನಿಯು ಯುದ್ಧವಾದ ಮೇಲೆ ಸ್ವಲ್ಪೇ ಕಾಲದಲ್ಲಿ, ಮತ್ತೆ ಜಗತಿನಲ್ಲಿ ಆರ್ಥಿಕದೃಷ್ಟಿಯಿಂದ ಅತಿ ಬಲಿಷ್ಠವಾದ ದೇಶವಾಗಿ ನಿಂತಿದೆ. ಉದ್ಯೋಗಪೂರಿತ ರಾಷ್ಟ್ರಗಳಾದ ಅಮೇರಿಕೆ ಮತ್ತು ಇಂಗ್ಲಂಡದ ಕಾರಖಾನೆಯ ತಯಾರಿಕೆ (Production)ಗಿಂತಲೂ ೧೦ ಪಟ್ಟು ಹೆಚ್ಚು ತಯಾರಿಕೆ ಜರ್ಮನಿಯ ಕಾರಖಾನೆಗಳಲ್ಲಿ. ಸ್ವಲ್ಪೇ ಕಾಲದಲ್ಲಿಯ ಜರ್ಮನಿಯ ಆರ್ಥಿಕ ಪ್ರಗತಿಯನ್ನು ನೋಡಿದಲ್ಲಿ, ಇಲ್ಲಿಯ ಜನರ ಕರ್ತವ್ಯದಕ್ಷತೆ, ಪ್ರಾಮಾಣಿಕತೆ ಅಲ್ಲದೆ ಕಾರ್ಯಕುಶಲತೆ ವ್ಯಕ್ತವಾಗುತ್ತವೆ.

ಸದ್ಯಕ್ಕೆ ಪ. ಜರ್ಮನಿಯ ರಾಜಧಾನೀ 'ಬೊನ್' ಬಿಟ್ಟು, ನಾನಿರುವ ಊರಿಗೆ ಬರೋಣ. ನಾನು ವಾಸಿಸುವ ಊರು ಮಾಯನ್ಸ್ (Mainz). ಇದನ್ನು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಹೆಸರುಳಿಂದ ಕರೆಯುತ್ತಿದ್ದರು. ರೋಮನರ ಕಾಲದಲ್ಲಿ Mogontiacum, ಫ್ರೆಂಚರ ಕಾಲದಲ್ಲಿ Mayence ಮತ್ತೆ Maginze, Mentze ಮತ್ತು Meentz. ಸುಧಾರಿಸಿದ ಜರ್ಮನ್ ಭಾಷೆಯಲ್ಲಿ (Nenttoch Dentch)ನಲ್ಲಿ Mainz ಎಂದು ಕರೆಯುತ್ತಾರೆ. ಮಾಯಿನ್ಸದ Dialeet ಪ್ರಸಿದ್ಧವಾದ Dialeet. ಈ Dialeet ನಲ್ಲಿ ಮೇನ್ಸ (Maanz) ಎಂದು ಕರೆಯುತ್ತಾರೆ. ಇಲ್ಲಿಯ Dioleet ನ್ನು ಕೇಳಿ ತುಂಬ ಆನಂದಪಡಬಹುದು. ರ್‍ಹಾಯನ್ (Rhine) ಮತ್ತು ಮಾಯನ್ (Main) ನದಿಗಳ ಸಂಗಮಸ್ಥಳದ ಮೇಲೆ ನೆಲಸಿದ, ಸೆಲಟಿಕ್ ಕಾಲದ ಅತಿ ಪುರಾತನ ಸಂಸ್ಕೃತಿಯ ಕೇಂದ್ರವು ಮಾಯನ್ಸ್. ರೋಮನ್ ಸಾಮ್ರಾಜ್ಯದಲ್ಲಿ ಮೆರೆದ ಪಟ್ಟಣ ಮಾಯನ್ಸ್. ಮನುಷ್ಯನಿಗೆ ಜೀವನದಲ್ಲಿ ಏರಿಳಿತಗಳಿದ್ದಂತೆ, ಈ ಪಟ್ಟಣಕ್ಕೂ ಏರಿಳಿತಗಳು. ಒಂದು ಕಾಲದಲ್ಲಿ ಉನ್ನತಿಯಲ್ಲಿದ್ದರೆ, ಮತ್ತೊಂದು ಕಾಲದಲ್ಲಿ ಇಳಿತದಲ್ಲಿ ಕಾಣಬಹುದು. ಇದರ ಉನ್ನತಿ-ಕಾಲ ಮಧ್ಯಯುಗ. Archbishop ರನ್ನು ಆರಿಸುವ ಕೇಂದ್ರ. ಸುಮಾರು ಸಾವಿರಾರು ವರುಷಗಳ ವರೆಗೆ ಜರ್ಮನಿಯ ಭವಿತವ್ಯ ಈ ಧಾರ್ಮಿಕ Archibishopರನ್ನು ಅವಲಂಬಿಸಿತ್ತು. ಈಗಿನ ಮಾಯನ್ಸ್ ಯುದ್ಧದಿಂದ ಹಾಳಾದ ಮಾಯನ್ಸ್. ಆದರೂ ಈಗ ಎಷ್ಟೋ ವಾಸಿ. ಬಿದ್ದಮನೆಗಳು ಎದ್ದಿವೆ. ಹೊಸ ಕಟ್ಟಡಗಳು ಸುರುವಾಗಿವೆ. ಎಲ್ಲಿ ನೋಡಿದಲ್ಲಿ ಜೀವವಿದೆ. ಉತ್ಸಾಹವಿದೆ. ಕಳೆಯಿದೆ. ಜನಸಂಖ್ಯೆ ಸುಮಾರು ೫೦,೦೦೦. ಇದಕ್ಕೆ ಕೆಲವು ಹಳ್ಳಿಗಳೂ ಇವೆ. (Suburbs) (ಈ ಎಲ್ಲ ಹಳ್ಳಿಗಳಿಗೂ ಓಡಾಡುವ ಅನುಕೂಲತೆಗಳು ಬೇಕಾದಷ್ಟಿವೆ.) ಮುಖ್ಯ ಹಳ್ಳಿಗಳು: Mombach, Mainz Kastel, Gonsenheim, Brezenheim ಇತ್ಯಾದಿ. ಈ ಹಳ್ಳಿಗಳಿಗೆ ಬೀದಿಯ ಗಾಡಿಗಳಿವೆ. (Strassenbahn : Tram) Omnibus ಗಳಿವೆ. ರೈಲುಗಳಿವೆ. ಜರ್ಮನಿಯಲ್ಲಿ ಪ್ರವಾಸ ಬಹಳ ತುಟ್ಟಿ. ೧ ಕಿಲೊಮೀಟರಿಗೆ ಸುಮಾರು ೩ ಬಿಲ್ಲಿ,



ಮಾಯನ್ಸ್ ಸಂಸ್ಕೃತಿಪೂರಿತ ಪಟ್ಟಣ. ಅನೇಕ ಐತಿಹಾಸಿಕ ಶಾಸನಗಳಿವೆ; ಪ್ರಾಚೀನ ಕುರುಹುಗಳಿವೆ. ಪ್ರಖ್ಯಾತ ಪುರುಷರ ಶಿಲಾಮೂರ್ತಿಗಳಿವೆ (Monuments) ಸ್ಟೌನ್‌ರಾಜರ ಕುರುಹುಗಳು ಮತ್ತು ಕೆಥೊಲಿಕರ ಡೊಂ ಅತಿ ಸುಂದರವಾದ ಸ್ಥಳಗಳು. ಇಲ್ಲಿ (ಹೊದಿಕೆಯ ಪುಟದ ಮೇಲಿನ ಚಿತ್ರ ನೋಡಿರಿ) ೧೦ನೆಯ ಶತಮಾನದಲ್ಲಿ ಕಟ್ಟಿದ "ಡೊಂ" (Dom). ಇದರ ಕಟ್ಟಡದ ವಾಸ್ತುರೀತಿ ರೋಮನ್ ಮತ್ತು ಗೊಥಿಕ್ ಶೈಲಿಯ ಮಿಶ್ರಣ. ಇದರಲ್ಲಿಯ ಕ್ರಿಸ್ತನ ಬಾಲ್ಯದ ಮತ್ತು ಅವನ ಬೇರೆ ಜೀವನದ ಚಿತ್ರಗಳನ್ನು ನೋಡಿದರೆ, ಆಗಿನ ಕಾಲದ ಕಲೆಯ ಮಹತ್ತ್ವ ವಿದಿತವಾಗುತ್ತವೆ. ಪುರಾತನ ಕಾಲದಿಂದ ಮಾಯನ್ಸ್ ಕೆಥೊಲಿಕರ ಕೇಂದ್ರ. ಈಗಲೂ ಇದು ತನ್ನ

ಪರಂಪರೆಯನ್ನು ಕಾಯ್ದುಕೊಂಡು ಬಂದಿದೆ. ಇಲ್ಲಿ ಮುಖ್ಯವಾಗಿ ಧರ್ಮದ ಪಂಗಡಗಳು ಎರಡು: ಕೆಥೋಲಿಕರು ಮತ್ತು ಪ್ರೊಟೆಸ್ಟಂಟರು. ಪ್ರೊಟೆಸ್ಟಂಟ್ ಮತಸಂಸ್ಥಾಪಕರಾದ ಮಾರ್ಟಿನ್‌ಲ್ಯೂಥರು ಜರ್ಮನ್‌ರು. ಇವರು ಹುಟ್ಟಿದ ಊರು "Worms". ಇದರ ಬಗ್ಗೆ ಮತ್ತು ಧಾರ್ಮಿಕ ವಿಚಾರಗಳ ಬಗ್ಗೆ ಇನ್ನೊಂದೆಡೆಯಲ್ಲಿ ಬರೆಯುತ್ತೇನೆ.

ಆಮೇಲೆ ಮಾಯಿನ್ಸನ ವಸ್ತುಸಂಗ್ರಹಾಲಯಕ್ಕೆ (Mainz Museum) ಬರೋಣ. ಜ್ಯೊಹಾನೆಸ್ ಗೂಟೆನ್‌ಬರ್ಗರ ವಸ್ತುಸಂಗ್ರಹಾಲಯವು ಅಂತರರಾಷ್ಟ್ರೀಯ ದೃಷ್ಟಿಯಿಂದ ಮಹತ್ತ್ವವಾದದ್ದು. ಇಲ್ಲಿ, ವಿರಳವಾದ "೪೨ ಸಾಲಿನ ಬಾಯ್‌ಬಲ್", Fragment vomwelt gericht", ಮಹಾಶೂರ ಚಾರ್ಲ್‌ಸನ "Book of hours" ಗಳನ್ನು ನೋಡಬಹುದು ಇದರ ಮೊದಲಿನ ಭಾಗವನ್ನು ಪ್ರಸಿದ್ಧ ಪಡಿಸಿದವರು, ಮುದ್ರಣದ ಶೋಧಕರಾದ ಜ್ಯೊಗಾನೆಸ್ ಗೂಟೆನ್‌ಬರ್ಗ್ (೧೪೦೦–೧೪೬೮).

"Mainzer Romisch Germanische Zentral Museum"

ಮಾಯಿನ್ಸಿನ ಎರಡನೆಯ ದೊಡ್ಡ ಸಂಗ್ರಹಾಲಯವಿದು. ಇದರ ಮುಖ್ಯ ಉದ್ದೇಶ, ಪೂರ್ವ ಐತಿಹಾಸಿಕ– ಕಾರೋಲಿಂಗನ್ ಕಾಲದ ವಸ್ತುಗಳನ್ನು ದೊರಕಿಸುವುದು. ಅಲ್ಲದೆ ಕಾಲಕ್ರಮದಿಂದ ವಸ್ತುಗಳನ್ನು ವರ್ಗೀಕರಿಸುವುದು ಇಲ್ಲಿ, ಮೆರೋವಿಂಗೆನ್ ಮತ್ತು ಕಾರೊಲಿಂಗನ್ ಕಾಲದ ಅತಿ ವಿರಳವಾದ ವಸ್ತುಗಳನ್ನು ನೋಡಿ ಆನಂದಪಡಬಹುದು. "Venus vom Linsberg" "Jupiter saule" ಇವೇ ಮುಖ್ಯವಾದುವುಗಳು.

ಜರ್ಮನಿಯಲ್ಲಿ, ಬಹುತೇಕ ಎಲ್ಲ ದೊಡ್ಡ ಪಟ್ಟಣಗಳಲ್ಲಿ ಕವಿ ಶಿಲ್ಲರರ ಶಿಲಾಚಿತ್ರವನ್ನು (Monument) ನೋಡಬಹುದು. ಅದರಂತೆ ಇಲ್ಲಿಯೂ ಕೂಡ "Schillar Platz" ನಲ್ಲಿ ಕವಿ ಶಿಲ್ಲರರ ಶಿಲಾಮೂರ್ತಿಯನ್ನು ನೋಡಬಹುದು. Mainz ನ ಮೇಲೆ ಮತ್ತು Dom ನ ಮೇಲೆ ಕವನಗಳನ್ನು ಬರೆದಿದ್ದಾರೆ. Mainz ನ "ಡೊಂ" ನ್ನು ವರ್ಣಿಸದ ಕವಿಗಳಿಲ್ಲ.

"Gutenberg Platz" ನಲ್ಲಿದ್ದ ಗೂಟೆನ್ ಬರ್ಗರ ಶಿಲಾಪ್ರತಿಮೆಯು ತರುಣರಿಗೆ ಉತ್ಸಾಹ ಬೀರುತ್ತದೆ.

ಜರ್ಮನಿಯಲ್ಲಿ, Liepzig, Gotingon, Bevlin ಮತ್ತು Heidelberg ವಿಶ್ವವಿದ್ಯಾಲಯಗಳು ಪುರಾತನ ವಿಶ್ವವಿದ್ಯಾಲಗಳಾದರೆ, ಮಾಯಿನ್ಸಿನ ವಿಶ್ವವಿದ್ಯಾಲಯವು ಅತೀ ಹೊಸದು. ಇದು ೧೯೪೬ನೆಯ ಇಸ್ವಿ ಮೇ ತಿಂಗಳಲ್ಲಿ ಫ್ರೆಂಚ್ ಮಿಲಿಟರಿ ಸರಕಾರದ ಸಹಾನುಭೂತಿಯಿಂದ ಸ್ಥಾಪಿತವಾಯಿತು. ಇದರ ಪೂರ್ವ ಇತಿಹಾಸವನ್ನು ನೋಡಿದರೆ, ಇದೇನು ಹೊಸ ವಿದ್ಯಾಲಯವಲ್ಲ Diether von Isenberg ರು ೧೪೭೭ರಲ್ಲಿ ಮಾಯಿನ್ಸ್ ವಿದ್ಯಾಲಯವನ್ನು ಸ್ಥಾಪಿಸಿದರು. ಈಗಲೂ ಈ ವಿಶ್ವವಿದ್ಯಾಲಯದ ಹಳೆಯ ಕಟ್ಟಡವನ್ನು ಪಟ್ಟಣದಲ್ಲಿ ನೋಡಬಹುದು. "Dem Alt Mainger Universitaire" ಎಂದು ಇದಕ್ಕೆ ಹೆಸರಿತ್ತು. ಫ್ರೆಂಚ್ ರಾಜ್ಯಕ್ರಾಂತಿಯಾದ ಮೇಲೆ, ರಾಜಕಾರಣದ ಅಶಾಂತತೆಯಿಂದ ಮುಚ್ಚಲ್ಪಟ್ಟಿತ್ತು. ಸುಪ್ರಸಿದ್ಧ ದಿಂದ ಮತ್ತೊಮ್ಮೆ ಸುರುವಾಗಿದೆ ಈಗ ಇದಕ್ಕೆ "Johannes Gutenberg Universitait" ಎಂದು ಪ್ರಸಿದ್ಧ ಮುದ್ರಣಕಾರರ ಹೆಸರನ್ನು ಕೊಟ್ಟಿದ್ದಾರೆ. ಈಗಿನ ವಿಶ್ವವಿದ್ಯಾಲಯವು ಯುದ್ಧಕಾಲದಲ್ಲಿಯ ಸೈನಿಕರ ಕಟ್ಟಡಕ್ಕೆ ಬಂದಿದೆ. ಸುಮಾರು ೭೦೦೦–೮೦೦೦ ಹುಡುಗರಿದ್ದಾರೆ. ಪಶ್ಚಿಮ ಜರ್ಮನಿಯಲ್ಲಿ, ಸ್ವಲ್ಪೇ ಕಾಲದಲ್ಲಿ, ಎರಡನೆಯ ದೊಡ್ಡ ಪ್ರಖ್ಯಾತ ವಿಶ್ವವಿದ್ಯಾಲಯವಾಗಿದೆ. ಇದಕ್ಕೆ ಹೊಂದಿಕೊಂಡು ಪ್ರಖ್ಯಾತವಾದ "Max Plank Institute fur Chemie" (ಯುದ್ಧದ ಮೊದಲು Kaiser wilhelm institste) ಸಂಸ್ಥೆ ಇದೆ. Academy of science & letters ಮತ್ತು Institute fur Europesthe Historic" ವಿಶ್ವವಿದ್ಯಾಲಯದ ಮುಖ್ಯ ಭಾಗಗಳು. ಅಲ್ಲದೆ ಬೇರೆ ಬೇರೆಯ ವಿಷಯಗಳ ಭಾಗಗಳಿವೆ. ವಿಶ್ವವಿದ್ಯಾಲಯದ, ಪರದೇಶದ ಭಾಷೆಯ ಸಂಸ್ಥೆಯು (Dolmacher institnte) ಮಾಯಿನ್ಸನಿಂದ ೭೦ ಮೈಲಿಗಳಿಂದ ದೂರವಿದ್ದ "Germersheim" ಎಂಬ ಊರಿನಲ್ಲಿದೆ. ಈ ವಿಶ್ವವಿದ್ಯಾಲಯದಲ್ಲಿ "ಹಿಂದೀ" ಕಲಿಸುವ ವ್ಯವಸ್ಥೆ ಇದೆ ಈ ವಿಷಯವನ್ನು ಕಲಿಸಲು, ಧಾರವಾಡದ ಕನ್ನಡಿಗರಾದ ಶ್ರೀಮಾನ್ ಶ್ರೀನಿವಾಸ ಪಾಟೀಲರು ಶಿಕ್ಷಕರಾಗಿದ್ದಾರೆ

ವಿಶ್ವವಿದ್ಯಾಲಯದ ಪ್ರತಿಯೊಂದು ಭಾಗಕ್ಕೆ ಜಗತ್ಪ್ರಸಿದ್ಧರಾದ ಜನರು ಡಿರೆಕ್ಟರರಾಗಿದ್ದಾರೆ. Prof. Dr. Strassmannರ ಹೆಸರನ್ನು ನೀವು ಕೇಳಿರಲಿಕ್ಕೆ ಸಾಕು. Atom Bombನ್ನು ಹುಡುಕಿದ ಸುಪ್ರಸಿದ್ಧ ಶಾಸ್ತ್ರಜ್ಞರಾದ Prof. Otto Hahnನರ ಸಹಪಾಠಿಗಳು, ಸಹಕೆಲಸಗಾರರು (Coworker) Prof. Strassmannರು. ಇದರಂತೆ ಪ್ರತಿಯೊಂದು ಶಾಖೆಗೂ ಪ್ರಸಿದ್ಧ ವ್ಯಕ್ತಿಗಳಿದ್ದಾರೆ.

ಈ ಎಲ್ಲ ರೀತಿಯಿಂದ, ಪುರಾತನ ಸಂಸ್ಕೃತಿಶಿಖರವನ್ನು ಮತ್ತೊಮ್ಮೆ ಮಾಯನ್ಸ್ ದೊರಕಿಸುವುದೆಂಬುದರಲ್ಲಿ ಏನೂ ಸಂದೇಹವಿಲ್ಲ. ಮಾಯನ್ಸಿನ ಜನರು ಬಹಳ ರಸಿಕರು. ಇವರ ದೊಡ್ಡ ಹಬ್ಬ "ಕಾರ್ನಿವಾಲ್" (Karneval). ಈ ಹಬ್ಬದ ವಿಷಯವಾಗಿ ಮುಂದಿನ ಓಲೆಯಲ್ಲಿ ನಿಮಗೆ ತಿಳಿಸುತ್ತೇನೆ.

ಹಿರಿಯರಿಗೆ ನಮಸ್ಕಾರ.

ನಿಮ್ಮ ಮಗ,

ಮಧ್ವೇಶ

ಸರಕಾರವಿದೆ. ಉಳಿದ ಮಂತ್ರಿಗಳು ಕೂಡ ತಮ್ಮ ತಮ್ಮ ಭಾಗದಲ್ಲಿ ಕೈಯಿತ್ತಿದ ಪುರುಷರು. ಇತ್ತೀಚಿನ ಇಲ್ಲಿಯ Electionದ ಪರಿಣಾಮವನ್ನು ಕೂಲಂಕಷವಾಗಿ ಪರೀಕ್ಷಿಸಿದಲ್ಲಿ, ಸದ್ಯದ ಸರಕಾರದಲ್ಲಿ ಇರುವ ಜನರ ಅಪಾರನಂಬಿಗೆ ವ್ಯಕ್ತವಾಗುವುದು.

ಯುದ್ಧವಾಗಿ ಸುಮಾರು ೯ ವರುಷಗಳಾದುವು. ಜರ್ಮನಿಯಲ್ಲಿ ಎಲ್ಲ ಕಾರಖಾನೆಗಳು ೧೯೪೮ನೆಯ ಇಸ್ವಿಯಲ್ಲಿ ತೆರೆಯಲ್ಪಟ್ಟವು. "ಹಣಕಾಸಿನ" (Wahtungs reform) ಸುಧಾರಣೆಯಾದ ಮೇಲೆ ಇಲ್ಲಿಯ ಆರ್ಥಿಕ ಪರಿಸ್ಥಿತಿ ಸುಧಾರಿಸತೊಡಗಿತು. ಮೊನ್ನೆ "Dic Welt" "ಜಗತ್ತು" ಎಂಬ ದೈನಿಕ ಪತ್ರದಲ್ಲಿ, ಜರ್ಮನಿಯ ಅತಿ ದೊಡ್ಡ ಪ್ರವಾಸಿಕರ ಹಡಗವು, ಉತ್ತರ ಸಮುದ್ರಲ್ಲಿ ಸುರುವಾಯಿತೆಂದು ಓದಿದೆ. ಇದು ಸುಮಾರು ೨೦-೨೨ ಸಾವಿರ ಟನ್ ಭಾರವಾದ ಹಡಗು. ಇಂಥ ಹಡಗನ್ನು ಆರೇ ತಿಂಗಳಲ್ಲಿ ಜರ್ಮನರು ಕಟ್ಟಿದ್ದಾರೆ.

"Allgemeine Zeitung" ಎಂಬ ಇನ್ನೊಂದು ಮಾಯಿನ್ಸದ ದೈನಿಕಪತ್ರದಲ್ಲಿ ಮತ್ತೊಂದು ಮಹತ್ತ್ವವಾದ ಸಂಗತಿಯನ್ನೋದಿದೆ. ರಶಿಯಾಕ್ಕೆ ಇತ್ತೀಚೆಗೆ, ಆಂಗ್ಲವರ್ತಕ ಸದಸ್ಯರ ಗುಂಪು (Delegation) ವ್ಯಾಪಾರದ ಮಾತುಕತೆಗಳಿಗಾಗಿ ಹೋದದ್ದು ನಿಮಗೆ ಗೊತ್ತಿರಲಿಕ್ಕೆ ಸಾಕು. ಆಂಗ್ಲರು ಮತ್ತು ಅಮೇರಿಕನರು, ತಮ್ಮ ಮಾಲಿಗೆ ಕೊಡಹೇಳಿದ ಮಾರಾಟದ ಕ್ರಯಕ್ಕಿಂತಲೂ ಕಡಿಮೆಯಾಗಿ ಪಶ್ಚಿಮ ಜರ್ಮನಿಯ ವರ್ತಕರು ಅವೇ ಮಾಲನ್ನು ಕ್ರಯಕ್ಕೆ ಕೊಡಲಿಕ್ಕೆ ಸಿದ್ಧರಾದರು. ಅದರಂತೆ ಫ್ರಾನ್ಸಿನಲ್ಲಿ ಆಂಗ್ಲ ಮತ್ತು ಜರ್ಮನ್ ಜನರ ನಡುವೆ Competition ನಡೆಯಿತು. ಇಂಥ ಉದಾಹರಣೆಗಳು ಎಷ್ಟೋ ಇವೆ. ಇವುಗಳನ್ನು ನಿಮಗೆ ತಿಳಿಸುವ ಉದ್ದೇಶ ಇಷ್ಟೆ: ಜರ್ಮನಿಯು ಯುದ್ಧವಾದ ಮೇಲೆ ಸ್ವಲ್ಪೇ ಕಾಲದಲ್ಲಿ, ಮತ್ತೆ ಜಗತಿನಲ್ಲಿ ಆರ್ಥಿಕದೃಷ್ಟಿಯಿಂದ ಅತಿ ಬಲಿಷ್ಠವಾದ ದೇಶವಾಗಿ ನಿಂತಿದೆ. ಉದ್ಯೋಗಪೂರಿತ ರಾಷ್ಟ್ರಗಳಾದ ಅಮೇರಿಕೆ ಮತ್ತು ಇಂಗ್ಲಂಡದ ಕಾರಖಾನೆಯ ತಯಾರಿಕೆ (Production)ಗಿಂತಲೂ ೧೦ ಪಟ್ಟು ಹೆಚ್ಚು ತಯಾರಿಕೆ ಜರ್ಮನಿಯ ಕಾರಖಾನೆಗಳಲ್ಲಿ. ಸ್ವಲ್ಪೇ ಕಾಲದಲ್ಲಿಯ ಜರ್ಮನಿಯ ಆರ್ಥಿಕ ಪ್ರಗತಿಯನ್ನು ನೋಡಿದಲ್ಲಿ, ಇಲ್ಲಿಯ ಜನರ ಕರ್ತವ್ಯದಕ್ಷತೆ, ಪ್ರಾಮಾಣಿಕತೆ ಅಲ್ಲದೆ ಕಾರ್ಯಕುಶಲತೆ ವ್ಯಕ್ತವಾಗುತ್ತವೆ.

ಸದ್ಯಕ್ಕೆ ಪ. ಜರ್ಮನಿಯ ರಾಜಧಾನೀ 'ಬೊನ್' ಬಿಟ್ಟು, ನಾನಿರುವ ಊರಿಗೆ ಬರೋಣ. ನಾನು ವಾಸಿಸುವ ಊರು ಮಾಯನ್ಸ್ (Mainz). ಇದನ್ನು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಿದ್ದರು. ರೋಮನರ ಕಾಲದಲ್ಲಿ Mogontiacum, ಫ್ರೆಂಚರ ಕಾಲದಲ್ಲಿ Mayence ಮತ್ತೆ Maginze, Mentze ಮತ್ತು Meentz. ಸುಧಾರಿಸಿದ ಜರ್ಮನ್ ಭಾಷೆಯಲ್ಲಿ (Nenttoch Dentch)ನಲ್ಲಿ Mainz ಎಂದು ಕರೆಯುತ್ತಾರೆ. ಮಾಯಿನ್ಸದ Dialeet ಪ್ರಸಿದ್ಧವಾದ Dialeet. ಈ Dialeetನಲ್ಲಿ ಮೇನ್ಸ (Maanz) ಎಂದು ಕರೆಯುತ್ತಾರೆ. ಇಲ್ಲಿಯ Dioleetನ್ನು ಕೇಳಿ ತುಂಬ ಆನಂದಪಡಬಹುದು. ರ್ಹಾಯನ್ (Rhine) ಮತ್ತು ಮಾಯನ್ (Main) ನದಿಗಳ ಸಂಗಮಸ್ಥಳದ ಮೇಲೆ ನೆಲಸಿದ, ಸೆಲ್ಟಿಕ್ ಕಾಲದ ಅತಿ ಪುರಾತನ ಸಂಸ್ಕೃತಿಯ ಕೇಂದ್ರವು ಮಾಯನ್ಸ್. ರೋಮನ್ ಸಾಮ್ರಾಜ್ಯದಲ್ಲಿ ಮೆರೆದ ಪಟ್ಟಣ ಮಾಯನ್ಸ್. ಮನುಷ್ಯನಿಗೆ ಜೀವನದಲ್ಲಿ ಏರಿಳಿತಗಳಿದ್ದಂತೆ, ಈ ಪಟ್ಟಣಕ್ಕೂ ಏರಿಳಿತಗಳು. ಒಂದು ಕಾಲದಲ್ಲಿ ಉನ್ನತಿಯಲ್ಲಿದ್ದರೆ, ಮತ್ತೊಂದು ಕಾಲದಲ್ಲಿ ಇಳಿತದಲ್ಲಿ ಕಾಣಬಹುದು. ಇದರ ಉನ್ನತಿ-ಕಾಲ ಮಧ್ಯಯುಗ. Archbishop ರನ್ನು ಆರಿಸುವ ಕೇಂದ್ರ. ಸುಮಾರು ಸಾವಿರಾರು ವರುಷಗಳ ವರೆಗೆ ಜರ್ಮನಿಯ ಭವಿತವ್ಯ ಈ ಧಾರ್ಮಿಕ Archibishopರನ್ನು ಅವಲಂಬಿಸಿತ್ತು. ಈಗಿನ ಮಾಯನ್ಸ್ ಯುದ್ಧದಿಂದ ಹಾಳಾದ ಮಾಯನ್ಸ್. ಆದರೂ ಈಗ ಎಷ್ಟೋ ವಾಸಿ. ಬಿದ್ದಮನೆಗಳು ಎದ್ದಿವೆ. ಹೊಸ ಕಟ್ಟಡಗಳು ಸುರುವಾಗಿವೆ. ಎಲ್ಲಿ ನೋಡಿದಲ್ಲಿ ಜೀವವಿದೆ. ಉತ್ಸಾಹವಿದೆ. ಕಳೆಯಿದೆ. ಜನಸಂಖ್ಯೆ ಸುಮಾರು ೫೦,೦೦೦. ಇದಕ್ಕೆ ಕೆಲವು ಹಳ್ಳಿಗಳೂ ಇವೆ. (Suburbs) (ಈ ಎಲ್ಲ ಹಳ್ಳಿಗಳಿಗೂ ಓಡಾಡುವ ಅನುಕೂಲತೆಗಳು ಬೇಕಾದಷ್ಟಿವೆ.) ಮುಖ್ಯ ಹಳ್ಳಿಗಳು: Mombach, Mainz Kastel, Gonsenheim, Brezenheim ಇತ್ಯಾದಿ. ಈ ಹಳ್ಳಿಗಳಿಗೆ ಬೀದಿಯ ಗಾಡಿಗಳಿವೆ. (Strassenbahn : Tram) Omnibus ಗಳಿವೆ. ರೈಲುಗಳಿವೆ. ಜರ್ಮನಿಯಲ್ಲಿ ಪ್ರವಾಸ ಬಹಳ ತುಟ್ಟಿ. ೧ ಕಿಲೊಮೀಟರಿಗೆ ಸುಮಾರು ೩ ಬಿಲ್ಲಿ,



ಮಾಯನ್ಸ್ ಸಂಸ್ಕೃತಿಪೂರಿತ ಪಟ್ಟಣ. ಅನೇಕ ಐತಿಹಾಸಿಕ ಶಾಸನಗಳಿವೆ; ಪ್ರಾಚೀನ ಕುರುಹುಗಳಿವೆ. ಪ್ರಖ್ಯಾತ ಪುರುಷರ ಶಿಲಾಮೂರ್ತಿಗಳಿವೆ (Monuments) ಸ್ಥೆನ್‌ರಾಜರ ಕುರುಹುಗಳು ಮತ್ತು ಕೆಥೊಲಿಕರ ಡೊಂ ಅತಿ ಸುಂದರವಾದ ಸ್ಥಳಗಳು. ಇಲ್ಲಿ (ಹೊದಿಕೆಯ ಪುಟದ ಮೇಲಿನ ಚಿತ್ರ ನೋಡಿರಿ) ೧೦ನೆಯ ಶತಮಾನದಲ್ಲಿ ಕಟ್ಟಿದ "ಡೊಂ" (Dom). ಇದರ ಕಟ್ಟಡದ ವಾಸ್ತುರೀತಿ ರೋಮನ್ ಮತ್ತು ಗೊಥಿಕ್ ಶೈಲಿಯ ಮಿಶ್ರಣ. ಇದರಲ್ಲಿಯ ಕ್ರಿಸ್ತನ ಬಾಲ್ಯದ ಮತ್ತು ಅವನ ಬೇರೆ ಜೀವನದ ಚಿತ್ರಗಳನ್ನು ನೋಡಿದರೆ, ಆಗಿನ ಕಾಲದ ಕಲೆಯ ಮಹತ್ತ್ವ ವಿದಿತವಾಗುತ್ತವೆ. ಪುರಾತನ ಕಾಲದಿಂದ ಮಾಯನ್ಸ್ ಕೆಥೊಲಿಕರ ಕೇಂದ್ರ. ಈಗಲೂ ಇದು ತನ್ನ

ಪರಂಪರೆಯನ್ನು ಕಾಯ್ದುಕೊಂಡು ಬಂದಿದೆ. ಇಲ್ಲಿ ಮುಖ್ಯವಾಗಿ ಧರ್ಮದ ಸಂಗಡಗಳು ಎರಡು: ಕೆಥೊಲಿಕರು ಮತ್ತು ಪ್ರೊಟೆಸ್ಟಂಟರು. ಪ್ರೊಟೆಸ್ಟಂಟ್ ಮತಸಂಸ್ಥಾಪಕರಾದ ಮಾರ್ಟಿನ್‌ಲ್ಯೂಥರು ಜರ್ಮನ್‌ರು. ಇವರು ಹುಟ್ಟಿದ ಊರು "Worms". ಇದರ ಬಗ್ಗೆ ಮತ್ತು ಧಾರ್ಮಿಕ ವಿಚಾರಗಳ ಬಗ್ಗೆ ಇನ್ನೊಂದೆಡೆಯಲ್ಲಿ ಬರೆಯುತ್ತೇನೆ.

ಆಮೇಲೆ ಮಾಯಿನ್ಸ್ಸನ ವಸ್ತುಸಂಗ್ರಹಾಲಯಕ್ಕೆ (Mainz Museum) ಬರೋಣ. ಜ್ಯೊಹಾನೆಸ್ ಗೂಟೆನ್‌ಬರ್ಗರ ವಸ್ತುಸಂಗ್ರಹಾಲಯವು ಅಂತರರಾಷ್ಟ್ರೀಯ ದೃಷ್ಟಿಯಿಂದ ಮಹತ್ತ್ವವಾದದ್ದು. ಇಲ್ಲಿ, ವಿರಳವಾದ "೪೨ ಸಾಲಿನ ಬಾಯ್‌ಬಲ್", Fragment vomwelt gericht", ಮಹಾಶೂರ ಚಾರ್ಲಸನ "Book of hours" ಗಳನ್ನು ನೋಡಬಹುದು ಇದರ ಮೊದಲಿನ ಭಾಗವನ್ನು ಪ್ರಸಿದ್ಧ ಪಡಿಸಿದವರು, ಮುದ್ರಣದ ಶೋಧಕರಾದ ಜ್ಯೊಗಾನೆಸ್ ಗೂಟೆನ್‌ಬರ್ಗ್ (೧೪೦೦–೧೪೬೮).

"Mainzer Romisch Germanische Zentral Museum"

ಮಾಯಿನ್ಸ್ಸಿನ ಎರಡನೆಯ ದೊಡ್ಡ ಸಂಗ್ರಹಾಲಯವಿದು. ಇದರ ಮುಖ್ಯ ಉದ್ದೇಶ, ಪೂರ್ವ ಐತಿಹಾಸಿಕ– ಕಾರೊಲಿಂಗನ್ ಕಾಲದ ವಸ್ತುಗಳನ್ನು ದೊರಕಿಸುವುದು. ಅಲ್ಲದೆ ಕಾಲಕ್ರಮದಿಂದ ವಸ್ತುಗಳನ್ನು ವರ್ಗೀಕರಿಸುವುದು ಇಲ್ಲಿ, ಮೆರೋವಿಂಗೆನ್ ಮತ್ತು ಕಾರೊಲಿಂಗನ್ ಕಾಲದ ಅತಿ ವಿರಳವಾದ ವಸ್ತುಗಳನ್ನು ನೋಡಿ ಆನಂದಪಡಬಹುದು. "Venus vom Linsberg" "Jupiter saule" ಇವೇ ಮುಖ್ಯವಾದುವುಗಳು.

ಜರ್ಮನಿಯಲ್ಲಿ, ಬಹುತೇಕ ಎಲ್ಲ ದೊಡ್ಡ ಪಟ್ಟಣಗಳಲ್ಲಿ ಕವಿ ಶಿಲ್ಲರರ ಶಿಲಾಚಿತ್ರವನ್ನು (Monument) ನೋಡಬಹುದು. ಅವರಂತೆ ಇಲ್ಲಿಯೂ ಕೂಡ "Schillar Platz" ನಲ್ಲಿ ಕವಿ ಶಿಲ್ಲರರ ಶಿಲಾಮೂರ್ತಿಯನ್ನು ನೋಡಬಹುದು. Mainz ನ ಮೇಲೆ ಮತ್ತು Dom ನ ಮೇಲೆ ಕವನಗಳನ್ನು ಬರೆದಿದ್ದಾರೆ. Mainz ನ "ಡೊಂ" ನ್ನು ವರ್ಣಿಸದ ಕವಿಗಳಿಲ್ಲ.

"Gutenberg Platz" ನಲ್ಲಿದ್ದ ಗೂಟೆನ್ ಬರ್ಗರ ಶಿಲಾ ಪ್ರತಿಮೆಯು ತರುಣರಿಗೆ ಉತ್ಸಾಹ ಬೀರುತ್ತದೆ.

ಜರ್ಮನಿಯಲ್ಲಿ, Liepzig, Gotingon, Bevlin ಮತ್ತು Heidelberg ವಿಶ್ವವಿದ್ಯಾಲಯಗಳು ಪುರಾತನ ವಿಶ್ವವಿದ್ಯಾಲಗಳಾದರೆ, ಮಾಯಿನ್ಸ್ಸಿನ ವಿಶ್ವವಿದ್ಯಾಲಯವು ಅತೀ ಹೊಸದು. ಇದು ೧೯೪೬ನೆಯ ಇಸ್ವಿ ಮೇ ತಿಂಗಳಲ್ಲಿ ಫ್ರೆಂಚ್ ಮಿಲಿಟರಿ ಸರಕಾರದ ಸಹಾನುಭೂತಿಯಿಂದ ಸ್ಥಾಪಿತವಾಯಿತು. ಇದರ ಪೂರ್ವ ಇತಿಹಾಸವನ್ನು ನೋಡಿದರೆ, ಇದೇನು ಹೊಸ ವಿದ್ಯಾಲಯವಲ್ಲ Diether von Isenberg ರು ೧೪೭೭ರಲ್ಲಿ ಮಾಯಿನ್ಸ್ ವಿದ್ಯಾಲಯವನ್ನು ಸ್ಥಾಪಿಸಿದರು. ಈಗಲೂ ಈ ವಿಶ್ವವಿದ್ಯಾಲಯದ ಹಳೆಯ ಕಟ್ಟಡವನ್ನು ಪಟ್ಟಣದಲ್ಲಿ ನೋಡಬಹುದು. "Dem Alt Mainger Universitaire" ಎಂದು ಇದಕ್ಕೆ ಹೆಸರಿತ್ತು. ಫ್ರೆಂಚ್ ರಾಜ್ಯಕ್ರಾಂತಿಯಾದ ಮೇಲೆ, ರಾಜಕಾರಣದ ಅಶಾಂತತೆಯಿಂದ ಮುಚ್ಚಲ್ಪಟ್ಟಿತ್ತು. ಸುದೈವದಿಂದ ಮತ್ತೊಮ್ಮೆ ಸುರುವಾಗಿದೆ ಈಗ ಇದಕ್ಕೆ "Johannes Gutenberg Universitait" ಎಂದು ಪ್ರಸಿದ್ಧ ಮುದ್ರಣಕಾರನ ಹೆಸರನ್ನು ಕೊಟ್ಟಿದ್ದಾರೆ. ಈಗಿನ ವಿಶ್ವವಿದ್ಯಾಲಯವು ಯುದ್ಧಕಾಲದ ಕ್ಲಯ ಸೈನಿಕರ ಕಟ್ಟಡಕ್ಕೆ ಬಂದಿದೆ. ಸುಮಾರು ೭೦೦೦–೮೦೦೦ ಹುಡುಗರಿದ್ದಾರೆ. ಪಶ್ಚಿಮ ಜರ್ಮನಿಯಲ್ಲಿ, ಸ್ವಲ್ಪೇ ಕಾಲದಲ್ಲಿ, ಎರಡನೆಯ ದೊಡ್ಡ ಪ್ರಖ್ಯಾತ ವಿಶ್ವವಿದ್ಯಾಲಯವಾಗಿದೆ. ಇದಕ್ಕೆ ಹೊಂದಿಕೊಂಡು ಪ್ರಖ್ಯಾತವಾದ "Max Plank Institute fur Chemie" (ಯುದ್ಧದ ಮೊದಲು Kaiser wilhelm institste) ಸಂಸ್ಥೆ ಇದೆ. Academy of science & letters ಮತ್ತು Institute fur Europesthe Historic" ವಿಶ್ವವಿದ್ಯಾಲಯದ ಮುಖ್ಯ ಭಾಗಗಳು. ಅಲ್ಲದೆ ಬೇರೆ ಬೇರೆಯ ವಿಷಯಗಳ ಭಾಗಗಳಿವೆ. ವಿಶ್ವವಿದ್ಯಾಲಯದ, ಪರದೇಶದ ಭಾಷೆಯ ಸಂಸ್ಥೆಯು (Dolmacher institnte) ಮಾಯಿನ್ಸ್ಸನಿಂದ ೭೦ ಮೈಲಿಗಳಿಂದ ದೂರವಿದ್ದ "Germersheim" ಎಂಬ ಊರಿನಲ್ಲಿದೆ. ಈ ವಿಶ್ವವಿದ್ಯಾಲಯದಲ್ಲಿ "ಹಿಂದೀ" ಕಲಿಸುವ ವ್ಯವಸ್ಥೆ ಇದೆ ಈ ವಿಷಯವನ್ನು ಕಲಿಸಲು, ಧಾರವಾಡದ ಕನ್ನಡಿಗರಾದ ಶ್ರೀಮಾನ್ ಶ್ರೀನಿವಾಸ ಪಾಟೀಲರು ಶಿಕ್ಷಕರಾಗಿದ್ದಾರೆ

ವಿಶ್ವವಿದ್ಯಾಲಯದ ಪ್ರತಿಯೊಂದು ಭಾಗಕ್ಕೆ ಜಗತ್ಪ್ರಸಿದ್ಧರಾದ ಜನರು ಡಿರೆಕ್ಟರರಾಗಿದ್ದಾರೆ. Prof. Dr. Strassmannರ ಹೆಸರನ್ನು ನೀವು ಕೇಳಿರಲಿಕ್ಕೆ ಸಾಕು. Atom Bombನ್ನು ಹುಡುಕಿದ ಸುಪ್ರಸಿದ್ಧ ಶಾಸ್ತ್ರಜ್ಞರಾದ Prof. Otto Hahnರ ಸಹಪಾಠಿಗಳು, ಸಹಕೆಲಸಗಾರರು (Coworker) Prof. Strassmannರು. ಇವರಂತೆ ಪ್ರತಿಯೊಂದು ಶಾಖೆಗೂ ಪ್ರಸಿದ್ಧ ವ್ಯಕ್ತಿಗಳಿದ್ದಾರೆ.

ಈ ಎಲ್ಲ ರೀತಿಯಿಂದ, ಪುರಾತನ ಸಂಸ್ಕೃತಿಶಿಖರವನ್ನು ಮತ್ತೊಮ್ಮೆ ಮಾಯನ್ಸ್ ದೊರಕಿಸುವುದೆಂಬುದರಲ್ಲಿ ಏನೂ ಸಂದೇಹವಿಲ್ಲ. ಮಾಯನ್ಸ್ಸಿನ ಜನರು ಬಹಳ ರಸಿಕರು. ಇವರ ದೊಡ್ಡ ಹಬ್ಬ "ಕಾರ್ನಿವಾಲ್" (Karneval). ಈ ಹಬ್ಬದ ವಿಷಯವಾಗಿ ಮುಂದಿನ ಓಲೆಯಲ್ಲಿ ನಿಮಗೆ ತಿಳಿಸುತ್ತೇನೆ.

ಹಿರಿಯರಿಗೆ ನಮಸ್ಕಾರ.

ನಿಮ್ಮ ಮಗ,

ಮಧ್ವೇಶ

ಎಂಬ್ರಾಯಿಡರಿ ಕಲಾಕುಶಲ

ಶ್ರೀ. ಡಹ್ಯಾಭಾಯಿಯವರು

(ವ್ಯಕ್ತಿಪರಿಚಯ)

ಶ್ರೀ. **ಎನ್. ಎಲ್. ಹಳ್ಳಿಪ್ಪನವರ,** M. Sc. (Agri.) ಒಕ್ಕಲತನದ ಕಾಲೇಜು ಧಾರವಾಡ

●

ಕಲೆಯ ಸೌಂದರ್ಯವು ದೇಶ-ಕಾಲಗಳ ಅಭಿಮಾನಕ್ಕೆ ಅತೀತವಾದುದು. ಮಲ್ಲಿಗೆಯು ಎಲ್ಲಿ ಅರಳಿದರೇನು ? ಅದರ ಸುರಭಿ ಎಲ್ಲರನ್ನೂ ಆಕರ್ಷಿಸಬಲ್ಲದು. ಡಹ್ಯಾಭಾಯಿಯವರ ಹೆಣಿಕೆಯ ಸೌಂದರ್ಯ ಹಾಗೆಯೆ ಇದೆ.

▲

ಕಲೆ ಹಾಗೂ ಜೀವನ ಇವುಗಳೆರಡರ ಸಮನ್ವಯವಾದ **ಹೊರತು** ಮನುಷ್ಯಜೀವನವು ಪರಿಪೂರ್ಣವೆನಿಸದು. ಇವೆರಡೂ **ಪೂರಕ**-ಪರಿಪೂರಕಗಳಾಗಿವೆ. ಆದುದರಿಂದ ಕಲೆಯಲ್ಲಿ ಪೂರ್ಣತೆಯನ್ನು ಹೊಂದಲು ಕಲೆಯ ಆರಾಧನೆಯನ್ನು ಮಾಡಬೇಕಾಗುತ್ತದೆ.

ಅಂತಹ ವೇಳೆಯಲ್ಲಿ, ಕಲಾಕಾರನ ಮನಸ್ಸಿನಲ್ಲಿ ತನಗೆ ಲಭಿಸುವ ಧನ-ಸಂಪತ್ತುಗಳ ಬಗೆಗೂ ತನ್ನ ಘನತೆಯ ಬಗೆಗೂ ಎಂದೂ ಯಾವ ಯೋಚನೆಯೂ ಉದ್ಭವಿಸುವುದಿಲ್ಲ. ಯಾಕೆಂದರೆ ಕಲೆಯೇ ಅವನ ಜೀವಜೀವಾಳವಾಗಿರುತ್ತದೆ. ಕಲೆಯ ಏಕನಿಷ್ಠ ಸೇವೆಯೇ ಅವನ ಜೀವನದ ಧ್ಯೇಯವಾಗಿರುತ್ತದೆ. ಈ ಅಂತಿಮಧ್ಯೇಯವನ್ನು ಸಾಧಿಸುವುದಕ್ಕಾಗಿಯೇ ಅವನು ಯಾವಾಗಲೂ ಉತ್ಸುಕನಾಗಿರುತ್ತಾನೆ. ಹಸಿವೆ, ನಿದ್ದೆ, ನೀರಡಿಕೆಗಳ ಕಡೆಗೆ ಕೂಡ ಎಂದೂ ಲಕ್ಷ್ಯಕೊಡದೆ ಕಲಾಕಾರನು ಕಲೆಯನ್ನು ತನ್ನ ಹಸ್ತಗತ ಮಾಡಿಕೊಳ್ಳುವುದರಲ್ಲಿ ತಲ್ಲೀನನಾಗಿರುತ್ತಾನೆ; ಆದರೆ ಯಾವುದೇ ಕಲೆಯು ಉತ್ಕರ್ಷ ಹೊಂದಲು ಅನುಕೂಲ ಪರಿಸ್ಥಿತಿಯ ಆವಶ್ಯಕತೆ ಬಹಳವಿದೆ. ಇಲ್ಲದಿದ್ದರೆ ಅರೆಹೊಟ್ಟೆಯಿಂದ ಜೀವಿಸುವವರಿಗೆ ತತ್ತ್ವಜ್ಞಾನವನ್ನು ಬೋಧಿಸಿದಂತೆಯೇ ಆಗಬಹುದು ಸ್ವತಂತ್ರ ದೇಶಗಳು ರಾಜಕೀಯ ಸಮಸ್ಯೆಗಳಿಗೆ ಮಹತ್ತ್ವ ಕೊಡುವಂತೆ, ಕಲೆಯ ಉತ್ಕರ್ಷಕ್ಕೂ ಸಾಕಷ್ಟು ಲಕ್ಷ್ಯಪೂರಯಿಸಲೇಬೇಕು. ಯಾವುದೊಂದು ದೇಶದ ಘನತೆಯನ್ನು ಒರೆಗೆ ಹಚ್ಚುವಲ್ಲಿ, ಆ ದೇಶದ ಸಂಸ್ಕೃತಿ ಹಾಗೂ ಕಲೆಗಳು ಮಹತ್ತ್ವದ ಒರೆಗಲ್ಲಾಗಿವೆ. ಹಂಪೆ ಹಾಳಾಗಿದ್ದರೂ ಇಂದಿಗೂ ಅಲ್ಲಿಯ ಕಲಾವೈಭವವನ್ನು ಕಂಡು ಅಚ್ಚರಿಗೊಳ್ಳದಿರುವವರು ಯಾರಾದರೂ ಇರುವರೆ ? ಅಂತೆಯೇ ಕಲೆಯೂ, ರಾಜಕೀಯದಷ್ಟೇ ಮಹತ್ತ್ವದ್ದ ಸ್ಥಾನವನ್ನು ಪಡೆಯಬೇಕು. ಇದನ್ನರಿತ ನಮ್ಮ ಭಾರತ ಸರಕಾರವು ವಿವಿಧ ಕಲಾಕಾರರಿಗೆ ಉತ್ತೇಜನ ಕೊಡಲಾರಂಭಿಸಿದುದು ಪ್ರಗತಿಯ ಲಕ್ಷಣವೇ. ಉಳಿದ ಕಲಾಕಾರರೊಡನೆ ಹೆಣಿಕೆಯ ಕಲಾವಿದರಿಗೂ ಉತ್ತೇಜನವನ್ನು ಕೊಡಲೇಬೇಕೆಂದು, ಶ್ರೀ. ಡಹ್ಯಾಭಾಯಿಯವರ ಮನಸ್ಸೆಚ್ಚರಿಯಾಗುವಂತಹ ಹೆಣಿಕೆಯ ಕೆಲಸಗಳನ್ನು ನೋಡಿದವರಿಗೆ ಎನಿಸದಿರದು.

ಶ್ರೀ. ಡಹ್ಯಾಭಾಯಿಯವರ ಕೆಲವು ಕೃತಿಗಳು ಕಲ್ಪನಾತೀತವೆನಿಸುವಷ್ಟು ಸುಂದರವಾಗಿವೆ; ಅಕೃತ್ರಿಮವೆಂದೆನಿಸುತ್ತವೆ. 'ಹೆಣಿಕೆಯ ಕೆಲಸವನ್ನು ಇಷ್ಟು ಚೆನ್ನಾಗಿ ಮಾಡುವುದು ಸಾಧ್ಯವಿದೆಯೇ'

ಎಂದು ಅವನ್ನು ನೋಡಿದವರನ್ನು ವಿಚಾರಲಹರಿಯಲ್ಲಿ ತೇಲಿಸಿ ಬಿಡುತ್ತವೆ.

ಇವರ ಕಲಾಕೃತಿಗಳನ್ನು ದೂರದಿಂದ ನೋಡುವಾಗ, ಅವು ಹೆಣಿಕೆಯ ಕೃತಿಗಳೆಂದು ಯಾರೂ ಹೇಳಲು ಸಾಧ್ಯವಿಲ್ಲ. ಒಬ್ಬ ಕುಶಲ ಚಿತ್ರಕಾರನು ಬೇರೆ ಬೇರೆ ಬಗೆಯ ಬಣ್ಣಗಳನ್ನು ಕೊಟ್ಟು ತಯಾರಿಸಿದ ಚಿತ್ರಗಳೆಂದೇ ಭಾಸವಾಗುತ್ತವೆ. ಸಮೀಪದಲ್ಲಿ ಹೋಗಿ ಕಣ್ಣಲ್ಲಿ ಕಣ್ಣಿಟ್ಟುಕೊಂಡು ನೋಡಿದಾಗಲೇ ಅವು ಹೆಣಿಕೆಯ ಕೃತಿಗಳೆಂದು ಗೊತ್ತಾಗುವುದು. ಇದೆಲ್ಲವನ್ನೂ ಅವರು ಸಣ್ಣದೊಂದು ಸೂಜಿಯಿಂದ ಸಾಧಿಸಬಲ್ಲರು ಎಂದರಿತಾಗ, ನಿಜವಾಗಿಯೂ ಸೋಜಿಗವೆನಿಸುವುದು. ಇಂತಹ ಶ್ರೇಷ್ಠ ಕಲಾಕಾರರ ಸಹವಾಸವು ಸಿಕ್ಕುವುದಕ್ಕೆ ಶ್ರೀ. ಡಹ್ಯಾಭಾಯಿಯ ಶಿಷ್ಯೆಯರಲ್ಲೊಬ್ಬರಾದ ಕುಮಾರಿ ಅನಸೂಯಾ ಪಾಥರಕರರು ಸಂಧಿಸಾಧಿಸಿಕೊಟ್ಟರು. ಇದಕ್ಕಾಗಿ ನಾನವರಿಗೆ ಋಣಿಯಾಗಿದ್ದೇನೆ. ನನ್ನ ಇವರ ಭೆಟ್ಟಿಯಾದ ಮರು ದಿನವೇ, ಇವರು ಧಾರವಾಡದಲ್ಲಿ ತಮ್ಮ ಕಲಾಕೃತಿಗಳ ಪ್ರದರ್ಶನವೊಂದನ್ನೇರ್ಪಡಿಸುವವರಿದ್ದರು. ಇದಕ್ಕಾಗಿ ನನ್ನ ಸಹಾಯ ಕೋರಿದರು. ಹೆಚ್ಚಿನದೇನೂ ನನ್ನಿಂದ ಆಗದಿದ್ದರೂ, ಪ್ರದರ್ಶನ ನಡೆದ ವೇಳೆಯಲ್ಲಿ ಶಿಸ್ತನ್ನು ಕಾಯ್ದುಕೊಂಡು ಹೋಗಲು ಪೋಲೀಸಿನವರ ಸಹಾಯವೊಂದನ್ನು ಒದಗಿಸಿಕೊಟ್ಟೆ. ಇದರರ್ಥ ಧಾರವಾಡದ ನಾಗರಿಕರು ಶಿಸ್ತಿನಿಂದ ನಡೆಯಲಿಲ್ಲವೆಂತಲ್ಲ; ಆದರೆ ಸುಸಂಸ್ಕೃತರೂ ಕಲಾಪ್ರೇಮಿಗಳೂ ಆದ ಪ್ರೇಕ್ಷಕರು ಅಷ್ಟು ದೊಡ್ಡ ಸಂಖ್ಯೆಯಲ್ಲಿ ಪ್ರದರ್ಶನವನ್ನು ನೋಡಲು ಕಿಕ್ಕಿರಿದು ತುಂಬಿದ್ದರಾದುದರಿಂದ, ಸಹಾಯದ ಆ ಅಗತ್ಯವಿತ್ತು. ಕಣ್ಣುಗಳಿಗೆ ಸವಿಯೂಟವೊಂದನ್ನು ಬಡಿಸಿದಷ್ಟು ಆ ಪ್ರದರ್ಶನದ ನೋಟವು ಪ್ರೇಕ್ಷಣೀಯವಾಗಿತ್ತು. ಇದೆಲ್ಲವನ್ನೂ ಕಂಡ ನನಗೆ ಇಂತಹ ಪ್ರಸಿದ್ಧ ಕಲಾಕಾರನ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಡುವುದವಶ್ಯವಿದೆಯೆಂದೆನಿಸಿತು. ಅವರು ಹೇಳಿದ ಅಲ್ಪ ಪರಿಚಯ ಕೆಳಗಿನಂತಿದೆ:

ಪುಣೆಯಲ್ಲಿ "ಶನಿವಾರ" ಎಂಬ ಜಾಗೆಯೊಂದಿದೆ. ಅದರ ಹತ್ತಿರವೇ 'ಡಾಹ್ಯಾಭಾಯಿ' ಎಂಬುದೊಂದು ಅರಿವೆಯ ಅಂಗಡಿಯಿದ್ದು, ಅದು ಇವರ ತಂದೆಯದು. ಆ ಅಂಗಡಿಯ 'ಡಾಹ್ಯಾಭಾಯಿ' ಎಂಬ ಹೆಸರಿನಿಂದಲೇ ಜನರು ಈ ಕಲಾಕಾರನನ್ನು ಗುರುತಿಸುತ್ತಾರೆ. ಇವರು ಮೂಲತಃ ಗುಜರಾತಿನವರಾಗಿದ್ದರೂ, ಕಳೆದ ೨೫ ವರ್ಷಗಳಿಂದಲೂ ಪುಣೆಯಲ್ಲಿಯೇ ಇವರ ಮನೆತನದವರು ಸ್ಥಿರಗೊಂಡಿದ್ದಾರೆ. ಇವರ ಜಾತಿಯಲ್ಲಿ ಸಣ್ಣವರಿರುವಾಗಿನಿಂದಲೇ ವ್ಯಾಪಾರವನ್ನು ನೋಡಿಕೊಳ್ಳುವ ಪರಿಪಾಠವಿದ್ದುದರಿಂದ, ಇವರ ವಿದ್ಯಾರ್ಥಿ ಜೀವನವು, ೧೯೪೪ರಲ್ಲಿ ಇನ್ನೂ ಹಾಯ್‌ಸ್ಕೂಲಿನಲ್ಲಿರುವಾಗಲೇ ಮುಕ್ತಾಯವಾಯಿತು.

ವಿದ್ಯಾರ್ಥಿದಶೆಯಿಂದ ಕೂಡಲೇ ವ್ಯಾಪಾರಿಯಾಗಬಲ್ಲ ಮನಸ್ಥಿತಿಯು ಇವರಲ್ಲಿರಲಿಲ್ಲ. ಇವರ ನಿಜವಾದ ಒಲವು ಕಲೆಯ ಕಡೆಗಿತ್ತು. ಆದುದರಿಂದ ನಿತ್ಯವೂ ಅಂಗಡಿಗೆ ಹೋಗಲೇಬೇಕಿದ್ದರೂ, ಆ ವೇಳೆಯಲ್ಲಿ ಕೂಡ ಅಂಗಡಿಯ ಮೂಲೆಯೊಂದರಲ್ಲಿ ಕುಳಿತು ಅರಿವೆಯ ತುಂಡಿನ ಮೇಲೆ ಹೆಣಿಕೆಯ ಕೆಲಸವನ್ನು ಮಾಡುತ್ತಿದ್ದರು. ಅದಕ್ಕೆ ಬೇಕಾಗುವ ಸಾಹಿತ್ಯವನ್ನಿವರು ಕಿಸೆಯಲ್ಲಿಟ್ಟುಕೊಂಡೇ ಅಂಗಡಿಗೆ ಹೋಗುತ್ತಿದ್ದರಂತೆ. ಪ್ರಾರಂಭದಲ್ಲಿ ಈ ಕಲೆಯನ್ನು ಇವರ ಸಹೋದರಿಯವರೇ ಇವರಿಗೆ ಕಲಿಸಿದರಂತೆ. ಇದೆಲ್ಲವೂ ಇವರ ತಂದೆಯವರಿಗೆ ತಿಳಿಯದಂತೆಯೇ ಸಾಗಿತ್ತು.

ಒಂದು ದಿನ ಇವರು ಹೆಣಿಕೆಯ ಕೆಲಸದಲ್ಲಿ ತನ್ಮಯರಾಗಿ ಕುಳಿತಿದ್ದರು. ಇವರ ಆ ಏಕಾಗ್ರತೆಯನ್ನು ಕಂಡ ಗೃಹಸ್ಥರೊಬ್ಬರು ಪ್ರಸನ್ನರಾಗಿ, ಡಹ್ಯಾಭಾಯಿಯವರಿಗೆಂದರು "ನಿಮಗೆ ಇದಕ್ಕಿಂತಲೂ ಸುರಸವಾಗಿ ಹೆಣಿಕೆಯ ಕೆಲಸವನ್ನು ಮಾಡುವುದನ್ನು ಕಲಿಯಬೇಕಾಗಿದೆಯೇ ? "

"ಹೌದು !"

" ನಿಮ್ಮ ಏಕಾಗ್ರತೆಯನ್ನು ಕಂಡು ನಾನು ತುಂಬ ಉಲ್ಲಸಿತನಾಗಿದ್ದೇನೆ. ನಾನಾವಟ ಕಾಲನಿಯಲ್ಲಿ ನನ್ನದೇ ಆದ 'ಎಂಬ್ರಾಯಡರಿ' ವರ್ಗವೊಂದು ನಡೆಯುತ್ತಿದೆ. ಆ ವರ್ಗಕ್ಕೆ ಬರುವವರೆಲ್ಲ ಸ್ತ್ರೀಯರೇ ಇದ್ದಾರೆ. ಅಲ್ಲದೆ ವರ್ಗ ನಡೆಯುತ್ತಿದ್ದಲ್ಲಿ ಸ್ಥಳ ಕೂಡ ಬಹಳ ಚಿಕ್ಕದಾಗಿದೆ. ಹೇಗಿದ್ದರೂ, ನನ್ನ ಅಡಿಗೆಯ ಮನೆಯಲ್ಲಿ ಕುಳಿತು ನಿತ್ಯವೂ ಮಧ್ಯಾಹ್ನ ೨–೩ ರ ವರೆಗೆ ನೀವು ಪಾಠ ಕಲಿಯಬಹುದು." "ಕೊಲಂಬಸನಿಗೆ ಅಮೇರಿಕೆಯನ್ನು ಶೋಧಿಸಿದಾಗ ಆದಷ್ಟು ಆನಂದ ಆಗ ನನಗಾಯಿತು" ಎಂದು ಡಹ್ಯಾಭಾಯಿಯವರು ಆ ಪ್ರಸಂಗದ ಬಗೆಗೆ ಉದ್ಗಾರ ತೆಗೆದಿದ್ದಾರೆ. ಅದರಂತೆ ಇವರು ಕಲಿಯುವುದನ್ನು ಪ್ರಾರಂಭಿಸಿದರು. ಅಲ್ಲದೆ ಬರಿಯ ಎರಡು ವರುಷಗಳಲ್ಲಿಯೇ ಆ ಕಲೆಯನ್ನು ಹಸ್ತಗತ ಮಾಡಿಕೊಂಡುಬಿಟ್ಟರು. "ತಂದೆಯವರಿಗೆ ತಿಳಿಯದಂತೆ ಈ ಕಲೆಯನ್ನು ಕಲಿತುಕೊಳ್ಳುವಾಗ ನನಗಾದ ಕಷ್ಟವನ್ನು ದೇವರೇ ಬಲ್ಲ!" ಎಂದಿವರು ಅಂದಿದ್ದಾರೆ. ಈ ಕಲೆಯನ್ನು ಇವರಿಗೆ ಕಲಿಸಿದ ಗುರುಗಳು ಕೈ. ವಾ. ಶ್ರೀ. ಲೇಣಾಯಿಯವರು.

ಎರಡು ವರುಷಗಳ ಕಾಲಾವಧಿಯಲ್ಲಿಯೇ ಇವರ ಗುರುಗಳು ತೀರಿಹೋದುದರಿಂದ, ಡಾಹ್ಯಾಭಾಯಿಯವರ ಬೆನ್ನೆಲುಬೇ ಮುರಿದಂತಾಯಿತು. ಜೀವದಿಂದಿರುವ ವರೆಗೆ ಇವರ ಗುರುಗಳು ತಮ್ಮ ಎಲ್ಲ ಕಲೆಯನ್ನು ಡಾಹ್ಯಾಭಾಯಿವರಿಗೆ ತಿಳಿಸಿ ಹೇಳಿದ್ದರು. ಇವರ ಗುರುಗಳು ಕಲೆಗಾಗಿಯೇ ತಮ್ಮ ಜೀವನವನ್ನು ಧಾರೆಯೆರೆದಿದ್ದರು

ಎಂಬ್ರಾಯಿಡರಿ ಕೆಲಸವನ್ನು ಮಾಡಬೇಕಾದಾಗ ಡಿಝಾಯಿನಿಗೆ ವಿಶೇಷ ಮಹತ್ತ್ವವಿರುತ್ತದೆ. ಯಾಕೆಂದರೆ ಎಲ್ಲ ಡಿಝಾಯಿನ್ನುಗಳನ್ನೂ ಹೊಲಿಗೆಗಳಿಂದ ತುಂಬಬೇಕಾಗುತ್ತದಲ್ಲದೆ, ಹಾಗೆ ತುಂಬಿದ ಬಳಿಕ ಅದು ಹೇಗೆ ಕಾಣಬಹುದೆಂಬುದರ ಕಲ್ಪನೆಯೂ ಕಲಾಕಾರನಿಗೆ ಇರಬೇಕಾಗುತ್ತದೆ. ಈ ಡಿಝಾಯಿನಿನ ಕೆಲಸವನ್ನು, ಆ ಕಲೆಯಲ್ಲಿ ವಿಶೇಷ ಪ್ರಗತಿಯನ್ನು ಸಾಧಿಸಿದ ಇವರ ಕಕ್ಕನ ಮಗ ಕಪಾಡಿಯಾ ಅವರು ಮಾಡುತ್ತಾರೆ.

ಡಾಹ್ಯಾಭಾಯಿಯವರ ಗುರುಗಳು ಅಕಸ್ಮಾತ್ ಸ್ವರ್ಗವಾಸಿಗಳಾದುದರಿಂದ, ಗುರುಗಳ ವರ್ಗವನ್ನು ನೀವೇ ನಡೆಸಿರೆಂದು ಡಾಹ್ಯಾ

ಭಾಯಿಯವರಿಗೆ ಅನೇಕರು ಸೂಚಿಸಿದರು. ಅವರ ಹೇಳಿಕೆಯಂತೆ ೧೯೪೬ರ ಜೂನ್ ತಿಂಗಳಲ್ಲಿ ಡಾಹ್ಯಾಭಾಯಿಯವರು ಪುಣೆಯ ಟಿಳಕ ರೋಡಿನಲ್ಲಿ ವರ್ಗವೊಂದನ್ನು ತೆರೆದರು. ೧೯೫೧ ರಲ್ಲಿ ಡೆಕ್ಕನ್ ಜೀಮ ಖಾನಾದಲ್ಲಿ ೨ನೆಯ ಶಾಖೆಯೂ, ೧೯೫೨ ರಲ್ಲಿ ಲಕ್ಷ್ಮೀರೋಡಿನಲ್ಲಿ ೩ನೆಯ ಶಾಖೆಯೂ ಪ್ರಾರಂಭಿಸಲ್ಪಟ್ಟವು. ಲಕ್ಷ್ಮೀರೋಡಿನಲ್ಲಿರುವ ಶಾಖೆಯೇ ಈಗ ಮುಖ್ಯಕೇಂದ್ರವಾಗಿದೆ. "ಮಹಿಳೆಯರೇ ಈ ಕಲೆಯನ್ನು ಚೆನ್ನಾಗಿ ಹಸ್ತಗತ ಮಾಡಿಕೊಳ್ಳಬಲ್ಲರು." ಎಂದು ಶ್ರೀ. ಡಾಹ್ಯಾಭಾಯಿಯವರ ಹೇಳಿಕೆ.

ಭಾರತದ ಎಲ್ಲ ಭಾಗಗಳಲ್ಲಿಯೂ ತಿರುಗಿ ಈ ಕಲೆಯ ಪ್ರಚಾರವನ್ನು ಮಾಡಬೇಕೆಂಬ ಧ್ಯೇಯದಿಂದಲೇ ಶ್ರೀ ಡಾಹ್ಯಾಭಾಯಿಯವರು ಹೆಣಗುತ್ತಿದ್ದು, ಭಾರತದ ಪ್ರತಿಯೊಂದು ಪ್ರಸಿದ್ಧ ನಗರದಲ್ಲಿ ಆರು ತಿಂಗಳ ವರ್ಗವೊಂದನ್ನು ತೆರೆಯಬೇಕೆಂದಿದ್ದಾರೆ. ಆ ಉದ್ದೇಶದಿಂದಲೇ ಇವರು, ಕರ್ನಾಟಕದ ಬೆಳಗಾಂವಿ ಹಾಗೂ ಧಾರವಾಡಗಳಲ್ಲಿ ತಮ್ಮ ವರ್ಗಗಳನ್ನು ಆರಂಭಿಸಿದ್ದಾರೆ. ಈ ಎರಡೂ ನಗರಗಳಲ್ಲಿ ಇವರಿಗೆ ಪ್ರೋತ್ಸಾಹನ ದೊರೆಯುತ್ತಲೇ ಇದೆ. ಕನ್ನಡಿಗರು ಎಷ್ಟು ಕಲಾಪ್ರೇಮಿಗಳಿದ್ದಾರೆಂಬುದನ್ನು ತೋರಿಸಲು ಇದೊಂದು ನಿದರ್ಶನ. ಔದ್ಯೋಗಿಕ ಕೇಂದ್ರವಾದ ಹುಬ್ಬಳ್ಳಿಯಲ್ಲಿ, ಜೂನ್ ೪ನೆಯ ವಾರದಲ್ಲಿ ಇವರ ಕಲಾಪ್ರದರ್ಶನವೂ, ಆ ಬಳಿಕ ಇವರ ವರ್ಗವೂ ಪ್ರಾರಂಭವಾಗತಕ್ಕುವಿವೆ. ಭಾರತದಲ್ಲಿಯ ಇವರ ಪ್ರವಾಸವು ಪೂರ್ತಿಗೊಂಡ ಬಳಿಕ, ಈ ಕಲೆಯನ್ನು ಪ್ರಸಾರಗೊಳಿಸಬೇಕೆಂದು ಇವರು ಯುರೋಪದ ಪ್ರವಾಸವನ್ನು ಕೈಕೊಳ್ಳಬೇಕೆಂಬ ಮಹಾತ್ವಾಕಾಂಕ್ಷೆಯುಳ್ಳವರಾಗಿದ್ದಾರೆ. ಆದರೆ ಅದಕ್ಕೆ ದ್ರವ್ಯದ ಆವಶ್ಯಕತೆ ಬಹಳವಿದೆ. ಮಹಾಜನರ ಪ್ರೋತ್ಸಾಹನವೂ ಬೇಕಾಗಿದೆ. ಶ್ರೀ. ಪ್ಲಿನಿಯವರ ಹೇಳಿಕೆಯನ್ನಿಲ್ಲಿ ಉದಾಹರಿಸಬಹುದು:

" No man's tatents havever brilliant, Can ratse him from obscurity unless They find scope, opportunity, and also a patron to Commend themm. "

(ವ್ಯಕ್ತಿಯೊಬ್ಬ ಎಷ್ಟು ಘನತೆಯುಳ್ಳವನಿದ್ದರೂ ಅವನಲ್ಲಿಯ ಆ ಗುಣಗಳು ಬೆಳಕಿಗೆ ಬರಲು ಸುಸಂಧಿಯೂ, ಅನುವೂ, ಅವುಗಳನ್ನು ಎತ್ತಿಹಿಡಿಯುವ ಆಶ್ರಯದಾತನ ನೆರವೂ ಅವಶ್ಯವಾಗಿವೆ.)

ಡಾಹ್ಯಾಭಾಯಿಯವರು ಕಲೆಯಲ್ಲಿ ಕುಶಲರಿದ್ದಂತೆ ಅದನ್ನು ತಮ್ಮ ವಿದ್ಯಾರ್ಥಿಗಳಿಗೆ ಕಲಿಸಿಕೊಡುವುದರಲ್ಲಿಯೂ ನಿಷ್ಣಾತರಾಗಿದ್ದಾರೆ. ಯಾವಾಗಲೂ ಹಸನ್ಮುಖಿಗಳೂ, ನಿಗರ್ವಿಗಳು ಆದ ಇವರು ತಮ್ಮ ಒಳ್ಳೆಯ ಗುಣಗಳಿಂದ ಎಲ್ಲರ ಪ್ರೀತಿ ಹಾಗೂ ಆದರಗಳಿಗೆ ಪಾತ್ರವಾಗುವಂತಹರಾಗಿದ್ದಾರೆ. ಯಾವನೇ ಪರಕೀಯನು ಬಂದರೂ ಅವನಲ್ಲಿ ಆತ್ಮೀಯ ಭಾವನೆಗಳು ಹುಟ್ಟುವಂತೆ ಮಾಡುವ ಗುಟ್ಟನ್ನೂ ಶ್ರೀಯುತರು ಅರಿತಿದ್ದಾರೆ.

ಕಲಾವಿದನೂ ಕಲೆಯೂ ಬಾಳಿ ಬದುಕಬೇಕೆಂದಿದ್ದರೆ, ಜನತೆಯ ಹಾಗೂ ಸರಕಾರದ ಪ್ರೋತ್ಸಾಹನವು ಅವಶ್ಯಬೇಕು. ತಮ್ಮ ಜೀವನವನ್ನೇ ಈ ಕಲೆಯ ಏಳ್ಗೆಗಾಗಿಯೂ, ಪ್ರಸಾರ ಮಾಡುವುದರಲುವಾಗಿಯೂ ಮುಡಿಪಾಗಿಟ್ಟಿರುವ ಶ್ರೀ. ಡಾಹ್ಯಾಭಾಯಿಯವರ ಆಶೆ-ಆಕಾಂಕ್ಷೆಗಳು ಪೂರ್ಣವಾಗಲಿ; ಅವರಿಂದ ಇನ್ನೂ ಕಲೆಯ ಹಾಗೂ ಜನತೆಯ ಸೇವೆಯಾಗಲಿ !



ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ ನೀಲ ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ ಜೀವಿನಿ ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ **ಪಂಚವಟಿ ರಾಮಬಾಣ**

ಸದ್ವೈದ್ಯ ಶಾಲಾ, ನಂಜನಗೂಡು

'ನಂಜನಗೂಡು ಟೂತ್ ಪೌಡರು' ಮತ್ತು

ಆಯುರ್ವೇದೀಯ ಔಷಧಗಳು ತಯಾರಾಗುವ ಕಾರಖಾನೆ

ಇಂದಿನ ಕನ್ನಡ ಕಾದಂಬರಿಗಳ ಸರ್ವಕಾಲೀನತೆ

ಶ್ರೀ. ಮಿರ್ಜಿ ಅಣ್ಣಾರಾಯರು ಉಗಾರ

ಕನ್ನಡದಲ್ಲಿ ಸ್ವತಂತ್ರ ಕಾದಂಬರಿಗಳ ಬೆಳವಣಿಗೆ ಇತ್ತೀಚೆಗಿನ ಆರೇಳು ವರ್ಷಗಳಲ್ಲಿಯೇ ಆದುದು ಕಂಡುಬರುತ್ತದೆ. ಈ ಕಾದಂಬರಿಗಳು ವರ್ತಮಾನದ ವಾಸ್ತವಜೀವನದಿಂದಲೇ ತುಂಬಿನಿಂತಿವೆಯೋ?

ಲಲಿತ ಸಾಹಿತ್ಯದ ವಿವಿಧ ಅಂಗಗಳಲ್ಲಿ ಕಾದಂಬರಿಯು ಮುಖ್ಯವಾದುದು. ಆದರಲ್ಲೂ ಹೊಸಗನ್ನಡ ಸಾಹಿತ್ಯದ ಇಂದಿನ ಕಾಲವನ್ನು 'ಕಾದಂಬರಿಯುಗ'ವೆಂದು ಹೇಳಬಹುದು. ಮೇಲಾಗಿ ಜೀವನ ಚಿತ್ರಣಕಾರ್ಯದಲ್ಲಿ ಕವಿತೆ, ಸಣ್ಣಕಥೆ, ನಾಟಕಗಳು ನಿರ್ವಹಿಸುವ ಕಾರ್ಯಕ್ಕಿಂತ ಹೆಚ್ಚು ಸಾಗ್ರವಾಗಿ, ಸಮರ್ಥರೀತಿಯಲ್ಲಿ ಕಾದಂಬರಿಯು ಸಹಕರಿಸುತ್ತದೆ. ಈ ಶಕ್ತಿಯು ಕಾದಂಬರಿಗಳಲ್ಲಿರುವ ವಸ್ತುವೈವಿಧ್ಯ, ತಂತ್ರನೈಪುಣ್ಯ, ಪಾತ್ರಸೃಷ್ಟಿ ಇವೇ ಮೊದಲಾದ ಗುಣಗಳನ್ನು ಅವಲಂಬಿಸಿದೆ. ಆದರೆ ಇದಿಷ್ಟರಿಂದ ಕಾದಂಬರಿಯ ಘನತೆಯು ಸಂಪೂರ್ಣವಾಗಿ ಸಿದ್ಧಿಸದು. ಅದರ ಸಾರ್ಥಕತೆಗೆ ಸರ್ವಕಾಲೀನತೆಯೂ ಅತ್ಯವಶ್ಯವಾಗಿದೆ.

ಜೀವನವನ್ನು ಒಂದು ಪ್ರವಾಹಕ್ಕೆ ಹೋಲಿಸಬಹುದು. ಆ ಪ್ರವಾಹದ ಸುಂದರಚಿತ್ರವಾಗಿ ಸಾಹಿತ್ಯವಾಹಿನಿಯು ಹರಿಯುತ್ತಿರುತ್ತದೆ. ಆದರಿಂದ ಅದು ಪರಿವರ್ತನಶೀಲವಾದುದು. ಈ ಜೀವನ ಸಾಹಿತ್ಯಗಳ ನಿಕಟಸಂಬಂಧವು, ಒಂದೊಂದು ಕಾಲದಲ್ಲಿ ಅಷ್ಟು ಬಂದಿರಲಿಕ್ಕಿಲ್ಲ. ಆಗ ಸಾಹಿತ್ಯದಲ್ಲಿಯ ಪರಿವರ್ತನೆಯು ನಮಗೆ ಒಡೆದು ತೋರದೆ ಹೋಗಿರಬಹುದು. ಯಾಕೆಂದರೆ ಹಿಂದಿನ ಕಾಲದಲ್ಲಿ ಇಂದಿನಂತೆ ಸಾಹಿತ್ಯಕಲೆಗಳು ಜೀವನನಿಷ್ಠವಾಗಿರಲಿಲ್ಲ. ಅಲ್ಲದೆ ಭಾರತೀಯ ಸಾಹಿತ್ಯವಾಗಲಿ, ಕನ್ನಡ ಸಾಹಿತ್ಯವಾಗಲಿ, ಒಂದು ಕಾಲದಲ್ಲಿ ಪೂರ್ವಸಾಹಿತ್ಯನಿಷ್ಠವೇ ಆಗಿದ್ದುದನ್ನು ನಾವು ಕಾಣಬಹುದು. ಆಗ ಪ್ರಾಕೃತ ಸಂಸ್ಕೃತ ಭಾಷೆಗಳ ಹಿರಿಯ ಕೃತಿಗಳನ್ನು ಆಧರಿಸಿ ತಮ್ಮ ನವೀನ ಕೃತಿಗಳನ್ನು ರಚಿಸಿದ ಕವಿಗಳೂ ಉಂಟು. ಇಂಥವರಿಗೆ ಭಾರತೀಯ ಸಾಹಿತ್ಯದ ಎರಡು ನಿಧಿಗಳಂತಿರುವ ರಾಮಾಯಣ-ಮಹಾಭಾರತಗಳು ಹೆಚ್ಚಾಗಿ ವಸ್ತುಗಳನ್ನು ಒದವಿಸಿದುವು; ಆ ಮಹಾಕಾವ್ಯಗಳಿಂದ ಸ್ಫೂರ್ತಿಗೊಂಡ ಮುಂದಿನ ಕವಿಗಳು ಸುಂದರ ಸ್ವತಂತ್ರ ಕೃತಿಗಳನ್ನು ನಿರ್ಮಿಸಿದ್ದಾರೆ. ಅವರ ಆ ಕೃತಿಗಳ ಸೌಂದರ್ಯಕ್ಕೂ ಕಲಾವಿದಗ್ಧತೆಗೂ ಬಹುಮಟ್ಟಿಗೆ ಅವರ ಸಮಕಾಲೀನ ಜೀವನವು ಪ್ರಚೋದನೆಯನ್ನಿತ್ತಿದೆ. ಅದು ಸೂಕ್ಷ್ಮವಾಗಿ ಅವರ ಕಾವ್ಯಗಳಲ್ಲಿ ಮೂಡಿಬಂದಿದೆ. ಆದರಿಂದ ಸಾಹಿತ್ಯವು ಸ್ವಾಭಾವಿಕವಾಗಿ ಪರಿವರ್ತನೆಯ ಗುಣವನ್ನು ಅಳವಡಿಸಿಕೊಂಡಿದೆ. ಇಂತಹ ಪರಿವರ್ತನಶೀಲವಾದ ಸಾಹಿತ್ಯದಲ್ಲೂ ಸಹ ಸರ್ವಕಾಲೀನತೆಯು ವ್ಯಕ್ತವಾಗಿದೆ. ಅದರಿಂದಲೇ ಆ ಹಿಂದಿನ ಕೃತಿಗಳು ನಮಗೆ ಈಗ ಆನಂದವನ್ನುಂಟುಮಾಡುತ್ತವೆ. ನಮ್ಮ ಜೀವನವನ್ನು ರೂಪಿಸುತ್ತವೆ.

ಇಲ್ಲಿ, ಸಾಹಿತ್ಯದಲ್ಲಿ ಸರ್ವಕಾಲೀನತೆ ಎಂದರೇನೆಂಬುದರ ಬಗ್ಗೆ ಸ್ವಲ್ಪ ತಿಳಿದುಕೊಳ್ಳಬೇಕು. ಪರಿವರ್ತನೆಯು ಜೀವನ-ಸಾಹಿತ್ಯಗಳ ಸ್ವಭಾವಧರ್ಮ. ಈ ಪರಿವರ್ತನೆಯ ಹಿನ್ನೆಲೆಯಲ್ಲಿಯೂ ಸಹ ಒಂದು ಸ್ಥಿರತೆಯಿದೆ. ಕಾಲಕಾಲಕ್ಕೆ ಮಾನವಜೀವನದಲ್ಲಿ ವ್ಯತ್ಯಾಸವಾದುದು ಕಾಣಬಹುದು. ಆದರೆ ಆ ಜೀವನಕ್ಕೆ ತಳಹದಿಯಾಗಿರುವ ತತ್ತ್ವಗಳಲ್ಲಿ ಮಾತ್ರ ದೇಶಕಾಲಾತೀತವಾದ ಗುಣವಿರುತ್ತದೆ. ಆ ಗುಣವೇ ಸಾಹಿತ್ಯಕ್ಕೆ ಪ್ರಚೋದಕಶಕ್ತಿಯಾಗುವುದುಂಟು. ಆದರಿಂದ ಸಾಹಿತ್ಯದಲ್ಲಿ ಸರ್ವಕಾಲೀನತೆಯು ಕಂಡುಬರುವುದು. ಸಾಹಿತ್ಯದ ಶರೀರವು ಕಾಲಕಾಲಕ್ಕೆ ಮಾರ್ಪಾಟು ಹೊಂದಬಹುದು. ಆ ಮಾತು ಬೇರೆ. ಪ್ರಾಚೀನ ಕಾಲದಲ್ಲಿ ಛಂದೋಬದ್ಧವಾದ ಕವಿತೆಯು ಸಾಹಿತ್ಯದ ಶರೀರವಾಗಿದ್ದರೆ, ಇಂದು ಜನರಾಡುವ ಭಾಷೆಯಲ್ಲಿ ಬರೆದದ್ದು ಶರೀರವೆನಿಸಬಹುದು. ಅದಕ್ಕೆ ತೊಡಿಸಿದ ಅಲಂಕಾರಗಳಲ್ಲೂ ವ್ಯತ್ಯಾಸ ಕಂಡುಬರುವುದು. ಆದರೆ ಅವುಗಳಲ್ಲಿ ಮೂಡಿರುವ ಸರ್ವಕಾಲಕ್ಕೂ ಅನ್ವಯಿಸುವ ಸತ್ತ್ವ ಒಂದೇ ಆಗಿರುತ್ತದೆ. ಹೊಸ-ಹೊಸ ರೂಪಗಳಲ್ಲಿ ಸಾಹಿತ್ಯದಲ್ಲಿ ಅವತರಿಸಿರುತ್ತದೆ. ಮಾದರಿಗಾಗಿ ಒಂದು ಉದಾಹರಣೆಯನ್ನು ನಿರೀಕ್ಷಿಸುವ: ಆದಿಕವಿ ವಾಲ್ಮೀಕಿಯ ರಾಮಾಯಣದಲ್ಲಿಯ ಕೆಲವು ಘಟನೆಗಳು ಹೀಗಿವೆ:— ಸೀತೆಯ ಸ್ವಯಂವರ, ಅದರಲ್ಲಿ ವಿಷಬೀಜ, ರಾಜ್ಯಲೋಭಕ್ಕಾಗಿ ದಶರಥನ ಮನೆಯಲ್ಲಿ ಕಲಹ, ಅದಕ್ಕಾಗಿ ರಾಮನ ವನವಾಸ, ಸೀತೆಯನ್ನು ರಾವಣನು ಅಪಹರಿಸುವುದು, ಸೀತೆಯ ಶೋಕ, ರಾಮ-ರಾವಣರ ಯುದ್ಧ— ಈ ಸಂಗತಿಗಳು ಅಂದಿನ ಯುಗದ ಸಾಹಿತ್ಯದ ತಕ್ಕ ರೂಪವನ್ನು ಹೊಂದಿ ಮಹಾಕಾವ್ಯದಲ್ಲಿ ಅವತರಿಸಿದುವು. ಆದರೆ ಈ ಘಟನೆಗಳ

ಹಿಂದೆ ಇರುವ ಮನೋವೃತ್ತಿಯು ಸೃಷ್ಟಿಯಲ್ಲಿ ನಿತ್ಯವಾದುದು. ಸರ್ವಕಾಲದಲ್ಲೂ ಇರುವಂತಹದು. ಮಹಾಭಾರತವನ್ನು ಈ ದೃಷ್ಟಿಯಿಂದ ನಿರೀಕ್ಷಿಸಿದರೆ. ರಾಮಾಯಣದಲ್ಲಿ ವ್ಯಕ್ತವಾದ ರಾಜ್ಯಲೋಭ ಕಲಹಗಳು ಇನ್ನೊಂದು ರೂಪದಲ್ಲಿ ಇಲ್ಲಿ ವ್ಯಕ್ತವಾಗಿವೆ. ಅಲ್ಲಿಯ ಸ್ವಯಂವರದಲ್ಲಿ ರಾವಣನು ಕೆರಳಿ, ದುಷ್ಟವೃತ್ತಿಗೆ ಇಳಿದಿದ್ದರೆ ಇಲ್ಲಿಯ ದ್ರೌಪದಿಯ ಸ್ವಯಂವರದಲ್ಲಿ ದುರ್ಯೋಧನ-ಕರ್ಣರು ರೋಷಗೊಂಡಿದ್ದಾರು. ಅಲ್ಲಿ ಸೀತೆಯ ಹರಣವಾದರೆ ಇಲ್ಲಿ ದ್ರೌಪದಿಯ ಅಪಮಾನವಾಯಿತು. ಹೀಗೆ ಇಲ್ಲಿ ನಡೆದ ಘಟನೆಗಳಲ್ಲಿ ನಾವು ಭಿನ್ನತ್ವವನ್ನು ಕಾಣಬಹುದೇ ಹೊರತಾಗಿ ಮೂಲ ಭಾವನೆಗಳಲ್ಲಿ ಅಲ್ಲ. ಅದರಂತೆ ಇಂದಿನ ಯುಗದಲ್ಲಿ ಮುಪ್ಪಿನ ಜಮೀನ್‌ದಾರ ದಶರಥಪ್ಪನ ಕಿರಿಯ ಹೆಂಡತಿಯು ಹಿರಿಯ ಮಗ-ಸೊಸೆಯರನ್ನು ಜಗಳ ಮಾಡಿ ಮನೆಯಿಂದ— ವನಕ್ಕೆ ಅಲ್ಲದಿದ್ದರೂ— ಹೊರಗೆ ಹಾಕುವ ಸಂದರ್ಭಗಳೇನು ಕಡಿಮೆಯಿಲ್ಲ. ಹಾಗೆ ಹೊರಬಿದ್ದ ಹಳ್ಳಿಯ ರಾಮಪ್ಪನ ಹೆಂಡತಿಯಾದ ಸೀತಮ್ಮನು ಸ್ವಾಭಾವಿಕವಾಗಿಯೇ ಅನೇಕ ಕಡುಕಷ್ಟಗಳನ್ನೂ ಎದುರಿಸಬೇಕಾಗಬಹುದು. ಈ ಕಥೆಯ ಹಿಂದಿರುವ ಮನೋವೃತ್ತಿಯು ರಾಮಾಯಣ-ಮಹಾಭಾರತಗಳ ಕಾಲದಲ್ಲಿದ್ದುದೇ ಇಂದೂ ಇದೆ. ಅದೇ ಸಾಹಿತ್ಯದ ಆತ್ಮವಾಗಿ ನಿಂತಿದೆ. ಸಾಹಿತ್ಯದಲ್ಲಿರುವ ಈ ಆತ್ಮಗುಣವೇ ಅದರ ಸರ್ವಕಾಲೀನತೆ ಎನಿಸುತ್ತದೆ.

ಇಂಥ ಸರ್ವಕಾಲೀನತೆಯನ್ನು ಇಂದಿನ ಕನ್ನಡ ಕಾದಂಬರಿ ಪ್ರಪಂಚವು ಎಷ್ಟರಮಟ್ಟಿಗೆ ಮೈಗೂಡಿಸಿಕೊಂಡಿದೆ- ಎಂಬುದೇ ಈಗಿನ ವಿಷಯವಾಗಿದೆ. ಈ ಮೊದಲು ಒಂದೆರಡು ಉದಾಹರಣೆಗಳಿಂದ ಸಾಹಿತ್ಯದಲ್ಲಿ ಸರ್ವಕಾಲೀನತೆ ಎಂದರೇನೆಂಬುದನ್ನು ವಿವರಿಸಲಾಯಿತು. ಆದರೆ ಸರ್ವಕಾಲೀನತೆ ಎಂದರೆ ಇದಿಷ್ಟೇ ಎಂದು ಹೇಳಿದಂತಲ್ಲ; ಅದು ಸಾಹಿತ್ಯದಲ್ಲಿ ವಿವಿಧಮುಖಗಳಲ್ಲಿ ವ್ಯಕ್ತವಾಗಿರುತ್ತದೆ. ಅದರ ಒಂದೆರಡು ಮುಖಗಳನ್ನು ಮಾತ್ರ ಇಲ್ಲಿ ನಿದರ್ಶನಕ್ಕೆ ತರಲಾಗಿದೆ. ಹೀಗೆಯೇ ಕನ್ನಡ ಕಾದಂಬರಿಗಳ ಸರ್ವಕಾಲೀನತೆಯ ವಿಚಾರವು ಕೂಡ. ಇಲ್ಲಿ ಪೂರ್ಣವಾಗಿ ಪ್ರದರ್ಶಿಸಲು ಸಾಧ್ಯವಿಲ್ಲ, ಆ ದಿಸೆಯಲ್ಲಿ ವಿಚಾರಿಸಲು ಒಂದು ಪ್ರಚೋದನೆಯನ್ನು ಮಾತ್ರ ಒದಗಿಸಿದಂತಾಗಬಹುದಾಗಿದೆ.

ಇಂದಿನ ಕನ್ನಡ ಕಾದಂಬರೀಪ್ರಪಂಚದಲ್ಲಿ ಸಾಮಾಜಿಕ ಕಾದಂಬರಿಗಳಿಗೇನೇ ಪ್ರಧಾನಪಟ್ಟವಿದೆ. ಅವುಗಳಲ್ಲಿ ಹೆಚ್ಚಾಗಿ ಮಧ್ಯಮವರ್ಗದ ಜೀವನವು ಮೂಡಿಬಂದಿದೆ. ಅದಕ್ಕೆ ಕಾರಣವೂ ಇಲ್ಲದಿಲ್ಲ. ಕನ್ನಡ ಬರೆಹಗಾರರಲ್ಲಿ ಬಹುಜನರು ಮಧ್ಯಮವರ್ಗದಿಂದ ಹುಟ್ಟಿ ಬಂದವರು. ಅವರು ತಮ್ಮ ಸುತ್ತಲಿನ ಜೀವನವನ್ನೂ ತಮ್ಮ ಅನುಭವವನ್ನೂ ಚಿತ್ರಿಸಲು ಯತ್ನಿಸಿದ್ದಾರೆ. ಇದಕ್ಕೆ ಪೂರಕವಾಗಿ ಅಲ್ಲಲ್ಲಿ ಬಡವರ ಹಾಗು ಸಿರಿವಂತರ ಜೀವನವು ಕಾದಂಬರಿಗಳಲ್ಲಿ ಚಿತ್ರಿಸಲ್ಪಟ್ಟಿದೆ. ಆದರೆ ಕಾದಂಬರಿಕಾರರು ವಿವಿಧ ಪ್ರದೇಶಗಳಲ್ಲಿ ಹುಟ್ಟಿ ಬೆಳೆದವರು. ಅವರ ದರ್ಶನ-ವಿಚಾರಗಳೂ ಭಿನ್ನವಾದುವುಗಳು. ಆದರಿಂದ ಸಾಮಾಜಿಕ ಕಾದಂಬರಿಗಳಲ್ಲಿ ವೈವಿಧ್ಯ ಉಂಟಾಗಿದೆ. ಅಭ್ಯಾಸ, ಒಲವುಗಳಂತೆ ಕಲಾ ನಿಪುಣತೆ, ತಂತ್ರನೈಪುಣ್ಯ, ಪಾತ್ರ ಸೃಷ್ಟಿಯಲ್ಲಿಯ ಸೂಕ್ಷ್ಮತೆಗಳು ನಿರ್ಮಾಣವಾಗಿವೆ. ಇವೆಲ್ಲವುಗಳನ್ನು ವ್ಯಾಪಿಸಿ ಸರ್ವಕಾಲೀನತೆಯು ರೂಪುಗೊಂಡು ನಿಂತಿದೆ.

ನಮ್ಮ ಸಾಮಾಜಿಕ ಕಾದಂಬರಿಪ್ರಪಂಚವು ಹಳೆ ಹೊಸ ಜೀವನಗಳಲ್ಲಿಯ ತಿಕ್ಕಾಟ, ಹೋರಾಟದ ಚಿತ್ರಣದಿಂದ ಆರಂಭವಾಯಿತು. ಆಗ ಈ ಹೋರಾಟದಿಂದ ಉದ್ಭವಿಸುವ ಅನೇಕ ಸಮಸ್ಯೆಗಳು ಜೀವನದ ಚಿತ್ರಣದಲ್ಲಿ ತಕ್ಕ ಸ್ಥಾನವನ್ನು ಪಡೆದುವು. ಇಂತಹ ಚಿತ್ರಣದ ಕುಶಲತೆಯು ಬೆಳೆದು ಒಂದು ಒಳ್ಳೆಯ ಸ್ಥಿತಿಗೆ ಮುಟ್ಟಿದ್ದು ಶ್ರೀ. ಕಾರಂತರ 'ಮರಳಿ ಮಣ್ಣಿಗೆ' ಯಲ್ಲಿ. ಇದರಲ್ಲಿ ಪಶ್ಚಿಮ ಕರಾವಳಿಯ ಒಂದು ಕುಟುಂಬದ ಮೂರು ತಲೆಮಾರಿನ ಚಿತ್ರ ಬಂದಿದೆ. ಆದರೆ ಇದು ಕೇವಲ ಒಂದು ಕುಟುಂಬದ ಕಥೆಯಲ್ಲ. ಭಾರತೀಯ ಜನಾಂಗವು ನವನಾಗರಿಕತೆಯೊಡನೆ ಹೂಡಿದ ಹೋರಾಟದ ಸೂಚ್ಯ ಚಿತ್ರಣವು ಇದರಲ್ಲಿದೆ. ಇದರಲ್ಲಿ ಬರುವ ಪಾತ್ರಗಳೂ ಅವರ ಮಾನಸಿಕ ಹೋರಾಟವೂ ನಮ್ಮ ಬಾಳಿನ ಚಿರಂತನತ್ವದ ಪ್ರತೀಕವಾಗಿವೆ. ಹಿಂದಿನಿಂದ ನಮ್ಮ ಸಾಹಿತ್ಯದಲ್ಲಿ ರೂಪುಗೊಂಡು ಬಂದ ಸರ್ವಕಾಲೀನತೆಯನ್ನು ಇಲ್ಲಿ ನೆನೆದರೆ, ಈ ಕಾದಂಬರಿಯಲ್ಲಿಯ ಹಳೆ-ಹೊಸ ಹೋರಾಟವು ಕೂಡ ಚಿರಸ್ಥಾಯಿಯೆಂಬುದು ಹೊಳೆಯದಿರದು. ಮಹಾಭಾರತ ಕಾಲದಲ್ಲಿ ಶ್ರೀಕೃಷ್ಣನ ನವಮತಕ್ಕೆ ಹೊಂದಿಕೊಳ್ಳದೆ ಭೀಷ್ಮದ್ರೋಣರಂಥವರೂ ಸಹ ಅನ್ಯಾಯದ ಪಕ್ಷವನ್ನು ವಹಿಸಿ ಹೋರಾಡಿದುದುಂಟು. ಅಂತಹ ಹಳೆ-ಹೊಸ ಮನೋವೃತ್ತಿಗಳ ಹೋರಾಟದ ಚಿತ್ರವಣಲ್ಲದೆ ಬೇರೆಯಲ್ಲ ಮರಳಿ ಮಣ್ಣಿಗೆಯಲ್ಲಿ ಬಂದುದು. ಇದರಂತೆ 'ಕಾನೂರು ಸುಬ್ಬಮ್ಮ ಹೆಗ್ಗಡತಿ,' 'ನಿಸರ್ಗ' ಮೊದಲಾದಪ್ರಾದೇಶಿಕ ಕಾದಂಬರಿಗಳಲ್ಲೂ ಸರ್ವಕಾಲೀನತೆಯನ್ನು ಗುರುತಿಸಬಹುದು.

ಇನ್ನೊಂದು ದೃಷ್ಟಿಯಿಂದ ಕನ್ನಡಕಾದಂಬರಿಗಳಲ್ಲಿ ಸಮಕಾಲೀನ ಸಮಾಜವು ರೂಪುಗೊಂಡಿದೆ. ಅಂದರೆ ಸಮಾಜದಲ್ಲಿ ಶಿಷ್ಟಾಚಾರದ ಹೆಸರಿನಲ್ಲಿ ನಡೆಯುವ ಅನಾಚಾರದ ಚಿತ್ರಣವನ್ನು ಇಲ್ಲಿ ಎತ್ತಿ ತೋರಿಸಬಹುದು. ಇಂತಹ ಚಿತ್ರಗಳು ಅನೇಕ ಲೇಖಕರ ಹಲವು ಕೃತಿಗಳಲ್ಲಿ ಮೂಡಿ ಬಂದಿದ್ದರೂ ಶ್ರೀ. ಕಟ್ಟಿಮನಿಯವರ 'ಜರತಾರಿ ಜಗದ್ಗುರು', ಶ್ರೀ ಕಾರಂತರ 'ಸಂನ್ಯಾಸಿಯ ಸೋಗಿನಲ್ಲಿ', ಅ. ನ. ಕೃ. ಅವರ 'ಶ್ರೀಮತಿ' ಇವನ್ನು ಇಲ್ಲಿ ಎತ್ತಿ ಹೇಳಬಹುದು. ಇವುಗಳಲ್ಲಿಯ ಸರ್ವಕಾಲೀನತೆಯ ದೃಷ್ಟಿಯಿಂದ ಕ್ರಮವಾಗಿ ಜೀವನದಲ್ಲಿಯ ಮಲಿನತೆಯನ್ನು ಕಟ್ಟಿಮನಿಯವರೂ, ಹೊಸ ಜೀವನದಲ್ಲಿಯ ಸೋಗುಗಾರಿಕೆಯನ್ನು ಕಾರಂತರೂ, ಅಂತರರಾಷ್ಟ್ರೀಯ ಭಾವನೆಯ ಬಿಸಿಲುಗುದುರೆಯನ್ನು ಅ. ನ. ಕೃ ಅವರೂ ಎತ್ತಿ ತೋರಿಸಿದ್ದಾರೆ. ಇವುಗಳಲ್ಲಿ ಬರುವ ವಿವಿಧಪಾತ್ರಗಳ ಮನೋವೃತ್ತಿಯು ಸೃಷ್ಟಿಯೊಳಗಿನ ಚಿರಂತನ ಸತ್ಯವಾಗಿದೆ. ಯಾವ ವೇಷದಲ್ಲಿದ್ದರೂ ಮಾನವನ ಮೂಲ ಪ್ರವೃತ್ತಿಗಳನ್ನು ಅಲ್ಲಗಳೆಯಲು ಸಾಧ್ಯವಿಲ್ಲವೆಂಬ ಸತ್ಯವನ್ನೇ ಇವು ಸಾರುತ್ತಿವೆ. ಇದರಲ್ಲಿಯೇ ಸರ್ವಕಾಲೀನತೆಯುಂಟು.

ಇದೇ ರೀತಿ ಭಾರತೀಯರ ಸ್ವಾತಂತ್ರ್ಯದ ಹೋರಾಟ ಹಾಗೂ

ಸ್ವಾತಂತ್ರ್ಯದ ನಂತರವೂ ಪೂರ್ವದಲ್ಲಿಯೂ ಆರ್ಥಿಕ ಸಮತೆಗಾಗಿ ಸಮಾಜದಲ್ಲಿ ನಡೆದ ತಿಕ್ಕಾಟದ ಚಿತ್ರಣವೂ ನಮ್ಮ ಕಾದಂಬರಿಗಳಲ್ಲಿ ಬಂದಿದೆ. ಇಂಥವುಗಳಲ್ಲಿ 'ರಾಷ್ಟ್ರಪುರುಷ', 'ಔದಾರ್ಯದ ಉರುಳಿನಲ್ಲಿ', 'ರಕ್ತತರ್ಪಣ' 'ಅಮರ ಆಗಸ್ಟ್', 'ಭಗ್ನಮಂದಿರ', 'ಮೂರಾಬಟ್ಟೆ', 'ಮಾಡಿ ಮಡಿದವರು', ಮೊದಲಾದ ಕಾದಂಬರಿಗಳನ್ನು ಇಲ್ಲಿ ಉಲ್ಲೇಖಿಸಬಹುದು. ಇವೆಲ್ಲವುಗಳಲ್ಲಿಯೂ ಸಮಕಾಲೀನ ರಾಜಕೀಯ ಜೀವನಚಿತ್ರಣದೊಡನೆ ಒಂದು ಚಿರಂತನ ತತ್ತ್ವವೂ ಪ್ರದರ್ಶಿತವಾಗದಿಲ್ಲ, 'ರಾಷ್ಟ್ರಪುರುಷ'ದ ಮರುದೇವಿಯ ಕುಲದಭಿಮಾನ, 'ಔದಾರ್ಯದ ಉರುಳಲ್ಲಿ', ಯ ರಾಜಕೀಯ ವಿಡಂಬನೆ, 'ಭಗ್ನಮಂದಿರ'ದ ಶೀಲೆಯ ಸ್ವಭಾವ ದರ್ಶನ, 'ಮೂರಾಬಟ್ಟೆ'ಯಲ್ಲಿಯ ಮಾನಸಿಕ ಹೊಯ್ದಾಟ 'ರಕ್ತತರ್ಪಣ' ದಲ್ಲಿಯ ತ್ಯಾಗ, 'ಮಾಡಿ ಮಡಿದವರು' ದಲ್ಲಿ ಬರುವ ಧ್ಯೇಯನಿಷ್ಠೆಗಳು ಕಾದಂಬರಿಗಳಲ್ಲಿಯ ತತ್ಕಾಲೀನ ಜೀವನಚಿತ್ರಣದೊಡನೆ ಮೂಡಿಬಂದ ಚಿರಂತನ ಗುಣಗಳಾಗಿವೆ. ಸರ್ವಕಾಲಕ್ಕೂ ಅನ್ವಯಿಸುವಂತಿವೆ.

ಕಾರಂತರ ಕಾದಂಬರಿ 'ಸೂಳೆಯ ಸಂಸಾರ' ದಿಂದ ಬಸವರಾಜರು ಬರೆದ 'ಬೀದಿಯಲ್ಲಿ ಬಿದ್ದವಳು' ವರೆಗೆ ಸಮಾಜದಲ್ಲಿ ಸ್ತ್ರೀಯು ತನ್ನ ಸ್ತ್ರೀತ್ವವನ್ನು ಕಾಯ್ದುಕೊಳ್ಳಲಿಕ್ಕೆ ಹೋರಾಡಿ ಸೋತ ಚಿತ್ರ ಮೂಡಿಬಂದಿದೆ. ಅಂತಹ ಅಬಲೆಯರಲ್ಲೂ ಶ್ರೀ. ಎಸ್. ಕೆ. ಅವರ 'ಸಾವಿನ ಉಡಿಯಲ್ಲಿಯ'ಯ ಕೇಸರಿಯಂತಹ ಸಬಲೆಯರೂ ಕಾದಂಬರಿ ಪ್ರಪಂಚದಲ್ಲಿ ಬೆಳಕಿಗೆ ಬಂದಿದ್ದಾರೆ. ಇಲ್ಲಿಯ ಕಾರುಣ್ಯ ಹಾಗೂ ಸ್ತ್ರೀತ್ವರಕ್ಷಣೆಗಾಗಿ ಹೋರಾಡುವ ಮನೋವೃತ್ತಿ, ಸಮಾಜದ ಪ್ರವಾಹದ ಪ್ರಭಾಷಗಳು ಚಿರಂತನ ಸ್ವರೂಪವನ್ನು ಹೊಂದುತ್ತವೆ. ಇನ್ನು 'ಆನಂದಕಂದರ' 'ಸುದರ್ಶನ' ದೊಳಗಿನ 'ಉಷಾ-ಸುದರ್ಶನ'ರ ಧ್ಯೇಯವಾದದಿಂದ ಆರಂಭವಾಗಿ ನಿರಂಜನರ 'ವಿಮೋಚನೆ' ಕುಲಕರ್ಣಿ ಬಿಂದುಮಾಧವರ 'ಪರದೇಶಿ' ಗಳಲ್ಲಿಯ ಕಿಸೆಗಳ್ಳರ ಜೀವನಚಿತ್ರಗಳ ವರೆಗೂ ವಸ್ತುವಿನ ಹರವು ಹಬ್ಬಿದೆ. ಎಂತಹ ಕೀಳ್ತರಗತಿಯ ಜೀವನದಲ್ಲೂ ಮಾನವತೆ, ಪ್ರೇಮ, ದಯೆಗಳು ಮನೆಮಾಡಿಕೊಂಡಿರುತ್ತವೆಂಬುದನ್ನು ನಾವು ಕಾಣುತ್ತೇವೆ. ಈ ಗುಣಗಳು ಕಾದಂಬರಿಗೆ ಸರ್ವಕಾಲೀನತೆಯನ್ನು ಒದಗಿಸುತ್ತವೆ.

ಇನ್ನು ಮುಗಳಿಯವರ 'ಬಾಳುರಿ'ಯಲ್ಲಿಯ ನಿರುದ್ಯೋಗ ಸಮಸ್ಯೆ 'ಕಾರಣಪುರುಷ'ದಲ್ಲಿಯ ಪ್ರಾಂತೀಯಜೀವನ ಸಮಸ್ಯೆ, 'ಅನ್ನ'ದೊಳಗಿನ ಆಹಾರಸಮಸ್ಯೆ, ಗೋಕಾಕರ 'ಇಜ್ಜೋಡಿ'ನೊಳಗಿನ ದಾಂಪತ್ಯ ಸಮಸ್ಯೆ, ಆನಂದಕಂದರ 'ಮಗಳ ಮದುವೆ'ಯ ಆರ್ಥಿಕಸಮಸ್ಯೆ. ಕಾರಂತರ 'ಮುಗಿದ ಯುದ್ಧ' ಮಿರ್ಜಿಯವರ 'ರಾಮಣ್ಣ ಮಾಸ್ತರು'ಗಳಲ್ಲಿಯ ಬಡತನದ ಸಮಸ್ಯೆಗಳು, ಸಮಸ್ಯೆ ತೀರಿದೊಡನೆ ಅಳಿದು ಹೋಗುವ ಚಿತ್ರಗಳಾಗಿಲ್ಲ. ಅವುಗಳ ಹಿನ್ನೆಲೆಗೆ ಇರುವ ಜೀವನಪ್ರಜ್ಞೆಯು ಜಗತ್ತಿನಲ್ಲಿ ಸರ್ವಕಾಲಕ್ಕೂ ವ್ಯಾಪಿಸಿ ನಿಲ್ಲುವಂತಹದಾಗಿದೆ.

ಶ್ರೀನಿವಾಸರ ಸುಬ್ಬಣ್ಣ, ಅ. ನ. ಕೃ. ಅವರ ಉದಯ ರಾಗ ಸಂಧ್ಯಾರಾಗ, ಸಾಹಿತ್ಯರತ್ನ, ನಟಸಾರ್ವಭೌಮ, ಕಾರಂತರ 'ಮೊಗಪಡೆದ ಮನ' ಮೊದಲಾದ ಕಾದಂಬರಿಗಳು ಗಾಯಕ, ಚಿತ್ರಗಾರ, ಲೇಖಕ, ನಟ, ನೃತ್ಯಗಾರ ಮೊದಲಾದ ಕಲೆಗಾರರ ಜೀವನಚಿತ್ರಗಳಾಗಿವೆ. ಇವುಗಳಲ್ಲಿ ಕಲಾವಿದನ ಧ್ಯೇಯ, ಕೀರ್ತಿಲಾಲಸೆ, ಸೌಂದರ್ಯಸಿದ್ಧಿ, ಜನಮೆಚ್ಚುಗೆ ಈ ದ್ವಂದ್ವಗಳಲ್ಲಿ ನಡೆಯುವ ಮನದ ಹೋರಾಟ ಬಹು ಸುಂದರವಾಗಿ ಮೂಡಿವೆ. ಈ ಹೋರಾಟ, ಹೊಯ್ದಾಟಗಳು ಯಾವಕಾಲಕ್ಕೂ ಸಾಹಿತ್ಯದ ವಸ್ತುವಾಗಿ ಉಳಿಯತಕ್ಕವು. ಆದದರಿಂದ ಅವು ಸಾರ್ವಕಾಲಿಕವೆಂದು ಹೇಳಬಹುದು.

ಇವುಗಳಂತೆ ಕನ್ನಡ ಐತಿಹಾಸಿಕ ಕಾದಂಬರಿಗಳಲ್ಲೂ ಸಹ ಸರ್ವಕಾಲೀನತೆಯ ಸತ್ತ್ವವು ಅಲ್ಲಲ್ಲಿ ಮೂಡಿ ಬಂದಿದೆ. ಹೀಗೆ ಅದು ಕನ್ನಡ ಕಾದಂಬರಿಗಳಲ್ಲಿ ವಿವಿಧ ಮುಖಗಳಲ್ಲಿ ರೂಪುಗೊಂಡಿದೆ. ಕಾದಂಬರಿಕಾರರಲ್ಲಿರುವ ನಿರ್ಭಯವಾಗಿ ವಾಸ್ತವತೆಯನ್ನು ಸಾರುವ ಧೈರ್ಯ. ಪ್ರಾಣಿದಯೆ, ಮಾನವ ಧರ್ಮಗಳನ್ನು ಚಿತ್ರಿಸುವ ನಾಸ್ತಿಕತೆ, ಸಾಮಾನ್ಯ ವ್ಯಕ್ತಿಯ ಸುಖ-ದುಃಖಗಳಲ್ಲೂ ಇರುವ ಅಸಾಮಾನ್ಯತೆಯ ಕಲ್ಪನೆ, ಸಾಮಾಜಿಕ ಪ್ರಜ್ಞೆಗಳು ಇಂದಿನ ಕಾದಂಬರಿ ಪ್ರಪಂಚಕ್ಕೆ ಪ್ರಚೋದನೆಯನ್ನಿತ್ತಂತೆ ಸರ್ವಕಾಲೀನತೆಯನ್ನೂ ಪ್ರದರ್ಶಿಸುತ್ತವೆ. ಒಟ್ಟಿನಲ್ಲಿ ಮಾನವ ಜೀವನದ ಚಿರಂತನ ಸತ್ಯಸಮಸ್ಯೆಗಳೇ ಹೊಸ ಹೊಸ ಕಾಲಕ್ಕೆ ನವೀನ ಪಾತ್ರ, ಸನ್ನಿವೇಶ, ವಸ್ತು, ತಂತ್ರಗಳನ್ನು ಹೊಂದಿ ಸಾಹಿತ್ಯದಲ್ಲಿ ಅವತರಿಸುತ್ತವೆ. ಅದನ್ನೇ ಕಲಾವಿದನು ವಿವಿಧರೀತಿಯಿಂದ ಚಿತ್ರಿಸುತ್ತಾನೆ. ಈ ಚಿತ್ರಣ ಕಾರ್ಯದಲ್ಲಿ ಕನ್ನಡ ಕಾದಂಬರೀ ಪ್ರಪಂಚವು ತನ್ನ ಹೊಣೆಯನ್ನು ಚೆನ್ನಾಗಿಯೇ ನಿರ್ವಹಿಸಿದೆ ಎಂದು ಹೇಳಬೇಕು.*

ಧಾರವಾಡದ ಆಕಾಶವಾಣಿಯ ಅಧಿಕಾರಿಗಳ ಕೃಪೆಯಿಂದ

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ
ಪ್ರಚಾರವಾಗಬೇಕಾಗಿದ್ದರೆ,

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ ಪೇಂಟಿಂಗ ವರ್ಕ್ಸ್
ಗಾಂಧಿಚೌಕ, ಧಾರವಾಡ

ಪುಣೆಯಲ್ಲಿ ನಮ್ಮ ಏಜಂಟರು:
ಶ್ರೀ. ಎನ್. ಬಿ. ಮಠಕರ
೪೩ ರವಿವಾರಪೇಠ, ಪುಣೆ ೨

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಈ ಶಿಕ್ಷಣರಂಗದಲ್ಲಿ ವಿಮರ್ಶೆಗಾಗಿ ಹೊಸ ವಿಷಯವನ್ನೇನಾದರೂ ಕೊಟ್ಟಲ್ಲಿ, ಭಾಗವಹಿಸುವವರ ಸಂಖ್ಯೆಯೆ ಕಡಿಮೆಯಾಗುವುದೆಂಬುದಕ್ಕೆ ಈ ತಿಂಗಳ ಮೇಲಾಟವು ಪ್ರತ್ಯಕ್ಷ ಸಾಕ್ಷಿಯಾಗಿದೆ. ಶ್ರೀಮಾನ್ ಕೆ. ಎಸ್. ಶರ್ಮಾ, ಕಾಸರಗೋಡು ಮತ್ತು ಶ್ರೀಮಾನ್ ಎಸ್. ಎಂ. ಜೋಶಿ, ಉಮಾವಿದ್ಯಾಲಯ ಹೈಸ್ಕೂಲ್, ಲಕ್ಷ್ಮೇಶ್ವರ–ಇವರಿಬ್ಬರಿಂದಲೇ ವಿಮರ್ಶೆಗಳು ಬಂದಿವೆ. ಇವರಲ್ಲಿಯೂ ಶ್ರೀಮಾನ್ ಜೋಶಿಯವರು ಜಯಂತಿಯ ಮೇ ಸಂಚಿಕೆಯನ್ನು ಮಾತ್ರ ವಿಮರ್ಶಿಸದೆ, ಇಡಿ ಹದಿನಾರನೆಯ ಸಂಪುಟವನ್ನು ಕುರಿತು, ತುಂಬ ಮೆಚ್ಚುಗೆಯ ಮಾತುಗಳನ್ನು ಬರೆದಿದ್ದಾರೆ.

ಮೇ ಸಂಚಿಕೆಯನ್ನು ವಿಮರ್ಶಿಸಬೇಕೆಂದರೆ ಕತೆಗಳಿದ್ದುವು, ನಾಟಕವಿದ್ದಿತು, ಕವಿತೆಗಳಿದ್ದುವು, ವ್ಯಕ್ತಿಪರಿಚಯವಿದ್ದಿತು, ಬೇರೆ ಲೇಖನಗಳಿದ್ದುವು. ವಿಮರ್ಶೆಯೆಂದರೆ ಇನ್ನೇನೂ ಅಲ್ಲ; ಒಳ್ಳೆಯದೆನಿಸಿದ ಸಾಹಿತ್ಯಕೃತಿಯು ಹೇಗೆ– ಏಕೆ ಒಳ್ಳೆಯದೆನಿಸಿತೆಂಬುದನ್ನೂ, ಒಳ್ಳೆಯದೆನಿಸದ ಸಾಹಿತ್ಯಕೃತಿಯು ಹೇಗೆ ಏಕೆ ಒಳ್ಳೆಯದೆನಿಸಲಿಲ್ಲವೆಂಬುದನ್ನೂ ಸಪ್ರಮಾಣವಾಗಿ ಸಿದ್ಧಗೊಳಿಸುವುದು. ಇಂತಹ ವಿಮರ್ಶೆ, ಕೃತಿಗಳನ್ನು ರಚಿಸಿದ ಸಾಹಿತ್ಯಿಕರ ಪ್ರಗತಿಗೂ ಒಳ್ಳೆಯದು; ಸಾಮಾನ್ಯವಾಚಕರ ಸದಭಿರುಚಿಸಂವರ್ಧನೆಗೂ ಒಳ್ಳೆಯದು. ಆದುದರಿಂದ ನಿರ್ದಾಕ್ಷಿಣ್ಯವಾಗಿ ವಿಮರ್ಶೆ ಮಾಡುವುದರಲ್ಲಿ ತರುಣ ಸಾಹಿತ್ಯಿಕರು ಔದಾಸೀನ್ಯವನ್ನು ತೋರಿಸಲಾಗದು. ವಿಚಾರ ಪೂರ್ವಕವಾಗಿ ವಿಮರ್ಶೆ ಬರೆಯಬೇಕಾಗುವುದರಿಂದ, ಮಾತಿನ ಕಟ್ಟಿನಲ್ಲಿ ಕೂಡಿಸುವಾಗ, ಸ್ವಂತದ ಅನೇಕ ಅಸ್ಪಷ್ಟ ಅಭಿಪ್ರಾಯಗಳಿಗೆ ಸ್ಪಷ್ಟತೆಯು ರೂಪಬಂದು, ವಿಮರ್ಶಕರಿಗೊಂದು ಲಾಭವೇ ಆಗುವುದು.

ಮುಂದಿನ ಸಂಚಿಕೆಗಾಗಿ ಈ ಸಂಚಿಕೆಯಲ್ಲಿ ಪ್ರಕಟವಾದ 'ಪುತ್ರವತಿ' ಎಂಬ ಕತೆಯನ್ನು ವಿಮರ್ಶೆಗೆ ತೆಗೆದುಕೊಂಡು, ಜೂನ್ ೨೫ ದಿನಾಂಕದೊಳಗಾಗಿ ತಲ್ಪುವಂತೆ ವಿಮರ್ಶೆಗಳನ್ನು ಕಳುಹಬೇಕು.

— **ಸಂಪಾದಕ**

೧೯೫೪ ಮೇ ತಿಂಗಳ ಜಯಂತಿ

(ವಿಮರ್ಶೆ)

ಶ್ರೀ. ಕೆ. ಎಸ್. ಶರ್ಮಾ, ವಾಣೀಮಂದಿರಂ, ಕಾಸರಗೋಡು.

ಕರ್ನಾಟಕ ಸಾಹಿತ್ಯರಂಗದಲ್ಲಿ ಸಾಹಿತ್ಯಾಮೃತಸ್ಯಂದಿನಿ ಜಯಂತಿಯು, ಹದಿನಾರು ವರ್ಷಗಳಲ್ಲಿ ತನ್ನನ್ನಡಸಿದ, ಆರ್ಥಿಕ ಮುಗ್ಗಟ್ಟಿನ ಭೀಕರಾಂದೋಲನಗಳನ್ನು ಪ್ರಯಾಸದಿಂದೆದುರಿಸಿ, ನಾಡಿನಲ್ಲಿ ಕಾಲುವೆ ಕಡಿದು ವಿಚಾರಪ್ರವಾಹಗಳನ್ನೂ ರಸದ ಝರಿಗಳನ್ನು ಹರಿಸಿದೆಯೆಂಬುದು ಅತ್ಯಂತಾಶ್ಚರ್ಯದ ಮಾತು ಮಾತ್ರವಲ್ಲ; ತುಂಬೆದೆಯ ಅಭಿಮಾನಾದರಾಪ್ಲಾವಿತವಾದ ವಚನವು. ಆದರೇನು ? ಜಯಂತಿಯ ಜೀವನೋನ್ನತಿಯ ಕಡೆಗೆ ನಾಡಿಗರ ಜಾಗೃತಿ ಮೂಡಿಲ್ಲ. ಸಹಾಯದ ಕೊಡುಗೈ ಮುಂದೆ ಬಂದಿಲ್ಲ. ಇದು ಊರ ಗುದ್ದಲಿ ತೆಗೆದು–ನಾಡ ಕಾಲುವೆ ಕಡಿಯಲು ಹೋದ ಪರಿಣಾಮವೆನ್ನಬಹುದೇ ? ಇಂತಹ ಕೆಲವೊಂದು ಬಗೆಯ ಸಂದೇಹಗಳನ್ನೇ ಸಂಪಾದಕೀಯದಲ್ಲಿಯೂ ನಾವು ಕಾಣಬಹುದು. ಏನಿದ್ದರೂ ನಾವು ಜಯಂತಿಯಿರಿಸಿಕೊಂಡ ಗುರಿಯನ್ನು ಮುಕ್ತಕಂಠವಾಗಿ ಶ್ಲಾಘಿಸಲೇ ಬೇಕಾಗಿದೆ. ಜಯಂತಿಯಂತಹ ಉದಾತ್ತ ಪತ್ರಿಕೆಯು ಸಾಗುವ ದಾರಿಯಲ್ಲಿ ಮುಗ್ಗಟ್ಟು ಬರಹುದು; ನಿರಾಶೆ ಬರಬಹುದು; ಭಾವಿಯ ಜೀವನದಲ್ಲಿ ಸಂದಿಗ್ಧ ಪರಿಸ್ಥಿತಿಯು ಕವಿದಂತೆ ಕಾಣಬಹುದು. ಆದರೆ ಈ ವರೆಗೆ ಜಯಂತಿ ನೀಡಿದ ಸಂಸ್ಕೃತಿಯು–ಸಾಹಿತ್ಯವಾಹಿನಿಯು 'ಪ್ರತಿಭೆ ಪ್ರಾಮಾಣಿಕತೆ' ಇವುಗಳ ಭದ್ರವಾದ ತಳಹದಿಯಲ್ಲಿ ರೂಪಿತವಾದ ಸಂಪಾದಕತ್ವದ ಹಿರಿಮೆಯಲ್ಲಿ ಖಿಲವಾಗದೆಂದೇ ಧೈರ್ಯದಿಂದ ನುಡಿಯಬಹುದು. ಬಂದ ತೊಡರುಗಳನ್ನು–ನಾಡಯುವಕರ ಕೊಡುಗೈಯ ಆಸೆಯಲ್ಲಿ–ಹಾಗೂ "Arise Awake and Stop not till the goal is reached" ಎಂಬ ಶ್ರೀ ವಿವೇಕಾನಂದರ ಸತ್ಯಪೂರ್ಣ ಅಮರವಾಣಿಯ ಆಶ್ವಾಸನೆಯ ಸ್ಫೂರ್ತಿಯ ಉದ್ಯಮದಲ್ಲಿ ಹರಿದೊಗೆದು, ಭಾವಿಯನ್ನು ಸತ್ತ್ವಪೂರ್ಣವನ್ನಾಗಿ ತುಂಬಲೆಂದೇ ಆಶಿಸುತ್ತೇನೆ ಒಂದಲ್ಲ ಒಂದು ದಿನ ಜಯಂತಿ ಮೈದುಂಬೀತು.

ಮೇ ತಿಂಗಳ ಸಂಚಿಕೆಯಲ್ಲಿ ಜಯಂತಿಯ ಹದಿನಾರು ವರುಷಗಳ ಗತ ಇತಿಹಾಸದ ಒಂದು ಸೂಕ್ಷ್ಮಾವಲೋಕನವನ್ನು ನಾವು ಕಾಣಬಹುದು. ಜಯಂತಿಗೆ ಬಂದಡಸಿದ ಕಷ್ಟ-ನಷ್ಟಗಳು, ಧ್ಯೇಯ ಧೋರಣೆಗಳು, ಜನಪ್ರೀತಿಯು, ಇವನ್ನೆಲ್ಲ ಸಂಪಾದಕರು ಮಾರ್ಮಿಕವಾಗಿ ಅಂಕೆ ಮಾಡಿಕೊಂಡು, ಅದರ ಆರೋಗ್ಯ-ಭಾಗ್ಯಗಳ ಹೊಣೆಯನ್ನು ನಾಡಿಗರಿಗಿತ್ತಿದ್ದಾರೆ. ಇದು ನ್ಯಾಯವಾಗಿದೆ. ಆದರೆ ಒಂದು ಪತ್ರಿಕೆ ಹೊರಟು ಹತ್ತಾರು ವರುಷಗಳಾಗಿದ್ದರೂ, ಅದರ ಸಂಪಾದಕರಾರು ? ಧ್ಯೇಯ-ಧೋರಣೆಗಳೇನು ? ಎಂಬುದರ ಅರಿವ

ಇಲ್ಲದ ಮಹಾನುಭಾವರೂ ಇದ್ದಾರೆ. ಮಹನೀಯರೊಬ್ಬರು ಹೇಳಿದಂತೆ "ನಮ್ಮ ಜನ ಬೀಡಿ ಸೇದಿ ರೊಕ್ಕ ಸುಟ್ಟಾರು, ಆಣೆ ಕೊಟ್ಟು ಪತ್ರಿಕೆ ಕೊಂಡರೆ ಅವರ ದೇವರಾಣೆ !" ಈ ಮಾತು ಸತ್ಯವೆನ್ನೋಣವೇ ? ಅರ್ಥಾತ್ ಇದು ಅಸಡ್ಡೆಯಲ್ಲದೆ ಮತ್ತೇನು ? ತಾತ್ಕಾಲಿಕ ಮನೋರಂಜಕಗಳಾಗಿ–ತ್ರಿವರ್ಣರಂಜಿತ ಪತ್ರಿಕೆಗಳಾದರೆ ಈ ಮಾತೇ ವ್ಯತ್ಯಾಸವಾಗಬಹುದು. ಅಂತೂ ಕಾಲಗತಿ !

ಪ್ರತಿತಿಂಗಳ ಜಯಂತಿಯ ಸಂಪಾದಕೀಯವು ಒಂದಲ್ಲ ಒಂದು ಬಗೆಯ ಕ್ರಾಂತಿಯಿಂದ ಸೇರಿದ್ದು ಸುಂದರವಾಗಿದೆಯೆನ್ನಬೇಕು. ಅಂತೆಯೆ ಹದಿನಾರು ವರುಷಗಳು ಮುಗಿಯುವ ದಿನಗಳಲ್ಲಿ ಜಯಂತಿಯ ಜೀವನದ ಕುರಿತಾಗಿ ನೀಡಿದ ಸಂಪಾದಕೀಯವು ಕ್ರಮಬದ್ಧವಾಗಿ ಸುಂದರವಾಗಿದೆ. ಸಂಪಾದಕರ ಅಗ್ರಲೇಖನದಂತೆ–ಸೂಕ್ಷ್ಮರೀತಿಯ ಲೇಖನಗಳ ಆಯ್ಕೆಯ ಧೋರಣವೂ ಮುಖ್ಯಾಂಗವಾಗಿದೆ. ಸುಪುಷ್ಟ ಭಾಷಾ ಸಂಪತ್ತಿನ–ವಿಚಾರಪೂರ್ಣ ಲೇಖನಗಳ ಆಯ್ಕೆಯನ್ನು ನಿರ್ದಾಕ್ಷಿಣ್ಯವಾಗಿ ಮಾಡುವ ಈ ಬಗೆಯ ಉದ್ಯಮವು—ನನ್ನ ಅನುಭವದಂತೆ–ಕೆಲವು ವರ್ಷಗಳಿಂದೀಚೇಗೆ, ಇಂದಿನ ವರೆಗೆ ಯಾವ ಬಗೆಯಲ್ಲೂ ಕುಸಿದಿರದೆ ಉತ್ತಮವಾಗಿದೆಯೆಂದೇ ಧೈರ್ಯವಾಗಿ ಹೇಳಬಹುದು.

ಕ್ರಮಬದ್ಧವಾದ ನೆಲೆಯಲ್ಲಿ ಬರಬೇಕಾಗಿದ್ದ 'ನಾಡನಡೆ' ಯೆಂಬ ಸಾಂದರ್ಭಿಕ ಟಿಪ್ಪಣಿಯನ್ನೀಯುವ ವಿಭಾಗವು ಈ ಬಾರಿ ಇಲ್ಲದಿರುವುದು ಒಂದು ಕುಂದೆಂದೇ ಹೇಳಬೇಕಾಗಿದೆ. ರಾಜಕೀಯ ದೇಶೀಯ, ಸಾಮಾಜಿಕ ವಿಚಾರಗಳನ್ನು ವಿಶಿಷ್ಟ ರೀತಿಯಲ್ಲಿ ಬಗೆಹರಿಸುವ, ಸಾರುವ ಈ ವಿಭಾಗವನ್ನು ಬಿಟ್ಟಿದ್ದು ಅದೇಕೋ ತಿಳಿಯದಾಗಿದೆ. ಒಂದು ಮಾಸದ ಸ್ವಜೀವನದ ಇತಿಹಾಸವನ್ನು ಸಂಪಾದಕೀಯವು ಈಯುವಂತೆ, ನಾಡನಡೆಯು ನಾಡನಡೆಯ ಇತಿಹಾಸವನ್ನು ಸಾರುವಾಗ ಕುತೂಹಲಾಕರ್ಷಿಯೆಂದು ಮಾತ್ರವಲ್ಲ; ಮರೆಯಲಾಗದ ಅವಶ್ಯಂಭಾವೀ ವಿಭಾಗವೆಂದೆನ್ನಬೇಕಾಗಿದೆ

ಕವನಗಳಾಗಿ ಅರಳಿದ ಪ್ರಕೃತಿಪುರುಷ, ವಿರಹಸೆರೆಮನೆ, ಸಾಧನೆಯ ಹಾದಿಯಲಿ, ಮುಗಿಲ ಮೋಹಿನಿಗೆ, ಇವುಗಳಲ್ಲಿ ಪ್ರಕೃತಿ-ಪುರುಷವು ಅರ್ಥಗಾಂಭೀರ್ಯದಿಂದ ಕೂಡಿದ್ದು, ಪ್ರಕೃತಿಪುರುಷ ಸಂಸಾರದ ನಿಗೂಢವೃತ್ತವನ್ನು ಸಾರುವುದು. ವಿರಹಸೆರೆಮನೆ ಮತ್ತು ಸಾಧನೆಯ ಮಾರ್ಗದಲಿ ಇವುಗಳಲ್ಲಿ ಒಂದು 'ವಿರಹದ' ವೃತ್ತವನ್ನು ಲಾಲಿತ್ಯಪೂರ್ಣಗತಿಯಲ್ಲಿ ಸಾರಿದರೆ, ಮತ್ತೊಂದು ಸಾಧನೆಯ ಮಾರ್ಗವನ್ನು ವೀರಗತಿಯಲ್ಲಿ ಸುಂದರ ಕಾವ್ಯಸೌರಭದಿಂದ ಪರಿಮಳಿಸಿದೆ. 'ಮುಗಿಲ ಮೋಹಿನಿಗೆ' ಯೆಂಬುದು ಭಾವ ಪ್ರಚೋದಕ ಮೃದುಮಧುರಗತಿಯ ರಸಗವನವೆಂದೆನ್ನಬೇಕಾಗಿದೆ. ಕೊನೆಯದಾಗಿ ಬರುವ ನವ್ಯಕವನವಾದ 'ಅಹಲ್ಯೆ' ಯೆಂಬುದು ಕಲ್ಲಿನಲ್ಲಿ ಭಾಗ್ಯ ಮುಕ್ತಿಗಳನ್ನು ಕಂಡು, ದೈವಪ್ರಾಣರೂಪವಾದ ಕಲ್ಲನ್ನೇ ಗೌತಮನಿಗೆ ಪ್ರೇಮಾರ್ಪಣ ಮಾಡಿದ ನೂತನ ಕವನವೆಂದೆನ್ನಬಹುದು. ಕಲ್ಲಿನಲ್ಲೇ ಜೀವನವನ್ನು ಕಂಡ ಹೃದಯಸ್ಪರ್ಶಿಗೀತವಿದು. ಅಂತೂ ಕವನಗಳಾಗಿ ಬೆಳಕುಕಂಡ ಈ ವಿಭಾಗವು ಸುಂದರವಾಗಿದೆ.

ಜಯಂತಿಯಲ್ಲಿ ಕಥೆಗಳಾಗಿ ಬೆಳಕು ಕಂಡುವುಗಳು ಎರಡು. ಒಂದು 'ಕರುಳು' ಇನ್ನೊಂದು 'ಕಲಾವಿದ ಕಂಡ ಬೆಳಕು'. ಇವೆರಡೂ ಸಾಮಾನ್ಯ ಕಥೆಗಳು. ಕರುಳು ಶಿಸ್ತಿನ ಸಂನ್ಯಾಸಿಯೊರ್ವನ ಹಾಗೂ ಸಭ್ಯಗೃಹಸ್ಥನೊಬ್ಬನ ಪಾರಸ್ಪರಿಕವಾದ ಜೀವನದ ವ್ಯತ್ಯಾಸವನ್ನು ತೋರಿಸುವ ಹೊಸಬಗೆಯ ಚಿತ್ರವೆಂದು ಹೇಳಬಹುದಾದರೂ ಕುತೂಹಲಾಕರ್ಷಿಯಾಗಿಲ್ಲವೆಂದೆನ್ನಬೇಕಾಗಿದೆ. ಕಲಾವಿದ ಕಂಡ ಬೆಳಕೆಂಬುದು ನೂತನವಸ್ತುವಲ್ಲ; ಮಾರ್ಗಾಂತರದಿಂದ ರೂಪುಗೊಂಡ ಚಿತ್ರವೆಂದೆನ್ನಬಹುದು ಪ್ರಭಾಕರನೆಂಬ ಕಲಾವಿದನ ಕಲಾಪೂರ್ಣ ಜೀವನದಲ್ಲಿ ಮುಸುಕಿದ ತಾಕಲಾಟದ ವರ್ಣನೆಯೆ, ಇತಿವೃತ್ತವೆ ಇದರ ಕಥಾವಸ್ತು. ಆದಿಮಧ್ಯಾಂತಗಳೆಲ್ಲವೂ ಒಂದು ಬಗೆಯ ಭಾವಲಹರಿಯ ತೇಕಾಟದಲ್ಲಿ ಮುಳುಗಿ, ಅನಿರ್ದಿಷ್ಟ ಪರಿಸ್ಥಿತಿಯ ಕಲಾದೇವಿಯ ಪ್ರತ್ಯಕ್ಷವಚನೋಪಾತ್ತವಾದ ಆಶ್ವಾಸನೆಯಲ್ಲಿ ತೇಲಿದಂತಿದೆ. ಸರ್ವಸಾಮಾನ್ಯ ವಸ್ತುವಾದರೂ ಕಥೆಯಾಗಿ ಹೊಸೆದ ಕ್ರಮ ಭಾವಪೂರ್ಣವಾಗಿ, ಕಲಾವಿದನ ತಾಕಲಾಟಕ್ಕನುಗುಣವಾಗಿದೆಯೆನ್ನಬಹುದು.

ವ್ಯಕ್ತಿಪರಿಚಯಾತ್ಮಕವಾಗಿ ಕಳೆಗೊಂಡ ಲೇಖನವಾದ 'ಸಾಲಿ ರಾಮಚಂದ್ರರಾಯರು' ಇದು ಪ್ರಾರಂಭದಿಂದಲೇ ರುಚಿಕರವಾಗಿದ್ದು, ಜೀವನೇತಿವೃತ್ತವನ್ನು ಚಿಕ್ಕದಾಗಿ–ಚೊಕ್ಕವಾಗಿ ಹೇಳಿ ಮುಗಿಸಿದೆ. ಇಂತಹ ಸಾತ್ತ್ವಿಕ ಜೀವನಗಳ ಹಾಗೂ ಕೆಚ್ಚೆದೆಯ ಹಾಗೂ ಇನ್ನಿತರ ಉದಾತ್ತ ಜೀವನಗಳ ಪರಿಚಯಾತ್ಮಕ ವಿಭಾಗವು ಜಯಂತಿಗೆ ಅವಶ್ಯವಾಗಿ ಬೇಕು. ಜೀವನದ, ಜೀವನಾಧಾರವಾದ ರಾಷ್ಟ್ರ ಹಾಗೂ ಸಾಹಿತ್ಯಗಳ ಪರಿಚಿತಿಯು, ಅನುಭವಕ್ಕೆ–ಜೀವನೋನ್ನತಿಗೆ–ಜೀವಾತುವಲ್ಲದೆ ಮತ್ತೇನು ?

'ರುಕ್ಮಿಣೀ ಸ್ವಯಂವರ' — ಪೌರಾಣಿಕ ರೂಪಕವಾದ ಇದು ನಾಟಕೀಯ ದೃಷ್ಟಿಯಿಂದ ಸಮುಚಿತವಾಗಿದ್ದು, ದೃಶ್ಯ–ಶ್ರವ್ಯ ರೂಪಗಳಲ್ಲಿಯೂ ಮಿರುಗು ಪಡೆಯಬಹುದಾದ ಸುಂದರ ನಾಟಕವೆಂದೆನ್ನಬಹುದು. ಉದಾತ್ತ ವಸ್ತುಸ್ವೀಕಾರ, ಸಮುಚಿತ ದೃಶ್ಯ–ಕಾಲ ಸಂಯೋಜನೆ, ಪಾತ್ರಾನುಗುಣ ಭಾಷಾವಿತರಣೆ ಇವುಗಳಿಂದೊಡಗೂಡಿದ ರೂಪಕವಿದು, ಸರ್ವಾಂಗಸುಂದರವಿದೆಯೆನ್ನಬಹುದು. ಜೀವನದ ಸತ್ಯಚಿತ್ರವಾಗಿ–ಪ್ರವಾಸ ಪರಿಚಯಾತ್ಮಕವಾಗಿ ಕಾಣಿಸಿದ 'ನಾನು ಹಳ್ಳಿಗೆ ಹೋದಾಗ' ಎಂಬ ಲೇಖನವು ಸಾಹಿತ್ಯಮಾರ್ಗದಿಂದರಳಿ ನಿಂತಿದೆ. ಹಳ್ಳಿಯ ಜೀವನದ ವೈಶಿಷ್ಟ್ಯ, ಹೊರಟ ಉದ್ದೇಶ, ಸ್ವದೇಶದ ಬಸ್ ಪ್ರಯಾಣ, ಅನ್ನಪೂರ್ಣಾ ವಿಲಾಸ ಖಾನಾವಳಿ, ಬಸ್ಸಿನ ಜೀವನ ಗತಿ ಈ ವಿಚಾರಗಳನ್ನೆತ್ತಿ–ಈ ವಿಚಾರಗಳ ಗತಿಯಲ್ಲೇ "ಆರ್ಥಿಕ ಸಮತಾವಾದದದೊಡನೆ–ಶಕ್ತಿಸಮತಾವಾದದ" ಸುಂದರ ವಿಚಾರವನ್ನೆತ್ತಿ ವಿನೋದಪೂರ್ಣವಾಗಿ–ರಸಭಾವಗಳ ಅನುಭಾವ ಗತಿಯಲ್ಲಿ ಸಾಗಿಸಿದ ಈ ಲೇಖನ ಆದರ್ಶವಾಗಿದೆಯೆನ್ನಬಹುದು. ಮುಂದಿನ ಸಂಚಿಕೆಯಲ್ಲೋ–ಸಂಚಿಕೆಗಳಲ್ಲೋ ಬೆಳಕು ಕಾಣಲಿರುವ ಹಳ್ಳಿಯ ಜೀವನದ ಸುಂದರಸಿರಿರೂಪಣೆಯನ್ನು ಹಾರೈಸುವ ಬಗೆಯಲ್ಲಿ–ವಾಚಕರನ್ನು ಸೆಳೆದ ಸತ್ಯಚಿತ್ರವಿದು.

ಆಕಾಶವಾಣಿ ಭಾಷಣವಾಗಿ ಬಂದ 'ಭಕ್ತಿಯೋಗ' ಎಂಬ ಲೇಖನವು ಆಧ್ಯಾತ್ಮಪರವಾಗಿದ್ದು, ಜೀವನದಲ್ಲಿ ಭಕ್ತಿಯ ಸ್ಥಾನ

ನನ್ನೂ ಭಕ್ತಿಯ ಸ್ವರೂಪವನ್ನು ಸಾರುತ್ತಿದೆ. ಗಂಭೀರವಾದ ವಿಷಯವಿದು. ಆ ಬಳಿಕ 'ಸಾಹೇಬರ ಸವಾರಿ'ಯೆಂಬ ನಾಟ್ಯಛಟಾ. ಗ್ರಾಮ್ಯಭಾಷೆಯಲ್ಲಿ ಏಕಪಾತ್ರದಿಂದ ಪೂರ್ಣವಾಗಬಹುದಾದ ಒಂದು ವಿನೋದಚಿತ್ರವಿದು. ಸಾಹೇಬರನ್ನು ಕುದುರೆಯ ಮೇಲೆ ಕುಳ್ಳಿರಿಸಿಕೊಂಡು ಹೋಗುವುದನ್ನೇ ಹಿಡಿಯದನ್ನಾಗಿ ಅಂತ ಹುಸೇನ್ ಸಾಹೇಬನ ಹೃದಯಕ್ಕನುಗುಣವಾದ ಸಂಭಾಷಣೆಯೇ ಈ ರೂಪಕದ ಸೊತ್ತಾಗಿದೆ; ಸುಂದರವಾಗಿದೆ.

ಕೊನೆಯದಾಗಿ ಸಾಹಿತ್ಯವಿಹಾರ ಮತ್ತು ಶಿಕ್ಷಣರಂಗವು. ಮೊದಲಿನದು ಬಗೆಹರಿಯದ ಸಮಸ್ಯೆಗಳನ್ನು, ಪತ್ರಗಳನ್ನು ಬೋಧಪ್ರದ ವಿಚಾರಗಳನ್ನು ಪ್ರಕಟಿಸಿ, ಸಾಹಿತ್ಯರಂಗದಲ್ಲಿ ವಿಹರಿಸುವಂತಾಗಿಸಿದರೆ, ಮತ್ತೊಂದು ಯುವಕರಲ್ಲಡಕವಾದ ಚೇತನವನ್ನು ಪ್ರಗತಿಪರವಾಗಿ ಸಾಗಿಸುವ, ಚೈತನ್ಯವನ್ನು ತುಂಬಿಸುವ, ಅಭ್ಯಾಸವನ್ನು ಹೊಂದಿಸುವ, ಜಯಂತಿಯದೇ ಆದ ವಿಶಿಷ್ಟವಿಭಾಗವಾಗಿದೆ. ಈ ವಿಭಾಗಗಳನ್ನು ಜಯಂತಿ ಇಂದಿನಂತೆಯೆ ಮುಂದೆಯೂ ಒದಗಿಸಿದರೆ, ಅಭ್ಯಾಸಿಗಳಿಗದು ವಿಶೇಷ ಪ್ರಯೋಜನಕಾರಿಯಾಗಬಹುದೆಂದು ಧಾರಾಳವಾಗಿ ಅನ್ನಬಹುದು. ಸಾಹಿತ್ಯವಿಹಾರದಲ್ಲಿ ಪ್ರತಿಭಾಪೂರ್ಣರಾದ ಸಂಪಾದಕರೇ ಕೆಲವು ಸಮಸ್ಯೆಗಳನ್ನೆತ್ತಿ, ನಾಡಿಗರ— ವ್ಯವಸಾಯಿಗಳ— ಅಭ್ಯಾಸಿಗಳ ವಿಚಾರವನ್ನು ಪುಷ್ಕಲವಾಗಿಸುವ ಬಗೆಯ ಕ್ರಮವನ್ನೇಕೆ ಅನುಗೊಳಿಸಬಾರದು? ಅದು ತುಂಬ ಪ್ರಯೋಜನಕಾರಿಯಾಗಬಹುದೆಂದು ಕಾಣುತ್ತದೆ.

ಕೊನೆಯವಾಗಿ ಒಂದೆರಡು ಮಾತುಗಳು: ಒಂದು ಕಾಲದಲ್ಲಿ ಜಯಂತಿಯು ಸಚಿತ್ರವಾಗಿ ೮೦ ಪುಟಗಳಲ್ಲಿ ಕಳೆಗೊಂಡಿತ್ತೆಂದು ಸಂಪಾದಕರೇ ಅನ್ನುತ್ತಾರೆ. ಇಂದೀಗ ಅದೇ ಜಯಂತಿ ೪೦ ಪುಟಗಳಲ್ಲಿ ರೂಪುದೋರಿದರೂ, ಹಿರಿಮೆಯ ನೋಟದಲ್ಲಿ ಕುಂದಾಗಲಿಲ್ಲವೆಂದು ಧಾರಾಳವಾಗಿ ಹೇಳಬಹುದು. ೪-೫ ವರ್ಷಗಳ ಗತ ಇತಿಹಾಸದಿಂದ ಜಯಂತಿಯನ್ನಿಂದು ನಾವು ಕಂಡರೆ, ಒಂದೆರಡು ಬಗೆಯ ನ್ಯೂನತೆಗಳನ್ನು ಅನುಲಕ್ಷಿಸಬಹುದು. 'ಸ್ತ್ರೀ ಶಿಕ್ಷಣ' ಮೂಲವಾಗಿದ್ದ 'ಕಸೂತಿ ಕಲೆ' ಈ ವಿಭಾಗವೂ 'ಪುಸ್ತಕ ವಿಮರ್ಶೆ'ಯ ಅವಶ್ಯಂಭಾವೀ ವಿಭಾಗವೂ ರಾಜಕೀಯ ಹಾಗೂ ಜಾನಪದ ಸಾಹಿತ್ಯ ಪರಿಚಯಾತ್ಮಕವಾದ ದೀನ-ದಲಿತ ಜೀವನ ಸಾಹಿತ್ಯೇತಿವೃತ್ತವೂ ತೀರಾ ಮಾಯವಾದಂತಿದೆ. ಇವುಗಳಲ್ಲಾವುದನ್ನೂ ಇಲ್ಲದಾಗಿಸುವುದು ಜಯಂತಿಗದು ಕೊರತೆಯೇ ಸರಿ. ವಿಭಕ್ತ ಕ್ರಮದಲ್ಲಾದರೂ ಇವನ್ನುಳಿಸಿ ಬಾಳಿಸುವುದು ಅತ್ಯಗತ್ಯವಿದೆ. ೧೯೫೦–೫೧ನೆಯ ವರ್ಷಗಳ ಜಯಂತಿಯ ಸಂಚಿಕೆಗಳಲ್ಲಿ ನಾವಿದರ ಸತ್ಯತೆಯನ್ನು ಕಾಣಬಹುದು. ಜನತೆಯ ಹಿತವನ್ನು ಬಯಸುವ, ಸಾರ್ವತ್ರಿಕವಾಗಿ ಸಂಸ್ಕೃತಿಯನ್ನು ಚೆಲ್ಲಬಯಸುವ ಜಯಂತಿ, ಜೀವನದ ಸಂಪೂರ್ಣತೆಗಾಗಿ ಅದರ ಸಂದುಗೊಂದುಗಳಲ್ಲಿ ಪ್ರವಹಿಸುವಂತಾಗಬೇಕು. ಆಗ ಅದಕ್ಕೆ ಶಕ್ತಿ, ಚೇತನ. ಇನ್ನೊಂದು ವಿಚಾರವನ್ನು ಇಲ್ಲಿ ಸೇರಿಸಬೇಕಾಗಿದೆ: ಇಂದು ಜನತೆಯ ಮುಂದೆ ಸಾರ್ವತ್ರಿಕವಾಗಿ ಬಾನುಲಿಯ ಪ್ರಚಾರವಿದೆ. ಚಲಚ್ಚಿತ್ರಗಳ ಆಂದೋಲನವಿದೆ. ಜನತೆಯು ಇಂದು ಇದರ ಮುಂದೆ ಸಾಲುಸಾಲಾಗಿ ಸಾಗಿಬಂದಿದೆ, ಈ ಸಂದರ್ಭದಲ್ಲಿ ಜಯಂತಿ ಸುಮ್ಮನಿರದೆ, ಈ ಪ್ರಚಾರಗಳ ಸಾಧುತ್ವಾಸಾಧುತ್ವಗಳನ್ನು ನಿರ್ಣಯಿಸಬೇಕು. ಚಲಚ್ಚಿತ್ರಗಳ ವಿಚಾರವೆಂದ ಮಾತ್ರಕ್ಕೆ ಕೆಲವು ಪತ್ರಿಕೆಗಳು ಅನುಗೊಳಿಸುವ ಅರ್ಧನಗ್ನ ಚಿತ್ರಗಳು, ಪರಿಚಯಗಳು ಇವನ್ನನುಗೊಳಿಸಬೇಕೆಂದಲ್ಲ. ಇವು ಬೇಡ. ಎಡೆಬಿಡದೆ ಜನತೆಯ ಮುಂದೆ ನುಗ್ಗಿಬರುವ ಈ ಪುಸ್ತಕ ಪ್ರಚಾರಗಳ ಕುರಿತು ಉಚಿತವಾಗಿ— ನಿರ್ಣಯವನ್ನಿತ್ತು— ಅವುಗಳ ರೂಪ-ರೇಷೆಗಳಲ್ಲಿ ಒಂದು ಇತಿಮಿತಿಯನ್ನು ಕಟ್ಟಬೇಕು. ಬಹುಜನಾಕರ್ಷಿಯಾದ ಈ ವಿಚಾರದಲ್ಲಿ ಸರಿಯಾದ ವ್ಯವಸ್ಥಿತಿಯು ಮೂಡಲಿಲ್ಲವಾದರೆ, ಜನತೆಗದು ತಿಳಿದಿಲ್ಲವಾದರೆ, ನಮ್ಮ ಸಂಸ್ಕೃತಿ, ನಮ್ಮ ಆದರ ನಮ್ಮ ಗತಿ ಸುಂದರವಾಗುವುದೆಂತು? ಜಯಂತಿಯ ಧೋರಣೆಯಲ್ಲಿ ಇದೂ ಒಂದಾಗಬಾರದೇಕೆ?

ಅಂತೂ ಜಯಂತಿಯು ತನ್ನ ಭವ್ಯಭಾವಿಯಲ್ಲಿ ದೀನದಲಿತ ಜೀವಕ್ಕನುವಾಗುವ, ಸ್ತ್ರೀಸಮಾಜದ ಉನ್ನತಿಗನುವಾಗುವ, ಜನತೆಗೆ ರಾಷ್ಟ್ರೀಯ, ಸಾಮಾಜಿಕ, ಸಂಪತ್ತಿಯನ್ನೊದವಿಸುವುದರಲ್ಲಿ ಅನುವಾಗುವ– "ಜೀವನಸಿದ್ಧಿ, ನಾಟ್ಯರಂಗ, ಜ್ಞಾನದೀಪ, ಭಾವಲಹರಿ, ಚಲಚ್ಚಿತ್ರ ಸಂವೇದನ—" ಮೊದಲಾದ ಬಹುಜನಾಕರ್ಷಕವಾದ ಆದರ್ಶವಿಭಾಗಗಳನ್ನಿರಿಸಿಕೊಂಡು, ಮುಂದಿನ ದಿನಗಳಲ್ಲಿ ಶುಭಸಂತತಿಯನ್ನು ಪಡೆದು ಚಿರಕಾಲಬಾಳುವ ಆರೋಗ್ಯಭಾಗ್ಯಗಳನ್ನು ಪಡೆಯುವಂತಾಗಲಿ! ಅದೇ ಆಶೆ.

ಕುಟಜಾರಿಷ್ಟ
ಆಮಾಂಶ-ಸಂಗ್ರಹಣಿಗಳಿಗೆ
●
ಕಾಸಶ್ವಾಸಾರಿ
ದಮ್ಮು-ಕೆಮ್ಮುಗಳಿಗೆ
ಎಲ್ಲ ಬಗೆಯ ಆಯುರ್ವೇದ ಔಷಧಿಗಳಿಗಾಗಿ
ಬರೆಯಿರಿ:
ದಿ ನೂತನ
ಆಯುರ್ವೇದ ಕಾರ್ಯಾಲಯ ಲಿ.
ವಿಜಾಪುರ

ಸಾದರ ಸ್ವೀಕಾರ

೧ **ನವಪೂರ ದೀಪ ಮತ್ತು ಇತರ ಕಥೆಗಳು** (ಕಥಾಸಂಕಲನ) ಲೇಖಕರು ಶ್ರೀಮಾನ್ ಕೋ. ಚೆನಬಸಪ್ಪ ಎಲ್ ಎಲ್ ಬಿ. ಬಳ್ಳಾರಿ. ಪ್ರಕಾಶಕರು ಸಜೀವ ಸಾಹಿತ್ಯಮಾಲೆ, ಬಳ್ಳಾರಿ. ಕ್ರೌ. ಅ. ೯೪ ಪುಟಗಳು. ಬೆಲೆ ೧-೦-೦

೨ **ಮುಗು** (ಕೈಬರೆಹದ, ಮಕ್ಕಳ ಮಾಸಪತ್ರಿಕೆ) ಸಂಪಾದಕರು 'ಸೀಮಾನಾ'. ಪ್ರಕಾಶಕರು 'ಮುಗು' ಪ್ರಕಾಶನ ಮಂದಿರ, ಬ್ರಾಹ್ಮಣರ ಬೀದಿ, ತಾವರಗೆರೆ, ಜಿ. ರಾಯಚೂರು. ಫೂ. ಕ್ಯಾ. ೧೬ದ ೩೪ ಪುಟಗಳು. ವಾರ್ಷಿಕ ಚಂದಾ ೨-೦-೦. ಬಿಡಿ ಸಂಚಿಕೆ ೦-೩-೦.

ಮಕ್ಕಳಿಗೆ ಬೋಧಕವೂ ಮನೋರಂಜಕವೂ ಎನಿಸುವ-ತಹ ಕತೆ, ಕವನ, ಲೇಖನ, ವಿನೋದಗಳು ಇದರಲ್ಲಿವೆ. ಅಲ್ಲಲ್ಲಿ ಆಕರ್ಷಕವೆನಿಸುವಂತೆ ಚಿತ್ರಗಳನ್ನೂ ಬಳಸಲಾಗಿದೆ. ಸಂಪಾದಕರ ಈ ಪ್ರಯತ್ನ ಪ್ರಶಂಸಾರ್ಹವಾದುದು. ಈ ಕೈಬರೆಹದ ಪ್ರತಿಗಳನ್ನೂ ಚಂದಾದಾರರಿಗೆ ಪೂರೈಸುತ್ತಿರುವುದು, ಆಶ್ಚರ್ಯವೆನಿಸುವಂತಹ ಸಂಗತಿಯಾಗಿದೆ.

೩ **ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನ** (ಕನ್ನಡದಲ್ಲಿಯ ಮೊಟ್ಟ ಮೊದಲಿನ ಸಾಮಾಜಿಕ ದೃಶ್ಯ) ಬರೆದವರು ಕ್ರಿ. ಶ. ೧೮೮೭ರಲ್ಲಿ ಬದುಕಿದ್ದ 'ಹವ್ಯಕ ಹಿತೇಚ್ಛು ವಿದ್ವಾಂಸರೊಬ್ಬರು'. ಇದೀಗ ಸಂಪಾದಿಸಿ ಪ್ರಕಟಿಸಿದವರು ಶ್ರೀಮಾನ್ ಲಿಂಗೇಶ ಶರ್ಮಾ ಎಂ. ಎ. ನೆಲ್ಲಿಕೇರಿ, ಕುಮಟಾ. ಕ್ರೌ. ಅ. ೮+೪೫ ಪುಟಗಳು. ಬೆಲೆ ೦-೮-೦

೪ **ಶ್ರೀ. ಗುರುರಾಜ ಭಜನಾವಳಿ** (ಭಜನ ಗೀತ ಸಂಕಲನ) ಪ್ರಕಾಶಕರು ಗುರುರಾಜ ಸೇವಾಸಂಘ, ಬೀದರ. ಡೆ ೧೬ದ ೧೬ ಪುಟಗಳು.

ದೇವರ ವಿಷಯದಲ್ಲಿಯೂ ಶ್ರೀರಾಘವೇಂದ್ರ ಗುರುಗಳ ವಿಷಯದಲ್ಲಿಯೂ ಭಕ್ತಿಯಿಂದ ರಚಿಸಿದ ಹಾಡುಗಳ ಸಂಗ್ರಹವಿದು. ಹಾಡುಗಳಿಗೆ ರಾಗ-ತಾಳಗಳನ್ನೂ ಹೇಳಲಾಗಿದೆ.

೫ **ಬರದ ಕುತ್ತು** (ಸಾಮಾಜಿಕ ಕಾದಂಬರಿ). ಬರೆದವರು ಶ್ರೀಮಾನ್ ಬಸವರಾಜ ತೋಳನೂರ. ಪ್ರಕಾಶಕರು 'ಬಾಹುಬಲಿ ಸಾಹಿತ್ಯವನ' ವಿಜಯಪುರ. ಕ್ರೌ. ಅ. ೯೪ ಪುಟಗಳು. ಬೆಲೆ ೦-೧೪-೦

೬ **ಆಸೇತು ಹಿಮಾಚಲ ಯಾತ್ರೆ** (ಪ್ರವಾಸ ವೃತ್ತ) ಬರೆದವರು ಶ್ರೀಮಾನ್ ಜಿ ಎ. ನರಸಿಂಹ ಮೂರ್ತಿ ಬಿ ಎಸ್‌ಸಿ. ಪ್ರಕಾಶಕರು ಶ್ರೀ. ಜಿ. ಟಿ. ಶ್ರೀಕಂಠಯ್ಯ, ಆರ್. ಎನ್. ನ್ಯೂಜ್ ಏಜನ್ಸಿ, ೬೬೫ ಚಿಕ್ಕಪೇಟೆ, ಬೆಂಗಳೂರು ೨. ಕ್ರೌ. ಅ. ೧೬೦ ಪುಟಗಳು, ಬೆಲೆ ೦-೧೫-೦

೭ **ರಾಷ್ಟ್ರಮತ** (ಮಂಗಳೂರಿನ ವಾರಪತ್ರಿಕೆಯೊಂದರ ಪ್ರಥಮವರ್ಷದ ಕಾಣಿಕೆ). ವಾರಪತ್ರಿಕೆಯ ಸಂಪಾದಕರು ಶ್ರೀಮಾನ್ ಕಂಡೆಗೋಡ್ಲು ಶಂಕರಭಟ್ಟರು. ಈ ಕಾಣಿಕೆಯ ಸಂಪಾದಕರು ಶ್ರೀ. ಕು. ಶಿ. ಹರಿದಾಸಭಟ್ಟ, ಎಂ. ಎ. ಲೆಕ್ಚರರ್ ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜ್, ಉಡುಪಿ. ಪ್ರಕಾಶಕರು ರಾಷ್ಟ್ರಮತ ಲಿಮಿಟೆಡ್, ಮಂಗಳೂರು. ಡೆ. ಅ. ೯೬ ಪುಟಗಳು. ಬೆಲೆ ೦-೫-೦.

ತುಂಬ ಉಪಯುಕ್ತವಾದ ಅಭ್ಯಾಸಪೂರ್ಣ ಲೇಖನಗಳಿಂದಲೂ ಸರಸ ಕತೆ-ಕವನಗಳಿಂದಲೂ ಕಾಣಿಕೆಯು ಬೆಲೆಬಾಳುವಂತಹದಾಗಿದೆ.

೮ **ವಿಕಾಸ** (ವಿಜಾಪುರದ ಪಿ. ಡಿ. ಜೆ. ಹೈಸ್ಕೂಲಿನ ನಿಯತಕಾಲಿಕ) ಸಂಪಾದಕರು ಶ್ರೀ ಜಿ. ಜಿ. ಕುಲಕರ್ಣಿ, ಎಂ ಎ., ಬಿ. ಟಿ., ಡಿ. ಬಿ. ಇ. ಮತ್ತು ವಿದ್ವಾನ್ ಎಂ. ಜಿ. ಕುಲಕರ್ಣಿ 'ಪಾರಂಗತ-ಪ್ರವೀಣ' ಅವರು. ಪ್ರಕಾಶಕರು ಶ್ರೀಮಾನ್ ವಿ. ಎಚ್. ನಾಗರಹಳ್ಳಿ, ಮುಖ್ಯಾಧ್ಯಾಪಕರು ಪಿ. ಡಿ. ಜೆ. ಹೈಸ್ಕೂಲ್, ವಿಜಾಪುರ. ಕ್ರೌ. ಅ. ೧೬ದ ೫೮ ಪುಟಗಳು.

ಹೈಸ್ಕೂಲಿನ ವಿವಿಧ ಚಟುವಟಿಕೆಗಳ ವರದಿಗಳೂ ಹೆಚ್ಚಾಗಿ ವಿದ್ಯಾರ್ಥಿಗಳ ಹಲವು ಲೇಖನಗಳೂ ಇದರಲ್ಲಿ ಪ್ರಕಟವಾಗಿವೆ.

೯ **ಕನ್ನಡ ನಾಡೂ ದೇಶಿಸಾಹಿತ್ಯವೂ** (ಸಂಶೋಧನ-ವ್ಯಾಖ್ಯಾನ ಸಂಕಲನ) ವ್ಯಾಖ್ಯಾನಕಾರರು ದಿವಂಗತ ಪಂಡಿತ ಮುಳಿಯ ತಿಮ್ಮಪ್ಪಯ್ಯನವರು ಪ್ರಕಾಶಕರು ಶ್ರೀಮಾನ್ ಎಸ್. ಎಸ್. ಮಾಳವಾಡ, ಎಂ. ಎ. ಡೈರೆಕ್ಟರ್ ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ. ಡೆ. ಅ. ೬೪ ಪುಟಗಳು. ಬೆಲೆ ೧-೦-೦.

ಅವಶ್ಯ ಸಂಗ್ರಹಿಸಲೇ ಬೇಕಾದ ಪುಸ್ತಕ

ನಮ್ಮ ರಾಜ್ಯಘಟನೆ

(ಲೇಖಕ: ಶ್ರೀ. ಗಲಗಲಿ)

ಬೆಲೆ: ೧೨ಆಣೆಗಳು

ಇಂದಿನ ಪರೀಕ್ಷೆಯ ಹೊಸ ಧೋರಣೆಯಂತೆ, ಪುಸ್ತಕ ರಚಿಸಲಾಗಿದೆ ಹೊಸ ಅಭ್ಯಾಸಪತ್ರಿಕೆಯ ಪ್ರಕಾರ ಎಲ್ಲ ವಿಷಯಗಳನ್ನು, ಮಕ್ಕಳಿಗೆ ತಿಳಿಯುವಂತೆ ತಿಳಿಯಾದ ಭಾಷೆಯಲ್ಲಿ ವಿವೇಚಿಸಲಾಗಿದೆ. ಪ್ರತಿ ಪ್ರಕರಣದ ಕೊನೆಗೆ ಉಪಯುಕ್ತ ಹಾಗೂ ಮಹತ್ವದ ಪ್ರಶ್ನೆಗಳನ್ನೂ ಕೊಟ್ಟಿದೆ. ಕಾರಣ ಈ ಪುಸ್ತಕವನ್ನು ಪ್ರಾ. ಶಾ. ಪ್ರ. ಪ ಮತ್ತು ಎಸ್ ಎಸ್. ಸಿ. ಪರೀಕ್ಷೆಯ ವಿದ್ಯಾರ್ಥಿಗಳು ಕೂಡಲೇ ಸಂಗ್ರಹಿಸುವುದು ಒಳ್ಳೆಯದೆಂದು ಬೇರೆ ಹೇಳಬೇಕಿಲ್ಲ.

ಇಂದೇ ನಿಮ್ಮ ಪ್ರತಿ ತರಿಸಿಕೊಂಡು ಯಶವನ್ನು ಗಳಿಸಿರಿ!

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಸಿಕ್ಕುವುದು.

ಆಕಳವಾಡಿ ಬುಕ್‌ಡಿಪೋ, ಧಾರವಾಡ

ಶರತ್ ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕಪ್ರಕಾಶಕರು ಮತ್ತು ಪುಸ್ತಕವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಲಕ್ಷ್ಯದಲ್ಲಿ ಇಟ್ಟುಕೊಳ್ಳಬೇಕು!

ನಿಮ್ಮ ವಾಚನಾಲಯಕ್ಕೆ ಬೇಕಾಗುವ ಎಲ್ಲಾ ಕನ್ನಡ ಪುಸ್ತಕಗಳನ್ನು ಯೋಗ್ಯ ಬೆಲೆಗೆ, ಸಮಯಕ್ಕೆ ಸರಿಯಾಗಿ ಪೂರೈಯಿಸಲಾಗುವುದು.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಶರತ್ ಪ್ರಕಾಶನ ಮಂದಿರಕ್ಕೆ [illegible]

[illegible]

ವಿಳಾಸ:

[illegible] ಶರತ್ ಪ್ರಕಾಶನ ಮಂದಿರ, ಧಾರವಾಡ

Printed by S. G. Kulkarni at the Sadhana Press, Dharwar and published for the Proprietors Jayanti Publications, by S. [illegible] at the Jayanti Office, Dharwar.